# ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯಮಾಲೆ - ೧೭

## ಪ್ರಕಾಶಕರ ಮಾತು

ಜಾಗತೀಕರಣದ ಪರಿಣಾಮಗಳು ಎಂದಿಗಿಂತಲೂ ತ್ವರಿತವಾಗಿ ಇಂದು ಮೂಲ ಸಂಸ್ಕೃತಿಯ ಮೇಲೆ ಧಾಳಿ ಮಾಡುತ್ತಿವೆ. ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆಗಳಂತಹ ಸೃಜನಶೀಲತೆಗೆ ಧಕ್ಕೆ ಉಂಟಾಗಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ವಿಸ್ಮೃತಿಗೆ ಒಳಗಾಗುತ್ತಿರುವ ಸಮುದಾಯಕ್ಕೆ ಸ್ಥಳೀಯ ಜ್ಞಾನ ಸಂಪತ್ತಿನ ಮಹತ್ವವನ್ನು ಮನವರಿಕೆ ಮಾಡಿಕೊಡಲು ಜಾನಪದವೇ ಮೂಲ ಆಕರವಾಗಿದೆ. ಈ ದಿಸೆಯಲ್ಲಿ ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣೆಯು ಅತ್ಯಂತ ಮಹತ್ವದ ಯೋಜನೆಯಾಗಿದೆ.

ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ಅನೇಕ ಪ್ರಾತಃಸ್ಮರಣೀಯರು ಜನಪದ ಮತ್ತು ಯಕ್ಷಗಾನ ಸಾಹಿತ್ಯದ ಪ್ರಕಟಣೆಗಳನ್ನು ಹೊರತಂದಿದ್ದಾರೆ. ವಿಶ್ವವಿದ್ಯಾಲಯಗಳು, ಖಾಸಗಿ ಸಂಸ್ಥೆಗಳು, ಖಾಸಗಿ ಪ್ರಕಾಶಕರು, ಆಸಕ್ತ ಜಾನಪದ ವಿದ್ವಾಂಸರು ಬಿಡಿಬಿಡಿಯಾಗಿ ಪ್ರಕಟಿಸಿರುತ್ತಾರೆ. ಇವರನ್ನೆಲ್ಲಾ ಈ ಹೊತ್ತಿನಲ್ಲಿ ನೆನೆಯುತ್ತಾ, ಸಮೃದ್ಧ ಜನಪದ ಸಾಹಿತ್ಯವನ್ನು ಕ್ರೋಢೀಕರಿಸಿ, ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಮ್ಮಿಕೊಂಡಿತು. ಈ ಯೋಜನೆಯನ್ನು ಕಾರ್ಯರೂಪಕ್ಕಿಳಿಸಲು ಜಾನಪದ ವಿದ್ವಾಂಸರಾದ ಪ್ರೊ. ಹಿ.ಶಿ. ರಾಮಚಂದ್ರೇಗೌಡನವರ ಅಧ್ಯಕ್ಷತೆಯಲ್ಲಿ ಡಾ. ಸೋಮಶೇಖರ ಇಮ್ರಾಪುರ, ಡಾ. ಎಂ. ಎಸ್. ಲಠ್ಠೆ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ವಿವೇಕ ರೈ, ಡಾ. ತೀ. ನಂ. ಶಂಕರನಾರಾಯಣ, ಡಾ. ಸಿದ್ಧಲಿಂಗಯ್ಯ, ಶ್ರೀ ಕೆರೆಮನೆ ಶಂಭು ಹೆಗಡೆ, ಡಾ. ಕೆ. ಚಿನ್ನಪ್ಪಗೌಡ, ಶ್ರೀಮತಿ ಶಾಂತಿನಾಯಕ ಮತ್ತು ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಈ ಯೋಜನೆಯ ಕಾರ್ಯ ನಿರ್ವಹಣೆಯ ಮೇಲ್ವಿಚಾರಣೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಲೆಕ್ಕಪತ್ರಾಧಿಕಾರಿಗಳು ಸದಸ್ಯರಾಗಿಯೂ, ಜಂಟಿ ನಿರ್ದೇಶಕರಾದ ಶ್ರೀ ಕಾ.ತ. ಚಿಕ್ಕಣ್ಣ ಅವರನ್ನು ಸಂಚಾಲರಾಗಿರುವಂತೆ ಸಮಿತಿಯನ್ನು ರಚಿಸಲಾಯಿತು.

ಈ ಬೃಹತ್ ಯೋಜನೆ ಕಾರ್ಯರೂಪಕ್ಕಿಳಿಸಲು ಸಂಪಾದಕ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷರ ಶ್ರಮ ಮತ್ತು ಸಹಕಾರ ಹೆಚ್ಚಿನದು. ಆಯಾ ಸಂಪುಟಗಳ ಸಂಪಾದಕರು, ಪರಿಶೀಲಕರು ಮತ್ತು ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸಿದ ಯೋಜನೆಯ ಸಂಯೋಜಕರಾದ ಡಾ. ಚಕ್ಕರೆ ಶಿವಶಂಕರ್ ಹಾಗೂ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ ಅವರ ಶ್ರದ್ಧೆ ಸಹಕಾರಗಳು ಅಮೂಲ್ಯವಾದುವು. ಈ ಎಲ್ಲ ಮಹನೀಯರಿಗೆ ಇಲಾಖೆಯ ಕೃತಜ್ಞತೆಗಳು ಸಲ್ಲುತ್ತವೆ. ಹಾಗೆಯೇ ಈ ಸಂಪುಟಗಳ ಮುಖಪುಟ ವಿನ್ಯಾಸ ರೂಪಿಸಿಕೊಟ್ಟ ಕಲಾವಿದ ಶ್ರೀ ಪ.ಸ. ಕುಮಾರ್ ಮತ್ತು ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಎಂ. ಮುನಿರಾಜು ಹಾಗೂ ಸಿಬ್ಬಂದಿಗೆ ನನ್ನ ನೆನಕೆಗಳು. ಈ ಯೋಜನೆಯನ್ನು ಆಗುಮಾಡಿದ ಇಲಾಖಾ ಹಿಂದಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಉಷಾ ಗಣೇಶ್ ಮತ್ತು ಈಗಿನ ಇಲಾಖಾ ಕಾರ್ಯದರ್ಶಿಗಳಾದ ಶ್ರೀ ಐ.ಎಂ. ವಿಠ್ಠಲಮೂರ್ತಿ ಅವರಿಗೆ ಇಲಾಖೆಯ ವಂದನೆಗಳು. ಈ ಸಂಪುಟಗಳನ್ನು ಮುದ್ರಿಸಿಕೊಟ್ಟ ರಾಜಾ ಪ್ರಿಂಟರ್ಸ್‌ರವರಿಗೆ ನಮ್ಮ ಧನ್ಯವಾದ.

ಸುವರ್ಣ ಕರ್ನಾಟಕದ ವರ್ಷದ ಸಂದರ್ಭದಲ್ಲಿ ನಿರ್ದೇಶನಾಲಯ ಹೊರತರುತ್ತಿರುವ ಈ ಸಂಪುಟಗಳನ್ನು ಕನ್ನಡ ಜನತೆ ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಾನು ನಂಬಿದ್ದೇನೆ.

**(ಕೆ.ಆರ್. ನಿರಂಜನ್)**

ಆಯುಕ್ತರು

# ಹೊನ್ನುಡಿ

**ಹೆಚ್.ಡಿ. ಕುಮಾರಸ್ವಾಮಿ**

ಮುಖ್ಯಮಂತ್ರಿ

ವಿಧಾನಸೌಧ

ಬೆಂಗಳೂರು ೫೬೦ ೦೦೧

ದಿನಾಂಕ ೦೩-೧೦-೨೦೦೬

**ಹೊನ್ನುಡಿ**

ಕನ್ನಡ ನಾಡಿನ ಜಾನಪದ ಜಗತ್ತು ಅತ್ಯಂತ ವಿಸ್ತಾರವಾದುದು, ಸಮೃದ್ಧವಾದುದು ಮತ್ತು ವೈವಿಧ್ಯಮಯವಾದುದು. ಜನಪದ ಗೀತ ಸಂಗೀತ, ನೃತ್ಯ, ನಾಟಕ, ಚಿತ್ರಕಲೆ ಶಿಲ್ಪಕಲೆಗಳಿಂದ ಕಿಕ್ಕಿರಿದಿರುವ ಜಾನಪದವು ಜಗತ್ತಿನ ಮನುಕುಲದ ಸಂಸ್ಕೃತಿಯ ಹಾಗೂ ಎಲ್ಲಾ ಜ್ಞಾನ - ವಿಜ್ಞಾನಗಳ ಮೂಲ ನಡವಳಿಕೆ.

ಯಾವುದೇ ದೇಶದ ಜಾನಪದ ಸಂಪತ್ತು ಆ ದೇಶದ ಸಾಂಸ್ಕೃತಿಯ ತೋರುದೀವಿಗೆ, ಪಾರಂಪರಿಕವಾಗಿ ಶತಶತಮಾನಗಳಿಂದ ಉಳಿದು ಬೆಳೆದುಕೊಂಡು ಬಂದ ಈ ಸಂಪತ್ತು ದೇಶದ ಅಮೂಲ್ಯ ಆಸ್ತಿ. ನಮ್ಮ ಹಿರಿಯರ ಜ್ಞಾನ ವಿವೇಕ ಸಾಹಿತ್ಯಕ ಸಾಧನೆಗಳನ್ನು ಪರಿಚಯಿಸುವ ತಿಳವಳಿಕೆಯನ್ನು ಹೊರಹೊಮ್ಮಿಸುವ ಮಣ್ಣಿನ ಮಕ್ಕಳ ಸಾಹಿತ್ಯವಾದ ಜಾನಪದವನ್ನು ಒಂದು ನಿಧಿಯಂತೆ ಕಾಪಾಡಿಕೊಂಡು ಬರದಿದ್ದರೆ ಅದು ದೇಶಕ್ಕಾಗುವ ದೊಡ್ಡ ನಷ್ಟವೇ ಸರಿ.

ಕನ್ನಡ ನಾಡಿನ ಜಾನಪದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಕ್ರಿ.ಶ. ೯ನೇ ಶತಮಾನದ ಗದ್ಯ ಗ್ರಂಥವಾದ ವಡ್ಡಾರಾಧನೆಯು ಕನ್ನಡದ ಪ್ರಪ್ರಥಮ ಜನಪದ ಕಥಾ ಸಂಕಲನವೆನಿಸುತ್ತದೆ. ಇದುವರೆಗೂ ಅಸಂಖ್ಯಾತ ವಿದ್ವಾಂಸರು ಈ ಸಾಹಿತ್ಯವನ್ನು ಹೊರತರಲು ಶ್ರಮಿಸಿರುತ್ತಾರೆ. ಆದರೂ ಕರ್ನಾಟಕ ಜನಪದ ಸಾಹಿತ್ಯ ಪರಂಪರೆಯ ಹಿರಿಮೆಯನ್ನು ಒಟ್ಟಾಗಿ ಕೂಡಿಸಿ ಜಗತ್ತಿಗೆ ಪರಿಚಯಿಸುವ ಸದ್ದುದೇಶದಿಂದ ಕರ್ನಾಟಕ ಸರ್ಕಾರವು ತನ್ನ ಆದ್ಯ ಕರ್ತವ್ಯವೆಂದು ತಿಳಿದು, ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣೆ ಯೋಜನೆಯನ್ನು ಹಮ್ಮಿಕೊಂಡು ಈ ಸಮೃದ್ಧ ಸಾಹಿತ್ಯ ರಾಶಿಯನ್ನು ಕನ್ನಡ ಜನತೆಗೆ ಅರ್ಪಿಸುತ್ತಿದೆ. ಈ ಯೋಜನೆಯಲ್ಲಿ ಜನಪದ ಪದ್ಯ, ಗದ್ಯ ರಂಗಭೂಮಿ ಮತ್ತು ಭಾಷಿಕ ಪ್ರಕಾರಗಳಿಗೆ ಸಂಬಂಧಿಸಿದಂತೆ ಹಲವು ಸಂಪುಟಗಳಲ್ಲಿ ಹೊರತರಲಾಗುತ್ತಿದೆ. ಈ ಸಾಹಿತ್ಯಮಾಲೆಯ ಕೃತಿ ಸಂಪುಟಗಳನ್ನು ಸಹೃದಯ ಓದುಗರು ಆಸ್ವಾದಿಸಿದರೆ ಕರ್ನಾಟಕ ಪ್ರಜಾ ಸರ್ಕಾರದ ಶ್ರಮ ಸಾರ್ಥಕವಾಗುತ್ತದೆ.

ಈ ಯೋಜನೆಯ ನೇತೃತ್ವ ವಹಿಸಿ ದುಡಿದ ಪ್ರೊ. ಹಿ.ಶಿ. ರಾಮಚಂದ್ರೇಗೌಡರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಂಪಾದಕ ಮಂಡಳಿಯ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ಜಾನಪದ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಸ್ಮರಿಸುತ್ತಾ ಸಮಗ್ರ ಕರ್ನಾಟಕದ ಪ್ರಾತಿನಿಧಿಕ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟಗಳನ್ನು ಸುವರ್ಣ ಕರ್ನಾಟಕ ವರ್ಷದ ಈ ಸುಸಂದರ್ಭದಲ್ಲಿ ಅತ್ಯಂತ ಸಂತೋಷದಿಂದ ಕನ್ನಡ ಜನತೆಗೆ ಸಮರ್ಪಿಸುತ್ತಿದ್ದೇನೆ.

**(ಹೆಚ್.ಡಿ. ಕುಮಾರಸ್ವಾಮಿ)**

# ಅಧ್ಯಕ್ಷರ ಮಾತು

**ಪೂರ್ವಾಪರ**

ಹದಿನೆಂಟನೆಯ ಶತಮಾನದ ಆಧುನಿಕ ವಿಜ್ಞಾನ ನಮ್ಮ ದೇಶಕ್ಕೆ ಒಂದು ಮಹಾಪಲ್ಲಟವಾಗಿ ಪ್ರವೇಶಿಸಿತು. ಅದು ವಸಾಹತುಶಾಹಿಯ ಒಂದು ಪ್ರಭುತ್ವವೂ, ಹೊಸಜ್ಞಾನ ಮತ್ತು ಹೊಸ ವಸ್ತು ವಿನ್ಯಾಸದ ಒಂದು ಆವಿಷ್ಕಾರವೂ ಆಗಿತ್ತು. ನಮ್ಮೊಳಗೆ ನಾವು, ಕಟ್ಟಿಹಾಕಿಕೊಂಡಿದ್ದ ನಮಗೆ ಈ ಕಂಪನ ಕೆಲವರಲ್ಲಿ ಭಾರಿ ತಲ್ಲಣವನ್ನೂ, ಹಲವರಲ್ಲಿ ಬಿಡುಗಡೆಯ ತರಂಗಗಳನ್ನೂ ತಂದಿತು. ಅದನ್ನು ಮಿಸುಕುವ, ಮೀರುವ ಅಥವಾ ಸುಧಾರಿಸಿ ಸ್ವೀಕರಿಸುವ ಯಾವ ಶಕ್ತಿಯೂ ಆಗಿನ ಭಾರತೀಯ ಸಂದರ್ಭಕ್ಕೆ ಇರಲಿಲ್ಲ. 'ಒಪ್ಪಿಕೊ ಇಲ್ಲವೆ ಹಿಂದೆಸರಿ' ಎಂಬ ಕೊನೆಯ ಆದೇಶವದು. ಇದು ಕಾರಣವಾಗಿ ಪ್ರಭುತ್ವವನ್ನು ಮೀರಿದರೆ ಹೊಸಜ್ಞಾನ ತಪ್ಪಿಹೋಗುವ, ಹೊಸಜ್ಞಾನವನ್ನೇ ವಿರೋಧಿಸಿದರೆ ಜೀವನ ಹಿಂದೆ ಸರಿಯುವ ಅಪಾಯದ ಇಕ್ಕಟ್ಟಿನಲ್ಲಿ ಭಾರತದ ಶ್ರೀಮಂತ ಮತ್ತು ಬಡವ ಇಬ್ಬರೂ ಸಿಕ್ಕಿಕೊಂಡರು. ಅಂಥ ವಿಜ್ಞಾನ ನಮ್ಮ ಹತ್ತಿರ ಬಂತು.

ಆ ವಿಜ್ಞಾನ ಕೇವಲ ಜ್ಞಾನವಾಗಿ ಬಂದಿದ್ದರೆ ಭಾರತೀಯ ಪಂಡಿತರು ಅದರೊಂದಿಗೆ ತರ್ಕಕ್ಕೆ ಬಿದ್ದು ಅದನ್ನು ಹೇಗೋ ಸೋಲಿಸಿ ಓಡಿಸಿಬಿಡುತ್ತಿದ್ದರು. ಅದು ಆಯುಧವಾಗಿಯೂ, ಆಸೆಯಾಗಿಯೂ ಮೂಡಿಬಂದಿತ್ತು. ಬ್ರಿಟಿಷರನ್ನು ಸೋಲಿಸಬಹುದಿತ್ತು. ಬಡತನವನ್ನು ಸೋಲಿಸುಬಹುದಿತ್ತೆ ! ನಮ್ಮ ಆ ಕಾಲದ, ದೇಶದ ಬಡತನ ಅಂಥ ವಸ್ತುಜ್ಞಾನದ ಆದೇಶಕ್ಕೆ ತಲೆಬಾಗಿತು. ಜೊತೆಯಲ್ಲಿಯೇ ಸಂಸ್ಕೃತಿಯ ಬಡತನವನ್ನೂ ಘೋಷಿಸಿಕೊಂಡಿತಲ್ಲ ! ಅಲ್ಲಿ ನಮ್ಮ ಪತನದ ಹಾದಿ ತೆರೆಯಿತು. ಈ ಸೋಲೇ ಮತ್ತೊಂದು ಕಡೆಯಿಂದ ರಾಷ್ಟ್ರೀಯ ಚಳವಳಿಗೆ ಸ್ವರಸಂಯೋಜನೆ ಮಾಡಿತು. 'ಸಾಮಗ್ರಿ ಆಧುನಿಕತೆ'ಯನ್ನು ಎತ್ತಕಡೆಯಿಂದ ಬೇಕಾದರೂ ತರಬಹುದು 'ಸಂಸ್ಕೃತಿ ಆಧುನಿಕತೆ' ಎಂಬುದು ಹಾಗೆ ಬೇರೆ ಬೇರೆ ಕಡೆಯಿಂದ ತುಂಬಿಕೊಳ್ಳುವಂಥದಲ್ಲ. ಅದನ್ನು ನೆಲದೊಡಲ ಫಲವತ್ತತೆಯಿಂದಲೇ ಪುನರ್‌ನಿರ್ಮಿಸಿ ಕೊಳ್ಳುತ್ತ, ಅನ್ಯಸಂಸ್ಕೃತಿಗಳೊಂದಿಗೆ ಅನುಸಂಧಾನ ನಡೆಸತಕ್ಕದ್ದು ಎಂಬುದನ್ನು ರಾಷ್ಟ್ರೀಯವಾದಿಗಳೂ, ಕನ್ನಡ ಸಾಹಿತ್ಯ, ಸಂಸ್ಕೃತಿ ಪುನರ್ ನಿರ್ಮಾತೃಗಳೂ ಆದ ಕನ್ನಡ ಕವಿ ಚಿಂತಕರು ಕಂಡುಕೊಂಡರು. ಅಲ್ಲಿ ಹುಟ್ಟಿತು ನೋಡಿ ನಮ್ಮ ಜನಪದ ಸಾಹಿತ್ಯದ ಕಾಂಕ್ಷೆ.

ಈ ಮೊದಲೆ ಬ್ರಿಟಿಷರು ಜನಪದ ಸಾಹಿತ್ಯ, ಸಂಸ್ಕೃತಿ ಸಂಗ್ರಹದಲ್ಲಿ ತೊಡಗಿದ್ದರು. ಅದು ಅವರ ಸಾಮ್ರಾಜ್ಯ ವಿಸ್ತರಣೆಯ ಎರಡನೆ ಚಲನೆಯ ಹುನ್ನಾರು. ಮತ್ತೊಂದು ಬಗೆಯಲ್ಲಿ ಭಾರತದ ಜಾನಪದ ಕಚ್ಚಾಸಂಪತ್ತನ್ನು ಕೊಂಡೊಯ್ಯುವ ವಿಕ್ರಮದ ಮುಂದುವರಿದ ಕಥಾನಕ. ಈ ನಮ್ಮ ಸಂಸ್ಕೃತಿ, ಅವರು ನಮಗೆ ತಂದುಕೊಟ್ಟ ವಿಜ್ಞಾನದಂಥ ಶ್ರೇಷ್ಠತೆ ಎಂದು ಅವರು ತಿಳಿದಿರಲಿಲ್ಲ, ಮಂತ್ರ ಮಾಯಾ ಲೋಕದ ಭಾರತೀಯ ಪುರಾತನರು ಹೇಗಿರಬಹುದು ಎಂಬ ಕುತೂಹಲ ಹಾಗೂ ಅದನ್ನು ಕಂಡು ಅನುಭವಿಸುವ ಪ್ರಭುವಿನ ಖುಷಿ ಅವರದಾಗಿತ್ತು. ತಪ್ಪೇನಿಲ್ಲ; ಪ್ರಭುಗಳೆ ಹಾಗೆ! ಆಳಿಸಿಕೊಳ್ಳುವವನ ಸಂಪತ್ತು, ಸಂಸ್ಕೃತಿ, ಸಾಹಿತ್ಯ - ಇವೆಲ್ಲ ಅಕಾಲಿಕ ಮತ್ತು ಹಳೆಯವು ಎಂದು ಅವರು ಹೇಳಲೇಬೇಕಿತ್ತು. ಅದು ಅವರ ಅಭಿವೃದ್ಧಿ ತತ್ವದ ಮುಂದುವರಿಕೆ ಮತ್ತು ಆಳಿಸಿಕೊಳ್ಳುವವನ ಅನಭಿವೃದ್ಧಿ ಮನೋಧರ್ಮದ ಸಮರ್ಥನೆ. ಅದು ಆಗಿನ ಭಾರತದಲ್ಲೂ ಕರ್ನಾಟಕದಲ್ಲೂ ಚನ್ನಾಗಿಯೇ ನಡೆಯಿತು.

ಆ ಕಾಲದ ಪರಿಸ್ಥಿತಿ ಹೊರಗಿನಿಂದ ಬಂದ ಜ್ಞಾನ 'ಆಧುನಿಕ', ನಮ್ಮದೆಂಬುದು 'ಪುರಾತನ' ಎಂದು ಮನಸೋತು ಒಪ್ಪಿಕೊಂಡುಬಿಟ್ಟಿತ್ತು. ಭಾರತೀಯ ಉತ್ಪಾದನೆಯಲ್ಲಿ ಹೊಸತು ಮತ್ತು ಹಳತು ಎಂಬ ವಿಭಜಿತ ಧೋರಣೆ ಎಲ್ಲರ ಮನದೊಳಗೆ ದಾಖಲಾಗಿತ್ತು. ಆ ಕಾರಣದ ಮೇಲಿಂದ ನಮ್ಮ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ ನಮ್ಮ ಹಳ್ಳಿಗಳಂತೆ ಹಳೆಯದು ಎಂದು ಹೇಳುವುದನ್ನು ಮರೆಯುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಈ ಎಲ್ಲವೂ ನಮ್ಮ ಹೃದಯಕ್ಕೆ ಸಂಬಂಧಪಟ್ಟ ಅತ್ಯಂತ ಆಪ್ತವಾದ ಸ್ಪಂದನ ಎಂಬುದನ್ನು ನಿರಾಕರಿಸುವಂತಿರಲಿಲ್ಲ. ಇಂತಹ ಒಂದು ಸಮಕಾಲೀನ ಸಂಘರ್ಷವನ್ನು ಎದುರು ಹಾಕಿಕೊಂಡ ಸಂದರ್ಭದಲ್ಲಿ ನಮ್ಮ ಹಿರಿಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಕಂಡು ಕಾಣಿಸಿ ವಿವರಿಸಿದರು. ಅಂತಹ ಜನಪದ ಸಾಹಿತ್ಯದ ಆಪ್ತತೆಗಾಗಿ ಅದರ ಕಡೆಗೆ ಕೈ ಚಾಚಿದರು, ಅದಕ್ಕಾಗಿ ಹಂಬಲಿಸಿ ಆಸೆಪಟ್ಟರು, ಅದನ್ನು ಕೊಡುವ ಜನತೆಯ ಮುಂದೆ ಬೇಡಿದರು, ಅವರ ಸೃಷ್ಟಿಸಂಸ್ಕೃತಿಗೆ

ಉಪಕಾರ ಸ್ಮರಣೆ ಸಲ್ಲಿಸಿದರು. ಶಿಷ್ಟತೆಯ ಸ್ಥಾನ - ಮಾನ, ಅಹಂಕಾರವನ್ನು ತೊರೆದು ಜನಪದರೊಂದಿಗೆ ಒಂದಾಗುವ, ಒಡನಾಡುವ ತಾಯ್ತನವನ್ನು ಮೆರೆದರು.

ಜನಪದ ಸಾಹಿತ್ಯ ಮತ್ತು ಅದರ ಸಂಗ್ರಹದ ಪ್ರಶ್ನೆ ಕೇವಲ ಒಂದು ಸಾಹಿತ್ಯ ಪ್ರಕಾರದ ಬಗೆಗಿನ ವ್ಯಾಮೋಹ ಆಗಿರಲಿಲ್ಲ. ಅದು ಪ್ರಸ್ತುತದಲ್ಲಿದ್ದ 'ಆಧುನಿಕ'ವೆಂಬ ಜಾಗತಿಕ ಸಂಸ್ಕೃತಿಯ ಸಂದರ್ಭದಲ್ಲಿ ಸ್ಥಳೀಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಘಟಿಸುವ ಜವಾಬ್ದಾರಿಯೂ ಆಗಿತ್ತು. ಇದರೊಳಗೆ ಗ್ರಾಮೀಣ ಸಮುದಾಯಗಳನ್ನು ಚೇತರಿಸುವ ಮೂಲಕ ಅಖಂಡ ಭಾರತವನ್ನು ಪುನರ್‌ಸಂಘಟಿಸುವ ಪರೋಕ್ಷ ಪ್ರಯತ್ನವೂ ಇತ್ತು. ಹೀಗೆ ಒಂದು 'ಸಮಗ್ರ ಸಾಹಿತ್ಯ ಕರ್ನಾಟಕ' ಮತ್ತು 'ಸಂಸ್ಕೃತಿ ಭಾರತ'ವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ನಮ್ಮ ಹಿರಿಯರು ಹೊತ್ತರು. ಇದನ್ನು ಸಾಹಿತಿಗಳ ಮೂಲಕ ನಡೆದ ರಾಷ್ಟ್ರೀಯ ಚಳವಳಿ ಎನ್ನಬಹುದು. ಇವರಿಗೆ ಜನಪದಸಾಹಿತ್ಯ ಮುಖ್ಯ ಸಂಪನ್ಮೂಲವೂ, ಸ್ಫೂರ್ತಿಯೂ, ಸಾಂಸ್ಕೃತಿಕ ಅಸ್ತ್ರವೂ ಆಯಿತು. ಶಿಷ್ಟ ಸಾಹಿತ್ಯ, ಕವಿ ಮುದ್ದಣನ ಸಂದರ್ಭದಲ್ಲಿ ನಿಲುಗಡೆಗೆ ತಲುಪಿದ್ದು, ನವೋದಯ ಸಾಹಿತ್ಯ ಚಳವಳಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಟ್ಟುವ ಹೊಸ ನಾಯಕತ್ವವನ್ನು ವಹಿಸಿತ್ತು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಕೆಲವು ಪಾಶ್ಚಾತ್ಯ ದೇಶಗಳು ಜನಪದ ಸಾಹಿತ್ಯದ ಮೂಲಕ ತಮ್ಮ ದೇಶವನ್ನು ಪುನರ್‌ಸಂಘಟಿಸುವ ಮಾರ್ಗದರ್ಶನವನ್ನು ನೀಡಿದ್ದವು. ಅದು ನಮ್ಮ ಸಾಹಿತಿ-ಚಿಂತಕರಿಗೆ ಒಂದು ಹೆದ್ದಾರಿಯಾಯಿತು.

ಇಂಗ್ಲೆಂಡ್ ಕೈಗಾರಿಕೀಕರಣದಿಂದ ಕಳೆದುಕೊಳ್ಳುತ್ತಿರುವ ತಾಯ್ತನವನ್ನು ಮತ್ತೆ ಪಡೆಯಲು ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆಗೆ ಧಾವಿಸಿತು. ಫಿನ್ಲೆಂಡ್ ತನ್ನ ಪಕ್ಕದ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಮತ್ತು ಸ್ವದೇಶವೆಂಬ ಸಂಸ್ಕೃತಿ ರಾಷ್ಟ್ರವನ್ನು ಸ್ಥಾಪಿಸಲು ಜನಪದ ಮಹಾಕಾವ್ಯ ಮತ್ತು ನಾಯಕರನ್ನು ಸಾಂಸ್ಕೃತಿಕ ವೀರರನ್ನಾಗಿ ಸ್ಥಾಪನೆಮಾಡಿತು. ಜರ್ಮನಿ ತಮ್ಮ ಮೂಲವನ್ನು ಪರೀಕ್ಷೆ ಮಾಡಿಕೊಳ್ಳಲು ಹಾಗೂ ಭದ್ರಮಾಡಿಕೊಳ್ಳಲು ಜನಪದ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಭಾರಿ ಹೊರೆಯನ್ನು ಹೊರಿಸಿತು. ರಷ್ಯಾ ಕಾರ್ಮಿಕ ರಾಜ್ಯ ಸ್ಥಾಪನೆಯ ಘೋಷಣೆಯ ಮೂಲಕ, ದುಡಿಯುವ ಜನರ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಮೂಲಕ ಜನರ ದನಿಗೆ ಮಾನ್ಯತೆ ನೀಡಿತು. ಭಾರತದಲ್ಲಿ ಇಂಥದೊಂದು ಚಟುವಟಿಕೆ ಗಾಂಧೀಜಿ ಅವರ ಸ್ವದೇಶಿ ಮತ್ತು ಗ್ರಾಮ ಸ್ವರಾಜ್ಯ ಚಿಂತನೆಯಿಂದ ಆರಂಭವಾಯಿತು.

ನಮ್ಮ ನವೋದಯ ಹಿರಿಯ ಸಾಹಿತಿಗಳು ಪಾಶ್ಚಾತ್ಯವನ್ನು ಪೌರ್ವಾರತ್ಯದಿಂದ ಸರಿಗಟ್ಟಲು ಪ್ರಯತ್ನಶೀಲರಾದರೂ ಪಾಶ್ಚಾತ್ಯವೆಂಬುದು ಅವರಿಗೆ ನಿರಾಕರಣೆಯ ಜ್ಞಾನವಾಗಿರಲಿಲ್ಲ. ಈ ಎರಡರಲ್ಲಿಯ ಒಳ್ಳೆಯದರ ಆಯ್ಕೆ ಅವರ ಆದ್ಯತೆಯಾಗಿತ್ತು. ಪಾಶ್ಚಾತ್ಯ ಸಾಹಿತ್ಯದಲ್ಲಿಯ ಒಳ್ಳೆಯದನ್ನು ಹೆಸರಿಸುತ್ತಲೇ ಆ ಮಟ್ಟದ ಸಾಮರ್ಥ್ಯ ಪಡೆಯಲು ಜನಪದ ಸಾಹಿತ್ಯವೇ ಸರಿಯಾದ ಸಂಪನ್ಮೂಲ ಎಂಬುದನ್ನು ಮನಗಂಡರು. ಆ ಮೂಲಕ ಜನಪದ ಸಾಹಿತ್ಯ ಒಂದು ಸಾಹಿತ್ಯಕ ಅನನ್ಯತೆ ಮತ್ತು ಸ್ವೋಪಜ್ಞತೆ ಎಂದು ಗುರುತಿಸಿದರು. ಜನಪದ ಸಾಹಿತ್ಯವೆಂಬುದು : 'ಗೊರವರ ಡುಂಡುಚಿ ಬೀದಿವರೆಯ ಬೀರನಕತೆ' ಎಂಬ ಹಿಂದಿನ ಅವಹೇಳನಕಾರಿ ಧೋರಣೆಯನ್ನು ತಿರಸ್ಕರಿಸಿದರು. 1921ರ ಸುಮಾರಿನಿಂದಲೆ ನಮ್ಮ ಕನ್ನಡ ಸಾಹಿತಿಗಳು ಜನಪದಗೀತ ಸಂಗ್ರಹಗಳನ್ನು ಪ್ರಕಟಿಸತೊಡಗಿದರು, ನಮ್ಮ ಅಸ್ತಿತ್ವಕ್ಕಾಗಿ ಪಡಿ ನುಡಿದರು. ಹಾಗೆ ನೋಡಿದರೆ ಈ ಬದ್ಧತೆ ಅವರು ಸಮಕಾಲೀನವಾಗಿ ತಮ್ಮನ್ನು ಸೂಕ್ತ ಮಾಡಿಕೊಳ್ಳುವ ಸಂಗತಿಯೂ ಹೌದು. ಇಂಥ ಮುಕ್ತ ಮನಸ್ಸು ಮತ್ತು ವ್ಯಕ್ತ ವ್ಯಕ್ತಿತ್ವದ ಮೂಲಕ ಜನಪದ ಸಾಹಿತ್ಯ ಸಂಗ್ರಹಕ್ಕೆ ರಾಜಮಾರ್ಗವನ್ನು ಸೃಷ್ಟಿಸಿದರು. ಈಗ ಅವರ ಮಾರ್ಗದರ್ಶಕ ಮಾತುಗಳನ್ನು ಅನುಸರಿಸಿಯೇ ನಾವು ಮುಂದೆ ಹೋಗಬೇಕಿದೆ.

# ಮಾತಿನ ಸರಣಿ : ಮುತ್ತಿನ ಬೆಲೆ

**ಬಿ.ಎಂ.ಶ್ರೀಕಂಠಯ್ಯ**

'ಕನ್ನಡದಲ್ಲಿ ಇಂತಹ ಕಾಲ ಒದಗಿರುವಾಗ, ಕನ್ನಡ ಕವಿತೆ ತನ್ನ ಅಳತೆಯನ್ನೆ ಅಲ್ಲ, ಆಳವನ್ನೂ ಕೂಡಾ ಕಂಡುಕೊಳ್ಳುತ್ತಿರುವಾಗ, ಸಂಸ್ಕೃತ-ಇಂಗ್ಲಿಷ್ ಸಾಹಿತ್ಯಗಳ, ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು'. **(ಗರತಿಯ ಹಾಡು 1931)**

**ದ.ರಾ.ಬೇಂದ್ರೆ**

'………ತಾಯಿ, ಅಕ್ಕಗಳಿರಾ ! ಈ ಹಳ್ಳಿಯ ಹಾಡುಗಳ, ಹಳೆಯ ಹಾಡುಗಳ ಹೊಳೆಯನ್ನು ಇಂಗಗೊಡಬೇಡಿ. ಮತ್ತೆ ಹನಿಹನಿಯಾಗಿ ಹಳ್ಳವಾಗಲಿ, ಹಳ್ಳ ಹಳ್ಳ ಕೂಡಿ ಹೊಳೆಯಾಗಲಿ. ಈ ಅಪೇಕ್ಷೆಯನ್ನು ಕನ್ನಡತಿಯರು ಕೈಗೂಡಿಸಿಕೊಡರೆ ?

'ಕರ್ನಾಟಕದೊಳಗಿನ ಬೇರೆ ಬೇರೆ ಭಾಗದವರು ಹೀಗೆ ಪದ್ಯಗಳನ್ನು ಸಂಗ್ರಹಿಸಿ ಚೆನ್ನಾಗಿ ಬರೆದು ಕಳುಹಿಸಿದರೆ ಕನ್ನಡದ ಅಭ್ಯಾಸಕ್ಕೆ ದೊಡ್ಡದೊಂದು ಉಪಕಾರ ಮಾಡಿದಂತಾಗುವುದು. ಇದನ್ನು ಎಷ್ಟು ಒತ್ತಿಹೇಳಿದರೂ ಸಾಲದು **(ಗರತಿಯ ಹಾಡು 1931)**

**ಮಾಸ್ತಿ ವೆಂಕಟೇಶ ಅಯ್ಯಂಗಾರ್**

'ಜನದ ಕ್ಷೇಮವನ್ನು ಬಯಸುವವರೆಲ್ಲ ಈ ಕವಿತೆಯನ್ನು ದೃಷ್ಟಿಯಿಟ್ಟು ನೋಡಬೇಕು, ಮನಸ್ಸು ಕೊಟ್ಟು ತಿಳಿಯಬೇಕು. ಇನ್ನು ಯಾವ ರೀತಿಯಿಂದಲಾದರೂ ತಿಳಿಯಲಾಗದ ಕೆಲವು ವಿಷಯಗಳು ನಮಗೆ ಈ ಕವಿತೆಯಿಂದ ತಿಳಿಯುತ್ತವೆ'. **(ಕರ್ನಾಟಕ ಜನಪದ ಸಾಹಿತ್ಯ 1956)**

**ಬೆಟಗೇರಿಕೃಷ್ಣಶರ್ಮ**

'ಹೊಸಕಾಲದ ಕ್ರಾಂತಿಯಲ್ಲಿ ಮಾನವನ ಮನಸ್ಸು ಬುದ್ಧಿ ಹೃದಯಗಳು ಮಾಯವಾಗಿ ಹೋಗುವವೇನು?.. ಇದ್ದೇ ಇರುವವು. ಇವು ಇದ್ದೇ ಇರುವುದಾದರೆ ನಮ್ಮ ಹಳೆಯ ಜನಪದ ಸಾಹಿತ್ಯ ಉಳಿಯಲೇಬೇಕು, ಉಳಿದೇ ಉಳಿಯುವುದು. ನಾವೀಗ ಅದನ್ನು ಅಳಿಯದಂತೆ ಉಳಿಸಿ, ಹೊಸ ಕಾಲಕ್ಕೆ ನಮ್ಮ ಕಾಣಿಕೆ ಸಲ್ಲಿಸಲೇಬೇಕಾಗಿದೆ'. **(ಅಧ್ಯಕ್ಷ ಭಾಷಣ. ಮೂರನೆಯ ಕರ್ನಾಟಕ ಜಾನಪದ ಸಮ್ಮೇಳನ 1971)**

**ಬಿ.ಎಸ್.ಗದ್ದಿಗೀಮಠ**

'ಕರ್ನಾಟಕದ ಒಂದೊಂದು ಭಾಗದ ಜನಪದ ಸಾಹಿತ್ಯವನ್ನು ಕಲೆಹಾಕಿ ಬೆಳಕಿಗೆ ತಂದರೆ ಕನ್ನಡ ಜನತೆಯ ನಿಜವಾದ ಸಂಸ್ಕೃತಿಯ ಒಂದು ಅಮೂಲ್ಯವಾದ 'ವಿಶ್ವಕೋಶ'ವೇ ಆಗಬಹುದೆಂದು ಹೇಳಬಹುದು'. **(ಕನ್ನಡ ಜನಪದ ಗೀತೆಗಳು 1963)**

**ದೇ.ಜವರೇಗೌಡ**

'ಈ ತನಕ ವೈಯಕ್ತಿಕ ಮಟ್ಟದಲ್ಲಿ ತಕ್ಕಮಟ್ಟಿಗೆ ಸಂಗ್ರಹಕಾರ್ಯ ನಡೆದಿದೆ; ಆದರೆ ಆಗಬೇಕಾದ ಕಾರ್ಯ ಬೆಟ್ಟದಷ್ಟಿದೆ. ಅದನ್ನೆಲ್ಲ ಒಬ್ಬಿಬ್ಬರು ವ್ಯಕ್ತಿಗಳಿಂದ ನಿರೀಕ್ಷಿಸುವುದು ಕಷ್ಟ. ಸರ್ಕಾರವೊ, ಸರ್ಕಾರದ ನೆರವು ಪಡೆದ ಸಂಸ್ಥೆಗಳೊ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ'. **(ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ 1967).**

**ಎಚ್.ಎಲ್. ನಾಗೇಗೌಡ**

'ಹಣಕೊಟ್ಟರೆ ಮುಂದೆ ಏನಾದರೂ ಸಿಕ್ಕಬಹುದು. ಆದರೆ ಜನಪದ ಸಾಹಿತ್ಯ ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿಕೊಳ್ಳಬಹುದು. ಆದರೆ ಜನಪದ ಸಾಹಿತ್ಯ ಶರಾವತಿ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯಲಾರಳು'. **(ಹೊನ್ನ ಬಿತ್ತೇವು ಹೊಲಕೆಲ್ಲ 1963)**

**ಜೀ. ಶಂ. ಪರಮಶಿವಯ್ಯ**

'ಸಮೃದ್ಧವಾದ ಜನಪದ ಸಾಹಿತ್ಯ ದೇಶದ ಸೌಭಾಗ್ಯಗಳಲ್ಲೊಂದು, ಅದನ್ನು ಪ್ರಮುಖವಾದ ರಾಷ್ಟ್ರೀಯ ಸಂಪತ್ತು ಎಂಬಂತೆ ಕಾಪಾಡಿಕೊಳ್ಳಬೇಕು'. **(ಜನಪದ ಸಾಹಿತ್ಯ ಸಮೀಕ್ಷೆ 1967)**

**ಕಟ್ಟುವ ಕನಸು; ನೆಟ್ಟ** ಸಸಿಜನಪದ ಸಾಹಿತ್ಯದ ಸಂಗ್ರಹದ ಮಾತು ಆ ಸಾಹಿತ್ಯ ಸಂಗ್ರಹಕ್ಕೆ ಮಾತ್ರ ಮುಗಿಯದು. ಆ ಸಂಗ್ರಹದ ಮೂಲ ಉದ್ದೇಶ ಜನಪದ ಸಂಸ್ಕೃತಿಯ ಕಾಂಕ್ಷೆ ಎಂದರೆ ಜೀವನ ಸಂಸ್ಕೃತಿಯ ಹುಡುಕಾಟ, ಬದುಕುವ ಸಂಸ್ಕೃತಿಯ ಬಯಕೆ. ಸಹಜ ಸಂಸ್ಕೃತಿ ಮತ್ತು ಭೋಗ ಸಂಸ್ಕೃತಿಯ ನಡುವಿನ ಈ ಸಂಘರ್ಷ ಬ್ರಿಟಿಷ್ ವಸಾಹತುಶಾಹಿ ಆಗಮನ ಕಾಲದಿಂದ ಮಾತ್ರವಲ್ಲ; ಶಿಷ್ಟ ಜನಪದವೆಂಬ ಸಹಜ ಸಂಸ್ಕೃತಿಗಳ ನಿರಂತರ ಅನುಸಂಧಾನದ ಪ್ರಕ್ರಿಯೆ. ಅದು ಕಾರಣವಾಗಿ ಜನಪದ ಸಾಹಿತ್ಯ ಸಂಗ್ರಹದ ಕಾರ್ಯ ಮತ್ತು ಅಧ್ಯಯನ ಯಾವ ಕಾಲಕ್ಕೂ ಮುಗಿಯುವುದಿಲ್ಲ. ಹಾಗೆ ಮುಗಿದರೆ ಸಂಸ್ಕೃತಿಗಳೆಲ್ಲವೂ ಸತ್ತಿರುತ್ತವೆ. ಕರ್ನಾಟಕದ ಸಂದರ್ಭದಲ್ಲಿ ಶಿಷ್ಟ - ಜನಪದ - ವಸಾಹತು ಸಂಸ್ಕೃತಿಗಳ ಸಂಘರ್ಷ ಮತ್ತು ಅನುಸಂಧಾನ ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಲೇ ಇದೆ. ಅಂತಹ ನಾಲ್ಕು ದಾರಿಗಳು ನಮಗೆ ಕಂಡಿವೆ :

**ಕನ್ನಡ ಭಾಷಾ ಅಭಿವೃದ್ಧಿಗಾಗಿ** 2 ಜನತಾ ಸಂಸ್ಕೃತಿಯ ಶೋಧಕ್ಕಾಗಿ 3 ಜಾನಪದ ಅಧ್ಯಯನಕ್ಕಾಗಿ4 ಪರ್ಯಾಯ ಜ್ಞಾನ ಚಿಂತನೆಯಾಗಿ

ಕನ್ನಡ ಭಾಷಾಭಿವೃದ್ಧಿಗಾಗಿ ಜನಪದ ಸಾಹಿತ್ಯವನ್ನು ಯಾಕೆ ಮತ್ತು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ನಮ್ಮ ಹಿರಿಯ ಸಾಹಿತಿಗಳು ಹೇಳಿರುವುದನ್ನು ಈ ಮೊದಲು ಕಂಡಿದ್ದೇವೆ. ಜನತಾ ಸಂಸ್ಕೃತಿಯ ಪುನರುತ್ಥಾನದ ವಿಷಯದಲ್ಲಿ ಕೂಡ ಇದೇ ಹಿರಿಯರು ಅತ್ಯಂತ ಸಂವೇದನಾಶೀಲ ನಡೆಯನ್ನು ದಾಖಲಿಸಿದ್ದಾರೆ. ದೇವುಡು ಅವರ ಈ ಮಾತುಗಳನ್ನು ಗಮನಿಸಿ : 'ಈ ಸಂಸ್ಕೃತಿ ವಿಮರ್ಶೆಯ ದೃಷ್ಟಿಯಿಂದ ನಮಗೆ ನಮ್ಮ ನಾಡಿನ ಕುಲಕುಲಗಳೆಲ್ಲವೂ ಒಂದೇ ಸಮನಾಗಿ ಮಾನ್ಯವಾದುವು : ಹಾರುವರೆಂದು ಹೆಚ್ಚಲ್ಲ, ಹೊಲೆಯರೆಂದು ಕಡೆಯಿಲ್ಲ; ಕನ್ನಡ ನಾಡಿನಲ್ಲಿ ನೆಲಸಿ, ಕನ್ನಡಿಗರು ನಾವು ಎಂದು ಅಭಿಮಾನಪಡುವ ಪ್ರತಿಯೊಂದು ಕುಲವೂ ನಮಗೆ ಮಾನ್ಯವು. ಈ ಕನ್ನಡ ಕುಲಕುಲಗಳ ವ್ಯಷ್ಟಿಸಮಷ್ಟಿ ವ್ಯವಹಾರ ಪ್ರಪಂಚವನ್ನು ಸಂಸ್ಕೃತಿಯ ದೃಷ್ಟಿಯಿಂದ ಹುಡುಕಾಡುವುದು ಈ ಲೇಖನಗಳಲ್ಲಿ ಮಾಡುವ ಕೆಲಸ (ಕರ್ನಾಟಕ ಸಂಸ್ಕೃತಿ 1935). ಸಿಂಪಿ ಲಿಂಗಣ್ಣ ಅವರೂ ಇದೇ ಮಾರ್ಗದಲ್ಲಿ ಮುನ್ನಡೆದಿದ್ದಾರೆ : "ಇದು ದಲಿತರು ಉದ್ಧಾರವಾಗುವ ಕಾಲ; ದುಡಿಮೆಗಾರರು ರಾಜ್ಯ ಶಾಸಕರಾಗುವ ಕಾಲ; ಒಕ್ಕಲಿಗನು ನೇಗಿಲಯೋಗಿಯೆನಿಸುವ ಕಾಲ, ನಿರಕ್ಷರರು ಸಾಕ್ಷರರಾಗುವ ಕಾಲ; ಸಾಮಾನ್ಯ ಜನರೂ ಸುಖ ಬಯಸುವ ಕಾಲ; (ಜನಾಂಗದ ಜೀವಾಳ 1934).

ಕರ್ನಾಟಕದ ಹೆಚ್ಚಿನ ಜಾನಪದ ಅಧ್ಯಯನ ಎಂಬುದು ಜನಪದ ಸಾಹಿತ್ಯದ ಅಧ್ಯಯನವೆ ಆಗಿದೆ. ಕರ್ನಾಟಕದಲ್ಲಿ 'ಜಾನಪದವನ್ನು ಹುಟ್ಟಿಸಿ ಬೆಳಸಿದವರೆ ಸಾಹಿತಿಗಳು. ಜನಪದ ಸಾಹಿತ್ಯ ಸಂಗ್ರಹ ಬ್ರಿಟಿಷ್ ವಿದ್ವಾಂಸ ಜಾನ್ ಲೇಡನ್ (1803) ಕಾಲದಿಂದ ನಡೆಯುತ್ತ

ಬಂದಿದೆ. ಅದರ ಸಾಹಿತ್ಯ ಅಧ್ಯಯನ ಕೂಡ ತುಂಬ ಹಿಂದಿನದು. ಜನಪದ ಸಾಹಿತ್ಯ ಸೇರಿದಂತೆ ಜನಪದರ ಏನೆಲ್ಲ ಹುಟ್ಟುವಳಿಗಳನ್ನು ಜಾನಪದವೆಂಬ ಸಮಗ್ರ ವಿಷಯದೊಳಗೆ ತಂದು ಅಧ್ಯಯನ ಮಾಡಿದ್ದು 1966 ರಿಂದ ಈಚೆಗೆ. ಕರ್ನಾಟಕ ಜಾನಪದ ಅಧ್ಯಯನದ ಪ್ರೇರಕರೆಂದರೆ ದೇ.ಜವರೇಗೌಡ. ಇವರನ್ನು ಅನುಸರಿಸಿದವರೆಂದರೆ, ಹಾ. ಮಾ. ನಾಯಕ ಮತ್ತು ಜೀ.ಶಂ. ಪರಮಶಿವಯ್ಯ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲಾಗಿ ಕನ್ನಡ ಎಂ.ಎ ತರಗತಿಗೆ ಐಚ್ಛಿಕವಾಗಿ ಎರಡು ಜಾನಪದ ಸಂಬಂಧಿ ಪತ್ರಿಕೆಗಳನ್ನು ಅಧ್ಯಯನಕ್ಕಾಗಿ ಅಳವಡಿಸಲಾಯಿತು (1966). ಆನಂತರ 1974ರಲ್ಲಿ ಪೂರ್ಣಪ್ರಮಾಣದಲ್ಲಿ ಜಾನಪದ ಎಂ.ಎ ತರಗತಿಗಳನ್ನು ಆರಂಭಿಸಲಾಯಿತು. ಈ ವಿಭಾಗಕ್ಕೆ ಕರ್ನಾಟಕದ, ಏಕೆ ಭಾರತದಲ್ಲಿಯೇ ಮೊದಲಾಗಿ ಜಾನಪದ ಪ್ರಾಧ್ಯಾಪಕರಾಗಿ ಜೀ.ಶಂ.ಪರಮಶಿವಯ್ಯ ನೇಮಕಗೊಂಡರು. ಇದೇ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಹಾ. ಮಾ. ನಾಯಕ ಅವರು 'ಜಾನಪದ ಸ್ವರೂಪ' (1966) ಕುರಿತು ಒಂದು ಸಮಗ್ರ ದೃಷ್ಟಿಯ ಲೇಖನವನ್ನು ಬರೆದು ಜಾನಪದ ಅಧ್ಯಯನಕ್ಕೆ ರಾಜಮಾರ್ಗವನ್ನು ತೋರಿಸಿದರು. ಇಷ್ಟೆಲ್ಲದರ ಪ್ರೇರಣಾಶಕ್ತಿಯಾದ ದೇ.ಜವರೇಗೌಡರ ನುಡಿ ಇದು : 'ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು; ಅದು ಜನಸಾಮಾನ್ಯರ ಶ್ರುತಿಯೂ ಅಹುದು, ಸ್ಮೃತಿಯೂ ಅಹುದು.... ಭಾರತೀಯತ್ವದ ಅಥವಾ ದೇಶೀಯತೆಯ ರಕ್ಷಣೆಗಾಗಿ ಜಾನಪದ ಸಂಪ್ರದಾಯದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ.....ಜಾನಪದ ಸಂಪ್ರದಾಯದ ಪುನಶ್ಚೇತನದಿಂದ ದಾಸ್ಯ ಮನೋಭಾವ ತೊಲಗಿ ಜನಜೀವನದಲ್ಲಿ ಹುರುಪು ಹುಮ್ಮಸ್ಸುಗಳು ಚಿಗುರಿ, ಆತ್ಮಪ್ರಜ್ಞೆ ಕೊನರಿ, ಕೆಚ್ಚುನೆಚ್ಚುಗಳು ಮೂಡಿ, ಹೊಸ ಚೇತನ ಮುಕ್ಕಳಿಸುತ್ತದೆ (ಜನಪದ ಸಾಹಿತ್ಯ ಸಮೀಕ್ಷೆ - ಜೀಶಂಪ; ಮನ್ನುಡಿಯಲ್ಲಿ 1967).

ಮೈಸೂರು ವಿಶ್ವವಿದ್ಯಾನಿಲಯ ಆರಂಭಿಸಿದ ಈ ಜಾನಪದ ಪ್ರಸ್ಥಾನ, ಇದೊಂದು ರಾಷ್ಟ್ರೀಯ ಅವಶ್ಯಕತೆ ಎನ್ನುವಂತೆ ಬಹುಬೇಗನೆ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ವ್ಯಾಪಿಸಿತು. ದೇಜಗೌ, ಹಾಮಾನಾ, ಜೀಶಂಪ ಅವರು ಈ ಪ್ರಸ್ಥಾನದ ಮಾರ್ಗದರ್ಶಿ ಮಾದರಿಗಳಾದರು. ಈ ಹಿಂದೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಅಗ್ರಮಾನ್ಯತೆ ಇತ್ತು. ಈಗದು ಅಧ್ಯಯನದ ನೆರವನ್ನು ಪಡೆಯಬೇಕಾಗಿ ಬಂತು. ಜನಪದ ಸಾಹಿತ್ಯವನ್ನು ಕೇಳುವ - ಓದುವ ಪ್ರಕ್ರಿಯೆ ಅದನ್ನು ಸಾಂಸ್ಕೃತಿಕವಾಗಿ ಅರ್ಥೈಸುವತ್ತ ಮುನ್ನಡೆಯಿತು. ಅದು ಕಾರಣವಾಗಿ ಹಲವರು ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಲೂ, ಅದರ ವಿಚಾರವನ್ನು ಹೇಳುತ್ತಲೂ ಹೋದರು. ಈ ನಿಟ್ಟಿನಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳು ಮಾರ್ಗದರ್ಶಕನ ಸ್ಥಾನದಲ್ಲಿ ನಿಂತರೆ, ಹೊರಗಿನಿಂದ ಅನೇಕರು ಈ ಮಾರ್ಗವನ್ನು ದೃಢೀಕರಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಜನಪದ ಸಾಹಿತ್ಯವೊಂದು ಅಧ್ಯಯನ ವಿಷಯವಾಗಬಲ್ಲದು ಎಂಬ ಸೂಚನೆಯನ್ನೂ ವಾತಾವರಣವನ್ನೂ ಸೃಷ್ಟಿಸಿಕೊಟ್ಟವರು ರಾಷ್ಟೀಯವಾದಿಗಳಾದ ಹಿರಿಯ ಕನ್ನಡ ಸಾಹಿತಿಗಳು. ಜನಪದ ಸಾಹಿತ್ಯ - ಜಾನಪದವನ್ನು ಅಧ್ಯಯನ ಶಿಸ್ತನ್ನಾಗಿ ಮಾಡಿಯೆ ತೀರುವ ಹಠವನ್ನು ಹೊತ್ತವರು ದೇ.ಜವರೇಗೌಡರು. ಜಾನಪದ ಡಿಪ್ಲೊಮಾ, ಜಾನಪದ ಎಂ.ಎ ತೆರೆಯುವುದರ ಜೊತೆಗೆ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಒಂದು ವಿಭಾಗವನ್ನೇ ಆರಂಭಿಸಿದರು. ಕರ್ನಾಟಕದಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ತರಲು ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ, ಅಂಬಳಿಕೆ ಹಿರಿಯಣ್ಣ ನೇಮಕಗೊಂಡರು. ಇವರ ನಂತರ ಮೈಲಹಳ್ಳಿ ರೇವಣ್ಣ ಮತ್ತು ಜಯಲಕ್ಷ್ಮಿ ಸೀತಾಪುರ ಜನಪದ ಸಾಹಿತ್ಯ ಸಂಗ್ರಹದಲ್ಲಿ ತೊಡಗಿದರು. ಇದೇ ಸಂದರ್ಭದಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನೂ ದೇ.ಜ.ಗೌ. ಶುರುಮಾಡಿದರು. ಅವರ ಈ ಸಾಹಸ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳನ್ನು ಪ್ರೇರೇಪಿಸಿತು. ಈ ಮೂರು ಹಂತದ; ಜಾನಪದ ಅಧ್ಯಯನ, ಸಂಗ್ರಹ ಹಾಗೂ ವಸ್ತುಸಂಗ್ರಹಾಲಯ ಸ್ಥಾಪನೆ ಕಾರ್ಯಯೋಜನೆಯನ್ನು ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಕೈಗೆತ್ತಿಕೊಂಡವು.

ಮೈಸೂರು ವಿಶ್ವವಿದ್ಯಾಲಯ ವಲಯವು ಈಗಾಗಲೇ ಎಸ್. ಕೆ. ಕರೀಂಖಾನ್, ಕೆ.ಆರ್. ಲಿಂಗಪ್ಪ ಹಾಗೂ ಮತ್ತಿತರರ ಜನಪದ ಸಾಹಿತ್ಯ ಹಾಡುಗಾರಿಕೆ ಪ್ರಚಾರದಿಂದ, ಮತಿಘಟ್ಟ ಕೃಷ್ಣಮೂರ್ತಿಯವರ ಸಮೃದ್ಧ ಜನಪದ ಸಾಹಿತ್ಯ ಸಂಗ್ರಹದ ದಾಖಲೆ ಮತ್ತು ತರೀಕೆರೆಯ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನದಿಂದ ಮೈನೆರೆದು ನಿಂತಿತ್ತು. ಈ ಸಂದರ್ಭವನ್ನು ಬಳಸಿಕೊಂಡು ಈ ವಲಯದಿಂದ ಕೆಳಗಿನ ಜಾನಪದ ವಿದ್ವಾಂಸರು ಸಂಗ್ರಹ, ಅಧ್ಯಯನ ಮತ್ತು ಪ್ರಸರಣಕಾರ್ಯವನ್ನು ಮುಂದುವರಿಸಿದರು. ಅವರೆಂದರೆ : ಮತಿಘಟ್ಟ

ಕೃಷ್ಣಮೂರ್ತಿ, ಪಿ.ಆರ್. ತಿಪ್ಪೇಸ್ವಾಮಿ, ಸಿ. ಪಿ. ಕೆ., ರಾಗೌ, ಸುಧಾಕರ, ನಂ.ತಪಸ್ವೀ ಕುಮಾರ್, ಹ. ಕ. ರಾಜೇಗೌಡ, ಡಿ.ಕೆ.ರಾಜೇಂದ್ರ ಹಿ.ಶಿ. ರಾಮಚಂದ್ರೇಗೌಡ, ಜಿ. ವಿ. ದಾಸೇಗೌಡ, ವೈ.ಸಿ. ಭಾನುಮತಿ, ನಲ್ಲೂರು ಪ್ರಸಾದ್, ಮೇಟಿಕೆರೆ ಹಿರಿಯಣ್ಣ, ಚಂದ್ರು ಕಾಳೇನಹಳ್ಳಿ, ವಿ. ಎನ್. ಶಿವರಾಮು ಮುಂತಾದವರು.

ತಾವು ಬೇರೆಯಾಗುವುದಕ್ಕೆ ಮೊದಲು ಕುವೆಂಪು ಹಾಗೂ ಮಂಗಳೂರು ವಿಶ್ವವಿದ್ಯಾಲಯಗಳು ಮೈಸೂರು ವಿಶ್ವವಿದ್ಯಾಲಯದ ವಿಸ್ತರಿತ ಕೇಂದ್ರಸ್ಥಾನಗಳಾಗಿದ್ದವು. ಜನಪದ ಸಾಹಿತ್ಯ ಕಾರ್ಯಯೋಜನೆಯಲ್ಲಿ ಅವು ಮೈಸೂರು ವಿಶ್ವವಿದ್ಯಾಲಯವನ್ನು ಅನುಸರಿಸಿದವು. ಪ್ರತ್ಯೇಕ ವಿಶ್ವವಿದ್ಯಾಲಯಗಳಾದ ಮೇಲೂ ಅಲ್ಲಿನ ಕನ್ನಡ ಸಾಹಿತಿ-ಅಧ್ಯಾಪಕರು ಜನಪದ ಸಾಹಿತ್ಯದ ಮೇಲೆ ತೋರಿದ ಆಸಕ್ತಿ ಅನನ್ಯವಾಗಿದೆ. ಪ್ರತಿಯೊಬ್ಬರೂ ತಮ್ಮ ನೆಲೆಯಲ್ಲಿ ಗಣನೀಯವಾದ ಕೆಲಸ ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಕಡೆಯಿಂದ ಎಚ್.ಜೆ.ಲಕ್ಕಪ್ಪಗೌಡ, ತೀ.ನಂ. ಶಂಕರನಾರಾಯಣ, ಶ್ರೀಕಂಠ ಕೂಡಿಗೆ, ಬಸವರಾಜ ನೆಲ್ಲೀಸರ, ಎಂ. ಜಿ. ಈಶ್ವರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ಮುಂತಾದವರು ಹಾಗೂ ಮಂಗಳೂರು ವಿಶ್ವವಿದ್ಯಾಲಯ ವಲಯದಿಂದ ಗುಂಡ್ಮಿ ಚಂದ್ರಶೇಖರ ಐತಾಳ, ಅಮೃತ ಸೋಮೇಶ್ವರ, ಬಿ.ಎ.ವಿವೇಕ ರೈ, ಕೆ. ಚಿನ್ನಪ್ಪಗೌಡ, ಶಿವರಾಮಶೆಟ್ಟಿ, ಅಭಯಕುಮಾರ್, ಎಸ್.ಎ. ಕೃಷ್ಣಯ್ಯ, ಅರವಿಂದ ಮಾಲಗತ್ತಿ, ಪ್ರಭಾಕರ ಜೋಷಿ, ಪಾಲ್ತಾಡಿ ರಾಮಕೃಷ್ಣ ಆಚಾರ್, ರಾಘವ ನಂಬಿಯಾರ್ ಈ ಮಂತಾದವರು ಜನಪದ ಸಾಹಿತ್ಯವಲ್ಲದೆ ಯಕ್ಷಗಾನ ಸಾಹಿತ್ಯದಲ್ಲೂ ಪ್ರಬುದ್ಧ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಆರ್. ಸಿ. ಹಿರೇಮಠರು, ದೇ. ಜವರೇಗೌಡರು ತಮ್ಮ ವಿಶ್ವವಿದ್ಯಾಲಯದಲ್ಲಿ ಸೃಷ್ಟಿಸಿದ್ದ ಮೂರು ಹಂತದ ಜನಪದ ಸಾಹಿತ್ಯ- ಜಾನಪದ ಕ್ರಿಯಾಯೋಜನೆಯನ್ನು ಅನುಸರಿಸಿದರು. ಇವರ ನಾಯಕತ್ವದ ಮುಂದುವರಿಕೆಯಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಹುದೊಡ್ಡ ಮೊತ್ತದ ಜನಪದ ಸಾಹಿತ್ಯ ಹಾಗೂ ಜಾನಪದ ಅಧ್ಯಯನದ ಫಲಶ್ರುತಿಯಾಗಿ ಅನೇಕ "ಜಾನಪದ ಸಾಹಿತ್ಯದರ್ಶನ" ಸಂಪುಟಗಳು ಹೊರಬಂದವು. ಕರ್ನಾಟಕ ವಿಶ್ವವಿದ್ಯಾಲಯ ವಲಯದಲ್ಲಿ ಎಂ.ಎಸ್. ಸುಂಕಾಪುರ, ಎಂ ಟಿ. ಧೂಪದ, ಸೋಮಶೇಖರ ಇಮ್ರಾಪುರ, ಎಂ. ಎಸ್. ವೃಷಭೇಂದ್ರಸ್ವಾಮಿ, ಎಂ. ಎಂ. ಕಲಬುರ್ಗಿ, ದೇವೇಂದ್ರಕುಮಾರ ಹಕಾರಿ, ಎಂ. ಬಿ. ನೇಗಿನಹಾಳ, ಎಂ. ಬಿ. ಕೊಟ್ರಶೆಟ್ಟಿ, ಸಿ. ಸಿ. ಎ. ಪೈ, ಎಲ್. ಆರ್. ಹೆಗಡೆ, ಎನ್. ಆರ್. ನಾಯಕ, ಶ್ರೀಮತಿ ಶಾಂತಿನಾಯಕ, ಎಂ.ಎಂ.ಪಡಶೆಟ್ಟಿ, ಜ್ಯೋತಿ ಹೊಸೂರ, ನಿಂಗಣ್ಣ ಸಣ್ಣಕ್ಕಿ, ಶ್ರೀರಾಮ ಇಟ್ಟಣ್ಣನವರ, ವಿಲಿಯಂಮಾಡ್ತ, ಎಂ. ಎನ್. ವಾಲಿ, ಬಿ. ವಿ. ಮಲ್ಲಾಪುರ, ಎಚ್. ಎಂ. ಮಹೇಶ್ವರಯ್ಯ, ಕೆ. ಆರ್. ದುರ್ಗಾದಾಸ್, ಸೈಯದ್ ಜಮೀರುಲ್ಲಾ ಷರೀಫ್, ಶಾಲಿನಿ ರಘುನಾಥ, ಸಿ. ಕೆ. ನಾವಲಗಿ ಮುಂತಾದವರು ಕೆಲಸ ಮಾಡುತ್ತಾ ಬರುತ್ತಿದ್ದಾರೆ. ಇವರೆಲ್ಲರ ಹಿಂದೆ ಹಿರಿಯ ಶಕ್ತಿಯಾದ ಬಿ. ಎಸ್. ಗದ್ದಗೀಮಠರು ಜನಪದ ಸಾಹಿತ್ಯದಲ್ಲಿ ಮಾಡಿದ ಅಪಾರ ಸೇವೆ ಬೆಂಬಲವಾಗಿ ನಿಂತಿದೆ. ಬಹುದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಗುಲಬರ್ಗಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹಿರಿಯ - ಕಿರಿಯ ಅನೇಕ ಸಾಹಿತಿಗಳು ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನದಲ್ಲಿ ತಮ್ಮ ಪ್ರಾದೇಶಿಕ ವೈಶಿಷ್ಟ್ಯವನ್ನು ಸರಿಯಾಗಿಯೆ ದಾಖಲಿಸಿದ್ದಾರೆ. ಅವರುಗಳಲ್ಲಿ ಬಿ. ಬಿ. ಹೆಂಡಿ, ಎಂ. ಎಸ್. ಲಠ್ಠೆ, ಮ. ಗು. ಬಿರಾದಾರ, ವೀರಣ್ಣ ದಂಡೆ, ಪಿ.ಕೆ. ಖಂಡೋಬಾ, ಡಿ. ಬಿ. ನಾಯಕ ಮುಖ್ಯರು.

ಕನ್ನಡ ವಿಶ್ವವಿದ್ಯಾಲಯ ತನ್ನ ಕಡಿಮೆ ವಯಸ್ಸಿನಲ್ಲೆ ಗಣನೀಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದೆ. ಈ ನೆಲೆಯಲ್ಲಿ ಹಿ. ಚಿ. ಬೋರಲಿಂಗಯ್ಯ, ಎ. ವಿ. ನಾವಡ, ಗಾಯತ್ರಿ ನಾವಡ ದಾಖಲೆಯ ಕೆಲಸ ಮಾಡಿದ್ದಾರೆ. ಮಂಜುನಾಥ ಬೇವಿನಕಟ್ಟಿ, ಎಸ್. ಸಿ. ರಮೇಶ, ಮೊಗಳ್ಳಿ ಗಣೇಶ, ವೆಂಕಟೇಶ ಇಂದುವಾಡಿ, ವೀರೇಶ ಬಡಿಗೇರ ಇವರು ಗಮನ ಸೆಳೆಯುವ ಕೆಲಸ ಮಾಡಿದ್ದಾರೆ.. ಹೊಸಪೇಟೆಯಲ್ಲಿದ್ದು ಬಸವರಾಜ ಮಲಶೆಟ್ಟರು ಜನಪದ ಸಾಹಿತ್ಯ - ಬಯಲಾಟ ಕ್ಷೇತ್ರದಲ್ಲಿ ಅಪೂರ್ವವಾದ ಸಾಧನೆ ಮಾಡಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು ಬಹುದೊಡ್ಡ ಪ್ರೇರಣೆಯಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗವನ್ನು ಕಟ್ಟಿದವರು.

ರಾಜಧಾನಿ ವಿಶ್ವವಿದ್ಯಾಲಯವಾದ ಬೆಂಗಳೂರು ವಲಯದಲ್ಲಿ ಚಂದ್ರಶೇಖರ ಕಂಬಾರ, ಕಾಳೇಗೌಡ ನಾಗವಾರ, ಸಿದ್ಧಗಂಗಯ್ಯ ಕಂಬಾಳು, ಡಿ.ಲಿಂಗಯ್ಯ, ಜಿ.ಆರ್.ತಿಪ್ಪೇಸ್ವಾಮಿ, ರಂಗಾರೆಡ್ಡಿ ಕೋಡಿರಾಂಪುರ, ಕೆ. ಆರ್. ಸಂಧ್ಯಾರೆಡ್ಡಿ, ಧವಳಶ್ರೀ, ಸಿ.ವೀರಣ್ಣ, ಬಿಎಸ್.ಸ್ವಾಮಿ, ಎಸ್.ಪಿ. ಪದ್ಮಪ್ರಸಾದ್, ಟಿ.ಗೋವಿಂದರಾಜು, ರಾಜೇಗೌಡ ಹೊಸಹಳ್ಳಿ, ಎಂ.ಬೈರೇಗೌಡ, ಚಕ್ಕೆರೆ ಶಿವಶಂಕರ್,

ಬೈರಮಂಗಲ ರಾಮೇಗೌಡ, ಕೃಷ್ಣಮೂರ್ತಿ ಹನೂರು, ಟಿ.ಎಸ್.ಸತ್ಯನಾಥ್, ಅಂದನೂರು ಶೋಭ, ಕುರುವ ಬಸವರಾಜ ಅವರಂಥ ಅನೇಕ ಜನಪದ ಸಾಹಿತ್ಯ ಕ್ಷೇತ್ರದ ಸಾಧಕರಿದ್ದಾರೆ. ಈ ವಲಯದ ಮಹಾ ಪ್ರೇರಣೆಗಳೆಂದರೆ ಚಂದ್ರಶೇಖರ ಕಂಬಾರ ಮತ್ತು ಎಚ್.ಎಲ್.ನಾಗೇಗೌಡರು. ನಾಗೇಗೌಡರಲ್ಲಿ ಅಪಾರವಾದ ಜನಪದ ಸಾಹಿತ್ಯ ಸಂಗ್ರಹವಿದೆ.

ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರಚಾರ, ಪ್ರಸಾರ, ವಿವರಣೆ, ವಿಶ್ಲೇಷಣೆ, ಸಮರ್ಥನೆ ಮತ್ತು ತಮ್ಮನ್ನು ತಾವೇ ಜನಪದ ಸಾಹಿತ್ಯಕ್ಕೆ ಸಮರ್ಪಿಸಿಕೊಳ್ಳುವ ಚಟುವಟಿಕೆ ಎಲ್ಲಿಗೆ ತಲುಪಿತು ಎಂದರೆ ಜನಪದ ಸಾಹಿತ್ಯವನ್ನು ಶಿಷ್ಟಸಾಹಿತ್ಯ ಚಟುವಟಿಕೆಗೆ ಸರಿಸಮವಾಗಿಸುವ ಪರ್ಯಾಯ ಚಿಂತನೆ ಹುಟ್ಟಿಕೊಂಡಿತು. ಇನ್ನೊಂದು ರೀತಿಯಲ್ಲಿ ಈ ಚಟುವಟಿಕೆ ಶಿಷ್ಟಸಾಹಿತ್ಯಕ್ಕೆ ತೋರಿದ ಸೃಜನಾತ್ಮಕ ಪ್ರತಿಭಟನೆಯಂತೆಯೂ ಕಾಣುತ್ತದೆ. ಆರಂಭಕಾಲದಲ್ಲಿ ಶಿಷ್ಟಸಾಹಿತ್ಯಕ್ಕೆ ಸೌಷ್ಟವವನ್ನು ಭರ್ತಿ ಮಾಡಿಕೊಳ್ಳಲು ಹುಟ್ಟಿದ ಜನಪದ ಸಾಹಿತ್ಯ ಸಂಗ್ರಹಪ್ರೇಮ ಇಪ್ಪತ್ತನೆಯ ಶತಮಾನದ ಏಳನೆಯ ದಶಕದ ಹೊತ್ತಿಗೆ ಶಿಷ್ಟಸಾಹಿತ್ಯಕ್ಕೆ ಸಮಸಾಹಿತ್ಯವೆಂಬಂತೆ ಎದ್ದುನಿಂತಿತು. ಇದಕ್ಕೆ ಸಮರ್ಥನೆ ಎನ್ನುವಂತೆ 1966ರಲ್ಲಿ ತರೀಕೆರೆಯಲ್ಲಿ, 1969ರಲ್ಲಿ ಮಂಗಳೂರಿನಲ್ಲಿ ಹಾಗೂ 1971 ರಲ್ಲಿ ನಾಗಮಂಗಲದಲ್ಲಿ ನಡೆದ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನಗಳೆ ಸಾಕ್ಷಿ. ಮೊದಲ ಸಮ್ಮೇಳನದ ಜವಾಬ್ದಾರಿಯನ್ನು ಜನಪದ ಸಾಹಿತ್ಯ ಕ್ಷೇತ್ರದ ನವಕೋಗಿಲೆ ಎಂದು ಹೆಸರು ಪಡೆದಿದ್ದ ಕೆ.ಆರ್.ಲಿಂಗಪ್ಪನವರು ವಹಿಸಿದ್ದರು. ಉಳಿದೆರಡು ಸಮ್ಮೇಳನಗಳ ಜವಾಬ್ದಾರಿಯನ್ನು ಐ.ಎ.ಎಸ್. ಅಧಿಕಾರಿಯೂ ಜಾನಪದ ಲೋಕದ ಸೃಷ್ಟಿಕರ್ತರೂ ಆದ ಎಚ್.ಎಲ್.ನಾಗೇಗೌಡರು ನಿರ್ವಹಿಸಿದರು. ದೊಡ್ಡಪ್ರಮಾಣದ ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳನ್ನು ಅನುಸರಿಸಿ ಕರ್ನಾಟಕದ ಜಿಲ್ಲೆ ಜಿಲ್ಲೆಗಳಲ್ಲಿ ಅನೇಕ ಜನಪದ ಸಾಹಿತ್ಯ ಸಮ್ಮೇಳನಗಳು ನಡೆದವು.

ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳ ಹಿಂದೆ ನಾಡಿನ ಹೆಸರಾಂತ ಸಾಹಿತ್ಯ ವಿಮರ್ಶಕರು ನಿಂತು ತಮ್ಮ ತಮ್ಮ ನೆಲೆಯಲ್ಲಿ ಜನಪದ ಸಾಹಿತ್ಯದ ಮಹತ್ವವನ್ನು ಶೈಕ್ಷಣಿಕವಾಗಿ ಎತ್ತಿ ಹಿಡಿಯುವ ಪ್ರಯತ್ನ ನಡೆಸಿದ್ದರು. ತೀ. ನಂ. ಶ್ರೀಕಂಠಯ್ಯನವರಂಥ ಹಿರಿಯ ಕಾವ್ಯಮೀಮಾಂಸಕರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾವ್ಯಲಕ್ಷಣಕ್ಕೆ ಜನಪದ ಸಾಹಿತ್ಯದಿಂದ ಉದಾಹರಣೆಗಳನ್ನು ಎತ್ತಿಕೊಂಡು ಅದರ ಘನತೆಯನ್ನು ಹೆಚ್ಚಿಸಿದರು. ಈ ನಿಟ್ಟಿನಲ್ಲಿ ಹಿರಿಯ ಕವಿ ಕಾವ್ಯಮೀಮಾಂಸಕರಾದ ಜಿ.ಎಸ್. ಶಿವರುದ್ರಪ್ಪ ಮತ್ತು ಸಿ. ಪಿ. ಕೃಷ್ಣಕುಮಾರ್ ಅವರ ಕೊಡುಗೆ ಸ್ಮರಣೀಯವಾದುದು. ಸಿ.ಪಿ.ಕೆ. ಯವರು ಜನಪದ ಸಾಹಿತ್ಯದ ಸಾಮರ್ಥ್ಯವನ್ನು ಯಾಹೊತ್ತೂ ಶಿಷ್ಟಸಾಹಿತ್ಯಕ್ಕೆ ಕಡಿಮೆ ಇಲ್ಲವೆಂಬಂತೆ ಹಟಹಿಡಿದು ಬರೆದಿದ್ದಾರೆ. ಜನಪದ ಸಾಹಿತ್ಯವನ್ನೂ ಶಿಷ್ಟಸಾಹಿತ್ಯದ ಕ್ರಮದಂತೆ ಕಾವ್ಯಮೀಮಾಂಸಾ ಪರಿಧಿಗೆ ತರಬಹುದು ಎಂಬುದನ್ನು ಶ್ರಮವಹಿಸಿ ವೀರಣ್ಣ ದಂಡೆಯವರು ಸಾಧಿಸಿ ತೋರಿಸಿದ್ದಾರೆ.

ಜನಪದ ಸಾಹಿತ್ಯದ ಮೌಲ್ಯಮಾಪನ ದೃಷ್ಟಿಯಿಂದ ಗಿರಡ್ಡಿ ಗೋವಿಂದರಾಜು ಅವರ 'ಜನಪದ ಗೀತೆ' ಕೃತಿ ಜನಪದ ಸಾಹಿತ್ಯ ಪ್ರೇಮಿಗಳಲ್ಲಿ ಸಾಕಷ್ಟು ಪ್ರತಿಕ್ರಿಯೆಯನ್ನು ಸೃಷ್ಟಿಮಾಡಿತು. ಈ ಬರಹಕ್ಕೆ ಸಿಪಿಕೆಯವರು ತೀವ್ರವಾಗಿ ಪ್ರತಿನುಡಿದಿದ್ದಾರೆ. ಜನಪದ ಸಾಹಿತ್ಯದ ಸಾಹಿತ್ಯಕ ಮೌಲ್ಯಮಾಪನದ ದೃಷ್ಟಿಯಿಂದ ಚಂದ್ರಶೇಖರ ಕಂಬಾರ, ರಾಗೌ ಮತ್ತು ಹಿ. ಶಿ. ರಾಮಚಂದ್ರೇಗೌಡ ಅವರ ನಿಲುವು 'ಪ್ರಕಾರನ್ಯಾಯ'ದ ನೆಲೆಯಿಂದ ವ್ಯಕ್ತವಾಗಿದೆ. ಜನಪದ ಸಾಹಿತ್ಯ ಅಖಂಡ ಜಾನಪದದ 'ಉಪ ಉತ್ಪನ್ನ' ಎಂದು ಕಂಬಾರರು ಹೇಳಿದರೆ; ಜನಪದ ಸಾಹಿತ್ಯದ ಅನನ್ಯತೆಯೆ ಬೇರೆ ಎಂದು ರಾಗೌ ಪ್ರತಿಪಾದಿಸಿರುತ್ತಾರೆ. ಈ ವಿಷಯ ಕುರಿತು ಹಿ. ಶಿ. ರಾಮಚಂದ್ರೇಗೌಡ ಅವರ 'ಪ್ರಕಾರನ್ಯಾಯ' ಮತ್ತು 'ಪ್ರಕಾರ ಅಸ್ತಿತ್ವ' ದೃಷ್ಟಿಯಿಂದ ಜನಪದ ಸಾಹಿತ್ಯವನ್ನು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ಮತ್ತು ಅಸ್ತಿತ್ವ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಜನಪದ ಸಾಹಿತ್ಯವನ್ನು ಬೇರೆ ಬೇರೆ ಮಗ್ಗಲುಗಳಲ್ಲಿ ವಿವರಿಸುವ ಮತ್ತು ವಿಮರ್ಶಿಸುವ ಪ್ರಯತ್ನಗಳನ್ನು ಕರ್ನಾಟಕದ ಅನೇಕ ಸಾಹಿತ್ಯ ಚಿಂತಕರು ಮಾಡಿದ್ದಾರೆ.

**ಪರ್ಯಾಯದ ಬೆಲೆ : ಗೊತ್ತಿಲ್ಲದ ನೆಲೆ**

ಈಗ ಜಗತ್ತಿನಾದ್ಯಂತ ಪರ್ಯಾಯ ಜ್ಞಾನದ ಹುಡುಕಾಟ ತುಂಬ ತುರ್ತಿನ ಕೆಲಸವೆಂಬಂತೆ ನಡೆಯುತ್ತಿದೆ. ಅಭಿವೃದ್ಧಿಶೀಲ ದೇಶಗಳು ಇರುವ ಸೌಕರ್ಯಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವ ಕಾರಣಕ್ಕೆ ಪರ್ಯಾಯ ಜ್ಞಾನದ ಹುಡುಕಾಟದಲ್ಲಿ ತೊಡಗಿವೆ.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು 'ಪ್ರಭುರಾಷ್ಟ್ರಗಳ ಪ್ರಭುತ್ವ ವಿಜ್ಞಾನ'ಕ್ಕೆ ಪರ್ಯಾಯವಾಗಿ ತಮ್ಮ ತಮ್ಮ ದೇಶದ 'ಪಾರಂಪರಿಕ ಜ್ಞಾನ ಮಾದರಿ'ಗಳನ್ನು ಸಮಕಾಲೀನಗೊಳಿಸಿಕೊಳ್ಳುವ ಹವಣಿಕೆಯಲ್ಲಿವೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ದೇಸಿಸಾಹಿತ್ಯವೆಂದೂ, ಜಾನಪದವನ್ನು ದೇಶಿಜ್ಞಾನವೆಂದೂ ಹೆಸರಿಸಿ ಅವುಗಳ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಬಹಳ ಕಾಲದಿಂದಲೂ ಗುರುತಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನ ಜಾನಪದ ಚಿಂತಕರು ಜಾನಪದವನ್ನು ಸವಕಾಲೀನ ಜ್ಞಾನ - ವಿಜ್ಞಾನವನ್ನಾಗಿ ನಿರ್ವಚಿಸಿ ಮಂಡಿಸುತ್ತಿದ್ದಾರೆ. ಉದಾಹರಣೆಗಾಗಿ ಹಿ. ಶಿ. ರಾಮಚಂದ್ರೇಗೌಡರ ಕೆಳಗಿನ ನುಡಿಗಳನ್ನು ಗಮನಿಸಿ;

'ಪುರದಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ.'

**–ರಾಘವಾಂಕ**

"ವಿಜ್ಞಾನವೆಂಬ ಯಜಮಾನನಿಗೆ ಜನತೆಯ ಜ್ಞಾನ ಸೊರಗಿ ಸೋತುಹೋಯಿತು. ಇಲ್ಲಿಂದಲೆ ಬಡವರ ಸೋಲು ಆರಂಭವಾಯಿತು. ಎಲ್ಲ ಸ್ಥಳೀಯ ಕುಶಲಕರ್ಮಿಗಳು ಕೈಚೆಲ್ಲಿದರು. ಆ ಮೂಲಕ ಬಹುಜನರ ಸೃಜನಶೀಲತೆ ತಟಸ್ಥವಾಯಿತು. ಅನೇಕ ಶತಮಾನಗಳ ಜ್ಞಾನ ಅವನತಿಯ ಹಾದಿಹಿಡಿಯಿತು. ಇದೆ ಜಾನಪದ ; ಜನರ ಜ್ಞಾನ-ವಿಜ್ಞಾನ. ಒಂದು ದೇಶ ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಬಹುಜನರು ಕ್ರಿಯಾಶೀಲರಾಗಬೇಕಾದರೆ, ಯುಗಶೀಲವಾದ ಜಾನಪದ ಮರುಹುಟ್ಟು ಪಡೆಯಬೇಕು ಮತ್ತು ಸಮಕಾಲೀನವಾಗಬೇಕು. ಧುತ್ತನೆ ಎದ್ದು ನಿಂತು ಬಡವರ ಹಾಗೂ ಬಹುಜನರ ಮನಸ್ಸು ಮತ್ತು ಶ್ರಮವನ್ನು ನಿಷ್ಕ್ರಿಯಗೊಳಿಸಿದ ಆಧುನಿಕತೆ ನಿಶ್ಶಸ್ತ್ರೀಕರಣಗೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮನ್ನು ಅಮೆರಿಕ ಕಾಡಿದಂತೆ, ಅಮೆರಿಕವನ್ನು ಬಿನ್ ಲಾಡೆನ್ ಕಾಡಿದಂತೆ ನವ ಆಧುನಿಕತೆ ನಮ್ಮನ್ನೆಲ್ಲ ನಿರಂತರ ಭಯದಲ್ಲಿ ಇಟ್ಟಿರುತ್ತದೆ" (ಪುರದ ಪುಣ್ಯ 61.1904).

ನಮ್ಮ ಜನಪದ ಸಾಹಿತ್ಯದ ಸಂಗ್ರಹ, ಅಧ್ಯಯನ ತಲುಪಬೇಕಾದ ಗುರಿ ಇದು. ಇಲ್ಲದಿದ್ದಲ್ಲಿ ಎಂದಿನಂತೆ ಜನಪದ ಸಾಹಿತ್ಯ ನಶಿಸಿಹೋಗುತ್ತಿದೆ, ನಾವು ಕಳೆದು ಹೋಗುತ್ತಿದ್ದೇವೆ ಎಂದು ಪರಿತಪಿಸುತ್ತಲೇ ಇರಬೇಕಾಗುತ್ತದೆ. ಈ ಪರ್ಯಾಯದ ಪ್ರಶ್ನೆ ಸರಳವಾದುದಲ್ಲ. ಅದು ನಮ್ಮ ಜೀವನ ಭದ್ರತೆಯ ಹುಡುಕಾಟ. ಜಾಗತೀಕರಣವೆಂಬ ವಸ್ತುರಾಕ್ಷಸನಿಂದ ಇಡೀ ಭಾರತೀಯ ಸಂಸ್ಕೃತಿ ವಸ್ತುಸಂಸ್ಕೃತಿಯಾಗಿ ಪರಿವರ್ತಿತವಾಗುತ್ತಿದೆ. ತಮ್ಮಲ್ಲೆ ವಸ್ತುವನ್ನು ಸೃಷ್ಟಿ ಮಾಡುವ ಜೀವನ ಸಂಸ್ಕೃತಿಯ ಆಶಯಗಳಾದ ಭೂಮಿ, ನೀರು, ಗಾಳಿ, ಆಹಾರ ಕಲುಷಿತಗೊಳ್ಳುತ್ತಿವೆ. ಜೀವನ ಸಂಸ್ಕೃತಿಯ ಅಭಿವ್ಯಕ್ತಿಗಳಾದ ಹೆಣ್ಣು, ಕಲಾವಿದರು, ಮಕ್ಕಳು ಮತ್ತು ಸಮುದಾಯಗಳು ಶಕ್ತಿಗುಂದುತ್ತಿವೆ. ಜೀವನ ಸಮತೋಲನಕ್ಕೆ ಒಡನಾಡಬೇಕಾದ ಅಂಚಿಗೆ ಸರಿದವರು, ರಾಜಕೀಯವನ್ನು ಎಟುಕಿಸಿಕೊಳ್ಳಲಾಗದ ಕಿರುಸಮುದಾಯಗಳು, ತಳ - ಕೆಳವರ್ಗದವರು ಸಾಂಸ್ಕೃತಿಕ ಅನನ್ಯತೆಯನ್ನು ಪಡೆಯದೆ ಹೋಗುತ್ತಾರೆ. ಅವರಿಗೊಂದು ಇತಿಹಾಸ ಮತ್ತೂ ದಕ್ಕದೆ ಹೋಗುತ್ತದೆ. ಇದರ ಅರ್ಥ ಭಾರತವನ್ನು ಇರುವ ಹಾಗೆಯೇ ಉಳಿಸಿಕೊಳ್ಳುವುದಲ್ಲ. ಜಾನಪದ ಜೀವನ ಚಿಂತನೆ ಹೇಳುವ; 'ಎಲ್ಲರಿಗೂ ಬದುಕು ಮತ್ತು ಎಲ್ಲರಿಗೂ ಅವಕಾಶ' ಎಂಬುದನ್ನು ಸಮಕಾಲೀನವಾಗಿ ಸಾಧ್ಯಮಾಡಿಕೊಡುವುದು. ಅರ್ಥಾತ್, ಜ್ಞಾನ ಮತ್ತು ಅವಕಾಶ ಎಲ್ಲರ ಸೊತ್ತು ಮತ್ತು ಬಳಕೆಯಾಗುವಂತೆ ನೊಡಿಕೊಳ್ಳುವುದು. ಜಾನಪದ ಅಧ್ಯಯನ ಅಂಥ ಹೊಸದಾರಿಯಲ್ಲಿ ನಡೆಯುತ್ತಿರುವುದನ್ನು ನಾವು ಮನ್ನಿಸಬೇಕು. ಜನಪದ ಸಾಹಿತ್ಯವನ್ನು ಕಿರಿದಾಗಿ ನಿರ್ವಚಿಸಿ ಅದರ ಸ್ಥಾನಮಾನವನ್ನು ಶಿಷ್ಟ ಸಾಹಿತ್ಯದ ಕೆಳಗೆ ಇಟ್ಟು ನೋಡುವ ಮನೋಧರ್ಮ ಹುಟ್ಟಿರುವುದೇ ವರ್ಗಶಾಹಿ ಮತ್ತು ವಸಾಹತುಶಾಹಿ ಜ್ಞಾನ ಮಾದರಿಗಳು ನಮ್ಮ ಮೇಲೆ ಸವಾರಿ ನಡೆಸುತ್ತಿರುವುದರಿಂದಾಗಿದೆ. ಆ ಕಾರಣದ ಮೇಲೆ ಜನಪದ ಸಂಸ್ಕೃತಿ ಮತ್ತು ಜನಪದ ಸಾಹಿತ್ಯದ ಮೌಲ್ಯಮಾಪನ ಸಮಸಂಸ್ಕೃತಿ ಸ್ಥಾನಮಾನದ ಮೇಲೆ ನಡೆಯಬೇಕಿದೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಎರಡು ನೆಲೆಯಲ್ಲಿ ನಡೆಯಿತು. ರಾಷ್ಟ್ರೀಯ ಪುನರುತ್ಥಾನದ ಕಾರಣದಿಂದ ಮತ್ತು ರಾಷ್ಟ್ರದ ಮೂಲ ಸಂಪತ್ತಾದ ಎಲ್ಲವನ್ನೂ ಪುನಶ್ಚೇತನಗೊಳಿಸುವ ಸಂದರ್ಭದಲ್ಲಿ, ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾದ ಜನಪದ ಸಾಹಿತ್ಯ ಮತ್ತು

ಸಂಸ್ಕೃತಿಯನ್ನು ಸಂಗ್ರಹಿಸುವ ಪ್ರಯತ್ನ ಮೊದಲನೆಯದು. ಈ ಪ್ರವೃತ್ತಿ ಸಂಪೂರ್ಣವಾಗಿಯೂ ಭಾವನಾತ್ಮಕವಾದುದು. ರಾಷ್ಟ್ರೀಯ ಪುನರುತ್ಥಾನದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಿದ ನವೋದಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಸಂಗ್ರಹಿಸಿದರು. ಆದಕಾರಣ 'ಸಾಹಿತ್ಯವೆಂಬ ಸಾಮಗ್ರಿಗೆ' ಅವರು ಒತ್ತುಕೊಟ್ಟರು. ಅದರ ಉತ್ಪಾದಕರು, ಅವರ ಅಸ್ತಿತ್ವ, ನೆಲೆ-ಬೆಲೆ ಮತ್ತು ಜನಪದ ಸಾಹಿತ್ಯದ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದ ಕಡೆಗೆ ಗಮನ ಹರಿಸಲಿಲ್ಲ. ರಾಷ್ಟ್ರದ ಆರಾಧನೆಯಂತೆ ಜನಪದ ಸಾಹಿತ್ಯವೂ ಒಂದು ರೀತಿಯ ಆರಾಧನೆಯ ಸಾಮಗ್ರಿಯೆ ಆಯಿತು. ಆ ಸಾಹಿತ್ಯವನ್ನು ಸಂಗ್ರಹಿಸುವ, ಪ್ರೇಮಿಸುವ ಮತ್ತು ಕೊಂಡಾಡುವ ಪ್ರವೃತ್ತಿ ತುಂಬು ಹೊಳೆಯಂತೆ ಹರಿಯಿತು. ಜನಪದ ಸಾಹಿತ್ಯವೂ ದೇಶವನ್ನು ಕಟ್ಟುವ ಒಂದು ಉಪಕರಣವಾಗಿ ಬಳಕೆಯಾಯಿತು. ಅಷ್ಟೇ ಪ್ರಮಾಣದಲ್ಲಿ ಸಾಹಿತ್ಯವೂ ಸಂಗ್ರಹವಾಯಿತು. ಜನಪದ ಸಾಹಿತ್ಯ ಸಂಗ್ರಹ ಜಂಗಮರು ತಾವಿರುವ ಕಡೆಯಲ್ಲಿ ಮಾತ್ರವಲ್ಲದೆ, ಜನಪದ ಸಾಹಿತ್ಯ ಸಂಗ್ರಹಯಾತ್ರೆಯನ್ನು ಕೈಕೊಂಡರು. ಈ ಸಂಗ್ರಹಯಾತ್ರೆ, ಅದನ್ನು ಕುರಿತ ಪ್ರಚಾರವೂ ಪ್ರಶಂಸೆಯೂ ಆಗಿತ್ತು. ಅದು ಅಗತ್ಯ ಭೂಮಿಕೆಯೂ ಆಯಿತು.

ಯಾವಾಗ ಜಾನಪದ ಎಂಬುದು ಅಧ್ಯಯನದ ವಿಷಯವೂ ಆಯಿತೊ ಆಗ ಅದಕ್ಕೊಂದು ಶಾಸ್ತ್ರೀಯ ಶಿಸ್ತು ಸೇರಿಕೊಂಡಿತು. ಅಲ್ಲಿಂದ ಜನಪದ ಸಾಹಿತ್ಯ ಸಂಗ್ರಹದ ಭರಾಟೆ ಕಡಿಮೆಯಾಯಿತು. ಯಾವಾಗ ಇದು ವೈಜ್ಞಾನಿಕವೆಂಬ ಹೆಸರಿನ ಪ್ರಜ್ಞಾಪೂರ್ವಕ ಚಟುವಟಿಕೆ ಆಯಿತೊ ಅಲ್ಲಿಂದ ಪ್ರೇಮದ ವಿವಾಹ ಕೌಟುಂಬಿಕ ಜವಾಬ್ದಾರಿ ಆದಂತಾಯಿತು. ಒಂದು ರೀತಿಯಲ್ಲಿ ಇದು ಜನಪದ ಸಾಹಿತ್ಯ ಸಂಗ್ರಹಕ್ಕೆ ತಗುಲಿದ ಪೆಟ್ಟು ಎನಿಸಿದರೂ ಮತ್ತೊಂದು ಬಗೆಯಲ್ಲಿ ಆ ಸಾಹಿತ್ಯದ ಅಂತರಂಗ ಪ್ರಕಾಶಿಸಲು ಅನುಕೂಲವಾಯಿತು.

ಅಭಿಮಾನದ ದೃಷ್ಟಿಯಿಂದ ಸಂಗ್ರಹಿಸಲಿ ಅಥವಾ ಅಧ್ಯಯನ ದೃಷ್ಟಿಯಿಂದ ಸಂಗ್ರಹಿಸಲಿ ಈ ಸಂಗ್ರಹ ಕಾರ್ಯ ಮಾತ್ರ ಸುಲಭದ್ದಲ್ಲ. ಮೂಲತ : ಅದು ಸಂಗ್ರಾಹಕನ ಅನುಭವ, ಬದ್ಧತೆ, ಶ್ರಮ ಮತ್ತು ಆರ್ಥಿಕ ಅನುಕೂಲತೆಯನ್ನು ಅಪೇಕ್ಷಿಸುತ್ತದೆ. ಆರಂಭಿಕ ಕಾಲದಲ್ಲಿ ಸಂಗ್ರಾಹಕರಲ್ಲಿ ಅಥಿ೯ಕ ಬಡತನವಿದ್ದರೂ, ಅವರ ಸಾಂಸ್ಕೃತಿಕ ಸ್ವಾಭಿಮಾನವೆಂಬುದು ಕಷ್ಟನಷ್ಟಗಳ ಪರಿವೆಯನ್ನು ಮರೆತು ಜನಪದ ಸಾಹಿತ್ಯವನ್ನು ಹಾಡಿ, ಸಂಗ್ರಹಿಸಿ ಜನತೆಯ ಮುಂದೆ ಮಂಡಿಸಿತು. ಇದೊಂದು ಅಧ್ಯಯನದ ವಿಷಯವಾದ ತಕ್ಷಣದಿಂದ ಅದಕ್ಕೊಂದು ಉದ್ಯಮದ ಸ್ವರೂಪ ಉಂಟಾಯಿತು. ಲಾಭ-ನಷ್ಟಗಳ ಪರಿವೆ ಸಂಗ್ರಾಹಕನನ್ನು ಕಾಡಹತ್ತಿತು. ಈ ಹೊತ್ತಿಗೆ ಜನಪದ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯದಂತೆ ಪ್ರಕಟಿಸಿ ಬೀದಿಬದಿಯಲ್ಲಿ ಮಾರಿ ಕಾಸು ಮಾಡುವ ಪರಿಸ್ಥಿತಿ ನಿಂತುಹೋಯಿತು. ವ್ಯಾಪಾರಿಗಳು ಈ ಸಾಹಿತ್ಯವನ್ನು ಪ್ರಕಟಿಸುವುದನ್ನು ನಿಲ್ಲಿಸಿದರು, ಪ್ರಕಾಶಕರೆಂಬುವವರು ಹುಟ್ಟಿಕೊಂಡರು. ಅಕೆಡೆಮಿಷಿಯನ್ ಮತ್ತು ಪ್ರಕಾಶಕರೆಂಬ ಉದ್ಯಮ ಆಧಾರಿತ ದಣಿಗಳಿಂದಾಗಿ ಹೊಸ ಸಂಗ್ರಹಕಾರರು ಮುಂದೆ ಬರುವುದಾಗಲಿಲ್ಲ. ಜನಪದಸಾಹಿತ್ಯ ಸಂಗ್ರಹಕಾರ್ಯ ಬಹಳ ಶಿಸ್ತಿನ ವಿಷಯವಾಯಿತು. ಸಂಗ್ರಹಕಾರ್ಯಕ್ಕೂ ಹೆಚ್ಚು ಓದು ಮತ್ತು ವಿದ್ವತ್ತು ಬೇಕೆನಿಸಿತು. ಸಹಜವಾಗಿ ಹವ್ಯಾಸಿ, ಭಾಷಾಪ್ರೇಮಿ ಮತ್ತು ಅಲೆಮಾರಿ ಸಂಗ್ರಹಕಾರರು ಹಿಂದೆ ಸರಿದರು. ಜನಪದ ಸಾಹಿತ್ಯವನ್ನು, ಸಂಗ್ರಹಿಸುವುದಕ್ಕಿಂತ ಅದರ ಸತ್ವ ಮತ್ತು ಸಾರ್ಥಕತೆಯ ಪ್ರಶ್ನೆ ಮುಂದೆ ಬಂದು ವಿದ್ವಾಂಸರು ಮಾತ್ರವೇ ಈ ಕೆಲಸವನ್ನು ಮಾಡಬೇಕು ಎಂಬ ಮನೋಧರ್ಮ ಉಂಟಾಯಿತು. ಜನಪದ ಸಾಹಿತ್ಯ ಸಂಗ್ರಹ ಹಿಂದೆ ಸರಿದುದಕ್ಕೆ ಅದು ಒಂದು ಅಧ್ಯಯನ ಶಿಸ್ತಿಗೆ ಒಳಪಟ್ಟುದಷ್ಟೆ ಕಾರಣವಲ್ಲ. ಆಧುನಿಕವೆಂಬ ವಸ್ತುಪ್ರಧಾನ ಚಿಂತನೆ ಮತ್ತು ಬಳಕೆಯ ಜೀವನ ವಿಧಾನ ಪಾರಂಪರಿಕ ಮತ್ತು ಸ್ಥಳೀಯವೆಂಬ ಎಲ್ಲ ಸಾಂಸ್ಕೃತಿಕ ಉತ್ಪನ್ನಗಳನ್ನು ಜನಬಳಕೆಯಿಂದ ದೂರಮಾಡಲು ತೊಡಗಿದ್ದು ಮುಖ್ಯಕಾರಣವಾಗಿದೆ. ಸೀಮಿತ ವರ್ಗದ ವಿಶಿಷ್ಟ ಚಟುವಟಿಕೆಯಾಗಿದ್ದ ಬರಹದ ಸಾಹಿತ್ಯ ಆಧುನಿಕತೆಯ ಜೊತೆಗೆ ಸ್ಪರ್ಧಿಸಿ ಮತ್ತು ಹೊಂದಿಕೊಂಡು ಮರುಹುಟ್ಟು ಪಡೆದ ಕಾರಣದಿಂದ ಅದು ವರ್ಗಾತೀತವಾದ ಸಾಹಿತ್ಯಕ ಚಟುವಟಿಕೆಯಾಯಿತು. ಎಲ್ಲಾ ಜಾತಿ, ಪಂಗಡದ ವ್ಯಕ್ತಿಗಳೂ ಈ ಸಾಹಿತ್ಯದೊಂದಿಗೆ ಸ್ಪಂದಿಸುವುದು ಸಾಧ್ಯವಾಯಿತು. ಇದರಿಂದ ಸಾಹಿತ್ಯವೆಂದರೆ ಬರಹಗಾರರು ಬರೆದದ್ದು ಎಂಬ ಪ್ರತೀತಿ ದೃಢವಾಯಿತು. ಹೆಚ್ಚು ವ್ಯಕ್ತಿಗಳು ತಮ್ಮ ವ್ಯಕ್ತಿನಿಷ್ಠೆ ಮತ್ತು ವ್ಯಕ್ತಿವೃತ್ತಿ ಸಾಮರ್ಥ್ಯದೊಡನೆ ಈ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಜೊತೆ ಜೊತೆಯಲ್ಲೆ ಓದು ಮಾತ್ರ ಅರ್ಹತೆ, 'ಓದಿಲ್ಲದ್ದು' ಅನರ್ಹತೆ ಎಂಬ ಜೀವನ ತತ್ವ ಬಳಕೆಗೆ ಬಂತು. ಸಹಜವಾಗಿಯೆ ಅವಿದ್ಯಾವಂತರ ಜನಪದ ಸಾಹಿತ್ಯ ಸತ್ವದಲ್ಲಿ ಸಂಪುಷ್ಟವಾಗಿದ್ದರೂ ಗುರುತುಪಡೆಯುವಲ್ಲಿ ಹಿಂದೆ ಬಿದ್ದಕಾರಣ ವಿಸ್ಮೃತಿಗೆ ತುತ್ತಾಯಿತು. ಶಿಷ್ಟ ಸಾಹಿತ್ಯದ ನಿರಂತರ ಪ್ರಯೋಗಶೀಲತೆ ಜನಪದಸಾಹಿತ್ಯದ ನಿಧಾನ ಹಾಗೂ ನಿಶ್ಚಿತಚಲನೆಯನ್ನು ಹಿಂದೆ ಹಾಕಿತು. ಇದು ನಿಶ್ಚಿತ ಅಭಿರುಚಿಗೆ ನಿರಂತರ ಅಭಿರುಚಿ ಒಡ್ಡಿದ

ಸವಾಲುಕೂಡ ಹೌದು. ಜನಪದ ಸಾಹಿತ್ಯ ಶಿಷ್ಟಸಾಹಿತ್ಯದಂತೆ 'ಅಧಿಕೃತ ಸಾಹಿತ್ಯ'ವಾಗಲಿಲ್ಲ ಎಂಬ ಸತ್ಯಸ್ಯಸತ್ಯವೂ ಜನಪದ ಸಾಹಿತ್ಯ ಇನ್ನಿತರ ಆಧುನಿಕ ಸಾಹಿತ್ಯ ಪದ್ಧತಿಗಳೊಡನೆ ಸ್ಪರ್ಧಿಸದೆ ಹಿಂದೆ ಬೀಳಲು ಕಾರಣವಾಗಿದೆ. ಉದ್ಯಮ, ಉದ್ಯೋಗ, ವೃತ್ತಿಯಿಲ್ಲದ ಈ ಸಾಹಿತ್ಯ ಆಧುನಿಕ ತತ್ತ್ವವಾದ 'ಸ್ಪರ್ಧೆ ಮತ್ತು ಗೆಲ್ಲು' ಸಮರದಲ್ಲಿ ಸೋಲೊಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ಆದರೆ ಜನಪದ ಸಾಹಿತ್ಯದ ಸತ್ವ ಮತ್ತು ಸಾತತ್ಯ ಎಲ್ಲಿದೆ ಎಂಬುದನ್ನು ಗುರುತಿಸಿಕೊಳ್ಳಲಾಗದ ಹೆಳವತನ ನಮ್ಮನ್ನು ಕಾಡಬೇಕಿತ್ತೆ? ನವೋದಯ ಸಾಹಿತಿಗಳಾದ ಬಿ. ಎಂ. ಶ್ರೀ, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಮಧುರಚೆನ್ನ- ಈ ಮೊದಲಾದ ಹಿರಿಯರು ಜನಪದ ಸಾಹಿತ್ಯದಿಂದ ಒಂದು ಸತ್ವವನ್ನು ಕಂಡುಕೊಂಡು ಅದನ್ನು ಹೆಕ್ಕಿ ತೆಗೆದು, ತಮ್ಮ ಸಾಹಿತ್ಯವನ್ನು ಮೈದುಂಬಿಸಿಕೊಂಡರು. ಅವರಿಂದ ಮುಂದೆ ನಮ್ಮ ಸಾಹಿತ್ಯ ಚಿಂತಕರಾಗಲೀ, ಸಂಸ್ಕೃತಿ ಚಿಂತಕರಾಗಲಿ ಜನಪದ ಸಾಹಿತ್ಯದ ಹೊಸ ಸಾಧ್ಯತೆಗಳನ್ನು ಹುಡುಕಲೇ ಇಲ್ಲ ಎಂಬುದು ದುರ್ದೈವದ ಸಂಗತಿ. ಅಲ್ಲಲ್ಲಿ ಕೆಲವು ಸಾಹಿತಿಗಳು ಜನಪದ ಸಾಹಿತ್ಯದ ಸೆಲೆಗಳನ್ನು ಹಿಡಿದು ಬರೆಯುತ್ತಿದ್ದಾರೆ ನಿಜ. ಆದರೆ ಅದು ಅವರ ಬರಹದ ಪ್ರವೃತ್ತಿಗಳಲ್ಲಿ ಒಂದಾಗಿದೆಯೆ ಹೊರತು ಅವರ ಸೃಜನಶೀಲತೆಯ ಪ್ರಕೃತಿಯಾಗಿಲ್ಲ. ಈ ಕಾರಣದಿಂದ ಆಧುನಿಕ ಸಂದರ್ಭದಲ್ಲಿ ಜನಪದ ಜೀವನ ಮತ್ತು ಸಂಸ್ಕೃತಿ ಹೊರಗಿನ ಸರಕು, ಕನಸು, ಅಪೇಕ್ಷೆ, ತುಡಿತ, ಆಕರ್ಷಣೆ ಆಗಿದೆಯೆ ಹೊರತು ಜೀವನ ಬಂಧ, ಸಂಬಂಧ ಅಥವಾ ಬದುಕೇ ಆಗಬೇಕಿತ್ತಲ್ಲ, ಅದು ಆಗಲಿಲ್ಲ; ಹಾಗೆ ಆಗುವ ಸಾಧ್ಯತೆಯೂ ಹತ್ತಿರದಲ್ಲಿ ಇಲ್ಲ.

ಯಾವಾಗ ಆಧುನಿಕ ವ್ಯಕ್ತಿಗಳು ವ್ಯಕ್ತಿತ್ವ ಪ್ರತ್ಯೇಕತೆಯನ್ನು ಅನುಭವಿಸುವ ಅಪೇಕ್ಷೆಯನ್ನು ಅನಿವಾರ್ಯ ಅಂತ ಮಾಡಿಕೊಂಡರೊ ಅಂದಿನಿಂದ ಜನಪದ ಸಾಹಿತ್ಯ ಮತ್ತು ಜನಪದ ಸಂಸ್ಕೃತಿಯನ್ನು ಅನುಭವಿಸುವ ಮತ್ತು ಅನುಸರಿಸುವ ಅವಕಾಶಗಳನ್ನು ಕಳಕೊಂಡರು. ಪ್ರಭುಕೇಂದ್ರಿತ ಮತ್ತು ಧರ್ಮಕೇಂದ್ರಿತ ರಾಜಸತ್ತೆ ಇದ್ದಾಗ ಜನಪದಜೀವನ ಸತ್ವವನ್ನು ಆಗಾಗ ಪಡೆಯುತ್ತ ತಮ್ಮನ್ನು ಹಿಗ್ಗಲಿಸಿಕೊಳ್ಳುತ್ತಿದ್ದವು. ಪ್ರಭುವ್ಯವಸ್ಥೆಯ ಅಧೀನದಲ್ಲಿದ್ದೂ ಮಹಾಕವಿ ಪಂಪ ತನ್ನ ಮೂಲ ನೆಲೆಯಾದ ಬನವಾಸಿ ದೇಶವನ್ನು ನೆನೆದು ತನ್ನನ್ನು ಹಿಗ್ಗಲಿಸಿಕೊಂಡನು. ಪ್ರಭು ಕೇಂದ್ರಿತ ಹಿರಿಯ ಪ್ರಜೆಗಳು ತಮ್ಮ ಬಾಲ್ಯಜೀವನದಲ್ಲಿ ಜನಪದ ಬದುಕನ್ನು ಅನುಭವಿಸಿದರೆ ಮತ್ತೆ ಅದಕ್ಕೆ ಹಿಂದಿರುಗುತ್ತಿದ್ದುದು ವಾನಪ್ರಸ್ಥ ಸಮಯದಲ್ಲಿಯೆ. ಆದರೆ ನಾವು ಪ್ರಜಾಪ್ರಭುತ್ವವೆಂಬ ಜನಪದ ಜೀವನ ತತ್ತ್ವದೊಳಗೆ ಇದ್ದರೂ ಬದುಕುತ್ತಿರುವುದು ಮಾತ್ರ 'ಆಧುನಿಕ ವಾನಪ್ರಸ್ಥ' ದಲ್ಲಿ. ಸತ್ತಲ್ಲದೆ ಬದುಕಲಾರೆವು ಎಂಬ ಈ ಸ್ಥಿತಿಗೆ ನಮ್ಮನ್ನು ನಾವು ಶಪಿಸಿಕೊಂಡಿರುವುದೆ ಕಾರಣವಾಗಿದೆ. ಅಂತಹ ಒಂದು ದುರವಸ್ಥೆಯಿಂದ ಬಿಡುಗಡೆಗೊಳ್ಳುವ ಕಾರಣಕ್ಕಾಗಿಯೇ ನಾವಿಂದು ಜನಪದ ಸಾಹಿತ್ಯವನ್ನು ಓದಬೇಕಾಗಿದೆ ಮತ್ತು ಜನಪದ ಸಂಸ್ಕೃತಿಯನ್ನು ಕಲಿಯಬೇಕಾಗಿದೆ. ಇದರಿಂದ ಆಧುನಿಕತೆಯನ್ನು ಕಳೆದುಕೊಳ್ಳುತ್ತೇವೆ ಎಂದು ನಾವ್ಯಾರು ಭಯಪಡಬೇಕಾಗಿಲ್ಲ. ಆಧುನಿಕತೆಯನ್ನು ಜನಪದ ಬದುಕಾಗಿ ಹಂಚಿಕೊಳ್ಳುವ ಸಾಧ್ಯತೆಗಳನ್ನಷ್ಟೆ ನಾವು ನಮ್ಮಲ್ಲಿ ಕಂಡುಕೊಳ್ಳಬೇಕಾಗಿದೆ.

**ಕರ್ನಾಟಕ ಸರ್ಕಾರ; ಚಿಗುರಿದ ಸಂಸ್ಕೃತಿಯ ಸಾರ ಸರ್ಕಾರ ನಿಂತಕಡೆ ಜನಪದಗಳು ಚಲಿಸಬೇಕು**

ಜನಪದಗಳು ತಾಟಸ್ಥ್ಯಕ್ಕೆ ಬರುತ್ತಿವೆ ಎಂದ ಕಡೆ ಸರ್ಕಾರ ಚಲಿಸಬೇಕು. ಜಗತ್ತಿನ ಎಲ್ಲ ಕಡೆಯೂ ಇಂತಹ ಚಲನೆಗಳು ಸಂಭವಿಸಿವೆ. ಕರ್ನಾಟಕದ ತಳ-ಕೆಳವರ್ಗಗಳು ಎಲ್ಲ ಅನುಕೂಲಗಳಿಂದ ವಂಚಿತವಾಗಿ ಸ್ತಬ್ಧತೆಯ ಕಡೆಗೆ ಹೊರಟಿವೆ ಎಂಬುದನ್ನು ಕಂಡ ಶ್ರೀ ಡಿ. ದೇವರಾಜ ಅರಸು ಅವರ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಅವುಗಳನ್ನು ಪ್ರೋತ್ಸಾಹಿಸಿ, ಪೋಷಿಸಿ ಮುಖ್ಯಧಾರೆಗೆ ಅಭಿಮುಖೀಕರಿಸಿದರು. ಭಾಷೆಯ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಅನ್ಯತೆಗೆ ಸೋಲುತ್ತದೆ ಎಂದು ತಿಳಿದಾಗ ಕರ್ನಾಟಕ ಜನತೆ ಗೋಕಾಕ್ ಚಳವಳಿಯನ್ನು ಆರಂಭಿಸಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಸಮನೆಲೆಗೆ ತಂದರು. ಜನಪದಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನದ ಸಂದರ್ಭಕ್ಕೆ ಇಂಥದೊಂದು ಚಲನೆ ಜನರ ಮಧ್ಯೆ ಉಂಟಾಗಬೇಕಿದೆ. ಆದರೆ ಅಂತಹ ಸೂಚನೆಗಳು ಕಾಣುತ್ತಿಲ್ಲ. ಇಂತಹ ಸ್ಥಿತಿಯನ್ನು ಅಲುಗಾಡಿಸಲು ಜನತೆಯ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಸರ್ಕಾರ ಹೊಸಹೆಜ್ಜೆಯನ್ನು ಹಸನಾದ ಗೆಜ್ಜೆ ಸದ್ದಿನೊಂದಿಗೆ ಇಡಬೇಕಾಗಿದೆ. 'ಕನ್ನಡ ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ' ಗಳನ್ನು ಹೊರತರಲು

ಹೊರಟಿರುವ ಕರ್ನಾಟಕ ಸರ್ಕಾರ ಮತ್ತು ಅದರ ಸಂಸ್ಕೃತಿ ಚಾಲಕ ಸಂಸ್ಥೆಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಂತಹ ಒಂದು ಮಹತ್ವದ ಕೆಲಸಕ್ಕೆ ಕೈಹಾಕಿದೆ.

ಭಾರತದ ಅನೇಕ ಸಂಸ್ಥಾನಗಳಲ್ಲಿ ಜನಪದ ಸಾಹಿತ್ಯ ಸಂಗ್ರಹ ಹಾಗೂ ಜಾನಪದ ಅಧ್ಯಯನ ನಡೆದಿದೆ. ಆದರೆ ಕರ್ನಾಟಕದ ಈ ದಿಸೆಯ ಕೆಲಸ ಆ ಎಲ್ಲವನ್ನೂ ಮೀರಿಸಿ ಮುಂದೆ ನಿಂತಿದೆ. ಈ ಸಾಧನೆಯ ಮೊದಲ ಗೌರವಕ್ಕೆ ಪಾತ್ರರಾದವರೆಂದರೆ ಕನ್ನಡ ನಿಜ ನೆಲದಿಂದ ಬಂದ ನಮ್ಮ ನಾಡಿನ ಸಾಹಿತಿಗಳು. ನೆಲ ಸಂಸ್ಕೃತಿಯ ನೆಲೆಯಲ್ಲಿ ನಿಂತು ನಾಡಿನ ಭವಿಷ್ಯದ ಬಗ್ಗೆ ತಲೆಬಿಸಿ ಮಾಡಿಕೊಂಡ ಸಂಸ್ಕೃತಿ ಚಿಂತಕರ ಪಾತ್ರ ಈ ಸಾಧನೆಯನ್ನು ಸತ್ವಯುತಗೊಳಿಸಿದೆ. ಪ್ರತ್ಯಕ್ಷವಾಗಿ ನಮ್ಮ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜನಪದ ಸಾಹಿತ್ಯ ಮತ್ತು ಜಾನಪದ ಅಧ್ಯಯನವನ್ನು ತಮ್ಮ ಒಂದು ಬದ್ಧತೆಯನ್ನಾಗಿ ಸ್ವೀಕರಿಸಬೇಕು. ಕರ್ನಾಟಕ ಜಾನಪದ ಪರಿಷತ್ತಿನಂತಹ ಕೆಲವು ಖಾಸಗಿ ಸಂಸ್ಥೆಗಳು ಜಾನಪದ ಪುನರುದ್ಧಾರ ಕೆಲಸದಲ್ಲಿ ತೊಡಗಿವೆ. ಕರ್ನಾಟಕದ ರಾಜಕಾರಣ ಮತ್ತು ರಾಜ್ಯ ಪ್ರತಿನಿಧಿಗಳನ್ನು ದೂರವಿಟ್ಟು ಮಾತನಾಡುವಂತಿಲ್ಲ. ಗ್ರಾಮೀಣ ಪ್ರದೇಶದಿಂದ ಬಂದ ಎಲ್ಲ ಜನಪ್ರತಿನಿಧಿಗಳು ಜಾನಪದ ನಮ್ಮದೆಂದು ಪ್ರೀತಿಸಿ ಪ್ರೋತ್ಸಾಹ ಕೊಡುತ್ತಾ ಬರುತ್ತಿದ್ದಾರೆ. ಕರ್ನಾಟಕದಲ್ಲಿ ಜನಪದ ಕಲೆ ಮತ್ತು ಕಲಾವಿದರಿಗೆ ಸಿಗುತ್ತಿರುವ ಪ್ರೋತ್ಸಾಹ ಭಾರತದ ಬೇರಾವ ಸಂಸ್ಥಾನದಲ್ಲಿಯೂ ಸಿಗುತ್ತಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಂತಹ ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ ಬದ್ಧ ರಾಜ್ಯಶಕ್ತಿಯ ಪ್ರತ್ಯುತ್ಪನ್ನವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಾನಪದಕ್ಕೆ ಕೊಟ್ಟಿರುವ ಪ್ರೇರಣೆ, ಪ್ರೋತ್ಸಾಹ ಅಪಾರವಾದುದು. ತಾನೇ ನೇರವಾಗಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯ ಪುಸ್ತಕಗಳಿಗೆ ಅರ್ಥಿಕ ನೆರವು ನೀಡುತ್ತಿದೆ. ಜನಪದ ಸಾಹಿತ್ಯದ ಪ್ರಾಮಾಣ್ಯ ಸಂಗ್ರಹಗಳನ್ನು ಪುನರ್ ಮುದ್ರಿಸಿದೆ. ಜನಪದ ಕಲಾವಿದರಿಗೆ ಮಾಸಾಶನ, ಕಲಾವಿದ ಪ್ರಶಸ್ತಿ ಮತ್ತು ಅತ್ಯುನ್ನತ 'ಜಾನಪದ ಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಕಲಾವಿದರ ಪುನಶ್ಚೇತನ, ಗುರು-ಶಿಷ್ಯ ಪರಂಪರೆಯ ಮೂಲಕ ಜನಪದ ಕಲೆಗಳ ಪುನರುಜ್ಜೀವನ, ಜನಪದ ಕಲಾವಿದರಿಗೆ ವಾದ್ಯೋಪಕರಣಗಳ ಸಹಾಯ, ಶ್ರೇಷ್ಠ ಕಲಾವಿದರಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಿ ರಾಜ್ಯದ ಇನ್ನಾವುದೇ ಕಲೆ, ಸಂಸ್ಕೃತಿಯ ಸಮಸಮಕ್ಕೆ ತಂದು ಅವರ ಸ್ವಾಭಿಮಾನವನ್ನು, ಸ್ವಾಯತ್ತತೆಯನ್ನು ಮಾನ್ಯ ಮಾಡಿದೆ.

ಇದೀಗ ಇದೇ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇದರಿಂದ ಸುಮಾರು ಐದುನೂರು ಪುಟಗಳ ನೂರು ಜನಪದ ಸಾಹಿತ್ಯ ಸಂಪುಟಗಳು ಹೊರಬರುತ್ತಿವೆ. ಇದನ್ನು ಕನ್ನಡ ಜನಪದ ಸಾಹಿತ್ಯ ಪುನರುತ್ಥಾನದ ಪರ್ವ ಎಂದು ಕರೆಯಬಹುದು. ಈ ಬಗೆಯ ಕೆಲಸ ಭಾರತದ ಮತ್ತಾವುದೇ ರಾಜ್ಯದಲ್ಲಿ ಆರಂಭಗೊಂಡಿಲ್ಲ. ವಚನ ಸಾಹಿತ್ಯ ಹಾಗೂ ದಾಸಸಾಹಿತ್ಯವನ್ನು ಕುರಿತ ಸಂಪುಟಗಳನ್ನು ಪ್ರಕಟಿಸಿದ ನಂತರದ ಮೂರನೆಯ ಬೃಹತ್ ಕಾರ್ಯಯೋಜನೆ ಇದು. ಕನ್ನಡಿಗರನ್ನು ಇಷ್ಟೊಂದು ಸಂತಸಪಡಿಸಿದ ಸಂದರ್ಭ ಇನ್ನೊಂದಿಲ್ಲ. ಇದೊಂದು ನಿರಂತರವಾದ ನಾಡ ಚಳವಳಿ ಇದ್ದಂತೆ. ಈ ಕಾರಣಕ್ಕೆ ಕರ್ನಾಟಕ ಸಮಸ್ತ 'ಜನಶ್ರೀ' ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಋಣಿಯಾಗಿದೆ. ಈ ಋಣ ಯಾಕೆಂದರೆ ಕೆರೆಯ ನೀರನು ಕೆರೆಗೆ ಬಿಡಿ ಎಂಬಂತೆ ಜನತೆಯ ಸಾಹಿತ್ಯವನ್ನು ಜನರ ಮಧ್ಯೆ ಜನಪ್ರಿಯಗೊಳಿಸುವ ಕೆಲಸ, ನಿಮ್ಮ ಸಂಪತ್ತು ನಿಮ್ಮ ಪ್ರೇಮ, ನಿಮ್ಮ ಅಭಿಮಾನ ಮತ್ತು ನಿಮ್ಮ ಅಂತರಂಗದ ಅಭಿವೃದ್ಧಿಯನ್ನಾಗಿ ಮಾಡಿಕೊಳ್ಳಿ ಎಂಬ ಸಂದೇಶವನ್ನು ಕೊಟ್ಟಂತಾಗಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ರಾಜಕೀಯ ಶಕ್ತಿ ಮಾತ್ರ ಇಂಥ ಕೆಲಸವನ್ನು ಮಾಡಬಲ್ಲದು. ಇಂತಹ ಮಹತ್ವದ ಯೋಜನೆಯನ್ನು ಕೊಟ್ಟ ಕರ್ನಾಟಕ ಸರ್ಕಾರಕ್ಕೆ ಸಮಗ್ರ ಕನ್ನಡ ಜನಪದ ಸಾಹಿತ್ಯ ಸಮಿತಿ ಗೌರವ ವಂದನೆಗಳನ್ನು ಸಲ್ಲಿಸುತ್ತದೆ.

ಜನಪದ ಸಾಹಿತ್ಯ ಮುಗಿಯದ ಸಾಹಿತ್ಯ. ಜನರ ಜೀವನದ ಜೊತೆಗೇ ಅದು ಬೆಳೆಯುತ್ತಿರುತ್ತದೆ. ಈ ಕಾರ್ಯಯೋಜನೆ ಕೂಡ ಹಾಗೆಯೇ ಮುಂದುವರಿಯಬೇಕಾದ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಇರುವ ಜಾನಪದ ವಾತಾವರಣ ಇದನ್ನು ಆಗು ಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಸಂಪುಟ ಸಮಿತಿ ಇಂತಹ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೆ ಸಂಪುಟ ಸಮಿತಿ ತುಂಬು ಜವಾಬ್ದಾರಿಯಿಂದ ತನ್ನ ಕೆಲಸದಲ್ಲಿ ತೊಡಗಿದೆ. ಕರ್ನಾಟಕದಲ್ಲಿ ಈಗಾಗಲೆ ಹಲವು ವ್ಯಕ್ತಿಗಳು ಮತ್ತು ಕೆಲವು ಸಂಸ್ಥೆಗಳು ನಿರಂತರವಾಗಿ ಜನಪದ ಸಾಹಿತ್ಯ ಸಂಗ್ರಹಗಳನ್ನು ಪ್ರಕಟಿಸುತ್ತಾ ಬಂದಿವೆ. ಇವುಗಳಲ್ಲಿ

ಕೆಲವು ಮಾತ್ರ ಶಾಸ್ತ್ರೀಯವಾಗಿದ್ದು ಹೆಚ್ಚಿನವು ಸಾಂದರ್ಭಿಕ ಒತ್ತಡ ಮತ್ತು ಅಗತ್ಯತೆಗೆ ಹೊಂದಿಕೊಂಡು ಪ್ರಕಟವಾಗಿವೆ. ಅನೇಕ ವೇಳೆ ಅದೆ ಅಂಶಗಳು ಪದೇಪದೇ ಬೇರೆಬೇರೆ ಸಂಗ್ರಹಗಳಲ್ಲಿ ಪುನರುಕ್ತಿಗೊಂಡಿವೆ. ಇದನ್ನು ಗಮನಕ್ಕೆ ತೆಗೆದುಕೊಂಡಿರುವ ಪ್ರಕಟಣ ಸಮಿತಿಯು ಇರುವುದನ್ನೆಲ್ಲ ಇದ್ದ ಹಾಗೇ ಪ್ರಕಟಿಸುತ್ತಿಲ್ಲ, ಒಂದು ಪ್ರಕಾರದ ಒಂದು ಪ್ರಧಾನ ಆಶಯದ ಮೇಲೆ ನೆಲೆ ನಿಂತಿರುವ ಒಂದು ಹಾಡು, ಕಥೆ, ಕಥನಗೀತೆ, ಗಾದೆ, ಒಗಟು, ಒಡಪು, ನುಡಿಗಟ್ಟು..... ಹೀಗೆ ಒಂದು ಪಾಠವನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಅಥವಾ ಭಾಷಿಕವಾಗಿ ವಿಶೇಷವಾಗಿ ಪ್ರತಿನಿಧಿಸುವ ಮತ್ತೊಂದು ಪಾಠವಿದ್ದಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಯಾವುದೇ ಪಾಠವನ್ನು ಶಿಷ್ಟ ಸಂಪಾದನೆಯ ಕ್ರಮಕ್ಕೆ ಒಳಪಡಿಸಿರುವುದಿಲ್ಲ. ಆ ಕ್ರಮ ಬಹುಜನರಿಂದ, ಬಹುಪಾಠಗಳಲ್ಲಿ ಮತ್ತು ಬಹುಕಾಲಗಳಲ್ಲಿ ಸೃಷ್ಟಿಯಾಗುವ ಜನಪದ ಸಾಹಿತ್ಯಕ್ಕೆ ಸಲ್ಲತಕ್ಕುದಲ್ಲ. ಭಾಷಿಕ ದೋಷಗಳನ್ನು ಸರಿಪಡಿಸಲು ಮಾತ್ರ ಮುಂದಾಗಿದ್ದೇವೆ. ಆಗತ್ಯವಿದ್ದಷ್ಟು ಸಾಂಸ್ಕೃತಿಕ ಪದಕೋಶವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಶಿಷ್ಟ ಮತ್ತು ಜನಪ್ರಿಯ ಸಾಹಿತ್ಯ ಪ್ರವೃತ್ತಿಗಳು ಜನಪದ ಸಾಹಿತ್ಯದ ಮೇಲೆ ಯಾವ ಕಾಲದಿಂದಲೂ ಪ್ರಭಾವಬೀರುತ್ತ ಬಂದಿವೆ. ಸಮೂಹ ಮಾಧ್ಯಮಗಳು ಈ ಹೊತ್ತು ಭಾರಿ ಪರಿಣಾಮವನ್ನು ಜನಜೀವನದ ಎಲ್ಲ ಕ್ಷೇತ್ರಗಳ ಮೇಲೆ ಬೀರುತ್ತಾ ಇವೆ. ಇಂತಹ ಸಂದರ್ಭಗಳಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯದ ನಡುವೆ 'ಮಧ್ಯಮ ಸಾಹಿತ್ಯ' ಸೃಷ್ಟಿಯಾಗಿದೆ. ಈ ಸಾಹಿತ್ಯ ಬಾಯಿ ಮಾತಿನಲ್ಲೂ ಇದೆ, ಬರಹದಲ್ಲೂ ಇದೆ. ಇದು ಜನಪದದ ಮಧ್ಯೆಯೇ ಪ್ರಚುರಪ್ರಚಾರದಲ್ಲಿದೆ. ಜನ ಈ ಸಾಹಿತ್ಯವನ್ನು ಜನಪದ ಸಾಹಿತ್ಯದ ಒಂದು ಭಾಗ ಎಂದು ಒಪ್ಪಿ ಸ್ವೀಕರಿಸಿ ಹಾಡುತ್ತಿದ್ದಾರೆ. ತತ್ವಪದಗಳು ಮತ್ತು ಭಜನೆಯ ಪದಗಳು ಈ ಪ್ರವೃತ್ತಿಗೆ ಮುಖ್ಯ ಸಾಕ್ಷಿಗಳಾಗಿವೆ. ಮೌಖಿಕ ಪರಂಪರೆಯೊಳಕ್ಕೆ ಬಂದು ಅನ್ಯೋನ್ಯವಾಗಿ ಸೇರಿಕೊಂಡ ಎಲ್ಲವೂ ಹಾಗೂ ಜಾನಪದೀಯವಾಗಿ ಪರಿಗಣಿತವಾದುದೆಲ್ಲವೂ ಜಾನಪದ ಎಂದು ನಮ್ಮ ವಿಶ್ವ ಪರಂಪರೆಯ ಜಾನಪದ ವಿದ್ವಾಂಸರು ಅನುಮೋದನೆ ನೀಡಿದ್ದಾರೆ. ಉತ್ತರ ಕರ್ನಾಟಕದಂಥ ಸಮೃದ್ಧ ಜಾನಪದ ಜೀವನವನ್ನು ಬದುಕುತ್ತಿರುವ ಜನ ತಮ್ಮ ಅಂತಃಸತ್ವದಲ್ಲಿ ಕೆಲವು ಶಿಷ್ಟ ಹಾಡುಗಳನ್ನು ಜಾನಪದೀಯಗೊಳಿಸಿಬಿಟ್ಟಿದ್ದಾರೆ. ದಾಸಸಾಹಿತ್ಯದ ಅನೇಕ ಹಾಡುಗಳು, ಶಿಶುನಾಳ ಷರೀಫರಂಥ ಜನಸಾಮಾನ್ಯರ ನಡುವಿನ ತತ್ವಚಿಂತಕರ ಹಾಡುಗಳು ಜನರ ಬಾಯಲ್ಲಿ ಜಾನಪದೀಯವಾಗಿವೆ. ವಚನ ಚಳವಳಿಯ ಮುಖ್ಯ ಧಾರೆಯ ಹಿಂದಿನಿಂದ ಬಂದ ಶರಣ ಕವಿಗಳ ಹಾಡುಗಳು ಭಜನೆಯ ಪದಗಳಾಗಿ ಹಾಡಲ್ಪಡುತ್ತಿವೆ. ಜನಪದ ಸಾಹಿತ್ಯದ ಒಂದು ಪ್ರಕಾರವನ್ನು ಮತ್ತೊಂದು ಉದ್ದೇಶಕ್ಕೆ ಬಳಸಿಕೊಳ್ಳುವ ಪರಿಪಾಠ ಎಲ್ಲ ಜನಪದಗಳಲ್ಲೂ ಇದೆ. ಪ್ರಕಾರದೊಳಗಿನ ಉಪಪ್ರಕಾರಗಳಲ್ಲಿ ಕಾರ್ಯಾಂತರವಾಗುವ ರೂಢಿಯೂ ಇದೆ, ಇದನ್ನು ಅಡ್ಡ ಪ್ರಕಾರ ಸ್ವಭಾವ ಎಂದು ಕರೆಯಬಹುದು. ವ್ಯಕ್ತಿಯೊಬ್ಬ ಮರಣ ಹೊಂದಿದಾಗ ಆ ದಿನ ರಾತ್ರಿ ಇಡೀ ದಾಸರ ಪದಗಳನ್ನು ಕರುಣಾಕೃತಿಯಾಗಿ ಬಳಸಲಾಗುತ್ತದೆ. ಜನಪದದಲ್ಲಿ ಈ ಸಂದರ್ಭಕ್ಕೆಂದು ಮರಣಗೀತೆಗಳಿದ್ದಾಗ್ಯೂ ಹಾಡುಗಾರರು ದಾಸರ ಪದಗಳನ್ನು ಬಳಸುತ್ತಿರುವುದು ಸಾಂದರ್ಭಿಕ ಔಚಿತ್ಯವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಪ್ರತಿ ಜಾನಪದ ಪ್ರಕಾರ ವಿಸ್ತತಗೊಂಡು ಆಧುನಿಕ ಅವಶ್ಯಕತೆಗಳಿಗಾಗಿ ಬಳಕೆಯಾಗುತ್ತಿದೆ. ಈ ಚಟುವಟಿಕೆಯನ್ನು ಪಾಶ್ಚಾತ್ಯ ಜಾನಪದ ವಿದ್ಯಾಂಸರು 'ಸಾರ್ವಜನಿಕ ಜಾನಪದ' ಎಂದು ಕರೆದಿದ್ದಾರೆ. ಈಗ ಬರುತ್ತಿರುವ ಟಿ.ವಿ, ಧಾರಾವಾಹಿಗಳನ್ನು ಗಮನಿಸಿದರೆ ಮುಂದೊಂದು ದಿನ 'ಸಾರ್ವಜನಿಕ ಸಾಹಿತ್ಯ' ಎಂಬ ನಡುಮಧ್ಯದ ಸಾಹಿತ್ಯವೂ ಹುಟ್ಟಿಕೊಳ್ಳಬಹುದು. ಇಂತಹ ಸನ್ನಿವೇಶದಲ್ಲಿ ಜನಪದ ಸಾಹಿತ್ಯ ತಾಳುವ ಭಿನ್ನ ಉಪಪ್ರಕಾರಗಳ ಚಲನೆಯನ್ನು ಜಾನಪದ ವಿದ್ವಾಂಸರು ತೆರೆದ ಮನಸ್ಸಿನಿಂದ ನೋಡಬೇಕಾಗಿದೆ.

ಈ ಯೋಜನೆಯನ್ನು 'ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಪ್ರಕಟಣ ಯೋಜನೆ' ಎಂದು ಕರೆಯಲಾಗಿದೆ. ಇದರೊಳಗೆ ಬಯಲಾಟ ಮತ್ತು ಯಕ್ಷಗಾನ ಪ್ರಸಂಗಗಳನ್ನು ವಿಶೇಷ ಗಮನಕ್ಕೆ ಅರ್ಹವೆಂದು ಪರಿಗಣಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದ ಮಧ್ಯೆ ಜನಪರವಾಗಿ ಬೆಳೆದುನಿಂತಿರುವ ಈ ಸಾಹಿತ್ಯ ಒಂದು ವಿಶೇಷ ಸಾಹಿತ್ಯ ಪ್ರಕಾರವಾಗಿದೆ. ಶಿಷ್ಟ ಸಾಹಿತ್ಯ ಮೀಮಾಂಸೆ ಜನಪದ ಸಾಹಿತ್ಯವನ್ನು ಅವಗಣಿಸಿರುವಂತೆ ವಿವಿಧ ಬಯಲಾಟ ಪ್ರಕಾರಗಳ ಪ್ರಸಂಗ ಸಾಹಿತ್ಯವನ್ನು ತನ್ನಿಂದ ದೂರವಿರಿಸಿದೆ. ಶಿಷ್ಟ ಸಾಹಿತ್ಯವನ್ನು ಮೀರಿ ಬೆಳೆದ ಯಾವ ಸಾಹಿತ್ಯ ಪ್ರಕಾರವಿದ್ದರೂ ಅದನ್ನು ಗಮನಿಸುವುದು ಬೆಳೆಯುವ ಪ್ರತಿಭಾ ಚಟುವಟಿಕೆಯ ಪುರಸ್ಕಾರವಾಗುತ್ತದೆ. ಜನಪದ ಸಾಹಿತ್ಯ ಸಂಪುಟ ಸಮಿತಿ ತುಂಬ ಜವಾಬ್ದಾರಿಯಿಂದಲೆ ಈ ಬೆಳೆದ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಗೌರವಿಸಿದೆ.

ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಯ ಈ ಯೋಜನೆಯಲ್ಲಿ ಮೊದಲಾಗಿ ಪ್ರಕಟಿತ ಸಾಹಿತ್ಯವನ್ನು ಆರಿಸಿ ವಿದ್ವಾಂಸರು ಹಾಗೂ ಕನ್ನಡ ಸಾಹಿತ್ಯಾಭಿರುಚಿಯುಳ್ಳ ಎಲ್ಲರಿಗೂ ಒಪ್ಪುವಂತೆ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತದೆ. ಎರಡನೆಯ ಹಂತದಲ್ಲಿ ಕರ್ನಾಟಕ ನಾಡಿನಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಲು ಸಾಧ್ಯಾವಾಗದೆ ಇಟ್ಟುಕೊಂಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಜನಪದ ಸಾಹಿತ್ಯವನ್ನು ಪ್ರಕಟಿಸಲು ಯೋಜಿಸಲಾಗಿದೆ. ಇಲ್ಲಿ ಕೂಡ ಈಗಾಗಲೆ ಬೇರೆ ಬೇರೆ ಕೃತಿಗಳಲ್ಲಿ ಕಾಣಿಸಿಕೊಂಡಿರುವ ಸಾಹಿತ್ಯ ಭಾಗವನ್ನು ಬಿಟ್ಟು ಹೊಸದೆನಿಸಿದುದನ್ನು ಕೈಗೆತ್ತಿಕೊಳ್ಳಲಾಗುವುದು. ಮೂರನೆಯ ಹಂತದಲ್ಲಿ ನಾಡಿನಾದ್ಯಂತ ಕೆಡೆದು ಬಿದ್ದಿರುವ ಅಪೂರ್ವವೂ, ಅಮೂಲ್ಯವೂ ಆದ ಜನಪದ ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಮಾಡಿಸಿ, ಸಂಗ್ರಹಿಸಿ ಪ್ರಕಟಿಸುವ ಬಹುದೊಡ್ಡ ಯೋಜನೆ ಇದೆ. ನಮ್ಮ ಸಾಹಿತ್ಯ - ಸಂಸ್ಕೃತಿ ಚಿಂತಕರು 'ಕರ್ನಾಟಕದ ಮುರಿದ ಭಾಗವನ್ನು ಸರಿಪಡಿಸಿ ಕಟ್ಟಿರಿ, (ಅರ್ಚಕ ಬಿ. ರಂಗಸ್ವಾಮಿ : ಹುಟ್ಟಿದ ಹಳ್ಳಿ; ಹಳ್ಳಿಯ ಹಾಡು 1933) ಎಂಬ ಕಳಕಳಿಯ ಆದೇಶವನ್ನು ಕೊಟ್ಟಿದ್ದಾರೆ, ಅದನ್ನು ಪಾಲಿಸುವುದು ನಮ್ಮ ಕರ್ತವ್ಯ ಹಾಗೂ ಧರ್ಮವಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ 10-02-2004ರಂದು ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಯೋಜನೆಯ ನಿರ್ವಹಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇಲ್ಲಿ ನಾಡಿನ ಹಿರಿಯ ಹಾಗೂ ಶ್ರೇಷ್ಠ ಜಾನಪದ ತಜ್ಞರಿದ್ದಾರೆ. ಅವರ ಪ್ರತಿಭೆ ಮತ್ತು ಪರಿಶ್ರಮ ಇಲ್ಲಿ ಕೆಲಸ ಮಾಡಿದೆ. ಬಹಳ ಕಾಲದ ಕನಸೊಂದು ನನಸಾಗುತ್ತಿರುವ ಬಗ್ಗೆ ಅವರು ಸಂತಸಗೊಂಡಿದ್ದಾರೆ. ಇದೊಂದು ನಾಡಿಗೆ ಸಲ್ಲಿಸುವ ಸೇವೆಯ ಕೆಲಸವೆಂಬಂತೆ ದುಡಿಯುತ್ತಿದ್ದಾರೆ. ಅವರು ಕರ್ನಾಟಕ ಸರ್ಕಾರ ಹಾಗೂ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ. ಕರ್ನಾಟಕದ ನಾನಾ ಕಡೆ ಬಹಳಕಾಲದಿಂದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ ನುರಿತಿರುವ ನೂರೈವತ್ತಕ್ಕೂ ಹೆಚ್ಚು ಜಾನಪದ ವಿದ್ವಾಂಸರು ಸಂಪುಟಗಳ ಸಂಪಾದಕರಾಗಲು ಒಪ್ಪಿಕೊಂಡಿದ್ದಾರೆ. ನಾಡ ಮೇಲಿನ ಅವರ ಪ್ರೀತಿ ಅಪಾರವಾದುದು. ಅವರನ್ನು ಕರ್ನಾಟಕ ಸಾಹಿತ್ಯ ಸಂಸ್ಕೃತಿ ಪ್ರೇಮಿಗಳು ಸ್ಮರಿಸುತ್ತಾರೆ. ಸಂಪುಟ ಸಮಿತಿ ಅವರನ್ನು ತುಂಬುಮನಸ್ಸಿನಿಂದ ವಂದಿಸುತ್ತದೆ.

ಈ ಸಂಪುಟಗಳು ಹೊರಬರುವಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನ ಶ್ಲಾಘನೀಯ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಹಾಗೂ ನಿರ್ದೇಶಕರು ಈ ನಿಟ್ಟಿನಲ್ಲಿ ಮುಕ್ತ ಸಹಕಾರವನ್ನು ನೀಡಿದ್ದಾರೆ. ಈ ಇಲಾಖೆಯ ಜಂಟಿ ನಿರ್ದೇಶಕರೂ, ಸಾಹಿತಿಗಳೂ ಆದ ಶ್ರೀ ಕಾ.ತ. ಚಿಕ್ಕಣ್ಣನವರು ಪ್ರತಿಯೊಂದು ಹಂತದಲ್ಲೂ ಸಂಪುಟ ಸಮಿತಿಯ ಜೊತೆಗಿದ್ದು ಅವರ ಅಪಾರ ಶ್ರಮ ಮತ್ತು ಸಹಕಾರವನ್ನು ಧಾರೆ ಎರೆದಿದ್ದಾರೆ. ಕರ್ನಾಟಕ ಜಾನಪದ ಅಕಾಡೆಮಿಯು ಪ್ರಕಟಣೆಯ ಕೆಲಸಕಾರ್ಯಗಳನ್ನು ನಿರ್ವಹಿಸಿ ತುಂಬು ಬೆಂಬಲ ನೀಡಿದೆ. ಈ ಸಮಸ್ತರಿಗೂ ನನ್ನ ಗೌರವಪೂರ್ವಕ ವಂದನೆಗಳು ಸಲ್ಲುತ್ತವೆ.

**– ಪ್ರೊ.ಹಿ.ಶಿ.ರಾಮಚಂದ್ರೇಗೌಡ**
ಅಧ್ಯಕ್ಷರು
ಸಮಗ್ರ ಕನ್ನಡ ಜನಪದ ಮತ್ತು
ಯಕ್ಷಗಾನ ಸಾಹಿತ್ಯ ಸಂಪುಟ ಸಮಿತಿ

# ಪ್ರಸ್ತಾವನೆ

ಯಕ್ಷಗಾನ ಇಂದು ತನ್ನ ವ್ಯಾಪ್ತಿ ವಿಸ್ತಾರಗಳನ್ನು ಪಡೆದುಕೊಂಡು ಒಂದು ಸಶಕ್ತ ರಂಗಮಾಧ್ಯಮವಾಗಿ ನಮ್ಮ ಮುಂದೆ ಕಂಗೊಳಿಸುತ್ತಿರುವುದು ಹೆಮ್ಮೆಯ ವಿಚಾರ. ಕಲಾವಿದರು, ವಿದ್ವಾಂಸರು, ಪ್ರೇಕ್ಷಕರು, ಪ್ರಯೋಗಶೀಲರು, ಅಭಿಮಾನಿಗಳು, ಕಲಾವಿಮರ್ಶಕರು ಹೇಗೆ ಈ ರಂಗ ಭೂಮಿಯ ಶಿಲ್ಪವನ್ನು ಕಡೆಯುತ್ತ ಹೋದರೋ, ಹಾಗೇ ಅನ್ಯರಂಗಭೂಮಿಯ ಅಧ್ಯಯನ, ಪ್ರಭಾವ, ಪರಿಸರಗಳೂ ತನ್ನದೇ ಆದ ಕೊಡುಗೆ ನೀಡಿದ್ದನ್ನು ಗುರುತಿಸಬಹುದು. ಈ ಪ್ರಕ್ರಿಯೆ ರಂಗ ಭೂಮಿಯಿರಲಿ, ಸಾಹಿತ್ಯವಿರಲಿ, ಎಲ್ಲ ಸೃಜನಶೀಲ ಮಾಧ್ಯಮಗಳಿಗೂ ಅನಿವಾರ್ಯ ಕೂಡಾ. ಹೀಗೆ ರಂಗಭೂಮಿ ತನ್ನ ಪಾತ್ರವನ್ನು ವಿಸ್ತರಿಸಿಕೊಂಡು ಮುನ್ನಡೆಯುತ್ತ ಹಲವು ಇತಿಹಾಸಗಳನ್ನು ನಿರ್ಮಿಸುತ್ತ, ನಿಯಮಗಳನ್ನು ರೂಪಿಸುತ್ತ ಸಾಗುವುದು, ಕೆಲವನ್ನು ಕೈಬಿಟ್ಟು ಕೆಲವನ್ನು ಬಚ್ಚಿಟ್ಟು, ಕೆಲವನ್ನು

ಮುನ್ನಡೆಗೆ ಎಡೆಮಾಡಿಕೊಳ್ಳುವುದನ್ನು ಕೂಡಾ ಸೂಕ್ಷ್ಮಾಧ್ಯಯನದಿಂದ ಕಂಡುಬರುವ ಸತ್ಯ. ಯಕ್ಷಗಾನ ಇಂದು ಇಡೀ ರಾಷ್ಟ್ರದಲ್ಲಿ ಗುರುತಿಸಿಕೊಂಡು, ಹೊಸ ನಿರೀಕ್ಷೆಗಳನ್ನು ಹುಟ್ಟುಹಾಕುತ್ತ ಸಾಗುತ್ತಿರುವುದು ಪ್ರಸಕ್ತ ವಿದ್ಯಮಾನಗಳಲ್ಲಿ ಪ್ರಮುಖ ಅಂಶ. ಯಕ್ಷಗಾನವನ್ನು ನೋಡುವುದಕ್ಕೆ, ಆಸ್ವಾದಿಸುವುದಕ್ಕೆ ಹೆಚ್ಚು ಹೆಚ್ಚು ಭಿನ್ನ ವಲಯಗಳು ಮುನ್ನುಗ್ಗುತ್ತಿರುವುದನ್ನು ಇಂದು ಕಾಣಬಹುದು. ಅಂತೆಯೇ ಅದರ ಮೌಲ್ಯ, ಸತ್ವಸಾರಗಳ ಪರಾಮರ್ಶೆ, ಯಕ್ಷಗಾನದ ನೈಜ್ಯ ಶಕ್ತಿಯ ಅನ್ವೇಷಣೆ, ಸವಾಲುಗಳು ಕೂಡಾ ಗಮನ ಸೆಳೆಯುವ ಆಯಾಮವಾಗಿದೆ. ಯಕ್ಷಗಾನದ ಬೆಳವಣಿಗೆಗೆ, ಅಧ್ಯಯನಕ್ಕೆ ವಿಶ್ವವಿದ್ಯಾನಿಲಯಗಳೂ, ಸರಕಾರ, ಸರಕಾರೇತರ ಸಂಘ ಸಂಸ್ಥೆಗಳೂ, ಕಲಾ ಪೋಷಕರೂ ಮುಂದೆ ಬರುತ್ತಿರುವುದು ಸಂತಸದ ಸಂಗತಿಯಾಗಿದೆ.

ಕರ್ನಾಟಕದ ನೆಲದಲ್ಲಿ ಸತ್ವ ಮತ್ತು ಶಕ್ತಿಯನ್ನು ತುಂಬಿಕೊಂಡು ಯಕ್ಷಗಾನದಂತೆ, ಮೂಡಲಪಾಯ, ಕೇಳಿಕೆ, ಗಟ್ಟದಕೋರೆ ಯಕ್ಷಗಾನ, ದೊಡ್ಡಾಟ, ಸಣ್ಣಾಟ, ಮುಂತಾದ ರಂಗ ಪ್ರಕಾರಗಳು ಕೂಡಾ ಬೆಳೆಯುವ ತವಕದಲ್ಲಿರುವುದು ಸಂತೋಷ ಪಡಬೇಕಾದ ಸಂಗತಿ. ಅನೇಕ ಜನಪದೀಯ ಅಂಶಗಳನ್ನು, ನೃತ್ಯ, ಸಂಗೀತ, ಅಭಿವ್ಯಕ್ತಿಯ ವಿಧಾನಗಳನ್ನು ಬಳಸಿಕೊಂಡು, ಬೆಳದು ತನ್ನದೇ ಆದ ಅಸ್ತಿತ್ವವನ್ನು, ನೆಲೆಯನ್ನು ಗಟ್ಟಿಮಾಡಿಕೊಂಡಿರುವ ಎಲ್ಲ ರಂಗ ಪ್ರಕಾರಗಳೂ, ಕರ್ನಾಟಕದ ಪಾರಂಪರಿಕ ರಂಗಭೂಮಿಯ ಪ್ರತಿನಿಧಿಗಳೆ. ಇವುಗಳಿಗೆ ಸಿಗಬೇಕಾದ ಪ್ರಚಾರ-ಪ್ರಸಿದ್ಧಿಗಳು ದೊರಕದಿದ್ದರೂ, ಸತ್ವಸಾರಗಳಿಂದ ತುಂಬಿರುವ ಈ ಪ್ರಕಾರಗಳು ಮುಂದೆ ಉಜ್ವಲ ಭವಿಷ್ಯ ಹೊಂದಲು ಸಾಧ್ಯವಿದೆ. ಆ ಕುರಿತು ಪ್ರಯತ್ನ ನಡೆಯಬೇಕಾಗಿದೆ ಅಷ್ಟೆ. ಹೀಗೆ ಇಂತಹ ಸಮೃದ್ಧ ರಂಗ ಪರಂಪರೆಯನ್ನು ಕನ್ನಡನಾಡಿನ ಒಡಲಿನಲ್ಲಿ ಬೆಳಸಿ, ಉಳಿಸುವ ಈ ಆಶಯಕ್ಕೆ ಪೂರಕವಾದ ವಾತಾವರಣ ಕೂಡ ಮುಖ್ಯವಾದದ್ದು.

ಯಕ್ಷಗಾನ ಸಾಹಿತ್ಯದ ಕುರಿತು ಇಂದು ನಾವು ಗಂಭೀರವಾದ ಚಿಂತನೆ ಮಾಡಬೇಕಾದ ಅನಿವಾರ್ಯತೆ ಇದೆ. ಅದಕ್ಕೂ ಮಿಗಿಲಾಗಿ ಈ ಸಾಹಿತ್ಯದ ಶಕ್ತಿ, ಅರಿವು, ತನ್ನತನ, ಇವುಗಳ ಪರಿಚಯ ಕನ್ನಡ ನಾಡಿನಾದ್ಯಂತ ಆಗಬೇಕಾಗಿದೆ. ಯಕ್ಷಗಾನ ಸಾಹಿತ್ಯದ ಮೇಲೆ ಕುಮಾರವ್ಯಾಸ, ರನ್ನ, ಪಂಪ ಮುಂತಾದ ಕನ್ನಡದ ಆಧಾರ ಸ್ಥಂಭರೆನಿಸಿದ ಕವಿಗಳ ಪ್ರಭಾವ ನಿಚ್ಚಳವಾಗಿದೆ. ಅಲ್ಲದೇ ತೊರವೆ ರಾಮಾಯಣ, ಕೌಶಿಕ ರಾಮಾಯಣ, ದಾಸಸಾಹಿತ್ಯದ ಪ್ರಭೆಯೂ ಅದಕ್ಕಿದೆ. ಈ ದೃಷ್ಟಿಯಿಂದ ಯಕ್ಷಗಾನ ಸಾಹಿತ್ಯ ಅಥವಾ ಪ್ರಸಂಗ ಅಧ್ಯಯನ, ಕನ್ನಡದ ಸಾಹಿತ್ಯ ಶಕ್ತಿಯ ವಿಸ್ತರಣೆಯೇ ಎನ್ನಬಹುದು. ಅಲ್ಲದೇ ಛಂದಸ್ಸು, ಗಾದೆಗಳು, ಜಾನಪದದ ನಂಬಿಕೆಗಳು, ಸಾಮಾಜಿಕ ಸಾಮರಸ್ಯದ ಕಲ್ಪನೆ, ಜನಜೀವದ ಸೂಕ್ಷ್ಮ ತುಮುಲಗಳು, ಯಕ್ಷಗಾನ ಸಾಹಿತ್ಯದಲ್ಲಿ ಹೇರಳವಾಗಿರುವುದರಿಂದ ಈ ಸಾಹಿತ್ಯ ಪ್ರಕಾರವನ್ನು ಕನ್ನಡ ಜನತೆಯ ಮುಂದಿಡಬೇಕಾದ ಅವಕಾಶವೂ ಅಗತ್ಯವಾಗಿ ಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಕರಾವಳಿ, ಮಲೆನಾಡಿನಲ್ಲಿ ದಟ್ಟದಾಗಿ ಪಸರಿಸಿರುವ ಯಕ್ಷಗಾನದ ಹತ್ತು ಹಲವು ಪ್ರಮುಖ ಕೆಲಸಗಳು ಬಹುಮುಖ್ಯವೆನಿಸಿವೆ. ಪ್ರಸಂಗ ಸಾಹಿತ್ಯ ಪ್ರಕಟಣೆ ಇದೀಗ ಆರಂಭವಾಗಿರುವುದು ಶ್ಲಾಘನೀಯ ಪ್ರಯತ್ನಗಳಲ್ಲಿ ಗಮನಾರ್ಹವಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆರಂಭಿಸಿರುವ ಸಮಗ್ರ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟಗಳ ಪ್ರಕಟಣೆ ಒಂದು ಅರ್ಥಪೂರ್ಣ ಹಾಗೂ ಅತ್ಯಂತ ಪ್ರಯೋಜನಕಾರಿ ಯೋಜನೆ ಎಂಬುದು ನನ್ನ ಬಲವಾದ ನಂಬಿಕೆಯಾಗಿದೆ.

ಆಂಗಿಕ, ವಾಚಿಕ, ಆಹಾರ್ಯ, ಸಾತ್ವಿಕಾಭಿನಯದಿಂದೊಡಗೂಡಿದ (Total theatre) ಸಮಗ್ರ ಸಂಪ್ರದಾಯಿಕ ರಂಗಭೂಮಿಯಾದ ಯಕ್ಷಗಾನದ ಅಂಗೋಪಾಂಗಗಳಲ್ಲಿ, ಅಡಕಗೊಂಡ ಸಾಹಿತ್ಯ ಶಕ್ತಿಯ ಕುರಿತು ಕನ್ನಡ ಸಾರಸ್ವತ ಲೋಕ ಇನ್ನೂ ಕಣ್ಣು ತೆರೆಯದಿರುವದು ವಿಷಾದನೀಯ. ಈ ಹಿಂದೆ ಈ ಸಾಹಿತ್ಯದ ಛಂದಸ್ಸು, ರೂಪರೇಖೆಗಳ ಕುರಿತು ಶ್ರೀ ಟಿ. ಕೇಶವ ಭಟ್, ಶ್ರೀ ಕ.ಪ್ರ. ಸೀತಾರಾಮ ಕೇದಿಲಾಯ, ಶ್ರೀ ಎಂ. ರಾಜಗೋಪಾಲಾಚಾರ್ಯ, ಪ್ರೊ. ಅಮೃತ ಸೋಮೇಶ್ವರ, ಡಾ. ಶೀಮಂತೂರು ನಾರಾಯಣ ಶೆಟ್ಟಿ, ಡಾ. ವಸಂತ ಭಾರದ್ವಾಜ ಕಬ್ಬಿನಾಲೆ, ಮುಂತಾದವರು ಈಗಾಗಲೇ ಸಾಕಷ್ಟು ಗಹನವೂ, ಗಮನಾರ್ಹವೂ ಆದ ಕೆಲಸ ಮಾಡಿದ್ದಾರೆ. ಡಾ. ವಸಂತ ಭಾರದ್ವಾಜರ ಯಕ್ಷಗಾನ ಛಂದಸ್ಸು ಪ್ರಬಂಧ ಮಂಡನೆಯಾಗಿದೆ. ಡಾ. ಪಾದೇಕಲ್ಲು ವಿಷ್ಣು ಭಟ್ ಇವರ ಭಾಗವತ ಯಕ್ಷಗಾನ ಪ್ರಸಂಗಗಳು, ಡಾ. ಎಸ್.ಡಿ. ಹೆಗಡೆ ಹೊನ್ನಾವರ ಇವರ ಯ್ಷಕಗಾನದಲ್ಲಿ ರಾಮಾಯಣ ಪ್ರಸಂಗ ಪ್ರಬಂಧ, ಡಾ. ಆನಂದರಾಮ ಉಪಾಧ್ಯಾಯರ ಯಕ್ಷಗಾನ ರಾಮಾಯಣ ಪ್ರಸಂಗಗಳು ಸಂಶೋಧನಾಗ್ರಂಥ, ಹೀಗೆ ಹತ್ತು ಹಲವು ಮುಖದಲ್ಲಿ ಪ್ರಬುದ್ಧ ಹಾಗೂ ಶಕ್ತಿಯುತವಾದ ಅಧ್ಯಯನ, ವಿಶ್ಲೇಷಣೆ ನಡೆದಿದೆ. ಆದರೂ ಕೂಡಾ ಇದು ಸಮಗ್ರ ಕನ್ನಡ ಸಾಹಿತ್ಯ ಪರಂಪರೆ, ಚರಿತ್ರೆ,

ಮೌಲ್ಯಮಾಪನಗಳ ಕ್ಷೇತ್ರಗಳಲ್ಲಿ ಪಡೆಯಬೇಕಾದ ಮನ್ನೆ ಪಡೆದಿಲ್ಲ ಎಂಬ ಕೊರಗು ಹೆಚ್ಚಿನ ವಿದ್ವಾಂಸರಲ್ಲಿ ಇರುವುದು ಸಹಜವೇ ಆಗಿದೆ.

ಯಕ್ಷಗಾನ ಪ್ರಸಂಗ ಸಾಹಿತ್ಯದ ಮೊತ್ತಮೊದಲ ಕೃತಿ ರಾಮ ಪುತ್ರ ವಿಷ್ಣು ಎಂಬಾತ ಬರೆದ ವೀರಾಟಪರ್ವ ಮತ್ತು ಬಾಣಾಸುರ ಕಾಳಗ ಎಂದು ಡಾ॥ಶಿವರಾಮ ಕಾರಂತರು ತಮ್ಮ ಯಕ್ಷಗಾನ (ಪುಟ 142) ಕೃತಿಯಲ್ಲಿ ಹೇಳಿದ್ದಾರೆ. ಆದರೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಪ್ರೋ ಎಂ.ಎ. ಹೆಗಡೆಯವರು ಸಂಪಾದಿಸಿದ ಆದಿಪರ್ವ ಎಂಬ ಪ್ರಸಂಗ ಡಾ॥ಕಾರಂತರು ಊಹಿಸಿದ ಕಾಲಕ್ಕಿಂತ ನೂರಾರು ವರ್ಷ ಹಿಂದಿನ ಪ್ರಸಂಗವಾಗಿರಬೇಕೆಂದು ಸಮರ್ಥವಾದ ಮಂಡಿಸಿದ್ದಾರೆ. ಏನೇ ಇದ್ದರೂ ಸುಮಾರು 14 ಮತ್ತು 15ನೇ ಶತಮಾನದಿಂದ ಲಭ್ಯವಾದ ಪ್ರಸಂಗರಚನೆಯ ಕಾಯಕ ಇಂದಿನವರೆಗೆ ಸುಮಾರು ಸಾವಿರಕ್ಕೂ ಮಿಕ್ಕಿ ಬೆಳದಿದೆ ! ರಚನೆಗಳಲ್ಲಿ ಸಾಹಿತ್ತಿಕಮೌಲ್ಯ, ರಂಗ ಗುಣ, ಮುಂತಾದ ಅಂಶಗಳನ್ನು ಚನ್ನಾಗಿ ದುಡಿಸಿಕೊಂಡು, ರಂಗಭೂಮಿಗೆ ಪೂರಕವಾಗಿ ಬೆಳೆದುಬಂದಿದೆ. ಪಾರ್ತೀಸುಬ್ಬ, ಹಟ್ಟಿಯಂಗಡಿ ರಾಮ ಭಟ್ಟ, ಮುಂತಾದ ಘನವೇತ್ತ ಕವಿಗಳಿಗೆ ಸಮನಾದ ಸೃಷ್ಟಿಯನ್ನು ಮಾಡಿ ಈ ರಂಗಭೂಮಿಯನ್ನು ಬೆಳೆಸಿದ ಹಲವು ಮಹನೀಯರ ಕೊಡುಗೆಯನ್ನು ಮರೆಯುವಂತಿಲ್ಲ.

ಯಕ್ಷಗಾನ ಪ್ರಸಂಗಗಳು ಹಲವು ಪ್ರಶ್ನೆಯನ್ನು ಹುಟ್ಟು ಹಾಕಿವೆ. ಆರಂಭದಲ್ಲಿ ಅದು ಗಾನಪ್ರಬಂಧ ಮಾತ್ರವಾಗಿತ್ತೇ ? ಅಥವಾ ರಂಗಭೂಮಿಗಾಗಿಯೇ ಬರೆಯಲ್ಪಟ್ಟಿದ್ದೆ ? (ನಾಟ್ಯಪ್ರಬಂಧವೇ?) ಎಂಬಂತಹ ತಾತ್ವಿಕ ಪ್ರಶ್ನೆ ಹಾಗೂ ಕೆಲವು ವ್ಯಾವಹಾರಿಕ ಸಮಸ್ಯೆಗಳನ್ನೂ, ಈಗ ಗಮನಿಸಬೇಕು. ತಾತ್ವಿಕವಾಗಿ ಇದಕ್ಕೆ ಮುಖ್ಯ ಪ್ರೇರಣೆ ಎಂದರೆ, ಯಕ್ಷಗಾನ ಪ್ರಸಂಗಗಳಲ್ಲಿ ಅಲ್ಲಲ್ಲಿ ಕವಿ ಪದ್ಯಗಳು. ಹೆಚ್ಚಿನ ಯಕ್ಷಗಾನ ವಿಮರ್ಶಕರ ಪ್ರಕಾರ ಈ ಕವಿಪದ್ಯಗಳು ಪಾತ್ರದ ಪರಕಾಯ ಪ್ರವೇಶವನ್ನು ಭಂಗಿಸಿ, ಹೊರನಿಂತ ಕಲ್ಪನೆಯನ್ನು ತರುತ್ತದೆ ಎಂಬುದಾಗಿದೆ.

ಉದಾಹರಣೆಗೆ ಸುಭದ್ರಾ ಕಲ್ಯಾಣದಲ್ಲಿ

**ನರನಿಂತು ಮಳೆಗೆ ಮೈಸರಿಸಿ ನಡನಡುಗುತ್ತ**
**ಹರಿ ಮುರಾಂತಕ ಎನ್ನುತಿರಲು ॥**
**ಅರಿದಿತ್ತ ಮುರಹರನು ತರುಣಿಯರ ಮೇಳದ**
**ಲ್ಲಿರಲು ತನ್ನಲಿ ನಕ್ಕನಾಗ ॥**

ಎಂಬ ಈ ಕವಿ ಪದ್ಯದ ಮೂಲಕ ಒಂದು ದೃಶ್ಯವನ್ನು ಮತ್ತು ಪಾತ್ರದ ಸ್ವಭಾವ, ಚಲನೆ, ಚರ್ಯೆಗಳನ್ನು ಭಾಗವತ ವಿವರಿಸುತ್ತಾನೆ. ನನ್ನ ದೃಷ್ಠಿಯಲ್ಲಿ ಇದು ಯಾವುದೇ ತೊಡಕನ್ನು ಅಥವಾ ರಸಭಂಗವನ್ನು ಮಾಡಲಾರದು. ಬದಲಾಗಿ ಇದು ಯಕ್ಷಗಾನದ ಒಂದು ತಾಂತ್ರಿಕತೆಯಾಗಿದೆ. ಅಥವಾ ರಂಗತಂತ್ರವಾಗಿದೆ. ಅಲ್ಲದೆ ಇಂತಹ ಪದ್ಯಗಳು ಸನ್ನಿವೇಷದಿಂದ ಮುಂದಕ್ಕೆ ದಾಟಲು ಕವಿಗೆ, ಕಥೆಗೆ ನಟನೆಗೆ ಅನಿವಾರ್ಯ ಕೂಡಾ.

ಭಾರತೀಯ ಅನ್ಯರಂಗ ಪರಂಪರೆಯಲ್ಲೂ ಇಂತಹ ಉದಾಹರಣೆಗಳು ನಮಗೆ ಸಿಗುತ್ತದೆ.

ಒಂದು ನಾಟ್ಯ ಪರಂಪರೆಗೆ ಬೇಕಾದ, ಪಾತ್ರ ಪ್ರವೇಶ, ಆಗಮನ-ನಿರ್ಗಮನಗಳ ಸೂಚನೆ, ರಾಗ ತಾಳಗಳ ನಿರ್ದೇಶನ, ಇವೆಲ್ಲ ಅಂತರ್ಗತವಾಗಿರುವ ಪ್ರಸಂಗಗಳು ಹೆಚ್ಚು ರಂಗ ಧರ್ಮವನ್ನೆ ಪ್ರಕಟಿಸುತ್ತವೆ ಎಂದು ನನ್ನ ಅಭಿಪ್ರಾಯ. ಯಕ್ಷಗಾನದ ಅತ್ಯಂತ ಯಶಸ್ವೀ ರಂಗ ಪ್ರಯೋಗಗಳೂ ಇಂದು ಸಣ್ಣಪುಟ್ಟ ಬದಲಾವಣೆ ಮಾಡಿಕೊಂಡು ಕೂ ಪ್ರಸಂಗದ ನಿರ್ದೇಶನದಂತೆ ಯಶಸ್ವೀ ಪ್ರದರ್ಶನ ನಡೆಸುತ್ತಿರುವುದನ್ನು ನಾವಿಂದು ಕಾಣಬಹುದು.

ಹೆಚ್ಚಿನ ಪ್ರಸಂಗಗಳಲ್ಲಿ ರಂಗಕ್ಕೆ ಒಗ್ಗದ ಪದ್ಯಗಳಿವೆ. ಅನಗತ್ಯವಾಗಿ ಬೆಳದ ಸಂವಾದಗಳಿವೆ. ಅಭಿನಯಿಸುವುದಕ್ಕೆ ಬಾರದ ರಚನೆಗಳಿವೆ. ಆದರೆ ಇದೆಲ್ಲ ಕವಿಗಳ ದೋಷ ಇರಬಹುದು ಅಥವಾ ಕಾಲದ ಪ್ರಭಾವವಾಗಿರಬಹುದು. ಕಾಲಾಂತರದಲ್ಲಿ ಗುಣ ದೋಷವಾಗಿ, ದೋಷ ಗುಣವಾಗಿ ಕಾಣುವುದುಂಟು. ಇಡೀ ರಾತ್ರಿಯನ್ನ ಲಕ್ಷದಲ್ಲಿಟ್ಟುಕೊಂಡು ಬರೆದ ಪ್ರಸಂಗಗಳು, ಕಾಲಮಿತಿಯ ಇಂದಿನ ದಿನಗಳಲ್ಲಿ ಅನೇಕ ತೊಡಕನ್ನು ಸೃಷ್ಟಿಸಿರಬಹುದು. ವೇಗ, ಮನೋಭಾವ, ಪರಿಸರದ ಪ್ರಭಾವಗಳು ಸಹ ಪ್ರಸಂಗದ ಪ್ರದರ್ಶನದ ಮೇಲೆ ಘಾಢ ಪರಿಣಾಮ ತರುವುದನ್ನ ಗಮನಿಸಬಹುದು. ಅದಕ್ಕೆ ತಕ್ಕಂತೆ ಬದಲಾವಣೆ, ಸುಧಾರಣೆ ತರುವುದು ನಮ್ಮ ಅಗತ್ಯಕ್ಕಾಗಿ ಅನಿವಾರ್ಯ. ವಿದ್ವಾಂಸರು, ಕಲಾತಜ್ಞರು ಈ ನಿಟ್ಟಿನಲ್ಲಿ ಆಳವಾದ ಚರ್ಚೆ ಮತ್ತು ಒಳನೋಟ ಹರಿಸಬಹುದಾಗಿದೆ.

ಯಕ್ಷಗಾನ ಪ್ರಸಂಗಗಳಲ್ಲಿ ಇಂದು ಆಧುನಿಕ ವಿಷಯಗಳನ್ನು ಪ್ರಸ್ತುತ ಪಡಿಸುವ ಪ್ರಯತ್ನ ಕೂಡಾ ನಡೆದಿದೆ. ಇಂಥವು ಅನಗತ್ಯ ಎಂಬುದಕ್ಕಿಂತ ಯಕ್ಷರಂಗ ಮಾಧ್ಯಮಕ್ಕೆ ಹೊಂದುವ ಹಾಗೆ ಇವುಗಳ ರಚನೆ, ಪ್ರದರ್ಶನ ಇದ್ದರೆ, ರಂಗರಸಭಂಗವಾಗದಿರುವಂತಿದ್ದರೆ ಯಾವ ವಿಷಯವೂ ವಸ್ತು ವಾಗಬಲ್ಲದು. ಯಕ್ಷಗಾನ ಅಂಥಹ ಸ್ಥಿತಿಸ್ಥಾಪಕತ್ವ (Elasticity) ಹೊಂದಿರುವ ಮಾಧ್ಯಮವಾದ್ದರಿಂದ ಇದು ಸಾಧ್ಯವಾಗಬಲ್ಲದು. ಹೀಗೆ ಯಕ್ಷಗಾನ ಪ್ರಸಂಗ ಇಂದು ಒಂದು ವಿಸ್ತಾರವಾದ ಹರಹನ್ನ ಪಡೆದು, ಅಧ್ಯಯನ, ವಿಮರ್ಶೆಗಳ ಬೆಳಕಿನಲ್ಲಿ ಬೆಳೆಯಬೇಕಾದ ಸಾಹಿತ್ಯ ಪ್ರಕಾರವಾಗಿದೆ ಎಂಬುದು ನನ್ನ ಖಚಿತ ನಂಬಿಕೆಯಾಗಿದೆ.

ನಾನು ಈಗಾಗಲೇ ಪ್ರಸ್ತಾಪಿಸಿದಂತೆ, ಈ ಮಹತ್ತರ ಕೆಲಸಕ್ಕಾಗಿ ಕರ್ನಾಟಕ ಸರಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನ ಎಲ್ಲ ಯಕ್ಷಗಾನ ಪ್ರಿಯರೂ ಅಭಿನಂದಿಸಬೇಕಾಗಿದೆ. ಈ ಸಂಪಾದನಾ ಸಂಪುಟ ಇಡೀ ಯಕ್ಷಗಾನದ ರಂಗಭೂಮಿಗೆ ಹಲವಾರು ರೀತಿಯಲ್ಲಿ ಪ್ರಯೋಜನ ನೀಡಬಲ್ಲದು. ಪ್ರಮುಖವಾಗಿ ಯಕ್ಷಗಾನದಲ್ಲಿ ಈಗ ಎಲ್ಲರೂ ಎದುರಿಸುತ್ತಿರುವ ಸಮಸ್ಯೆ ಎಂದರೆ ಪ್ರಸಂಗ ಪುಸ್ತಕದ ಅಲಭ್ಯತೆ. ತೀರಾ ಮೊದಲು ಬೆಂಗಳೂರು ಹಾಗೂ ಮೈಸೂರುಗಳಲ್ಲಿ ಮುದ್ರಣವಾಗುತ್ತಿದ್ದ ಪ್ರಸಂಗ ಪುಸ್ತಕಗಳು, ಕಾಲಾಂತರದಲ್ಲಿ ಅದು ಕಡಿಮೆಯಾಗಲು, ಅದನ್ನು ಪರಿಷ್ಕರಿಸಿ, ಅಂದವಾಗಿ ಮುದ್ರಿಸುವ ಹೊಣೆಗಾರಿಕೆಯನ್ನು ಉಡುಪಿಯ ಶ್ರೀಕೃಷ್ಣ ಮುದ್ರಣಾಲಯ ಕೈಗೆತ್ತಿಕೊಂಡು ನೂರಾರು ಪ್ರಸಂಗಗಳನ್ನು ಮುದ್ರಿಸಿದ್ದು ಈಗ ಇತಿಹಾಸ. ಈಗ ಅಲ್ಲಿಂದಲೂ ಹೊಸ ಮುದ್ರಣಗಳು ಬಂದ ಮಾಹಿತಿ ನನಗಿಲ್ಲ. ಆದರೆ ಬೆಂಗಳೂರು ಮತ್ತು ಮೈಸೂರಿನ ಹಾಗೂ ಉಡುಪಿಯ ಪ್ರಕಾಶಕರನ್ನು ಖಂಡಿತಾ ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇವರ ಪ್ರಯತ್ನ ಮತ್ತು ಕಲೆಯ ಮೇಲಿನ ಪ್ರೇಮದಿಂದ ಈ ರಂಗಭೂಮಿಗೆ ಪ್ರಸಂಗ ಪುಸ್ತಕದ ವಿಷಯದಲ್ಲಿ ಆದ ಉಪಕಾರ ಹಾಗೂ ಕೊಡುಗೆಯನ್ನು ಮರೆಯುವಂತಿಲ್ಲ.

ಪ್ರಸಂಗ ಸಾಹಿತ್ಯ 10 ಸಂಪುಟಗಳಲ್ಲಿ ಬರಲಿದ್ದು ಒಂದು ಸಂಪುಟಕ್ಕೆ ನನ್ನನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯ್ಕೆ ಮಾಡಿದ್ದಕ್ಕೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ. ಯಕ್ಷಗಾನಕ್ಕೆ ಸಿಕ್ಕಿದ ಅಪೂರ್ವ ಅವಕಾಶದಲ್ಲಿ ನನ್ನನ್ನು ತೊಡಗಿಸಿಕೊಳ್ಳಲು ಆಗಿರುವುದು ಹಾಗೂ ಈ ಕಾರಣದಿಂದ ಒಂದು ಅಧ್ಯಯನ ದೃಷ್ಟಿಯಲ್ಲಿ ಪ್ರಸಂಗ ಸಾಹಿತ್ಯವನ್ನು ನೋಡುವ ಅವಕಾಶ ದೊರಕಿದ್ದು ನನ್ನ ಭಾಗ್ಯವೆಂದೇ ಭಾವಿಸಿದ್ದೇನೆ. ಘನ ಇಲಾಖೆಯ ಆಸಕ್ತಿ, ಅನೇಕ ಹಿರಿಯರ ಪ್ರೋತ್ಸಾಹ ನಾನೀ ಸಾಹಸಕ್ಕೆ ಇಳಿಯಲು ಅನುವು ಮಾಡಿಕೊಟ್ಟಿದೆ. ಮುಖ್ಯವಾಗಿ ಸಿದ್ದಾಪುರದ ಪ್ರೊ ಎಂ.ಎ. ಹೆಗಡೆಯವರ ಸಂಪೂರ್ಣ ಸಹಕಾರದಿಂದ ಇದು ನನಗೆ ಸಾಕಾರವಾಯ್ತು ಎಂದರೆ ತಪ್ಪಿಲ್ಲ. ಛಂದಸ್ಸು, ಭಾಷಾಸೌಂದರ್ಯ, ಪ್ರಸಂಗ ರಚನೆಗೆ ಸಂಬಂಧಿಸಿದ ಪ್ರಾಮುಖ್ಯ ಅಂಶಗಳನ್ನು ಅವರು ನನಗೆ ಮನವರಿಕೆ ಮಾಡಕೊಡದಿದ್ದರೆ, ಬಹುಷ ಈ ಕೆಲಸ ನನ್ನಿಂದ ಅಸಾಧ್ಯವಾಗುತ್ತಿತ್ತು. ಅಲ್ಲದೇ ಶ್ರೀ ಹೊಸ್ತೋಟ ಮಂಜುನಾಥ ಭಾಗವತರು ಕೂಡಾ ಈ ಸಂದರ್ಭದಲ್ಲಿ ನನ್ನ ಬೆನ್ನುತಟ್ಟಿ ಪ್ರೋತ್ಸಾಹಿಸಿ, ಸಮಾಲೋಚಿಸಿ, ಮಾರ್ಗದರ್ಶನ ಮಾಡಿದ್ದಾರೆ. ಅಶ್ವಮೇಧಯಾಗ ಪ್ರಸಂಗದಲ್ಲಿ ರಾಗ ತಾಳಗಳನ್ನು [ಮೂಲಪ್ರತಿಯಲ್ಲಿ ಇಲ್ಲದಿರುವೆಡೆ] ಅವರ ಸಹಾಯದಿಂದ ಸೇರಿಸಿದ್ದೇನೆ. ನಮ್ಮ ಮನೆಗೆ ಬಂದು ನನ್ನ ಸಂಪಾದನೆಂು ಕೆಲಸಕ್ಕೆ ಮಾರ್ಗದರ್ಶನ ಮಾಡಿದ್ದಾರೆ. ಈ ಇಬ್ಬರ ಸಹೃದಯತೆಗೆ, ಸಹಾಯಕ್ಕೆ ನಾನು ಸದಾ ಋಣಿಯಾಗಿದ್ದೇನೆ.

ಇನ್ನು ಕವಿ ವಿಚಾರವಾಗಿ ಡಾ ಪಾದೇಕಲ್ಲು ವಿಷ್ಣು ಭಟ್ಟರ ಸಹಕಾರ ಮನನೀಯ. ನಾನು ಬರೆದ ಕವಿ ಚರಿತ್ರೆ ಹೆಚ್ಚಿನದೆಲ್ಲ ಅವರ ಸಂಗ್ರಹದಿಂದ ಆಯ್ದ ವಿಚಾರಗಳು. ಅವರು ತಮ್ಮ ಮಹಾಪ್ರಬಂಧವನ್ನೇ ನನಗೆ ಓದಲು ಕೊಟ್ಟಿದ್ದು ಈ ಸಂದರ್ಭದಲ್ಲಿ ಬಹಳ

ಅನುಕೂಲವಾಯ್ತು. ಹಾಗೇ ಡಾ ಎಸ್.ಡಿ. ಹೆಗಡೆ ಹೊನ್ನಾವರ ಇವರ ಮಹಾಪ್ರಬಂಧ ಮತ್ತು ಸಂಪಾದನೆಗೆ ಪ್ರಸಂಗ ಪುಸ್ತಕ ನೀಡಿದ್ದು ಉಪಕಾರವಾಗಿದೆ. ಡಾ ರಾಘವ ನಂಬಿಯಾರ್, ಡಾ ಚಿನ್ನಪ್ಪಗೌಡ, ಶ್ರೀ ಎಂ.ಎಲ್. ಸಾಮಗ, ಡಾ. ಎಂ. ಪ್ರಭಾಕರ ಜೋಶಿ ಮುಂತಾದವರ ಮಾರ್ಗದರ್ಶನ, ಸಲಹೆಗಳು ನನಗೆ ಬಹಳ ಅನುಕೂಲಿಸಿ ಬಂದಿದೆ. ಅಲ್ಲದೇ ಪ್ರಸಂಗ ಪುಸ್ತಕ ದೊರಕಿಸಿದ ಆತ್ಮೀಯ ಮಿತ್ರ ಹಾಗೂ ಉತ್ತಮ ಮದ್ದಲೆವಾದಕರಾದ ಶ್ರೀ ಎ.ಪಿ. ಪಾಠಕ್ ಕಾರ್ಕಳ, ಹಿರಿಯರಾದ ಡಾ ಶಾಲಿನಿ ರಘುನಾಥ ಧಾರವಾಡ, ಶ್ರೀ ಗಂಗಾಧರ ಶಾಸ್ತ್ರಿ ನಾಜಗಾರ, ಡಾ ಜಿ.ಎಸ್. ಭಟ್ಟ್ ಸಾಗರ, ಶ್ರೀ ನಾ. ಕಾರಂತ ಪೆರಾಜೆ ಇವರಿಗೆಲ್ಲ ನಾನು ಋಣಿಯಾಗಿದ್ದೇನೆ. ಪ್ರಸಂಗ ಪುಸ್ತಕದ ಪ್ರೂಫ್ ನೋಡುವುದು ಹಾಗೂ ಇನ್ನಿತರ ಕೆಲಸಗಳಲ್ಲಿ ನನಗೆ ಚೆನ್ನಾಗಿ ನೆರವಾಗಿ ಸಹಕರಿಸಿದ ನಮ್ಮ ಮಂಡಳಿಯ ಭಾಗವತರಾದ ಶ್ರೀ ಅನಂತ ಹೆಗಡೆ ದಂತಳಿಕೆ, ಕಲಾಕೇಂದ್ರದ ವಿದ್ಯಾರ್ಥಿಗಳಾದ ಶ್ರೀ ಈಶ್ವರಭಟ್ಟ ಹಂಸಳ್ಳಿ, ರಾಘವೇಂದ್ರ ಹೆಗಡೆ ಇವರಿಗೆ ನಾನು ಕೃತಜ್ಞನಾಗಿದ್ದೇನೆ. ಅಂತೆಯೇ ನನ್ನ ತೀರ್ಥರೂಪರಾದ ಶ್ರೀ ಕೆರೆಮನೆ ಶಂಭು ಹೆಗಡೆಯವರಿಗೂ, ಹಿರಿಯ ವಿದ್ವಾಂಸರಾದ ಶ್ರೀ ಅಮೃತ ಸೋಮೇಶ್ವರರಿಗೂ ನಾನು ಅಭಾರಿಯಾಗಿದ್ದೇನೆ. ಈ ಸಂಪುಟವನ್ನು ಸಮಗ್ರವಾಗಿ ಪರಿಶೀಲಿಸಿ ಉಪಕರಿಸಿದ ಡಾ. ಕಬ್ಬಿನಾಲೆ ವಸಂತ ಭಾರದ್ವಾಜರಿಗೆ ನಾನು ಋಣಿಯಾಗಿದ್ದೇನೆ.

ಈ ಸಂಪಾದನೆಯ ವಿಷಯದಲ್ಲಿ ಹೇಳಬೇಕಾದ ಕೊನೆಯ ಮಾತೆಂದರೆ ಕವಿ ಪರಿಚಯದ ಕುರಿತು. ಯಕ್ಷಗಾನ ಕವಿಗಳ ಕುರಿತು ಸಿಗುವ ಮಾಹಿತಿ ತೀರಾ ಕಡಿಮೆಯೇ. ಹಾಗಾಗಿ ನಾನೀಗ ಸಂಪಾದಿಸಿದ 12 ಪ್ರಸಂಗಗಳಲ್ಲಿ ನಿಖರವಾಗಿ ಪ್ರಸಂಗ ಕರ್ತರ ಹೆಸರು ತಿಳಿಯುವುದು ಒಂಬತ್ತು ಕವಿಗಳದ್ದು ಮಾತ್ರ. ಅದರಲ್ಲೂ ರಾವಣೋದ್ಭವ ಬರೆದ, ನಗಿರೆಯ ಸುಬ್ಬ, ಮಾರಿಮುಖನ ಕಾಳಗ ಬರೆದ ಕವಿ ಪರಮೇಶ್ವರ ಮೈರಾವಣ ಕಾಳಗ ಬರೆದ ಕೆಳದಿಯವೆಂಕಟ, ರಾವಣ ವಧೆಯ ಕರ್ತು ಕಾಸರಗೋಡು ಸುಬ್ರಾಯ ಇವರ ಕುರಿತಾದ ಮಾಹಿತಿ ಏನೂ ನನಗೆ ಲಭ್ಯವಾಗಲಿಲ್ಲ. ಇನ್ನು ಕಾಲನೇಮಿ ಕಾಳಗ, ಇಂದ್ರಜಿತು ಕಾಳಗ, ಅಶ್ವಮೇಧಯಾಗ ಇವುಗಳನ್ನು ಬರೆದ ಕವಿ ಯಾರೆಂದೇ ತಿಳಿದಿಲ್ಲ ! ಅಶ್ವಮೇಧಯಾಗ ಬರೆದ ಕವಿ ಮಂಗಲ ಪದ್ಯದಲ್ಲಿ ಕೆಕ್ಕಾರವಾಸಗೆ ರಕ್ಕಸಾಂತಕನಿಗೆ ಎಂದು ಹೇಳಿರುವುದರಿಂದ ಈತ ಉತ್ತರ ಕನ್ನಡದ ಹೊನ್ನಾವರ ತಾಲೂಕಿನ ಕೆಕ್ಕಾರಿನವನು ಎಂದು ತಿಳಿಯಬಹುದು. ಇದರ ಬಗ್ಗೆ ಮತ್ತೆ ಯಾವುದೇ ಉಲ್ಲೇಖವೂ ದೊರಕಲಿಲ್ಲ. ಹೀಗೆ ಅಜ್ಞಾತವಾಗಿರುವ ಕವಿಗಳ ಬಗ್ಗೆ ಮುಂದೆ ಪ್ರಯತ್ನಪಟ್ಟು ಮೂಲಚೂಲ ಶೋಧಿಸಬೇಕಾದ ಅಗತ್ಯ ಇದೆ. ಇದರಿಂದ ಈ ಅಮೂಲ್ಯ ಕೊಡುಗೆ ನೀಡಿದ ಅವರಿಗೆ ನಾವು ಕೃತಜ್ಞತೆ ಸಮರ್ಪಿಸಿದಂತಾಗುತ್ತದೆ.

ಹೆಚ್ಚಿನ ಆಸಕ್ತಿ, ಪ್ರೋತ್ಸಾಹ ನೀಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಶ್ರೀಮತಿ ಉಷಾಗಣೇಶ್, ನಿರ್ದೇಶಕ ಶ್ರೀ ಮುದ್ದುಮೋಹನ್ ಅವರಿಗೂ, ನಿರಂತರ ಈ ಕಾರ್ಯದಲ್ಲಿ ತೊಡಗಿಸಿಕೊಂಡ ಜಂಟಿ ನಿರ್ದೇಶಕ ಹಾಗೂ ಸಾಹಿತಿಗಳಾದ ಶ್ರೀ ಕಾ.ತ. ಚಿಕ್ಕಣ್ಣ ಮತ್ತು ಮಾನ್ಯ ರಜಿಸ್ಟ್ರಾರ್ ಶ್ರೀ ಎಂ. ಮುನಿರಾಜು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇವರಿಗೆಲ್ಲ ಅನಂತಾನಂತ ಧನ್ಯವಾದಗಳು. ಈ ಸಂಪುಟವನ್ನ ಅಂದವಾಗಿ ಮುದ್ರಿಸಿಕೊಟ್ಟ ಗೀತಾಂಜಲಿ ಗ್ರಾಫಿಕ್ಸ್‌ನ ಮಾಲೀಕರಾದ ನಾಗಸುಂದರ್ ಹಾಗೂ ಸಿಬ್ಬಂದಿರ್ಗದವರಿಗೆ ನಾನು ಆಭಾರಿಯಾಗಿದ್ದೇನೆ.

***ಕೆರೆಮನೆ ಶಿವಾನಂದ ಹೆಗಡೆ***

# ಕಥಾಸಾರ

## 1. ರಾವಣೋದ್ಭವ

**ಕಥಾಸಾರ:**

ರಾವಣನನ್ನು ಕೊಂದು ಸೀತಾ ಸಮೇತನಾಗಿ ಸಾಕೇತಕ್ಕೆ ಬಂದು ಶ್ರೀರಾಮ ಪಟ್ಟಾಭಿಷಿಕ್ತನಾಗಿರುವಾಗ, ಪೂಜ್ಯ ಅಗಸ್ತ್ಯರು ರಾಮನಿಗೆ ರಾವಣನ ಉದ್ಭವದ ವೃತ್ತಾಂತವನ್ನು ಹೇಳಿದರು.

ಪೂರ್ವದಲ್ಲಿ ದೈತ್ಯ ವಿದ್ಯುತ್ಕೇಶಿ ಎಂಬ ಖಳನಿಗೆ ಮಗುವೊಂದು ಜನಿಸಿತು. ಹುಟ್ಟಿದ ಶಿಶುವನ್ನು ಅವನ ತಾಯಿ ಅರಣ್ಯದಲ್ಲಿ ಅನಾಥವಾಗಿ ಬಿಟ್ಟು ಹೋದ ಸಂದರ್ಭದಲ್ಲಿ ಗಗನದಲ್ಲಿ ಸಂಚರಿಸುವ ಪಾರ್ವತಿ ಪರಮೇಶ್ವರರು ಮಗುವನ್ನು ಕಂಡು ಕರುಣೆಯಿಂದ ಸುಕೇಶಿ ಎಂದು ಹೆಸರಿಟ್ಟು ಸಲಹುವರು. ಇವನು ಯೌವನವಂತನಾಗಿ ಗಂಧರ್ವ ಸ್ತ್ರೀಯಲ್ಲಿ ಮಾಲಿ, ಮಾಲ್ಯವಂತ ಮತ್ತು ಸುಮಾಲಿ ಎಂಬ ಮಕ್ಕಳನ್ನು ಪಡೆದು ವಿಶ್ವಕರ್ಮನ ಪರವಾಗಿದ್ದ ಲಂಕೆಯಲ್ಲಿ ನೆಲೆಸಿದ. ಬಲಗರ್ವಿತರಾದ ಈ ಖೂಳ ರಕ್ಕಸರು ದೇವತೆಗಳ ಮೇಲೆ ದಾಳಿಯಿಟ್ಟು ಅವರನ್ನು ಸೋಲಿಸಲು ಅವರೆಲ್ಲ ಶಂಕರನ ಮೊರೆ ಹೋಗುವರು. ಶಂಕರನು ನಿಮ್ಮ ಕಷ್ಟವನ್ನು ಶ್ರೀಹರಿ ಪರಿಹರಿಸುವನು ಎನಲು, ದೇವತೆಗಳು ಲಕ್ಷ್ಮೀಕಾಂತನನ್ನು ಕಂಡು ಬಿನ್ನೈಸುವರು. ಶ್ರೀಹರಿ ದೇವತೆಗಳಿಗೆ ಭರವಸೆ ನೀಡಿ ಭೂಭಾರ ಇಳಿಸುವೆನೆಂದು ತಿಳಿಸುವನು. ಇದನ್ನು ಅರಿತ ಮಾಲ್ಯವಂತನು ಮಾಲಿ ಎಂಬ ತನ್ನಣ್ಣನಿಗೆ ದೇವತೆಗಳ ಹಾಗೂ ಶ್ರೀಮನ್ನಾರಾಯಣನ ಸಂಕಲ್ಪ ತಿಳಿಸುತ್ತಾನೆ. ಇದರಿಂದ ಕೋಪಗೊಂಡು, ಈ ದೈತ್ಯ ಸಹೋದರರು ಪುನಃ ದೇವತೆಗಳ ಮೇಲೆ ದಾಳಿ ಮಾಡಿ ಅವರನ್ನ ಸೋಲಿಸಿದರು. ಸೋತ ದೇವತೆಗಳು  ಶ್ರೀಹರಿಗೆ ಶರಣಾಗಲು ಹರಿ ಮೈದೋರಿ ಈ ದುರುಳರ ಮೇಲೆ ಚಕ್ರವನ್ನೆಸಗಿ ಅವರನ್ನು ಸಂಹರಿಸಿದನು. ಅಳಿದುಳಿದ ರಕ್ಕಸರನ್ನು ಕೂಡಿಕೊಂಡು ಸುಮಾಲಿ ಮಾಲ್ಯವಂತರು ಲಂಕೆಯಿಂದ ಪಾತಾಳಕ್ಕೆ ಪಲಾಯನಗೈದರು.

ಬ್ರಹ್ಮಮಾನಸ ಪುತ್ರ ಪುಲಸ್ತ್ಯನು ತಪೋನಿರತನಾಗಿರಲು ಅಲ್ಲೇ ಹತ್ತಿರದಲ್ಲಿರುವ ಸರೋವರದಲಿ್ಲ ಜಲಕೇಳಿಗೆ ಬರುವ ಅಪ್ಸರೆಯರಿಂದ ತನಗೆ ತಪೋಭಂಗವಾಗದಿರಲೆಂದು ಆ ಸರೋವರದಲ್ಲಿ ಮಿಂದವರು ಗರ್ಭಿಣಿಯಾಗಲೆಂದು ಶಾಪಕೊಟ್ಟಿದ್ದು, ಇದನ್ನರಿಯದ ತೃಣಬಿಂದು ಋಷಿಯ ಕುವರಿ ಗೋ ಎಂಬಳು ಅಲ್ಲಿ ಮಿಂದು ಗರ್ಭವತಿಯಾಗುವಳು. ನಿರ್ದೋಶಿಯಾದ ಇವಳನ್ನು ವರಿಸಬೇಕೆಂದು   ತೃಣಬಿಂದು ಪ್ರಾರ್ಥಿಸಲು ದಾರಿಗಾಣದೇ ಪುಲಸ್ತ್ಯನು ಅವಳನ್ನು ಮಡದಿಯಾಗಿ ಸ್ವೀಕರಿಸುವನು. ಅವಳಿಗೆ ಜನಿಸಿದ ಮಗನಿಗೆ ವಿಶ್ರವಸು ಎಂದು ನಾಮಕರಣ ಮಾಡಿದ. ಕಾಲಕ್ರಮದಲ್ಲಿ ಭಾರದ್ವಜರ ಮಗಳು ದೇವವರ್ಣಿನಿಯೊಡನೆ ಇವನ ವಿವಾಹ ನೆರವೇರಿತು. ವಿಶ್ರವಸುವು ಈ ದೇವವರ್ಣಿನಿಯಲ್ಲಿ ವೈಶ್ರವಣನೆಂಬ ಮಗನನ್ನು ಪಡೆದನು. ವೈಶ್ರವಣು ಘನ ತಪಸ್ಸಿನಿಂದ ಬ್ರಹ್ಮ ದೇವನನ್ನು ಒಲಿಸಿಕೊಂಡ ಅವನಿಂದ ದಿಕ್ಪಾಲತ್ವವನ್ನು, ಪುಷ್ಪಕ ವಿಮಾನವನ್ನು ಪಡೆದ. ಆಮೇಲೆ ತಂದೆಯ ನಿರ್ದೇಶನದಂತೆ ಲಂಕೆಯಲ್ಲಿ ವಾಸ ಮಾಡಿಕೊಂಡನು. ಒಂದು ದಿನ ಪುಷ್ಪಕವನ್ನೇರಿ ತನ್ನ ತಂದೆಯನ್ನು ಕಾಣಲು ಬರುತ್ತಿರುವಾಗ ಸುಮಾಲಿ ಮತ್ತು ಮಾಲ್ಯವಂತರು ಕುಬೇರನ ವೈಭವವನ್ನು ಕಂಡು ಕರುಬಿದರು. ಒಂದು ಕಾಲಕ್ಕೆ ತಮ್ಮದಾಗಿದ್ದ ಲಂಕೆ ಈಗ ಕುಬೇರನಲ್ಲಿ ಸೇರಿ ಹೋಗಿದ್ದನ್ನು ಸಹಿಸಲಾಗಲಿಲ್ಲ. ಈ ವಿಷಯದಲ್ಲಿ ಸುಮಾಲಿಗೆ ಮಾಲ್ಯವಂತ ಹೇಳಿದ ಮಾತನ್ನು ಕೇಳಿ ತಮ್ಮನಿಗೆ ಸವಾಧಾನವನ್ನರುಹಿ ಸಾವಧಾನದಿಂದ ಕಾರ್ಯಸಾಧಿಸೋಣ ಎಂದು ಹೇಳುತ್ತಾನೆ. ಅಂತೆಯೇ ತನ್ನ ಮಗಳಾದ ಕೈಕಸೆಗೆ, ದಾನವಕುಲದ ಉದ್ಧಾರಕ್ಕಾಗಿ ನೀನು ಹೇಗಾದರೂ ಮಾಡಿ ವಿಶ್ರವಸುವನ್ನ ಒಲಿಸಿ ಅವನಿಂದ ಸಂತಾನ ಪಡೆ ಎಂದು ನಿಯೋಜಿಸಲು, ಸಂತಸಗೊಂಡ ಕೈಕಸೆ ಅದಕ್ಕನುವಾಗಿ ವಿಶ್ರವಸುವಿನ ಎದುರು ವನಪುವಯ್ಯರದಿಂದ ಎರಗಿ ಅವನನ್ನು ಒಲಿಸಿಕೊಂಡು ಅವನಿಂದ ಸಂತಾನ ಭಿಕ್ಷೆ ಬೇಡುತ್ತಾಳೆ. ಸುಜ್ಞಾನದಿಂದ ಎಲ್ಲ ತಿಳಿದು ಮುನಿ ಅವಳನ್ನು ಕೂಡಲು ಅವಳಿಗೆ ರಾವಣ, ಕುಂಭಕರ್ಣ ಜನಿಸಿದರು. ಅಂತೆಯೆ ನಾನಾ ಉತ್ಪಾತಗಳು ತೋರಿದವು. ಹರಿಭಕ್ತ ವಿಭಿಷಣನ ಜನನವೂ ಆಯ್ತು. ಶುರ್ಪನಖಿ ಎಂಬ ಹೆಣ್ಣು ಮಗುವನ್ನು ಸಹ ಕೈಕಸೆ ಹೆತ್ತಳು.

ರಾವಣ ಕುಂಭಕರ್ಣರು ಸಾದು ಸಜ್ಜನರಿಗೆ ಉಪಟಳ ಕೊಡಲು ಆರಂಭಿಸಿದರು. ಕೈಕಸೆ ತನ್ನ ಮಕ್ಕಳಾದ ರಾವಣ, ಕುಂಭಕರ್ಣ, ವಿಭೀಷಣರನ್ನು ಕರೆದು ಬ್ರಹ್ಮನನ್ನು ಮೆಚ್ಚಿಸಿ ವರಪಡೆವಂತೆ ಸೂಚಿಸಿದಳು. ಅಂತೆಯೇ ಮೂವರೂ ಘೋರ ತಪವಾಚರಿಸಿ ಬ್ರಹ್ಮನನ್ನು ಮೆಚ್ಚಿಸಿದರು. ರಾವಣ ತನಗೆ ಯಾರಿಂದಲೂ ಸೋಲು ಬರದಂತೆ ವರವನ್ನು ಪಡೆಯಲು ದೇವತೆಗಳು ಭಯಗೊಂಡರು ಇದರಿಂದ ಮುಂದೆ ಲೋಕಕ್ಕೇ ಗಂಡಾಂತರವೆಂದರಿತು ದೇವತೆಗಳು ಶಾರದೆಯನ್ನ ಪ್ರಾರ್ಥಿಸಿ, ಮುಂದೆ ಕುಂಭಕರ್ಣ ವರವ ಪಡೆವ ಸಮಯ ನೀನು ರಕ್ಷಿಸಬೇಕೆನಲು ಶಾರದೆ, ಆತ ವರವ ಕೇಳುವ ಸಮಯದಿ ಅವನ ನಾಲಿಗೆಯಲ್ಲಿ ನೆಲಸಿ ಉಚಿತವಾದ ವರವನ್ನೇ ಬೇಡುವಂತೆ ಮಾಡುವೆನೆಂದು ಅಭಯ ನೀಡುತ್ತಾಳೆ. ಅಂತೆಯೇ ಅವನು ವರವನ್ನು ಬೇಡುವ ಸಮಯ ಬಂದಾಗ ದೀರ್ಘ ನಿದ್ರೆಯ ವರ ಪಡೆಯುವಂತಾಗುತ್ತದೆ. ವಿಭೀಷಣನು ಸತ್ಸಂಗ, ವನಜನಾಭನ ಧ್ಯಾನ ಮತ್ತು ಸುಜ್ಞಾನವನ್ನು ಬೇಡುತ್ತಾನೆ.

ಮೂವರೂ ವರ ಪಡೆದ ಸಂಗತಿ ತಿಳಿದು ಸುಮಾಲಿ ಮಾಲ್ಯವಂತ ಮಾರೀಚ ಮುಂತಾದ ದೈತ್ಯರು ರಕ್ಕಸರನ್ನೆಲ್ಲ ಒಗ್ಗೂಡಿಸಿ ತನ್ನವರ ಸಲಹೆಯಂತೆ ವೈಶ್ರವಣನಲ್ಲಿಗೆ ಪ್ರಹಸ್ತವನ್ನು ಕಳಿಸಿ ಲಂಕೆಯ ಅಧಿಪತ್ಯ ತನಗೆ ಬಿಡುವಂತೆ ಕೇಳಲು, ಬೇರೆ ದಾರಿತಿಳಿಯದೇ, ಅದಕ್ಕೊಪ್ಪಿ ಕುಬೇರ ಲಂಕೆಯನ್ನು ತ್ಯಜಿಸುತ್ತಾನೆ. ತಂದೆಯಲ್ಲಿ ಮುಂದೆ ತನಗೆ ಗತಿಯೇನೆಂದು ಪ್ರಶ್ನಿಸಲು, ವಿಶ್ರವಸು ಕುಬೇರನಿಗೆ ಉತ್ತರ ದಿಕ್ಕಿನ ಆಧಿಪತ್ಯವನ್ನು ಕೊಡುತ್ತಾನೆ. ಇತ್ತ ರಾವಣ ಲಂಕೆಯ ಆಧಿಪತ್ಯ ವಹಿಸಿಕೊಂಡಿರಲು, ತಂಗಿ ಶೂರ್ಪನಖಿ ಅಣ್ಣನಲ್ಲಿ ತನಗೆ ಮದುವೆ ಮಾಡುವಂತೆ ವಿನಂತಿಸಲು ರಾವಣ ಮಾವ ಮಾರೀಚನ ಮೂಲಕ ವಿದ್ಯುಜಿಹ್ವನೆಂಬುವನನ್ನು ಒಡಂಬಡಿಸಿ ಮದುವೆ ಮಾಡಿಸುವರು. ಇವಳ ವಿಕಾರ ರೂಪವನ್ನು ನೋಡಿ ವಿದ್ಯುಜಿಹ್ವ ಮೂರ್ಛಿತನಾಗುವನು. ಆದರೂ ಬಿಡದೇ ಅವನನ್ನು ಶೂರ್ಪನಖಿ ಮದುವೆಯಾಗುವಳು.

ಇತ್ತ ಮಯನೆಂಬ ದಾನವ ಶಿಲ್ಪಿ (ಹೇಮ ಎಂಬ) ಅಪ್ಸರೆಯಲ್ಲಿ ಪಡೆದ ಮಗಳಾದ ಮಂಡೋದರಿ ರಾವಣರ ಮದುವೆ ವೈಭವದಲ್ಲಿ ನಡೆಯುತ್ತದೆ. ದಶಕಂಠ ಸಂಭ್ರಮದಲ್ಲಿ ಲಂಕೆಯನ್ನಾಳುತ್ತ ಒಂದು ದಿನ ವಿಶ್ವವಿಜಯಕ್ಕೆ ಹೊರಟು ಸುರಪರನ್ನು ಕಂಗೆಡಿಸಿ, ಅಣ್ಣ ಕುಬೇರನಿಂದ ಪುಷ್ಪಕವಿಮಾನವನ್ನು ಸೆಳೆದು ಧರೆಯಲ್ಲಿ ತಿರುಗಾಡುತ್ತಿರಲು ಒಂದು ಕಡೆ ಪುಷ್ಪಕ ಮುಂದೆ ಸಾಗದೇ ಸ್ಥಬ್ಧವಾಗಲು ವಿಚಾರಿಸಿದಾಗ ಅದು ಶಿವ ಪಾರ್ವತಿಯರು ವಾಸಿಸುವ ಬೆಟ್ಟ ಎಂದು ತಿಳಿದು ಬಂದಾಗ ಆ ಬೆಟ್ಟವನ್ನೇ ತನ್ನ ಕೈಯಿಂದ ಎತ್ತಲು ಉದ್ಯುಕ್ತನಾಗಲು, ಪಾರ್ವತಿ ಕಂಗೆಡುತ್ತಾಳೆ. ಹರನು ಗಿರಿಜೆಗೆ ಸಮಾಧಾನ ಹೇಳಿ ರಾವಣನ ವೃತ್ತಾಂತ ತಿಳಿಸಿ ಪರ್ವತವನ್ನು ಹೆಬ್ಬೆರಳಿಂದ ಒತ್ತಲು, ಅದರಡಿಯಲ್ಲಿ ದಶಕಂಠನ ಕೈಗಳು ಸಿಕ್ಕಲು ಒಂದೇ ಸಮನೆ ಆತ ಹರನನ್ನು ಸ್ತುತಿಸುತ್ತಾನೆ. ಸಂತಸಗೊಂಡ ಶಿವ ಅವನನ್ನು ಅನುಗ್ರಹಿಸಿ ಚಂದ್ರಹಾಸವೆಂಬ ಆಯುಧವನ್ನು ಕೊಟ್ಟು ಹರಸುತ್ತಾನೆ.

ಬೃಹಸ್ಪತಿಯ ಮಗ ಕುಶಧ್ವಜ. ಅವನ ಮಗಳಾದ, ವೇದವತಿ ಎಂಬ ಕನ್ಯೆಯು ಶ್ರೀ ಹರಿಯನ್ನು ಸೇರಬೇಕೆಂದು ತಪವಾಚರಿಸುತ್ತಿರಲು ಅವಳನ್ನು ಬಲಾತ್ಕರಿಸಲು ಮುಂದಾಗಿ ಹಿಡಿದೆಳೆದ ರಾವಣನನ್ನು ಶಪಿಸಿ ಆಕೆ ತನ್ನ ದೇಹವನ್ನು ಅಗ್ನಿಗರ್ಪಿಸುವಳು. ಶಾಪವನ್ನು ಧರಿಸಿ ಅವಮಾನಿತನಾಗಿ ಪುರವನ್ನು ಸೇರುತ್ತಾನೆ.

ಮುಂದೆ ಪ್ರಹಸ್ತಾದಿಗಳನ್ನು ಕರೆದು ಕಾರ್ತವೀರ್ಯಾಜುನನನ್ನು ಗೆಲ್ಲಲು ಸಂಕಲ್ಪಿಸಿ ಸೇನೆಯನ್ನು ಸಜ್ಜುಗೊಳಿಸುತ್ತಾನೆ.

ಇತ್ತ ತನ್ನ ಸಖಿಯರೊಡನೆ ಜಲಕೇಳಿಯಾಡುತ್ತಿರುವ ಕಾರ್ತಿವೀರ್ಯನು ತನ್ನ ಐನೂರು ತೋಳನ್ನೇ ಅಡ್ಡಗಟ್ಟಿ ನರ್ಮದೆಯಲ್ಲಿ ಜಲಕೇಳಿಯಾಡಿ, ಕೈ ತೆಗೆದಾಗ ಆ ನೀರಿನ ರಭಸಕ್ಕೆ ಅದಾಗಲೇ ಸೈನ್ಯ ಸಮೇತ ಮಾಹಿಶ್ಮತಿಗೆ ಬಂದು ಅಲ್ಲಿಂದ ನರ್ಮದೆ ನದಿ ತಟದಲ್ಲಿ ಶಂಕರನನ್ನು ಪೂಜಿಸುತ್ತಿರುವ ರಾವಣ ಮತ್ತು ಅವನ ಸೈನ್ಯ ನೀರಿನ ಪ್ರವಾಹಕ್ಕೆ ಅಲ್ಲೋಲಕಲ್ಲೋಲವಾಗುತ್ತದೆ. ಇದರಿಂದ ಕೋಪಗೊಂಡ ರಾವಣ ಕಾರ್ತವೀರ್ಯನೊಡನೆ ಯುದ್ಧಕ್ಕಿಳಿದು ಸೆರೆಯಾಳಾಗುತ್ತಾನೆ. ಇದನ್ನು ತಿಳಿದು ಕೈಕಸೆ, ಪೌಲಸ್ತ್ಯರಲ್ಲಿ ವಿನಂತಿಸಲು ಅವರು ಬಂದು ತನ್ನ ಮೊಮ್ಮಗನನ್ನು ಬಿಡುವಂತೆ ರಾವಣನನ್ನು ಸೆರೆಮುಕ್ತಗೊಳಿಸಿದಲ್ಲಿಗೆ ಪ್ರಸಂಗಕ್ಕೆ ಮುಕ್ತಾಯವಾಗುತ್ತದೆ.

***ರಾವಣೋದ್ಭವ – ನಗರೆಯ ಸುಬ್ಬ***

ನಗರೆಯ ಸುಬ್ರಹ್ಮಣ್ಯ : 16ನೇ ಶತಮಾನದವ ಹಿಂದೆ ನಗಿರೆ (ಅಥವಾ ನಗರೆ) ಎನಿಸಿದ ಗೇರಸೊಪ್ಪ ಊರಿನವನು. ಇದು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಒಂದು ಊರು. ಇವನು ಬರೆದ ಶಂಭರಾಸುರ ಕಾಳಗದಲ್ಲಿ ತಾನು ವಿಠ್ಠಲ ಮತ್ತು ಗೌರಿಯರ ಮಗನಾದ ಸುಬ್ರಹ್ಮಣ್ಯ ಎಂದು ಹೇಳಿಕೊಂಡಿದ್ದಾನೆ. ನಗರೆಯ ವೆಂಕಟರಮಣ ದೇವರನ್ನು ಆತ ಸ್ತುತಿಸಿದ್ದಾನೆ.

***ರಾವಣೋದ್ಭವ ಸಮೀಕ್ಷೆ***

ರಾವಣೋದ್ಭವವು ಯಕ್ಷಗಾನದ ಪ್ರಾಚೀನ ಪ್ರಸಂಗಗಳಲ್ಲಿ ಒಂದು. ಆದರೆ ಕವಿಯ ಕಾಲಕ್ಕಾಗಲೇ ಯಕ್ಷಗಾನವು ಸಿದ್ಧರೂಪವನ್ನು ತಳೆದದ್ದು ಸ್ಪಷ್ಟವಾಗಿದೆ. ಹಾಗಾಗಿ ರಂಗದ ಅನುಕೂಲ ಅಗತ್ಯಗಳನ್ನು ಗಮನಿಸಿ ಕವಿ ಪ್ರಸಂಗವನ್ನು ರಚಿಸಿದ್ದಾನೆ. ಆಶ್ಚರ್ಯಕರವೆಂಬಂತೆ ರಂಗಪ್ರಜ್ಞೆಯನ್ನು ಪ್ರದರ್ಶಿಸುತ್ತಾನೆ. ಮಟ್ಟುಗಳ ಬಳಕೆಯಲ್ಲಾಗಲಿ ತಾಳಗಳ ವೈವಿಧ್ಯವನ್ನು ಯಥೋಚಿತವಾಗಿ ಬಳಸುವಲ್ಲಾಗಲಿ ಕವಿಯು ಮೇಲ್ಮಟ್ಟದವನೆಂಬುದನ್ನು ತೋರಿಸಿಕೊಡುತ್ತಾನೆ.

ಶ್ರೀರಾಮನ ಓಲಗದಿಂದ ಕಥೆ ಪ್ರಾರಂಭವಾಗುವುದಾದರೂ ಕವಿಯು ಅದನ್ನು ಪೀಠಿಕೆಯ ರೂಪದಲ್ಲಿಯೇ ಹೇಳುತ್ತಾನೆ. ಪೀಠಿಕೆಯನ್ನು ಹೆಚ್ಚು ವಿಸ್ತರಿಸದೆ ಅತ್ಯಂತ ಸಂಕ್ಷಿಪ್ತವಾಗಿ ಮುಗಿಸಿ ಮುಖ್ಯ ಕಥೆಗೆ ಧಾವಿಸುವ ರೀತಿ ಮೆಚ್ಚುವಂಥದ್ದು. ಅಲ್ಲಿಯೂ ಒಂದೇ ವಾರ್ಧಿಕದಲ್ಲಿ ವಿದ್ಯುತ್ಕೇಶಿ ಸುಕೇಶಿಯರ ವೃತ್ತಾಂತವನ್ನು ಹೇಳಿ ಭಾಮಿನಿಯಲ್ಲಿ ಸುಕೇಶಿಯ ವಿವಾಹ, ಮಾಲ್ಯವಂತಾದಿಗಳ ಜನನದ ವೃತ್ತಾಂತವನ್ನು ಹೇಳಿ ಕಂದಪದ್ಯದಲ್ಲಿ ದೇವೇಂದ್ರನ ಬಳಿಗೆ ದೇವತೆಗಳು ಬಂದು ದೂರಿಡುವವರೆಗಿನ ಕಥಾಭಾಗವನ್ನು ಸಂಗ್ರಹಿಸಿದ ರೀತಿ ಮೆಚ್ಚುವಂಥಾದ್ದು. ಈ ಮೂಲಕವಾಗಿ ಇದು ಕೇವಲ ಶ್ರವ್ಯವೇ ಹೊರತು ದೃಶ್ಯವಲ್ಲವೆಂಬುದನ್ನು ಸ್ಪಷ್ಟಪಡಿಸುತ್ತಾನೆ.

ದೇವತೆಗಳು ದೇವೇಂದ್ರನಲ್ಲಿ ದೂರುವುದು ಅನಂತರ ಹರನಲ್ಲಿಗೆ ಹೋಗುವುದು, ಆವನು ವಿಷ್ಣುವಿದ್ದಲ್ಲಿಗೆ ಕಳುಹುವುದು- ಮುಂತಾದ ದೃಶ್ಯಗಳು ಪುನರಾವರ್ತನೆಯಾದಂತೆ ಕಾಣುತ್ತದೆ. ದೇವತೆಗಳು ನೇರವಾಗಿ ವಿಷ್ಣುವಿನಲ್ಲಿಗೆ ಹೋಗುವಂತೆ ಸಂಯೋಜಿಸಬಹುದಿತ್ತು. ಬಹುಶಃ ಕವಿಯು ಮೂಲಕಥೆಗೆ ನಿಷ್ಠನಾಗಿರುವಾಗ ಇದೆಲ್ಲ ಅನಿವಾರ್ಯವಾಯಿತೆನಿಸುತ್ತದೆ. ಕವಿಗೆ ದೊರಕಿದ ಉತ್ತರಕಾಂಡದ ಕಥೆಯಲ್ಲಿ ಇವೆಲ್ಲ ಇದ್ದಿರಬಹುದಾಗಿದೆ.

ಮುಂದೆ ಕುಬೇರನು ಪುಷ್ಪಕವಿಮಾನದಲ್ಲಿ ವಿಹರಿಸುವುದನ್ನು ಕಾಣುವವರೆಗೆ ಕುಬೇರನ ಜನನ ವೃತ್ತಾಂತವೇ ಮುಂತಾದವುಗಳನ್ನು ಕವಿಯು ವಿತಾಳದ ಪದ್ಯಗಳಲ್ಲಿ ಹೇಳಿರುವುದನ್ನು ಗಮನಿಸಬೇಕು. ಕೇವಲ ಶ್ರವ್ಯವೆನಿಸಿದ ಕಥಾಭಾಗವನ್ನು ವಿತಾಳದ ಪದ್ಯಗಳಲ್ಲಿ ಸೂಚಿಸುವುದು ಕವಿಯ ಕ್ರಮ. ಅದನ್ನು ಚೆನ್ನಾಗಿ ಬಳಸಿಕೊಂಡಿದ್ದಾನೆ. ಮುಂದಿನವುಗಳಲ್ಲಿ ತಾಳ-ವಿತಾಳ ಪದ್ಯಗಳ ಹಾಳತವಾದ ಮಿಶ್ರಣವಿದೆ. ಹೀಗೆ ಕೃತಿಯುದ್ದಕ್ಕೂ ದೃಶ್ಯ-ಶ್ರವ್ಯ ಭಾಗಗಳ ವಿಭಜನೆಯು ಸ್ಪಷ್ಟವಾಗಿರುವುದು ಕವಿಯ ಉತ್ತಮ ರಂಗಪ್ರಜ್ಞೆಗೆ ಸಾಕ್ಷಿ. ರಾವಣೋದ್ಭವ ಪ್ರಸಂಗವನ್ನು ರಂಗದ ಮೇಲೆ ಹೆಚ್ಚು ಆಡದಂತಿಲ್ಲ. ಅವನ ಶಂಬರಾಸುರ ಕಾಳಗಕ್ಕೆ ಸಿಕ್ಕಿದ ಜನಪ್ರಿಯತೆಯೂ ಇದಕ್ಕೆ ದಕ್ಕಲಿಲ್ಲವೆಂಬುದು ನಿಜವಾದರೂ ಅಲ್ಲಿ ಬರುವ ಶೂರ್ಪಣಖಾ ವಿವಾಹ ಸನ್ನಿವೇಶವು ಇಂದಿಗೂ ಪ್ರಿಯವಾಗಿದೆ. ಮುಂದೇ ಇದೇ ದೃಶ್ಯವನ್ನು ಅನಾಮತ್ತಾಗಿ ಎತ್ತಿಕೊಂಡು ಕಾರ್ತವೀರ್ಯ ಪ್ರಸಂಗದಲ್ಲಿ ಸೇರಿಸಲಾಗಿದೆ. ಕಾರ್ತವೀರ್ಯಾರ್ಜುನದ ಉಡುಪಿ ಪ್ರತಿಯಲ್ಲಿ ಈ ಸನ್ನಿವೇಶವು ಸೇರಿರುವುದು ಅದರ ಜನಪ್ರಿಯತೆಯ ದ್ಯೋತಕ. ಇಡೀ ಸನ್ನಿವೇಶವು ಹಾಸ್ಯಮಯವಾಗಿದ್ದು ಯಕ್ಷಗಾನ ರಸಿಕರನ್ನು ನಗೆಗಡಲಲ್ಲಿ ತೇಲಿಸುತ್ತದೆ. ಪ್ರಸಂಗದುದ್ದಕ್ಕೂ ಪದ್ಯಗಳು ತಮ್ಮ ಮಾಧುರ್ಯದಿಂದ, ಸರಳತೆಯಿಂದ ನಮ್ಮ ಮನಸ್ಸನ್ನು ಸೆಳೆಯುತ್ತದೆ. ದೇವತೆಗಳ ದೂರನ್ನು ಕೇಳಿದ ಶಿವನ ಮಾತುಗಳನ್ನು ಕೇಳಿ-

**ರಾಗ ಸುರುಟಿ ಏಕತಾಳ**

***ಅಂಜಲ್ಯಾತಕೆಂತು ಅಂಥಾ***
***ಅಂಜಿಕೆಯೇನ್ಬಂತು॥***

*ಸಂಜೀವನಮಣಿ ಸಂಜೆಸುತಿರಲೂ*

*ಜಂಜಡವೇ ಬಲು ನಂಜಿನಳೀವನ॥*

ಸಹಜತೆಯಿಂದ ಸೊಗಸಾದ ರಚನೆಗಳು ಕೃತಿಯಲ್ಲಿ ಸಾಕಷ್ಟು ತುಂಬಿಕೊಂಡಿವೆ. ಗಾದೆಯ ಮಾತು, ಲೋಕೋಕ್ತಿಗಳನ್ನು ಕವಿ ಜಾಣ್ಮೆಯಿಂದ ಬಳಸಿಕೊಳ್ಳುತ್ತಾನೆ. ಉಪಮೆ, ಉದಾಹರಣೆಗಳ ಮೂಲಕ ಹೇಳುವ ರೀತಿಯು ಸೊಗಸಾದದು. ಹಾವಿಗೆ ಹಾಲಿತ್ತರೇನದ ಕೊಡುವುದೈ ಮನೆಯ ಗೆದ್ದು ಮಾರಗೆಲ್ಲಲು ಮನವ ಮಾಡಿರಿ ಬೇರ್ಕಡಿದರೆ ಮರವೆಲ್ಲಿ, ರೋಗಿ ವೈದ್ಯರ ಮತವಿದೊಂದೇ ಹೆಣ್ಣು ಹೊನ್ಮಣ್ಣುಗಳನಿತ್ತರೆಯೆಣ್ಣಿಸದೆ ಸಂಗ್ರಹಿಪುದುತ್ತಮ- ಇಂಥ ಹಲವಾರು ಮಾತುಗಳು ಪದ್ಯಗಳ ಸೊಗಸನ್ನು ಹೆಚ್ಚಿಸಿದೆ.

ಕವಿಯ ಕವಿತ್ವಶಕ್ತಿಯು ಚೆನ್ನಾಗಿದ್ದರೂ ಆರಿಸಿಕೊಂಡ ಕಥಾಭಾಗವು ಸ್ವಾರಸ್ಯಕರವಾದುದಲ್ಲ. ರಾವಣನೇ ನಾಯಕನಾಗಿರುವುದು ಜನರಿಗೆ ಮೆಚ್ಚುಗೆಯಾದಂತಿಲ್ಲ. ದುಷ್ಟನ ಚರಿತೆಯೆಂದೆನುತ ದೂಷಿಸದೆ ಸ್ವೀಕರಿಸಬೇಕೆಂದು ಕವಿಯು ಬೇಡಿಕೊಂಡರೂ ಜನರು ಅದನ್ನು ಮನ್ನಿಸಲಿಲ್ಲ. ಹಾಗಾಗಿ ಇತರ ಅಖ್ಯಾನಗಳಿಗೆ ಇಲ್ಲಿನ ಕಥೆಗಳನ್ನ ಆಕಾರವಾಗಿ ಬಳಸಿದರೇ ಹೊರತು ಇದನ್ನೇ ಪ್ರದರ್ಶಿಸಲು ತವಕಿಸಲಿಲ್ಲ. ಇಡೀ ಕಥೆಯಲ್ಲಿ ಮನಸ್ಸನ್ನು ಆಳವಾಗಿ ತಟ್ಟುವ ಪಾತ್ರಗಳಿಲ್ಲದಿರುವುದು ಮತ್ತೊಂದು ಕಾರಣವಾಯಿತು. ಹೀಗೆ ವಿಪುಲವಾದ ಪ್ರಯೋಗ ಪ್ರದರ್ಶನಗಳನ್ನು ಕಾಣುವ ಭಾಗ್ಯ ಪ್ರಾಪ್ತವಾಗದಿದ್ದರೂ ಇತಿಹಾಸ ದೃಷ್ಟಿಯಿಂದ ಸರಸಕವಿತ್ವದ ರಾವಣೋದ್ಭವವು ಒಂದು ಗಮನಾರ್ಹ ಪ್ರಸಂಗವಾಗಿ ನಿಲ್ಲುತ್ತದೆ.

***ಕವಿ ಪರಿಚಯ***

ಉಡುಪಿಯ ಶ್ರೀ ಕೃಷ್ಣಮುದ್ರಣಾಲಯದ ಪ್ರಸಂಗ ಪ್ರತಿ (ಪ್ರಕಟಣೆಗೆ-1930) ಯನ್ನು ಮುಖ್ಯ ಆಧಾರವಾಗಿಟ್ಟುಕೊಂಡು ಈ ಪ್ರಸಂಗವನ್ನು ಸಂಪಾದಿಸಿದ್ದೇನೆ. ಆದರೆ 1896 ಬೆಂಗಳೂರು ಪ್ರೆಸ್‌ನ ಅತ್ಯಂತ ಹಳೆಯದಾದ ಪ್ರಸಂಗವನ್ನು ಈ ಸಂದರ್ಭದಲ್ಲಿ ಪರಿಶೀಲಿಸಿದಾಗ ಎರಡು ಪ್ರತಿಗಳಲ್ಲಿ ಹಲವಾರು ವ್ಯತ್ಯಾಸಗಳು ಗೋಚರವಾದವು. ಶ್ರೀಕೃಷ್ಣ ಮುದ್ರಣಾಲಯದಲ್ಲಿರುವ ಅನೇಕ ಪದ್ಯಗಳು ಹಳೆಯ ಬೆಂಗಳೂರಿನ ಪ್ರತಿಯಲ್ಲಿ ಇಲ್ಲ. ಬೆಂಗಳೂರಿನ ಪ್ರತಿಯಲ್ಲಿರುವ ಕೆಲ ಪದ್ಯ ಉಡುಪಿ ಮುದ್ರಣದಲ್ಲಿ ತಪ್ಪಿಸಿಕೊಂಡಿವೆ. ಹಾಗಾಗಿ ಮುಖ್ಯವಾಗಿ ಉಡುಪಿ ಪ್ರತಿಯನ್ನು ಆಧರಿಸಿ ಸಂಪಾದಿಸಿ ಬಿಟ್ಟು ಹೋದ ಪದ್ಯಗಳನ್ನು (ಬೆಂಗಳೂರು ಪ್ರತಿಯಲ್ಲಿರುವುದು) ಇದಕ್ಕೆ ಸೇರಿಸಿಕೊಂಡಿದ್ದೇನೆ. ಉದಾ :

**ರಾಗ ಭೈರವಿ ಆದಿತಾಳ**

ಹೆಣ್ಣು ಜನ್ಮವು ಕಷ್ಟವೆಂಬುದ  ಕಂಣಿನಲಿ ಕಂಡೆ

- ಮುಂತಾದವು.

ಅಲ್ಲದೆ ಸುಮಾರು ಈ ರೀತಿಯ 4 ಪದ್ಯಗಳು ತೀರಾ ಉದ್ದವಾಗಿದೆ. ರಂಗ ಪ್ರಯೋಗದಲ್ಲಿ ಇದರ ಬಳಕೆ ಕಷ್ಟವೇ ಆಗಬಹುದು. ಆದರೂ ಈ ಪದ್ಯಗಳನ್ನು ಇಡಿಯಾಗಿ ಅಥವಾ ತುಂಡಾಗಿ ಬಳಸಿಕೊಳ್ಳುವವರಿಗೆ ಅನುಕೂಲವಾಗಲಿ ಎಂದು ಸಂಪಾದಿಸಿದ್ದೇನೆ.

* * *

# 2. ಕುಂಭಕರ್ಣಾದಿ ಕಾಳಗ

**ಕಥಾಸಾರ:**

ಕಾಳಗದಲ್ಲಿ ಬಹಳ ಮಂದಿ ರಾಕ್ಷಸಭಟರು ಹತರಾಗಲು ತನ್ನ ತಮ್ಮನಾದ ಕುಂಭಕರ್ಣನನ್ನು ನಿದ್ರೆಯಿಂದೆಬ್ಬಿಸುವಂತೆ ರಾವಣ ಆಜ್ಞಾಪಿಸುತ್ತಾನೆ. ಯಾವೆಲ್ಲಾ ಉಪಾಯಗಳಿಂದಲೂ ಆತನಿಗೆ ಎಚ್ಚರವಾಗದಿರಲು ಕೊನೆಗೆ ಬ್ರಹ್ಮನನ್ನೇ ಕರೆಸಿ ಎಚ್ಚರಗೊಳಿಸುವಂತೆ ಹೇಳುತ್ತಾನೆ. ಬ್ರಹ್ಮನು ಬಂದು ಮಂತ್ರೋದಕವನ್ನು ಪ್ರೋಕ್ಷಣೆಮಾಡಿದೊಡನೆ ಕುಂಭಕರ್ಣನಿಗೆ ನಿದ್ರಾಭಂಗವಾಗಲು, ಎಚ್ಚರಗೊಂಡ ತಮ್ಮನನ್ನು ಭಾರಿ ಭೋಜನದಿಂದ ಸಂತೃಪ್ತಿಗೊಳಿಸಿ, ಶೂರ್ಪನಖಿಯ ಮಾನಭಂಗದಿಂದಿತ್ತ ನಡೆದಿರುವ ವಿದ್ಯಮಾನಗಳನೆಲ್ಲಾ ಆತನಿಗೆ ವಿಸ್ತರಿಸಿ ಕಪಿಸೇನೆಯನ್ನು ಪರಾಭವಗೊಳಿಸುವುದಕ್ಕಾಗಿ ಯುದ್ಧಕ್ಕೆ ತೆರಳುವಂತೆ ತಿಳಿಸುತ್ತಾನೆ.

ಕುಂಭಕರ್ಣನು ಅಣ್ಣನ ಈ ದುಸ್ಸಾಹಸಕ್ಕೆ ಮನನೊಂದವನಾದರೂ ಕೈಮೀರಿ ಹೋದ ಕಾರ್ಯಕ್ಕೆ ಇನ್ನು ಚಿಂತಿಸಿ ಫಲವಿಲ್ಲವೆಂದಣಿಸಿ, ಯುದ್ಧಕ್ಕೆ ತೆರಳಿ ಮಹಾ ಸಾಹಸದಿಂದ ಕಾದಿ ಕೊನೆಗೆ ಶ್ರೀರಾಮನ ಬಾಣದಿಂದ ಅಸುನೀಗುತ್ತಾನೆ. ಆನಂತರ ರಾವಣನ ಮಕ್ಕಳಾದ ನರಾಂತಕ, ದೇವಾಂತಕ, ತ್ರಿಶಿರ, ಮಹೋದರ, ಯುದ್ಧೋನ್ಮತ್ತರೆಂಬುವರು ಒಬ್ಬರ ಹಿಂದೊಬ್ಬರಂತೆ ಯುದ್ಧಕ್ಕೆ ಬಂದು, ನರಾಂತಕನು ಅಂಗದನೊಡನೆಯೂ, ತ್ರಿಶಿರ ದೇವಾಂತಕರು ಹನುಮಂತನೊಡನೆಯೂ, ಮಹೋದರನು ನೀಲನೊಡನೆ ಯುದ್ಧೋನ್ಮತ್ತನೆಂಬುವನು ವೃಷಭನೊಡನೆಯೂ ಕಾದಾಡಿ ಮಡಿಯುತ್ತಾರೆ.

ಇವರ ಮರಣದಿಂದ ಉದ್ವಿಗ್ನನಾದ ರಾವಣನು ಇನ್ನಿರುವ ತನ್ನ ಮಕ್ಕಳಾದ ಅತಿಕಾಯ ಮತ್ತು ಇಂದ್ರಜಿತುವೆಂಬ ಮಹಾ ಪರಾಕ್ರಮಶಾಲಿಗಳಿಬ್ಬರಲ್ಲಿ ಪರಮಸಾತ್ವಿಕನಾದ ಅತಿಕಾಯನನ್ನು ಯುದ್ಧಕ್ಕೆ ತೆರಳುವಂತೆ ಹೇಳುತ್ತಾನೆ. ವಿಷ್ಣುಭಕ್ತನಾದ ಅತಿಕಾಯನು, ಮಹಾವಿಷ್ಣುವಿನ ಅವತಾರವಾದ ಶ್ರೀರಾಮನೊಡನೆ ಹಗೆತನ ಸಲ್ಲವೆಂದೂ, ಸೀತಾದೇವಿಯನ್ನು ಕೊಂಡೊಪ್ಪಿಸಿ ಆತನಲ್ಲಿ ಕ್ಷಮಾಯಾಚನೆಯನ್ನು ಮಾಡುವುದೇ ಶ್ರೇಯಸ್ಕರವೆಂದೂ ತಂದೆ ರಾವಣನಿಗೆ, ನೀತಿ ಹೇಳುತ್ತಾನೆ. ಆದರೆ ರಾವಣನು ಆ ಮಾತನ್ನು ಧಿಕ್ಕರಿಸಲು, ಅನಿವಾರ್ಯವಾಗಿ ಅತಿಕಾಯನು ಅದೇ ತನಗೆ ಮೋಕ್ಷ ಸಾಧನವೆಂದೆಣಿಸಿ ಯುದ್ಧಕ್ಕೆ ತೆರಳಿ ಲಕ್ಷ್ಮಣನೊಡನೆ ವೀರತನದಿಂದ ಸೆಣಸಿ ಕೊನೆಗೆ ಲಕ್ಷ್ಮಣನ ಬಾಣದಿಂದ ಹತನಾಗುತ್ತಾನೆ.

ಅತಿಕಾಯನ ಮರಣದಿಂದ ಹತಾಶನಾದ ರಾವಣನು ಇಂದ್ರಜಿತುವನ್ನು ಕೊನೆಯ ಯುದ್ಧಕ್ಕಾಗಿ ಹುರಿದುಂಬಿಸುತ್ತಾನೆ. ಮರುದಿನ ಇಂದ್ರಜಿತುವು ಕಪಿಸೇನೆಯನ್ನು ಎಂತಾದರೂ ಗೆಲ್ಲುವೆನೆಂಬ ಪ್ರತಿಜ್ಞೆಯಿಂದ ಸಮಸ್ತ ರಾಕ್ಷಸ ಬಲದೊಡನೆ ಯುದ್ಧಕ್ಕೆ ತೆರಳಿ ಮಾಯಾತಂತ್ರದಿಂದ ಉರಗಾಸ್ತ್ರವನ್ನು ಪ್ರಯೋಗಿಸಿ ರಾಮಲಕ್ಷ್ಮಣರ ಸಮೇತ ಕಪಿ ಸೇನೆಯನ್ನು ಮೂರ್ಛೆಗೊಳಿಸುತ್ತಾನೆ. ಆದರೆ ಆ ವಿಷವೇಗದಿಂದ ಮೊದಲು ಚೇತರಿಸಿಕೊಂಡ ಹನುಮಂತನು ಚಂದ್ರದ್ರೋಣ ಪರ್ವತದಲ್ಲಿದ್ದ ಸಂಜೀವನ ಔಷಧವನ್ನು ತಂದು ಪ್ರಯೋಗಿಸಿ ಎಲ್ಲರನ್ನು ಚೈತನ್ಯಗೊಳಿಸುತ್ತಾನೆ.

ಹೀಗೆ ತನ್ನ ಉರಗಾಸ್ತ್ರವು ವಿಫಲಗೊಂಡುದನ್ನರಿತ ಇಂದ್ರಜಿತುವು ಮರಳಿ ಯುದ್ಧದಲ್ಲಿ ಜಯಪ್ರಾಪ್ತಿಗಾಗಿ ನೆಲದಡಿಯ ಗುಪ್ತಸ್ಥಳದಲ್ಲಿ (ನಿಕುಂಭಿಳೆಯೆಂಬಲ್ಲಿ) ಮಾರಣಯಜ್ಞವನ್ನು ಕೈಕೊಳ್ಳುತ್ತಾನೆ. ಇದರ ಸೋವನ್ನರಿತ ವಿಭೀಷಣನು ಹನುಮಂತನನ್ನು ಕರೆದುಕೊಂಡು ಹೋಗಿ ಮಾರಣಾಧ್ವರವನ್ನು ಕೆಡಿಸುತ್ತಾನೆ. ಇದರಿಂದ ಕೆರಳಿದ ಇಂದ್ರಜಿತುವು ಅಸಮ ಸಾಹಸದಿಂದ ಘೋರಯುದ್ಧವೆನ್ನೆಸಗಿ ಕೊನೆಗೆ ಲಕ್ಷ್ಮಣನ ಬಾಣದಿಂದ ಮೃತ್ಯುವಶನಾದನೆಂಬಲ್ಲಿಗೆ ಈ ಪ್ರಸಂಗಕ್ಕೆ ಮಂಗಲವಾಗುವುದು.

**ಸಮೀಕ್ಷೆ**

ಕುಂಭಕರ್ಣಾದಿ ಕಾಳಗವು ಕುಂಭಕರ್ಣನನ್ನ ಮೊದಲ್ಗೊಂಡು ಅತಿಕಾಯ, ಇಂದ್ರಜಿತು, ಮಕರಾಕ್ಷನೇ ಮುಂತಾದ ರಾಕ್ಷಸ ವೀರರ ಕಾಳಗದ ಕಥೆಯಾಗಿದೆ. ರಾಮಾಯಣದ ಯುದ್ಧಕಾಂಡದಲ್ಲಿ ಬರುವ ರಾಕ್ಷಸವೀರರ ಯುದ್ಧದ ಕಥೆಗಳೇ ಈ ಕೃತಿಗೆ ಆಕರ. ಯಕ್ಷಗಾನದ ಹೆಚ್ಚಿನ ಸಂಖ್ಯೆಯ ಕಾಳಗಗಳ ಪಟ್ಟಿಗೆ ಸೇರುವ ಅನೇಕ ಕಥೆಗಳ ಸಂಗ್ರಹವೇ ಇಲ್ಲಿ ಗುರಿಯಾಗಿದೆ. ಕಥೆಯನ್ನು ಸಂಗ್ರಹಿಸುವುದೇ ಕವಿಯ ಮುಖ್ಯ ಉದ್ದೇಶವಾಗಿರುವುದರಿಂದ ಪಾತ್ರಗಳು ಪುಷ್ಟವಾಗಿ ಮೂಡಿಬಂದಿಲ್ಲದಿರುವುದು ಈ ಕೃತಿಯು ಜನಪ್ರೀಯತೆಯ ರೇಖೆಯಲ್ಲಿ ಕೆಳಗಿರುವುದಕ್ಕೆ ಕಾರಣವಾಗಿದೆ.

ಕೃತಿಯು ಆರಂಭಗೊಳ್ಳುವುದು ಕುಂಭಕರ್ಣನ ಕಾಳಗದಿಂದ, ಕುಂಭಕರ್ಣನನ್ನ ನಿದ್ದೆಯಿಂದ ಏಳಿಸುವುದು ಅವನಿಗೆ ಊಟವನ್ನು ಒದಗಿಸುವುದು, ಮುಂತಾದವುಗಳನ್ನು ಕವಿಯು ಸಾಕಷ್ಟು ವರ್ಣಿಸಿದ್ದಾನೆ. ಆ ವರ್ಣನೆಗಳು ಕೇಳುವುದಕ್ಕೆ ರಂಜಕವಾಗಿದೆಯೆಂಬುವುದು ನಿಜ ಆದರೆ ಅವುಗಳನ್ನು ದೃಶ್ಯವಾಗಿ ಪರಿಣಾಮಕಾರಿ ಯಕ್ಷಗಾನ ರಂಗಭೂಮಿಯಲ್ಲಿ ತೋರುವುದು ಕಷ್ಟವಾಗುತ್ತದೆ. ಇದ್ದುದರಲ್ಲಿ ಸ್ವಾರಸ್ಯಕರವಾದುದು ಕುಂಭಕರ್ಣನು ರಾವಣನಿಗೆ ಹೇಳುವ ಮಾತುಗಳು. ಅವನು ದೀರ್ಘಕಾಲದವರೆಗೆ ನಿದ್ದೆಯಲ್ಲಿದ್ದವನಾದರೂ ಎಚ್ಚರದಲ್ಲಿರುವ ರಾವಣನಿಗಿಂತ ವಿವೇಕಿ. ಅವನು ರಾವಣನೊಡನೆ ಆಡುವ ಮಾತುಗಳು ಸೊಗಸಾಗಿವೆ.

ರಾಗ ಕಲ್ಯಾಣಿ ಏಕತಾಳ

*ನಿನ್ನಂಥ ಜಾಣರಿಂಗಿದು ನೀತಿಯೇ ಪೇಳಣ್ಣ*
*ಕಣ್ಣ ಮುಂದಲ್ಲದೆ ಪರರ ಹೆಣ್ಣ ತಂದಿಟ್ಟು ಕೊಂಬುದು॥*

ಇದು ಪ್ರಾರಂಭ ಮುಂದುವರಿದು ಹೇಳುತ್ತಾನೆ.

*ಮುಂದುವರಿದ ಮೇಲೆ ಇನ್ನು  ನೊಂದುಮಾಡುವಂಥದೇನು*
*ಎಂದಿಗಾದರೀ ಶರೀರ  ಎರವಿನ ಹಾರ ॥*
*ಹಿಂದುಗಳೆಯೆ ಕೀರ್ತಿನಿಲದು  ನಿಂದಿಸುವರು ಬೈದುಜನರು*

*ಸಂದೇಹವಿಲ್ಲ ಸಂಗರವೇ  ಸರ್ವಸಮ್ಮತ ॥*
*ಮಾಧವನ ಸೇರ್ವೆನಾ  ವಿರೋಧದಿಂದಾರೂ ಸ್ವಾಮಿ*
*ಪಾದವ ಹೊಂದುವೆ ಹೇಗಾದರಾಗಲಿ ॥*

ಈ ಮಾತುಗಳು ಕುಂಭಕರ್ಣನ ನಿಲುಮೆಯನ್ನು ವಿವರಿಸುತ್ತದೆ. ಮುಂದೆ ಯುದ್ಧದಲ್ಲಿ ಅವನಿಂದ ಬಹಳಷ್ಟನ್ನು ನಿರೀಕ್ಷಿಸುತ್ತೇವಾದರೂ ಅದು ಹುಸಿಯಾಗುತ್ತದೆ. ರಾಮ ಕುಂಭಕರ್ಣರ ನಡುವೆ ಹೆಚ್ಚಿನ ಸಂಭಾಷಣೆಯಿಲ್ಲ. ನರಾಂತಕನ ಕಾಳಗವು ಅತ್ಯಂತ ಸಂಕ್ಷಿಪ್ತವಾಗಿದೆ. ಅಲ್ಲಿ ರಾವಣನ ಗೋಳಾಟ ಮನಮುಟ್ಟುವಂತಿದೆ-

ವಾರ್ಧಕ

*ಪರಸತಿಗೆ ಪರುಠವಿಸಿ ಪಾರಾಯ್ತು ಪಂಥದಲಿ*
*ಪರುಷ ಕಬ್ಬಿಣವಾಗಿ ಫಲಿಸಿತನುದಿನ ಕರೆವ*
*ಸುರಭಿಗೊಡ್ಡಾಯಮೃತ ವಿಷವಾಯ್ತು ಸೌಭಾಗ್ಯಹೀನಗಪಜಯವಾಯಿತು*
*ಪುರುಷಾರ್ಥವಿಲ್ಲ ಬದುಕಿದರಿನ್ನೆನುತ್ತಮನ*

*ಕರಗುತಿಹ ವೇಳ್ಯದಿ ನರಾಂತಕಂನಡೆತಂದು*
*ಪರಮಪೌರುಷದಿಂದ ಮಂಡೋದರಿಗೆ ನಮಿಸಿ ದಶವದನಗಿಂತೆಂದನು॥*

ಅತಿಕಾಯದ ಕಾಳಗದಲ್ಲಿ ಅತಿಕಾಯನು ರಾವಣನೊಡನೆ ಆಡುವ ಮಾತುಗಳು ಮನಮುಟ್ಟುವಂತಿದೆ. ಹಾಗೆಯೇ ಯುದ್ಧಕ್ಕೆ ಹೊರಟು ನಿಂತ ಅತಿಕಾಯನ ಧೋರಣೆಯನ್ನು ಬಿಂಬಿಸುವ ಮಾತುಗಳನ್ನು ಕೇಳಿ-

**ರಾಗ ಕಲ್ಯಾಣಿ ಅಷ್ಟತಾಳ**

***ಬನ್ನಿ ರಾಮನ ಸೇವೆಗೆ  ಸಾಧುಗಳೆಲ್ಲ ॥***
***ಇನ್ನು ಇಂಥಾ ವೇಳ್ಯ  ವಿಲ್ಲ ಸಿಕ್ಕು ವುದಿಲ್ಲ***
***ಪನ್ನಂಗ ಶಯನ ರಾ ಮೆನ್ನುತ್ತ ಶರಣರೆಲ್ಲ॥***
***ಮನು ಮುನಿಗಳು ನಿತ್ಯ  ನೆನೆಯುತಿರಲು ಸತ್ಯ***
***ಘನತರ ನಿಜ ಮುಕ್ತಿ  ಯನು ಸಾಧಿಸುವರೆಲ್ಲ॥***
***ಸರಸದಿಂದಲಿ ಸರ  ಸಿರುಹನಾಭನ ಪದ***
***ಸರಸಿಜವನು ಕಾಂಬ  ತವಕದಿ ಸುಜನರೆಲ್ಲ॥***

ಮುಂದೆ ಹಟ್ಟಿಯಂಗಡಿ ರಾಮಭಟ್ಟ ಈ ಕಥಾನಕವನ್ನು ವಿಸ್ತರಿಸಿ ಬರೆಯುವುದಕ್ಕೆ ಇದು ಪ್ರೇರಕವಾಗಿರಬಹುದು.

ಇಂದ್ರಜಿತು ಕಾಳಗದಲ್ಲಿ ಕೇವಲ ವರ್ಣನಾತ್ಮಕ ಪದ್ಯಗಳೇ ತುಂಬಿವೆ. ಆದರೆ ವಿಭೀಷಣ-ಜಾಂಬವರ ಮಾತುಗಳು ಚೆನ್ನಾಗಿದೆ. ಇಂದ್ರಜಿತುವಿನ ಮಾರಣಾಧ್ವರ ಸನ್ನಿವೇಶ ಸಶಕ್ತವಾಗಿ ಮೂಡಿಬಂದಿದೆ. ಲಕ್ಷ್ಮಣ-ಇಂದ್ರಜಿತು ಸಂಭಾಷಣೆ ಚೆನ್ನಾಗಿ ಮೂಡಿಬಂದಿದೆ. ಇಲ್ಲಿನ ಉತ್ತಮವಾದ ಭಾಗಗಳನ್ನು ಸ್ವೀಕರಿಸಿ ಮತ್ತಷ್ಟು ವಿಸ್ತರಿಸಿ ರಚಿತಗೊಂಡ ಇಂದ್ರಜಿತು ಕಾಳಗವೆಂಬ ಹೆಸರಿನ ಪ್ರಸಂಗವಿರುವುದನ್ನು ಸ್ಮರಿಸಬಹುದು. ಅದು ಈ ಪ್ರಸಂಗದಿಂದ ಸಾಕಷ್ಟು ಉಪಕಾರವನ್ನು ಪಡೆದಿದೆ.

ಇಂದ್ರಜಿತು ಕಾಳಗದ ಮಧ್ಯದಲ್ಲಿಯೇ ಮಕರಾಕ್ಷ ಕಾಳಗವು ಬರುತ್ತದೆ. ಅದು ಅತ್ಯಂತ ಸಂಕ್ಷಿಪ್ತವಾಗಿದ್ದರೂ ರಾಮ ಮಕರಾಕ್ಷರ ಸಂಭಾಷಣೆಯ ಭಾಗ ಸಶಕ್ತವಾಗಿದೆ. ಮಕರಾಕ್ಷಕನನ್ನೇ ಕೇಂದ್ರವಾಗಿಟ್ಟುಕೊಂಡು, ರಚಿತವಾದ ಮಕರಾಕ್ಷಕನ ಕಾಳಗವೆಂಬ ಕೃತಿಗೆ ಈ ಸನ್ನಿವೇಶವು ಪ್ರೇರಕವಾಗಿರಬಹುದು.

ಪಾರ್ತಿಸುಬ್ಬ ಯಕ್ಷಗಾನದ ಆರಂಭ ಕಾಲದ ಕವಿ. ರಾಮಾಯಣದ ಕಥೆಯನ್ನಾಧರಿಸಿ ಹಲವಾರು ಉತ್ತಮ ಪ್ರಸಂಗಗಳನ್ನು ರಚಿಸಿ ಯಕ್ಷಗಾನ ವಾಲ್ಮೀಕಿಯೆಂಬ ಬಿರುದನ್ನು ಪಡೆದವ. ಅವನ ಪಟ್ಟಾಭಿಷೇಕ, ಪಂಚವಟಿ, ವಾಲಿ ಸುಗ್ರೀವ, ಚೂಡಾಮಣಿ ಮುಂತಾದ ರಾಮಾಯಣ ಪ್ರಸಂಗಗಳು ಇಂದಿಗೂ ಹಲವಾರು ಪ್ರಯೋಗಗಳನ್ನು ಕಾಣುತ್ತಿವೆ. ಆದರೆ ಕುಂಭಕರ್ಣಾದಿ ಕಾಳಗಕ್ಕೆ ಆ ಭಾಗ್ಯವಿಲ್ಲ. ಅಲ್ಲಿನ ಕಥೆಗಳನ್ನು ಆಡುವುದು ತುಂಬ ಅಪರೂಪವೆನ್ನಬಹುದು. ಇದಕ್ಕೆ ಈಗಾಗಲೇ ಹೇಳಿದಂತೆ ಅಲ್ಲಿ ಹಲವಾರು ಪ್ರಕರಣಗಳು ಕಿಕ್ಕಿರಿದೆ. ಯಾವುದೇ ಒಂದು ಕಥಾನಕ ಸರಿಯಾದ ಪುಷ್ಟಿಯನ್ನು ಪಡೆಯದೆ ಸೊರಗಿದೆ. ಅಲ್ಲದೇ ಮುಂದೆ ಅತಿಕಾಯ, ಇಂದ್ರಜಿತು, ಮಕರಾಕ್ಷ, ಮುಂತಾದವರನ್ನೇ ಕೇಂದ್ರವಾಗಿಟ್ಟುಕೊಂಡು ರಚಿತವಾದ ಕೃತಿಗಳು ಪ್ರಸಿದ್ಧವಾದವು. ಹಾಗಾಗಿ ಈ ಪ್ರಸಂಗ ಹಿಂದೆ ಸರಿಯಿತು.

ಈ ಪ್ರಸಂಗಗಳಲ್ಲಿರುವ ಲೋಪವೆಂದರೆ ಅಲ್ಲಿ ನಾಟಕೀಯ ಸನ್ನಿವೇಶಗಳಿಗಿಂತ ವರ್ಣನೆಯ ಭಾಗಕ್ಕಿರುವ ಪ್ರಾಧಾನ್ಯ ಹೆಚ್ಚು. ಇವು ದೃಶ್ಯವಾಗಿ ನಿಲ್ಲುವುದಿಲ್ಲವಾದ್ದರಿಂದ ಕಥೆಯನ್ನು ವಿಸ್ತರಿಸುವುದಕ್ಕಷ್ಟೇ ಉಪಯುಕ್ತವಾಗಿ ಬಿಡುತ್ತವೆ. ಆದರೂ ಪಾರ್ತಿಸುಬ್ಬನ ಪದ್ಯಗಳಿಗೆ

ತಮ್ಮದೇ ಆದ ಆಕರ್ಷಣೆಯಿದೆ. ಅವನ ಸಹಜ ಕವಿತ್ವಕ್ಕೆ ಮರಳುಗೊಳಿಸುವ ಗುಣವಿದೆ. ಉಪಮೆ, ಉದಾಹರಣೆಗಳು ಥಟ್ಟನೆ ನಮ್ಮನ್ನು ಸೆಳೆಯುತ್ತವೆ. ದೇಸಿಯ ಬೆಡಗಿದೆ. ರಾಮಲಕ್ಷ್ಮಣರು ಇಂದ್ರಜಿತುವಿನ ಹತಿಗೆ ಬಿದ್ದಾಗ ವಿಭೀಷಣನಾಡುವ ಮಾತುಗಳನ್ನು ಕೇಳಿ-

***ಕುರುಡ ಹೋದಲ್ಲಿ ಕತ್ತಲೆ ಎಂಬ ಗಾದೆಯು***
***ಸ್ಥಿರವಾಯಿತೆನಗೆ ಬಂದು॥***
***ಮರುತನಂದನಿದ್ದ ತೆರನ ನೋಡುವೆನೆಂದು***
***ಅರಸುತ್ತ ನಡೆತಂದನು॥***

ಕನಸಿನರೊಕ್ಕದಂತೆ ಸಾಸುವೆಗೆಡೆಯಿಲ್ಲವೆಂಬಂತೆ - ಎಂಬಂಥ ಈ ಮಾತುಗಳು ಸೊಗಸನ್ನ ಹೆಚ್ಚಿಸುತ್ತದೆ. ಆ ಕವಿತ್ವವೇ ಇಲ್ಲಿನ ಪ್ರಧಾನ ಆಕರ್ಷಣೆಯಾಗಿದೆ.

ಈ ಕೃತಿಯನ್ನು ನಾನು ಪಾರ್ತಿಸುಬ್ಬನ ಯಕ್ಷಗಾನಗಳು, ಸಂಪಾದಕ ಕುಕ್ಕಿಲ ಕೃಷ್ಣಭಟ್ಟ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ಇವರಿಂದ ಪ್ರಕಟಿತ (1975)ವಾದ ಪುಸ್ತಕದಿಂದ ಆಯ್ದುಕೊಂಡಿದ್ದೇನೆ.

12ನೇ ಶತಮಾನದ ಈ ಕವಿಗೆ ಇರುವ ಪ್ರಸಿದ್ಧಿ ಮತ್ಯಾರಿಗೂ ದಕ್ಕಲಿಲ್ಲ. ಇವನ ಕೃತಿಗಳು ಸೀತಾಕಲ್ಯಾಣ, ಪಟ್ಟಾಭಿಷೇಕ, ಪಂಚವಟಿ, ವಾಲಿವಧೆ, ಉಂಗುರ ಸಂಧಿ (ಚೂಡಾಮಣಿ), ಸೇತುಬಂಧನ, ಅಂಗದ ಸಂಧಾನ, ಕುಂಭಕರ್ಣ ಕಾಳಗ, ಕುಶಲವ, ಶ್ರೀಕೃಷ್ಣ ಬಾಲಲೀಲೆ, ಐರಾವತ ಮತ್ತು ಸಭಾಲಕ್ಷಣ ಮುಂತಾದವು.

***ಕವಿ ಪರಿಚಯ :***

***ಪಾರ್ತಿಸುಬ್ಬ (ಸು. 1560-ಸು.1630)***

ಯಕ್ಷಗಾನ ವಾಲ್ಮೀಕಿಯೆಂದು ಕೀರ್ತಿತನಾದ ಪಾರ್ತಿ ಸುಬ್ಬನು ಯಕ್ಷಗಾನಾಸಕ್ತರಾದ ವಿದ್ವಾಂಸರ ನಡುವೆ ತೀವ್ರವಾದ ಭಿನ್ನಾಭಿಪ್ರಾಯಗಳನ್ನೂ ವಾದವಿವಾದಗಳನ್ನೂ ಹುಟ್ಟು ಹಾಕಿದ ವ್ಯಕ್ತಿಯಾಗಿ ಪರಿಣಮಿಸಿದ್ದಾನೆ.

ಯಕ್ಷಗಾನ ಸಾಹಿತ್ಯವನ್ನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕ್ರಮ ಪ್ರಕಾರವಾಗಿ ಇನ್ನೂ ಸೇರಿಸಕೊಳ್ಳದಿದ್ದರೂ ಯಕ್ಷಗಾನ ಕವಿ ಪಾರ್ತಿಸುಬ್ಬನ ಬಗೆಗೆ ಪ್ರಾಯಃ ಇತರ ಅನೇಕ ಕನ್ನಡ ಕವಿಗಳಿಗಿಂತ ಹೆಚ್ಚಾಗಿ ಚರ್ಚೆ ನಡೆದಿದೆ. ಪಂಡಿತ ಮುಳಿಯ ತಿಮ್ಮಪ್ಪಯ್ಯನವರು ಪಾರ್ತಿಸುಬ್ಬನು ಕುಂಬಳೆಯವನೆಂದೂ, ಸ್ಥಾನಿಕ ಬ್ರಾಹ್ಮಣನೆಂದೂ 1760 ರಿಂದ 1920ರ ವರೆಗೆ ಇದ್ದಿರಬೇಕೆಂದು ಊಹಿಸಿದ್ದರು. ಕುಕ್ಕಿಲ ಕೃಷ್ಣ ಭಟ್ಟರು ಉಪನ್ಯಾಸದಲ್ಲಿ ಸುಮಾರು ಅದೇ ಕಾಲವನ್ನೇ ಸಮರ್ಥಿಸುವ ಮಧೂರ ಮೂಡಪ್ಪಸೇವೆ ಲೆಕ್ಕದ ಪಟ್ಟಿಯ ನಕಲು, ಕೋರ್ಟು ದಾಖಲೆ ಮೊದಲಾದ ಇನ್ನಷ್ಟು ಆಧಾರಗಳನ್ನು ಕೊಟ್ಟುದಲ್ಲದೆ ಸುಬ್ಬನು ಕಥಕಳಿ ರಾಮಾಯಣ ಅಥವಾ ಕೊಟ್ಟಾರಕರ ಮಹಾರಾಜನಿಂದ ರಚಿತವಾದ ರಾಮನಾಟ ಗ್ರಂಥದ ಪದ್ಯಗಳಿಗೂ ಯಕ್ಷಗಾನ ರಾಮಾಯಣದ ಪದ್ಯಗಳಿಗೂ ಸಂಬಂಧವಿರುವುದನ್ನು ಎತ್ತಿತೋರಿಸಿರುತ್ತಾರೆ ಮತ್ತು ರಾಮಾಯಣ ಪ್ರಸಂಗಗಳಲ್ಲದೆ ಐರಾವತ ಶ್ರೀಕೃಷ್ಣ ಚರಿತಗಳನ್ನೂ ಈತನು ರಚಿಸಿದ್ದಾನೆಂದು ತೋರಿಸಿಕೊಟ್ಟಿದ್ದಾರೆ. ತಮ್ಮ ಹಿಂದಿನ ಕಾಲನಿರ್ಣಯ, ಕಾರಂತರೊಂದಿಗಿನ ಚರ್ಚೆ-ಟೀಕೆ ಟಿಪ್ಪಣಿಗಳು ಇತ್ಯಾದಿಗಳೆಲ್ಲವನ್ನೂ ಕೈಬಿಟ್ಟು ದೊರಕಿದ ಹೊಸ ಆಧಾರಗಳನ್ನು ವಸ್ತುಸ್ಥಿತಿಯನ್ನೂ ವಿವೇಚಿಸಿ ಪಾರ್ತೀಸುಬ್ಬನ ಯಕ್ಷಗಾನಗಳು ಪೀಠಿಕೆಯಲ್ಲಿ ಕುಕ್ಕಿಲ ಕೃಷ್ಣ ಟ್ಟರು ತಲುಪುವ ನಿರ್ಣಯಗಳನ್ನು ಈ ಕೆಳಗಿನಂತೆ ಸಂಗ್ರಹಿಸಬಹುದಾಗಿದೆ. ಪಾರ್ತಿ ಸುಬ್ಬನು ಕಂಬಳೆಯವನು ; ಪಾರ್ತಿ ಎಂಬವಳ ಮಗ. ಪುತ್ರಕಾಮೇಷ್ಟಿ - ಸೀತಾ ಕಲ್ಯಾಣ ; ಪಟ್ಟಾಭಿಷೇಕ - ಪಂಚವಟಿ ; ಪಂಚವಟಿ-ವಾಲಿ ಸಂಹಾರ ; ಉಂಗುರ ಸಂಧಿ ; ಸೇತುಬಂಧನ ; ಅಂಗದ ಸಂಧಾನ ; ಕುಂಭಕರ್ಣಾದಿ ಕಾಳಗ - ಇವು ಪಾರ್ತಿಸುಬ್ಬನ ರಾಮಾಯಣ ಪ್ರಸಂಗಗಳು.

ಕುಶಲವರ ಕಾಳಗ ಉತ್ತರ ರಾಮಾಯಣಕ್ಕೆ ಸಂಬಂಧಿಸಿದ ಕೃತಿ. ಶ್ರೀಕೃಷ್ಣ ಚರಿತ ಭಾಗವತದ ಕೃತಿ. ಐರಾವತ ಮಹಾಭಾರತಕ್ಕೆ ಸಂಬಂಧಿಸಿದ ಕೃತಿ. ಸಭಾ ಲಕ್ಷಣವು ಯಕ್ಷಗಾನದ ರಂಗನಿಯಮಾದಿಗಳನ್ನು ನಿರೂಪಿಸುವ ಆಧಾರ ಗ್ರಂಥ. ಕಥಕಳಿ ರಾಮಾಯಣವನ್ನು ಸುಬ್ಬನು ಚನ್ನಾಗಿ ಬಲ್ಲವನಾಗಿದ್ದು ಅದರ ಪ್ರಭಾವವು ಈತನ ರಾಮಾಯಣದ ಪ್ರಸಂಗ ಕೃತಿಗಳ ಮೇಲಾಗಿರುವುದು ಪರಿಶೀಲನೆಯಿಂದ ತಿಳಿಯುತ್ತದೆ.

ಕಾಸರಗೋಡು ತಾಲ್ಲೂಕಿನ ಕುಂಬಳೆ ಗ್ರಾಮದ (ಪಟ್ಟಾಭಿಷೇಕದಲ್ಲಿ) ಪಾರ್ತಿನಂದನನಾದ ಈತ ಕಣಿಪುರ. ಕಣಿಯರದ ಅಥವಾ ಕುಂಬಳೆಯ ಶ್ರೀಕೃಷ್ಣನನ್ನು ಸ್ತುತಿಸಿದ್ದಾನೆ. ಕುಲಗೋತ್ರಗಳನ್ನು ಪ್ರಸಂಗದಲ್ಲಿ ಹೇಳಿಕೊಂಡಿಲ್ಲ. ಕೇರಳದ ಪ್ರಸಿದ್ಧ ಕಲೆ ಕಥಕಳಿಯನ್ನು  ತಿಳಿದುಬಂದು ಯಕ್ಷಗಾನದಲ್ಲಿ ಅನೇಕ ಹೊಸತನ ಪರಿವರ್ತನೆ ಈತ ಮಾಡಿದ್ದಾನೆಂದು ಹಲವು ಉಲ್ಲೇಖಿಸಿದ್ದಾರೆ.

* * *

## 3. ಅತಿಕಾಯ ಕಾಳಗ

ಕವಿ ಶಾರ್ದೂಲವಿಕ್ರೀಡಿತ ವೃತ್ತದಲ್ಲಿ ಶ್ರೀರಾಮಸ್ತೋತ್ರ, ಗಣಪ, ಗಿರಿಜೆ ಹರ ಸರಸ್ವತಿ ಸುರಪಮುಖ್ಯರಿಗೆರಗಿ ಆದಿಕವಿ ವಾಲ್ಮಿಕಿಗೆ ನಮಿಸಿ ಕಥೆಯನ್ನು ಆರಂಭಿಸುತ್ತಾನೆ.

**ಕಥಾಸಾರ:**

ನರಾಂತಕ, ತ್ರಿಶಿರ, ಅಕಂಪನ, ಪ್ರಹಸ್ತ ಮತ್ತು ಕುಂಭಕರ್ಣ ಮುಂತಾದ ರಕ್ಕಸರ ದಂಡುನಾಶವಾಗುತ್ತಿದ್ದಂತೆ, ಶ್ರೀರಾಮನು ಸಂತಸದಿಂದ ಇದಕ್ಕೆ ಕಾರಣರಾದ ತನ್ನ ಸೇನೆಯ ಅದರಲ್ಲೂ ಮುಖ್ಯವಾಗಿ ಮಹಾಕಪಿಗಳ ಉದ್ದಾಮ ಸಾಹಸವನ್ನು ಮೆಚ್ಚಿ, ತಲೆದೂಗಿ, ಅವರನ್ನು ಕೊಂಡಾಡುತ್ತಾನೆ.

ಇತ್ತ ರಾವಣ ಮರುದಿನ ಸಭೆಯಲ್ಲಿ ಮಂಡಿತನಾಗಿರುವಾಗ ನರಾಂತಕ, ದೇವಾತಂಕ ಮುಂತಾದ ರಕ್ಕಸರು ಅಳಿದುದನ್ನು ತಿಳಿಸಿ ವಾನರ ಸೇನೆಯ ಪರಾಕ್ರಮವನ್ನು ಹೇಳಲು, ಕೋಪದಿಂದ ಕುರಿಗೆ ಹೆಬ್ಬುಲಿಯಂಜುವುದೇನ ಘಡ ಎಂದು ಆರ್ಭಟಿಸಿ, ಇಂದಿನ ಯುದ್ಧದಲ್ಲಿ ರಾಮಸೈನ್ಯವನ್ನು ಸೋಲಿಸುತ್ತೇನೆಂದು ತಂದೆ ತಾಯಿಯ ಆಣೆ ಮಾಡಿ ಪ್ರತಿಜ್ಞಾಬದ್ಧನಾಗುತ್ತಾನೆ. ಈ ರೀತಿ ಆರ್ಭಟಿಸುತ್ತಿರುವ ತಂದೆಯ ಮಾತನ್ನು ಕೇಳಿದ ರಾವಣನ ಮತ್ತೋರ್ವ ಹೆಂಡತಿ ಧಾನ್ಯಮಾಲಿನಿಯಲ್ಲಿ ಜನಿಸಿದ ಅತಿಕಾಯ ತಂದೆಗೆ ಅಭಿನಮಿಸಿ ಶ್ರೀರಾಮನನ್ನು ಕೆಣಕುವುದು, ಅವನೊಟ್ಟಿಗೆ ಹೋರಾಟ ಮಾಡುವುದು ಕೇವಲ ವ್ಯರ್ಥ ಪ್ರಯತ್ನ, ಅದು ಅಂಬರವನ್ನು ಇರಿದು ನೋಯಿಸುತ್ತೇನೆ ಎಂದಂತೆ, ಎಂದು, ಈಗಾಗಲೇ ಖರಧೂಷಣ, ತ್ರಿಶಿರ ಮುಂತಾದ ರಕ್ಕಸರ ಪಾಡನ್ನು ತಿಳಿಸಿ ಸೀತೆಯನ್ನು ರಘುವರನಿಗಿತ್ತು ವಿಭೀಷಣನನ್ನು ಪ್ರೀತಿಯಿಂದ ಕರೆತಂದು ರಾಜ್ಯವನ್ನಾಳುವಂತೆ ನೀತಿಯನ್ನು ಹೇಳುತ್ತಾನೆ.

ಇದರಿಂದ ಕೋಪಗೊಂಡ ರಾವಣ, ಮಗ ಅತಿಕಾಯನಲ್ಲಿ ರಿಪುಮಥನಕ್ಕೆ ಹೋಗುವುದಾದರೆ ಹೇಳು ಹೊರತು ಕಥೆಯು ಇಲ್ಲಿ ಬೇಡವೆನಲು, ತಂದೆಯು ಅರಿಯದವನೇನಲ್ಲ, ಅವನ ಮನಸ್ಸಿನಲ್ಲಿ ಏನಿದೆಯೋ ಯಾರು ಬಲ್ಲರು ಎಂದು ತನಗೆ ತಾನೇ ಸಮಾಧಾನ ಹೇಳಿಕೊಂಡು ಯುದ್ಧಕ್ಕೆ ಹೊರಡಲುದ್ಯುಕ್ತನಾಗುತ್ತಾನೆ. ತಂದೆಯಿಂದ ರಣವೀಳ್ಯ ಪಡೆದ ಅತಿಕಾಯ ತುಳಸೀ ದಂಡೆಯನ್ನು ಕೊರಳಿಗೆ ಧರಿಸಿ ತ್ರಿಪುಂಡ್ರವನ್ನು ಹಣೆಯಲ್ಲಿ ಲೇಪಿಸಿಕೊಂಡು ತಾಯಿಗೆರಗಿ ಅಪ್ಪಣೆ ಪಡೆದು ನಂತರ ಸೈನಿಕರನ್ನು ಕುರಿತು, ಮೋಕ್ಷವನ್ನು ಬಯಸುವರು, ಹರಿಯನ್ನ ಸೇರುವ ಮುಕ್ತಿಪದದಾಸೆ ಉಳ್ಳವರೆಲ್ಲ ತನ್ನ ಸೇನೆಗೆ ಸೇರಿಕೊಂಡು ಸೆಣಸಲು ಆಹ್ವಾನಿಸುತ್ತಾನೆ, ವೈಷ್ಣವ ಶಿರೋಮಣಿ ಅತಿಕಾಯ. ಇವರ ಈ ಯುದ್ಧ ಸಂಭ್ರಮ ನೋಡಿ ಊರ ಪೌರರು ಅತಿಕಾಯನ ಸಾತ್ವಿಕ, ತೇಜಸ್ಸು ಗುಣಗಳನ್ನು ಕೊಂಡಾಡುವರು.

ನಾನಾ ವಾದ್ಯಘೋಷದಿಂದ ಮುಂದೊತ್ತಿ ಬರುವ ಅತಿಕಾಯವನ್ನು ನೋಡಿ ಶ್ರೀರಾಮನು ವಿಭೀಷಣನಲ್ಲಿ ಪ್ರಶ್ನಿಸಲು, ವೀರನಾದ ಇವನು ಭಕ್ತರೊಳು ವೆಗ್ಗಳ ನೀತ ಎಂದು ಪರಿಚಯಿಸಲು ಸುಗ್ರೀವಾದಿಗಳು ಬೆರಗಾಗಲು ವಾನರೆಲ್ಲರಿಗೂ ಯುದ್ಧಕ್ಕೆ ಸನ್ನದ್ಧರಾಗುವಂತೆ ಪ್ರೋತ್ಸಾಹಿಸುತ್ತಾನೆ. ಅತಿಕಾಯನೊಡನೆ ವಾನರ ವೀರರು ಹೋರಾಡುತ್ತ ದಣಿದಿರುವಾಗ ಲಕ್ಷ್ಮಣ ಧನುಶರ ಕೊಂಡು ಯುದ್ಧಕನುವಾಗುತ್ತಾನೆ. ಸಮರಕ್ಕೆ ಸನ್ನದ್ಧನಾದ ಲಕ್ಷ್ಮಣನನ್ನು ರಾಮ ತಕೈಸಿ ಬೀಳ್ಕೊಡುತ್ತಾನೆ.

ಲಕ್ಷ್ಮಣ ಅತಿಕಾಯರಲ್ಲಿ ಯುದ್ಧ ಸಂಧಣಿಸುತ್ತದೆ. ಲಕ್ಷ್ಮಣನ ಸತ್ವಯತ ಶರದ ಮುಂದೆ ಅತಿಕಾಯ ಸೋಲುತ್ತಾನೆ. ತನ್ನ ಯುದ್ಧವನ್ನು ಶ್ರೀಹರಿಪೂಜೆಯೆಂದು ತಿಳಿದು ಅಸ್ತ್ರ ಶಸ್ತ್ರಗಳನ್ನು ಲಕ್ಷ್ಮಣನಿಗೆ ಸಮರ್ಪಿಸಿ ಭಕ್ತಿಭಾವದಿಂದ ಯುದ್ಧ ಮಾಡುತ್ತಲೇ ತನ್ನ ಅಂತರಂಗದ ಒಲುಮೆ, ನಿಲುಮೆಯನ್ನು ತಿಳಿಸಲು, ಸಂತಸಗೊಂಡ ಲಕ್ಷ್ಮಣ ಅವನ ಅಸ್ತ್ರಗಳನ್ನು ಖಂಡಿಸದೇ ಅದನ್ನು ತನ್ನಲ್ಲಿ ಧರಿಸಿ ಅತಿಕಾಯನನ್ನು ಅನುಗ್ರಹಿಸುತ್ತಾನೆ. ತಾನು ಶ್ರೀರಾಮನನ್ನು ಧ್ಯಾನಿಸುತ್ತ ಬ್ರಹ್ಮಾಸ್ತ್ರವನ್ನು ಬಿಡುವಂತೆ ಲಕ್ಷ್ಮಣನಿಗೆ ಪ್ರಚೋದಿಸಲು ಲಕ್ಷ್ಮಣ ಆ ಮಹಾಸ್ತ್ರವನ್ನು ಬಿಡಲು, ಶ್ರೀರಾಮನನ್ನು ನೆನೆಯುತ್ತ ಅತಿಕಾಯ ಕಡಿದು ಬೀಳುತ್ತಾನೆ. ಸುರರು ಸುಮವೃಷ್ಟಿ ಕರೆಯಲು ವಿಭಿಷಣ ತೆರಳಿ ಹಾ ………! ಸುಕುಮಾರ ಎಂದು ಪ್ರಲಾಪಿಸುತ್ತಾನೆ. ವಿಭೀಷಣನನ್ನು ರಾಮ ಸಂತೈಸುತ್ತಾನೆ.

ಧಾನ್ಯಮಾಲಿನಿ ಕುವರನ ಮರಣದ ವಿಷಯ ತಿಳಿದು ರೋಧಿಸುತ್ತಾಳೆ. ಮಡದಿಯು ನಾನಾ ತರದಿಂದ ಶೋಕಿಸುವುದನ್ನು ಕಂಡು ರಾವಣ ವಿಷಯ ತಿಳಿದು ಸ್ವತಃ ಯುದ್ಧಕ್ಕೆ ಅನುವಾಗುತ್ತಾನೆ. ಅಸಮ ಸಾಹಸವನ್ನು ಮೆರೆಯುತ್ತ ದಶಕಂಠ ರಾವಣ ಮುನ್ನುಗ್ಗಲು, ಸುಗ್ರೀವ ಅವನಿಗೆ ಎದುರಾಗಿ ಯುದ್ಧಮಾಡಲು, ರಾವಣನ ಬಾಣಕ್ಕೆ ಸುಗ್ರೀವ ಮೂರ್ಚಿತನಾಗಲು, ಅಂಗದ ರಾವಣನನ್ನು ಎದುರಿಸುತ್ತಾನೆ. ಅಂಗದ ಮೂರ್ಛೆಗೊಳಗಾಗಲು ಜಾಂಬವ, ಶರಭ, ಮೈಂದ, ದ್ವಿವಿದ, ಗವಯ ಮುಂತಾದ ಕಪಿಗಳನ್ನು ಕೂಡಿ ಲಕ್ಷ್ಮಣ ಇದಿರಾಗುತ್ತಾನೆ. ಘೋರಯುದ್ಧ ಆರಂಭವಾಗುತ್ತದೆ. ಲಕ್ಷ್ಮಣನಿಗೆ ಸೋಲಾಗಬಹುದೆಂಬ ಶಂಕೆಯಿಂದ ಸ್ವಯಂ ವಿಭೀಷಣ ಗಧೆಯನ್ನು ಹಿಡಿದು ಸಹಾಯಕ್ಕೆ ಬರಲು ರಾವಣ ಅವನನ್ನು ಮೂದಲಿಸುತ್ತಾನೆ. ಮತ್ತು ಮಹಾಸ್ತ್ರವೊಂದನ್ನು ವಿಭೀಷನಿಗೆ ಬಿಡಲು, ಇದರಿಂದ ಆಗುವ ಅನಾಹುತ ಗ್ರಹಿಸಿ ಲಕ್ಷ್ಮಣ ಆ ಬಾಣಕ್ಕೆ ತಾನೇ ಇದಿರುನಿಂತು ಮೈಯಲ್ಲಿ ಧರಿಸಲು ಆತ ಮೂರ್ಛನಾಗುತ್ತಾನೆ. ಇವನ ದೇಹವನ್ನು ಎತ್ತೊಯ್ಯಲು ರಾವಣ ಪ್ರಯತ್ನಿಸಿ ಅದು ಬಲು ಭಾರವೆನಿಸುತ್ತದೆ. ರಾವಣನ ಉದ್ದೇಶ ತಿಳಿದ ಹನುಮಂತ ಘನಘೋರ ರೂಪದಿಂದ ದಶಶಿರನ ಎದುರಿಗೆ ನಿಲ್ಲಲು ಅವನ ಉಗ್ರರೂಪ ರಾವಣನಿಗೆ  ಭಯವುಂಟುಮಾಡಲು, ಹನುಮನು ಕೋಪದಿಂದ ಮುಷ್ಠಿಘಾತ ಮಾಡುತ್ತಾನೆ. ಇದರಿಂದ ರಾವಣನ ಹತ್ತೂ ಮುಖದಲ್ಲಿ ರಕ್ತ ವಾಂತಿ ಮಾಡಿ ರಥದಲ್ಲಿ ಸತ್ತವನಂತೆ ಬಿದ್ದುದು ನೋಡಿ ಹನುಮಂತ ಇವನು ರಾಮನಿಂದ ಹತನಾಗಬೇಕಾದವನಾದ್ದರಿಂದ ನನ್ನಿಂದ ಅಪಚಾರವಾಯ್ತು ಎಂದು ಮರಗುತ್ತಾನೆ. ಮತ್ತು ರಾವಣನನ್ನು ಉಪಚರಿಸಿ ಎಚ್ಚರಿಕೆ ನೀಡುತ್ತಾನೆ.

ಮೂರ್ಛಿತನಾದ ಲಕ್ಷ್ಮಣನನು ನೋಡಿ ಶ್ರೀರಾಮನು ತಡೆಯಲಾಗದೇ ನಾನಾಪರಿ ಗೋಳಾಡುತ್ತಾನೆ. ಕೋಪದಿಂದ ರಾವಣನನ್ನು ಯುದ್ಧಕ್ಕೆ ಆಹ್ವಾನಿಸಿ ಯುದ್ಧದಲ್ಲಿ ಅವನನ್ನು ನಿರಾಯುಧನಾಗಿಸಿ ಬಾಣದಿಂದ  ಅವನ ಕಿರೀಟ ಕುಂಡಾಲಗಳನ್ನು ಕತ್ತರಿಸಿ ಮೂದಲಿಸಲು ರಾವಣ ನಾಚಿ ಹಿಂದಿರುಗುತ್ತಾನೆ.

ಅಶೋಕವನದಲ್ಲಿ ಸೀತೆಗೆ ದುಃಸ್ವಪ್ನವಾಗಲು, ಆಕೆ ಭಯಗೊಳ್ಳಲು, ಸರಮೆ ತ್ರಿಜಟೆಯರು ಸಮಾಧಾನ ಹೇಳುತ್ತಾರೆ. ಇಲ್ಲಿ ರಾಮ ಲಕ್ಷ್ಮಣನಿಗಾಗಿ ಪರಿಪರಿ ವಿಲಾಪಿಸಲು ಜಾಂಬವ ಬಂದು ಲಕ್ಷ್ಮಣನನ್ನು ಸಂಜೀವಿನಿ ಔಷಧದಿಂದ ಬದುಕಿಸಲು ಸೂಚಿಸಲು ರಾಮ ಹನುಮನನ್ನು ಕರೆದು ಅದನ್ನು ತರುವಂತೆ ನೇಮಿಸುತ್ತಾನೆ.

ಹನುಮ ಸಂಜೀವಿನಿ ತರಲು ಹೊರಡುತ್ತಾನೆ. ಇದನ್ನು ಬೇವಿನ ಚರರು ರಾವಣನಿಗೆ ತಿಳಿಸಲು, ಈ ಕಾರ್ಯ ಕೆಡಿಸಲು ರಾತ್ರಿಕಾಲದಲ್ಲೇ ಕಾಲನೇಮಿ ಎಂಬ ರಕ್ಕಸನನ್ನು ನಿಯಮಿಸುತ್ತಾನೆ. ಕಾಲನೇಮಿ ದ್ರೋಣಪರ್ವತದಲ್ಲಿ ತನ್ನವರರೊಳಗೊಂಡು ಕಪಟಯತಿ ರೂಪದಿಂದ ಹನುಮಂತನನ್ನು ಮೋಸಗೊಳಿಸಲು ಯತ್ನಿಸುವ ಸಮಯದಲ್ಲಿ, ಸರೋವರದಲ್ಲಿ ಶಾಪದಿಂದ ಮೊಸಳೆಯಾಗಿದ್ದ ಮತ್ತು ಹನುಮನಿಂದ ಶಾಪ ವಿಮೋಚನೆಗೊಂಡ ದಿವಿಜ ನಾರಿಯು ವಿಷಯ ತಿಳಿಸಲು ಕೋಪಗೊಂಡ ಹನುಮ ರಕ್ಕಸರ ಮಾಯೆಯನ್ನು ಭೇದಿಸಿ ಅವರನ್ನು

ವಧಿಸಿ ಸಂಜೀವಿನಿ ಔಷಧ ಕೊಂಡು ರಣಾಂಗಣಕ್ಕೆ ಬರುವನು. ವೈದ್ಯ ಸುಷೇಣ ಅದನ್ನು ಸೌಮಿತ್ರಿಯ ನಾಸಪುಟಕ್ಕೆ ಹಿಡಿಯಲು ಲಕ್ಷ್ಮಣ ನಿದ್ರೆ ಕಳೆದವನಂತೆ ಏಳಲು ಎಲ್ಲರಿಗೂ ಅಪಾರ ಸಂತಸವಾಗುತ್ತದೆ. ಶ್ರೀರಾಮ ತೊಡೆಯ ಮೇಲೇರಿಸಿಕೊಂಡು ಲಕ್ಷ್ಮಣನನ್ನು ನಾನಾ ವಿಧ ಪ್ರೀತಿಯಿಂದ ಉಪಚರಿಸುತ್ತಾನೆ.

***ಸಮೀಕ್ಷೆ***

ಪ್ರಸಂಗದ ಆರಂಭದಲ್ಲಿ ಶ್ರೀರಾಮ, ಗಣಪ, ಹರ-ಗಿರಿಜೆ, ಸರಸ್ವತಿ, ಹನುಮ, ವಾಲ್ಮೀಕಿ, ಸಮಸ್ತ ಕವಿಗಳ ಸ್ಮರಣೆ ಹಗೂ ಲೋಕನಾಥನನ್ನು ವಂದಿಸಿ ಕವಿ ಈ ಪ್ರಸಂಗವನ್ನು ಶಿವ, ಪಾರ್ವತಿಗೆ ಕಥೆಯನ್ನು ಒರೆಯುವಂತೆ ಚಿತ್ರಿಸಿದ್ದಾನೆ. ಕವಿ ಆರಂಭದ ನಾಂದಿಪದ್ಯದಲ್ಲಿ ಗೋಷ್ಪ ಪಟ್ಟಣ ನಿಲಯ ಭಜುಗವಿಭೂಷಣ ಎಂದು ಕೊನೆಗೆ ಮಂಗಲ ಪದ್ಯದಲ್ಲಿ ಲೋಕನಾಥ ಸ್ಮರಿಸಿದ್ದಾನೆ.

ಅತಿಕಾಯನು ರಾಮಾಯಣದಲ್ಲಿ ಅಂಥ ಮಹತ್ವದ ಸ್ಥಾನವನ್ನು ಪಡೆದವನಲ್ಲವಾದರೂ ಈ ಪ್ರಸಂಗದ ಕಾರಣದಿಂದ ಜನಮಾನಸದಲ್ಲಿ ನೆಲೆಗೊಂಡಿದ್ದಾನೆ. ಇದು ಈ ಪ್ರಸಂಗದ ಉತ್ತಮಿಕೆಗೆ ಸಾಕ್ಷಿ. ಅತಿಕಾಯ ರಾವಣನ ಮಗ ಧಾನ್ಯಮಾಲಿನಿ ಅವನ ತಾಯಿ, ಮಹತ್ತರವಾದ ಕಾಯವಿದ್ದರೂ ಅವನು ಕ್ರೂರನಲ್ಲ. ರಾಕ್ಷಸರ ಮಧ್ಯದಲ್ಲಿಯೇ ಬೆಳೆದರೂ ಅವನು ರಕ್ಕಸ ಸ್ವಭಾವವನ್ನು ಹೊಂದಲಿಲ್ಲ. ನಿಸ್ಸೀಮ ಹರಿಭಕ್ತನಾಗಿ ಬೆಳೆಯುತ್ತಾನೆ. ರಾವಣನ ಪಾಳಯದಲ್ಲಿ ವಿಭೀಷಣನಿಗೆ ಸಮನಾದ ಭಕ್ತ. ಹಾಗಿದ್ದರೂ ಅವನು ವಿಭೀಷಣನಂತೆ ರಾವಣನನ್ನು ತೊರೆಯಲಿಲ್ಲ. ಹರಿಯನ್ನು ಎದುರಿಸಿ ಹೋರಾಡಿದರೆ ಹರಣವುಳಿಯುವುದಿಲ್ಲವೆಂದು ತಿಳಿದಾಗಲೂ ಅವನು ಮುನ್ನುಗ್ಗುತ್ತಾನೆ. ಯುದ್ಧದಲ್ಲಿ ಅಸಮ ಸಾಹಸವನ್ನು ಮೆರೆದು ಅಸ್ತಂಗತನಾಗುತ್ತಾನೆ. ಈ ವ್ಯಕ್ತಿತ್ವ ಯಕ್ಷಗಾನ ಪ್ರೀಯರ ಮನಸ್ಸನ್ನು ಸೂರೆಗೊಂಡಿದೆ. ಕೃತಿಯು ಇಂದಿಗೂ ತನ್ನ ಜನಪ್ರಿಯತೆಯನ್ನುಳಿಸಿಕೊಳ್ಳುವುದಕ್ಕೆ ಅತಿಕಾಯನ ಪಾತ್ರಚಿತ್ರಣವೇ ಪ್ರಮುಖ ಅಂಶ.

ಹಟ್ಟಿಯಂಗಡಿ ರಾಮಭಟ್ಟರ ಈ ಕೃತಿ ಪ್ರದರ್ಶನದ ದೃಷ್ಠಿಯಲ್ಲಿ ಅತ್ಯಂತ ಯಶಸ್ವಿ ಆಗಿರುವುದು ಎಲ್ಲರಿಗೂ ತಿಳಿದ ವಿಷಯವೇ. ಕೇವಲ ರಂಗಕೃತಿಯಾಗಿ ಮಾತ್ರವಲ್ಲ, ತಾಳೆಮುದ್ದಲೆಯಲ್ಲೂ ಈ ಪ್ರತಿ ಬಹುಪ್ರಸಿದ್ಧವಾದದ್ದೇ. ಇದಕ್ಕೆ ಮುಖ್ಯ ಕಾರಣ ಆತ ತನ್ನ ಪದ್ಯಗಳನ್ನು ಸುಮಧುರವಾದ ಶಬ್ದಗಳಿಂದ, ಅರ್ಥಗರ್ಭಿತವಾದ ನುಡಿಕಟ್ಟುಗಳಿಂದ ಸರಳವಾದ ನಿರೂಪಣೆಯಿಂದ ಹೆಣೆದಿರುವುದೇ ಆಗಿದೆಯಲ್ಲದೇ, ಅತ್ಯಂತ ಕ್ಲಿಷ್ಟ ಆಧ್ಯಾತ್ಮಿಕ ವಿಷಯವನ್ನೂ ಬಹಳ ಸರಳತೆಯಿಂದ ಪ್ರಸ್ತುತಪಡಿಸುವ ಅವನ ವಿಶಿಷ್ಟವಾದ ಕವಿತ್ವದ ಶಕ್ತಿಯಿಂದ ಎನ್ನಬಹುದು.

ಉದಾಹರಣೆಗೆ : ತಂದೆಯೊಟ್ಟಿಗಿನ ಅವನ ಸಂಭಾಷಣೆಯಲ್ಲಿ

**ರಾಗ : ಕಾಪಿ, ಅಷ್ಟತಾಳ**

***ಇರಿತಕಂಬರವಳುಕುವುದೆ ನೊರ***
***ಜುರಿಬಿದದಗ್ನಿಗೆ ನೋವುತಾಗುವುದೇ ॥***

***ಇರುವೆ ಕಚ್ಚಿದರೆ ಬೆಚ್ಚುವುದೆ ಸುರ***
***ಗಿರಿಯು ನಿನ್ನಧಟು ರಾಘವನೊಳೊಪ್ಪುವುದೇ ॥***

ಎಂಬ ಸರಳ ಆದರೆ ಸುಂದರ ಉಪಮೆಗಳ ಮೂಲಕ ತನ್ನ ವಾದಗಳನ್ನು ಮಂಡಿಸುವ ಈ ಪದ್ಯಕ್ಕೆ ಸಾಕಷ್ಟು ವಿಸ್ತರಿಸಿಕೊಂಡು ಅರ್ಥ ಹೇಳಲು ಅವಕಾಶವಿದೆ. ಕವಿ ಈ ಪ್ರಸಂಗದಲ್ಲಿ ಗೇಯತೆಯನ್ನು ರಂಗ ಗುಣವನ್ನು, ಕ್ಲಿಷ್ಟ ವಿಷಯಗಳನ್ನು ಸರಳವಾಗಿ ಹೇಳುವುದನ್ನ ಎಲ್ಲ ಕಡೆಗೂ ಮೆರೆದಿರುವುದು ಸ್ಪಷ್ಟವಾಗಿ ನೋಡಬಹುದು. ಅತಿಕಾಯನ ಪ್ರವೇಶದಲ್ಲೇ ಕವಿ ಅತಿಕಾಯನ ಘನ ವ್ಯಕ್ತಿತ್ವವನ್ನು ಒಂದು ಅಪೂರ್ವ ಶಬ್ದದಲ್ಲಿ ಕಟ್ಟಿಕೊಡುವುದು ಅನನ್ಯ! ಅನಘಮತಿಯತಿಕಾಯ ಪ್ರವೇಶಸುತ್ತಲೇ ಪಾತ್ರ ವಿಸ್ತರಣೆಗೆ ಪೀಠಿಕೆ ಬರೆಯಲ್ಪಡುತ್ತದೆ.

ಪ್ರಸಂಗ ರಾಮ ಲಕ್ಷ್ಮಣರ ಒಡ್ಡೋಲಗದಿಂದ ಆರಂಭವಾಗಿ, ಅಲ್ಲಿ ಮಹಾಕಪಿಗಳ ಉದ್ದಾಮ ಸಾಹಸವ ಕಂಡು, ಕೊಂಡಾಡುವುದು ಕಥೆಯ ಬೀಜ ಹಾಗೂ ಅಪ್ಪಟ ರಂಗ ಸಂಪ್ರದಾಯದ ಅನುಸರಣೆಯೂ ಹೌದು. ಸಾತ್ವಿಕ ಪಾತ್ರದಿಂದ ಕಥೆ ಆರಂಭವಾಗಬೇಕು ಎನ್ನುವುದು ಒಂದು ಒಪ್ಪಿತ ರಂಗ ಕ್ರಿಯೆಯಾಗಿದೆ.

ಕವಿ ಕಡೆದ ಪದ್ಯಗಳಲ್ಲಿ ಅಭಿನಯಕ್ಕೂ ಸಾಕಷ್ಟು ಅವಕಾಶಗಳಿವೆ. ರಾವಣ ಒಡ್ಡೋಲಗ ಕೊಟ್ಟು ಕುರಿಗೆ ಹೆಬ್ಬುಲಿಯಂಜುವುದೇ ಘಡ ಎಂದು ಆರ್ಭಟಿಸಿ ರಂಗದಲ್ಲಿ ಬಿಸಿ ಹುಟ್ಟಿಸಲು ಆರಂಭಿಸುತ್ತಾನೆ. ಸಾಮಾನ್ಯವಾಗಿ ಭಕ್ತಿಯ ಪ್ರಕಟಣೆಯ ಸಂದರ್ಭದಲ್ಲಿ ಕೇವಲ ಮಾತಿನ ಮೂಲಕ ರಂಗದ ಕಾವನ್ನು ಉಳಿಸಿಕೊಳ್ಳುವುದು ಹೆಚ್ಚಿನ ಪ್ರಸಂಗದಲ್ಲಿ ಅನಿವಾರ್ಯ. ಆದರೆ ಯುದ್ಧದಂತ ಸನ್ನಿವೇಶದಲ್ಲಿ ಆಧ್ಯಾತ್ಮಿಕ, ಸಮರ್ಪಣೆಯ ಸನ್ನಿವೇಶದಲ್ಲೂ, ಎಲ್ಲೂ ನೀರಸವಾಗದಂತೆ ಕಥೆ ಸಾಗುವುದು ಕವಿಶಕ್ತಿಯಿಂದ. ಇಂತಹ ವಿರಳ ಉದಾಹರಣೆಯೆಂದರೆ, ಸುಧನ್ವ ಕಾಳಗ, ಕರ್ಣಪರ್ವ ಎನ್ನಬಹುದು. ಅನೇಕ ಪ್ರಸಂಗಗಳಲ್ಲಿ ಅದರ ರಂಗ ಗುಣದ ಕೊರತೆಯಿಂದಾಗಿ ಹಲವಾರು ಪದ್ಯಗಳನ್ನು ಹಿಂದೆ ಮುಂದೆ ತರಬೇಕಾಗುತ್ತದೆ. ಅಥವಾ ಬೇರೆ ಪ್ರಸಂಗದಿಂದ ಬೇಕಾಗುವ ಪದ್ಯ ಎರವಲು ತರಬೇಕಾಗುತ್ತದೆ. ಆದರೆ ಈ ಪ್ರಸಂಗದಲ್ಲಿ ಅಂಥಹ ಅವಶ್ಯಕತೆಯೇ ಉದ್ಭವವಾಗದು. ಅಲ್ಲದೇ ಇಲ್ಲಿಂದಲೇ ಕೆಲ ಪದ್ಯಗಳನ್ನು ಬೇರೆ ಪ್ರಸಂಗ ಎರವಲು ಪಡೆದಿದೆ. ಉದಾ: ಇಂದ್ರಜಿತು ಕಾಳಗ. ಕವಿ ಆಧ್ಯಾತ್ಮಕದ ಸನ್ನಿವೇಷದಲ್ಲಿ ಎಲ್ಲೂ ಕೇವಲ ನಿಷ್ಕ್ರಿಯವಾಗಿ ನಿಂತು ಮಾತಿನ ಮನೆ ಕಟ್ಟುವುದಕ್ಕೆ ಮಾತ್ರ ಆಸ್ಪದ ಇರುವಂತೆ ನೋಡಿಕೊಂಡಿಲ್ಲ. ರಂಗ ಕ್ರಿಯಾಶೀಲತೆ ಮತ್ತು ಮಾತುಗಾರಿಕೆ ಒಟ್ಟೊಟ್ಟಿಗೆ ಸಾಗುಂತೆ ಹೆಣೆದಿದ್ದಾನೆ.

ಅತಿಕಾಯ ಕಾಳಗದ ಪದ್ಯಗಳು ಜನಮಾನಸದಲ್ಲಿ ನೆಲೆ ನಿಂತಿರುವುದನ್ನು ಯಕ್ಷಗಾನದ ಪ್ರೇಮಿಗಳೆಲ್ಲ ಬಲ್ಲರು. ಅದಕ್ಕೆ ಈಗಾಗಲೇ ನಾವು ನೋಡಿದ ಲಕ್ಷಣಗಳೇ ಬಹುಮಟ್ಟಿಗೆ ಕಾರಣ ಎಂದು ನನ್ನ ಅನಿಸಿಕೆ.

ರಾವಣನು ಯುದ್ಧದಲ್ಲಿ ಒಬ್ಬೊಬ್ಬರನ್ನಾಗಿ ಕಳೆದುಕೊಳ್ಳುತ್ತಿದ್ದರೂ ರಾಮನನ್ನು ಸಂಹರಿಸುತ್ತೇನೆಂದು ಅಬ್ಬರಿಸುತ್ತಿರುವ ತಂದೆಯಾದ ರಾವಣನಿಗೆ ಅತಿಕಾಯನು ಮಾಡುವ ನೀತಿ ಬೋಧನೆಯ ಪದ್ಯಗಳು ಈ ಕೃತಿಯ ಅತ್ಯಂತ ಪ್ರಸಿದ್ಧ ಹಾಡುಗಳಾಗಿವೆ. ಅದು ಹೀಗೆ:

**ರಾಗ : ಕಾಪಿ, ಅಷ್ಟತಾಳ**

*ಏತಕೆ ಮರುಳಾದೆ ತಾತ ರಘು*
*ನಾಥನೊಳ್ ಕಲಹವೆ ಲೋಕವಿಖ್ಯಾತ ॥*
*ಸಕಲ ಲೋಕೈಕ ನಾಯಕನು ಸರ್ವಾ*
*ತ್ಮಕನು ಸರ್ವರ ರಕ್ಷಿಸುವ ದೈವನವನು ॥*
*ಮುಕುತಿದಾಯಕನು ಶಾಶ್ವತನು ನಿನ್ನ*
*ಯುಕುತಿ ನಡೆಯದಾದಿ ವಸ್ತು ರಾಘವನು ॥*
*ಕಡುಗಲಿ ಖರನೆಲ್ಲಿಪೊದ ಹಿಂದೆ*
*ಅಡವಿಯೊಳ್ ವೀರಾಧಿವೀರನೇನಾದ॥*
*ಬಿಡದೆ ಯೋಚಿಸಿ ನೀನು ನೋಡುಜಗ*
*ದೊಡೆಯ ರಾಮನ ಕೆಣಕಲು ಬಂತು ಕೇಡು ॥*

ಎಂದು ತಂದೆಗೆ ತಿಳುವಳಿಕೆಯನ್ನು ಹೇಳುವಾಗ ಅತೀ ಜಾಗರೂಕತೆಯಿಂದ, ಮೆದುವಾಗಿ ಆದರೆ ಅಷ್ಟೆ ಗಟ್ಟಿಯಾದ ತತ್ವವನ್ನು, ತಥ್ಯವನ್ನು ಹೇಳುವ ಪದ್ಯಗಳು ಔಚಿತ್ಯಪೂರ್ಣ.

ಆಗ ರಾವಣ,

*ಅತಿಕಾಯನೆ ನೀ ಕೇಳು ರಿಪು*
*ಮಥನಕೆ ಪೋಪಡೆ ಪೇಳು ॥*

ಎಂದು ನೇರವಾಗಿ ತನ್ನ ಮುಖ್ಯ ಆಸಕ್ತಿಯಾದ ಯುದ್ಧದತ್ತ ಲಕ್ಷ್ಯ ಸೆಳೆದು ವಿಷಯವನ್ನು ಮುನ್ನೋಟಕ್ಕೆ ತರುವುದು ಔಚಿತ್ಯಪೂರ್ಣ. ಇಲ್ಲಿ ತಂದೆಯ ಎದುರಿಗೆ ಮಾರ್ಮಿವಾಗಿ, ಕುಲಂಕುಷವಾಗಿ ಅತಿಕಾಯನಿಗೆ ಅಭಿಪ್ರಾಯ ಹೇಳಲು ಬಿಡುವ ರಾವಣ ಅದಕ್ಕೆಲ್ಲ ಉತ್ತರಕೊಡುತ್ತಾ ಹೋದರೆ ಬಹುಶಃ ಕಥೆಯ ಬಿಗಿ, ಬಂಧ ಸಡಿಲವಾಗುತ್ತಿತ್ತೇನೋ. ಆದರೆ ತಂದೆಯ ನಿಲುವನ್ನು ಅತಿಕಾಯನ ಮನಸ್ಸು ಅವನಿಗಿರುವ ಸಂಸ್ಕಾರದಿಂದ ತಾನೇ ವಿಶ್ಲೇಷಣೆಗೆ ಅವಕಾಶ ಮಾಡಿಕೊಡುವುದನ್ನು ಕಾಣಬಹುದು. ಅಹುದು ಮತ್ತೇನಾರ ಚಿತ್ತದಲ್ಲಿ ಗ್ರಹಿಸಿಕೊಂ ಡಿಹುದನವರೇ ಬಲ್ಲರೆನುತ ॥ಎಂದು ನಿರ್ಣಯಿಸುವುದು ಇಂದಿನ ಸಂದರ್ಭದಲ್ಲೂ ಪ್ರಸ್ತುತವಾಗುವ ನಿಲುವು. ನಾವು ನಮ್ಮದೇ ನೆಲೆಯಿಂದ ಜಗತ್ತನ್ನ, ವ್ಯಕ್ತಿಯನ್ನ ನೋಡುವ ಬದಲು **ಮತ್ತೇನಾರ ಚಿತ್ತದಲಿ ಗ್ರಹಿಸಿಕೊಂಡಿರುವುದನ್ನು** ಒಪ್ಪುವ ರೀತಿ, ನೆಲೆ, ಅತಿಕಾಯನ ವ್ಯಕ್ತಿತ್ವದ ಜೊತೆಗೆ ಕವಿಯನ್ನೂ ಎತ್ತರಿಸುತ್ತದೆ. ಅಂತೆಯೇ ತನ್ನ ಹಿತವಚನವನ್ನು ತಿರಸ್ಕರಿಸಿದ ತಂದೆಯ ಅಪ್ಪಣೆಯನ್ನು ಪಡೆದು ಯುದ್ಧಕ್ಕೆ ಹೊಡುವಾಗಿನ ಅವನ ಭಾವವನ್ನು ವ್ಯಂಜಿಸುವ ಪದ್ಯಗಳು ಅತಿಕಾಯನ ಪರಮಭಕ್ತಿಯನ್ನು ಸಾರುತ್ತದೆ.

**ರಾಗ : ಕಾಂಬೋಧಿ ಝಂಪೆತಾಳ**

*ಬನ್ನಿರೈ ಸಂಸಾರ ಶರಧಿಯನು ದಾಟುವರು*
*ಬನ್ನಿರೈ ಮೋಕ್ಷಕಾಂಕ್ಷಿಗಳು॥*
*ಬನ್ನಿರೈ ಬಹಳ ಪದವಿಯನು ಬಯಸುವ ಸುಭಟ*
*ರೆನ್ನೊಡನೆ ನೀವೆನುತ ಕರೆದ ॥*

ಹಾಗೆಯೇ : *ನೀವು ಜಗದಧಿದೈವವೆಂಬುದ ನಾವು ಬಲ್ಲೆವು ನಮ್ಮ ಕುಲದ ಸ್ವ*
*ಭಾವವನು ನಾವ್ ಬಿಡಲು ಬಹುದೇ ಪೂರ್ವಪದ್ಧತಿಯ ॥*

ಎಂದು ತನ್ನ ನಿಲುವನ್ನ (ರಾಕ್ಷಸರ ಯಾವುದೇ ಕುಟಿಲತೆ ಇಲ್ಲದೇ) ಸಮಾಧಾನದಿಂದ ಸಮರ್ಥಿಸಿಕೊಳ್ಳುವುದನ್ನು ಕಾಣಬಹುದು.

ರಣರಂಗದಲ್ಲಿ ಬಾಣ ಪ್ರಯೋಗದ ಸಂದರ್ಭದಲ್ಲಿ ಇದೆಯಾವಾಹನ ನೋಡು ಎಂಬ ಪದ್ಯದ ಮೂಲಕ ಭಕ್ತಿ ಉತ್ಕಟತೆಯ ಪರಾಕಾಷ್ಟೆಯನ್ನು ಕವಿ ಆ ಪಾತ್ರಕ್ಕೆ ದೊರಕಿಸಿಕೊಡುತ್ತಾನೆ.

*ಆಯಿತಕಟಾ ತಂದೆಯಾಯುಷಕೆ ಕಡೆಯನ್ನು*
*ಬಾಯಾರಲೇಕೆ ನಾವಿದಕೆ॥* ಎನ್ನುತ್ತ,

*ಕಾಯವಿದ್ದಾಗ ನಾರಾಯಣನ ಪಾದವನು*
*ಪ್ರೇಯದಿಂ ಸ್ಮರಿಸಬೇಕೆಂದ ॥*

ಎಂಬ ಸಂದೇಶವನ್ನು ಜನಕ್ಕೆ ತಲುಪಿಸುವುದನ್ನು ಕಾಣಬಹುದು.

ಅತಿಕಾಯನ ಮರಣಕ್ಕೆ ಸ್ವತಃ ವಿಭೀಷಣನ ರೋಧನ ಮಾರ್ಮಿಕವಾಗಿದೆ.

*ಯಾರು ಬದುಕಿರ್ದು ಫಲವೇನು ನೀನಳಿಯೇ*
*ತೀರಿತೆಮ್ಮಾಯುಷ್ಯವು ರಿಪುತಿಮಿರಭಾನು ॥*

ಎಂದಳಲುವಾಗ ದುಃಖ ಮಡುಗಟ್ಟುತ್ತದೆ. ಅತಿಕಾಯನ ಸಾರಥಿ ಹಿಂದಿರುಗುವ ಪರಿಯನ್ನ ಕವಿ ವರ್ಣಿಸುತ್ತ ಕೊನೆಗೆ ಬರಿದಾದ ರಥವನ್ನ ಕಂಡು ಮರಗುವ ತಾಯಿ ಧಾನ್ಯಮಾಲಿನಿ, **ಸಾಕಿದಕ್ಕುಪಕಾರ ಸಾಕಯ್ಯ ಸುಕುಮಾರ** ॥ಎಂದಳುವಾಗ, **ಹೊಟ್ಟೆಯ ಮೇಲೆ ಕಲ್ಲಿಟ್ಟು ಬಿಟ್ಟು ಹೋದೆಯಲ್ಲ ಕಂದ** ಎಂಬ ಹೊಸ ಉಪಮಾನದಿಂದ ನೋವಿನ ತೀವ್ರತೆಗೆ ಪುಷ್ಟಿ ದೊರೆಯುತ್ತದೆ.

ಪ್ರದರ್ಶನದಲ್ಲಿ ಅತಿಕಾಯನ ಮರಣದ ನಂತರದ ಭಾಗವನ್ನು ಆಡುವ ಪದ್ಧತಿ ಇಲ್ಲ. ಆದರೆ ಈ ಮುಂದಿನ ಭಾಗದಲ್ಲೂ ಕವಿಯು ಅದನ್ನು ರಂಗಕೃತಿಯಾಗಿಸುವುದಕ್ಕೆ ವಿಫುಲ ಅವಕಾಶ ಒದಗಿಸಿದ್ದಾನೆ.

**ರಾಗ : ನೀಲಾಂಬರಿ, ಏಕತಾಳ**

**ಚೆಣ್ಣನ ಕಳುಹಿದಿರೆ  ಹಬ್ಬವವನೆನ್ನ**
**ಕಣ್ಣಿಗೆ ಮಾಡಿದಿರೆ ॥**
**ಎಣ್ಣಿದ ಬಯಕೆ ತೀರ್ದುದೆ  ಹಾಲ ಕೊಂಡಂತೆ**
**ತಣ್ಣಗೆ ಹೊಟ್ಟೆಗಾದುದೆ  ॥**

ಎಂದು ಅತಿಕಾಯನ ಮರಣಕ್ಕಾಗಿ ಅಳುವ ತಾಯಿ ಒಡಲು, ದುಃಖದ ಕಡಲಾಗುವುದರ ಚಿತ್ತಾರ ಯಾರ ಹೃದಯವನ್ನೂ ಕರಗಿಸುವಂತಹದ್ದು. ಇಲ್ಲಿನ ಭಾವ ತೀವ್ರತೆ ಹೃದಯವನ್ನು ಕಲಕುತ್ತದೆ. ಪ್ರಸಂಗದುದ್ದಕ್ಕೂ ಇಂಥ ರಚನೆಗಳು ಸಾಕಷ್ಟು ದೊರೆಯುತ್ತವೆ.

ಈ ಘಟನೆಗಳಿಗೆ ರಾವಣನನ್ನು ತರಾಟೆಗೆ ತೆಗೆದುಕೊಳ್ಳುವ ಧಾನ್ಯಮಾಲಿನಿಯನ್ನು ಸಮಾಧಾನ ಮಾಡುವ ಛಾತಿ ಇಲ್ಲದೇ ತನ್ನ, ಅಸಾಯಕತೆಯನ್ನ ಕೋಪವಾಗಿ ಮಾರ್ಪಡಿಸಿಕೊಂಡು ರಾವಣ ಅತಿಕಾಯನ ಕೊಂದವರನ್ನ

**ಪೇಳು ಸಾರಥಿಮಗನ ಮಡುಹಿದ  ಖೂಳನಾದವವನೀಗಳೆ ಬೀಳುಗಡಿವೆನು ರಣದೊಳೆ** ಎಂದು ಪ್ರತಿಜ್ಞೆ ಮಾಡುತ್ತಾನೆ.

ರಾವಣ ಯುದ್ಧಕ್ಕೆ ಹೊರಡುವ ಬಗೆಯನ್ನು ಕವಿ ಅಚ್ಚುಕಟ್ಟಾಗಿ ವಿವರಿಸುತ್ತಾನೆ. **ಆನೆಗಳ ಹಿಂಡ ಪಂಚಾನನನು ಪೊಗುವಂತೆ** ರಣಾಂಗಣಕ್ಕೆ ಧಾವಿಸುವನು. ಆಮೇಲೆ ಸಂಜೀವಿನಿ ತರುವ ಪ್ರಸಂಗ, ಅದಕ್ಕೆ ಆಗುವ ಅಡೆ ತಡೆ ರಾಮನ ದುಃಖ, ಸಂಜೀವಿನಿ ಬಂದ ಸಂಭ್ರಮ, ಹೀಗೆ ಹಲವು ರೋಚಕ ಘಟನೆಗಳನ್ನ ಕವಿ ಮನೋಜ್ಞವಾಗಿ ಹೆಣೆದಿದ್ದಾನೆ. ಕೆಲವು ಅಪರೂಪದ ಮಟ್ಟುಗಳನ್ನು ಕವಿಯು ಪ್ರಯೋಗಿಸಿರುವುದನ್ನು ಕಾಣಬಹುದು.

ಉದಾ:

**ರಾಗ ತುಜಾವಂತ ಝಂಪೆತಾಳ**

*ಲಾಲಿಸೈ ಪುಣ್ಯಜನಕುಲ ಸಾರ್ವಭೌಮ*
*ಹೇಳಲಿನ್ನೇನದನು ಸಮರ ನಿಸ್ಸೀಮ॥*
*ಏನನೆಂಬೆನು ನಿನ್ನ ಸೂನುವಿನ ಸಾಹಸವ*
*ವಾನರ ಮಹಾಬಲವ ಮೊದಲು ಪೊಕ್ಕು ॥*

*ಆನೆಗಳ ಹಿಂಡ ಪಂಚಾನನು ಪೊಗುವಂತೆ*
*ಹಾನಿಗಯ್ದನು ಬೃಹಳ ಕರಡಿ ಕಪಿಗಳನು ॥*

ಒಟ್ಟಾರೆಯಾಗಿ ಹೇಳುವುದಾದರೆ ಈ ಪ್ರಸಂಗವನ್ನು ರಚಿಸಿದ ಹಟ್ಟಿಯಂಗಡಿ ರಾಮ ಭಟ್ಟ ಒಬ್ಬ ಶ್ರೇಷ್ಠಮಟ್ಟದ ಯಕ್ಷಗಾನ ಪ್ರಸಂಗಕಾರ. ರಂಗಕ್ಕೆ ಹೊಂದುವ ಕೃತಿಗಳನ್ನು ರಚಿಸಿದ್ದಲ್ಲದೆ ಯಕ್ಷಗಾನ ಪ್ರಸಂಗ ರಚನೆಗೆ ಮಾದರಿಯಾಗುವಂತೆ ರಚಿಸಿದ್ದಾನೆ. ಮುಂದಿನ ಕೆಲವು ಕವಿಗಳಲ್ಲಿ ಕಾಣುವ ಪಾಂಡಿತ್ಯ ಪ್ರದರ್ಶನ, ಪ್ರಾಸವ್ಯಾಮೋಹಗಳೇ ಮುಂತಾದವು ಅವನಲ್ಲಿ ಕಾಣುವುದಿಲ್ಲ; ಸರಸತೆಗೆ ಬರವೂ ಇಲ್ಲ. ಯಕ್ಷಗಾನ ಸಾಹಿತ್ಯದ ಸಮೃದ್ಧಿಗೆ ಅವನ ಕಾಣಿಕೆ ದೊಡ್ಡದು.

**ಅತಿಕಾಯಕಾಳಗ** ಈ ಕೃತಿಯನ್ನು ಶ್ರೀಕೃಷ್ಣ ಮುದ್ರಣಾಲಯ ಉಡುಪಿ (ವರ್ಷ - 1950 ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ ಉಡುಪಿ) ಇವರ ಪ್ರಕಟಿತ ಪ್ರಸಂಗ ಪುಸ್ತಕದಿಂದ ಆಯ್ದುಕೊಂಡಿದ್ದೇನೆ. (ಪದ್ಯಗಳು ಸುಮಾರು 353)

***ಕವಿ ಪರಿಚಯ :***

**ಹಟ್ಟಿಯಂಗಡಿ ರಾಮಭಟ್ಟ (ಸು.17ನೇ ಶತಮಾನ)**

ಈತನು ಕುಂದಾಪುರ ತಾಲೂಕಿನ ಹಟ್ಟಿಯಂಗಡಿಯವನು. ಈತನ ತಂದೆ ಸೂರಭಟ್ಟ. ಬೈಸಗಲ್ಲು ಶಂಕರಯ್ಯ ಎಂಬ ಯೋಗಿಯ ಶಿಶ್ಯವೃತ್ತಿಯಲ್ಲಿ ಇದ್ದಂತೆಯೂ ಕಂಡುಬರುತ್ತದೆ. ಕೃಷ್ಣಾರ್ಜುನ ಕಾಳಗ ಬರೆದ ಹಳೆಮಕ್ಕಿ ರಾಮ ಕೂಡಾ ಇದೇ ಶಂಕರಯ್ಯನನ್ನು ತನ್ನ ಗುರು ಎಂದು ಹೇಳಿಕೊಂಡಿದ್ದಾನೆ. ಈತನ ಕೃತಿಗಳು ಲವಕುಶ, ದ್ರೌಪದಿ ಸ್ವಯಂವರ, ಅತಿಕಾಯ ಕಾಳಗ, ಸುಭದ್ರಾ ಪರಿಣಯ, ಧ್ರುವ ಚರಿತ್ರೆ, ರತಿ ಕಲ್ಯಾಣ ಬಿಲ್ಲ ಹಬ್ಬ ಮತ್ತು ಕಂಸವಧೆ, ರಾಜಸೂಯ, ಸುಲೋಚನ ಚರಿತ್ರೆ, ಸೇತುಮಾಧವ, ಶೇಷಗರ್ವಾಪಹರಣ, ಗಿರಿಜಾ ವಿಲಾಸ, ಇಂದ್ರಜಿತು ಕಾಳಗ, ಪ್ರಸಂಗ ರಚನಾ ಕೌಶಲ್ಯದ ದೃಷ್ಟಿಯಿಂದ ಒಬ್ಬ ಪ್ರಮುಖ ಕವಿ. ಕ್ರಿ.ಶ.1674ರಲ್ಲಿ ಈತ ತೀರಿಕೊಂಡಿರಬಹುದೆಂದು ಡಾ॥ಶಿವರಾಮ ಕಾರಂತರು ತಮ್ಮ ಯಕ್ಷಗಾನ (ಪುಟ-49-ಪ್ರಕಟಣೆ 1974) ಪುಸ್ತಕದಲ್ಲಿ ಆ ಪ್ರಸಂಗಗಳ ಪಟ್ಟಿಯನ್ನು ಹಾಗೂ ಮೇಲಿನ ಮಾಹಿತಿಯನ್ನು ಒದಗಿಸಿದ್ದಾರೆ. ತನ್ನ ಎಲ್ಲ ಕೃತಿಗಳಲ್ಲಿ ಹಟ್ಟಿಯಂಗಡಿಯ ಲೋಕನಾಥನ ಸ್ಮರಣೆಯನ್ನು ರಾಮಭಟ್ಟನು ಮಾಡಿರುತ್ತಾನೆ. ಲೋಕನಾಥ, ಲೋಕೇಶ, ವಜ್ರಪುರಪತಿ, ಗೋಷ್ಠಪುರೀಶ ಮೊದಲಾದ ಅಂಕಿತಗಳನ್ನು ಈತನು ಬಳಸಿದ್ದಾನೆ.

ಅತಿಕಾಯ ಕಾಳಗದಲ್ಲಿ ಮೂಲ ರಾಮಾಯಣದಲ್ಲಿ ಇಲ್ಲದ ವೈಶಿಷ್ಟ್ಯ ವಿಷ್ಣುಭಕ್ತ ಸ್ವಭಾವದಲ್ಲಿ ಅತಿಕಾಯನನ್ನು ಚಿತ್ರಿಸಿರುವುದು ವೈಶಿಷ್ಟ್ಯಪೂರ್ಣವಾಗಿದೆ. ಯಕ್ಷಗಾನದ ರಾಕ್ಷಸ ವ್ಯಕ್ತಿತ್ವಗಳಲ್ಲಿಯೇ ಅತಿಕಾಯನು ಪ್ರತ್ಯೇಕವಾಗಿ ನಿಲ್ಲುವಂತೆ ರಾಮಭಟ್ಟನು ಚಿತ್ರಿಸಿರುತ್ತಾನೆ. ಧ್ರುವಚರಿತ್ರೆ, ಬಿಲ್ಲಹಬ್ಬ-ಕಂಸವಧೆ ಮತ್ತು ಸುಧಾಮ ಚರಿತ್ರೆ ಇವು ಮೂರು ಅವನ ಭಾಗವತದ ಯಕ್ಷಗಾನ ಪ್ರಸಂಗಗಳು.

(ಮಾಹಿತಿ : ಡಾ. ಪಾದೇಕಲ್ಲು ವಿಷ್ಣುಭಟ್ ಮತ್ತು ಡಾ.ಶಿವರಾಮ ಕಾರಂತರ ಯಕ್ಷಗಾನ ಗ್ರಂಥಗಳಿಂದ)

* * *

# 4. ಕಾಲನೇಮಿ ಕಾಳಗ

**ಕಥಾಸಾರ:**

ಶ್ರೀರಾಮ ಗಣಪತಿ ಶಿವ, ಪಾರ್ವತಿ, ಆಂಜನೇಯ, ಲಕ್ಷ್ಮೀ, ಸರಸ್ವತಿ ಅಲ್ಲದೇ ಕವಿಗಳ ಚಾರುಚರಣಕೆ ವಂದಿಸಿ ಕಥೆಯನ್ನು ಆರಂಭಿಸುತ್ತಾನೆ. ರಜತಾದ್ರಿಯಲ್ಲಿ ಹರನು, ಪರಮ ಪಾವನ ಸೀತಾರಾಮ ಚರಿತ್ರೆಯನ್ನು ಪಾರ್ವತಿಗೆ ಹೇಳಿದುದನ್ನು ನೈಮಿಶಾರಣ್ಯದ ಸೂತಮುನಿ, ಶೌನಕ ಮುಖ್ಯ ಮುನಿಗಳಗೆ ಹೇಳಿದರು.

ಅತಿಕಾಯ ಮುಂತಾದ ರಕ್ಕಸರಳಿಯೆ, ಶ್ರೀರಾಮ ತನ್ನ ಸಹೋದರ ಲಕ್ಷ್ಮಣನನ್ನು ಆ ಕಾರ್ಯಕ್ಕಾಗಿ ಪ್ರಶಂಸಿಸುತ್ತಾನೆ. ಹನುಮ ಜಾಂಬವಾದಿಗಳನ್ನು ಕೃತಜ್ಞತೆಯಿಂದ ಕೊಂಡಾಡುತ್ತಾನೆ. ತನ್ನ ಬಳಗ ಕಾಳಗದಿಂದ ಬಳಲಿ ಬವಣೆಗೊಂಡಿತಲ್ಲ ಎಂದು ಮರುಗಲು ಮುಂದೆ ರಾವಣನೆಂಬ ದೈತ್ಯನ ಕೊಲ್ಲುವುಪಾಯ ಏನೆಂದು ಪ್ರಶ್ನಿಸಿದಾಗ ಸುಗ್ರೀವನು ಶ್ರೀರಾಮನಲ್ಲಿ ತವಪಾದ ಮಹಿಮೆಯಿಂದ ಇದೊಂದು ಕಾರ್ಯವೆಸಗಲು ಏನೂ ಚಿಂತೆಬೇಡ ಎಂದು ಹೇಳುತ್ತಾನೆ.

ಇತ್ತ ರಾವಣನೂ ಅತಿಕಾಯನ ಯುದ್ಧ ವಾರ್ತೆಯ ಕುತೂಹಲದಲ್ಲಿರಲು, ದೂತನೋರ್ವ ಬಂದು ಅತಿಕಾಯ ಲಕ್ಷ್ಮಣನ ಬಾಣದಿಂದ ಮಡಿದ ವಿಷಯ ತಿಳಿಸಲು, ರಾವಣ ಹಾಗೂ ರಕ್ಕಸವೀರರು ದುಃಖದಿಂದ ಕುಸಿಯುತ್ತಾರೆ. ರಾವಣ ಮರುಗುತ್ತಿರುವ ಸಮಯದಿ, ಮಂಡೋದರಿ ಬಂದು ಶ್ರೀರಾಮನಿಗೆ ಶರಣಾಗುವಂತೆ ತಿಳಿಯ ಹೇಳಲು, ಅದನ್ನು ನಿರಾಕರಿಸಿ, ರಾಮನಿಗೆ ಯುದ್ಧದಲ್ಲಿ ಎದುರಾಗಿ ಶ್ರೀಹರಿಯ ಪಾದವನ್ನು ಸೇರುವೆ, ತಾನೂ ಎಲ್ಲವನ್ನು ತಿಳಿದವನೇ ಎಂದು ತನ್ನ ನಿಲುವನ್ನು ಸಮರ್ಥಿಸಿಕೊಂಡು, ನಾಳಿನ ಯುದ್ಧಕ್ಕೆ ಆಯುಧಪೂಜೆ ಮಾಡಿ ದುರ್ಗೆಯನ್ನು ಸ್ತುತಿಸಿ ಬಲಿಗಳನ್ನು ನೀಡಿ ಸಿದ್ಧನಾಗುತ್ತಾನೆ.

ರಾವಣ ಮರುದಿನ ಒಡ್ಡೋಲಗವ ಕೊಟ್ಟಿರಲು, ರಕ್ಕಸ ವೀರರಾದ ಮಕರಾಕ್ಷ, ಕುಂಬ, ನಿಕುಂಬ ಮುಂತಾದ ದೈತ್ಯರು ರಾವಣನ ಅಪ್ಪಣೆಗೆ ಕಾದಿರುವ ಸಮಯದಿ, ಇಂದ್ರಜಿತು ಬಂದು ತಂದೆಗೆ ವಂದಿಸಿ ಯುದ್ಧಕ್ಕೆ ಅಪ್ಪಣೆ ಬೇಡುವನು. ಮಗನನ್ನು ತಡೆದು ತಾನೇ ಸಮರಕ್ಕೆ ಹೊರಟ ರಾವಣನಿಗೆ ಪತ್ನಿ ಮಂಡೋದರಿ ರತುನದಾರತಿ ಎತ್ತಿ ಶುಭಹಾರೈಸುತ್ತಾಳೆ.

ರಣಾಂಗಣದಲ್ಲಿ ಘೋರ ಸಮರವಾರಂಭವಾಗುತ್ತದೆ. ಕಪಿಗಳು ನಾನಾ ರೀತಿಯಲ್ಲಿ ರಾವಣನ ಮೇಲೇರಿಬಂದು ಯುದ್ಧಮಾಡುತ್ತಾರೆ. ರಾವಣ-ಲಕ್ಷ್ಮಣರ ಯುದ್ಧದಲ್ಲಿ ಲಕ್ಷ್ಮಣ ಮೂರ್ಛಾಗತನಾಗುತ್ತಾನೆ. ಹನುಮಂತ ಕೋಪದಿಂದ ರಾವಣನ ಮೇಲೆರಗಿ ಮುಷ್ಟಿಘಾತದಿಂದ ಅವನನ್ನು ಕೆಡಹುತ್ತಾನೆ. ರಾವಣ ಮೂರ್ಛೆತಳೆದು ಬೀಳಲು, ಹನುಮನೇ ಅವನನ್ನು ಉಪಚರಿಸಿ ಎಬ್ಬಿಸುತ್ತಾನೆ.

ಶ್ರೀರಾಮ ರಾವಣನೊಡನೆ ಯುದ್ಧಕ್ಕೆ ತೊಡಗುತ್ತಾನೆ. ರಾಮನ ಬಾಣಕ್ಕೆ ರಾವಣ ಸರ್ವವನ್ನು ಕಳೆದುಕೊಂಡು ನಾಚಿಕೆಯಿಂದ ಮನೆಗೆ ಹಿಂದಿರುಗುವನು. ಇತ್ತ ಶ್ರೀರಾಮನು ಮೂರ್ಛಾಗತನಾದ ಲಕ್ಷ್ಮಣನನ್ನು ಕಂಡು ಮರುಗುವನು. ಜಾಂಬವನ ಸೂಚನೆಯಂತೆ ಹನುಮಂತನು ಸಂಜೀವಿನಿ ತರಲು ಹೊರಡುತ್ತಾನೆ.

ಸೀತೆ ಅಶೋಕವನದಲ್ಲಿ ಸರಮೆಯಿಂದ ಸಮರ ವೃತ್ತಾಂತ ತಿಳಿಯುತ್ತಾಳೆ. ಲಕ್ಷ್ಮಣ ಮೂರ್ಛಾಗತನಾಗಿರುವುದಕ್ಕೆ ಶೋಕಿಸುತ್ತಾಳೆ. ಸರಮೆ ಸಮಾಧಾನಪಡಿಸುತ್ತಾಳೆ.

ಇತ್ತ ಹನುಮ ಸಂಜೀವಿನಿಯನ್ನು ತರಲು ಹೋದ ಸುದ್ದಿ ತಿಳಿದ ರಾವಣ ವ್ಯಥೆಪಡುತ್ತಾನೆ. ಕಾಲನೇಮಿಯನ್ನು ಕಂಡು ಹನುಮಂತನನ್ನು ಈ ಕೆಲಸದಿಂದ ವಿಮುಖನಾಗಿಸಲು ಪ್ರಯತ್ನಿಸಬೇಕೆಂದು ಕೇಳಿಕೊಂಡಾಗ ಕಾಲನೇಮಿ ರಾವಣನಿಗೆ ಬುದ್ಧಿ ಹೇಳಲು, ಕುಪಿತಗೊಂಡ ರಾವಣ ಗದರಿಸಿ ಒಪ್ಪಿಸುತ್ತಾನೆ. ಕಪಟರೂಪ ಧರಿಸಿ ಕಾಲನೇಮಿ ಚಂದ್ರದ್ರೋಣ ಪರ್ವತದಲ್ಲಿ ಮಾರುತಿಗಾಗಿ ಕಾಯುತ್ತಾನೆ. ಮಾರುತಿಯು ಕಾಲನೇಮಿ ತೋರಿದ ಸರೋವರದಲ್ಲಿ ನೀರು ಕುಡಿಯುತ್ತಿರುವಾಗ, ಶಾಪದಿಂದ ಮೊಸಳೆಯಾಗಿ ಕಾಲುಹಿಡಿದ

ದಿವಿಜನಾರಿಯನ್ನು ಶಾಪಮುಕ್ತಗೊಳಿಸಿ, ಅವಳು ಅರುಹಿದ ವಿಷಯ ತಿಳಿದು ಕಾಲನೇಮಿಯ ಕುತಂತ್ರಗಳನ್ನು ಪುಡಿಗಟ್ಟಿ ಅವನನ್ನು ಕೊಂದು ಸಂಜೀವಿನಿಯನ್ನು ತರಲು ಅಂಬರದಲ್ಲಿ ಹೊರಟನು. ಇತ್ತ ಅಯೋಧ್ಯೆಯಲ್ಲಿ ಭರತ ಶತ್ರುಘ್ನರು ದುಃಸ್ವಪ್ನ ಕಂಡು, ಅದರ ಪರಿಹಾರಕ್ಕಾಗಿ ಶಾಂತಿ ಮಾಡುವರು.

ಹನುಮಂತ ಸಂಜೀವಿನಿಯನ್ನು ಹೊತ್ತು ತರುವಾಗ ಸಮುದ್ರದ ಮಧ್ಯೆ ಮಾಲ್ಯವಂತನೆಂಬ ಖಳ ತಡೆಯಲು, ಯುದ್ಧದಲ್ಲಿ ಅವನನ್ನು ಪಾತಾಳಕಟ್ಟಿದನು. ತರುವಾಯ ಹನುಮನು ತಂದ ಸಂಜೀವಿನಿಯಿಂದ ಲಕ್ಷ್ಮಣನು ಎಚ್ಚರಗೊಳ್ಳಲು ಎಲ್ಲರೂ ಸಂತೋಷಪಡುವರು. ಬಳಿಕ ರಾಮ ಎಲ್ಲ ದೈತ್ಯರನ್ನು ಸದೆಬಡಿದು, ಆಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾದಲ್ಲಿಗೆ ಈ ಕಥೆ ಮುಕ್ತಾಯವಾಗುತ್ತದೆ.

***ಸಮೀಕ್ಷೆ***

ರಾಮಾಯಣದ ರಾಕ್ಷಸ ವೀರರಲ್ಲಿ ಮಾಯಾವಿಗಳಲ್ಲಿ ಕಾಲನೇಮಿಯೂ ಒಬ್ಬ. ಅವನನ್ನು ಹನುಮಂತನು ಸಂಹರಿಸಿದ ಕಥೆಯೇ ಕಾಲನೇಮಿ ಕಾಳಗ. ಲಂಕೆಯ ಯುದ್ಧರಂಗದ ರಂಜಕ ಕಥೆಗಳಲ್ಲಿ ಇದೂ ಒಂದಾದುದರಿಂದ ಕಾಳಗ ಪ್ರೀಯರಾದ ಯಕ್ಷಗಾನ ಪ್ರೇಕ್ಷಕರು ಈ ಕೃತಿಯನ್ನು ಪ್ರೀತಿಯಿಂದಲೇ ಬರಮಾಡಿಕೊಳ್ಳುತ್ತಾರೆ. ಪ್ರಯೋಗದಲ್ಲಿ ಜನಪ್ರಿಯತೆ ಇದಕ್ಕೆ ದಕ್ಕಲಿಲ್ಲವಾದರೂ ರಂಗಯೋಗ್ಯವಾದ ಕೃತಿಯಾಗಿ ಪ್ರಸಿದ್ಧವಾಗಿದೆ.

ಕಥಾಸಾರಾಂಶವು ತಿಳಿಸುವಂತೆ ಕಥೆಯ ಮೊದಲ ಭಾಗವೆಲ್ಲ ರಾವಣನ ಯುದ್ಧದ ವರ್ಣನೆಯೇ ಆಗಿದೆ. ಅತಿಕಾಯ, ಇಂದ್ರಜಿತುಗಳಂಥ ವೀರರನ್ನು ಕಳೆದುಕೊಂಡು ಗೋಳಾಡುವ ರಾವಣನ ಚಿತ್ರ ಇತರ ಪ್ರಸಂಗಗಳಲ್ಲಿ ಇರುವಂತೆಯೇ ಇದೆ. ಅಲ್ಲಿನಂತೆ ಮಂಡೋದರಿಯ ಉಪದೇಶವೂ ಉಂಟು. ಆದರೆ ಇಲ್ಲಿ ರಾವಣ ಸೀತೆಯನ್ನು ತಂದುದಕ್ಕೆ ಕೊಡುವ ಕಾರಣ ರಾವಣವಧೆಯಲ್ಲಿರುವಂತೇ ಇರುವುದ ಗಮನಾರ್ಹ. ರಾವಣ ಹೇಳುತ್ತಾನೆ.

**ರಾಗ ಕಾಂಬೋಧಿ ಝಂಪೆತಾಳ**

***ಅರಸಿ ನೀನೆನ್ನ ಮೂಡಾತ್ಮನೆನಬೇಡೀಗ***
***ಧರೆಯ ಭಾರವ ಕಳೆವ ನೆವದಿ ॥***

***ಹರಿಮನುಜ ರೂಪಿನೊಳು ಉದಿಸಿರುವನೆಂದು ನಾ***
***ನರಿಯದವನಲ್ಲ ಕೇಳ್ ಮಡದಿ॥***

***ಇಂದಿರೆಯ ನೆಪದೊಳೀ ಭವವ ಪರಿಹರಿಸಿಗೋ***
***ವಿಂದ ಮುಕುತಿಯನೀವನೆಂದು॥***

***ಹಿಂದೆ ತಾನೆನಗೆ ಪೇಳಿದ ಮಾತಿಗಾಗೀನಾ***
***ತಂದೆ ಜಾನಕಿಯ ರಮೆಯೆಂದು॥***

ಇದೇ ಧಾಟಿಯಲ್ಲಿ ರಾವಣ ತನ್ನ ಅಂತರಂಗವನ್ನು ಬಿತ್ತರಿಸುವುದು ಸೊಗಸಾಗಿದೆ.

ಕಾಲನೇಮಿ ಮಾಯಾವಿಯಾದರೂ ವಿವೇಕವುಳ್ಳವನು. ಅವನು ಕೂಡ ಮಾರೀಚನಂತೆ ರಾವಣನಿಗೆ ಉಪದೇಶವನ್ನು ನೀಡುತ್ತಾನೆ. ಆದರೆ ರಾವಣನ ಪ್ರತಿಕ್ರಿಯೆ ಬೇರೆ. ರಾವಣ ಬೆದರಿಸುತ್ತಾನೆ. ಇದು ಸ್ಪಷ್ಟವಾಗಿ ಮಾರೀಚ ವೃತ್ತಾಂತದ ಅನುಕರಣೆಯಾಗಿದೆ. ಹಾಗಿದ್ದರೂ ಕಾಲನೇಮಿ ನಮ್ಮ ಸಹಾನುಭೂತಿಯನ್ನು ಗಳಿಸುತ್ತಾನೆ.

ಪ್ರಸಂಗಕವಿ ಆಯ್ದುಕೊಂಡ ಕಥೆಯನ್ನು ನಿರೂಪಿಸುವ ರೀತಿ ಮೆಚ್ಚುವಂಥದು. ಭಾಷಾಪ್ರೌಢಿಮೆ, ಭಾವಸಮೃದ್ಧಗಳಿಗೆ ಕೊರತೆಯಿಲ್ಲ. ಈ ವಾರ್ಧಕವನ್ನು ಗಮನಿಸಿ.

**ಮಿತ್ರಸುತನಿಂತೆನಲು ಕೇಳ್ದು ವಾನರರೆಲ್ಲ**
**ಮಿತ್ರಜನ ಕೋಪವೆತ್ತವನಿಜಾನನಕಂಜಿ**
**ಮಿತ್ರಗೊಂದಿಸಿ ಜೀಯ ನಿನ್ನಾಜ್ಞೆಯಾದರಾ ಖಳನ ವಂಶಾವಳಿಯನು॥**
**ಮಿತ್ರಜನ ಬಳಿಗಟ್ಟಿ ದೇವಿಯರತಂದು ಭವ**
**ಮಿತ್ರ ನಿನಗೊಪ್ಪಿಸುವೆವೆನಲು ಸಂಗ್ರಾಮದೊಳ**
**ಮಿತ್ರನಂ ಕೋಲವೆ ನಾ ನಿಮ್ಮಯ ಸಹಾಯದಿಂ ಸಹಿಸಿ ರೋಷವನೆಂದನು ॥**

ಕಾಲನೇಮಿಯು ತೋರಿದ ಸರೋವರದ ಕಮಲವನ್ನು ಕವಿ ಹೀಗೆ ವರ್ಣಿಸುತ್ತಾನೆ.

**ವಾರ್ಧಕ**

**ತನ್ನ ಪೌತ್ರ ವಿರಂಚಿ ತಾ ಕ್ಷಿತಿಯ ಬಸುರೊಳಿಹೆ**
**ತನ್ನೊಳುದಿಸಿರ್ಪುದಂ ತೊಡುವನಂಗಜನೊಲಿದು**
**ತನ್ನ ಸನ್ನಿಧಿಯೊಳಂ ತಪಗೈಯುವರ್ಮುನೀಶ್ವರರು ಶಿವರೂಪ ತಾನು**
**ತನ್ನ ತನುಜೇಶ ರವಿಮಾ ಪದ್ಮೀಯನಿಮಿಷರು**
**ತನ್ನೊಳಿಹರ್ಸೈಸೆ ಗುಣಹೀನರುಂ ಕಳವಳಿಸಿ**
**ತನ್ನ ಬಳಿಗೆಯ್ಯಲವರಂ ಪೊರೆವೆನೆನುತ ಮೆರೆದಿರ್ದುದಾಕೊಳನ ಕಮಲ॥**

ಜೈಮಿನೀ ಭಾರತದ ಪ್ರಭಾವವು ವಾರ್ಧಕಗಳಲ್ಲಿ ಕಾಣುತ್ತದೆ. ಲಕ್ಷ್ಮೀಶನ ಪ್ರಭಾವದಿಂದ ತಪ್ಪಿಸಿಕೊಂಡ ಯಕ್ಷಗಾನ ಕವಿಗಳು ವಿರಳ. ಅದೇನೂ ಛಂದೋದೋಷವಲ್ಲ. ಕವಿಗೆ ಬಂಧಗಳ ಮೇಲೆ, ರಾಗ-ಮಾತುಗಳ ಮೇಲೆ ಸಾಕಷ್ಟು ಹಿಡಿತನವಿರುವುದು ಪ್ರಸಂಗದ ಪದ್ಯಗಳನ್ನೋದಿದರೆ ಗೊತ್ತಾಗುತ್ತದೆ. ಯಕ್ಷಗಾನ ಮಾಧ್ಯಮದ ಮೇಲೆ ಸಾಕಷ್ಟು ಹಿಡಿತವಿರುವುದನ್ನು ಅವನ ಕೃತಿಯು ತೋರಿಸಿಕೊಡುತ್ತದೆ. ಸರಳವಾದ ಕಥೆಯನ್ನು ಸರಳವಾಗಿ ಸೊಗಸಾಗಿ ನಿರೂಪಿಸಿದ ಕಾರಣ ಕವಿಯನ್ನು ಮೆಚ್ಚಬೇಕಾಗುತ್ತದೆ.

ಈ ಪ್ರಸಂಗವನ್ನು ಶ್ರೀ ಕೃಷ್ಣ ಮುದ್ರಣಾಲಯ ಉಡುಪಿ (1926) ಇವರಿಂದ ಪ್ರಕಟಿತ ಪ್ರಸಂಗ ಪುಸ್ತಕದಿಂದ ಆಯ್ದುಕೊಂಡಿದ್ದೇವೆ.

***ಕವಿ ಪರಿಚಯ :*** ಅಜ್ಞಾತ

# 5. ಮಕರಾಕ್ಷನ ಕಾಳಗ

**ಕಥಾಸಾರ:**

(ವಾಲ್ಮೀಕಿ ಮುನಿಗಳು ಕುಶಲವರಿಗೆ ರಾಮಾಯಣದ ಕಥೆಯನ್ನು ಹೇಳುವುದಕ್ಕೆ ಆರಂಭಿಸುತ್ತಾರೆ)

ಶ್ರೀರಾಮ ಹಾಗೂ ಲಂಕೆಯ ದೈತ್ಯರ ಮಧ್ಯೆ ಯುದ್ಧ ಆರಂಭವಾಗಿ ಅನೇಕ ರಕ್ಕಸರು ಮಡಿದಿದ್ದಾರೆ. ಗೆಲುವೆನು ರಾಮನ ಸೈನ್ಯವ ಎಂದು ಮುಂದೊತ್ತಿ ಬಂದ ಕುಂಭಕರ್ಣ, ಅತಿಕಾಯ, ಮುಂತಾದ ರಕ್ಕಸರ ದಂಡು ನಾಶವಾದದ್ದರಿಂದ ರಾವಣ ಅತೀವ ಕಳವಳಗೊಂಡಿರುವಾಗ ಇತ್ತ ರಾಮ ಲಕ್ಷ್ಮಣರು ಯುದ್ಧದ ಗೆಲುವಿನಿಂದ ಹರ್ಷ ಚಿತ್ತರಾಗಿದ್ದಾರೆ. ಮುಖ್ಯವಾಗಿ ಲಕ್ಷ್ಮಣನ ಬಾಣದಿಂದ ಅತಿಕಾಯ ಹತನಾದುದ್ದಕ್ಕೆ ಶ್ರೀರಾಮನು ತಮ್ಮನನ್ನು ಬಿಗಿದಪ್ಪಿ ಆಲಂಗಿಸಿ ಅಭಿನಂದಿಸುತ್ತಾನೆ.

ಇತ್ತ ರಾವಣ ಒಡ್ಡೋಲಗಕೊಟ್ಟು ತನಗಾದ ಹಾನಿಯಿಂದ ದುಃಖಿಸುತ್ತಿದ್ದಾಗ. ಸುರರಾಯಜಿತು ಎನಿಸಿದ ಇಂದ್ರಾಜಿತು ತಂದೆಗೆರಗಿ ಬಹು ಪರಾಕ್ರಮದ ಮಾತಾಡುತ್ತಾನೆ. ತಂದೆಯಿಂದ ಅಪ್ಪಣೆ ಪಡೆದು ನಿಕುಂಭಿಳೆಗೆ ಬಂದು ಯಾಗವನ್ನು ಮಾಡಿ ಬ್ರಹ್ಮನನ್ನು ಒಲಿಸಿಕೊಂಡು ಅವನಿಂದ ವರ ಪಡೆದು ರಣರಂಗಕ್ಕೆ ಬರಲು ನದಿ ಉಕ್ಕಿತು, ಧೂಮಕೇತು ಮುಂತಾದ ಅನಿಷ್ಟಗಳು ಕಂಡವು. ಇವನ ಆರ್ಭಟವನ್ನು ಕಂಡು ವಿಭೀಷಣನು ಅವನ ಬರುವಿಕೆಯನ್ನು ಸುಗ್ರೀವನಿಗೆ ಅರುಹುತ್ತಾನೆ ಮತ್ತು ಇಂದ್ರಜಿತು ಮುಂದೆ ಬರದಂತೆ ತಡಯುತ್ತೇನೆ ಎಂದು ಗದೆಯನ್ನು ಕೊಳ್ಳುತ್ತಾನೆ. ಸುಗ್ರೀವ ಶ್ರೀರಾಮನಿಗೆ ಇಂದ್ರಜಿತುವಿನ ಬರುವಿಕೆಯನ್ನರುಹುತ್ತಾನೆ. ಶ್ರೀ ರಾಮ ಮುಂದಿನ ಯುದ್ಧಕ್ಕೆ ಕಪಿಗಳೊಂದಿಗೆ ಸನ್ನದ್ಧನಾಗುತ್ತಾನೆ. ಇತ್ತ ಇಂದ್ರಜಿತುವಿಗೂ ವಿಭೀಷಣನಿಗೂ ಯುದ್ಧವಾಗಿ ಇಂದ್ರಜಿತು ವಿಭೀಷಣನನ್ನು ಮರುತ ಪಾಷದಿಂದ ಬಂಧಿಸುತ್ತಾನೆ. ವಿಭೀಷಣ ಸೋಲಲು ಇಂದ್ರಜಿತು ಮುಂದೊತ್ತಿ ಬಂದು ಸುಗ್ರೀವ, ಹನುಮ ಮುಂತಾದವರಲ್ಲಿ ಯುದ್ಧ ಮಾಡುತ್ತಾನೆ. ಲಕ್ಷ್ಮಣನಲ್ಲೂ ಯುದ್ಧ ನಡೆದು ಲಕ್ಷ್ಮಣನೂ ಸೋಲಲು ರಾಮ ಇದಿರಾಗುತ್ತಾನೆ. ಬಳಿಕ ಘೋರ ಯುದ್ಧ ಕೈಗೊಂಡ ಇಂದ್ರಜಿತು ರಾಮನ ಸೇನೆಗೆ ಕಾಲರೂಪನಂತೆ ಕಾಡಿ ರಾಮ ಲಕ್ಷ್ಮಣರನ್ನೇ ಕಂಗೆಡಿಸಿ ವಿಜಯನಾಗುತ್ತಾನೆ. ರಾಮ ಲಕ್ಷ್ಮಣು ಮೂರ್ಛಾಗತರಾಗಿರುವಾಗ, ರಣರಂಗಕ್ಕೆ ರಾವಣ ಬಂದು ತನ್ನ ಮಗನ ಸಾಹಸಕ್ಕೆ ಮೆಚ್ಚಿ ಅವನನ್ನು ಕೊಂಡಾಡಿ ಪುಷ್ಪಕದಲ್ಲಿ ಕೂಡಿಸಿಕೊಂಡು ಅರಮನೆಗೆ ಹಿಂದಿರುಗುತ್ತಾನೆ.

ಇತ್ತ ವಿಭೀಷಣ ಮರುತ ಪಾಷವ ಹರಿದುಕೊಂಡು ಹನುಮ ಜಾಂಬವರೊಡಗೊಂಡು ರಣಧಾರುಣಿಯಲ್ಲಿ ಏಳುತ್ತ, ಬೀಳುತ್ತ ನಡೆಯುತ್ತಾರೆ. ಮೂರ್ಛಾಗತರಾದ ರಾಮ ಲಕ್ಷ್ಮಣರನ್ನು ಕಂಡು ಎಲ್ಲರೂ ನಾನಾ ಪರಿಯಲ್ಲಿ ಮರುಗುವರು. ಇವರನ್ನು ಸಂತೈಸುತ್ತ ಜಾಂಬವನು ಹನುಮನಿಗೆ ಚಂದ್ರದ್ರೋಣ ಪರ್ವತದಿಂದ ಸಂಜೀವಿನಿ ತರುವಂತೆ ಸೂಚಿಸಲು, ಹನುಮ ಅತ್ತ ಹಾರುತ್ತಾನೆ. ಇದನ್ನರಿತ ರಾವಣ ಕಾಲನೇಮಿಯನ್ನು ಕರೆದು ಹನುಮನ ಕೆಲಸ ಕೆಡಿಸಲು ಸೂಚಿಸುತ್ತಾನೆ. ಆಗ ಅವನ ಅಪೇಕ್ಷೆಯಂತೆ ಕಾಲನೇಮಿ, ಹನುಮನು ಬರುವ ಪರ್ವತದಲ್ಲಿ ಋಷಿಯಂತೆ ಕುಳಿತಿರಲು ಅದನ್ನರಿಯದ ಆಂಜನೇಯ ಅವನಿಗೆರಗಿ ತನಗಾದ ಆಯಾಸ ಪರಿಹಾರಕ್ಕೆ ನೀರು ಬೇಕೆಂದು ಬಯಸಲು, ಈ ಕಪಟ ರಾಕ್ಷಸ ಅವನಿಗೆ ವಿಷ ಸರೋವರಕ್ಕೆ ಕಳಿಸುವನು. ಅಲ್ಲಿರುವ ಮೊಸಳೆ ಅವನ ಕಾಲು ಹಿಡಿಯಲು, ಹನುಮ, ಅದರಿಂದ ಬಿಡಿಸಿಕೊಂಡಾಗ ಆ ಮೊಸಳೆಯ ಶಾಪ ವಿಮೋಚನೆಗೊಂಡು, ದೇವಕನ್ನೆಯಾಗಿ ಪ್ರತ್ಯಕ್ಷಳಾಗಿ ರಕ್ಕಸನ ಕಪಟವನ್ನು ತಿಳಿಸುತ್ತಾಳೆ. ಇದರಿಂದ ಪರಿಸ್ಥಿತಿ ಗ್ರಹಿಸಿದ ಹನುಮ ಕಾಲನೇಮಿಯನ್ನು ಕೊಂದು, ಸಂಜೀವನ ಪರ್ವತವನ್ನು ತಂದು ಜಾಂಬವರೆಡೆಗೆ ಬರಲು ಅಲ್ಲಿ ಸುಷೇಣ ರಾಮಲಕ್ಷ್ಮಣರಿಗೆ ಉಪಚಾರ ಮಾಡುತ್ತಾನೆ. ಶ್ರೀರಾಮ ಲಕ್ಷ್ಮಣರು ನಿದ್ದೆಯಿಂದ ಎಚ್ಚರವಾದಂತೆ ಎದ್ದು ಹನುಮ ಮುಂತಾದವರನ್ನು ಪ್ರಶಂಸಿಸಿ, ಯುದ್ಧಕ್ಕೆ ಸನ್ನದ್ಧರಾಗುತ್ತಾರೆ.

ರಾಮನ ಸಮರ ಸನ್ನಾಹಕ್ಕೆ ಬ್ರಹ್ಮ ಸಹ ಬೆದರಿ ರಾಮನನ್ನ ಸ್ತುತಿಸುತ್ತಾನೆ. ಸುಗ್ರೀವನ ಅಪೇಕ್ಷೆಯಂತೆ ಲಂಕಾ ಪಟ್ಟಣಕ್ಕೆ ಎಲ್ಲರೂ ಉರಿಕೊಳ್ಳಿಗಳನ್ನು ಹಿಡಿದು ಸಾಗುತ್ತಾರೆ. ರಕ್ಕಸರ ಪಟ್ಟಣ ಬುಗಿಲೆದ್ದು ಉರಿಯುತ್ತದೆ. ರಾವಣ ಅತಿ ಕೋಪದಿಂದ ತನ್ನವರನ್ನು ಕರೆದು ಯುದ್ಧಕ್ಕೆ ಸಿದ್ಧರಾಗಿ ಎನಲು, ಕುಂಭಕರ್ಣನ ಮಗನಲ್ಲಿ ಒಬ್ಬನಾದ ಅಗ್ನಿ ಸ್ಥಂಭನ ತಿಳಿದ ಕುಂಭಕ ಬಂದು ರಾವಣನಿಂದ ಅಪ್ಪಣೆ ಪಡೆದು

ತನ್ನ ಬಲವನ್ನೆಲ್ಲ ಒಗ್ಗೂಡಿಸಿ ಕಲ್ಪದರುದ್ರನಂತೆ ಅಗ್ನಿ ಮಧ್ಯೆನಿಂತು ನಾನಾತರದಲ್ಲಿ ತನ್ನ ಶಕ್ತಿ ಮೆರೆಯುತ್ತಾ ಹೋರಾಡಿ ವಿರೋಧಿಗಳನ್ನು ದಣಿಸಿ ಲಂಕೆಗೆ ಹತ್ತಿದ ಉರಿಯನ್ನು ಆರಿಸುತ್ತಾನೆ. ಲಂಕೆಗೆ, ತಗುಲಿದ ಬೆಂಕಿಯನ್ನು ಆರಿಸಿ, ರಾವಣನಿಂದ ಪ್ರಶಂಸೆ ಪಡೆದು ಮುಂದಿನ ಯುದ್ಧಕ್ಕೆ ರಾವಣನಿಂದ ಮತ್ತು ತನ್ನ ತಾಯಿಂದ ಅಪ್ಪಣೆ ಪಡೆದು ತನ್ನ ಸಹೋದರರಾದ ನಿಕುಂಭ, ಯೂಪಾಂಭಕ, ಶೋಣಿತಾಂಭಕ ಹೀಗೆ ಎಲ್ಲರನ್ನೂ ಒಳಗೊಂಡು ಯುದ್ಧಕ್ಕೆ ಬರುತ್ತಾನೆ. ಇತ್ತ ಕಪಿವೀರರೊಟ್ಟಿಗೆ ಹೋರಾಡುತ್ತಾ ಕುಂಭಕನ ಸಹೋದರರು ಈ ಯುದ್ಧದಲ್ಲಿ ಹತರಾಗುತ್ತಾರೆ. ಆದರೆ ಕುಂಭಕ ಹೋರಾಟ ಮುಂದುವರಿಸಿ ಎಲ್ಲರನ್ನೂ ಕಂಗೆಡಿಸುತ್ತಾನೆ. ಕೊನೆಗೆ ಸುಗ್ರೀವನಿಂದ ಹತನಾಗುತ್ತಾನೆ. ಕುಂಭ ನಿಕುಂಭರ ತಾಯಿ ವಜ್ರಜ್ವಾಲೆ ಪುತ್ರಶೋಕದಿಂದ ಅಳುತ್ತಾಳೆ.

ಇತ್ತ ಖರನ ಮಗ ಮಕರಾಕ್ಷ ರಾವಣನಿಂದ ಅಪ್ಪಣೆ ಪಡೆದು ಯುದ್ಧಕ್ಕೆ ಬರಲು, ವಿಭೀಷಣ ಇವನನ್ನ ರಾಮನಿಗೆ ಪರಿಚಯಿಸುವನು. ಪರಸ್ಪರ ಕಾಳಗ ಆರಂಭವಾಗಿ ಮಕರಾಕ್ಷನು, ಹನುಮ, ನೀಲ, ಅಂಗದ ಮುಂತಾದವರನ್ನು ಸೋಲಿಸುವನು. ಆಗ ಸುಗ್ರೀವ ಯುದ್ಧಕ್ಕೆ ಅನುವಾಗಿ ಮೂರ್ಛೆಗೊಳ್ಳಲು ಅವನ ತಲೆ ಕಡಿಯಲು ಮಕರಾಕ್ಷನು ಮುಂದಾದಾಗ ಜಾಂಬವ ತಡೆದು ನೀತಿ ಹೇಳುವನು. ಲಕ್ಷ್ಮಣನೂ ಮಕರಾಕ್ಷನೊಡನೆ ಹೋರಾಡಿ ಹಿಂತೆಗೆಯಲು ಮಕರಾಕ್ಷ ರಾಮನನ್ನೇ ಬಂದು ಎದುರಿಸುತ್ತಾನೆ. ರಾಮ ಮತ್ತು ಮಕರಾಕ್ಷರ ಮಧ್ಯೆ ಘೋರ ಕಾಳಗ ನಡೆದು ಮಕರಾಕ್ಷ ಮಡಿಯುತ್ತಾನೆ.

ಸುರರು ಸುಮವೃಷ್ಠಿ ಕರೆಯಲು ಎಲ್ಲ ರಕ್ಕಸರನ್ನು ಕೊಂದು ಶ್ರೀರಾಮ ವಿಭೀಷಣನಿಗೆ ಲಂಕೆಯ ಪಟ್ಟ ಕಟ್ಟಿ ಸೀತೆಯನ್ನು ಒಡಗೊಂಡು ಅಯೋಧ್ಯೆಗೆ ಬಂದು ಪಟ್ಟಾಭಿಷಕ್ತನಾಗಿ ಸುಗ್ರೀವ ಜಾಂಬವಾದಿಗಳನ್ನು ಮನ್ನಿಸಿ, ಉಪಚರಿಸಿ, ಇಳೆಯಪಾಲಕನಾಗಿ ಹರ್ಷದಿಂದ ರಾಜ್ಯವಾಳುತ್ತಿದ್ದನು, ಎಂದು ವಾಲ್ಮೀಕಿ ಮುನಿಗಳು ಕುಶಲವರಿಗೆ ಶ್ರೀರಾಮ ಕಥೆಯನ್ನು ಒರೆದರು.

***ಮಕರಾಕ್ಷ ಕಾಳಗ ಸಮೀಕ್ಷೆ***

ಮಕರಾಕ್ಷನ ಕಾಳಗವು ಹೇಳಹೊರಟಿದ್ದು ರಾಕ್ಷಸವೀರರ ಪರಮಾದ್ಭುತ ಸಾಹಸಗಳ ಕಥೆಯನ್ನು ಅವರನ್ನು ರಾಮಾಯಣದ ಕಥಾಪುರುಷರು ಸಂಹರಿಸುವಲ್ಲಿ ಮೆರೆದ ವಿಕ್ರಮವನ್ನು ಇಂದ್ರಜಿತು, ಕಾಲನೇಮಿ, ಕುಂಭ, ನಿಕುಂಭ, ಯೂಪಾಂಭಕ, ಶೋಣಿತಾಂಬಕ ಮುಂತಾದವರ ಸಾಲಿನಲ್ಲಿಯೇ ಮಕರಾಕ್ಷನ ವೃತ್ತಾಂತವು ಇದೆ. ಕವಿ ಸಾಕಷ್ಟು ಈಚಿನವನಾದುದರಿಂದ ಹಿಂದಿನವರು ಹೇಳದೇ ಬಿಟ್ಟ ಅಥವಾ ಸಂಕ್ಷಿಪ್ತವಾಗಿ ಹೇಳಿದ ಕಥಾನಕಗಳನ್ನು ವಿಸ್ತರಿಸುತ್ತಾನೆ. ಕೆಲವೊಂದು ಸನ್ನಿವೇಶಗಳನ್ನು ಸ್ವತಃ ಕಲ್ಪಿಸಿದ್ದಾನೆ. ಹಾಗಾಗಿ ಮಕರಾಕ್ಷ ಕಾಳಗದ ಕಥಾವಸ್ತುವು ಮಿಶ್ರವರ್ಗಕ್ಕೆ ಸೇರುತ್ತದೆ.

ಕವಿಯು ಸ್ವತಃ ಭಾಗವತ ರಾಗ ತಾಳಗಳ ಮೇಲೆ ಸಾಕಷ್ಟು ಪ್ರಭುತ್ವವಿದೆ. ಮಟ್ಟುಗಳ ವೈವಿಧ್ಯ - ವೈಶಿಷ್ಟ್ಯಗಳನ್ನು ಚೆನ್ನಾಗಿ ಬಲ್ಲವನು, ರಂಗದ ಅನುಭವ ಚೆನ್ನಾಗಿದೆ. ಸಂಸ್ಕೃತ - ಭಾಷೆಗಳ ಮೇಲೆ ಹಿಡಿತವಿದೆ, ವಿದ್ವತ್ತಿದೆ, ಕವಿತಾಶಕ್ತಿಯಿದೆ. ಇಷ್ಟೆಲ್ಲ ಇರುವ ಕವಿ ಕೃತಿರಚನೆಗೆ ಕೈಹಾಕಿದಾಗ ಉತ್ತಮವಾದ ಪ್ರಸಂಗವನ್ನು ನಿರೀಕ್ಷಿಸಿದರೆ ಅದು ಸ್ವಾಭಾವಿಕ. ಮಕರಾಕ್ಷನ ಕಾಳಗವನ್ನು ಆ ದೃಷ್ಟಿಯಿಂದ ಪರಿಶೀಲಿಸಿದರೆ ನಮಗೆ ನಿರಾಶೆಯಾಗುವುದಿಲ್ಲ. ಕವಿಯು ತನ್ನ ಪ್ರೌಢತೆಯನ್ನು ಮೆರೆಯುತ್ತಾನೆ.

ರಾಮನ ಬಾಣಗಳು ಇಂದ್ರಜಿತುವಿನ ಮುತ್ತಿದ ಬಗೆಯನ್ನು ಕೇಳಿ -

**ಭಾಮಿನಿ**

**ಖಚರಿಯರ ಹೂಮುಡಿಗೆ ಸುರಪನ**
**ಶಚಿಯ ಮುಖ ಸಾರಸಕೆ ರುದ್ರನ**
**ಕಚದ ಗಂಗಾಂಬುಧಿಗೆ ಸರಸಿಜ ಭವನ ಗದ್ದುಗೆಗೆ**
**ಪ್ರಚುರ ದಿಗ್ವನಿತಾಬ್ಜ ಕುಟ್ಮಳ**

**ಕುಚಗಳಿಗೆ ಮೊಗಚುವ ಶಿಳೀಮುಖ**
**ನಿಚಯವೆನಲಡರಿದವು ರಾಮ ಶಿಳೀಮುಖಗಳವಗೆ॥**
**ಸೂರ್ಯಾಸ್ತವನ್ನು ವರ್ಣಿಸುವ ಪದ್ಯವನ್ನ ಕೇಳಿ -**

**ವಾರ್ಧಕ**

**ತರುಣಕೇಳನ್ನಗಂ ಲೋಕದಿಲತಾಂಗಿಯರ್**
**ಪುರುಷನಪರಾಂಗದೊಳಗನ್ಯರಂ ನೆರೆವರತಿ**
**ಯಿರಬಹುದು ಕಣ್ಮುಂದೆ ಸತಿಕಮಲೆ ಚಾಂಚಲ್ಯೆ ಹಂಸ ಪುನ್ನಾಗದುಂಬಿ॥**
**ದೊರೆಗಳೊಡವೆರವಳಿವಳುರೆ ಮಿತ್ರಳಾದುದಂ**
**ಗುರುಮಂಗಳೋನ್ನತಿಯಪಳಿದು ದ್ವಿಜರಂದಗೆಡಿ**
**ಸಿರುವ ಕಾರಣಮಿನ್ನುಮಿವಳಲದಿರೆನೆಂಬತೆರದೊಳಿನ ಮರೆಯಾದನು॥**

ಸೂರ್ಯೋದಯವನ್ನು ವರ್ಣಿಸುವ ಪದ್ಯ-

**ವಾರ್ಧಕ**

**ಅನಕ ಶ್ರೀ ಚಕ್ರಿ ಹೊಕ್ಕುಳಕುಶೇಷಯದೆಲರ**
**ಘನಶೋಣ ಸುಪರಾಗರುಚಿರ ಜ್ವಾಲೆಯದಭ್ರ**
**ವನು ಬಿಂಬಿಸಿತೊ ಮೇಣು ಪೂರ್ವದಿಗಾಂಗನಾನನದ ಕುಂಕುಮರೇಖೆಯೋ ॥**
**ಎನುವಂತೆ ಪೊಂಬಿಸಿಲಝುಳದೊಡನೆ ಥಳಥಳಿಸು**
**ತಿನನೋಲಗಂಗೊಟ್ಟಡಾಗನೇಸರ್ಕುವರ**
**ನನುಮತಿಯೊಳಾಹವಾಂಗಣದಿ ಭುಲ್ಲೈಸಿದರು ಹನುಮಾದಿಭಟರತ್ತಲು॥**

ಮುದ್ದಣನ ನಂತರದ ಕವಿಗಳು ಅವನನ್ನೇ ತಮ್ಮ ಮಾದರಿಯನ್ನಾಗಿ ಸ್ವೀಕರಿಸಿದರು.

ಅವನ ಪ್ರಭಾವದಿಂದ ಹೊರತಾದವರು ತುಂಬ ಅಪರೂಪ. ಆ ಸೆಳೆತವೇ ಅಂಥಾದ್ದು. ಈ ಕವಿಯೂ ಅದಕ್ಕೆ ಅಪವಾದವಲ್ಲ ಅನುಪ್ರಾಸ ಪ್ರಿಯ ಪದ್ಯ ನೋಡಿ-

**ರಾಗ ಕಾಂಭೋದಿ ಝಂಪೆತಾಳ**

ರಾಜಕುವರರು ಕೇಳಿ ರಾಜೇಂದ್ರ ರಾಘವನು

**ರಾಜಿಸುವ ಕಪಿಗಳಾಳ್ತನದ**
**ರಾಜಸಕೆ ತಲೆದೂಗಿ ರಾಜತೇಜದೊಳುದಿನ**
**ರಾಜನಣುಗನ ನೋಡು ನುಡಿದ ॥**

**ರಾಗ ಅಖಂಡಮಾರವಿ ಏಕತಾಳ**

**ಆರ್ಬಣ್ಣಿಪರೆಲೆ ಯರ್ಭಕರಿರ ಕೇ**
**ಳರ್ಬುದ ಸಂಖ್ಯೆಯ ಸರ್ಭವನೌಕಸ**
**ರುರ್ಭರದಿಂವರ  ಕರ್ಬುರ ಕೋಟೆಯ**
**ಪರ್ಬಿದರ್ರೈಯಜಿ  ಗರ್ಭವು ನಡುಗೆ ॥ಏನನೆಂಬೆ  ॥**

ಕವಿಯಲ್ಲಿ ಭಾವಸಮೃದ್ಧಿಗೆ ಕೊರತೆಯಿಲ್ಲ. ಮುನಿದು ಲೋೀಕವನೆಲ್ಲ ಸಂಹರಿಸಲು ಸಿದ್ಧನಾದ ರಾಮನನ್ನು ಸಂತೈಸಲು ಬ್ರಹ್ಮ ಬಂದು ಹೇಳುವ ಮಾತುಗಳನ್ನು ಕೇಳಿ-

**ರಾಗ ಬೇಗಡೆ ಅಷ್ಟತಾಳ**

**ಶೂರವೀರೋದ್ಧಾರ ರಘುವರ್ಯ  ಬಿಡುಸಾಕುಕೋಪವಿ**
**ದಾರೊಡನೆ ಗಂಭೀರ ಘನಶೌರ್ಯ ॥**
**ಮೇರುವೆತ್ತಣವೆತ್ತಜುಂಬಕ  ನಾರುಭಟೆತಾನೆತ್ತ ನಿನಗೀ**
**ಕ್ರೂರನಿಶಿಚರರಿದಿರೆ ಬಿಡುಖತಿ  ಮೀರಿಹೋದುದನೆಲ್ಲ ದೇವನೆ ॥ಶೂರ    ॥1 ॥**

ಯಕ್ಷಗಾನದ ಪ್ರಸಂಗಗಳಲ್ಲಿ ಕೇವಲ ವರ್ಣನೆಗಳಿಗೆ ಸ್ಥಾನವಿಲ್ಲ. ಇದು ರಂಗದಲ್ಲಿ ಪ್ರಸಂಗಗಳನ್ನಾಡಿಸಿದ ಕವಿಗೆ ಚೆನ್ನಾಗಿ ಗೊತ್ತಿದೆ. ವರ್ಣನೆಗಳು ಕವಿತ್ವಶಕ್ತಿಯ ಪ್ರದರ್ಶನಕ್ಕೆ ಸೀಮಿತ. ರಂಗಕ್ಕೆ ಬೇಕಾದ ನಾಟಕೀಯ ದೃಶ್ಯಗಳು, ಸಂಭಾಷಣೆಗಳು ಇಲ್ಲದಿದ್ದರೆ ಸೊರಗುತ್ತದೆ. ಕವಿ ಪ್ರಸಂಗವನ್ನ ಪುಷ್ಟಿಗೊಳಿಸಲು ಅಗತ್ಯವಾದ ಅಂಶಗಳನ್ನು ತುಂಬಲು ಮರೆಯುವುದಿಲ್ಲ. ಒಂದೊಂದು ಸನ್ನಿವೇಶದಲ್ಲೂ ವಿಪುಲವಾದ ಸಂಭಾಷಣೆಗಳಿವೆ. ರಾಮ-ಮಕರಾಕ್ಷರ ಸಂಭಾಷಣೆಯಂತೂ ಸಂಪೂರ್ಣ ರಾಮಾಯಣದ ವಿಮರ್ಶೆಯೇ ಆಗಿದೆ. ಮಕರಾಕ್ಷನ ಆಕ್ಷೇಪಗಳು ಮತ್ತು ರಾಮನ ಉತ್ತರಗಳು ರಾಮಾಯಣಕ್ಕೆ ಬರೆದ ಭಾಷ್ಯವೆನಿಸುತ್ತದೆ. ಇನ್ನಿತರ ಸಂದರ್ಭಗಳಲ್ಲಿಯೂ ಸಂಭಾಷಣೆಗಳಿಗೆ ಸಾಕಷ್ಟು ಸಾಮಗ್ರಿಗಳನ್ನು ಒದಗಿಸಿದ್ದಾನೆ.

ಜತ್ತಿ ಈಶ್ವರ ಭಾಗವತರ ಈ ಕೃತಿಯಲ್ಲಿ ಭಾಗವತರು ಇನ್ನುಳಿದ ಕೆಲವು ಕೃತಿಗಳಿಂದ ಪ್ರಭಾವಿತರಾಗಿದ್ದಾರೆ ಎಂದು ನನ್ನ ಅನಿಸಿಕೆ. ಉದಾಹರಣೆ

**ರಾಗ ನವರೋಜ ಏಕತಾಳ**

ಇದಕೋರಥ ಬಲಹಯವ  ಮ  ತ್ತಿದಕೋ ಶರಾಸನ ಶರವ ॥(ಮಕರಾಕ್ಷ ಕಾಳಗ)

**ಭೈರವಿ ಏಕತಾಳ**

ಇದೆಯಾವಾಹನ ನೋಡು  ಮತ್ತಿದೆಯಾಸನ ದಯಮಾಡು ॥(ಅತಿಕಾಯಾ ಕಾಳಗ)

**ರಾಗ ಮಾರವಿ ಏಕತಾಳ**

ಆಗಲೆ ಕಲಿಯೂಪಂಬಕರಣಕನು  ವಾಗುತ ಭರದಿಂದ ॥
ಬೇಗದಿರಥವನು ಹಾರಿಸುತವನೆಡೆ  ಭಾಗದಿನೆರೆನಿಂದ ॥

**ರಾಗ ಮಾರವಿ ಏಕತಾಳ**

ಆಗಸುಧನ್ವನು ವೇಗದಿ ರಣಕನು ವಾಗುತ ಮುದದಿಂದ ॥
ಭಾಗುತ ಜನನಿಗೆ ವಂದಿಸಿ ವಿನಮಿತ ನಾಗುತಲಿತೆಂದಾ ॥(ಸುಧನ್ವ ಕಾಳಗ)

ನಿಕುಂಬೆಳೆಯಲ್ಲಿ ಬ್ರಹ್ಮನನ್ನು ಒಲಿಸಿಕೊಳ್ಳಲು ಇಂದ್ರಜಿತು ಮಾಂಸದ ಚರುವನ್ನು ಸಮರ್ಪಿಸುವುದು, ಅಷ್ಟು ಔಚಿತ್ಯವಾಗಲಾರದೆನೋ ಎಂದೆನಿಸುತ್ತದೆ.

ಆದರೂ, ಮಕರಾಕ್ಷ ಕಾಳಗ ಒಂದು ಪ್ರೌಢವಾದ ಕೃತಿ. ಭಾಷಾಪ್ರಯೋಗದ ಸಂದರ್ಭದಲ್ಲಿ ಸಂಸ್ಕೃತ ಪದಗಳ ಬಳಕೆ ಹೆಚ್ಚು. ಕೆಲವು ಅಪರೂಪದ ಪದಗಳನ್ನು ಕವಿ ಬಳಸಿ ಕಂಗೆಡಿಸುವುದೂ ಉಂಟು. ಆದರೆ ಅವು ಶ್ರವ್ಯ ಭಾಗದಲ್ಲಿ ಪ್ರಯುಕ್ತವಾಗಿರುವುದು ಕವಿಯ ರಂಗಪ್ರಜ್ಞೆಗೆ ಸಾಕ್ಷಿ. ಈ ಪ್ರಸಂಗದ ಬಗೆಗೆ ರಾಷ್ಟ್ರಕವಿ ಎಂ. ಗೋವಿಂದ ಪೈಗಳು ಹೇಳುತ್ತಾರೆ - ಈ ಪ್ರಬಂಧ ಬಹಳ ಚೆನ್ನಾಗಿದೆ. ಓದಿ ಮೆಚ್ಚತಕ್ಕಂತಿದೆ, ಹಾಡಿ ಕೇಳತಕ್ಕಂತಿದೆ. ಆಡಿ ನೋಡತಕ್ಕಂತಿದೆ ಈ ಅಭಿಪ್ರಾಯವನ್ನು ಅನುಮೋದಿಸಬಹುದು.

***ಕವಿ ಪರಿಚಯ :***

***ಜತ್ತಿ ಈಶ್ವರ ಭಾಗವತರು (1872-1945)***

ಗ್ರಂಥ ಕರ್ತೃಗಳಾದ ಶ್ರೀ ಜತ್ತಿ ಈಶ್ವರ ಭಾಗವತರು ಕ್ರಿ.ಶ. 1872ನೆಯ ಇಸವಿ ಅಗೋಸ್ತು ತಿಂಗಳಲ್ಲಿ ಕಾಸರಗೋಡು ಬಾಯಾರು ಗ್ರಾಮದ ಜತ್ತಿ ಎಂಬಲ್ಲಿ ಕೃಷ್ಣ ಭಟ್ಟ ಮತ್ತು ಗೌರಮ್ಮ ಎಂಬವರ ಏಕಮಾತ್ರ ಪುತ್ರನಾಗಿ ಜನ್ಮವೆತ್ತಿದರು. ನಿರ್ಧನಿಕರಾದರೂ ಕಲಾಪ್ರೇಮಿಗಳಾದ ಆ ತಂದೆ ತಾಯಿಯವರಿಂದ ಪೋಷಿತರಾಗಿ ವಿದ್ಯಾಭ್ಯಾಸ ಪಡೆದು ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿ ವರಾಹ ಚರಿತ್ರೆ ಎಂಬ ಯಕ್ಷಗಾನ ಗ್ರಂಥವನ್ನು ರಚಿಸಿದರು. ಮುಂದೆ ಜೀವನ ನಿರ್ವಹಣೆಗಾಗಿ ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ಸರ್ವೇ ಉದ್ಯೋಗಕ್ಕೆ ಸೇರಿ, ಆಮೇಲೆ ಇಪ್ಪತ್ತೈದನೆಯ ವಯಸ್ಸಿನಲ್ಲಿ ಮಂಡಕೋಲು ಗ್ರಾಮದ ಶ್ಯಾನುಭೋಗರಾಗಿ ಕೆಲಸ ಮಾಡಿದರು. ಅದೇ ವರ್ಷ ಸರಸ್ವತಿ ಎಂಬವರೊಡನೆ ವಿವಾಹವಾದರು.

ಯಕ್ಷಗಾನ ಕೃತಿರಚನೆಯಲ್ಲಿಯೂ ಭಾಗವತಿಕೆಯಲ್ಲಿಯೂ ವಿಶೇಷ ಅಭಿರುಚಿಯಿದ್ದ ಕಾರಣ 1902ರಲ್ಲಿ ಶ್ಯಾನುಭಾಗ ಉದ್ಯೋಗವನ್ನು ಬಿಟ್ಟು ಯಕ್ಷಗಾನ ಮೇಳಗಳಲ್ಲಿ ಭಾಗವತರಾಗಿಯೂ, ಗ್ರಂಥಕರ್ತರಾಗಿಯೂ, ಹರಿಕಥಾ ವೃತಿಯಲ್ಲೂ ತನ್ನ ಶೇಷಾಯುಷ್ಯವನ್ನು ಕಳೆದರು. ಆಗ ಪ್ರಸಿದ್ಧ ಮೇಳಗಳಾಗಿದ್ದ ಇಚ್ಲಂಪಾಡಿ, ಕೂಡ್ಲು, ಕಟೀಲು, ದೆಕ್ಕೆತೋಡಿ ಇಂತಹ ಮೇಳಗಳಲ್ಲಿ ಭಾಗವತಿಕೆ ವೃತ್ತಿಯನ್ನು ನೆರವೇರಿಸುತ್ತಿದ್ದು, ತನ್ಮಧ್ಯೆ, ಮಕರಾಕ್ಷನ ಕಾಳಗ, ಸಂಪೂರ್ಣ ರಾಮಾಯಣ, ಕೇತಕೀವಿಲಾಸ, ನಂದನೀ ವಿಲಾಸ, ಅಂಜನಾವಿಲಾಸ, ಮದನಮಂಜರೀ ಕಲ್ಯಾಣ, ಸತಿ ಸುಲೋಚನ, ಸೂರ್ಯ ಕಾಂತಿಕಲ್ಯಾಣಗಳೆಂಬ ಯಕ್ಷಗಾನ ಪ್ರಸಂಗಗಳನ್ನೂ ಧರ್ಮಪಾಲ ಚರಿತ್ರೆ, ತಾರಾ ವಿಲಾಸ, ಚಂಡಕಿರಾತ, ಗಜೇಂದ್ರಮೋಕ್ಷ, ಪಾರಿಜಾತ, ಕೀರ್ತನಾತರಂಗ, ತುಳು ಕೀರ್ತನಾಮಾಲೆ ಎಂಬಿತ್ಯಾದಿ ಹಲವಾರು ಹರಿಕಥೋಪಯೋಗಿ ಗ್ರಂಥಗಳನ್ನೂ ಬರೆದರು. ಇವುಗಳಲ್ಲಿ ಕೆಲವು ಅವರ ಜೀವಮಾನ ಕಾಲದಲ್ಲಿ, ಎಂದರೆ ಕ್ರಿ.ಶ. 1938ನೇ ಇಸವಿಯಲ್ಲಿಯೇ ಮುದ್ರಿತವಾಗಿ ಜನಪ್ರಿಯವಾಗಿವೆ. ಇನ್ನೆಷ್ಟೋ ಗ್ರಂಥಗಳು ಮುದ್ರಣವಾಗಲು ಬಾಕಿಯುಳಿದಿವೆಯಂತೆ. ಕ್ರಿ.ಶ.1945ನೇ ಇಸವಿ ಜೂನ್ ತಿಂಗಳ ೩೦ರಲ್ಲಿ ಅವರು ಇಹಲೋಕವನ್ನು ತ್ಯಜಿಸಿದರು.

ಜತ್ತಿ ಈಶ್ವರ ಭಾಗವತರು ಕಳೆದ ಶತಮಾನದ ಕೊನೆಗೆ ಮತ್ತು ಈ ಶತಮಾನದ ಪೂರ್ವಾರ್ಧದಲ್ಲಿ ತೆಂಕುತಿಟ್ಟಿನ ಪ್ರಸಿದ್ಧ ಭಾಗವತರಾಗಿದ್ದರು ; ಭಾಗವತರಾಗಿಯೂ ವಿಶಿಷ್ಟ ವ್ಯಕ್ತಿಯಾದವರು. ಏಕೆಂದರೆ ಭಾಗವತಿಕೆ ಮಾತ್ರವಲ್ಲದೆ ಪ್ರಸಂಗರಚನೆ ಮತ್ತು ಹರಿಕಥೆ ಈ ಕ್ಷೇತ್ರಗಳಲ್ಲೂ ಸಾಧನೆ ಮಾಡಿದರು. ಜತ್ತಿ ಭಾಗವತರ ಬಾಲ್ಯದಲ್ಲಿ ಬಾಯಾರು ಪರಿಸರದ ಐಗಳ ಮಠಕ್ಕೆ ಪಣಂಬೂರಿನ ನಾರ್ಣಪ್ಪ ಎಂಬುವರು ಉಪಧ್ಯಾಯರಾಗಿ ಬಂದರೆಂದೂ ಅವರು ಕವಿಗಳೂ ಹರಿದಾಸರೂ ಆಗಿದ್ದುದರಿಂದ ಇವರು ಅವರಿಂದಲೇ ಪ್ರೇರಣೆ ಪಡೆದು ಕವಿತಾರಚನೆ ಮತ್ತು ಹರಿಕಥೆಗೆ ತೊಡಗಿದರೆಂದೂ ತಿಳಿದುಬರುತ್ತದೆ. ತೊರವೆ ರಾಮಾಯಣ, ಗದುಗಿನ ಭಾರತ, ಜೈಮಿನಿ ಭಾರತ, ಕನ್ನಡ ಭಾಗವತ ಮುಂತಾದುವನ್ನು ಚೆನ್ನಾಗಿ ಅಧ್ಯಯನ ಮಾಡಿದ್ದ ಜತ್ತಿ ಭಾಗವತರು ಯಕ್ಷಗಾನ ಭಾಗವತರಿಗೆ

ಅಪೂರ್ವವೆಂಬಂತೆ ಹಳಗನ್ನಡ ಕಾವ್ಯಗಳನ್ನು ಅಭ್ಯಾಸ ಮಾಡಿದ್ದರು. ಮುಖ್ಯವಾಗಿ ಕರ್ಣಾಟಕ ಕಾದಂಬರಿ, ಜಗನ್ನಾಥ ವಿಜಯ, ಶಬರ ಶಂಕರ ವಿಲಾಸ - ಮೊದಲಾದ ಕೃತಿಗಳು ಅವರಿಗೆ ಪ್ರಿಯವಾಗಿದ್ದವು.

ಹರಿಕಥೋಪಯೋಗಿಯಾದ ಕೀರ್ತನ ಗ್ರಂಥಗಳನ್ನು ಬರೆದು ಪ್ರಕಟಿಸಿದ ಮೊದಲಿಗರಲ್ಲಿ ಜತ್ತಿ ಭಾಗವತರೊಬ್ಬರೆಂದು ಉಲ್ಲೇಖಿಸಲೇ ಬೇಕು. ಅವರ ಹರಿಕಥಾ ಸಾಹಿತ್ಯವು ಯಕ್ಷಗಾನದ ಮಾದರಿಯಲ್ಲೇ ಇದೆ. ಅವರ ಗುರುಗಳ ಹರಿಕಥಾ ಮಾರ್ಗವೂ ಹೀಗೆಯೇ ಇತ್ತೆಂದು ತಿಳಿಯುತ್ತದೆ. ಭಾವತಾಳಗಳಿಗನುಗುಣವಾಗಿ ಕುಣಿದು ಹರಿಕಥೆ ಮಾಡುತ್ತಿದ್ದ ಪದ್ಧತಿ ಜತ್ತಿಯವರದೆಂದೂ ತಿಳಿದು ಬರುತ್ತದೆ. ಆಶುಕವಿಗಳಾಗಿದ್ದು ಸಂದರ್ಭಕ್ಕೆ ಬೇಕಾದ ಪದ್ಯಗಳನ್ನು ಅಲ್ಲಲ್ಲೇ ಕಟ್ಟಿ ಹಾಡುತ್ತಿದ್ದರಂತೆ. ಯಕ್ಷಗಾನದಲ್ಲೂ ಹರಿಕಥೆಯಲ್ಲೂ ಈ ರೀತಿ ಆಶುಪದ್ಯ ರಚನೆ ಮಾಡುತ್ತಿದ್ದರು. ಎಂದೂ ಪುಸ್ತಕ ನೋಡಿ ಭಾಗವತಿಕೆ ಮಾಡುತ್ತಿರಲಿಲ್ಲ ಮತ್ತು ಆ ಕಾಲದಲ್ಲಿ ಹಿಮ್ಮೇಳದವರು ನಿಂತುಕೊಂಡೇ ಭಾಗವತಿಕೆ ಮಾಡುವ ಪದ್ಧತಿಯಿದ್ದುದರಿಂದ ಪುಸ್ತಕ ನೋಡಿಕೊಂಡು ಕಂಠಪಾಠವಿಲ್ಲದ ಪ್ರಸಂಗಗಳನ್ನು ಆಟವಾಡಿಸುವ ಸಾಧ್ಯತೆಗಳಿದ್ದಿಲ್ಲ. ಆಟದಲ್ಲಿಯೂ ಮೊದಲಿಗೆ ಕಥಾಸಾರ ವಿವರವನ್ನು ಜತ್ತಿ ಭಾಗವತರು ಮಾಡುತ್ತಿದ್ದರಂತೆ.

ಜತ್ತಿ ಭಾಗವತರು ತೆಂಕುತಿಟ್ಟಿನ ಖ್ಯಾತ ಭಾಗವತರಾದ ಬಲಿಪ ನಾರಾಯಣ ಭಾಗವತರಿಗಿಂತ ಹಿರಿಯರು. ಜತ್ತಿ ಭಾಗವತರಿಂದಲೇ ಬಲಿಪರು ಪ್ರಸಂಗ ರಚನೆಗೆ ಉತ್ತೇಜನ ಪಡೆದವರೆಂದೂ ಹೇಳಲಾಗಿದೆ. ಜತ್ತಿ ಭಾಗವತರು ಹೊಸ ಕಾಲದಲ್ಲಿ ತುಳು ಕೀರ್ತನೆಗಳನ್ನು ರಚಿಸಿದವರಲ್ಲಿ ಬಹುಶಃ ಮೊದಲಿಗರು. ತುಳು ಕೀರ್ತನಮಾಲೆ ಸಹಿತ ಎಂಟು ಹರಿಕಥಾ ಸಾಹಿತ್ಯ ಕೃತಿಗಳನ್ನೂ 13 ಯಕ್ಷಗಾನ ಕೃತಿಗಳನ್ನು ಜತ್ತಿ ಭಾಗವತರು ಬರೆದಿರುವುದನ್ನು ಶ್ರೀ ಸುಬ್ಬಣ್ಣ ರೈ ಅವರು ಗುರುತಿಸಿ ಪಟ್ಟಿ ಮಾಡಿದ್ದಾರೆ. ಅವರು ಕುಶಲವರ ಕಾಳಗವನ್ನೂ ಬರೆದಿರುವುದಾಗಿಯೂ ಈ ಪ್ರಸಂಗವನ್ನು ತಾನು ನೋಡಿರುವದಾಗಿಯೂ ಪ್ರೊ.ಟಿ. ಕೇಶವ ಭಟ್ಟರು ತಿಳಿಸಿರುತ್ತಾರೆ. ಅವರ ಎಷ್ಟೋ ಕೃತಿಗಳು ಅನುಪಲಬ್ಧವಾಗಿವೆ.

ಜತ್ತಿ ಈಶ್ವರ ಭಾಗವತರ ಸಮಕಾಲೀನರಾದ ಇನ್ನೊಬ್ಬ ಯಕ್ಷಗಾನ ಕವಿ, ಕವಿಭಟ್ಟರೆಂದೇ ಪ್ರಸಿದ್ಧರಾಗಿದ್ದ ಕನ್ಯಾನ ವೆಂಕಟರಮಣ ಭಟ್ಟರು. ಇವರು ಜತ್ತಿ ಭಾಗವತರಿಗಿಂತ ಸ್ವಲ್ಪ ಕಿರಿಯರು. ಇವರಿಬ್ಬರೂ ಆಶುಕವಿಗಳಾದುದರಿಂದ ಆನೆಕಲ್ಲಿನಲ್ಲಿ ನಾರಾಯಣ ಭಟ್ಟರೆಂಬವರು ಮನೆಯಲ್ಲಿ ಇವರಿಬ್ಬರ ನಡುವೆ ಒಂದು ಬಂಡಿ ಪದ ಸ್ಪರ್ಧೆ ಏರ್ಪಟ್ಟಿತ್ತಂತೆ. ಒಬ್ಬರು ನಿಲ್ಲಿಸಿದ ಅಕ್ಷರದಿಂದ ತೊಡಗಿ ಇನ್ನೊಬ್ಬರು ಆಶು ಪದ್ಯಕಟ್ಟಿ ಹಾಡಬೇಕಾಗಿತ್ತು. ಕೇಳಲು ಆ ಕಾಲದ ಹಲವು ಮಂದಿ ಯಕ್ಷಗಾನ ರಸಿಕರು ಸೇರಿದ್ದರಂತೆ. ರಾತ್ರಿ ಕಳೆದು ಬೆಳಗಾದರೂ ಸ್ಪರ್ಧೆ ಮುಗಿಯಲಿಲ್ಲವಂತೆ. ಇಬ್ಬರೂ ಪದ್ಯರಚನೆಯಲ್ಲಿ ಬಹು ಸಮರ್ಥರೆಂದು ಕೊಂಡಾಡಲ್ಪಟ್ಟರಂತೆ. ಈ ಘಟನೆ ಆ ಕಾಲದವರ ಆಸಕ್ತಿಯನ್ನೂ ಆಶುಕವಿತ್ವ ಸಾಮರ್ಥ್ಯವನ್ನು ಸ್ಫುಟಗೊಳಿಸುತ್ತದೆ.

ಜತ್ತಿ ಈಶ್ವರ ಭಾಗವತರ ಮಗ ಜತ್ತಿ ಕೃಷ್ಣ ಭಟ್ ಇವರು ತಮ್ಮ ತಂದೆಯ ಮಕರಾಕ್ಷ ಕಾಳಗ ಪ್ರಸಂಗವನ್ನು 1958ರಲ್ಲಿ ಆರ್ಥಿಕ ಸಂಕಷ್ಟದ ಮಧ್ಯದಲ್ಲೂ ಪ್ರಕಟಿಸಿದ್ದು ಅತ್ಯಂತ ಶ್ಲಾಘನೀಯವಾದ ಕೆಲಸ. ಅವರ ಪುಸ್ತಕದ ಪೀಠಿಕೆಯಿಂದ ಸ್ವಲ್ಪ ಮತ್ತು **ಡಾ. ಪಾದೆಕಲ್ಲು ವಿಷ್ಣು ಭಟ್ಟ**ರವರ **ಭಾಗವತ ಯಕ್ಷಗಾನ ಪ್ರಸಂಗಗಳು** ಎಂಬ ಮಹಾಪ್ರಬಂಧದಿಂದ ಈ ಎಲ್ಲಾ ಮಾಹಿತಿಯನ್ನು ಯಥಾವತ್ತಾಗಿ ಸಂಗ್ರಹಿಸಿ ಇಲ್ಲಿ ಬರೆದಿದ್ದೇನೆ.

ಮಖರಾಕ್ಷ ಕಾಳಗದಲ್ಲಿ ಪ್ರಸಂಗ ಪುಸ್ತಕದಲ್ಲಿ ಜತ್ತಿ ಈಶ್ವರ ಭಾಗವತರ ಭಾವಚಿತ್ರ ಕೂಡ ಇದೆ. ಆಗ ಈ ಪ್ರಸಂಗ ಪುಸ್ತಕದ ಕರಡು ಪ್ರತಿ ತಿದ್ದಿದವರು ಶ್ರೀ ಕಯ್ಯರ ಕಿಞ್ಞಣ್ಣ ರೈ. ಪುಸ್ತಕದ ಬಗ್ಗೆ ಮುನ್ನುಡಿ ಬರೆದವರು ರಾಷ್ಟ್ರಕವಿ ಶ್ರೀ ಗೋವಿಂದ ಪೈ.

* * *

# 6. ಇಂದ್ರಜಿತು ಕಾಳಗ

**ಕಥಾಸಾರ:**

ಶ್ರೀರಾಮನೊಂದಿಗೆ ಸಮರಕನುವಾದ ರಾವಣನಿಗೆ ಒಂದಾದ ಮೇಲೆ ಒಂದೆಂಬಂತೆ ಸೋಲು ಉಂಟಾಗತೊಡಗಿತು. ಕುಂಭಕರ್ಣ, ನರಾಂತಕ, ತ್ರಿಶಿರ, ಅತಿಕಾಯ, ಈಗ ಖರಾಸುರನ ಮಗನಾದ ಮಕರಾಕ್ಷ ಮಡಿದ ವಾರ್ತೆಯನ್ನು ಕೇಳಿ ಕಂಗೆಟ್ಟು, ಧೈರ್ಯಗುಂದಿ ಮಂಚಕ್ಕೊರಗಿದ್ದಾನೆ. ಇಷ್ಟಕ್ಕೆಲ್ಲ ತಂಗಿಯೇ ಕಾರಣಳಾದಳು ಎಂದು ಮರಗುವ ಸಂದರ್ಭದಲ್ಲಿ ಮಗನಾದ ಇಂದ್ರಜಿತು ಬಂದು ತಂದೆಯಲ್ಲಿ ಯುದ್ಧಕ್ಕೆ ಅಪ್ಪಣೆ ಪಡೆದು ಹೊರಡುತ್ತಾನೆ. ಅವನು ನೇರವಾಗಿ ಬಂದು ರಾಮನ ಸೇನೆಯ ಮೇಲೆ ಪರಾಕ್ರಮದಿಂದ ಎರಗುತ್ತಾನೆ. ಇಂದ್ರಜಿತುವಿಗೆ ರಾಮನ ಬಾಣದ ರುಚಿ ತಿಳಿಯುತ್ತದೆ. ಈಗ ಇವನನ್ನು ನೇರವಾಗಿ ಎದುರಿಸುವ ಬದಲು ಮಾಯಾ ವಿದ್ಯೆಯನ್ನು ಬಳಸಬೇಕೆನ್ನುತ್ತ, ಅಂಬರದಲ್ಲಿ ಅದೃಶ್ಯನಾಗಿ ಬಾಣ ಬಿಡಲು ಆರಂಭಿಸುತ್ತಾನೆ. ಶ್ರೀರಾಮ ಇವನ ಯುದ್ಧ ತಂತ್ರವನ್ನು  ಕ್ಷಣ ಮಾತ್ರದಲ್ಲಿ ನಿವಾರಿಸಲು,  ಬೇರೆ ಉಪಾಯ ಕಾಣದೇ, ಇಂದ್ರಜಿತು ಪಲಾಯನ ಗೈಯುತ್ತಾನೆ. ರಾಮನನ್ನು ಗೆಲ್ಲುವುದು ಶಿವನಿಗೂ ಅಸಾಧ್ಯವು ಎಂದು ಮನಸ್ಸಿನಲ್ಲಿ ಎಣಿಸುತ್ತಲೇ ತನ್ನ ವೈರಿಗಳ ಆತ್ಮಸ್ಥೈರ್ಯ ಕುಂದುವಂತೆ ಮಾಡಲು ಮಾಯಾಸೀತೆಯನ್ನು ನಿರ್ಮಿಸಿ, ಎಳೆದು ತಂದು ಶಿರಕ್ಕೆ ಖಡ್ಗವನ್ನುನಿರಿಸುತ್ತಾನೆ. ರೋಧಿಸುವ ಮಾಯಾಸೀತೆಯನ್ನು ಕಂಡು ಹನುಮಾದಿ ಕಪಿಗಳು ರಕ್ಕಸನ ಈ ಕಪಟವನ್ನರಿಯದೇ ಕಂಗಾಲಾಗುತ್ತಾರೆ. ಸ್ವತಃ ಹನುಮಂತ ಇಂದ್ರಜಿತುವಿನಲ್ಲಿ ಬಂದು ನಾನಾಪರಿ ಅವನನ್ನು ಹೊಗಳಿ ಸಾಂತ್ವನಗೊಳಿಸಲು ಪ್ರಯತ್ನಿಸುತ್ತಾನೆ. ಇದನ್ನು ದಿಕ್ಕರಿಸಿ ಇಂದ್ರಾರಿ ಯುದ್ಧಭೂಮಿಯಲ್ಲಿ ಎಲ್ಲರೂ ನೋಡುತ್ತಿದ್ದಂತೆ  ಮಾಯಾಸೀತೆಯ ಶಿರವನ್ನು ತುಂಡರಿಸುತ್ತಾನೆ. ಇದನ್ನು ಕಂಡು ಹನುಮಂತ ಇಂದ್ರಜಿತುವಿನ ಮೇಲೆ ಮುಷ್ಠಿ ಪ್ರಹಾರ ಮಾಡಲು ಇಂದ್ರಜಿತು ಅಲ್ಲಿಂದ ತಪ್ಪಿಸಿಕೊಂಡು ಓಡಿ ಹೋಗುತ್ತಾನೆ.

ಇತ್ತ ಹನುಮಂತನು ಶೋಕದಿಂದ ಕಂಗೆಟ್ಟಿರಲು, ಜಾಂಬವಾದಿ ಕಪಿಗಳು ದುಃಖತಪ್ತನಾದ ಆತನ ಬಳಿ ಬಂದು ಕಾರಣ ತಿಳಿದು ಏನೂ ಮಾಡಲೂ ತೋಚದೇ, ಹನುಮಂತ ಸಮೇತ ರಾಮನಬಳಿಗೆ ಬಂದು ಸೀತೆಯ ರುಂಡಮುಂಡವನ್ನು ಅವನ ಮುಂದಿಡುತ್ತಾರೆ. ನಡೆದ ಸಂಗತಿ ತಿಳಿಸಿದೊಡನೆ ಶ್ರೀರಾಮ ದುಃಖದಿಂದ ಗೋಳಾಡುತ್ತಿರಲು ವಿಭೀಷಣನು ಇದು ಇಂದ್ರಜಿತುವಿನ ಮಾಯಾಸೀತೆಯೆಂದು ತಿಳಿಸಲು ಹನುಮನನ್ನು ಅಶೋಕವನಕ್ಕೆ ಕಳುಹಿಸಿ ಅಲ್ಲಿ ಸೀತೆ ಸುರಕ್ಷಿತವಾಗಿ ಶ್ರೀರಾಮನ ಧ್ಯಾನದಲ್ಲಿರುವುದನ್ನು ಕಂಡು ಸಂತಸಗೊಂಡು ಅದನ್ನು ಶ್ರೀ ರಾಮನಿಗೆ ತಿಳಿಸಲು ಶ್ರೀರಾಮನು ನೆಮ್ಮದಿಗೊಂಡು, ಮುಂದಿನ ಯುದ್ಧಕ್ಕೆ ಸನ್ನದ್ದನಾಗುತ್ತಾನೆ.

ಇತ್ತ ಇಂದ್ರಜೀತು ಶ್ರೀರಾಮನ ಸೇನೆಯನ್ನು ಗೆಲ್ಲಲು ವಾಮಾಚಾರದ ಮಾರ್ಗವೇ ಸೂಕ್ತ ಎಂದು ನಿರ್ಧರಿಸಿ ಆಮಾರ್ಗ ಹಿಡಿಯುತ್ತಾನೆ. ನಿಕುಂಭಿಳೆಗೆ ಹೋಗಿ ಕುಲದೇತೆಯನ್ನು ಪೂಜಿಸಿ, ಪುರೋಹಿತರಿಂದ ಅಪ್ಪಣೆಪಡೆದು ಶ್ರೀರಾಮ ಲಕ್ಷ್ಮಣರನ್ನು ಮುಗಿಸಲು ಸಂಕಲ್ಪಿಸಿ, ಮಾರಣಾಧ್ವರಕ್ಕೆ ಆರಂಭಿಸುತ್ತಾನೆ. ಈ ಯಾಗದಿಂದ ಉಂಟಾದ ಹೋಮ-ಧೂಮ ಗಗನವನ್ನು ವ್ಯಾಪಿಸುತ್ತದೆ. ಅದನ್ನು ತಿಳಿದ ರಾಮಾದಿಗಳು ವಿಭೀಷಣನಿಂದ ಆ ಕುರಿತ ವಿವರ ತಿಳಿದು ಅವನ ನಿಗ್ರಹಕ್ಕೆ ಯಾರು ಮುಂದಾಗುವರು ಎಂದು ಚಿಂತಿಸುತ್ತಿರುವಾಗ ಲಕ್ಷ್ಮಣನು ಅಪ್ಪಣೆ ಪಡೆದು, ಹನುಮ ಹಾಗೂ ಇತರ ಕಪಿಗಳನ್ನು ಕೂಡಿಕೊಂಡು, ಯಾಗದೀಕ್ಷಿತನಾಗಿ ಭೀಕರ ಕರ್ಮದಲ್ಲಿ ತೊಡಗಿದ್ದ ಇಂದ್ರಜೀತುವನ್ನು ಎಳೆದು, ಉರಿವ ಯಾಗಕುಂಡವನ್ನು ಆರಿಸಿ, ಯುದ್ಧಕ್ಕೆ ಆಹ್ವಾನಿಸಲು, ವ್ರತಭಂಗವಾಗಿ ಕ್ರೋಧಗೊಂಡ ಇಂದ್ರಜಿತು ಇದಕ್ಕೆಲ್ಲ ವಿಭೀಷಣನೇ ಕಾರಣವೆಂದು ಅವನ ಮೇಲೆಯೇ ಬ್ರಹ್ಮಾಸ್ತ್ರ ಪ್ರಯೋಗಿಸಲು, ಹನುಮಂತನಿಂದಾಗಿ ಅದು ವಿಫಲವಾಗುತ್ತದೆ. ಲಕ್ಷ್ಮಣನಲ್ಲಿ ನೇರ ಯುದ್ಧ ಆರಂಭಿಸಿ ಬಸವಳಿದ ಇಂದ್ರಾರಿ ಅಂತಿಮವಾಗಿ ಲಕ್ಷ್ಮಣನ ಬ್ರಹ್ಮಾಸ್ತ್ರದಿಂದ ಹತನಾಗುತ್ತಾನೆ.

ಇತ್ತ ಮಗನ ಮರಣದ ವಾರ್ತೆಯನ್ನ ಕೇಳಿ ರಾವಣ ಶೋಕದಿಂದಿರುವಾಗ, ಮಡದಿ ಮಂಡೋದರಿಯೂ ಪುತ್ರ ಶೋಕದಿಂದ ರೋಧಿಸುತ್ತಿರುವುದನ್ನು ನೋಡಿ ಕೋಪದಿಂದ ರಾವಣ ಸೀತೆಯನ್ನು ಕಡಿಯಲು ಮುಂದಾಗುತ್ತಾನೆ. ಮಂತ್ರಿಗಳು ಶಾಂತೋಕ್ತಿಗಳಿಂದ ಧನುಜೇಂದ್ರನನ್ನು ಸಂತೈಸಿದರು ಎಂಬುದಾಗಿ ವಾಲ್ಮೀಕಿ ಮುನಿಗಳು ನಿರೂಪಿಸುತ್ತಿರುವರು.

*ಇಂದ್ರಜಿತು ಕಾಳಗ ಸಮೀಕ್ಷೆ*

ಇಂದ್ರಜಿತು ಕಾಳಗವನ್ನು ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ ಇವರ ಪ್ರಸಂಗ ಪುಸ್ತಕವನ್ನು (ಪ್ರಕಟಣೆ 1929) ನಾನು ಸಂಪಾದನೆಗೆ ಆಯ್ದುಕೊಂಡಿದ್ದೇನೆ. ಇಂದ್ರಜಿತು ಕಾಳಗ ತೆಂಕು ಮತ್ತು ಬಡಗು ಈ ಎರಡೂ ತಿಟ್ಟುಗಳಲ್ಲಿ ರಂಗಕೃತಿಯಾಗಿ ಪ್ರಸಿದ್ಧಗೊಂಡಿದೆ.

ಸುಮಾರು 130 ಪದ್ಯಗಳ ಈ ಪ್ರಸಂಗ ಚಿಕ್ಕದಾಗಿ ಅಡೆ ತಡೆ ಇಲ್ಲದೇ ಸಾಗುತ್ತದೆ. ಕಥೆಗೆ ಅಂತಹ ಕವಲುಗಳು ಇಲ್ಲದೇ, ದೃಶ್ಯಾವಳಿಗಳನ್ನು ಮುಂದೆ ಮಾಡಿಕೊಳ್ಳದೇ ರಂಗಕ್ಕಿಳಿಸಬಹುದು. ಈ ಪ್ರಸಂಗದಲ್ಲಿ ಹೆಚ್ಚಾಗಿ ಕೈಕರಣಗಳು ಹಾಗೂ ದೃಶ್ಯಗಳಿಂದ ಪರಿಣಾಮ ಮಾಡಬೇಕಾದ ಸನ್ನಿವೇಶವಿದೆ. ಕಾಳಗದ ವಿವಿಧ ಮಜಲುಗಳು, ತಂತ್ರಗಳೇ ಮುಖ್ಯವಾಗಿ ಬರೆಯಲ್ಪಟ್ಟ ಪ್ರಸಂಗವಾಗಿರುವುದರಿಂದ ವೀರ, ರೌದ್ರ ರಸೋತ್ಪಾದನೆಗೆ ಮಾತ್ರ ಹೆಚ್ಚಿನ ಅವಕಾಶಗಳು ದೊರೆಯುತ್ತದೆ.

ಇಂದ್ರಜಿತು ರಾಮಾಯಣದ ಮಹಾಪರಾಕ್ರಮಿಗಳಾದ ರಾಕ್ಷಸರಲ್ಲೊಬ್ಬ. ರಾವಣನಿಗಿಂತಲೂ ಮಿಗಿಲಾದ ಪರಾಕ್ರಮಿ; ಮಂತ್ರ-ಮಾಯೆಗಳಲ್ಲಿ ಸರಿಸಾಟಿಯಿಲ್ಲದ ಶೂರ, ತಂತ್ರಗಾರ, ವರಬಲವೂ ಅವನಿಗಿದೆ. ರಾಮಾಯಣ ಅವನ ಆಶ್ಚರ್ಯಕರವಾದ ಪರಾಕ್ರಮಗಳ ಕಥೆಯನ್ನು ರೋಚಕವಾಗಿ ವರ್ಣಿಸಿದೆ. ಅಂಥ ಮಹಾವೀರನ ಅವಸಾನದ ಕಥೆಯೇ ಇಂದ್ರಜಿತು ಕಾಳಗದ ಆಕರ್ಷಣೆ.

ಇಂದ್ರಜಿತು ತನ್ನ ಸರ್ವಸ್ವವನ್ನೂ ಪಣಕ್ಕಿಟ್ಟು ಹೋರಾಡುವ ಚಿತ್ರ ಬೆರಗುಗೊಳಿಸುತ್ತದೆ. ಮಾಯಾಸೀತೆಯ ಪ್ರಕರಣ ಅವನ ಧೂರ್ತತೆಯನ್ನು ಸಾರುತ್ತದೆ. ಅದರ ಮೂಲಕ ಅವನು ರಾಮನಿಂದ ಮೊದಲ್ಗೊಂಡು ಕಪಿಸೈನ್ಯವೆಲ್ಲವನ್ನೂ ವಂಚಿಸುತ್ತಾನೆ. ಅವನ ಮಾಯೆಯ ಬಲೆಗೆ ಸಿಲುಕಿದ ಹನುಮಂತನು ತೊಳಲುವ (ಮಾಯಾಸೀತಾ ಪ್ರಕರಣ) ವೃತ್ತಾಂತ ಹೃದಯಂಗಮವಾಗಿದೆ. ಇದು ಮಾಯೆಯೆಂಬುದನ್ನು ಬಲ್ಲ ವಿಭೀಷಣನಿಲ್ಲದಿದ್ದರೆ ರಾಮನ ಕಥೆಯೂ ಕರುಣಾಜನಕವೆನಿಸುತ್ತ ವೆಂಬುದು ಸೂಚಿತವಾಗಿದೆ.

ಇಂದ್ರಜಿತುವಿನ ಮಾರಣಾಧ್ವರ ಸನ್ನಿವೇಶ ಮತ್ತೊಂದು ಅದ್ಭುತ. ಅಲ್ಲಿಯೂ ವಿಭೀಷಣನ ಸಲಹೆಯೇ ಮಾರ್ಗದರ್ಶಕವಾಗುತ್ತದೆ. ಲಕ್ಷ್ಮಣನ ಶೌರ್ಯದ ಚಿತ್ರ ಸೊಗಸಾಗಿದೆ. ಲಕ್ಷ್ಮಣನನ್ನು ಕರೆತಂದ ವಿಭೀಷಣನನ್ನು ಕಂಡು ಕೆರಳಿ ಕೆಂಡವಾಗುವುದು, ಅವನ ಅಹಂಕಾರ, ಕೈಸೋತಾಗ ಅವನು ಆತ್ಮವಿಮರ್ಶೆ ಆದರೂ ಬಿಡದ ಛಲ ಇವೆಲ್ಲವೂ ಇಂದ್ರಜಿತುವಿನ ಭವ್ಯವಾದ ಚಿತ್ರವನ್ನು ಕಡೆದು ನಿಲ್ಲಿಸುವಲ್ಲಿ ಸಮರ್ಥವಾಗಿದೆ.

ಇಂದ್ರಜಿತು ಕಾಳಗ ಚಿಕ್ಕದು. ಆದರೆ ಈ ಪುಟ್ಟ ಭಿತ್ತಿಯಲ್ಲಿ ಚೊಕ್ಕ ಚಿತ್ರಗಳನ್ನು ಜೋಡಿಸುವಲ್ಲಿ ಕವಿಯು ಸಫಲನಾಗಿರುವುದು ಅವನ ಕೌಶಲ್ಯಕ್ಕೆ ಸಾಕ್ಷಿ. ಪ್ರಧಾನ ಪಾತ್ರವಾದ ಇಂದಜಿತುವನ್ನು ತುಂಬ ಅದ್ಭುತವಾಗಿ ಚಿತ್ರಿಸಿದ ಕವಿ, ಹನುಮಂತ, ಲಕ್ಷ್ಮಣರನ್ನೂ ಸೊಗಸಾಗಿ ಚಿತ್ರಿಸಿದ್ದಾನೆ. ಇತರ ಪಾತ್ರಗಳೂ ಯಥಾವಕಾಶವಾಗಿ ಸಂಪನ್ನವಾಗಿದೆ.

ಕಥೆ ಆರಂಭವಾಗುವುದು, ರಾವಣ ತನಗಾಗುತ್ತಿರುವ ಸೋಲಿನಿಂದ ವ್ಯಥಿತನಾದ ಸನ್ನಿವೇಷದಿಂದ. ಕೂಡಲೇ ಇಂದ್ರಜಿತುವಿನ ಪ್ರವೇಶ ವೀರ ರಸೋತ್ಪಾದನೆಗೆ ಅವಕಾಶ ಮಾಡಿಕೊಡುತ್ತದೆ. ಮುಂದೆಯೂ ಇದೇ ರೀತಿ ಕ್ಷಣ ಕ್ಷಣಕ್ಕೂ ಬಂದು ಹೋಗುವ ದೃಶ್ಯಾವಳಿಗಳು ಮುಖ್ಯ ರಸಸೃಷ್ಟಿಗೆ ಅವಕಾಶವನ್ನು ನೀಡುತ್ತಲೇ ಬದಲಾಗುತ್ತದೆ. ಈ ಪ್ರಸಂಗ ನಮ್ಮಲ್ಲಿ ಹೆಚ್ಚು ದೃಶ್ಯ ಪ್ರಧಾನವಾಗಿ ಅಥವಾ ಪರಿಕರಪ್ರದಾನವಾಗಿ ಮಾತಿಗೆ ಕಡಿಮೆ ಅವಕಾಶವಿರುವ ಕೃತಿಯಾಗಿ ನಿಂತಿದ್ದು, ಕೆಲವೊಮ್ಮೆ ರಂಗಕ್ಕೆ ತರಬಾರದ ವಸ್ತುಗಳು ಬರುವುದುಂಟು. ಉದಾಹರಣೆಗೆ ರಂಗಮಧ್ಯದಲ್ಲಿ ನಿಕುಂಬಿಳೆಯಾಗದ ದೃಶ್ಯಕ್ಕಾಗಿ ಪ್ರತ್ಯಕ್ಷ ಬೆಂಕಿಯನ್ನೇ ತಂದು ಭೀಕರತೆಯನ್ನು ಉಂಟುಮಾಡುವ ಪ್ರಯತ್ನಗಳನ್ನು ಇಂದು ಕಾಣಬಹುದು. ತೆಂಕಿನಲ್ಲಿ ರಂಗಕೃತಿಯಾಗಿ ಇದನ್ನು ಹೇಗೆ ಆಡುತ್ತಾರೆ ಎಂಬ ಕಲ್ಪನೆ ನನಗಿಲ್ಲ.

ಆದರೆ ಬಡಗಿನಲ್ಲಿ ಈ ಪ್ರಸಂಗ ಅತ್ಯಂತ ಭೀಕರ ದೃಶ್ಯಗಳನ್ನು ಸೃಷ್ಠಿಸುವ ಪ್ರಯತ್ನದಲ್ಲೇ ಯಶಸ್ಸನ್ನು ಕಂಡಿದೆ.

ಆದರೆ ಪ್ರಸಂಗದ ಆರಂಭದಲ್ಲಿ ಸ್ವಲ್ಪ ರಂಗ ಪ್ರಜ್ಞೆಯ ಅಭಾವ ಕಾಣುತ್ತಿದೆ. ಕಥೆಯ ನಾಯಕನಾದ ಇಂದ್ರಜಿತುವನ್ನು ರಂಗಕ್ಕೆ ತರುವಲ್ಲಿ ಪ್ರತ್ಯೇಕ ಪದ್ಯದ ಅವಶ್ಯಕತೆಯಿತ್ತು. ರಾವಣನ ಪದ್ಯದ ಕೊನೆಯ ಸಾಲಿನಲ್ಲಿ ಇಂದ್ರಜಿತುವಿಗೆ ಪ್ರವೇಶವಕಾಶ ಕಲ್ಪಿಸಿದ್ದು ಸಮರ್ಪಕವಾಗಿಲ್ಲ. ಅಂತೆಯೇ ಹನುಮ ಇಂದ್ರಜಿತುಗಳಲ್ಲಿ ಸಂವಾದರಾಹಿತ್ಯವು ಅಷ್ಟೊಂದು ಸೊಗಸುವುದಿಲ್ಲ. ಅಲ್ಲಿ ಇಂದ್ರಜಿತುವಿಗೆ ಪದ್ಯಗಳ ಅವಶ್ಯಕತೆಯಿತ್ತು. ರಾಮ ಇಂದ್ರಜಿತುಗಳ ನಡುವೆ ಯುದ್ಧವಲ್ಲದೇ, ಸಂಭಾಷಣೆಯ ಪದ್ಯಗಳು ಇದ್ದರೆ ಒಳ್ಳೆಯದಿತ್ತು. ಅಲ್ಲಿ ಕೇವಲ ಕವಿ ಪದ್ಯವಿದೆ.

ಯಕ್ಷಗಾನದ ರಂಗನಿಯಮದಂತೆ, ರಾಮಾಯಣದ ಹೆಚ್ಚಿನ ಎಲ್ಲ ಪ್ರಸಂಗಗಳಲ್ಲೂ ಶ್ರೀರಾಮನ ಒಡ್ಡೋಲಗ (ಪಟ್ಟಾಭಿಷೇಕ ಮತ್ತು ಅದಕ್ಕಿಂತ ಪೂರ್ವದ ಪ್ರಸಂಗ ಹೊರತುಪಡಿಸಿ) ದಿಂದಲೇ ಆರಂಭವಾಗಬೇಕು. ಇದು ಮಹಾಭಾರತ ಭಾಗವತಾದಿಗಳಲ್ಲೂ, ಹೆಚ್ಚಾಗಿ ಸಾತ್ವಿಕ ಪಾತ್ರಗಳಿಂದ ಆರಂಭವಾಗಬೇಕಾದದ್ದು ಪರಂಪರೆ, ರಂಗರೂಢಿ. ಆದರೆ ಅನೇಕ ಪ್ರಸಂಗಗಳ ರಚನೆ ಈ ಕಲ್ಪನೆಗೆ ಹೊರತಾಗಿ ಇರುವುದನ್ನು ಗುರುತಿಸಬಹುದು. ಇಂದ್ರಜಿತು ಕಾಳಗದಲ್ಲೂ ಕವಿ ಪರಂಪರೆಯಂತೆ, ಶಾರ್ದೂಲವಿಕ್ರೀಡಿತವೃತ್ತದಲ್ಲಿ ಶ್ರೀರಾಮನ ಸ್ತುತಿಯಿಂದ ಆರಂಭಿಸಿ ನೇರ ರಾವಣನ ಒಡ್ಡೋಲಗದ ದೃಶ್ಯಕ್ಕೆ ಕೊಂಡೊಯ್ಯುತ್ತಾನೆ. ಹಾಗಾಗಿ ರಂಗಕೃತಿಯಲ್ಲಿ ರಾಮನ ಪ್ರವೇಶಕ್ಕೊಂದು ಅವಕಾಶ ಮಾಡಿಕೊಡುವುದಕ್ಕಾಗಿ ಅತಿಕಾಯ ಕಾಳಗದ

ಕಾಮಿನಿಮಣಿ ಕೇಳು ರಾಮಚಂದಿರನು
ಬಳಿಕ ಆ ಮಹಾ ಕಪಿಗಳುದ್ದಾಮ ಸಾಹಸವ ಕಂಡು
ಎಂಬ ಪದ್ಯದ ಮೂಲಕ ಪ್ರಸಂಗ ಆರಂಭಿಸುವುದು ಪರಂಪರೆಯಾಗಿದೆ.

ಇದಲ್ಲದೆ ಶ್ರೀ ಬಲಿಪನಾರಾಯಣ ಭಾಗವತರಿಂದ ಸಂಪಾದಿಸಿದ ಇನ್ನೊಂದು ಭಿನ್ನವಾದ ಇಂದ್ರಜಿತು ಕಾಳಗದ ಪ್ರತಿಯಿಂದ ಕೆಲವು ಪದ್ಯಗಳನ್ನು ಬಳಸಿಕೊಳ್ಳುತ್ತಾರೆ. ಉದಾಹರಣೆಗೆ,

ಮರ ಹಾರುವ ಮರ್ಕಟಗೆ ಈ
ಪರಿ ಕಲಿಸಿದ್'ಯಾರರ್ ನಿಮಗೆ

ಧರಣಿಜೆಯಿಂ ಖಳವಂಶ ಸಸಿ
ಉರಿಯಿತು ಮಾಳ್ಪೆನು ಧ್ವಂಸ ॥

ಬಡಗು ಹಾಗೂ ತೆಂಕು ಈ ಎರಡೂ ಪ್ರಸಂಗಗಳಿಂದ ಆಯ್ದ ಪದ್ಯಗಳನ್ನು ರಂಗಕೃತಿಗೆ ಅಳವಡಿಸಿ ಬಳಸುವ ಪದ್ಧತಿ ಕಾಣಬಹುದು. *ಮಕರಾಕ್ಷ ಕಾಳಗ* (ಜತ್ತಿ ಈಶ್ವರ ಭಾಗವತರು) ಪ್ರಸಂಗದ ರಾವಣನಲ್ಲಿ ಇಂದ್ರಜಿತು ಹೇಳುವ **ಜನಕ ದುಗುಡವಿದೇಕೆ** (ಪುಟ 2) ಮುಂತಾದ ಪದಗಳನ್ನು ತೆಂಕುತಿಟ್ಟಿನ ರೂಢಿಯಲ್ಲಿ ಇಂದ್ರಜಿತು ಕಾಳಗದಲ್ಲಿ ಅಂಥದೇ ಸಂದರ್ಭದಲ್ಲಿ ಬಳಸುತ್ತಾರೆ ಎಂದು ಡಾ. ರಾಘವನಂಬಿಯಾರ್ ತಿಳಿಸಿದ್ದಾರೆ. ಅಲ್ಲದೇ ಇಂದ್ರಜಿತು ಕಾಳಗದ ಕವಿ, ಪಾರ್ವತಿ ನಂದನನ *ಕುಂಭಕರ್ಣ ಕಾಳಗ*ದ ಕೆಲವು ಪದ್ಯಗಳನ್ನು ಈ ಪ್ರಸಂಗದಲ್ಲಿ ಬಳಸಿಕೊಂಡಿದ್ದನ್ನು ಶ್ರೀ ಅಮೃತ ಸೋಮೇಶ್ವರರು ತನ್ನ ಯಕ್ಷಾಂದೋಳ ಕೃತಿಯಲ್ಲಿ *ಯಕ್ಷಗಾನ ಕರ್ತ ಪಾರ್ವತಿ ನಂದನ* ಎಂಬ ತಮ್ಮ ಲೇಖನದಲ್ಲಿ (ಪುಟ 102) ವಿವರವಾಗಿ ಚರ್ಚಿಸಿದ್ದಾರೆ. ಈ ಪ್ರಸಂಗದ ಕವಿಯು, ಕಣ್ವಪುರದ ಕವಿಯ *ಕುಂಬಕರ್ಣ ಕಾಳಗ* ದೊಳಗಿನ ಇಂದ್ರಜಿತು ಯುದ್ಧಭಾಗದ ಸಂದರ್ಭದ ಹಲವು ಪದ್ಯಗಳನ್ನು ಇದ್ದಕ್ಕಿದ್ದಂತೆಯೋ, ರೂಪಾಂತರಿಸಿಯೋ ಸ್ವೀಕರಿಸಿದ್ದಾನೆ ಎಂದು ಅಮೃತರು ಉದಾಹರಿಸುತ್ತ,

ನಿನ್ನ ಸೇನೆಯೊಳುಂಟೆ ನಿದ್ರೆಯು ಸತಿಸಂಗ ಅನ್ನವರ್ಜಿತವಾದ ವ್ರತವು
ಹನ್ನೆರಡಬ್ದ ಸಾದಿಸಿದವನುಳ್ಳಡೆ ನಿರ್ನಾಮವಹನು ಶಕ್ರಾರಿ (ಕುಂಬ-ಕಾಳಗ)

ನಿನ್ನ ಸೇನೆಂೊಳಗುತ್ತುಂಗರುಂಟೆ ಯನ್ನಹಾರದಿ ಸತಿಸಂಗ
ಹನ್ನೆರಡಬ್ದ ವಿಭಿನ್ನ ಸದ್ವ್ರತರಿರ ಅನ್ನವರೊಳು ಖಳ ನಿರ್ನಾಮವಾಗುವ ॥

(ಇಂದ್ರಜಿತು-ಕಾಳಗ)

ಹರಣದಾಸೆಗಳುಳ್ಳಡಣ್ಣನ ಕರೆಸಿಕೊ
ಚರಣವ ನಂಬಿದ ವಿಭೀಷಣನ ॥

ತಿರಿದುಂಬುದಕೆ ವೀಳ್ಯವಿತ್ತು ಕಳಹು ದೇಶಾಂ
ತರಕೆಂದು ನುಡಿದ ಶಕ್ರಾರಿ ॥(ಕುಂಭ-ಕಾಳಗ)

ಹರಣದಾಸೆಗಳುಳ್ಳಡಣ್ಣನ ಕರೆಸು ವೀಳ್ಯವಿತ್ತು ದೇಶಾಂ
ತರಕೆ ತಿಂದುಂಬುದಕೆ ಶರಣನ ಭರದಿ ಕಳಹು॥

(ಇಂದ್ರಜಿತು ಕಾಳಗ)

ಇತ್ಯಾದಿ ಪದ್ಯಗಳನ್ನು ಉಲ್ಲೇಖಿಸಿದ್ದಾರೆ.

ಈ ಪ್ರಸಂಗದಲ್ಲಿ ಕವಿ ಪದ್ಯರಚನೆಯ ಸರಳತೆ ಮತ್ತು ಗೇಯತೆಯನ್ನು ಉಳಿಸಿಕೊಂಡಿದ್ದಾನೆ. ಆರಂಭದಲ್ಲಿ ರಾವಣ **ತಂಗಿಯೆ ಕುಲಕೆ ಕೇಡಾದಳು ಗೆಲು ವಂಗ ವಿಲ್ಲೆಮಗೆ ರಾಘವನೊಳು** ॥ ಎಂದು ರಾವಣನ ಅನಿಸಿಕೆಗೆ, ಕೊನೆಗೆ ಇಂದ್ರಜಿತುವಿನ ಮರಣದಿಂದ ನೊಂದು ತಾಯಿ ಕೈಕಸೆ **ಮೃತ್ಯುವಾದಳು ಮಗನೇ ಕುಲಕೆ ನಿನ್ನತ್ತೆ** ಎಂದು ಹೇಳುವುದು ಕಥೆಯ ಆರಂಭ ಅಂತ್ಯವನ್ನು ಒಂದೇ ಅಭಿಪ್ರಾಯದಲ್ಲಿ ಬೆಸೆಯುವ ಒಂದು ಒಳ್ಳೆಯ ಕಲ್ಪನೆ.

ಸಾಹಿತ್ಯಿಕ ಮೌಲಿಕತೆಯನೆಲೆಯಲ್ಲಿ ಈ ಕೃತಿಯಲ್ಲಿ ಅನೇಕ ಉತ್ತಮ ರಚನೆಯನ್ನು ಗುರುತಿಸಬಹುದು. ಹೆಸರಿಸಬಹುದಾದ ಪದ್ಯಗಳಲ್ಲಿ ರಚನೆ, ರಂಗಗುಣದ ಪದ್ಯಗಳನ್ನು ಈ ಪ್ರಸಂಗದಲ್ಲಿ ಕಾಣಬಹುದು. ಹಾಡುವುದಕ್ಕೆ ಯಾವುದೇ ತೊಡಕು, ಕಸರತ್ತು ಮಾಡದೇ ನಿರಳವಾಗಿ ಹಾಡಬಹುದಾದ ಪದ್ಯಗಳು ಪ್ರಸಂಗದಲ್ಲಿ ಒಂದು ಮುಖ್ಯ ಹಾಗೂ ಅಗತ್ಯವಾದ ಅಪೇಕ್ಷೆಯಾಗಿರುತ್ತದೆ. ಅಭಿನಯಕ್ಕೂ ಸಾಕಷ್ಟು ಅನುಕೂಲವಿರುವ ಶಬ್ದಗಳು ಪದ್ಯದಲ್ಲಿದ್ದರೆ ಅಂತಹ ಪ್ರಸಂಗ ಯಶಸ್ವಿ ಆಗಲು ಸಾಧ್ಯ. ಈ ದೃಷ್ಟಿಯಿಂದ ಇಲ್ಲಿ ಬರುವ ಕೆಲವು ಭಾಮಿನಿ, ಕಂದಪದ್ಯಗಳನ್ನು ಉದಾಹರಿಸಬಹುದಾದರೆ,

**ಭಾಮಿನಿ**

ಇವನೊಡನೆ ಕಾದುವ ಸಮರ್ಥರು
ಭುವನ ಮೂರರೊಳಿಲ್ಲೆನುತ ಖಳ

ಪವನಜನ ಸಮ್ಮುಖಕೆ ಹಾಯ್ದನು ಕಪಟವನು ನೆನದು ॥
ಶಿವನಿಗರಿಯದ ಧೂರ್ತ ಮಾಯದೊಳವ

ನಿಜೆಯ ನಿರ್ಮಿಸುತ ಕಪಿಗಳ
ನಿವಹದಲಿ ತೋರಿದನು ಖಡ್ಗವ ಕೊರಳಿಗಾನಿಸುತ ॥

ಇಡೀ ದೃಶ್ಯವನ್ನು ಸಾಹಿತ್ಯದ ಶಕ್ತಿಯ ಮೂಲ ಕಟ್ಟಿ ಕೊಡುವ ಪದ್ಯಗಳನ್ನು ಇಲ್ಲಿ ಉದಾರಿಸಬಹುದಾದರೆ ಮಾರಣಧ್ವರದ ಸನ್ನಿವೇಶವನ್ನು ಕವಿ ಭಾಮಿನಿ ಮತ್ತು ವಾರ್ಧಿಕ್ಯದಲ್ಲಿ ವರ್ಣಿಸಿದ ರೀತಿ ಮೆಚ್ಚುವಂತದ್ದು.

**ವಾರ್ಧಿಕ್ಯ**

ಸುಳಿಸಿದರ್ ಭೂತಭೇತಾಳರಂ ದೆಸೆದೆಸೆಯೊ
ಳಳಸಿದರ್

ಪ್ರಾಕಾರದಸುರರಂ ಜಡಿವುತ
ಪ್ಪಳಿಸಿದರ್ ಡೊಳ್ಳಾದ ಋತ್ವಿಕ್ಕುಗಳ ಹೊಗೆವ ಹೋಮದೊಳ್ ಹೋಮಿಸಿದರು॥

ಇದು ಸನ್ನಿವೇಷದ ಭೀಕರತೆಯನ್ನು ಸಶಕ್ತವಾಗಿ ತಿಳಿಸುತ್ತದೆ.

ಇಂದ್ರಜಿತು ಕಾಳಗದ ಪುಟ್ಟ ಹರಹಿನಲ್ಲಿ ಸೊಗಸಾದ ರಚನೆಗಳು ತುಂಬಿವೆ. ಪದ್ಯರಚನೆ ಮಧುರವಾದುದು. ಸರಳವಾದರೂ ಭಾವಬಂಧುರವಾದವುಗಳು ಮಾಯಾಸೀತೆಯನ್ನ ಕೊಲ್ಲಲು ಹೊರಟ ಇಂದ್ರಜಿತುವನ್ನ ಹನುಮನು ತಡೆದು ಬೋಧಿಸುವ ರಚನೆಯನ್ನ ನೋಡಿ

**ರಾಗ ಸಾರಂಗ ಅಷ್ಟತಾಳ**

***ಮತಿವಂತ ಖಳನೇಕೇಳೂ  ಹೆಂಗೊಲೆಯಿದು***
***ಹಿತವೇನೋ ತಿಳಿದು ಪೇಳೂ ॥***
***ಯತಿಪೌಲಸ್ತ್ಯನ ವೀರ್ಯ ಗತಿಗೆ ಸಾಧನಯಿಂದ್ರ***
***ಜಿತುವೆಂಬ ನಾಮದೊ ಳತಿಶಯ ಬಿರುದುಳ್ಳ ॥ಮತಿವಂತ ॥***
***ಓದಿ ನೋಡಿದೆ ಶಾಸ್ತ್ರವ  ಬೊಮ್ಮನ ಚತು***
***ರ್ವೇದ ಪೌರಾಣಸ್ತೋತ್ರವಾ***
***ಮೇದಿನಿಯೊಳುವಿಕ್ರ ಮಾಗ್ರಣಿಯೆನೆನಿಸಿದೆ***
***ಸಾಧಿಸಿ ಬೊಮ್ಮನ ಶಿವನವೊಲಿಸಿಕೊಂಡೆ ॥***

ಪದ್ಯಗಳ ರಚನೆಯಲ್ಲಿ ಸನ್ನಿವೇಶಕ್ಕೆ ತಕ್ಕ ತಾಳಗಣನ್ನು ಬಳಸುವಲ್ಲಿ ತುಂಬ ಪಳಗಿದವನು. ಅದನ್ನ ಪ್ರಸಂಗದುದ್ದಕ್ಕೂ ಕಾಣಬಹುದು. ಕರುಣರಸದ ಸನ್ನಿವೇಶಗಳನ್ನು ಹೃದ್ಯವಾಗಿ ಚಿತ್ರಿಸುವಂತೆ. ವೀರರೌದ್ರಗಳನ್ನು ತಕ್ಕ ರೀತಿಯಲ್ಲಿ ವ್ಯಕ್ತಪಡಿಸುವ ಅವನ ಶಕ್ತಿ ಮೆಚ್ಚುವಂಥದ್ದು. ಅವನ ಕವಿತ್ವಶಕ್ತಿಯನ್ನು ಸ್ಫುಟಗೊಳಿಸುವ ರಚನೆಗಳು ಪ್ರಸಂಗದುದ್ದಕ್ಕೂ ಹರಡಿಕೊಂಡಿವೆ.

**ಭಾಮಿನಿ**

***ಮಗಧರಾಯನ ಮೊಮ್ಮನಾಡೀ***
***ರ್ದಗಡುವಾಕ್ಯವ ಕೇಳ್ದು ಸುರಪನ***

***ಬಿಗಿದ ಖಳನುಬ್ಬೇರಿ ಘರ್ಜಿಸುತೆಂದ ಖಾತಿಯಲೀ ॥***
***ರಘುಕುಲದೊಳತಿ ಧೀರನೆಂಬೀ***

*ಹಗರಣವು ನಿನಗಿರಲು ಕೊಳ್ಳೆಂ*
*ದುಗಿಸಿದನು ಮುಂಗಾರು ಮೇಘದ ಸೋನೆಯೆನೆ ಸರಳಾ ॥*

**ರಾಗ ನೀಲಾಂಬರಿ ಆದಿತಾಳ**

*ಮಗನೇ ನಿನ್ನ ಗೆಲುವ ವೀರ ಜಗದೊಳಿಲ್ಲವೈಸೇ ॥*
*ಮೃಗಧರನಿತ್ತಾಯುಷ್ಯವು ನಗೆಗೇಡಾದುದಂ಼಼ಯೂ ॥*

**ರಾಗ ಭೈರವಿ ಅಷ್ಟತಾಳ**

**1.ತರಳ ಕೇಳಾಹಾರವು .....**

**ರಾಗ ಢವಳಾರ ತ್ರಿವುಡೆತಾಳ**

**2.ಶಂಕರಿ ಸರ್ವೇಶ್ವರಿ ದುರಿತ ಭ**
**ಯಂಕರಿ ನಮ್ಮಾನ್ವಯಪೋಷಿಣಿ**

**ರಾಗ ಶಂಕರಾಭಣ, ಮುಟ್ಟಿತಾಳ**

**3.ಮಲ್ಲ ದೈತ್ಯರೆಮ್ಮ ರಣದಿ ಗೆಲ್ವುಪಾಯವೂ**
**ಹುಲ್ಲು ಮನುಜರರಿತರೆಂಬು ದೊಳ್ಳೆ ಚೋದ್ಯವು ....**

ಮುಂತಾದವು ಹಾಡುವುದಕ್ಕೆ ಅನುಕೂಲಿಸಿದವು ಜೊತೆಗೆ ನೃತ್ತಕ್ಕೂ ಅವಕಾಶ ಇವುಗಳಿಂದ ದೊರಕಲು ಸಾಧ್ಯ.

ಲಕ್ಷ್ಮಣನನ್ನು ಪ್ರಶಂಸಿಸುವ ಸಂದರ್ಭದಲ್ಲಿ
- **ಕರುಣ ಹೀನನ ಸೇರಿ ಕಷ್ಟವದಗಿತು ನಿನಗೆ ತರಳನಿನ್ನುಪಕಾರ ಮರೆಯಲಿನ್ನುಂಟೆ** ॥ ಎಂಬ ಪದ್ಯ ರಸ ಸೃಷ್ಠಿಯ ದೃಷ್ಠಿಯಿಂದ ಉತ್ತಮವಾದ ರಚನೆ.

ಆದರೆ ಮಾರಣಾಧ್ವರದ ಘೋರ ಭೀಬತ್ಸ ದೃಶ್ಯ ಕಲ್ಪಿಸಿದ ಕವಿ, ಕಾಳಿಯನ್ನ ಸ್ತುತಿಸುವಾಗ ಬಳಸಿದ ಶಂಕರಿ ಸರ್ವೇಶ್ವರಿ... ಪದ್ಯ ಅವಳ ಭಯಂಕರವಾದ, ಭೀಕರವಾದ ಮುಖವನ್ನು ಪ್ರಸ್ತುತಪಡಿಸಿದ್ದರೆ ಉಚಿತವಾಗುತಿತ್ತು ಎಂಬುದು ನನ್ನ ಅನಿಸಿಕೆ. ಈ ಪದ್ಯಕೊಡುವ ಕಲ್ಪನೆ, ಉಂಟುಮಾಡುವ ಭಾವನೆ, ಮಾರಣಾಧ್ವರದ ಭೀಕರತೆಗೆ ಪೋಷಕವಾಗಿಲ್ಲ ಎನಿಸುತ್ತದೆ.

ಹೀಗೆ ರಂಗದ ದೃಷ್ಠಿಯಿಂದ ನೋಡಿದರೆ ಕವಿ ಅಲ್ಲಲ್ಲಿ ಎಡವುತ್ತಾನೆ. ಆದರೆ ಶಕ್ತಿಶಾಲಿಯಾದ ರಚನೆಗಳು ಆ ದೋಷಗಳನ್ನು ಮರೆಸುವಲ್ಲಿ ಯಶಸ್ವಿಯಾಗಿದೆ. ಈ ಕಾರಣದಿಂದ ಇಂದ್ರಜಿತು ಕಾಳಗವು ರಾಮಾಯಣ ಪ್ರಸಂಗಗಳಲ್ಲಿ ಸಾಕಷ್ಟು ಜನಪ್ರಿಯತೆಯನ್ನು ಪಡೆದಿದೆ. ಸಾವಿರಾರು ಪ್ರದರ್ಶನಗಳನ್ನು ಪಡೆದಿದೆ. ಇದು ಅದರ ಉತ್ತಮಿಕೆಯನ್ನು ಸಾಬೀತುಪಡಿಸುತ್ತದೆ. ಕವಿಯು ಅಜ್ಞಾತನಾಗಿದ್ದರೂ ಅವನ ಕವಿತೆ ಶಾಶ್ವತವಾದ ಸ್ಥಾನವನ್ನು ಪಡೆದಿದೆ.

***ಕವಿ ಪರಿಚಯ :***
ಈ ಪ್ರಸಂಗ ಬರೆದ ಕವಿ ತನ್ನ ಹೆಸರನ್ನು ಎಲ್ಲಿಯೂ ಹೇಳಿಕೊಂಡಿಲ್ಲ. ಆದರೆ ಕಾರಂತರು ತಮ್ಮ ಯಕ್ಷಗಾನದಲ್ಲಿ ಇದನ್ನು ಹಟ್ಟಿಯಂಗಡಿ ರಾಮ ಭಟ್ಟರ (ಯಕ್ಷಗಾನ, ಪುಟ 149) ಪ್ರಸಂಗ ಕೃತಿಯ ಹೆಸರನ್ನು ರಚಿಸಿದ ಪಟ್ಟಿಯಲ್ಲಿ ಇದೂ ಸೇರಿದೆ.

ಅಲ್ಲದೇ ಮಂಗಲ ಪದ್ಯದಲ್ಲಿ ಕಾಂತಾವರದ ಕಾಂತೇಶ್ವರನ ಹೆಸರು ಕಂಡುಬರುವುದರಿಂದ ಈ ಕವಿ ಕಾಂತಾವರದನೆಂದು ತಿಳಿಯಬಹುದೊ ಏನೋ ಎಂದು ಶ್ರೀ ಅಮೃತಸೋಮೇಶ್ವರರು ಸೂಚಿಸುತ್ತಾರೆ. ಆದರೆ ಕವಿ ಯಾರು ಎಂಬುದು ಇನ್ನೂ ನಿರ್ಧರಿಸಬೇಕಷ್ಟೆ!

* * *

# 10. ಶ್ರೀರಾಮ ನಿಜಪಟ್ಟಾಭಿಷೇಕ

**ಕಥಾಸಾರ:**

ಪೂಜ್ಯರಾದ ವಾಲ್ಮೀಕಿ ಮುನಿಗಳಲ್ಲಿ ಕುಶಲವರು ಲಂಕೆಯ ದೈತ್ಯ ಕುಲನಾಶಮಾಡಿದ ಶ್ರೀರಾಮಚಂದ್ರ ಮುಂದೇನು ಮಾಡಿದ ಎಂದು ಕೇಳಲು ಮುನಿಗಳು ಶ್ರೀರಾಮ ನಿಜಪಟ್ಟಾಭಿಷೇಕದ ಕಥೆಯನ್ನು ಬರೆದರು.

ಶ್ರೀರಾಮ, ರಾವಣಾನಾದಿಖಳರನ್ನು ಕೊಂದಮೇಲೆ ಮಾತಲಿಯನ್ನು ಕರೆದು ಸುರರಿಗೆ ಅಭಯ ನೀಡಿ ಕಳುಹುವನು. ಹನುಮಂತ, ಅಂಗದ, ಸುಗ್ರೀವ, ಲಕ್ಷ್ಮಣ, ಹೀಗೆ ಎಲ್ಲರ ಸಾಹಸ, ಸಮರ್ಪಣೆಯನ್ನು ರಾಮ ಕೃತಜ್ಞತೆಯಿಂದ ನೆನೆಯುತ್ತಾನೆ. ಬಳಿಕ ಹನುಮಂತನನ್ನು ಲಂಕೆಗೆ ಕಳುಹಿಸಿ, ಲಂಕಾವಾಸಿಗಳಿಗೆ ಮತ್ತು ಮಂಡೋದರಿಗೆ, ಧೈರ್ಯ ಒರೆದು, ಸೀತೆಯನ್ನು ಕಂಡು ಬರುವಂತೆ ತಿಳಿಸುತ್ತಾನೆ. ಹನುಮಂತ ಲಂಕೆಗೆ ಹೋಗಿ, ಕೊನೆಗೆ ಸೀತಾಮಾತೆಯಲ್ಲಿ ಬಂದು ರಾಮನ ಸಂದೇಶ ಹೇಳಲು, ಸೀತೆ ಸಂತಸಗೊಳ್ಳುತ್ತಾಳೆ. ಅಂತೆಯೇ ತನ್ನ ಮೇಲೆ ರಾಮ ಕೋಪಿಸಿಕೊಂಡಿರಬಹುದೆಂದು ಕಳವಳವೂ ಆಗುತ್ತದೆ. ಹನುಮ ಸಾಂತ್ವನ ಹೇಳಿ, ಶ್ರೀರಾಮನಲ್ಲಿ ಬಂದು ಸೀತೆಯು ರಾಮನ ಧ್ಯಾನದಲ್ಲೇ ಇರುವ ವಿಷಯ ತಿಳಿಸಲು ಎಲ್ಲರೂ ಭಾವುಕರಾಗುತ್ತಾರೆ.

ವಿಭೀಷಣನಿಗೆ, ಮಂಡೋದರಿಗೆ ಧೈರ್ಯ ಒರೆದು, ಚೆನ್ನಾಗಿ ಬಾಳುವಂತೆ ರಾಮ ಹರಸುತ್ತಾನೆ. ವಿಭೀಷಣ ಶ್ರೀರಾಮನೇ ಲಂಕೆಯನ್ನು ಪಾಲಿಸಬೇಕೆಂದು ವಿನಂತಿಸಲು, ರಾಮಚಂದ್ರ ಆತನನ್ನು ಒಡಂಬಡಿಸಿ, ಲಕ್ಷ್ಮಣ ಮುಂತಾದವರನ್ನು ಕಳಿಸಿ ವಿಭೀಷಣನಿಗೆ ಲಂಕೆಯ ಪಟ್ಟವನ್ನು ಕಟ್ಟುತ್ತಾನೆ. ಪುಷ್ಪಕವಿಮಾನ, ಧನಕನಕಗಳನ್ನು ಶ್ರೀರಾಮನಿಗರ್ಪಿಸುತ್ತಾನೆ. ರಾಮ ಸೀತೆಯನ್ನು ಕರೆತರುವಂತೆ ಹೇಳಲು ಅಂತೇ ಆತ ಬಂದು ಸೀತೆಗೆ ರಾಮಾಜ್ಞೆಯನ್ನು ತಿಳಿಸುತ್ತಾನೆ.

ನಾನಾ ಆಭರಣ ತೊಟ್ಟು, ಪೀತಾಂಬರವುಡುವಂತೆ ವಿಭೀಷಣ ಪರಿ ಪರಿಯಿಂದ ಸೀತೆಯನ್ನು ವಿನಂತಿಸಲು, ಮನಸ್ಸಿಲ್ಲದ ಮನಸ್ಸಿನಿಂದ ತಾನು ಶೃಂಗಾರಗೊಂಡು, ಪಲ್ಲಕ್ಕಿಯಲ್ಲಿ ಕುಳಿತು ಶ್ರೀರಾಮನನ್ನು ಕಾಣುವ ತವಕದಿಂದ ಸೀತೆ ಬರುತ್ತಾಳೆ. ದೂರದಿಂದ ಬರುವ ಸೀತೆಯನ್ನು ರಾಮ ಸಂಶಯದಿಂದ ನೋಡಲು, ರಾಮ ಆಕೆಯನ್ನು ಸ್ವೀಕರಿಸುವ ಲಕ್ಷಣ ಕಾಣದಾದಾಗ, ಕಂಗಾಲಾದ ವಿಭೀಷಣಾದಿಗಳು ರಾಮನ ಪಾದಕೆರಗಿ ತಾಯಿ ಸೀತೆ ಪರಮ ಪವಿತ್ರ ಅವಳನ್ನು ಸ್ವೀಕರಿಸಿ ನಮ್ಮೆಲ್ಲರನ್ನೂ ಉದ್ಧರಿಸಬೇಕೆಂದು ಅಂಗಲಾಚುವರು. ಸೀತೆಯೇ ರಾಮನ ಪಾದಕ್ಕೆರಗಿ ತಾನು ನಿನ್ನ ಹೊರತಾಗಿ ಅನ್ಯರನ್ನು ಎಣಿಸಿಲ್ಲ, ಅದಕ್ಕಾಗಿ ಅಗ್ನಿಗೆ ತನ್ನನರ್ಪಿಸಿ ತನ್ನ ಪಾವಿತ್ರ್ಯ ಶ್ರುತಪಡಿಸುವೆ ಎನ್ನುತ್ತಾಳೆ. ರಾಮನಿಗೆ ಎಲ್ಲರು ಕೈ ಮುಗಿದು ಸೀತೆಯನ್ನು ಈ ಕಠಿಣ ಪರೀಕ್ಷೆಗೆ ಒಳಪಡಿಸದಿರಲು ವಿನಂತಿಸಿದರು. ರಾಮ ಅದನ್ನೆಲ್ಲ ನಿರಾಕರಿಸಲು ಅಗ್ನಿ ಪರೀಕ್ಷೆಗೆ ಸೀತೆ ಸಿದ್ದವಾದಳು. ಅಗ್ನಿಗೆ ಬಲಬಂದು ಕುಂಡಕ್ಕೆ ಧುಮುಕಲು, ಸುಡದೇ ಹೊನ್ನ ಪುತ್ಥಳಿಯಂತೆ ರಾರಾಜಿಸಿದಳು. ಆದರೂ ರಾಮ ಕುಲಕ್ಕೆ ಕೆಟ್ಟ ಹೆಸರು ತಂದ ಈಕೆ ಮನ ಬಂದತ್ತ ಸಾರಲಿ ಎಂದಾಗ ದೇವತೆಗಳು, ಹಾಗೂ ನೆರೆದವರೆಲ್ಲ ದುಃಖತಪ್ತರಾಗುತ್ತಾರೆ. ಪೂಜ್ಯವಸಿಷ್ಟರು ಮಧ್ಯ ಪ್ರವೇಶಿಸಿ ಸೀತೆಯನ್ನು ರಾಮ ಸ್ವೀಕರಿಸುವಂತೆ ತಿಳಿಸುತ್ತಾರೆ. ಅಂತೆಯೇ ರಾಮಸೀತೆಯರು ಒಂದಾಗಲು ಎಲ್ಲರೂ ಸಂತಸಗೊಳ್ಳುತ್ತಾರೆ. ಸ್ವಯಂ ಶಂಕರ ಪಾರ್ವತಿ ಸಮೇತನಾಗಿ ಬಂದು, ಹರಸುತ್ತಾನೆ. ಶಂಕರನ ಅನುಗ್ರಹದಿಂದ ಸತ್ತುಹೋದ ಕಪಿಗಳೆಲ್ಲ ಜೀವತಳೆಯುತ್ತಾರೆ. ಎಲ್ಲರೂ ಶರಣ ವಿಭೀಷಣನ ಆತಿಥ್ಯ ಸ್ವೀಕರಿಸುತ್ತಾರೆ.

ಶ್ರೀರಾಮ ತನ್ನವರನ್ನು ಏರಿಸಿಕೊಂಡು ಪುಷ್ಪಕದಲ್ಲಿ ಅಯೋಧ್ಯೆಗೆ ಹೊರಡಲನುವಾಗಲು, ಸೀತೆ ಲಂಕಾದರ್ಶನದ ಬಯಕೆ ಮುಂದಿಡುತ್ತಾಳೆ. ಸಂಕ್ಷಿಪ್ತಲಂಕಾದರ್ಶನ ಮುಗಿಸಿ, ಶ್ರೀರಾಮ ಸೀತೆಗೆ ಒಂದೊಂದಾಗಿ ಹಿಂದಿನ ಸ್ಥಳಗಳನೆಲ್ಲ ತೋರಿ ಕಥೆ ಹೇಳುತ್ತಾ ಕಿಷ್ಕಿಂದೆಯಲ್ಲಿ ಸುಗ್ರಿವಾದಿ ಪರಿವಾರವನ್ನನುಗ್ರಹಿಸಿ ಮುಂದೆ ದಂಡಕಾರಣ್ಯ ಮುಂತಾದ ಪ್ರದೇಶಗಳನ್ನು ದಾಟಿ ಭಾರದ್ವಜಾಶ್ರಮಕ್ಕೆ ಬರಲು ಅವರ ಅಪೇಕ್ಷೆಯಂತೆ ಆತಿಥ್ಯ ಸ್ವೀಕರಿಸಲು ನಿಲ್ಲುತ್ತಾನೆ. ಹನುಮನನ್ನು ಕರೆದು ಭರತನಿಗೆ ಸಂದೇಶ ತಲುಪಿಸುವಂತೆ  ಕಳಿಸಲು, ಹನುಮಂತ ಅಯೋಧ್ಯೆಗೆ ಹಾರುತ್ತಾನೆ. ಅಂಬರದಲ್ಲಿ ನಾರದರು ತಡೆದು ನಾನಾ ಪ್ರಶ್ನೆಗಳನ್ನು ಕೇಳಲು, ಆ ಪ್ರಶ್ನೆಗಳಿಗೆ ಒಗಟಿನ ಉತ್ತರ ನೀಡಿ ಅದನ್ನು ಬಿಡಿಸುವ ಕೆಲಸವನ್ನು ನಾರದರಿಗೊಪ್ಪಿಸಲು ಅವರು ಅರ್ಥವಾಗದೇ ಸೋಲಲು, ಇತ್ತ ಹನುಮ ಭರತನನ್ನು ಕಂಡು ಶ್ರೀರಾಮ ಬರುವ ಸಂದೇಶವನ್ನು ಬಿತ್ತರಿಸುವನು.

ಶ್ರೀರಾಮ ಸೀತಾ ಸಮೇತನಾಗಿ ಬಂದು ಹಿರಿಯರಿಗೆ ವಂದಿಸಿ, ಎಲ್ಲರನ್ನೂ ಮನ್ನಿಸಿ ರಾಜ್ಯಾಭಿಷೇಕಕ್ಕೆ ಸಿದ್ದನಾಗುವನು. ಪಟ್ಟಾಭಿಷೇಕಕ್ಕೆ ಬರದ ಸಿದ್ದತೆ ನಡೆಯುತ್ತದೆ. ವಿಜ್ರಂಭಣೆಯಿಂದ ಶ್ರೀರಾಮ ಪಟ್ಟಾಭಿಷೇಕ ಜರುಗುತ್ತದೆ. ಹನುಮನ ಭಕ್ತಿಗೆ ಒಲಿದ ಭಗವಂತ ಆತನಿಗೆ ಬ್ರಹ್ಮಪದವನ್ನು ಕರುಣಿಸುತ್ತಾನೆ. ಇದರಿಂದ ನಾರದನಿಗೆ, ಗುಹನಿಗೆ ಅಸಮಾಧಾನವಾಗಲು ಅದನ್ನು ಗುಹ ಹರನಿಗೆ  ಅರಹುತ್ತಾನೆ. ಇತ್ತ ನಾರದನ ಸಂಚಿನಿಂದ ಹರಿಯ ಪರಿಶೇಷದ ಭೋಜನ ಪಾತ್ರೆ ಅಪಹರಿಸಲ್ಪಡುತ್ತದೆ. ಇದರಿಂದ  ಮಾರುತಿ ಖತಿಯೇರಿದನು.  ಬ್ರಹ್ಮನು ಬೆದರಿದನು. ಅಂತಿಮವಾಗಿ ಶ್ರೀರಾಮನು ಎಲ್ಲರನ್ನೂ ಸಂತೈಸುವನು. ನಾರದನ ಲೀಲೆಗಳ ಅವಾಂತರಗಳನ್ನು ಹರಿ ತನ್ನ ಸಮ್ಮುಖದಲ್ಲಿ ಬಗೆಹರಿಸಿ ಸರ್ವರನ್ನು ಮನ್ನಿಸಿದನು. ಮುಂದೆ ಹತ್ತುಸಾವಿರವರುಷ ಅಯೋಧ್ಯೆಯನ್ನು ಆಳಿದನು. ರಜಕನ ಮಾತಿಗೆ ತುಂಬುಗರ್ಭಿಣಿ ಸೀತೆಯನ್ನು ಬಿಟ್ಟು ಅರಣ್ಯಕ್ಕೆ ಕಳಿಸಲು ಅವಳನ್ನು ತಾನು ಕರೆತಂದು, ಈ ಆಶ್ರಮದಲ್ಲಿ ಆಕೆ ನಿಮ್ಮನ್ನು ಪಡೆದಳು ಎಂದು ವಾಲ್ಮೀಕಿ ಮುನಿಗಳು ಕಥೆಗೆ ಮಂಗಳ ಹಾಡಿದರು.

***ಶ್ರೀರಾಮನ ನಿಜ ಪಟ್ಟಾಭಿಷೇಕವು – ಸಮೀಕ್ಷೆ***

ಶ್ರೀರಾಮನ ನಿಜ ಪಟ್ಟಾಭಿಷೇಕವು ರಾಮಾಯಣದ ಅನೇಕ ಕೃತಿಗಳಲ್ಲಿ ಒಂದು. ಹಾಗಿದ್ದರೂ ಇದನ್ನು ಪ್ರಯೋಗಿಸುವುದು ಅಪರೂಪ. ರಾವಣವಧೆಯ ನಂತರ ನಡೆಯುವ ವೃತ್ತಾಂತಗಳು ಯಕ್ಷಗಾನ ರಸಿಕರಿಗೆ ಅಂಥ ಇಷ್ಟಕರವಾದ ಘಟನೆಗಳೇನಲ್ಲ. ಉತ್ತರಕಾಂಡದ ಕಥೆಗಳಿಗಿರುವ ಜನಾದರಣೆಯೂ ಇದಕ್ಕೆ ದಕ್ಕಲಿಲ್ಲ.

ಇಲ್ಲಿನ ಸನ್ನಿವೇಶಗಳೆಲ್ಲ ಸೀತೆಯ ಅಗ್ನಿ ಪರೀಕ್ಷೆಯ ವೃತ್ತಾಂತವು ಪ್ರಮುಖವಾದುದು. ಅದನ್ನು ಚೆನ್ನಾಗಿ ನಿರ್ವಹಣೆ ಮಾಡಿದ್ದರೆ ಸ್ವಲ್ಪವಾದರೂ ಜನಾದರಣೆ ಸಿಗುತ್ತಿತ್ತೇನೋ ಎನ್ನುವಂತಿದೆ. ಈ ಸನ್ನಿವೇಶದ ನಿರ್ವಹಣೆಯಲ್ಲಿ ಕವಿ ಸೋತಿದ್ದಾನೆ. ಸೀತೆಯ ಆಗಮನವಾದೊಡನೆಯೇ ಅವಳ ಪರವಾಗಿ ದೇವ ದೇವತೆಗಳೆಲ್ಲ ಬಂದು ಹೇಳುತ್ತಾರೆ. ಆದರೂ ರಾಮ ಸ್ವೀಕರಿಸಲೊಪ್ಪದೆ ಅಗ್ನಿಯನ್ನು ಸಿದ್ಧಪಡಿಸುವಂತೆ ಹೇಳುತ್ತಾನೆ. ಇದರ ಉದ್ದೇಶವನ್ನು ಕವಿಯು ಸ್ಪಷ್ಟಪಡಿಸುವುದಿಲ್ಲ. ಆನಂತರ ಅಗ್ನಿಪರೀಕ್ಷೆಯಲ್ಲಿ ತೇರ್ಗಡೆಯಾದರೂ ರಾಮ ಅವಳನ್ನು ಸ್ವೀಕರಿಸಲು ಒಪ್ಪುವುದಿಲ್ಲ. ಕೊನೆಗೆ ವಸಿಷ್ಠನ ಮತಿಗೆ ಒಪ್ಪಿ ಸ್ವೀಕರಿಸುತ್ತಾನೆ. ರಾಮ ತನ್ನ ಚರ್ಯೆಯ ಬಗೆಗೆ ಒಂದು ಮಾತನ್ನು ಹೇಳುವುದಿಲ್ಲ. ವಸಿಷ್ಠನ ಮಾತಿಗೆ ಒಪ್ಪಿಗೆಯನ್ನು ಸೂಚಿಸುವುದಕ್ಕೆ ಪದ್ಯ ಬೇಕಿತ್ತು. ನೊಂದ ಸೀತೆಯನ್ನು ಸಂತೈಸುವ ಮಾತು ಬೇಕಿತ್ತು ಎನಿಸುತ್ತದೆ.

ಮುಂದಿನ ಪ್ರಕರಣಗಳೂ ಸಾಕಷ್ಟು ಗೋಜಲು ಗೋಜಲುಗಳಾಗಿವೆ. ಆಂಜನೇಯನು ಶೇಷಾನ್ನವನ್ನು ತನಗೆ ಕರುಣಿಸಬೇಕೆಂದು ಕೇಳಿ ಪಡೆದುಕೊಂಡ ಪ್ರಕರಣವಂತೂ ತೀರ ಅಧ್ವಾನವಾಗಿದೆ. ಇದ್ದುದರಲ್ಲಿ ರಾಮನು ಅಯೋಧ್ಯೆಗೆ ಬಂದು ಭರತನನ್ನು ಸಂತೈಸುವ ವೃತ್ತಾಂತವೆ ಚೆನ್ನಾಗಿದೆಯೆಂದು ಹೇಳಬೇಕು.

ಈ ಪ್ರಸಂಗದಲ್ಲಿ ಮಟ್ಟುಗಳ ಬಳಕೆ ಸೀಮಿತವಾದುದು. ಕೆಲವೇ ಕೆಲವು ಮಟ್ಟುಗಳಲ್ಲಿ ಪ್ರಸಂಗ ಮುಗಿಯುತ್ತದೆ.  ಅಲ್ಲಲ್ಲಿ ಪ್ರಾಸಪ್ರಿಯತೆಯ ವ್ಯಕ್ತವಾಗಿದೆ ನೋಡಿ.

ಭಾಮಿನಿ

*ಸೀತೆ ತ್ರಿಜಗನ್ಮಾತೆ ಧಾತ್ರಿಯ*
*ಜಾತೆ ರಘುಪತಿ ಪ್ರೀತೆ ನಿನ್ನಾ*
*ರಾತಿಯಾಗಿಹ ಯಾತುಧಾನರು ಪ್ರೇತಪುರಕೇರೆ ॥*
*ಸಾತಿಶಯ ಸುಪ್ರೀತಿಯೋಳು ರಘು*
*ಜಾತ ಕಳುಹಿದನೀತಳಕೆ ಮಿ*
*ಖ್ಯಾತೆ ದಯಮಾಡೀ ತತುಕ್ಷಣನಾಥನೆಡೆಗೆನಲು ॥*

ಆದರೂ ರಾಮಪಟ್ಟಾಭಿಷೇಕದ ಕಥೆಯನ್ನು ಆಡುವವರಿಗೆ ಲಭ್ಯವಾಗಿರುವ ಪ್ರಸಂಗ ಇದೊಂದೇ ಆಗಿದೆಯೆಂಬುದನ್ನು ಗಮನಿಸಬೇಕು.

*ಕವಿ ಪರಿಚಯ :*

**ಅಲೆಟ್ಟಿ ರಾಮಣ್ಣ ಶಗ್ರಿತ್ತಾಯ (1891-1965) :**

ಶ್ರೀ ಎ.ಆರ್. ಶಗ್ರಿತ್ತಾಯ ಅಥವಾ ಅಲೆಮಟ್ಟಿ ರಾಮಣ್ಣ ಶಗ್ರಿತ್ತಾಯರು ಸುಳ್ಯ ತಾಲೂಕಿನ ಅಲೆಮಟ್ಟಿಯವರು. ಕೃಷ್ಣ ಶಗ್ರಿತ್ತಾಯ ಮತ್ತು ಸುಬ್ಬಮ್ಮ ಇವರ ತಂದೆ-ತಾಯಿಯರು. 1891ನೇ ಖರ ಸಂವತ್ಸರಲ್ಲಿ ಜನಿಸಿದ ಇವರು 1965ರಲ್ಲಿ ತಮ್ಮ 74ನೇ ವಯಸ್ಸಿನಲ್ಲಿಯೇ ಪ್ರಸಂಗ ರಚನೆಯನ್ನೂ ಮಾಡಿದವರು. 1946ರಲ್ಲಿ ಪ್ರಕಟಿತವಾದ ತಮ್ಮ ಲಕ್ಷ್ಮಣಾ ಸ್ವಯಂವರವನ್ನು 1910ರಲ್ಲಿಯೇ ಬರೆದಿದ್ದಂತೆ ಮುನ್ನಡಿಯಲ್ಲಿ ಹೇಳಿಕೊಂಡಿದ್ದಾರೆ.

ಯಕ್ಷಗಾನದ ಎಲ್ಲಾ ಅಂಗಗಳಲ್ಲಿಯೂ ತಕ್ಕಷ್ಟು ಮಾಹಿತಿ ಇದ್ದ ಶಗ್ರಿತ್ತಾಯರು ತಾಳಮದ್ದಲೆಗಳಲ್ಲೂ ಅರ್ಥ ಹೇಳುತ್ತಿದ್ದರು.

ಶಗ್ರಿತ್ತಾಯರು ಬರೆದ ಒಟ್ಟು ಕೃತಿಗಳು ಏಳು, ಎಲ್ಲವೂ ಯಕ್ಷಗಾನ ಕೃತಿಗಳು. ಇನ್ನಿತರ ಕೃತಿಗಳಿಲ್ಲ ಎಂದು ಶ್ರೀ ಅನಂತಕೃಷ್ಣ ಅವರು ತಿಳಿಸಿರುತ್ತಾರಾದರೂ 1942ರಲ್ಲಿ ಪ್ರಕಟಗೊಂಡ ಅವರ ಯಕ್ಷಗಾನ ಚಂದ್ರಹಾಸ ಚರಿತ್ರೆಯ ಹೊರಪುಟದಲ್ಲಿ ಎಂಟು ಯಕ್ಷಗಾನ ಕೃತಿಗಳೊಂದಿಗೆ ಭಯಂಕರ ದೃಶ್ಯ ಎಂಬ ಪತ್ತೇದಾರಿಕೆಯನ್ನು ಬರೆದಿದ್ದಾರೆಂದು ಉಲ್ಲೇಖ ಇದೆ. ಈ ಪತ್ತೇದಾರಿ ಪುಸ್ತಕವು ಅಚ್ಚಾಗಿಲ್ಲ.

ಸಮಕಾಲೀನ ಸಂಗತಿಯನ್ನು ತೆಗೆದುಕೊಂಡು ಹೊಸ ಕಾಲದಲ್ಲಿ ಪ್ರಸಂಗ ರಚನೆಯಾಗಿರುವುದು ಆಗುತ್ತಿರುವುದು (ಉದಾ : ಕಾಶ್ಮೀರ ಕಾಳಗ, ಬಾಂಗ್ಲಾವಿಜಯ ಇತ್ಯಾದಿ) ಯಕ್ಷಗಾನದ ಆಧುನಿಕ ಕಾಲದ ಒಂದು ವಿದ್ಯಮಾನ. ಪ್ರಾಯಃ ಈ ಹೊಸ ಮಾರ್ಗಕ್ಕೆ ಅಲೆಮಟ್ಟಿ ರಾಮಣ್ಣ ಶತ್ರಿತ್ತಾಯರು ಮೊದಲಿಗರಿರಬೇಕು. ಅದೇ ತಾನೇ ಕೊನೆಗೊಂಡ ಎರಡನೇ ಜಾಗತಿಕ ಮಹಾಯುದ್ಧದ ಬಗೆಗೆ ಅವರು ಪ್ರಸಂಗರಚನೆ ಮಾಡಿದ್ದಾರೆ. 1942ರಲ್ಲಿ ಪ್ರಕಟಗೊಂಡ ಚಂದ್ರಹಾಸ ಚರಿತ್ರೆಯ ಹೊರಪುಟದಲ್ಲಿ ಅಚ್ಚಾಗಲಿರುವ ಪುಸ್ತಕಗಳ ಪಟ್ಟಿಯಲ್ಲಿ ಇದನ್ನು ಕೊಡಲಾಗಿದೆ. ಈ ಕೃತಿ ಮುಂದೆ 1949ರಲ್ಲಿ ಪ್ರಕಟಗೊಂಡಿತು.

ಶಗ್ರಿತ್ತಾಯರ ರಚನೆಗಳು ಸರಗಳವಾಗಿಯೂ ಲಲಿತವಾಗಿಯೂ ಇವೆ. ಕೃತಿಗಳು ರಂಗದಲ್ಲಿ ಸಾಕಷ್ಟು ಪ್ರಯೋಗಗೊಂಡಿವೆ. ಹಳೆಯ ಪ್ರಸಂಗಗಳನ್ನು ಸಾಕಷ್ಟು ಓದಿಕೊಂಡ ಅನುಭವವೇ ಇವರ ಪ್ರಸಂಗರಚನೆಯ ಹಿನ್ನೆಲೆ. (ಮಾಹಿತಿ : ಡಾ. ಪಾದೇಕಲ್ಲು ವಿಷ್ಣುಭಟ್)

* * *

# 11. ಅಶ್ವಮೇಧಯಾಗ

**ಕಥಾಸಾರ:**

ಒಂದು ದಿನ ವಾತ್ಸ್ಯಾಯನಮುನಿ ಶೇಷನಿಗೆ ಅಭಿನಮಿಸಿ ರಘುನಂದನನ ಚರಿತ್ರೆಯನ್ನು ಬಿತ್ತರಿಸುವಂತೆ, ಪ್ರಾರ್ಥಿಸಿದನು. ಅಂತೆಯೇ ಶ್ರೀರಾಮನು ರಕ್ಕಸರನೆಲ್ಲ ನಿಗ್ರಹಿಸಿ, ಸೀತಾಸಮೇತನಾಗಿ ಅಯೋಧ್ಯೆಗೆ ಬಂದುನೆಲಸಿ, ರಜಕನಮಾತಿಗಾಗಿ ಸೀತೆಯನ್ನು ತೊರೆದಿದ್ದಾನೆ. ಕಾಡಿನಲ್ಲಿ ಸೀತೆ ಎರಡು ಗಂಡು ಮಕ್ಕಳನ್ನು ವಾಲ್ಮೀಕಿ ಮಹಾಮುನಿಗಳ ಆಶ್ರಯದಲ್ಲಿ ಹಡೆದು ಅಲ್ಲಿ ನೆಲಸಿದ್ದಾಳೆ.

ಶ್ರೀರಾಮನು ಅಯೋಧ್ಯೆಯಲ್ಲಿ ಪ್ರಜೆಗಳನ್ನು ಪಾಲಿಸುತ್ತಿದ್ದಾನೆ. ಸಮೃದ್ಧಿ, ಸಂತೋಷ, ನೆಮ್ಮದಿನೆಲಸಿದ ನಾಡಿಗೆ ಒಂದು ದಿನ ಕುಂಭಸಂಭವರಾದ ಅಗಸ್ತ್ಯರು ಬರುತ್ತಾರೆ. ಅವರನ್ನು ಸೂಕ್ತವಾಗಿ ಉಪಚರಿಸಿ, ಶ್ರೀರಾಮನಿಗೆ, ದೈತ್ಯರನ್ನು ನಾಶಪಡಿಸಿದನ್ನು ಶ್ಲಾಘಿಸಿದಾಗ ಶ್ರೀರಾಮ, ದೈತ್ಯರ ಉಗಮದ ಕಥೆಯನ್ನು ಕೇಳುತ್ತಾನೆ. ತಾನು ಕೊಂದ ರಾವಣಾದಿದೈತ್ಯರು ಬ್ರಹ್ಮವಂಶಜರೆಂದು ತಿಳಿದು ನೊಂದು, ತನಗೆ ಬಂದ ಬ್ರಹ್ಮಹತ್ಯಾ ಪಾತಕಕ್ಕೆ ಪರಿಹಾರಸೂಚಿಸುವಂತೆ ಮುನಿಗಳನ್ನು ಕೇಳುತ್ತಾನೆ. ಅಗಸ್ತ್ಯರು ಇದರ ನಿವಾರಣೆಗೆ ಅಶ್ವಮೇಧಯಾಗ ಮಾಡುವಂತೆ ಸೂಚಿಸುವರು.

ಸರಯೂ ನದೀ ತಟದಲ್ಲಿ ಅಶ್ವಮೇಧ ಕುದುರೆಯ ಬೆಂಗಾವಲಿಗೆ ಶತ್ರುಘ್ನ ಹೊರಡುತ್ತಾನೆ. ಅವನಿಗೆ ಅನುವಾಗಲು ಪುಷ್ಕಳನೆಂಬ ಪರಾಕ್ರಮಿಯೂ ಹೊರಡುತ್ತಾನೆ. ಅವನ ಪತ್ನಿ ನಾನಾ ರೀತಿ ಪುಷ್ಕಳವನ್ನು ಉಪಚರಿಸಿ ಬೀಳ್ಕೊಡುತ್ತಾಳೆ.

ಕುದುರೆ ನಾನಾ ಪ್ರದೇಶಗಳಿಗೆ ಹೋಗುತ್ತಿದೆ. ಚಕ್ರಾಂಕಪುರದರಸನ ಮಗ ಧಮನು ಭೇಟೆಗೆ ಬಂದವನು ತುರಗಾಶ್ವವನ್ನುಕಂಡು ಫಣಿಯ ಲಿಖಿತವನ್ನು ಓದಿ, ಕೋಪಗೊಂಡು ಹಯವನ್ನು ಬಂಧಿಸುವನು. ಚರರು ಇದನ್ನು ಶತ್ರುಘ್ನನಿಗೆ ತಿಳಿಸುತ್ತಾರೆ. ಯುದ್ಧದಲ್ಲಿ ಶತ್ರುಘ್ನ ಹಿಂತೆಗೆಯಲು ಪುಷ್ಕಳ ಯುದ್ಧಕ್ಕೆ ಅನುವಾಗುತ್ತಾನೆ. ಘೋರಯುದ್ಧದಲ್ಲಿ ಧಮನ ಮೂರ್ಛಿತನಾಗಲು, ಅವನ ತಂದೆ ಸುಭಾಹುಕ ಯುದ್ಧಕ್ಕೆ ಬಂದನು. ಉಭಯತ್ರ ವೀರರು ನಾನಾ ಪರಿ ಹೋರಾಡುವರು. ಪುಷ್ಕಳನ ಬಾಣಕ್ಕೆ ಚಿತ್ರಾಂಗ ಮಡಿಯಲು, ಸುಭಾಹುಕ ಮತ್ತು ಆಂಜನೇಯರ ಮಧ್ಯೆ ಯುದ್ಧ ನಡೆಯುತ್ತದೆ. ಆಂಜನೇಯನ ಪದಹತಿಗೆ ಮೂರ್ಛಿತನಾಗಿ ಬಿದ್ದಿರುವಾಗ ಸುಭಾಹುಕನಿಗೆ ಶ್ರೀರಾಮ ಸರಯೂ ನದಿಯ ತಟದಲ್ಲಿ ಯಾಗದೀಕ್ಷೆಯಿಂದಿರುವುದನ್ನು ಕಾಣುತ್ತಾನೆ. ಭಕ್ತಿಯಿಂದ ಶ್ರೀರಾಮನ ನೆನೆದು, ಶ್ರೀರಾಮನ ಕೆಲಸಕ್ಕೆ ತಾನೂ ನೆರವಾಗಲು, ನಿಶ್ಚಯಿಸಿ, ಮಗ ಧಮನನಿಗೆ ತನಗೆ ಬಂದ ಶಾಪದ ವೃತ್ತಾಂತ ತಿಳಿಸಿ, ಈ ಯಾಗಕ್ಕೆ ಸಹಾಯ ಮಾಡಲೋಸುಗ, ತನ್ನ ಪರಿವಾರ ಸಮೇತ ಶತ್ರುಘ್ನನನ್ನು ಕಾಣುತ್ತಾನೆ. ಬಳಿಕ ತನ್ನ ಸೇನೆ ಸಮೇತ ಅಶ್ವಮೇಧ ತುರಗ ರಕ್ಷಣೆಗೆಂದು ಶತ್ರುಘ್ನನ ಸೇನೆಯೊಟ್ಟಿಗೆ ಸೇರಿಕೊಳ್ಳುತ್ತಾನೆ.

***ಎರಡನೇ ಸಂಧಿ ಪ್ರಾರಂಭ***

ಶತ್ರುಘ್ನ ತನ್ನ ಸೇನಾಬಲಸಮೇತ ತೇಜಪುರಕ್ಕೆ ಬಂದು ಅಲ್ಲಿನ ಅರಸರನ ಬೆಂಬಲ ಪಡೆದು ಮುಂದೆ ಸಾಗುತ್ತಿರುವಾಗ ವಿದ್ಯುನ್ಮಾಲಿ ಎಂಬ ದೈತ್ಯನು ಕುದುರೆಯನ್ನು ಅಪಹರಿಸಲು, ಶತ್ರುಘ್ನನನ ಅಪ್ಪಣೆ ಪಡೆದು ಪುಷ್ಕಳ ಯುದ್ಧಕ್ಕೆ ಹೊರಡುತ್ತಾನೆ. ಪುಷ್ಕಳನು ಪರಾಕ್ರಮದಿಂದ ಹೋರಾಡಿ, ದೈತ್ಯನು ಎಸೆದ ತ್ರಿಶೂಲದಿಂದ ಪ್ರಜ್ಞೆತಪ್ಪಿ ಧರೆಯಲಿ ಒರಗಿರುವಾಗ ಮಾರುತಿ ಯುದ್ಧ ಮಾಡುತ್ತಾನೆ. ಈಗಲೂ ದೈತ್ಯ ಸೋಲದಾಗಲು, ಸ್ವಯಂ ಶತ್ರುಘ್ನನೇ ಯುದ್ಧದಲ್ಲಿ ಆ ಖಳನನ್ನು ಅವನನುಜನ ಸಮೇತ ಕೊಲ್ಲುತ್ತಾನೆ. ಇತ್ತ ಮುಂದಕ್ಕೆ ಬಂದ ವಾಜಿಯು ಯಮುನಾನದಿಯಲ್ಲಿ ಮುಳುಗಿ ಪಾತಾಳಸೇರಿತು. ಶತ್ರುಘ್ನ ಅದನ್ನ ಬಿಡಿಸಿ ತರುವನು.

ಮುಂದೆ ಕುದುರೆ ಸಾಗುತ್ತಿರಲು, ವೀರಮಣಿಯ ಸುಕುಮಾರ ರುಕ್ಮಾಂಗದನು ಅದನ್ನು ಕಟ್ಟುವನು. ವೀರಮಣಿ ಶಿವನ ಸೂಚನೆ, ಅನುಗ್ರಹ ಪಡೆದು ಯುದ್ಧಕ್ಕೆ ಸನ್ನಹವೆಸಗುತ್ತಾನೆ. ವಾಜಿ ಬಂಧನ ತಿಳಿದ ಶತ್ರುಘ್ನ ಹಾಗೂ ಎಲ್ಲ ವೀರರು ವೀರಮಣಿಯೊಟ್ಟಿಗೆ

ಹೋರಾಡಲು ವೀರಮಣಿ ಸೈನ್ಯ ಕಂಗಡೆಲು ಸ್ವಯಂ ಶಂಕರನೇ ಮುಳಿದು ಯುದ್ಧವೆಸಗುತ್ತಾನೆ. ಹನುಮಂತ ಮುಂತಾದವರು ಹರನೊಡನೆ ಯುದ್ಧ ಮುಂದುವರಿದು ದೇವತೆಗಳು ಕಂಗೆಡುತ್ತಾರೆ. ದೇವೇಂದ್ರನೊಲಿದು ಹನುಮನಿದ್ದೆಡೆ ಬರುತ್ತಾನೆ. ತನ್ನ ಮಡಿದ ಸೇನೆಯ ಯೋಧರನ್ನು ಬದುಕಿಸಲು ಸಂಜೀವಿನಿ ತರಲು ತಾನು ಹೋಗುವನು. ಅಲ್ಲಿ ಇಂದ್ರಾದಿದೇವತೆಗಳ ಪ್ರತಿಭಟನೆಯನ್ನು ಮಣಿಸಿ, ದೇವಗುರುಗಳ ಮಧ್ಯಸ್ಥಿಕೆಯಲ್ಲಿ ಚಂದ್ರೋಣ ಪರ್ವತದಿಂದ ದೇವೇಂದ್ರನ ಸಮ್ಮತಿಯಿಂದ ಸಂಜೀವಿನಿಯನ್ನು ತರಲು, ಶತ್ರುಘ್ನ, ಪುಷ್ಕಳ ಮುಂತಾದವರು ಜೀವತಳೆದು ಯುದ್ಧಕ್ಕೆ ಅನುವಾಗುವರು. ಮತ್ತೆ ಯುದ್ಧವಾರಂಭವಾಗಲು, ಶ್ರೀರಾಮಚಂದಿರನೇ ರಣಾಂಗಕ್ಕೆ ಬರಲು, ಶಿವನು ಅವನನ್ನು ಸ್ತುತಿಸುವನು. ವರವನ್ನು ಕೊಟ್ಟಿರುವುದರಿಂದ ಈ ವೀರಮಣಿಯನ್ನು ತಾನು ರಕ್ಷಿಸಿ ರಾಮನಸೇನೆಯೊಡನೆ ಯುದ್ಧಮಾಡುವಂತಾಯಿತೆಂದು ಶಿವನು ತಿಳಿಸಿ, ವೀರಮಣಿ ಮುಂತಾದವರನ್ನು ಈ ಅಶ್ವಮೇಧ ರಕ್ಷಣೆಗೆ ಒಡಬಡಿಸಿದನು. ಬಳಿಕ ಶಿವನು ಹಾಗೂ ರಾಮಚಂದ್ರನು ತಮ್ಮ ತಮ್ಮ ನಿಜ ಅಲಯಕ್ಕೆ ತೆರಳಲು, ಶತ್ರುಘ್ನ ತುರುಗದ ಕುದುರೆ ಮುಂದೊತ್ತಿ, ಕುಂಡಲಾಪುರದೊಳಗೆ ಬಂದು, ಅಲ್ಲಿಯೂ ಗೆದ್ದು ಆಮೇಲೆ ಜಾನ್ಹವೀ ತೀರದಲ್ಲಿ ಯಜ್ಞತುರಗ ಕುಶಲವರಿಂದ ಬಂದಿಸಲ್ಪಟ್ಟಿತು. ಪೂಜ್ಯ ಮುನಿ ವಾಲ್ಮೀಕೀಗಳು ಮಕ್ಕಳನ್ನು ಒಡಂಬಡಿಸಿ ಸೀತೆಯನ್ನು ಕರೆದುಕೊಂಡು ಅಯೋಧ್ಯೆಗೆ ಬಂದರು ಯಾಗ ಸಾಂಗವಾಗಿ ನೆರವೇರುತ್ತದೆ. ಶ್ರೀರಾಮನು ಖಡ್ಗದಿಂದ ಯಾಗದಶ್ವದ ಬೆನ್ನನ್ನು ಮುಟ್ಟಲು ಅದು ಶಾಪದಿಂದ ಮುಕ್ತ ಹೊಂದಿ ಗಂಧರ್ವನಾಗಿ ನಿಜರೂಪದಿಂದ ರಾಮನಿಗೆರಗಿ ತನಗೆ ಬಂದ ಶಾಪದ ವೃತ್ತಾಂತ ತಿಳಿಸಿ, ಅಪ್ಪಣೆ ಪಡೆದು ಹೊರಡುತ್ತಾನೆ.

ಯಾಗ ಪರಿಸಮಾಪ್ತಿಯಾಗಿ ಸರ್ವರಿಗೂ ಮಂಗಲವಾಗುತ್ತದೆ.

***ಅಶ್ವಮೇಧಯಾಗ ಸಮೀಕ್ಷೆ***

ಅಶ್ವಮೇಧಯಾಗ ಅಥವಾ ರಾಮಾಶ್ವಮೇಧವು ಉತ್ತರಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಜನಪ್ರಿಯವಾಗಿದ್ದ ಪ್ರಸಂಗ, ರಂಗದಲ್ಲಿ ಮಾತ್ರವಲ್ಲ, ತಾಳಮದ್ದಳೆಯಲ್ಲಿಯೂ ಇದನ್ನು ಪ್ರಯೋಗಿಸುವ ರೂಢಿಯಿತ್ತು. ಈಚೆಗೆ ಅದು ಮೂಲೆಗುಂಪಾಗಿದೆಯೆಂದು ಹೇಳಬಹುದು. ಹೆಚ್ಚಿನವರಿಗೆ ಈ ಪ್ರಸಂಗದ ಪರಿಚಯವೂ ಇಲ್ಲದ ಸ್ಥಿತಿಯಾಗಿದೆ. ಅದಕ್ಕೆ ಒಂದು ಪ್ರಮುಖಕಾರಣವೆಂದರೆ ಅಚ್ಚಾದ ಪ್ರತಿಗಳು ದೊರೆಯದಿರುವುದೆಂದೂ ಹೇಳಬಹುದು. ಯಕ್ಷಗಾನ ಪ್ರೇಕ್ಷಕರ ಅಭಿರುಚಿಯ ಬದಲಾವಣೆಯೂ ಕಾರಣವಾಗಿರಬಹುದು.

ಪದ್ಮಪುರಾಣ ಈ ಪ್ರಸಂಗ ಆಕರಗ್ರಂಥ. ವಾಲ್ಮೀಕಿ ರಾಮಾಯಣದಲ್ಲಿ ರಾಮನು ಅಶ್ವಮೇಧ ಮಾಡಿದನೆಂಬುದನ್ನು ಹೇಳಲಾಗಿದೆಯೇ ಹೊರತು ವಿವರಗಳಿಲ್ಲ. ಅನಂತರದ ಕಾಲದಲ್ಲಿ ಪದ್ಮಪುರಾಣದಲ್ಲಿ ಅಶ್ವಮೇಧದ ಕಥೆಗಳು ಸೇರಿದ್ದಿರಬಹುದು. ಯಕ್ಷಗಾನ ಕವಿಗಳಂತೂ ಜೈಮಿನಿಭಾರತದ ಕಥೆಗಳಂತೆ ರಾಮನ ಕಥೆಯಲ್ಲಿಯೂ ವಿವರಗಳಿದ್ದರೆ ಸೊಗಸೆಂದು ಅನ್ನಿಸಿರಬೇಕು. ಹಾಗಾಗಿ ಅಶ್ವಮೇಧದ ಕಥೆಗಳಲ್ಲಿ ಜೈಮಿನಿಭಾರತದ ಕಥೆಗಳ ಛಾಯೆ ಕಂಡರೆ ಆಶ್ಚರ್ಯವಲ್ಲ.

ಪ್ರಸಕ್ತ ಪ್ರಸಂಗವು ಇದಕ್ಕೆ ಅಪರಾದವಲ್ಲವೆಂಬುದು ಕಥಾಸಾರವನ್ನು ಗಮನಿಸಿದರೆ ವಿದಿತವಾಗುತ್ತದೆ. ಈ ಕಥೆಯನ್ನು ರಂಗಕ್ರಿಯೆಗಳಿಗೆ ಹೊಂದುವಂತೆ ನಿರೂಪಿಸುವಲ್ಲಿ ಕವಿಯ ಕೌಶಲ್ಯವಡಗಿದೆ. ಅವನು ಅದರಲ್ಲಿ ಸಿದ್ಧಿಯನ್ನು ಪಡೆದಿದ್ದಾನೆ. ಸೇನೆಗೆ ನಾಯಕನಾಗಿ ಶತ್ರುಘ್ನನಿದ್ದರೂ ಕವಿಗೆ ಭರತನ ಮಗನಾದ ಪುಷ್ಕರನ ಮೇಲೆ ಪ್ರೀತಿ. ಪ್ರಸಂಗದುದ್ದಕ್ಕೂ ವೀರಪುರುಷನಾಗಿ ಅವನು ಮನಸ್ಸನ್ನು ಸೆಳೆಯುತ್ತಾನೆ. ಅದೇ ರೀತಿಯಲ್ಲಿ ಇನ್ನೊಂದು ಪಾತ್ರ ದಮನ. ಅವನು ಅಶ್ವಮೇಧದ ಕುದುರೆಯನ್ನು ಕಂಡಾಗಿನ ಪದ್ಯ ಇದು.

**ರಾಗ ನಾದನಾಮಕ್ರಿಯೆ ಅಷ್ಟತಾಳ**

***ಅಶ್ವವಿದು ಮುಂದೆ ತೋರ್ಪದು ಮತ್ತೆ ಭೂರಿ ಶೃಂಗಾರವಾಗಿರ್ಪುದು ॥***
***ಚಾರು ಲಿಖಿತವಿದೆ ಭಾಳದಿ ಮನ ಸೂರೆಗೊಂಡದು ರತ್ನಜಾಲದಿ ॥***

ರಂಜನೆಯ ದೃಷ್ಟಿಯಿಂದ ವಿದ್ಯುನ್ಮಾಲಿಯೆಂಬ ರಕ್ಕಸನ ಕಥೆ ಉಪಯುಕ್ತವಾಗಿದೆ. ವೀರಮಣಿಯ ಕಾಳಗವೂ ಇಲ್ಲಿಯೇ ಸೇರಿದು. ಅದು ಸ್ವತಂತ್ರವಾದ ಪ್ರಸಂಗವಾಗುವ ಯೋಗ್ಯತೆಯುಳ್ಳದ್ದು. ಬೇರೊಬ್ಬ ಕವಿ ವೀರಮಣಿ ಕಾಳಗವನ್ನು ಬರೆದುದನ್ನು ಇಲ್ಲಿ ಗಮನಿಸಬಹುದು. ವೀರರಸದ ವಿಜೃಂಭಣೆಯಿರುವುದಾದರೂ ಅದರೊಂದಿಗೆ ಭಕ್ತಿಯೂ ಬೆರೆತಿದೆ. ಅದ್ಭುತವಾದ ವೃತ್ತಾಂತಗಳು ಒಂದರೊಡನೊಂದು ಬೆರೆತುಕೊಂಡಿದೆ.

ಕವಿಯ ಮುಖ್ಯವಾದ ಗುರಿ ಅಶ್ವಮೇಧಯಾಗದ ಕಥೆಯನ್ನು ಬಿತ್ತರಿಸುವುದು ಅದನ್ನು ಸಮರ್ಥವಾಗಿಯೇ ನಿರ್ವಹಿಸಿದ್ದಾನೆ. ಕವಿಪದ್ಯಗಳ ಸಂಖ್ಯೆ ಹೆಚ್ಚಿದೆ. ಬದಲಿಗೆ ಪಾತ್ರಗಳ ಪದ್ಯಗಳಿದ್ದರೆ ಚೆನ್ನಾಗುತ್ತಿತ್ತು. ಸಂಭಾಷಣೆಯಲ್ಲಿಯೂ ಮಾತಿಗೆ ಹೆಚ್ಚಿನ ಅವಕಾಶ ಕಾಣದು. ಯುದ್ಧಪೂರ್ವದಲ್ಲಿ ಒಂದೆರಡು ಮಾತಿಗೆ ಅವಕಾಶನೀಡುವುದಕ್ಕಷ್ಟೆ ಮಾತು ಸೀಮಿತವೆನ್ನುವಂತಿದೆ. ಪದ್ಯಗಳು ಅತ್ಯಂತ ಸರಳವಾಗಿವೆ.

***ಕವಿ ಪರಿಚಯ :*** ತಿಳಿದಿಲ್ಲ

* * *

## 12. ಕುಶಲವರ ಕಾಳಗ

**ಕಥಾಸಾರ:**

ಶ್ರೀರಾಮಚಂದ್ರನು ರಾವಣಾದಿಖಳರನ್ನು ಕೊಂದು ಅಯೋಧ್ಯೆಗೆ ಬಂದು ಪಟ್ಟಾಭಿಷಕ್ತನಾಗಿದ್ದಾನೆ. ಶ್ರೀರಾಮ ಮಕ್ಕಳು ತನಗಿಲ್ಲ ಎಂಬ ಚಿಂತೆಯಲ್ಲಿರುವಾಗ ಪೂಜ್ಯ ವಸಿಷ್ಠಮುನಿಗಳು ಬರಲು. ಅವರನ್ನು ಸತ್ಕರಿಸುತ್ತಾನೆ. ರಾಮನಂತರಂಗವನ್ನು ತಿಳಿದ ಋಷಿ ವಸಿಷ್ಠರು ಅಭಯವನ್ನು ನೀಡಿ, ಜಾನಕಿಯನ್ನು ಕರೆದು ಆಕೆಗೆ ಪುತ್ರೋತ್ಸವವಾಗಲಿ ಎಂದು ಮಂತ್ರೋಪದೇಶ ನೀಡಿ ಹರಸುತ್ತಾರೆ.

ಸಕಲ ಸಮೃದ್ಧಿಯಿಂದ ರಾರಾಜಿಸುವ ಅಯೋಧ್ಯೆ ಸುಖಸಂತಸದಿಂದ ನಲಿಯುತ್ತಿರಲು ದೂತರು ಬಂದು ಶ್ರೀರಾಮನನ್ನು ಬೇಟೆಯಾಡುವುದಕ್ಕೆ ವಿನಂತಿಸಲು, ಅಂತೆಯೇ ಶ್ರೀರಾಮನು ಚತುರಂಗ ಸೇನೆಯೊಡನೆ ವನದಲ್ಲಿ ಬೇಟೆಯಾಡಿ ಹಿಂದಿರುಗುತ್ತಾನೆ. ಈಗ ಪತ್ನಿ ಸೀತೆ ಗರ್ಭವತಿಯಾಗಿದ್ದಾಳೆ. ಅವಳ ಸೊಬಗನ್ನು ಕಂಡು ರಾಮ ಹಿಗ್ಗುತ್ತಾನೆ. ಪಟ್ಟಣ ಸಿಂಗಾರಗೊಳ್ಳುತ್ತದೆ. ಗರ್ಭಿಣಿಯಾದ ಸೀತೆಯನ್ನು ಪ್ರೀತಿಯಿಂದ ಅವಳ ಬಯಕೆಯನ್ನು ಕೇಳಲು ತಾನು ಮೂರು ದಿನ ವನದಲ್ಲಿ ಸಂಚರಿಸುವ ಬಯಕೆ ಅರಹುತ್ತಾಳೆ.

ಇತ್ತ ರಾತ್ರಿ ಸಂಚರಿಸುವ ಚರರು ಶ್ರೀರಾಮನಲ್ಲಿ ಬಂದು ರಜಕನೋರ್ವನಾಡಿದ ಕೀಳು ಮಾತನ್ನು ತಿಳಿಸಲು, ಶ್ರೀರಾಮ ಚಿಂತಿತನಾಗಿ, ಹಲವನ್ನು ಹಂಬಲಿಸಿ ನೊಂದುಕೊಳ್ಳುತ್ತಾನೆ. ಮರುದಿನ ಲಕ್ಷ್ಮಣನನ್ನು ಕರೆದು ಸೀತೆಯನ್ನು ಘೋರವಿಪಿನದಲ್ಲಿ ಬಿಟ್ಟು ಬಾ ಎಂದು ಆಜ್ಞಾಪಿಸಲು, ಲಕ್ಷ್ಮಣನು ಯಾರದ್ದೋ ಕ್ಷುಲ್ಲಕ ಮಾತಿಗೆ ಬೆಲೆ ಕೊಡಬಾರದು ಎಂದು ವಿನಂತಿಸಲು, ರಾಮ ಒಪ್ಪದಿದ್ದಾಗ ಸೀತೆಯನ್ನು ಒಡಂಬಡಿಸಿ ಕಾಡಿಗೆ ಬಿಡಲು ಸಿದ್ಧನಾಗುತ್ತಾನೆ.

ಹಿರಿಯರಿಗೆ ವಂದಿಸಿ ಸಕಲಾಭರಣಗಳ ಧರಿಸಿ ಸೀತೆ ಹೊರಡುತ್ತಾಳೆ. ಘೋರಕಾನನಕ್ಕೆ ರಥಬರಲು, ಹೆದರಿದ ಸೀತೆ ಮುನಿಗಳ ಆಶ್ರಮ ಕಾಣದೇ ಭಯಗೊಂಡು ಲಕ್ಷ್ಮಣನಲ್ಲಿ ಇದೇನು ಎಂದು ಕೇಳಲು, ಲಕ್ಷ್ಮಣ, ಅಣ್ಣನ ಆಜ್ಞೆಯನ್ನು ತಿಳಿಸುತ್ತಾನೆ. ಪತಿಯಾಜ್ಞೆ ತಿಳಿದು ಕಂಗೆಟ್ಟು ಕುಸಿದು ಸೀತೆ ಮೂರ್ಛಾಗತಳಾಗಲು ಲಕ್ಷ್ಮಣ ಅವಳನ್ನು ಉಪಚರಿಸುತ್ತಾನೆ. ಸೀತೆ ನಾನಾ ಪರಿಯಿಂದ ದುಃಖಿಸುತ್ತಾಳೆ. ಸೀತೆಯನ್ನು ರಕ್ಷಿಸುವಂತೆ, ವನದೇವತೆ, ಸಕಲಗಣಕ್ಕೆ ಪ್ರಾರ್ಥಿಸಿ ಲಕ್ಷ್ಮಣ ದುಗುಡದಿಂದ ಹಿಂದಿರುಗಲು, ಏಕಾಂಗಿ ಸೀತೆ ದಿಕ್ಕುಗಾಣದೆ ಏಳುತ್ತ ಬೀಳುತ್ತ ಸಾಗುತ್ತಿರಲು, ಅವಳ ಆರ್ತನಾದ ಕೇಳಿ ವಾಲ್ಮೀಕಿ ಮುನಿಗಳು ಬಂದು ಅಭಯ ಕೊಟ್ಟು ತನ್ನ ಆಶ್ರಮಕ್ಕೆ ಕರೆದುಕೊಂಡು ಹೋಗುತ್ತಾರೆ.

ಹೀಗೆ ವಾಲ್ಮೀಕಿ ಮುನಿಗಳ ಆಶ್ರಮ ಸೇರಿದ ಸೀತೆ ಅಲ್ಲಿ ಶುಭ ಮುಹೂರ್ತದಲ್ಲಿ ಎರಡು ಗಂಡು ಮಕ್ಕಳಿಗೆ ಜನ್ಮ ನೀಡುತ್ತಾಳೆ. ಮುನಿಗಳು ಮಕ್ಕಳಿಗೆ ಕುಶ ಮತ್ತು ಲವ ಎಂದು ನಾಮಕರಣ ಮಾಡುತ್ತಾರೆ. ಮಕ್ಕಳು ದಿನದಿಂದ ದಿನಕ್ಕೆ ತೇಜೋವಂತರಾಗಿ ಬೆಳೆಯುತ್ತಾರೆ. ಗುರು ವಾಲ್ಮೀಕಿ ಮಕ್ಕಳಿಗೆ ಸಕಲ ವಿದ್ಯಾಭ್ಯಾಸ ಮಾಡಿಸುತ್ತಾರೆ. ಒಂದು ದಿನ ಋಷಿ ವಾಲ್ಮೀಕಿ ಯಜ್ಞಕ್ಕೆಂದು ಪಾತಾಳಕ್ಕೆ ಪಯಣಿಸುತ್ತಾರೆ.

ಇತ್ತ ಅಯೋಧ್ಯೆಯಲ್ಲಿ ಶ್ರೀರಾಮನು ಅಶ್ವಮೇಧ ಯಾಗ ಮಾಡಬೇಕೆಂದು ಸಂಕಲ್ಪಿಸಿ ಋಷಿಮುನಿಗಳ ಅಪ್ಪಣೆ ಪಡೆದು ಯಜ್ಞಾಶ್ವಪೂಜಿಸಿ, ಶತ್ರುಘ್ನನನ್ನು ಬೆಂಗಾವಲಿಗೆ ಕಳಿಸಿಕೊಡುತ್ತಾನೆ. ಅನೇಕ ಪ್ರದೇಶವನ್ನು ಸುತ್ತಿ ಯಜ್ಞಾಶ್ವ ವಾಲ್ಮೀಕಿ ಮುನಿಗಳ ಆಶ್ರಮಕ್ಕೆ ಬರಲು, ಅದನ್ನು ಕಂಡು ಲವನು ಅದನ್ನು ಬಂಧಿಸುತ್ತಾನೆ. ಬಂದ ಶತ್ರುಗಳನ್ನು ಸೋಲಿಸಿ, ಕೊನೆಗೆ ಶತ್ರುಘ್ನನನ್ನು ಎದುರಿಸಿ, ಬಂಧನಕ್ಕೊಳಗಾಗಲು, ಸುದ್ದಿ ತಿಳಿದ ಸೀತೆ ರೋಧಿಸಲು, ಕುಶನು ಕಾರಣ ತಿಳಿದು ರಣಾಂಗಣಕ್ಕೆ ಬರುತ್ತಾನೆ. ಪರಾಕ್ರಮದಿಂದ ಹೋರಾಡಿ ಲವನನ್ನು ಬಿಡಿಸಿ ಶತ್ರುಘ್ನನನ್ನು ಸೋಲಿಸುತ್ತಾನೆ. ಅಯೋಧ್ಯೆಯಲ್ಲಿ ರಾಮಚಂದ್ರನಿಗೆ ವಿಷಯ ತಿಳಿಯಲು ದುಃಖಿತನಾಗಿ ಲಕ್ಷ್ಮಣನನ್ನು ಯುದ್ಧಕ್ಕೆ ಕಳಿಸಲು ಆತನೂ ತರಳನ ಪರಾಕ್ರಮ ಎದುರಿಸಲಾರದೇ ಸೋಲಲು, ರಾಮನಪ್ಪಣೆ ಪಡೆದು ಭರತನು ಬರುತ್ತಾನೆ. ಭರತನು ತನ್ನ ಸೇನೆಯೊಂದಿಗೆ ಸೋತುಹೋಗಲು, ಸ್ವಯಂ ರಾಮನೇ ಯುದ್ಧರಂಗಕ್ಕೆ ಹನುಮ, ಜಾಂಬವ, ಸುಗ್ರೀವ ಮುಂತಾದವರನ್ನೊಳಗೊಂಡು ಧಾವಿಸುತ್ತಾನೆ.

ಧರೆಯಲ್ಲಿ ಒರಗಿದ ವೀರಾಧಿವೀರರನ್ನು ಕಂಡು ಮರುಗಿದ ಶ್ರೀರಾಮ ಬಾಲಕರ ಸಾಹಸಕ್ಕೆ ಮೆಚ್ಚಿ ತಲೆದೂಗುತ್ತಾನೆ. ಮುಂದೆ ನಡೆದ ಯುದ್ಧದಲ್ಲಿ ಶ್ರೀರಾಮನೂ ಮೂರ್ಛಾಗತನಾಗಲು, ಕುಶಲವರು, ಹನುಮ ಜಾಂಬವ ಮುಂತಾದವರನ್ನು ಬಂದಿಸಿ, ಶ್ರೀರಾಮನ ಕೊರಳ ಹಾರ, ಆಭರಣಗಳನ್ನು ಹಿಡಿದು ತಾಯಿ ಸೀತೆಯನ್ನು ಕಾಣಲು ಬರುತ್ತಾರೆ. ಅದೇ ಸಮಯಕ್ಕೆ ಬಂದ ವಾಲ್ಮೀಕಿ ಮುನಿಗಳು ವಿಷಯ ತಿಳಿದು ರಣಾಂಗಣಕ್ಕೆ ಬಂದು ಎಲ್ಲರನ್ನು ಮಂತ್ರೋದಕದಿಂದ ಎಬ್ಬಿಸುತ್ತಾರೆ. ಶ್ರೀರಾಮನಿಗೆ ಕುಶಲವರು ತನ್ನ ಮಕ್ಕಳು ಎಂದು ತಿಳಿದು ಸಂತಸವಾಗಲು, ಸೀತಾ ಸಮೇತ ಎಲ್ಲರನ್ನು ಕೂಡಿಕೊಂಡು ಅಯೋಧ್ಯೆಗೆ ಬಂದು ಶ್ರೀರಾಮಯಾಗವನ್ನು ಪೂರೈಸಿ ಸಂತಸದಿಂದ ರಾಜ್ಯಭಾರ ಕೈಗೊಂಡನು ಎಂಬಲ್ಲಿಗೆ ಮಂಗಳವಾಗುತ್ತದೆ.

***ಕುಶಲವರ ಕಾಳಗ ಸಮೀಕ್ಷೆ***

ಯಕ್ಷಗಾನ ವಾಲ್ಮೀಕಿಯೆಂದೇ ಪ್ರಸಿದ್ಧನಾದ ಪಾರ್ತಿಸುಬ್ಬನ ಜನಪ್ರಿಯ ಪ್ರಸಂಗಗಳಲ್ಲಿ ಕುಶಲವರ ಕಾಳಗವೂ ಒಂದು. ಲಕ್ಷ್ಮೀಶ ಮಹಾಕವಿಯ ಜೈಮಿನೀಭಾರತದಲ್ಲಿ ಬರುವ ಸೀತಪರಿತ್ಯಾಗದ ವೃತ್ತಾಂತವನ್ನು ಮುಖ್ಯವಾದ ಆಕರವನ್ನಾಗಿಸಿಕೊಂಡ ಕವಿ ಈ ಸುಂದರವಾದ ಕೃತಿಯನ್ನು ರಚಿಸಿ ಯಕ್ಷಗಾನ ರಂಗವನ್ನು ಸಮೃದ್ಧಗೊಳಿಸಿದ್ದಾನೆ. ಕವಿಯ ಮಾಂತ್ರಿಕಸ್ಪರ್ಶ ಕೃತಿಯನ್ನು ಅಮರವಾಗಿಸಿದೆ. ಇಂದೂ ರಂಗಭೂಮಿಯಲ್ಲಿ ರಂಜಿಸುವಂತೆ ಮಾಡಿದೆ.

ಈ ಕಥಾನಕವನ್ನು ಸೀತಾಪರಿತ್ಯಾಗ, ಕುಶಲವರ ಜನನ, ಯಜ್ಞಾಶ್ವಬಂಧನ, ಕುಶಲವರ ರಣಪರಾಕ್ರಮ ಮತ್ತು ವಾಲ್ಮೀಕಿಯ ಅನುಗ್ರಹಗಳೆಂಬ ಪ್ರಮುಖ ಪ್ರಕರಣಗಳಿಂದ ಕೂಡಿದ್ದೆಂಬುದಾಗಿ ಹೇಳಬಹುದು. ಸೀತಾಪರಿತ್ಯಾಗ ಪ್ರಕರಣದಲ್ಲಿ ಸೀತೆಯು ಗರ್ಭಿಣಿಯಾದ ಕಥೆಯು ಸೇರಿಕೊಂಡಿದೆ. ಸೀತೆ ಪುಷ್ಪವತಿಯಾದಳೆಂಬುದನ್ನು ಕವಿ ವರ್ಣಿಸಿದ್ದಲ್ಲದೆ ಗರ್ಭಿಣಿಯ ಹಂತಹಂತದ ಬೆಳವಣಿಗೆಯನ್ನು ವರ್ಣಿಸಿದ್ದಾನೆ. ಉದಾ :

**ರಾಗ ಅಂದೋಳಿ ಅಷ್ಟತಾಳ**

*ಮೂರು ತಿಂಗಳು ತುಂಬೆ ಮುದ್ದುಮೊರೆಯಲಿ ಬಿ*
*ಳ್ಪೆರಿತು ತ್ರೈಜಗದೊಡತಿಗೆ ॥*

*ಶ್ರೀರಾಮನರಸಿಯ ಗುರುಕುಚವೆರಡು ಕ*
*ಪ್ಪೇರಿತು ಛಾಯಾಮಾತ್ರದೊಳಾಗ ॥*

ಯಕ್ಷಗಾನ ಕವಿಗಳು ಶುದ್ಧವರ್ಣನೆಯನ್ನು ಬರೆಯಬಾರದೆಂಬ ನಿಬಂಧನೆಯೇನೂ ಇಲ್ಲ. ಮೇಲಾಗಿ ಪ್ರಸಂಗಕೃತಿಯೇ ಅರ್ಥದ ಮಾತಿಗೂ ಆಕರವಾಗಿತ್ತಾದುದರಿಂದ ಹಿಂದಿನ ಕೃತಿಗಳಲ್ಲಿ ಈ ರೀತಿಯ ವರ್ಣನೆಗಳು ಅಪರೂಪವೇನಲ್ಲ.

ಸೀತಾ ಪರಿತ್ಯಾಗದ ಸನ್ನಿವೇಶದಲ್ಲಿ ರಾಮನು ತನ್ನನ್ನು ಪರಿತ್ಯಾಗ ಮಾಡಿದನೆಂದು ತಿಳಿದಾಗ ಪ್ರತಿಕ್ರಿಯಿಸುವ ಸೀತೆಯ ಮಾತುಗಳು ತುಂಬಾ ತೀಕ್ಷ್ಣವಾಗಿವೆ.

**ರಾಗ ನೀಲಾಂಬರಿ ರೂಪಕತಾಳ**

*ಕಯ್ಯರೆ ಖಡ್ಗವಕೊಟ್ಟು ತನ್ನರಸಿಯ*
*ಹೊಯ್ಯೆಂದು ಪೇಳದೆ ಬರಿದೆ*

*ಒಯ್ಯನೆ ಕಾಡೊಳು ಬಿಟ್ಟು ಬಾರೆಂದನೆ*
*ಅಯ್ಯಯ್ಯ ರಾಮ ಕರುಣಾಳು ॥*

*ಕಾಡಿನೊಳಗೆ ಹುಲಿ ಇರುವ ಸುದ್ದಿಯ ಕೇಳಿ*
*ನಾಡಿಂದೊಕ್ಕಲು ತೆಗೆದಂತೆ*

*ನಾಡ ಮಾತನು ಕೇಳಿ ಎನ್ನನೀರೀತಿಯ*
*ಮಾಡಿದ ನಲ್ಲ ಎನ್ನರಸ ॥*

*ಕಾಣಲಾರದ ಪಗೆಯವರಿಗೆ ತಲೆಯಲ್ಲಿ*
*ಮಾಣಿಕ್ಯವುಂಟೆಂದರವನ*

*ಪ್ರಾಣವ ಕಳೆದಂತೆ ಜಾಲ ಮಾತಿಗೆಯೆನ್ನ*
*ಪ್ರಾಣೇಶ ತೊರೆದನೆ ವಿಧಿಯೆ ॥*

ಸೀತಾ ಸಂದೇಶವೂ ಸಾಕಷ್ಟು ಶಕ್ತಿಶಾಲಿಯಾಗಿ ಮೂಡಿಬಂದಿದೆ. ಇಲ್ಲೆಲ್ಲ ಲಕ್ಷ್ಮೀಶನ ಪ್ರಭಾವವನ್ನು ಗುರುತಿಸಬಹುದಾದರೂ ಪಾರ್ತಿಸುಬ್ಬನ ಕವಿತ್ವಶಕ್ತಿ ಅದನ್ನು ಜೀರ್ಣಿಸಿಕೊಂಡಿದೆ.

ರಂಗದ ದೃಷ್ಟಿಯಿಂದ ಕುಶಲವರ ಕಾಳಗಗೊಡುವ ದೃಶ್ಯಗಳು ಪ್ರಭಾವಿಯಾಗಿವೆ. ಲವ, ಕುಶರ ಪಾತ್ರಗಳು ನಮ್ಮನ್ನು ಆಕರ್ಷಿಸುತ್ತವೆ. ಲವನು ಅಶ್ವಮೇಧದ ಕುದುರೆಯ ಹಣೆಯ ಲಿಖಿತವನ್ನು ನೋಡಿ ಪ್ರತಿಕ್ರಿಯಿಸುವ ಬಗೆಯನ್ನು ನೋಡಿ.

**ರಾಗ ಶಂಕರಾಭರಣ ಅಷ್ಟತಾಳ**

*ಸೀತಾನಂದನನು ಓಲೆಯ ನೋಡಿ*
*ನ್ನೇತರ ಬದುಕೆಂದನು ॥*

*ಭೂತಳದೊಳಗೊರ್ವ ಖ್ಯಾತನಾಗಿಹಮೇಲೆ*
*ಪೇತುಗರೆಂದೆಂಬ ಮಾತು ಬಂತೆಮಗೆ ॥*

*ಬಂದದೆಲ್ಲವು ಬರಲೀ ಈ ಪ್ರಾಣವು*
*ಇಂದೇ ಹೋದರು ಹೋಗಲಿ ॥*

*ಮುಂದುವರಿಯಲು ತಾಯ್ ಮುನಿ ಕೋಪಿಸಲು ಬಿಡೆ*
*ನೆಂದು ಹತ್ತಿರೆ ಬಂದು ನಿಂದು ನೋಡಿದನು ॥*

ಅಂತೆಯೇ ರಣದಲ್ಲಿ ವಿಜೃಂಭಿಸಿದ ಕುಶಲವರನ್ನು ಕಂಡ ರಾಮ ಸಾಹಸದಿ ಬಿಲ್‌ಬಾಣ ರಂಜಿಸಲು ನಿಸ್ಸೀಮ ಎಂಬುದು ತುಂಬ ಪ್ರಸಿದ್ಧವಾದ ಪದ್ಯ. ಅದರ ಮಾಧುರ್ಯದ ಅರಿವು ಹಾಡಿದ್ದನ್ನು ಕೇಳಿದಾಗ ಉಂಟಾಗುತ್ತದೆ. ರಾಮನ ಸೇನೆಯವರೆಲ್ಲರನ್ನು ಕೆಳಕ್ಕೆ ಕೆಡವಿ ಅವರ ಆಭರಣಗಳನ್ನು ಗಂಟುಕಟ್ಟಿಕೊಂಡು ಹೊರಡುವಾಗ ಹನುಮ-ಜಾಂಬವರನ್ನು ಕಟ್ಟಿ ಹಾಕುತ್ತಾರೆ. ಆ ಸಮಯದಲ್ಲಿ ಹನುಮನ ಪ್ರತಿಕ್ರಿಯೆ ತುಂಬ ಸ್ವಾರಸ್ಯಕರವಾಗಿದೆ.

*ಕೊಂದು ಹೋಗಲಿ ನಮ್ಮಲ್ಲಿಗೆ ಸೀತೆ*
*ಕಂಡರೆ ರಕ್ಷಿಸುವಳು ಜಗನ್ಮಾತೆ ॥*

*ಪುಂಡುಹುಡುಗರೊಳು ಜಗಳಾಟವೇಕೆ ಭೂ*
*ಮಂಡಲದೊಳು ನಮ್ಮ ಕೊಂದಂತೆ ಜೋಕೆ ॥*

ಕವಿಯ ಯೋಗ್ಯತೆ ಹಿರಿದು. ಅದು ಪ್ರಸಂಗದುದ್ದಕ್ಕೂ ಗೋಚರವಾಗುತ್ತದೆ. ಭಾಷೆಯು ಸರಳವಾದರೂ ಭಾವಸಮೃದ್ಧಿಯಿದೆ. ನೇರವಾಗಿ ಹೃದಯವನ್ನು ಮುಟ್ಟುವಂಥ ರಚನೆಗಳು ಕೃತಿಯ ತುಂಬ ಇವೆ. ಇದೊಂದು ಉತ್ತಮ ಕೃತಿಗಳ ಸಾಲಿಗೆ ಸೇರಬಹುದಾದ ಪ್ರಸಂಗ. ಅಶ್ವಮೇಧಯಾಗ ಅಥವಾ ರಾಮಾಶ್ವಮೇಧವು ಉತ್ತರಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಜನಪ್ರಿಯವಾಗಿದ್ದ ಪ್ರಸಂಗ. ರಂಗದಲ್ಲಿ ಮಾತ್ರವಲ್ಲ, ತಾಳಮಾದ್ದಳೆಯಲ್ಲಿಯೂ ಇದನ್ನು ಪ್ರಯೋಗಿಸುವ ರೂಢಿಯಿತ್ತು.

***ಕವಿ ಪರಿಚಯ :***

**ಪಾರ್ತಿಸುಬ್ಬ :** ವಿವರ ಕುಂಭಕರ್ಣಾದಿ ಕಾಳಗದ ಸಮೀಕ್ಷೆಯ ನಂತರ ಇದೆ.

* * *

# ಶ್ರೀಮದ್ರಾಮಾಯಣದೊಳಗಣ

# ಯಕ್ಷಗಾನ ರಾವಣೋದ್ಭವ

## ಪಾತ್ರಗಳು

ಶ್ರೀರಾಮ
ಲಕ್ಷ್ಮಣ
ದೇವೇಂದ್ರ
ಶಂಕರ
ಪಾರ್ವತಿ
ಅಗಸ್ತ್ಯರು
ಸಖಿಯರು
ಲಕ್ಷ್ಮೀ ಮತ್ತು ನಾರಾಯಣ
ಸೇವಕರು
ಬ್ರಹ್ಮ
ಗಣಗಳು
ವಿಭೀಷಣ
ಕೈಕಸೆ
ವೇದವತಿ
ಮಾಲಿ
ಸುಮಾಲಿ
ಮಾಲ್ಯವಂತ
ಶೂರ್ಪನಖಾ
ವಿದ್ಯುಜಿಹ್ವ
ಮಾರೀಚ
ಪೌಲಸ್ತ್ಯ
ಕಾರ್ತವೀರ್ಯಾರ್ಜುನ
ವಿಶ್ರವಸು
ಕುಂಭಕರ್ಣ
ರಾವಣ
ಮಯಾಸುರ
ಮಂಡೋದರಿ
ಸಖಿ

**ಶಾದೂಲರ್ವಿಕ್ರೀಡಿತ ವೃತ್ತ**

ಶ್ರೀಗೌರೀ ವರಮಿಂದು ಶೇಖರ ಜಟಾಜೂಟಂ ಜಗತ್ಪಾವನಂ ।
ಯೋಗೀಂದ್ರಾರ್ಚಿತಪಾದಪದ್ಮಯುಗಳಂ ಗಂಗಾಧರಂಶಂಕರಂ ।
ಭೂಗೀರ್ವಾಣಸಮಸ್ತದೇವವಿನುತಂ ವ್ಯಾಘ್ರಾಜಿನಾಲಂಕತಂ ।
ನಾಗಾರಾತಿತುರಂಗಮಿತ್ರನಮಿತಂ ಶ್ರೀ ಮಂಜುನಾಥಂ ಭಜೇ ॥ ॥1॥

**ರಾಗ ನಾಟಿ ರೂಪಕತಾಳ**

ಜಯ ಜಯನುತಿಹರಿ ಚಂದನ । ಜಯ ಜಯಕತ ಸುರವಂದನ ।
ಜಯ ಜಯಪಶುಪತಿನಂದನ । ಜಯ ಜಯ ಗುಣಸದನಾ ॥
ಜಯ ಜಯ ಸನಕಸನಂದನ । ಜಯ ಲೇಪಿತ ಹಚ್ಚಂದನ ।
ಜಯ ಮೂಷಿಕ ಸ್ಯಂದನ । ಜಯವಾರಣವದನಾ ॥ ಜಯ ಜಯ ॥2॥

ಘೋರಭವಾರ್ಣವ ತಾರಣ । ಚಾರುತರೋತ್ಸಹ ಕಾರಣ ।
ಭೂರಿ ಕಪಾಸಂಪೂರಣ । ಬಹು ವಿಘ್ನವಿಹರಣಾ ॥
ವಾರಿಧಿಸಮಗಂಭೀರಣ । ವೈರಿಕುಲಾಭ್ರ ಸಮೀರಣ
ಸೂರಿಮನೋಸಂಚಾರಣ । ಶುಭಕರತಚ್ಚರಣ ॥ ಜಯ ಜಯ ॥3॥

ನಿರತಸು ಬುದ್ಧಿ ಪ್ರದಾಯಕ । ಪರತರ ರೂಪ ವಿನಾಯಕ ।
ಶರಣಾಗತ ಪರಿಪಾಲಕ । ಸಾಲಂಕತ ತಿಲಕಾ ॥
ವರ ಪಾಶಾಂಕುಶ ಮೋದಕ । ಧರವೆಂಕಟ ಹಚ್ಛಾಯಕ ।
ದುರಿತಾವಳಿ ವಿಚ್ಛೇದಕ । ಕವಿತಸ್ಫುರ ದಳಕಾ ॥ ಜಯ ಜಯ ॥4॥

**ವಾರ್ಧಕ**

ಗಿರಿಶನಂ ಗಿರಿಜೇಶನಂ ಸುಪ್ರಕಾಶನಂ ।
ಪುರೂಹೂತನುತಿಪಾತ್ರನಂ ಫಾಲನೇತ್ರನಂ ।
ಶರಜನ್ಮಮುಖತಾತನಂ ಮಹಾಖ್ಯಾತನಂ ಸುರಯೋಗಿ ಸುಪ್ರೀತನಂ ॥
ದರಹಸಿತ ಪಂಚಾಸ್ಯನಂ ನಿರಾಲಸ್ಯನಂ ।
ಪರಮರುಚಿ ವಿಹಾರನಂ ಹಾರನಂ ವರಕಪಾಸಾರನಂ।
ಸ್ಫುರದಸಿತಸುಗ್ರೀವನಂ ವಾಮದೇವನಂ ಭಜಿಸುವೆನು ಮನ್ಮನದೊಳೂ ॥5॥

**ಭಾಮಿನಿ**

ಶ್ರೀರಮೆಯ ಭಜಿಸುತ್ತ ಚಿತ್ತದಿ ।
ಭಾರತಿಗೆ ವಂದಿಸಿ ಭವಾನಿಯ ।
ಚಾರು ಪದಕಭಿನಮಿಸಿ ದಿಕ್ಪಾಲಕರ ಬಲಗೊಂಡೂ ॥
ನಾರದಾದಿ ಮಹಾ ಮುನೀಂದ್ರರ ।
ವಾರಕಾನತನಾಗಿ ವಿನಯದಿ ।
ಸಾರಸಾಸನಗೆರಗುತಲಿ ಸತ್ಕಥೆಯನುಸುರುವೆನೂ ॥6॥

**ದ್ವಿಪದಿ**

ಶ್ರೀಮದುತ್ತರಕಾಂಡ ರಾಮಾಯಣದಲೀ ।
ರಾಮನಿಗಗಸ್ತ್ಯ ಮುನಿಪೇಳ್ದ ಕಥನದಲೀ ॥7॥

ರಾವಣಾದಿಗಳುದಿಸಿ ಮೆರೆದ ಸಂಗತಿಯಾ ।
ನಾವಿವರಿಸುವೆ ಸರಸಗಾನದಲಿ ಕಥೆಯಾ ॥8॥

ದುಷ್ಟನ ಚರಿತ್ರ ವೆಂದೆನತದೂಷಿಸದೇ ॥
ವಿಷ್ಣುಸೇವಕ ವಿಭೀಷಣಗುಪೇಕ್ಷಿಸದೇ ॥9॥

ಯತ್ಕಿಂಚಿದಪಶಬ್ಧವಿರೆ ತಿದ್ದಿ ಜನರೂ ।
ಚಿತ್ತವಿಟ್ಟೀ ಕಥೆಯ ಕೇಳಿಕೋವಿದರು ॥10॥

ಮರನೇರ್ದ ಮನುಜರಡಿ ಕೆಳಗೆಂಬುದರಿತೂ ।
ವಿರಸವೆಸಗದೆ ಸರ್ವರಾದರಿಪುದಿನಿತೂ ॥11॥

**ವಾರ್ಧಕ**

ದಶರಥನೊಳುದಿಸಿ ಕೌಶಿಕನ ಮಖವಾರೈದು ।
ವಸುಮತೀ ಸಂಭವೆಗೆ ಪತಿಯಾಗಿ ಪಿತನಾಜ್ಞೆ ।
ಯೆಸಗಿ ರಾವಣನಿಂದ ಸತಿವಿರಹಮಂ ತಾಳ್ದು । ಕಪಿಸೈನ್ಯದಿಂದರಿವುತಾ ॥
ಮಸಗಿಸೇತುವಕಟ್ಟಿ ದನುಜರಂ ಸದೆ ಬಡಿದು ।
ಕುಶಲದಿ ವಿಭೀಷಣಗೆ ಲಂಕೆಯನ್ನಿತ್ತು ನಿಜ ।
ಬಿಸಜಾಕ್ಷಿ ಸಹಿತ ಪುಷ್ಪಕವೇರಿ ರಘುರಾಮ ಪುರಿಗೈದನುತ್ಸಹದೊಳು ॥12॥

ಕೌಸಲ್ಯೆ ಮೊದಲಾದ ಮಾತಳಿಗಭಿನಮಿಸಿ ।
ತೋಷದಿಂ ಭರತ ಶತಘ್ನರಂ ಸಂತೈಸಿ ।
ವಾಸಿಷ್ಠ ಮುನಿಮುಖ್ಯರಭಿಮತದಿ ಪಟ್ಟಾಭಿಷೇಚನದಿ ಸಲೆ ರಂಜಿಸೀ ॥
ಆ ಸಮೀರಜ ರವಿಜ ದಶಗಳಾನುಜರನು ।

ಲ್ಲಾಸದಿಂ ಮನ್ನಿಸುತ ಸುಮನಸಾಧ್ಯರನತಿವಿ ।
ಲಾಸದಿಂ ಸಾಕೇತಪುರದಿ ರಂಜಿಸಿದ ಲಕ್ಷ್ಮಣ ಸಹಿತ ರಘುನಾಥನೂ ॥13॥

**ಭಾಮಿನಿ**

ಅತಿವಿನೋದದಿ ರಾಮು ತಾಪಸ ।
ತತಿಗಳೊಡನಿರೆ ತನ್ಮುನಿವ್ರಜ ।
ನುತಿಸಿ ರಾವಣ ಕುಂಭಕರ್ಣಪುರಂದರಾರಿಗಳು ॥
ಮಥಿಸಿದೇನಾಶ್ಚರಿಯ ನಿನ್ನಯ ।
ವಿತತ ಕೀರ್ತಿಯಬಣ್ಣಿಸುವಡಹಿ ।
ಪತಿಗಸಾಧ್ಯವೆನುತ್ತಲೆಂದರಗಸ್ತ್ಯ ಮೊದಲಾಗೀ ॥14॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇಂತು ಮುನಿಸನ್ನುತಿಯ ಕೇಳ್ದ ।
ತ್ಯಂತಹರುಷಿತನಾಗಿ ಕೌತುಕ ।
ವಾಂತಗಸ್ತ್ಯನೊಳೆಂದ ಸೀತಾ । ಕಾಂತನಂದೂ ॥15॥

ಯೆಲೆಮುನಿಪ ನೋಡೀ ಪರಾಕ್ರಮ ।
ಬಲಮಹಾ ಶೌರ್ಯಾದಿ ಗುಣದಶ ।
ಗಳನಿಗೊಲಿದವ್ಯಾರರು ವಿವರಿಸಿ । ತಿಳುಹಬೇಕೈ ॥16॥

ಲಂಕೆಯೊಳಗಿರುವಸುರರೆಡಬಲ ।
ವಂಕದಲಿ ರಾವಣಗಿದೇನೈ ।
ಕಿಂಕರರು ಪರಿಹರಿಸು ನೀ ಮಮ । ಶಂಕೆಗಳನೂ ॥17॥

ಇನಿತು ಪೇಳ್ವುದ ಕೇಳುತಾಗಲೆ ।
ಮುನಿಪ ಹಿಗ್ಗುತ ನೀ ಜಗನ್ಮಯ ।
ನಿನಗೆ ತಾನಿನ್ನೊರೆವುದಾವುದು । ಘನಚರಿತ್ರೇ ॥18॥

ನಿನ್ನಮಾಯವ ನಿನ್ನೊಳರುಹಲು ।
ಮನ್ನಣೆಗಳೀಸೇಕೆಬರಿದೈ ।
ನಿನ್ನ ಚಂಚಲವ್ಯಾಕೆನುತ ಸಂ ಪನ್ನನುಡಿದಾ ॥19॥

**ವಾರ್ಧಕ**

ತರಣಿ ವಂಶಜನೆ ಕೇಳ್ಬ್ರಹ್ಮ ನಿರ್ಮಿತದಕ ।
ರ್ಬುರ ಕುಲದಿ ಜನಿಸಿ ವಿದ್ಯುತ್ಕೇಶಿಯೆಂಬ ಖಳ ।
ಸರಸದಿಂ ನಿಜ ಸತಿಗೆ ಗರ್ಭವನ್ನಿತ್ತು ಮತ್ತವ ದೂರ ತವದೊಳಿರಲೂ ॥

ಮರಳಿ ತನ್ನಾರಿ ಪುತ್ರನ ಪಡೆದು ಬಿಸುಟಲ್ಲಿ ।
ಪುರುಷನಿದ್ದೆಡೆಗೈಯ್ಯುಲಿತ್ತ ಹರಪಾರ್ವತಿಯ ।
ರರಿತು ಶಿಶುವಂ ಕೊಂಡು ವರಸುಕೇಶಿಯುಯೆನುವಪೆಸರಿಟ್ಟು ಪಾಲಿಸಿದರೂ ॥20॥

**ಭಾಮಿನಿ**

ಬೆಳೆದು ಯೌವನ ವೇರಲವನಿಗೆ ।
ಚೆಲುವಗಂಧರ್ವಿಕೆಯ ಪರಿಣಯ ।
ಗೊಳಿಸಲಾತಗೆ ಮಾಲ್ಯವಂತ ಸುಮಾಲಿಮಾಲಿಗಳೂ ॥
ಖಳರುದಿಸಿ ವಿಧಿವಶದಿ ಲಂಕಾ ।
ನಿಳಯಿದಲಿ ತದ್ವಿಶ್ವಕರ್ಮನ ।
ಕಲಿತವಾಗಿಹ ಪುರದಿ ನೆಲೆಸಿದರತಿಪರಾಕ್ರಮದೀ ॥21॥

**ಕಂದ**

ಇಂತಾರ್ಭಟದಿಂ ಖಳರು ಮ ।
ಹಾಂತವಿಷಾದದೊಳು ಜಗವನುರೆ ಕಂಗೆಡಿಸಲ್ ।
ಚಿಂತಿಸುತಲಿ ವಿಭುಧರ್ಸುರ ।
ಕಾಂತನ ಸಾಮಿಪ್ಯ ಕೈದಿನುಡಿದರ್ಭರದೊಳ್ ॥22॥

**ರಾಗ ಕೇದಾರಗೌಳ ಝಂಪೆತಾಳ**

ಚಿತ್ತ ವಿಟ್ಟಿದರ ಕೇಳೂ । ದೇವೇಂದ್ರ ।
ಮತ್ತನಾಗುವರೆ ಪೇಳೂ ॥
ಎತ್ತ ನೋಡಿದಡಸುರರೂ । ಮೂಜಗದಿ ।
ಕತ್ತಲೆಯ ಮುಸುಕುತಿಹರು ॥23॥

ತಕ್ಕ ಕಾರ್ಯಗಳ ಹೂಡೀ । ನಾವೀಗ ।
ರಕ್ಕಸರ ಪಾಳುಮಾಡಿ ॥
ಸೊಕ್ಕುಗಳ ಮುರಿಯಬೇಕೂ । ಹೊರತವರು ।
ದಕ್ಕರೈ ನೋಡ್ವರಾಕೂ ॥24॥

ಅರಿಗಳಿಂಗಿಂಬು ಕೊಡದೆ । ಬೇಗ ಸಂ ।
ಹರಿಪುದೇಲೇಸು ಬರಿದೇ ॥
ಮರತಿರುವದುಚಿತವಲ್ಲ । ಎಂದೆನಲು ।
ಪುರುಹೂತ ಪೇಳ್ದಸೊಲ್ಲ ॥25॥

**ಶಾರ್ದೂಲವಿಕ್ರೀಡಿತವೃತ್ತ**

ಬನ್ನಿಸರ್ವರು ನೀಲಕಂಠನೆಡೆಯೊಳ್ ಬಿನ್ನೈಸಲಗಜಾಧವಾ ।
ತನ್ನಿಂದಾದುಪಕಾರಮನ್ನೆಗಳಿಸಂಪನ್ನಂ ಸದಾ ಸಲಹುವಾ ॥
ಇನ್ನೇಕೀ ಬರಿಮಾತಿನಿಂಬರುವದೇನೆನ್ನುತ್ತ ಪುರುಹೂತನು ।
ಪನ್ನಾಂಗಾಭರಣಂ ವಿಲಾಸದೊಳಿರಲ್ ಚೆನ್ನಾಗಿ ಮಣಿದೆಂದನೂ ॥26॥

**ರಾಗ ಕಾಂಭೋಜಿ ಅಷ್ಟತಾಳ**

ಲಾಲಿಸಬೇಕು ಶ್ರೀ ಸಾಂಬಾ । ಬೇಗ ।
ಪಾಲಿಸು ಭಕ್ತಾವಲಂಬ ।
ಮಾಲಿ ಸುಮಾಲಿಮತ್ತಾಮಾಲ್ಯವಂತರ ।
ನೋಲೈಸುವಂತಾ ದುಷ್ಕಾಲವು ದೊರಕಿತು ॥ಲಾಲಿಸು ॥ ॥27॥

ಆದಿಯೊಳ್ವರವ ಪಾಲಿಪಿರೀ । ನಮ್ಮ ।
ಖೇದವಕಂಡು ಸೈರಿಸಿರೀ ।
ವ್ಯಾಧಗೆ ಭಂಡಿಮತ್ತೊಡೆಯಗೆ ಪಥಮೆಂಬ ।
ಗಾದೆಯ ಕಣ್ಣಾರೆ ಕಂಡೆವೈ ನಾವಿಲ್ಲಿ ॥ ಲಾಲಿಸ ॥ ॥28॥

ಗೋವುತಾ ತ್ರಣವ ಮೆಲ್ಲುವದೂ । ಮತ್ತಾ ।
ಪಾವನಕ್ಷೀರವತಹುದೂ ॥
ಹಾವಿಗೆ ಹಾಲಿತ್ತರೇನದ ಕೊಡುವದೈ ।
ನಾವಿನ್ನೆಂಬುವದ್ಯಾಕೆ ನಮ್ಮ ಕೈವಿಡಿದುನೀ ॥ಲಾಲಿಸು॥29॥

**ಕಂದ**

ಗೀರ್ವಾಣರ ಮಾತಾಲಿಸಿ
ಪೂರ್ವಾಪರವರಿತು ರಾಜಶೇಖರಭರದಿಂ ।
ಪಾರ್ವತಿಯಂ ನೋಡುತತ
ತ್ಪೂರ್ವಾಮರರಳಿವ ಪಥವ ಸುರಪತಿಗೆಂದಂ ॥30॥

**ರಾಗ ಸುರುಟಿ ಏಕತಾಳ**

ಅಂಜಲ್ಯಾತಕಿಂತೂ । ಇಂಥಾ ।
ಅಂಜಿಕೆಯೇನ್ವಂತೂ ।
ಸಂಜೀವನ ಮಣಿರಂಜಿಸುತಿರುತಿರೆ ।
ಜಂಜಡವೇಹುಲು ನಂಜಿನ ಜೀವನ ॥ ಅಂಜ ॥31॥

ದಾರಿಯತಪ್ಪಿದಿರಿ । ಶ್ರೀ ಮ ।
ನ್ನಾರಾಯಣಗುಸುರೀ ॥
ವಾರಿಧಿಶಯನ ವಿಚಾರಿಸಿ ನಿಮ್ಮ ಮ ।
ನೋರಥವಿತ್ತುಪಚಾರದಿ ಸಲಹುವ ॥ ಅಂಜ ॥32॥

ನೊಂದಿರಿಖಳರ್ಭಯದಿಬಹುನಿ ।
ರ್ಬಂದಿಪರನುದಿನದೀ ।
ಪಿಂದಾದುದ ಮನಕೊಂದೆಣಿಸದೆ ನೀ
ವ್ಮಂದಾಗುವದ ಮುಕುಂದಗೆ ಸೂಚಿಸಿ ॥ ಅಂಜ ॥33॥

**ಕಂದ**

ಹರನೆಂದುದನರಿತಮರರು ।
ಭರದಿಂ ಮನೆಯಳಿಯನಾಗಿ ರತ್ನಾಕರನೊಳ್ ।
ಉರಗನಮೇಲ್ಮಲಗಿಹ ಹರಿ ।
ಚರಣವ ಕಂಡೆರಗಿ ನುತಿಸಿದರು ಸಂತಸದೊಳ್ ॥34॥

**ಭಾಮಿನಿ**

ಜಯ ಮಹಾಲಕ್ಷ್ಮೀ ಮನೋಹರ ।
ಜಯತು ನಿತ್ಯಾನಂದ ಮುರಹರ ।
ಜಯ ವಿನುತ ಪರಮೇಷ್ಠಿಸುರವರ ಜಯತು ಗುಣನಿಕರಾ ॥
ಜಯ ಜಯಾ ಘಸಮೂಹ ಭೀಕರ
ಜಯ ನಿಜಾಶ್ರಿತಕುಲ ಕ್ಷಪಾಕರ ।
ಜಯ ವಿನುತ ಕಮಲಾಕ್ಷ ಶುಭಕರ ಜಯವರದ ಸುಕರಾ ॥35॥

**ರಾಗ ಮಧುಮಾಧವಿ ಏಕತಾಳ**

ಶ್ರೀ ಲೋಲಾನಂದ ಮುಕುಂದ ಪರಾಕೂ ।
ಅಲಸ್ಯ ಬಿಟ್ಟೆಮ್ಮರಕ್ಷಿಸಬೇಕೂ ॥
ಮಾಲಿ ಸುಮಾಲಿ ಮಾ । ಲ್ಯವಂತರುಗಳು ।
ಬಾಳಲೀಸರು ನಮ್ಮ ತಮ್ಮಾಟೋಪದೊಳು ॥ ಶ್ರೀ ಲೋಲಾ ॥36॥

ಧರೆಯೊಳಾಗುವಯಾಗ ಭಾಗವಿನ್ನೆಂತು ।
ದೊರವುದಿಲ್ಲವು ಸಿದ್ಧ ದೈತ್ಯರ್ಗೆ ಸಂತೂ ।
ದುರುಳರ್ಗೆ ಕೈ ಜೋಡಿಸುವ ಕಾಲ ಬಂತೂ ।
ತರಳಾಕ್ಷಿಯರನೊವರವರೊಂದೇ ಗೊಂತೂ ॥ ಶ್ರೀ ಲೋಲಾ ॥37॥

ಶ್ರೀಕಂಠನಲ್ಲಿಬಿನ್ನೈಸಿದಡವನೂ ।
ವೈಕುಂಠ ಸಂತೈಪನೆಂದನೀಶ್ವರನೂ ।
ಭೂಕಾಂತೆಭಾರವನಿಳುಹಬೇಕೆಂದೂ ।
ಮಾ ಕಾಂತಗರುಹಲು ಹರಿಪೇಳ್ದನಂದೂ ॥ ಶ್ರೀ ಲೋಲಾ ॥38॥

**ರಾಗ ತೋಡಿ ಅಷ್ಟತಾಳ**

ನೊಂದಿರೇ ನೀವುನೊಂದಿರೆ ॥ ಪಲ್ಲವಿ ॥

ನೊಂದಿರೇ ಸಂಕ್ರಂದನಾದಿಗಳೆಲ್ಲಾ ।
ಇಂದೆಂಬುದೇಕೆ ಮುಂದಾಗುವ ಸೊಲ್ಲಾ ॥ ನೊಂದಿರೇ ॥ ಅನುಪಲ್ಲವಿ ॥ ॥ಪ॥

ಭೀತಿಯ ಬಿಡಿರೆನ್ನ ಮಾತನೀವ್ ಕೇಳಿ ।
ಕಾತುರಗೊಳ್ಳದೆ ಪ್ರೀತಿಯೊಳ್ ಬಾಳಿ ।
ಭೂತಾಧಿಪತಿಯೆಂದ ಚಾತುರ್ಯದೊಲವಾ ।
ಯಾತಕೆನ್ನಲಿ ದೈತ್ಯ ತಾತನಲ್ಲಿರುವಾ ॥ ನೊಂದಿರೇ ॥39॥

ದುರುಳಸುಕೇಶಿಯೆಂಬವಗೀದಾನವರೂ ।
ತರಳರು ಮೂವರಾಗಿಹರತಿಬಲರು ।
ಪುರವೈರಿಯರಿದು ಪರಸ್ಪರದಲ್ಲಿ
ಹರೆಯ ಲೆಂದೆನುತಲಟ್ಟಿದ ನಿಮ್ಮನಿಲ್ಲಿ ॥ ನೊಂದಿರೇ ॥40॥

ಆದರಾಗಲಿ ನಿಮ್ಮಾಯಾಸವ ಬಿಡಿಸಿ
ಮೇದಿನಿಭಾರಾಪಹಾರವ ಗೊಳಿಸೀ ।
ಬಾಧಿಪ ದೈತ್ಯರ ಕೊಲುವೆನೆಂದೆನುತಾ ।
ಮಾಧವನುಪಚರಿಸಿದ ನಸುನಗುತ ॥ ನೊಂದಿರೇ ॥41॥

**ಭಾಮಿನಿ**

ಹರಿನಿರೂಪಿಸ ಲಧಿಕ ಹರುಷದಿ ।
ಮರಳಿನುತಿಸುತಸುಮನಸರು ನಿಜ ।
ಪುರಕೆ ಪೋಗಲ್ಕಿಂದಿರಾಧವನೊರೆದ ವಾರ್ತೆಯನೂ ॥
ಭರದಿಮತ್ತಾ ಮಾಲ್ಯವಂತನ ।
ದರಿತು ಪೂರ್ವಜ ಮಾಲಿಯೆಂಬವ ।
ನಿರಲಿಕೊಡ್ಡೋಲಗದಿ ಬಂದರುಹಿದ ರಹಸ್ಯದಲೀ ॥42॥

**ರಾಗ ಕಾಂಭೋಜಿ ಝಂಪೆತಾಳ**

ಅಣ್ಣ ಕೇಳ್ದರಿಯೆ ಮೈ । ಗಣ್ಣ ಮುಂತಾಗಿ ಮು ।
ಕ್ಕಣ್ಣನಿದ್ದೆಡೆಯಲ್ಲಿ ಬಂದೂ ।
ಮಿಣ್ಣನೆಮ್ಮನುತೆಗೆವ । ಬಣ್ಣದಾಲೋಚನೆಯ ।
ನೆಂಣ್ಣಿಸಲ್ಕವನೆಂದನಂತೇ ॥43॥

ತಮಸಿಬಣ್ಣದಿಂದೆಸೆವ ಮೈಗಳ್ಳನಾದಹರಿ ॥
ಯುಸುರುವನು ನಿಮ್ಮಿಷ್ಟವರಿತು ।
ಅಸುರ ಸಂಕುಲವ ಸಂಹರಿಸಿ ಪೋಷಿಸುವನೆನೆ ।
ಬಸವಳಿದು ಗೀರ್ವಾಣರೆಲ್ಲ ॥44॥

ಕ್ಷೀರಾಬ್ಧಿಗೈದನ ಕಾಲ್ಗೆರಗಿರತರತರದಿ ।
ದೂರಲಚ್ಚುತಮನದಿ ಮರುಗೀ ।
ಘೋರ ಖಳರಂತರಿದು ನಿಮ್ಮನಾರೈದುಭೂ
ಭೂ ಭಾವಿಳುಹುವೆ । ನೆಂದನಂತೇ ॥45॥

ಇನಿತು ಕಾ್ಯರಗಳ ಮತ್ತನುಸರಿಸಿಗೋಪ್ಯದಿಂ ।
ದನಿಮಿಷರು ಸಮಯವೀಕ್ಷಿಪರು।
ಮನಸಿನಲಿತನ್ನಾಪ್ತಜನವೆರದು ಮುಂದೆದ್ದು ।
ಘನಯತ್ನಗಳ ನಡೆಸಬೇಕೂ ॥46॥

**ಭಾಮಿನಿ**

ಅನುಜನೆಂದುದನರಿತು ಸಾಹಸ ।
ದನುಜಕೆಂಗಿಡಿಯುಗುಳಿ ಮೀಸೆಯ ।
ಕುಣಿಸಿ ಕುಂಭಿನಿನಡುಗುವಂತಾರ್ಭಟಿಸಿ ಖಡ್ಗವನು ॥
ಘನಮದಾಂಧದಿ ಝಳಪಿಸುತ ಮು ।
ನ್ನನಿಮಿಷರ ಸಂಕುಲವ ಸವರುವೆ ।
ನೆನುತ ತನ್ನಾಪ್ತರನುಕರದಿಂತೆಂದ ಕೋಪದಲೀ ॥47॥

**ರಾಗ ಭೈರವಿ ಏಕತಾಳ**

ಕೇಳ್ದಿರೆ ನೀವಿದನೆಲ್ಲ । ನಾವ್ ।
ತಾಳ್ದಿರುವದುಚಿತವಲ್ಲಾ ।
ಸೀಳ್ದೊರಗಿಪೆನಮರರನೂ । ಮುಂದೆ ।
ಬಾಳ್ದಿರಲವರನು ಬಿಡೆನೂ ॥48॥

ಮೂರ್ಕಣ್ಣಿನ ಹರ ಬರಲೀ । ಈ ।
ದೂರ್ಕೇಳ್ದವನೈತರಲೀ ।

ಬೇರ್ಕಡಿದರೆ ಮರವೆಲ್ಲಿ । ಪೇಳ್ ।
ತಾರ್ಕಣ್ಯಗಳಿದರಲ್ಲೀ ॥49॥

ಗೀರ್ವಾರ್ಣರ ತೆಗೆದನಕಾ । ಆ ।
ನೀರ್ಮನೆಯವ ಬಿಡಬಳಿಕಾ ।
ಮೇರ್ವರಿದ್ಯಾತಕೆ ಬರುವಾ । ಮ ।
ತ್ತೋರ್ವರು ನೋಡರು ಪುರವಾ ॥50॥

ಮಾರ್ಮಲತರು ಸುರರಿಂದೂ । ಮ ।
ತ್ತಾರ್ಮಾಡುವದೇನ್ಬಂದೂ ।
ಕಾರ್ಮುಕವಿದುಸಾಕೆಂದೂ । ಖಳ ।
ಭೋರ್ಮೊರೆದನು ಮುನಿದಂದೂ ॥51॥

**ವಾರ್ಧಕ**

ಸುರಥವನಡರ್ದು ಮೂವರು ದೈತ್ಯರತಿಭರದಿ ।
ಕರಿವರೂಥ ಪದಾತಿಪರಿಪರಿ ಸೈನ್ಯದಿಂ ।
ಸುರಪುರವ ಮುತ್ತಿ ಮೇಲಾದು ಮತ್ತರಿ ಶಿರವ
ಹರಹಿದರ್ಮೇದಿನಿಯೊಳೂ ॥
ಮೊರೆವ ರಭಸದಲಿ ಕಂಡವರ ಶಿರವರಿವುತ್ತ ।
ಲಿರಲು ನಿರ್ಜರನಗರ ಜನರು ಗಾಬರಿಗೊಂಡು ।
ಮರುಗಿ ಗಜಬಜಿಸುತ್ತಲಿರದೆ ಬಂದಾಗ ತತ್ಸುರವರಗೆ ಸೂಚಿಸಿದರೂ ॥52॥

**ಭಾಮಿನಿ**

ಲಾಲಿಸಮರಾವತಿಯರಸಖಳ ।
ಜಾಲದಿಂದ್ಯೆತಂದು ಮುತ್ತಿತು ।
ಮಾಲಿಯೆಂಬವನ್ನೆದಿರುವ ದಂಡೆತ್ತಿ ರೌದ್ರದಲೀ ॥
ಏಳಬೇಕೆಂದೆನಲು ನಿರ್ಜರ ।
ಪಾಲನ್ಯೆರಾವತವನೇರ್ದು ವಿ ।
ಶಾಲತರ ಸೇನಾ ಸಮೂಹದಿ ಪೊಕ್ಕನರಿಬಲವಾ ॥53॥

**ರಾಗ ಶಂಕರಾಭರಣ ಮಟ್ಟೆತಾಳ**

ಎರಡು ಬಲ ಮಹಾ ವಿರೋಧ ವೆರದು ಖತಿಯಲೀ ।
ಭರದಿ ವೈರಿಬಲವ ಸೆಣಸಿ ತರಿದು ಧುರದಲೀ ।
ಸುರಪನಿತ್ತ ಸಮರಕಾಗಿ ಬರುವದೀಕ್ಷಿಸೀ ।
ದುರುಳ ಮಾಲ್ಯವಂತನೆಂದ । ಜರೆದು ಘರ್ಜಿಸೀ ॥54॥

ಸಕುಣಿವ ಬಗೆಯ ಬಲ್ಲೆನಿಂದ್ರ । ಕೆಣಕಿ ನೋಳ್ಪೆಯಾ ।
ನೆಣದ ಕೊಬ್ಬಿನಿಂದಕಾದು । ತೃಣಕ ಮಾಳ್ಪೆಯಾ ॥
ಪಣೆಯ ಬರಹವಡಗಿತೆನುತ । ಲೆಣಿಸು ನಿನ್ನನೂ ।
ರಣದಿ ಪಲ್ಮುರಿವೆನೆನುತ್ತ । ಕಣೆಗಳೆಸದನೂ ॥55॥

ಚೋರನೆಂದ ಮಾತನೆಚ್ಚಿ । ಹಾರಿಬೀಳ್ವದೂ ।
ಶೂರತನವಿದೇನೆಲಾಸು । ಸಾರವಲ್ಲಿದೂ ।
ದೂರುಕೇಳ್ದ ಕಳ್ಳನೆಲ್ಲಿ । ತೋರು ಬೇಗದೀ ।
ಮಾರಿಗೀವೆನೆನುತ ಸರಳ । ತೂರಲುಗ್ರದೀ ॥56॥

ದಲಂಡತನದ ಮಾತುಸುಪ್ರಚಂಡನೆಂಬುದೂ ।
ಕಂಡಿತೀಗ ಮೈಯೊಳಿರುವ ಖಂಡಿ ಪೇಳ್ವುದೂ ॥
ಗಂಡುಗಲಿಗಳಲ್ಲಿ ಲಜ್ಜಾಭಂಡನೆಂನ್ನುತಾ ।
ತಂಡಕೋಳ್ಗಳೆಸೆದನವನು ದಂಡಗಜರುಪಿ ॥57॥

ಕಪ್ಪೊಡಲಿನವನಿಗೊರೆದನಿ । ನ್ನಪ್ಪನೇ ಹರಿ ।
ಬೆಪ್ಪನಂತೆ ಮೋರೆ ಮೋರೆ । ನೋಳ್ಪೆ ನರಗುರೀ ।
ತಪ್ಪಿ ಕೊಂಡರಿದಕೆನಾನಿ । ನೊಪ್ಪಿಕೊಳ್ಳೆನೂ ।
ಚಿಪ್ಪು ಚೂರು ಮಾಳ್ಪೆನೆನುತ ಲಪ್ಪಳಿಸಿದನೂ ॥58॥

ಇಂತು ಮೂದಲಿಸುತಲಮರ ಕಾಂತಮನದಲಿ ।
ಪಂಥವಾಂತುನಿಂತು ಮಾಲ್ಯ ವಂತನಿದಿರಲೀ ।
ಕಂತುಪಿತನ ಬೈದರವನ । ನಂತಗುಣಗಳಾ ।
ಭ್ರಾಂತರರಿಯರೆನುತಲೆಚ್ಚ । ಮಂತ್ರಶರಗಳಾ ॥59॥

ಕಿಡಿಯನುಗುವಸಮ ಸರಳ । ನಡುವೆ ಖಂಡಿಸಿ ।
ಕಡಲಶಯನಗೊರದ ಹಮ್ಮ । ನೊಡನೆ ನಿಲ್ಲಿಸೀ ॥
ದಢದೊಳ ಮರಲೋಕವಾಳ್ವ । ತೊಡಕ ತಪ್ಪಿಸೀ ।
ಕೊಡುವೆನೆನುತ ಹೊಡೆದ ದುರುಳ । ಬಿಡದೆ ಝಾಡಿಸೀ ॥60॥

**ಭಾಮಿನಿ**

ಇಂತವರ ಸಂಗರದ ಕಣನೊಳ ।
ನಂತವಾರಣ ಹಯಪದಾತಿಗ ।
ಳಂತಕನ ಪುರಕೈವರಭಸವನೆಂತು ವಿವರಿಸುವೇ ॥
ಹೊಂತಕಾರಿಗಳೀರ್ವರು ರುತರ ।
ಪಂಥ ಪಾಡುಗಳಿಂದಲನಿಮಿಷ ।
ಕಾಂತನುರುಬೆಗೆ ನಿಮಿಷ ಖಳಮರನಂತೆ ಮಲಗಿದನೂ ॥61॥

**ವಾರ್ಧಕ**

ಅಸುರ ಬಲ ಕಂಗೆಟ್ಟು ಕೂಗುತ್ತ ನೀಗುತ್ತ ।
ಬಸವಳಿದು ಬಾಯ್ದೆರೆದು ಸೊರಗುತ್ತ ಲೊರಗುತ್ತ ।
ಲಸು ದಾನ ನೀಡೆಂದು ಬೇಡುತ್ತ ಲೋಡುತ್ತ ಬಿಸುಸುಯ್ದು ಧೈರ್ಯಬಿಡುತಾ ॥
ಮುಸುಕಿರುವ ಕೂರ್ಗಣೆಗೆ ಬೆದರುತ್ತ ಲೊದರುತ್ತ ।
ಹಸಗೆಟ್ಟು ಬಾದೆರೆದು ಚೀರುತ್ತ ಸಾರುತ್ತ ।
ಬಸಿವ ರಕ್ತಾಬ್ಧಿಯಲಿತೊಳಲುತ್ತ ಬಳಲುತ್ತ ದೆಸೆದೆಸೆಗೆ ಸೇರಿಕೊಳುತಾ ॥62॥

**ಕಂದ**

ಈ ತೆರದಿಂದಿಹ ಸೈನ್ಯದ ।
ಕಾತುರವನು ಕಂಡು ಮರಳಿನೆರಹುತ ದಳಮಂ ॥
ಭೂತಳನಡುಗುವವೋಲ್ಬುರು ।
ಹೂತನ ಮೇಲ್ವಾದು ಮಾಲಿ ಬಾಣ್ಗಳ ಸುರಿದಂ ॥

**ರಾಗ ಸುರುಟಿ ಮಟ್ಟೆತಾಳ**

ಕಾದಿದರವರು ಕ್ರೋಧದೊಳಿದಿರು ॥ ಪಲ್ಲವಿ ॥
ಕಾರ್ಮುಯ್ಯವನೋಲ್ಮೆಯ ಗೋ । ಳ್ಮೆರ್ಮೆಲಾಗಿಹುದೂ ॥
ಗಾರ್ಮಾರಡುವೆನೆನುತಸ್ತ್ರಾವ । ನೂಗರ್ಮಾರಡುತ ಸುರಿದೂ । ಕಾದಿದರವರೂ ॥63॥

ಖೂಳ್ಗಳಹದಿರಾ ಲಂಕೆಯ । ನಾಲ್ಗಡಿಗಳ ಮರಸೀ ।
ಕಾಲ್ಗಳಚುವೆನೆನ್ನುತ ಮೇ । ಲ್ಮೇಲ್ಗಣೆಗಳವಡಿಸೀ ॥ ಕಾದಿದರವರೂ ॥64॥

ಬಲ್ಗಣ್ಣಿನಸುರವರಕೇ । ಪಲ್ಗಿರಿಸುವೆನೆಂದೂ ।
ನಿಲ್ಗರುವವಿದೇಕೆನ್ನುತ । ಕೋಲ್ಗಳನೆಸೆದಂದೂ ॥ ಕಾದಿದರವರೂ ॥65॥

ಮೂರ್ಖರಗುಣವೆಂತೆಲೆಸಿಲೆ । ನೀಕೋರ್ಂಬುವ ತೆರದೀ ।
ತಾರ್ಕಣೆಯೇಕೆನುತಸುರನ । ತೇರ್ಕಡಿಯಲು ಭರದೀ ॥ ಕಾದಿದರವರೂ ॥66॥

ಭೋರ್ಗುಡಿಸುತ ನಿಮಿಷದೊಳೆಮ । ನೂರ್ಗಟ್ಟುವೆನೆನುತಾ ॥
ಕಾರ್ಗತ್ತಲೆ ಮುಸುಕುವ ವೋ । ಲ್ಮಾರ್ಗಣಗಳನಿಡುತಾ ॥ ಕಾದಿದರವರೂ ॥67॥

ನಾಲ್ಮೊಗನಿತಾವರ ಬಲ । ತಾಳ್ಮೆರೆಯದಿರಿಲ್ಲೀ ।
ಗಾಲ್ಮೇಲ್ಮಾಡುವೆನೆನ್ನುತ ಕೋಲ್ಮಳೆಗರದಲ್ಲಿ ॥ ಕಾದಿದರವರೂ ॥68॥

**ವಾರ್ಧಕ**

ಸರಿಬಲದೊಳುರವಣಿಸಿ ವರ ಖಡ್ಗಮುಸಲ ತೋ ।
ಮರಗದಾಕುಂತಪರಶುಗಳಿಂದಪೊದು ಮೇ ।
ಲ್ವರಿದಡರಿ ತೊಡರಿ ಪದಕರಗಳಿಂಬಿಗಿದು ಭೋರ್ಮೊರವುತ್ತ ಕಾದುತಿರಲೂ ॥
ಪುರುಹೂತನವನ ಸಂಗರದಿ ಮೈಮರೆದು ತಾ ।
ನರೆನಿಮಿಷ ಮೂರ್ಛೆಯೊಳ್ಮಲಗಿ ಚೇತರಿಸಿ ಕಂ ।
ದೆರದು ಖಳನಚ್ಚರಿಯ ಖತಿಗೆ ಬೆರಗಾಗುತ್ತ । ನುತಿಸಿದಂ ಶ್ರೀಹರಿಯನೂ ॥69॥

**ಭಾಮಿನಿ**

ವರದ ಲಕ್ಷ್ಮೀಲೋಲ ಜಯಜಯ ।
ಸರಸ ಕೀರ್ತಿವಿಶಾಲ ಜಯಜಯ ।
ಶರಣಕಿಂಕರ ಪಾಲ ಜಯ ಜಯ ಸುರವಿನುತ ವಿಜಯಾ ॥
ಸರಸಿಜಾಕ್ಷ ಮುಕುಂದ ಜಯಜಯ ।
ದುರಿತಹರ ಗೋವಿಂದ ಜಯ ಜಯ ।
ಪರಮ ನಿತ್ಯಾನಂದ ಜಯ ಜಯ ಪಾಹಿ ದಿಗ್ವಿಜಯಾ ॥70॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ನೆನೆದವರ ಮನದಲ್ಲಿ ನೆನೆಸಿಹ ।
ನೆನುವವೋಲ್ನಿಮಿಷದಲಿ ಸುರನಾ ।
ಥನ ಸಮೀಪದಿ ಶೋಭಿಸಿದ ಶ್ರೀ । ವನಧಿಶಯನಾ ॥71॥

ಸುರರು ಮೊರೆಯಿಡಲವರಿಗಭಯವ ।
ಕರುಣಿಸುತ್ತಾ ದುರುಳರೀಕ್ಷಿಸೆ ।
ಭರದಿ ಚಕ್ರವದಾನವರ ಕಂ । ಧರಕೆ ಬಿಡಲು ॥72॥

ನೋಡುತಾಖಳ ಬೆದರಿನಿಂದಿರ ।
ದೋಡಲವನ ಮಹಾಶಿರವು ಚೆಂ ।
ಡಾಡಿಸಿತುಗೀರ್ವಾಣ ಪತಿಕೊಂ । ಡಾಡುವಂತೇ ॥73॥

ಪರಮ ಪುರುಷನ ಶಿರದಿ ಪೂಮಳೆ ।
ಗರೆಯೆ ಹರುಷದಿ ದೇವನಿಕರವು ।
ಸ್ಮರಿಸಲಾ ಮಾಲಿಯಸಹೋದರ । ರೊರದರಂದೂ ॥74॥

ಅರರೇ ಕೇಳ್‌ಕ್ಷತ್ರಿಯರ ಮತವೇ ।
ಪರಿಕಿಸಲು ಮೊಗದೆಗದವರ । ಸಂ ।
ಹರಿಸಿದಿದು ಸರಿಯಲ್ಲೆನುತ ಮೇ । ಲ್ವರಿದರವನಾ ॥75॥

**ಭಾಮಿನಿ**

ದುರುಳರಿರವಂ ಕಂಡು ಮಾಧವ ।
ಗರುಡಗಟ್ಟಲ್ಗರಿಯ ಘಾಳಿಯೊ ।
ಳೆರಡು ಸಾವಿರ ಯೋಜನಕೆ ಜಜ್ಝರಿತವಾದಂತೇ ॥
ಧರೆಗಿಳಿದು ಖಳರೀರ್ವರಳುತಾ ।
ಸೊರಗಿ ಸಮಯವಿದಲ್ಲೆನುತ ತ ।
ಮ್ಮರಸಿಯರನೊಡಗೊಂಡು ಪಾತಾಳದಲಿ ನೆಲೆಸಿದರೂ ॥76॥

**ವಾರ್ಧಕ**

ರವಿಕುಲಜ ಲಾಲಿಸೈ ಬ್ರಹ್ಮಗೆ ಪುಲಸ್ತ್ಯ ಸಂ ।
ಭವಿಸಿ ತೃಣ ಬಿಂದುಮುನಿಯಾಶ್ರಮದಿ ರಂಜಿಸು ।
ನವ ನೂತನದ ಸರೋವರ ವಂದಿರಲ್ಕದರತಡಿಯಲ್ಲಿ ತಪವಿರುತಿರೇ ।
ವಿವಿಧ ಸುರವನಿತೆಯರು ಜಲೇಳಿಗೈವುತಿರೆ ।
ಲವರಂ ವಿಲೋಕಿಸುತ ತಪಕೆ ವಿಘ್ನವಿದೆನುತ ।
ಯುವತಿಯರ ಕುಲವಿಲ್ಲಿ ಗೈತಂದಡಾಕ್ಷಣದಿ ಗರ್ಭಮದು ಬರಲೆಂದನೂ ॥77॥

ಉರುಶಾಪವರಿಯದೆ ತೃಣಬಿಂದುವಿನ ಪುತ್ರಿ ।
ಬರಲೊಂದು ದಿನ ಬಸುರತಳೆದಂಜಿ ಪಿತಗರುಹು ।
ತಿರಲಿದೇಂ ಮಹಿಮೆ ಯೆಂದರಿತವಳು ನಿರ್ದೋಷಿ । ಯೆನುತ ಮುನಿಗೀಯುತಿರಲೂ ॥

ವರಪುತ್ರನಂ ಪಡೆಯೆ ವಿಶ್ರವಸುವೆಂದವನ ।
ಕರೆದು ಭಾರದ್ವಾಜನಾತ್ಮಸಂಭವೆಯನ್ನು ।
ಪರಿಣಯಂ ಗೊಳಿಸಲಾಸತಿಯಲ್ಲಿ ಸುಕುಮಾರನೋರ್ವ ಸಂಜನಿಸೆ ಬಳಿಕಾ ॥78॥

ಅನುಪಮದ ವೈ ಶ್ರವಣನೆಂಬ ನಾಮವ ಪಡೆದು ।
ಘನತಪದಿ ವಿಧಿಯ ಮೆಚ್ಚಿಸುತ ದಿಕ್ಪಾಲತ್ವ ।
ವನು ಸುವೇಗದಿ ಪುಷ್ಪಕಂಗಳಂ ಕೈಗೊಂಡು ವರಕುಬೇರಾಖ್ಯಮನ್ನೂ ॥
ವಿನಯದಿಂ ಪಡೆದು ತನ್ನಯ್ಯಂಗೆಬಿನ್ನವಿಸಿ ।
ತನಗುಚಿತವಾದ ಸುಸ್ಥಳವನ್ನು ತೋರಬೇ ।
ಕೆನೆ ಕೇಳುತರಿಭಯದಿದಾನವರ್ಲಂಕೆಯಂ ಬಿಟ್ಟಿಹರು ಕೇಳೆಂದನೂ ॥79॥

**ಭಾಮಿನಿ**

ತನಯ ನೀನಿಲ್ಲಿಹುದೆನುತ ತ ।
ನ್ಮುನಿಯೊರೆಯೆ ಕೇಳುತ್ತಲಾಕ್ಷಣ ।
ಘನ ಹರುಷದಿಂದಾ ಪುರದೊಳಿರುತಿರ್ದನೊಲವಿನಲೀ ॥

ಅನುಪಮೋತ್ಸವದಿಂದ ಲೊಂದಿನ ।
ಘನ ವಿಮಾನವಡರ್ದು ಹರುಷದಿ ।
ಜನನಿಜನಕರ ನೋಳ್ಪತವಕದಿ ಬರಲವರಬಳಿಗೇ ॥80॥

**ರಾಗ ನಾದನಾಕ್ರಿಯೆ ಅಷ್ಟತಾಳ**

ಇತ್ತಮಾಲಿಯ ಸೋದರೀರ್ವರು । ಮದ ।
ವೆತ್ತು ಪಾತಾಳದಿಂದಸುರರೂ ॥
ಪಥಿವಿಯೋಳ್ಸಂಚರಿಸುವೆವೆಂದೂ । ಚಿತ್ತ ।
ವೆತ್ತಿಳೆಗೈತಂದರವರಂದೂ ॥81॥

ಸಂತಸದಿಂದ ಪುಷ್ಪಕದಲ್ಲೀ । ಜಯ ।
ವಂತ ಕುಬೇರನ ಕಂಡಲ್ಲೀ ।
ಚಿಂತಿಸುತಾಗ ಸುಮಾಲಿಗೇ । ಮಾಲ್ಯ ।
ವಂತನಿಂತೆಂದ ದುಃಶ್ಶೀಲಗೆ ॥82॥

ಆ ಲಂಕಾಪುರದ ವೈಭವಗಳಾ । ನಾವು ।
ಪೇಳುವದ್ಯಾತಕೀಕೃತಿಗಳಾ ।
ಮೂಲೋಕದೊಳಗೆಲ್ಲಿ ತೋರಿಸೂ । ಬಂದು ।
ಕಾಲನೂರಿದನಿವ ಶಭಾಸು । ॥83॥

ಚೂಣಿಸಾದನಕೆ ನಾವಾದೆವು । ದೈತ್ಯ ।
ಶ್ರೇಣಿಕೊಡವನಿಗೊಪ್ಪಿಸಿದೆವು ।
ಮಾಣಿಕ್ಯ ವೈದನ್ಯರಲಿಕೊಟ್ಟೂ ಕ ।
ಣ್ಕಾಣದಾದುದು ಕೇಳೆಮ್ಮಯ ಗುಟ್ಟೂ ॥84॥

ವಿಧ ವಿಧ ಮಕರಂದಗಳತಂದು । ಸೃಷ್ಟಿ।
ಸಿದ ಜೇನು ಹುಳುವಿನಂದದೊಳಿಂದೂ ।
ವಿಧಿಯೋಗದೊರಕಿತೆಂದೆನೆ ಬೇಗಾ । ಕಂಡು ।
ತದನಂತರದಿ ಪೇಳ್ದನವನಾಗಾ ॥85॥

**ರಾಗ ಯರಕಲಗೌಳ ಅಷ್ಟತಾಳ**

ತಮ್ಮನಿದಾನಿಸು ತವಕವಿದಲ್ಲ ।
ಹೆಮ್ಮೆಯಿಂದಿಷ್ಟಾಯ್ತುಪೇಳುವೆನೆಲ್ಲ । ತಮ್ಮ ॥ ಪಲ್ಲವಿ ॥

ಆ ವಿಶ್ರವಸುವ ಸಂ । ಭಾವಿತ ಮುನಿಯಿಂದ ।
ಪಾವನ ಭರದ್ವಾಜ । ಮಾವನಾದುದರಿಂದ ।

ದೇವವರ್ಣಿನಿಗೀ ಪುತ್ರಾ । ಸಂಭವಿಸಿಹ ।
ದಾವ ದೇವನ ವಿಚಿತ್ರಾ । ನಾವಾ ತಕ್ಕ ।
ಭಾವದಿಂದಿವನ ನಿ । ರ್ಜೀವದೊಳಿಡುವ ಕೇಳ್ । ತಮ್ಮಾ । ॥86॥

ಮೋಸದೊಳ್ಮೋಸವ । ಘಾಸಿಗೈದಲ್ಲದೇ ।
ಸಾಸಿರಮಾತೇಕೆ । ಬೇಸರಗೊಳ್ಳದೆ ।
ಖಾಸಮತ್ಪುತ್ರಿಯಿಂದೂ । ಕೈಕಸೆಪೋಗಿ ।
ನೀಸು ಮಕ್ಕಳನೀಡೆಂದೂ । ತಮ್ಮನಿಗೆ ।
ಭಿನ್ನೈಸಲಾಕ್ಷ್ಯಣದಿ ಸಂ । ತೈಸುವ ಕರುಣದಿ । ತಮ್ಮ ॥87॥

ಆ ತರಳಾಕ್ಷಿ ಸಂಜಾತರಾದವರೆಮ್ಮ ।
ಪ್ರೀತಿಯಮೊಮ್ಮಕ್ಕ । ಳಾತರಳರು ತಮ್ಮ ।
ನೀ ತಿಳಿಮನಸ್ಸಿನಲ್ಲೀ । ಶೌರ್ಯದಲಿ ।
ಖ್ಯಾತಿಯಪಡೆವರಲ್ಲೀ । ಮುಂದಸುರರ ।
ವ್ರಾತವೇರ್ವುದು ಸುಮ್ಮ । ನ್ಯಾತಕೀ ಬರಿಮಾತು ॥ ತಮ್ಮ ॥88॥

**ಕಂದ**

ಇಂತೆನುತಲೆ ಮನೆಗೈದಿದು ।
ಕಂತುವಿನರ್ಧಾಂಗಿಯಂತೆ ರಂಜಿಪ ಸುತೆಯಂ ।
ಸಂತಸದಿ ಸುಮಾಲಿಯು ಕರ ।
ದಂತರ್ಯವ ಪೇಳ್ದನಾಗಲೇ ॥89॥

**ರಾಗ ಭೈರವಿ ಜಂಪೆತಾಳ**

ಬಿಸಜಾಕ್ಷಿ ದಾನವರ ಪೆಸರಡಗಿಜಗದಿ ಜೀ ।
ವಿಸುವದಿನ್ನೆಂತೆನ್ನೊ । ಳುಸುರುನೀಭರದೀ ॥90॥

ಕುಲದಿ ಹೆಣ್ಣೊಂದುದಿಸಿ । ಬೆಳೆಸುವಳು ಮತ್ಕುಲವ ।
ಕಳೆವಳ್ಕೆ ಹೆಂಗಳಿಂ । ದಳಿವುಳಿವುಕುಲವು ॥91॥

ವರವಿಶ್ರವಸುವಿಂಗೆ । ಹರುಷದಿ ಭರದ್ವಾಜ ।
ಕರೆದು ನಿಜಸುತೆಯ ನಿ । ತ್ತಿರುವ ಕಾರಣದೀ ॥92॥

ವನಿತೆಗೆ ಕುಬೇರ ಸಂ । ಜನಿಸಿ ಲಂಕೆಯನಾಳ್ವ ।
ಘನವಾದ ಸಂಭ್ರಮವ । ನೆನುವದೇನ್ನಗಳೇ ॥93॥

ಅದರಿಂದ ಮುನಿಯ ಸ । ನ್ನಿಧಿಗೈದಿ ಮತ್ತವನ ।
ಹದಯ ಮರುಗುವತೆರದಿ । ಮುದಗೊಳಿಸು ಭರದೀ ॥94॥

ಭೂಸುರ ಶ್ರೇಷ್ಠನಲಿ । ನೀ ಸಂತತಿಯ ಪಡೆಯೆ ।
ಲೇಸು ಮುಂದೆಮ್ಮ ಕೊನೆ । ಮೀಸೆ ಮೇಲಾತೂ ॥95॥

ನಿನ್ನಿಂದ ದೈತ್ಯಕುಲ । ದುನ್ನತಿಯ ನೋಳ್ಪನೆಂ ।
ದೆನ್ನಲಾಕ್ಷಣದಿ ಮೋ । ಹನ್ನೆಪೇಳಿದಳು ॥96॥

**ಭಾಮಿನಿ**

ರೋಗಿ ವೈದ್ಯರ ಮತವಿದೊಂದಾ ।
ತೀಗ ಮನ್ಮನಸಿನಲಿ ಮಕ್ಕಳ ।
ತೂಗಿ ಪಾಡುತ ಮುದ್ದಿಸುತ ಮೇಲ್ಬಾಲಲೀಲೆಗಳಾ ॥
ಸೋಗ ನೋಳ್ಪನೆನುತ್ತ ಮನದನು ।
ರಾಗದಿಂದಿರುತೀರ್ದೆ ಪೂರ್ವದ ।
ಯೋಗ ಘಟಿಸಿತು ತಂದೆ ನಿನ್ನಿಂದೆನುತಲೈದಿದಳೂ ॥97॥

**ಕಂದ**

ಆ ಮುನಿಯಗ್ನಿಯೊಳಾಹುತಿ ।
ನೇಮದಿ ಸಂಪೂರ್ಣ ಭಾಗವೀವವಸರದೊಳ್ ।
ಕಾಮನ ಪೊಸ ಸರಳಂದದಿ ।
ಕಾಮಿನಿ ಬಂದೆರಗಿ ನಿಲಲವಂ ನಗುತೆಂದಂ ॥98॥

**ರಾಗ ಚರಿತ್ರೆ ಸಾಂಗತ್ಯ ರೂಪಕತಾಳ**

ವಾರಿಜ ನೇತ್ರೆ ಶೃಂಗಾರದ ಚೇಷ್ಟೆ ನೀ ।
ದೋರುತ್ತ ಬಲುವೈಯ್ಯರದಲಿ ॥
ಘೋರ ಕಾನನಕೈದ । ಕಾರಣವೇನು ನೀ ।
ದಾರು ಪೇಳನುಮಾನವ್ಯಾಕೇ ॥99॥

ಕಸುರರಕನ್ನಿಕೆಯೊ ಕಿನ್ನರ ಯಕ್ಷ ಗಂಧರ್ವ ।
ತರುಣಿಯುರಗಜಾತಿಹೆಣ್ಣೋ ॥
ಪರಿಣಯಾಗಿಹುದೊ ಸ । ದ್ವರನ ಮೇಲಾಸೆಯೊ ।
ತರಳರು ಬೇಕೆಂಬ ಮನಸೋ ॥100॥

ಪತಿಯೋಳ್ಬೇಸರಗೊಂಡು । ಖತಿಯಿಂದ ಬಂದೆಯೊ ।
ಮತಿವಂತೆ ಮಾಜಬೇಡೆನಲೂ ॥
ಅತಿಚಮತ್ಕಾರ ದೃಷ್ಟಿತಳಾಗಿ ತನ್ನ ಸಂ ।
ಗತಿಯ ತಾನೆಂದಳಾತನಿಗೇ ॥101॥

**ರಾಗ ಕೇದಾರಗೌಳ ಅಷ್ಟತಾಳ**

ಪರಮ ತಾಪಸ ಕೇಳೆನ್ನಿಚ್ಛೆಂುು ನಿನ್ನಂತಃ ।
ಕರಣಕ್ಕೆ ಗೋಚರವೂ ॥
ಪುರುಷರಿದಿರು ಸ್ತ್ರೀಯರೆಂತಾದರೆನುವರೆ ।
ಮರಳಿ ನಾಚಿಕೆ ಬಿಡದೂ ॥102॥

ಎನೆ ಕೇಳ್ದು ಮುನಿಪ ಮಾನಿನಿಯೇ ನಾತಿಳಿದೆ ನೀ ।
ನಿನಿತಿಲ್ಲಿ ಬಂದುದನು ॥
ತನುಜಾತರಾಗಬೇಕೆನುವದೊಂದಿದೆ ಕೇಳೆಂ ।
ದೆನಲು ಕೈ ಮುಗಿದೆಂದಳೂ ॥103॥

ವಸುಧೆಯೊಳ್ಮಿಗಿಲಾದ ಶಿಶುಗಳಾದರೆ ತಾನು ।
ಹಸುಗೂಸನಾಡಿಸುತ ॥
ಎಸೆವ ಜೋಲ್ಲಿಳಿದು ರಂಜಿಸುವಗಲ್ಲವಮೇಲು ।
ಮುಸುಕಿನೋಳ್ಮುದ್ದಿಸುವೇ ॥104॥

ಚೆಲುವೆ ಕೇಳಗ್ನಿ ಪ್ರಜ್ವಲಿಸೆಪೂರ್ಣಾಹುತಿ ।
ಯೊಳಗಿಹ ಕಾಲದೊಳೂ ।
ಮಲತು ಕೇಳ್ದುದರಿಂದಲಿಳೆಯೊಳುತ್ಪಾತ ಮ ।
ಕ್ಕಳುಗಳಾಗುವರೀರ್ವರೂ ॥105॥

ಹಾರೈಸಿನಾರಿ ಕುಮಾರಾ ಪೇಕ್ಷೆಯುಲಿ ಮೈ ।
ಲಾರಕೈದಂತಾಯಿತೂ ॥
ಕ್ರೂರ ಮಕ್ಕಳ ನಾನಿನ್ನಾರೈವ ಬಗೆ ಯೆಂತೀ ।
ಪ್ರಾರಬ್ಧಕೇನೆಂಬೆನೂ ॥106॥

ಅಂಜದಿರಂಗನೆ ಮಂಜುಳ ಸುತನೋರ್ವ ।
ಸಂಜನಿಸುತಮರಳೀ ।
ಕಂಜಾಕ್ಷಿ ಲೋಕದಿರಂಜಿಸಿತನ್ನವ ।
ಭ್ರಂಜಿಸಿ ಬಾಳುವನೂ ॥107॥

ಇಂತಾದರಿನ್ನದರಂತೆ ಮತ್ತೊಂದುಂಟು ।
ಚಿಂತೆಯ ವಿವರಿಸುವೇ ॥
ಅಂತರಿಸದೆ ಹೆಣ್ಣುಸಂತಾನ ಕರುಣಿಸಿ ।
ಸಂತೈಸು ಕರುಣನಿಧೀ ॥108॥

ಮಡದಿ ಕೇಳ್ಕುಲದಬೇರ್ಕಡಿದು ಬೋರ್ಗುಡಿಸುವ ।
ಹುಡುಗಿಯೋರ್ವಳನು ನೀನೂ ॥
ಪಡೆವೆಯಿನ್ನಾತಂಕಕೊಡದಿರಿತ್ತಿರುವೆ ನಿ ।
ನ್ನೊಡಲಿಷ್ಟವೆಲ್ಲವನೂ ॥109॥

**ಕಂದ**

ಹರುಷದೊಳಿರಲಾ ಕೈಕಸೆ ।
ವರಮುನಿಪ ಮುನ್ನಪೇಳ್ದ ಸುವಿಧಾನದೊಳಂ ।
ಪರಮೋತ್ಪಾತದ ಲಗ್ನದಿ ।
ಬರೆದಶಮುಖಕುಂಭ ಕರ್ಣರೀರ್ವರಪಡೆದಳ್ ॥110॥

**ವಾರ್ಧಕ**

ತಳುಕಿತ್ತೈಜಲಧಿ ಮತ್ತುಳುಕಿದಂ ಫಣಿಪ ಭೂ ।
ತಳ ಕಂಪಿಸಿತು ಕೂರ್ಮನಳವಳಿದ ದಿಗ್ದಂತಿ ।
ಕುಲವದುರೆ ತಾರೆಗಳ್ಕಳೆಯಂತೆ ನೆಲ ಕುದುರೆ ಘಳಿಲನೆ ಸಹಸ್ರ ಸಿಡಿಲೂ॥
ಮೊಳಗುವಂತಾರ್ಭಟಿಸಿ ತಲೆದೋರಿ ಭೋರೆನಲ್ ।
ಪೊಲಬರಿಯದಿಂದ್ರಾದಿ ನಿಳಯದೊಳ್ಕಂಗೆಟ್ಟು ।
ಬಲಿದಿನೆಯರಂತೆಕ್ಕೆಗೊಳಿಸಿದರ್ಸತಿಯರಂದೆಳೆ ಮಕ್ಕಳಳುವ ಭರಕೇ ॥111॥

**ರಾಗ ಮಾರವಿ ಏಕತಾಳ**

ಮತ್ತಾಸತಿ ಮುದವೆತ್ತು ವಿಭೀಷಣ । ನುತ್ತಮ ಲಗ್ನದಲೀ ॥
ಸತ್ಯವಂತಸತ್ಪುತ್ರನೆನುವ ವೋಲ್ । ಪೆತ್ತಳು ತವಕದಲೀ ॥112॥
ಹರಿಕಿಂಕರನುರು ತರ ಲಾವಣ್ಯದಿ । ಪರಿಶೋಭಿಪನೆನುತಾ ।
ಸುರರಂಬರದೊಳು ಹರಸುತ ಪೂಮಳೆ । ಗರೆದರು ತೋಷಿಸುತಾ ॥113॥
ತದನಂತರಮಹ ದದುಭುತರೂಪದೊ । ಉದಿಸಲು ಶೂರ್ಪನಖೀ ।
ಒದರಿದಳೀಜಗ ವದುರುವತೆರದೊಳು । ಕದನ ಕಠೋರಮುಖೀ ॥114॥

**ವಾರ್ಧಕ**

ಈ ಪರಿಯ ಸಂತತಿಯ ನೀಕ್ಷಿಸುತ ತರಳರ್ಗೆ ।
ತಾಪಸೋತ್ತಮ ನಾಮಕರಣ ವಿದ್ಯುಕ್ತ ಚೌ ।
ಲೋಪನಯನಾದಿಯಂ ವಿಧಿಸಿ ತಜ್ಯೇಷ್ಠರೀರ್ವರ ಮಹೋತ್ಪಾತಗುಣವಾ ॥
ತಾಪರೀಕ್ಷಿಸಿ ದುಷ್ಟರೆಂದರಿದಿರಲು ಸುಪ್ರ ।
ತಾಪದಿಂದಿನದಿನಕೆ ರೂಪು ಕಲೆವರ್ಧಿತ ।
ವೈಪರೀತ್ಯದ ಬಾಲಲೀಲೆಯೊಳ್ಕುಂಭಕರ್ಣನೊಳೆಂದ ದಶಕಂಠನೂ ॥115॥

**ರಾಗ ಕೇತಾರಗೌಳ  ಅಟತಾಳ**

ತಮ್ಮ ಯಾತಕೆನಿಂತೆ ಬೇಗೇಳು ವನಕ್ಕೈದಿ ।
ಸುಮ್ಮಾನದಿಂದಾಡುವಾ ॥
ದಮ್ಮಯ್ಯಯಂದರು ಬಿಡದವರ್ಗಳ ಪಿಡಿ ।
ದೊಮ್ಮೆಗೋಳ್ಗುಟ್ಟಿಸುವಾ ॥116॥

ಅಣ್ಣನಾಬಹೆ ನೋಡು ಮುದಿ ಹಾರುವರಗುದ್ದಿ ।
ಕಣ್ಣನೀರಿಕ್ಕಿಸುವಾ ॥
ದೊಣ್ಣೆಯೊಳೊಬ್ಬೊಬ್ಬರನೆ ಸದೆಬಡಿದವ ।
ರ್ಪೆಣ್ಗಳಪಿಡಿದೊಯ್ಯುವಾ ॥117॥

ಶಭಾಸು ತಮ್ಮಹಾಗಿರಬೇಕು ಮೆಚ್ಚಿದೆ ।
ನೀ ಬಡವಿಭೀಷಣನೂ ॥
ತಾ ಬರಲೊಲ್ಲನೆನುತತಾಯಿ ಬದಿಯಲ್ಲಿ ।
ಗೂಬೆಯಂತಿರುತಿಹನೂ ॥118॥

ಮನೆಯಲ್ಲಿ ಕೇಳಣ್ಣ ನಮ್ಮಮ್ಮಬಡಿಸಿದ ।
ರಿನಿತು ಕುಕ್ಷಿಗೆ ಸಾಲದೂ ॥
ವನದಿಮಹಾ ಮಗಗಳಕೊಂದು ಹಸಿಬಿಸಿ ।
ತಿನಬೇಕು ಸವಿಸವಿದೂ ॥119॥

ಅಮ್ಮ ಕಂಡರೆಬ್ಬೈವಳೆಂಬ ಭೀತಿಯಬಿಡು ।
ನಮ್ಮ ವಿಲಾಸದಲೀ ।
ಕಮ್ಮಗಾಗಿಹ ಮಾಂಸಾಹಾರವನುಂಡಿಲ್ಲಿ ।
ಘಮ್ಮನ್ಯೈದುವ ಮರಳೀ ॥120॥

ಅಪ್ಪಯ್ಯ ಕರದೆಮ್ಮಕೊಲುವನೀನೋಡಣ್ಣ ।
ನಿಪ್ಪತ್ತು ದಿನವಾದರೂ ॥
ಸಪ್ಪಳಿಲ್ಲದೆ ನಿದ್ರೆ ಗೈವನೆಂದಾತನೆಂ ।
ದೊಪ್ಪಿಕೊಂಡ್ಯೆದಿದರೂ ॥121॥

**ರಾಗ ಮುಖಾರಿ ಏಕತಾಳ**

ಬಾಲ ಲೀಲೆಯೋಳಾಡಿದರವರು । ಭೋರ್ಗುಡಿಸುತ ।
ಖೂಳರೀರ್ವರು ಸಹೋದರರೂ ॥
ನಾಲುಕು ದೆಸೆ ಕಂಪಿಸುವೋಲ್ತಾಪಸ ।
ಜಾಲವ ಕಂಗೆಡಿಸುತ ಕುಣಿದಾಡುತ । ಬಾಲ ॥   ॥ ಪ ॥

ಇದಕೋ ಮುನಿಗಳ ಸ್ಥಳವಿಲ್ಲೀ । ಗೋಳ್ಗುಟ್ಟಿಸುವಾ ।
ಮುದುಕಾ ಬ್ರಾಹ್ಮರ ಮೋಜಿನಲ್ಲೀ ।
ಪಿಡಿದೆಳೆದೀಗಾ । ದುಗೀಗುಮ್ಮವಮುಷ್ಟಿಯಲ್ಲೀ ।
ಜೀವ ಮಾತ್ರ ಬಿಟ್ಟು । ಬದುಕಲೆನುತ ತಮ್ಮ ತಮ್ಮಲ್ಲೀ ॥
ಒದಗಿದುಖೋಯೆಂ । ದೊದರುತಮೇಲ್ವಾ ।
ದದುಬುತದಲಿತ । ದ್ಬುದರ ವಿಧಾನವ ।
ಮೆದೆಗೆಡಿಸುತ್ತಲಿ ವಿಧವಿಧ ಸಮಿಧಾ ।
ಜ್ಯದ ಸಾಹಿತ್ಯವ । ಕೆದರುತ ವನದೀ । ಬಾಲ ॥ ॥122॥

ದುರುಳರಾರ್ಭಟೆಯಿಂದಲವರೂ । ಬಾಯ್ಬಿಡುತೊದರೀ ।
ಹರಿಯೆ ರಕ್ಷಿಸುನಮ್ಮ ಖಳರೂ । ನಿಲಲೀಸರಿಲ್ಲಿ ।
ಪರಮಾಗ್ನಿಹೋತ್ರ ಕೆಡಿಸುವರು । ಎನ್ನುತ್ತ ನಾನಾ ।
ತೆರದಿ ದಿಗ್ದೆಸೆಗಯ್ಯಲವರೂ ॥
ಭರದಿಂ ಮುನಿಸತಿ । ಯರ ಪಿಡಿದೆಳದ ।
ಬ್ಬರಿಸುತಲಿರೆ ಛಲ । ವರಿದಾತಂಕದಿ ।
ಮರಳಿಸುವಾಸಿನಿ । ಯರು ನೆರೆದಾಕ್ಷಣ ।
ಮರುಗುತಲಿಂತೆಂ । ದರು ತಮ್ಮೊಡನೇ ॥ ಬಾಲ ॥123॥

**ರಾಗ ಕಾಂಭೋಜಿ ಏಕತಾಳ**

ಅಕ್ಕಯ್ಯ ನೋಡಾದರಿಂಥ । ಸೊಕ್ಕಿನಾಬಾಲಕರೂ ।
ಮಿಕ್ಕಮಾತೇನಿಲ್ಲ ನಮ್ಮ । ರಕ್ಕಸರ್ಬಾಳ್ಗೊಡರೂ ॥124॥

ಚದುರೆಕೇಳೆನಮ್ಮನೆಯವ । ರುದರ ತುಂಬಿಸುಖದೀ ॥
ಮುದದಿ ಪಾಠಪೇಳ್ವಾಗ ಬಂ । ದೊದಗಿ ತಿವಿದರ್ಭರದೀ ॥125॥

ತಂತು ಮಾತ್ರ ಪೇಳ್ವೆನಾ ಮ । ತ್ಕಾಂತಜಪದೊಳಿರಲೂ ॥
ಎಂಥಾದೊಂದು ಗಾಂಡುಗುದಿಗಿ । ಯಂತಿತ್ತ ಬೆನ್ನಿನೊಳೂ ॥126॥

ಗುಟ್ಟೆನೆನ್ನ ಕೈಯ್ಯನೆಳೆದ । ಜಟ್ಟಿಯಂಥಾ ಪೋರಾ ।
ತಟ್ಟನೆ ತಪ್ಪಿಸಿಕೊಂಡು । ಬಿಟ್ಟೋಡಿದೆ ದೂರ ।
ಅಜನ್ಯಾಕಿಂತ ಭೂಭಾರರ । ಸಜಿಸಿದನು ಪೇಳ್ವಾಣೇ ।
ಕುಜನರ ಗಾಬರಿಯೊಳೆನ್ನ । ಯಜಮಾನರ ನಾ ಕಾಣೆ ॥127॥

ದುರುಳರಿವರ ಕತ್ಯದಲ್ಲಿ । ತೊರೆವುದಾಯ್ತುಧರ್ಮ
ಗುರು ಹಿರಿಯರೆಂದೆನುವದಿಲ್ಲ । ಹರಹರೇನು ಕರ್ಮಾ ॥128॥

ಸುಮ್ಮಗಿರುವದುಚಿತವಲ್ಲ । ವೊಮ್ಮನದಿಂದೇಳೀ ।
ಗಮ್ಮನೇ ನೀವ್ಪೋಗಿ ಕೈಕ । ಸಾಮ್ಮನೊಡನೆ ಪೇಳೀ ॥129॥

**ಕಂದ**

ತವನಂತರದಲಿ ತಾಪಸ ।
ವಧುಗಳು ಮನನೊಂದು ಮರುಗಿ ಬೈವುತ ವಿಧಿಯಂ ॥
ಒದಗಿಲಿ ಕೈಕಸೆಬಳಿಗೈ ।
ದಿದು ಮರುಗುತ ಪೇಳ್ದರಾಗ ನಿಜಕಾತುರವಂ ॥130॥

**ರಾಗ ಸಾರಂಗ ಅಷ್ಟತಾಳ**

ಮಾತಲಾಲಿಸಿ ಕೇಳಮ್ಮ । ನಾವ್ ಬಡವರಿ । ನ್ಯಾತಕೆ ಬಾಳ್ವೆಯಮ್ಮ ॥
ಆ ತಪೋವನದಿತ್ವ । ಜಾತರೀರ್ವರು ಬಂದು ।
ತ್ಪಾತಮಾಳ್ಪುದನೆಲ್ಲ । ಭೂತಾಧಿಪತಿಬಲ್ಲ ॥ ಮಾತ ॥131॥

ಕತುಕರ್ಮವಳಿಸಿದರೂ । ಆಮೇಲೆ ಮ । ತ್ವತಿಗಳನಟ್ಟಿದರೂ ॥
ಧತಿಗೆಟ್ಟುಮುಂದೊಂದು । ಪಥವ ತೋರದೆ ನಿನ್ನ । ಸುತರು ಗೈವಂಥದು ।
ಗ್ೞತಿಯೇನನೊರವೆವು ॥ ಮಾತ ॥132॥

ಮಕ್ಕಳ ಮುದ್ದಿಪರು । ಆದರು ಮಾರಿ । ಮಕ್ಕಳಾದರು ಸುತರೂ ।
ತಕ್ಕಂತಿದ್ದರೆ ಮನ । ದಕ್ಕರ ಹೊರತಿಂಥಾ ।
ಸೊಕ್ಕು । ಮುದ್ದಲ್ಲ ಕೇ । ಳಕ್ಕಕೋಪಿಸಬೇಡ ॥ ಮಾತ ॥133॥

ಕಿರಿಯ ವಿಭೀಷಣನೂ । ಲೋಕಕೆ ಮೆಚ್ಚಾ । ಗಿರುವ ಸಾತ್ವಿಕನಿವನು ।
ಉರಿಮೋರೆಯವರಿರು । ವರು ಗೋಳ್ಗುಟ್ಟಿಸುವದ ।
ಸ್ಮರಿಸಲೀಕ್ಷಣ ಯದೆ । ತರಹರಗೊಳುತಿದೆ ॥ ಮಾತ ॥134॥

**ವೃತ್ತ**

ಎಂದಾ ವಾಕ್ಯವ ಕೇಳಿ ತದ್ವನದಿ ನಿಃಸ್ಸಂದೇಹದಿಂದಲ್ಲಿರೀ ।
ಮುಂದೀ ಮಕ್ಕಳ ಭಾಧೆಯಂ ನಿಲಿಸುವೆಂ ಪಿಂದಾದುದಂ ಮರೆಯಿರೀ ॥
ಒಂದೇಚಿತ್ತದಿ ಪೋಗಿ ಮತ್ತಣುಗಂ ಕುಂದಾಡಲೇಕೆನ್ನುತಾ ।
ಬಂದಾ ನಾರಿಯ ವಂದಮಂ ಕಳುಹಿ ತಾ ನಂದಾತ್ಮಜರ ಕರವುತಾ ॥135॥

**ಭಾಮಿನಿ**

ಕುವರ ರಾವಣ ಕಂದ ಕುಂಭ ।
ಶ್ರವಣ ಬಾಲ ವಿಭೀಷಣರುನೀವ್ ।

ಭವವಿರಿಂಚಾದಿಗಳ ಮೆಚ್ಚಿಸಿ ವಿವಿಧವರಗಳನೂ ||
ಲವಲವಿಕೆಯೊಳಗಾಂತು ವಿಭವದಿ |
ಭುವನದಲಿ ಸುಖ ಬಾಳಿರೆನ್ನುತ |
ವಿವರಿಸಲು ಪ್ರತ್ಯೇಕ ಮೂವರುಪೇಳ್ದರಿಂಗಿತವಾ ||136||

**ರಾಗ ಭೈರವಿ ಅಷ್ಟತಾಳ**

ಆ ಮಹಾಬ್ರಹ್ಮಗಿಂದೂ | ಮೆಚ್ಚಿಸಿಮಹಾ | ಕಾಮಿತವರವ ತಂದೂ |
ಈ ಮೂರು ಲೋಕವ ಕಂಪಿಸದಿದ್ದರೆ | ನಾಮತ್ತೆ ದಶಕಂಠನೇ ||137||

ಲೋಕೇಶನಡಿಯ ನೋಡಿ | ಆಮೇಲೆನ್ನ | ಸಾಕಾರಫಲವಬೇಡೀ |
ಲೋಕದಿಸುಖವಂತನೆನಿಸದಿದ್ದರೆ ಿ ಮತ್ತೆ | ನಾ ಕುಂಭಕರ್ಣನಲ್ಲಾ ||138||

ವಾರಿಜಾಸನ ಪಾದವ ಧ್ಯಾನಿಸಿಜ್ಞಾನ | ಸಾರಸಾಧನದೊಲವ |
ಭೋರನೆ ಕೈಕೊಳ್ಳದೀರ್ದರೆ ನಿನ್ನ ಕು | ಮಾರ ವಿಭೀಷಣನೇ ||139||

**ಕಂದ**

ಈ ವಿಧದಿಂ ನಿಜ ಮಾತೆಯ |
ಭಾವದಿ ಸಂತೈಸುತಾಗಲಪ್ಪಣೆಗೊಂಡುಂ |
ಪಾವನತರ ಜನಕಾಜ್ಞೆಯ |
ಮೂವರು ಕೈಕೊಂಡು ನಡೆದರಾ ತಪವನಕಂ ||140||

**ವಾರ್ಧಕ**

ವಿವಿಧನೇಮದಲನಿಲಹಾರದಲಿ ಮನವೀಸು |
ಕವಲೊಡೆಯದಂತೆ ಪಂಚಾಗ್ನಿ ಮಧ್ಯದಿಮಹಾ |
ರವಿಕಿರಣದಲಿ ದೃಷ್ಟಿಯನ್ನಿಟ್ಟು ನಿಂತೇಕ ಪಾದದಿಂ ಪರಮೇಷ್ಠಿಯಾ ||
ನವಭಕ್ತಿರಸವೆರೆದು ರಾವಣ ರಜೋತಪವ |
ನವನೊತ್ತಿ ನವನಧೋಮುಖನಾಗಿ ತಾಮಸದಿ |
ಭುವನಕೃತಿಹಿತ ಸತ್ವಯೋಗದಿ ವಿಭೀಷಣರ್ ತಪ ಗೈದರೇನೆಂಬೆನೂ ||141||

**ರಾಗ ಮಾಧ್ಯಮಾವತಿ ತ್ರಿವುಡೆತಾಳ**

ಉರುತರಾನುಷ್ಠಾನದಲಿ ದಶ
ಶಿರನು ನಿಜಶಿರಗಳಲಿನವ ಕಂ |
ಧರಗಳಾಹುತಿಕೊಟ್ಟು ಮತ್ತೊಂ |
ದಿರುವದಕೆ ಕೈಮಿಂಚಲೂ || ತಿಳಿವುತಾಗ ||142||

ಒದಗಿ ವಾಣೀರಮಣನೈತಂ ।
ದದುಭುತವ್ರತವೆತ್ತಿರುವ ದಶ ।
ವದನನಂ ಕೈ ಪಿಡಿದು ನಾಮೆ ।
ಚ್ಚಿದೆನು ಭಳಿಭಳಿರೆಂದನೂ । ನಗುತ ಬ್ರಹ್ಮಾ ॥143॥

ನೀ ಮಹಾಶ್ರಮಗೊಂಡೆ ಸಾಕೈ ।
ತಾಮಸಂಗೊಳದೀಗ ನಿನ್ನಯ ॥
ಕಾಮಿತಾರ್ಥವನೊರದಡೀಕ್ಷಣ ।
ನಾ ಮುದದಿ ನಿನಗೀವೆನು ॥ ಪೇಳುಮಗನೆ ॥144॥

ಎಂದನುಡಿ ಕೇಳುತ್ತಸಂತಸ ।
ದಿಂದ ರಾವಣ ಪೇಳ್ದ ಮಾನವ ।
ವಂದ ವೆನ್ನಿದಿರಲ್ಲ ಕೇಳ್ ನಿ ।
ನ್ನಿಂದಪಡವುದ ಪೇಳ್ವೆನೂ । ಲಾಲಿಸೆಯ್ಯ । ॥145॥

ಸರಸಿಜೋದ್ಭವನೆನ್ನ ಸಮರದಿ ।
ಸುರಪಮುಖ್ಯಾಮರಕದಂಬವು ।
ತರಹರಿಸಿ ಮೂಜಗವು ನಡುಗುವ ।
ತೆರದಿ ಯೋಗವ ಪಾಲಿಸೈ । ಸ್ವಾಮಿ ನೀನೂ ॥146॥

ಎನೆ ಮಹಾವಾಕ್ಯ್ವತಿ ವಿಲೋಕಿಸಿ ।
ಘನ ಮದಾಂಧಕನಿವನೆನುತ ನಿಜ ।
ಮನದಿ ತಿಳಿದು ತಥಾಸ್ತುಯೆಂದವ ।
ನನುಜನೆಡೆಗೈತಂದನೂ । ತವಕದಿಂದಾ ॥147॥

**ಕಂದ**

ಧಿಗಿಲೆನ್ನುತಲಮರಾವಳೀ ।
ಧಗಧಗಿಸುತ ದುಷ್ಟಸಾಕು ಮೂಜಗಕೋರ್ವಂ ॥
ಮಿಗೆ ಕುಂಭಶ್ರವಣನ ತಪ ।
ತೆಗೆಸುವೆವೆನುತ್ತೈದಿ ಪೇಳ್ದರಾವಾಣಿಯೊಳಂ ॥148॥

**ರಾಗ ಮಧ್ಯಮಾವತಿ ಏಕತಾಳ**

ಪಾವನ ಶಾರದಾದೇವಿ ನೀ ಕಾಯೇ ।
ಕೇವಲಾನಾಥರು ನಾವು ಕೇಳ್ತಾಯೇ । ಪಾವನ ॥ ॥ ಪ ॥

ಆ ವಿಶ್ರವಸುವರದಿಂದ ಕೈಕಸೆಯಲ್ಲಿ |
ಮೂವರುದಿಸಿಮಹಾ ತಪದೊಳಿರೇ ||
ತಾವರಾತ್ಮಜನು ತ್ರೈಜಗವನುಜೈಸೆಂದು |
ತೀವಿದ ವರವಿತ್ತ ದಶಮುಖಗೊಲಿದು || ಪಾವನ ||149||

ತದನುಜ ಕುಂಭಶ್ರವಣನೆಸಗುವ ತಪ |
ವಿಧಿಯನೀಕ್ಷಿಸುತೇನ ಪಾಲಿಪನೋ ||
ತದನಂತರದಲಿ ಸ್ವರ್ಗವ ಬಿಡುವದಕಾಗಿ |
ಮೊದಲೇ ನಾವ್ದಾರಿಯ ನೋಡಿರಬೇಕು || ಪಾವನ ||150||

ಬಿನ್ನಹವೆಮ್ಮದು ಬುದ್ಧಿಪ್ರದಾಯಕಿ |
ಯೆನ್ನುತ ನಿನ್ನೆಡೆಗೈದೆವಿಂದೂ |
ಚನ್ನಾಗಿ ಖಳನಂತಃಕರಣದೊಳಿದ್ದವ |
ನೆನ್ನುವ ಮಾತ ನೀ ತಪ್ಪಿಸಿ ಕಾಯೇ | ಪಾವನ ||151||

**ಭಾಮಿನಿ**

ತ್ರಿದಶರಾಡಿದ ನುಡಿಯ ಲಾಲಿಸಿ |
ಬೆದರದಿರಿ ನಾ ಕುಂಭಕರ್ಣನ |
ಹದಯ ಮಧ್ಯದಿನೆಲೆಸಿ ವರಗಳಕೇಳ್ವ ಸಮಯದಲೀ ||
ಮುದದಿ ಜಿಹ್ವೆಯೊಳನುಚಿತದ ನುಡಿ |
ಯೊದಗಿಸುವೆ ನೀವ್ ನೋಡಿರೆನುತಾ |
ವಿಧಿಯರಸಿ ತಾಕದಡಿದಳು ದಾನವನ ಚಿತ್ತವನು | ||152|

**ರಾಗ ಕಾಂಭೋಜಿ ಜಂಪೆತಾಳ**

ಅತಿಕಠೋರದ ತಪಸ್ಸಿನಿಂದನಿಂದಿಹ ದೈತ್ಯ |
ಪತಿ ರಾವಣಾನುಜನ ನೋಡೀ |
ವ್ರತವಿಂದು ಸಾಕು ಕಾಮಿತ ವೀವೆನೆನುತ ವಾ |
ಕ್ಪತಿಯೊರೆಯೆ ದಿತಿಜ ಸನ್ಮತದೀ ||153||

ಶಾರದಾ ಮಹಿಮೆಯಿಂದಾ ಖೂಳನಿಂತೆಂದ |
ಬೇರೇನಪೇಕ್ಷೆ ತನಗಿಲ್ಲಾ |
ಸಾರಾಮಿತಾಹಾರ ನಿದ್ರೆಯಿಂದನುದಿನ ಶ |
ರೀರವನು ಸುಖಪಡಿಸಬೇಕೂ ||154||

ಎಂದ ನುಡಿಕೇಳ್ದು ತಕ್ಷಣದಿ ವರವಿತ್ತಾಗ |
ಚಂದದಿ ವಿಭೀಷಣನ ಕಂಡೂ ||

ಕಂದನೀ ಬಹುಧನ್ಯ ತನುವ ಬಳಲಿಸಿದೆ ವರ ।
ವಂದಮಂ ಕೇಳು ಪಾಲಿಪೆನೂ । ॥155॥

ಎನುವದಾಲಿಸಿ ಮಹಾ ಸುಗುಣನೆಂದನು ನಿರತ ।
ವನಜನಾಭನಧ್ಯಾನವೊಂದೂ ।
ವಿನಯರಸ ಸುಜ್ಞಾನ ಸತ್ಸಂಗವಿವು ಮೂರು ।
ಮನವೊಲಿದು ದಯಮಾಡಿ ಸಲಹೈ ॥156॥

ಹರಿಕಿಂಕರನ ಮಾತಿಗತಿ ಹರುಷವಾಂತವನ ।
ಕರವಿಡಿದು ತತ್ಫಲವನಿತ್ತೂ ॥
ಪರಮೇಷ್ಠಿ ಮೂವರಂಮನ್ನಿಸುತಮಿಗೆ ಸತ್ಯ ।
ಪುರಕೈದನಿವರ ಬೀಳ್ಕೊಟ್ಟೂ ॥157॥

**ಭಾಮಿನಿ**

ಇತ್ತಲಾ ಚತುರಾಸ್ಯನೈತರ
ಲರ್ತಿಯಿಂವಾಕ್ಪತಿಯು ದೈತ್ಯನ ।
ಚಿತ್ತದಿಂ ಪೊರಮಟ್ಟು ಕಾಂತನ ಹತ್ತಿರೈತರಲೂ ॥
ಮತ್ತೆ ಕುಂಭಶ್ರವಣ ಯೋಚಿಸಿ ।
ವ್ಯರ್ಥವಾಯಿತು ತನ್ನ ತಪ ಸುರ ।
ಕತ್ರಿಮಕೆ ಮತಿಗೆಟ್ಟೆನಕಟಕಟೆನುತ ಹಲುಬಿದನೂ ॥158॥

**ವಾರ್ಧಕ**

ಬಳಿಕ ಮೂವರು ಮಹಾ ಹರುಷದಿಂದಿರುತಿರಲು ।
ಖಳನಿಕರವೀವಾರ್ತೆಯಂ ಕೇಳುತಾಕ್ಷಣದಿ ।
ನಲಿವುತ ಸುಮಾಲಿ ಮತ್ತಾಮಾಲ್ಯವಂತ ಮಾರೀಚಾದಿ ದೈತ್ಯರುಗಳೂ ॥
ಘಳಿಗೆಯೊಳನಂತ ಬಲ ಸಂಘಟಿಸಿ ರಾವಣನ ।
ಬಳಿಗೈದಿಮತ್ಕುಲಕೆ ರತ್ನದಂತುದಿಸಿದೈ ।
ಭಳಿರೆದಿತಿಜಾನ್ವಯವನುದ್ಧರಿಸಬೇಕೆನುತ ಕೊಂಡಾಡುತಿಂತೆಂದರೂ ॥159॥

**ರಾಗ ತುಜಾವಂತು ಜಂಪೆತಾಳ**

ದೂರ ನೀ ನಮಗಲ್ಲ ದನುಜಕುಲತಿಲಕಾ ।
ಸೇರಿಹುದು ಸಂಬಂಧ ಸಿದ್ಧಿಬುಡತನಕಾ । ದೂರ ॥ ಪ ॥

ಎರಡು ಬಂಧುತ್ವದಲಿ ಮಾರೀಚ ನಿನ್ನ ಸೋ ।
ದರಮಾವನಣ್ಣನವ ಹಿರಿಯ ಮಾತುಳನೂ ॥

ತರಳ ಕೇಳ್ನೀ ನಮ್ಮ ದೌಹೀತ್ರ ಮತ್ಸುತೆಯ ।
ಕರವಿಡಿದವನ ಪಿತ ಪಿತಾಮಹನಿಧಾನಿಸ್ಯೆ ॥ ದೂರ ॥160॥

ಎನ್ನಮೊಮ್ಮಗಳೋರ್ವಳಿಹಳೊಲವನೇನೆಂಬೆ ।
ಮುನ್ನವಳು ಸೋದರತ್ತಿಗೆನೆಂಟತನದೀ ।
ನಿನ್ನ ಚೆಲುವಿಕೆಗವಳು ತರವಹುದು ವಧುಸಾಮ್ಯ ।
ವೆನ್ನಲ್ಯಾತಕ್ಕೆ ನೋಡುಚಿತ ಮನಕಹುದೂ ॥ ದೂರ ॥161॥

ವಾವೆವರ್ತನೆ ಸುತ್ತಿ ಬೆರಸಿಕೊಂಡಿಹುದು ನಿನ ।
ಗಾವುದರಿಯದು ಮೊನ್ನಿನೆಳಗೂಸು ಮಗನೇ ।
ಈ ವಿವರವಂತಿರಲಿ ಮುಂದಾಹ ಕಾರ್ಯಗಳ ।
ಭಾವವೆಂತೆನೆ ಮಾಲ್ಯವಂತನಿಂತೆಂದಾ ॥ ದೂರ ॥162॥

**ರಾಗ ಪಂತುವರಾಳಿ ರೂಪಕತಾಳ**

ಮನೆಯ ಗೆದ್ದು ಮಾರಗೆಲುವ ಮತವ ಮಾಡಿರೀ ।
ದನುಜರೀಗ ಕೂಡಿ ಚಿತ್ತದನುವ ನೋಡಿರಿ ॥ ಮನೆಯ ॥ ಪ ॥

ಧನ್ನೃಪವಿಶ್ರವಸುವಿನಾದಿ ।
ವನಿತೆಯಲ್ಲಿ ಜನಿಸಿ ಮರಳಿ ।
ಜನಕನಾಜ್ಞೆಯಿಂದನಮ್ಮ
ಧನುಜರಾಳುವಾ ॥ ಘನಸುಲಂಕೆಯಲ್ಲಿ ಮೆರೆವ ।

ನನುಜನೀಕುಬೇರನೆನುವ ।
ದಿನಿತು ಕಥೆಯನೀಗ ದಶಾ । ನನಗೆ ವಿವರಿಸೀ ॥ ಮನೆಯ ॥163॥

ರಾಜ ರಾಜನಾ ಪುರದೊಳು ।
ರಾಜಿ ಸುತ್ತಲಿರುವನೀ ಸ
ಮಾಜ ನೆರಹಿಸುತ್ತ ಲವನ । ಗೋಜು ತಪ್ಪಿಸೀ ॥
ರಾಜಮುಖಿಗೆ ವಿಭವದಲ್ಲಿ ।
ರಾಜಪಟ್ಟಗಟ್ಟಲಾ ಸ ।
ರೋಜಜಾತನಿತ್ತ ವರಕೆ । ನೈಜ ಕಾರ್ಯವೈ । ಮನೆಯ ॥164॥

ಮುದದೊಳೀ ಪ್ರಹಸ್ತ ಪೋಗಿ ।
ಚದುರತರಗಳಾಡಿ ಧನ್ನೃಪ।
ಕದನಕೊದಗಿಬ್ರಹನೊ ಪುರವ ಬೆದರಿ ಬಿಡುವನೋ ॥
ಹದನವರಿತು ವರೆದಡೀಗ ।

ಲದಕೆ ತಕ್ಕುಪಾಯ ವೆಸಗಿ ।
ಮುದದಿ ದೈತ್ಯ ದಳವ ಜೋಡಿ । ಸಿದರೆ ವಿಹಿತವೈ । ಮನೆಯ ॥165॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಧನುಜರಾಡಿದ ನುಡಿಯ ಲಾಲಿಸಿ ।
ವಿನಯದಲಿ ದಶವದನ ಪೇಳಿದ ।
ಧನಪತಿಯ ಸಹಜಾತ ತಾನೆಂ । ದೆನುವಿರಲ್ಲಾ ॥166॥

ಅಣ್ಣನೊಡನೀ ಕದನಕಾರ್ಯವು ।
ಹಣ್ಣುವದು ತರವಲ್ಲ ದಿತಿಜ ವ ।
ರೇಣ್ಯರೆಂತಿದನೊರದಿರೆಂದೆನೆ । ಬಣ್ಣಿಸಿದರೂ ॥167॥

ವೈರಮಾರ್ಗದ ನೆಂಟತನದ ವಿ ।
ಚಾರವೇ ದಾನವರು ದಿತಿಯ ಕು ।
ಮಾರರದಿತಿಯ ಸುತರು ನಿರ್ಜರ । ವಾರವಿನಿತೂ ॥168॥

ಪರಮ ಕಶ್ಯಪ ಸತಿಯರುಗಳೀ ।
ರ್ವರುಕಣಾ ಪೂರ್ವದಲಿ ಗೀರ್ವಾ ।
ಣರ ವಹಿಸಿ ಹರಿ ತೆಗದ ದೈತ್ಯರ । ಬಿರುದುಗಳನೂ ॥169॥

**ಭಾಮಿನಿ**

ಮತ್ತವರ ಮತವರಿದು ದಶಮುಖ ।
ನರ್ತಿಯಲಿಕಂಡಾ ಪ್ರಹಸ್ತನಿ ।
ಗುತ್ತಮದ ನಿಜ ಮಂತ್ರಿತನವನ್ನಿತ್ತು ಮನ್ನಿಸುತಾ ॥।
ವಿತ್ತವನ ಬಳಿಗೈದಿ ಶೀಘ್ರದಿ ।
ಚಿತ್ತವತ್ತಿಯ ತಿಳಿದು ಬಾರೆನ ।
ಲಿತ್ತ ಲಂಕೆಗೆ ಬರಲವಂಸತ್ಕರಿಸಿ ಕೇಳಿದನೂ ॥170॥

**ಕಂದ**

ಪರಿಣಾಮವೆ ನಮ್ಮನುಜರು ।
ಸರಸದಿ ಮೆರವುತ್ತಲಿಹರೆ ದಾನವ ಕುಲದೊಳ್ ॥
ನೆರೆ ಕೋವಿದನೀ ಬಂದಿಹ ।
ಪರಿಯೇನೆನಲಾ ಪ್ರಹಸ್ತ ಮೆಲ್ಲನೆನುಡಿದಂ ॥171॥

**ರಾಗ ಕಾಂಭೋಜಿ ಅಷ್ಟತಾಳ**

ಚೆನ್ನಾಗಿ ಕೇಳ್ದನಪಾಲಾ । ಮುಂದಕೆ ನಾನಿ ।
ನ್ನೆನ್ನುವ ನುಡಿಸಾನುಕೂಲಾ ॥ ಚೆನ್ನಾಗಿ ॥ ಪ ॥

ನಿನ್ನನುಜನ ಮತವಿಟ್ಟೂ । ಈ ನಗರವ ।
ತನ್ನಾಧೀನಕೆ ಬಿಟ್ಟು ಕೊಟ್ಟೂ ।
ಮನ್ನಿಸೆ ಲೇಸು ಮುಂ । ದಿನ್ನಿಲ್ಲಿ ತಕ್ಕಂಥ ।
ಸನ್ನಾಹವೆರದೀಗ । ಬೆನ್ನಟ್ಟಿ ಬರುವನು ॥ ಚೆನ್ನಾಗಿ ॥172॥

ನೀವವರುಗಳೊಂದು ಸಿದ್ಧಾ । ಈ ವಿಷಯದಿ ।
ನಾವಿಲ್ಲಿ ಬರುವದು ಬದ್ಧಾ ॥
ಖಾವಂದರೊರದುದ । ಸೇವಕರೆಸಗುವ ।
ಭಾವವು ಜಗದಿ ಸ್ವಭಾವಿಕವಾಗಿದೆ ॥ ಚೆನ್ನಾಗಿ ॥173॥

ಘೋರ ದಾನವರ ಸಂಕುಲವು । ಭೋರ್ಗುಡಿಸುತ್ತ ।
ಸೇರಿ ದಶಾಸ್ಯನೊಳಿಹವು ॥
ಕೂರುಗುರಿಂ ಪೋಪ । ಬೇರನುಸವರೆ ಕು ॥
ಠಾರವೇತಕೆ ಚಮ । ತ್ಕಾರವಗ್ರಹಿಸುನೀ ॥ ಚೆನ್ನಾಗಿ ॥174॥

**ಭಾಮಿನಿ**

ಚದುರಮಂತ್ರಿಯ ಭಾವವೀಕ್ಷಿಸಿ ।
ಮೊದಲಸುರರಾಳಿರುವ ಪುರವಿ ।
ನ್ನಿದಕೆ ಕದನವದ್ಯಾಕೆ ದಶಮುಖನನ್ಯತನಗಲ್ಲಾ ॥
ಮುದದೊಳೀಕ್ಷಣ ಬರಲಿ ಸರ್ವರು ।
ತದನುಸಾರದ ನಗರವೀ ಭುವ ।
ನದಲಿ ಶಿವನೇ ಕೊಡುವನೆನುತಾದರಿಸಿ ಕಳುಹಿದನೂ ॥175॥

**ರಾಗ ಭೈರವಿ ಜಂಪೆತಾಳ**

ಇಂತವನ ಬೀಳ್ಕೊಟ್ಟು । ಚಿಂತಿಸುತ ಧನೃಪಪಿತ ।
ನಂತವಕದಲಿ ಕಂಡು । ನಿಂತು ವಂದಿಸಲೂ ॥176॥

ಬಾ ಮಗನೆ ಮೊಗಭಾವ । ತಾಮಸದೊಳಿದೆ ನಿನ್ನ ।
ಕಾಮಿತವ ಪೇಳೆನುತ । ಲಾ ಮುನಿಪ ನುಡಿಯೇ ॥177॥

ತವ ಪದಾನುಗ್ರಹದಿ । ತವೆಹರುಷದಿಂದ ನಗ ।
ರವನಾಳುತಿರ್ದೆನೀ । ದಿವಸ ಪರಿಯಂತಾ ॥178॥

ಭರದಿ ದಶಮುಖನು ಕಾ । ದಿರುವ ನೈ ತಂದು ಮ ।
ತ್ಪುರವ ಬಿಡಬೇಕೆನುತ । ಲೊರದರಿನ್ನೇನೂ ॥179॥

ತಂದೆಕೇಳ್ಕುಜನ ಸಂ । ಬಂಧದೊಳಗಿಹುದೆಂತು ।
ಮುಂದೇನು ಮಾರ್ಗವೆನ । ಲೆಂದವಿಶ್ರವಸೂ ॥180॥

**ಭಾಮಿನಿ**

ಉತ್ತಮೋತ್ತಮ ವಾತಣುಗದು ।
ವರ್ತ್ತರಿಂದಹಮಾನದಿಂದಲಿ ।
ಸತ್ಯವಂತರ ನಿಷ್ಠುರವೆ ಕಡುಲೇಸು ನಿನಗಿನ್ನೂ ॥
ಉತ್ತರದ ದಿಗ್ಭಾಗದಳಕಾ ।
ಪತ್ತನದಿಸುಖದಿಂದಲಿರುನೀ ।
ಕತ್ತಿವಾಸನ ಸಖ್ಯವಾಹದೆನುತ್ತಲವ ನುಡಿದಾ ॥181॥

**ವಾರ್ಧಕ**

ಪಿತನಾಜ್ಞೆಯನ್ನಾಂತು ನವರತ್ನ ಖಚಿತ ನಿ ।
ರ್ಮಿತವಾಗಿ ಮೆರೆವಳಕಪುರವರದಿ ನೆಲಸಿ ಧನ ।
ಪತಿಯಾಗಿ ದಿಕ್ಪಾಲಕತ್ವಮಂಪಡೆದು ಶಿವಸಖನೆನಿಸಿಕೊಂಡಿರ್ದನೂ ॥
ದಿತಿಜರಲ್ಲಿರುತಿರಲು ತನ್ಮಂತ್ರಿಮುಖದಿ ನೀ ।
ವತಿ ಬೇಗದಿಂದೇಳಬೇಕೆನುವದಂ ್ರಹಿಸಿ ।
ರಥವೇರುತೈ ತರುವ ರಾವಣನ ಬಳಿವಿಡಿದು ಲಂಕೆಯಂಪೊಕ್ಕರೊಲಿದು ॥182॥

ಮಣಿವಿಷ್ಟರದೊಳು ದಶಕಂಧರನ ಕುಳ್ಳಿರಿಸಿ ।
ಝಣ ಝಣತ್ಕಾರದಿಂದುಲಿವ ವಾದ್ಯಂಗಳಿಂ ।
ಕುಣಿವುತ್ತ ತೋಷದಿಂ ರಾಜಪಟ್ಟವಕಟ್ಟಿ ನೆರೆದೀರ್ದರವನೆಡೆಯೊಳೂ ॥
ಗಣನಿಲ್ಲದಾಹಾರ ಸುಖನಿದ್ರೆಯೋಳ್ಮಲಗಿ ।
ದಣಿದನೈ ತತ್ಕುಂಭಕರ್ಣಂಸದಾವಿಭೀ ।
ಷಣ ಹರಿಧ್ಯಾನದಿಂ ಸದ್ಗುಣಕಲಾಪದಿಂದನುದಿನಂ ರಂಜಿಸಿದನೂ ॥183॥

**ರಾಗ ಸವಾ ಏಕತಾಳ**

ಧನುಜಾಧಿಪ ತಾನೀಪರಿ ಯೋಗದಿ ।
ಮಣಿವಿಷ್ಟರವೇರ್ದಿರಲೊಂದೂ ॥
ದಿನ ಶೂರ್ಪನಖಿಯು ಘನ ಮದದಲಿ ಯ ।
ವ್ವನ ಕಂಗಜತಾಪದಿನೊಂದೂ ॥184॥

ಇನಯನೊಳಾಡುವ ಮನದುತ್ಸಹದಲಿ ।
ಕನಲಿ ಪಿಶಾಚಿಯದ್ಧ್ವನಿಗ್ಗೈದೂ ॥
ಘನ ಬೇಗದಿನಡೆತಂದಗ್ರಜನೊಡ ।
ನಿನಿತುಸುರಿದಲಾಕ್ಷಣ ಸುದೂ ॥185॥

**ರಾಗ ಸಾರಂಗ ಅಷ್ಟತಾಳ**

ಅಣ್ಣ ನೀ ಮದುವೆ ಮಾಡೂ । ಪ್ರಾಯದೊಳೆನ್ನ ।
ಬಣ್ಣ ಹ್ಯಾಗಿಹುದು ನೋಡೂ ॥
ಸಣ್ಣವಳಿಗೆ ತಕ್ಕ ಸರಿಯಾದ ಪುರುಷರ ।
ಕಣ್ಣಾರೆ ಕಂಡರೆ ಕುಣಿದಾಡುತಿದೆ ಮೋಹ ॥ ಅಣ್ಣ ॥186॥

ಚಿತ್ತಜನಾಟದಲೀ । ಈಕುಚವೆದೆ । ಗೊತ್ತಿ ವಿಲಾಸದಲೀ ॥
ಮತ್ತೀದಂತಗಳೂರಿ ಮುತ್ತಿಡುತಾಕ್ಷಣ ।
ಹೊತ್ತಗಲದೆಗಂಡನರ್ತಿಯೋಳ್ಕುಣಿಸುವೆ ॥ ಅಣ್ಣ ॥187॥

ಅಹಹ ನಾನೆಂತರೀಕೂ । ಮತ್ಕಾಂತಗೆ ।
ಬಹುಜನ್ಮ ಸುಕತ ಬೇಕೂ ॥
ಮಹಿಯೊಳು ಹೆಣ್ಣು ತುಂಬಿಹುದಾದೆಯು ತನ್ನ ।
ಸಹಸಕ್ಕಿನ್ನೆಣಿಯುಂಟೆ ಗ್ರಹಿಸು ನೀ ಶೀಘ್ರದಿ । ಅಣ್ಣ ॥  ॥188॥

ಎನ್ನಯ ಚೆಲುವಿಕೆಗೇ । ತಕ್ಕವನಾಗಿ ।
ಮನ್ನಿಸಬೇಕು ಹ್ಯಾಗೇ ॥
ಚನ್ನಾಗಿರತಿಸುಖ । ವನ್ನೀಯದಿರ್ದಡೆ
ನಿನ್ನಾಣೆ ನಿಮಿಷದಿ ತಿನ್ನುವೆ ನವನನ್ನು । ಅಣ್ಣ । ॥189॥

**ವೃತ್ತ**

ತಂಗೀಭಾವವ ಕೇಳ್ದು ತತ್ಪಳವರೆಂ ಬಿಡ್ಚಿಂತೆಯಂ ಸ್ವಾಂತದೊಳ್ ।
ಶೃಂಗಾರಂಗಳ ತೋರ್ಪ ತಕ್ಕ ಪತಿಯಂ ತಂದೀವೆ ನಾ ತೀವ್ರದೊಳ್ ॥
ಅಂಗೀಕಾರದ । ಗೇಹಕ್ಕೈದಿ ಮಿಗೆ ನೀಂ ಸೇರೀರ್ಪುದೊಳಗೆನ್ನುತಾ ।
ಮಾಂಗಲ್ಯಾತುರದಿಂದಲೆಂದ ನಸುರಂ ಮಾರೀಚನಂಕರವುತಾ ॥190॥

**ಭಾಮಿನಿ**

ಮಾವಕೇಳ್ಭೈಭಗಿನಿಗೀಕ್ಷಣ ।
ನೀವರನ ತರಬೇಕು  ನಿನಗಾ ।
ಭಾವವನು ನಾನೊರವೆ ವಿದ್ಯುಜ್ಜಿಹ್ವ ನೆಂಬುವನೂ ॥

ಪಾವನದ ಕೌಳಿಕದ ಮನೆಯವ ।
ನೀವಿವಳ ದುರ್ಗುಣವನುಸುರದೆ ।
ಕೋವಿದಾಂಗನೆಯೆನುತವಂಚಿಸಿ ಘಟಿಸು ಕಾರ್ಯವನೂ ॥191॥

**ಕಂದ**

ಮೊದಲವನೇ ಮಾರೀಚಂ ।
ತದನಂತರ ಕಾ್ಯರದೆತ್ನ ವೆಣಿಸುತ ಮನದೊಳ್ ।
ಮುದದಿಂ ವಿದ್ಯುಜ್ಜಿಹ್ವನ ।
ಸದನಕೆ ಬಂದವನ ಕರೆದು ಕರ್ಣದಿ ಪೇಳ್ದಂ ॥192॥

**ರಾಗ ಕೇತಾರಗೌಳ ಝಂಪೆತಾಳ**

ಬಾ ಮಗನೆಯೇಳು ಬೇಗಾ । ನಿನಗೊಂದು ।
ಕಾಮಿನಿಯ ತೋರ್ಪೆನೀಗಾ ।
ತಾಮಸವಿದೇಕೆ ನೋಡೂ । ನೀನವಳ ।
ಕಾಮನಾಟದಲಿ ಕೂಡೂ ॥193॥

ನಿನಗೆ ತಕ್ಕವಳು ನಾರೀ । ಚಂದದಲಿ ।
ಮನುಮಥನಕ್ಕೆ ಕಠಾರೀ ।
ಅನುದಿನವು ನಿನ್ನ ಗುಣವಾ । ಕೇಳುತ್ತ ।
ಮನದಿ ಚಿಂತಿಪಳು ಚೆಲುವಾ ॥194॥

ಹೆಣ್ಣುಗಳು ಸೋಲಬೇಕೂ । ಅವಳ ಮೈ ।
ಬಣ್ಣವೇ ಜಗಕೆ ಸಾಕೂ ।
ತಿಣ್ಣಬಲ್ಮೊಲೆಯ ಬಗೆಯಾ । ತಿಳುಹೆಮು ।

ಕ್ಕಣ್ಣಗಸದಳ ನಿರ್ಣಯಾ ॥195॥

ಈರೇಳು ಭುವನಂಗಳಾ । ನಡುಗಿಸುವ ।
ಧೀರನಾಗಿಹ ದಶಗಳಾ ॥
ಘೋರತರ ಕುಂಭಕರ್ಣಾ । ಭಾವಗಳು ।
ದಾರಿದಿರು ಸುಗುಣಪೂರ್ಣಾ ॥196॥

ಕೈಕಸಾದೇವಿಯತ್ತೆ । ಕಿರಿಯಯ್ಯ ।
ನಾ ಕಾಣೊನಿನಗೆ ಮತ್ತೇ ॥
ಆ ಕಮಲಭವ ಪೌತ್ರನೂ । ವಿಶ್ರವಸು ।
ಲೋಕವರಿಯಲು ಮಾವನೂ ॥197॥

ಆ ಹರೆಯತರದ ಹೆಣ್ಣಾ | ಭೋಗಿಸದ |
ದೇಹ ವಿನ್ಯಾತಕಣ್ಣಾ ||
ನಾ ಹೇಳ್ವೆಬಗೆಯನೆಂದೂ | ವರೆಯಲು |
ತ್ಸಾಹದಿಂ ಪೇಳ್ದನಂದೂ ||198||

**ಭಾಮಿನಿ**

ಹೆಣ್ಣುಹೊನ್ಮಣ್ಣುಗಳನಿತ್ತರೆ |
ಯೆಣ್ಣಿಸುತ ಸಂಗ್ರಹಿಪುದುತ್ತಮ |
ಪುಣ್ಯಹೀನರಿಗೀ ಪರಿಯ ಸಂಯೋಗ ಘಟಿಸುವದೇ ||
ಮಿಣ್ಣನೈದುವೆ ನಿನ್ನ ಸಂಗಡ |
ಕಣ್ಣಿನಲಿ ನಾನವಳ ಮುಖಮೈ |
ಬಣ್ಣದೊಲವ ನಿರೀಕ್ಷಿಸಿದಮೇಲ್ಮದುವೆಯಾಗುವೆನೂ ||199||

**ರಾಗ ಕೇತಾರಗೌಳ ಅಷ್ಟತಾಳ**

ಇಂತೆಂದ ಮಾತಲಾಲಿಸುತಾಗ ಮಾರೀಚ |
ಕಾಂತೆಯ ತೋರ್ಪೆನೆಂದೂ |
ನಿಂತು ದೂರದಿ ನೋಡಬೇಕು ಪೇಳಿರುವೆ ಕೇ |
ಳಂತರಂಗದೊಳಿಹಳೂ ||200||

ಎನುತ ಸಂತೈಸಿ ಮತ್ತವನೊಡಗೊಂಡು ಪ |
ತ್ತನಕೆ ಮುಂದೈತರುತಾ |
ಅನಿತರೊಳ್ಸನ್ನೆಗೈಯ್ಯಲು ಶೂರ್ಪನಖಿಸನ್ಮೋ |
ಹಿನಿಯಂತೆ ಬಂದಳಲ್ಲೀ ||201||

ಇಂದೀವರಾಕ್ಷಿ ಶಿಖಾಮಣಿಯೊ ಚೆಲ್ವ |
ಕಂದರ್ಪನರಗಿಣಿಯೋ |
ಚಂದದ ಕಣಿಯೊ ತಾನಾರೆಂಬವೋಲ್ಮಿಂಚಿ |
ನಂದದಿ ತೋರ್ದಳಾಕೇ ||202||

ದೂರದೊಳೀವಿದ್ಯುಜ್ಜಿಹ್ವನವಳಕಂಡು |
ಮಾರನಕಣೆಗಳುಕೀ |
ಮಾರೀಚನೊಡನೆ ನೀಮದುವೆಯಮಾಡಿ ಶ |
ರೀರವನುಳುಹೆಂದನೂ ||203||

ನಿನ್ನಿಂದಾದುಪಕಾರವೆಂದಿಗು ಮರೆಯೆನು |
ಬನ್ನಣೆ ಮಾತಲ್ಲಿದೂ |

ಚೆನ್ನಾರ ಚಲುವೆಯತೋರ್ದೆ | ಹೆಣ್ಣಿದುಸರಿ |
ಯಿನ್ನೆಂದು ಲಗ್ನವಯ್ಯ ||204||

**ವಾರ್ಧಕ**

ಇಂತೆಂದು ಪೇಳ್ದ ವಿದ್ಯುಜಿಹ್ವಗೊಡಬಡಿಸಿ |
ಸಂತಸದಿ ಪಟ್ಟಣವ ಶಂಗರಿಸಿವಿಧಿಯಿಂದ |
ಮಂತ್ರವಾದ್ಯಂಗಳ ಸುಘೋಷದಿಂ ತೆರೆಪಿಡಿದು ವರನಿರೀಕ್ಷಣೆ ಸಮಯದೀ ||
ತಾಂ ತವಕದಿಂದಲಂತರ ಪಟವ ತೆಗೆಯೆಮ |
ತ್ತಂತಕನ ಮತ್ಯುರೂಪಿನೊಳೆಸೆವ ತರುಣಿಯಂ |
ನಿಂತುನೋಡುತ್ತ ಮೂರ್ಛಿತನಾಗಿ ಭೋಯೆನುತ ನಡುನಡುಗುತಿಂತೆಂದನೂ ||205||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮಾರಿಯೇ ಹೊರತಿವಳು ಲೋಕದ |
ನಾರಿಯಂದವಿದಲ್ಲ ಮೊದಲೆವಿ |
ಚಾರಿಸದೆ ನಾ ಸೇರ್ದೆ ಮುಂದೇ | ನ್ದಾರಿಯೆನಗೇ ||206||

ದೈವಯೋಗದೊಳೀಮಹಾದು |
ರ್ದೈವದೊಡಲೊಳು ಪೊಗದೆ ಸೌಖ್ಯದಿ |
ಜೀವಿಸಿದ ಮೇಲಿವಳ ಕೂಡಿದ | ಭಾವವಹುದೂ ||207||

ವಡನೆಬಾದೆರದೋಡುತಿರೆಬೆಂ |
ಬಿಡದೆ ಬಳಿಕಾ ಶೂರ್ಪನಖಿಕೈ |
ವಿಡಿದು ನಾನಿನ್ನರಸಿ ನೀಕಂ | ಗೆಡುವದೇಕೇ ||208||

ಅನುದಿನದೊಳು ವಿನೋದದಿಂದಲಿ |
ತನುವ ಸುಖಿಸುವೆ ನೋಡೆನುತಬ |
ಲ್ಪಿನಲಿ ಕುಚದಿಂದೊತ್ತಿ ತಂದಳು | ಕುಣಿವುತೊಡನೇ ||209||

**ಭಾಮಿನಿ**

ಅತಿಭಯದಿ ಗೋಳ್ಗುಟ್ಟುತಿಹ ನಿಜ |
ಪತಿಯ ಮಂಟಪದೊಳಗಿಳುಹಿಮ |
ತ್ತತಿ ವಿನೋದಗಳಿಂದ ಸಂತಸಗೊಳಿಸಿ ದಾನವರೂ |
ವಿತತ ವೈಭವದಿಂದಲಾದಂ |
ಪತಿಗಳಿಗೆ ಶುಭವೆರಸಿಭೀಕರ |
ಸತಿಯರಾರತಿಯೆತ್ತಿ ಪೂರೈಸಿದರು ಲಗ್ನವನೂ ||210||

**ದ್ವಿಪದಿ**

ಈ ವಿಧಧಿ ತಂಗಿಯ ವಿವಾಹವನು ಕರಿಸೀ ।
ಆ ವಧೂವರರ ಸಂತಸದಿಸತ್ಕರಿಸೀ ॥211॥

ಇರಲೊಂದು ದಿವಸ ದಶಕಂಠನೋಲಗದೀ ।
ನೆರೆಜಾಣ ಮಂತ್ರಿಯನು ಕರೆದೆಂದು ಮುದದೀ ॥212॥

ವನ ಬೇಟೆಯಾಡಬೇಕೆಂಬ ಮನವಿಹುದೂ ।
ಅನುವಾದ ಸನ್ನಾಹಗಳ ಕೂಡಿಸುವದೂ ॥213॥

ಅಂತಃಪುರಾಂಗನೆಯರೆಲ್ಲರೈತರಲೀ ।
ಹೊಂತಕಾರಿಗಳೀಗ ಸಂಘಟಿಸಿಬರಲೀ ॥214॥

ಮೇಲ್ಮಿಕವ ಹಿಡಿವ ಜೂಲ್ನಾಯಿಗಳ ತರಿಸೂ ।
ಲೋಲ್ಮಾಡಬೇಕು ಹೊಲಗಾವ್ಲವರಕರಸೂ ॥215॥

ಎಂದೆನಲು ತತ್ಕ್ಷಣದಿ ತರಿಸಲವ ನೋಡೀ ।
ಚಂದದಿಂ ಪೊರಮಟ್ಟು ಸಂದಣಿಯಗೂಡೀ ॥216॥

ಅದುಭುತಾರ್ಭಟದಿ ವಿಪಿನಾಂತರದೊಳಂದೂ ।
ವಿಧ ವಿಧದ ಖಗ ಮಗಗಳರಸುತ್ತೈತಂದೂ ॥217॥

ಬಲೆಯ ಬೀಸುತಲಿಕೋ ಕರಡಿ ಪಂದಿಗಳೂ ।
ಸಿಲುಕಿದವು ಗುರಿನೋಡಿ ಕೆಡಹು ಬೇಗದೊಳೂ ॥218॥

ಎನುತ ನಾನಾತೆರದಿ ಪೊಗುತ ಸನ್ನೆಯಲೀ ।
ಘನಜೀವಿಗಳ ಸವರುತೀರ್ದರಡವಿಯಲೀ ॥ ॥219॥

ಸಂತಸದಿ ದಶಶಿರನು ಸರ್ವರೊಡಗೂಡೀ ।
ಮುಂತೆಸದವಿಪಿನದೊಳು ಮಗಭೇಟೆಯಾಡೀ ॥220॥

**ವಾರ್ಧಕ**

ಇತ್ತಮಯದಾನವಂ ಗಂಧರ್ವನಾತ್ಮಜೆಯ ।
ನರ್ತಿಯಿಂ ಪರಿಣಯಂಗೊಂಡು ವಸುಮಯಹೇಮ ।
ಪತ್ತನವನಾಳುತಿರಲವಗೆ ಜಿನಿಸಿದಳೋರ್ವ ಸಲೆಚೆಲುವೆ ಮಂಡೋದರೀ ॥ ಯತ್ಕಿಂಚದವಧಿಯೋಳ್ಸತಿವಿಯೋಗವನಾಂತು ।
ಚಿತ್ತರದ ಬೊಂಬೆಯಂತೆಳೆಹರಯದಿಂದೆಸವ ।
ಪುತ್ರಿಯಂಲಾಲಿಸುತ ಪತ್ನಿಯನ್ನಗಲಿದ ವಿರಕ್ತಿಯೊಳಗಿರುತೀರ್ದನೂ ॥221॥

**ಭಾಮಿನಿ**

ರತುನ ನಿರ್ಮಿತವಾದ ಮತ್ತೊಂ ।
ದತಿಮನೋಹರ ಭವನದಲಿನಿಜ ।
ಸುತೆಯನಿಟ್ಟವಳಂಗರಕ್ಷಗೆ ಸತಿಯರಳವಡಿಸೀ ॥
ದಿತಿಜನಿರೆ ಬಳಿಕಾ ತರುಣಿಮ ।
ನ್ಮಥನತಾಪದಿಸಿಕ್ಕಿ ಬಳಲುತ ।
ಜತೆಯೊಳಿಹ ತನ್ನಾಪ್ತವನಿತೆಯೊಳೆಂದಳನುನಯದೀ ॥222॥

**ರಾಗ ಕಾಂಭೋಜಿ ಅಷ್ಟಾಳ**

ಹೇಳುವದೇನಿನ್ನು ಸಖಿಯೇ । ಹ್ಯಾಗೆ ।
ತಾಳಲಿಚಂದಿರ ಮುಖಿಯೇ ॥
ನಾಳಿಕಶರನೆನ್ನ ನವಯೌವನವಕಂಡು ।
ದಾಳಿಯಿಡುವ ತನ್ನ ದಂಡೆತ್ತಿ ಬಂದೀಗಾ । ಹೇಳುವ ॥223॥

ಇನ್ನೆಂದು ಕಾಂತನ್ನೈದುವನೋ । ಬಂದು ।
ಚೆನ್ನಾಗಿ ಮುಖವದೋರುವನೋ ॥
ಮನ್ನಿಸಿ ಮುತ್ತತಾ ರೆನ್ನುವದಿನವೆಂದೋ ।
ನಿನ್ನಾಣೆತನುಮನವೆನ್ನಾಧೀನದೊಳಿಲ್ಲ  ॥ ಹೇಳುವ ॥224॥

ಸರಸವಾಡುತ ಹೊಂತಕಾರಿ ಅಂತಃ ।
ಕರಣವರಿದು ಕಲೆದೋರೀ ।
ನೆರೆದು ಸೌಖ್ಯದಲಿ ಮೈಮರಸುವ ನೆರೆಜಾಣ ।
ಪುರುಷನ ಬಳಿಯೊಳೆಂದೆ಼ರಕವಾಗಿರುವೆನಾ ॥ ಹೇಳುವ ॥225॥

ಬಿಸಜಾಕ್ಷಿ ಹೆಣ್ಣುಜನ್ಮದಲೀ । ವ್ಯರ್ಥ ।
ರಸೆಯೊಳುದಿಸಿದೆನೇನೆನಲೀ ॥
ಹಸಿದ ವೇಳ್ಯದಲಿರಾಜಿಸುವ ಮಷ್ಟಾನ್ನವು ॥
ಖುಸಿಹೊರತಾ ಮೇಲೆ ರಸಗೂಡುವದೆನೋಡು ॥ ಹೇಳುವ ॥226॥

**ಕಂದ**

ಮಂಡೋದರಿ ಯೆಂದುದನುಂ ।
ಚಂದದೊಳಾ ಚಂದ್ರವದನೆ ತಿಳಿದಾಕ್ಷಣದೊಳ್ ।
ಮಂದಸ್ಮಿತ ವಚನದಿ ನಿಃ ।
ಸಂದೇಹದೊಳರಿವತೆರದಿ ಪೇಳ್ದಳ್ ಮುದದಿಂ ॥227॥

**ರಾಗ ಸಾರಂಗ ಅಷ್ಟತಾಳ**

ನಾನೇನಹೇಳಲಮ್ಮಾ । ನೀನೆನುವಂತ ।
ಸ್ವಾನುಭೋಗಗಳಿಂದಮ್ಮಾ ॥
ನಾನಾದರೀಪರಿಯಾದಿಯೊಳ್ಪುರುಷನ ।
ಧ್ಯಾನವಿಡಿದು ನಾನಾಯಾಸವ ಬಟ್ಟುದಾ ॥ ನಾನೇನು ॥228॥

ಮಾರನೆಂಬುವನು ನಾರೀ । ಪ್ರಾಯದೊಳೆಂಥಾ ।
ಕ್ರೂರನಾಗಿಹನುಮಾರೀ ॥
ಸ್ತ್ರೀರಮಣರು ಕ್ಷಣಸೇರಿರದೀರ್ದರೆ ।
ಸೂರೆಗೊಳ್ಳುವ ಚಮತ್ಕಾರದಿ ಚಿತ್ತವ ॥ ನಾನೇನ ॥229॥

ನಿನ್ನಂತೆನಾನು ಹೆಣ್ಣೇ । ಉಪಚರಿಸುವ ।
ದಿನ್ನರೆತು ಮೆಲುವ ಹಣ್ಣೇ ।
ಸನ್ನು ತ ಫಲಪುಷ್ಪ  ವನ್ನೀಯ ಬಹುದು ಮೋ ।
ಹನ್ನೆಕೇಳೀಕಾರ್ಯವೆನ್ನಿಂದಾಹುದುಹ್ಯಾಗೆ  ॥ ನಾನೇನ ॥230॥

ಏನಾದರೇನ್ಕಾರ್ಯವೇ । ಪ್ರಾಣೇಶನು ।
ತಾನೊಲಿಯದ ಸೌಖ್ಯವೇ ॥
ಆ ನಕ್ಷತ್ರಗಳ ವಿತಾನದಿ ಶಶಿಯಬಿ ।
ಟ್ಟಾ ನಭದಂದದಿ ಮಾನನಿಯರಬಾಳ್ವೆ  ॥ ನಾನೇನ ॥231॥

ವ್ಯರ್ಥ ನೀ ಮರುಗದಿರೋಬೇಗದಿ ನಿನ್ನ ।
ಪೆತ್ತಯ್ಯನೊಡನುಸುರೂ ॥
ಅರ್ತಿಯಿಂ ಪರಿಣಯಬಿತ್ತ್ತರಿಸುತ ಮೋಹ ।
ವೆತ್ತು ಸುಖಿಸುಮತ್ತೆ ಹೊತ್ತುಗಳೆವದೇಕೆ ॥ ನಾನೇನ ॥232॥

**ಭಾಮಿನಿ**

ಸರಸಿಜಾಂಬಕಿ ನುಡಿದ ವಚನಕೆ ।
ಹರುಷಿಸುತ ಲಜ್ಜೆಯಲಿ ನಾನೆಂ ।
ತೊರವೆ  ಪಿತನೇನ್ಮನದಿ ತಿಳಿವನೊ ಪುರುಷನವನೆನಲೂ ॥
ತರುಣಿ ಕೇಳ್ನಿಜಜನಕನಲಿ ಮ ।
ತ್ತರುಹುವಡೆ ಚಂಚಲವೆ ಬೃಹಳಾ ।
ಚ್ಚರಿಯವೆನಲವಳೈದಿ ಮಯನಿಂಗೆರಗಲಿಂತೆಂದಾ ॥233॥

**ರಾಗ ಸಾಂಗತ್ಯ ರೂಪಕತಾಳ**

ಬಾರವ್ವಮಗಳೆ ನಿನ್ನಾನನಬಾಡಿದ ।
ಕಾರಣವೇನುಸುರಿಂದೂ ॥
ದಾರೇನಂದರು ಚಿಂತಾ ಭಾರವ ಪೇಳೆನ ।
ಲ್ಯೋರೆಯ ತಗ್ಗಿ ನಾಚಿಸಲೂ ॥234॥

ಚಿನ್ನದ ಬೊಂಬೆಯಂತೆಸೆವ ಪುತ್ರಿಯ ಕಂಡು ।
ತನ್ನೊಡನೊರೆಯಲ್ಯಾಕಿನಿತೂ ।
ಬಿನ್ನವೆ ಮುನ್ನಾದವಡಲದುಃಖಗಳನ್ನು ।
ನಿನ್ನನೀಕ್ಷಿಸಿಮರತಿರುವೇ ॥235॥

ಪ್ರಾಯಸಮರ್ಥೆಯಾದುದರಿಂದಾತಕ್ಕ ।
ಪ್ರೀಯನಪೇಕ್ಷೆಯೊಳಿಲ್ಲೀ ।
ಆಯಾಸಗೊಂಡು ನೀ ಬಂದೆಯೋ ತಿಳುಹೆನೆ ।
ತೋಯಜಾಂಬಕಿ ಪೇಳ್ದಳಾಗ ॥236॥

**ರಾಗ ನವರೋಜು ಏಕತಾಳ**

ಅಪ್ಪಯ್ಯ ನೀ ಕೇಳೂ । ನಾ । ನೊಪ್ಪುವಂದದಿ ಪೇಳೂ ॥
ತಪ್ಪಾಡಿದಳೆಂ । ದಪ್ಪಳಿಸದಿರು ಸ ।
ಮರ್ಪಕವಾಹಂ । ತೊಪ್ಪಿಸಿ ಕೊಡುವೆನು ॥ ಅಪ್ಪಯ್ಯ ॥237॥

ಸರಸದಿ ಪುಷ್ಪದ ಲತೆಯಾ । ನೀ । ನೆರೆನೆಟ್ಟೂ ಮರೆತಿಹೆಯಾ ॥
ನೆರೆದತಿ ಕೋಮಲ । ತರದೊಳು ಕುಸುಮಂ ।
ಕುರಿತವಾಗಿಮೇ । ಲ್ಬರಿವುತಲಿಹುದೈ ॥ ಅಪ್ಪಯ್ಯ ॥238॥

ಪತಿಯಾದ ವೃಕ್ಷದಲೀ । ಸಂ । ಗತಲತ್ತಾನಂದದಲೀ ॥
ಜತೆಗೂಡಿಸಿ ದಂ । ಪತಿಯಂದದಿಬೆರ ।
ದತಿ ಮೋಹದಿಸಂ । ತತರಂಜಿಪುದೂ ॥ ಅಪ್ಪಯ್ಯ ॥239॥

ಸೂರಿ ಶ್ರೀ ಲತೆಗಳಿಗೇ । ಆ । ಧಾರಗಳಿಲ್ಲದೆ ಕಡೆಗೇ ॥
ಕೋರವಿಸುವದೆ ವಿ । ಚಾರಿಸು ಲೋಕದ ।
ಸಾರವನರುಹಿದೆ । ಕಾರುಣ್ಯದಲೀ ॥ ಅಪ್ಪಯ್ಯ ॥  ॥240॥

**ಭಾಮಿನಿ**

ಸುತೆಯ ಭಾವವ ತಿಳಿದು ಮಯ ತಾ ।
ನತಿಶಯದ ವೈಭವದಿ ಪರಿಣಯ ।
ಮತವನನುಕರಿಸುವೆ ವಥಾ ಚಿಂತಿಸದೆ ನಿಳಯದಲೀ ॥

ಜತೆಯೊಳಿಹ ಮಾನಿನಿಯರೊಡ ನಾ ।
ಡುತ ವಿಲಾಸದೊಳಿಹುದೆನಲುಮ ।
ನ್ಮಥನ ಗಿಣಿಯಂತೈದಿಪೇಳ್ದಳು ಪೂರ್ವಸಖಿಯೊಡನೇ ॥241॥

**ರಾಗ ನೀಲಾಂಬರಿ ರೂಪಕತಾಳ**

ಮಾನಿನಿ ಯೇನ್ಮಾಡಲಿನೀ । ವೈನವಪೇಳೊಡನೇ ।
ನಾನದ ಮರತಿರುವದಕಾ । ಮೀನಧ್ವಜಬಿಡನೇ ॥ ಮಾನಿನಿ ॥ ಪಲ್ಲವಿ ॥

ಕನಸಿಲಿತೋರುವನಿಧಿಯೋಲ್ । ವಿನಯದಿ ಮನ್ನಿಸುವೇ ।
ಎನಗಿದು ಧಿಟಕಾಣದೆಮ । ತ್ತನುದಿನ ಚಿಂತಿಸುವೇ ॥
ವನಿತಾಮಣಿ ಪಿತ ಪೇಳಿದ । ದಿನವೆಂದಿಗೆ ಬಹುದೋ ।
ನೆನೆಸಿದರೆದೆ ಝಲ್‌ಝಲ್ಲನೆ । ತನುವರ್ಧಾಗಿಹುದೋ ॥ ಮಾನಿನಿ ॥242॥

ಸಲೆ ಯೌವನಕುಲರತ್ನವು । ಜಲಪರಿಯುವತೆರದೀ ।
ಗೆಲವಿಲ್ಲದೆಮತ್ತದು ನಿ । ಷ್ಫಲವಾಹದು ಭರದೀ ।
ಬೆಲೆಯಿತ್ತರುಬರೆದೀಗಿನ । ಕಲೆಮುಂದಕೆ ಸಖಿಯೇ ।
ಕಳವಳವಾಗಿಹುದೆನ್ನಲಿ । ತಿಳಿ ಚಂದಿರಮುಖಿಯೆ ॥ ಮಾನಿನಿ ॥243॥

ತದನಂತರ ನಿದ್ರಾಹಾ । ರದಿಮನವಿನಿತಿಲ್ಲ ।
ಹದಮೀರಿಕ್ಷಣ ಯುಗದಂ । ದದಿ ತೋರುವುದಲ್ಲಾ ।
ಹದಯದಿ ನೋಡೀ ವರುಷವು । ಹದಿನಾರರ ಭರವೂ ।
ಸುದತಿಯರಿಗೆ ಬಾಧಕವಿದು । ವಿಧಿಗೇನ್ಮತ್ಸರವೂ ॥ ಮಾನಿನಿ ॥244॥

**ಭಾಮಿನಿ**

ವಿರಹ ತಾಪವನುಸುರೆ ತನ್ಮತ ।
ವರಿತು ಕಂಗೆಡಬೇಡ ತವಪಿತ ।
ನೊರೆದ ನುಡಿಪುಸಿಯಹುದೆ ಲೋಕದಿಪಸಿವಧಿಕವೆಂದೂ ॥
ಎರಡುಕೈಯಿಂದುಂಬುವರೆನಾ ।
ಗರಿಕ ಪುರುಷನಕೂಡಿ ಸೌಖ್ಯದೊ ।
ಳಿರುವೆನಿಶ್ಚಯವೆನುತ ಸಂತೈಸಿದಳು ಮಯಸುತೆಯಾ ॥245॥

**ವಾರ್ಧಕ**

ಇಂತವಳ ಸಂತೈಸುತಿರೆ ಮಯಾಸುರ ಮಗಳ ।
ಚಿಂತೆಗಳನಂದು ನೋಡುತಪುತ್ರಿಬೇಗೇಳು ।
ಕಾಂತನಂನೋಳ್ಪೆಬೆಂಬಿಡದೆ ನೀಬಾಯೆಂದು ಪೊರಮಟ್ಟು ಬರೆ ವನದಲೀ ॥

ಸಂತೋಷವೆರದು ವನ ಬೇಟೆಯೊಳುವಿಶ್ರಮಿಸ ।
ಲಾಂತೊಂದುನೆಳಲಲ್ಲಿ ಕುಂತಿರುವ ದಶಮುಖಗೆ ।
ತಾಂತವಕದಿಂದೋರ್ವಚರಕಂಡು ನಮಿಸಿ ಬಳಿಕಿಂತೆಂದನಾಗಭರದಿ ॥246॥

**ರಾಗ ಹರಾಜು ಏಕತಾಳ**

ಸ್ವಾಮಿ ಪರಾಕೂ ನೋಡೂ । ಸಂಗಡಗೂಡೂ ।
ಸ್ವಾಮಿ ಪರಾಕೂ ನೋಡೂ ॥ ಪಲ್ಲವಿ ॥

ಹೆಣ್ಣಿನೊಳೀಹೆಣ್ಣ । ವರಿಸಲುಬೇಕಣ್ಣ ।
ಬಣ್ಣಿಸಲಾರೆಕಣ್ಣ । ಮೈಯ್ಯಂತಬಣ್ಣಾ ॥ ಸ್ವಾಮಿ ॥ ॥247॥

ಮಾರನ ಮದಕರಿ । ಮಾಜುವಳ್ಮನಬೆದರಿ ।
ಯೇರು ಮದ್ದಾನೆ ಕುದುರಿ । ವಾಹ್ವಾರೆ ಚದುರಿ ॥ ಸ್ವಾಮಿ ॥ ॥248॥

ಹರೆಯದ ಮದವೇರಿ । ಹಮ್ಮಿನೊಳಿಹಪೋರಿ ।
ಕರೆಸಿಕೊ ಹೊಂತಕಾರಿ । ಸ್ಮರನ ಕಠಾರೀ ॥ ಸ್ವಾಮಿ ॥ ॥249॥

ತೊಡೆಗಳೆರಡು ರಂಭೆ । ಹುಡುಗಿ ಚೆನ್ನದ ಬೊಂಬೆ ।
ಕುಡಿಮೊಲೆಗಳುಲಿಂಬೆ । ಹಣ್ಣೆನೀನೆಂಬೇ ॥ ಸ್ವಾಮಿ ॥250॥

ಆದರೊಂದುಂಟು ದಕ್ಷ । ಅಲ್ಲಿಹನೊಬ್ಬ ರಕ್ಷ ।
ವಾದಿಸಲೇನು ಶೀಕ್ಷ । ಹಿಡಿಯವಳಪಕ್ಷಾ ॥ ಸ್ವಾಮಿ ॥251॥

**ಕಂದ**

ಚರನಾಡಿದ ಮಾತಾಲಿಸಿ ।
ದುರುಳಂ ಸ್ಮರತಾಪದಿಂದ ಮತ್ತಾಮಯಗಂ ।
ಭರದಿಂ ಚಾರರ ಮುಖದಿಂ ।
ಕರಸಲು ಸುತೆಸಹಿತಬರಲು ಮನ್ನಿಸಿಕೇಳ್ದಂ ॥252॥

**ಭಾಮಿನಿ**

ಎತ್ತಣಿಂದೈತಂದಿರಿಲ್ಲಿಗೆ ।
ಮತ್ತೆ ನೀವಿಹದೇಶವಾವುದು ।
ವಿಸ್ತರದ ಪೆಸರೇನುಗಮನವಿದೆಲ್ಲಿ ತವಕದಲೀ ॥
ಚಿತ್ತಜನ ಮಸದಂಬಿನಂತಿಹ ।
ಮತ್ತ ಕಾಶಿನಿದಾರು ನಿಮ್ಮಯ ।
ವರ್ತಮಾನವ ಪೇಳಬೇಕೆನಲೆಂದನಾಮಯನೂ ॥253॥

**ರಾಗ ಸಾರಂಗ ತ್ರಿವುಡೆತಾಳ**

ಹೇಳುವೆದಾನವೇಂದ್ರಾ । ರಾಕ್ಷಸಕುಲ । ಪಾಲಾಬ್ಧಿ ಪೂರ್ಣಚಂದ್ರಾ ।
ದಿವೌಕಸ । ವ್ಯಾಳನಿಕರ ಖಗೇಂದ್ರಾ । ಸದ್ಗುಣ ಸಾಂದ್ರಾ ॥
ತಾಳಲೆನ್ನಳವಲ್ಲ ಪೂರ್ವದ ।
ಬಾಳಿಕೆಯ ನುಸುರಿದರೆ ಫಲವೇನ್ ।
ಛಾಳಿಯಲ್ಲಿದು ಮನದಿ ತಿಳಿ ಶಶಿ
ಮೌಳಿನಿ ರ್ದಯವಾದ ಪರಿಯನು ॥ ಹೇಳುವೆ ॥254॥

ವರಹೇಮನಗರದಲೀ । ಗಂಧರ್ವಾತ್ಮಜೆಯ ।
ಕರವಿಡಿದೊಲವಿನಲಿ । ರಾಜ್ಯವನಾಳು ।
ತಿರಲಾಕೆಗರ್ಭದಲಿ । ಜನಿಸಿದಳು ಮರಳೀ ।
ಹರುಷದಿಂದಿರಲಾಗಳಾಸತಿ ।
ಪರಮಪದವಿಗೆ ಸೇರೆ ಚಿಂತಾ ।
ಶರಧಿಯಲಿ ಮಳುಗುತ್ತ ಮತ್ತೀ ।
ತರಳೆಯಿಂದದಮರತೆ ಮನದಲಿ ॥ ಹೇಳುವೆ ॥255॥

ಪುಸಿಯ ಮಾತುಗಳೇನಲ್ಲ । ನಾಮಯನೆಂಬ ।
ಪೆಸರಿಂದ ಕರೆವರೆಲ್ಲಾ । ಮಂಡೋದರಿಯೆಂ ।
ದೆಸೆವ ಕನ್ನಿಕೆಗೆನಲ್ಲಾ । ಯಾರೆಂಬುದಿಲ್ಲ ।
ಕುಶಲ ಪುರುಷನನೀಕ್ಷಿಸುತ್ತಲಿ ।
ವಸುಧೆಗೈಯ್ಯಲು ನಿನ್ನದರುಶನ ।
ವೆಸಗಿತೈದಿದ ಸಂಗತಿಯ ನಿ ।
ನ್ನು ಸುರಬೇಕೆನಲೆಂದ ದಶಮುಖ । ಹೇಳುವೆ ॥256॥

ವಿನಯದಿ ಲಾಲಿಸಿಂದು । ನಾವಿಶ್ರವಸುವಿನ ।
ತನಯ ದಶಾಸ್ಯನೆಂದೂ । ಹೇಳ್ವರು ಜಗದಿ ।
ಘನಲಂಕಾಪುರದಿಬಂದೂ । ರಾಜಿಸುವೆನಿಂದೂ ॥
ಮನದಿ ಮಗಬೇಟೆಯ ನಿರೀಕ್ಷಿಸಿ ।
ವನಕೆ ಬಂದಿರುತಿರಲು ತವದರು ।
ಶನವು ಘಟಿಸಿತು । ಪ್ರಶ್ನೆಗುತ್ತರ ।
ಎನಿತು ಮಂಗಲ ಕಾರ್ಯಕಾರಣ ॥ ॥257॥

**ಭಾಮಿನಿ**

ದಶಮುಖನ ನುಡಿಕೇಳಿಹರುಷದಿ ।
ಬಿಸಜಭವನಂತಸ್ಥನಹರಾ ।
ಕ್ಷಸ ಶಿರೋಮಣಿಕೀರ್ತಿಯುತ ಸಾಹಸಿಗಸಿರಿವಂತಾ ॥

ಅಸಮಬಲ ನಿನಗಿನಿತು ಗುಣವಿರೆ ।
ಶಶಿಮುಖಿಗೆ ಪತಿಯಾಗೆನಲು ಕಾ ।
ಮಿಸಿದೆ ಕಾಮಿನಿಕಾಮುಕನು ಮಲೆಯಾಳಕೈವಂತೇ ॥258॥

**ವಾರ್ಧಕ**

ಕುಲಶೀಲ ರೂಪುಲಾವಣ್ಯಾದಿ ವಿದ್ಯದಿಂ ।
ಕಳೆಯುಳ್ಳವನ ಬಿಟ್ಟು ಬದಲಳಿಯನಂ ನೋಡಿ ।
ತೊಳಲಲ್ಯಾಕೆನುತತತ್ಕ್ಷಣದಿದಶಮುಖಗೆ ನಿಜಸುತೆಯನತಿಸಂಭ್ರಮದೊಳು ॥
ವಲಿದು ಶುಕ್ರಾಚಾರ್ಯಮತವಿಡಿದು ಶಾಸ್ತ್ರೋಕ್ತ ।
ದಲಿ ಧಾರೆಯನ್ನೆರೆಯೆ ಮಾವನಾಗಿಹಮಯಗೆ ।
ತಲೆವಾಗಿ ಸರ್ವರಿಂದೊಡಗೊಡಿ  ಹರುಷದಿಂ ಪುರಕೈದ ವೈಭವದೊಳು ॥259॥

ಈ ಪರಿಯ ವಿಭವದಿಂ ದಶಕಂಠನಧಿಕ ಪ್ರ ।
ತಾಪದಿಂದಿರುತಿರಲ್ಕಾ ಬಳಿಕಲೊಂದು ದಿನ ।
ಗೋಪಮುಖ ದಿಗ್ದೇಶದರಸುಗಳ  ಗೆಲ್ವೆನೆಂದತ್ಯಧಿಕಹಂಕೃತಿಯೊಳೂ ॥
ಆ ಪರಂಪರೆಯ ಪ್ರಧಾನರಂ ಕರೆಸಿ ಧುರ ।
ಕೋಪ ಚತುರಂಗಬಲವೆರಸಿ ಸನ್ನಾಹದಿಂ ।
ದಾಪರಾಕ್ರಮಿಪೊರಟನೀ ಕೇಳು ಲೋಕ ಕಂಪಿಸುವಂತೆ ದಿಗ್ವಿಜಯಕೇ ॥260॥

ಸುರಪನಂ ಕಂಗೆಡಿಸಿ ಶಿಖಿಯ ಘರ್ಜಿಸಿ ದಂಡ ।
ಧರನಂಪಚಾರಿಸುತನಿರುತಿಯಂ ಜಡಿದು ಮೇ ।
ಲ್ವರುಣಗಂಜಿಸುತಲಾ ಮರುತನಂ ಮಥಿಸಿದಂ ಧನಪಪುಷ್ಪಕವ ಕೊಂಡೂ ॥
ಭರದೊಳೀಶಾನ್ಯತತ್ಕಾಳಿಕೇಯರ ಜೈಸಿ ।
ಧರೆಯೊಳಿಹಚಪ್ಪನ್ನ ದೇಶಂಗಳಂ ಪೊಕ್ಕು ।
ಮೆರೆದತಿವಿಲಾಸದಿಂ ಹರನನೀಕ್ಷಿಪೆನೆಂದು ಕೈಲಾಸಕೈತಂದನೂ ॥261॥

**ರಾಗ ಭೈರವಿ ತ್ರಿವುಡೆತಾಳ**

ಧೀರನಹುದೋ । ಲೋಕದಿ । ಶೂರನಹುದೊ ॥
ಧೀರನಹುದೊ ಕುಬೇರಪುಷ್ಪಕ ।
ವೇರಿ ಬಂದು ಪುರಾರಿ ನಿಳಯಕೆ ।
ಹಾರಿಸಲು ಮುಂದೇರದಿರಲುಕ ।
ಠೋರ ನಾದದಿ ಭೋರ್ಗುಡಿಸುತಿದ ।
ಚಾರುಲಂಕೆಗೆ ಸೇರಿಸಿದರೀ ।
ಗೌರಿಯರಸ ಮನೋರಥವದಯ ।
ದೋರಿಕೊಡುವಸ ದಾಯೆನುತಲು ।
ಭ್ಬೇರಿ ಸುಲಭವೆನುತ್ತಲಮರಿದ ॥ ಧೀರನಹುದೋ ॥262॥

ಕರಿವದನ ಗುಹ ಭಂಗಿ ಭೈರವ ।
ತರತರದ ಭೂತಾದಿ ನಿಜಕಿಂ ।
ಕರ ನುತಿಯ ಲಾಲಿಸುತ ಗಿರಿಜೆಯ ।
ಸರಸದಿಂದೆಡ ತೊಡೆಯ ಮೇಲ್ಕು ।
ಳ್ಳಿರಿಸಿಕೊಳುತ ಕಪರ್ದಿ ಹರುಷದಿ ।
ಮೆರೆವ ಸಮಯದೊಳೀ ನಿಶಾಚರ ।
ಕರತಳದಿ ಕೀಳಲ್ಕಜಾಂಡವು ।
ತರೆಹರಿಸಿ ಚಂಚಲಿಸಿತಾ ಗಿರಿ । ಧೀರನಹುದೋ ॥263॥

ಅದುಭುತಾರ್ಭಟೆಯಿಂದಲಾ ದಶ ।
ವದನನೆತ್ತುವ ಭರಕೆ ಪಾ್ವರತಿ ।
ಬೆದರಿ ಹಾಹಾ ಯೇನಿದಚ್ಚರಿ ।
ಹದಯ ಬೆಚ್ಚುವದೆನುತ ವಲ್ಲಭ ।
ನೆದೆಗೆ ತಕ್ಕೈಸುತಿರೆ ಪುರಹರ ।
ಹದನರಿತು ನೀನಂಜ ಬೇಡೆನು ।
ತಧಿಕ ಸಂಪ್ರೀತಿಯಲಿ ಮತ್ತಾ ।
ಸುದತಿಯೊಡನಿಂತೆಂದನಾಕ್ಷಣ । ಧೀರನಹುದೋ ॥264॥

**ರಾಗ ಬೇಗಡೆ ಏಕತಾಳ**

ನೋಡು ನೀ ವಿಚಿತ್ರವ ನಾರೀ । ನಾ ಪೇಳ್ವೆನಿದಕೊ ।
ಖೋಡಿದಶಮುಖನಾಟವದು ಗೌರೀ ।
ನಾಡಜನರೂರೆಲ್ಲ ಪಂಚಂ ।
ಪಾಡು ಮಾಡಿದೆನೆಂಬ ಖಾಡಾ ।
ಖಾಡಿಯಲಿ ಬಂದೀಗ ತನ್ನಯ ।
ಮೋಡಿಯೆನ್ನಲಿ ತೋರಬಂದಿಹ ॥ ನೋಡು ॥ ॥265॥

ಭೀಮಬಲಜಯ ವಿಜಯರೆಂಬಟರೂ । ಇವರಿರ್ವರಾದಿಯೊ ।
ಳಾಮುಕುಂದ ಕವಾಟ ಪಾಲಕರೂ ।
ಮಾ ಮನೋಹರನಲ್ಲಿ ಯೋಗಿಲ ।
ಲಾಮ ಸನಕ ಸನಂದನರು ಬರ ।
ಲಾಮಹಿಮರೆಡೆಯಲ್ಲಿ ತಡೆಯಲು ।
ನೇಮಿಸಿದರುರುಶಾಪವವರಿಗೆ ॥ ನೋಡು ॥266॥

ಅತ್ತು ಮರಗುತ ದೂರಲಚ್ಚುತಗೇ । ಜನುಮತ್ರಯದೊಳ್ ।
ಮತ್ತ ದಾನವರಾಗಿ ನೀವ್ಕಡೆಗೇ ।
ಮತ್ಸಮೀಪಕೆ ಸೇರುವಂದವ ।

ಬಿತ್ತರಿಸೆ ಮೊದಲೊಂದು ಜನ್ಮವ ।
ನುತ್ತರಿಸಿದಶಕಂಠನಿವತಾ ।
ನೊತ್ತಿನವ ಕಲಿಕುಂಭಕರ್ನನು ॥ ನೋಡು ॥267॥

ವಾರಿಜಾಸನ ವಂಶಸಂಭವರೂ । ಆ ವಿಶ್ರವಸುಸುಕು ।
ಮಾರರೀರ್ವರು ಪೂರ್ಣಬಲಯುತರೂ ।
ಚಾರುಧನಪನ ಪುಷ್ಪಕವಮಿಗೆ ।
ಸೂರೆಗೊಂಡೇರುತ್ತ ಭರದಿಂ ।
ದೀ ರಜತಗಿರಿಗೈಯೆ ರಥ ಹಿಂ ।
ಜಾರಿ ನಿಲಲದ ಕಂಡು ಖತಿಯಲಿ ॥ ನೋಡು ॥268॥

ಶೈಲಮೂಲವ ಕಿತ್ತುಕೊಂಡಿಂದೂ । ಆ ಲಂಕೆಗಿರಿಸಿದ ।
ಮೇಲೆ ದಾರಿಂದಾಹದೇನೆಂದೂ ।
ಕೀಳುವಾರ್ಭಟಕೀಗ ಧನುಜನ ।
ಕೂಲ ಕಾರ್ಯವದೋರಿ ತತ್ಪತಿ ।
ಬಾಲ ಲೀಲೆಯೊಳಾಡುವಂದದಿ ।
ಲೀಲೆಯೊಳುಕುಣಿದಾಡಿಸುವೆ ಕೇಳ್ ॥ ನೋಡು ॥269॥

**ಭಾಮಿನಿ**

ಗಿರಿಜೆಯೊಡನಿಂತುಸುರಿ ಹರಕಾ ।
ಲ್ಬೆರಳನೊತ್ತಲು ಖಳನಕೈಗಳು ।
ಭರದಿ ಸಿಲುಕಿ ಮಹಾಪ್ರಯಾಸದೊಳೊದರಿ ಭೋಯೆನುತಾ ॥
ಮರುಗಲಿಳೆ ಕಂಪಿಸಿತು ಸುರಪಾ ।
ದ್ಯರು ಬೆದರೆ ಕಂಗೆಡುತಲಿರಲಾ ।
ದುರುಳಕೆಟ್ಟೆ ವಥಾಯೆನುತ ನುತಿಗೈದ ಸಾಮದಲೀ ॥270॥

**ವೃತ್ತ**

ಜಯ ಶಂಭೋ ನಿಗಮಾಗಮಾರ್ಚಿತಪದಂ ಶ್ರೀಕಂಠ ಸಾಂಬ ಪ್ರಭೋ ।
ಜಯ ಗೌರೀಮುಖಪಂಕಜಾರ್ಕ ವಿಲಸ ತ್ವಂಚಾನನಂಸದ್ವಿಭೋ ॥
ಜಯ ಭಕ್ತಾಳಿಸುರೌಘಸನ್ನುತಮಹಾ ಸ್ವಾಮಿನ್ ಕಪಾಮಂದಿರಂ ।
ಜಯ ನಿತ್ಯಂ ಕಲಯಾಮಿ ತತ್ತವ ಪದಂಮೂರಕ್ಷ ಸಾಕ್ಷಾತ್ಕರಂ ॥271॥

**ವಾರ್ಧಕ**

ಚಿರಕಾಲ ನರಳುತ್ತ ವಿಧವಿಧದಿ ಸಂಸ್ತುತಿಸೆ ।
ಕರುಣದಿಂದಂಗುಷ್ಠಮಂ ತೆಗೆಯೆ ಹರುಷದಿಂ ।

ಕರಗಳಂ ಬಿಡಿಸಿಕೊಂಡಘಹರನ ಮುಂದ್ಯೆದಿ ಕೈಮುಗಿದು ಸ್ತುತಿಸುತಿರಲೂ ||
ಪುರಹರಂ ನೋಡಿ ಶಭಾಸು ಮೆಚ್ಚಿದೆ ನು ನಿ |
ನ್ನುರುತರ ಮಹಾರವಕೆ ರಾವಣಾಖ್ಯವನಿತ್ತೆ |
ಭರದೊಳೀ ಚಂದ್ರಹಾಸವ ಕೊಂಡು ಪೋಗೆನಲ್ ಪೊರಟು ಹಿಮಗಿರಿಗೈದನೂ ||272||

**ಭಾಮಿನಿ**

ಚಾರು ಹಿಮವದ್ಗಿರಿಯ ತಡಿಯೊಳು |
ವೀರತಪದಿ ವಿರಾಜಿಸುವವೈ |
ಯ್ಯರ ದ ಬಲೆಯ ಕಂಡು ರಾವಣನಿಂದು ಬೆರಗಾಗೀ ||
ಮಾರನಂಬಿನ ಘಾಯದಲಿ ಮನ |
ವೂರಿತನ್ನಾರಿಯ ಸಮೀಪಕೆ |
ಸೇರಿಮೆಲ್ಲನೆ ನಗುತ ಪೇಳ್ದನು ವಿನಯ ಪರನಾಗೀ | ||273||

**ರಾಗ ಶಂಕರಾಭರಣ ಅಷ್ಟತಾಳ**

ಮಾತಾಡೇ | ಪ್ರೀತಿಯೊಳು ಕಣ್ದೆರದೊಂದು | ಮಾತಾಡೆ || || ಪ ||

ಮಾತಾಡೆ ಮಾನಿನಿ | ಜಾತಿ ಶಿಖಾಮಣಿ || ಮಾತಾಡೆ || || ಅನುಪಲ್ಲವಿ ||

ಮಾರನರ್ಧಾಂಗಿಯಂತಿರುವೇ | ಶಂ |
ಗಾರದ ಕಾಂತಿಯೋಳ್ಮೆರವೆ | ಪ್ರಾಯ |
ವೇರುವದಿನಕಿದು ತರವೇ | ವೈ |
ಯಾರದ ಹರೆಯವೇನ್ ಸ್ಥಿರವೇ | ಮುದ್ದು
ನಾರಿ ನೋಡಿನ್ನಾರಭಾರವೆನ್ನದುದಯ |
ದೋರಿ ತೋಶದಲಿ ಶ | ರೀರವ ದಣಿಸದೇ | ಮಾತಾಡೆ ||274||

ನೀದಾರು ಪೆಸರೇನ್ನವೀಣೇ | ಜ್ಞಾನ |
ಸಾಧನ ಹೀಗಲ್ಲ ಕಾಣೇ | ಚಿತ್ತ |
ಭೇದವೆಣಿಸದಿರೆನ್ನಾಣೇ | ನಾನಿ |
ನ್ನಾದರ ವೆರಸುವೆ ಕಾಣೇ | ಪ್ರತಿ |
ವಾದಿಸದೆನಗೆ ಸ | ಮಾಧಾನವಪ್ಪಂತೆ |
ಕ್ರೋಧವೆಸಗದನು | ವಾದ ಸಮ್ಮೋದದಿ || ಮಾತಾಡೆ ||275||

**ಕಂದ**

ಆಸತಿ ನಿಜ ದೃಷ್ಟಿಯ ತ |
ನ್ನಾಸಾಗ್ರದೊಳಿಟ್ಟು ಹರಿಯ ಭಜಿಸುವ ಭರದೊಳ್ |

ಮೋಸವಿದೆಂದರಿಯದೆ ಸಂ ।
ತೈಸುತ ದಶಕಂಠಗೊರೆದಳಾತ್ಮಸ್ಥಿತಿಯಂ ॥276॥

**ರಾಗ ತುಜಾವಂತು ಝಂಪೆತಾಳ**

ಯಾಕಿನಿತು ನೀ ಕೇಳ್ವುದೇನುವದೇನಣ್ಣಾ ।
ಬೇಕಾದವರಿಗುಸುರು ಬಳಲಿಪರು ನಿನ್ನಾ ॥ ಯಾಕಿನಿತು ॥ ॥ ಪ ॥

ಸುರಗುರುವಿನಾತ್ಮಸಂಭವ ಕುಶಧ್ವಜನೆಂಬ ।
ಧರಣಿಸುರಶ್ರೇಷ್ಠನತಿ ನಿಗಮಾಗಮದಲೀ ।
ಎರಡನೆಯ ಬ್ರಹ್ಮನೆಂದೆನಿಸಿ ನಿಜ ಶಿಷ್ಯರಿಗೆ ।
ವರ ಜಪಾ ಪಾಠಗಳನೊರವ ಸಮಯದಲೀ ॥ ಯಾಕಿನಿತು ॥277॥

ತದ್ವೇದ ಮುಖದಿ ನಾ ಜನಿಸಿರುವ ಕಾರಣದಿ ।
ವಿದ್ವಾನುಗಳು ವೇದವತಿಯೆಂಬರೂ ।
ಸದ್ವಚನದಿಂ ಕರೆಯೆ ತದನಂತರದಿಜನರು ।
ಮದ್ವಿವಾಹವ ಬಯಸಿ ಬಂದೊರೆಯಲಂದೂ ॥ ಯಾಕಿನಿತು ॥278॥

ಪಿತ ಕೇಳಿ ಹರಿಯೆ ತನ್ನಳಿಯ ಹೊರತನ್ಯರಿಗೆ ।
ಸುತೆಯ ಕೊಡೆನೆನುತ ನಿಶ್ಚೈಸಿರಲು ಮರಳೀ ।
ಅತಿಬಲಾನ್ವಿತ ಶಂಭುವೆಂಬ ದಾನವ ಬಂದು ।
ಹತಗೈದ ನೆನ್ನ ಮೇಲ್ಮನವನಿಟ್ಟವನಾ ॥ ಯಾಕಿನಿತು ॥279॥

ಜನಕನ ಪ್ರತಿಜ್ಞೆಯನು ಪೂರೈಸಬೇಕೆನುತ ।
ಲಿನಿತನುಷ್ಠಾನ ಪೂರ್ವಕ ತಪದೊಳಿರುವೇ ।
ವನಜಾಕ್ಷ್ಯ ದಯದೊಳಿನ್ನೆಂದೊಲಿವನೋ ತಿಳಿಯೆ ।
ನೆನಲೆಂದನಾಗ ದಶವದನ ಕಾತುರದಿ ॥ ಯಾಕಿನಿತು ॥280॥

**ರಾಗ ಸಾವೇರಿ ಅಷ್ಟತಾಳ**

ಅಹಹ ಯೇನೊರೆವೆನಾನೂ । ಮಾನಿನಿರನ್ನೆ ।
ಗ್ರಹಿಸೀಗ ಮನದಿ ನೀನೂ ।
ವಿಹಿತವಲ್ಲಿದು ಕೋಟ್ಯಾಂತರ ಹೊನ್ನಿತ್ತರು ಪ್ರಾಯ ।
ಬಹುದೆ ಹಿಂತಿರುಗಿ ಜಾಣೇ । ಪ್ರವೀಣೇ ॥ ॥281॥

ಆ ಪೋರ ಕೃಷ್ಣ ನೆಲ್ಲೀ । ಕೇಳ್ನಿನ್ನಂಥ ।
ರೂಪಿನ ತರುಣಿ ಯೆಲ್ಲಿ ।

ಕಾಪುರುಷರಲಿ ಮತ್ತಾ ಪಂಚಶರನ ಸಂ ।
ತಾಪವುಡಗುತಿಹುದೇ । ಸುಖ ಬಹುದೇ ॥ ॥282॥

ತಟ್ಟನೆ ಶ್ರಮವ ನೀಗಿ । ಆಮೇಲೆನ್ನ ।
ಪಟ್ಟದ ರಾಣಿಯಾಗೀ ।
ಅಷ್ಟ ಭೋಗದೊಳಳ ವಟ್ಟು ಮನ್ನಿಸು ನಿನ್ನ ।
ಕಷ್ಟವ ನೋಡಲಾರೆ । ಯೇ ನೀರೇ ॥ ॥283॥

ಈರೇಳು ಭುವನದಲೀ । ಸ್ತ್ರೀಯರು ತನ್ನ ।
ಹಾರೈಪರೊಲವಿನಲ್ಲೀ ।
ನಾರಿಕೇಳ್ವೀರಾಧಿವೀರ ರಾವಣನೆಂಬ ।
ಪೌರುಷ ಪೆಸರಿಹುದೂ । ಜೋಡಹುದೂ ॥ ॥284॥

**ಕಂದ**

ವಿಪರೀತದ ನುಡಿಯಾಲಿಸಿ ।
ತಪದುರಿಯೊಂದಾಗಿ ನಿಂದು ಧಗಧಗಿಸುವ ಪೋಲ್ ॥
ಕುಪಿತಾಕಾರದಿ ದೈತ್ಯನ ।
ಲಪನವನೀಕ್ಷಿಸುತ ಪೇಳ್ದಳತಿ ನಿಷ್ಠುರದೊಳ್ ॥285॥

**ರಾಗ ಸಾರಂಗ ಅಷ್ಟತಾಳ**

ನಡಿ ನಡಿ ನಡಿಯೋ ಖೋಡಿ । ಸಾರಿದೆಸಾಕೆ । ನ್ನೊಡನ್ಯಾತಕಿಂಥ ಮೋಡೀ ॥
ದಡಿಗ ನಿನ್ನಯ ಹಸ್ತ । ಪಿಡಿದವಳೊಡನಿಂತು ।
ಬಡಿವಾರ ನುಡಿವುದೆ । ನ್ನೊಡನೆ ಬಲ್ಗೈಯ್ಯದೆ ॥ ನಡಿ ॥286॥

ಪರ ನಾರಿಯರಿಗಳುಕೀ । ಆಮೇಲ್ದಂಡ । ಧರನಾಜ್ಞೆಯಲಿ ಸಿಲುಕೀ ।
ನರಕಭಾಜನನಾಗಿ । ನರಳುವದೇನ್ಸುಖ ।
ಬರುವದೆ ಭಂಡ ಪಾ । ಮರ ಮೊಗದೋರದೆ ॥ ನಡಿ ॥287॥

ಖೂಳ ಯೌವನ ಮದದೀ । ಮುಂಗಾಣದೆ । ಪಾಳಾಗದಿರುಕ್ಷಣದಿ ॥
ನೀಲಾಳಕಿಯರನೀ । ಗೋಳುಗುಟ್ಟಿಸಿ ವಂಶ ।
ಮೂಲವನಳಿವೆನೀ । ವಾಳಿ ನೋಡಿಕೊ ಸಿದ್ಧ । ನಡಿ ॥288॥

ಚಿನುಮಯಾತ್ಮಕ ಮೂರ್ತಿಯ । ನಿಂದಿಸಿ ನಾನಾ । ಘನ ಪಾಪಕೊಳಗಾದೆಯಾ ॥
ಶುನಕನು ಸಿಂಹನ । ಮುನಿಸಿಂದ ಬಗುಳಿದ ।
ರಿನಿತು ಕುಂದಹುದೆ ಜೀ । ವನವ್ಯಾಕೆ ಸುಡುಸುಡು ॥ ನಡಿ ॥ ॥289॥

**ಭಾಮಿನಿ**

ತರುಣಿಯತಿ ನಿಷ್ಠುರದಿ ದೂಷಿಸಿ ।
ಜರೆವುತಿರೆ ಕೇಳುತ್ತಲಾ ಖಳ ।
ತುರುಬ ಹಿಡಿದೆಳೆವುತ್ತ ಕುಸುಬುತ ಕೆಡಹಲವನಿಯಲೀ ॥
ಹರಹರಾ ಮುಂದಾರು ಗತಿ ಯೆಂ ।
ದೊರೆವುತಿರೆ ದಶಕಂಠ ಹಿಂದಕೆ ।
ಸರಿಯೆ ಸತಿಮರುಗಿದಳು ಕಲ್ಮರ ಕರಗುವಂದದಲೀ ॥290॥

**ರಾಗ ನೀಲಾಂಬರಿ ಏಕತಾಳ**

ಅಯ್ಯೋ ನಾನೇನ್ಮಾಡಲೀ । ಕಾಮುಕರಿದಿರು । ಪ್ರಾಯದೊಳೆಂತಿರಲೀ ॥
ಕೈಯಾರೆಯಳೆದನಿಂದೂ । ಆ ಕಾಲನಿವನ । ವಯ್ಯುವ ದಿವಸವೆಂದೂ ॥
ತಾತಗೆನ್ನುವೆನೆಂದರೆ । ಎನ್ನಿಂದ ವ್ಯರ್ಥ । ಘಾತವಾಗಿರುವ ಬೇರೇ ॥
ಯಾತಕೊದರಿಕೊಳಲಿ । ನಾನಿಂತಕಡು । ಪಾತಕಿ ಭುವನದಲೀ ॥291॥

ಎಲ್ಲಾತಂಕವ ಮರೆದೂ । ಈ ರೀತಿಯಲ್ಲಿ । ಫುಲ್ಲನಾಭನ ನೆನೆದೂ ॥
ಕಲ್ಲೆದೆಯಾಗಿರಲೂ । ಈ ದುಷ್ಟಬಂದು । ನಿಲ್ಲಲೀಸನು ಮೊದಲೂ ।
ತಪಕಿಲ್ಲಿ ವಿಘ್ನ ಬಂತು । ಮುಂದೇನುದಾರಿ । ವಿಪರೀತ ಕಾರ್ಯವಿಂತೂ ॥
ಕಪಟವಿದೆಂದರಿಯೆ । ಶೀಘ್ರದಲಿ ನೀ । ಕಪೆಮಾಡೋ ಶ್ರೀಹರಿಯೆ ॥292॥

ಹುಟ್ಟಿದ ದಿನವಿಡಿದೂ । ಚಿಂತಿಸಿ ನಾನಾ । ಕಷ್ಟ ಜೀವನಕಾದುದೂ ॥
ಸೃಷ್ಟಿಯೊಳ್ಪುಣ್ಯವಂತರೂ ಇಲ್ಲವೇನ್ನೈ ಸಂ । ತುಷ್ಟಿಯೊಳ್ ಬಾಳ್ವರೂ ॥293॥

ಯಾಕುದಿಸಿದೆಜಗದೀ । ಅನಾಥಳಾಗಿ । ವ್ಯಾಕುಲಸಾಗರದೀ ॥
ಭೀಕರಪ್ಪುದು ಮನಕೇ । ಈ ಹೆಣ್ಣುಜನ್ಮ । ಸಾಕೆನ್ನ ಭವಭವಕೇ ॥294॥

**ರಾಗ ಭೈರವಿ ಆದಿತಾಳ**

ಹೆಣ್ಣು ಜನ್ಮವು ಕಷ್ಟವೆಂಬುದ । ಕಣ್ಣಿನಲಿಕಂಡೆ ।
ಎಣಿಸಿದರೆದೆಹಾರುವದು ಮ ।
ತ್ಪುಣ್ಯಫಲವಿಂತಾಯ್ತು ಶಿವ ಶಿವ ॥ ಪಲ್ಲವಿ ॥

ತಂದೆ ತಾಯಿಸುಬಂಧು ಬಳಗದಂದ ಗೋಷ್ಠಿಯ ಬಿಟ್ಟು ಮರುಗುತ ।
ಹಿಂದು ಮುಂದೆನಗಾರುಗತಿಯಿಲ್ಲೆಂದು ಚಿಂತೆಬಿಟ್ಟು ನಾನಾ ।
ದಂದುಗದಿ ಮನನೊಂದು ತಾಪದಿ ।
ನಿಂದಿರಲು ಖಳಬಂದು ಮುಟ್ಟಿದ ।
ನಿಂದುವರಲಿದರೆಂದದೂರನು । ವಿಚಾರಿಸಿಕರುಣವ ।
ತಂದು ನೋಳ್ಪಾರೆಲ್ಲಿ ಶಿವಶಿವ ॥295॥

ಕಂದು ಕುಂದಿವುತಾಪ್ರಳಾಪಿಸಿ ತಂದದಿಂನಿದಾನವೆಸಗದೆಮ ।
ಧಾಂಧಕಾರಿಯಕಂದರವ ಬಲ್ಪಿಂದಖಂಡಿಸಿ ।
ಕೊಂದುದಿತಿಜನ ಸದಾಸುಖಿಪಮು
ಕುಂದನಡಿಯಿಂನೆಂದುನೋಡುವೇ । ಹೆಣ್ಣು ॥296॥

ದಿಕ್ಕು ದೆಸೆಯಿಂದಕ್ಕರಿಲ್ಲದ । ಕಕ್ಕುಲಿತೆಬಾಳ್ವೆಯಾತಕೆ ।
ಹಕ್ಕಿಬಾಯ್ಬಿಡುವಂತೆಚಿತ್ತದ ದುಃಖವೆಂತುತಾಳ್ವೆಯಿಂಥಾ ।
ಚಿಕ್ಕಹರಯದಿಸೊಕ್ಕಿ ನಾನೀರಕ್ಕಸನ ಬಾಯ್ಬುಕ್ಕಿಗಾಗುವೆ ।
ಮಿಕ್ಕ ಕುಜನರಸೊಕ್ಕ ಮುರಿದುಪ ಚಾಡಿಸಬಡಿದುರು ।
ಮುಕ್ಕಣ್ಣನಿನಗರುಹು ॥
ತುಕ್ಕಿಮಹಾಂತರದೊಳಾಗಲಸು ।
ದಿಕ್ಕಲಾವಹುದು ।
ಗಕ್ಕನೆಮತ್ಪ್ರಾಣವಳಿದರೆ ತಕ್ಕುಪಾಯವಪೇಕ್ಷಿಸಲುಮುಂ ।
ದಕ್ಕೆ ತಾಹತವಕೆ ತೋ್ಪುರದು ॥ ಹೆಣ್ಣು ॥297॥

ಘೋರವಿಪಿನದಿ ಸೇರಿಕೊಂಡಾಕಠೋರ ಮಗಗಳಿಂದ । ಯೆನಗಾ ।
ಧಾರವಿಲ್ಲದೆ ಬೇರೆ ಮನುಜರಮೊರೆ ಗಾಣ್ಬುದೆಂದು । ತನ್ನಯ ।
ವೈರಿಯಾದರು ಜಾರಿತಪ್ಪರುಬಾರದಿಂನೆಂದೂ ಶಿವ ಶಿವ ।
ನಾರಿಯನುವದು ಮೂರುಲೋಕದೊಳೆಂನಕಷ್ಟ
ವನೋಡಿಮರೆಯಲಿನ್ನು ।
ದಾರಿಗಾದ್ವೈಪಾಯಸಕಲದಲಿ
ನಿರೀಕ್ಷಿಸುವದಕೆಮು ।
ರಾರಿಯೆಸರಿವಾರಿಜಾಕ್ಷಮನೋರಥವ
ದಯದೋರಿಯೆನಗಾ ।
ಸರಾಗದಿಂದ ಶರೀರವೊಲಿಸುವ ಯೋಗವಿಂದಿಗೆ । ಹೆಣ್ಣು ॥298॥

**ಭಾಮಿನಿ**

ಬಿಕ್ಕಿ ಬಿರಿದಳಲುತ್ತಮಾನಿನಿ ।
ರಕ್ಕಸನ ಮೊಗನೋಡಿ ನಿನ್ನಯ ।
ಸೊಕ್ಕ ಮುರಿವಡೆ ನಾರಿ ಪುರುಷನ ಕೊಲುವದನುಚಿತವೂ ॥
ಮಿಕ್ಕಿ ನೀ ಪರಸತಿಯ ಮೇಲ್ಕೈ ।
ಯಿಕ್ಕಿದರೆ ತವ ಮಸ್ತಕಾವಳಿ ।
ಫಕ್ಕನೇ ಸೀಳಾಗಲೆನುತಲ ದಶ್ಯ ವೊಂದಿದಳೂ ॥299॥

**ವಾರ್ಧಕ**

ಈ ಪರಿಯ ಮಾನಭಂಗದೊಳಿತ್ತದುರುಳ ಸಂ ।
ತಾಪದಿಂಪುರಕೈದಿ ತತ್ಪ್ರಾಹಸ್ತಾದ್ಯರಸ ।
ಮೀಪರ್ದೊಳ್ ಕರೆದು ನಾಂ ಕಾರ್ತವೀರ್ಯಾರ್ಜುನನ ಜೈಸಬೇಕೀಕ್ಷಣದಲೀ ॥
ನೈಪುಣತ್ವದ ದೈತ್ಯದಳವವನ ದೇಶಮಂ ।
ವ್ಯಾಪಿಸಿಲು ಮುಂಬರಕ್ಕೆನುತ ರಣಕರ್ಕಶನಿ ।
ರೂಪವನ್ನಿತ್ತು ಖಳಸೇನೆಯನ್ನೊಡಗೊಂಡು ಪೊರಟನದ್ಭುತ ವೇಷದೀ ॥300॥

**ರಾಗ ಕಾಂಭೋಜಿ ಝುಂಪೆತಾಳ**

ಇತ್ತ ಸಾಸಿರ ತೋಳ್ಗಳಾಂತು ಮಾಹಿಷ್ಮತಿ ಯ ।
ಪತ್ತನವನತುಳ ವೈಭವದೀ ।
ಅತ್ಯಧಿಕ ಬಲ ಕಾರ್ತ ವೀ್ಯಾರರ್ಜುನನುಧರೆಯ ।
ಸತ್ಯದಿಂದಾಳುತ್ತಾಲೀರ್ದಾ ॥301॥

ಇರುತಿರಲ್ಕೊಂದು ದಿನ ಜಲಕೇಳಿಯೆಣಿಸಿಸುರ ।
ಚಿರನರ್ಮದಾತೀರದಲ್ಲೀ ॥
ತರತರದ ನಾರಿಯರನೊಡಗೊಂಡು ಪೋಗಿರಲು ।
ದ್ದುರುಳದಶಕಂಠ ಬಲವೆರದೂ ॥302॥

ತದ್ದೇಶಕೈದವನಾ ವಾರ್ತೆಯಂ ಕೇಳ್ದ ಪ್ರ ।
ಬುದ್ಧಿಯಲಿ ನರ್ಮದೆಗೆ ಬಂದೂ ॥
ಶುದ್ಧತರ ನದಿಯಲ್ಲಿ ಮಿಂದು ಮಡನಂಸುಪ್ರ ।
ಸಿದ್ಧ ಖಳ ಪೂಜಿಸುತ್ತಿರಲೂ ॥303॥

ಅದಕರ್ಧ ಯೋಜನದ ದೂರ ಜಲಮಧ್ಯದಲಿ ।
ಸುದತಿಯರ ಸಂದಣಿಯ ನಡುವೇ ॥
ಮದನ ಬಹಿರಂಗರತಿಯುತ್ಸವದಿ ನಪನಿರಲು ।
ಚದುರೆಯರು ಕಂಡರೀ ಜನವಾ ॥304॥

ನಾಚುತ ನಿಜಾಂಗಮಂ ವಸನದಿಂದಲೆ ಮುಚ್ಚು ।
ತಾ ಚಕ್ರವರ್ತಿಯೊಡನುಸುರೇ ॥
ವಾಚಿಸುವದೇನೆರಡು ಪಾರ್ಶ್ವದಭುಜಾಳಿಯಿಂ ।
ದಾ ಚಲಿಪ ಜಲವ ಕಟ್ಟಿದನೂ ॥305॥

**ವಾರ್ಧಕ**

ತನ್ನದಿಯ ತಡಿಯಲ್ಲಿ ದಂಡಿಳುಹಿೊಂಡಸುರ ।
ಪನ್ನಗಾಭರಣನಂ ಪೂಜಿಸುತ್ತಿರಲವನ ।

ತನ್ನೊಡನೆ ಕರತಂದು ಮನ್ನಿಪಡಿದಿರ್ಗೊಂಬ ಕಡಲಂತೆ ಜಲ ನಿಮಿಷದೀ ।
ಸನ್ನುತದಿ ಮೇಲ್ವರಿಯೆ ಸೈನ್ಯ ಕಂಗೆಡುತಲಿರ ।
ಲನ್ನೆಗಂ ದಶಕಂಠನರ್ಧಾರ್ಚನೆಯೊಳೆದ್ದು ।
ಸನ್ನೆಯೋಳ್ತಾರಣೆಗೆ ಸೂಚಿಸಲು ನಪತಿಯಂ ಕಂಡೊಡೆಯಗಿಂತೆಂದನೂ ॥306॥

**ಭಾಮಿನಿ**

ದನುಜಪತಿ ಕೇಳ್ಕಾರ್ತವೀ್ಯಾರ ।
ರ್ಜುನಮಹಾ ಜಲಕೇಳಿಯೊಳಗೆ ।
ಮ್ಮನುನಿರೀಕ್ಷಿಸಿ ಭುಜದಿ ನದಿಯಂ ಸೇತುಕಟ್ಟಿಹನೂ ।
ಇನಿತವನ ಚಾರಿತ್ರವೆನಲಾ ।
ಕ್ಷಣದಿ ಘರ್ಜಿಸಿ ಕಣೆಯ ಸುರಿಯಲು ।
ಕನಲಿನಪವರಖೂಳಗಿ ದಿರಾದನು ರಣಾಂಗಣಕೇ ॥307॥

**ರಾಗ ಪಂಚಾಗತಿ ಮಟ್ಟೆತಾಳ**

ದಾರೆಲಾಮದೀಯ ಧುರವ ।
ಹಾರವಿಸುತ ಬಂದ ಭಟನ ।
ಮೋರೆಹ್ಯಾಗಿರುವುದು ನೋಳ್ಪೆ ನೀ ರಣಾಗ್ರದೀ ।
ಧೀರತನವ ನಿಲಿಸುತೀ ಸಂ ।
ಸಾರ ಶರಧಿಯಿಂದಲೀಗ ।
ಪಾರುಗಾಣಿಸುವೆನೆನುತ್ತ । ಮೀರಿಹೊಡದನೂ ॥308॥

ವಸುಮತೀಶ ನೆಸೆದ ಬಾಣ ।
ಮಸುಗುತಲೆಮುಂಗಾರಮೇಘ ।
ವೆಸೆದುನಭವ ಮುಸುಕುವಂತೆ । ಪಸರಿಕೊಳ್ಳಲೂ ॥
ಅಸಮ ಬಾಣಕಂಜಿ ಭರದೊ ।
ಳಸುವ ಮರದು ನಿಲಲಸಾ ಧ್ಯ ।
ವೆಸಗೆನಿದ್ರೆ ಗೈದರಾಗ । ವಿಷಮ ದೈತ್ಯರೂ ॥309॥

ಸುತ್ತ ಮುತ್ತ ಲಸ್ತ್ರ ಶಸ್ತ್ರ ।
ವೆತ್ತಿ ಹೊಡೆಯೆದನುಜದಳವು ।
ತತ್ತರಿಸುತರಣದಿ ಹಿಂದ । ಕೊತ್ತಿಚದುರಲೂ ॥
ಮತ್ತೆ ಭೋರ್ಗರವು ತಲಾ ಪ್ರ ।
ಹಸ್ತನಾಗ ಹವಕೆ ನಿಂತು ।
ಕತ್ತರಿಸಿದ ನಪನದಳವು । ಮುತ್ತುವಂದದೀ ॥310॥

ಧುರದೊಳನ್ಯೋನ್ಯರೋಷ ।
ವೆರದು ಕಾದುತಿರಲುನಪತಿ ।
ಮೊರದು ತಾ ಪ್ರಹಸ್ತನಿರವ । ಭರದಿನೋಡುತಾ ॥
ಮರುಳೆದುರುಳ ದೊರೆಯನಂಬಿ ।
ಹರಣವೆಮ್ಮೊಳೊಪ್ಪಿಸುವುದು ।
ಹೊರತು ನಿನೊಳಾಗದೆನುತಸರಳನೆಚ್ಚನೂ ॥311॥

ಕನಲಿ ಬರುವ ಶರವ ತರಿವು ।
ತಿನಿತು ಯೆನ್ನೊಳಿದಿರುನಿಲುವ ।
ಜನರಕಾಣೆ ನೀಗ ನಿನ್ನ । ಘನಮದಾಂಧವ ॥
ಮನದೊಳೆಣಿಸದಿರುನಿರರ್ಥ ।
ತನುವ ಮಾರಿಗುಣಿಸಿಕೊಡುವೆ ।
ನೆನುತಪಲ್ಲ್ಮೊರವುತಾಗ । ಕಣೆಯ ನೆಸೆದನು ॥312॥

ಧಾರುಣೀಶ ಸಚಿವನಾಸ್ತ್ರ ।
ವಾರವೆಲ್ಲ ತರಿದು ದೊರೆಯ ।
ತೋರಿ ತವಶರೀರವೆರದು । ಸಾರಿಮನೆಯಲೀ ॥
ನಾರಿಗೊಲವ ತೋರ್ಪುದುಚಿತ ಸಾರಿ । ಪೇಳ್ವೆನೆನುತ ಲವನ ।
ಮೂರುಬಾಣದಿಂದ ಮೂರ್ಛೆ । ಗೇರಿಸೀದನು ॥313॥

**ವಾರ್ಧಕ**

ಸಾರಣನ ಮೂವ್ವತ್ತು ಬಾಣದಿ ಪಚಾರಿಸುತ ।
ಮಾರೀಚನಂಪತ್ತು ಮಾರ್ಗಣದಿ ಜಾಡಿಸುತ ।
ಘೋರಕುಂಭನನಾಲ್ಕು ಶರದಿ ಮಾತಾಡಿಸುತ ಕಂಪನಂ ಕಂಗೆಡಿಸುತಾ ।
ಮೂರು ಕಣೆಯಲಿ ಮಾಲ್ಯವಂತನಂಹಾರಿಸುತ ।
ಮೀರಿಬೃಹಖಳರನಸ್ತ್ರದ್ವಯದಿ ಭಾರಿಸುತ ।
ಬೇರುಳಿದ ಮೋಹರಕೆ ಭೀಕರವ ದೋರಿಸುತ ನಪನುಲಿದ ನಾ್ಭರಟಿಸುತಾ ॥314॥

ಮೊರೆವ ಕೋಲಾಹಲ ಸ್ವರದಿಂದ ಜನದಿಂದ ।
ತರತರದಿಬೀಳ್ವ ಮಣಿರಥದಿಂದ ಪಥದಿಂದ ।
ತಿರುಗಿ ಹಿಂದೊತ್ತುತಿಹ ಹಯದಿಂದ ಭಯದಿಂದ ಕಿ್ರೆರನುವ ಗಜಗಳಿಂದಾ ॥
ಕೊರಕೊರೆದು ಮುಸುಕುತಿಹ ಶರದಿಂದ ಭರದಿಂದ ।
ಹರುಷಿಸುವ ಶಾಕಿನಿಯ ಚಯದಿಂದ ಲಯದಿಂದ ।
ಮೆರೆದುದಾರಣ ಮಹಾಕುಲದಿಂದ ಛಲದಿಂದ ಭೋರ್ಗುಡಿಪ ರಭಸದಿಂದಾ ॥315॥

**ಭಾಮಿನಿ**

ಇತ್ತ ಸಚಿವನು ಮೂರ್ಛೆಗೈದಿರ ।
ಲತ್ಯಧಿಕ ರೋಷದಲಿ ಖಳನಿ ।
ಪ್ಪತ್ತು ತೋಳ್ಗಳ ಕುಣಿಸುತಾ ಸಾಸಿರ ಭುಜಾನ್ವಿತನಾ ॥
ಮತ್ತ ಗಜದಿದಿರಿನಲಿ ಗಜಬಂ ।
ದೊತ್ತುವಂತಾರ್ಭಟಿಸಿ ಕಿಡಿಯುಗು ।
ಳುತ್ತ ಮುಂಬರಿದೆಂದ ಕರ್ಕಶ ಸಿಂಹನಾದದಲೀ ॥316॥

**ರಾಗ ಭೈರವಿ ಅಷ್ಟತಾಳ**

ಹುಲು ನಪಾಲಕನೆ ಕೇಳೂ । ಎನ್ನೊಡನಿಂತ ।
ಛಲವಿನಿತ್ಯಾಕೊ ತಾಳೂ ॥
ಜಲಕೇಳಿಯಲ್ಲಿ ಹೆಂಗಳ ಕುಣಿಸುವದಲ್ಲ ।
ಕಲಹವ ನೀನರಿಯೇ ॥ ॥317॥

ಇನಿತೆಂದ ಮಾತಾಲಿಸೀ । ಥಕ್ಕನೆ ನೃಪ ।
ಮುನಿಸಿಂದಹೂಂಕರಿಸಿ ।
ಧನಪಾದಿದಿಕ್ಪಾಲರನು ಗೆಲ್ದೆನೆಂಬಹ ।
ಮ್ಮನು ತೋರಿಸೆನುತೆಚ್ಚನೂ ॥318॥

ಜಮದಗ್ನಿಯಾತಿಥ್ಯವಾ । ಮಾಡಿಸಲಾಗ ।
ಭ್ರಮೆಗೊಂಡು ನೀಸತ್ಯವ ।
ಸಮವೆಸಗಿದ ಮಹಾಮಹಿಮ ನೀ ಬಲ್ಲೆನೆಂ ।
ದಮರಿಬಾಣವತೂರಿದ ॥319॥

ಅಣ್ಣನ ಪೊರಡಿಸಿದಾ । ಆಮೇಲೆ ಮು ।
ಕ್ಕಣ್ಣನಗಿರಿಯೆತ್ತಿದಾ ।
ಪುಣ್ಯಾತ್ಮನೆಂಬುದ ತಿಳಿದಿಹೆನೆಂದಗ್ರ ।
ಗಣ್ಯತೂರಿದನಸ್ತ್ರವಾ ॥320॥

ಹಾಳೂರಿಗುಳಿದವನೇ । ಶ್ರೇಷ್ಠನೆಂಬುದ ।
ಕೇಳಿಹೆ ಬಡನಪನೇ ।
ತಾಳು ಪೂರ್ವದ ಶೌರ್ಯಮುಂದೈಯ್ಯದೆನು ತಸ್ತ್ರ ।
ಜಾಲವತುಂಬಿದನೂ ॥321॥

ವೇದಾವತಿಯನೀಕ್ಷಿಸೀ । ಮುಟ್ಟಲು ಮಾನ ।
ಪೋದುದನೀಗ್ರಹಿಸೀ ।
ಹಾದಿ ಹಿಡಿದು ಹೋದರುತ್ತಮವೆನು ತಲಾ ।
ಚ್ಛಾದಿಸಿ ಪೊದನಂದೂ ॥322॥

ಜನಪನ ನುಡಿಯ ಕೇಳ್ದು । ರಾವಣಮಹಾ ।
ಧ್ವನಿಗೈದು ಕೋಪತಾಳ್ದು ।
ಮನುಜ ಕೇಳ್ಮರುಮಾತನಾಡಿ ನೀ ಕೆಡಬೇಡೆಂ ।
ದೆನುತ ಕೋಲ್ಗರದನಂದೂ ॥323॥

ಇಂತನ್ಯೋನ್ಯದೊಳೀರ್ವರರು । ವರ್ಮದಿ ಪಂಥ ।
ವಂ ತಾಳ್ದುಪಟುಭಟರು ।
ಅಂತಕನೆದೆಂಚ್ಚುವಂತೆ ಹೊಯ್ದುಡಿದ ।
ರೇನೆಂಬೆನದ್ಭುತವಾ ॥324॥

**ವಾರ್ಧಕ**

ಗಿರಿಗಿರಿಗಳೊಂದಾಗಿ ಮಾರ್ಮಲೆವ ವೋಲ್ಧೀರ ।
ರುರವಣಿಸಿ ತಿಮಿರಾಸ್ತ್ರವೆಸೆಯಲರ್ಕಾಸ್ತ್ರದಿಂ ।
ತರಿದಗ್ನಿಬಾಣಮಂ ವರುಣಾಸ್ತ್ರದಿಂ ತಣಿಸಿ ಕಾದಾಡಿ ತಂತಮ್ಮೊಳು ॥
ಭರದಿ ಮೇಘಾಸ್ತ್ರಮಂ ಪವನಾಸ್ತ್ರ ದಿಂ ಸವರಿ ।
ವುರಗಬಾಣವ ಬಿಡಲು ಗರುಡಾಸ್ತ್ರದಿಂ ಗೆಲಿಯೆ ।
ಪರಿಪರಿಯ ಮುಸಲ ತೋಮರ ಮುದ್ಗರಾದ್ಯಖಿಳ ಕೈದುಗಳನೊದಗಿಸಿದರೂ ॥325॥

**ಭಾಮಿನಿ**

ಸೋಲದೀರ್ವರು ಮಲ್ಲಯುದ್ಧದಿ ।
ಮೇಲೆಮೇಲಮರುತ್ತಲಿರೆ ಖಗ ।
ಜಾಲದಿಂದುರುಳ್ಳೈದ ವೊಲಜ ಶರದಿ ದಶಮುಖನಾ ।
ಲೀಲೆಯಡಗಿಸಿ ಕದ್ದ ಕಳ್ಳನ ।
ತೋಳಬಿಗಿದೊಯ್ವಂತೆ ಪಥದಿ ನ ।
ಪಾಲಸಂಭ್ರಮದಿಂದ ಕುಣಿಸುತ ಪುರಕೆ ನಡೆತಂದಾ ॥326॥

**ವೃತ್ತ**

ಪರಮಾನಂದ ಚಯಾತಿ ರೇಕದಿ ಮಹಾ ನೃಪತನ್ನ ಪುರಕೊಯ್ಯಲೂ ।
ಪರಿತೋಷಾಬ್ಧಿಯೊಳಾಳುತಾ ಪುರಜನಂ, ಬಂದಾತನಂ ಕಾಣಲೂ ॥
ಪೊರಬಾಗಲ್ಬಳಿಯಲ್ಲಿ ರಾವಣನ ಕೈ ಕಟ್ಟಿರಿಸಿ ಸನ್ಮೋಹದಿ ।
ವರಸಿಂಹಾಸನವೇರಲಂಗನೆಯರಾ । ರತಿ ಯೆತ್ತಿದತೋರ್ಷದೀ ॥ ॥327॥

**ರಾಗ ಧವಳಾರ ತ್ರಿವುಡೆ ತಾಳ**

ಮಂಗಲ ನಪಶೇಖರ ವೈರಿಭು ॥
ಜಂಗಮ ನಿಕುರುಂಬ ಖಗೇಶ್ವರ ।
ತುಂಗವಿಕ್ರವನೇ ಜಯಾ ಜಯ ।
ಜಯ ಜಯವೆಂದಾಡುತ ಸತಿಯರು ।
ಮಂಗಳಾರತಿಯಾ ಬೆಳಗೀರೇ ॥ ಶೋಭಾನೆ ॥328॥

ಪಾರಾವಾರ ಗಂಭೀರೋದ್ಧಾರಾ ।
ಧೀರ ಕಪಾಕರ ಮಾರ ಶರೀರಾ ।
ವೀರಾಧಿವೀರಾ ಜಯ ಜಯಾ ।
ಜಯ ಜಯ ವೆಂದಾಡುತ ಸತಿಯರು ।
ಮೇರುವೆಯಾರತಿಯಾ ಬೆಳಗೀರೇ ॥ ಶೋಭಾನೆ ॥329॥

ಚಿತ್ರಚರಿತ್ರ ಸನ್ಮಂತ್ರಾಧಿಪ ಪುರು ಷೋತ್ತಮ
ಚಕ್ರಾಂಕಿತ ಸಂಭವ ವರ ।
ಕಾರ್ತವೀರ್ಯಾರ್ಜುನನೇ ಜಯ ಜಯಾ ॥
ಜಯ ಜಯವೆಂದಾಡುತ ಸತಿಯರು ।
ಮುತ್ತಿನಾರತಿಯಾ ಬೆಳಗಿರೇ । ಶೋಭಾನೆ ॥330॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇತ್ತ ದಾನವ ಸೈನ್ಯ ಮರುಗುತ ।
ಪತ್ತನಕೆ ನಡೆತಂದು ಮೆಲ್ಲನೆ ।
ಮತ್ತೆ ಕೈಕಸೆಗುಸುರಿದರುತ ತ । ದ್ವಾರ್ತೆಗಳನೂ । ॥331॥

ಹೆತ್ತೊಡಲು ಮರುಕದಲಿ ಬಳಿಕಾ ।
ಮತ್ತಕಾಶಿನಿ ಮಾವನಾದ ಪು ।
ಲಸ್ತ್ಯನೆಡೆಗೈತಂದು ನಮಿಸುತ । ವಿಸ್ತರಿಸಲೂ ॥332॥

ಭರದಿ ಪೊರಟಲ್ಲಿಂದ ನೃಪಮಂ ।
ದಿರಕೆ ಬರಲತಿಭಕ್ತಿಯಲಿ ಸ ।
ತ್ಕರಿಸಿ ಕೈಮುಗಿದೆಂದನಾ ಮನಿ । ವರನೊಳಂದೂ ॥333॥

ನಿನ್ನ ದರುಶನದಿಂದ ನಾಬಹು ।
ಧನ್ಯನಾದೆನುದಾವಗಮನವಿ ।
ದೆನ್ನೊಡನೆ ತಿಳುಹೆನಲು ತನ್ಮುನಿ । ಸನ್ನೆಗೈದಾ ॥334॥

**ಭಾಮಿನಿ**

ಅರಸ ಕೇಳ್ ದಶಕಂಠನೆನ್ನುವ |
ತರಳ ಮಮಪೌತ್ರನು ಕಣಾಯಿ |
ನ್ನೊರವುದೇನೀಗಿವನ ಕರುಣದಿ ಬಿಟ್ಟು ಕಳುಹೆನಲೂ ||
ಭರದಿ ಕಟ್ಟಿದ ಕೈಯ ಸಡಿಲಿಸಿ |
ದುರುಳನನು ಸತ್ಕರಿಸಲವರೀ |
ರ್ವರಿಗೆ ಮಿತ್ರತ್ವವನು ಮಾಡಿದನಗ್ನಿ ಸಾಕ್ಷಿಯಲೀ ||335||

**ಕಂದ**

ಇಂತು ಪಿತಾಮಹನಿಂದ |
ಚಿಂತಾಬ್ಧಿಯ ದಾಟಿ ದೈತ್ಯ ಲಂಕಾಪುರಕಂ ||
ಸಂತೋಷದಿ ಬಂದಾ ನಿಜ |
ಸಂತತಿಯೊಡಗೂಡಿ ಮೆರೆದ ಭುಜವಿಕ್ರಮದೊಳ್ ||336||

**ಭಾಮಿನಿ**

ದಶರಥಾತ್ಮಜ ಲಾಲಿಸೈಮ |
ತ್ತಸುರಪತಿ ಮೂಜಗವ ಗೋಳ್ಗು |
ಟ್ಟೆಸುವದರಿತವನಿಯಲಿ ನೀ ಮನುಜಾವ ತಾರದಲೀ ||
ಮಸಗಿ ದೈತ್ಯರ ಪೆಸರನಡುಗಿಸಿ |
ವಸುಮತಿಯ ಪಾಲಿಸಿದೆ ತವ ಸಾ |
ಹಸವನಾ ನೆಂತೊರವೆನೆನುತಲಗಸ್ತ್ಯ ಮುನಿನುಡಿದಾ ||337||

**ವಾರ್ಧಕ**

ಶ್ರೀ ಮದುತ್ತರಕಾಂಡ ಕಥನ ಮಂ ಪ್ರೀತಿಯೋಳ್ |
ರಾಮನಿಗಗಸ್ತ್ಯ ಮುನಿಪೇಳ್ದುದಂ ನಿಖಿಳಜನ |
ಭೂಮಿಯೊಳಗಾಲಿಸುವ ತೆರದಿ ನಗರಾಖ್ಯಪಟ್ಟಣದಿ ಭೂಸುರಕುಲದೊಳೂ ||
ನೇಮದಿಂದೆಸೆವ ವಿಠ್ಠಲನ ಸತಿಗೌರಿ ಸು |
ಪ್ರೇಮದಿಂ ಪಡದ ಸುತ ಸುಬ್ಬಯ್ಯನೆಂಬವಂ |
ಶ್ರೀ ಮಹಾ ವೆಂಕಟಾಚಲನನು ಗ್ರಹದಿಂದಲೊರದನೀ ಸಂಗತಿಯನೂ ||338||

**ರಾಗ ಆಹೇರಿ ಝುಂಪೆತಾಳ**

ಜಯ ಮಂಗಳಂ ಸದಾ ಶುಭ ಮಂಗಳಂ |
ಭವಾಂತು ಜಯ ಮಂಗಳಂ ||ಪ||

ಭಾಗವನುತ ನಾಮಕವಿಜನ ಸುಪ್ರೇಮ
ಕೋದಂಡರಾಮ ಬವಾಂತು ಜಯ ಮಂಗಳಂ ||  ||ಅ.ಪ.||

ಭೂಮಿ ಚಾರಿತ್ರ ಶೀಲರ ಮಣೀಯ ಗುಣಲೀಲಾ |
ಸಾಮಗಾನ ವಿಲೋಲಸನ್ಮಂಗಳೋ |
ದ್ಧಾಮ ನಿಧಿಕುಲ ಬಾಲಹೇ ಮುಖಚೇತ ಸುಚೇಲ |
ವ್ಯೋಮ ಚರ ಪರಿಪಾಲ ಶುಭ ಮಂಗಳಂ |
ಭವಾಂತು ಜಯ ಮಂಗಳಂ ||339||

ಅನುಪಮಾಲಂಕಾರ ಸನಕಾದಿ ಮುನಿವರ |
ವಿನುತದೀನೋದ್ಧತಜಯ ಮಂಗಳಂ ||
ದನುಜ ಮೇಘ ಸಮೀರವನಜ ಸಖ ಗಂಭೀರ |
ಕನಕ ಭೂಧರಧೀರ ಭವಂತಜಯ ಮಂಗಳಂ ||340||

ಘೋರ ದುರಿತ ವಿರಾಮ ಧಾರಾಧಿರಶ್ಯಾಮ |
ವೈರ ಸಂಕುಲಭೀಮ ಮಂಗಳಂ ||
ವೀರ ಮುಖ ಜಿತಸೋಮ | ಭೂರಿ ದೇವಲಲಾಮ |
ಚಾರು ವೆಂಕಟ ಧಾಮ | ಜಯ ಮಂಗಳಂ ಭವಾಂತು ಜಯ ಮಂಗಳಂ ||341||

**ಕಂದ**

ಶ್ರೀ ಕಷ್ಣಾಚ್ಚುನಿತಾಂತದೊ |
ಳೀ ಕೃತಿ ಮುದ್ರಾಪಿಸುತ್ತೆ ಪ್ರಕಟಿಸಿದಿದನುಂ ||
ಪ್ರಾಕತ ಭಾಷಾಭಿಜ್ಞರ್ |
ಸ್ವೀಕತವನು ಗೈದು ಮುದದಿ ವಾಚಿಸಲನಿಶಂ ||342||

**ರಾವಣೋದ್ಭವ ಪ್ರಸಂಗವು ಸಂಪೂರ್ಣವು**

## ಯಕ್ಷಗಾನ ಕುಂಭಕರ್ಣಾದಿ ಕಾಳಗ

## ಪಾತ್ರಗಳು

ಶ್ರೀರಾಮ
ಲಕ್ಷ್ಮಣ
ಬ್ರಹ್ಮ
ಸುಗ್ರೀವ

ನೀಲ

ವಿಭೀಷಣ

ಕಪಿಗಳು

ಅಂಗದ

ರಾವಣ

ಕುಂಭಕರ್ಣ

ಅತಿಕಾಯ

ಶೋಣಿತಾಕ್ಷ

ಜಾಂಬವ

ದೇವಾಂತಕ

ಇಂದ್ರಜಿತು

ಮಹೋದರ

ತ್ರಿಶಿರಮಕರಾಕ್ಷ

ನಿಕುರುಂಬ

ನರಾಂತಕ

ಯುದ್ಧೋನ್ಮತ್ತ

**ಮತ್ತೇಭವಿಕ್ರೀಡಿತವೃತ್ತ**

ಕುಶ ವಾಲ್ಮೀಕಿಮುನೀಂದ್ರನಂಘ್ರಿಗೆರಗೀ ತಾ ಕೇಳ್ದ, ಶ್ರೀರಾಘವಂ ।
ದಶಕಂಠಾಖ್ಯನ ಗೆದ್ದು ನಿರ್ವಸನದಿಂ ಹಿಂದಟ್ಟಲಾ ರಾವಣಂ ॥
ಅಸುಗಂ (ಖಂ) ಲಜ್ಜೆಯೊಳಿದ್ದು ರಾತ್ರಿ ಕಳೆಯುತ್ತೇನ್ಗೆಯ್ದನೇನೆಂಬುದಂ ।
ಉಸುರಲ್ಬೇಹುದೆನಲ್ ಮಹಾಮುನಿವರಂ ಪೇಳ್ದಂ ಸುಮಾಂಗಲ್ಯದಿ ॥1॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕೇಳು ಕುಶ ದಶಕಂಠ ಮರುದಿನ ।
ಓಲಗದಿ ಕುಳಿತಿರ್ದು ಮುಂದಣ ।
ಕಾಳಗಕೆ ಕಲಿಕುಂಭಕರ್ಣನು । ಏಳದನಕ ॥2॥

ಸಾಲದಾಹುದುಶಕ್ತಿ ನಮ್ಮದು ।
ಕೋಳುಹೋದರುತನುಜ ದನುಜರು ।
ಸೋಲವೇ ಸಂಪ್ರಾಪ್ತವಾಯಿತು । ಕಾಳೆಗದಲಿ ॥3॥

ಸಂಗಡಿಸಿಕೊಂಡಿರುವ ನಿದ್ರೆಯು ।
ಭಂಗವಾದರೆ ಬಳಿಕ ಕಪಿಗಳ ।
ಭಂಗಿಸದೆ ಬಿಡರಾಮಸೈನ್ಯವ । ಕುಂಭಕರ್ಣ ॥4॥

**ಭಾಮಿನಿಷಟ್ಪದಿ**

ಏನುಪಾಯದೊಳನುಜಸುಪ್ತಿಯ ।
ಜ್ಞಾನಗೊಳಿಸುವುದೆನಲು ದನುಜಪ್ರ ।
ಧಾನಿಗಳು ನಡೆತಂದರಾಗ ಸಮುದ್ರಘೋಷಲಿ ॥5॥

ಜೇನುನೊಣಗಳು ಮುತ್ತುವಂದದಿ ।
ದಾನವರು ಕೂಗಿದರು ಕಿವಿಯಲಿ ।
ಬಾನವೊಡೆವಂದದಲಿ ಹೊಯ್ದರು ಭೇರಿವಾದ್ಯಗಳ ॥6॥

**ರಾಗ ಮಾರವಿ  ಏಕತಾಳ**

ಏಳದಿರಲು ನಿದ್ರೆಯ ತಿಳಿ । ದೇಳದಿರುಲು -
ಏಳದಿರಲುಸಿರ ಗಾಳಿಯ ತಡೆದ್ಹೇ ।
ರಾಳ ಮೆಣಸಿನ, ಧೂಳನಿಕ್ಕರೆದ ।
ಭಾಳ ಸಾಸಿವೆ ಮೂಗುನಾಳದೊಳಿಕ್ಕಿಕ ।
ರಾಳರಕ್ಕಸರುಅಲಿಬೊಬ್ಬಿರಿಯೆ ॥7॥

ಆನೆ ಒಂಟೆಗಳಪೊಗಿಸಲಾಡು ಕಾ ।
ಳ್ಕೋಣ ಟಗರು ಹಂದಿಶ್ವಾನಗಳ ಮೂಗಿ ।
ಗೇನ ಪೊಗಿಸಿದರುಕಾಣೆನೆಚ್ಚರುವುದ ।
ಡಾಣೆಗಳಲಿಹೊಯ್ದನೆತ್ತಿಒಡೆಯೆ ॥8॥

ಮೂಗಿಗೆಪೊಗಿಸಿದ ಸಕಲ ಜಂತುಗಳು ।
ಸಾಗಿ ಬಾಯೊಳಗಿಂದಿಳಿದೈತಂದವು ।
ಯೋಗವೆಚ್ಚರಿಪ ಬಗೆಯಂ ಕಾಣದೆ ।
ಬೇಗ ರಾವಣನಿಗಾಗ ಪೇಳಿದರು ॥9॥

**ಕಂದ**

ತಮ್ಮಗೆ ನಿದ್ರೆಯ ಕೊಟ್ಟಾ ।
ಬೊಮ್ಮನ ಕರೆ ಎನಲು ಬೆದರಿ ಬಂದಜನಾಗಂ ॥
ಉಮ್ಮಳಿಸುತ ಮಂತ್ರೋದಕ ।
ಮಂ ಮೈಗೆರೆಯಲ್ಕೆ ಯೆದ್ದನಾ ಖಳನನುಜಂ ॥10॥

**ರಾಗ ಸೌರಾಷ್ಟ್ರ ಏಕತಾಳ**

ಆರೆಲೊ ದಾನವರೆನ್ನ ಆರುತಿಂಗಳ ನಿದ್ರೆಯನ್ನ |
ಗಾರುಗೆಡಿಸಿ ಎಚ್ಚರಿಸಿದ ಧೀರನಾರಯ್ಯ |
ತೋರಿ ಭೋಜನಕ್ಕೆ ಸೋಪಸ್ಕಾರಂಗಳ ತಂದೊಂದೊಂದ |
ಬೇರೆ ಬೇರಾದೆಣಿಕೆಯಿಂದ ಭೂರಿವಹಿಲದಿ ||11||

ಉಂಬೆನೀರೇಳು ಲೋಕಕುಂಭಿನಿಯೊಳಿದ್ದಂಥಾದ್ದ |
ಕುಂಭಕರ್ಣದೈತ್ಯ ತಾನಾರೆಂಬುದರಿಯಿರೆ ||
ಕೊಂಬ ಮೊದಲೆಮಾತಿದಲ್ಲ ಸಾಂಬಶಿವನೆ ಬಲ್ಲನೆಲ್ಲ | ||12||

ಕುಂಭಿನಿಯ ರಕ್ಷಿಸುವ ಜಂಭಾರಿ ದೇವ

ಅಣ್ಣ ರಾವಣೇಂದ್ರ ಬಲ್ಲ ಅನ್ನ ಪದಾರ್ಥಂಗಳೆಲ್ಲ |
ಸನ್ನಾಹವ ಮಾಡಿರೀಗತನ್ನಿರೋ ಬೇಗ ||
ಇನ್ನು ತಾಳ್ವದಲ್ಲ ಗಳಿಗೆಉಣ್ಣದಿದ್ದರೀಗಳೆನಗೆ
ಕಣ್ಣು ಕಾಣದು ಯಾರೆಂಬುದಿನ್ನು ಕೇಳದು ||13||

ಸೇವಕನೊರ್ವನು ಬಂದು ಈ ವರ್ತಮಾನವ ತಂದು |
ರಾವಣೇಂದ್ರನಿದಿರು ನಿಂದು ಪೇಳಿದನಂದು ||
ಸಾವಿರ ಶಾಕಂಗಳನ್ನು ತೊವೆ ಶಾಲ್ಯದನ್ನವನ್ನು |
ಕೇವಲ ಭಕ್ಷ್ಯಂಗಳನ್ನು ತಾನೆ ಕಳುಹಿದ ||14||

**ರಾಗ ಶಂಕರಾಭರಣ ತ್ರಿವುಡೆತಾಳ**

ಕುಂಭಕರ್ಣನ ರಣಕಿಳುಹ ಬೇ |
ಕೆಂಬ ಬಗೆಗೆ ರಾವಣ |
ಸಂಭ್ರಮದಿ ಸನ್ನಹವ ಕಳುಹಿದ | ನುಂಬ ಥಗೆಗೆ ||15||

ಹೆಂಡ ಮಾಂಸದಗಡಿಗೆ ಹೆಡಗೆ, |
ಮಂಡೆಗಳಲಿ ತುಂಬಿಸಿ |
ತಂಡತಂಡದಿ ಕಳುಹಿದನು ನೂ | ರ್ಭಂಡಿಗಳಲಿ ||16||

ಮಿಂದು ಮಡಿಯುಟ್ಟೀಶ್ವರಾರ್ಚನೆ |
ಯಿಂದ ಕುಳಿತು ಎಲ್ಲವ |
ತಿಂದನರೆನಿಮಿಷದಲಿ ಸವಿಸವಿ | ಯಿಂದ ಜಗಿದು ||17||

**ದ್ವಿಪದಿ**

ಸಣ್ಣಕ್ಕಿಯನ್ನ ಸೇಮಗೆ ಕಡುಬು ಘತವ ।
ಎಣ್ಣೆ ಹೂರಿಗೆಯ ಹೋಳಿಗೆಯು ಅತಿರಸವ ॥18॥

ಸುಕಿನುಂಡೆ ಲಡ್ಡುಗೆಯ ಪೆರಡಿಪಾಯಸವ ।
ಸಕಲಶಾಲ್ಯನ್ನ ಹೊಸ ಮಾಂಸರಾಶಿಗಳ ॥19॥

ತುಪ್ಪದಲಿ ಹುರಿದ ತಾಳಿಲವ ತಂಬುಳಿಯ ।
ಅಪ್ಪಕಜ್ಜಾಯ ಬಾಳುಕವ ಸೆಂಡಿಗೆಯ ॥20॥

ಅದರಿಂದ ತಪ್ತಿಯಾಗದ ಕುಂಭಕರ್ಣ ।
ಮುದಿಯಾನೆ ಕುರಿ ಕೋಣ ಹೊರತಾಗಿ ತಿನ್ನ ॥21॥

ಕದನಕೊದಗದ ವಿಧದ ಕುದುರೆಗಳ ತಿಂದ ।
ಬದಲು ಬತ್ತೆಮ್ಮೆ ಸಾವಿರದ ನೂರೊಂದ ॥22॥

ಶ್ವಾನವೊಂದುಳಿದು ದನಕರು ಹಂದಿಗಳನು ।
ದಾನವರು ತಂದಿತ್ತರೆಲ್ಲ ನುಂಗಿದನು ॥23॥

ಕತ್ತೆಗಳ ಕೊಂದು ತಂದಿತ್ತರೈನೂರ ।
ಮತ್ತೆ ಹಸಿವಡಗದಿರೆ ಹೇಳಿದರು ದೂರ ॥24॥

**ರಾಗ ಘಂಟಾರವ ಜಂಪೆತಾಳ**

ದುರುಳನಿಗೆ ಹಸಿವಡಗದಿರಲು ರಾವಣದೈತ್ಯ ।
ಗುರುವಿಗಾಜ್ಞಾಪಿಸುತ ತೆರಳಿಸಿದನಾಗ ॥25॥

ಮಂತ್ರಿಸಿದ ಮೊಸರನ್ನವಂ ತಿನಿಸಿದಾಕ್ಷಣಕೆ ।
ನಿಂತಿತಾಹಶು ತಷೆ ಮಹಾಂತದೈತ್ಯನಿಗೆ ॥26॥

ಉಂಡು ಕರಗಳ ತೊಳೆದು ವೀಳ್ಯಗಳ ಮೆಲುತ ಮುಂ ।
ಕೊಂಡು ಬರುತಣ್ಣನಂ ಕೊಂಡಾಡುತಿರ್ದ ॥27॥

ಬರುವ ತಮ್ಮನ ನೋಡಿ ಬಹಳ ಹರ್ಷವ ಮಾಡಿ ।
ಸರಿಗದ್ದುಗೆಯಲಿ ಕುಳ್ಳಿರಿಸೆ ಪ್ರೇಮಲಿ ॥28॥

ಅಣ್ಣ ಮುಖಕಮಲಗಳು ಬಣ್ಣಗುಂದಿಹುದೇನು ।
ಎನ್ನನೆಬ್ಬಿಸಿದ ಬಗೆ ಇನ್ನೇನು ನಿನಗೆ ॥29॥

ಎಂದು ಕೇಳಿದ ತಮ್ಮನಂದವನು ಮನಸಿನಲಿ ।
ತಂದುಕೊಂಡತಿದೈನ್ಯದಿಂದ ಪೇಳಿದನು ॥30॥

**ರಾಗ ಕಾಂಭೋಜಿ ಅಷ್ಟತಾಳ**

ತಮ್ಮ ಕೇಳೆನಗೊಂದು ತೊಡರು ಬಂದಿದೆ ಇಂದು ।
ನಮ್ಮ ಶೂರ್ಪಣಖಿಯಿಂದ ॥
ಸುಮ್ಮನೆ ಕಲಹಕಾರಣವ ಮಾಡಿದಳೀಕೆ ।
ಶರ್ಮವಾಗಿರುವದಕೆ ಸಾವಿರವೇಕೆ ॥31॥

ದಶರಥಸುತ ರಾಮ ಧರಣಿಪಾಲಕ ತಮ್ಮ ।
ಅಸಮಸಾಹಸಿ ಲಕ್ಷ್ಮಣ ॥
ವಸುಧೆಯಾಳ್ವುದ ಬಿಟ್ಟು । ವನವಾಸ ಕಾಲಿಟ್ಟು ।
ಕಸರಿಕೆಮೊಳೆದೋರಿತು ನಮ್ಮೊಳಗಿನಿತು ॥32॥

ತಂಗಿ ಸೂರ್ಪಣಖಿಯ ಕುಚವ ನಾಸಿಕವ ಕ ।
ರ್ಣಂಗಳ ಕೊಯ್ದರೆಂದು ॥
ಕಂಗೊಳಿಸಿದ ಖರದೂಷಣ ತ್ರಿಶಿರರ ।
ಭಂಗಿಸಿ ಮೆರೆದರೆಂದು ಪೇಳಿದಳ್ಬಂದು ॥33॥

ಆ ಕೋಪಕದಕಾಗಿ ಅರಿಯದಂದದಿ ಪೋಗಿ ।
ನಾ ಕದ್ದು ತವಕದಲಿ ॥
ಆ ಕಾಂತೆ ಸೀತೆಯ ತಂದ ಕಾರಣದಿಂದ
ಈ ಕಡೆಮುಖವಾಯಿತು ನಮ್ಮೆಡೆಗಿಂತು ॥34॥

ಆ ಸೀತೆಯನು ಬಿಟ್ಟು ಕೊಡಬೇಕೆಂದೆನುತ ವಿ ।
ಭೀಷಣ ಛಲದಿ ಪೋಗಿ ॥
ತಾ ಸೇರಿಕೊಂಡ ರಾಮನ ನಮಗಿದಿರಾಗಿ ।
ಈಸು ಕಾರ್ಯವ ಮಾಡಿದ ಪೇಳಲೇನದ ॥35॥

ಆಯಿತೊಂದೆರಡಂತ್ರ ಅಣುಗರ ಕದನದಿ ।
ಮಾಯಕದೊಳಗೆ ಕೊಂದ ॥
ನ್ಯಾಯವ ನ್ಯಾಯವಾದರು ಹೀಗಾಯಿತು ಮುಂದೆ ।
ನೀ ಯೆಂಬುದೇನು ಪೇಳುಸತ್ಯವೆನ್ನೊಳು ॥36॥

**ಶಾರ್ದೂಲ ವಿಕ್ರೀಡಿತವೃತ್ತ**

ಇಂತೆಂದಾದವಿಚಾರಸಂಗತಿಗಳಂ ಕುಂಭಶ್ರವಂ ಕೇಳುತ ।
ಕಾಂತಾಭ್ರಾಮಕದಿಂದ ಬಂದ ಕದನಂ ಲೇಸಾಗದೀಸಾರಿಯೊಳ್ ॥
ಅಂತರ್ಭಾವದಿ ನಿರ್ಣಯಂಗೊಳಿಸಿ ಇನ್ನೇನಾಗಲೆಂತಾಗಲಿ ।
ಸಂತಾನಂ ಕೆಡದಂತೆ ಪೊಗಿಯನುಜಂ ಶ್ರೀರಾಮನಂ ಸೇರಿದಂ ॥37॥

**ವಚನ**

ಇಂತೆಂದು ಮನದೊಳಗೆ ಹಲವು ಯೋಚನೆಯಂ ಮಾಡಿ ರಾವಣನೊಡನೆ ಏನೆಂದನು  ಎಂದರೆ -

**ರಾಗ ಕಲ್ಯಾಣಿ  ಏಕತಾಳ**

ನಿನ್ನಂಥ ಜಾಣರಿಂಗಿದು ನೀತಿಯೆ ಪೇಳಣ್ಣ ।
ಕಣ್ಣ ಮುಂದಲ್ಲದೆ ಪರರ ಹೆಣ್ಣ ತಂದಿಟ್ಟುಕೊಂಬುದು ॥38॥

ಸೀತೆ ಯೆಂಬಳೀಗ ಭೂಮಿಜಾತೆ ಮಹಾಲಕ್ಷ್ಮೀ ।
ಆತ ರಾಮಚಂದ್ರನೇ ಸಾಕ್ಷಾತದೇವನು ॥39॥

ಕೋತಿಗಳೆಂಬುದು ಪುಸಿಮಾತು ಸುಪರ್ವಾಣರೈಸೆ ।
ಮಾತನಾಡಿನ್ನೇನು ಕಾರ್ಯ ಆತುದೇ ಶೌರ್ಯ ॥40॥

ಮುಂದುವರಿದಮೇಲೆ ಇನ್ನುನೊಂದು ಮಾಡುವಂಥದೇನು ।
ಎಂದಿಗಾದರೀ ಶರೀರ ಎರವಿನ ಹಾರ ॥41॥

ಹಿಂದುಗಳೆಯೆಕೀರ್ತಿ ನಿಲದುನಿಂದಿಸುವರು ಬೈದು ಜನರು ।
ಸಂದೇಹವಿಲ್ಲ ಸಂಗರವೇ ಸರ್ವಸಮ್ಮತ ॥42॥

ಮಾಧವನ ಸೇರ್ವೆ ನಾ ವಿರೋಧದಿಂದಾದರೂ ಸ್ವಾಮಿ ।
ಪಾದವ ಹೊಂದುವೆ ಹೇಗಾದರಾಗಲಿ ॥43॥

ಕಾದುವೆನೀಹೊತ್ತು ನಾನು ಕೊಡಿಸು ವೀಳೆಯವ ನೀನು ।
ಸಾಧನಸನ್ನಾಹವನ್ನುಸಾಗಿಸೈಇನ್ನು ॥44॥

**ಕಂದ**

ಗೆಲುವೆನು ರಾಮನ ಸೈನ್ಯವ
ಕಳುಹೆನ್ನನು ವೀಳ್ಯವಿತ್ತು ಕಪಿಪಾಳೆಯವಂ ।
ಕಲಕುವೆನೊಡ್ಡಿಸಿ ಕೀಶರ
ಗೆಲವೆಮಗಾಯ್ತೆನಿಸದಿರೆನು ತವ ಕರುಣದೊಳಂ ॥45॥

**ರಾಗ ಶಂಕರಾಭರಣ ಅಷ್ಟತಾಳ**

ತಮ್ಮ ನೀ ತೆರಳು ಬೇಗ ರಾಮನ ಪಾಳ್ಯ ।
ಗಮ್ಮನೆ ಜಯಿಸಲೀಗ ॥
ತಮ್ಮವರಿಗೆ ಬಂತು ಗೆಲವೆಂದು ಮನದಲಿ ।
ಹಮ್ಮಿನೊಳಿರುವ ರಾಮನಿಸ್ಸೀಮ ॥46॥

ವೇಳೆಯನರಿತುಕೊಂಡು ತಮ್ಮನಿಗಾಗ ।
ವೀಳೆಯ ಕೊಡಿಸಲಂದು ॥
ಪಾಳೆಯನೆರಹಿ ಪಟ್ಟಣದಿಂದ ಬರೆ ಯಮ ।
ಗೂಳೆಯ ತೆಗೆದನಂತೆ ಎಂಬಂತೆ ॥47॥

ಶೃಂಗಾರ ರಚನೆಯಿಂದ ಕೂಡಿದ ಚತು ।
ರಂಗ ಮಾರ್ಬಲಗಳಿಂದ ॥
ಸಂಗಡಿಸಿದ ನಾನಾ ಬಿರುದು ಬಣ್ಣಗಳಿಂದ ।
ತುಂಗವಿ ಕ್ರಮನು ಬಂದ ಮಲೆತು ನಿಂದ ॥48॥

**ಭಾಮಿನಿ**

ಕುಂಭಕರ್ಣನ ರಣದ ಸೊಬಗಿನ ।
ಸಂಭ್ರಮವ ನೋಡುತ್ತ ದಿವಿಜ ಕ ।
ದಂಬ ಬೆರಗಿನಲಿದ್ದರಗಣಿತ ಭಯದ ಭಾರದಲಿ ॥49॥

ಅಂಬುಜಾಕ್ಷನು ಆ ವಿಭೀಷಣ ।
ನೆಂಬುವನ ಕೇಳಿದರೆ ಬರುವವ ।
ಕುಂಭಕರ್ಣಮಹಾನಿಶಾಚರನೆಂಬ ಸಮಯದಲಿ ॥50॥

**ರಾಗ ಕಾಂಭೋಜಿ ಝುಂಪೆತಾಳ**

ಎಂತು ಜೈಸುವನೊ ಶ್ರೀರಾಮ ಇವನ ।
ಅಂತಕೊೇಪಮನಾದ ಕಲಿಕುಂಭಕರ್ಣ  ॥ ಪಲ್ಲವಿ ॥

ಮೇರುಪರ್ತದಂತೆ ಮೆರೆದಿಹುದು ಒಡಲಂತೆ ।
ಭಾರಿ ಕೆಂಗಣ್ಣು ಕೆಮ್ಮಾೃಸೆಗಳಲಿ ॥
ಮೂರು ತಾಳೆಯ ಮರವ ಮಾರಿಹುದು ಕಾಲವನ ।
ತೋರ ಕೈಬೆರಳು ಹೆಮ್ಮರನಂಥ ಕೊರಳು ॥51॥

ಇಂತೆಂದು ಸಕಲಸುರರಾಗ ಯೋಚಿಸಲು ಹನು ।
ಮಂತ ನೋಡಿದನು ರಾಕ್ಷಸನ ಸೈನ್ಯವನು ॥
ಅಂತರಂಗದೊಳಿವರ ನರೆವೆನೆಂದಿರುವಾಗ ।
ಭ್ರಾಂತು ಬುದ್ಧಿಯ ದನುಜ ಬಂದು ಬೊಬ್ಬಿರಿದ ॥52॥

**ವೃತ್ತ**

ಅಸುರಪಡೆಯು ಬಂದು ಆರ್ಭಟಿಸುತ್ತಲಂದು ।
ಮುಸುಕಿ ಮರ್ಕಟರನು ಮುಂದೆ ನಿಂದಿರ್ದರನ್ನು ॥

ಬಿಸಜನಾಭನಾಗ ಬಿಲ್ಲ ತೆಕ್ಕೊಂಡು ಬೇಗ ।
ಎಸೆವ ಶರಗಳಿಂದ ರಾಮ ಮಾರಾಂತು ನಿಂದ ॥53॥

**ರಾಗ ನಾದನಾಮಕ್ರಿಯೆ ಮಟ್ಟೆತಾಳ**

ನಾನು ರಾಮ ಕೇಳೊ ಕುಂಭಕರ್ಣ ರಾಕ್ಷಸ ।
ವಾನರಾದಿಗಳನು ಗೆಲುವದೇನು ಸಾಹಸ ॥54॥

ಕೊಲಿಸಬೇಡ ದನುಜರನ್ನು ನಿಲಿಸು ಸುಮ್ಮನೆ ।
ಅಲಸದೆನ್ನ ಕೂಡೆಸೆಣಸಿ ನೋಡು ಘಮ್ಮನೆ ॥55॥

ಬಿಡುವ ಖಳನಶರವ ರಾಮ ನಡುವೆ ತರಿದನು ।
ತೊಡುವ ತೊಡುವ ಶರವನೆಲ್ಲ ಪುಡಿಯಗೈದನು ॥56॥

ಉರಗ ಬಾಣವೆಸೆಯೆ ದನುಜ ಗರುಡವಿಶಿಖದಿ ।
ತರಿದುಬಿಸುಡೆ ಗೋತ್ರಶರವ ಮುರಿದ ಕುಲಿಶದಿ ॥57॥

ಉರಿ ಛಢಾಳಿ ಸಲ್ಕೆಜಲದಿ ಪರಿಹರಿಸಿದನು ।
ಕರದ ಧನುವ ಕಡಿದು ಧರಣಿ ಗುರವಣಿಸಿದನು ॥58॥

ಬಿಲ್ಲು ಮುರಿದ ಮೇಲೆ ದನುಜ ಹಲ್ಲ ಕಿರಿಯುತ ।
ನಿಲ್ಲಲಾಗ ರಾಮ ಕೋಪದಲ್ಲಿ ನೊೀಡುತ ॥59॥

ರಾಮ ಮೂಲ ಶರದಿ ಶಿರವ ಭೂಮಿಗಿಳುಹಿದ ।
ಆ ಮಹಾ ಕುಂಭಕರ್ಣೋದ್ದಾಮನೊರಗಿದ ॥60॥

ಬೀಳಲಸುರ ಕುಂಭಕರ್ಣ ಕೇಳಿ ದಿವಿಜರು ।
ಶ್ರೀಲಲಾಮ ಶರಣೆನುತ ಹೂಮಳೆಯ ಕರೆದರು ॥61॥

**ವಾರ್ಧಕ**

ಕುಂಭಕರ್ಣನ ಮಡಿದ ಒಡಲ ನೋಡಲು ಪಾಪ ।
ವೆಂಬ ಬಗೆಯಂತೆ ಭಾಸ್ಕರನಾದಿನಂ ಪಶ್ಚಿ ।
ಮಾಂಬುಧಿಯೊಳದ್ದ, ತಮ್ಮನ ಮರಣಮಂ ಕೇಳ್ದು ಹಂಬಲಿಸಿ ದಶಕಂಠನು ॥

ಕುಂಭಿನಿಯನಾಳ್ವಮನುಜರು ಬಂದು ದನುಜರಂ ।
ಬೆಂಬಿಡದೆ ಕೊಲುವದೇನಾಶ್ಚರ್ಯ ಶಿವ ಶಿವ ತ್ರಿ ।
ಯಂಬಕನೆ ತ್ರಿಪುರಾರಿ ಪಾರ್ವತೀರಮಣ ಹರಯೆಂಬಾಗ ಬೆಳಗಾಯಿತು ॥62॥

**ರಾಗ ಸಾವೇರಿ ಅಷ್ಟತಾಳ**

ಇನ್ನು ರಾಘವನಿಗೆ ಜಯವಾಯಿತು ಕುಂಭ ।
ಕರ್ಣ ಹಾಗಾದ ಮೇಲೆ ॥
ಬಣ್ಣಗುಂದಿದ ಚಿನ್ನ ಬಡಿದಂತಾಯಿತು ತನ್ನ ।
ಪುಣ್ಯದಸಿರಿ ಎಂದನು ದನುಜೇಂದ್ರನು ॥63॥

ಪುರವ ಸುಟ್ಟಂದೆ ಗೋಚರಿಸದಾದೆನು ಹಿಂದೆ ।
ಪೊರಡಿಸಿದೆನು ತಮ್ಮನ ಸಂಧಾನದಿ ॥
ಜರೆದೆನಂಗದನ ಮಾತನು ಕೇಳದಾನಿಂತು ।
ಪರಿಪೂರ್ಣ ಮರುಳಾಯಿತು - ಹೀಗಾಯಿತು ॥64॥

ಪರಸತಿಯನು ತಂದು ಸೆರೆಯೊಳಿಕ್ಕಿದೆನೆಂದು ।
ಪರಿದಪಕೀರ್ತಿ ಬಂತು ಮಕ್ಕಳಿಗಿಂತು ॥
ಮರಣ ಸಂಭವಿಸಿತು ನಿರತ ಸೇವಿಸುವಂಥ ।
ಸುರರು ದೂಷಕರಾದರು ಏನಾದರೂ ॥65॥

**ವಾರ್ಧಕ**

ಪರಸತಿಗೆ ಪರುಠವಿಸಿ ಪಾರಾಯ್ತು ಪಂಥದಲಿ ।
ಪರುಷ ಕಬ್ಬಿಣವಾಗಿ ಫಲಿಸಿತನುದಿನ ಕರೆವ ।
ಸುರಭಿ ಗೊಡ್ಡಾಯ್ತುಮತ ವಿಷವಾಯ್ತು ಸೌಭಾಗ್ಯಹೀನಗಪಜಯವಾಯಿತು ॥
ಪುರುಷಾರ್ಥವಿಲ್ಲ ಬದುಕಿದರಿನ್ನೆನುತ್ತ ಮನ ।

ಕರಗುತಿಹ ವೇಳ್ಯದಿ ನರಾಂತಕಂ ನಡೆತಂದು ।
ಪರಮ ಪೌರುಷದಿಂದ ಮಂಡೋದರಿಗೆ ನಮಿಸಿ ದಶವದನಗಿಂತೆಂದನು ॥66॥

**ರಾಗ ಪಂತುವರಾಳಿ ಏಕತಾಳ**

ತಂದೆ ಕೇಳ್ಮರ್ಕಟರನ್ನು ಕೊಂದಲ್ಲದೀಹೊತ್ತು ನಾನು ।
ಬಂದೆನಾದರೆ, ನಿಮ್ಮ ಕಂದನಲ್ಲೆಂದ ॥67॥

ನೀಲನ ಪಾಳೆಯವ ಕಾಲನಾಲಯಕಿಕ್ಕದಿದ್ದರೆ ।
ಪೇಳುವೆ ನಿಮ್ಮಿಬ್ಬರಿಗೂ ಬಾಲಕನಲ್ಲ ॥68॥

ಎಂದು ಪ್ರತಿಜ್ಞೆ ಮಾಡಿನಿಂದ ರಾಕ್ಷಸನ್ನ ನೋಡಿ ।
ಬಂದನಂಗದ, ಕಾದಲೆಂದನುವಾದ ॥69॥

**ರಾಗ ಘಂಟಾರವ ಏಕತಾಳ**

ಬಂದವನಾರೋ ನೀನು ಏನೇನು ॥ ಪಲ್ಲವಿ ॥

ಬಂದವನದಾರೋ ನೀನು ಮುಂದೆ ಕಾರ್ಯಗಳಿನ್ನೇನು ।
ತಂದೆ ಯಾರು ತಾಯಾರು ನಿನ್ನ ಏ ಸಂಪನ್ನ ॥ ಅನುಪಲ್ಲವಿ ॥

ಆನೆಕುದುರೆ ಒಂಟೆ ಸೇನೆಗಳಿನ್ನೆಷ್ಟುಂಟೆ ।
ಜಾಣನಹುದಯ್ಯ ನೀನು ಮುಂದೇನು ॥70॥

ಕುಂಭಕರ್ಣನು ಹೋದ ಸಂಬಳಕಿವನಾದ ।
ನೆಂಬುದ ಬಲ್ಲೀ ನಾನು ಇನ್ನೇನು ॥71॥

ಕಾದಲೆನುತ ಬಂದೆ ಹೋದಮೇಲೇನು ಮುಂದೆ ।
ನೀದಾರಿ ಮಾಡಿಕೊಳ್ಳಯ್ಯ ಈ ನುಡಿಕೇಳಯ್ಯ ॥72॥

ಬತ್ತಲೆ ನಿಂತವನಪುತ್ರನಲ್ಲವೆ ನೀನು ।
ಉತ್ತಮ ನಾಮವೇನು ಏನೇನು ॥73॥

**ರಾಗ ಭೈರವಿ ಏಕತಾಳ**

ಹೀಗೆಂದೆನುವದರೊಳಗೆ । ಬಾಣ ।
ತಾಗಿತು ಬಂದಂ ಗದಗೆ ॥
ಆಗದ ನೆಲ್ಲವ ತಡೆದ । ಕರ ।
ದಾಗಿರಿ ಮರದಲಿ ಹೊಡೆದ ॥74॥

ಬಾಣವಬಿಡುವುದರೊಳಗೆ । ಬಿದ್ದ ।
ದಾನವ ಧಾರಿಣಿಯೊಳಗೆ ॥
ಪ್ರಾಣವಳಿಯಲಾತ್ರಿಶಿರ । ಬಲು ।
ಜಾಣದೇವಾಂತಕರಿದರ ॥75॥

ಕಂಡೈತರೆ ಹನುಮಂತ । ಖತಿ ।
ಗೊಂಡೇಳಲು ಬಲವಂತ ॥
ಚಂಡಮಹೋದರ ನತ್ತ । ಕೈ ।
ಗೊಂಡನು ಸಮರಕೆ ಮತ್ತ ॥76॥

ಹಲು ಮೊರೆಯುತ ಮುಂದರಿಯೆ । ನಿ ।
ಶ್ಚಲಚಿತ್ತದಿ ಮೇಲ್ವರಿಯೆ ॥
ಗಳಿಗೆಯೊಳಾತನ ನೀಲ । ರಣ ।
ದೊಳು ಸಂಹರಿಸಿದಶೀಲ ॥77॥

ಯುದ್ಧೋನ್ಮತ್ತನೆಂಬಾತ । ಬಲು ।
ಯುದ್ಧವಮಾಡಲು ವಷಭ ॥

ಗೆದ್ದನರೆಕ್ಷಣದೊಳಗೆ । ಖಳ ।
ಬಿದ್ದನು ಧಾರಿಣಿಯೊಳಗೆ ॥78॥

ಬರುವ ಬರುವ ದಾನವರು ಯಮ ।
ಪುರದಲಿ ಮನೆ ಮಾಡಿದರು ॥
ಕರವ ಮುಗಿದನತಿ ಕಾಯ ದಶ ।
ಶಿರನಿಗೆಪೇಳ್ದನು ನ್ಯಾಯ ॥79॥

**ಕಂದ**

ಆರ್ಕೈ ಬಂದವರೆಂದೆನು
ತಾರಯ್ಯುತ ಮಾತನಾಡಿ ಜಾಂಬವದೇವಂ ।
ಶ್ರೀರಾಮನ ಮಹಿಮೆಯ ಸುವಿ
ಚಾರದೊಳು ವಿಭೀಷಣಂಗೆ ತೋರಿಸುತೆಂದಂ ॥38॥

**ರಾಗ ಕುರಂಜಿ ಅಷ್ಟತಾಳ**

ಕಂಡೆಯಾ ವಿಭೀಷಣ ರಾಮನಾಟವ ॥ ಕಂಡೆಯಾ ॥ ಪಲ್ಲವಿ ॥

ಕಂಡೆಯಾ ಕಮಲಲೋಚನನ ಈ ಭೂ ।
ಮಂಡಲದೊಡೆಯ ರಾಘವನ ಚೆಲ್ವ ।
ಪುಂಡರೀಕಾಕ್ಷ ಮಾಧವನ ಸೇನಾ ।
ತಂಡವೆಲ್ಲವ ಕಡೆಹಿದನೆಂಬ ಹಂಕತಿ ।
ಗೊಂಡು ಪೌರುಷವ ಮುಂಕೊಂಡು ಮೈಮರೆವುದ ॥39॥

ಮರುತನಂದನನುಳಿದಿರಲು ಸಮ ।
ಸ್ತರು ಎಚ್ಚರಿತು ಕೊಂಡವರು ಎಂದು
ಅರಿತುಕೊನಂಬಿ ಮನದೊಳು ಇದ ।
ನೆರೆ ತಿಳಿದವರ್ಚಿನುಮಯನಾತ್ಮನೆಂದುಸು ।
ರ್ವರು ಮುಖ್ಯ ಪ್ರಾಣನಿದ್ದರೆ ಕಾರ್ಯಜಯವೆಂದು ॥40॥

**ಕಂದ**

ವಾರಿಜಸಂಭವಸುತನಂ
ಮಾರುತಿ ಕಂಡೆರಗಿ ಬಂದೆ ನಾ ಹನುಮಂತಂ
ಕಾರಿಯಮೇನುಂಟೆನಗದ
ಕಾರುಣ್ಯದಿ ಬೆಸಸಬೇಕೆನಲ್ಕಿಂತೆಂದಂ ॥41॥

**ರಾಗ ನೀಲಾಂಬರಿ ಅಷ್ಟತಾಳ**

ಉಳಿದೆಯಾ ಹನುಮಂತ ನೀನು ।
ಕಳೆದೆಯಾ ಬಾಣದುರುಬೆಯನು ।
ತಿಳಿದೆಯ । ಶೌರ್ಯ । ತಳೆದೆಯಾ ॥42॥

ಜಗದ ಜೀವಪ್ರಾಣನೆಂದು ।
ಹೊಗಳಿಸಿ, ಕೊಳಬೇಕು ನಿಂದು ।
ಬಲವಂತ । ದೇವ । ಹನುಮಂತ ॥43॥

ರಾಘವ, ಮುಂತಾದವರ ।
ಯೋಗವನ್ನೆಚ್ಚರಿಸುವುದರ ।
ಕಾಣೆನು । ಯುಕ್ತಿ । ಬೇರೇನೂ ॥44॥

ಮತ್ಯುಂಜಯನ ಪರ್ವತದಿಂ ।
ದಿತ್ತಲೀಶಾನ್ಯ ಭಾಗದಿಂ ।
ದ್ಹೊಳೆವದು । ಶೀತ । ಗಿರಿಯದು । ॥45॥

ಚಂದ್ರದ್ರೋಣವೆಂದು ಬಹಳ ।
ಚಂದದ ಗಿರಿಯುಂಟದರಲಿ ।
ಮದ್ದುಂಟು । ನಾಲ್ಕೌ । ಷಧಿಯುಂಟು ॥46॥

ಸಂಜೆಯಾದ ಬಳಿಕ ನಾಳೆ ।
ಸಂಜೀವನವ ತಾರಾಮೇಲೆ ।
ಉಳಿವರು । ಮೂರ್ಛೆ । ತಿಳಿವರು ॥47॥

ಕಾಣಬಾರದಲ್ಲಿಹ ಗೀ ।
ರ್ವಾಣ ಮುಂತಾಗಿರುವ ದೇವ ।
ದನುಜರು ಅವ । ರ್ತನುಜರು ॥48॥

**ಮತ್ತೇಭವಿಕ್ರೀಡಿತವೃತ್ತ**

ಕುರುಹಂ ಪೇಳ್ದಜಸೂನು ಬೀಳ್ಕೊಳಲವಂ ದಾರಾತ್ರೆಯೊಳ್ವೇಗದಿಂ ।
ಗಿರಿಗೈತಂದರಸಲ್ಕೆಕಾಣದಿರಲಂದಾ ಗೋತ್ರಮಂ ಕೀಳುತ ।
ಬರೆ ಪೊತ್ತಾಕ್ಷಣ ತಂದು ಜಾಂಬವಗದಂ ತೋರಲ್ಕೆ ಸಂಶೋಧಿಸಿ ।
ವರ ನಾಸಾಗ್ರದಿ ಹಿಂಡಲಾ ರಘುವರಂ ಎಚ್ಚತ್ತನೇವೇಳ್ವೆನು ॥49॥

**ರಾಗ ಸಾವೇರಿ ಅಷ್ಟತಾಳ**

ತಿಳಿದು ಲಕ್ಷ್ಮಣನೆದ್ದಾಗಳೆ ಸುಷೇಣನು ಮದ್ದ ।
ಉಳಿದವರಿಗೆ ಹಿಂಡಲಿಳೆಗೆ ಮೂರ್ಛೆಯಗೊಂಡು ।

ಮಲಗಿದವರು ಬಂದು ಎರಗೆ ರಾಘವ ಕಂಡು ।
ಬೆಳಗಾಗುವಷ್ಟರ ಮೊದಲೀ ಪರ್ವತವನ್ನು
ಕಳುಹಿಸುಮುನ್ನಿದ್ದ ಬಳಿಗೆಂದುಪೇಳ್ದ ॥50॥

ಆ ಸುರಗಿರಿಯ ಸಂತೈಸುತಮತ್ತುಳಿ ।
ದೀಸರನೆಬ್ಬಿಸಿದಾ ಸಾಹಸಕೆ ಬಿಸ ।
ೕವಾರಸನಸೂನು ಸಂತೋಷದಿಂದಿರ್ದನು ।
ವಾಸವ ಮೊದಲಾದಮರರೆಲ್ಲರು ಜಗ ।
ದೀಶನ ಮಹಿಮೆ ಎಂಬಾ ಸಮಯದಲಿ ॥51॥

ದಣಿಸಿದನಾ ಇಂದ್ರಜಿತು ಬಾಣನಿದ್ರೆಯಿಂ ।
ದೆನುತ ಮನಃ ಕ್ಲೇಶದಿಂ ಕಪಿಗಳು ರಾ ।
ವಣನ ದುರ್ಗವ ರಾತ್ರಿ ಪುನರ್ದಹನವ ಮಾಡಿ ।
ಘನ ಬೇಗದಿಂದ ಹಿಂತಿರುಗಿ ವನಜನಾ ।
ಭನ ಪದಕೆರಗಲಾ ದಿನಪನು ದಯವಾಯ್ತು ॥52॥

**ವಚನ॥** ಇಂತಾ ಲಂಕಾಪಟ್ಟಣವನ್ನು ಪುನರ್ದಹನವಂ ಮಾಡಿ ತಮ್ಮ ಠಾಣೆಯದಲ್ಲಿ ಸ್ವಸ್ಥದಿಂದಿರಲತ್ತಲಾ ದುರ್ಗದ ಕೇರಿಯವರು ಏನೆನ್ನುತ್ತಿರ್ದರದೆಂತೆನೆ -

**ರಾಗ ರೇಗುಪ್ತಿ ಅಷ್ಟತಾಳ**

ತರವಲ್ಲ ನಾವಿನ್ನಿರಸಲ್ಲ ದಶ ।
ಶಿರನೆಂಬ ರಕ್ಕಸ ತಾನೊಳ್ಳೆಯವನಲ್ಲ ॥ ಪಲ್ಲವಿ ॥

ಹೋಯಿತು ರಾಮನದಂಡೆಂಬ ಮಾತು ಸು ।
ಳ್ಳಾಯಿತು ಕನಸಿನ ರೊಕ್ಕದಂತೆ ।
ಬಾಯ ಬಿನ್ನಾಣ ವಿಂದ್ರಾರಿಗೆಲಿದ ಮಾತು ।
ತೋಯದೊಳ್ಮುಳುಗಿ ಕಣ್ಣೊಡೆದಂತಾದ್ದಲ್ಲದೆ ॥53॥

ಇನ್ನು ರಾವಣನಿಗಹಳು ಸೀತೆಎಂಬುದು ।
ಕನ್ನಡಿಯೊಳಗಿನ ಗಂಟೆನಂತಾಯ್ತು ॥
ಹೊನ್ನಕರಂಡದಂ ತಿರುವ ಪಟ್ಟಣ ಹೋಗಿ ।
ಹೆಣ್ಣು ಗಂಡುಗಳಿಂಗೊಂದರುವೆ ಯಾಯ್ತಲ್ಲದೆ ॥54॥

ಧರಣಿನಂದನೆಯ ದಾನವ ತಂದಿದ್ದಾರಭ್ಯ ।
ಸಿರಿಗೆಟ್ಟಿತೀ ಊರಸೌಭಾಗ್ಯವು ॥
ಕರಕರೆಯಲಿ ದಿನ ಕಳೆವುದಲ್ಲದೆ ಮನ ।
ಹರುಷವಿಲ್ಲದೆ ದುಃಖಸ್ಥಿರವಾಯಿತಲ್ಲದೆ ॥55॥

ಪಾಶವ ತೊರೆದು ಪಟ್ಟಣದಿಂದ ಹೊರವಂಟು ।
ದೇಶಾಂತರಕ್ಕೆ ಹೋಗುವ ಎಂದರೆ ॥
ಸಾಸುವೆಗೆಡೆಯಿಲ್ಲವೆಂಬಂತೆ ಕಪಿಗಳು ।
ತಾವ್ ಸುತ್ತಮುತ್ತಲು ಕವಿದುಕೊಂಡಿಹವಲ್ಲ ॥56॥

**ವಾರ್ಧಕ**

ಎಂದು ಪಟ್ಟಣದಿ ಗುಜುಗುಜಿಸುತಿರೆ ನಿಕುರುಂಬ
ಬಂದು ರಣಕಿದಿರಾಂತು ನಿಲಲವನ ಹನುಮಂತ
ಕೊಂದನಾ ಬಳಿಕ ನೀಲನು ಶೋಣಿತಾಕ್ಷನಂ ಕಾದಿ ಕಡೆ ಗಾಣಿಸಿದನು
ಸಂದರವರೆಣಿಕೆ ತಗ್ಗಿತು ಬಳಿಕ ಮಕರಾಕ್ಷ
ನೊಂದೆರಡುಗಳಿಗೆ ಕಪಿಗಳ ಕೊಲ್ವ ಸಮಯದೊಳು
ಇಂದಿರಾರಮಣ ರಘುಕುಲಜಾತ ತಾನೆ ನಡೆತಂದು ಮಾರಾಂತು ನಿಂದ ॥57॥

**ರಾಗ ಮಾರವಿ ಅಷ್ಟತಾಳ (ವಿಲಂಬಿತ)**

ಜಾನಕಿಯ ಗಂಡನೆಂಬಾತ ನೀನೊರಾಮು ।
ಹೇನನೊರಸಿದಂತೆ ಕೊಲುವೆ ನಿನ್ನ ನಿಸ್ಸೀಮ ॥58॥

ಅತಿಕಾಯ ಕುಂಭಕರ್ಣರಿಂದತಿಶಯನೊ ನೀನು ।
ಮತಿಗೆಟ್ಟು ಮಾತಾಡುತಿರ್ಪೆ ಮರುಳರಂತಿದೇನು ॥59॥

ಹಿಂದೆ ಖರದೂಷಣರ ಕೊಂದಾತ ನೀನಹುದೆ ।
ಹಿಂದು ಮುಂದು ನೋಡದಿಲ್ಲಿ ಬಂದು ಸಿಕ್ಕಬಹುದೆ ॥60॥

ತಂದೆ ಇದ್ದಬಳಿಗೆ ನಿನ್ನ ಹೊಂದಿಸದೆ ಬಿಡೆನು ।
ಹಿಂದೆ ಜಾರಿ ಜುಣುಗಿ ಪೊಷೆನೆಂದರೆ ನಾಬಿಡೆನು ॥61॥

ಹೆಂಡತಿಯವನದಿ ಕಳೆದುಕೊಂಡಾತ ನಾಬಲ್ಲೆ ।
ಹಿಂಡು ಹಿಂಡು ವಕ್ಷಚರರ ದಂಡಿಸಿರುವೆ ನಿಲ್ಲೆ ॥62॥

ಜಾಣ ನೀನೋಡೆನ್ನಕಯ್ಯ ಬಾಣವೆನುತ ಹೊಡೆದ ।
ಜಾನಕಿಯ ರಮಣನದರ ಕಾಣುತ್ತಲೆ ಕಡಿದೆ ॥63॥

ಹತ್ತೆಂಟು ಬಾಣವ ರಘುಜಮಸ್ತಕಕ್ಕೆ ಬಿಡಲು ।
ಕತ್ತರಿಸಿ ಪ್ರತಿಗೆ ಬಾಣವಿತ್ತ ನೋಡಿ ದನುಜ ॥64॥

ಎಸೆಯುತಿರಲು ರಾಮಶರವನಸುರ ನೋಡುತಿರ್ದ ।
ವಶವಿಲ್ಲದಂತಾಗಿ ದನುಜ ವಸುಧೆಗೊರಗಿ ಬಿದ್ದ ॥65॥

ಇಳೆಯೊಳಸುರ ಬಿದ್ದನೆಂದು ತಿಳಿಯಲಾಗಿಸುರರು ।
ಭಳಿರೆ ರಾಮಜಯವೆಂದು ಪೂಮಳೆಯ ಕರೆಯುತಿರಲು ॥66॥

**ಭಾಮಿನಿ**

ಖರತನುಜ ಮಕರಾಕ್ಷಸಹ ಯಮ
ಪುರಿಗೆ ಬಿಜಯಂಗೆಯ್ಯಲಾಕ್ಷಣ
ಸುರಪಜಿತು ಹನುಮಂತನಿಂದುರೆ ಸೋತು ಜಾನಕಿಯ ।
ಪರಿಯ ಕಪಟದ ರೂಪ ನಿರ್ಮಿಸಿ
ಮರುತಸುತನಿಗೆ ತೋರೆ ಮಾಯದ
ತರುಣಿ ಎಂಬುದ ತಿಳಿಯದೇ ಚಿಂತಿಸಲು ರಘುನಾಥ ॥67॥

**ಕಂದ**

ಕಪಟದ ಕಾಯಕವೆನುತಾ
ಗುಪಿತದಿ ತಾಪೇಳಿ ಶರಣನತಿಭರವಸೆಯೊಳ್ ।
ತಪನಕುಲೇಶನ ಚಿಂತೆಯ
ನೃಪಹರಿಸಲ್ಕಿತ್ತ ನೆನೆದನಾ ಶಕ್ರಜಿತು ॥68॥

**ಸಾಂಗತ್ಯ (ಚರಿತೆ) ರಾಗ ಪಂತುವರಾಳಿ ರೂಪಕತಾಳ**

ರಣವ ಜೈಸುವ ಶಕ್ತಿಬೇರಿಹುದಿನ್ನು ಮಾ ।
ರಣಯಜ್ಞವನು ರಚಿಸುವೆನು ।
ಹನುಮ ಜಾಂಬವ ವಿಭೀಷಣಮುಖ್ಯಲಕ್ಷ್ಮಣ ।
ಗೆಣೆಯಹತೆರನ ನೋಡುವೆನು ॥69॥

ಎನುತ ಯೋಚನೆ ಗೈದು ಏಕಾಂತದಿಂದ ರಾ ।
ವಣಿಗೋಪ್ಯಸ್ಥಳವನು ಗ್ರಹಿಸಿ ।
ಘನತರಕಪಟದಿ ಯಜ್ಞವೆಸೆಗೆ ವಿಭೀ ।
ಷಣನುಸುರ್ದನು ರಘುಪತಿಗೆ ॥70॥

ಜಗದಾಧಾರನೆ ಕೇಳು ಬಂತೊಂದಾಕಸ್ಮಿತ ।
ಬಗೆಯಲಿನ್ನೇನೆಂಬೆ ನಾನು ।
ಪಗೆಗೆ ಮಾರಣಯಜ್ಞ ಕುಂಭಿನಿಯೊಳು ಮಾಳ್ಪ ।
ಮಗನಿಂದ್ರಜಿತು ಲಾಲಿಸೆಂದ ॥71॥

ತ್ರಿಜಗದೊಳಿದಿರಿಲ್ಲವಗೆ ರಾಜೇಂದ್ರ ಕೇ ।
ಳಜನಿತ್ತ ವರಬಲದಿಂದ

ಭುಜಬಲವುಳ್ಳರು ಸಂಗಡ ಬರಲೆನ್ನ ।
ಸುಜನವೈರಿಯ ತೋರಿ ಕೊಡುವೆ ॥72॥

ಹನ್ನೆರಡಬುದ ಹಸಿವು(ದು?) ನಿದ್ರೆ ಸ್ತ್ರೀಸಂಗ ।
ವನ್ನು ತೊರೆದವನ ಹೊರತು ।
ತನ್ನ ಕೊಲ್ಲಲು ಬಾರದೆಂಬ ವರವುಂಟವ ।
ಗಿನ್ನೇನುಹವಣುಯೆಂಬಾಗ ॥73॥

ಅಣ್ಣ ಕೊಡಪ್ಪಣೆ ಯೆನುತ ಬಿಲ್ಪಿಡಿದಿಹ ।
ತನ್ನ ತಮ್ಮನ ಮೊಗ ನೋಡಿ ।
ಸಣ್ಣವನೆಂತು ನೀ ಜೈಸುವೆಂದೆನಲೆಂದ ।
ಬಿನ್ನೈಸುವೆನಯ್ಯ ಕಡೆಗೆ ॥74॥

ಕೊಂದುಕೊಡುವೆ ರಕ್ಕಸನನೆಂದು ಕೈಮುಗಿ ।
ದಂದು ಸೌಮಿತ್ರಿ ಮುಂದೊತ್ತೆ ।
ಒಂದುಳಿಯದೆ ಈ ಸಾಧನೆಗಳಿದ್ದರೆ ಯೆನ್ನ ।
ತಂದೆ ನೀಮುಂದೆ ಪೋಗೆಂದ ॥75॥

ತಡೆಯದೆ ಹನುಮ ನೀಲಾಂಗದ ಜಾಂಬವ ।
ರೊಡನೆ ಪೋಗಲಿ ವಿಭೀಷಣನು ।
ಬಡಿದು ಖಳನ ಯಜ್ಞಕೆಡಿಸಿ ಬರುವುದಕ್ಕೆ ।
ಪಡಿಬಲವಾಗಿ ಲಕ್ಷ್ಮಣಗೆ ॥76॥

ರಾಮನಪ್ಪಣೆಯಿಂದ ರಭಸದಿಂದಾರ್ವರು ।
ಆ ಮಹಾಕುಂಭಿನಿಗಿಳಿದು ।
ತಾಮಸ ಚರರ ಸಂಹರಿಸಿ ಏಳಂಗದ ।
ಹೋಮವ ಕೆಡಿಸಿದರೊಲಿದು ॥77॥

ಭುಗಿಲೆಂಬ ಭೂತಗಣವನೆಚ್ಚು ಗಾಳಿಯ ।
ಪೊಗಿಸಿ ಹಾರಿಸಿದನು ಹನುಮ ।
ನಗುತಲಾ ಹುತಿಗೊಂಬ ಭೂತಸಂಕುಲವೆಲ್ಲ ।
ಮಗಧರಹರನ ಸಾರಿದವು ॥78॥

**ರಾಗ ಮಾರವಿ ಅಷ್ಟತಾಳ**

ರಾವಣಾತ್ಮಜ ಸಾಕು ರಥವೇರುಕೊಳು ಚಾಪ ।
ಸಾವಕಾಲಕೆ ಯಜ್ಞವೇಕೆ ।

ಜೀವಗಳ್ಳರ ಗಂಡ ಇದಿರಾಗೆಂದೆನುತಲಿ ।
ದೇವಲಕ್ಷ್ಮಣ ಗರ್ಜಿಸಿದನು ॥79॥

**ರಾಗ ಕೇದಾರಗೌಳ ಅಷ್ಟತಾಳ**

ದೀಕ್ಷೆಯ ಮುರಿದೆದ್ದು ಕಡೆಗಣ್ಣಿ ನಿಂದ ನಿ ।
ರೀಕ್ಷಿಸಿ ಕಿರಿಯಯ್ಯಗೆಂದ ।
ರಾಕ್ಷಸ ಕುಲಗೇಡಿ ತೊಲಗೆಂದು ನಿಂದಿಸಿ ।
ಲಕ್ಷ್ಮಣಗಿದಿರಾದ ಖಳನು ॥80॥

ಎಲವೊ ರಾವಣಿ ಕೇಳುಪರಸತಿಯರ ದ್ರೋಹ ।
ನೆಲನ ಹೊಕ್ಕರು ಬೆನ್ನ ಬಿಡದು ।
ಛಲ ಬಿಟ್ಟು ರಾಮನ ಪದಪಂಕ ಜವಸೇರಿ ।
ಸಲಹಿಕೊ ನಿನ್ನ ಪ್ರಾಣವನು ॥81॥

ಹರಣದಾಸೆಗಳುಳ್ಳಡಣ್ಣನ ಕರೆಸಿಕೊ ।
ಚರಣ ನಂಬಿದ ವಿಭೀಷಣನ ।
ತಿರಿದುಂಬುದಕ್ಕೆ ಜೋಳಿಗೆಯ ಪಾಲಿಸಿ ದೇಶಾಂ ।
ತರಕಟ್ಟು ಕೋಲೊಂದ ಕೊಟ್ಟು ॥82॥

ಅಣ್ಣನ ಕರೆಸಿ ನಿನ್ನಪ್ಪ ರಾವಣನನ್ನು ।
ಮಣ್ಣ ಕೂಡಿಸಿ ಲಂಕಾಪುರವ ।
ಬಣ್ಣದಿಂದಲೆ ನಿನ್ನ ಚಿಕ್ಕಯ್ಯ ಶರಣಂಗೆ ।
ಉಣ್ಣಗೊಡುವೆ ನಿರಂತರದಿ ॥83॥

ಆಶ್ಚರ್ಯವೆಂಬಡೆ ಅಸುರನ ರಥ ವಾಜಿ ।
ಎಚ್ಚು ಕೆಡಹಿದ ಮಾರ್ಬಲವ ।
ಕೊಚ್ಚಿ ಸೀಸಕವ ಮೈರುಧಿರಾಂಬು ಮಯವಾಗೆ ।
ಮುಚ್ಚಿ ಲೋಚನವ ಮೈಮರೆದ ॥84॥

ಎಚ್ಚರುವುತಲೆದ್ದು ಶುಕ್ರನೌ ಷಧಿಯಿಂದ ।
ಎಚ್ಚನು ಬ್ರಹ್ಮಶಕ್ತಿಯನು ।
ಅಚ್ಯುತಾನುಜ ವಿಭೀಷಣಗಿಟ್ಟ ಶಕ್ತಿಯ ।
ನುಚ್ಚುಗೆಯ್ದೆಸೆದಾಗ ಖಳನು ॥85॥

ಮನುಜೇಂದ್ರ ಕೇಳನ್ನಾ ಹಾರವು ನಿದ್ರೆಯು ।
ವನಿತೆ ವರ್ಜಿತವಾದ ವ್ರತವು ।

ನಿನಗುಳ್ಳೊಡಿದಿರಾಗು ಬರಿದೆ ಸಾಯದಿರೆಂದು ।
ಧನುವಿಗೊಡ್ಡಿದನು ಮಾರ್ಗಣವ ॥೮೬॥

**ವಾರ್ಧಕ**

ಕಪಿಬಲವು ಬೆರಗಾಗಿ ಕಂಗೆಟ್ಟು ನಿಂದಿರಲು
ಅಪರಿಮಿತ ದಾನವರು ಗುಪಿತದಿಂದಿರುತಿರಲು
ಚಪಲಾಕ್ಷಿ ಸೀತೆ ಕಳಕಳಿಸಿ ಮುರುಗುತ್ತಿರಲು ವಿಪುಳ ಭಯ ಮೈನೆರೆಯಲು ।
ನೃಪನ ಶರದಿಂದ್ರಸುತನೃಪಕೀರ್ತಿಯಾಯ್ತೆಂದು
ತ್ರಿಪುರಸಂಹಾರಿಭಕ್ತನ ಸುತನ ಕಾಳಗದಿ
ಕಪಿರಾಜಸುಗ್ರೀವ ಮೊದಲಾದ ವೀರರುಂ ಗುಪಿತದಿಂ ಗುಜುಗುಜಿಸಲು ॥೮೭॥

**ರಾಗ ಮಾರವಿ ಅಷ್ಟತಾಳ**

ಮರುಳೆ ರಾವಣಿ ಪರಿಹರಿಸು ಮಹಾಸ್ತ್ರವ ।
ಸ್ಮರಿಸಿಕೊ ಕುಂಭಿನಿಯ ।
ಬರಿಸು ಶುಕ್ರನನೆಂಬಷ್ಟರೊಳಿಂದ್ರ ಸೂನುವ ।
ಶಿರವು ಹಾರಿತು ನಭಕೆ ॥೮೮॥

ಸುರರುಘೇಯೆಂದುಬ್ಬಿ ಸೌಮಿತ್ರಿಯಂಗಕೆ ।
ಸುರಿದರು ಪುಷ್ಪವಷ್ಟಿಗಳ ।
ಮರಳಿ ರಾಮನ ಪದಾಬ್ಜಕೆ ಬಂದು ಪೊಡಮಟ್ಟು ।
ಧುರದ ಸಂಗತಿಯ ಪೇಳಿದರು ॥೮೯॥

**ಭಾಮಿನಿ**

ಮೂರುಲೋಕದ ಮತ್ಯು ಯಮನಲಿ
ಸೇರಿದನು ಖಳನೆಂದು ರಘುಪತಿ
ಭೂರಿಹರ್ಷದಿ ಲಕ್ಷ್ಮಣನ ತಕ್ಕೈಸಿ ಮುದ್ದಾಡೆ ।
ಸಾರಸಂತಸದಿಂದ ಪಶ್ಚಿಮ
ವಾರಿಧಿಯ ಮರೆಯಾಗೆ ರವಿ, ಸುರ
ನಾರಿಯರು ಬಂದಾರತಿಯ ಬೆಳಗಿದರು ರಘುವರಗೆ ॥೯೦॥

**ವಾರ್ಧಕ**

ರಘುವಂಶವಾರಿಧಿಗಳಿರ ಕೇಳಿರಿಂದ್ರಾರಿ
ಹಗರಣದಿ ಮಡಿದಲ್ಲಿಗಾಯಿತೀ ಸಂಧಿಯೆಂ
ದೊಗುಮಿಗೆಯ ಹರ್ಷದಲಿ ಮುನಿಪೇಳ್ದ ರಾಮಚಾರಿತ್ರವಂ ಮನಮೆಚ್ಚುತ ।

ಸೊಗಸಿಂದ ಕೇಳ್ವಪೇಳ್ವರ ಮನಕೆ ಸಂತಸವ
ನಗಣಿತದ ಸೌಭಾಗ್ಯ ಸಂಪತ್ತುಗಳ ಕಣ್ವ
ನಗರೇಶ ಗೋಪಾಲಕೃಷ್ಣನೊಲಿದೀವನೆಂಬುದು ವೇದಸಿದ್ಧವಚನ ॥೨೧॥

**ಮಂಗಲಪದ**

ತುಂಗ ವಿಕ್ರಮ ದಶಮುಖಸಂಹರಗೆ
ಮಂಗಳ ಮಧುಸೂದನ ಮುರಹರಗೆ ॥ ಮಂಗಳಂ ॥
ದಶರಥಸುತ ಶತಭಾಸನಿಗೆ ।
ಕುಸುಮನಯನ ದುರ್ಜನಕುಲಹರಗೆ ।
ಅಸುರದಲ್ಲಣ ಮನುಮುನಿವಂದಿತಗೆ
ಬಿಸಜನಾಭ ಪಶುಪತಿ ಮಾಧಗೆ ॥ ಮಂಗಳಂ ॥

***

# ಯಕ್ಷಗಾನ ಅತಿಕಾಯ ಕಾಳಗ

## ಪಾತ್ರಗಳು

ಶ್ರೀರಾಮ
ಲಕ್ಷ್ಮಣ
ಸೀತೆ
ಹನುಮಂತ
ಸುಗ್ರೀವ
ಕಪಿಗಳು
ವಿಭೀಷಣ
ಜಾಂಬವ
ಅಂಗದ
ಸರಮೆ
ತ್ರಿಜಟೆ
ಧಾನ್ಯಮಾಲಿನಿ
ಸುಷೇಣ
ಅತಿಕಾಯ
ರಾವಣ
ಚಾರಕ (ರಾವಣನ ಕಡೆ)
ದೀರ್ಘೋದರ
ಅತಿಕಾಯನ ಸಾರಥಿ

ಕಾಲನೇಮಿ
ದೇವಸ್ತ್ರೀ
ವಿರೂಪಾಕ್ಷ
ವಿದ್ಯುತ್ಕೇಶಿ
ಮಾಯದ ಮುನಿಗಳು
ಪುರನಾರಿಯರು
ಚಾರಕ

## ಅತಿಕಾಯನ ಕಾಳಗ

**ರಾಗ ಶಂಕರಾಭರಣ ತ್ರಿವುಡೆತಾಳ**

ಜನಕ ಲಾಲಿಸು ರಾಮಚಂದ್ರನು | ಮನುಜನಲ್ಲ ಲೋಕದ |
ಘನವನಿಳುಹಲು ಬಂದ ನಾರಾ | ಯಣನೆ ಕೇಳು ||1||

ಸಕಲದೊಳು ಪರಿಪೂರ್ಣ ವ್ಯಾಪಾ | ರಕನ ಕೂಡೆ ಸೇವಾ |
ಸಕೃತಿಯಲಿ ಸುಖಬಾಳ್ವುದೊಳ್ಳಿತು | ಯುಕುತಿಯೊಳಗೆ ||2||

ಅಪ್ರಮೇಯಾ ದ್ವೈತನಂಘ್ರಿಯ | ಕ್ಷಿಪ್ರದಿಂದ ಸೇವಿಸಿ |
ತಪ್ಪು ಬಂತೆಂದೆನುತ ಸೀತೆಯ | ನೊಪ್ಪಿಸಯ್ಯ ||3||

ಲೇಸು ಬಾರದು ಕದನವಾಲಕ್ಷ್ಮೀಶನೊಡನೆ ಅನುಜವಿ |
ಭೀಷಣನ ಕರ ಕೊಂಡು ಬಂದು ವಿ | ಲಾಸದಿಂದ ||4||

ಇರುವದೊಳ್ಳಿತು ಎಂಬನುಡಿ ದಶ | ಶಿರನು ಕೇಳಿ ಕೋಪದಿ |
ಜರೆಯಲಿದುವೇ ಸಮಯವೆನುತವ | ನರಿತನಾಗ ||5||

**ರಾಗ ಘಂಟಾರವ ಜಂಪೆತಾಳ**

ತಂದೆ ಕೇಳೀ ಹೊತ್ತು ಎನಗೆ ವೀಳ್ಯವನಿತ್ತು |
ಚಂದದಲಿ ರಣಕೆ ಕಳುಹೆಂದು ಕೈಮುಗಿದ ||6||

ಬೇಗ ರಣವನು ಜೈಸು ಹೋಗೆಂದು ವೀಳ್ಯವಿ |
ತ್ತಾಗ ಕಳುಹಿದ ಕರುಣಸಾಗರನ ಬಳಿಗೆ ||7||

ಕರಿತುರಗ ರಥ ದಾನವರು ಸಹಿತ ಹೊರವಂಟ |
ಧುರಕೆ ಸನ್ನಹದಿಂದ ಹರಿಸೇವೆಗೆಂದ ||8||

**ರಾಗ ಕಲ್ಯಾಣಿ ಅಷ್ಟತಾಳ**

ಬನ್ನಿ ರಾಮನ ಸೇವೆಗೆ ಸಾಧುಗಳೆಲ್ಲ ॥ ಪಲ್ಲವಿ ॥

ಇನ್ನು ಇಂಥಾವೇಳ್ಯ ವಿಲ್ಲ ಸಿಕ್ಕುವುದಿಲ್ಲ ।
ಪನ್ನಂಗಶಯನ ರಾಮೆನ್ನುತ್ತ ಶರಣರೆಲ್ಲ ॥9॥

ಮನು ಮುನಿಗಳು ನಿತ್ಯ ನೆನೆಯುತಿರಲು ಸತ್ಯ ।
ಘನತರ ನಿಜಮುಕ್ತಿಯನು ಸಾಧಿಸುವರಲ್ಲ ॥10॥

ಸರಸದಿಂದಲೆ ಸರಸಿರುಹನಾಭನ ಪದ ।
ಸರಸಿಜವನು ಕಾಂಬತವಕದಿ ಸುಜನರೆಲ್ಲ ॥11॥

**ವಾರ್ಧಕ**

ಇಂತೆಂದು ಡಂಗುರವ ಹೊಸಿ ಪಟ್ಟಣದಿಂದ
ತಾಂ ತೆರಳಿ ಬರುವ ಪಾಳೆಯವ ನೋಡುತ್ತ ಹನು
ಮಂತಮುಖ್ಯಾದಿಗಳು ಮಾತಾಡುತಿರೆ ಶರಣನಿಂತೆಂದನಾ ರಾಮಗೆ ॥
ಕಂತುಪಿತ ಕೇಳೀತನತಿಕಾಯನಧಿಕಬಲ
ವಂತ ನಿಯಮಿತಸುವ್ರತಂ ವೈಷ್ಣವಾದಿಗಳೊ
ಳಂತರಿಲ್ಲದ ಭಕ್ತನೆನಲು ಸೌಮಿತ್ರಿ ಮಾರಾಂತನತಿಕಾಯಗಿದಿರು ॥12॥

**ರಾಗ ಕಾಂಭೋಜಿ ಅಷ್ಟತಾಳ**

ಹೊಡೆದಾಡಿದರು ರಣದೊಳಗೆ, । ಬಲು ।
ಕಡುಪರಾಕ್ರಮ ಪಂಥಪೌರುಷದೊಳಗೆ ॥ ಪಲ್ಲವಿ ॥

ಮದಕರಿಗಳನೆತ್ತಿಗಿಡುತ । ರಥ ।
ಕುದುರೆ ರಾವುತರ ಮಂಡೆಗೆ ಬಾಣಬಿಡುತ,
ಬದಲಿಗೆ ಬದಲಂಬ ನಿಡುತ, । ಸಮ ।
ರದ ಸಂಭ್ರಮದಲಿ ಡೊಂಬಿಗೆ ಮೆಯ್ಯಕೊಡುತ ॥13॥

ಕೆಂಗರಿ ಕೋಲ ಕಾಹುರಕೆ, । ಮುಸು ।
ಸಿಂಗಳೀಕಗಳೆಲ್ಲ ಬಿದ್ದವುನೆಲಕೆ ।
ಸಂಗಡಿಸಲು ಯಮಪುರಕೆ, । ಸಮ ।
ರಾಂಗಣದೊಳು ಲೆಕ್ಕವಿಲ್ಲ ಸತ್ತುದಕೆ ॥14॥

ಕ್ಷಯವಾಯ್ತನೇಕ ದಾನವರು, । ಜಯ ।
ಜಯವೆಂದಂಬರದಿ ಬೊಬ್ಬಿಡುತಲೆ ಸುರರು ।
ಜಯಭೇರಿ ಹೊಯ್ದರತ್ಯಧಿಕ, । ಬಲು ।
ಪ್ರಿಯದಿಂದ ಲಕ್ಷ್ಮಣನನು ಪೊಗಳುತ ॥15॥

ಶಕ್ತಿಯಿಂದೆಚ್ಚು ಸೌಮಿತ್ರಿ, । ಖಳ ।
ಮಸ್ತಕವನು ಕೆಡಹಲ್ಕೆ ಧರಿತ್ರಿ ।
ಎತ್ತಿಕೊಂಡುದು ಭಯಭಕ್ತಿ, । ಸುರ ।
ರರ್ತಿಯಿಂದೊಯ್ದರಾ ತಂಗಾಯ್ತು ಮುಕ್ತಿ ॥16॥

**ಶಾರ್ದೂಲವಿಕ್ರೀಡಿತವೃತ್ತ**

ಶ್ರೀ ರಾಮಾನುಜ ಕೋಪದಿಂದ ಶರಮಂ ಬಿಟ್ಟಾಗ ಲಕ್ಷ್ಯಾಂತದೊಳ್ ।
ಘೋರಾಕಾರತಿಕಾಯ ಮಸ್ತಕವು ತಾ ಬೀಳಲ್ಕೆ ಸಂತೋಷದಿ ।
ಭೋರೆಂದೆದ್ದು ಸಮಸ್ತ ನಿರ್ಜರರುಗಳ್ ಪುಷ್ಪಾರ್ಚನಂ ಗೈಯಲು ।
ಧೀರೋದಾರ ಕುಮಾರನಿಂದ್ರಜಿತುವಂ ತಕ್ಕೈಸುತಿಂತೆಂದನು ॥17॥

**ಇಂದ್ರಜಿತುಕಾಳಗ**

**ರಾಗ ಶಂಕರಾಭರಣ ಮಟ್ಟೆತಾಳ**

ತನಯ ಇಂದ್ರ ವೈರಿ ನಿನ್ನ ವಿನಯದನುಜ ನತಿಕಾಯನ್ನ ।
ರಣದಿ ಕೊಂದನಂತೆ ರಾಮನನುಜ ಲಕ್ಷ್ಮಣ ॥18॥

ದನುಜರೆಲ್ಲ । ಕೊಂದವರವರು ಮನುಜರಲ್ಲ ನಿಂದರಿವರು ।
ರಣಪ್ರತಾಪರಾಗಿ ಮೆರೆವ ಘನವಿವೇಕವ ॥19॥

ಇಲ್ಲ ಸಾಹಸಿಗಳು ನೀ, ನಲ್ಲದೆನ್ನ ಕಂದರೊಳಗೆ ।
ಬಲ್ಲತನವ ನೋಡಬೇಕಲ್ಲ ಬಾಲಕ - ॥20॥

**ಕಂದ**

ತಂದೆಯ ಮಾತನು ಕೇಳುತ
ಇಂದ್ರಾರಿಯು ಪೋಪೆ ತಾನು ಧುರಕೆಂದೆನುತಂ ।
ವಂದಿಸೆ ಕೊಟ್ಟನು ವೀಳ್ಯವ
ಸಂದಣಿಸಹಿತಾಗಿ ಸಮರಸನ್ನಹವಾಗಿ ॥21॥

**ರಾಗ ಭೈರವಿ ತ್ರಿವುಡೆತಾಳ**

ಬಂದನಾಗ ಸಮರಕೆನಿಂದನಾಗ ।
ಇಂದ್ರಜಿತುಮರ್ಕಟರಸೈನ್ಯವ । ಕೊಂದುಬಿಸುಡುವೆನೆನುತಕೋಪದಿ ॥ಪಲ್ಲವಿ॥

ಓಡಿದಸುರರ ಕರೆಸಿ ಸಂಗಡ ಕೂಡಿಕೊಂಡನು ತ್ವರಿತದಿ ।
ಜೋಡಿಸುತ ಗಜತುರಗಗಳ ಬರಮಾಡಿಕೊಂಡನು ಹರುಷದಿ ।

ಝಾಡಿಸುತ ಖಡ್ಗವನು ಝುಳಪಿಸಿ ನೋಡಿಕೊಂಡನು ಸಹಸದಿ |
ಗಾಢದಿಂದಲಿ ರಥಕೆ ಕುದುರೆಯ ಹೂಡಿ ಮುಗುಳ್ನಗೆ ಮಾಡು ತೊಯ್ಯನೆ ||22||

ಹಾರ ಕುಂಡಲ ಮಕುಟ ಮಣಿಕೇಯೂರ ಕಂಕಣವಿಟ್ಟನು |
ಭಾರಿ ರಚನೆಯೊಳೆಸೆವ ವಸನವ ವೀರ ತೆಗೆತೆಗೆದುಟ್ಟನು |
ಚಾರುಸೀಸಕ ಕವಚಗಳ ಮುದವೇರಿ ಘಮ್ಮನೆ ತೊಟ್ಟನು |
ಮೂರುಲೋಕದೊಳೊಸಗೆಮಿಗೆ ಗಂಭೀರ ನೆರೆ ಪೊರಮಟ್ಟು ಸಮರಕೆ ||23||

ರಣಜಯವ ಕೊಡಿ ನಮಗೆನುತ ಸುರಗಣವನರ್ತಿಲಿ ಕೇಳಿದ |
ಮಣಿಯು ತೊಳಗ್ಗೈಯಿಂದ ತನ್ನಯ ಜನನಿಯಳಮೊಗ ನೋಡಿದ |
ಅಣಿಯರಿತು ಕಾದೆನುತಸುರ ನಂದನಗೆ ನೇಮವ ನೀಡಿದ |
ಕುಣಿಯುತಿಹ ಪಟುಭಟರುಗಳ ಸಂದಣಿಯ ಮುಂದಕೆ ಮಾಡಿ ನೋಡುತ ||24||

**ರಾಗ ಮಾರವಿ (ಉತ್ಸಾಹ) ಏಕತಾಳ**

ಏನೆಂಬೆನು ಸ್ವರ್ಭಾನುವಿನಂದದೊ |
ಳಾ ನಕ್ತಂಚರ ಸೇನೆಯ ನೆರಹುತ |
ದಾನವರೊಡೆಯನಸೂನು ವರೂಥವ |
ತಾನೇರುತಲತ್ಯಾನಂದದಲಿ, | ಬಂದನಾಗ ||25||

ಅಸುರ ಪಡೆಯ ಭರವ ಸಹಿಸಲಾರದೆ |
ವಸುಧೆ ತಗ್ಗಿಫಣಿ ಕುಸಿದ ಕೂರ್ಮನೆದೆ |
ಬೆಸುಗೆ ಬಿಟ್ಟಿತೆಣ್ದೆಸೆಯ ಮದೇಭಗ |
ಳ್ಗುಸಿರುಬ್ಬಸವೆನಲಸಮ ಸಾಹಸದಿ | ಬಂದನಾಗ ||26||

**ವಾರ್ಧಕ**

ಬರಬರುತ ಬಿಲ್ಬಾಣ ಮುಸಲ ಮುದ್ಗರಕಣೆಯ
ಪರಶು ಪಟ್ಟಸ ಪಿಂಡಿವಾಳ ಗದೆ ಶೂಲ ವಿ
ಸ್ತರ ಕುಂತ ತೋಮರಾದಿಗಳಿಂದ ಮುತ್ತಿದರು ಖಳರೈದೆ ಕಪಿಪಾಳ್ಯವ |
ಇರಿದರೆಸೆದರು ಹೊಡೆದರಿಟ್ಟರಲ್ಲಲ್ಲಿ ಪಲ್
ಗಿರಿದು ಕಿರಿಕಿರಿಗುಟ್ಟುತೋಡಿಬರುವಂಥ ವಾ
ನರರ ಸಂತೈಸುತ್ತ ತರಣಿನಂದನನವರ ತಿರುಗಿಸುವ ಹೋಗಗೊಡದೆ ||27||

**ರಾಗ ವಂದಾವನಸಾರಂಗ ಅಷ್ಟತಾಳ**

ಆಯಿತು ಯುದ್ಧವಾಯಿತು ಅತಿ |
ಕಾಯನಗ್ರಜನ ಪೆಟ್ಟಿಗೆ ವಾನರರ ಲಯವಾಯಿತು || ಪಲ್ಲವಿ ||

ಇನಕುಲಾಧಿಪನ ತಮ್ಮನು ರಣಕೆನುತ ಮ ।
ತ್ತಿನಜಾತಸಹಿತಲೆಬರುವಾಗ । ಅಂಗ ।
ದನು ಸುಷೇಣನು ಸಂಗಡಿರುವಾಗ । ಮರ ।
ಗಿರಿ ಕಲ್ಲುಗಳನೆತ್ತಿ ತರುವಾಗ । ನೋಡಿ ।
ದರು ಬೇಗ ॥ ಕೂಡಿ ।
ಕರೆದಾಗ । ರಾ ।
ವಣಿಗೆ ರಕ್ಕಸರು ಹೇಳಿದರಾಗ । ಸೇರಿ ।
ರಣಕೆ ಶೌರ್ಯದಿ ಬಂದು ನಿಲ್ವಾಗ । ಯುದ್ಧ ॥28॥

ಕೊಳುಗುಳದೊಳಗತಿ ಪೌರುಷದಿಂ ಕಪಿ ।
ಗಳ ಸಂಹರಿಸುವ ವೇಳೆಯೊಳಂದು ಬಿಲು ।
ಗೊಳುತಿದಿರಾಗೆ ಲಕ್ಷ್ಮಣ ಬಂದು ಕಣ ।
ನೊಳಗೆ ರಕ್ಕಸರನು ಕೊಲುವಂದು । ಇಂದ್ರ ।
ಜಿತು ಹಾರಿ । ಮೇಘ ।
ದೆಡೆ ಸೇರಿ । ಬಾಣ ।
ಗಳ ಬಿಡುತಿರಲು ಮರ್ಕಟರಲ್ಲಿ ಪ್ರಾಣ ।
ವಳಿದು ಭೂಮಿಗೆ ಬಿದ್ದರಲ್ಲಲ್ಲಿ ॥ ಯುದ್ಧ ॥29॥

ಹನುಮ ಜಾಂಬವ ನೀಲ ಗವಯ ಗವಾಕ್ಷನು ।
ಪನಸನಾವಾಲಿತನೂದ್ಭವ ಸುಷೇ ।
ಣನು ಗಜಸುಮುಖಾಗ್ನಿ ಸಂಭವ ಬಲ ।
ವನು ಕೂಡಿ ಬಂದ ಲಕ್ಷ್ಮಣದೇವ ಸಹಿ ।
ತಲೆ ಕೊಂದ । ಶಕ್ರ ।
ಜಿತುವಂದಾ । ರಾಮ ।
ನನು ಕಾಣುತೆಚ್ಚ ಬಾಣಗಳಿಂದ ಮೂರ್ಛೆ ।
ಯನು ತಾಳ್ದರಘುನಾಥ ಭರದಿಂದ ಯುದ್ಧ ॥30॥

ರಣದಿ ಮತ್ತಾರೂ ತನ್ನೊಳು ಸೆಣಸುವರಿಲ್ಲ ।
ವೆನುತ ಪಟ್ಟಣಕಾಗಿ ತಿರುಗುತ್ತ । ಮನೆ ।
ಮನೆಗಳೊಳಾರತಿ ಬೆಳಗುತ್ತ । ಪುರ ।
ಜನರು ಬಂದವನಿದಿರ್ಗೊಳ್ಳುತ್ತ । ಬಾಗಿ ।
ಮಣಿಯುತ್ತ । ಹಿಗ್ಗಿ । ಕುಣಿಯುತ್ತ । ಮಿಗೆ ।
ತನೆಯನಿಂಗುಡುಗೊರೆ ಮಾಡುತ್ತ । ದಶಾ ।
ಸ್ಯನು ಸಂತಸದೊಳಿರುತಿರಲಿತ್ತ ॥ ಗೆಲ ॥31॥

**ವಚನ ॥** ಇತ್ತಲಾ ವಿಭೀಷಣನು ಬಿದ್ದಂಥ ಸೈನ್ಯವಂ ನೋಡಿ ತನ್ನೊಳುತಾನೇ ಏನೆಂದನು ಎಂದರೆ-

**ರಾಗ ಕೇದಾರಗೌಳ ಅಷ್ಟತಾಳ**

ಸಿರಿದೇವಿ ಸೀತೆ ರಾಘವ ನಾರಾಯಣನೆಂದು ।
ನೆರೆನಂಬಿ ಬಂದೆ ನಾನು ॥
ಸುರಪನ ಜೈಸಿದವನ ದಿವ್ಯಶರಕೆ ಮೈ ।
ಮರೆವುದೇನಾಶ್ಚರ್ಯವು ॥32॥

ಕುರುಡ ಹೋದಲ್ಲಿ ಕತ್ತಲೆ ಎಂಬ ಗಾದೆಯು ।
ಸ್ಥಿರವಾಯಿತೆನಗೆ ಬಂದು ॥
ಮರುತನಂದನನಿದ್ದತೆರನ ನೋಡುವೆನೆಂದು ।
ಅರಸುತ್ತ ನಡೆತಂದನು ॥33॥

ಕಂಡ ವಿಭೀಷಣನಖಿಳಾಂಡ ಕೋಟಿ ಬ್ರ ।
ಹ್ಮಾಂಡನಾಯಕ ರಾಮನ ॥
ಪುಂಡರೀಕಾಕ್ಷಿ ಜಾನಕಿಯನು ವನದಲ್ಲಿ ।
ಕಂಡು ಕೈಮುಗಿದಾತನ ॥34॥

ಕೊಂಡುಬಂದಾ ಚೂಡಾಮಣಿಯ ಪಟ್ಟಣವನ್ನು ।
ಕೆಂಡದಂತುರುಹಿದನ ॥
ಚಂಡವಿಕ್ರಮನಂಜನೆಯ ಸುಕುಮಾರದೋ ।
ರ್ದಂಡ ಶ್ರೀ ಹನುಮಂತನ ॥35॥

ಇರ್ವರೊಂದಾಗಿ ಮಾತಾಡಿಕೊಂಡವರು ಮ ।
ತ್ತೊರ್ವನ ಹುಡುಕಲೆಂದು ॥
ಪರ್ವತದಂತಿಪ್ಪ ಶವಗಳ ಕೆದರುತ್ತ ।
ಗರ್ವದಿಂ ದರಸಲಾಗಿ ॥36॥

ಸುರ್ವಿಟ್ಟುಸುಯ್ದುನಿಧಾನ ಕೀರವದಿಂದ ।
ಸರ್ವಜ್ಞಬ್ರಹ್ಮಜಾತ ॥
ಪೂರ್ವದಿಕ್ಕಿನಲಿ ಬಿದ್ದಲ್ಲಿಂದ ಕೇಳ್ದುಗಂ ।
ಭೀರರ ನುಡಿಸಿದನು ॥37॥

**ಶಾರ್ದೂಲವಿಕ್ರೀಡಿತಂ**

ಶ್ರೀಮದ್ವಾಯುಕುಮಾರಸೇವಿತಪದಂ ಸೀತಾಮನೋಸೌಖ್ಯದಂ
ಸೋಮಾದಿತ್ಯಸಹಸ್ರದೀಪ್ತ ಮನಘಂ ಸಾಕೇತವಾಸಂ ವಿಭುಮ್ ।
ಶ್ಯಾಮಾಂಗಂ ಗಿರಿಜಾಪತಿಪ್ರಿಯಕರಂ ಶಾಂತಂ ಕಪಾಸಾಗರಂ
ರಾಮಂ ಸದ್ವರಪುಣ್ಯನಾಮನೆಮಗೀಗಾನಂದ ಸಂದೋಹಮಮ್ ॥1॥

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಶ್ರೀ ಗಣಪ ಗಿರಿಜಾತೆಯಾತ್ಮಜ |
ಯೋಗಿನುತ ಪದ ಪಂಕಜ |
ಭೋಗಿ ಭೂಷಣ ಸುತ ಗುಹಾಗ್ರಜ |
ನಾಗವದನ ಚತುರ್ಭುಜ || ಶರಣು ಶರಣು ||2||

ಏಕದಂತ ಸುಧಾಂಶುಶೇಖರ |
ಕೋಕನದ ಸಮಭಾಸುರ ||
ಶೋಕ ಭವಭಯದೂರ ಭಜಕಾ |
ನೀಕ ನೆರೆಪರಿಪಾಲಕ || ಶರಣು ಶರಣು ||3||

ಕಲುಷಹರ ವಿಘ್ನೌಘನಾಶನ |
ಲಲಿತ ಮೂಷಿಕವಾಹನ ||
ಅಲಘು ಮಿಕ್ರಮ ಗೋಷ್ಪಪಟ್ಟಣ |
ನಿಲಯ ಭುಜಗವಿಭೂಷಣ || ಶರಣು ಶರಣು ||4||

**ವಾರ್ಧಕ**

ಗಿರಿವರಸುತಾಲೋಲನಂ ಭಜಕಪಾಲನಂ |
ಕರುಣರಸ ಪರಿಪೂರ್ಣನಂ ಸ್ಫಟಿಕವರ್ಣನಂ |
ದುರಿತ ತಿಮಿರಾದಿತ್ಯನಂ ಸುರಸ್ತುತ್ಯನಂ ಸೋಮನಂ ಜಿತಕಾಮನಂ ||
ವರಪುಣ್ಯಚಾರಿತ್ರನಂ ಫಾಲನೇತ್ರನಂ |
ಸರಸಿಜಾಹಿತ ಚೂಡನಂ ವಷಾರೂಢನಂ |
ಕರಿವದನಗುಹತಾತನಂ ಲೋಕನಾಥನಂ ನುತಿಸುವೆನು ಮನ್ಮನದೊಳು ||5||

ಕಮಲದಳನೇತ್ರೆಯಂ ಕಮನೀಯ ಗಾತ್ರೆಯಂ |
ಹಿಮಶೈಲ ಜಾತೆಯಂ ಗಜಮುಖನ ಮಾತೆಯಂ |
ದ್ಯುಮಣಿ ಶತಭಾಸೆಯಂ ತಿಲಕುಸುಮನಾಸೆಯಂನತ ಮಗಮದೋಲ್ಲಾಸೆಯಂ ||
ನಮಿತ ಜನಪಾಲೆಯಂ ಸಂಗೀತಲೋಲೆಯಂ |
ವಿಮಲಗುಣ ಭರಿತೆಯಂ ವರಪುಣ್ಯ ಚರಿತೆಯಂ |
ಯಮಿಕುಲೋದ್ಧಾರೆಯಂ ಶರಧಿಗಂಭೀರೆಯಂ ಸೆರಗೊಡ್ಡಿ ಪ್ರಾರ್ಥಿಸುವೆನು ||6||

**ಭಾಮಿನಿ**

ಸಿರಿಸರಸ್ವತಿಯರಿಗೆರಗಿ ಪಂ |
ಕರುಹಭವನನು ನುತಿಸಿ ರಾಮನ |
ಪರಮ ಭಕ್ತನೆನಿಪ್ಪ ಪವನಾತ್ಮಜನ ಬಲಗೊಂಡು ||

ಸುರಪ ಮುಖ್ಯಾಮರರ ಪ್ರಾರ್ಥಿಸಿ ।
ಧರೆಯೊಳುಳ್ಳ ಸಮಸ್ತ ಕವಿಗಳ ।
ಕರುಣವನು ಕೈಗೊಂಡು ಪೇಳುವೆನೀ ಕಥಾಮತವ ॥7॥

**ದ್ವಿಪದಿ**

ಆದಿಕವಿ ವಾಲ್ಮೀಕಿಮುನಿರಾಯಗೆರಗಿ ।
ಸಾದರದಿ ಗುರುವರನ ಪದಕೆ ತಲೆಬಾಗಿ ॥8॥

ಅಧ್ಯಾತ್ಮ ರಾಮ ಚರಿತೆಯಲಿ ಲಕ್ಷ್ಮಣನು ।
ಚೋದ್ಯವೆನೆ ದಶಕಂಠನಿಂದ ಮೂರ್ಛೆಯನು ॥9॥

ತಳೆದಿರಲು ರಾಘವನ ನೇಮದೊಳಗಂದು ।
ಕಲಿಹನುಮನಮಲಸಂಜೀವನವ ತಂದು ॥10॥

ಜೀವಿಸಿದ ಕಥನವನು ಯಕ್ಷಗಾನದಲಿ ।
ನಾ ವಿರಚಿಸುವೆ ಲೋಕನಾಥನೊಲುಮೆಯಲಿ ॥11॥

ನೇಮಗುಣಲಕ್ಷಣಾದಿಗಳೊಂದನರಿಯೆ ।
ಪ್ರೇಮದಿಂದಲಿ ರಕ್ಷಿಸೆನ್ನ ರಘುಪತಿಯೆ ॥12॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ವರ ಮಹಾ ಕೈಲಾಸ ಗಿರಿಯಲಿ ।
ತರುಣಿ ಪಾರ್ವತಿಗತುಳ ಹರುಷದಿ ।
ಪುರಹರನು ಶ್ರೀರಾಮಚರಿತವ । ನೊರೆವುತಿರಲು ॥13॥

ನಮಿಸಿ ಪುನರಪಿ ಕೇಳ್ದಳಂದಾ ।
ಕಮಲದಳ ಲೋಚನೆಯು ಕಾಂತನ ।
ವಿಮಲ ಪದಪಂಕಜಕೆ ಘನತರ । ಮಮತೆಯಿಂದ ॥14॥

ಪತಿಯೆ ಕೇಳೀತಕೆ ಸುಮಿತ್ರಾ ।
ಸುತನು ರಾವಣನಿಟ್ಟ ಶಕ್ತಿಯ ।
ಹತಿಗೆ ಮೂರ್ಚಿತನಾಗಿ ಮಲಗಿದ । ನತುಳಬಲನು ॥15॥

ಎಂತು ಸಂಜೀವನವನಾ ಹನು ।
ಮಂತ ತಾ ತಂದೆಬ್ಬಿಸಿದ ನೆಂ ।
ಬರಿತರಂಗವ ಪೇಳೆನಲ್ಕ । ತ್ಯಂತ ಮುದದಿ ॥16॥

ಕರಿಗೊರಳನಾ ನಿಜ ಸತಿಯನತಿ ।
ಕರುಣದಿಂ ಪಿಡಿದೆತ್ತಿ ತಳ್ಕಿಸಿ ।
ಪರಮಪುಣ್ಯ ಚರಿತ್ರವನು ಸಾ । ದರದೊಳುಸಿರ್ದ ॥17॥

**ವಾರ್ಧಕ**

ಗಿರಿಜೆ ಕೇಳ್ ಧರೆಯ ದೂರಂ ಕೇಳ್ದು ಶ್ರೀವಿಷ್ಣು ।
ನರನಾಥ ದಶರಥಂಗುದಿಸಿ ರಾಮಾಖ್ಯೆಯೊಳು ।
ವರಕೌಶಿಕನ ಯಜ್ಞಮಂ ಕಾಯ್ದು ಸೀತೆಯಂ ವರಿಸಿ ಭಾರ್ಗವನಧಟನು ॥
ಮುರಿದು ಪಿತನಾಜ್ಞೆಯಂ ಪಾಲಿಸಲ್ಕಾಗಿ ತ ।
ನ್ನರಸಿ ಲಕ್ಷ್ಮಣರನೊಡಗೊಂಡು ಕಾನನಕಯ್ದಿ ।
ವರ ಪಂಚವಟಿಯೊಳತಿ ಬಲವಂತ ಖರದೂಷಣಾದಿಗಳ ಖಂಡಿಸಿದನು ॥18॥

ಖಳರಾವಣಂ ಸೀತೆಯನು ಕದ್ದು ಕೊಂಡೊಯ್ಯ ।
ಲಳಲುತ್ತ ಮುಂದಯ್ತುರಲ್ ಪಥದಿ ಬಿದ್ದಿರ್ದ ।
ಕಲಿಗಧ್ರರಾಜನಂ ಕಂಡರಿದು ಪವಮಾನಸುತನಿಂದ ಸುಗ್ರೀವನ ॥
ಸಲೆಸಖ್ಯವನ್ನೆಸಗಿ ವಾಲಿಯಂ ಸಂಹರಿಸು ।
ತೆಲರಣುಗ ತಂದ ಚೂಡಾಮಣಿಯ ನೀಕ್ಷಿಸುತ ।
ಬಲುಮರ್ಕಟರ ಕೂಡಿಕೊಂಡು ಲಂಕಾಪುರವ ಮುತ್ತಿದಂ ರಘುನಾಥನು ॥19॥

**ಭಾಮಿನಿ**

ವರ ವಿಭೀಷಣನಿಂದ ಕೆಲಬರು ।
ತರಣಿನಂದನ ಹನುಮರಿಂ ಕೆಲ ।
ರಿರದೆ ಜಾಂಬವ ವೀರ ನಳ ನೀಲಾದ್ಯರೊಳು ಕೆಲರು ॥
ಸುರಪ ಸುತನ ಕುಮಾರನಲಿ ಸಂ ।
ಗರದಿ ಖತಿಯಲಿ ಕಾದಿ ಮಡಿದರು ।
ದುರುಳ ದೈತ್ಯರು ಪೇಳಲೇನದ್ಭುತದ ರಣರಭಸ ॥20॥

**ರಾಗ ಭೈರವಿ ಝಂಪೆತಾಳ**

ಕಾಮಿನೀಮಣಿ ಕೇಳು । ರಾಮಚಂದಿರನು ಬಳಿ ।
ಕಾ ಮಹಾ ಕಪಿಗಳು । ದ್ದಾಮ ಸಾಹಸವ ॥21॥

ಕಂಡು ತೋಷವನು ಕೈ । ಗೊಂಡು ಮತ್ತವರನುರೆ ।
ಕೊಂಡಾಡಿದನು ಪ್ರಬಲ । ಪಿಂಡರಿವರೆಂದು ॥22॥

ಮೂಗಿನಲಿ ಬೆರಳಿಟ್ಟು | ತೂಗಿ ನಿಜಮುಕುಟವನು |
ರಾಘವನು ರವಿತನಯ | ಗಾಗನಗುತೆಂದ ||23||

ಬಲುದಣಿದುದೈ ನಮ್ಮ | ಬಲವೆಲ್ಲವಿಂದಿನಲಿ |
ಬಲವಂತ ರಾಕ್ಷಸರ | ಗೆಲುವಬಗೆಗಾಗಿ ||24||

ಎಂಬನಿತರೊಳು ತರಣಿ | ಯಂಬರವನಿಳಿದನೃಪ |
ರಾಂಬುಧಿಗೆ ಮುಗಿದವಂ | ದಂಭೋಜನಿಕರ ||25||

**ಭಾಮಿನಿ**

ಬಳಿಕ ಮರುದಿನವಿತ್ತ ರಾವಣ |
ನಲಘುತರ ವರಸಿಂಹಪೀಠದಿ |
ಕುಳಿತ ನೊಡ್ಡೋಲಗದಿ ದಿತಿಜರ ಸಭೆಯ ಮಧ್ಯದಲಿ ||
ಕಲಹದಲಿ ದೇವಾಂತಕಾದಿಗ |
ಳಳಿದ ವತ್ತಾಂತವನು ಬಂದಾ |
ಖಳ ತಿಲಕಗರುಹಿದರು ಚಾರಕರಧಿಕ ಭೀತಿಯಲಿ ||26||

**ರಾಗ ಮುಖಾರಿ ಏಕತಾಳ**

ಖಳ ರಾಯ ಲಾಲಿಸೈ ಬಿನ್ನಪವ | ಮಹಾನುಭಾವ |
ಖಳರಾಯ ಲಾಲಿಸೈ ಬಿನ್ನಪವ || ಪ ||

ಮೊದಲು ಕಳುಹಿದ ಭಟರನೆಲ್ಲ | ಸಂಗ್ರಾಮದಲ್ಲಿ |
ಸದೆದು ಸಾಹಸವ ತೋರ್ದರೆಲ್ಲ ||
ಕದನಕಲಿಗಳನು | ಸದೆದಾವಾನರ | ರೆದೆಗೆಡಿಸಿದರೆಂ | ಬುದು ಹರಿದುದು ಲೋ |
ಕದ ಜನರಿದಿರಲಿ | ಸುದಯನೆ ಮುಂದ | ಭ್ಯುದಯವ ಕಾಣೆನು | ಬೆದರಿದರೆಲ್ಲ || ಖಳ ||27||

ಎತ್ತ ನೋಡಿದಡತ್ತ ಬಂದು | ಕಪಿಗಳ ಸೇನೆ |
ಮುತ್ತಿದೆ ನಗರವ ಮತ್ತಿಂದು ||
ಚಿತ್ತವಿಸೈ ಬಲು | ಮತ್ತ ಗಜಂಗಳ | ಮೊತ್ತವನುರೆ ಮುಂ |
ದೊತ್ತುತ ಬರುತಿರ | ಲುತ್ತಮ ಹಯಗಳ | ಪತ್ತಿ ಸಮೂಹವ |
ನೊತ್ತರಿಸುತ ಸದೆವುತ್ತ ಗೆಲಿದರು || ಖಳ ||28||

**ಭಾಮಿನಿ**

ಪೊಡವಿಧರಸುತೆ ಕೇಳುಚಾರರ |
ನುಡಿಯ ಕೇಳುತ ರಾವಣನು ಕೆಂ |
ಗಿಡಿಗಳನು ಕಂಗಳಲಿ ಸೂಸುತ್ತ್ಡನುರೆಕಚ್ಚಿ ||

ಝಡಿದು ಖಡುಗವ ಹೂಂಕರಿಸುತಡಿ ।
ಗಡಿಗೆ ವೀರಾವೇಶದಿಂದಲಿ ।
ಕಡೆಯ ಭೈರವನಂತೆ ಖತಿಯನು ತಾಳುತಿಂತೆಂದ ॥29॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕುರಿಗೆ ಹೆಬ್ಬುಲಿಯಂಜುವುದೆ ಫಡ ।
ನರರು ವಾನರರಾರ್ಭಟೆಗೆ ತಾ ।
ನರರೆ ಹಿಮ್ಮೆಟ್ಟುವೆನೆ ಸಾಹಸ । ದಿರವನೀಗ ॥30॥

ತೋರುವೆನು ಕಪಿಕಟಕದಸುಗಳ ।
ಹೀರುವೆನು ಖರವೈರಿ ಲಕ್ಷ್ಮಣ ।
ರಾರುಭಟೆಗಳ ನಿಲಿಸುವೆನು ರಣ । ಧಾರಿಣಿಯೊಳು ॥31॥

ಇಂದು ರಾಮನ ರಣದಿ ಕೆಡಹದೆ ।
ಹಿಂದು ಮುಂದಾನಾದೆನಾದಡೆ ।
ತಂದೆ ತಾಯಿಗಳಿಂಗೆ ಜನಿಸಿದ । ಕಂದನಲ್ಲ ॥32॥

ಎನುತ ಕೊನೆಮೀಸೆಗಳ ತಿರುಹುತ ।
ಧನುಜಪತಿ ನಿಂದಿರಲು ಕಾಣು ।
ತ್ತನಘಮತಿಯತಿಕಾಯ ನಗುತೆಂ । ದನು ಪಿತಂಗೆ ॥33॥

**ರಾಗ ಕಾಪಿ ಅಷ್ಟತಾಳ**

ಏತಕೆ ಮರುಳಾದೆ ತಾತ । ರಘು ।
ನಾಥನೊಳ್ ಕಲಹವೆ ಲೋಕ ವಿಖ್ಯಾತ ॥ ಏತಕೆ ॥ ॥ ಪ ॥

ಸಕಲ ಲೋಕೈಕ ನಾಯಕನು । ಸರ್ವಾ ।
ತ್ಮಕನು ಸರ್ವರ ರಕ್ಷಿಸುವ ದೈವನವನು ॥
ಮುಕುತಿದಾಯಕನು ಶಾಶ್ವತನು । ನಿನ್ನ ।
ಯುಕುತಿನಡೆಯದಾದಿವಸ್ತು ರಾಘವನು ॥ ಏತಕೆ ॥34॥

ಇರಿತಕಂಬರವಳುಕುವುದೆ । ನೊರ ।
ಜುರುಬಿದಡಗ್ನಿಗೆ ನೋವು ತಾಗುವುದೆ ॥
ಇರುವೆ ಕಚ್ಚಿದರೆ ಬೆಚ್ಚುವುದೆ । ಸುರ ।
ಗಿರಿಯು ನಿನ್ನಧಟು ರಾಘವನೊಳೊಪ್ಪುವುದೆ ॥ ಏತಕೆ ॥35॥

ಕಡುಗಲಿ ಖರನೆಲ್ಲಿ ಪೋದ । ಹಿಂದೆ ।
ಅಡವಿಯೊಳ್ ವೀರಾಧಿವೀರನೇನಾದ ।

ಬಿಡದೆ ಯೋಚಿಸಿ ನೀನೇ ನೋಡು । ಜಗ ।
ದೊಡೆಯ ರಾಮನ ಕೆಣಕಲು ಬಂತು ಕೇಡು ॥ ಏತಕೆ ॥36॥

**ಭಾಮಿನಿ**

ಸೀತೆಯನು ರಘುವರನಿಗಿತ್ತನು ।
ಜಾತನಾದ ವಿಭೀಷಣನ ಸಂ ।
ಪ್ರೀತಿಯಲಿ ಕರೆತಂದು ರಾಜ್ಯವನಾಳುವುದು ಸುಖದಿ ॥
ನೀತಿಯೆಂದತಿ ಕಾಯನುಸಿರಿದ ।
ರೀತಿಯನು ಕೇಳುತ್ತ ಕೈಕಸೆ ।
ಜಾತನತಿಖತಿಗೊಂಡು ನುಡಿದನು ಮಗನಿಗುತ್ತರವ ॥37॥

**ರಾಗ ಭೈರವಿ ಏಕತಾಳ**

ಅತಿಕಾಯನೆ ನೀ ಕೇಳು । ರಿಪು ।
ಮಥನಕೆ ಪೋಪಡೆ ಪೇಳು ॥
ಕಥನದ ಮಾತಂತಿರಲಿ । ಪಶು ।
ಪತಿಯಾಹವಕಯ್ತರಲಿ ॥38॥

ಕೊಡೆ ರಾಮಗೆ ಸೀತೆಯನು । ನಿಲು ।
ಗಡೆಯಿದು ತೊಟ್ಟ ಛಲವನು ॥
ಬಿಡುವವನೇ ತಾನೆಂದು । ನೆಲ ।
ನೊಡೆಯಲು ಕೂಗಿದನಂದು ॥39॥

**ರಾಗ ಕಾಂಭೋಜಿ ಝಂಪೆತಾಳ**

ಅಹುದು ಮತ್ತೇನಾರ ಚಿತ್ತದಲಿ ಗ್ರಹಿಸಿಕೊಂ ।
ಡಿಹುದನವರೇ ಬಲ್ಲರೆನುತ ॥
ಸಹಜ ವೈಷ್ಣವರೆರೆಯನತಿಕಾಯ ನುಬ್ಬಿ ಸ ।
ನ್ನಿಹಿತನಾದನು ಸಮರಕಂದು ॥40॥

ಜೀಯ ತಾ ಸಂಗರಕೆ ವೀಳೆಯವನೆನುತಲತಿ ।
ಕಾಯನುಸಿರಲ್ಕೆ ರಾಕ್ಷಸರ ॥
ರಾಯನಾತನಿಗೆ ಪೊಂಬಟ್ಟಲಲಿ ವೀಳ್ಯವನು ।
ಪ್ರೀಯದಲಿ ಕೊಟ್ಟು ಕಳುಹಿದನು ॥41॥

ತರಿಸಿ ತುಲಸಿಯ ದಂಡೆಗಳ ಕೊರಳೊಳಾಂತೂರ್ಧ್ವ ।
ವರ ತ್ರಿಪುಂಡ್ರವ ಪಣೆಗೆ ರಚಿಸಿ ॥

ಸರಸದಿಂ ಮಾತೆಯಡಿಗೆರಗಿ ಮಣಿರಥವೇರಿ ।
ಪೊರಟನತಿಕಾಯನಾಹವಕೆ ॥42॥

ಬನ್ನಿರೈ ಸಂಸಾರಶರಧಿಯನು ದಾಟುವರು ।
ಬನ್ನಿರೈ ಮೋಕ್ಷಕಾಂಕ್ಷಿಗಳು ॥
ಬನ್ನಿರೈ ಬಹಳ ಪದವಿಯನು ಬಯಸುವ ಸುಭಟ ।
ರೆನ್ನೊಡನೆ ನೀವೆನುತ ಕರೆದ ॥ 43॥

ಈಶನಾಗುವಡೆ ಕಮಲಾಸನನ ಪದವನಾ ।
ಯಾಸವಿಲ್ಲದೆ ಸುಲಭದಿಂದ ॥
ಕೇಶವನ ಕೂಡುವಡೆ ಬನ್ನಿರೆನ್ನೊಡನೆಂದು ।
ಹೊಯ್ಸಿದನು ಡಂಗುರವನವನು ॥44॥

ಬಳಿಕ ತತ್ವವ ತಿಳಿದು ರಾಮನೇ ಪರದೈವ ।
ವಳಿಯದಚಲ ಬ್ರಹ್ಮವೆಂದು ॥
ತಿಳಿದಿರ್ದ ದೈತ್ಯತತಿ ಗಜರಥಹಯಂಗಳಲಿ ।
ಬಳಿಸಿತತಿಕಾಯನನು ಬಂದು ॥45॥

**ಭಾಮಿನಿ**

ದಕ್ಷನಂದನೆ ಕೇಳು ದನುಜಾ ।
ಧ್ಯಕ್ಷಸುತನೀ ಪರಿಯೊಳೆಲ್ಲರ ।
ನಾಕ್ಷಣದೊಳೊಡಗೊಂಡು ರಣಕಯ್ತುರುವ ಸಂಭ್ರಮವ ॥
ಈಕ್ಷಿಸುತ ಪೌರಾಂಗನಾಜನ ।
ಲಕ್ಷಮೊಡನೊಡನಯ್ದಿ ತಮ್ಮೊಳ ।
ಗಕ್ಷಿಯಲಿ ನೀರೇರಿ ನುಡಿವುತ್ತಿರ್ದರಲ್ಲಲ್ಲಿ ॥46॥

**ರಾಗ ಶಂಕರಾಭರಣ ಏಕತಾಳ**

ಇತ್ತ ನೋಡೆ ತಂಗಿ ರಾವ । ಣಾತ್ಮಜನತಿಕಾಯನು ದಂ ।
ಡೆತ್ತಿ ರಣಕಯ್ತುರುವ ಬಹಳ । ವಿಸ್ತಾರವನ್ನು ॥
ಕತ್ತಿವಾಸಗರಿದು ರಾಮ । ನುತ್ತಮ ಮೋಹರವ ಪೊಗಲು ।
ಮತ್ತ ಹಂಸಗಮನೆ ಇವನ । ಸತ್ತ್ವವೆಂತುಟೊ ॥47॥

ಆದರೇನೆಂಬೆನಕ್ಕ ಪು । ಣ್ಯೋದಯವ ರಾಕ್ಷಸರೊಳಿವನು ।
ಶ್ರೀಧರನ್ನ ಚರಣ ಕಮಲಾ । ರಾಧಕ ಕಾಣೆ ॥
ವಾದಗುಟ್ಟಿ ಫಲವೇನಿನ್ನು । ಪೋದುದು ಲಂಕೆಯೈಶ್ವರ್ಯ ।
ಈ ದಿವ್ಯ ಪುರುಷನ ಕೂಡೆ । ನಾದಿನಿ ಕೇಳೆ ॥48॥

ಪರರ ಹೆಣ್ಣಿಗಾಗಿ ತನ್ನ । ತರಳರನ್ನು ರಣಕೆ ನೂಕಿ ।
ಮೆರೆವನಲ್ಲೆ ದಶಕಂಠನು । ಹರ ಮಹಾದೇವ ॥
ಮರುಳಾದಳೇನಕ್ಕ ಮತಿ । ಪರಮ ವೈಷ್ಣವನ ತಾಯಿ ।
ವರ ಧಾನ್ಯಮಾಲಿನಿ ಮಗನ । ಧುರಕೆ ಕಳುಹಲ್ಕೆ ॥49॥

**ವಾರ್ಧಕ**

ಇಂತೆಂದು ತತ್ಪುರದ ಪ್ರಮದೆಯರ್ ಸುಮದೆಯರ್ ।
ತಂತಮ್ಮೊಳಿರದೆ ಮಾತಾಡುತಂ ನೋಡುತಂ ।
ಸಂತಾಪಮಂ ತಾಳ್ದು ಸುಯ್ಯುತಂ ಬೈವುತಂ ದಶಶಿರನನಿರಲಿತ್ತಲು ॥
ಸಂತಸದೊಳತಿಕಾಯನುಬ್ಬುತಂ ಹಬ್ಬುತಂ ।
ಮುಂತಳೆದು ಬರುವಂತೆ ರಥದೊಳಂ ಪಥದೊಳಂ ।
ಕಂತುಪಿತನಂ ಮನದಿ ನೆನೆವುತಂ ತೊನವುತಂ ಬರುತಿರ್ದನಾಚೆಗಂದು ॥50॥

ಕೆಲಸಾರು ಭಕ್ತಿಯ ಮಹಮ್ಮೇರು ಬರುತಲಿದೆ ।
ಕೆಲಸಾರು ಸದ್ಧರ್ಮ ಕಲ್ಪತರು ಬರುತಲಿದೆ ।
ಕೆಲಸಾರು ಶ್ರೀರಾಮಚರಣಾರವಿಂದಮಧುಕರ ತಾನೆ ಬರುತಲಿದಕೊ ॥
ಕೆಲಸಾರು ಭಾಗವತ ಮೌಳಿಮಣಿ ಬರುತಲಿದೆ ।
ಕೆಲಸಾರು ದಾನವರ ಕುಲದೀಪ ಬರುತಲಿದೆ ।
ಕೆಲಸಾರು ಪಾಪಹುತ ವಾಹನತಿಕಾಯ ಬೃಹನೆಂದು ಕಹಳೆಗಳುಲಿದವು ॥51॥

**ರಾಗ ಭೈರವಿ ತ್ರಿವುಡೆತಾಳ**

ವೀರವೈಷ್ಣವ ರೆರೆಯನತಿ ಮುದ ।
ವೇರಿ ನಾನಾ ವಾದ್ಯಘೋಷದಿ ।
ಘೋರ ದಾನವರೊಡನೆ ಲಂಕೆಯ ।
ದ್ವಾರವನು ಪೊರಮಟ್ಟು ಸಂಗರ ।
ಧಾರಿಣಿಗೆ ನಡೆತರೆ ಸನಂದನ ।
ನಾರದಾದಿ ಮುನೀಂದ್ರ ರಭ್ರದಿ ।
ಭೂರಿ ಶೌರ್ಯವ ಕಂಡು ಪೊಗಳಿದ ।
ರಾ ರಣದಿ ಮಝು ಭಾಪೆನುತ್ತದ ।
ನೇನನೆಂಬೆ । ಸಾಹಸ । ವೇನನೆಂಬೆ ॥52॥

ಹೊಳೆಹೊಳೆವ ಕಯ್ದುಗಳ ಕಿರಣಂ ।
ಗಳ ಪತಾಕಾವಳಿಯ ಮುಸುಕುವ ।
ಬೆಳುಗೊಡೆಯ ಚಾಮರ ಸಮೂಹದಿ ।
ನಿಲದೆ ಪೊಗಳುವ ಪಾಠಿಕರ ಕಳ ।
ಕಳದ ರಭಸದಿ ಘೋರ ರೂಪಿನ ।

ನೆಲನನಳೆದ ತ್ರಿವಿಕ್ರಮನ ಮೈ ।
ಯಳತೆಯಲಿ ಮೈದೋರ್ದನಾ ಕಪಿ ।
ಬಲಕೆ ರಾವಣಸೂನು ತವಕದೊ ।
ಳೇನನೆಂಬೆ । ಸಾಹಸ । ವೇನನೆಂಬೆ ||53||

ಭೀಮಬಲನತಿಕಾಯನಯ್ತುರು ।
ವಾ ಮಹಾಸಂಭ್ರಮವ ಪ್ಲವಗ ।
ಸ್ತೋಮವಿದ ನೋಡುತ್ತ ಮನದಲಿ ।
ಭ್ರಾಮಕಂವಡೆವುತ್ತಲಿವನಾ ।
ರೋ ಮಹಾದೇವೆಂದು ಬೆದರಿದ ।
ತಾಮಸಿಕೆಯಲಿ ಹರಿದುದಗಲಕೆ ।
ರಾಮಭಕ್ತ ಪ್ರೇಮ ನೃಪತಿ ಲ ।
ಲಾಮ ರಕ್ಷಿಸು ರಕ್ಷಿಸೆನುತಲಿ ।
ಏನನೆಂಬೆ । ಸಾಹಸ । ಏನನೆಂಬೆ ||54||

**ಕಂದ**

ಬೆಟ್ಟವೆ ಹರಿತಹುದೆನಲೆ ।
ಬ್ಬಟ್ಟುತ ಕಪಿಬಲವನಯ್ದೆ ಬೃಹ ಪಟುಭಟರಂ ||
ನಿಟ್ಟಿಸಿ ಮನದೊಳು ಬೆರಗಂ ।
ಬಟ್ಟು ವಿಭೀಷಣನೊಳೆಂದ ನವನಿಪತಿಲಕಂ ||55||

**ರಾಗ ತೋಡಿ ಏಕತಾಳ**

ಈತನಾರು ಪೇಳಯ್ಯ ವಿಭೀಷಣಾಂಕ ನೀನು ।
ಭೂತಳದೊಳಿವನ ಪೋಲ್ವರನ್ನು ಕಾಣೆ ನಾನು ||
ಈ ತೆರದ ರಕ್ಕಸರು ನಿಮ್ಮ ಬಲದೊಳಿನಿಬರೆಂದು ।
ಸೀತಾರಮಣ ಕೇಳಲಾಗ ಪೇಳ್ದನಾತನಂದು ||56||

**ರಾಗ ಸೌರಾಷ್ಟ್ರ ಅಷ್ಟತಾಳ**

ಜೀಯ ಲಾಲಿಸು ವೀರನತಿಕಾಯನೆಂಬಾತ । ನೀತಕಾಣೈ । ದೈತ್ಯ ।
ರಾಯ ರಾವಣನೆರಡನೆಯ ಕುಮಾರಕ । ನೀತಕಾಣೈ ||57||

ವಾಯು ಜಾತನನಂದು ಕಟ್ಟಿದಾತನ ತಮ್ಮ । ನೀತಕಾಣೈ । ಖೂಳ ।
ನಾಯಿಯೆಂದೆನ ಬೇಡ ಭಕ್ತರೊಳ್ ವೆಗ್ಗಳ । ನೀತಕಾಣೈ ||58||

ಪಾತಕನಾ ಮೇಘನಾದ ಪುಣ್ಯಾತುಮ | ನೀತಕಾಣೈ | ಬಲು |
ಘಾತಕನವನತಿ ನಿಷ್ಕಪಟಾಂಗನು | ಈತ ಕಾಣೈ | ||59||

ಆತನ ಸರಿ ಮಿಗಿಲೆನಿಸುವ ರಣದೊಳ್ | ಈತ ಕಾಣೈ | ಹೆಚ್ಚು |
ಮಾತೇನು ಮಿಕ್ಕಿನ ಗುಣದೊಳು ವೆಗ್ಗಳ | ನೀತಕಾಣೈ ||60||

**ಕಂದ**

ಎಂಬೀ ನುಡಿಯಂ ಸುಗ್ರೀ |
ವಂ ಬೆರಗಿನೊಳಾಲಿಸುತ್ತಲತಿ ಸಂಭ್ರಮದಿಂ ||
ಜಾಂಬವ ವಾಲಿಸುತಾದ್ಯರ |
ನುಂ ಬೇಗದಿ ಕರೆದುಸಿರ್ದನವರೊಡನಾಗಂ ||61||

**ರಾಗ ಮಧ್ಯಮಾವತಿ ಏಕತಾಳ**

ಕೇಳಿ ವಾನರರೆಲ್ಲ ನೀವೀಗ |
ಏಳಿರಣಕೆ ಬಂದವನೊಳತಿ ಬೇಗ || || ಪ ||

ಇದುವೆ ವೇಳೆಯು ರಾಘವನ ಚಿತ್ತ ಮೆಚ್ಚಿಸು |
ವುದಕೆ ಮಿಕ್ಕಿನ ಮಾತಿನಿಂದಾಹುದೇನು ||
ಬೆದರದೆ ಬೆಚ್ಚದೆ ಕಡು ಖೂಳ ದೈತ್ಯರ |
ನೊದಗಿ ಕಾಳಗದೊಳೆದೆಗೆಡಿಸುವದೆಲ್ಲ || ಕೇಳಿ ||62||

**ರಾಗ ಪಂಚಾಗತಿ ಮಟ್ಟೆತಾಳ**

ತರಣಿಸುತನ ನುಡಿಯ ಕೇಳ್ದು | ಧುರಸಮರ್ಥ ಜಾಂಬವಂತ |
ಸುರಪಜಾತನಣುಗ ನೀಲ | ಶರಭ ಮುಖ್ಯರು ||
ಕರದೊಳಾಂತು ಕಲ್ಲು ಬೆಟ್ಟ | ಮರಗಳಿಂದ ಸಿಂಹನಾದ |
ವೆರೆಸಿ ಖತಿಯ ತಾಳಿ ಕದನ | ಕಿರದೆ ನಡೆದರು ||63||

ಕಾಣುತಿವರ ಪೌರುಷವನು | ಕೌಣಪರ ಬಲೌಘವಂದು |
ಬಾಣಪರಶು ಚಕ್ರವಸಿ ಕ್ರ | ಪಾಣ ಕುಂತದಿ ||
ಮಾಣದೆಚ್ಚು ಕೊಚ್ಚಿ ಘಾಯ | ಕಾಣಿಸಲ್ಕೆ ಕಪಿಸಮೂಹ |
ಚೂಣಿಯಲ್ಲಿ ಬೆರೆಸಿ ಹೊಯ್ದು | ರೇನನೆಂಬೆನು ||64||

ಬಣಗುಕಪಿಗಳೆಯ್ದಲಾಗಿ | ಹೆಣಗಿ ಮುಂದೆ ಬರುವದೈತ್ಯ |
ಗಣವನೀಕ್ಷಿಸುತ್ತ ವಾಲಿ | ಯಣುಗ ಮುಖ್ಯರು ||
ಸೆಣಸು ವಧಟರನ್ನು ತಡೆದ | ರಣಕವೆಮ್ಮೊಳೊಪ್ಪದೀಗ |
ಲೆಣಿಸಬಹುದೆನುತ್ತ ಬಲು ಭಾ | ರಣೆಯ ಸುಭಟರು ||65||

ಸೀಳಿಬಿಸುಟರಾನೆಗಳನು । ಕಾಲಿನಿಂದಲಶ್ವಗಳ ನಿ ।
ವಾಳಿಸುತ್ತ ಸಂಹರಿಸುತ । ಕಾಲುಬಲವನು ॥
ತೊಳುವತಿರಥಂಗಳನ್ನು । ಹೊಳು ಗೆಯ್ದರೊಂದು ಕ್ಷಣದಿ ।
ಪೇಳಲೇನು ವೈರಿಬಲವ । ಧಾಳಿಗೊಂಡರು ॥66॥

ಏನನೆಂಬೆ ದಾನವೇಂದ್ರ । ಸೂನು ಖತಿಯೊಳಂಗದಾದಿ ।
ವಾನರರೊಳು ಸಂಗರಕ್ಕೆ । ತಾನೆ ನಿಂದನು ॥
ಆನುವವರದಾರು ಮಿಗೆ ನ । ವೀನ ಶರಗಳಿಂದಲವರ ।
ಮಾನಗುಂದಿಸಿದನು ಹವದೊ । ಳಾ ನಿಶಾಟನು ॥67॥

ಅವರ ಗೆಲಿದು ಮುಂದೆ ನೂಕು । ವವರ ಕಂಡು ಮತ್ತೆ ಕಲಿ ಜಾಂ ।
ಬವ ಸುಷೇಣ ಶರಭ ಮೈಂದ । ದ್ವಿವಿಧ ಸುಭಟರು ॥
ಕವಿಯಲಾಗ ಕಂಡು ಬಾಣ । ನಿವಹದಿಂದ ಲವರ ಗೆಲಿದು ।
ಜವನ ತೆರದಿ ಮುಂದುವರಿದ । ನಿವನು ತವಕದಿ ॥68॥

ಎಕ್ಕತುಳದಿ ಮುಂದೆ ಬರುವ । ರಕ್ಕಸನನು ನೋಡಿ ಕೋಪ ।
ವುಕ್ಕಿ ಕಪಿಬಲೌ ಘವಯ್ದೆ । ಮುಕ್ಕುರಿಕಿಸಿತು ॥
ನಕ್ಕು ಮನದಿ ಕೆಡದಿರೆನುತ । ದಿಕ್ಕರಿಸುತಲವರ ಶರದೊ ।
ಳೊಕ್ಕಲಿಕ್ಕಿ ಶೌರ್ಯದಿಂದ । ಮಿಕ್ಕು ನಡೆದನು ॥69॥

**ವಾರ್ಧಕ**

ಉಡಿದು ಬಿದ್ದಿರ್ದ ಕೈಕಾಲ್ಗಳಿಂ ತೋಳ್ಗಳಿಂ ।
ಮಿಡುಕುತಿಹ ಕಪಿಗಣದ ರುಂಡದಿಂ ಮುಂಡದಿಂ ।
ದೊಡನೆ ಪರಿವರುಣ ಜಲಪೂರದಿಂ ಸಾರದಿಂ ಕುಣಿವ ಭೂತಂಗಳಿಂದ ॥
ಕೆಡೆದಿರ್ದ ಹೆಣಗಳಟ್ಟಲೆಗಳಿಂದೆಲುಗಳಿಂ ।
ದಿಡಿದಾಗಿ ಚೆಲ್ಲಿರ್ದ ಕರುಳ್ಗಳಿಂ ಮರುಳ್ಗಳಿಂ ।
ಕಡು ಭಯಂಕರಮಾಗಿ ಸಂಗರಂ ಸಿಂಗರಂ ಮೆರೆದುದಾ ಕಣನೊಳಂದು ॥70॥

**ಭಾಮಿನಿ**

ಅರರೆ ಯಮನುಬ್ಬಟೆಯೊ ಮತ್ಯುವಿ ।
ನುರವಣೆಯೊ ಸಂಹಾರ ಭೈರವ ।
ನುರುಬೆಯೋ ನಾನರಿಯೆನತಿಕಾಯನ ರಣೋತ್ಸಹವೋ ॥
ಧುರದಿ ಕಪಿಗಳನೊರಸಿ ಮುಂದ ।
ಯ್ತರುವ ಸುಭಟನ ಕಾಣುತಿತ್ತಲು ।
ವರ ವಿಭೀಷಣನೆಂದ ನಿನಕುಲ ಸಾರ್ವಭೌಮನೊಳು ॥71॥

**ರಾಗ ಪೂರ್ವಿ ಏಕತಾಳ**

ಇದಕೊ ದೇವ ಬಂದನತಿಕಾಯ ನೋಡ । ಈತ ।
ನಿದಿರು ನಿಲುವ ವೀರರನ್ನು ತೋರು ಗಾಢ ॥
ಮೊದಲೆ ಸೋತ ರಂಗದಾದಿ ಸುಭಟರೆಲ್ಲ । ರಣದಿ ।
ಚದುರನಿವನು ಬಣಗು ಜನಕೆ ಮಣಿವನಲ್ಲ ॥72॥

ಇನಿತು ಮಾತಾಡುವದ ಲಕ್ಷ್ಮಣಾಂಕನಾಗ । ಕೇಳ್ದು ।
ಧನುಶರಗಳ ಕೊಂಡು ರಾಮಗೆರಗಿ ಬೇಗ ॥
ಜನ್ನೃಪ ತನ್ನ ಸಾಹಸವನು ಪರಿಕಿಸೆಂದು । ಸಮರ ।
ಕನುವಾದನು ದಶಶಿರನ್ನ ಸುತನೊಳಂದು ॥73॥

**ರಾಗ ಕೇದಾರಗೌಳ ಅಷ್ಟತಾಳ**

ಎಂದು ಸಂಗರಕೆ ಸನ್ನಹವಾದ ಸೌಮಿತ್ರಿ ।
ಯಂದವೀಕ್ಷಿಸಿ ರಾಮನು ॥
ಚಂದದಿಂದೆತ್ತಿ ತಕೈಸಿ ಮುದ್ದಿಸುತಲಾ ।
ನಂದದೊಳಿಂತೆಂದನು ॥74॥

ಎಲ್ಲವರಂತಲ್ಲ ಭೂರಿಪರಾಕ್ರಮ ।
ವುಳ್ಳವನತಿಕಾಯನು ।
ಬಿಲ್ಲ ಹಿಡಿದು ಮರ್ಮವರಿತು ಕಾದೆಂದು ಭೂ ।
ವಲ್ಲಭನರುಹಿದನು ॥75॥

ಅಣ್ಣ ನೀವೇಕಿನಿತೆಂಬಿರಿ ರಣದೊಳು ।
ಗಣ್ಯವೆ ತನಗಾತನು ।
ಮಣ್ಣಕೂಡಿಸುತ ಶಾಕಿನಿಯರಿಗೌತಣ ।
ವುಣ್ಣಲು ಬಡಿಸುವೆನು ॥76॥

**ರಾಗ ಪಂತುವರಾಳಿ ಮಟ್ಟೆತಾಳ**

ಬಂದನಾ ಸುಮಿತ್ರೆಯಣುಗ ।
ಮುಂದುವರಿವ ರಾಕ್ಷಸೇಂದ್ರ ।
ನಂದನನೊಳು ಸಮರಕೆನುತ ।
ಲಂದು ಬಿಲ್ಲ ಪಿಡಿದು ಕರದಿ ॥77॥

ದೇವ ತತಿಯು ಪೊಗಳೆ ಧನುವ ।
ಝೇವಡೆಯನು ಗೆಯ್ಯುತುಗ್ರ ।

ಭಾವದಿಂದಲುಬ್ಬಿ ಸಿಂಹ ।
ರಾವವನ್ನು ಗೆಯ್ಯುತೊಡನೆ ॥78॥

**ಕಂದ**

ಬರುವ ಸುಮಿತ್ರೆಯ ಸುತನಂ ।
ಹರಿವಂಶಜನೆಂಬ ಬಗೆಯನರಿತತಿಕಾಯಂ ॥
ಭರದಿಂ ತನ್ನಯ ರಥವಂ ।
ಹರಿಸುತಲಾಕ್ಷಣದಿ ಬಳಿಕ ವೀರನೊಳೆಂದಂ ॥79॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಭಳಿರೆ ಬಲು ಭಟನೆಂಬುದರಿತೆನು ।
ತಳುವದೆನ್ನೊಳು ಪೇಳು ರಘುಕುಲ ।
ತಿಲಕನೋ ಲಕ್ಷ್ಮಣನೊ ನೀನಾ । ರಲಸದೀಗ ॥80॥

ಎನಲು ಲಕ್ಷ್ಮಣನೆಂದ ನಿನ್ನಯ ।
ಮನಸಿನೊಳಗೇನೆಂದು ತೋರಿದು ।
ದನಿತುಬಗೆಯಲು ಬಹುದು ನೀ ಕೇ । ಳೆನುತಲವಗೆ ॥81॥

ರಣಕೆ ದಾವವನಾದರೇನದ ।
ರೆಣಿಕೆ ನಮಗಿಲ್ಲಲವೊ ಸಮರಾಂ ।
ಗಣದೊಳಾತ್ಮನಿವೇದಕರು ನಾವ್ । ಚೆನುಮಯಂಗೆ॰ ॥82॥

ತೋರುವೆನು ಸುರನಿಕರ ನೋಡಲು ।
ಭೂರಿ ರಣಕೌಶಲಗಳನು ನೀ ।
ವೀರನಾದಡೆ ನಿಲ್ಲೆನುತ ಖಳ । ನಾರುಭಟಿಸೆ ॥83॥

ಒದರಿತೊಡನೇಣ್ಡೆಸೆಯು ಭೂತಳ ।
ವದುರಿತಾ ಕಪಿಕಟಕವೆಲ್ಲವು ।
ಕೆದರಿದುದು ಗಗನದಲಿ ಸುರತತಿ । ಬೆದರಿತಾಗ ॥84॥

**ರಾಗ ಶಂಕರಾಭರಣ ಮಟ್ಟೆತಾಳ**

ಬಳಿಕಲೇನನೆಂಬೆ ಲಂಕೆಯಾಳ್ದನಣುಗನು ।
ಬಲು ಶರಾಳಿಯನ್ನು ಬಿಡಲು ರಾಮನನುಜನು ॥
ತಳುವದದನು ಕೊಚ್ಚಿ ಮಗುಳೆ ರಾತ್ರಿಚರನನು ।
ಹೊಳೆವ ಕಣೆಗಳಿಂದಲೆಚ್ಚು ಹೂಂಕರಿಸಿದನು ॥85॥

ಎಸೆದ ಬಾಣಗಳನು ತರಿದು ಯಾತುಧಾನನು ।
ಉಸಿರಲೇನದಕ್ಷಯಾಸ್ತ್ರದಿಂದಲವನನು ॥
ದೆಸೆಗಳೆಲ್ಲ ತೋರಬಾರದೆಂಬ ತೆರದಲಿ ।
ಮುಸುಕಿ ಸಿಂಹನಾದವನ್ನು ಗೆಯ್ದುನಿದಿರಲಿ ॥೮೬॥

ಗಣಿಸದದನು ವೀರ ಶತ್ರುಘ್ನನಣ್ಣನು ।
ಕ್ಷಣದಿ ಪ್ರತಿಶರೌಘದಿಂದ ಕೊಚ್ಚಲಾತನು ॥
ತಣಿಯದಿದರೊಳಿವನ ಸತ್ತ್ವವೆನುತ ತೆಗೆದನು ।
ಕ್ಷಣದಿ ಸುರರು ಬೆದರೆ ಘೋರ ವಹ್ನಿಶರವನು ॥೮೭॥

**ರಾಗ ಮಾರವಿ ಏಕತಾಳ**

ಅಗಸುತೆ ಕೇಳಾ । ಶುಗಸಖ ಶರವನು ।
ತೆಗೆದು ಬಿಡಲು ಧಗ । ಧಗಿಸುತ ಕಿಡಿಗಳ ।
ನುಗುಳುತ ಬಂದುದು । ರಘುಪತಿಯನುಜನ ।
ಹೊಗೆಯಲಿ ಮುಸುಕಿತು । ಭುಗಿಭುಗಿಲೆನುತ । ಏನನೆಂಬೆ ॥೮೮॥

ಉರಿಗೆದರುತಲ । ಯ್ತುರುವ ಮಹಾಸ್ತ್ರವ ।
ತರಣಿಕುಲೇಂದ್ರಾ । ವರಜನು ಕಾಣುತ ।
ತ್ವರಿತದಿ ವಾರುಣ । ಶರವನು ಬಿಡಲೊಂ ।
ದರೆ ನಿಮಿಷದೊಳದ । ಪರಿಹರಿಸಿದನು । ಏನನೆಂಬೆ ॥೮೯॥

ತಿರುಗಿ ನಿಶಾಚರ । ನುರಗಾಸ್ತ್ರವ ಬಿಡೆ ।
ಗರುಡಕಳಂಬದಿ । ತರಿವುತಲದ ಬಳಿ ।
ಕುರು ತಿಮಿರಾಸ್ತ್ರವ । ನಿರದೆ ತುಡುಕಲಿನ ।
ಶರದಲಿ ಗೆಲಿದನು । ವರ ಲಕ್ಷ್ಮಣನು ॥ ಏನನೆಂಬೆ ॥೯೦॥

**ಭಾಮಿನಿ**

ಇಂತು ಬಹುವಿಧ ಶಸ್ತ್ರಚಯವಾ ।
ನಂತನಂಶಜನಿರದೆ ಖಂಡಿಸ ।
ಲಂತರಂಗದೊಳೆಂದ ಗಹಗಹಿಸುತ್ತಲತಿಕಾಯ ॥
ಎಂತು ನಮ್ಮಸ್ತ್ರಗಳು ಹರಿದಸು ।
ರಾಂತಕಾತ್ಮನೊಳಕಟ ಬರಿದೇ ।
ಭ್ರಾಂತ ತಾನೆಂದರಿತು ಮತ್ತಿಂತೆಂದನವನೊಡನೆ ॥೯೧॥

ನೀವು ಜಗದದಿದೈವವೆಂಬುದ ।
ನಾವು ಬಲ್ಲೆವು ನಮ್ಮ ಕುಲದ ಸ್ವ ।

ಭಾವವನು ನಾವ್‌ಬಿಡಲು ಬಹುದೇ ಪೂರ್ವಪದ್ಧತಿಯ ||
ನಾವು ಮಾಡುವ ಸಮರಮುಖ ಸಂ |
ಭಾವನೋಚಿತ ಸರಳ ಭಕ್ತಿಯ |
ನೀವು ಕೈಗೊಳಬೇಕೆನುತ ತೆಗೆದೆಚ್ಚನತಿಕಾಯ ||92||

**ರಾಗ ಭೈರವಿ ಏಕತಾಳ**

ಇದೆಯಾವಾಹನ ನೋಡು | ಮ | ತ್ತಿದೆಯಾಸನ ದಯೆಮಾಡು ||
ಇದೆ ಪಾದ್ಯಾರ್ಘ್ಯಾದಿಗಳು | ಕೊಳ್ಳಿದೆ ನಿನಗುಪಚಾರಗಳು ||93||

ಎನುತೀರೆಂಟು ಶರವನು | ರಾ | ಮನ ತಮ್ಮನ ಮೇಲವನು ||
ಘನತರ ಭಕ್ತಿಯೊಳಾಗ | ಎ | ಚ್ಚನು ಕೊಳ್ಳೆನುತತಿಬೇಗ ||94||

ನಿಚ್ಚಟ ಭಕ್ತಿಯೊಳವನು | ತೆಗೆ | ದೆಚ್ಚ ಶರವ ಲಕ್ಷ್ಮಣನು ||
ಕೊಚ್ಚದೆ ಮೈಯಲಿಧರಿಸಿ | ಮನ | ಮೆಚ್ಚಿ ನುಡಿದನಂತರಿಸಿ ||95||

ಅಸಮ ಭಕುತ ನೀನಹುದೈ | ರಣ | ಕುಶಲಯುಕುತಿ ನಿನಗಹುದೈ ||
ಅಸುರಾರಿಯ ಪದದಾಣೆ | ರಾ | ಕ್ಷಸರೊಳು ನಿನಗೆಣೆಗಾಣೆ ||96||

ಎಂದಾ ದಶರಥ ಸುತನು | ಶರ | ವಂದದಿ ಮುಸುಕಲಸುರನು ||
ಒಂದು ನಿಮಿಷ ಮೂರ್ಛೆಯೊಳು | ಮೈ | ನೊಂದೊರಗಿದನಾಚೆಯೊಳು ||97||

**ಕಂದ**

ಬಳಿಕಂ ಮೈಮುರಿದೆದ್ದಾ |
ಖಳಕುಲ ಚಂದಿರನ ಕುವರ ದಡಚಿತ್ತದೊಳಂ ||
ಜಲರುಹನಾಭನ ಪದಯುಗ |
ನಳಿನವ ನೆನೆವುತ್ತಲೊಯ್ಯನೆಂದನು ತನ್ನೊಳ್ ||98||

**ರಾಗ ಕಾಂಭೋಜ ಝಂಪೆತಾಳ**

ನರರಿಗೀ ಬಲುಹೆಲ್ಲಿಯದು ವಿಪಿನ ಚರರಿಗೀ |
ಪರಿಯ ಕಡುಹೆಲ್ಲಿ ಬಂದಪುದು ||
ಹರಿಯ ಮಾಯಾವಿಲಾಸವಿದಲ್ಲದೊಂದಿಲ್ಲ |
ಮರೆಯ ಮಾತೇನು ದಿಟವೈಸೆ ||99||

ಆಯಿತಕಟಾ ತಂದೆಯಾಯುಷಕೆ ಕಡೆಯಿನ್ನು |
ಬಾಯಾರಲೇಕೆ ನಾವಿದಕೆ ||

ಕಾಯವಿದ್ದಾಗ ನಾರಾಯಣನ ಪಾದವನು ।
ಪ್ರೀಯದಿಂ ಸ್ಮರಿಸಬೇಕೆಂದ ॥100॥

ಎಂದು ಹತ್ಕಮಲಕರ್ಣಿಕೆಯ ಮಧ್ಯದಲಿ ರಘು ।
ನಂದನನ ಚಾರುಮೂರ್ತಿಯನು ॥
ಚಂದದಿಂದಿರಿಸಿ ನಾಲಿಗೆ ಕೊನೆಯೊಳಾಗ ಜಯ ।
ವೆಂದು ಸ್ತುತಿಗೆಯ್ದನಚ್ಯುತನ ॥101॥

**ವಾರ್ಧಕ**

ಜಯ ಜನಕಜಾರಮಣ ವಂದಿತಜನೋದ್ಧರಣ ।
ಜಯ ಜಯ ಘನಶ್ಯಾಮ ರಘುಕುಲಾರ್ಣವ ಸೋಮ ।
ಜಯ ಸಿತಾಂಬುಜನೇತ್ರ ಸುರನಿಕರ ನುತಿಪಾತ್ರಜಯ ಜಯ ಗಿರೀಶಮಿತ್ರ ॥
ಜಯ ಮುನಿಮನೋಹಂಸ ದಾನವ ಕುಲಧ್ವಂಸ ।
ಜಯ ಜಯ ಚಿದಾನಂದ ಸಕಲ ಸದ್ಗುಣವಂದ ।
ಜಯ ದುರಿತವನದಾವ ದೇವಾದಿದೇವ ಜಯ ಜಯ ನಮೋ ಜಯತೆಂದನು ॥102॥

**ಕಂದ**

ಇಂತತಿಕಾಯಂ ರಾಘವ ।
ನಂ ತನ್ನಯ ಜಿಹ್ವೆಯೊಳಗೆ ಸಂಸ್ತುತಿಸುತ್ತಂ ॥
ಮುಂತಿಹ ಲಕ್ಷ್ಮಣದೇವನೊ ।
ಳಂ ತವೆ ಸಂತಸದೊಳೊರೆದನತಿ ಘರ್ಜಿಸುತಂ ॥103॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ತಡೆವುದೇತಕೊ ವೀರ ಬೇಗದಿ ।
ತೊಡು ಮಹಾ ಬ್ರಹ್ಮಾಸ್ತ್ರವನು ಜಗ ।
ದೊಡೆಯ ರಾಮನ ಪದವ ಕೂಡುವೆ । ದಢದೊಳೀಗ ॥104॥

ಎಂದು ಬೊಬ್ಬಿರಿದಾ ದಶಾಸ್ಯನ ।
ನಂದನನು ತೆಗೆದೆಚ್ಚನಮರರ ॥
ವಂದ ಕಂಪಿಸಲಾ ಸುಮಿತ್ರೆಯ । ಕಂದಗಂದು ॥105॥

ಎಚ್ಚ ಶರವನು ಕೊಚ್ಚೆ ಸುರತತಿ ।
ಮೆಚ್ಚಲಾ ಲಕ್ಷ್ಮಣನು ತೆಗೆದನು ।
ನಿಶ್ಚಟದಿ ಚತುರಾಸ್ಯ ಬಾಣವ । ಚಚ್ಚರದೊಳು ॥106॥

ಮನದಿ ರಾಮನ ನೆನೆದು ಭಾರಿಯ ।
ಧನುವಿಗಾ ಬಾಣವನು ಹವಣಿಸಿ ।
ತೊನೆದು ಕಿವಿವರೆಗೆಳೆದು ಬಿಟ್ಟನು । ಕನಲುತಂದು ॥107॥

ಕಿಡಿಯ ನುಗುಳುತಲಾ ಮಹಾಸ್ತ್ರವು ।
ತಡೆಯದಯ್ತಂದಾ ನಿಶಾಟನ ।
ತುಡುಕಿ ಕೊರಳನು ಕಚ್ಚಿಬಾಂದಳ । ಕಡರಿತೊಡನೆ ॥108॥

**ರಾಗ ಸಾಂಗತ್ಯ ರೂಪಕತಾಳ**

ಹರಿ ನಾರಾಯಣ ಕೃಷ್ಣ ಗೋವಿಂದ ರಾಮ ಪಂ ।
ಕರುಹಲೋಚನ ಶರಣೆನುತ ।
ಶರಮುಖದಲಿ ಕಡಿವಡೆದಡರಿದುದಾಗ ।
ಶಿರವು ಬಾಂದಳದಿ ರಾಕ್ಷಸನ ॥109॥

ಅಡಗಿದುದೊಡನಾತ್ಮ ಜ್ಯೋತಿಯು ರವಿಬಿಂಬ ।
ದೆಡೆಯೊಳು ಕಳಕಳಿಸುತಲೆ ॥
ಜಡಜ ಸಂಭವ ಪುರುಹೂತಾದಿ ಸುರತತಿ ।
ಕಡು ಬೆರಗಾಗಲಾಕ್ಷಣದಿ ॥110॥

ಅರಳಿದ ಕಮಲವ ಕಂಡು ಸನ್ಮೋಹದೊ ।
ಳೆರಗುವ ಭ್ರಮರದಂದದಲಿ ॥
ಸಿರಿ ರಾಮನಂಘ್ರಿಯ ಮೇಲೆ ಬಿದ್ದುದು ಶಿರ ।
ವಿರದೆ ಬಾಂದಳದಿಂದ ಬಳಿಕ ॥111॥

ಹೊಳೆವ ಕುಂಡಲದ ಝೂಳಿಪ ಕದಪಿನ ಥಳ ।
ಥಳಿಸುವ ನೊಸಲ ಕಸ್ತುರಿಯ ॥
ಸಲೆವೀರರಸಗೂಡಿ ನಗುಮೊಗದಿಂದಿಹ ।
ತಲೆಯೆಸೆದುದು ಕಣನೊಳಗೆ ॥112॥

ಉಡಿದ ರಾಕ್ಷಸರು ಲಕ್ಷ್ಮಣದೇವನೊಳು ಕಾದಿ ।
ತಳುವದೆ ದಿವವನಯ್ದಿದರು ॥
ಬಳಿಕಮರರು ಕರೆದರು ಪುಷ್ಪವಷ್ಟಿಯ ।
ನೊಲಿದು ಸೌಮಿತ್ರಿಯ ಮೇಲೆ ॥113॥

**ಭಾಮಿನಿ**

ಅರಸಿ ಕೇಳ್ ಬಳಿಕಾ ನಿಶಾಟನ ।
ಶಿರವು ಧರೆಯಲಿ ಬೀಳೆ ಕಂಡದ ।
ನೆರಡು ಕಯ್ಯಿಂದೆತ್ತಿ ಮುದ್ದಿಸುತಲೆ ವಿಭೀಷಣನು ॥
ತರಳ ಹಾ ಸುಕುಮಾರ ಸದ್ಗುಣ ।
ಶರಧಿ ಹಾ ಹಾಯೆನುತ ಕಂಬನಿ ।
ಗರೆದು ಮಮ್ಮಲ ಮರುಗಿದನು ಘನತರದ ದುಃಖದಲಿ ॥114॥

**ರಾಗ ನೀಲಾಂಬರಿ ಝಂಪೆತಾಳ**

ಹಾ ಕುಮಾರಕ ಸಮರ ಶೂರ । ಸಚ್ಚರಿತ ।
ಶ್ರೀ ಕಾಂತಭಕ್ತ ಶರನಿಧಿ ಸಮಗಂಭೀರ ॥
ಲೋಕ ಮೂರರೊಳು ನಿನಗೆಣೆಯೆ । ರಾಕ್ಷಸ ।
ನೀಕದೊಳಗೆನ್ನ ಸನ್ಮೋಹದ ಕಣಿಯೆ ॥ ಹಾ ॥115॥

ಪರ ನಾರಿಯರಿಗಾಗಿ ನಿನ್ನ । ಕೊಲಿಸಿದನು ।
ದುರುಳ ದಶಕಂಠನೆಲೆ ಸುಗುಣ ಸಂಪನ್ನ ॥
ಬರದೇಕೆ ಬುದ್ಧಿಯವಗಿನ್ನು । ಸೀತೆಯನು ।
ಸಿರಿರಾಮಗಿತ್ತು ಸುಖವಿರಲು ಕುಂದೇನು ॥ ಹಾ ॥116॥

ಚಾರು ಚಂದಿರನಿರದ ಬಳಿಕಾ । ಬಾಂದಳದಿ ।
ತಾರಕೆಯ ಬೆಳಕಿಂದ ಬೆಳಗುವುದೆ ಲೋಕ ॥
ಯಾರು ಬದುಕಿರ್ದು ಫಲವೇನು । ನೀನಳಿಯೆ ।
ತೀರಿತೆಮ್ಮಾಯುಷ್ಯ ರಿಪುತಿಮಿರಭಾನು ॥ ಹಾ ॥117॥

**ಭಾಮಿನಿ**

ಇಂತು ದುಃಖಿಸುವಾ ವಿಭೀಷಣ ।
ನಂತರಂಗವ ತಿಳಿದು ಬರಿದೇ ।
ಭ್ರಾಂತಿಯೇಕೈ ಹುಟ್ಟಿದವರಿಗೆ ಮರಣ ತಪ್ಪುವುದೆ ॥
ಚಿಂತಿಸಿದಡೇನಹುದು ಜಗದಾ ।
ದ್ಯಂತವೆಲ್ಲವು ಕಾಲವಶವದ ।
ನೆಂತು ಮಾರಲು ಬಹುದೆನುತ್ತೊಡಬಡಿಸಿದನು ರಾಮ ॥118॥

**ರಾಗ ಬಿಲಹರಿ ಏಕತಾಳ**

ಅತಿಕಾಯನಳಿದುದ ಕಂಡು ಮತ್ತವನ ಸಾ ।
ರಥಿಯು ದುಃಖದಿ ಹೊರಳುತ್ತ ಚಿಂತೆಯಲಿ ॥

ರಥವನು ತಿರುಹಿಸಿಕೊಂಡು ಲಂಕೆಗೆ ಪೋಪ ।
ಪಥವ ಮೆಟ್ಟಿದನೆಡಬಲವ ನೋಡುತಲೆ ॥119॥

ಕುವರನೇನಾದನೆನ್ನುತ ಧಾನ್ಯಾಲಿನಿ ।
ತವಕಿಸಿ ಕೇಳಿದರೇನ ಪೇಳುವೆನು ॥
ಅವಳ ಮಾತಿರಲಿ ದಶಾನನಗೇನೆಂದು ।
ವಿವರಿಸಲೆನುತ ತನ್ನಲಿ ಮರುಗಿದನು ॥120॥

ತೊಳಲುತ ಬಳಲುತ ರಥವನು ನಡೆಸುತ ।
ಲೊಳಪೊಕ್ಕನಾ ಪುರವರದ ದುರ್ಗವನು ।
ಇಳಿವ ಕಂಬನಿಯಿಂದ ಬಂದನೊಯ್ಯನೆ ರಾಜ ।
ನಿಳಯದೆಡೆಗೆ ತಲೆಮುಸುಕಿ ನೊಳವನು ॥121॥

**ಕಂದ**

ದುಗುಡದಿ ಬೃಹ ಸಾರಥಿಯಂ ।
ಮಿಗೆ ಕಾಣುತ್ತೊಡನೆ ಧಾನ್ಯಮಾಲಿನಿಯಾಗಳ್ ॥
ಮಗನಾವೆಡೆ ತೋರೆನುತಂ ।
ದಗುಯುಗದೊಳ್ ಜಲವ ಸೂಸುತೊಯ್ಯನೆ ನುಡಿದಳ್ ॥122॥

**ರಾಗ ರೇಗುಪ್ತಿ ಆದಿತಾಳ**

ಬಾಲನೆಲ್ಲಿಗೆ ಪೋದನೈ । ಎನ್ನಯ ಚಾರು ।
ಶೀಲ ತಾನೇನಾದನೈ ॥
ತಾಳಲಾರೆನು ಕಾಣದೆಂತಾದನೆಂಬುದ ।
ಪೇಳು ಸಾರಥಿಯೆ ನೀನು ॥ ಕೈ ಮುಗಿವೆನು ॥123॥

ರಥವೇಕೆ ಬರಿದಾದುದು । ನಿನ್ನನು ನೋಡ ।
ಲತಿ ದುಃಖ ಪುಟ್ಟುವುದು ॥
ಪಥದಲ್ಲಿ ಬಿಟ್ಟು ಬಂದೆಯೊ ಕರೆತಂದೆಯೊ ।
ಕತಕ ಬೇರುಂಟೆ ಪೇಳು ॥ ಶೀಘ್ರದೊಳು ॥124॥

ಅಳಲಿಸಲೇಕೆನ್ನನು । ಸುಮ್ಮನೆ ಹೆಚ್ಚು ।
ಬಳಲಿಪ ಕಾರ್ಯವೇನು ॥
ಅಳಿದನೊ ಸಮರದೊಳುಳಿದನೊ ತಾನದ ।
ನಳುಕದೆ ಕೇಳುವೆನು ॥ ನಿನ್ನೊಳು ನಾನು ॥125॥

**ಭಾಮಿನಿ**

ಎಂದು ಕೇಳಲು ಮರುನುಡಿಯೊಡ ।
ದಂದು ಸಾರಥಿ ಮರುಗುತಲೆ ಕಂ ।
ಡಿಂದುಮುಖಿ ತಿಳಿದಳು ಕುಮಾರಕನಳಿನೆಂಬುದನು ॥
ನಿಂದವಳು ಸಿಡಿಲೆರಗಿದಂದದಿ ।
ನೊಂದು ಧೊಪ್ಪನೆ ಕೆಡೆದು ಧರೆಯಲಿ ।
ಕಂದ ಮಡಿದ್ಯೆ ಹಾಯೆನುತ ಹಮ್ಮೈಸಿ ಮರುಗಿದಳು ॥126॥

**ರಾಗ ನವರೋಜು ಆದಿತಾಳ**

ಹಾ ಮಗನೇ ಗುಣವಂದ । ಅ । ಯ್ಯೋ ಮಗನೇ ಮನದಂದ ॥
ಹೇ ಮಗನೆ ರಣಧೀರ । ಬಾ ಮಗನೇ ಮೊಗದೋರ ॥127॥

ನೋಡುವ ಕಣ್ಣಿಗೆ ಮಣ್ಣ । ಮಾಡಿದೆಯಲ್ಲವೆ ಚೆಣ್ಣ ॥
ಆಡಿಸಿದೀ ಕೈಗಳಿಗೆ । ಕೇಡನು ಕೊಟ್ಟೆಯೊ ಹೀಗೆ ॥128॥

ಶೋಕಮಹಾಬ್ಧಿಯೊಳೆನ್ನ । ನೂಕಿದೆಯಾ ಗುಣರನ್ನ ॥
ಸಾಕಿದಕ್ಕುಪಕಾರ । ಸಾಕಯ್ಯ ಸುಕುಮಾರ ॥129॥

**ರಾಗ ಆನಂದಭೈರವಿ ಏಕತಾಳ**

ಇಂತೆಂದು ಕಾಮಿನಿಯು ಮ ।
ಹಾಂತ ದುಃಖದಿಂದ ಮಿಡು । ಮಿಡುಕುತ್ತ । ನೆಲದಿ । ಹೊಡಕುತ್ತ ॥130॥

ಮರುಗಲೇತಕವ್ವ ಎಂದು ।
ಸುರಿವ ಕಣ್ಣೀರನು ಬಂದು । ತೊಡೆಯದೆ । ಒಂದು । ನುಡಿಯದೆ ॥131॥

ಹೊಟ್ಟೆಯ ಮೇಲೆ ಕಲ್ಲಿಟ್ಟು ।
ಬಿಟ್ಟು ಹೋದೆಯಲ್ಲ ಕಂದ । ಎಂದಳು । ಹಲುಬಿ । ನೊಂದಳು ॥132॥

**ಭಾಮಿನಿ**

ಮಾನಿನಿಯ ಹುಯ್ಯಲನು ಕೇಳ್ದು ದ ।
ಶಾನನನು ನಡೆತಂದನಲ್ಲಿಗಿ ।
ದೇನಿದೇನೆಂದೆನುತ ತವಕದಿ ಬಿಟ್ಟ ಮಂಡೆಯಲಿ ॥
ದಾನವೇಂದ್ರನ ನೀಕ್ಷಿಸುತ ಬಳಿ ।
ಕಾ ನಿತಂಬಿನಿ ಪುತ್ರ ಶೋಕವ ।
ನಾನಲಾರದೆ ಹಲುಬಿದಳು ತತ್ಕಾಂತ ನಿದಿರಿನಲಿ ॥133॥

**ರಾಗ ನೀಲಾಂಬರಿ ಏಕತಾಳ**

ಚೆಣ್ಣನ ಕಳುಹಿದಿರೆ । ಹಬ್ಬವನೆನ್ನ । ಕಣ್ಣಿಗೆ ಮಾಡಿದಿರೆ ॥
ಎಣ್ಣಿದ ಬಯಕೆ ತೀರ್ದುದೆ । ಹಾಲ ಕೊಂಡಂತೆ ।
ತಣ್ಣಗೆ ಹೊಟ್ಟೆಗಾದುದೆ ॥134॥

ಪರರ ಹೆಂಗಸನು ತಂದು । ಎನ್ನಯ ಮಗನ ।
ಹರಿಬವ ಕಂಡಿರಿಂದು ॥
ಅರಿಗಳ ದೂರಲೇಕೆ । ಕಂದಗೆ ಮತ್ಯು ।
ವರಿಯಲು ನೀವೆ ಪರಾಕೆ ॥135॥

ತರಳನು ಮಡಿದ ಮೇಲೆ । ಜೀವಿಸುವುದು ।
ಸರಿಯಲ್ಲ ತನಗೀಗಲೆ ॥
ಮರಣಕ್ಕೆ ನೇಮವನು । ಕೊಡಿಸಯ್ಯ ಬೇಗ ।
ಇರಲಾರೆ ಬಾಳಿ ನಾನು ॥136॥

**ಭಾಮಿನಿ**

ಕೇಳು ಗಿರಿಸುತೆ ಸತಿಯ ನುಡಿ ಕೇ ।
ಳ್ದಾಲಿಯಲಿ ಕಿಡಿಗಳನು ಸೂಸುತ ।
ತಾಳಿ ಕೋಪವ ಸಿಡಿಲಿನಂದದಿ ಘರ್ಜಿಸುತ ಖಳನು ॥
ಪೇಳು ಸಾರಥಿ ಮಗನ ಮಡುಹಿದ ।
ಖೂಳನಾವವನವನನೀಗಳೆ ।
ಬೀಳುಗಡಿವೆನು ರಣದೊಳೆನಲಿಂತೆಂದ ನಾ ಸೂತ ॥137॥

**ರಾಗ ತುಜಾವಂತು ಝಂಪೆತಾಳ**

ಲಾಲಿಸೈ ಪುಣ್ಯಜನ ಕುಲ ಸಾರ್ವಭೌಮ ।
ಪೇಳಲಿನ್ನೇನದನು ಸಮರ ನಿಸ್ಸೀಮ ॥ ಪ ॥

ಏನನೆಂಬೆನು ನಿನ್ನ ಸೂನುವಿನ ಸಾಹಸವ ।
ವಾನರ ಮಹಾಬಲವ ಮೊದಲು ಪೊಕ್ಕು ॥
ಆನೆಗಳ ಹಿಂಡ ಪಂಚಾನನನು ಪೊಗುವಂತೆ ।
ಹಾನಿಗೈಯ್ದನು ಬಹಳ ಕರಡಿ ಕಪಿಗಳನು ॥138॥

ರವಿತನಯ ನೀಲ ಜಾಂಬವ ವಾಲಿಸುತ ಮೈಂದ ।
ದ್ವಿವಿದ ಮೊದಲಾದ ಪಟುಭಟರನೆಲ್ಲ ॥
ಬವರದೊಳು ಗೆಲಿದು ಲಕ್ಷ್ಮಣಗೆ ತಾನಿದಿರಾಗಿ ।
ತವಕದಿಂ ಹಳಚಿದನು ಸುರರು ಭಾಪೆನಲು ॥139॥

ನಡ ನಡುಗುತಿದೆ ಮುಂದೆ ನಡೆದ ವತ್ತಾಂತವನು ।
ನುಡಿವೆನೆಂದರೆ ಎನ್ನ ಕೈಕಾಲ್ಗಳು ॥
ಮಡುಹಿದನು ಬಳಿಕ ನಿನ್ನೊಡಲಾಬ್ದಿ ಚಂದ್ರಮನ ।
ಜಡಜ ಸಂಭವ ಬಾಣದಿಂದ ಲಕ್ಷ್ಮಣನು ॥140॥

**ಕಂದ**

ಎಂದಾ ಸೂತನ ನುಡಿ ಕೇ ।
ಳ್ದಂದಾ ದಿತಿಜಾತರೆರೆಯ ಕೋಪವ ತಾಳ್ದುಂ ॥
ಮುಂದಿಹ ಸತಿಯಂ ಕಂಡಿಂ ।
ತೆಂದನು ಶೋಕವನು ತೊರೆವುದೆನುತೀ ತೆರದಿಂ ॥141॥

**ರಾಗ ಮಾರವಿ ಏಕತಾಳ**

ಬಿಡು ಬಿಡು ಶೋಕವ । ನುಡುರಾಜಾನನೆ ।
ನುಡಿಯದಿರಿನ್ನಿದನು ॥
ತಡೆಯದೆ ಕಂದನ । ಮಡುಹಿದವನ ರಣ ।
ದೆಡೆಯೊಳು ಮಲಗಿಸುವೆ ॥142॥

ಮಂಗ ಕರಡಿ ಮುಸು । ಸಿಂಗಲಿಕಗಳಿಗೆ ।
ಕಂಗೆಡುವೆನೆ ನಾನು ॥
ಅಂಗನೆ ಕೇಳ್ ಸಮ । ರಾಂಗಣದೊಳಗೆ ।
ನ್ನಂಘವಣೆಯ ತೋರ್ಪೆ ॥143॥

ಹುಲುಮಾನವರ । ಗ್ಗಳಿಕೆಯ ನಿಮಿಷದಿ ।
ನಿಲಿಸುವೆ ಮಗನೇತ್ರೆ ॥
ಕಲಕುವೆ ರಿಪುಬಲ । ಜಲಧಿಯನೆಂದೆನು ।
ತಲೆ ಪೇಳ್ದನು ಸತಿಗೆ ॥144॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇಂತು ದಶಶಿರನ್ನೆದೆ ತನ್ನಯ ।
ಕಾಂತೆಯಳನೊಡಬಡಿಸಿ ರೌದ್ರವ ।
ನಾಂತು ಸನ್ನಹವಾದ ಧುರಕಿ । ನ್ನೆಂತು ಪೊಗಳ್ವೆ ॥145॥

ಹತ್ತು ತಲೆಗೆ ಕಿರೀಟಗಳ ಧರಿ ।
ಸುತ್ತ ಮಣಿಮಯ ಕುಂಡಲವನಿ ।
ಪ್ಪತ್ತು ಕಿವಿಯಲಿ ಹಾಕಿದನು ಮುದ । ವೆತ್ತು ಖಳನು ॥146॥

ಲೇಸೆನಿಪ ಚಂದನವ ಮೈಯಲಿ ।
ಪೂಸಿ ತಿಲಕವ ನಿಟ್ಟು ರಕ್ಕಸ ।
ದೇಶಿಗನು ನೆರಿದುಟ್ಟನರುಣ ಸು । ವಾಸವನ್ನು ॥147॥

ನಾರಿಯರ ಜಯ ಸೇಸೆಯನು ರಣ ।
ಧೀರ ಕೈಗೊಂಡೊಡನೆ ಮಿಸುನಿಯ ।
ತೇರನೇರುತ ಪೊರಟನತಿ ಗಂ । ಭೀರತೆಯೊಳು ॥148॥

**ರಾಗ ಆಹೇರಿ ಝುಂಪೆತಾಳ**

ಕೊಳಗುಳಕೆ ಭರದೊಳಯ್ತಂದ । ಚಾತು ।
ರ್ಬಲವೆರಸಿ ದಶಕಂಠನಧಿಕ ಖತಿಯಿಂದ ॥ ಪ ॥

ಎಡಬಲದಿ ಜಯ ಜಯ ನಿನಾದದಲಿ । ಮುದದೊಳಡಿ ।
ಗಡಿಗೆ ಪೊಗಳುತ್ತಿರುವ ಪಾಠಕರ ಬೊಬ್ಬೆಯಲಿ ॥
ಹೊಡೆವ ರಣಭೇರಿ ತಂಬಟೆ ಢಕ್ಕೆ ಹಲಗೆ ಗಿಡಿ ।
ಬಿಡಿ ಎಂಬ ವಾದ್ಯಗಳ ರವದಿ ॥ ಪೊಡವಿ ।
ನಡುಗೆ ಕುಲಗಿರಿಗಳಲ್ಲಾಡೆ ಬಲು ಭಯದಿ ॥149॥

ಹರಿಗೆ ಪಟ್ಟಿಸ ಶೂಲ ಖಡ್ಗ ಶಲ್ಲೆಹ ಶಕ್ತಿ ।
ಪರಶು ಚಕ್ರ ಮುಸುಂಡಿ ಪಿಂಡಿವಾಳ ಕಪಾಣ ॥
ಸುರಗಿ ತೋಮರ ವಜ್ರ ಮೊದಲಾದ ಕೈದುಗಳ ।
ಧರಿಸಿ ಚತುರಂಗ ಬಲ ಸಹಿತ । ರಕ್ಕ ।
ಸರ ಪಡೆಯನೊಡಗೂಡು ತಂದು ಘರ್ಜಿಸುತ ॥150॥

**ರಾಗ ಪಂಚಾಗತಿ ಮಟ್ಟೆತಾಳ**

ತರುಣಿ ಕೇಳು ದೈತ್ಯಪತಿಯ ।
ವರ ಚತುರ್ಬಲಂಗಳಾಗ ।
ಮುರಿದು ರಾಮಸೈನಿಕವನು । ಭರದಿ ಪೊಕ್ಕುದು ॥
ಮರಳಿ ಕಪಗಳುಬ್ಬಿ ಗುಂಡು ।
ಪೊರಡಿ ಹೆಮ್ಮರಂಗಳಿಂದ ।
ತೆರಳಿ ಕವಿವ ರಾಕ್ಷಸರನು । ಬೆರಸಿ ಹೊಯ್ದರು ॥151॥

ಎಲೆಲೆ ಕಪಿಯೆನುತ್ತ ಸರಳ ।
ಮಳೆಗಳನ್ನು ಕರೆವುತಾಗ ।
ಖಳರು ಖಾತಿವೆತ್ತು ವೈರಿ । ಬಲವ ಪೊಕ್ಕರು ॥
ಕೆಲಕಿಲಾರವಂಗಳಿಂದ ।

ಕಲುಮರಂಗಳಲ್ಲಿ ಬಡೆದು ।
ನಿಲುಕಿ ಬಾಲದಿಂದ ಪೊಯ್ದು । ರಲಘು ಕಪಿಗಳು ॥152॥

ಒತ್ತಿ ಬರುವ ರಥವ ರಥದಿ ।
ಮತ್ತಗಜವ ಗಜದಿ ಹಯವ ।
ನೆತ್ತಿ ಹಯದಿ ಪತ್ತಿಯನ್ನು । ಪತ್ತಿಯಿಂದಲಿ ॥
ಸುತ್ತಿ ಚೆಲ್ಲಬಡಿದರಸಮ ।
ಸತ್ತ್ವದಿಂದ ಕಪಿಗಳೆಲ್ಲ ।
ಬಿತ್ತರಿಸುವದೇನನದನು । ಮತ್ತಕಾಶಿನಿ ॥153॥

ಮಡಿದ ಚಾತುರಂಗ ಬಲವ ।
ನೊಡನೆ ಕಾಣುತಸುರಪತಿಯು ।
ಮಿಡುಕಿ ಕೋಪದಿಂದ ಹೊಯ್ದು । ತಡೆಯದೆಲ್ಲರ ॥
ಫಡ ಫಡೆನುತಲಾಗ ಬಾಣ ।
ಗಡಣದಿಂದ ಮುಸುಕುತವರ ।
ಪೊಡವಿಗೊರಗಿಸಿದ ಸುರಾಳಿ । ನಡುಗದಿರದೆನೆ ॥154॥

**ವಾರ್ಧಕ**

ಅಸಮ ಸಾಹಸರನ್ನು ಮೆಟ್ಟಿದಂ ಕುಟ್ಟಿದಂ ।
ವಿಶಿಖವರುಷವನ್ನೈದೆ ಮಾರಿದಂ ತೋರಿದಂ ।
ಕುಶಲಗತಿಯಿಂ ಧರೆಗೆ ಕೆಡಹಿದಂ ಮಡುಹಿದಂ । ಪರಬಲದ ಪಟುಭಟರನು ॥
ಮುಸುಕುತಿಹ ಕಪಿಗಳಂ ಚುಚ್ಚಿದಂ ಕೊಚ್ಚಿದಂ ।
ಪೆಸರಾಂತ ಭಟರ ಸಂಹರಿಸಿದಂ ಕರಿಸಿದಂ ।
ಪೊಸ ರಥವನುಂ ಮುಂದೆ ನೂಕಿದಂ ತೇಕಿದಂ ದಶಶಿರಂ ಸಂಗರದೊಳು ॥155॥

**ಕಂದ**

ಮುಂದೆಸೆಯೊಳು ಬಪ್ಪಾ ದಶ ।
ಕಂಧರನಂ ಪರಿಕಿಸುತ್ತಲಾ ಕಪಿಶ್ರೇಷ್ಠಂ ॥
ಬಂದಾ ರಕ್ಕಸನಿದಿರೊಳ್ ।
ನಿಂದುರುತರ ಸಿಂಹನಾದ ಗೆಯ್ದಿಂತೆಂದಂ ॥156॥

**ರಾಗ ಭೈರವಿ ಏಕತಾಳ**

ದಶಕಂಠನಹುದೊ ನೀನು । ನಿನ್ನಧಟನು ।
ದೆಸೆಗೆಡಿಸಲು ಬಂದೆನು ।

ಅಸಮ ಸತ್ತ್ವವ ತೋರು ತೋರೆಂದು ಕಲುಮರ |
ವಿಸರದಿ ಮುಸುಕಿದನು ||157||

ಬಿಡದಾ ಕಲ್ಮರಗಳನು | ಬಾಣದಿ ತರಿ |
ದೊಡನೆ ದಶಾನನು ||
ಕಡು ಕೋಪದಿಂದ ಚಾಪಕೆ ಶರವನು ಪೂಡಿ |
ನುಡಿದನಾತನೊಳವನು ||158||

ಎಂದು ಲಂಕೇಶ್ವರನು | ತೀವ್ರದಿ ಬಿಡ |
ಲಂದು ಭಾಸ್ಕರ ಸುತನು ||
ಒಂದರೆಘಳಿಗೆ ಮೂರ್ಛೆಯನಾಂತು ಬಳಿಕೆದ್ದು |
ನಿಂದು ಬೊಬ್ಬಿರಿದೆಂದನು ||159||

ಬಲು ಧೀರನಹೆಯೊ ನೀನು | ಅಂಗದನ ತೊ |
ಟ್ಟಿಲೊಳು ಕಟ್ಟೊಡದವನು ||
ಭಳಿರೆ ಬಲ್ಲೆನು ನಿನ್ನ ಸತ್ತ್ವವನೆನುತಲಿ |
ಕಲುಮರದಲಿ ಪೊಯ್ದನು ||160||

ಕ್ರೋಧದಿ ರಾವಣನು | ಮತ್ತದನೆಲ್ಲ |
ಛೇದಿಸಿ ರವಿಜನನು ||
ಆದರೀ ಬಾಣವನಾಂತುಕೊಳ್ಳೆನುತಲಿ |
ಮೂದಲಿಸುತಲೆಚ್ಚನು ||161||

**ಭಾಮಿನಿ**

ಬಾಣಹತಿಯಲಿ ಬಸವಳಿದು ಮಿಗೆ |
ತ್ರಾಣಗುಂದಿ ದಿನೇಶತನಯನು |
ಕ್ಷೋಣಿಯಲಿಮತಿಗೆಟ್ಟುಮಲಗಿದನಂದುಮೂರ್ಛೆಯಲಿ ||
ಕಾಣುತದನಂಗದನು ಖತಿಯಲಿ |
ಹೂಣೆಗರ ಹೊಯ್ದರಸಿ ದಿವಿಜ |
ಶ್ರೇಣಿಯನು ಬೆಚ್ಚಿಸುವೆನೆಂದಿದಿರಾದನಾ ಖಳಗೆ ||162||

**ರಾಗ ದೇಶಿ ಅಷ್ಟತಾಳ**

ಎಲ್ಲಿ ಪೋಪೆಯೊ ಫಡ ಫಡ ದಶಕಂಠ |
ನಿಲ್ಲು ನಿನ್ನಯ ಬಲ್ಲ ತನವೆ |
ನ್ನಲ್ಲಿ ತೋರ್ ತೋರೆಂದನು ||163||

ಕಲ್ಲು ಹೆಮ್ಮರಗಳಲಿ ರಾಕ್ಷಸ ಸೈನ್ಯ ।
ವೆಲ್ಲವನು ಮಿಗೆ ಚೆಲ್ಲ ಬಡಿನು ।
ಮಲ್ಲ ವಾಲಿಕುಮಾರನು ॥164॥

ಪಡೆಯನೆಲ್ಲವ ಮಡುಹಲಂಗದನನಂ ।
ದೊಡನೆ ಖಳನುರೆಕಂಡು ನಯನದಿ ।
ಕಿಡಿಯನುಗುಳುತ ನುಡಿದನು ॥165॥

ಫಡ ವನಚರ ಕೇಳೆಲೊ ನಿನ್ನಯ ।
ಕಡುಹ ನಿಲಿಸದೆ ಬಿಡೆನು ತವ ಗಡ ।
ಬಡೆಗಳೆನ್ನೊಳು ತೋರಿಸು ॥166॥

ಎಂದು ಬೊಬ್ಬಿರಿದೆದ್ದು ನಾಲ್ದೆಸೆಯನ್ನು ।
ಮುಂದುವರಿದಮರೆಂದ್ರ ತನಯನ ।
ನಂದನನ ತೆಗೆದೆಚ್ಚನು ॥167॥

ಬಂದು ಮುಕ್ಕುರಿಕಿದುದಂಬು ಮೈಯಲಿ ।
ನೊಂದು ತನುಮನಗುಂದಿ ಮೂರ್ಛೆಯೊ ।
ಳಂದು ಮಲಗಿದನಾತನು ॥168॥

**ವಾರ್ಧಕ**

ತರಣಿ ಸುತನಂ ಕೆಡಹಿ ಯುವರಾಜನಂ ಮುರಿಯ ।
ಉರು ಭಯಂಕರ ನೀಲನಿದಿರಾದಡಾತನಂ ।
ಭರದಿ ಸಾಹಸವನೊಪ್ಪಂಗೆಡಿಸಿ ಜಾಂಬವ ನಳಾದಿ ಭಟರಂ ಸೋಲಿಸಿ ॥
ಶರಭ ಮೈಂದ ದ್ವಿವಿದ ಗಂಧಮಾದನ ಗವಯ ।
ರುರವಣೆಗಳಂ ನಿಲಿಸಿ ಕಾಲಭೈರವನಂತೆ ।
ಕೆರಳಿ ಮುಂದಯ್ತುರುವ ದುರುಳ ದಶಕಂಠಗಿದಿರಾದನಾ ಸೌಮಿತ್ರಿಯು ॥169॥

**ರಾಗ ಶಂಕರಾಭರಣ ಏಕತಾಳ**

ಕಳ್ಳ ರಕ್ಕಸನೆ ಮುಂದಾ । ವಲ್ಲಿ ಪೋಪುದೆನ್ನ ಸಮರ ।
ದಲ್ಲಿ ಗೆಲ್ದ ಬಳಿಕಲಣ್ಣ । ನಲ್ಲಿಗೆ ಸಾರೊ ॥170॥

ಹುಡುಗ ನೀನು ನಿನ್ನೊಳೆಮ್ಮ । ಕಡುಹುಲೇಸಗೊಡದು ನಿನ್ನ ।
ಒಡಹುಟ್ಟಿದವನೊಳೀಗ । ಬೆಡಗ ತೋರ್ಪೆನು ॥171॥

ಕೊಳಚೆ ನೀರ ದಾಟಲಾರ । ದೊಳವಿಗೇಕೊ ಕಡಲಮಾತು ।
ಗೆಲಿದು ಮೊದಲೊಳೆನ್ನನಣ್ಣ । ನಳವಿಗೆ ಬಯಸೊ ॥172॥

ಮಕ್ಕಳಾಟಿಕೆಯೊಳು ತನಗೆ । ತಕ್ಕುದನಾಡದೆ ಬಹಳ ।
ಸೊಕ್ಕಿನ ಮಾತಾಡಿ ಬರಿದೆ । ಫಕ್ಕನಳಿವೆಯೊ ॥173॥

ಬಾಯಿಗೆ ಬಂದಂತೆ ಕೆಟ್ಟ । ನಾಯಿಯಂತೆ ಬಗುಳಿ ಕಡೆಗೆ ।
ಸಾಯಬೇಡ ತೋರಿಸು ನಿ । ನ್ನಾಯತಿಕೆಯನು ॥174॥

**ರಾಗ ಘಂಟಾರವ ಮಟ್ಟೆತಾಳ**

ಎನಲು ಕೇಳುತ । ಮನದಿ । ಕಿನಿಸ ತಾಳುತ ।
ಘನತರಾಸ್ತ್ರದಿಂದ ಲೆಚ್ಚ । ದನುಜ ಗಜರುತ ॥175॥

ಎಸೆದ ಸರಳನು । ಬೇಗ । ಕುಸುರಿ ತರಿದನು ।
ಮುಸುಕಿದನು ಶರೌಘದಿಂದ । ಲಸುರಪತಿಯನು ॥176॥

ಬರುವ ಕೋಲನು । ನಡುವೆ । ತರಿದು ಬಿಸುಟನು ॥
ಉರಿಯನುಗುಳುತಾಗ ಹೂಂ । ಕರಿಸುತೆಚ್ಚನು ॥177॥

ಎಸುಗೆಗೆಸೆವುತ । ಬಾಣ । ವಿಸರ ಧುಮುಕುತ ।
ಪಸರಿಸಿದುದು ಮುಂದೆ ಪತ್ತು । ದೆಸೆಯನೌಕುತ ॥178॥

ಧರಣಿತಗ್ಗಿತು । ಸಪ್ತ । ಶರಧಿಯುಕ್ಕಿತು ।
ಗಿರಿಗಳದುರಿ ತುರಗಪತಿಯ । ಕೊರಳು ಕುಗ್ಗಿತು ॥179॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಹೀಗೆ ಕಾದುತಲೀರ್ವರಿರಲಂದು । ಕಾಣು ।
ತಾಗ ವಿಭೀಷಣನುರೆ ನೊಂದು ॥
ಹೇಗಾಗುವುದೊ ಲಕ್ಷ್ಮಣನಿಗೆಂದು । ಬಂದ ।
ಬೇಗ ಗದೆಯ ಧರಿಸುತಲಂದು ॥180॥

ಗದೆಗೊಂಡು ಬೃಹ ವಿಭೀಷಣನನು । ಕಂಡು ।
ಕದನ ಚೌಪಟ ದಶಕಂಠನು ॥
ಅಧಿಕ ರೋಷದೊಳು ಪಲ್ಮೊರೆವುತ್ತ । ನೆಲ ।
ನೊದೆದು ಪೇಳಿದನು ಹೂಂಕರಿಸುತ್ತ ॥181॥

ಸುಡು ಸುಡು ಛೀ ನಿನ್ನ ಮೋರೆಯ । ವೈರಿ ।
ಯೊಡನೆ ಬಂದೆನಗಿದಿರಾದೆಯ ॥
ಒಡಲಾಸೆ ತೀರಿತೆಂದೆಣಿಸಿಕೊ । ಬೇಗ ।
ದಢವಾದ ದೇವರ ನೆನೆಸಿಕೊ ॥182॥

ಎನುತಲೆ ಮಯನಿತ್ತ ಶಕ್ತಿಯ । ಸುರ ।
ಜನ ಬೆರಗಾಗೆ ರಾಕ್ಷಸರಾಯ ॥
ಘನತರ ಕೋಪದಿ ತುಡುಕುತ್ತ । ಬೈದು ।
ಪುನರಪಿ ಪೇಳ್ದನು ಕನಲುತ್ತ ॥183॥

**ಭಾಮಿನಿ**

ಎಲವೊ ದುರ್ಜನರೆರೆಯ ಭಂಡರ ।
ತಿಲಕ ಹೇಡಿಗಳರಸ ಕೆಡುಕರ ।
ಕುಲ ಶಿರೋಮಣಿ ಕೇಳು ನಿನ್ನನು ಕಾವರಾರೆಂದ ॥
ತಳುವದಿದ ನೋಡೀಗ ಘಡ ಘಡ ।
ತೊಲಗದಿರು ನಿಲ್ಲೆನುತ ಪರಮೋ ।
ಜ್ವಲಿತಶಕ್ತಿಯ ತೆಗೆದು ತಿರುಪಿಟ್ಟನು ದಶಾನನನು ॥184॥

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಝಣ ಝಣತ್ಕೃತದಿಂದ ಬರುವಾ ।
ಕುಣಪ ಭೋಜನನಿಟ್ಟ ಶಕ್ತಿಯ ।
ಫಣಿಪನಂಶಜ ಲಕ್ಷ್ಮಣನು ಕಂ ।
ಡೆಣಿಸುತಿರ್ದನು ಮನದಲಿ । ತನ್ನೊಳಿಂತು ॥185॥

ರಾಮನಭಯವನೀತಗಿತ್ತಿಹ ।
ನೀ ಮಹಾರಾಕ್ಷಸನ ಕೊಂದೀ ।
ಹೇಮಮಯ ಲಂಕಾಧಿಪತ್ಯವ ।
ಪ್ರೇಮಿಸುವೆನೆಂದೆನುತಲಿ । ಮೊದಲೊಳಿವಗೆ ॥186॥

ಖಳನ ಶಕ್ತಿಗೆ ನಿಮಿಷಮಾತ್ರದೊ ।
ಳಳಿವ ನಿಶ್ಚಯನೀ ವಿಭೀಷಣ ।
ನುಳಿವ ತೆರನನು ಮಾಡದಿರ್ದಡೆ ।
ಫಲಿಸದೆಮ್ಮಗ್ಗಳಿಕೆಯು । ಲೋಕದೊಳಗೆ ॥187॥

**ರಾಗ ಶಂಕರಾಭರಣ ಮಟ್ಟೆತಾಳ**

ಎಂದು ಬರುವ ಶಕ್ತಿಗಿದಿರು ನಿಂದು ಲಕ್ಷ್ಮಣ ।
ಮುಂದುವರಿದು ಕಡಿವೆನೆಂಬನಿತರೊಳಾಕ್ಷಣ ॥
ಬಂದು ಪೊಕ್ಕುದಾಗ ಮೆಯ್ಯಳಾಮಹಾಸ್ತ್ರವು ।
ನಿಂದುದಾ ಸುಮಿತ್ರೆಯಾತ್ಮಭವನ ಸತ್ತ್ವವು ॥188॥

**ಭಾಮಿನಿ**

ಘೋರ ಶಕ್ತಿಯ ಹತಿಗೆ ರಘುಕುಲ ।
ವೀರನನುಜನು ಮೈಮರೆದು ರಣ ।
ಧಾರಿಣಿಯೊಳೊರಗಿದನು ಸುರತರು ಮಲಗಿತೆಂಬಂತೆ ॥
ಮೂರು ಲೋಕದ ಜನಕೆ ಭಯವನು ।
ಭಾರಿಸಿತು ಹೊಗೆ ಮುಸುಕಿ ಖಳನು ।
ಬ್ಬೇರಿದನು ಕ್ಷಣಮಾತ್ರದೊಳಗೇನೆಂಬೆನದ್ಭುತವ ॥189॥

**ರಾಗ ಕಾಂಭೋಜಿ ಝಂಪೆತಾಳ**

ಸೀತೆಯನು ಕದ್ದೊಯ್ದ ರೀತಿಯಲಿ ಕೊಂಡೊಯ್ವೆ ।
ನೀತನನು ಲಂಕೆಗೆಂದೆನುತ ॥
ಆತನಾಕ್ಷಣ ನಿಜವರೂಥದಿಂದಿಳಿದು ರಘು ।
ನಾಥನನುಜನ ಪೊರಗೆ ಬಂದು ॥190॥

ತ್ವರಿತದಲಿ ಬಂದೆರಡು ಕರದಿಂದ ಲಕ್ಷ್ಮಣನ ।
ನಿರದೆ ನೆಗಹಲ್ಕೆ ದಶಶಿರನು ॥
ಅರರೆ ಬಹು ಭಾರದಿಂದಾನಲಾರದೆ ಹೋಗಿ ।
ಧರಣಿಯಲಿ ಮೊಳನೂರಿ ಬಿದ್ದ ॥191॥

ಆದಡೇನಾಯ್ತೆನುಲೆದ್ದು ಪುನರಪಿ ಖಳನು ।
ಕ್ರೋಧದಲಿ ಜಡಿದು ಖಡುಗವನು ॥
ಛೇದನವ ಗೆಯ್ದಿವನ ಶಿರವ ತನ್ನಯ ನಗರ ।
ಕೊಯ್ದಪೆನೆನುತ್ತ ನಿಂದಿರ್ದ ॥192॥

**ಭಾಮಿನಿ**

ಮಂಜುಬೆಟ್ಟನ ಕುವರಿಕೇಳಾ ।
ಕಂಜಸಖಕುಲತಿಲಕನನುಜನ ।
ಭಂಜಿಸುವೆನೆಂದೆನುತ ರಾವಣನೆದ್ದು ನಿಂದಿರಲು ॥
ಕುಂಜರನ ಪಡಿಮುಖಕೆ ಹರಿತಹ ।
ರಂಜಕದ ಪಂಚಾಸ್ಯನಂದದೋ ।
ಳಂಜನಾಸುತನಂದು ಮೆಯ್ದೋರಿದನು ದಶಶಿರಗೆ ॥193॥

**ಕಂದ**

ವಾಯು ಕುಮಾರಕನಂ ಖಳ ।
ರಾಯನು ಕಾಣುತ್ತಲಧಿಕ ಭೀತಿಯೊಳಾಗಳ್ ॥
ಕಾಯದ ಕಂಪನದೊಳ್ ಪಿಡಿ ।
ದಾಯುಧಮಂ ಬಿಟ್ಟು ಬೆಚ್ಚಿ ಬೆರಗಿನೊಳಿರ್ದಂ ॥194॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಭಳಿರೆ ದಶಶಿರ ಶಸ್ತ್ರವಿದ್ಯವ ।
ಕಲಿತ ಬಗೆಯಿನಿತೇನೊ ಮೂರ್ಖೆಯ ।
ತಳೆದು ರಣದಲಿ ಮಲಗಿದವರನು । ಕೊಲುವೆಯೇನೈ ॥195॥

ಇದಕೆ ಪ್ರಾಯಶ್ಚಿತ್ತವನು ಮಾ ।
ಡದಡೆ ಲೇಸಲ್ಲೆನುತ ಮುಷ್ಟಿಯ ।
ನೊದಗಿನಲಿ ಬಲಿವುತ್ತಲೆಂದನು । ಚದುರ ಹನುಮ ॥196॥

ಕರೆಸಿಕೋ ಬ್ರಹ್ಮನನು ಭಗು ಜನ ।
ಬರಿಸು ಮತಸಂಜೀವಿನಿಯ ತೆಗೆ ।
ದಿರಿಸು ಸಾಯದುಪಾಯವನು ಸ । ತ್ವರದಿ ರಚಿಸೊ ॥197॥

ನಿರತವಿದು ಕೇಳೆಲವೊ ನಾವಂ ।
ತರಿಸುವವರಲ್ಲೆನುತ ಕ್ರೋಧದೊ ।
ಳೆರಗಿದನು ಪವನಾತ್ಮಜನು ದಶ । ಶಿರನಿಗಂದು ॥198॥

ಹತ್ತು ಬಾಯೊಳಗೊಡನೆ ಬಿಸಿ ಬಿಸಿ ।
ನೆತ್ತರನು ಕಾರುತಲಿ ಬಿದ್ದನು ।
ಮತ್ತುಬಡಿವಂದದಲಿ ಪ್ರಾಣವು । ನೆತ್ತಿಗೇರಿ ॥199॥

**ಭಾಮಿನಿ**

ಮುಷ್ಟಿಹತಿಯಲಿ ವಶವಳಿದು ಕಂ ।
ಗೆಟ್ಟು ಹರಿವರುಣಾಂಬು ಪೂರದಿ ।
ಥಟ್ಟು ಗೆಡೆದವನಿಯಲಿ ಮಿಡುಕುವ ರಾಕ್ಷಸೇಶ್ವರನ ॥
ನಿಟ್ಟಿಸುತ ವಾಯುಜನು ರಘುಪತಿ ।
ಸಿಟ್ಟು ಮಾಡದೆ ಇರನು ಬರಿದೇ ।
ಕೆಟ್ಟುದಕಟಾ ರಾಜಕಾರ್ಯವೆನುತ್ತ ಚಿಂತಿಸಿದ ॥200॥

**ರಾಗ ಸಾಂಗತ್ಯ ರೂಪಕತಾಳ**

ಜ್ಞಾನವರ್ಜಿತನಾಗಿ ಮಾಡಿದೆ ಘಾತವ ।
ನಾನಲಾರದೆ ಕೋಪವನ್ನು ॥
ದಾನವೇಂದ್ರನ ಮೇಲೆ ಕೈಮಾರ್ದುದೆಮ್ಮದಿ ।
ನ್ನೇನ ಮಾಡುವೆನಯ್ಯೋ ವಿಧಿಯೆ ॥201॥

ನ್ಯಾಯವಲ್ಲೆಂದಮರರು ಪೇಳದಿಹರೆ ರಾ ।
ಮಾಯಣವೆಂದೆಂಬ ಪೆಸರು ॥
ವಾಯುವಾಯ್ತೆಂದು ಚಿತ್ತದಿ ರಘುನಾಥನು ।
ನೋಯದಿರ್ದಪನೆ ತಾನಿಂದು ॥202॥

ಅಕಟಕಟೆನ್ನು ನಾ ಸ್ವಾಮಿ ದ್ರೋಹಿಕೆಯ ಪಾ ।
ತರಕೆ ಭಾಜನನಾದೆನಲ್ಲ ।
ಸಕಲ ಲೋಕಾಧೀಶ ರಾಮಚಂದ್ರನ ಭಾಷಿ ।
ತಕೆ ನೆಳಲಾದೆನಯ್ಯಯ್ಯ ॥203॥

**ಭಾಮಿನಿ**

ಐಸೆ ಮತ್ತೇನೆಮ್ಮ ದುಷ್ಕೃತ ।
ದೋಷವಿದಲಾ ಮಾರಲಾರಳ ।
ವೇಸು ಮರುಗಿದಡೇನು ನೋಡುವೆನೊಮ್ಮೆಗೀ ಖಳನ ॥
ವಾಸಿಯಂತರ್ಗತ ಖಳ ಪ್ರಾ ।
ಣಾಸುಗತ ಸತ್ಪ್ರಾಣಗತಪರ ।
ಮಾಶುಗನು ಹಿಂಗಿದಡೆ ಹೊಗುವೆನು ಹವ್ಯವಾಹನನ ॥204॥

**ರಾಗ ಭೈರವಿ ಝಂಪೆತಾಳ**

ಎಂದು ನಿಶ್ಚಯಿಸಿ ದಶ ।
ಕಂಧರನ ಹತ್ತಿರಕೆ ।
ಬಂದುಸಿರನಾರಯ್ದ । ನಂದು ಪವನಜನು ॥205॥

ಎದೆಯೊಳಗೆ ತುಸು ಮಿಡುಕ ।
ವಿದೆ ಪ್ರಾಣವೆಂದೆನುತ ।
ಕುದಿಗೊಳುತ ತರ್ತ್ಕ್ಷಣದೊ । ಳುದಕವನು ತಂದು ॥206॥

ಆದರದೊಳವಯವಕೆ ।
ತೋದಿ ಮೆಲ್ಲನೆಪೂಸ ।
ಲಾಧರಿಸಿಕೊಂಡೆದ್ದ । ನಾ ದಶಾನನನು ॥207॥

ಚೇತರಿಸಿ ಮೆಲ್ಲನೆ ।
ದ್ಧಾತನನು ನೋಡುತ್ತ ।
ಲಾ ತತುಕ್ಷಣ ಹನುಮ । ನೀ ತೆರದೊಳೆಂದ ॥208॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಲವೊ ರಕ್ಕಸ ಗಾಯಕೌಷಧಿ ।
ಗೊಳಿಸು ಬೆದರದಿರಿನ್ನು ಬರದೇ ।
ಕೊಲುವವನು ನಾನಲ್ಲ ರಣದಲಿ । ಬಳಲಿದವರ ॥209 ।

ಬೇರೆ ಮಾತಿಲ್ಲಂಜದಿರು ಕೈ ।
ಮಾರುವವರಲ್ಲಿನ್ನು ನೀ ರಘು ।
ವೀರನನು ಕೆಣಕಿದರೆ ಶೌರ್ಯವ । ತೋರಿಸುವನು ॥210॥

ಎಂದು ರಣಭೂಮಿಯಲಿ ಮೂರ್ಛೆಗೆ ।
ಸಂದು ಪವಡಿಸಿದೂರ್ಮಿಳಾಪತಿ ।
ಯಂದವನು ಕಾಣುತ್ತ ಮನದಲಿ ॥ ನೊಂದು ಕೊಳುತ ॥211॥

**ರಾಗ ಕೇದಾರಗೌಳ ಅಷ್ಟತಾಳ**

ಸುರಿವ ಕಂಬನಿಯನ್ನು ಸೆರಗಿಂದಲೊರಸುತ್ತ ।
ಮರುತಕುಮಾರಕನು ॥
ಹರಹರ ರವಿಕುಲಜರಿಗಿಂಥ ಭವಣೆಯು ।
ದೊರಕಿತಿಂದಿನಲೆಂದನು ॥212॥

ಮರುಗಿ ಮಾಡುವುದೇನೆನುತ್ತ ಸೌಮಿತ್ರಿಯ ।
ನೆರಡು ಕೈಯ್ಯಿಂದಲೆತ್ತಿ ॥
ಧರಣಿಪನಿದಿರಲಿ ತಂದಿಳುಹಿದ ಕಳೇ ।
ವರವನು ಹನುಮಂತನು ॥213॥

**ಭಾಮಿನಿ**

ಹನುಮನೀ ಪರಿಯಲಿ ಸುಮಿತ್ರಾ ।
ತನಯನನು ತಂದಿಳುಹಲಲ್ಲಿಗೆ ।
ಘನದ ಗರ್ಜನೆಯಿಂದ ನಡೆತಂದನು ದಶಾನನನು ॥
ಮನದೊಳವ ಬಂದುದನು ಗಣಿಸದೆ ।
ಜನಕಜಾ ವಲ್ಲಭನು ದುಃಖದೊ ।
ಳನುಜನನು ಕಾಣುತ್ತಲಾ ವಾಯುಜನೊಳಿಂತೆಂದಾ ॥214॥

**ರಾಗ ನೀಲಾಂಬರಿ ಆದಿತಾಳ**

ಏನಯ್ಯ ವಾಯು ಸಂಜಾತ | ಮಾನವಂತ ಖ್ಯಾತ ||
ಭಾನುಕುಲದ ಕೋಳು ಹೋಯ್ತೆ | ನೀ ನಿಶ್ಚಯವ ಪೇಳೈ ||215||

ಹರಿದುದೊ ಋಣಾನುಬಂಧ | ಹರಚಿತ ಲಕ್ಷ್ಮಣಗೆ ||
ಇರುವುದೆ ಪ್ರಾಣಾಂಶವೆಂಬು | ದರುಹಯ್ಯ ಬೇಗದಲಿ ||216||

ಬಲದ ಭಾಗವೀತನೆಂದು | ಗೆಲವಿನಿಂದಲಿರ್ದೆ ||
ನೆಲೆಯ ಪೇಳೈ ತಮ್ಮನಿರವ | ತಳುವದೆನ್ನೊಳ್ ನಿಜವ ||217||

**ರಾಗ ಬೇಗಡೆ ಏಕತಾಳ**

ಲಾಲಿಸೈ ಭೂಪಾಲ ಕುಲವರ್ಯ | ಸದ್ಧೈರ್ಯನಾಗೈ |
ಕಾಲವಲ್ಲಿದು ಶೋಕಕೆಲೆ ಜೀಯ |
ಖೂಳ ದಶಶಿರ ಬಂದನಿದೆ ನೋ |
ಡೇಳು ರಣಕಲಿಯಾಗು ಸುಮ್ಮನೆ |
ತಾಳದಿರು ದುಮ್ಮಾನವನು ನಾ |
ಪೇಳುವೆನು ಮುಂದೆಲ್ಲ ಕಾರ್ಯವ || ಲಾಲಿಸೈ || ಪ ||218||

ಬಂದ ಹರಿಬಕೆ ಮೆಯ್ಗುಡದೆ ನೀ | ನಿಂದು ಮರುಗತ್ತ | ಕುಳ್ಳಿರೆ |
ಚಂದವೇ ಜಗದಾತ್ಮ ದೇವ ಮು | ಕುಂದ ನೋಡಿತ್ತ | ಕಾಳಗ |
ಕೊಂದೆ ಮನವನು ಮಾಡು ಸುಮನಸ | ವಂದ ಬೆದರುತ್ತ || ಇರ್ದಪ |
ರೆಂದು ಮಾರುತ ನಂದನನು ನುಡಿ |
ದಂದವನು ಕೇ | ಳ್ದಂದು ರಾಘವ |
ಕುಂದದಾಗಳೆ | ಮುಂದೆ ಬೃಹ ದಶ | ಕಂಧರನ ಖತಿ | ಯಿಂದ ಕಂಡನು || ಲಾಲಿಸೈ ||219||

**ಭಾಮಿನಿ**

ಗಿರಿಜೆ ಕೇಳಾ ರಾಕ್ಷಸಾಧೀ |
ಶ್ವರನ ಕಾಣುತ ದಶರಥಾತ್ಮಜ |
ಗೆರಡು ಕಂಗಳು ಕೆಂಪಡರ್ದುದು ಮಾಸೆಯಲುಗಿದುದು ||
ವರ ಮಹಾ ಧನುಶರವ ಕೊಂಡ |
ಬ್ಬರದ ಗರ್ವದೊಳೌಡುಗಚ್ಚುತ |
ಸುರರು ಹಾರಯಿಸಲ್ಕೆ ಸಮರಕೆ ನಿಂದನಾಕ್ಷಣದಿ ||220||

**ರಾಗ ಪಂಚಾಗತಿ ಮಟ್ಟೆತಾಳ**

ವೀರರಾಮನಂದು ವರ ಸ ।
ಮೀರಸುತನ ಹೆಗಲನೇರಿ ।
ವೈರಿಯನ್ನು ಕಂಡು ತನ್ನ । ಭಾರಿ ಬಿಲ್ಲಿಗೆ ॥
ನಾರಿಯನ್ನು ತೊಡಿಸಿ ಝಂ ।
ಕಾರ ಧ್ವನಿಯ ಗೆಯ್ಯುತಮರ ।
ವಾರ ಪೊಗಳಲೆಂದನವನೊ । ಳಾರು ಭಟಿಸುತ ॥221॥

ಎಲವೊ ಖಳನೆ ಹಿಂದೆ ನಮಗೆ ।
ತಿಳಿಯದಂತೆ ನಮ್ಮ ಸತಿಯ ।
ಕಳವಿನಿಂದ ಲೊಯ್ದು ಕೆಟ್ಟ । ಹೊಲೆಯ ನೀನಹೆ ॥
ಬಲುಹ ಮುರಿದು ದೇವತಲೆಯ ।
ನೊಲಿದು ಸಂತವಿಡುವೆನೊಂದು ।
ಘಳಿಗೆ ನಿಲ್ಲೆನುತ್ತಲತಿ ಮೂ । ದಲಿಸುತೆಚ್ಚನು ॥222॥

ಕಡುಹು ಗಾರನಹುದು ನಿನ್ನ ।
ನುಡಿಯ ಕೇಳ್ದು ಮನಕೆ ಹರುಷ ।
ಬಡುವದೀಗ ಕೇಳು ಮನುಜ । ದಢದ ಮಾತಿದು ॥
ಮಡದಿಯನ್ನು ಕಳೆದುದಲ್ಲ ।
ದೊಡನೆ ನಮ್ಮ ಕೆಣಕಿಬರಿದೆ ।
ಕೆಡುವೆ ಫಡ ಫಡೆನುತಲಾಗ । ತಡೆಯ ದೆಚ್ಚನು ॥223॥

ಎಸುವಡೆಸೆದ ಶರಗಳನ್ನು ।
ಕುಸುರಿದರಿದು ಬಳಿಕ ಬಾಣ ।
ವಿಸರವನ್ನು ಮುಸುಕಿ ಹೂಂಕ । ರಿಸುತ ಲೆಚ್ಚನು ॥
ಅಸಮ ಶರಧಿಯೊಡನೆ ಶರಧಿ ।
ಮುಸುಕುವಂತೆ ಮುಂದ್ವರಿದು ರಾ ।
ಕ್ಷಸಕುಲೇಂದ್ರನಂದು ಕದನ । ವೆಸಗುತಿರ್ದನು ॥224॥

ಮಲೆತು ಸಿಂಹನೊಡನೆ ಸಿಂಹ ।
ಕುಲಿಶದೊಡನೆ ಕುಲಿಶ ಹುಲಿಯು ।
ಹುಲಿಯೊಳಿದಿರು ನಿಂದು ಭರದಿ । ಹಳಚುವಂದದಿ ॥
ಕಲಹಕಲಿಗಳೀರ್ವರುಬ್ಬಿ ।
ಭಳಿರೆ ಭಾಪೆನುತ್ತ ಕದನ ।
ತಳವು ತುಂಬಿದಂತೆ ಸರಳ । ಮಳೆಯ ಕರೆವುತ ॥225॥

ಅಗ್ಗದಾರುಭಟೆಗಳಿಂತು ।
ಹಿಗ್ಗಿ ಕಾದುತಿರಲು ಧರಣಿ ।

ತಗ್ಗಿತೊಡನೆ ಕಮಠನಳುಕಿ । ಮಗ್ಗುಲಾದನು ॥
ದಿಗ್ಗಜಂಗಳ್ಳೆದೆ ನೊಂದು ।
ಬಗ್ಗಿಸಿದುದು ಕೊರಳನೀರ್ವ ।
ರಗ್ಗಳಿಕೆಯ ನೇನನೆಂಬೆ । ಸದ್ಗುಣಾನ್ವಿತೆ ॥226॥

ಅಗಜೆ ಲಾಲಿಸಿತ್ತ ಬಳಿಕ ।
ರಘು ಕುಲಾಗ್ರಣಿಯನು ಹನುಮ ।
ಪೆಗಲೊಳಾಂತು ಬೀದಿವರಿದ । ನಗಡು ತನದಲಿ ॥
ಬಗೆಯ ಕಂಡು ಮನದಿ ಕೋಪ ।
ಭುಗಿಲೆನುತ್ತಲಸುರ ಪತಿಯು ।
ಹೊಗರುಕಣೆಗಳಿಂದಲೆಚ್ಚ । ಧಿಗಿಲೆನುತ್ತಲಿ ॥227॥

ಕಂಡು ರಾಮನಾಗ ಖತಿಯ ।
ಕೊಂಡು ಖಳನ ಕರದೊಳಿಹ ಕೋ ।
ದಂಡವನ್ನು ಕಡಿದ ಸುಪ್ರ । ಚಂಡ ಸಾಹಸ ॥
ದಿಂಡುದರಿದು ರಥವನೆರಡು ।
ತುಂಡು ಗಡಿದು ಕ್ಷಣದೊಳವನ ।
ಷಂಢನೆನಿಸಿ ಬಿಟ್ಟನಂದು । ದ್ದಂಡ ಸತ್ವದಿ  ॥228॥

**ಕಂದ**

ಕರದುರುತರ ಕಾರ್ಮುಕಮಂ ।
ವರ ಸಾರಥಿ ರಥವನಯ್ದೆ ರಘು ಕುಲತಿಲಕಂ ॥
ಧುರದೊಳು ತಡೆಗಡಿಯಲ್ಕಾ ।
ದುರುಳ ದಶಾನನನು ಖತಿಯ ತಾಳ್ದಿಂತೆಂದಂ ॥229॥

**ರಾಗ ಭೈರವಿ ಏಕತಾಳ**

ಎಲವೊ ಮನುಜ ನೀ ಕೆಟ್ಟೆ । ಬೆಂ । ಬಲವಿಲ್ಲದೆ ರಣಗೊಟ್ಟೆ ॥
ಬಿಲು ಖಂಡಿಸಲದಕೇನೊ । ಕಡು । ಗಲಿತನ ಹಿಂಗುವುದೇನೊ ॥230॥

ಎನುತ ಮಹಾಸಿಯ ಕೊಂಡು । ಖಳ । ನನುವಾಗುತ್ತಿರೆ ಕಂಡು ॥
ಅನುವರದಲಿ ರಾಘವನು । ಸೆಳೆ । ದನು ನಗುತಾ ಖಡ್ಗವನು ॥231॥

ಖಡುಗವು ಪೋಗಲ್ಕಾಗ । ಕಂ । ಡೊಡನೆ ದುರುಳನತಿಬೇಗ ॥
ಪಿಡಿಯೆ ಗದಾ ದಂಡವನು । ಕೈ । ದುಡುಕಿ ಸೆಳೆದ ರಘುವರನು ॥232॥

**ಭಾಮಿನಿ**

ಗದೆಯು ಪೋಗಲು ರಾಕ್ಷಸಾಧಿಪ ।
ನಧಟು ತನದಲಿ ಶೂಲವನು ಕೊಂ ।
ಡಿದಿರು ನಿಲ್ಲಲು ತರ್ತ್ಕ್ಷಣದಿ ಸೆಳೆದನು ರಘೋತ್ತಮನು ॥
ವಿಧ ವಿಧ ದೊಳಿಪ್ಪಾಯುಧಂಗಳ ।
ಕದನಚೌಪಟ ದಶಗಳನು ಕೊಂ ।
ಡೊದಗಲದ ನೆಲ್ಲವನು ರಣದಲಿ ಗೆಲಿದನಾ ರಾಮ ॥233॥

**ಕಂದ**

ತೋಯಜಮುಖಿ ಕೇಳ್ ಬಳಿಕ ನಿ ।
ರಾಯುಧನಾಗಿರುವ ಖಳನ ನೀಕ್ಷಿಸುತಾಗಳ್ ॥
ವಾಯುಕುಮಾರನ ಮೊಗಮಂ ।
ರಾಯ ರಘೂದ್ವಹನು ಕಂಡು ಬಳಿಕಿಂತೆಂದಂ ॥234॥

**ರಾಗ ಸುರುಟಿ ಏಕತಾಳ**

ಏನೈ ಹನುಮಂತ । ಪೇಳು ನಿ । ಧಾನಿಸಿ ಗುಣವಂತ ॥
ಈ ನಕ್ತಂಚರ ಶ್ವಾನನನಿಂದಿಗೆ ।
ಹಾನಿಯ ಮಾಡಲೊ ಪ್ರಾಣವನುಳುಹಲೊ ॥ ಏನೈ ॥235॥

ಹಲಬರೊಡನೆ ಕಾದಿ । ಕಾಯದಿ । ಬಳಲಿಹನಿವ ರಣದಿ ॥
ಕೊಲುವದಿದೇನಗ್ಗಳಿಕೆಯೊ ರಘುಕುಲ ।
ತಿಲಕಗೆನುತ ಜನಚಯವೆನದಿರ್ಪುದೆ ॥ ಏನೈ ॥236॥

ಆಯುಧ ಹೀನನನು । ಕೊಲುವುದು । ನ್ಯಾಯವಿದಲ್ಲಿ ದನು ॥
ಆಯತದಲಿ ತಿಳಿದೀತನ ಬಿಡುವೆನು ।
ನೀಯೆಂಬುವುದೇನೆನಲವನೆಂದನು ॥ ಏನೈ ॥237॥

**ರಾಗ ಕಂಭೋಜಿ ಅಷ್ಟತಾಳ**

ಲಾಲಿಸು ದೇವರ ದೇವ । ಜಗ ।
ತ್ಪಾಲಕ ಶರಣಸಂಜೀವ ॥
ಪೇಳುವುದೇನು ನಮ್ಮಭಿಮತ ಬೇರುಂಟೆ ।
ಪಾಲಿಪುದುಚಿತವೀ ಸಾರಿಗೆ ಖಳನನು ॥238॥

ಎಂದು ಕೈ ಮುಗಿದು ಮಾರುತಿಯು । ಪೇಳ ।
ಲಂದು ಕೇಳುತ ದಾಶರಥಿಯು ॥

ಮಂದ ಹಾಸದೊಳರ್ಧಚಂದ್ರ ಬಾಣದಲಿ ಸಂ ।
ಕ್ರಂದ ನಾದ್ಯಮರರ ವಂದವು ನಗುವಂತೆ ॥239॥

ಖಳರಾಯ ನಿಂಗೊಪ್ಪುತಿರುವ । ಹೊಳೆ ।
ಹೊಳೆವ ಕಿರೀಟ ಕುಂಡಲವ ॥
ತಳುವದೆ ಕಡಿದದರಿಳೆಯೊಳಗಿಳುಹುತ ।
ಬಳಿಕವನೊಳು ರಘುಕುಲಜನಿಂತೆಂದನು ॥240॥

**ರಾಗ ಸವಾಯ್‌ಜಂಗಲ್ ಏಕತಾಳ**

ಎಲ ಎಲ ಛೀ ರಕ್ಕಸಕುನ್ನಿ । ನಿಲದಿರು ನೀನೆನ್ನಿದಿರಿನಲಿ ॥
ತ್ರಿಲೋಕ ಕಂಟಕ ನಿನ್ನ ಪ್ರಾಣವ । ನುಳುಹಿದೆನಿಂದಿಗೆ ಘಡ ಘಡ ನಡೆ ನಡೆ ॥ ಎಲ ಎಲ ॥241॥

ಒಡಹುಟ್ಟಿರುವ ವಿಭೀಷಣನೆಂಬವ । ನೊಡಲುರಿದಪುದೇನೆಂದೆನುತ ॥
ದಡಿಗನೆ ನಿನ್ನನು ಬಿಟ್ಟಹೆನಿಂದಿನ । ಕಡುಹನು ನಾಳಿನ ದಿನದಲಿ ತೋರ್ಪೆನು ॥ ಎಲ ಎಲ ॥242॥

ತರಣಿಯು ಪಡುವಣ ಶರಧಿಯೊಳಿಳಿದನು । ತರುಬಿತು ಕತ್ತಲೆಯೂರ್ವಿಯನು ॥
ಶರಹತಿಯಲಿ ಕಡು ನೊಂದಿಹೆ ನೀಕೇಳ್ । ತೆರಳೊ ಲಂಕೆಗೆ ನಾಚಿಕೆಗೆಡುಕನೆ ॥ ಎಲ ಎಲ ॥243॥

**ವಾರ್ಧಕ**

ಇಂತೆಂದು ರಾಘವಂ ಬೈದು ಕಳುಹಲ್ಕೆ ಖಳ ।
ನಂತರಂಗದಿ ನೊಂದು ಕಡು ನಾಚುತಂ ಬಂದು ।
ಚಿಂತಾಗ್ನಿಯಿಂದ ಕುದಿ ಕುದಿಯುತಂ ಕೈದುಗಳ ಘಾತದಿಂದುರೆ ನೋವುತ ॥
ಪಂಥವಳಿದುಂ ಬೇಗ ಮುರಿದ ದುಮ್ಮಾನದಿಂ ।
ದಂತರಿಸಿ ನಿಳಯಕಯ್ದಿದ ಬೀಳುತೇಳುತಂ ।
ಸಂತಾಪದಿಂದಲಯ್ತಂದು ಪೊಕ್ಕನು ಬಿಲವ ಗೂಢಾಂಘ್ರಿ ಪೊಗುವಂದದಿ ॥244॥

**ಭಾಮಿನಿ**

ವನಜಮುಖಿ ಕೇಳಿತ್ತ ಶೋಕಾ ।
ವನದೊಳಾ ದಿನದಿರುಳಿನೊಳುವರ
ಜನಕ ನಂದನೆಗಾಯ್ತು ಬಹು ದುಃಸ್ವಪ್ನ ಸೂಚನೆಯು ॥
ಘನತರದ ಚಿಂತೆಯಲಿದೇನೆಂ ।
ದೆನುತ ಮನದಲಿ ಬೆದರಿ ಬಳಿಕಾ ।
ವನಿತೆ ದುಮ್ಮಾನದಲಿ ತ್ರಿಜಟೆಯೊಳೆಂದಳೀತೆರದಿ ॥245॥

**ರಾಗ ತೋಡಿ ಏಕತಾಳ**

ಗಜರಾಜ ಸನ್ನಿಭಯಾನೆ ।
ತ್ರಿಜಿಟೆ ನೀ ಕೇಳಿದೆಯೇನೆ ।
ನಿಜವನರಿತಿದನು ಪೇಳ ।
ಭುಜಗವೇಣಿ ಚಾರುಶೀಲೆ ॥ ಗಜ ॥246॥

ಬಲದ ಕಣ್ಣಿನ ಹೊಡೆಯು ।
ಅಲುಗುತಿದೆ ದಕ್ಷಿಣ ತೊಡೆಯು ।
ಬಲು ಕಂಪಿಸುತಿಹುದುಕಾಣೆ ।
ನೆಲೆಯನರಿಯದಾದೆ ಜಾಣೆ ॥ ಗಜ ॥247॥

ರಾಮಗೇನೊ ಲಕ್ಷ್ಮಣಂಗೆ ।
ಕ್ಷೇಮವಿಹುದೊ ಕಪಿಗಳಿಂಗೆ ।
ಪ್ರೇಮವೆಂತೊ ತಿಳಿಯದೆಂದು ।
ಭೂಮಿಜೇ ದುಃಖಿಸಿದಳಂದು ॥ ಗಜ ॥248॥

ಈ ತೆರದಿ ಚಿಂತೆಗೊಂಡು ।
ಸೀತೆಯಿರಲು ತ್ರಿಜಟೆಕಂಡು ।
ಕಾತರಿಸದಿರೆಂದು ಬೇಗ ।
ಪ್ರೀತಿಯಿಂದ ನುಡಿದಳಾಗ ॥ ಗಜ ॥249॥

**ರಾಗ ನವರೋಜು ಏಕತಾಳ**

ಚಿಂತಿಸಬೇಡೌ ತಾಯೆ । ಗುಣ ।
ವಂತೆ ಕೋಮಲಕಾಯೆ ॥
ಕಾಂತಾಮಣಿ ತವ । ಕಾಂತನಿಗಪಜಯ ।
ವೆಂತಹುದೈ ಹನು । ಮಂತನಿರುತ್ತಿರೆ ॥ ಚಿಂತಿಸ ॥250॥

ಜಗದಾಜೀವನನವನು । ಕೇಳ್ ।
ರಘುವೀರಾನೆಂಬವನು ॥
ಬಗೆವೆನೆ ಈ ಬಣ । ಗುಗಳನು ಸುಮ್ಮನೆ ।
ಮುಗುಧತನವ ಬಿಡು । ಮಗಮದಗಂಧಿ ॥ ಚಿಂತಿಸ ॥251॥

ಕನಸ ಕಂಡೆನು ನಾನು । ಲ ।
ಕ್ಷ್ಮಣಗೆ ಬಂದೆಡರ್ಗಳನು ॥
ಹನುಮನು ಪರಿಹರ । ವನು ಮಾಡಿದನೆಂ ।
ಬಿನಿತು ಹದನಗಳ । ವನಜದಳಾಂಬಕಿ ॥ ಚಿಂತಿಸ ॥252॥

**ಭಾಮಿನಿ**

ದಂತಿಸನ್ನಿಭಗಾಮಿನಿಯೆ ಕೇ ।
ಳಿಂತು ಸ್ವಪ್ನದ ಪರಿಯ ತಿಳುಹಿಸಿ ।
ಸಂತವಿಸಲಾ ತ್ರಿಜಟೆ ಶಾಂತೋಕ್ತಿಯಲಿಮಿಗೆ ಮನದ ॥
ಚಿಂತೆಯನು ಬಡಲರಿಯದಾ ನಿಜ ।
ಕಾಂತನನು ಹಂಬಲಿಸುತಂದು ಮ ।
ಹಾಂತ ಶೋಕದೊಳಿರ್ದಳತ್ತಲು ಹಲುಬುತಾ ಸೀತೆ ॥253॥

**ರಾಗ ಬಿಲಹರಿ ಏಕತಾಳ**

ಇತ್ತರಾಘವಗೆ ಕೋಪದ ಮಬ್ಬು ಮುರಿದುದು ।
ಚಿತ್ತದಿ ಶೋಕವು ತಲೆದೋರಿತೊಡನೆ ॥
ಕತ್ತಲೆಯೊಳು ತಡವರಿಸುತ್ತ ತಮ್ಮ ನೀ ।
ನೆತ್ತ ಪೊದೆಯೊ ಮೊಗದೋರೆಂದನಳುತ ॥254॥

ಅಯ್ಯಯ್ಯ ಹನುಮಂತ ಬಾರೆನ್ನ ಗುಣವಂತ ।
ಮೆಯ್ಯಳು ತಾಪವು ಹೆಚ್ಚಿತಿಂದೆನಗೆ ॥
ಒಯ್ಯನೆ ನೀನೆನ್ನ ತಮ್ಮನೆಡೆಗೆ ಕರೆ ।
ದೊಯ್ಯಕಾಣದೆ ಜೀವಿಸಲಾರೆನಿನ್ನು ॥255॥

ಎಂದು ಮಾರುತಿ ಕಯ್ಪಿಡಿದು ರಾಘವನ ಕರೆ ।
ತಂದನು ಶೀಘ್ರದಿ ತಮ್ಮನಿದ್ದೆಡೆಗೆ ॥
ಕಂದಿದಾನನದೊಳು ಸಹಜಾತನರಸುತ್ತಾ ।
ಬಂದನು ಬಳಲುತ್ತ ರಣಭೂಮಿಗವನು ॥256॥

ಎಳೆಲತೆಯುದ್ಯಾವನದಿ ಬಿರುಬಿಸಿಲಿಗೆ ।
ಝಳಹೊಡೆದಿಳೆಯೊಳು ಬಾಡಿಬಿದ್ಧಂತೆ ॥
ಖಳನಶಕ್ತಿಯ ಹತಿಯಿಂದ ಮೂರ್ಛಿತನಾಗಿ ।
ಮಲಗಿರುವನುಜನ ಕಂಡನಾ ರಾಮ ॥257॥

**ಶಾರ್ದೂಲವಿಕ್ರೀಡಿತಂ**

ವರ ಸೌಮಿತ್ರಿಯ ನೀಕ್ಷಿಸುತ್ತಲಿಳೆಯೊಳ್ ಕಂಗೆಟ್ಟು ಮೈಚಾಚುತಾ ।
ಭರದಿಂ ತಮ್ಮನೆ ಹಾಯೆನುತ್ತ ಕರದೊಳ್ ತಕ್ಕೈಸಿ ಮುದ್ದಾಡುತಾ ॥
ಮರೆದುಂ ತಾ ಪರಮಾತ್ಮನೆಂಬ ಬಗೆಯಂ ಕಣ್ಣೀರಿನೊಳ್ ತೊನವುತಾ ।
ನರರಂತಾ ರಘುವೀರನ್ನೆದೆ ಮರುಗುತ್ತಿರ್ದ ತಾ ಬೆಂಡಾಗುತಾ ॥258॥

**ರಾಗ ನೀಲಾಂಬರಿ ರೂಪಕತಾಳ**

ಅಯ್ಯೋ ತಮ್ಮನೆ ನೆಲದೊಳು । ಮೆಯ್ಯನು ಚಾಚಿದೆಯಾ ದ ।
ಮ್ಮಯ್ಯ ನಿದಾನಿಸುತೆನ್ನೊಡ । ನೊಯ್ಯನೆ ಮಾತಾಡು ॥ ಅಯ್ಯೋ ॥ ಪಲ್ಲವಿ ॥

ಅಡವಿಯು ಸಲ್ಲದು ನಿನಗೆಂ । ದೊಡಬಡಿಸಲು ಕೇಳದೆ ನ ।
ಮ್ಮೊಡನಯ್ದಿದೆ ಹಳುವಕೆ ಬಳಿ । ಕೊಡಲಿತ್ತೆಯೊ ಧರೆಗೆ ॥
ಪಡೆದಿಹ ತಾಯನು ಮಿಗೆ ಕೈ । ವಿಡಿದಿಹ ಸತಿಯನು ಮರೆದವ ।
ಘಡಿಸಿ ದಶಾಸ್ಯನ ರಣದಲಿ । ಮಡಿದೆಯೋ ನೀ ಕಡೆಗೆ ॥ ಅಯ್ಯೋ ॥259॥

ಜರೆದೆನು ಮಾಯಾಮಗವನು । ತರುವಾಗಲು ಬೇಡೆಂದರೆ ।
ಧರಣಿಜೆಯನು ಬಳಿಕಾ ದಶ । ಶಿರ ತಾ ಕೊಂಡೊಯ್ಯೆ ।
ವಿರಹದಿ ನಿನ್ನಲಿ ಕಡು ನಿ । ಷ್ಠುರದಲಿ ಕೋಪಿಸಲದರನು ।
ಮರೆದಿರ್ದಾ ಸಮಯದೊಳೀ । ಪರಿಯಲಿ ಮುನಿದಪರೆ ॥ ಅಯ್ಯೋ ॥260॥

ತರುಣಿಯ ಕಾರಣ ನಿನ್ನನು । ಧರಕಿಕ್ಕಿದೆನೆಂದೆನಲೋ ।
ದುರುಳನ ಶಕ್ತಿಯ ಹತಿಯಿಂ । ದೊರಗಿದೆನೆಂದೆನಲೋ ॥
ಎರಡನೆಯವ್ವೆಯೊಳೇನೆಂ । ದೊರೆಯಲಿ ಪಣೆಯೊಳಗೀಪರಿ ।
ಬರೆದನೆ ವಿಧಿ ಹಾ ಹಾ ಎಂ । ದೊರಲಿದನೀ ತೆರದಿ ॥ ಅಯ್ಯೋ ॥261॥

**ಭಾಮಿನಿ**

ಮಂದಗಾಮಿನಿ ಲಾಲಿಸಾ ರಘು ।
ನಂದನನು ಲಕ್ಷ್ಮಣನ ಗುಣಗಳ ।
ನಂದು ಯೋಚಿಸಿ ಮರುಗುತಿರ್ದನು ಬಿಗಿದ ಬೆರಗಿನಲಿ ॥
ಕುಂದಿ ನಾನಾ ತೆರದಿ ಶೋಕಿಸು ।
ವಂದವನು ಕಾಣುತ್ತ ಪರಮಾ ।
ನಂದದಲಿ ಕೈಮುಗಿದು ಜಾಂಬವನೆಂದನವನಿಪಗೆ ॥262॥

**ರಾಗ ಮಧ್ಯಮಾವತಿ ಏಕತಾಳ**

ಕೇಳೆನ್ನ ಮಾತನು ಶ್ರೀ ರಾಮಚಂದ್ರ ।
ಪೇಳುವೆ ಮನ್ಮನದಿರವ ಭೂಮಿಂದ್ರ ॥ ಕೇಳೆನ್ನ ॥ ಪ ॥

ಜೀಯ ಚಿಂತಿಪುದೇಕೆ ಬಿಡುಬಿಡು ಮನಸಿನ ।
ಮಾಯೆಯ ಶೋಕವ ಲೋಕಪಾಲಕನೆ ॥
ವಾಯುಸಂಭವನ ಸಂಜೀವನಕೋಸುಗ ।
ಪ್ರೀಯದಿ ಕಳುಹಯ್ಯ ದ್ರೋಣಪರ್ವತಕೆ ॥ ಕೇಳೆನ್ನ ॥263॥

ಅಂಜುವ ಕಾರಣವೇನಯ್ಯ ಪಗಲೊಳು ।
ಮಂಜು ಮಾರ್ತಾಂಡನ ಮುಸುಕುವುದುಂಟೆ ॥
ಜಂಜಡವನು ಬಿಟ್ಟು ಹನುಮನ ಕಳುಹೆಂದು ॥
ಕಂಜ ಸಂಭವ ಪೇಳ್ದ ಕೈಮುಗಿದು ॥ ಕೇಳೆನ್ನ ॥264॥

**ಕಂದ**

ದ್ರುಹಿಣಾತ್ಮಜ ನೆಂದುದನುಂ ।
ಮಿಹಿರಕುಲಾರ್ಣವಸುಧಾಂಶು ಲಾಲಿಸುತಾಗಂ ॥
ವಿಹಿತವಿದೆಂದುಂ ಚಿತ್ತದಿ ।
ಗ್ರಹಿಸುತಲಿಂತು ಹನುಮಂತ ನೊಡನಿಂತೆಂದಂ ॥265॥

**ರಾಗ ನೀಲಾಂಬರಿ ಏಕತಾಳ**

ಹೀಗೆ ಬಾರೋ ಏ ಹನುಮ । ಕಂಡೆಯ ತಮ್ಮ ।
ನಾಗಮವನು ಸುಪ್ರೇಮ ॥
ಹೇಗೆ ಸೈರಿಸಿಕೊಂಬೆನೈ । ಈತಗೆ ಬಂದ ।
ಯೋಗವನೆಂತು ಕಾಂಬೆನೈ ॥266॥

ಮೊದಲು ಕೀಶಾಘವನು । ಜೀವಿಸಿದ ಗುಣ ।
ನಿಧಿಯೈಸೆ ಹನುಮ ನೀನು ॥
ಒದಗಿದ ಹರಿಬವನು । ಕಾದು ತಮ್ಮನ ।
ಬದುಕಿಸಿಂದಿನೊಳೆಂದನು । ॥267॥

**ರಾಗ ಘಂಟಾರವ ರೂಪಕತಾಳ**

ವನಜಲೋಚನ ಅಘವಿಮೋಚನ ।
ಧನುಜ ಮರ್ದನ ಕೀರ್ತಿ ವರ್ದನ ॥
ಇನಿತು ಕೆಲಸಕೆ ಎನ್ನನೇತಕೆ ।
ಘನವ ಮಾಡುವೆ ಪಿರಿದು ಪೊಗಳುವೆ ॥268॥

ಪನ್ನತಿಕೆಯಲಿ ಸುರರು ತಡೆಯಲಿ ।
ವಹ್ನಿನೇತ್ರನೇ ಮುನಿದು ಪೋಗಲಿ ॥
ನಿನ್ನ ಕರುಣ ಒಂದಿರಲಿ ತರುವೆನು ।
ಮುನ್ನಿ ನಂದದಿ ಸಂಜೀವನವನು ॥269॥

ಎಂದು ರಾಮನ ಚರಣಕಾಕ್ಷಣ ।
ವಂದನೆಯನು ಗೆಯ್ದು ಹನುಮನು ॥

ಅಂದು ನೇಮವ ಕೊಂಡು ವಾಯುವ ।
ನಿಂದು ಸ್ಮರಿಸುತ ಪೊರಟನುಬ್ಬುತ ॥270॥

**ವಾರ್ಧಕ**

ಕೋಮಲತರಾಂಗಿ ಕೇಳಿತ್ತಂಜನಾತ್ಮಜಂ ।
ರಾಮಚಂದ್ರನೊಳ್ಳೈದೆ ನೇಮವಂ ಕೊಂಡು ಸು ।
ಪ್ರೇಮದಿಂ ಪೊರಟನಿಲವೇಗದಿಂದೌಷಧಿಗೆನುತ್ತ ಪೋಗಲ್ಕಿತ್ತಲು ॥
ಅ ಮಹಾ ಲಂಕಾಪುರಾಧಿಪತಿಯಾಗಿರ್ಪ ।
ಭೀಮಬಲ ದಶಕಂಠನಡೆಗೆ ಬೇವಿನ ಚರರ್ ।
ವೈಮನಸ್ಸಿನೊಳಾಗ ನಡೆತಂದು ಪೇಳ್ದರೀ ವತ್ತಾಂತಮಂ ಭರದೊಳು ॥271॥

**ರಾಗ ಸಾವೇರಿ ಅಷ್ಟತಾಳ**

ದನುಜೇಂದ್ರ ಲಾಲಿಸಯ್ಯ । ನಾವೆಂಬುದ ।
ಮನಸಿನೊಳಿಟ್ಟು ಜೀಯ ॥ ಪಲ್ಲವಿ ॥
ತವ ಶಕ್ತಿಯಲಿ ಮಡಿದ । ಲಕ್ಷ್ಮಣನ ರಾ ।
ಘವ ಪರಿಪರಿ ನೋಡಿದ ॥
ವಿವರಿಸಿ ತಮ್ಮನ ಗುಣಗಳ ಮರುಗೆ ಜಾಂ ।
ಬವನೊಡಬಡಿಸಿದನು ॥ ಮತ್ತವನು ॥272॥

ಈಗಲಾ ಸೌಮಿತ್ರಿಯ । ಜೀವಿಸುವುದ
ಕಾಗಿ ಮಾರುತ ತನಯ ।
ಸಾಗಿದನಮಳ ಸಂಜೀವನವಿರುತಿರು ।
ವಾ ಗಿರಿಗೆಂದೆನುತ ॥ ಪೆರ್ಮೆಯೊಳಾತ ॥273॥

**ಭಾಮಿನಿ**

ಚಾರಕರ ನುಡಿಕೇಳ್ದು ಚಿಂತಾ ।
ಭಾರದಲಿ ಕುದಿಕುದಿದು ದಶಶಿರ ।
ನೇರಿದಾಸನವಿಳಿದು ಬಳಿಕೇಕಾಂತಮಂದಿರಕೆ ॥
ಆರು ತಿಳಿಯದ ತೆರದೊಳೆಯ್ಯನೆ ।
ಸಾರಿ ತನ್ನೊಳು ತಾನೆ ಹರ ಹರ ।
ದಾರಿ ಮುಂದೇನೆನುತ ಬೇರೊಂದೆಣಿಸುತಿಂತೆಂದ ॥274॥

**ರಾಗ ಕಾಂಭೋಜ ಜಂಪೆತಾಳ**

ಕಲಿ ಹನುಮನೆಂಬುವನು ಪೋದ ಕಾರ್ಯವ ಮಾಡಿ ।
ಕೊಳದೆ ಬಾರನು ಬಲ್ಲೆನವನು ॥
ತಿಳಿಯಲೊಂದುಂಟುಪಾಯವು ಕಾಲನೇಮಿಯನು ।
ಕಳುಹಿ ಮಾರ್ಗದಲಿ ವಿಘ್ನವನು ॥275॥

ಬಹುಪ್ರಕಾರದಿ ಗೆಯ್ಸಲದನು ಕಳೆದಾ ಮೇಲೆ ।
ತಹನ್ಯೆಸೆ ಹನುಮ ನೌಷಧಿಯ ॥
ಬೃಹದರೊಳಗಿಲ್ಲಿ ಮತ್ತೊಬ್ಬರನು ನಾನು ನಿ ।
ರ್ವಹಿಸದಿರ್ದಪೆನೊ ನಾಳಿನಲಿ ॥276॥

ಎಂದೆಣಿಸಿ ಮುಂಗೆಲಸಕಾ ಕಾಲನೇಮಿಯಿಹ ।
ಮಂದಿರಕೆ ಪೋಗಬೇಕೆನುತ ॥
ಮಂದಮತಿ ರಾವಣನು ಮತ್ತೋರ್ವರಿದನರಿಯ ।
ದಂದದಲಿ ಪೊರಟು ನಡೆತಂದ ॥277॥

ಏಕಾಂಗಿಯಾಗಿ ಕಾಲ್ನಡೆಯಿಂದಲಯ್ತುರುವ ।
ಲೋಕೈಕ ವೀರನನು ಕಂಡು ॥
ಅ ಕಾಲನೇಮಿಯರಿದಿದಿರಾಗಿ ಬಂದು ಕೂ ।
ಡೇಕಾಂತ ಭವನಕಯ್ತಂದ ॥278॥

**ರಾಗ ಸಾಂಗತ್ಯ ರೂಪಕತಾಳ**

ಏನಯ್ಯ ದಶಕಂಠ ಮಧ್ಯರಾತ್ರೆಯಲಿ ದು ।
ಮ್ಮಾನದೊಳಯ್ತಂದ ಕೆಲಸ ॥
ಮಾನವಂತನೆ ಕರುಣಿಸು ತನಗೆಂದು ಸ ।
ನ್ಮಾನದೊಳವನೊಡ ನೆಂದ ॥279॥

ಪೇಳಲು ತುದಿ ಬೀಳದೆಮ್ಮಯ ಪರಿಭವ ।
ಪೇಳುವೆ ಸ್ವಲ್ಪ ಮಾತ್ರದಲಿ ॥
ಕೇಳು ಹಾಗಾದಡೆ ಮಯನಿತ್ತ ಶಕ್ತಿಯಿಂ ।
ದಾ ಲಕ್ಷ್ಮಣನ ಕೆಡಹಿದೆನೊ ॥280॥

ಅವನ ಜೀವಿಸಲು ಸಂಜೀವನ ತರುವರೆ ।
ಪವನ ಸಂಭವ ದ್ರೋಣಗಿರಿಗೆ ॥
ಹವಣಿಸಿ ಪೋಗಿಹನಂತೆ ನೀನಲ್ಲಿಗೆ ।
ತವಕದಿ ತೆರಳಿ ಮುಂದಾಗಿ ॥281॥

ತಡೆದು ಮಾಯಾಮುನಿವೇಷದೊಳಗೆ ಪೋಗು ।
ವೆಡೆಯ ಮಾರ್ಗದಲಿ ವಿಘ್ನವನು ॥
ಬಿಡದೆಸಗುತ್ತ ಲೌಷಧಿಯನು ತಾರದಂ ।
ತಡವರಿಸಯ್ಯ ಯತ್ನವನು ॥282॥

ಎನಲು ಪೇಳ್ದನು ಕಾಲನೇಮಿಯು ಕೇಳಯ್ಯ ।
ಧನುಜೇಂದ್ರ ನೀನೇಕೆ ಬರಿದೆ ॥
ಘನಮೂರ್ಖತನವನು ಗೆಯ್ವೆ ರಾಘವನಾರೆಂ ।
ದೆನುತರಿಯದೆ ದ್ವೇಷದಿಂದ ॥283॥

ಆದಿ ನಾರಾಯಣನವನು ಕೇಳ್ ನಿನ್ನಯ ।
ಭೇದವು ಕೊಳ್ಳದಾತನಲಿ ॥
ಮೇದಿನಿ ಸುತೆಯನಿತ್ತಾ ರಾಮಚಂದ್ರನ ।
ಪಾದವ ಮರೆಪೋಗು ಬೇಗ ॥284॥

ಅನುಜನ ಕರೆತಂದು ಪಟ್ಟವ ಕಟ್ಟಿಸಿ ।
ವನವನ್ನು ಪೊಕ್ಕೊಂದೆ ಮನದಿ ॥
ಚಿನುಮಯನನು ನೆನೆವುತ್ತ ಮುಂದಿನ ಗತಿ ।
ಯನು ಕಾಣಬಾರದೇನಯ್ಯ ॥285॥

**ಭಾಮಿನಿ**

ಇಂದು ನಾನಯ್ದು ಸಮಾರನ ।
ನಂದನನ ಕಪಟದೊಳು ತಡೆದರೆ ।
ಹೊಂದುವುದು ಮಾರೀಚಗಾಗಿಹ ಗತಿಯು ತನಗೆನುತ ॥
ಹಿಂದುಗಳೆ ವೈರವನು ರಾಮನೊ ।
ಳೆಂದು ಪೇಳಲ್ಕವನ ನುಡಿಕೇ ।
ಳ್ದಂದು ರೋಷಾವೇಶದಲಿ ದಶವದನನಿಂತೆಂದ ॥286॥

**ರಾಗ ಶಂಕರಾಭರಣ ಏಕತಾಳ**

ಎಲವೊ ಕಾಲನೇಮಿ ನಿನಗೆ ।
ಸಲುಗೆ ಕೊಟ್ಟುದರಿಂದೆನಗೆ ।
ಹಲವು ಮಾತು ಸಾಕು ನಡೆಯೊ । ತಳುವದೆ ಬೇಗ ॥287॥

ಒಳ್ಳೆಮಾತಿನಿಂದ ಪೋದ ।
ರೊಳ್ಳಿತಾಯ್ತು ಮತ್ತೆ ನಿನ್ನ ।
ಪಳ್ಳುತನವ ತೋರಲೀಗ । ಕೊಲ್ಲುವೆನೆಂದ ॥288॥

ಆಗಲಾಗಲದಕೇನು ।
ಹೋಗಬೇಕೆಂದುದಾದರೆ ।
ಬೇಗಲಪ್ಪಣೆಯ ನೀಡು । ಪೋಗುವೆ ನಾನು ॥289॥

**ವಾರ್ಧಕ**

ಎಂದೆನುತಲಾ ಕಾಲನೇಮಿ ತಾ ದಶಶಿರನ ।
ನಂದು ಬೀಳ್ಗೊಟ್ಟಧಿಕ ವೇಗದಿಂದಾ ಲವಣ ।
ಸಿಂಧುವಂ ದಾಟಿ ಹಿಮವದ್ಗಿರಿಯ ಪಾರ್ಶ್ವಮಂ ಸಾರ್ದು ಬಳಿಕಂ ಮಾಯದಿ ॥
ಚಂದದಿಂದಲಿ ತಪವ ರಚಿಸುತ್ತಲವ ಶಿಷ್ಯ ।
ವಂದಮಂ ಕೂಡಿ ಢಾಂಭಿಕವೆತ್ತಿ ಮುನಿವೇಷ ।
ದಿಂದಾ ಸಮೀರಜಂ ಬೃಹದರೊಳ್ ನಾಸಿಕದಿ ಬೆರಳಿಟ್ಟು ಕುಳ್ಳಿರ್ದನು ॥290॥

**ದ್ವಿಪದಿ**

ಪುಂಡರೀಕಾಕ್ಷಿ ಕೇಳಿತ್ತ ಪವನಭವ ।
ಕಂಡನಯ್ತುರುವಾಗಳೀ ತಪೋವನವ ॥291॥

ಅಮಮ ಕಪಿ ಕರಡಿಗಳು ಝೆಂಕರಿಸುತಿರುವ ।
ಭ್ರಮರಗಳು ನಲಿದಿರ್ದ ಬರ್ಹಿಗಳ ಸ್ವರವ ॥292॥

ಬಾಗಿರ್ಪ ಕದಳಿ ಖರ್ಜೂರ ದ್ರಾಕ್ಷಿಗಳ ।
ಪೂಗ ಪುನ್ನಾಗ ಮೊದಲಾದ ವೃಕ್ಷಗಳ ॥293॥

ವೈರವಿಲ್ಲದೆ ಕುಣಿವ ವಿವಿಧ ಮಗಕುಲವ ।
ಊರ್ವಿಗತಿ ಚೋದ್ಯವಿಹ ಪಕ್ಷಿಸಂಕುಲವ ॥294॥

ಕಾಣುತತಿ ವೈಭವವನಂಜನಾಸುತನು ।
ಮಾಣದಾಗಲೆ ಮುಂದೆ ಬಂದ ಮತ್ತವನು ॥295॥

**ರಾಗ ಕೇದಾರಗೌಳ ಅಷ್ಟತಾಳ**

ಇಂತು ಮುಂದಯ್ತರೆ ಕಪಟದ ಮುನಿಗಳ ।
ತಿಂಥಿಣಿಯನು ಕಾಣುತ ॥
ಅಂತರಂಗದಿ ಚೋದಿಗವ ಪಟ್ಟು ಹನುಮಂತ ।
ನಿಂತು ಚಿಂತಿಸಿದನಾಗ ॥296॥

ಹಿಂದೆ ನಾನಿಲ್ಲಿಗೆ ಬರುವಾಗಳೀ ಮುನಿ ।
ವಂದದಾಶ್ರಮವ ಕಾಣೆ ॥

ಇಂದಿದು ಪೊಸತು ಮಾರ್ಗವ ತಪ್ಪಲಿಲ್ಲ ತಾ |
ನೆಂದು ಯೋಚಿಸುತಿರ್ದನು ||297||

ಆದಡೆನಾಯಿತು ತಷೆ ಬೃಹಳುದಕದ |
ವೇದನೆಯಿಂದೆನಗೆ ||
ಈ ದಿವ್ಯಮುನಿಗಳಾಶ್ರಮವ ತೋರಿಸಿದ ಮ |
ಹಾದೇವ ಕರುಣದಲಿ ||298||

ಯಮಿಗಳ ಕಂಡುದಕವನೀಂಟುತಲೆ ತನ್ನ |
ಶ್ರಮವನು ಕಳೆದುಕೊಂಡು ||
ಗಮಿಸುವೆನಾಮೇಲೆ ದ್ರೋಣ ಪರ್ವತಕೆಂದು |
ಕಮಲನಾಭನ ದೂತನು ||299||

ನಡೆತಂದು ಕಂಡನು ಮಾಯದ ಮುನಿಗಳ |
ಗಡಣದ ಮಧ್ಯದಲಿ ||
ಕಡು ಡಂಭದಲಿ ಕುಳಿತಿಹ ಕಾಲಿನೇಮಿಯ |
ದಢತರ ಭಕ್ತಿಯಲಿ ||300||

**ವಾರ್ಧಕ**

ಕೆಲಬರುತ್ತಮ ಶಿವಧ್ಯಾನದಿಂ ಮೌನದಿಂ |
ಕೆಲಬರಿಕೆ ದೇವತಾರ್ಚನೆಗಳಿಂ ಘನಗಳಿಂ |
ಕೆಲಬರತಿ ಡಂಭಕದ ಹೋಮದಿಂ ನೇಮದಿಂ ಕೇಲರು ದಢ ಯೋಗದಿಂದ ||
ಕೆಲರಯ್ದೆ ವೇದಾಂತ ಘೋಷದಿಂ ತೋಷದಿಂ |
ಕೆಲರೆಣಿಕೆಯಿಂ ಗೆಯ್ದು ಜಪಗಳಿಂ ತಪಗಳಿಂ |
ಕೆಲಬಲದಿ ಕಪಟ ಮುನಿನಿಕರಮಂ ಸಕಲಮಂ ಕಂಡ ಪವಮಾನಸೂನು ||301||

**ಭಾಮಿನಿ**

ತರುಣಿ ಕೇಳಾ ಕತಕ ಶಿಷ್ಯರ |
ನೆರಹಿಕೊಂಡಿಹ ಮಾಯಕದ ಮುನಿ |
ವರನ ನೀಕ್ಷಿಸುತಾಕ್ಷಣವೆ ಪವಮಾನನಂದನನು ||
ಎರಗಿ ಸಾಷ್ಟಾಂಗದಲಿ ಭಕ್ತಿಯ |
ಹೊರಿಗೆಯಲಿ ಬಳಿಕೆದ್ದು ತನ್ನಯ |
ಕರವ ಜೋಡಿಸಿಕೊಂಡು ಮತ್ತಿಂತೆಂದನವನೊಡನೆ ||302||

**ರಾಗ ಕೇದಾರಗೌಳ ಅಷ್ಟತಾ**

ಪರಮಮುನೀಂದ್ರನೆ ಕರುಣದಿ ಲಾಲಿಸೆ ।
ನ್ನರಿಕೆಯನತಿ ಮುದದಿ ॥
ಸಿರಿರಾಮನೋಲೆಯ ಕಾರ ಹನುಮನೆಂದು ।
ಕರೆವರೆನ್ನನು ಜಗದಿ ॥303॥

ರಾಯ ರಾಘವ ಕಳುಹಿದ ಸಂಜೀವನವನ್ನು ।
ತಾಯೆಂದು ದ್ರೋಣಾದ್ರಿಗೆ ॥
ಬಾಯಾರ ಲಿಲ್ಲಿಗೆ ಬಂದಿಹೆನೆನಗಿಷ್ಟು ।
ತೋಯವ ನೀಡೆನಗೆ ॥304॥

ಎನಲು ಕಪಟಮುನಿ ಕಣ್ದೆರೆದೊಯ್ಯನೆ ।
ಹನುಮನ ಮೊಗ ನೋಡುತ ॥
ಘನಪರಿ ತೋಷ ತಾಳ್ದಂತೆ ಸನ್ಮಾನಿಸು ।
ತಿನಿತೆಂದ ನಸುನಗುತ ॥305॥

**ರಾಗ ಕಾಂಭೋಜಿ ಏಕತಾಳ**

ಬಂದೆಯ ಹನುಮಂತ ಬೃಹಳ । ಚಂದವಾಯಿತಯ್ಯ ।
ಕಂದು ಕುಂದೇಕೆ ಜಲವ । ತಂದೀವೆ ಕೊಳ್ಳಯ್ಯ ॥
ಒಂದು ದಿವಸ ನೀನಿಲ್ಲಿದ್ದು । ಮುಂದಯ್ದಬಹುದಯ್ಯ ।
ಇಂದು ನಿನ್ನ ಕಂಡು ಮನಕಾ । ನಂದವಾಯಿತಯ್ಯ ॥306॥

ಬಲ್ಲೆವು ಜ್ಞಾನ ದೃಷ್ಟಿಯೊ । ಳೆಲ್ಲವ ನಾವಯ್ಯ ।
ಫುಲ್ಲ ನೇತ್ರ ರಾಮನ ಕರುಣ । ದಲ್ಲಿ ಕಂಡೆವಯ್ಯ ॥
ಬಲ್ಲಿದ ಲಕ್ಷ್ಮಣನೆದ್ದ । ಸುಳ್ಳಲ್ಲ ಕೇಳಯ್ಯ ।
ತಲ್ಲಣಿಸಬೇಡ ಜಯ ನಿ । ಮ್ಮಲ್ಲಿ ಸೇರ್ದುದಯ್ಯ ॥307॥

**ಕಂದ**

ಎಂದೊಡನೆ ಕಮಂಡಲಜಲ ।
ಮಂ ದಯದಿಂ ಕಾಲನೇಮಿಯಾಯಲ್ಕಾಗಳ್ ॥
ವಂದಿಸಿ ಮರುತಜನಿದರೊಳ್ ।
ಗೆಂದಿಗು ತಷೆ ಮಾಣದೆನುತಲವನೊಳುಸಿರ್ದಂ ॥308॥

**ರಾಗ : ಕೇದಾರಗೌಳ ಝುಂಪೆತಾಳ**

ಮುನಿವರನೆ ಲಾಲಿಸುವುದು । ಈ ಜಲದಿ ।
ಘನವಾದ ತಷೆಮಾಣದು ॥

ಎನಗೆ ನಿರ್ಮಲ ಸರಸಿಯ | ತೋರಿದರೆ |
ಮನದಣಿಯೆ ಕೊಂಬೆಜೀಯ ||309||

ಎನಲವನು ಕತಕಗಳನು | ಗೆಯ್ದು ಕೊಳ |
ವನು ತೋರಿಸಿದನಾತನು |
ಮನದಣಿಯಲಾ ಜಲವನು | ಕಂಗಳೆರ |
ಡನು ಮುಚ್ಚಿಕೊಂಡು ನೀನು ||310||

ಕುಡಿದು ಬಾರೆನ್ನ ಬಳಿಗೆ | ಉಪದೇಶ |
ಕೊಡುವೆನಾ ಮೇಲೆ ನಿನಗೆ ||
ಕಡು ಗುಪಿತ ಮಂತ್ರಗಳನು | ಪೋಗೆನಲು |
ತಡೆಯದಯ್ದಿದನಾತನು ||311||

**ವಾರ್ಧಕ**

ಬಡನಡುವ ಬಾಲೆಕೇಳ್ ಬಳಿಕಾ ಸಮಾರಜಂ |
ತಡೆಯದಯ್ತಂದು ಕಪಟದ ಸರೋವರವನಿಳಿ |
ದೊಡನಕ್ಷಿಗಳ ಮುಚ್ಚೆ ನೀರ್ಗುಡಿವ ಸಮಯದೊಳಗೊಂದು ಪೆರ್ಮೊಸಳೆ ಬಂದು ||
ಪಿಡಿದೆಳೆವುತಿರಲಿದೇನೆಂದು ಕಣ್ದೆರೆದವಂ |
ಕಡುಕಿದಾ ಮಕರಿಯಂ ಕಂಡು ಕಡು ಕೋಪದಿಂ |
ದೆಡೆಗಾಲಿನಿಂಮೆಟ್ಟಿ ಸೀಳ್ದಾತತೂಕ್ಷಣದಿ ತಡಿಗೆ ಬಿಸುಟಂ ಭರದೊಳು ||312||

**ಭಾಮಿನಿ**

ಅರಸಿ ಕೇಳಾಶ್ಚರ್ಯ ಹನುಮನ |
ಚರಣ ಸೋಂಕಲ್ಕಾ ಶರೀರವು |
ತೊರೆದು ಗಗನದಿ ದಿವ್ಯನಾರಿಯ ರೂಪವನು ತಾಳ್ದು ||
ಮಿರುಪ ಸರ್ವಾಭರಣದಿಂ ಪೂ |
ಶರನ ಮುಂಗೈಗಿಣಿಯ ತೆರದಲಿ |
ಹರುಷದಿಂ ಕೈಮುಗಿದು ಪವನಜಗೆಂದಳಾ ಕಾಂತೆ ||313||

**ರಾಗ ಆರಭಿ ರೂಪಕತಾಳ**

ಜಯ ದಶಾಸ್ಯದರ್ಪಸಂಹರ | ಜಾನಕೀಂದ್ರ |
ಪ್ರಿಯ ಪದಾರವಿಂದ ಮಧುಕರ ||
ಭಯವಿನಾಶ ವಾನರೇಶ |
ನಯದೊಳಿದನು ಲಾಲಿಸಯ್ಯ || ಜಯ ||314||

ಹಿಂದೆ ಮೌನಿಶಾಪದಿಂದಲಿ । ಮಕರಿರೂಪ ।
ದಿಂದ ಬಿದ್ದನೀ ಸರಸಿಯಲಿ ॥
ತಂದೆ ನಿನ್ನ ಪಾದ ಸೋಂಕ ।
ಲಿಂದು ನಾ ಕತಾರ್ಥಳಾದೆ ॥ ಜಯ ॥315॥

ವನದಿ ನೀನು ನೋಡಿದಾತನು । ಮುನಿಪನಲ್ಲ ।
ದನುಜ ಕಾಲನೇಮಿಯವನನು ॥
ನಿನಗೆ ವಿಘ್ನವನ್ನು ಮಾಡ ।
ಲೆನುತಲಟ್ಟಿದನು ಖಳೇಂದ್ರ ॥ ಜಯ ॥316॥

ಬೇಗವಧಿಸು ದುರುಳ ದೈತ್ಯನ । ತಡವಮಾಡ ।
ದೀಗಲಾ ಸುರಾಳಿಘಾತನ ॥
ಪೋಗು ನೀನು ತ್ರಿದಶ ಲೋಕ ।
ಕಾಗಿ ಪೋಪೆ ನಿನ್ನ ದಯದಿ ॥ ಜಯ ॥317॥

**ಭಾಮಿನಿ**

ಎಂದು ಪೇಳ್ದಾ ನಾರಿಯಮರರ ।
ಮಂದಿರವ ನಯ್ದಲ್ಕೆ ಹನುಮನು ।
ಬಂದನಿತ್ತಲು ಬೊಬ್ಬಿಡುತ ಖಳನಿರ್ದ ಬಳಿಗಾಗಿ ॥
ನಿಂದು ಭಯದಿಂದ ಸುರ ಮಾರುತ ।
ನಂದನನ ಕಾಣುತ್ತುಳಿದೆನಿಂ ।
ದೊಂದು ಹರಿಬದೊಳೆನುತ ಯೋಚಿಸುತೆಂದನೀ ತೆರದಿ ॥318॥

**ರಾಗ ತೋಡಿ ಅಷ್ಟತಾಳ**

ಏನಯ್ಯ । ಹನುಮ । ಏನಯ್ಯ ॥ ಪ ॥
ಏನಯ್ಯ ನಿನ್ನನುಮಾನವು ಹನುಮ ।
ಸಾನುರಾಗದಿ ಪೇಳು ಸಂಗರಭೀಮ ॥ ಎನಯ್ಯ ॥ ಅ ॥319॥

ಯಾತಕೆ ಸುಮ್ಮನೆ ಚೇಷ್ಟೆಯ ಮಾಳ್ಪೆ ।
ಮಾತಾಡದುಗ್ರ ಭಾವದಲಿ ನಿಂದಿರ್ಪೆ ।
ಪ್ರೀತಿಯ ಶಿಷ್ಯನು ನೀನೆಮಗೈಸೆ ।
ಈ ತೆರದಲಿ ನಮ್ಮ ಮೇಲಿಷ್ಟು ಮುನಿಸೆ ॥ ಏನಯ್ಯ ॥320॥

ಕೊಡುವೆನು ಮಂತ್ರೋಪದೇಶಂಗಳನ್ನು ।
ಕೊಡು ಬೇಗ ಗುರುದಕ್ಷಿಣೆಯ ನಮಗಿನ್ನು ॥

ತಡವ ಮಾಡುವುದೇಕೊ ವಿನಯದಿ ಕೊಳ್ಳೊ ।
ಹುಡುಗಾಟಿಕೆಯ ಮಾಡಬೇಡಿತ್ತ ನಿಲ್ಲೊ ॥ ಏನಯ್ಯ ॥321॥

**ಭಾಮಿನಿ**

ಹುಡುಗತನವಲ್ಲಲವೊ ಮೊದಲಲಿ ।
ಕೊಡುವೆ ಗುರುದಕ್ಷಿಣೆಯ ಕಡೆಯೊಳು ।
ಕೊಡಬಹುದು ಮಂತ್ರೋಪದೇಶವನೆನುತ ಮಾರುತಿಯು ॥
ಮಿಡುಕಿ ಕೋಪದೊಳೌಡುಗಚ್ಚುತ ।
ದಢತರದ ಮುಷ್ಟಿಯನು ಬಂಧಿಸಿ ।
ಹಿಡಿಯೆನುತಲಾ ದುರುಳ ದಾನವನುರವನೆರಗಿದನು ॥322॥

**ರಾಗ ಭೈರವಿ ಮಟ್ಟೆತಾಳ**

ಭರಿತ ಕೋಪದಿಂದ ಹನುಮನೌಡುಗಚ್ಚುತ ।
ಭರದ ಮುಷ್ಟಿಯಿಂದ ತಿವಿಯಲವನು ಕಾಣುತ ॥323॥

ಮರಳಿ ಹೊಯ್ದು ಘೋರುಗೆಯ್ದನೇನ ನೆಂಬೆನು ।
ಮರುತಜಾತ ತಿವಿದನಾಗ ಜವದಿ ಖಳನನು ॥324॥

ತಡವ ಮಾಡಬಾರದೀಗ ತಾನೆನುತ್ತಲಿ ।
ಒಡನೆ ವಾಯುಸುತನು ದಡದ ಮುಷ್ಟಿಯಿಂದಲಿ ॥325॥

ಮುಳಿದು ಶಿರವನೆರಗಿ ನೆತ್ತಿ ಬಿರಿಯೆ ದನುಜನು ।
ಇಳೆಗೆ ಬೊಬ್ಬಿಡುತ್ತ ಬೀಳುತಸುವ ತೊರೆದನು ॥326॥

**ಭಾಮಿನಿ**

ಸರ್ವಮಂಗಳೆ ಕೇಳು ದನುಜನ ।
ನುರ್ವಿಗೊರಗಿಸಿ ಬಳಿಕ ಹನುಮನು ।
ಗರ್ವಗತಿಯಲಿ ಕ್ಷಿತಿಯ ಮಾರ್ಗವ ಪಿಡಿದು ತವಕದಲಿ ॥
ಸರ್ವದೇಶವ ಕಳೆದು ಮಿಗಿಲಲಿ ।
ತೋರ್ವ ಶರಧಿಯ ದಾಟಿ ಬಂದು ಸು ।
ಪರ್ವಜನ ಹೊಗಳಲ್ಕೆ ಕಂಡನು ಕ್ಷೀರಸಾಗರವ ॥327॥

**ರಾಗ ಸಾಂಗತ್ಯ ರೂಪಕತಾಳ**

ಅಳಿಯನೆ ಹರಿಯು ಹೆಮ್ಮಗಳೆ ರಮಾದೇವಿ ।
ಚೆಲುವ ಚಂದ್ರಮನೆನ್ನ ಮಗನು ॥

ತಿಳಿಯಲಿಳೆಯೊಳಣೆ ಯಿಲ್ಲೆನುವಂತೆ ಕಂ ।
ಗೊಳಿಸಿತು ಕ್ಷೀರಸಾಗರವು ॥328॥

ಅ ದುಗ್ಧಶರಧಿಯ ಕಂಡು ಚಿತ್ತದಿ ಕಡು ।
ಮೋದದಿ ವಾಯುನಂದನನು ॥
ಪಾದವನೂರಿದಲ್ಲಿಂದ ರಂಜಿಪ ಭದ್ರ ।
ಭೂದರವನು ಸುತ್ತಿ ಸುಳಿದ ॥329॥

ಅರಸಿದಡಲ್ಲಿ ಜೀವೌಷಧಿ ಸಮಯಕ್ಕೆ ।
ದೊರಕದಿರಲ್ಕೆ ಮಾರುತಿಯು ॥
ಮುರಿದು ಕೊಂಡಾ ಗಿರಿ ಮಸ್ತಕವನು ಮತ್ತ ।
ಲ್ಲಿರದೆ ಸೈವರಿದನಾಕ್ಷಣದಿ ॥330॥

**ಕಂದ**

ಹನುಮಂ ಜೀವೌಷಧಿಯಂ ।
ಘನಬೇಗದೊಳಯ್ದಿ ತಿರುಗಲ್ಕಿತ್ತಂ ॥
ಮನದೊಳ್ ಚಿಂತೆಯ ತಾಳುತ ।
ವನಜಾಂಬಕನಾಗಳೆಂದನಾ ಜಾಂಬವನೊಳ್ ॥331॥

**ರಾಗ ನೀಲಾಂಬರಿ ತ್ರಿವುಡೆತಾಳ**

ಯಾಕಿನ್ನು ಬಂದುದ ಕಾಣೆನು । ಜಗ ।
ದೇಕ ವೀರನು ನಮ್ಮ ಹನುಮನು ॥
ಪೋಕತನದೊಳಾರು ತಡೆವರೊ । ಪೋಗು ।
ವಡವಿ ಮಾರ್ಗದೊಳಾತಂಕಿಸಿದರೊ । ॥332॥

ಎನಲೆಂದನಾ ಜಾಂಬವಂತನು । ದೇವ ।
ಮನದಿ ಚಿಂತಿಸದಿರು ಹನುಮನು ॥
ಕ್ಷಣದಲ್ಲಿ ಬಂದನೆಂದೆಣಿಸಿಕೊ । ಲ ।
ಕ್ಷ್ಮಣನೆದ್ದನೆಂದು ನೀ ಗ್ರಹಿಸಿಕೊ । ॥333॥

**ವಾರ್ಧಕ**

ಎನುತ ಮತ್ತವರೀರ್ವರಿಂತು ಮಾತಾಡುತಿರ ।
ಲನಿತರೊಳು ಗಗನ ಪಥದೊಳಗಂಜನಾ ಸುತಂ ।
ಘನ ಘೋಷಮಂ ಗೆಯ್ವುತಿಳಿದನಸುರಾಂತಕನ ಮುಂದೆ ರೋಮಾಂಚನದೊಳು ॥
ಮನದೊಳಾನಂದದಿಂದುರೆ ತಂದ ಮೊರಡಿಯಂ ।

ಇನಕುಲಜನಿದಿರೊಳಿಳುಹಿದು ಭಕ್ತಿಯಿಂದ ವಂ ।
ದನೆಗೆಯ್ದು ಜಯ ಜಯೆನ್ನುತ ಬಳಿಕ ಮುಕುಳಿತಕರಾಂಜಲಿಯೊಳಿಂತೆಂದನು ॥334॥

**ರಾಗ ಮಾರವಿ ಏಕತಾಳ**

ಇಂದೀವರದಳಲೋಚನ ಸುರಮುನಿ ।
ವಂದವಿನುತಚರಣ ॥
ತಂದೆನು ಜೀವೌಷಧಿಯನು ನೋಡುವು ।
ದೆಂದು ನಮಿಸಿ ನಿಂದ ॥335॥

ಏ ಸುಷೇಣ ಬಾರೆನ್ನಯ ತಮ್ಮನಿ ।
ಗೌಷಧಿಯನು ರಚಿಸೈ ॥
ಭೇಷಜವನು ನೀ ತಿಳಿದಿಹೆ ಎನುತಲಿ ।
ದಾಶರಥಿಯು ನುಡಿದ ॥336॥

ಎಂದೆನಲಾಗ ಸುಷೇಣ ಮರುತ್ತಜ ।
ತಂದಾ ಗಿರಿಶಿರವ ।
ಚಂದದೊಳರಸಿ ಮಹೌಷಧಿಯನು ತೆಗೆ ।
ದಂದು ಮಹೋತ್ಸವದಿ ॥337॥

ಕರದೊಳಗಾ ಮೂಲಿಕೆಯನು ಮರ್ದಿಸಿ ।
ಭರವಸದಿಂದಾಗ ॥
ವರ ಸೌಮಿತ್ರಿಯ ನಾಸಾಪುಟದೊಳ ।
ಗೆರೆದನು ತವಕದಲಿ ॥338॥

ಧಾರಿಣಿಯಲಿ ಮಲಗಿದ ನೀಲಾಂಗದ ।
ಸೂರ್ಯಜ ಮೊದಲಾದ ॥
ವೀರ ಸುಭಟರೆಲ್ಲರಿಗೌಷಧಿಯನು ।
ಬೇರೆ ಬೇರೆಗೆಯ್ದು ॥339॥

**ಭಾಮಿನಿ**

ತರುಣಿ ಕೇಳ್ ಮಿಗೆ ನಿದ್ರೆ ತಿಳಿದವ ।
ರರಿದು ಮೈ ಮುರಿದೇಳುವಂದದಿ ।
ಮರವೆ ಮಾಣ್ದು ಸಮಸ್ತ ಕಪಿಬಲವೆದ್ದುದಾಕ್ಷಣಕೆ ॥
ಅರಿವು ತಲೆದೋರ್ದೊಡನೆ ಲಕ್ಷ್ಮಣ ।
ನರರೆ ಘಡ ದಶಕಂಠ ಹಿಂದಕೆ ।
ಸರಿಯದಿರು ನಿಲ್ಲೆನುತಲೆದ್ದನು ಕೊಂಡು ಧನುಶರವ ॥340॥

**ರಾಗ ಮಧುಮಾಧವಿ ತ್ರಿವುಡೆತಾಳ**

ಎದ್ದು ಲಕ್ಷ್ಮಣ ಧನುಶರಂಗಳ ।
ತಿದ್ದುತಿರೆ ಸಂತೋಷ ಶರಧಿಯೊ ।
ಳದ್ದಿ ತಮ್ಮನೆ ಬಾರೆನುತ್ತಲಿ ।
ಮುದ್ದು ಗೆಯ್ದನು ಭರದಲಿ ॥ ರಾಘವೇಂದ್ರ ॥341॥

ಎತ್ತಿ ತೊಡೆಯಲಿ ಕುಳ್ಳಿರಿಸಿ ಮಿಗೆ ।
ನೆತ್ತಿಯನು ವಾಸನಿಸಿ ಸಂತಸ ।
ವೆತ್ತು ಪವನಾತ್ಮಜನ ಮೊಗನೋ ।
ಡುತ್ತ ಬಳಿಕಿಂತೆಂದನು ॥ ನಮ್ರದಿಂದ ॥342॥

ಎಲೆ ಹನುಮ ನಿನ್ನಯ ಸಮರ್ಥದ ।
ನೆಲೆಯ ಬಲ್ಲವರಾರು ತಮ್ಮನ ।
ನುಳುಹಿ ಕೊಟ್ಟುಪಕಾರಿ ನೀನೈ ।
ಸಲೆ ಎನುತಲಾನಂದದಿ ॥ ಮನ್ನಿಸುತಲಿ ॥343॥

ಕೈದಣಿಯೆ ಬಿಗಿದಪ್ಪಿ ಹನುಮನ ।
ಮೈದಡವಿ ಬಳಿಕಿನಸುತಾದ್ಯರ ।
ನೈದೆ ಸುಸ್ನೇಹದಲಿ ಮನ್ನಣೆ ।
ಗೆಯ್ದನಾ ರಘುವೀರನು ॥ ಹರುಷದಿಂದ ॥344॥

ಸುರರು ಪೂಮಳೆಗರೆದರಭ್ರದಿ ।
ಪರಮ ಸಂತಸದಿಂದಲಪ್ಸರ ।
ತರುಣಿಯರು ಪಾಡುತ್ತಲೆತ್ತಿದ ।
ರಿರದೆ ರತುನಾರತಿಯನು ॥ ಸಂಭ್ರಮದೊಳು ॥345॥

**ರಾಗ ಢವಳಾರ ತ್ರಿವುಡೆತಾಳ**

ಕೊಂಕಿನ ಕೊರಳಿನ ಸವಿನೋಟದ ।
ಕಿಂಕಿಣಿಕಲದುಬ್ಬಿದ ಜಘನದ ।
ಪಂಕಜ ಲೋಚನದ ಕೆಳದಿಯರು ॥
ಕೆಳದಿಯರೊಡಗೂಡಿ ವಿಲಾಸದಿ ।
ಕುಂಕುಮದಾರತಿಯ ಬೆಳಗಿರೆ ॥ ಶೋಭಾನೆ ॥346॥

ರಾಮಗೆ ರಘುವಂಶ ಸುಧಾರ್ಣವ ।
ಸೋಮಗೆ ಸುರನುತ ಪದಪದ್ಮಗೆ ।
ಕಾಮಿತಾರ್ಥಗಳನೊಲಿದೀವ ॥

ಒಲಿದೀವಗೆ ಸದ್ಗುಣ ಧಾಮಗೆ ।
ಹೇಮದಾರತಿಯ ಬೆಳಗಿರೆ ॥ ಶೋಭಾನೆ ॥347॥

ವರ ಲಕ್ಷ್ಮಣ ದೇವಗೆ ಹನುಮಗೆ ।
ಹರಿಭಕ್ತ ವಿಭೀಷಣ ಗಜಸುತ ।
ತರಣಿಜ ಮೊದಲಾದ ಕಪಿಗಳಿಗೆ ॥
ಕಪಿಗಳಿಗೆ ಪಾಡುತ ಪೊಗಳುತ ।
ಕುರುಜಿನಾರತಿಯ ಬೆಳಗಿರೆ ॥ ಶೋಭಾನೆ ॥348॥

**ಭಾಮಿನಿ**

ನಾರಿ ನೀ ಬೆಸಗೊಂಡ ಪ್ರಶ್ನೆಗೆ ।
ಪೂರಣವದಾಯ್ತಿಲ್ಲಿಗಾ ರಘು ।
ವೀರನತಿ ಮಂಗಳದೊಳೊಪ್ಪಿದನಧಿಕ ಹರುಷದಲಿ ॥
ಬೇರೆಮನಗೊಡದಿದನು ಕೇಳ್ವರ ।
ನಾ ರಘೂದ್ವಹ ನಿರತ ಪೊರೆವನು ।
ಭೂರಿಕರುಣದೊಳೆಂದು ಪಾರ್ವತಿಗರುಹಿದನು ಶಿವನು ॥349॥

**ರಾಗ ಭೈರವಿ ಝಂಪೆತಾಳ**

ಇಂತು ಶಿವನೊಲಿದು ನಿಜ ।
ಕಾಂತೆಗರುಹಿದ ಕಥೆಯ ।
ಸಂತಸದಿ ಜನರು ತಿಳಿ । ವಂತೆ ಕನ್ನಡದಿ ॥350॥

ಪಾಕಾರಿಮುಖ ಸುರಾ ।
ನೀಕ ಸನ್ನುತಚರಣ ।
ಲೋಕನಾಥನೆ ಸಲಹೊ । ನೀ ಕಪೆಯೊಳೆನ್ನ ॥351॥

ವರಗೋಷ್ಠಪುರದ ಶಂ ।
ಕರನ ಕರುಣಾರಸದಿ ।
ಪರಮ ಮಂಗಳವೆನಿಸಿ । ವಿರಚಿಸಿದೆನಿದನು ॥352॥

**ರಾಗ ಕಲ್ಯಾಣಿ ಏಕತಾಳ**

ಮಂಗಲಂ । ಜಯ । ಮಂಗಲಂ ॥ ಪ ॥
ಸುಮನಸ ಸನ್ನುತ ಪಾತ್ರನಿಗೆ ।
ಕಮಲದಳಾಂಬಕ ಮಿತ್ರನಿಗೆ ॥

ಹಿಮಕರಚೂಡಗೆ ವಷಭಾರೂಢಗೆ ।
ಯಮಿಜನ ಪೂಜಿತ ಚರಣನಿಗೆ ॥ ಮಂಗಲಂ ॥353॥

ಶೂರ್ಪಶ್ರೋತ್ರನ ಜನಕನಿಗೆ ।
ದರ್ಪಕನಾಶಗೆ ಪುರಹರಗೆ ॥
ಕರ್ಪುರಗೌರಗೆ ಕಲುಷವಿದೂರಗೆ ।
ಸರ್ಪಾಭರಣ ಪುರಾಂತಕಗೆ ॥ ಮಂಗಲಂ ॥354॥

ತರುಣಾರುಣ ಶಶಿಭಾಸನಿಗೆ ।
ಶರಣಾಗತ ಪರಿತೋಷನಿಗೆ ॥
ವರಗೋಷ್ಠಾಪುರಧಾಮಗೆ ಭೀಮಗೆ ।
ಪರತರ ರೂಪ ಉಮಾಧವಗೆ ॥
ಮಂಗಲಂ । ಜಯ ॥ ಮಂಗಲಂ ॥355॥

***ಯಕ್ಷಗಾನ ಅತಿಕಾಯಕಾಳಗ ಸಂಪೂರ್ಣ***

# ಯಕ್ಷಗಾನ ಕಾಲನೇಮಿ ಕಾಳಗ

## ಪಾತ್ರಗಳು

ಶ್ರೀರಾಮ
ರಾವಣ
ಲಕ್ಷ್ಮಣ
ಕಾಲನೇಮಿ
ಹನುಮಂತ
ದೂತ
ಸುಗ್ರೀವ
ಮಂಡೋಧರಿ
ಜಾಂಬವ
ಕುಂಭ
ಸೀತೆ
ನಿಕುಂಭ
ಸರಮೆ
ಮಕರಾಕ್ಷ
ಧಾನ್ಯಮಾಲಿನಿ

ಇಂದ್ರಜಿತು

ಸುಷೇಣ

ಮಾಲ್ಯವಂತ

ವಿದ್ಯುಜ್ಜಿಹ್ವ

**ಶಾರ್ದೂಲವಿಕ್ರೀಡಿತ**

ಶ್ರೀ ಸೀತಾಸ್ಯಪಯೋಜಮಿತ್ರನವನೀನಾಥಂ ಜನಾನಂದಿತಂ ।
ವಾಸಿಷ್ಠಾದಿಮುನೀಂದ್ರವಂದನಮಿತಂ ದೇವಾಳಿಸಂಸೇವಿತಂ ।
ಮಾಶೇಷೋತ್ತಮದಿವ್ಯತಲ್ಪಶಯನಂ ಭಕ್ತೇಷ್ಟ ಸಂಜೀವನಂ ।
ಕೌಸಲ್ಯಾತ್ಮಜಮಪ್ರಮೇಯಮನಿಶಂ ಧ್ಯಾಯಾಮಿ ಶ್ರೀರಾಘವಂ ॥ ॥1॥

**ರಾಗ ನಾಟಿ, ಝಂಪೆತಾಳ**

ಪರಮೇಶಸುಕುಮಾರ ಪಾಲಿತಾಮರವಾರ ।
ಪರಮಾತ್ಮವಿಚಾರ ಪಾವನಶರೀರ ॥
ಪರಮೇಷ್ಠಿನುತಿಪಾತ್ರ ಪನ್ನಗೇಶ್ವರಸೂತ್ರ ।
ಪರಮಮಂಗಲಗಾತ್ರ ಪಾಹಿ ಗಜವಕ್ತ್ರ ॥ ಶರಣು ಶರಣು ॥2॥

ಶರಜಶರಸಂಹಾರ ಕರುಣಪಾರಾವಾರ ।
ಶರಜಾಧೀಶ್ವರ ಶೂರ ಶರಭಾವತಾರ ॥
ಶರಮೇಶಾಗ್ರಜಪೋಷ ಉರಗಾಭರಣಭೂಷ ।
ಶರಜಭವನುತತೋಷ ಶರಣು ಕುಡುಮೇಶ ॥ ಶರಣು ॥3॥

ನಾಗಭೂಷಣರಮಣಿ ನಳಿನಾಕ್ಷಿ ಸುಗುಣಮಣಿ ।
ನಾಗಾಸ್ಯಗುಹಜನನಿ ನಂದಸುತಭಗಿನಿ ॥
ನಾಗಸುಂದರವೇಣೀ ಅಗಜೇ ನೀರಜಪಾಣಿ ।
ನಾಗಗತಿರುದ್ರಾಣಿ ಶರಣು ಶರ್ವಾಣಿ ॥ ಶರಣು ಶರಣು ॥4॥

**ವಾರ್ಧಕ**

ಪರಸಿಂಹಭೂತನಂ ಪವನಸಂಜಾತನಂ ।
ದುರಿತ ಮೇಘಸಮೀರನಂ ಸಮರಶೂರನಂ ॥
ಉರುತರಾಂಘ್ರಿಪ ಯೋಜನಂ ತರಣಿತೇಜನಂ ಶರಣುಜನಸುರಭೂಜನಂ ।
ದುರಿತಘನವಾತನಂ ಧುರವಿಜಯನಾಥನಂ ।
ಹರಿಕುಲಾರ್ಣವಚಂದ್ರನಂ ಪ್ರೀತಿಸಾಂದ್ರನಂ ।
ಸರಸಿಜಾಸನಮಿತ್ರನಂ ಕುಲಿಶಗಾತ್ರನಂ ನೆನೆವೆ ಪಾಟಲವಕ್ತ್ರನಂ ॥5॥

**ಭಾಮಿನಿ**

ಮಾರಜನನಿಯ ಭಜಿಸಿ ಪದ್ಮಕು |
ಮಾರವಾಣಿಯರಡಿಗರಗಿ ಜಂ ||
ಭಾರಿಮುಖ್ಯಾಮರರ ಪ್ರಾರ್ಥಿಸಿ ನುತಿಸಿ ತಾಪಸರ |
ಭೂರಿ ಭಕುತಿಯೊಳಮಲ ಕವಿಗಳ |
ಚಾರುಚರಣಕೆ ಮಣಿದು ಗುರುಪದ |
ವಾರಿಜಕೆ ವಂದಿಸುತ ಪೇಳ್ದಪೆನೀ ಕಥಾಮೃತವ ||6||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ರಾಮಚರಿತಸುಧಾಪಯೋಧಿಯೊ | ಳಾ ಮರುತಸುತ ಕಾಲನೇಮಿಯ |
ತಾ ಮಡುಹಿ ಸಂಜೀವನವ ಸು | ಪ್ರೇಮದಿಂದ ||7||

ತಂಧ ಕಥನವ ಶ್ರೀಪತಿಯ ದಯ | ದಿಂದ ಘನ ಸನ್ಮಂಗಳಪ್ರದ |
ವೆಂದು ಸದ್ಗುರುವರಿಯನಪ್ಪಣೆ | ಯಿಂದ ಜಗದಿ ||8||

ವಿವರಿಸುವೆ ವರ ಯಕ್ಷಗಾನದಿ | ಕುವರವಾಣಿಗಳೆನಗೆ ಪಾಲಿಪು |
ದವನಿಯಲಿ ಸಜ್ಜನರು ಸೀತಾ | ಧವನ ಕಥೆಯ ||9||

**ಭಾಮಿನಿ**

ವರ ಮಹಾ ರಜತಾಚಲದಿ ಸ |
ಚ್ಚರಿತ ಶಿವ ಪಾರ್ವತಿಗೆ ಪೇಳಿದ |
ಪರಮ ಪಾವನವೆನಿಪ ಸೀತಾರಾಮ ಕಥನವನು ||
ಮೆರೆವ ನೈಮಿಷವನದಿ ಮೌನಿಗ |
ಳರಸನಾಗಿಹ ಸೂತಮುನಿ ವಿ |
ಸ್ತರದಿ ವಿವರಿಸುತಿರ್ದ ಶೌನಕಮುಖ್ಯ ಋಷಿಗಳಿಗೆ ||10||

**ದ್ವಿಪದಿ**

ಒಂದು ದಿನ ಸಂಯಮಿಯ ಪದಕೆ ತಾಪಸರು |
ವಂದಿಸುತ ಭಕ್ತಿಯುತರಾಗಿ ಪೇಳಿದರು ||11||

ಫಣಿಪಾವತಾರಿ ಲಕ್ಷುಮಣನ ರಾವಣನು ||
ರಣರಂಗದಲಿ ಕೆಡಹಿದಾಶ್ಚರ್ಯವೇನು ||12||

ರಿಪುವಿಜಯ ಹನುಮಂತ ಸಂಜೀವನವನು |
ಚಪಲತ್ವದಿಂ ತಂದು ಸೌಮಿತ್ರಿಯನ್ನು ||13||

ಕುಶಲದಿಂದೆಬ್ಬಿಸಿದ ಕಥೆಯ ಪೇಳೆನುತ ।
ಬೆಸಗೊಳುವ ಮೌನಿಗಳ ಮುನಿಪ ಮನ್ನಿಸುತ ॥14॥

ಕಲುಷಾದ್ರಿ ಕುಲಿಶವೆಂದೆನಿಪ ರಘುಪತಿಯ ।
ಲಲಿತನಾಮವ ಜಪಿಸುತೆಂದನೀ ಕಥೆಯ ॥15॥

**ಕಂದ**

ರಘುವರನುರುತರ ಚರಿತೆಯ ।
ಪೊಗಳಲು ತುದಿಗಾಣದಖಿಳ ಶ್ರುತಿಶಾಸ್ತ್ರಚಯಂ ।
ಮಿಗೆ ಸಾಸಿರ ಮುಖಫಣಿಪಂ ।
ಗಗಣಿತಮಿನ್ನೆಂತು ಬಣ್ಣಿಸುವುದೀಕೃತಿಯಂ ॥16॥

**ಭಾಮಿನಿ**

ಖೂಳ ದಶಕಂಧರನ ಬಾಧೆಯ ।
ತಾಳಲಾರದೆ ಕಮಲಜಾದಿ ಸು ।
ರಾಳಿ ಲಕ್ಷ್ಮೀವರಗೆ ಬಿನ್ನವಿಸಲು ಮಹೀತಳದಿ ॥
ತಾಳಿ ಮಾಯಾಮನುಜರೂಪ ಕ ।
ಪಾಳು ಜನಿಸಿದ ರಾಮನಾಮದಿ ।
ಕೇಳಿರೈ ದಶರಥನ ಸತಿಯುದರದೊಳಯೋಧ್ಯೆಯಲಿ ॥17॥

**ರಾಗ ಮಧುಮಾಧವಿ, ತ್ರಿವುಡೆತಾಳ**

ರಾಮ ಲಕ್ಷುಮಣಭರತ ರಿಪುಕುಲ ।
ಭೀಮ ಶತ್ರುಘ್ನಾಖ್ಯ ಕುವರರು ।
ಭೂಮಿಪನ ಸುದತಿತ್ರಯದೊಳುದಿ ।
ಸೀ ಮಹಿಯೊಳಿರುತೀರ್ದರು ॥18॥

ಅನುಜ ಲಕ್ಷುಮಣ ಸಹಿತ ನಡೆತಂ ।
ದಿನಕುಲಾಧಿಪನೊಲಿದು ಕೌಶಿಕ ।
ಮುನಿಯ ಯಜ್ಞವ ಕಾಯ್ದು ಹಲ್ಯಾಂ ।
ಗನೆಯ ಶಾಪವ ಕಳೆದನು ॥19॥

ಹರನ ಚಾಪವ ಮುರಿದು ಮಿಥಿಲಾ ।
ಪುರದಿ ಸೀತೆಯನೊರಿಸಿ ಸಮರದಿ ।
ಪರಶುರಾಮನ ಗರುವಿಕೆಯನೃಪ ।
ಹರಿಸಿ ಬಂದನಯೋಧ್ಯೆಗೆ ॥20॥

ಜನಕನಪ್ಪಣೆಯಿಂದ ರಾಘವ ।
ವನಿತೆಸಹಜರನೊಡವೆರಸಿ ಕಾ ।
ನನದೊಳಿರೆ ದಶಕಂಠ ಕಪಟದಿ ।
ಜನಕಜೆಯ ಕದ್ದೊದನು ॥21॥

ಅವನಿಜಾತೆಯ ಕಾಣದಳಲುತ ।
ರವಿಕುಲೋದ್ಭವರೈದಿ ಮತ್ತಾ ।
ಪವನಜನ ದೆಸೆಯಿಂದ ವಾನರ ।
ನಿವಹವೆರಸಿದರೆಂದನು ॥22॥

**ವಾರ್ಧಕ**

ಶ್ರೀರಾಮನಪ್ಪಣೆಯೊಳವನಿಜೆಯನರಸುತ ಸ ।
ಮೀರಜಂ ಪೋಗಿ ಸಾಗರವನುತ್ತರಸಿ ಸೀ ।
ತಾರಮಣಿಯಂ ಕಂಡು ಲಂಕೆಗೆ ಧನಂಜಯನ ಪೊಗಿಸಿ ಬಂದಾ ವಾರ್ತೆಯ ।
ನೀರಜಾಕ್ಷಗೆ ಪೇಳಲೈದೆ ಜಲಧಿಯ ಕಡೆಯೊ ।
ಳಾ ರಾವಣಾನುಜನ ಸಖ್ಯಮಂ ಪಡೆದಾಗ ।
ವಾರಿಧಿಯ ಬಂಧಿಸಿ ವನೌಕಸಸಮೂಹವೆರದೇಳ್ತಂದನಾ ರಘುಜನು ॥23॥

**ಭಾಮಿನಿ**

ದುರುಳ ಖಳ ರಾವಣನ ಛತ್ರವ ।
ಮುರಿದು ಸಂಧಿಗೆ ವಾಲಿಜನ ತಿರೆ ।
ಯರಸ ಕಳುಹಿಸಲೈದೆ ಬಹು ರಕ್ಕಸರ ಸದೆಬಡಿದು ॥
ಬರಲು ಕೂಡೆ ಸಮಸ್ತ ಕಪಿಬಲ ।
ವೆರಸಿಲಂಕೆಯ ಮುತ್ತಿ ಚೂಣಿಯ ।
ಧುರದಿ ಮಿತ್ರ ಜ್ಞಾತಿ ದೈತ್ಯರ ತರಿದರಿವರೆಂದ ॥24॥

**ರಾಗ ಭೈರವಿ ಝಂಪೆತಾಳ**

ಸುರಪಜಿತು ಮಗುಳೆ ಸಂ । ಗರದಿ ಕಪಿಸೈನ್ಯವನು ॥
ಶರಜಭವಶರದಿ ಕೆಡ । ಹಿರಲು ಪವನಜನು ॥25॥

ಪರಮಸಂಜೀವನವ । ನುರೆ ತಂದು ರಜನಿಯೊಳು ।
ಹರಿಬಲವನೆಬ್ಬಿಸಿದ । ಸುರರು ಘೇ ಯೆನಲು ॥26॥

ಮರುದಿವಸ ಸೌಮಿತ್ರಿ । ಧುರದೊಳತಿಕಾಯನು ।
ಪರಿಹರಿಸಿ ಬಂದುಭೂ । ವರಗೆ ನಮಿಸಿದನು ॥27॥

**ರಾಗ ಸಾಂಗತ್ಯ ರೂಪಕತಾಳ**

ನಮಿಸಿದ ಸಹಜನ ತಳ್ಕೈಸಿ ರಾಮಚಂ ।
ದ್ರಮನೆಂದನತಿಕಾಯನನ್ನು ॥
ಸಮರದಿ ಕೊಂದೆಯ ಸೌಮಿತ್ರಿ ರಘುವಂಶ ।
ಕಮಲಾಪ್ತಮಿತ್ರನು ನೀನು ॥28॥

ಅನುಜ ನೀ ನೆನ್ನ ಸ್ನೇಹದಿ ಬಂದು ಕಷ್ಟವ ।
ನನುಭವಿಸುವದಾಯ್ತು ಬೃಹಳ ।
ಜನಕ ಪೋದಳಲು ಸೀತೆಯನಗಲಿದ ಶೋಕ ।
ವನವಾಸದಾಯಾಸಾದಿಗಳ ॥29॥

ಮರೆತ ನಾನದನೆಲ್ಲ ನಿನ್ನಾನೀಕ್ಷಿಸಿ ನಾವಿ ।
ನ್ನಿರದೆ ರಾವಣನ ಸಂಹರಿಸಿ ।
ತರುಣಿಯನೊಡಗೊಂಡು ತೆರಳುವ ಯತ್ನವ ।
ನರಿತು ಪೇಳೆನಲೆಂದ ನಮಿಸಿ ॥30॥

ಧುರಧೀರನತಿಕಾಯ ಖಳನ ತೀರ್ಚಿದೆ ನಿನ್ನ ।
ಕರುಣದಿ ತವ ನಾಮಂಗಳನು ॥
ಸ್ಮರಿಸುವ ಜನರು ಕಷ್ಟಗಳ ಸ್ವಪ್ನದಲಿ ಕಂ ।
ಡರಿಯರಿನ್ನೇನ ಪೇಳುವೆನು ॥31॥

ಪರಮಾತ್ಮ ನೀನೈಸೆ ಮದನಾರಿಗೆಣೆಯೆಂಬ ।
ತರಣಿಜ ಹನುಮ ಮುಂತಾದ ॥
ಧುರವಿಜಯರು ನಿನ್ನ ಸೇವೆಗಿರಲು ನೀ ಕ ।
ರ್ಬುರನ ಕೊಲ್ಲುವದಾವ ಚೋದ್ಯ ॥32॥

**ಭಾಮಿನಿ**

ಮಾನನಿಧಿ ಲಕ್ಷುಮಣನ ಮಾತಿಗೆ ।
ಜಾನಕೀಪತಿ ನುಡಿದ ಜಾಂಬವ ।
ಭಾನುಸುತ ಹನುಮಾದಿ ಕಪಿವರರೆಮ್ಮ ಕಾರ್ಯದಲಿ ॥
ದಾನವೇಂದ್ರನ ಸೈನ್ಯದೊಡನವ ।
ಸಾನಕಂಜದೆ ಕಾದಿ ಬಳಲುವ ।
ರೇನ ಪೇಳುವೆನೆಂದು ಚಿಂತಿಸಲೆಂದನಾ ರವಿಜ ॥33॥

**ರಾಗ ಮಧುಮಾಧವಿ, ಆದಿತಾಳ**

ನಳಿನಾಕ್ಷ ನಿನ್ನ ಪಾದವ ಹೊಂದಿದವರಿಗೆ ।
ಬಳಲಿಕೆಯುಂಟೆ ಸಾಕುಪಚಾರವೆಮಗೆ ।
ಕೊಳುಗುಳದೊಳು ನೀ ಕೋಪಿಸಿ ನಿಂತರಿದಿರಿಗೆ ।
ಮುಳಿದು ನಿಲ್ಲುವರಿಲ್ಲ ಮೂಲೋಕದೊಳಗೆ ॥34॥

ದನುಜ ರಾವಣನ ತನ್ನಯ ತೋಳ ಮರೆಯಿಂದ ।
ಅನುದಿನ ಸೆರೆಯಾಗಿಟ್ಟಸುರನಕೊಂದ ॥
ಘನ ಮಹಿಮನ ಗರ್ವವಿಳುಹಿದ ಜಗದೀಶ ।
ಬಣಗುದೈತ್ಯನ ನೀ ಕೊಲ್ಲುವದಾವ ಸಹಸ ॥35॥

ಹುರಿನೇಣಿನಲಿ ದಶಶಿರನ ಬಿಗಿದು ತನ್ನ
ತರಳನ ತೊಟ್ಟಿಲೆಡೆಯಕಟ್ಟಿದವನ ॥
ಮುರಿದಾತ ನೀನೀ ರಾವಣನೆಂಬ ಖೂಳನ ।
ಹರಿಬದಿ ಕೊಲಲಸಾಧ್ಯವೆ ಪೇಳ್ ಶ್ರೀರಮಣ ॥36॥

**ವಾರ್ಧಕ**

ಮಿತ್ರಸುತನಿಂತೆನಲು ಕೇಳ್ದು ವಾನರರೆಲ್ಲ ।
ಮಿತ್ರಜನ ಕೋಪವೆತ್ತವನಿಜಾನನಕಂಜಿ ।
ಮಿತ್ರಗೊಂದಿಸಿ ಜೀಯ ನಿನ್ನಾಜ್ಞೆಯಾದರಾ ಖಳನ ವಂಶಾವಳಿಯನು ॥
ಮಿತ್ರಜನ ಬಳಿಗಟ್ಟಿ ದೇವಿಯರ ತಂದು ಭವ ॥
ಮಿತ್ರ ನಿನಗೊಪ್ಪಿಸುವೆ ವೆನಲು ಸಂಗ್ರಾಮದೊಳ ।
ಮಿತ್ರನಂ ಕೊಲುವೆ ನಾ ನಿಮ್ಮಯ ಸಹಾಯದಿಂ ಸಹಿಸಿ ರೋಷವನೆಂದನು ॥37॥

**ಭಾಮಿನಿ**

ಸರಸಿಜಾಂಬಕ ಸಕಲ ಕೀಶೇ ।
ಶ್ವರರ ಕೋಪವ ನಿಲಿಸಿ ಶಿಬಿರಕೆ ।
ತೆರಳಲಭ್ರದಿ ಕುಂಕುಮೋತ್ಸವವಾಯ್ತು ಪಶ್ಚಿಮದಿ ॥
ಶರೆಯ ಸಿಕ್ಕಿದವಂಬುಜದಿ ಮಧು ।
ಕರಗಳ ರ್ಕನರಸಿಮೆ ಹಿಂಗಿತು ।
ತರಣಿ ವಾರಿಧಿಗಿಳಿಯೆ ತಮಮುಸುಕಿತು ಮಹೀತಳವ ॥38॥

**ಕಂದ**

ಅನುವರಕಂ ಪೋದತಿಕಾ ।
ಯನ ವಾರ್ತೆಯನರಿಯದಾಗಳಾ ದಶಕಂಠಂ ॥

ಅನುಮಾನದೊಳಿರಲಾಕ್ಷಣ ।
ಅನುಚರನೈತಂದು ಪೇಳ್ದನಾ ಸಂಗತಿಯಂ ॥39॥

**ರಾಗ ಮುಖಾರಿ ಏಕತಾಳ**

ದಶಕಂಠ ನೀ ಕೇಳೆನ್ನ ಮಾತ । ಖಳವಂಶೋದ್ಭೂತ । ದಶಕಂಠ ॥ ಪಲ್ಲವಿ ॥

ಅತಿಕಾಯನಾಹವದ ಪರಿಯ । ನೀಕೇಳಚ್ಚರಿಯ ।
ಶ್ರುತವ ಮಾಡುವೆ ದೈತ್ಯರೆರೆಯ ॥
ಕ್ಷಿತಿಪಾಗ್ರಣಿ ರಘುಪತಿಯೊಳು ನಿನ್ನಯ ।
ಸುತನನುವರಕಗಣಿತ ಕೌಣಪಸಂ ।
ತತಿಸಹಿತಲಿ ವಸುಮತಿ ಬಿರಿವಂದದೊ ।
ಳತಿ ರೋಷದಿ ಗಜರುತಲೈದಿದನೈ ॥ ದಶಕಂಠ ॥40॥

ವಾನರರುಗಳ ಹೊದಪ್ಪಳಿಸಿ । ಕೋಪವೆಗ್ಗಳಿಸಿ ।
ನಾನಾಕೈದುಗಳಿಂ ಪ್ರಜ್ವಲಿಸಿ ॥
ಮಾನನಿಧಿಯೆ ತವ ಸೂನುವಿರೋಧಿಯ ।
ಸೇನೆಯೊಳುರುಬಿದುದಾನಭಿವರ್ಣಿಸ ।
ಲೇನದಮತ್ತಾ ಮಾನವರಿಂ ಕೇ ।
ಳೈ ನಿನಗಾದ ಪ್ರಮಾದವನೊರವೆ ॥ ದಶಕಂಠ ॥41॥

ಆ ಸೌಮಿತ್ರಿಯು ನಿಂತು ರಣದಿ । ದಿವ್ಯ ಮಾರ್ಗಣದಿ ॥
ಈ ಸೈನ್ಯವ ಸಂಹರಿಸೆ ಕ್ಷಣದಿ ॥
ರೋಷದಿ ನಿನ್ನಭಿಲಾಷೆಯ ಮಗನ ವಿ ।
ನಾಶನಗೈದು ವಿಲಾಸದೊಳಿಹರಿ ।
ನ್ನಾ ಸುಭಟರನಾವೇಶದಿ ಜೈಸುವ ।
ವಾಶಿಯುಳ್ಳರಚಿತ್ತೈಸಿರಿ ಜವದಿಂ ॥42॥

**ಭಾಮಿನಿ**

ಬಸವಳಿದು ಬೆಂಡಾಗಿ ಮೈಮರೆ ।
ದಸಮಬಲ ದಶಮೌಳಿ ಮಲಗಿದ ।
ವಸುಧೆಯೊಳು ಮಗನಳಿದ ವಾರ್ತೆಯ ಕೇಳಿದಾಕ್ಷಣವೆ ॥
ಅಸುರರಂಜಿದರಿಕ್ಕಲದಿ ರ ।
ಕ್ಕಸಕುಲಾಧಿಪನೆಚ್ಚರಿತು ದು ।
ಖ್ಖಿಸಿದನಡಿಗಡಿಗಳುತ ತನ್ನಾತ್ಮಜನ ನೆನೆನೆನೆದು ॥43॥

**ರಾಗ ನೀಲಾಂಬರಿ, ರೂಪಕತಾಳ**

ಹ್ಯಾಗೆ ಜೀವಿಸಲೆನ್ನ ತನುಜಾನ ಮರೆತಿನ್ನು ।
ರಾಘವನ ವಶವಾದಳೆ ಜಯಲಕ್ಷ್ಮಿಯು ತಾನು ॥ ಹ್ಯಾಗೆ ॥ ॥ ಪಲ್ಲವಿ ॥

ಸ್ಮರಕೋಟಿಲಾವಣ್ಯ ಲಲಿತಕೋಮಲಕಾಯ ।
ಸಿರಿವಂತ ರಿಪುವಂಶಾಂತಕನತಿಕಾಯ ॥
ಧುರಧೀರ ಮಮಜೀವರತ್ನ ಮೋಹದ ಕಂದ ।
ಮರಣವ ಪಡೆದನೆ ಸದ್ಗುಣವಂದ ॥44॥

ತಂಗಿಯ ಸವಿಮಾತು ಕುಲಕೆ ಕೇಡಾಯ್ತಲ್ಲ ।
ಅಂಗಜಹರನೆನ್ನ ಕೈ ಬಿಟ್ಟನಲ್ಲ ॥
ಸಂಗರದಲಿ ವೈರಿಗಳನು ಜೈಸುವ ಪಂಥ ।
ಹಿಂಗಿತಿಂದಿನೊಳು ಪೇಳುವದೇನೇಕಾಂತ ॥45॥

ತೃಣಕೆಣಿಯೆನಿಪ ಮಾನವರು ಮರ್ಕಟರಿಂತು ।
ಹೊಣಿಕೆಯಿಂದಲಿ ಘೋರ ದೈತ್ಯರೊಳಾಂತು ॥
ರಣದಿ ಕೊಲ್ಲುವದಾದ ಬಳಿಕಾವರೊಡನಿನ್ನು ।
ಸೆಣಸಿ ನಾನೆಂತು ಜೈಸುವೆನೆಂದ ಖಳನು ॥46॥

**ಕಂದ**

ರಾವಣನಿಂತೆಂದಳುವುದ ।
ನಾ ವನಿತಾರನ್ನೆ ಮಯತನುಜೆ ಕೇಳ್ದಾಗಳ್ ॥
ಭಾವದಿ ಸಂತಾಪವ ತಾ ।
ಳ್ದಾವೀರನ ಬಳಿಗೆ ಬಂದು ದುಃಖಿಸುತೆಂದಳ್ ॥47॥

**ರಾಗ ಸಾವೇರಿ ಆದಿತಾಳ**

ಅರಸ ಕೇಳವನಿಜೆಯ । ನೀ ತಂದು ಕುಲಕೆ । ಗರಳವನೆರದೆ ಪ್ರಿಯ ॥
ಶರಮೇಶ ರಘುಪತಿಯ । ಸೇರ್ದಾಗಲಂಕಾ । ಸಿರಿ ಹಿಂಗಿದಳು ನಿಶ್ಚಯ ॥48॥

ನಾವೆಲ್ಲರಾಡಿದ ಮಾತು । ಪೂರ್ವದಿ ನಿನ್ನ । ಭಾವಕೆ ಪುಸಿಯಾಯಿತು ॥
ದೇವ ಶ್ರೀರಘುಜನೊಳು । ಧಾರುಣಿಯೊಳುರುಬಿ । ಜೀವಿಪರುಂಟೆ ನೀ ಪೇಳು ॥49॥

ರಾಮ ತಾ ಮನುಜನಲ್ಲ । ಶ್ರೀ ವಿಷ್ಣು ದಿವಿಜಾ । ರಾ ಮಹಾ ಕಪಿಗಳೆಲ್ಲ ।
ಭೂಮಿ ಭಾರವನಿಳುಹ । ಲಿಂತುದಿಸಿಹ । ರೀ ಮಾತಿಗಿಲ್ಲ ಸಂದೇಹ ॥50॥

ಸಮರದಿ ದೈತ್ಯರೆಲ್ಲರು । ಸಂದರು ಸುಪರಾ । ಕ್ರಮಿ ನಿನ್ನ ವಧೆಗವರು ॥
ಸಮಯನೀಕ್ಷಿಪರಿನ್ನು । ನೀ ಲಾಲಿಸೆನ್ನ । ರಮಣಾ ನಾನೆಂಬ ಮಾತನು ॥51॥

ಮಹಿಜೆಯ ರಾಘವಗಿಂದು । ಒಪ್ಪಿಸಿ ನಿನ್ನ । ಸಹಜಾತ ಸಹಿತ ಬಂದು ।
ವಿಹಿತದಿ ಲಂಕೆಯನಾಳು । ಶರಗೊಡ್ಡಿ ಬೇಡು । ತಿಹೆನೆನ್ನ ನುಡಿಯ ಕೇಳು ॥52॥

**ಭಾಮಿನಿ**

ಅಳುಕವನೆ ಶತಕೋಟಿ ಕಲ್ಪದಿ ।
ಹಳಚಿದರು ನಿನಗಸುರರಿಪು ನೀ ।
ನುಳುಹಿಸೆನ್ನಯ ವಾಲೆಭಾಗ್ಯವ ಮಾಣುಮೂರ್ಖತೆಯ ॥
ಉಳಿದ ಪುತ್ರ ಸುಮಿತ್ರ ಬಾಂಧವ ।
ಬಳಗವೆರದಚ್ಚುತನ ಮರೆ ಹೊಗು ।
ಕಳೆ ವಿರೋಧವ ಪರಕೆ ಹಿತನಾಗೆನ್ನಲವನೆಂದ ॥53॥

**ರಾಗ ಕಾಂಬೋದಿ ಝಂಪೆತಾಳ**

ಅರಸಿ ನೀನೆನ್ನ ಮೂಢಾತ್ಮನೆನಬೇಡೀಗ ।
ಧರೆಯ ಭಾರವ ಕಳೆವ ನೆವದಿ ।
ಹರಿ ಮನುಜರೂಪಿನೊಳು ಉದಿಸಿರುವನೆಂದು ನಾ ।
ನರಿಯದವನಲ್ಲ ಕೇಳ ಮಡದಿ ॥54॥

ಇಂದಿರೆಯ ನೆವದೊಳೀ ಭವವ ಪರಿಹರಿಸಿ ಗೋ ।
ವಿಂದ ಮುಕುತಿಯನೀವೆನೆಂದು ।
ಹಿಂದೆ ತಾನೆನಗೆ ಪೇಳಿದ ಮಾತಿಗಾಗಿ ನಾ ।
ತಂದೆ ಜಾನಕಿಯ ರಮೆಯೆಂದು ॥55॥

ಪುತ್ರ ಮಿತ್ರಾದಿ ಬಂಧುನಿಕಾಯ ಸಹಿತಾಬ್ಜ ।
ಪತ್ರಾಕ್ಷನೊಡನೆ ಸಮರದೊಳು ।
ಶತ್ರುತ್ವದಿಂದಿಳಿದು ಪಡವೆ ಕೈವಲ್ಯವ ವಿ ।
ಚಿತ್ರವಲ್ಲಿದು ರಮಣಿಕೇಳು ॥56॥

ನಾ ಸಮರಕಂಜಿ ಸೀತೆಯ ರಾಮಗೊಪ್ಪಿಸಿ ವಿ ।
ಭೀಷಣ ಸಮೇತ ಲಂಕೆಯನು ॥
ಪೋಷಿಸುವನಲ್ಲ ಸಂಗರದೊಳೀ ದೇಹವ ರ ।
ಮೇಶನಡಿಗೆ ಸಮರ್ಪಿಸುವೆನು ॥57॥

ಜನವ ಮೆಚ್ಚಿಸಲಾಗಿ ರಣದಿ ಪೋದವರಿಗಾ ।
ಗಿನಿತು ಮರುಗುವೆನಿದಾನವಿದು ।
ವನಿತೆ ಬಿಡು ಬಯಲ ಭ್ರಾಂತಿಯನೀಗ ಹರಿಪದವ ।
ನೆನೆಯೆಂದು ಕೈ ಪಿಡಿದನೊಲಿದು ॥58॥

**ವಾರ್ಧಕ**

ಧುರದಿ ರಾಮಗೆನಾಳೆ ತೋರಬೇಕೆನ್ನ ಕೈ ।
ಗುರಿಯನೆಂದೆನುತಲಾಯುಧ ಶಾಲೆಯಂ ಪೊಕ್ಕು ।
ವರ ಕೈದುಗಳ ಮುಚ್ಚಳವ ತೆಗೆದು ನವಗಂಧ ಸುಮಧೂಪದೀಪದಿಂದ ॥
ಪರಶಿವೆಯ ಬೀಜಮಂತ್ರಗಳನುಚ್ಚರಿಸಿ ದಶ ।
ಶಿರನಾಗಮೋಕ್ತದಿಂ ಪೂಜಿಸಿ ಸುಭಕ್ಷ ರಸ ।
ಭರಿತ ಫಲತಾಂಬೂಲಗಳ ನಿವೇದಿಸಿ ಸುಳಿದನಾರತಿಯ ವಾದ್ಯರವದಿ ॥59॥

**ಕಂದ**

ಶಕ್ತಿಯನಿಂತರ್ಚಿಸಿ ಫಲ ।
ರಕ್ತಗಳಿಂ ಖೂಳ ಭೂತನಿವಹಕ ಬಲೆಯಂ ॥
ಯುಕ್ತದಿ ಹರಹಿಸಿ ಭಯ ರಸ ।
ಭಕ್ತಿಗಳಿಂನಿಂದು ನುತಿಸಿದಂ ಚಂಡಿಕೆಯಂ ॥60॥

**ಭಾಮಿನಿ**

ಜಯ ಮಹೇಶ್ವರಿ ವಿಶ್ವನಾಯಕಿ ।
ಜಯ ಸಮಸ್ತ ಫಲಪ್ರದಾಯಕಿ ।
ಜಯ ಭವಾನಿ ಸದಾಶಿವಾತ್ಮಕಿ ಜಯ ಶಶಾಂಕಮುಖಿ ॥
ಜಯ ನಮೋ ಹರ್ಯಕ್ಷವಾಹಿನಿ ।
ಜಯ ಪರಬ್ರಹ್ಮಸ್ವರೂಪಿಣಿ ॥
ಜಯ ಸುರಾಸುರ ವರಕುಟುಂಬಿನಿ ಜಯ ಜಗಜ್ಜನನಿ ॥61॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಈ ತೆರದಿ ನುತಿಗೈದು ಸಿಂಹ ವ । ರೂಥಿನಿಗೆ ಕೈಮುಗಿವುತಾ ರಘು ।
ನಾಥನೊಳು ಕಾದುವ ಮಹಾ ಸ । ತ್ವಾತಿಶಯವ ॥62॥

ಕರುಣಿಪುದು ತನಗೆನುತ ಬಲ ಬಂ । ದೆರಗಿದರ್ಭಾಸನದಿ ರಕ್ಕಸ ।
ರೆರೆಯ ಮೌನದಿ ಕುಳಿತ ರಜನೀ । ಚರರು ಸಹಿತ ॥63॥

ದೆಸೆದೆಸೆಗೆ ಕೈದುಗಳ ಭಾಸುರ । ವೆಸೆಯಲಡಗಿತು ತಿಮಿರಕಮಲ ।
ಪ್ರಸರ ವಿಕಸಿತವಾಗಲುದಿಸಿದ । ಬಿಸಜಮಿತ್ರ ॥64॥

**ವಾರ್ಧಕ**

ಉದಯಕಾಲದೊಳೆದ್ದು ದಶಕಂಠ ವಿಮಲ ತೋ ।
ಯದಿ ಮಿಂದು ಹಂಸಗರ್ಘ್ಯವ ಸೂಸಿ ತನ್ನ ಹ ।

ತ್ಪದುಮಪೀಠದಿ ಶಿವನನಿರಿಸಿ ಮಾನಸದೊಳರ್ಚಿಸಿ ಪಿತಾಮಹನನೆನೆದು ।
ಮುದದಿ ಗುರುವಿಗೆ ನಮಿಸಿ ಭೂಷಣವ ತೊಟ್ಟು ವಾ ।
ದ್ಯದ ನಿನದ ಗೀತ ನರ್ತನ ಪೊಗಳಿಕೆಗಳಿಂದ ।
ಮುದದಮೋಡಿಯೊಳೋಲಗಕೆ ಬಂದು ಕುಳಿತ ಸುರುಚಿರ ಸಿಂಹವಿಷ್ಟರದೊಳು ॥65॥

**ಭಾಮಿನಿ**

ದುರುಳ ಕುಂಭ ನಿಕುಂಭ ಸುಮನಸ ।
ರೆರೆಯ ರಿಪುವರ ವೈರಿ ಕಡು ಭೀ ।
ಕರದ ಮಕರಾಕ್ಷಾದಿ ರಕ್ಕಸ ನಿವಹವೈತಂದು ॥
ಸುರುಚಿರದ ಖಂಡೆಯವ ಝುಡಿಯುತ ।
ಬರೆದಶಾಸ್ಯನ ಸಮ್ಮುಖದೊಳು ।
ಬ್ಬಿರಿದು ಜೀಯೆನುತಿರಲು ರಾವಣನೆಂದನವದಿರೊಳು ॥66॥

**ರಾಗ ಮೆಚ್ಚು ಅಷ್ಟತಾಳ**

ಕೇಳಿರೈ ಸಮರ  ಸೌಭಾಗ್ಯರು । ಬೇಗ ।
ನೇಳಿ ಸಂಗರಕೆ ನೀವೆಲ್ಲರು ॥
ಕಾಳಗದೊಳು ನೃಪ ವರರನ್ನು । ಗಲ್ದು ।
ಬೀಳುಗೆಡಹಿ ತರುಚರರನ್ನು ॥67॥

ಧುರದಿ ಪೋದತಿಕಾಯ ಮುಖ್ಯರ ಇಂದು ।
ಮರೆಯಬೇಕೈ ಗೆಲಿದಹಿತರ ॥
ಪೊರಡಲೆಮ್ಮೊಡನೆ ಚತುರ್ಬಲ । ಸಹಿ ।
ತಿರದಗಣಿತ ದೈತ್ಯ ಸಂಕುಲ ॥68॥

ಎನುತ ದೈತ್ಯರಿಗುಡುಗರೆಯನ್ನು । ಕೊಟ್ಟು ।
ರಣಕೆ ತಾಂಬೂಲವನಿತ್ತನು ॥
ಇನಕುಲತಿಲಕನಗೆಲುವೆನು । ಯೆಂಬ ।
ನೆಣಗೊಬ್ಬಿನಲಿ ಖಡ್ಗವಿಡಿದನು ॥  ॥69॥

**ವಾರ್ಧಕ**

ಸುರಪಜಿತುವತಿಕಾಯನಳಿದ ವಾರ್ತೆಯ ಕೇಳು ।
ತಿರದೆಯುದರದಿ ಶೋಕಶಿಖಿಯುರಿಯಲೊಡನೆ ಪು ॥
ಷ್ಕರ ಮಣಿಜನಂತೆ ರೋಷವ ತಾಳಿ ಕೌಣಪಾಗ್ರಣಿಯು ವರ್ಧಿಪ ಶೌರ್ಯದಿ ॥
ಧರೆ ಬಿರಿಯಲುಬ್ಬಿರಿದು ಪವನಗಮನದೊಳೈದಿ ।

ಕರದ ಖಡ್ಗಾಯುಧವ ಝಳಪಿಸುತ ರಾವಣೇ ।
ಶ್ವರನ ಚರಣದಿ ಮಸ್ತಕವ ಚಾಚುತೆಂದನೆಣ್ದೆಸೆಯವರ್ಬೆಚ್ಚುವಂತೆ ॥70॥

**ರಾಗ ಮಾರವಿ, ಏಕತಾಳ**

ತಾತನೆ ಲಾಲಿಸಿ ಕೇಳೆನ್ನನುಜನ । ಘಾತಿಸಿದವರನ್ನು ।
ನಾ ತಳುವದೆ ಗೆಲಿದರಿವೆನು ನೋಡಿ । ನ್ನಾ ತರುಚರರನ್ನು ॥71॥

ಪರ ಸೈನ್ಯಾಂತಕ ನಾನಿರಲೇತಕೆ । ಧುರಕ್ಕೈದುವೆ ನೀನು ॥
ನರ ವಾನರರುಗಳಂಜಿಕೆಯಿರುವದೆ । ಹರಿಬದೊಳೆನಗಿನ್ನು ॥72॥

ಅಪ್ಪಣೆಕೊಡು ಸಮರದಿ ಕಪಿಗಳ ಹ್ಯೊ । ದಪ್ಪಳಿಸುವೆನಿನ್ನು ।
ದರ್ಪಕರಿಪು ತಡೆದರು ಬಿಡದುಭಯರ । ದರ್ಪವ ನಿಲಿಸುವೆನು ॥73॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಮಗನೆ ಸಾಹಸಿಯಹುದು ನೀ ಕಾ ।
ಳಗದಿ ಮಡುಹಿದೆ, ಮುನ್ನ ರಿಪುಗಳ ।
ಮಗುಳೆ ಜೀವಿಸಿ ಕೊಲುವರೀಖಳ । ರುಗಳನವರು ॥74॥

ಇನ್ನು ನಿನಗವರಂಜುವರೆ ನಾ ।
ಸೈನ್ಯ ಸಹಿತಲೆ ಪೋಗಿ ಕಪಿಬಲ ।
ವನ್ನು ಸದೆಬಡಿದಾನಪಾಲಕ । ರನ್ನು ರಣದಿ ॥76॥

ಜವಗೆಡಿಸಿ ಮೊದಲಾಹವದಿ ಪೋ ।
ದವರ ಹಂಬಲ ಮರವೆ ರಾಕ್ಷಸ ।
ನಿವಹಸಹಿತೀ ಪುರವ ಕಾದಿರು । ಕುವರ ನೀನು ॥77॥

**ರಾಗ ಕಾಂಬೋಧಿ ಝಂಪೆತಾಳ**

ಎನುತಲಣುಗನಪುರದ ॥ ರಕ್ಷೆಗಿರಿಸಿ ದಶಾಸ್ಯ ।
ಅನುವರಕೆ ಪೊರಡಲನಿತರೊಳು ।
ಮನಸಿಜನ ಕೊರಲಗಿನಂತೆ ಬಂದಳು ಮಯನ ।
ತನುಜೆ ವನಿತಾ ಸಮೂಹದೊಳು ॥78॥

ನವರತ್ನದಾರತಿಯ ಬೆಳಗಿ ರಿಪು ಸೈನಿಕರ ।
ಶಿವನ ಕರುಣದಿ ಜೈಸು ನೀನು ।
ಬವರಗಲಿಯಾಗೆಂದು ತನ್ನ ರಮಣನ ಪರಸಿ ।
ಯುವತಿ ತಳಿದಳು ಸೇನೆಯನು । ॥79॥

ಚತುರಾಸ್ಯದತ್ತ ಮಣಿರಥವ ಸಿಂಗರಿಸಿ ಸಾ ।
ರಥಿಯು ತರಲಶ್ವಗಳ ಖುರಕೆ ॥
ರತುನಗಳ ಕಟ್ಟಿ ಮುತ್ತುಗಳ ಬಿಗಿದೊಡನೆ ಖಳ ।
ಪತಿಯಡರಿ ನಡೆದನಾಹವಕೆ ॥೮೦॥

**ಕಂದ**

ಸಾಮಜ ವಾಜಿ ವರೂಥ ।
ಸ್ತೋಮದಿ ಖಳರಾಯುಧಂಗಳಂ ಝಡಿಯುತ್ತಂ ॥
ನೇಮದಿ ದಶಕಂಠನೊಳಂ ।
ಗೋಮಿನಿ ಗಡಗುಟ್ಟುವಂತೆ ಪೊರಟರ್ ಭರದಿಂ ॥81॥

**ರಾಗ ಮುಖಾರಿ, ಏಕತಾಳ**

ರಣಕೆ ಸನ್ನಾಹವಾಗಿ ಬಂದು । ಕಡು ರೋಷದಿಂದ ॥ ರಣಕೆ ॥ ಪಲ್ಲವಿ ॥
ಹೊಣಿಕೆಯೊಳಂಬರಮಣಿವಂಶಜರೊಳು ।
ಸೆಣಸಲೋಸುಗ ರಾವಣ ನೈಶಾಚರ ॥ ರಣಕೆ ॥ ಅನುಪಲ್ಲವಿ ॥

ಮೊಳಗುವ ಘಂಟಾವಳಿಯ ಮಹಾರವ ।
ದೊಳು ನರ್ತಿಪ ಹಯಗಳ ಸಾರಥಿ ಮುಂ ।
ಕೊಳಿಸುವ ಘರ್ಜನೆಯೊಳು ನಭಕಡರುವ ।
ಪಳವಿಗೆಯಿಂ ಥಳಥಳಿಪರೂಥದಿ ॥ ರಣಕೆ ॥82॥

ಸತ್ತಿಗೆ ಚಾಮರವೆತ್ತ ಪರೀಕ್ಷಿಸ ।
ಲಿತ್ತಟ್ಟಲಿ ಕರವೆತ್ತುತ ಪೊಗಳುವ ।
ಭತ್ಯರ ನೋಡುತ ಹಸ್ತಿ ತುರಗ ರಥ ।
ಪತ್ತಿ ಸಮೂಹದಿ ದೈತ್ಯ ಶಿರೋಮಣಿ ॥ ರಣಕೆ ॥83॥

ಬೊಬ್ಬಿರಿವುತ ನೆಣಗೊಬ್ಬಿಲಿ ವಾದ್ಯದ ।
ಬೊಬ್ಬೆಯೊಳಸುರರು ಉಬ್ಬುತಲಡಿಗಡಿ ।
ಗುಬ್ಬಣಗಳ ಪಿಡಿದಭ್ರದಿ ದಿವಿಜರ ।
ಗರ್ಭವ ನಡುಗಿಸುತರ್ಭಟೆಯಿಂದ ॥ ರಣಕೆ ॥84॥

**ರಾಗ ಸುರುಟಿ, ಮಟ್ಟೆತಾಳ**

ಸೆಣಸಿದರಂದು ಸಮರಕೆ ನಿಂದು ॥ ಸೆಣಸಿದರಂದು ॥ ಪಲ್ಲವಿ ॥

ಹರಿಕುಲತಿಲಕನ ನೆನೆವುತ । ಅರಿಗಳ ಮುತ್ತಿದರು ॥
ಗಿರಿತರುಗಳ ಪಿಡಿದಿರದು । ಬ್ಬಿರಿವುತ ವಾನರರು ॥85॥

ಸೀತಾಚೋರನ ಪಿಡಿದು ವಿ । ಘಾತಿಸಿರೆಂದೆನುತ ।
ಕಾತುರದಿಂ ತರುಗಳ ರಿಪು । ಯೂಥಕೆ ತೆಗೆದಿಡುತ ॥86॥

ಗಜರುತ ಕೌತುಕ ಹಯರಥ । ಗಜಘಟೆ ಪತ್ತಿಗಳ ।
ಕುಜದಿಂದಪ್ಪಳಿಸಿದರಾ । ಕುಜಚರ ವೈರಿಗಳ ॥87॥

ಯುವತಿಯ ನಮ್ಮರಸಂಗಿ । ತ್ತವನೇಳ್ತರಲೆನುತ ।
ಪ್ಲವಗ ಸಮೂಹಕೆ ಶಸ್ತ್ರಾ ಸ್ತ್ರವ ದಾನವರೆನುತ ॥88॥

ಹಲವು ತೆರದಿ ಹಳಚಿದರಿ । ಕ್ಕೆಲರು ವಿರೋಧದಲಿ ॥
ಕಲಹದಿ ಹಿಂಗಿತುದಾನವ । ಬಲ ಗಜಬಜಿಸುತಲಿ ॥89॥

**ಭಾಮಿನಿ**

ಹನುಮ ಜಾಂಬವ ನೀಲನಳ ರವಿ ।
ತನಯ ಗವಯಗವಾಕ್ಷ ವಾಲೀ ।
ತನುಜ ಮುಂತಾದಖಿಳ ಕೀಶ ಕದಂಬವೀತೆರದಿ ।
ದನುಜ ಸೈನ್ಯವ ಸವರಲೀಕ್ಷಿಸು ।
ತನುವರಕೆ ಸೂಟಿಯಲಿ ಮಣಿಸ್ಯಂ ।
ದನವ ರಿಪುಮೋಹರಕೆ ನೂಕಿದ ವೀರ ದಶಕಂಠ ॥90॥

**ವಾರ್ಧಕ**

ದುರುಳನತಿ ಕೋಪಮಂ ತಳೆದಾರ್ದು ನೋಡಿದಂ ।
ಸುರುಚಿರದ ಮಾರ್ಗಣದಿ ಕೂರ್ಗಣೆಯ ಪೂಡಿದಂ ।
ಧುರದಿ ಬೊಬ್ಬಿರಿದು ಆ ಕರ್ಣಾಂತ ಸೆಳೆದಾರ್ದು ತೆಗದೆಚ್ಚನಧಟಿನಿಂದ ॥
ಶರವೆರಗಿ ಕಪಿಗಳಂ ಕೆಡಹಲಾ ದಶಗಳಂ ।
ಸುರಪಸುತ ವೈರಿಯಂ ಫಣಿಪಾವತಾರಿಯಂ ।
ಜರಿವುತುಗ್ಗಡಿಸಿದಂ ಮಣಿರಥವ ನಡೆಸಿದಂ ಸೂತನ ಸಹಾಯದಿಂದ ॥91॥

**ಕಂದ**

ಹಾ ಹಾ ರಘುವೀರರ ಬಳಿ ।
ಗಾಹವದೊಳ್ದಾನವೇಂದ್ರನೈದಿದನೆನುತಂ ॥
ಬೇಹಿನ ಕಪಿಗಳ್ಗ ಜರ ।
ಲ್ಯಾಹಂಸಜ ಬಂದುಸೂರ್ದ ರಾವಣಗಾಗಳ್ ॥92॥

**ರಾಗ ಶಂಕರಾಭರಣ ಮಟ್ಟೆತಾಳ**

ದುರುಳ ರಥವ ತಿರುಹು ನಮ್ಮ |
ಹೊರಗೆ ದನುಜವಂಶ ದಂಡ |
ಧರನ ತುಡುಕಬೇಡ ಘೋರ | ತರದಮಾರಿಗೆ ||
ಸೆರೆಯನಿತ್ತೆ ನಿನ್ನ ಕುಲವ |
ಪರಕೆ ದೂರನಾದೆ ನೀನು |
ಧರಣಿಸುತೆಯ ನೆವದೊಳೆಂದು | ಗಿರಿಯನಿಟ್ಟನು ||93||

ಕುಧರಹತಿಗೆ ನೊಂದು ದೈತ್ಯ |
ನಧರ ವಡಿಯುತೆಲವೊ ಕಪಿಯೆ |
ಸುದತಿಗಾಗಿ ಪೂರ್ವಭವನ | ವಧೆಯಗೈಸಿದ ||
ಅಧಮ ನೀನು ನಿನಗೆ ಸಮರ |
ತ್ರಿದಶಕುಲವಿರೋಧಿಯೊಡನೆ ||
ಸದರವಲ್ಲೆನುತ್ತ ಬಾಣ | ನಿಧಿಯತುಳುಕಿದ ||94||

ಸರಳು ನಾಂಟಿಯಿನಜ ಮೈಯ |
ಮರೆಯಲಗ್ನಿಜಾತ ಶೈಲ |
ಮರಗಳನ್ನು ಪಿಡಿದು ಮುಂದು | ವರಿದುಸೂರ್ದನು |
ಹರಿಯೊಳಹಿತವೆತ್ತು ಬಳಗ |
ವೆರಸಿ ಮೀಸಲಾದೆ ಯಮಗೆ |
ದುರುಳತನದೊಳೆಂದು ಪೊಡೆದ | ತರುಗಳಿಂದಲಿ ||95||

ಬಣಗು ಕೀಶ ವಿಷದ ಹೊಳೆಯ |
ನೊಣಗಳೀಸಿ ಬದುಕಲುಂಟೆ |
ರಣದಿ ಕಪಿಗಳಸುರರೊಡನೆ | ಸೆಣಸಿಜೀವಿಪ ||
ಪಣವಿದಾವದೆಲವೊ ನಮ್ಮೊ |
ಳಣಕವೇಕ ನಿನಗೆನುತ್ತ |
ಕಣಿಯ ಕವಿಸಲಳುಕದಗ್ನಿ | ಯಣುಗನೆಂದನು ||96||

ಕೆಡುಕರಿಗೆ ವಿಲಾಸ ನಿನ್ನ |
ನುಡಿಗಳಲ್ಲಿ ಮೆರೆವುದೆನುತ |
ಅಡಚಿಕಲು ಮರಾಸ್ತ್ರ ಶಸ್ತ್ರ | ಗಡಣವೆಸುತಲಿ ||
ಮಿಡುಕದೀರ್ವರುರುಬಿ ಗಿಳಿಗೆ |
ಗಿಡುಗವೆರಗುವಂತೆ ಖಳನ |
ಪಿಡಿದು ಬಾಲದಲ್ಲಿ ಕಟ್ಟಿ | ಜಡಿದು ತೂಗಿದ ||97||

**ರಾಗ ಜೋಗುಳ, ಅಷ್ಟತಾಳ**

ಜೋ ಜೋ ಕಳ್ಳರ ಕುಲ ಶಿರೋಮಣಿಯೆ ।
ಜೋ ಜೋ ರಣಹೇಡಿಗಳ ಕೈಯ ಗಿಣಿಯೆ ॥
ಜೋ ಜೋ ಕಡುಖೂಳರಿಗೆ ತೌರುಮನೆಯೆ ।
ಜೋ ಜೋ ಭಂಡರ ಭಾಗ್ಯದ ಕಣಿಯೆ ॥ ಜೋ ಜೋ ॥೯೮॥

ಅಳಲದಿರೆನ್ನ ಕಂದಯ್ಯ ದುಶ್ಶೀಲ ।
ಮೊಲೆಯ ನೀಡುವರೆ ತಾಯಿಯು ನಿನಗಿಲ್ಲ ॥
ಕಲಹದಿ ನಾ ನಿನ್ನ ಕೊಲುವವನಲ್ಲ ।
ಗಳಿತ ಜೌವನೆಯರ ತೊಟ್ಟಿಲ ಬಾಲ । ಜೋ ಜೋ ॥೯೯॥

ಪಥ್ವಿ ಜಾತೆಯನಿತ್ತು ಶ್ರೀರಾಮಚರಣ ।
ಭತ್ಯ ನೀನಾದರುಳುಹಿಕೊಂಬೆ ಹರಣ ॥
ಕತ್ರಿಮ ಕುಟಿಲ ವಿದ್ಯದಿಸು ಪ್ರವೀಣ ।
ಹತ್ತು ಮಂಡೆಯ ಘೋರ ರೂಪಿನ ಕೋಣ ॥ ಜೋ ಜೋ ॥೧೦೦॥

**ವಾರ್ಧಕ**

ಸುರನಾರಿಯರು ನೋಡಿ ನಗುತಿರಲು ಶೋಕಿಸುವ ।
ದುರುಳನ ರಥಸ್ತಂಭದೊಳು ಬಿಗಿಯಲೊಡನೆ ಚೇ ॥
ತರಿಸಿನೀಲನ ರಣದಿ ಸೋಲಿಸಲ್ಕಂಡು ಮುಖ್ಯಪ್ರಾಣ ಒರೆಯಲವನೊಳು ॥
ಧುರದಿ ಮುಷ್ಟಿತ್ರಯದಿ ಗೆಲುವವಾಸಿಯನೆಗಳಿ ।
ಮರುತಜನ ತಾ ಮುನ್ನ ತಿವಿದು ಪುನರಪಿ ಕಪೀ ।
ಶ್ವರನ ಕರಹತಿಗೆ ತಾ ಮೈರೆದು ಮುಗುಳೆದ್ದು ಮತ್ತೆ ಹನುಮನ ಪಿಡಿದನು ॥೧೦೧॥

**ರಾಗ ಸುರುಟಿ, ಏಕತಾಳ**

ವಿವರಿಸಲೇನದನು । ದನುಜಾ । ಧವನ ಸಹಸವನು ॥
ವವನಕುಮಾರನ । ತಿವಿದು ಕೆಡಹಿ ಕಪಿ ।
ನಿವಹವ ಸದೆಯುತ ॥ ತವಕದಿ ಬಂದನು ॥ ಪಲ್ಲವಿ ॥

ಖಾತಿಯೊಳಗ್ರಜಗೆ । ಶರಮಾ । ನಾಥ ನುಡಿದ ನಿನಗೆ ॥
ಜಾತರಹಿತನೊಡ । ನೇತಕೆ ಹಗೆತನ । ಸೀತೆಯ  ನಳಿನಜ । ತಾತಂಗೊಪ್ಪಿಸು ।
ಪಾತಕವೆಸಗಿ ದು । ರಾತುಮ ನರಕದಿ । ನೀ ತೊಳಲದಿರೆನು । ತಾತನುಸೂರ್ದನು ॥  ॥೧೦೨॥

ಆರು ಕಲಿಸಿದಂಥ । ಮಾಯವ । ಬೀರುವೆ ಸಹಜಾತ ॥
ವೈರಿ ಭಟನನೀ । ಸೇರಿ ಕುಲಕೆ ಹೆ । ಮ್ಮಾರಿಯ ತಂದ ವಿ । ಕಾರಿಯೆ ನಿನ್ನ ಶ ।
ರೀರವ ತೀರ್ಚುವೆ । ನೀ ರಣದೊಳಗೆನು । ತಾರು ಶರವೆನೆಸ । ಲೀ ರಸಗುರುಳಿದ ॥  ॥೧೦೩॥

ಮತ್ತಾ ಸಮಯದಲಿ | ವರ ಸೌ | ಮಿತ್ರಿ ವಿರೋಧದಲಿ ||
ನೆತ್ತರ ಕಿಡಿಗಾ | ರುತ್ತ  ನುಡಿದ ಭೂ | ಪೋತ್ತಮನೊಳು ವೈರತ್ವವ ವಿರಚಿಸಿ |
ಹತ್ತು ಶಿರಂಗಳ | ಮತ್ತುವಿಗೀವ ದು | ರಾತ್ಮಕ ತಿರುಗೆನು | ತಸ್ತ್ರವ ಕವಿದನು ||  ||104||

ತಳುವದೆ ರಾವಣನು | ಬೃಹ ಶರ | ಗಳ ಕಡಿದೊಟ್ಟಿದನು ||
ಭಳಿರೆ ಮನುಜ ನ | ಮ್ಮೊಳು ನೀ ಸೆಣಸುವ | ಇಳೆಯ ಮಗಳ ಪತಿ | ಗೆಳೆಯನೊ ಕುವರನೊ ||
ತಿಳುಹಿಸೆನುತ ಕೋ | ಲ್ಗಳನೆಸೆಯಲು ಬಲು | ಚಳಕದಿ ಮುರಿದ | ಗ್ಗಳೆಯನುಸೂರ್ದನು ||  ||105||

ಅಳಿಯಿವೆ ಮಲತವರ | ಮಗನೆಂ | ದುಳುಹಿಪೆ ಆನತರ ||
ಉಳಿವೆಯೊ ಜೀವವ | ಕಳಕೊಂಬೆಯೊ ನ | ್ಮೊಳು ಪೇಳೆನುತಲೆ || ಮೊಳಗುತ ಕೌಶಿಕ | ನೊಳು ಪಡೆದಸ್ತ್ರವ | ಸೆಳೆದು ಪೊಡೆಯಲಾ | ಖಳಗೆರಗಲು ರಥ | ದೊಳು ಮೈಮರೆದನು ||106||

**ಕಂದ**

ಉದ್ದಿದನಾಖಳನಂಗಕೆ |
ವಿದ್ಯುಜ್ಜಿಹ್ವಂ ಮಹೌಷಧಿಯ ಬಳಿಕಸುರಂ ||
ಎದ್ದಾರ್ಭಟಿಸುತ ವಿಲಯದ |
ರುದ್ರನ ವೋಲ್ ಭರ್ಗದತ್ತ ಶಕ್ತಿಯನಿಟ್ಟಂ ||107||

**ಭಾಮಿನಿ**

ದಿತಿಜನಿಟ್ಟ ಕರಾಳ ಶಕ್ತಿಯ |
ಹತಿಗೆ ರಕುತವ ಕಾರು ತಾ ರಘು |
ಪತಿಯ ಸೋದರ ಕ್ಷಿತಿಯೊಳುರುಳಲು ಕಾಣುತಭ್ರದಲಿ ||
ಶತಮಖಾದಿ ಸುರೌಘ ಮೊರೆಯಿಡೆ |
ಅತುಳ ತೋಷದಿ ತಾಮಸೀಚರ |
ತತಿಯು ನಗುತಿರೆ ದುಗುಡವಾಯ್ತು ವನೌಕಸರಿಗೆಂದ ||108||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮಿತ್ರತೇಜವ ಜರಿವುತಾ ಸೌ |
ಮಿತ್ರಿ ಮಲಗಿರಲ ಸುರಪತಿಯು ವಿ ||
ಚಿತ್ರವ್ಯಾತೆಂದಿಳಿದ ರಥವ ಧ | ರಿತ್ರಿಗಂದು ||109||

ವೈದು ತೋರುವೆನೆನ್ನನೊಲ್ಲದ |
ಮೇದಿನೀಸುತೆಗಿವನನೆನುತಡೆ |
ಹ್ಯಾದು ತೋಳುಗಳಿಂದ ತಳ್ಕಿಸ | ಲಾ ದಶಾಸ್ಯ ||110||

ಆ ಸುಮಿತ್ರಾಸುತನ ನಾನಾ ।
ಶ್ವಾಸಗರಳ ಜ್ವಾಲೆಯಡರಿ ವಿ ।
ಭೀಷಣಾಗ್ರಜ ಬಾಡಿ ಬಳುಕಿದ । ನಾ ಸಮಯದಿ ॥111॥

ಶಿವಶಿವೀತನ ನೆಗಹಲಸದಳ ।
ಇವನ ಕೊರಳರಿದೊವೆನೆನುತಾ ।
ದಿವಿಜರಿಪು ಶಶಿಹಾಸಕವ ಕೊಂ । ಡವಘಡಿಸಿದ ॥112॥

ಸಿಡಿಲಿನಂತಾರ್ಭಟಸುತನಿಲಜ ।
ನುಡಿದ ನಾ ನಿನಗೀವ ಸಾಲವ ।
ಕೊಡುವೆನಿದ ಕೊಳ್ಳೆಂದು ಮುಷ್ಟಿಯ । ಝಡಿದುನಿಂದ ॥113॥

**ಕಂದ**

ಕರಸಿಕೊ ವಿಧಿಯಂ ಭಾವದಿ ।
ಸ್ಮರಿಸಿಕೊ ಶಿವನಿತ್ತ  ವರವ ಸದ್ಗುರು ಸಖರಂ ॥
ಬರಿಸಿಕೊ ಮತಸಂಜೀವನ ॥
ವಿರಿಸಿಕೊ ಜಿಹ್ವೆಯೊಳಗೆಂದನಾಶುಗಕುವರಂ ॥114॥

**ಭಾಮಿನಿ**

ನೆತ್ತಿಗಡರಿತು ಜೀವ ಮಾರುತ ।
ಪುತ್ರನಾಡಿದ ನುಡಿಯ ಕೇಳುತ ।
ಹೆತ್ತ ತಾವೊಡಲಲ್ಲವಾಯ್ತಿನ್ನೆತ್ತಲಡಗುವೆನೊ ॥
ಮತ್ಯುವಂತಿವನಿತ್ತ ಬಂದನೆ ।
ನುತ್ತ ಭಯದಲಿ ಕಾಯ ಕಂಪಿಸೆ ।
ಕಿತ್ತು ಬಿದ್ದುದು ಕರದಿ ಪಿಡಿದ ಹಿಮಾಂಶುಹಾಸಕವು ॥115॥

**ರಾಗ ಭೈರವಿ, ಏಕತಾಳ**

ಆ ಸಮಯದಿ ಪವನಜನು । ಮಾಂ ।
ಸಾಶನನೊಳುಪೇಳಿದನು ॥
ನೀ ಶೋಕಿಸಲದಕಿನ್ನು । ನಾ ।
ಕ್ಲೇಶಿಪನಲ್ಲೆನುತವನು ॥116॥

ಘನಘೋಷದಿ ಘರ್ಜಿಸುತ । ದೈ ।
ತ್ಯನ ವೃಕ್ಷವನೀಕ್ಷಿಸುತ ॥

ಅನುವಾಗೆಲೊ ನೀನೆನುತ । ಭೋ ।
ರನೆ ತಿವಿದೌಕಿದ ನಗುತ ॥117॥

ದನುಜೇಶನ ತನು ಬಿರಿದು । ಕುಂ ।
ಭಿನಿಗುರುಳಲು ಭಯವೆರದು ॥
ದನುಜರು ತೊಲಗಿದರಂದು । ಕಂ ।
ಡನಿಲಜ ಮಿಡುಕಿದ ನೊಂದು ॥118॥

**ರಾಗ ಸಾಂಗತ್ಯ, ಮಟ್ಟೆತಾಳ**

ಹರಹರ ಶ್ರೀರಾಮ ಬಾಣಕೆ ಮೀಸಲಾ ।
ಗಿರುವ ದೈತ್ಯನ ದೇಹವನ್ನ ॥
ಕರಹತಿಯಲಿ ಚೂರ್ಣವಾಂ್ತುಲ್ಲ ನಾನೇಕಿಂ ।
ದಿರದೆ ಮುಟ್ಟಿದೆನೊ ಈ ಖಳನ ॥119॥

ಸ್ವಾಮಿದ್ರೋಹಿಕೆಯ ಪಾತಕವ ನಾ ಕೈಕೊಂಡೆ ।
ರಾಮಕೋಪಿಸುವನೀ ಬಗೆಗೆ ॥
ಭೂಮಿ ಮೆಚ್ಚದು ವಂದಾರಕರು ನಿಂದಿಪರಯ್ಯ ।
ನಾ ಮಾಡಿದಪರಾಧಗಳಿಗೆ ॥120॥

ಕಾಕುತನದೊಳೈದೆನೆಗಳಿದ ಕೆಲಸಕ್ಕೆ ।
ಏಕೆ ಚಿಂತಿಪುದು ನಾನಿನ್ನು ।
ಈ ಖೂಳನವಸಾನ ದಿಟವಾದರಗ್ನಿಯ ।
ನಾ ಕೂಡಿ ತನುವನೀಗುವೆನು ॥121॥

ಎನುತಲಾ ಖಳನ ಸರ್ವಾಂಗವನೊಡಗೂಡಿ ।
ಅನುಪಮ ಜಲವ ತಂದೆರೆದು ।
ಜನಕಗೆ ಮಣಿದೆಂದ ತನಯ ಮಾಡಿದ ತಪ್ಪ ।
ಮನಕೆ ತಾರದೆ ನೀವಿಂದೊಲಿದು ॥122॥

ದಿತಿಜನನುಳುಹಿ ರಾಮನ ಸೇವೆಗಳಿಗೆ ಯೋ ।
ಗಿತನ ಮಾಡೆನ್ನ ನೀನೆನುತ ॥
ನುತಿಸಲಾಶುಗನು ದೈತ್ಯನ ನೆಗಹಿಸಲೆದ್ದ ।
ಶತಕೋಟಿಕಾಯನೀಕ್ಷಿಸುತ ॥123॥

**ಭಾಮಿನಿ**
ನಿನ್ನ ಹರಿಬವು ಸಾಕೆನಗೆ ನಾ ।
ನಿನ್ನ ಕೊಲುವವನಲ್ಲ ರವಿಕುಲ ।

ರನ್ನನಾಣೆ ನಿಧಾನವಿದು ಶ್ರೀರಾಮಚಂದ್ರಮನ ॥
ಸನ್ನಿಧಿಗೆ ನೀ ಪೋಗೆನಲು ಶತ ।
ಮನ್ಯು ಮುಂತಾದಮರರನಿಲಜ ।
ನನ್ನು ದೂರಿದರಳಿದ ದುಷ್ಟನನೆಬ್ಬಿಸಿದನೆಂದು ॥124॥

**ರಾಗ ಕೇದಾರಗೌಳ, ಅಷ್ಟತಾಳ**

ಮರುತಜನಿಂತೆಂದು  ರಣಭೂಮಿಯೊಳು ಮಲ । ಗಿರುವ ಸೌಮಿತ್ರಿಯನು ॥
ಪರಿಕಿಸಿ ಬೆರಗುಪಟ್ಟುರುತರಶೋಕಸಾ । ಗರದೊಳು ಮುಳುಗಿದನು ॥125॥

ಈ ಮಹಿಮನ ಕೆಡಹಿದ ದುಷ್ಟ ಖಳನ ನಿ । ರ್ನಾಮವ ಗೈವುದಕೆ ।
ರಾಮಸುಧಾಕರ ಎನಗೆ ನೇಮಿಸಲೊಲ್ಲ । ನಾ ಮಾಳ್ಪುದೇನಿದಕೆ  ॥126॥

ಸರಸಿಜಭವಕತಾಂತರ ಪಿಡಿತಂದು ಸ । ಚ್ಚರಿತನ ಜೀವವನ್ನು ॥
ಬರಿಸುವೆನೆಂದು ಬೊಬ್ಬಿರಿಯಲಂಜಿದರು ಆ । ತರಣಿಜರೇನೆಂಬೆನು ॥127॥

ಯಾಕೆ ನೀ ಮರುಳಾದೆ ಶೇಷಾವತಾರಿಯ । ನಾ ಖೂಳ ದಶವದನ ॥
ತಾ ಕೊಲ್ಲಲರಿಯ ನಿಧಾನಿಸೆಂದುದು ಶೌರ್ಯೋ । ದ್ರೇಕದಂಬರ ವಚನ ॥128॥

ಗಗನ ವಾಣಿಯ ಕೇಳುತಾ ಸೌಮಿತ್ರಿಯ । ಬಗೆಬಗೆ ಪರಿಕಿಸುತ ॥
ಮಗುಳೆ ಪುಷ್ಕರ ವಾಕ್ಯ ಪುಸಿಬಾರದೆನುತ ವಿ । ಶುಗಜಾತ ಧತಿಗೊಳುತ ॥129॥

**ಭಾಮಿನಿ**

ಧರಣಿಜಾಧವನಿವನನೀಕ್ಷಿಸಿ ।
ಧುರವನುಳಿದಳಲುವ ದಶಾಸ್ಯನು ॥
ಉರುಬಿ ಕಪಿಗಳ ಕೊಲುವನಾತನ ನಾ ತುಡುಕಲೆನ್ನ ॥
ಕರದಿ ಹರಣವ ಬಿಡುವನಸುರನ ।
ನರಪತಿಯು ಗಲಿದು ಸೌಮಿತ್ರಿಯ ।
ಪರಕಿಸಲಿ ತಾನೆಂದು ಮರೆಯೊಳಗಿಟ್ಟ ಲಕ್ಷುಮಣನ ॥130॥

**ರಾಗ ಕಾಂಭೋಜಿ ಝುಂಪೆತಾಳ**

ಇತ್ತಲಾ ದಶಕಂಠ ಸುರುಚಿರದ ಸ್ಯಂದನವ ।
ನತ್ಯಂತ ತೋಷದಿಂದಡರಿ ॥
ಮುತ್ತಿದ ವನೌಕಸರ ದನುಜ ಬಲ ಸಹಿತ ಮೊಳ ।
ಗುತ್ತಲೋಚನದಿ ಕಿಡಿಗೆದರಿ ॥131॥

ದಾನವರಿಗೆಂದ - ಲಕ್ಷುಮಣನೊಡನೆ ಕೌಸಲಾ ।
ಸೂನುವನು ಕೆಡಹಿ ಕೀಶರನು ।
ಹಾನಿ ಗೈದಿರದೆ ಸೀತೆಯನೊಲಿಸಲಿದು ಸಮಯ ।
ವೇನೆಂಬೆನೆನುತ ರಾವಣನು ॥132॥

ಹರಿಬಲವ  ತುಡುಕಲವನೀಶ ಕಂಡತಿ ರೋಷ ।
ವೆರೆದು ಕಾರ್ಮುಕವ ಝೇಗೈದು ॥
ಹರಿಬಕನುವಾಗಲನಿಲಜ ಕಾಣುತಸುರಾರಿ ।
ಗೆರಗುತಿಂತೆಂದು ಕೈ ಮುಗಿದು ॥133॥

ಖೂಳ ರಾವಣ ರಥಾರೂಢನಾಗಿರುವ ಕಾ ।
ಲಾಳಿಂದನೀವವನೊಳಿಂದು ।
ಕಾಳಗಕೆ ತೆರಳಬಾರದು ಯೆನ್ನ ಹೆಗಲೊಳು ಕ ।
ಪಾಳುನೀವ್ ಕುಳಿತು ಕಾದುವದು ॥134॥

ಎನಲು ನಸುನಗುತ ಮುಖ್ಯಪ್ರಾಣ ನಿನ್ನ ನುಡಿ ।
ಗನುಮಾನವುಂಟೆ ಕೇಳಿದನು ।
ದನುಜಾರಿಪತಿಗೆ ಹುಲುರಥವೆಮಗೆ ವಜ್ರ ಸ್ಯಂ ।
ದನವು ನೀನೆನುತಲಡರಿದನು ॥135॥

**ಭಾಮಿನಿ**

ತುರಗ ಸಾರಥಿ ಗಾಲಿ ಸತ್ತಿಗೆ ।
ವರ ಪತಾಕಧ್ವಜಗಳಿಂದಲಿ ।
ಮೆರೆವುದಸುರ ವರೂಥವದಕೆ ಸಹಸ್ರ ಮಡಿಯಾಗಿ ॥
ಮರುತಸಂಭವ ವಜ್ರರಥ ವಿ ।
ಸ್ತರ ವಿಚಿತ್ರವೇನೇನ ಪೊಗುಳುವೆ ।
ಶರೆಯ ಪಿಡಿದನು ಸೇವೆಯಲಿ ರಘುಸಾರ್ವಭೌಮಕನ ॥136॥

**ವಾರ್ಧಕ**

ಶರಜಾಪ್ತವಂಶ ರತ್ನಾಕರ ಹಿಮಾಂಶುಕುಜ ।
ಚರಸಮೂಹದೊಳ್ಳೈದೆ ವಿಬುಧಾರಿಯೊಡನೆ ಸಂ ।
ಗರಕೆ ಜೀವ ನಜಸಖ ಭಾಸುರದಿ ಹನುಮ ವಾಹಕವಾಗಿ ಬರಲೀಕ್ಷಿಸಿ ।
ಅರರೆ ಜತ ಭಾರ್ಗವ ನಿಶಾಟಕುಲ ರವಿಜನೇಳ್ ।
ತರುವ ಕಿಡಿ ತಿವಿಯೆಂದು ಖಳರುಸ್ವರ್ಭಾನು ಮಗ ।
ಧರಗಡರುವಂತೆ ಸಾಕೇತಪತಿಗೌಚಿ ತುಳುಕಿದರಂಬಿನಂಬುಧಿಯನು ॥137॥

**ಭಾಮಿನಿ**

ದನುಜಸೈನ್ಯವನೊಂದು ವಿಶಿಖದಿ ।
ಜನಪ ರಾಘವನಿರಿದು ಕೆಡಹಲು ।
ದನುಜಪತಿ ಸಿಡಿಲಂತೆ ಬೊಬ್ಬಿರಿವುತ ಶರಾಸನದಿ ॥
ಮೊನೆಗಣೆಯ ತೆಗದೆಚ್ಚೆ ಹನುಮನ ।
ತನುವಕೀಳಿಸಲೈದೆ ಖಳಕುಲ ।
ವನದಿ ಕುಂಭೋದ್ಭವನುಸೂರ್ದನಿಶಾಚರೇಂದ್ರನೊಳು ॥138॥

**ರಾಗ ಪಂಚಾಗತಿ, ಮಟ್ಟೆತಾಳ**

ದುರುಳ ಕೇಳೊ ದೇವ ದನುಜ ನಾಗ ನರರನು ।
ಶರೆಯ ಪಿಡಿದ ಸಹಸಿ ನೀನು ಮೌನಿರೂಪನು ॥
ಧರಿಸಿ ಕಳವಿನಿಂದಲೈದಿ ನಮ್ಮ ಸತಿಯನು ।
ತರುವಹಾವ ಧರ್ಮವೆನಲು ದೈತ್ಯನೊರೆದನು ॥139॥

ದಢವನರಿಯದೀಗ ಕಳ್ಳನೆನದಿರೆನ್ನೆನು ।
ಒಡಲಿನೊಳಗಜಾಂಡ ಮುಖ್ಯ ಸಕಲ ಜಗವನು ॥
ಅಡಗಿಸಿಟ್ಟ ಚೋರ ನೀನು ರಣದಿ ನಿನ್ನನು ।
ಹೊಡೆದು ಭಕ್ಷಿಸುವೆನೆನುತ್ತ ಗಜರುತೆಂದನು ॥140॥

ಬೇಡ ನಿನಗೆ ನಮ್ಮೊಳಹಿತ ಸಾರ್ದನೀಕ್ಷಣ ।
ರೂಢಿಸುತೆಯನೆಮಗೆ ಕೊಟ್ಟು ಶರಮೆಯರಸನ ॥
ಕೂಡಿಕೊಂಡು ರಾಜ್ಯವಾಳು ಲಕ್ಷುಮಣಾಖ್ಯನ ।
ನೋಡುವಂತೆ ನಿನ್ನ ನೋಳ್ಪೆ ನೆಲವೊ ರಾವಣ ॥141॥

ಎನಲು ರಾಮ ನಿನ್ನ ಹರಿಬಕಾನು ಬೆದರೆನು ।
ವಿನಯದಿಂದ ಬಿಡುವನಲ್ಲ ಯಿಳೆಯ ಮಗಳನು ।
ಅನುಜ ಸತಿಸುತಾದಿ ರಾಜ್ಯದಾಸೆ ತೊರೆದೆನು ।
ತನುವನೀಯದನಕ ನಿನಗೆ ಶರಣನಾಗೆನು ॥142॥

ಕದನ ಕೇಳಿಯಲ್ಲಿ ಕುಹಕವೇಕೆ ಬಾಣವ ।
ಬೆದರದೈದಿಸೆನುತಲೆಚ್ಚನಖಿಳವಿಶಿಖವ ॥
ಬದಲು ಶರದಿ ಪಗೆಯ ಸರಳ ಮುರಿದು ಚಾಪವ ।
ವದರಿಸುತ್ತ ತಿರುವಿಗೇರಿಸಿದ ಮಹಾಸ್ತ್ರವ ॥143॥

**ವಾರ್ಧಕ**

ಬೆರಗಾದರನಿಮಿಷರು ಬೆದರಿದಂ ಕೂರ್ಮ ಕ ।
ರ್ಬುರಪ್ರಭವರಾಹವದ ಘರ್ಜನೆಗೆ ವಾನರರ ॥
ಹರಿನಿನಾದದಿ ಮೊಳಗಲೆದೆಬಿರಿದು ಕೆಡೆದವರಿಪತ್ತಿ ಗಜತುರಗಂಗಳು ॥
ದುರುಳನಂ ವಾಮನಯನದಿ ನೋಡಿ ಜಿತಪರಶು ।
ಧರ ಮಹಾಸ್ತ್ರವನೆಸೆಯಲಾ ರಾಮ ಶರದುರಿಗಾ ।
ಪೊರಳಿದಂ ಗೋಪಾಲ ಬೌದ್ಧರೂಪವ ತಾಳ್ದ ಕಲಿ ದಶಗ್ರೀವನಂದು ॥144॥

ಸರಳ್ಳೈದಿ ಚಾಪ ರಥ ಸೂತಹಯ ಛತ್ರ ಚಾ ।
ಮರ ಮಕುಟ ಹಾರಾದಿಗಳ ಕಡಿಯಲಾ ।
ದುರುಳ ನಿರ್ಭೂಷಣದಿ ನಿಂತ ಕಾಮನ ಗರಡಿಯಂ ಗೆಲೆದ ಯೋಗಿಯಂತೆ ।
ಸುರತರುಣಿಯರು ನಾಚುತಿರದೆ ವದನಕೆ ಸೆರಗ ।
ಮರೆಗೈದು ತೆರಳಲು ದಿವೌಕಸರ್ ಕೈಯ ಚ ।
ಪ್ಪರಿಸಿ ನಗುತಿರಲಾಗ ರಾಘವಂ ಧರೆಗಿಳಿದು ಕೂರ್ಗಣಿಯ ಕರೆದೆಂದನು ॥145॥

**ಭಾಮಿನಿ**

ಅಧಮನೇಕೆ ದಿಗಂಬರದಿ ನ ।
ಮ್ಮಿದಿರು ನಿಂತಿಹ ಪೋಗಲೀ ಖಳ ।
ಬದುಕಲಿಂದಿಗೆ ವಿಶಿಖ ವಾಹನ ವನನವರ್ಜಿತರ ॥
ವಧಿಸಲಾಗದು ನೋಡಲೀತನ ।
ಸುದತಿಯಲ್ಲೆಗೆ ನೂಕೆನಲು ಕಿಡಿ ।
ಗೆದರಿ ದೈತ್ಯನನಟ್ಟಿ ಹೊಕ್ಕುದುಹರಿಯ ಮೂಡಿಗೆಯ ॥146॥

**ರಾಗ ಶಂಕರಾಭರಣ, ಅಷ್ಟತಾಳ**

ಏನೆಂಬೆ ನಾನಿನ್ನೇನೆಂಬೆ ॥ ಪಲ್ಲವಿ ॥

ಏನೆಂಬೆ ದಶಕಂಠ ರಣದೊಳಾ ದಿವಸ ।
ಮಾನವ ಕಳಕೊಂಡು ಮರಳುವ ಸೊಗಸ ॥ ಅನುಪಲ್ಲವಿ ॥

ಕೆದರಿದ ಕಬರಿಯ ಮಂಡೆಗಳಿಂದ ।
ವದನ ಭೀಕರದ ಕೆಂಗಣ್ಣುಗಳಿಂದ ।
ರುಧಿರಮಾಂಸಗಳು ಮೆತ್ತಿದ ಕಾಯದಿಂದಿ ।
ಅದುಭುತ ಬೌದ್ಧರೂಪವ ತಾಳಿ ಬಂದ ॥147॥

ರಾಮನ ಸಮರವ ನೆನವುತ ಬೆಚ್ಚಿ ।
ತಾ ಮನದೊಳು ರೋಷಿಸುತ ಔಡುಗಚ್ಚಿ ।

ವಾಮಕರದೊಳಂಕಮೂಲವ ಮುಚ್ಚಿ ।
ಭೂಮಿಯ ನೋಡುತ ಲೈದಿದನಾಚಿ ॥148॥

ಕೇರಿಕೇರಿಗಳೊಳ್ಸಂಚರಿಸುವ ಜನರು ।
ಮಾರಿ ಬಂತೆನ್ನುತ ನಿಲ್ಲದೋಡಿದರು ॥
ಆರತಿ ಪಿಡಿದಿದಿರ್ಗೊಳುವ ನಾರಿಯರು ।
ಮೋರೆಗೆ ಮಸುಕಿಕ್ಕಿ ಮರಳಿ ಹಿಂಗಿದರು ॥149॥

ಪೊಗರು ಜೌವನದ ಪೆಂಗಳು ನಾಚಿಕೊಂಡು ।
ನಗುತ ಮಾತಾಡಿದರೇನಿದು, ಭಂಡು ।
ಮುಗುಧೆಯರಂಜಬೇಡೀತನ ಕಂಡು ।
ಜಗವನಿಕ್ಕಿಸಿರೆಂದಚ್ಚರಿಗೊಂಡು ॥150॥

ಖೂಳ ನಿರ್ವಸನದೊಳೈದುವದನ್ನು ।
ನಾಳಿಕ ಬಂದು ಕಂಡರು ಲಜ್ಜೆಯನ್ನು ।
ತಾಳಿ ಮತ್ತಪರ ರತ್ನಾಕರವನ್ನು ।
ಬೀಳಲಾ ದೈತ್ಯನೈದಿದ ಮನೆಯನ್ನು ॥151॥

**ಭಾಮಿನಿ**

ಹೊಳಲ ಹೊರಗೈತರಲು ಕಾಣುತ ।
ಖಳರು ಮುತ್ತಿದರಿಕ್ಕೆಲದಿ ದಶ ।
ಗಳಗೆ ವಸನವನುಡಿಸಿ ಸರ್ವಾಭರಣವಿಡಿಸಿದರು ॥
ಕಳಕಳಿಸಿ ಮಂಡೋದರಿಯು ಬಂ ।
ದಳುತಲೊದಳು ನಿನ್ನ ಜೀವವ ।
ನುಳುಹಿ ರಾಘವ ಬಿಟ್ಟುದುದೆಸಾಕೆನುತ ವಲ್ಲಭನ ॥152॥

**ರಾಗ ಘಂಟಾರವ, ಝುಂಪೆತಾಳ**

ರಜನಿಯೊಳಗಿತ್ತ ಕೈದೀವಿಗೆಯ ಬೆಳಕಿನಲಿ ।
ಕುಜಚರರು ಮಡಿಸಿರ್ಪ ಸಮರ ಭೂಮಿಯಲಿ ॥
ಅಜಸುತಸಮೀರಜ ಸುಷೇಣರುಗಳೊಗ್ಗಿನಲಿ ।
ಸುಜನ ಸುರ ಭೂಜನೈತಂದು ದುಗುಡದಲಿ ॥153॥

ಕೆನೆ ರಕುತ ಕರುಳು ಮಾಂಸಗಳುಗಿದು ಮಲಗಿರುವ ।
ದಿನಪಜನ ಕಾಣುತ್ತ ತೊಳಲಿ ರಘುಪ್ರಭವ ॥
ವನದೊಳಗೆ ಕಂಡ ಬಿಡಯಕೆ ಬಂದು ನೀ ತನುವ ।
ಎನಗೊಪ್ಪಿಸಿದೆಯ ಪ್ರಭಾಕರಾತ್ಮಭವ ॥154॥

ಎನುತ ವಾಲಿಜಗವಯ ನೀಲಾದಿ ಕಪಿಗಳನು ।
ಜನಪಾಲ ಕಂಡು ಮರೆಹೊಕ್ಕ ಶರಣರನು ।
ದನುಜನೊಳು ರಾಮ ಕೊಲಿಸಿದನೆಂಬ ಕೀರ್ತಿಯನು ।
ವನಿತೆಗೋಸುಗಪಡೆದೆನೆಂದು ಮರುಗಿದನು ॥155॥

**ಭಾಮಿನಿ**

ಕೆಡೆದ ಕಪಿಗಳ ನೋಡಿ ಶೋಕದ ।
ಕಡಲಿನಲಿ ತೊಳತೊಳಲಿ ರಘುವರ ।
ನಡೆಯುತನಿತರೊಳೀಕ್ಷಿಸಿದ । ಬಿದ್ದಿರ್ದ ಲಕ್ಷುಮಣನ ॥
ಒಡನೆ ರಾಘವ ನೆಲೆಯ ಕಾಣದ ।
ಮಡುವ ಧುಮುಕಿದ ನಿಜವನರಿಯದೆ ।
ಹುಡಿ ಹೊರಳಿ ಬಿಸುಸುಯ್ದನನುಜನ ತನುವ ತಳ್ಕೈಸಿ ॥156॥

**ರಾಗ ನೀಲಾಂಬರಿ, ಆದಿತಾಳ**

ಅನುಜ ಸೌಮಿತ್ರೇಯ ವೀರ । ಮನಸಿಜ ಶೃಂಗಾರ ॥
ದನುಜನಾಗಾಸಿಂಹಾಕಾರ । ವನಧಿಸಮ ಗಂಭೀರ ॥157॥

ಸಮರಶೂರ ಸುಗುಣಸಾಂದ್ರ । ಕಮನೀಯನಾಗೇಂದ್ರ ॥
ದ್ಯುಮಣಿವಂಶಜಲಧಿಚಂದ್ರ । ನಮಿತನಿರ್ಜರೇಂದ್ರ ॥158॥

ಕರುಣದಿ ಕಂದೆರೆದು ನೋಡು । ಹರುಷದಿ ಮಾತಾಡು ॥
ಸರಳಾಸನಕೆ ಶರವ ಪೂಡು । ದುರುಳನೊಳ್ ಕೈಗೂಡು ॥159॥

ದುಷ್ಟಾ ನಾನೆನ್ನೊಡನ್ಯಾಕೆಂದು । ಶ್ರೇಷ್ಠನೀನ್ನೈತಂದು ॥
ಅಟ್ಟಾರಣ್ಯದಲ್ಲಿ ನೊಂದು । ದೆಷ್ಟೆಂಬೆನಾನಿಂದು ॥160॥

**ಭಾಮಿನಿ**

ಶಿವಶಿವಾ ರವಿಕುಲದಿ ನಾ ಸಂ ।
ಭವಿಸಿ ರಾಜ್ಯವ ನುಳಿದು ವಿಪಿನದಿ ।
ಯುವತಿ ಅನುಜರು ಸಹಿತ ತೊಳಲಿದೆ ಶಬರರಂದದಲಿ ॥
ದಿವಿಜವೈರಿಗೆ ಸತಿಯನಿತ್ತಾ ।
ಹವದಿ ತಮ್ಮನ ಕಳೆದೆನಕಟಾ ।
ಭುವನದಲಿ ತನ್ನಂತೆ ಪಾಪಾತ್ಮಕರದಾರೆಂದ ॥161॥

ಅನುಜರಿಗೆ ಮಜ್ಜನನಿಯರಿಗಾ ।
ನನವ ಕಾಣಿಸಲಾವ ಬಗೆಯಲಿ ।

ಮನುಜ ಸಂಸಾರಾಂಬುಧಿಯನುತ್ತರಿಸಲಿನ್ನೆಂತು ||
ಎನಗೆ ಜೀವನ ಹನುಮ ತಾನಿರಲ |
ನುವರದಿ ಸಂಭವಿಸಿತಪಜಂು |
ವೆನುತ ದುಃಖಿಸಲಾಶುಗಾತ್ಮಜನೆಂದ ಕೈಮುಗಿದು ||162||

**ರಾಗ ಕೇತಾರಗೌಳ, ಅಷ್ಟತಾಳ**

ಲಾಲಿಸೈ ರಘುವಂಶ ಲಲಾಮ |
ನೀಲಕಂಧರ ಮಿತ್ರ ವಿನುತಸುತ್ರಾಮ || ಪಲ್ಲವಿ ||

ಖಳನಾಗಕುಲ ನೀಲಗಳ ಪ್ರಿಯ ಮನುಜರಂ |
ತಳಲುವದೇಕೆ ಶ್ರೀನಿಳೆಯ ನಿನ್ನನುಜಾತ |
ನಿಳೆಗುರುಳಲು ಕಾಣುತ | ನಾ ದುಃಖಿಸ |
ಲಳೆಯಲಿಲ್ಲವೆನುತ | ತಿಳಿಸಿತಭ್ರ |
ದೊಳು ವಾಣಿಯದರಿಂದ | ತಳೆದೆ ಧೈರ್ಯವನೆಂದ || ಲಾಲಿಸೈ ||163||

ಏನಯ್ಯ ಜಾಂಬವ ನೀನುಸುರೀ ಪವ |
ಮಾನಿಯ ನುಡಿತನುಮಾನವಿಲ್ಲೆನಗೆ ನಿ |
ಧಾನಿಸಿ ಪರಿಕಿಸಲು | ತಮ್ಮನ ಪ್ರಾಣ |
ಹಾನಿಯಾಗಿಹುದೆನ್ನಲು | ಕೇಳುತಲಜ |
ಸೂನು ಕೈಮುಗಿದು ಸ | ದಾನಂದಮಯಗೆಂದು || ಲಾಲಿಸೈ ||164||

ಕ್ಷಿತಿಪ ಕೇಳಾಶುಗಸುತನುಸುರಿದ ಮಾತು |
ಶಿಥಿಲವಲ್ಲೂರ್ಮಿಳಾಪತಿಯನೀಕ್ಷಿಸಲಪ |
ಗತನಹುದೇನೆನ್ನಲಿ | ನಿನ್ನಯ ಪ್ರಾಣ |
ರತುನ ವಾಯುಜನಿಂದಲಿ ಲಕ್ಷ್ಮಣ ಮತಿ |
ಯುತನಾಹನೆನುತ ಮಾ | ರುತಿಯೊಡನಿಂತೆಂದ || ಲಾಲಿಸೈ ||165||

**ರಾಗ ವಸಂತಭೈರವಿ, ಏಕತಾಳ**

ವಾಯುಸಂಭವನೆ ನೀ ಲಾಲಿಸು | ರಘು |
ರಾಯನ ಸಹಜನ ಪಾಲಿಸು | ಕಪಿ |
ನಾಯಕ ಶತಕೋಟಿಕಾಯಸೇವಕ ಪ್ರಿಯ |
ಶ್ರೀಯರಸನ ಕಾರ್ಯಕನುವಾಗಬೇಕಯ್ಯ || ವಾಯು || ಪಲ್ಲವಿ ||

ಭೋರೆಂಬ ಶರಧಿಯ ಲಂಘಿಸಿ | ಪೋಗಿ |
ಘೋರ ದೈತ್ಯನ ನೀ ಭಂಗಿಸಿ || ಶುಭ |

ಕಾರಸೀತೆಯ ಚರಣಾರವಿಂದವ ಕಂಡು ।
ಚಾರು ಲಂಕೆಯಸುಟ್ಟ । ಧೀರ ಸಂಗರಶೂರ ॥ ವಾಯು ॥166॥

ಕೊತ್ತಿ ಸೈನ್ಯವ ಜಿತವಾಸನ । ಕೊಲ ।
ಶಿವ ಲಾತತುಕ್ಷಣ ತಾಳ್ದುರೋಷವ ॥
ಪ್ರೀತ ಸಂಜೀವನ ನೀ ತಂದು ತರುಚರ ।
ವ್ರಾತವನುಳುಹಿದ ಸೀತಾವಲ್ಲಭ ದೂತ ॥ ವಾಯು ॥167॥

ಜೀವಿಸಬೇಕಯ್ಯ ಲಕ್ಷ್ಮಣ । ಸಂ ।
ಜೀವನವನು ತರಲೀಕ್ಷಣ ॥ ಪೋಗು ।
ಸಾವಿರ ಮಾತೇನು । ಭಾವಜಪಿತ ಪಾದ ।
ಸೇವಕ ರಿಪುವನ । ದಾವ ವೀರರ ದೇವ ॥ ವಾಯು ॥168॥

**ಭಾಮಿನಿ**

ಹನುಮನೊಳು ಚತುರಾಸ್ಯಸುತನಿಂ ।
ತೆನಲು ಶೋಕಾರ್ಣವದ ತಡಿಯಲಿ ।
ಜನಪ ಕುಳಿತು ಸಮೀರಜನೆ ನೀರಡಸಿ ಬಾಡಿರ್ದ ॥
ಇನಕುಲದ ವಲ್ಲರಿಯ ಬೇರಿಗೆ ।
ವನವ ನೀ ತಂದೆರೆದು ಕೀರ್ತ್ಯಂ ।
ಗನೆಯ ಕೈವಿಡಿ ಜಾಂಬವನ ಮಾತುಗಳ ನಡಿಸೆಂದ ॥169॥

**ರಾಗ ಶಂಕರಾಭರಣ ಏಕತಾಳ**

ಕೇಳು ರಾಘವ ಕಮಲಜನೇತ್ರ ।
ವ್ಯಾಳಭೂಷಣ ಮಿತ್ರ ವಾಣೀಶನುತಿಪಾತ್ರ ॥ ಪಲ್ಲವಿ ॥

ಯಾತಕೆ ಮರುಗುವೆ ಮನುಜರಂದದಿ ನೀನು ।
ಪ್ರೀತಿಯೊಳ್ಳೈದಿಸಿನ್ನೆನ್ನುವನು ॥
ಭೂತೇಶ ರವಿಜರಡ್ಡೈಸಿದರವರವನ್ನು ।
ಧಾತುಗೆಡಿಸಿ ಸಂಜೀವನವ ತರುವೆನು ॥ ಕೇಳು ॥170॥

ವನಜಾಕ್ಷನೊಡನೆ ವಾಯುಜನಿಂತು ಪೇಳಲು ।
ವನಜಪೀಠಜನೆಂದರಜನಿಯೊಳು ॥
ಅನಿಲಜ ನೀ ದೈತ್ಯರರಿಯದ ತೆರದೊಳು ।
ಅನಿಲವೇಗದಿ ಪೋಗು ಬಹಳ ಜಾಗ್ರತೆಯೊಳು ॥ ಕೇಳು ॥171॥

ಉತ್ತರದೆಸೆಯೋಳಿಂದು ದ್ರೋಣ ಗಿರಿಯೊಳು ।
ಉತ್ತಮ ವೈದ್ಯಗಳಿಹವು ಕೇಳು ॥
ಮಿತ್ರನೀಕ್ಷಿಸದೊಲೌಷಧಿಯ ನೀ ತಾರೆನಲು ।
ಮಿತ್ರಕುಲೇಶಗೆ । ನಮಿಸಿದ ಮುದದೊಳು ॥ ಕೇಳು ॥172॥

**ವಾರ್ಧಕ**

ಜೀವನಜನಾಭವನಂಘ್ರಿಗೆ ನಮಿಸುತಂ ಜಗದ ।
ಜೀವಸುಕುಮಾರ ಜಾಂಬವಗೆ ಪೊಡಮಟ್ಟು ಸಂ ।
ಜೀವನವ ತರಲುತ್ತರಾಭಿಮುಖನಾಗಿ ರಾಮಧ್ಯಾನದಿಂ ಪೊರಟನು ।
ಜೀವನಜಸದನೆ ಜಾನಕಿ ಯಿತ್ತಲುಂ ತನ್ನ ।
ಜೀವದೊಳು ಸಂತಾಪವೆತ್ತು ಕಳವಳಿಸಿ ರಾ ।
ಜೀವಾಕ್ಷಿ ಶರಮೆಯೊಳ್ಮನುಜಸುದತಿಯರಂದದಿಂ ಪೇಳ್ದಳಾನಿಶಿಯೊಳು ॥173॥

**ರಾಗ ಸಾಂಗತ್ಯ, ರೂಪಕತಾಳ**

ಶರಮೆ ಕೇಳೆನ್ನ ಮನದ ತಾಪವಿಂದೇಕೆ ।
ಪಿರಿದಾಯ್ತು ಪೇಳು ಪ್ರವೀಣೆ ॥
ಪುರುಷರನಗಲಿದ ಪೊಗರು ಜವ್ವನೆಯರ ।
ಸ್ಮರ ಬಳಲಿಸುವನು ಕಾಣೆ ॥174॥

ಅಶನ ನಿದ್ರೆಯನುಳಿದವರಿಗೆ ಪಂಕಜ ।
ವಿಶಿಖನಿಂದಾಗುವದೇನೆ ॥
ಋಷಿಗಳಿಗಾದರಂಗಜನುಪಟಳವುಂಟು ।
ಕುಸುಮಾಂಬಕಿಯರ ಪಾಡೇನೆ ॥175॥

ಸರಸದ ಮಾತ ನೀನಾಡದಿರಿಂದಿನ ।
ಹರಿಬವಾರಿಗೆ ಜಯವಾತೆ ॥
ದುರುಳ ರಾವಣ ಕಪಿಗಳ ಕೊಂದು ಊರ್ಮಿಳಾ ।
ವರನ ಕೆಡಹಿ ಪೋದನಂತೆ ॥176॥

**ಕಂದ**

ಜಡಜಾಕ್ಷಿಯ ಕಡು ಭೀಕರ ।
ನುಡಿಯಾಗಳ್ ಜನಕಸುತೆಯ ಜಠರವ ಮುರಿಯಲ್ ॥
ಸಿಡಿಲಪ್ಪಳಿಸಿದ ವೋಲ್ ಸೈ ।
ಗಡೆಯುತ್ತಂ ಬಳಲಿ ಪೊರಳುತಂ ಬಿಸುಸುಯ್ದಳ್ ॥177॥

**ರಾಗ ಆನಂದಭೈರವಿ, ಏಕತಾಳ**

ದಶರಥಭೂವರ ಪುತ್ರ । ಸುಮ ।
ವಿಶಿಖಸುಕೋಮಲಗಾತ್ರ ॥
ಶ್ವಸನ ಸಖಾಂಬಕಮಿತ್ರ । ಸುಮ ।
ನಸರ ಸನ್ನುತಿಪಾತ್ರ ॥178॥

ಸರಸಿಜಲೋಚನಸಹಜ । ವರ ।
ಶರಣ ದಿವೌಕಸ ಮಹಿಜ ॥
ಸುರರಿಪುಸಂಕುಲರವಿಜ । ಸುರು ।
ಚಿರ ಸೌಮಿತ್ರೆಯ ತನುಜ ॥179॥

ತೋರಿಸು ನಿನ್ನಯ ಮೊಗವ । ಛಲ ।
ವೇರುತ ಸೆಳೆದಿಡು ಶರವ ॥
ತೀರಿಸು ದಶಶಿರನಸುವ । ಮುದ ।
ದೋರಿಸು ರಾಮನ ಮನವ  ॥180॥

**ರಾಗ ಘಂಟಾರವ, ಆದಿತಾಳ**

ರವಿಕುಲತಿಲಕನಿಗೆ ಮೆಚ್ಚಿನ ಅನುಚರರು ।
ರವಿಜ ಮಾರುತಿ ಜಾಂಬವಾದಿ ವಾನರರು ॥
ಅವರ ಸಮ್ಮುಖದಿ ತಾನಿಂತು ಸೌಮಿತ್ರಿಯನು ।
ಬವರದಲಿ ಕೊಂದನಲಿ ಖೂಳ ರಾವಣನು ॥181॥

ಒಂದಾಗಿ ಮೂವರು ವನದಿ ಸಾವಿರರನ್ನ ।
ತಂದ ವಂಚಿಸಿ ದೈತ್ಯನಿಂದು ಮೈದುನನ ॥
ಕೊಂದ ಬಳಿಕಾ ರಾಮ ತಾನೆಂತು ಜೀವಿಪ ।
ಸೆಂದುದೇ ರವಿಕುಲದನಪರ ಪ್ರತಾಪ ॥182॥

ಜನಕಜೆಯಾಗಿ ರಾಮನ ಕೈಪಿಡಿದು ನಾನು ।
ವನದಿ ಬಳಲುತ ಖಳಗೆ ಸೆರೆಯ ಸಿಕ್ಕಿದೆನು ॥
ದನುಜನನು ಕೊಂದೆನ್ನ ರಘುಜನೊಯ್ಯುವನೆಂದು ।
ಇನಿತು ದಿನಗಳ ಕಳೆದೆ ವ್ಯಾಕುಲವನಳಿದು ॥183॥

ಎನ್ನ ಫಾಲದ ಬರಹವಿಂತಾದೊಡ ಮೇಲೆ ।
ಪನ್ನಗವೇಣಿ ನಾನೆಂತು ಸೈರಿಸಲೆ ॥
ಇನ್ನಾರು ಗತಿಯೆನಗೆ ಎಂದು ತೊಳಲುವ ರಮೆ ।
ಯನ್ನು ಸೈಪಿಡಿದು ಪೇಳಿದಳಾಗ ಶರಮೆ ॥184॥

ನಾರಿ ಕೇಳ್ ಸಂಜೀವನವ ತಾರೆನ್ನುತ ರಾಮ ।
ಮಾರುತ ಜನನು ಕಳುಹಿಸಿರುವನಾ ಹನುಮ ॥
ಚಾರು ವೈದ್ಯವತಂದು ವೀರರನು ಎಬ್ಬಿಸುವ ।
ನೀರಜಾಂಬಕಿ ನೀಗು ಮನದ ವ್ಯಾಕುಲವ ॥185॥

**ಭಾಮಿನಿ**

ಮನುಜನಲ್ಲ ಸುಬಾಹುರಿಪು ವಿಧಿ ।
ಜನಕ ಲಕ್ಷುಮಣ ಫಣಿಪ ನೀ ರಮೆ ।
ಹನುಮ ನೀಲ ನಳಾದಿ ಮರ್ಕಟರೆಲ್ಲ ನಿರ್ಜರರು ॥
ಘನ ದುರಾತ್ಮರ ಸಂಹರಿಸಿ ಸ ।
ಜ್ಜನರ ಪಾಲಿಸಲಿಂತು ಮಾಯವ ।
ನನುಕರಿಸಿ ಬಂದವರ ಕೊಲಲರಿಯರು ನಿಶಾಚರರು ॥186॥

**ವಾರ್ಧಕ**

ಎನುತ ಸೀತಾಂಗನೆಯ ಜಠರದ ಮಹಾಕ್ಲೇಶ ।
ವನಧಿಯಂ ಕುಡಿವ ಕುಂಭಜಳಾಗ ಶರಮೆ ಮುನಿ ।
ಗಳಿರ ಕೇಳಿತ್ತಲುಂ ರಾವಣನ ಬಳಿಗೆ ಬೇಹಿನ ದೂತರೈತಂದರು ॥
ದನುಜೇಶ ನೀ ಕೊಂದ ರಿಪುಭಟರನೆಬ್ಬಿಸುವ ।
ರನಿಲ ಸಂಭವನ ಸಂಜೀವನವ ತಾರೆಂದು ।
ಜನಪನಟ್ಟಿಹನೆಂಬ ನುಡಿಗೆ ವಿಸ್ಮಿತನಾಗಿ ಬಿಸುಸುಯ್ದನಸುರೇಂದ್ರನು ॥187॥

**ರಾಗ ಕೇದಾರಗೌಳ, ಅಷ್ಟತಾಳ**

ಪವನಜ ಸಂಜೀವನವ ತಾರದಂತೆ ವಿ । ಘ್ನವನನುಕರಿಸಲೆನ್ನು ॥
ದಿವಿಜವೈರಿಗಳೊಳಾರಿಹರೆಂದು ಮನದಲಿ ವಿವರಿಸೆ ನೋಡಿದನು ॥188॥

ಖಳ ಕಾಲನೇಮಿ ತಾನೆನಗಾಪ್ತ ಕುಟಿಲಗ । ಳೊಳಗೆ ಕೋವಿದನವನ ॥
ಕಳುಹುವೆ ನೆನುತಲೋರ್ವನೆ ಬಂದಾನಾತನ । ನಿಳಯಕೆ ದಶವದನ ॥189॥

ಅಸುರನ ಕಂಡಿದಿರ್ಗೊಂಡುಪಚರಿಸಿ ರಂ । ಜಿಸುವ ಪೀಠವನೇರಿಸಿ ॥
ಕುಶಲಾದಿಗಳ ಬೆಸಗೊಳುತಲಾ ಖಳನೆಂದ । ದಶಕಂಠಗಭಿನಮಿಸಿ ॥190॥

**ಕಂದ**

ಏನೈ ದಶಶಿರ ನೀ ನರ ।
ವಾನರರೊಳ್ ಸೆಣಸುತಿರ್ಪೆಯೆನಿಪೀ ಪರಿಯಂ ॥

ನಾನಾರಿತಿಹೆ ನಿನಗಾಹವ ।
ವಾನರರೊಳ್ ದೊರಕಿತೇತಕೆನಲಿಂತೆಂದಂ ॥191॥

**ರಾಗ ತುಜಾವಂತು, ಝಂಪೆತಾಳ**

ಏನೆಂಬೆ ಮನುಜ ಮರ್ಕಟರ ಚಿಂತೆಯನು ।
ದಾನವಾಧಿಪ ಕೇಳು ನಿನಗೆ ಪೇಳುವೆನು ॥ ಏನೆಂಬೆ ॥ ಪಲ್ಲವಿ ॥

ವಸುಧೆಯೊಳು ಸಾಕೇತಪುರದೊಳರ್ಯಮಕುಲದ ।
ದಶರಥಮಹೀಶನರ್ಧಾಂಗಿಯರು ಪಡೆದ ॥
ಶಿಶುಗಳಾ ರಾಮಲಕ್ಷ್ಮಣರ ಕಡು ಸಹಸಗಳ ।
ನುಸರಲರಿದೆನಲೆಂದ ಕಾಲನೇಮಿ ಖಳ ॥192॥

ವರ ಕೌಶಿಕಾಶ್ರಮದಿ ತಾಟಕಿ ಸುಬಾಹುಗಳ ।
ಮುರಿದು ಮುನಿತತಿಯ ಪೊರೆದುರ್ವರೆಯಮಗಳ ॥
ವರಿಸಿ ರಘುನಾಥನಾ ಪರಶುಪಾಣಿಯ ಮನದ ।
ಗರುವ ಮುರಿದಿರುವ ಪರಿಯರಿತಿರುವೆನೆಂದ ॥193॥

ಜನಕಜೆರಮಣ ಕೈಕೆಯ ದೆಸೆಯೊಳಾರಣ್ಯ ।
ಕನುಜ ಸತಿಯರು ಬಂದಿರುತಲೆನ್ನ ॥
ಅನುಜೆಯಭಿಮಾನ ಕಳೆಯಲು ಕೇಳೆ ಜಾನಕಿಯ ।
ಮುನಿಯ ವೇಷದಲಿ ನಾ ತಂದುದರಿತಿಹೆಯ ॥194॥

ಅಸುರೆಯ ಮೂಗು ಮುಂದಲೆಗಳನು ಕೊಯು ಖರ ।
ದೂಷಣ ತ್ರಿಶಿರ ಮಾರೀಚಾದಿ ಖಳರ ॥
ನಾಶಗೈದಾಶುಗಜನಿಂ ಕಂಡು ಮಿತ್ರಜನ ।
ನಾ ಶಕ್ರಜನ ಮುರಿದನೆಂಬುದರಿತಿಹೆನು ॥195॥

ಧರಣಿಯಜಯನರಸುತ ಪಯೋನಿಧಿಯನುತ್ತರಿಸಿ ।
ಮರುತಜನು ಬಂದೆಮ್ಮ ವನವ ಸಂಹರಿಸಿ ॥
ಮೆರವುತಿರಲವನ ಬಾಲಕೆ ವಸನಗಳ ಬಿಗಿಸಿ ।
ವರ ತೈಲವೆರೆಸಿ ಸುಡಿಸಿದೆ ಶಿಖಿಯ ಪೊಗಿಸಿ ॥196॥

**ಭಾಮಿನಿ**

ಉರುಹಿ ಲಂಕೆಯ ಹನುಮ ಸೀತೆಗೆ ।
ತರಣಿಕುಲ ಜನ ಮುದ್ರಿಕೆಯನಿ ।
ತ್ತಿರದೆ ಚೂಡಾಮಣಿಯ ಕೊಂಡೈತರಲು ರಾಘವನು ॥

ಶರಮೆಯರಸನ ಸಖ್ಯದಿಂ ಸಾ ।
ಗರವ ಬಂಧಿಸಿ ಬಂದು ನಿನ್ನಯ ।
ಪುರದ ದೈತ್ಯರ ಕೊಂದುದನು ತಿಳಿದಿರ್ಪೆ ತಾನೆಂದ ॥197॥

ತಿಳಿದ ಬಳಿಕೇನೆಂಬೆನಿಂದಿನ ।
ಕೊಳುಗುಳದಿ ನಾ ಕಪಿಬಲವನೂ ।
ರ್ಮಿಳೆಯ ರಮಣನ ಕೆಡಹಲವದಿರನೆಬ್ಬಿಸುವ ಬಗೆಗೆ ॥
ತಳುವದಲೆ ಸಂಜೀವನವ ನಿಶಿ ।
ಯೊಳಗೆ ತಾರೆನುತಾ ರಘುಜನ ।
ಗ್ಗಳೆಯ ಹನುಮನನೈದಿಸಿಹನಾ ಮಾಳ್ಪುದೇನಿದಕೆ ॥198॥

**ರಾಗ ಕೇದಾರಗೌಳ, ಆದಿತಾಳ**

ದನುಜೇಶ ಕೇಳೊಂದು ಮಾತ । ಪೇಳ್ವೆ ।
ಮನವಿಟ್ಟಾಲಿಪುದು ಸುಪ್ರೀತ ॥
ನಿನಗೆ ನಾ ಸಖನೆಂಬ ಮಮತೆಯುಳ್ಳೊಡೆ ರಾಘ ।
ವನ ದೂತ ಪೋಗದ ಮುನ್ನ ನೀ ನಡೆಬೇಗ ॥ ದನುಜೇಶ ॥ ಪಲ್ಲವಿ ॥

ಬೆದರದೆ ನೀ ಸಂಜೀವನೆಯ । ಪರ್ವ ।
ತದ ತಪ್ಪಲಲಿ ಮಾರುತಿಯ ॥
ಚದುರನೆ ಕುಟಿಲವಿದ್ಯದಿ ಕೊಂದರನ್ಯರ ।
ಸದೆದ ವಾಸಿಯು ನಿನಗಪ್ಪುದು ರಣಧೀರ ॥ ದನುಜೇಶ ॥199॥

ಎನಲಾ ದಾನವ ನಗುತೆಂದ । ನಿನ್ನ ।
ತನಯರೇಳ್ನೂರ್ವರ ಕೊಂದ ॥
ಹನುಮನೊಳೆನ್ನಯ ಕುಟಿಲ ಮೆರವುದೆಂತು ।
ನಿನಗಿನಿತ್ಯಾಕೆಂದುರ್ಬುದ್ಧಿ ಬಂದೊದಗಿತು ॥ ದನುಜೇಶ ॥200॥

ಮನುಜಮರ್ಕಟರು ತಾವಾಗೆ । ಬಂದು ।
ವನಧಿಯ ಬಂಧಿಸೆ ಹೀಗೆ ॥
ದನುಜರ ಕೊಲುವ ಪರಾಕ್ರಮ ಉಂಟೇನೊ ।
ಜನಕಜೆ ರಮೆ ರಾಮ ದೇವಾದಿದೇವನೋ ॥ ದನುಜೇಶ  ॥201॥

ಸರ್ವಜೀವಿಗಳ ಜೀವನನು । ರಾಮ ।
ಸರ್ವರ್ಗೆ ಚೇತನಾತ್ಮಕನು ॥
ಸರ್ವಜ್ಞರಿಗೆ ಚಿತ್ಪ್ರಕಾಶ ಸ್ವರೂಪನು ।
ಸರ್ವರ ಭಾವಕೆ ಭೀತಿಯಾಗಿರುವನು ॥ ದನುಜೇಶ ॥202॥

ತಪ್ಪಾಯಿತೆಂದು ಜಾನಕಿಯ । ಈಗ ।
ಒಪ್ಪಿಸಿ ಪೂಜಿಸುಹರಿಯ ॥
ಸರ್ಪಶಾಯಿಯ ನಿಂದಿಸುವರಿಂಗೆ ಪರದೊಳು ।
ತಪ್ಪದು ನರಕ ನೀನರಿತುಕೊ ನಿನ್ನೊಳು ॥ ದನುಜೇಶ ॥203॥

**ವಾರ್ಧಕ**

ಅನಿಮಿಷಾರಿಯ ನುಡಿಯ ಕೇಳಿದಂ ತಾಳಿದಂ ।
ದನುಜೇಶ ಖತಿಯನಾರ್ಭಟಿಸಿದಂ ನಟಿಸಿದಂ ।
ತನುವನಂಬಕದಿ ಕಿಡಿಗೆದರಿದಂ ವದರಿದಂ ಪೂರ್ವದವಿವೇಕದಿಂದ ।
ಎನಗೆ ಮಾರೀಚ ಶರಮಾವರಂ ಭೂವರಂ ।
ವನಜಾಕ್ಷನಂದೊರೆದ ನೀತಿಯಂ ಪ್ರೀತಿಯಂ ।
ಮನಕೆ ತರದವ ನಿನ್ನ ವಾಕ್ಯಮಂಸಖ್ಯಮಂ ಧಿಗ್ಗಳೆದು ತೊರೆವೆನೆಂದ ॥204॥

**ರಾಗ ಭೈರವಿ, ಏಕತಾಳ**

ಝುಡಿವುತ ಖಡ್ಗವನುಸುರಿದನಾ ನಿ । ನ್ನೆಡೆಗೀ ಬೊಮ್ಮವನು ।
ನುಡಿಸಲು ಬಂದೆನೆ ನಾ ಪೇಳ್ದಲ್ಲಿಗೆ । ನಡೆಯೆನಲರುಹಿದನು ॥205॥

ಕೊಲ್ಲದಿರೆನ್ನನು ಪೋಗುವೆ ನಿಶಿಯಲಿ । ಖುಲ್ಲ ಕಪಿಯ ನಾನು ॥
ಬಲ್ಲ ಕುಟಿಲವಿದ್ಯವ ವಿರಚಿಸಿ ಕೊಂ । ದಲ್ಲದೆ ಬಿಡೆನಿನ್ನು ॥206॥

ಎಂದಾ ಖಳನರುಹಿದನಿತ್ತಲು ದಶ । ಕಂಧರನೆಂಬುವನು ॥
ವಂದಾರಕರಿಪು ಮಾಲ್ಯವಂತನ ಕರೆ । ದಂದಿನ ಕಾರ್ಯವನು ॥207॥

ಅರುಹಿದ ಕಾಲನೇಮಿಯನಾ ಪವನಜ । ನುರು ವಂಚಿಸಿ ತಾನು ॥
ವರ ಸಂಜೀವನಸಹ ಬಂದರೆ ಸಾ । ಗರದ ನಡುವೆ ನೀನು ॥208॥

ತಡೆದು ಬಿಡದೆ ಮಡುಹೆನುತಲಿ ಕಳುಹಿಸಿ । ನಡುಯಾಮಿನಿಯೊಳಗೆ ॥
ಕಡುಗಲಿ ರಾವಣನೈದಿದಮನದೊಳು । ಮಿಡುಕುತಲರಮನೆಗೆ ॥209॥

**ಭಾಮಿನಿ**

ವರ ಶಶಾಂಕದ್ರೋಣ ಧಾತ್ರೀ ।
ಧರದ ತಪ್ಪಲಿಗೈದಿಕಪಟದಿ ।
ವಿರಚಿಸಿದನುದ್ಯಾವನವನಾ ಕಾಲನೇಮಿ ಖಳ ।
ಪರಮ ಋಷಿರೂಪವ ತಳೆದು ಶಿ ।
ಪ್ಯರ ಸಮೂಹದಿ ವ್ಯಾಘ್ರಚರ್ಮಾಂ ।
ಬರ ಭಸಿತ ರುದ್ರಾಕ್ಷಿಗಳ ಭೂಷಣದಿ ಮಂಡಿಸಿದ ॥210॥

**ವಾರ್ಧಕ**

ಪರಿಕಿಸಲು ಚೋದ್ಯವಹ ಭೂಜವಲ್ಲರಿಗಳಿಂ ।
ಸುರುಚಿರದ ತಳಿರು ಕುಡ್ಮಲ ಕುಸುಮ ಫಲಗಳಿಂ ।
ಗರಗಿ ಸವಿವ ಚಕೋರ ಕೋಗಿಲೆಗಳಿಂ ಸಂಚರಿಪ ಸಾಧುಮಗಗಳಿಂದ ॥
ಮೆರೆವ ಗಹನದಿ ವೇದ ತರ್ಕ ಘನಶಾಸ್ತ್ರದಿಂ ।
ನಿರತ ವಟುಗಳನೋದಿಸುತ ಲಗ್ನಿಹೋತ್ರದಿಂ ।
ಪರಮ ಸಂಯಮಿಯೆನಿಪ ಮಾಯಾವಿಚಿತ್ರದಿಂದಸುರೇಂದ್ರನೆಸದನೆಂದ ॥211॥

**ಭಾಮಿನಿ**

ವನದ ಫಲಗಳ ಕೊಳದೊಳಿಹ ಜೀ ।
ವನವ ತನ್ನ ಕಮಂಡಲದ ವರ ।
ವನವ ಹಾಲಾಹಲವ ಮಾಡಿದನೀಗ ನೀರಡಿಸಿ ॥
ವನಚರಾಧಿಪ ಬರುವನಾತಗೆ ।
ವನವಿದೆನ್ನುತ ಕುಡಿಸಿ ಕಳುಹುವೆ ।
ವನಜಮಿತ್ರಜನಲ್ಲಿಗೆನುತಿಹ ಕಪಟಮುನಿರಾಯ ॥212॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಅನಿಲಗಮನದೊಳಭ್ರಮಾರ್ಗದಿ ।
ಹನುಮ ತಷ್ಯಾತುರದಿ ಬರುತಾ ।
ದನುಜ ಕಪಟದಿ ವಿರಚಿಸಿದನಂ । ದನವಕಂಡು ॥213॥

ಹಿಂದೆ ನಾನೌಷಧಿಯನ್ಯೊಯಲು ।
ಬಂದವೇಳ್ಯದಿ ಕಾಣಲಿಲ್ಲಿದ ।
ನಿಂದು ಕಂಡೆನಿದೇನು ಕೌತುಕ । ದಂದವೆಂದ ॥214॥

ಖಳರ ಕುಟಿಲವೊ ನಾವು ಗಮನದ ।
ಕಳವಳದಿ ಪಥ ತಪ್ಪಿದವೊ ಇದ ।
ರೊಳಗೆ ಜಲವಿರುತಿಹುದು ತಷೆಯನು । ಕಳಿವೆನೆಂದು ॥215॥

ಧರೆಗಿಳಿದು ನೋಡಿದ ಸಮಾಧಿಯೊ ।
ಳಿರದೆದೃಷ್ಟಿಯ ನಾಸಿಕಾಗ್ರದೊ ।
ಳಿರಿಸಿ ತುಟಿಗಳ ಮಿಡುಕಿಸುತ ಜಪ । ಸರವ ಪಿಡಿದು ॥216॥

ಶಿರದ ಜಡೆಯ ವಿಭೂತಿ ಲೇಪದ ।
ಮೆರೆವ ವ್ಯಾಘ್ರಾಜಿನಗಳುಡುಗೆಯ ।
ದುರುಳ ಖಳನಷ್ಟಾಂಗ ಯೋಗದೊ । ಳಿರುವ ಪರಿಯ ॥217॥

**ಭಾಮಿನಿ**

ಈತ ಕಪಟದ ಮುನಿಪನೆಂಬುದ ।
ತಾ ತಿಳಿಯದಾ ಖಳನ ನುಡಿಸಿದ ।
ವಾತಸುತ ನಾನೆಲೆ ಮಹಾಋಷಿವರನೆ ಕೇಳಿಗ ।
ಪಾಥವಿಲ್ಲದೆ ಬಂದೆ ಬಹು ತ ।
ಷ್ಯಾತುರದಿ ತವ ಪದವ ನೋಡಿದೆ ।
ಸೀತಕಮಲವ ತೋರಿಸೆನೆ ಕಣ್ದೆರೆದು ಪರಿಕಿಸಿದ ॥218॥

**ರಾಗ ಸಾಂಗತ್ಯ, ರೂಪಕತಾಳ**

ಹನುಮ ನೀ ಬಂದೆಯ ಕುಳ್ಳಿರು ಕುಶಲವೆ ।
ನಿನಗೆ ಲಕ್ಷ್ಮಣನ ಯುದ್ಧದಲಿ ॥
ದನುಜ ರಾವಣ ಕೊಲ್ಲಲವನನೆಬ್ಬಿಸಬೇಕೆಂ ।
ದೆನುತ ರಾಘವನ ನೇಮದಲಿ ॥219॥

ವರ ಸಂಜೀವನವನೊವುದಕ್ಕೈದಿದವನೆಂಬು ।
ದರಿತೆ  ಸುಜ್ಞಾನ ದೃಷ್ಟಿಯಲಿ ॥
ಕೊರತೆಯೇನಿದಕೆ ನಾ ಕೊಡುವೆನೌಷಧಿಯ ನೀ ।
ತೆರಳಲುಬಹುದು ಶೀಘ್ರದಲಿ  ॥220॥

ಶರಧಿ ಸಪ್ತಕವೇಳು ದ್ವೀಪವ ದಾಂಟಿ ನೀ ।
ಬರಲಿಕ್ಕೆ ಹೊರಟೆಷ್ಟು ದಿನವು ॥
ತೆರಳಿತು ಶವಗಳ್ನೀ ಮರುಳುವನಕ ಹ್ಯಾಗೆ ।
ಧುರಮಂಡಲದೊಳುಳುದಿಸಿಹವು  ॥221॥

ಎನಲರ್ಧ ಘಟಿಯಾಯ್ತು ಜಾಂಬವನ ಬೀಳ್ಕೊಂಡು ।
ದಿನವ್ಯಾಕೆ ಸ್ವಲ್ಪಕಾರಿಯಕೆ ॥
ಇನನುದಯಿಪ ಮುನ್ನ ಮರುಳುವೆ ಬರಿದೆ ನೀ ।
ನಿನಿತು ಕಾಲ್ಗೆಡಿಸುವದ್ಯಾಕೆ   ॥222॥

ಶರವ ತೋರೆನಲೀತ ರುದ್ರರೂಪಿನ ಕೀಶೇ ।
ಶ್ವರನೆಂದು ಬೆದರಿ ಲಕ್ಷ್ಮಣನ ॥

ಹರಣಕ್ಕೆ ಹೊಣೆ ನಾನು ನಿನಗಾತಿಥ್ಯವ ಮಾಳ್ಪೆ ।
ಮರುಗದಿರ್ಕಪಿಕುಲ ರನ್ನ ॥223॥

**ಭಾಮಿನಿ**

ಎನುತ ಗರಳಕಮಂಡಲವ ಕಪಿ ।
ಜನಪಗೀಯಲು ತಪ್ತಿಯಾಗದು ।
ತನಗೆ ನಿರ್ಮಲ ಜಲವ ತೋರೆಂದೆನಲು ರಕ್ಕಸನು ॥
ಎನಗೆ ಜೈಸಲಸಾಧ್ಯವೀತನ ।
ವನಚರಗಳಿಂ ಕೊಲಿಸುವೆನು ತಾ ।
ನೆನುತ ಕಳುಹಿದ ಶಿಷ್ಯರೊಡನೆ ಮಹಾಸರೋವರಕೆ ॥224॥

**ವಾರ್ಧಕ**

ತನ್ನ ಪೌತ್ರ ವಿರಂಚಿ ತಾ ಕ್ಷಿತಿಯ ಬಸುರೊಳಿಹೆ ।
ತನ್ನೊಳುದಿಸಿರ್ಪುದಂ ತೊಡುವನಂಗಜನೊಲಿದು ।
ತನ್ನ ಸನ್ನಿಧಿಯೊಳಂ ತಪ ಗೈಯುವರ್ಮನೀಶ್ವರರು ಶಿವರೂಪತಾನು ॥
ತನ್ನ ತನುಜೇಶ ರವಿಮಾ ಪದ್ಮಿಯನಿಮಿಷರು ।
ತನ್ನೊಳಿಹರ್ಸೈಸೆ ಗುಣಹೀನರುಂ ಕಳವಳಿಸಿ ।
ತನ್ನ ಬಳಿಗಯ್ಯಲವರಂ ಪೊರೆವೆನೆನುತ ಮೆರೆದಿರ್ದುದಾ ಕೊಳನ ಕಮಲ ॥225॥

**ರಾಗ ಬೈರವಿ, ಏಕತಾಳ**

ಮರುತಜ ಗರಳದ ವನವೆಂದರಿಯದೆ । ಕರಚರಣವತೊಳೆದು ॥
ತರಣಿಕುಲೇಶನ ಸ್ಮರಿಸುತಲೀಂಟಿದ । ಶರವನು ಮನವಲಿದು ॥226॥

ಆಶುಗಜಾತನ ನುಂಗಿತು ನೆಗಳೊಂದಾ । ಸಮಯದಿ ಕಂಡು ॥
ರೋಷದಿ ಬೊಬ್ಬಿರಿವುತ ವಟುಗಳ ಕಪ । ಟಾಸುರನೊಡಗೊಂಡು ॥227॥

ಬೆಚ್ಚದೆ ಶೈಲವಕಿತ್ತಾ ಸರಸಿಯ । ಮುಚ್ಚಲು ಜವದಿಂದ ॥
ಅಚ್ಚುತ ಸೇವಕಮಕರದ ಜಠರದಿ । ಹೆಚ್ಚಲು ಜಲಚರದ ॥228॥

ವಡಲೊಡೆಯಲು ಪೊರಟನಿಲಜ ಬರೆ ಗಿರಿ । ತಡೆಯಲು ತವಕದಲಿ ॥
ಅಡಿಗಳನಡಿಗಾನಿಸಿ ನೆಗದೆತ್ತಿದ । ದಡದಿ ಶಿರಾಗ್ರದಲಿ ॥229॥

ಶರಚರ ದಕ್ಷಿಣಪಾಣಿಯೊಳುತ್ತರ । ಕರದಿ ಗಿರಿಯ ಪಿಡಿದು ॥
ಹರಿಸ್ವಾರ್ಭಾನುವನುಳಿದೇಳ್ವಂದದಿ । ಧರೆಗಡರಿದನಂದು ॥230॥

**ಭಾಮಿನಿ**

ಖಳನ ಮಾಯವ ಜೈಸುತಲೆ ಕೈ |
ಯೊಳಗೆ ಪಿಡಿದಿಹ ಮಕರ ದೇಹವ |
ನುಳಿದು ಘನ ದಿವ್ಯಾಂಗ ಸುಂದರ ಸತಿಯ ರೂಪಾಂತು ||
ನಳಿನಶರನರಗಿಳಿಯೊ ವಿಟರೆದೆ |
ಗಳಿಗೆ ಶೂಲವೊ ತಿಳಿಯದೆನೆನಭ |
ದೊಳು ವಿಮಾನದಿ ಪೊಳೆದು ನುತಿಗೈದಳು ಸಮೀರಜನ ||231||

**ವಾರ್ಧಕ**

ಜಯಜಯ ಸಮೀರಸುತ ವಿಬುಧ ಪರಿವಾರನುತ |
ಜಯಜಯ ಸುಚಾರಿತ್ರ ರಿಪು ಕುಮುದಕುಲಮಿತ್ರ |
ಜಯ ಜಯ ಕಪಾಧಾಮ ಕೀಶವಂಶ ಲಲಾಮ ಜಯ ಭೀಮ ವಿಜಯ ಕಾಮ ||
ಜಯಜಯ ಕುಲೀಶಾಂಗ ಖಳವಿತಾನ ವಿಭಂಗ |
ಜಯ ಜಯ ಚಿರತ್ರಾಣ ವೀರ ಮುಖ್ಯಪ್ರಾಣ |
ಜಯಜಯ ಸುಗುಣವಂದ ಹರಿಪದಾಬ್ಜಮಿಳಿಂದ ಜಯವೆಂದಳೊಲವಿನಿಂದ ||232||

**ಕಂದ**

ನುತಿಸುವ ನಾರಿಯನುಂ ಕಾ |
ಣುತಲಚ್ಚರಿಯಿಂದ ಹನುಮ ನುಡಿದಂ ಕೊಳನೊಳ್ ||
ಸತಿ ನೀಂನೆನಗಳಾಗಿತ ತ |
ತ್ಕಥೆ ಏನದ ಪೇಳು ನೀನದಾರೆನಲೆಂದಳ್ ||233||

**ರಾಗ ಕೇದಾರಗೌಳ, ಅಷ್ಟತಾಳ**

ಹನುಮ ಲಾಲಿಸು ವಂದಾರಕ ವಧು ಧಾನ್ಯಮಾ | ಲಿನಿ ಎಂಬ ನಾಮಕದಿ ||
ಘನ ರೂಪೋತ್ಕರದಿ ನಾನಿರಲೊಂದು ದಿವಸ ಭ | ರ್ಗನ ಮೆಚ್ಚಿಸಿಯೆ ಪೂರ್ವದಿ ||234||

ವರ ಪುಷ್ಪಕವ ಪಡೆದಖಿಳ ಲೋಕಗಳ ಸಂ | ಚರಿಸುತಿಲ್ಲಿಗೆ ಬರಲು ||
ಪರಕಿಸಿ ಶಾಂಡಿಲ್ಯಋಷಿ ವಿರಹದೊಳೆನ್ನ | ನೆರೆಯಬೇಕೆಂದೆನಲು ||235||

ಸುಮತಿಯಾಗಿರ್ದ ಕಾರಣದಿಂದಿದು | ಸಮಯವಲ್ಲೆನುತ ನಿಂದು ||
ಕ್ರಮದಿ ಯಾಮಿನಿಚತುಷ್ಟಯವ ತನ್ಮುನಿಪಾನಾ | ಶ್ರಮದಿ ನಾ ಕಳೆದೆನಂದು ||236||

ಮುನಿಯ ವಂಚಿಸಿ ಪೋದಡೆನಗೆ ಶಾಪವನೀವ | ನೆನುತ ಸಿಂಗರಿಸಿ ನಾನು ||
ಮಿನುಗುತಲಿರಲಭ್ರಪಥದೊಳೈದುವ ದಶಾ | ನನನೀಕ್ಷಿಸಿದನೆನ್ನನು ||237||

ಭ್ರಮಿಸಿ ಬಂದೆನ್ನನು ತುಡುಕಲೀ ತನುವ ಸಂ | ಯಮಿಗೆ ಮೀಸಲಿಸಿರುವೆ ||
ಕುಮತಿ ನೀ ಮುಟ್ಟದಿರೆನೆ ಬಲೋತ್ಕರದಿಂದ | ರಮಿಸಿದನಾಕ್ಷಣವೆ ||238||

**ಭಾಮಿನಿ**

ಎನಗೆ ಮಗನತಿಕಾಯನಾಗಳೆ |
ಜನಿಸಲಾತನನೊದರಾವಣ |
ಮುನಿಪ ನಡೆತಂದೆನ್ನ ದೇಹದ ಚಿಹ್ನೆಗಳ ನೋಡಿ |
ವನಿತೆ ನೀನಾರೊಡನೆ ಕೂಡಿದೆ |
ತನಗೆ ಪೇಳೆನಲೀಗ ದಶಕಂ |
ಠನು ಬಲೋತ್ಕರದಿಂದ ರಮಿಸಿದನೆಂದೆನತಿಭಯದಿ ||239||

**ರಾಗ ಸುರುಟಿ, ಏಕತಾಳ**

ಏನ ಪೇಳಲಿನ್ನು | ಶಾಪವ | ತಾನು ಪಡೆದುದನ್ನು ||
ಈ ನುಡಿಗಳ ಕೇಳುತ ಕಡು ವಿರಹದಿ |
ಮೌನಿಯು ಬಳಲುತಲುಸುರಿದ ಕೋಪದಿ || ಪಲ್ಲವಿ||

ಒಲ್ಲದ ಸತಿಯರನು | ತುಡುಕಲು | ಖುಲ್ಲ ದಶಾನನನು ||
ಅಲ್ಲಿ ಭಸಿತವಾಗಲಿ ಎನುತೆನ್ನನು |
ಇಲ್ಲಿ ಮಕರ ರೂಪವ ಧರಿಸೆಂದನು || ||240||

ಮರುಗುತ ಮುನಿಪತಿಯ | ಪಾದದಿ | ಪೊರಳುತ ಸದ್ಗತಿಯ ||
ಕರುಣಿಸು ಕಪಟಿಯು ತಾನಲ್ಲೆನಲದ |
ನರಿತು ಕಟಾಕ್ಷದಿ ಪುನರಪಿ ವಚಿಸಿದ || ||241||

ಶರವಿಹ ಕೊಳನೊಳಗೆ | ನೆಗಳಾ | ಗಿರು ನೀನೀ ಬಳಿಗೆ |
ಚಿರಕಾಲಕ ಸಂಜೀವನಕೋಸ್ಕರ |
ಮರುತಜನೈದುವನೆಂದು ಮುನೀಶ್ವರ || ||242||

**ವಾರ್ಧಕ**

ಶರವನೀಂಟಲು ಬರುವನಾ ಹನುಮನವನ ಪಿಡಿ ||
ದರೆ ಮುರಿವ ಮಕರದೇಹವ ನಿನಗೆ ಬಹುದು ಸುರ |
ತರುಣಿಯಾಕಾರವೆನಲೀಗ ಮಮ ದುರಿತ ಪರಿಹಾರವಾತು ತವ ಕರುಣದಿ ||
ಪರಮ ಋಷಿಶಾಂಡಿಲ್ಯನಾಶ್ರಮವಿದಲ್ಲಿ ಕುಳಿ |
ತಿರುವಾತ ಮುನಿಯಲ್ಲ ಕಾಲನೇಮಿ ನಿಶಾಟ |
ನುರು ಕಪಟ ಎಚ್ಚರಿತು ಪೋಗೆನುತ ಪೇಳ್ದು ಪುಷ್ಪಕವೇರಿ ಸರಿದಳಬಲೆ ||243||

**ರಾಗ ಕಾಂಬೋಧಿ, ಝಂಪೆತಾಳ**

ಶಶಿಮುಖಿಯ ಕಳುಹಿ ಬರಲಚ್ಚರಿಯೊಳೆಂದ ಖಳ ।
ತಷೆಯ ಕಳಪೆಯ ಹನುಮ ನೀನು ॥
ನಿಶಿಯೊಳೈದಲು ನಿನ್ನ ದೈತ್ಯರೀಕ್ಷಿಸದಂತೆ ।
ಬೆಸಸುವೆನು ದಿವ್ಯಮಂತ್ರವನು ॥244॥

ಕಿವಿಯೊಳರುಹುವೆನಿತ್ತ ಬಾರೆನಲು ಶಿಷ್ಯರಾ ।
ದವರು ಗುರುವಿಂಗೆರಗಿ ಬಳಿಕ ॥
ಜವದಿ ಮಂತ್ರೋಪದೇಶವ ಕೊಂಬುದುಚಿತ ನಮಿ ।
ಸುವೆನೆನುತ ಕೀಶಕುಲತಿಲಕ ॥245॥

ಖಳನ ಕಾಲ್ಗಳ ಪಿಡಿದು ನಭಕೆತ್ತಲೇನಿದೇ ।
ನೆಲವೊ ಕಪಿತನದ ಚೇಷ್ಟೆಗಳ ॥
ವಲಿದು ತೋರ್ಪೆಯ ಹಿರಿಯರಲ್ಲಿ ಸಾಕಯ್ಯ ಬಿಡು ।
ಸಲುಗೆ ನಮ್ಮೊಳು ವಿಹಿತವಲ್ಲ ॥246॥

ಎನಲು ಕಪಿತನವಲ್ಲ ಗುರುಪೂಜೆ ಗೈವೆನಿದೊ ।
ಮನವಲಿದು ಕೈಕೊಂಬುದೆನುತ ।
ದನುಜಾಗ್ರಣಿಯನ್ನೆದೆ ನೆಲಕಪ್ಪಳಿಸಿ ಬಿಸುಡ ।
ಲನಿತರೊಳು ಶಿವನ ರೂಪಾಂತ ॥247॥

ಶಿರ ಪಂಚಕದ ಜಟೆಯ ಶಿಖಿ ನೇತ್ರಗಳ ನೀಲ ।
ಗೊರಳಿನ ಗಜಾಂಬನಾಂಬರದ ॥
ಹರಿ ಕುಂಡಲದವರ ಕಪಾಲಮಾಲದ ಶೂಲ ।
ಧರನಾಗಿ ಹನುಮನೊಳುಸುರ್ದ ॥248॥

**ರಾಗ ಮಧ್ಯಮಾವತಿ, ತ್ರಿವುಡೆತಾಳ**

ಏಕೆ ನೀ ಮತಿಗೆಟ್ಟೆ ಪವನಜ ।
ಏಕ ಚಿತ್ತದೊಳೆನ್ನ ಪದವ ವಿ ।
ವೇಕದಿಂ ಭಜಿಸುವ ತಪಸ್ವಿಯ ।
ಕಾಕುತನದಲಿಕೊಂದೆಯ ॥249॥

ಪಾತಕವ ಕೈಕೊಂಡೆ ನೀ ರಘು ।
ನಾಥನಡಿಗಪರಾಧವೆಸಗಿದೆ ।
ವಾತಸುತ ಗುಣಶೀಲನೆನ್ನುವ ।
ಮಾತುಗಳ ನೀಗಿದೆಯಲ ॥250॥

ತರುಣಿಸುತ ಲಕ್ಷ್ಮಣರ ಜೀವವ ।
ಮರಳಿ ಕೊಟ್ಟನು ರಾಮನಲ್ಲಿಗೆ ।
ತೆರಳು ನೀನಾಷಧಿಯ ನೆವದಲಿ ।
ಬರಿದೆ ಬಳಲುದ್ಯಾರಿಗೆ ॥251॥

**ಭಾಮಿನಿ**

ಶಿವನ ರೂಪಿನ ಖಳನ ವಚನಕೆ ।
ಪವನಸುತ ಬೆರಗಾಗಿರಲು ತೀ ।
ರ್ಚವನ ಹರನಲ್ಲವು ದನುಜನೆಂದೆನೆ ನಭೋ ವಚನ ॥
ಅವನ ಕಾಲ್ಪಿಡಿದಪ್ಪಳಿಸಲಾ ।
ದಿವಿಜರಿಪು ಸುಗ್ರೀವ ನಾಗುತ ।
ಸವಿ ನುಡಿಯೊಳುಸುರಿದನದೇಂ ಸಾಹಸಿಯೊ ಕುಟಿಲದಲಿ ॥252॥

**ರಾಗ ಸೌರಾಷ್ಟ್ರ, ಆದಿತಾಳ**

ಏನಿದು ಲಂಕೆಯ ದನುಜರ ತರಿವಂತೆ । ವಾಯುಜಾತ । ಅನು ।
ಮಾನವಿಲ್ಲದೆ ಶಶಿಮೌಳಿಯ ಕೊಂದೆಯ । ವಾಯುಜಾತ ॥
ನೀನಿಂಥ ಬುದ್ಧಿಯ ಗೈದುದಚ್ಚರಿಯಯ್ಯ । ವಾಯುಜಾತ । ನಮ್ಮ ।
ವಾನರಕುಲಕಪಕೀರ್ತಿಯ ತಂದೆಯ । ವಾಯುಜಾತ ॥253॥

ಅಲ್ಲಿ ಲಕ್ಷ್ಮಣನ ಜೀವವ ರಾಮ ಪಡೆದನು । ವಾಯುಜಾತ । ಶೀಘ್ರ ।
ದಲ್ಲಿ ನಾನಿನ್ನ ಕೊಂಡ್ಯೊಯಲು ಬಂದೆನು । ವಾಯುಜಾತ ॥
ನಿಲ್ಲದೆ ಪೋಗಬೇಕಯ್ಯ ಜಾಗ್ರತೆಯೊಳು । ವಾಯುಜಾತ । ಬರ ।
ಲಿಲ್ಲವೆನುತ ರಾಮ ಚಿಂತಿಪಮನದೊಳು । ವಾಯುಜಾತ ॥254॥

ರಾವಣನುಪಟಳ ಬಹಳವಾಗಿರುವದು । ವಾಯುಜಾತ । ಮತ್ತೆ ।
ಕೋವಿದ ಕಪಿಗಳು ಮಿಡುಕತಲಿರುವರು । ವಾಯುಜಾತ ॥
ನಾವಿಲ್ಲಿ ಕುಳಿತರೆ ಕಾರ್ಯಲೇಸಾಗದು । ವಾಯುಜಾತ । ಸಂ ।
ಜೀವನವೇಕೆ ಬಾರಯ್ಯಸಾಯಲಿ ಅದು । ವಾಯುಜಾತ ॥255॥

**ಕಂದ**

ಕಪಟದ ರಕ್ಕಸನೀತಂ ।
ತಪನಾತ್ಮಜನಲ್ಲವೆಂಬುದರಿತಾ ಖಳನಂ ॥
ಕಪಿರಾಜಂ ಮಡುಹಲ್ ಕೌ ।
ಣಪಬಾಂಧವನಾಗಿ ಜರಿದನಾ ಮರುತಜನಂ ॥256॥

**ರಾಗ ಕೇತಾರಗೌಳ, ಝಂಪೆತಾಳ**

ಭಳಿರೆ ಬಹುಧೀರನಹುದಯ್ಯ । ಭೂಲೋಕ ।
ದೊಳು ನಿನ್ನ ಪೋಲ್ವ ಸಹಸಿಯ ಕಾಣೆವಯ್ಯ ॥ ಭಳಿರೆ ॥ ಪಲ್ಲವಿ ॥

ನಿನ್ನ ಜನನಿಯ ಪೂರ್ವಭವನು । ಕೀಶಕುಲ ।
ರನ್ನ ಸುಗ್ರೀವಾಖ್ಯ ನಿನಗೆ ಮಾತುಳನು ॥
ನಿನ್ನನರಸುತಲಿಲ್ಲಿಗವನು । ಬರಲಾತ ।
ನನ್ನು ತರಿದಿರದೆ ಘಳಿಸಿದೆ ಪಾತಕವನು ॥ ಭಳಿರೆ ॥257॥

ಮೆಚ್ಚುವನೆ ರಘುನಾಥನಿದಕೆ । ಇನ್ನೇನ ।
ನುಚ್ಚರಿಪೆ ತವ ಬುದ್ಧಿ ಪ್ರಕಟವಾದುದಕೆ ॥
ಚಚ್ಚರದಿ ಗಮಿಸು ಪಾಳಯಕೆ । ಸೌಮಿತ್ರಿ ।
ಎಚ್ಚರಿತ ನೀ ಬಂದ ಬಳಿಕಲಾಕ್ಷಣಕ ॥ ಭಳಿರೆ ॥258॥

ಎನ್ನೊಡನೆ ಬಾ ಹನುಮ ನೀನು । ಸುಗ್ರೀವ ।
ನನ್ನು ನಾ ಕೊಂದೆನೆನುತಾ ನಪಗೆ ನಾನು ॥
ಬಿನ್ನವಿಸುವೆನು ಖತಿಯೊಳವನು । ಕೊಲ್ಲಲೀ ।
ಗೆನ್ನ ಕೊರಳಿತ್ತು ನಿನ್ನಸುವ ರಕ್ಷಿಪೆನು ॥ ಭಳಿರೆ ॥259॥

**ರಾಗ ಶಂಕರಾಭರಣ ಮಟ್ಟೆತಾಳ**

ಮುದದಿ ಹನುಮ ನುಡಿದ ನಾನು ।
ಮೊದಲು ಮುರಿದ ಮುನಿಯ ಮತ್ತೆ ।
ಮದನೆಹರನ ತರಿದೆ ಬಳಿಕ । ಸದೆದೆ ರವಿಜನಾ ॥
ವಿಧಿಜ ನಿನ್ನ ಮಡುಹಲವರ ।
ವಧಿಸಿದಖಿಳ ದೋಷ ಪೋಪು ।
ದಿದರೊಳೆನ್ನುತ ಕೊಂದನಾಗ । ಭಿದುರಕಾಯನು ॥260॥

ಮಗುಳೆ ಪದ್ಮಿಯಾಗಲದರ ।
ಮಗಕುಲೇಶರೂಪ ಧರಿಸಿ ।
ಸಿಗಿಯೆ ಸರ್ಪನಂತೆ ಬರಲು । ಖಗಪನಂದದಿ ॥
ಚಿಗಿದು ಹನುಮ ಮುರಿಯಲೊಡನೆ ।
ನೆಗೆದು ಮುನ್ನಿನಂದದಲ್ಲಿ ॥

ವಿಗಡ ಕಾಲನೇಮಿ ನುಡಿದ । ನೆಗೆವ ರೋಷದಿ ॥261॥

ಕೀಶ ನಿನಗೆ ನಮ್ಮ ಗೆಲುವೆ ।
ವಾಶಿ ಬೇಡ ನಿನ್ನ ತನುವ ॥
ನಾಶಗೈವೆನೆನಲು ಪೇಳ್ದ । ಆಶುಗಾತ್ಮಜ ॥
ವೇಷಧಾರಿಯ್ಯೆಸೆ ಬದಲು ।
ವೇಷ ಧರಿಸು ಕುಣಿಸಿ ಬಹು ವಿ ।
ಲಾಸಗೊಳುವೆನೆಂದು ತಿವಿದ । ನಾಸುರೇಂದ್ರನ ॥262॥

**ಭಾಮಿನಿ**

ಮುಳಿದು ದೈತ್ಯನೊಳಿನಿತು ಮಾರುತಿ ।
ಹಳಚಲೀಕರ್ಬುರನ ಮುರಿದಾ ।
ಕೊಳದಿ ಬೀಳಿಸಲಳಿವನಿವನೆಂದಿಹುದು ವಿಧಿಲಿಖಿತ ॥
ತಿಳಿಯೆ ನೀನದನೆನುತಲಂಬರ ।
ದೊಳಗೆ ನುಡಿಯಾಗಲು ಮರುತ್ಸುತ ।
ಖಳನ ಪಿಡಿದಪ್ಪಳಿಸಿ ಸಿಗಿದದ್ದಿದ ಸರೋವರದಿ ॥263॥

**ವಾರ್ಧಕ**

ಖಳ ಕಾಲನೇಮಿಯಂ ಕೊಂದು ಪವನಾತ್ಮಜಂ ।
ನಳಿನರಿಪು ಕುಂಭಜರ ನಾಮದ ಮಹೀಧರವ ।
ಚಳಕದಿಂದಡರಲೀಕ್ಷಿಸಿ ಮೊದಲು ಬಂದ ಕಪಿ ಬರುವ ಮತ್ತೀಗಲೆನುತ ॥
ಕಳವಳಿಸುತಾ ಶಿಲಾಚಲದ ಕಾಪಿನ ಭಟರು ।
ತಳುವದೌಷಧಿಗಳಂ ಕಿತ್ತು ಕೊಡಲದ ಬಾಲ ।
ದೊಳಗಿರಿಸಿಕೊಂಡು ರಾಮಸ್ಮರಣೆಯಿಂದಪ್ಪರಿಸಿದಂ ಗಗನಪಥಕೆ ॥264॥

**ರಾಗ ಘಂಟಾರವ, ಝುಂಪೆತಾಳ**

ಇತ್ತ ಸಾಕೇತ ನಗರದೊಳೆಚ್ಚರಿತು ಭರತ ।
ಶತ್ರುಘ್ನ ಮಂತ್ರಿಗಳ ಕರೆದು ಚಿಂತಿಸುತ ॥
ಹತ್ತು ಶಿರದವನು ಲಕ್ಷುಮಣನ ಮಡುಹಿದನೆನುವ ।
ಉತ್ಪಾತವಹ ಕನಸ ಕಂಡೆ ಕೌತುಕವ ॥265॥

ಎನಲು ಶತ್ರುಘ್ನ ದುಃಖಿಸುತೆಂದ ರಾವಣನು ।
ಜನಕಜೆಯನೊಯ್ಯಲವನೊಡನೆ ರಾಘವನು ॥
ವನಚರರು ಸಹ ಸೆಣಸುವಾಗ ಸೌಮಿತ್ರಿಯನು ।
ಅನುವರದಿ ಕೊಂದನಾ ಖಳ ದಶಾನನನು ॥266॥

ಎನಗೆ ಸೂಚನೆ ತೋರಿತದರಿಂದ ಸ್ವಪ್ನದೊಳು ।
ಎನುತ ಮರುಗೆ ಸುಮಂತ್ರನುಡಿದನವದಿರೊಳು ॥
ಮನುಜ ರೂಪಾಂತ ಮಹಿಮರಿಗೆಲ್ಲಿ ಭಯವಿಹುದು ।
ಮನದ ಕಳವಳ ಕನಸಿನೊಳು ಗೋಚರಿಪುದು ॥267॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಧರೆಯ ದಿವಿಜರ ಮುಖದಿ ಶಾಂತಿಯ ।
ವಿರಚಿಸಲು ದುಃಸ್ವಪ್ನ ದೋಷಗ ।
ಳಿರದೆ ಪರಿಹರವೆಂದೆನಲು ಭೂ । ಸುರರನಾಗ ॥268॥

ಕರಸಿ ಶಾಂತಿಯ ಮಾಡುತಿರಲಂ ।
ಒರದೊಳೌಷಧಿ ಸಹಿತಲನಿಲಜ ।
ಬರುತ ನೋಡಿದ ಭರತಶತ್ರು । ಘ್ನರ ನಿಶಿಯಲಿ ॥269॥

ಅಲ್ಲಿರುವ ರಘುನಾಥ ಲಕ್ಷ್ಮಣ ।
ರಿಲ್ಲಿಗೈದಿದರೀ ವಿಚಿತ್ರವ ।
ಸೊಲ್ಲಿಸುವಡರಿ ದೆನುತ ನಭಪಥ । ದಲ್ಲಿ ಬಂದ ॥270॥

ಮರುತಪುತ್ರನ ಮುನ್ನ ಬಾಲದೊ ।
ಳಿರಿಸಿದೌಷಧಿ ಇರದೆ ಮಿನುಲು ।
ಪರಿಕಿಸುತ ಶತ್ರುಘ್ನನೊಡನಾ । ಭರತನೆಂದ ॥271॥

ನೋಡು ಕನಸಿನ ಕೇಡಿನದ್ಭುತ ।
ಮೂಡಿಹುದು ಪುಷ್ಕರದಿಚಾಪವ ।
ನೀಡು ನಾನದನೆಚ್ಚು ಕೆಡಹುವೆ । ರೂಢಿಗೆನಲು ॥272॥

**ಭಾಮಿನಿ**

ಎಲವೊ ರಾಘವ ಕಾರ್ಯಪರನಿವ ।
ಕೊಲದಿರೆನ್ನುವ ಗಗನ ವಚನವ ।
ನೊಲಿದು ಕೇಳುತ ಸುಖಿಗಳೆಮ್ಮವರೆಂದು ಪೊಳಲೊಳಗೆ ॥
ಗೆಲವಿನಿಂದಿರಲರಿತು ಕಪಿಕುಲ ।
ತಿಲಕ ಮುಂದೈತರಲು ಗಜರುತ ।
ಜಲಧಿಮಧ್ಯದಿ ತಡೆದ ಹನುಮನ ಮಾಲ್ಯವಂತ ಖಳ ॥273॥

**ಕಂದ**

ಈ ವಾರಿಧಿಯೊಳ್ ಘನತರ ।
ಠೀವಿಗಳೊಳ್ ತಡೆವದಕ್ಕೆ ನೀನಾರೆಂದಂ ॥
ರಾವಣನಪ್ಪಣಿಯಿಂ ತವ ।
ಜೀವಕೆ ರಿಪು ಮಾಲ್ಯವಂತ ಖಳ ತಾನೆಂದಂ ॥274॥

**ರಾಗ ಸುರುಟಿ ಮಟ್ಟೆತಾಳ**

ಎನಲುಸುರ್ದನು । ದನುಜ ನಿನ್ನನು ॥
ಹನನ ಗೈದು ಪೋಪೆನೆಂದು । ಹರಿಕುಲೇಶನು ॥275॥

ಎಲವೊ ವಾನರ । ಎನ್ನೊಳನುವರ ॥
ಸುಲಭವಲ್ಲೆನುತ್ತ ಸರಳ । ಸುರಿದ ಕರ್ಬುರ ॥276॥

ಕಡುಗಿ ಹನುಮನು । ನುಡಿದ ಖಳರನು ।
ಹೊಡೆವುದೆನಗೆ ಸುಲಭವೆನುತ । ಪಿಡಿದು ತಿವಿದನು ॥277॥

**ವಾರ್ಧಕ**

ಅನಿಲಜನ ಕರಹತಿಗೆ ಪಾತಾಳ ಲೋಕಕಾ ।
ದನುಜಹೊದ್ದಿದನಿತ್ತಲೌಷಧಿಯ ಹೊರೆ ಸಹಿತ ।
ಮಿನುಗುತ್ಕೆದುವ ಕಪಿಯ ಕಿರಣಮಭ್ರದಿ ಹೊಳೆಯೆ ಕಂಡು ರಾಮಂಕೋಪದಿಂ ॥
ಅನುಜನೇಳದ ಮೊದಲುದಯಿಸಿದನೆ ಹಂಸನಾ ।
ತನ ಕೊಲುವೆನೆನನುತ ಚಾಪದ ಧರಿಸಲಾಗ ವಿಧಿ ।
ತನುಜನುಸುರಿದನಿವಂ ಖಗನಲ್ಲ ವಜ್ರಾಂಗ ಬೃಹನೆಂದು ಕೈಮುಗಿದನು ॥278॥

**ಭಾಮಿನಿ**

ಶಿವಶಿವಾ ತಪ್ಪಾಯ್ತೆನುತ ಚಾ ।
ಪವನಿಳುಹಲಾ ಬಳಿಕ ಮಾರುತಿ ।
ಜವದಿ ಬಂದು ಸರೋಜನಾಭವ ಪದಕೆರಗಲೊಡನೆ ।
ಬವರಗಲಿ ಬಂದೆಯ ಸಮೀರನ ।
ಕುವರ ಮುಖ್ಯಪ್ರಾಣ ಬಾರೈ ।
ಭುವನ ಪಾವನಚರಿತ ಬಾರೆಂದನು ರಾಮ ॥279॥

**ರಾಗ ಕಾಂಭೋಜಿ ಝುಂಪೆತಾಳ**

ಸುರವೈರಿಗಳಿಗೆ ನೀ ಸಿಲುಕದಂದದಿ ಪೋಗಿ ।
ಪರಮಸಂಜೀವನೌಷಧಿಯ ॥

ಇರುಳಿನೊಳು ತಂದ ಸಾಹಸವ ಪೊಗಳುವರೆ ಸಾ ।
ಸಿರ ಬಾಯ ಸರ್ಪಗರಿದಯ್ಯ ॥280॥

ಎನೆ ಪಾವಮಾನಿ ತಲೆದೂಗಲು ಸಭಾಂಗಣದೊ ।
ಳನಿಮಿಷರು ನುಡಿದರೀ ಭಟನು ॥
ಮುನಿಪ ಶಾಂಡಿಲ್ಯನಿಂನೆಗಳಾದ ಧಾನ್ಯಮಾ ।
ನಿನಿಯ ಶಾಪವ ಕಳೆದನಿವನು ॥281॥

ಕಾಲನೇಮಿಯ ಮುರಿದು ಮಧುಮಾಲತಿಯು ಸಹಿತ ।
ಮಾಲಸ್ಯಮಿಲ್ಲದೇಳ್ತಂದು ।
ಖೂಳ ಖಳ ಮಾಲ್ಯವಂತನ ಕಡಲ ನಡುವೆ ಪಾ ।
ತಾಳಕದ್ದಿದನೆಂದರಂದು ॥282॥

ಸುರರ ನುಡಿ ಕೇಳ್ದು ರಾಮನುಸುರ್ದಬಳಲಿದೈ ।
ಪಿರಿದಾಗಿ ನಮ್ಮಿಂದಲೆನುತ ॥
ಶರಣನಂ ತಳ್ಕೈಸಲೀ ಮಾತ ನೀವಾಡ ।
ದಿರಿ ನಿಮ್ಮ ಕಿಂಕರನೊಳೆನುತ ॥283॥

ಔಷಧಿಯ ಮುಂದಿರಿಸಲದನಂದು ರಘುನಾಥ ।
ನಾ ಸುಷೇಷಣ ಕರೆದು ನಗುತ ॥
ನೀ ಸುಗುಣ ಲಕ್ಷ್ಮಣ ವಿಭೀಷಣರ ರವಿಜಾದಿ ।
ಕೀಶ ಸೈನ್ಯವನೆಬ್ಬಿಸೆನುತ ॥284॥

**ಭಾಮಿನಿ**

ಆ ಸುಷೇಷಣ ಕರದೊಳಗೆ ನಾ ।
ಲ್ಕೌಷಧಿಯ ತಾ ನಾಯ್ದು ಕೊಡಲು ವಿ ।
ಲಾಸದಿಂ ಲಕ್ಷ್ಮಣನ ಮೂಗಿನೊಳೆರೆಯಲೆಚ್ಚತ್ತ ॥
ಕೀಶ ಸೈನ್ಯವನೆಬ್ಬಿಸಲು ವಾ ।
ರಾಶಿ ಘೋಷದಿ ಸಕಲ ಕಪಿಬಲ ।
ವಾಸುದೇವನ ನುತಿಸುತೀರ್ದುದು ಜಯ ನಮೋ ಎನುತ ॥285॥

**ವಾರ್ಧಕ**

ವನಜನಾಭನ ವದನಪದ್ಮವಿಕಸಿತವ್ಯಾತು ।
ಜನಕ ಜಾತೆಯ ಮನದ ತಿಮಿರ ಮಡುಗಿತು ದಶಾ ।
ಸ್ಯನ ಹತ್ಕುಮುದ ಕಂದಿತಾ ಲಕ್ಷ್ಮಣನ ಜೀವವೆಂಬ ಸೂರ್ಯೋದಯದಲಿ ॥
ದನುಜರಿಪು ಸಂತೋಷ ಶರಧಿಯೊಳ್ ಮುಳುಗಿ ತ ।

ನ್ನನುಜನಂ ಮುದ್ದಿಸಲು ವಾನರವರ್ಾಯುಜಾ ।
ತನ ಪೊಗಳುತಿರೆ ಸುರರು ಸುಮವ ಸೂಸಿದರರ್ಕನಡರಿದಂ ಪುಷ್ಕರವನು ॥286॥

**ರಾಗ ಮುಖಾರಿ, ಏಕತಾಳ**

ಬಂದ ಸಾಕೇತಪುರಕೆ ರಾಮ । ರವಿಕೋಟಿ ಧಾಮ । ಬಂದ ॥ ಪಲ್ಲವಿ ॥

ಕಾಳಗದಲಿ ಖಳ । ಜಾಲವನೀಪರಿ । ಹೇಳಿ ಕುಮಾರಕ । ನಾಳಯಕೈದಿಸಿ ।
ಖೂಳ ರಾವಣನ ಕ । ಪಾಲವನೆಲ್ಲವ । ಸೀಳಿ ಬಿಸುಟು ಲಂ । ಕಾ ಲಕ್ಷ್ಮಿಯ ದಶ ।
ಮೌಳಿಯ ತಮ್ಮಗೆ । ಲೀಲೆಯೊಳೊಲಿಸಿ ಸು । ರಾಳಿ ಹೊಗಳೆ ಸೀ । ತಾ ಲಲನೆಯ ಸ ।
ಮ್ಮೇಳದಿ ಹೊರವಂ । ಟಾ ಲಕ್ಷ್ಮಣ ಕಪಿ । ಪಾಳಯ ಸಹಿತಲಿ । ಮೂಲೋಕಾರ್ಚಿತ । ವ್ಯಾಳಶಯನ ಸಿರಿ । ಲೋಲ ಸನಾತನ ।
ನಾಳಿಕಲೋಚನ । ನೀಲಗಳ ಪ್ರಿಯ ।
ಹೇಳಿರುಚಿರಗುಣ । ಶೀಲ ಪರಮ ಕರು । ಣಾಳು ರಘುಕ್ಷಿತಿ । ಪಾಲ ವಿಲಾಸದಿ ॥287॥

**ಭಾಮಿನಿ**

ಜನನಿಯರ ಸಂತೈಸಿ ಕೈಕಾ ।
ತನುಜ ಸೌಮಿತ್ರಾದಿ ತತ್ಪುರ ।
ಜನರ ಮನ್ನಿಸಿ ವಾಮದೇವ ವಸಿಷ್ಠ ಮೊದಲಾದ ॥
ಮುನಿವರರ ಸಮ್ಮತದಿ ಸಿಂಹಾ ।
ಸನವ ಮುನಿಪತಿ ಪೇಳ್ದ ಲಗ್ನದಿ ।
ಜನಕಜಾವಲ್ಲಭನಡರ್ದ ಸುಮಂಗಲೋತ್ಸವದಿ ॥288॥

**ಆರತಿಹಾಡು**

ಸುರತರುಣಿಯರಾ ಸಮಯದಿ ಭಾ ।
ಸುರ ರತ್ನದ ಹಸೆಯಲಿ ಸೀತಾ ।
ತರುಣೀಮಣಿ ರಾಘವರನು ವಗ್ಗಿಲಿ ।
ಹರುಷದಿ ಕುಳ್ಳಿರಿಸುತ ಸಂತಸದಲಿ ।
ಸುರುಚಿರದಾರತಿಯ ಬೆಳಗಿರಿ ॥ ಶೋಭಾನೆ ॥289॥

ಮೊರೆವ ಮದಂಗ ಸಂಗೀತದೊಳ ।
ಪ್ಸರ ಸತಿಯರ ನಾಟ್ಯದಿ ಭೂಮಿ ।
ಸುರರ ಮಂತ್ರದಲಿ ತರುಣೀಮಣಿಯರು ।
ಸ್ವರವೆತ್ತಿ ಶೋಭಾನವ ಪಾಡುತ ವರ ।
ಕುರುಜಿನಾರತಿಯ ಬೆಳಗಿರೆ ॥ ಶೋಭಾನೆ ॥290॥

ಅಹಿವೇಣಿಗೆ ಅಹಿಶಯನನಿಗೆ ।
ತುಹಿನಕುಲೇಶಗೆ ಅಗಸುತೆಗೆ ।
ಮಹಿಜಾತೆಗೆ ವರ ಸೀತಾನಾಥಗೆ ।
ವಹಿಲದಿ ವನಿತೆಯರ್ರೈತಂದಿದಿರಲಿ ।
ಬಹುವಿಧದಾರತಿಯ ಬೆಳಗಿರೆ ॥ ಶೋಭಾನೆ ॥291॥

**ಭಾಮಿನಿ**

ಕಮಲಜಾಂಬಕನೀ ಪರಿಯ ಸಂ ।
ಭ್ರಮದ ನರನಾಟಕದಿ ಸೀತಾ ।
ರಮಣಿ ಸಹಿತಲಿ ಭರತ ಸೌಮಿತ್ರೇಯರೊಗ್ಗಿನಲಿ ॥
ಅಮಿತ ಸೌಭಾಗ್ಯದಿ ವಿಧಾತಾ ।
ದ್ಯಮರರಿಂನುತಿಗೊಳುತ ಲಕ್ಷ್ಮೀ ।
ರಮಣನಾಳುತಲಿರ್ದನ್ನೈ ಸಾಕೇತ ಪುರವರವ ॥292॥

**ವಾರ್ಧಕ**

ವರ ಶೌನಕಾದಿ ಋಷಿಗಳಿಗೆ ಮುನಿಸೂತನೀ ।
ತೆರದೊಳುಸುರಿದ ರಾಮ ಚರಿತಾಬ್ದಿಯಲ್ಲಿ ಭೂ ।
ಸುರಕುಲಜ ವೆಂಕಟಕುಮಾರ ಪರಮೇಶ್ವರಂ ಶಾಸ್ತ್ರಾರ್ಥಮಂ ತಿಳಿಯದ ॥
ಹರಿಮಹೀಧರಗೇಹ ನುಡಿಸಿದ ಸುವಾಣಿಯಂ ।
ಗುರುವಿನಾಜ್ಞೆಯ ಪಡೆದು ಸಂಜೀವನದ ಕಥೆಯ ।
ನೊರೆದನಿದ ಕೇಳ್ವ ಕಮಲಾಕ್ಷ ಶರಣರಿಗೆ ರಾಘವನೀವನಾನಂದವ ॥293॥

**ಮಂಗಲಪದ**

ಶ್ರೀ ರಾಮಚಂದ್ರಾಯ ಶುಭ ಮಂಗಳಂ । ಮಹಾ ।
ಕಾರುಣ್ಯ ಭವನಾಯ ಜಯ ಮಂಗಳಂ ॥ ಪಲ್ಲವಿ ॥

ಸೀತಾಸ್ಯನಳಿನಸೂರ್ಯಾಯ ಶುಭ ಮಂಗಳಂ ॥
ವಾತಜನಮಿತ್ರಾಯ ಜಯ ಮಂಗಳಂ ॥
ಯಾತುಧಾನವಿನಾಶಾಯ ಶುಭ ಮಂಗಳಂ ।
ಭೂತೇಶಮಿತ್ರಾಯ ಜಯ ಮಂಗಳಂ ॥
ಜಯ ಮಂಗಳಂ । ನಿತ್ಯ ಶುಭ ಮಂಗಳಂ ॥294॥

ಮದ್ಗುರು ಸುಸೇವ್ಯಾಯ ಶುಭ ಮಂಗಳಂ । ಸದಾ ।
ಸದ್ಗುಣ ಸಮುದ್ರಾಯ ಜಯ ಮಂಗಳಂ ॥
ಶುದ್ಧ ಸಾಗರ ಮಂದಿರಾಯ ಶುಭ ಮಂಗಳಂ ।

ಸದ್ಗಾನಲೋಲಾಯ ಜಯ ಮಂಗಳಂ ।
ಜಯ ಮಂಗಳಂ । ನಿತ್ಯ ಶುಭ ಮಂಗಳಂ ॥295॥

ಪದ್ಮಜನುತಾಂಘ್ರಿಯುಗಳಾಯ ಶುಭ ಮಂಗಳಂ ।
ಪದ್ಮೇಶವರದಾಯ ಜಯ ಮಂಗಳಂ ॥
ಪದ್ಮಾಕ್ಷ ಶ್ರೀವೆಂಕಟೇಶಾಯ ಮಂಗಳಂ ।
ಪದ್ಮಾವತೀಶಾಯ ಜಯ ಮಂಗಳಂ ॥
ಜಯ ಮಂಗಳಂ । ನಿತ್ಯ ಶುಭ ಮಂಗಳಂ ॥296॥

**ಪಾರ್ವತಿಮಂಗಲಪದ**

ಕಮಲಾಕ್ಷಿಗೆ ಕರುಣಾಕರೆಗೆ ।
ವಿಮಲ ಚರಿತ್ರೆಗೆ ವಿಧುಮುಖಿಗೆ ।
ಕಮನೀಯ ಮೂರ್ತಿಗೆ ಕಂಬು ಸುಕಂಠೆಗೆ ।
ಭ್ರಮರಾಳಕಿ ಭಾರ್ಗವಿ ಶಿವೆಗೆ ।
ಮಂಗಳಂ ಜಯ ಮಂಗಳಂ ॥297॥

ದುಷ್ಟಸ್ತಂಬಿನಿಯೆನಿಪಳಿಗೆ ।
ಕಷ್ಟದರಿದ್ರವ ಹರಿಪಳಿಗೆ ।
ಸೃಷ್ಟಿಸ್ಥಿತಿಲಯ ಕಾರಣಭೂತೆಗೆ ।
ಇಷ್ಟವಭಕುತರಿಗೀವಳಿಗೆ ॥
ಮಂಗಳಂ ಜಯ ಮಂಗಳಂ ॥298॥

ದೇಶಿಗ ಶಂಕರಗೊಲಿದಳಿಗೆ ।
ಕ್ಲೇಶವಿದೂರವ ಮಾಳ್ಪಳಿಗೆ ।
ವಾಸವಮುಖ್ಯಾಮರರನು ಸಲಹಿದ ।
ಈಶೆಗೆ ಶ್ರೀಬಕುಳಾಂಬಕೆಗೆ ।
ಮಂಗಳಂ ಜಯ । ಮಂಗಳಂ ॥299॥

* * *

# ಯಕ್ಷಗಾನ ಮಕರಾಕ್ಷ ಕಾಳಗ

## ಪಾತ್ರಗಳು

ಶ್ರೀರಾಮ
ಲಕ್ಷ್ಮಣ
ಸುಗ್ರೀವ
ಹನುಮಂತ
ಜಾಂಬವ
ಅಂಗದ
ದ್ವಿವಿದ
ನೀಲ
ಸುಷೇಣ
ವಿಭೀಷಣ
ಮಕರಿ
ಬ್ರಹ್ಮ
ರಾವಣ
ಇಂದ್ರಜಿತು
ಕುಂಭ-ನಿಕುಂಭ
ಯೋಪಾಂಬಕ
ಶ್ರೋಣಿತಾಂಬಕ
ವಜ್ರಜ್ವಾಲೆ
ಕಾಲನೇಮಿ
ದೂತರು
ಮಕರಾಕ್ಷ
ಸಾರಥಿ

**ಶಾರ್ದೂಲವಿಕ್ರೀಡಿತ ವೃತ್ತ**

ಶ್ರೀ ಸೀತಾಸ್ಮಿತವಕ್ತ್ರಪದ್ಮಭ್ರಮರಂ ಬಾಲಾರ್ಕಕೋಟಿ ಪ್ರಭಂ ।
ಕೌಸಲ್ಯಾ ಜಠರಾರ್ಣವೇಂದುರುಚಿರಂ ಸಾಕೇತಸನ್ಮಂದಿರಂ ॥
ಆಶಾಪಾಶವಿನಾಶಶ್ಯಾಮಲವಪುಂ ರಾಜಾಧಿರಾಜಂನುತಂ ।
ವಾಸಿಷ್ಠಾದಿಭಿರರ್ಚಿತಂ ರಘುವರಂ ಧ್ಯಾಯೇತ್ಸದಾಮಾನಸೇ ॥1॥

**ರಾಗ ನಾಟಿ ರೂಪಕತಾಳ**

ಶ್ರೀ ಗಣರಾಜಗಜಾನನ | ನೈಗಮತತಿನುತಸ ದ್ಗುಣ |
ಸಾಗರ ಎಲರುಣಿವಸಿರಸ | ದಾಗಮ ಸರ್ವಜ್ಞ ||
ಪೂಗೋಲಾರಿ ಕುಮಾರಕ | ಯೋಗಿ ಜನಾನತ ಸುಬೆನಕ |
ನೀಗೆಮಗುರೆ ನಿರ್ವಿಘ್ನತೆ | ಬೇಗದಿ ಕವಿ ಪ್ರಜ್ಞ ||
ಜಯಜಯ ಜಯಜಯತು | ||2||

ವರ್ಣಿಸೆ ಶಿವ ಪೆರೆದಲೆಯನು | ಸೊನ್ನೆಯವೆಟ್ಟಂಬಿಲ್ಲನು |
ಬಾನ್ನವಿರನು ಮಿಗಗೈಯ್ಯನು | ಪೆಣ್ಣೊಡೆಯನು ಸತತ ||
ಎಣ್ಮೈಯ್ಯ ಸೊಡವಲಿ ವನೆಯನೆ | ಮನ್ಮಥ ಹರಮೇಣ್‌ಪಿರಿತಿನಿ |
ಯಾಣ್ಮನೆನಿಪ ವಿಶ್ವೇಶ್ವರ | ಮನ್ಮನದೊಳು ನಿಲುಗೆ ||
ಜಯಜಯ ಜಯಜಯತು | ||3||

ಐಕಿಲ್‌ವೆಟ್ಟಣುಗಿಯಪದ | ಕೋಕನದಕ್ಕೆರಗುತಲಜ |
ನಾಕೆಗೆ ಮಣಿದಲರ್ವೊಡೆಯನ | ಶ್ರೀಕರದಿಂ ನಮಿಸಿ ||
ತಾಕುಡುವಿಲ್ಲನ ಮಾತೆಗೆ | ನಾ ಕೈಮುಗಿಯುತ ಹಿರಿಯರ |
ನೇಕ ಸ್ತುತಿಸುತ ಪೇಳುವೆ | ನೀ ಕೃತಿ ಸಂಭ್ರಮದಿ ||
ಜಯಜಯ ಜಯಜಯತು | ||4||

**ಭಾಮಿನಿ**

ಜಾಣಸಮರಧುರೀಣ ಕವಿಸ |
ತ್ರಾಣನುತ ಗೀರ್ವಾಣ ಕವಿ ಪೂ |
ಬಾಣಬಾಣ ಸುರಾದ್ರಿ ವೇದಪುರಾಣ ಬಲ್ ನಿಪುಣ ||
ಊಣಯವು ತುಸಗಾಣದೈನಿ |
ನ್ನಾಣುವಿಕೆಗೇನ್ ಕೇಣ ರಘುಪತಿ |
ಪ್ರಾಣಮಿತ್ರ ಪ್ರವೀಣ ಭುವನ ಪ್ರಾಣಜಂವಂದೇ | ||5||

**ವಾರ್ಧಕ**

ಜಗದ ಕವಿ ಚೂತವನ ಚೈತ್ರ ವಾಲ್ಮೀಕಿಪದ |
ಯುಗಕೆರಗುತಲಿ ನಮೋ ಎಂದು ಬುಧಜನರೊಲ್ಮೆ |
ಮಿಗೆಯಾಂತು ರಾಮಾಯಣಾಖ್ಯ ಚರಿತಾಬ್ಧಿಯೊಳು ಲಂಕೆಯ ಪುನರ್ದಹಿಸುತ ||
ರಘುವೀರ ಮಕರಾಕ್ಷನಂ ಗೆಲ್ದ ಸತ್ಕಥಾ |
ದಿಗಳ ಸಂಗ್ರಹಿಸಿ ಧಾತ್ರಿಯೊಳೆಕ್ಷಗಾನದಿಂ |
ಜಗದುದಯ ಸ್ಥಿತಿಲಯಕ್ಕೊಡೆಯ ವಿಶ್ವೇಶ್ವರನ ವರಕಟಾಕ್ಷದಿ ಪೇಳ್ವೆನು | ||6||

**ರಾಗ ಸೌರಾಷ್ಟ್ರ ತ್ರಿವುಡೇತಾಳ**

ರವಿಕುಲೋದ್ಭವರಾದ ಕುಶಲವ ।
ಕುವರರಾ ವಾಲ್ಮೀಕಿ ಮುನಿಪದ ।
ಕುವಲಯಕ್ಕಭಿನಮಿಸಿ ಕೇಳ್ದರು । ತವಕದಿಂದ । ॥7॥

ಎಲೆ ಮುನೀಶ್ವರತವವಚೋದಿತ ।
ಲಲಿತರಾಮಕಥಾಸುಧೆಯ ಕುಡಿ ।
ದಲಸದೆಮ್ಮಯ ಕರ್ಣಗಳದೇನ್ । ಬಲುರುಚಿಪುದೈ । ॥8॥

ಅದುನಿಮಿತ್ತಾ ರಘುನಪಾಲನು ।
ಪದುಮಭಾನುವಿಭಾವರಿಯೊಳುರಿ ।
ಪದರಿಸಿದನುಗಡೇಕೆ ಲಂಕೆಗೆ । ಯದುಭುತದೊಳು । ॥9॥

ಹತ್ತು ತಲೆಯವಗೈದನೇನನು ।
ಸತ್ತರೆಂತು ನಿಕುಂಭಮುಖ್ಯರು ।
ಮತ್ತ ಮಕರಾಕ್ಷನನು ರಘುವರ । ಕತ್ತರಿಸಿದ । ॥10॥

ಎಂತೆನುವಚಾರಿತ್ರ ಸಾಂಗದಿ ।
ನೀಂತಳುವದುಸಿರೆನಲುಯತಿವರ ।
ಕಂತುಜನಕನನೆನೆದುಸಿರ್ದನು । ಸಂತಸದಲಿ । ॥11॥

**ವಾರ್ಧಕ**

ದಿನನಾಥನನ್ವಯ ಶಿರೋಮಣಿಗಳಿರಕೇಳಿ ।
ವನಜಾಂಬಕಂ ಸುರರ ದೂರಿಂದ ದಶರಥನ ।
ತನುಜನೆಂದೆನಿಸಿ ಕುಶಿಕಜನಮಖಮುದ್ಧರಿಸಿ ಶಿವಧನುವ ಮೇಣ್ ಖಂಡಿಸಿ ॥
ವನರುಹದಳಾಕ್ಷಿ ವೈದೇಹಿಯೊಡವೆರೆದು ಭಗು ।
ಜನಗೆಲ್ದುಪಿತನಾಜ್ಞೆಗನುವಾಗಿ ಸತಿಸಹಿತ ।
ವನವಾಸಕಂ ಪೊಕ್ಕು ಪಂಚವಟಿಗೈದಿ ಶೂರ್ಪನಖಿಯಂ ಭಂಗಗೊಳಿಸಿ । ॥12॥

ವನಿತೆಯಂಗಳೆದಿಂದ್ರಜನ ಮುರಿದು ಸುಗ್ರೀವ ।
ನನುಬೆರದು ಹನುಮನಿಂ ಸತಿಯಿರವ ತಿಳಿದಬ್ಧಿ ।
ಯನು ಕಟ್ಟೆ ಲಂಕೆಯಂ ಮುತ್ತಿ ಕಪಿಭಟರೊಡನೆ ದನುಜರನಿಬರಜೈಸಲು ॥
ಅನುವರಕ್ಕಿದಿರಾದ ಕುಂಭಕರ್ಣಾಸುರಾ ।
ಧ್ಯನಿಮಿಷ ವಿರೋಧಿಗಳ ನುಗ್ಗರಿದನೆಂಬ ಕಥೆ ।
ಯಿನಿತು ಮಂದಟವಾಯ್ತು ಲವನೆಕೇಳ್ ಮೇಲ್ಗಥೆಯನನುಗೊಳಿಪೆನೆನುತಾಗಲು । ॥13॥

ನುಡಿದ ಮುನಿಶಾರ್ದೂಲ ಕೇಳಿರೈ ಕುಶಲವರು ।
ಮಡಿದನನುಜಾತನೆಂಬುದ ಕೇಳ್ದು ದಶಮುಖಂ ।

ಕಡುತಾಪವೆತ್ತಿರಲ್ಕತಿಕಾಯ ಪಿತನೊಡಂಬಡಿಸಿ ಸಂಗರಕೈದುತ ||
ಕಡಿದಾಡಿ ರಾಮಾನುಜನಶರದಿದಿವದತ್ತ |
ನಡೆಯಲಾ ಲಕ್ಷ್ಮುಮಣಂ ಮಿಕ್ಕಸುರರಂಗೆಲ್ದು |
ಪಡೆಸಹಿತ ವಿಜಯೋತ್ಸವದೊಳಣ್ಣ ನೆಡೆಗೈದಿ ಮಣಿದಡರಸಂನೆಗಹುತ | ||14||

**ರಾಗ ಭೈರವಿ ಝಂಪೆತಾಳ**

ಲವನೆ ಕೇಳ್ ಬಳಿಕ ಸಹ | ಭವನಬಿಗಿದಪ್ಪಿಯು |
ತ್ಸವದೊಳಿನ ಸುತಗೆಂದ | ಕುವಲಯದಳಾಕ್ಷ | ||15||

ಧುರದೊಳಿಂದಿನಲಿ ಖಳ | ವರರ ನುಗ್ಗೊತ್ತಿದಿರಿ |
ಸರಿಯಾರು ನಿಮಗೆ ಸುರ | ನರ ಭುಜಂಗರಲಿ | ||16||

ಒರ್ವರಿಂದೋರ್ವರತಿ | ಗರ್ವಿಗಳು ಸಾಹಸರು |
ಸರ್ವಥಾ ಪೊಗಳುವರೆ | ಶರ್ವಗಸದಳವು | ||17||

**ಭಾಮಿನಿ**

ಎನುತರಘುರಾಜೇಂದ್ರ ಚಂದ್ರಮ |
ನನುಜನೊಡನೈತಂದ ಶಿಬಿರಕೆ |
ದಿನಪನೋಲಗ ಹರಿದುದತ್ತಲು ಮೆರೆಯೆನಿಶಿಯೋಗ ||
ಅನಕ ದಶಮುಖ ನಿತ್ತನೋಲಗ |
ವನುಸುರಾರಿಗಳೊಗ್ಗಿನಲಿ ನಿಜ |
ತನಯನತಿಕಾಯಾಂಕನಳಿವನು ಕೇಳ್ದು ಖಳನಾಗ ||18||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಚಿತ್ತದಿ ಹಲವ ಹಂಬಲಿಸುತ್ತ | ಕಾಡ |
ಹತ್ತಿದ ಕುರುಡನೊಲಲೆವುತ್ತ |
ಅತ್ತಿತ್ತ ನೋಡುತ್ತ ಸೊರಗಿದ | ರಣ |
ಕುತ್ತರವೇನೆಂದು ಮರುಗಿದ | ||19||

ಅನುಜನಧುರಕಟ್ಟಿ ಕಳೆದೆನು | ಮತ್ತೆ |
ತನಯನರಾಂತಕ ನಳಿದನು ||
ಘನಪರಾಕ್ರಮಶಾಲಿಯತಿಕಾಯ | ರಣಾ |
ವನಿಯೊಳಿಂದಸ್ತಮಿದಪ್ರೀಯ | ||20||

ಅರಿಗಳುಪೆರ್ಚಿದರೆನ್ನುತ್ತ | ಮನ |
ಕರಗಿರಕ್ಕಸರಾಯನಿರೆಮತ್ತ ||

ಸುರರಾಯಜೀತು ನಡೆತಂದನು | ತಂದೆ |
ಗೆರಗಿ ಪಲ್ಮೊರೆವುತ್ತ ನುಡಿದನು | ||21||

**ರಾಗ ಸೌರಾಷ್ಟ್ರ ತ್ರಿವುಡೇತಾಳ**

ಜನಕ ದುಗುಡವಿದೇಕೆ ನಾಳೆಯೊ
ಳನುವರದಿನರಪ್ಲವಗರನು ಶಾ |
ಕಿನಿಯರಿಂಗೀಯದಿರೆ ಕೇಳ್ ತವ | ತನುಜನಲ್ಲ | ||22||

ಅಸುರ ಪತಿ ಕೇಳ್ ನಿನ್ನ ಸೋಲದ |
ಸಸಿಯಕಿತ್ತಿಕ್ಕುವೆನು ರಾಮನ |
ಬಸುರಿನಲಿ ಬೆಳಗುವೆನು ಲಕ್ಷ್ಮಣ | ನುಸುರ ಜಲದಿ | ||23||

ಮತ್ತೆ ಸುಗ್ರೀವನಕಪಾಲವ |
ನೊತ್ತಿ ಪಾತ್ರೆಯನೆಸಗಿ ಕಪಿಗಳ |
ನೆತ್ತರನು ತುಂಬುವೆನು ಬಿಡು ಪರ | ರಿತ್ತ ವ್ಯಥೆಯ | ||24||

ಅಳಿದ ಧೂಮ್ರಾಕ್ಷಾದಿಸುಭಟಾ |
ವಳಿಯ ನಿನ್ನೋಲಗದಸಭೆಯಲಿ |
ಸುಳಿಸುವೆನು ಕೊಡದಿರೆ ಕತಾಂತನ | ನುಳಿಯಗೊಡೆನು | ||25||

ಅರಿಯೆಯಾ ಮಮಶೌರ್ಯರದೇಳ್ಗೆಯ |
ಧುರದೊಳಿಂದಾ ಸೋತುಬಂದರೆ |
ಉರಿಯಕುಂಡವಪೊಗುವೆ ಕಳುಹೈ | ಭರದೊಳೆನ್ನಾ | ||26||

**ಕಂದ**

ಮಣಿದಿಂತೆಂದಾಖಳ ರಾ |
ವಣನಿಂ ನೇಮವ ಕೊಂಡಡರುತರಥಮಾಗಂ |
ಎಣಿಸುತ ರಾಕ್ಷಸಬುಧ ತಿಂ |
ಥಿಣಿಯೊಡನೈದಿಯೆ ಪೊಕ್ಕುನಿ ಕುಂಭಿಣಿಯೊಳಗಂ | ||27||

**ಭಾಮಿನಿ**

ಉರಿಯನುದರವ ಬಗಿದುತಾ ವಿ |
ಸ್ತರಿಸಿದನು ಕುಂಡದಲಿ ಮಾಂಸದ |
ಚರುವಿನರುಣಜಲಾಜ್ಯ ಧಾರೆಯನರದ ದರ್ಭೆಗಳ ||
ಬೆರಳ ಸಮಿಧೆಯಲಾಭಿಚಾರಾ |

ಧ್ವರವ ನಿರ್ವರ್ತಿಸಿದನಾನಡು ।
ವಿರುಳೊಳಂಚೆಯ ನೇರಿಬಂದಜ ನುಡಿಸಿದನು ಖಳನ । ॥28॥

**ರಾಗ ನವರೋಜು ಏಕತಾಳ**

ಸಾಕುಸಾಕೆಲೆ ಮಗನೆ । ಇನಿ ।
ತ್ಯಾಕೊ ರಾಕ್ಷಸವರನೆ ॥
ಈ ಕಠಿಣಾಧ್ವರ । ವೇಕೈ ಚಿತ್ತಕೆ ।
ಬೇಕಾದುದ ಕೇ । ಳಾ ಕೊಡುವೆನು ಭಲ ॥29॥

ತಿಳಿದೆನು ನಿನ್ನಯ ಪರಿಯ । ಈ
ಕೊಳುಗುಳ ಜೈಸುವ ಬಗೆಯ ॥
ಫಳಿಲನೆಯೋಚಿಸಿ । ತಳುವದೆ ಮಖಮ ।
ನ್ನಿಳೆಯೊಳಗೆಸಗಿದೆ । ಭಳಿರೆ ಪರಾಕ್ರಮ ॥30॥

ಇದಕೊರಥ ಬಲಹಯವ । ಮ ।
ತ್ತಿದಕೋಶರಾಸನಶರವ ॥
ಇದಕೊನಿಧಾನಿಸು । ಒದಗಿದ ಸಂಗರ ।
ವದ ಜೈಸೆನ್ನುತ । ಪದುಮಜ ನಡೆದನು । ॥31॥

**ರಾಗ ಮಾರವಿ ಏಕತಾಳ**

ಕೆರಳುತಮಿಗೆ ಹುಂಕರಿಸುತ ರಾವಣಿ ।
ಪೊರಟು ನಿಕುಂಭಿಣಿಯ ॥
ಧಿರುರೆಶಭಾಸೆಂ । ದರಿಗಳ ಮೊತ್ತವ ।
ತರಿದಾರಘುಪತಿಯ । ॥32॥

ಬಿಂಕವ ನಿಲಿಸುವೆ ಬಿಡೆ ಕೈತಡೆಯಲಿ ।
ಶಂಕರನುಗ್ರದೊಳು ॥
ಶಂಕಿಪೆನೇ ಫಡ ಶಾಕಿನಿಯವರೇನ್ನ ।
ಕಿಂಕರರಿಂದಿನೊಳು । ॥33॥

ತಾತನೊಳಾಡಿದ ಮಾತನು ಸಲಿಸಲಿ ।
ನ್ನೇತರ ಭಯವೆನುತ ।
ಖಾತಿಯೊಳುಬ್ಬಿರಿ ದಾತನುಲಿದಸುರ ।
ವ್ರಾತಬೆದರಲಿತ್ತ । ॥34॥

**ವಾರ್ಧಕ**

ತೋರಿದಂ ಶಕ್ರನಿನಕುಲಗಚ್ಚಮುಕುರಮೆನೆ ।
ಸಾರಿದಂ ಭಾನು ಪೂರ್ವಾಚಲದೊಳಾಗ ಖಳ ।
ಸಾರಿದಂ ಭಟರಿಂಗೆ ಕರ್पೂರ ವೀಳ್ಯಮಂ ಭುವನತ್ರಯಂ ಬೆಚ್ಚಲು ॥
ಏರಿದಂ ಮಣಿರಥವರಿಪುರಾಯಮೋಹರಕೆ ।
ಹಾರಿದಂ ಭೀತಿಯಂ ನಿಜಧನುರ್ನಾದದಿಂ ।
ಮಾರಿದಂ ಕಾಲಾಗ್ನಿಗೆಂಟುಮಡಿ ಕೋಪದಿಂದ್ಯೈತಂದನಿಳೆಯದುರಲು । ॥35॥

**ಭಾಮಿನಿ**

ಉಕ್ಕಿದವು ನದಿ ಧೂಮಕೇತುವಿ ।
ದಿಕ್ಕಿನಲಿ ತೋರಿದವು ನೆಲ ಬೊ ।
ಬ್ಬಿಕ್ಕಿದವು ವರಮಾನಗಂಗಳುಹಾರಲಗ್ನಿಕಣ ॥
ಮುಕ್ಕುರಿಕಿ ಸಿಡಿಲೊದರಿದವು ಕಾ ।
ಲಿಕ್ಕಿದುದು ಕಡುಭೀತಿಪರ ಬಲ ।
ಕಕ್ಕಜದೊಳದಕಂಡು ತರಣಿಜಗೆಂದ ಹರಿಶರಣ । ॥36॥

**ರಾಗ ಸಾರಂಗ ಏಕತಾಳ**

ನೋಡಿದೆಯಾ । ಇನಜ । ನೋಡಿದೆಯಾ ॥ ಪಲ್ಲವಿ ॥
ನೋಡಿದೆಯ ಇನಜಬಪ್ಪ । ಕೇಡಿನಸೂಚನೆಯ ಮುಂದೇ ।
ನ್ಮಾಡಿರಿವರೊಖಳರುನಾವ್ ಮಾ । ತಾಡಲವಧಿಯಿಲ್ಲವಯ್ಯ । ॥37॥

ಏನೇನ ಮಾಡಿದರು ಕೇಳ್ಕೈ । ಹಾನಿಬಲಕಿಂದಾಗದಿರದು ।
ನಾನೇನೆಂಬೆ ಕೇಳದರಿಂದ । ನೀನೀಗ ಪೋಗಿ ।
ಭಾನುವಂಶ ತಿಲಕರಿಗೆ ಸುಯ್ । ಧಾನಕಿಟ್ಟು ಮತ್ತೆ ಧುರಕೆ ।
ಸೈನಿಕರನುನೆರಹಿಬಾರೈ । ನಾನು ಮುಂದಾಗಿ । ॥38॥

ಬರುವ ಭಟನತೇರ ತಡೆದು । ಮರಳಿಚುವೆನುತ್ವಾತಶತಗ ।
ಳಿರವನು ಕಂಡೆನ್ನ ಮನಸು । ಜರುಗಿತಲ್ಲಯ್ಯ ॥
ಇರುಳೊಳು ಶಕ್ರಾರಿ ನಮಗೆ । ಅರಿಯದಂತೆಯಾಭಿಚಾರಾ ।
ಧ್ವರವಗೈದನೇನೊ ಬಪ್ಪ । ಬರವ ನೋಡಯ್ಯ । ॥39॥

**ಕಂದ**

ಎಂದು ವಿಭಿಷಣ ಗದೆಕೊಂ ।
ಡಂದದಿ ಮರಳಿದನತ್ತಲು ಮತ್ತಾ ರವಿಜಂ ॥
ಬಂದಭಿನಮಿಸುತ ಕೌಸಲೆ ।
ನಂದನಗುಸಿರಿದತಾ ಮುಗಿಯುತ ಕರಯುಗಮಂ । ॥40॥

**ರಾಗ ಸುರುಟಿ ಏಕತಾಳ**

ಲಾಲಿಸು ರಾಜೇಂದ್ರ । ದಶರಥ ।
ಬಾಲಸುಗುಣಸಾಂದ್ರ ॥
ಕಾಲಾಂತಕ ಕಮನೀಯಸುವಿಕ್ರಮ ।
ಬಾಲಾರ್ಕಾಮಿತತೇಜಸುಧಾರ್ಮಿಕ । ॥41॥

ಇಂದಿನೊಳಾಜಿಯಲಿ । ಜೈಸುವ ।
ಡಿಂದುಧರನೆ ಬರಲಿ ॥
ಹೊಂದದುಗಡ ಖಳರಾವಣಿಯೊಡನೆನು ।
ತೊಂದರುಹಿದ ಪದಕಮಲಾರಾಧಕ । ॥42॥

ತೆರಳಿದ ಧುರಕತ್ತ । ನಿಮ್ಮೊಳ ।
ಗೊರೆಯಲು ತಾನಿತ್ತ ॥
ಮರಳಿದೆ ನೋಡತಿದುರ್ಧರ ಶಕುನವ ।
ಹರಿನಮ್ಮೆಲ್ಲರ । ಪೊರೆಯೆನುತೆರಗಿದ । ॥43॥

**ಭಾಮಿನಿ**

ಇರಿಸಿದನು ಬಳಿಕವನಿಪತಿ ಹ ।
ತ್ತಿರ ಸಮಾರನಸುತಸುಷೇಣರ ।
ಧುರದ ಮೂಡಣಬಾಗಿಲಲಿ ಶತಬಲಿಗವಾಕ್ಷರನು ॥
ಪರುಠವಿಸಿ ಪಡುವಲಿಗೆ ಪನಸನ ।
ಶರಭ ಮೈಂದದ್ವಿವಿಧರನು ನಿಲಿ ।
ಸಿದರೆ ನೀಲಾಂಗದರು ಸಹ ನಡೆತಂದರಾಹವಕೆ । ॥44॥

**ರಾಗ ಶಂಕರಾಭರಣ ಮಟ್ಟೆತಾಳ**

ಇತ್ತಲನಿತರೊಳಗೆರಣಸಂ ।
ವರ್ತ ಶಿಖಿಯ ಹೊರಳಿಯಂತೆ ।
ಮತ್ತಗಜ ತುರಂಗರಥಿಕ । ಮೊತ್ತದೊಗ್ಗಿಲಿ ॥
ವತ್ರವೈರಿಜಿತನು ಬರೆಕಾ ।
ಣುತ್ತಲಿದಿರು ಹಾದುಶರಣ ।
ಎತ್ತ ಪೋಪೆ ಘಡ ಎನುತ್ತ । ಮತ್ತೆ ಭರದಲಿ । ॥45॥

ಕುಲಕುಠಾರ ಭಳಿರೆಬಂದು ।
ಸಿಲುಕಿದೆಯಲ ನಿಂದು ನಿನ್ನ ।
ತಲೆಯ ಕಾವ ದೈವ ವಾವ । ನೆಲೊ ಮದಾಂಧನೆ ।

ತೊಲಗು ಫಡಫಡೆನುತ ಸರಳ |
ನಿಲದೆ ತುಡುಕಿದನು ಮಹಾಂತ |
ಬಲ ವಿಭೀಷಣಾಂಕ ನದರ | ಕಲಕಿಗಮ್ಮನೆ | ||46||

ದುರುಳ ಕೇಳು ಬಾಯ್ಗೆ ಬಂದ |
ತೆರದಿ ಬಗುಳ್ದರೆಲವೊ ನಿನ್ನ |
ಪರಿಯನರಿಯ ದವನೆ ತಾನು | ಧಿರುರೆ ಮೆಚ್ಚಿದೆ ||
ಕರದ ಬಲುಹ ನೋಡೆನುತ್ತ |
ಲೆರಗಿದಡೆ ಗದಾಗ್ರದಿಂದ |
ಭರಕೆತಪ್ಪಿ ಮಗುಳೆ ಜರೆದ ನರಿಯಲೇನಿದೆ | ||47||

ಶಿರವ ತರಿವೆನೆನಲು ದ್ರೋಹಿ |
ಕಿರಯ ಜನಕನಾದೆ ಸತ್ವ |
ದಿರವ ನೋಡೆನುತ್ತ ತನ್ನೊ | ಳರಿದು ನಿಮಿಷಕೆ ||
ಮರುತ ಬಾಣವೆಚ್ಚಡಾಗ |
ತೆರಳಿಚಿತು ಮೇಣಭಕತ್ತ |
ತಿರುಗಿದನು ಶಕ್ರಾರಿಯಿತ್ತ | ಲರಿಸಮೂಹಕೆ | ||48||

**ಕಂದ**

ಅರಿಭಟನಂಗವ ಕಾಣುತ |
ತರಣಿಜನತಿಶಯ ಕೋಪದಿಕಿಡಿಯಿಡುತಾಗಳ್ |
ಭರದಿಂದಾನೆಯ ಶಿರಕಂ |
ಹರಿತಾಲಂಘಿಪ ವೊಲುಧಿಂ ಕಿಟ್ಟವಗೆಂದಂ | ||49||

**ರಾಗ ಘಂಟಾರವ ಅಷ್ಟತಾಳ**

ಎಲ್ಲಿಗೈದುವೆ ನಿಲ್ಲೆಲೊ ಶಕ್ರಾರಿ ||
ಮಲ್ಲಸಾಹಸದಂದಗಳನೆ |
ನ್ನಲ್ಲಿ ತೋರಿಸೊ ತೋರಿಸೊ | ||50||

ತೋರಲೇನುಂಟುಫಡ ಕೋತಿನಿಲು ನಿನ್ನ ||
ಭಾರಿನೆತ್ತರ ಹೀರಿಸುವೆರಣ |
ಮಾರಿಯರೊಳಿಂದೆಲವೆಲ | ||51||

ಸಾಕು ಸಾಕೆಲೊ ಬಗುಳದಿರೆನುತಲಿ ||
ಪಾಕಶಾಸನ ಮೆಚ್ಚುವೋಲು |
ದ್ರೇಕಬಲಖಳಗೆರಗಿದ | ||52||

**ವಾರ್ಧಕ**

ನೊರಜುರುಬೆಗಮರಾದ್ರಿ ಜರಿವುದೇ ತರಣಿಜನ ।
ಕರಹತಿಗೆ ಯಳುಕುವನೆ ಶಕ್ರಾರಿಗಣಿಸದದ ।
ಕುರುಳಿಚಿದನಿನಜನಂ ಬಲುಬಾಣಘಾತದಿಂದೇನೆಂಬೆ ನಾಕ್ಷಣದೊಳು ॥
ಹರಿಮೊಮ್ಮನಿದಿರಾಗಲಡಗೆಡಹಿಮೇಣ್ ಬಂದ ।
ಹರಿಜನಗಳಜ ವಷಭರಂ ಜೈಸಿಮುಂದೆರಥ ।
ಹರಿಸಿದಂ ಹರಿಯೆಡೆಗೆ ಹರಿಸುತಂಕಂಡಾಗ ಹರಿವೈರಿಯಂ ಖತಿಯೊಳು । ॥53॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬಾರೆಲವೊರಕ್ಕಸನಪುಂಸನೆ ।
ತೋರುನಿನ್ನಯವಿಕ್ರಮಾದ್ರಿಯ ।
ದೀರ ಮರುತಕುಮಾರ ನೆನ್ನೊಳು । ಸಾರುಮತ್ತೆ । ॥54॥

ಇನಿಬರೊಳು ನೀ ಪ್ರೌಢನೆಂಬುದ ।
ನೆನೆಸಿಕೊಂಡಿಹೆನಾದರಿಂ ದಿನ ।
ದಿನದೊಳೆನ್ನನು ತಡೆದುಬಾಳ್ವೆಯ । ಹನುಮ ನೀನು । ॥55॥

ಆದಡಿದಕೋ ಎನುತ ಮುಷ್ಟಿಯೊ ।
ಳಾದುರಾಗ್ರಹಗೆರಗೆತಪ್ಪಿಸಿ ।
ಮೇದಿನಿಯೊಳಜಶರದಿ ಹನುಮನಕಾದನಂದು । ॥56॥

**ಕಂದ**

ನಿಂತುಮಹೋಗ್ರದಿತಾ ಮುಂ ।
ದಂತರಿಸುತಬೃಹಶಕ್ರಾರಿಯನಡಹಾಯ್ದುಂ ॥
ಅಂತಕಹರನೋಲೂರ್ಮಿಳೆ ।
ಕಾಂತಂ ಕೂರ್ಗಣೆಸುರಿಸುತ ತೊಲತೊಲಗೆಂದಂ । ॥57॥

**ರಾಗ ಭೈರವಿ ಅಷ್ಟತಾಳ**

ಎಲೆ ಮೇಘನಾದಕೇಳು । ಉಳ್ಳಡೆಭುಜ ।
ಬಲವ ತೋರದೆ ಯೆನ್ನೊಳು ॥
ಚಲಿಸುವೆ ಮುಂದೆಲ್ಲಿ । ನಿಲ್ಲೆಂದು ತೆಗೆದೆಚ್ಚ ।
ಬಲುತರ ಶರಗಳನು । ॥58॥

ಅತಿರಥನಂಬುಗಳ । ಕತ್ತರಿಸುತ್ತ ।
ಲತಿಪರಾಕ್ರಮಿ ದುರುಳ ॥

ಅತಿಕಾಯನನು ಗೆದ್ದು । ನ್ನತಿಯನ್ನು ತೋರ್ದರೆ ।
ಹತಿಸ ದಿರ್ಪನೆ ಪೋಗೆಲಾ ॥59॥

ಬಗುಳದಿರೇಲವೊ ಹೇಡಿ । ಮಾಯಕಮಂತ್ರಾ ।
ದಿಗಳೊಳು ನೀ ಪ್ರೌಢಿ ॥
ಬಗೆಯೆಲ್ಲಬಲ್ಲೆ ಪ । ನ್ನಗ ಪಾಶದೊಳು ಗೆದ್ದ ।
ಬಗೆತೋರೆಂದೆಚ್ಚಡಾಗ । ॥60॥

**ಭಾಮಿನಿ**

ಬಿದ್ದೊಡನೆ ಲಯ ರುದ್ರನುಗ್ರವ ।
ಕದ್ದನೆನೆ ಭುಗುಭುಗಿಸೆಕ್ರೋಧದೊ ।
ಳೆದ್ದುಖಳಲಕ್ಷುಮಣನಮುಳುಗಿಸಿ ಬಾಣವಾರ್ಧಿಯಲಿ ॥
ಹೊದ್ದಿಸಲು ಕಂಡೊಡನೆ ಖತಿತಳೆ ।
ದೊದ್ದು ಬಿಲುಝೇವಡೆದು ರಘುಪತಿ ।
ಬದ್ಧ ಶರಜಾಲಗಳ ಕೆದರಿದಸಿಹ್ಮನಾದದಲಿ । ॥61॥

**ರಾಗ ಮಾರವಿ ಏಕತಾಳ**

ಬಲ್ಲಿದನಾದೆಯ ರಕ್ಕಸ ಕುನ್ನಿ ನ ।
ಮ್ಮೆಲ್ಲರ ಮಾರ್ಬಲವ ॥
ಚಲ್ಲ ಬಡಿದು ಮೇಣೆಲ್ಲಿಗೆ ಗಮನವೊ ।
ನಿಲ್ಲೆನೆ ಕೇಳ್ದಾಗ । ॥62॥

ಪೂತುರೆ ರಾಘವ ಘಾತಿಸಿದೀಬಲ ।
ದಾತರ ಬೆಂಬಲಕೆ ।
ತಾತವೆ ಕಳುಹವೆ ನಿನ್ನನು ಬಿಡುನಡೆ ।
ಸೀತೆಯ ಬರಿಬಯಕೆ । ॥63॥

ಮಘವಾರಿಯೆ ಬಲುಬಗುಳುವ ನಾಲಿಗೆ ।
ಸಿಗಿದು ಮೊದಲೆ ನಿನ್ನ ॥
ಮುಗಿಸಿ ನಿನ್ನಯ್ಯನ ಮಗಮುದಗಂಧಿಯ ।
ತೆಗೆವೆನು ನೋಡೆನ್ನ । ॥64॥

ಧಿರುರೆ ಪರಾಕ್ರಮ ನಹೆಯೆನುತಂಬಿನ ।
ಸುರಿಮಳೆ ಸುರಿಯಲ್ಕೆ ॥
ತರಿದೆಚ್ಚನು ರಘುವರ ಹುಂಕರಿಸುತ ।
ಧರಣಿಗಗನಮುಸುಕೆ । ॥65॥

**ಭಾಮಿನಿ**

ಖಚರಿಯರ ಹೂಮುಡಿಗೆ ಸುರಪನ ।
ಶಚಿಯಮುಖಸಾರಸಕೆ ರುದ್ರನ ।
ಕಚದ ಗಂಗಾಂಬುಧಿಗೆ ಸರಸಿಜಭವನ ಗದ್ದುಗೆಗೆ ॥
ಪ್ರಚುರದಿಗ್ವನಿತಾಬ್ಜಕುಟ್ಮಳ ।
ಕುಚಗಳಿಗೆ ಮೊಗಚುವ ಶಿಳೀಮುಖ ।
ನಿಚಯವೆನಲಡರಿದವುರಾಮ ಶಿಳೀಮುಖಗಳವಗೆ । ॥66॥

**ರಾಗ ಭೈರವಿ ತ್ರಿವುಡೆತಾಳ**

ತರಳ ಕೇಳೇನೆಂಬೆನಂದಿನ ।
ಧುರವನೆಯಸಂರಂಭವನುಖಳ ।
ನೊರೆದತನ್ನೊಳುತಾನೆ ರಾಮನ ॥
ಧುರವ ಜೈಸಲಸಾಧ್ಯ ನಾನಿಂ ।
ತಿರಲು ಹರಿಯದೆನುತ್ತ ಕುಂಭಿಣಿ ।
ಪರಮ ದೇವತೆಯಂಘ್ರಿನೆನೆದಜ ।
ಕರುಣಿಸಿದ ಶರತೆಗೆದು ಮೈಗೊ ।
ಟ್ಟಿರದೆ ಮಾಯವ ಕವಿಸುತೆಸೆದನ । ದೇನನೆಂಬೆ । ॥67॥

ಎಲೆಲೆ ಕವಿತಿವಿಕೊಲ್ಲು ಕಡಿಯೆಂ ।
ದುಲಿದುಬಿದ್ದ ಬಲೌಘ ಸಹ ರಘು ।
ಕುಲಜ ನಿದಿರೊಳು ಸುಳಿಯೆ ಕಾಣು ।
ತ್ತಲಘುಮತಿ ಶಕ್ರಾರಿಸುಳಿಸಿದ ।
ನೆಲರಮಿಗೆ ಕಲ್ಮಳೆಯಸಿಡಿಲನು ।
ಬಲುಭಟರ ತನ್ನಂತ ರಕ್ಕಸ ।
ಬಲವನಯುತಾಯುತ ಕವಿಸಿಕ ।
ಗ್ಗೊಲೆಗೆತೊಡಗಿದನಜ ಮಹಾಸ್ತ್ರದಿ ॥ ಏನೆನೆಂಬೆ । ॥68॥

ತಾಗಿದನುಟಗರಾಗಿ ಕರ್ಬೊಗೆ ।
ಯಾಗಿಕವಿದನು ಹೊದನಾಹರಿ ।
ಯಾಗಿ ಹೊರಳಿದನದ್ರಿ ಶರಧಿಗ
ಳಾಗಿಸೆಣಸಿದಕಾಲಭೈರವ ।
ನಾಗಿ ಜಟ್ಟಿಗನಾಗಿ ವಿಷದುರಿ ।
ಯಾಗಿ ಬೆಚ್ಚಿಸಿಗೆಲಿದನನಿಬರ ।
ಮೇಗೆರಾಘವ ಲಕ್ಷ್ಮಣಾಂಕನ ।
ತಾಗಿ ಖಳದಿಗ್ವಿಜಯಿಯಾದನ । ದೇನನೆಂಬೆ । ॥69॥

**ಭಾಮಿನಿ**

ಬಳಿಕಶಕ್ರಾರಾತಿ ರಥದಿಂ ।
ದಿಳಿದುರಣ ಶ್ರೀಗೆರಗಿ ಶೋಣಿತ ।
ದೊಳು ಲಲಾಟಕೆ ತಿಲಕವಿರಿಸುತ ಹರುಷ ಪೂರದಲಿ ॥
ಹೊಳಲಿಗಭಿಮುಖ ನಾದನಾದಶ ।
ಗಳನು ವಾರ್ತೆಯ ಕೇಳಿಬಲು ಹೆ ।
ಕ್ಕಳದ ತೋಷದೊಳಾತ್ಮ ಜನನಿದಿರ್ಗೊಂಡನುಚಿತದಲಿ । ॥70॥

**ರಾಗ ಕಾಂಭೋಜಿ ಝಂಪೆತಾಳ**

ಖಗವಂಶಜರುಕೇಳಿ ಮಗನ ಶಿರಮುಂಡಾಡಿ ।
ನಗುತ ದಶಕಂಠ ಮನ್ನಿಸುತ ॥
ಮಗನೆ ನೀ ಕೊಟ್ಟ ಭಾಷೆಗೆ ಹಾನಿಯಿಲ್ಲದತಿ ।
ಬಿಗಿದಭಲ ನಡೆಸಿದೆಯಜಾತ । ॥71॥

ನಿನ್ನಂಥ ವಿಕ್ರಮಸಂಪನ್ನರೇಳ್ ಭುವನದೊಳ ।
ಗೆಣ್ಣಿಸಿದರುಂಟೆ ಮರಿಯಾನೆ ॥
ನಿನ್ನಂದದಾಪ್ತಸುತರಿನ್ನಾವರೆನಗೆನುತ ।
ಮನ್ನಿಸುತ ಮಿಗೆ ಕಳುಹಿತಾನೆ । ॥72॥

**ವಾರ್ಧಕ**

ದರಹಸಿತಮುಖದಿಂದ ಧುರಕಣವಭರದಿಂದ ।
ಪರಿವೇಷ್ಠಿಸಲು ಪೊರಟವರ ಪುಷ್ಪಕದೊಳ ಧಟ ।
ಬರುತಕಡಿ ಖಂಡದಿಂ ರುಂಡದಿಂ ಮುಂಡದಿಂ ದುರುದುರಿಪನೆತ್ತರಿಂದ ॥
ಪರಿಪರಿಯೊಳಾಡುತ್ತ ಮರುಳ್ಗಳಿರೆಪಾಡುತ್ತ ।
ತರಳನಂ ಪೊಗಳುತ್ತ ದುರುಳಬರೆಮುಂದತ್ತ ।
ಉರಿಕೆಂಡಕಾರುತ್ತ ನೆರೆಸುದರ್ಶನವತ್ತಮೊರೆದಟ್ಟೆ ಖಳನುಬಂದ । ॥73॥

**ಭಾಮಿನಿ**

ತೆರಳಿಖಳ ನಿಜಪುರಕೆ ಸಂತಸ ।
ಶರಧಿಯೊಳ ಗೋಲಾಡುತಿರ್ದನು ।
ತರುಣಕೇಳನಿತರೊಳಗಿತ್ತಲು ವರವಿಭೀಷಣನು ॥
ಮರುತಪಾಶವ ಹರಿದು ಶ್ರೀ ನರ ।
ಹರಿಯ ಪರಿಭವನೆನೆದು ಸಂಗರ ।
ಧರಣಿಯಲಿ ನಡೆತಂದು ಹನುಮನ ಕಂಡು ನುಡಿಸಿದನು । ॥74॥

**ರಾಗ ಕೇದಾರಗೌಳ ಅಷ್ಟತಾಳ**

ಏನಯ್ಯರಿಪು ಮದದಾನೆಯಂಕುಶ ಪವ ।
ಮಾನಸಂಭವನಿನಗೆ ॥
ಈನಕ್ತಂಚರನೆಚ್ಚ । ಬಾಣವೆಗ್ಗಳವೆಪೇಳ್ ।
ನೀನೊಂದನಿರದೆನಗೆ । ॥75॥

ನೆನೆಹರಿಹರಸುರೇಶ್ವರರಿತ್ತ ವರಗಳ ।
ದನುಜನಜಾಸ್ತ್ರವನು ॥
ಹನನಮಾಡೆನ್ನಯಮರಿಯಾನೆ ಕಂಡೆಯ ।
ಮನುವಂಶ ತಿಲಕರನ್ನು । ॥76॥

ಹುಡುಕ ಬೇಕಯ್ಯನಾವ್ ತಡೆಯದೆನ್ನಯಮನ ।
ನಡುಕ ಹೆಚ್ಚಿತುಹನುಮ ॥
ಮಡಪರಾಕ್ರಮಿಯೆನಲೊಡನೆದ್ದುರಿಪುಶರ ।
ಪುಡಿಗೈದಸಮರಭೀಮ । ॥77॥

**ಕಂದ**

ಮತ್ತವರೀರ್ವರು ಧುರದೊಳು ।
ಸತ್ತವರಂಕಂಡತಿ ಮರುಗುತಬೀಳುತ್ತಂ ॥
ತತ್ತರಗೊಳ್ಳುತಲೇಳುತ ।
ನೆತ್ತರೊಳ್ ಬಳಲುತ ಬಂದಜಜನಕಾಣುತ್ತಂ । ॥78॥

**ರಾಗ ಸಾಂಗತ್ಯ ರೂಪಕತಾಳ**

ವರವಿಭೀಷಣ ಹರಿಸ್ಮರಣೆಮಾಡುತ್ತ ನಿಂ ।
ದಿರಲರಿತನಿತರೊಳಾತ ॥
ತರಣೀವಂಶಲಲಾಮನಿರತಸೇವಕಬಂದೈ ।
ಮರುತಜ ಬಾರೆಂದಡೀತ । ॥79॥

ಜೀಯಕೇಳಾನುವಿಭೀಷಣನಹೆನಲ್ಲ ॥
ವಾಯುಸಂಭವನೆನೆ ಕೇಳ್ದು ॥
ನೋಯದೈತಂದೆಯಾ ಮಗನೆಕಂಡೆಯ
ರಘು । ರಾಯ ಸೇವಕನ ನೀನಿಂದು । ॥80॥

ಮಗನೆ ಕೇಳುವನೊಬ್ಬನಿರ್ದಡೆಮ್ಮಯಸೈನ್ಯ ।
ಖಗವಂಶೋದ್ಭವರು ಮುಂತಾದ ।

ವಿಗಡ ವಿಕ್ರಮರಸುವಿಹುದೆಂದು ತಿಳಿಯೆನೆ ।
ಮಿಗೆಮಾತ ಶರಣನಿಂತೆಂದ । ||81||

ಪುಸಿಯಲ್ಲ ನೋಡಿ ಕೈಮುಗಿದು ನಿಂದಿಹ ಬೇಗ ।
ಬೆಸಸಿರಿಹನುಮಂತನಿಂದ ||
ಬಿಸಜಾಕ್ಷಾದಿಗಳಭಿವದ್ಧಿಯನೆನೆ ನೋಡಿ ।
ಶ್ವಸನಸಂಭವನೊಡನೆಂದ । ||82||

ಅಣುಗನೀನುಳಿದೆ ಭಾಗ್ಯದಕಣಿರಾಮಗಿ ।
ನ್ನಣುಮಾತ್ರ ಬಂದಸೋಲದೊಳು ||
ಎಣಿಸಬೇಡೆನ್ನನೀಕ್ಷಣಕೊದು ಮಾದಿನ ।
ಮಣಿವಂಶಜರ ತೋರಿರೆನಲು । ||83||

**ಕಂದ**

ಹನುಮವಿಭೀಷಣರಿಬ್ಬರು ।
ವನಜೋದ್ಭವನ ಕುಮಾರನ ನೆರೆಪೋಗಳುತ್ತಾಗಳ್ ||
ಇನವಂಶಾಬುಧಿಚಂದ್ರಮ ।
ನನುವಿಂ ಸೇರಿದರುನ್ನತಖೇದದೊಳಾಗಳ್ । ||84||

**ಭಾಮಿನಿ**

ದೇವದೇವನ ಸಕಲದೇವರ ।
ದೇವ ಚಕ್ರೇಶ್ವರನ ನಾನಾ ।
ಜೀವನಾಟಕ ಸೂತ್ರಧಾರಚರಚರಾತ್ಮಕನ ||
ಪಾವಕಾನಿಲ ಪಥ್ವಿಪುಷ್ಕರ ।
ಜೀವನಾಖಿಲತತ್ವಮಯ ಮಾ ।
ಯಾ ವಿನೋದವಕಂಡು ಮರುಗಿದರೇನ ಬಣ್ಣಿಪೆನಾ ||85||

**ರಾಗ ನೀಲಾಂಬರಿ ರೂಪಕತಾಳ**

ಹಾ ರಘುರಾಜ ಶಿರೋಮಣಿ । ವೈರಿತಮೋದ್ಧತ ದಿನಮಣಿ ।
ಯಾರೊಡನೀಪರಿ ಮುನಿಸುವಿ । ಚಾರಿಸುನಮ್ಮರಸು । || ಪಲ್ಲವಿ ||

ತಾಟಕಿ ಮುಖ್ಯರ ಮೊದಲಲಿ । ನಾಟಿದೆ ಎತ್ತಿದೆಯಾಶಶಿ ।
ಜೂಟನಧನುವನು ಪಥದಲಿ । ದಾಟುತ ಭಾರ್ಗವನ ||
ಓಟವ ಕೆಡಿಸಿದೆ ಮಿಗೆಖರ । ನಾಟವ ಜೈಸಿದೆ ಗಡಕಪಿ ।
ರಾಟನ ಮುರಿದನಿಗೇನು ನಿ । ಶಾಟನ ಶರಕಠಿಣ । ||86||

ನರನಾಟಕದ ವಿನೋದದ । ಪರಿಯಿನಿತೇತಕೆ ಲಕ್ಷುಮಾ ।
ಯರಸಜಗನ್ಮಯಪರತರ । ಪರಮಾನಂದಕರ ॥
ಪರಿಕಿಸಲಾದಿ ಮಧ್ಯಾಂತರ । ವಿರದವನಹೆ ನೀ ನಮಗೀ ।
ತೆರಕೈತೊರೆದರೆ ಬೇರಾರ್ । ಪೊರೆವರು ನುಡಿಮಧುರ । ॥87॥

**ಭಾಮಿನಿ**

ಕೊಟ್ಟ ಭಾಷೆಯಮರೆದು ತನ್ನನು ।
ಬಿಟ್ಟು ವೈಕುಂಠಕ್ಕೆಪೋಪರೆ ।
ಹುಟ್ಟು ಒಂದೇ ನಿನಗೆ ಸೀತಾಕಾಂತನುಡಿಯೆಂದ ॥
ಬಿಟ್ಟರಿನ್ನಾನಾರ ಸೇರುವೆ ।
ನಟ್ಟಡವಿಯಲಿಹೊಲಬನಳಿದಗೆ ।
ಬಟ್ಟೆಯಾವುದೆನುತ್ತಶರಣಾಭರಣನಡೆಗೆಡೆದ । ॥88॥

**ಕಂದ**

ಇಂತು ಪ್ರಲಾಪಿಸಿ ಬಳಿಕ ವ ।
ರುಂ ತಡೆಯದೆ ಧೊಪ್ಪನೆ ಕೆಡೆದಿರದೇಳುತ್ತಂ ॥
ನಿಂತಿಹಹನುಮನ ಕಾಣುತ ।
ಮುಂತೆವಿರಿಂಚಿ ಕುಮಾರಕ ತಾನೆಂದನಣಂ । ॥89॥

**ರಾಗ ನೀಲಾಂಬರಿ ತ್ರಿವುಡೆತಾಳ**

ಹರಿಕುಲಾಂಬುಧಿ ಪೂರ್ಣ ಶುಭ್ರಾಂಶು । ಶೌರ್ಯೋ ।
ದ್ಧರ ಸಾಧು ಗುಣಮಣಿ ಲಾಲಿಸು ॥
ತರಣಿಕುಲೇಂದ್ರರ ಪರಿಭವ । ವಿದ ।
ನೆರೆಕಂಡೆಯಾವಾತಸಂಭವ । ॥90॥

ಅಂತರಂಗವನಾರೊಡನೆ ಪೇಳ್ವೆ । ವಾರ್ಧಿ ।
ಯಂತರಿಸಿದಕೇನಾಯ್ತೆ ಬಾಳ್ವೆ ॥
ಅಂತಕಾಂತಕನಿಲ್ಲದಿಹಪೀಠ । ಮೆರೆ ।
ವಂತಾಯಿತಲ್ಲಿಂದು ನಮ್ಮಾಟ । ॥91॥

ಅದರಿಂದ ನಿನ್ನೊಡನೀಗೊಂದ । ಪೇಳ್ವೆ ।
ನಿದರಂತೆಮ್ಮಯ ಬಲವನುಹಿಂದಾ ॥
ಮದಮುಖ ಭುಜಗಾಸ್ತ್ರದೊಳುಗೆದ್ದ । ಡಾಗ ।
ಚದುರಸುಷೇಣಪೇಳಿದಮದ್ದ । ॥92॥

**ವಾರ್ಧಕ**

ಮರುತಭವ ಕೇಳು ಸಂಧ್ಯಾಕರಣಿಮೊದಲಾದ ।
ಮೆರೆವನಾಲ್ಕೌಷಧಿಗಳಿಹುದುಚಂದ್ರದ್ರೋಣ ।
ಗಿರಿಯೊಳಲ್ಲಿಗೆ ದಾರಿಯರಿವೈಪುರಾಂತಕನ ಗಿರಿಯಿಂದೀಶಾನ್ಯಮಾಗಿ ॥
ತೆರಳು ಪಥದೊಳಗೇಳು ಶರಧಿ ದ್ವೀಪಗಳೇಳು ।
ತ್ತರಿಸೆತದ್ಗಿರಿ ತೋರ್ಪುದೈಯುದಯದೊಳಗೆ ನೀ ।
ಬರಬೇಕುಗಳಿಗೆಯೇಳಲ್ಲದಿಲ್ಲೆಲೆಮಗನೆ ಮರಿಯಾನೆಯೆಂದಡೆರಗಿ । ॥93॥

**ರಾಗ ಮಾರವಿ ಏಕತಾಳ**

ನುಡಿದನು ಮುಖ್ಯಪ್ರಾಣನು ಕೇಳೈ ।
ಜಡಜಜನಂದನನೆ ॥
ನುಡಿಗಳನೆಲ್ಲವ ನಡೆಸುವೆ ನಾನೆ ।
ಮೃಡೆಯನಪದದಾಣೆ । ॥94॥

ತರಹೇಳಿದರೆ ಕತಾಂತನ ಶಕ್ರನ ।
ಸರಸಿಜ ಸಂಭವನ ॥
ಪುರಸಂಹಾರನ ಸೂರ್ಯನಶೇಷನ ।
ತರುವೆನಿದೇನು ಘನ । ॥95॥

ತಡೆಯೆಚತುರ್ದಶಭುವನವತಿಕ್ಕುವೆ ।
ಗಡಣಿಸೆನಣುವಿಂಗೆ ॥
ಕಡುಹನಿರೀಕ್ಷಿಸುತಪ್ಪಿದೆನಾದರೆ ।
ನುಡಿದಪೆನಾನಿನಗೆ । ॥96॥

**ಭಾಮಿನಿ**

ಕೇಳು ಜಾಂಬವ ಭಾಷೆಯನು ಈ ।
ರೇಳು ಸಾಗರವಿರಲಿಮತ್ತೀ ।
ರೇಳು ದ್ವೀಪಗಳಿರಲಿ ದಾಟುವೆನವನು ಬಗೆಗೊಳದೆ ॥
ಕೀಳುವೆನು ಪರಮೌಷಧವ ತಡೆ ।
ನೇಳುಗಳಿಗೆಗೆ ಮುನ್ನತರದಿರೆ ।
ಬೀಳುವೆನುಶಿಖಿಕುಂಡಕೆಂದುದ್ಯೋಗಪರನಾದ । ॥97॥

**ವಾರ್ಧಕ**

ಗುರುಗಣಪಸಿರಿಶಕ್ರಹರದುರ್ಗೆಗುಹಧರಣಿ ।
ಯರಿಗೆರಗಿ ಮಾತಪಿತ ಶ್ರೀರಾಮಜಾಂಬವಾ ।
ದ್ಯರನುತಿಸಿ ಹಾರಿದಂ ಹರಿಗರುಡರಂ ಮಿಕ್ಕಿ ಗಮನದೊಳು ಹನುಮಂತನು ॥
ಭರಕೆ ಬ್ರಹ್ಮಾಂಡ ಘಟವಲ್ಲಾಡಿತಾಗ ದಶ ।
ಶಿರನರಿದುಖಳಕಾಲನೇಮಿಯಂಬರಿಸುತ್ತಾ ।
ಧುರದ ವತ್ತಾಂತಮಂ ಪೇಳಿ ಮಗುಳಾತನೋಡನರುಹಿದಂ ಯಿತೆರದೊಳು । ॥೨೮॥

**ರಾಗ ತೋಡಿ ಅಷ್ಟತಾಳ**

ಕೇಳು ಕಾಲನೇಮಿಧುರದಿ । ಕಾಳುಗೆಡದ ಭಟರಿಗಿರದಿಂ ।
ದೇಳಿಸಬೇಕೆಂಬ ಚಿತ್ತದಿ ॥
ಗಾಳಿಯಾತ್ಮಜಾತದ್ರೋಣ । ಶೈಲಕಾಗಿ ಪೋಪನದಕೊ ।
ಕೀಳಿತಾರದರಮಹೌಷಧಿ । ॥೨೨॥

ಪೊಗಿನೀನಾಗಿರಿಯ ಮೂಲ । ಕಾಗಿ ಬೇಗದಿಂದ ನಿನ್ನೊ ।
ಳಾಗುವ ಪ್ರಯತ್ನಸಾಧಿಸಿ ॥
ಹಾಗುಹೀಗು ಕಪಿಯಕಾರ್ಯ । ವಾಗಗೊಡಲುಬೇಡವೆನಗಿ ।
ದೀಗನಿನ್ನುಪಕಾರಸಾಹಸಿ । ॥100॥

ಈಸುಕಜ್ಜಕಾಗಿಯೆನ್ನ । ನೀಸುಘನತೆ ಮಾಳ್ಪುದೇತ ।
ಕಾಸುರೇಂದ್ರ ನಿನ್ನಚಿತ್ತದ ॥
ಆಸರವನು ತೀರಿಸುವೆಕೇ । ಳಾ ಸಮಾರಸುತನ ತಡೆದು ।
ಬಾಸೆಬೇರೇಕೆಂದು ಎರಗಿದ । ॥101॥

**ವಾರ್ಧಕ**

ಜಡಜಸಖಕುಲಜಾತಕೇಳ್ ಕಾಲನೇಮಿಖಳ ।
ನಡೆದುಂ ಮನೋವೇಗದಿಂದಾಮಹೀಧರದ ।
ಬುಡದಿ ನಿರ್ಮಿಸಿದನ್ನೆ ನಂದನವಕೈತವದಿ ಖಗ ಮಗವಮೇಣ್ಗೈದನು ॥
ಜಡಜ ಕೈರವಕೋಕ ಚೂತಮಾದಳಬದರಿ ।
ವಿಡಿದತಿಯತರುಗುಲ್ಮಸುಮಗಳಂ ರಚಿಸುತಲೆ ।
ಜಡೆತಲೆ ವಿಭೂತಿಜಪಸರವಾಂತು ಸಾಕ್ಷಾತು ಖುಷಿಯಾಗಿ ತಾನಿರ್ದನು । ॥102॥

**ಕಂದ**

ಆಗೆ ಮರುತ್ಸುತನನ್ನೆಗ ।
ಮಾಗಸದೊಳು ಬರುತಲಿ ಕಂಡ್ವನಮಂ ॥

ಸಾಗಿದುಕೌಳಿಕಮರಿಯದೆ |
ಬೇಗದೊಳೆರಕದಿ ಮಣಿದೆಂದನು ಮುನಿಪತಿಗಂ | ||103||

**ರಾಗ ಸಾಂಗತ್ಯ ರೂಪಕತಾಳ**

ಪರಮ ಸಂಯಮಿ ನಿನ್ನ ಚರಣನೋಡಿದರಿಂದ |
ನೆರೆಧನ್ಯನಾದೆನಾನಿಂದು ||
ಇರದತಿದೂರದಿಂ ಬರುತಲಿಬಳಲಿದೆ |
ನರಿದೊಂದುಕೊಳ ತೋರುನಿಂದು | ||104||

**ರಾಗ ಕೇದಾರಗೌಳ ಅಷ್ಟತಾಳ**

ಎನೆಮೊಗವೆತ್ತಿ ಕೌಳಿಕ ಮುನಿನುಡಿದಕೇಳ್ |
ವನಚರೋತ್ತಮನೆ ನಿನ್ನ ||
ಮನದಿಷ್ಟವೀವೆ ನೀನೆಲ್ಲಿಂದ ಬಂದೇನು |
ಘನ ಕಾರ್ಯವೆಲ್ಲಿ ಜಾಣ | ||105||

**ರಾಗ ಸಾಂಗತ್ಯ ರೂಪಕತಾಳ**

ಪರಮ ಮುನೀಂದ್ರಕೇಳ್ ತರಣಿವಂಶಜ ರಾಮ |
ದುರುಳರೊಳಿಂದಿನಾಹವದಿ |
ನೆರೆಮೂರ್ಛಿಸಿದರಿಂದ ವರಸಂಜೀವನಿಗಾಗಿ |
ಮರುತಜನಾ ಬಂದೆ ಭರದಿ | ||106||

**ರಾಗ ಕೇದಾರಗೌಳ ಅಷ್ಟತಾಳ**

ಲೇಸುಲೇಸಲೆ ವೀರನೀಪುರ ಹೊರಟೆಂದಿ |
ಗೇಸುದಿವಸವಾಯಿತು |
ಆ ಸಮರದೊಳಳಿದವರು ಜೀವಿಸಲುಂಟೆ |
ನೀ ಸುಡು ಬಯಲಭ್ರಾಂತು | ||107||

**ರಾಗ ಸಾಂಗತ್ಯ ರೂಪಕತಾಳ**

ಅವಧರಿಸಲೆಮುನಿ ದಿವಸವೆಷ್ಟೇಕೆಜಾಂ |
ಬವರ ನುಳಿದು ಘಟೀಗರ್ಧ |
ಸವೆದುದ್ದೈತಡವಾತು ತವೆತೋರು ಸರಸಿಯ |
ಜವದೊಳೆನಲು ಬೆರಗಾದ | ||108||

**ವಾರ್ಧಕ**

ತತ್ತ ಬಲವಿಲ್ಲದಡೆ ವೈರಿಗಳ ಜೈಸುವಡೆ ।
ಮತ್ತೆ ಬಲಯುತರ ಬೆರೆದೊತ್ತ ಬೇಕಹಿತರೆಂ ।
ದುತ್ತಮರ ವಚನೀಯ ಮುಂಟಲಾಮದರಿಂದಲೀ ಸರಸಿಯಂ ಪೊಗಿಸಲು ॥
ಸತ್ತಲ್ಲದಿರನಿವಂನೆಗಳಿಂದಲೆನುತ ಖಳ ।
ಮತ್ತವನ ಕರತಂದು ವಿಷ ಸರೋವರ ಕಿಳಿಸೆ ।
ಚಿತ್ತದಾನಂದದಿಂ ಕಾಲ್ಮೊಗವ ತೊಳೆದಿರದೆ ನೀರ್ಗುಡಿಯಲನುವಾದನು । ॥109॥

**ಭಾಮಿನಿ**

ಬೇಡ ಕುಡಿಯದಿರನಿಲಜನೆ ವಿಷ ।
ಕೂಡಿದೀಜಲವಿದರೊಳಿಪ್ಪುದು ।
ಕೇಡು ಬಯಸಲು ಮೊಸಳೆಯೆಂದೆನಲಾಗಲಶರೀರ ॥
ಗಾಢ ಬಳಲಿಕೆಯಿಂದಲದ ಬಗೆ ।
ಗೂಡದಾಕೊಳಕಿಳಿದು ಸೇವಿಸೆ ।
ನೋಡಿ ನುಂಗಿತು ಮಕರಿವಾತೋದ್ಭವನಸಶರೀರ ॥110॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಆಗ ಖಳನಿದು ಸಮಯವೆನುತಲಿ ।
ಬೇಗ ಕಿತ್ತೊಂದದ್ರಿಯನು ಕೊಳ ।
ಕಾಗಿ ಮುಚ್ಚಿದನೆಲರುಸಹತುಸ । ಹೋಗದಂತೆ ॥111॥

ಇತ್ತಲಾ ಪವಮಾನ ಸಂಭವ ।
ನೊತ್ತಿ ಮಕರಿಯ ಸುತ್ತಿ ಬಾಲದಿ ।
ತತ್ತಳಕೆಮಿಗೆ ಬಂದ ಶಿಖರವ । ಪೊತ್ತು ಕರದಿ । ॥112॥

ಅನಿತರೊಳಗಾನಕ್ರ ರೂಪವ ।
ತನುವ ಕಳಚುತ ನಿರ್ಜರಾಂಗನೆ ।
ಯನಿಲಜನಪದಕೆರಗಿ ಪೇಳಿದ । ಳನುನಯದೊಳು । ॥113॥

**ರಾಗ ಸಾಂಗತ್ಯ ಮಟ್ಟೆತಾಳ**

ಜಯನಮೋಕಪಾಲವಾಲನೆ । ಆಂಜನೇಯ ।
ಭಯನಿವಾರರಿಪುಕುಠಾರನೆ ॥
ಪ್ರಿಯನಶಾಪದಿಂದನಿನ್ನನೆ । ಕಾದಿರ್ಪೆಯುಗ ।
ತ್ರಯದೊಳಿಂದು ದೊರೆದೆ ಜೀಯನೆ ॥114॥

ಪತಿತಳಾದೆ ಮಕರಿ ಜನ್ಮದಿ । ನಾನಿಂದು ಪೋಪೆ ।
ಗತಿಗೆ ನೋಡು ಮೆರೆವ ವಿಪಿನದಿ ॥
ಯತಿಪನಂತೆ ಕುಳಿತು ತೋಷದಿ । ಇರುವವನವನೆ ।
ದಿತಿಜಕಾಲನೇಮಿಕತಕದಿ ॥115॥

**ಕಂದ**

ತಕ್ಕುದನೆಸಗವಗೆನುತದಿ ।
ವಕ್ಕವಳ್ಳೈದಿದಡಿತ್ತಲು ಮರುತಜನಾಗಳ್ ।
ಮುಕ್ಕಣ್ಣನ ವೋಲ್ ಬರೆ ಕಂ ।
ಡಕ್ಕಜದಿಂ ತಾಪಸನಾಗಿರ್ದವನೆಂದಂ । ॥116॥

**ರಾಗ ಶಂಕರಾಭರಣ ಮಟ್ಟೆತಾಳ**

ಮರುತ ಜಾತಸಹಸಿನೀನೆ ।
ನರಿಯದವನೆ ಗುರುದಕ್ಷಿಣೆಯ ।
ತೆರುವೆಯಾ ಮಂತ್ರೋಪದೇಶ । ಒರೆವೆಕೇಳಯ್ಯ । ॥117॥

ತೆರುವೆ ನಿನಗೆ ಗುರುದಕ್ಷಿಣೆಯ ।
ನಿರದೆ ಮೊದಲು ಮತ್ತೆ ಮಂತ್ರ ।
ಒರೆಯ ಬಹುದು ಕುನ್ನಿಕೇಳೆಂ । ದೆರಗಲದ್ರಿಯ । ॥118॥

ತಡೆದು ದನುಜ ನಿಜವ ತಾಳಿ ।
ಘಡ ಸಮರ್ಥನಹೆಯೊ ಕೋತಿ ।
ಕೆಡಹಿನಿನ್ನ ಭೂತತತಿಗೆ । ಕೊಡುವೆನೆನ್ನುತಾ । ॥119॥

ದಡಿಗ ನಿಟ್ಟ ಹತಿಯ ತಡೆದು ।
ನುಡಿದನೆಲೆ ಮದಾಂಧ ನೋಡು ।
ಕಡುಹನೆಂದು ಮುಷ್ಟಿಯಿಂದ । ಝಡಿಯೆಗಜರುತ । ॥120॥

**ವಾರ್ಧಕ**

ಮರುತಜನ ಕರಹತಿಗೆಯುಳಿದರಾರ್ ಮುನ್ನಖಳ ।
ಸರಿದನಮರಾವತಿಗೆ ಮೇಣಂಜನೇಯಕಂ ।
ಡುರೆನಗೋತ್ತಮ ವಡರಿದಿವ್ಯೌಷಧಿಗಳ ತಾ ಕಾಣದತಿ ಬೆರಗಾಗುತ ॥
ಉರಿಮಸಗಿಯೋಚಿಸಿದ ಜಾಂಬವನ ಕಣ್ಣಮುಂ ।
ದಿರಿಸುವೆನು ಗಿರಿಯನಿದನವನರಸಿಕೊಳಲೆಂದು ।
ನೆರೆ ವಾಲಧಿಯ ಸುತ್ತಿ ಕಿತ್ತದ್ರಿಯಂ ಪೊತ್ತು ತಿರುಗಿದಂ ಜವದೊಳಿತ್ತ । ॥121॥

**ಶರಷಟ್ಪದಿ**

ಮಿಗಧರ ಕಾಂತದಿ ।
ಮಿಗೆವಾತಜನಾ ।
ಮಿಗಧರಗೆಸಗಿದ ಮಣಿರಥವೋ ॥
ಬಗೆಯೇನೆನೆ ಹರಿ ।
ಮಗನುನ್ನತದಾ ।
ನಗ ಪೊತ್ತೈದಿದನೇನ್ ಬಲುವೋ । ॥122॥

**ರಾಗ ಸಾಂಗತ್ಯ ರೂಪಕತಾಳ**

ಇತ್ತಲನ್ನೆಗಹರಿ ಶರಣ ಜಾಂಬವಗೆಂದ ।
ಹೊತ್ತೆಷ್ಟಾಯಿತು ನಮ್ಮ ಹನುಮ ॥
ಮತ್ತೇಳುಶರಧಿ ದಾಟುವನೆ ತದ್ಗಿರಿಯನ್ನು ।
ಹತ್ತುವನೇನ್ನೈ ನಿಸ್ಸೀಮ । ॥123॥

ತರುವನೆ ಮದ್ದನೆಂದರೆ ಜಾಂಬವಂತನು ।
ಒರೆದನು ಕೇಳ್ ವಿಭೀಷಣನೆ ॥
ಶರಧಿ ಬತ್ತಲಿ ಸುರ ಗಿರಿಜರಿಯಲಿಧರೆ ।
ಗುರುಳಲಾದಿತ್ಯನು ತಾನೆ । ॥124॥

ತಂದಲ್ಲದಿರಮದ್ದನದು ತಿಳಿಯದೆ ಹೋದೆ ।
ನಿಂದಪನಲ್ಲ ಬಲ್ಪಿನೊಳು ॥
ಸಾಂದ್ರನಗೋತ್ತಮವನೆ ತಹನೆನುತ ವ ।
ರಂದು ಮಾತಾಡುತ್ತಲಿರಲು । ॥125 ॥

ಆ ಹಂಸೋದಯದಂತೆ ಹೊಳೆವ ತದ್ಗಿರಿ ಸಹಿ ।
ತಾಹರೀಶ್ವರಬರೆ ಕಂಡು ॥
ಹೋ ಹೋ ಮಾತೇಕೆ ಬಂದನು ನೋಡಿ ಹನುಮನೆಂ ।
ದಾಹರಿ ಶರಣತಾನಂದು । ॥126॥

**ವಾರ್ಧಕ**

ಒರೆಯಲಬ್ಜಜಜಾತ ದರಹಸಿತ ಮುಖದಿಂದ ।
ಮರುತ ಜನ ಕೊಂಡಾಡಿ ಧುರವನೆಯಹೊಗದಂತೆ ।
ಶರಣನಂ ಕಳುಹಿ ನಿಲಿಸುತ ಶರಧಿ ಸೇತುವಿನ ದಕ್ಷಿಣದಿಮಿಗೆಗಮಿಸುತ ॥
ಬರಸೆಳೆದು ಬಿಗಿಯಪ್ಪಿ ಬಳಲಿದೈಹನುಮ ಎಂ ।

ದಿರದೆ ತದ್ಗಿರಿಯಡರಿಯೌಷಧಿಯ ಕೊಂಡು ನಿಜ |
ಕರದೊಳರಚುತ ಜಗನ್ಮಯನ ನಾಸಾಗ್ರದೊಳು ಹಿಂಡಿದಂಸಲೆ ಪೊಗಳುತ | ||127||

**ಭಾಮಿನಿ**

ಸ್ಥಾಣುಸಖನಲಿದೆದ್ದನೈಕಡು |
ಜಾಣನಲ್ಲಾ ಜಾಂಬವನು ವರ |
ಕ್ಷೋಣಿಜೆಯ ಮೈದುನನನೆತ್ತಿದನಮಲವೈದ್ಯದೊಳು ||
ಕಾಣುತಜಭವರೊಸಗೆ ಪೂಮಳೆ |
ಕ್ಷೋಣಿಮಂಡಲ ತುಂಬಿತಾಗಳು |
ಮೇಣು ತಾರಾಪಿತನ ಘ್ರಾಣದೊಳೆರೆಯೆ ಮದ್ದುಗಳು | ||128||

**ರಾಗ ಮಾರವಿ ಏಕತಾಳ**

ಆಗ ಸುಷಿಪ್ತಿಯ | ನೀಗುತಲೇಳ್ವವೊ | ಲಾಗ ಸುಷೇಣಕನು ||
ಬೇಗನೆ ನಿಂದಿರ | ಲಾಗಜಸುತನನು | ವಾಗಿದನರುಹಿದನು | ||129||

ಬಾರೆನ್ನಯ ಗುಣ  | ವಾರಿಧಿ ಮದ್ದಿದ | ವೀರ ನೀ ಕೈಗೊಂಡು ||
ಈ ರಸೆಗೊರಗಿದ | ಸೂರಿಯ ಜಾದ್ಯರ | ಭೋರನೆ ನೆಗಹೆಂದು | ||130||

ಒರೆದಡೆಯವ ನಾ | ಪರಿವಿರಚಿಸಲೆ | ದ್ದರು ಮಡಿದೆಲ್ಲವರು ||
ಶರಧಿಯ ವೋಲ | ಬ್ಬರಿಸಲುಸುಮಮಳೆ | ಸುರಿದರು ಅನಿಮಿಷರು | ||131||

**ಕಂದ**

ಅನಿತರೊಳಾಗಿರಿಯಿಂದಂ |
ಘನಮೂಲಿಕೆಯ ಸುಷೇಣನು ಸಂವರಿಸಲ್ಕಂ ||
ಹನುಮನ ಹಸ್ತದೊಳಗಮೇ |
ಐನುವಿಂಮಾಯಕವಾಯ್ತೆ ಯಚ್ಚರಿಯೊಳಗಂ | ||132||

**ಭಾಮಿನಿ**

ಇದು ಕಣಾನರನಾಟಕ ದರೂ |
ಪದವಿನೋದವಲಾಜಗನ್ಮಯ |
ನಧಟಿಗಾವನು ಸಾಟಿಯಾನಿಶಿಯಂತ್ಯ ಜಾವದೊಳು ||
ಕದನಗಲಿ ಹನುಮಾದಿಕಪಿಭಟ |
ರೊದಗಿ ಪೊಗಳಿದರುಡು ಸಮೂಹದ |
ವಿಧುವಿನೋಲೆಸೆದಿರ್ದ ರಘುರಾಜೇಂದ್ರ ಚಂದ್ರಮನು | ||133||

**ರಾಗ ಕಾಂಭೋಜಿ ಝಂಪೆತಾಳ**

ರಾಜಕುವರರು ಕೇಳಿ ರಾಜೇಂದ್ರ ರಾಘವನು ।
ರಾಜಿಸುವ ಕಪಿಗಳಾಳ್ತನದ ॥
ರಾಜಸಕೆ ತಲೆದೂಗಿ ರಾಜತೇಜದೊಳುದಿನ ।
ರಾಜನಣುಗನ ನೋಡಿನುಡಿದ ॥134॥

ಧುರಧುರಂಧರ ಕೇಳು ಧುರುಳಖಳರುಬ್ಬಟೆಯು ।
ಬಿರುಸಾಯಿತೇನಯ್ಯ ಸಹಸಿ ॥
ಅರುಹುದುರ್ಜನರ ನಿಷ್ಠುರದಿಂದನಾಹವದ ।
ಪರಿಯದೇನೆನಲೆಂದ ನಮಿಸಿ । ॥135॥

ರಾಯರಾಘವ ಜಗದ ಮಾಯಗಾರರತೆರದಿ ।
ಜೀಯನೀನಾಡುವದೆದೇವಾ ॥
ಮಾಯಕದಿ ಮೇಣುವಿಧಿಸಾಯಕದೊಳಿಂದ್ರಾರಿ ।
ಬೀಯಮಾಡಿದನ್ನೈಸೆಬಲವ । ॥136॥

ಮಡಪರಾಕ್ರಮಿಹನುಮ ಜಡಜಸುತಸುತನಮತ ।
ವಿಡಿದ್ಯೆದಿಸಂಜೀವನವನು ॥
ಕಡುಸಾಹಸದಿ ತಂದು ತೆಯದಿನಿಬರಪ್ರಾಣ ।
ವಿಡಿದನವನೆನೆಕೇಳ್ದು ನಪನು । ॥137॥

ವಾಯುಜನಕಂಡುಪುಳ ಕಾಯಮಾನಿತನಾಗಿ ।
ಪ್ರೀಯದಲಿ ಬಿಗಿದಪ್ಪಿಕೊಳುತ ॥
ಬಾಯ ಶೋನಿಧಿಯಹಿತರಾಯಮಸ್ತಕಶೂಲ ।
ಬಾಯೆನ್ನಮರಿಯಾನೆಯಿತ್ತ । ॥138॥

ನೀನಿರ್ದರಿಂದ ಜಯಮಾನಿನಿಯವದನಾಬ್ಜ ।
ತಾನೆದರ್ಶನವೆಮಗೆ ಮುಂದೆ ॥
ಏನಿತ್ತಡೆಯು ನೆರೆಯದ್ಯೆನಿನ್ನಸಾಹಸಕೆ ।
ತಾನಜನವರವಿತ್ತೆನಂದೆ । ॥139॥

ಎಂದೆನುತ ಶ್ರೀ ರಾಮ । ಚಂದ್ರ ಕೊಂಡಾಡುತಿರೆ ।
ಗಂಧವಾಹಕುಮಾರನೆಂದ ॥
ತಂದೆಮಕ್ಕಳಪೊಗಳೆ ಚಂದವೇದೇವಮಾ ।
ತೊಂದಲಾಲಿಸೆನುತ್ತ ಮಣಿದ । ॥140॥

**ರಾಗ ಘಂಟಾರವ ರೂಪಕತಾಳ**

ವನರುಹಾಂಬಕ । ಮನುಜಪಾಲಕ ।
ಚಿನುಮಯಾತ್ಮಕ । ದನುಜ ಘಾತಕ ॥
ಮನುಜ ನಾಟಕ । ತನಗಳೇತಳೆ ।
ಇನಿತು ಪೊಗಳುವೆ । ನಿನಗೆ ಸಹಜವೆ । ॥141॥

ನಿಗಮತತಿಗಳಾ । ನಿನ್ನಪದಗಳ ।
ಬಗೆಯನರಿಯವು । ಪೊಗಳಿದಣಿಯವು ॥
ರಘುಕುಲೇಂದ್ರನೀ । ನಿಂತುಪೇಳಲು ।
ನಗದೆ ಲೋಕವು । ಪೇಳ್ವಿವೇಕವು । ॥142॥

ಮುಂದೆ ಮಾಡುವ । ಕಾರ್ಯದಂದವ ।
ತಂದೆ ನೇಮಿಸೊ । ಮಾತಲಾಲಿಸೊ ॥
ಎಂದು ಚರಣದಿ । ಎರಗೆ ತೋಷದಿ ।
ನಿಂದು ರಘುಜನು । ಸಹಜಗೆಂದನು । ॥143॥

**ರಾಗ ಕೇದಾರಗೌಳ ಅಷ್ಟತಾಳ**

ಅನುಜಕೇಳಿದೆಯ ವಾನರಕುಲಕಮಲಾರ್ಕ ।
ಹನುಮನಾಡಿದ ಮಾತನು ॥
ಬಿನುಗುರಕ್ಕಸರಾಳು ತನಕೇನಕಂಡೆಯೆಂ ।
ದೆನಲೆಂದ ಲಕ್ಷ್ಮಣನು । ॥144॥

ಎನ್ನ ಕೇಳುವೆಯಸಂಪನ್ನ ಪರಾಕ್ರಮ ।
ನಿನ್ನೊಳವರಿಯದೇನೈ ॥
ಕುನ್ನಿಗಳುಬ್ಬಟೆ ನಿನ್ನೊಳುಸಲುವುದೆ ।
ಚೆನ್ನಿಗಬಿಡುಶಾಭಾಸೈ । ॥145॥

ಧುರ ಪರಾಕ್ರಮನೆ ಕೇಳರಿತೆನ್ನ ಸಹಜಾತ ।
ದುರುಳರಿಗಜಮುಖ್ಯರು ।
ಪರಿಪರಿಶಕ್ತಿಗಳಿರದಿತ್ತು ನಮ್ಮಸಂ ।
ಗರಕೆನಿಷ್ಠುರರಹರು । ॥146॥

ಬರಿದೆವನೌಕಸ ವರರದಾನವರಿಂದ ।
ನೆರೆಹಣಿಸಲು ಫಲವೆ ।
ಅರೆನಿಮಿಷದಲಿ ಸಂ । ಹರಿಪೆನಾಜಾಂಡಮ ।
ತ್ತಿರದಾಗ ವಿರಚಿಸುವೆ । ॥147॥

ರುಂಡಮಾಲೆಯನಾಂತುಕೊಂಡವಬರಲಿ ಯು |
ದ್ದಂಡಮಾಯಗಳಿರಲಿ ||
ಖಂಡಿಸದಿರೆಕಿಡಿಕೆಂಡವಾಗಲಿಲೋಕ |
ತಂಡಗಳೆನುತಪೇಳಿ | ||148||

**ಭಾಮಿನಿ**

ಗಂಡುಗಲಿರಘುಸೂನು ತಾಕೈ |
ಗೊಂಡುಲಕ್ಷ್ಮಣನಿಂದನಿಜ ಕೋ |
ದಂಡವನುಝೇಗೈದು ಕಮಲಭವಾಂಡಬಿರಿವಂತೆ ||
ಚಂಡಭುಜಬಲನಹಿತಮದವೇ |
ತಂಡಕಂಠೀರವನು ವಡಬಪ್ರ |
ಚಂಡ ಶಕ್ತಿಯನೆತ್ತಿ ಹುಂಕರಿಸುತ್ತಲಿಂತೆಂದ | ||149||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮಡವಿರಿಂಚಾದಿಗಳು ಶಕ್ತಿಯ |
ಕೊಡುವವರು ಗಡಕೊಂಬವರು ಸುರ |
ರೊಡೆಯಜಿತುದಶಕಂಠ ಮುಖ್ಯರು |
ಗಡಯಿದೇನು | ||150||

ತಾನದಾರೆಂದರಿಯರೈನಾ |
ವೇನು ಸದರವೊಶಿವಶಿವಾಖಳ |
ರೇನಬಗೆದರೊಚಿತ್ತದಲಿ ಸು |
ಮ್ಮಾನದಿಂದ ||151||

ತಡೆಯಲೈ ವಿಕ್ರಮರು ತನ್ನಯ |
ಕಡುಹನಿದನೆಂದೆನುತಸಿಂಜಿನಿ |
ತೊಡಿಸಿಧನುಝೇಂಕರಿಸಿಶಕ್ತಿಯ |
ಬಿಡುವ ಭರದಿ | ||152||

ಒಡನೆ ಕಾಲ್ದೆಗೆಯಲ್ಕೆ ಭೂತಳ |
ನಡುಗಿತಹಿಪತಿ ಕುಸಿದ ಸುರಗಿರಿ |
ತಡೆಯದೊಲೆದುದು ನಾವೆಯಂದದಿ |
ನುಡಿಯಲೇನು | ||153||

ಉರಿಯಕರಡಿಗೆಯಂತೆ ಶಿಖಿಡಾ |
ವರಿಸಿತಬುಜಭವಾಂಡವನುತಾ |

ನಿರದೆಸಚರಾಚರದ ಬವಣೆಯ |
ನೊರೆಯಲೇನ್ನೈ | ||154||

**ವಾರ್ಧಕ**

ನಡುಗಿದಂ ದಂಡಧರಮತ್ತ್ಯುಮಗಧರನ ಬೆ |
ನ್ಹಿಡಿದರ ಮರರ್ಕಳುಂಧತಿಗೆಟ್ಟರಮರೇಂದ್ರ |
ಜಡಜೋದ್ಭವನ ಮರೆಯ ಸಾರಿದಂ ಕಪಿಕಟಕ ರಾಮರಾಮೆನಲಿತ್ತಲು ||
ಕಡೆಯಹುದಲಾಜಗಕೆ ಸಿತಪದ್ಮನೇತ್ರುಖತಿ |
ವಿಡಿದನೇಕಕಟೆಂದು ವಿಧಿಯಂಚೆ ಗಮನದಿಂ |
ಪೊಡವಿಗೈತಂದಾ ರಘೂದ್ವಹನಸನ್ನುತಿಸತೊಡಗಿದಂ ಜಯರವದೊಳು | ||155||

**ಭಾಮಿನಿ**

ದೇವ ದೇವೊತ್ತಮಕಪಾನಿಧೆ |
ದೇವನರನಾಟಕ ವಿನೋದಕ |
ಲಾವಿದನೆ ಕಮನೀಯ ಮೂರುತಿ ಜಾಹ್ನವೀಪಿತನೆ ||
ಈ ವಿಧವದಾರೊಡನೆ ನಿಜಭುವ |
ನಾವಳಿಯೊದಶಕಂಠನೋ ನಿನ |
ಗಾವ ಹಗೆಯಲೆ ತಂದೆ ಜಯವೆಂದಜನುಮಣಿದೆಂದ ||156||

**ರಾಗ ಬೇಗಡೆ ಅಷ್ಟತಾಳ**

ಶೂರವೀರೋದ್ಧಾರ ರಘುವರ್ಯ | ಬಿಡುಸಾಕು ಕೋಪವಿ |
ದಾರೊಡನೆ ಗಂಭೀರ ಘನಶೌರ್ಯ ||
ಮೇರುವೆತ್ತಣವೆತ್ತ ಜಂಬುಕ |
ನಾರುಭಟೆ ತಾನೆತ್ತ ನಿನಗೀ |
ಕ್ರೂರ ನಿಶಚರರಿದಿರೆ ಬಿಡುಖತಿ |
ಮಾರಿ ಹೋದುದನೆಲ್ಲದೇವನೆ || ಶೂರ ವೀರೋದ್ಧಾರ | ||157||

ಈಯಜಾಂಡವ ನಿರ್ಮಿಸಿದೆಯೆಂದು | ಸಚರಾಚರಂಗಳ |
ಕಾಯುವನೆ ನೀನಾಗಿಮಿಗೆಯಿಂದು ||
ಬೀಯ ಮಾಡಲು ಬೇಡ ಬೇಡೆಂ |
ಬಾಯತಿಕೆಯವರುಂಟೆ ನೋಡೆಲೆ |
ಜೀಯಮಕ್ಕಳ ತಾಯಿ ತಾನೇ |
ನೋಯಿಸಲು ಬೇರಾರುಕಾವರು || ಶೂರ ವೀರೋದ್ಧಾರ | ||158||

ತಪ್ಪುಸಾವಿರವಿಪ್ಪುದೆಮ್ಮೊಳಗೆ । ನೀ ನಲ್ಲದುರೆ ಬೇ ।
ರೊಪ್ಪುಗೊಂಬವರುಂಟೆ ಪೇಳೆನಗೆ ॥
ಕಪ್ಪು ಕಂಧರ ಮಿತ್ರ ಕೇಳೆಳ ।
ತಿಪ್ಪತೃಣಕಲ್ಪಾಂತವಹ್ನಿಯೊ ।
ಳೊಪ್ಪುವುದೆ ನಿನಗಿಪ್ಪ ರಾರ್ಸರಿ ।
ಯಪ್ಪನೀ ನೀತಪ್ಪ ಮೆರೆವರೆ ॥ ಶೂರವೀರೋದ್ಧಾರ । ॥159॥

ಉಗಿದಶರಮರುದ್ವೀಪದೊಳಗೆಸೆಯ । ಲಲ್ಲಿಯ ಪುಳಿಂದರು ।
ಮುಗಿಯಲ್ಕೆಮಾಸ್ವಾಮಿ ಖಳವಿಜಯ ॥
ಹಗುರ ವೈನಿನಗುಗ್ಗಡವೆ ನೀ ।
ನಗೆಯ ಬೀರದಿರಕಟ ಜಗಕೆನೆ ।
ರಘುಜಕಿರುನಗೆ ಸೂಸೆಕಮಲದ ।
ಮಗವಿಯತ್ತಳದತ್ತಸರಿದನು । ಶೂರವೀರೋದ್ಧಾರ ॥160॥

**ಭಾಮಿನಿ**

ನಡೆಯಲಬ್ಜಜನಿತ್ತಶರಬಿಡ ।
ಲೊಡನೆ ತದ್ವೀಪದಕಿರಾತರು ।
ಮಡಿದರೆಂಬೆತ್ತೈ ದುಕೋಟಿಯದೇನ ಬಣ್ಣಿಪೆನು ॥
ನುಡಿಗೆ ಖೋಡಿಗೆ ಕಪೆಗೆ ವಿಕ್ರಮ ।
ದೆಡೆಗೆ ಪಲ್ಲಟವುಂಟೆ ನಿಮ್ಮಯ ।
ಪೊಡವಿಪತಿಗೆಲೆ ಕೇಳಿದೈ ಕಾಕುಸ್ಥನಪಸೂನು । ॥161॥

**ವಾರ್ಧಕ**

ಆನೆರವಿಯೊಳು ವಿಭೀಷಣರವಿಜಪವಮಾನ ।
ನೂಸುಸೌಮಿತ್ರ ಜಾಂಬವರಿನಿಬರಾಪದ್ಮ ।
ಯೋನಿಯಂ ಕಂಡರೈಯಾಗ ಸುಮ್ಮಾನದಿಂ ರಾಘವನ ಸಿರಿಮುಡಿಯೊಳು ॥
ಅ ನಿಳಿಂಪೌಘ ಪೂಮಳೆಗೆರೆದುದುಂದುಭಿ ।
ದ್ವಾನದಿಂ ಕೊಂಡಾಡುತಿರ್ದರಭ್ರದೊಳಿತ್ತ ।
ಭಾನುಕುಲಸಂಭವಂ ಮುಂದಪ್ಪಕಜ್ಜಮಂ ತಾನೆಂದನಿನಸುತನೊಳು ॥162॥

**ರಾಗ ಶಂಕರಾಭರಣ ಮಟ್ಟೆತಾಳ**

ವೀರಧೀರೋದ್ಧಾರಕೇಳು । ಭೋರನೀಗಮಾಳ್ಪ ರಾಜ ।
ಕಾರಿಯವನು ದನುಜರಿರ್ಪ । ಊರನಿದರನು ॥
ಮಾರುತಾತ್ಮಭವನು ಹಿಂದೆ । ಘೋರವಹ್ನಿಗಿತ್ತ ವೋಲು ।
ಸೂರೆಗಾಗಿ ಸುಡುವ ಮನನಿ । ರ್ಧಾರ ವೆನಗಲೈ ॥163॥

ಎಂದಡೆರಗಿ ಕಪಿಕುಲೇಂದ್ರ । ನೆಂದದೇವರಿಂತುನೆನಸಿ ।
ದಂದಲೇಸು ಹೊಂದದಿರದು । ಮುಂದೆ ಧುರದೊಳು ॥
ಮಂದಮತಿಗಳಾಯಿತುತೀರ್ದು । ದೆಂದು ಗ್ರಹಿಸಿಕೊಳ್ಳಿರೆನಲು ।
ಗಂಧವಹಸುತಾಧ್ಯರಹುದಿ । ದೆಂದು ಪೇಳಲು । ॥164॥

ಗಂಡುಗಲಿಸುಮಿತ್ರೆಯಣುಗ । ಕಂಡು ವರಧನಂಜಯಾಸ್ತ್ರ ।
ಗೊಂಡು ರಘುಜಗೆಂದ ಕೇಳ್ ಭೂ । ಮುಂಡಲೇಶನೆ ॥
ಚಂಡತರಶರಪ್ರಯೋಗ । ಪಂಡಿತತ್ವ ತೋರ್ಪೆನಿದಿರು ।
ರುಂಡಮಾಲನಿಂದು ಗೆಲಿದು । ಕೊಂಡು ಪೋಪನೆ । ॥165॥

ಧಿರುರೆಸಹಜಧೀರ ಭಳಿರೆ । ಖರೆಯನಹೆಯೆನುತ್ತಲುಭಯ ।
ಧುರಧುರಂಧರುರುಸರೋಷ । ಭರದಿ ಧನುವನು ॥
ಕರದೊಳೆತ್ತುತುರಿಕಳಂಬ । ಸುರಿಯಲಗ್ನಿವಿಸ್ಫು ಲಿಂಗ ।
ಧರಣಿಮುಸುಕೆತರು ವ್ರಜಂಗ । ಳುರಿದವೇಳ್ವೆನು । ॥166॥

ಅದನು ಕಂಡುರವಿಜನೀಲಾಂ । ಗದಸುಷೇಣ ಹನುಮಗವಯ ।
ದಧಿಮುಖಾದಿ ಕೀಶವೀರ । ರಧಿಕ ಭರದೊಳು ॥
ಮುದದಿಜ್ಯೋತಿಗೊಳ್ಳಿಗಳನು ॥ ಕದನ ಶೂರರಾಂತು ನಡೆದ ।
ರಧಟು ತನಗಳೆಂತೊಬೆದರೆ । ತ್ರಿದಶರಾಗಲು । ॥167॥

**ಭಾಮಿನಿ**

ರಣಮಹೀಮಂಡಲದ ಭೈರವ ।
ಗಣದ ದೀಪಾವಳಿಯೊ ಈಶನ ।
ಹಣೆಯಹುತವಹನಟ್ಟಹಾಸವೊ ಶಿವ ಮಹಾದೇವ ॥
ಸೆಣಸಿ ಜ್ಯೊತಿರ್ಲೋಕ ವೀರಾ ।
ವಣನ ಪಟ್ಟಣಕೈದಿಕದನವ ।
ಕೆಣಕುವುದೊಕಪಿವರರೊ ನೋಡುವನಾವನದ್ಭುತವ । ॥168॥

**ರಾಗ ಅಖಂಡಮಾರವಿ ಏಕತಾಳ**

ಆರ್ಬಣ್ಣಿಪರೆಲೆ । ಯರ್ಭಕರಿರಕೇ ।
ಳ । ರ್ಬುದ ಸಂಖ್ಯೆಯ । ಸರ್ಬವನೌಕಸ ।
ರುರ್ಭರದಿಂವರ । ಕರ್ಬುರಕೋಟೆಯ ।
ಪರ್ಬಿದರೈ ಯಜ । ಗರ್ಭವು ನಡುಗೆ ॥ ಏನೆನೆಂಬೆ । ॥169॥

ಏರಿದುದುರ್ಗವ । ವೀರವಲೀಮುಖ ।
ವಾರವುಮಿಗೆ ಕಾ । ಲೂರುತನಿಂದುರೆ ।

ಬೀರಿದರಗ್ನಿಯ । ಕ್ರೂರನಿಶಾಚರ ।
ವಾರದ ಮನೆಮನೆ । ಗಾರುಭಡಿಸುತ । ಏನನೆಂಬೆ । ||170||

ಅಗ್ಗಳಹಯದುರು । ಲಾಯ್ಗಳ ಭಟರ ಪೊ ।
ಳಲ್ಗಳ ಶಸ್ತ್ರದ । ಸಾಲ್ಗಳ ನಿಭಸೊಂ ।
ಡಿಲ್ಗಳ ರಥಸಂ । ಕುಳ್ಗಳ ನುರಿಯೊಳು ।
ಗಾಲ್ಗಳ ಚಿದರುಮ । ಳಲ್ಗಳು ತುಂಬಿದು । ದೇನನೆಂಬೆ । ||171||

ನಿದ್ದೆಯೊಳುರೆ ಯೊ । ಪ್ಪಿದ್ದ ಪರಾಕ್ರಮ ।
ರೆದ್ದಾಕೈದುವ । ತಿದ್ದುವುದಕೆ ಮೇಲ್ ।
ಬಿದ್ದಾಕಿಚ್ಚಿನೊ । ಳದ್ದಿಯರುಹಿದರ್ ।
ದೊದ್ದೆಗರನುಯಿವ । ರುದ್ದುರುಟುಗಳಿಂ । ದೇನನೆಂಬೆ । ||172||

ಕಳಕಳದಲಿಬಲ್ । ಖಳಬಲನಿವನ ।
ಗ್ಗಳನು ಸುಷೇಣಕ । ನಳನಿವನೆನ್ನು ।
ತ್ತೊಳಗೊಳ ಹೊದುರೆ । ಕಳಚಿದರಸುಗಳ ।
ಪೊಳಲೊಳು ರಕ್ತದೋ । ಕುಳಿಯಾಯ್ತುಂದದ । ನೇನನೆಂಬೆ । ||173||

**ವಾರ್ಧಕ**

ಭುಗಿಭುಗಿಲು ಭುಗಿಲೆಂಬ ದಳ್ಳುರಿಯೊಳಖಿಳಖಳ ।
ರಗಳುರಿದುದೈ ಹೇಮಮಯ ಭವನರಾಜಿಗಳ್ ।
ಧಗಧಗಿಲು ಧಗಿಲೆಂದು ಸಿಂಧಸೀಗುರಿಪತಾಕಾವಳಿಗಳುರಿಗೊಂಡವು ।
ಮಿಗೆಯದೇನ್ ಬಣ್ಣಿಪೆಂ ಪರವಧೂವ್ಯಸನಿಗಳ ।
ಪಗೆತನಂಕಾನನದ ಬೆಳ್ದಿಂಗಳಂತಲಾ ।
ಬಗೆದಶಾನನಗಾಗದಿರ್ಪುದೇಯೆಂದು ಕುಶಲವರಿಂಗೆ ಮುನಿನುಡಿದನು । ||274||

**ಭಾಮಿನಿ**

ಅಣುಗಕೇಳನಿತರೊಳು ಶತದಿನ ।
ಮಣಿಯ ವೋಲ್‌ದೀಪ್ತಿಕೆಗಳೊಪ್ಪಿರೆ ।
ಮಣಿಖಚಿತಪೀಠದೊಳುಸುರದಲ್ಲಣದಶಗ್ರೀವ ||
ಹಣಿದ ನಿದ್ರೆಯನುಗಿದುಖಳತಿಂ ।
ಥಿಣಿಯಳೋಲಗವಿತ್ತಡಾಗಲು ।
ಮಣಿದು ಮಣಿ ಹಾರರುಖಳಾಧಿಪಗೆಂದರಿಂತೆನುತ ||275||

**ರಾಗ ಮುಖಾರಿ ಏಕತಾಳ**

ಪುಣ್ಯಜನೇಶರಾವಣೇಶ । ಚಿತ್ತವಿಸಗ್ರ ।
ಗಣ್ಯನಮ್ಮಯ ಮಾತನೀಸ ॥ ಪಲ್ಲವಿ ॥

ಮಾತಾಡಲವಧಿಯಿಲ್ಲವಯ್ಯ । ಬೆನ್ನಟ್ಟಿಕೋತಿ ।
ಪೋತಗಳಿದೆ ಬಂದರ್ಜೀಯ ॥
ಭೂತಳವತಳತ । ಳಾತಳದೊಳಿವಿ ।
ಖ್ಯಾತನೆ ಕೈಕಸೆ । ಜಾತನೆಧುರನಿ ।
ರ್ಭೀತನೆಯಿಂದಿನ । ರೀತಿಯು ಪೊಪರಿ ।
ಯಾತಗಳುಪಹತಿ । ಯೇತರ ಪೇಳಲಿ । ॥ 276 ॥

ಇಂದ್ರಾರಿರಣದ ದಿಗ್ವಿಜಯ । ಎಣಿಸದಿರಯ್ಯ ।
ಬಂದಿದೆ ಮಾರಿನೋಡಯ್ಯ ॥
ಅಂದು ಹನುಮ ಸು । ಟ್ಟಂದದೋಳಾರಘು ।
ನಂದನನುರುಹುವ । ನಿಂದೀಕ್ಷಿಪುದುರಿ ।
ಯಿಂದಲಿ ತವಭಟ । ರಿಂದೊದಗಿದರದೊ ।
ಬಂದುದು ಕಿಚ್ಚೀ । ಳಿಂದು ಪರಾಕೆ । ॥277॥

ಪಗೆಯವರಿಂದು ಸುಡುವುದಲ್ಲಾ । ನೋಡಂದು ನಿನ್ನ ।
ಭಗಿನಿ ತಾನಿಟ್ಟಿಕಿಚ್ಚಿಂತೆಲ್ಲಾ
ಮಿಗೆಯೇನೆಂಬೆವು । ಮುಗಿಸಿದುಕೋಟೆಯ ।
ಹಗರಣದಲಿ ಮು । ತ್ತಿಗೆಯಿಂದಗ್ನಿಯ ।
ಹೊಗಿಸಿದ ಕಪಿಪತಿ । ಹಗುರವೆನೋಡೆಂ ।
ಒಗೆಪೊರೆಯೆಮ್ಮನು । ವಿಗಡಪರಾಕ್ರಮ । ॥278॥

**ಭಾಮಿನಿ**

ನುಡಿಯನದ ಕೇಳುತ್ತ ಘುಡುಘುಡು ।
ಘುಡಿಸಿ ಮಡನೊಲಿದಿತ್ತ ಖಡ್ಗವ ।
ಝುಡಿದುಹುಂಕರಿಸಿದಡೆ ನಡುನಡು ನಡುಗಿತವನಿತಳ ॥
ಕಡೆಯಭೈರವನೋಲು ಸಲೆಕೆಂ ।
ಗಿಡಿಗಳನು ಸೂಸುತ್ತ ಖತಿಯಲಿ ।
ನುಡಿದ ನೀಲಾಚಲನಿಭಾಂಗ ಖಳೇಶನಾರ್ಭಟಿಸಿ । ॥279॥

**ರಾಗ ಭೈರವಿ ಏಕತಾಳ**

ಏನಚ್ಚರಿಯಿದು ಭಳಿರೆ । ರಿಪು ।
ಸೇನೆಯವರು ಹೆಚ್ಚಿದರೆ ॥

ತಾನಾರೆಂದರಿಯರಲಾ | ಶಿವ |
ತಾನೆ ಬರಲಿಬಿಡೆನಲ್ಲಾ | ||280||

ನಿನ್ನೆಯಧುರ ದಿಗ್ವಿಜಯ | ಕನ |
ಸನ್ನೆರೆಕಂಡಾಪರಿಯ ||
ಭಿನ್ನಣವಾಯ್ತಿನ್ನೇನು | ಸುಡ |
ಲಿನ್ನಹಿತರ ಪಾಡೇನು | ||281||

ಫಡಫಡ ಮಗರಾಜನನು | ಕುರಿ |
ಪಡೆತಾಗೆಲುವುದೆ ಮೇಣು ||
ಕಡುಹಿನಸುತನಿಂದ್ರಾರಿ | ಎತ್ತ |
ನಡೆದೆನೊ ಕಾಣೆನೀಬಾರಿ | ||282||

ಮುಕ್ಕುವೆ ವಾನರವರನ | ಮಿಗೆ |
ತಿಕ್ಕುವೆ ರಘುಕುಲದವನ ||
ಮಿಕ್ಕವರಿಂದೇನೆಂದು | ಗುಹಿ |
ಲಿಕ್ಕಿದ ಭೋರ್ಗರೆ ದಂದು | ||283||

ಒಡನಾಪುಷ್ಪಕವೇರಿ | ಸತಿ |
ಪಡೆಸಹಿತಿರದೆಸವಾರಿ ||
ವಿಡಿದುತ್ತರ ಗೋಪುರದಿ | ನಿಂ |
ದೊಡನುಸಿರಿದನೀತೆರದಿ | ||284||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕರೆಯಿರೋಸುತ ಮೇಘನಾದನ |
ಧುರವಿಜಯಮಕರಾಕ್ಷನನು ಮೇಣ್ |
ಕರೆಯಿರೋ ಕಲಿಯಹಸುಪಾರ್ಶ್ವಕ | ನಿರದೆಭರದಿ | ||285||

ಎಲ್ಲಿಯಾಶಶಕರ್ನದುರ್ಜಯ |
ನೆಲ್ಲಿಯೂಪಾಂ ಬಕಸುಬಾಹುಮ |
ತ್ತೆಲ್ಲಿದುರ್ಮದನೆನುತ ಖಳನಿಂ | ದಲ್ಲಿ ನುಡಿಯೆ | ||286||

ಎಂಬ ನುಡಿಯಿಂಮುನ್ನರಕ್ಕಸ |
ಕುಂಭಕರ್ನಾತ್ಮಜನುಭುಜಸಂ |
ರಂಭನಹಿತ ವಿಜಂಭಕುಂಭನು | ತಾಂಭರದೊಳು | ||287||

ಕಿಡಿಯಿಡುತ ಕಲ್ಪಾಂತರುದ್ರನ ।
ಪಡಿಯೊಳಿರದೈತಂದು ರಾವಣ ।
ನಡಿಗೆರಗಿತಾಪೇಳ್ದ ತನ್ನಯ । ಕಡುಹುತನವ । ||288||

**ರಾಗ ಮಾರವಿ ಏಕತಾಳ**

ಹಿರಿಯಪ್ಪನೆ ನೀಲಾಲಿಪುದಿಂತ ।
ಚ್ಚರಿಯನುಬಡಲೇನು ||
ಧುರ ಕಟ್ಟೆನ್ನನು ನಿಮಿಷದೊಳುರೆಸೊ ।
ಪ್ಪರವೆನುರಿಪುಗಳನು । ||289||

ಅಗ್ನಿ ಸ್ತಂಭನ ಬಲ್ಲೆನುಪುರವಿದ ।
ನಗ್ನಿಯೊಳುರುಹುವರು ||
ಅಗ್ನಿನಿಧಿಯ ಪೊಗಲಗ್ನಿಯೊಳದ್ದುವೆ ।
ನಗ್ನಿನಯನನಾಣೆ । ||290||

ನೋಡಲಿಬರ್ದಿಲ ವಿತತಿಗಳತಿಕೊಂ ।
ಡಾಡಲಿಂದಿನಧುರದಿ ||
ಬೇಡಬಾಯ್ಬೆರಳಿಂ ರಿಪು ಸಂಚಯ ।
ವಾಡಲುಬಿಡೆ ಭರದಿ । ||291||

ಹುಂಕರಿಸುವ ಮಿಂಚುಗಳಿದಿರೆ ಕೇಳ್ ।
ಪಂಕಜಬಾಂಧವಗೆ ||
ನೀಂ ಕೊಡು ವೀಳ್ಯವಫಡಮರ್ಕಟಗಳ ।
ಹಂಕೃತಿಯೆನಗಿದಿರೆ । ||292||

ಎನುತಲಿ ಹಿರಿಯುಬ್ಬಣವನುಝುಳಪಿಸಿ ।
ಘನಮದದಲಿನಿಂದ ।
ತನುಜನಬಿಗಿದಪ್ಪುತದಶಮುಖನಂ ।
ದನು ನಯದೊಳಗೆಂದ । ||293||

**ರಾಗ ಶಂಕರಾಭರಣ ಅಷ್ಟತಾಳ**

ಚೆಣ್ಣನೀನೋರ್ವನೆ ಪೋಗಿ । ಮಿಣ್ಣನರಿಗಳ ತಾಗಿ ।
ಒಣ್ಣಗೆಡಿಸುವ ಮಾತಿ । ಗೆಣ್ಣಿಪೆ ನಾನು । ||294||

ಎಣ್ಣಿಸಬೇಡವೆ ತಾತ । ಚೆಣ್ಣನೆಂದು ಮಗೇಂದ್ರನು ।
ಬಣ್ಣದಾನೆಗಳುಕುವುದೆ । ಗಣ್ಯಮಾಡೆನು । ||295||

ಅತಿಶೂರನಿನ್ನಯ್ಯ ಪ್ರಬಲ । ನತಿಕಾಯಾದಿಭಟರು ಮಡಿದ ।
ವ್ಯಥೆಗುಂದಲಿಲ್ಲೀನ ಮಾಳ್ಪೆ । ಸುತನೆ ಕೇಳೊಂದ । ॥296॥

ಪಿತನೀನೆಂದನಿಬರಸಮರ । ಕೃತಿಶಯಾನೆನಿಸದ ಮೇಗೆ ।
ಸುತನೆ ನಿನ್ನನುಜಗೆದಿವಿಜ । ಮಥನಕೇಳೆಂದ । ॥297॥

ಧುರಧೀರನೀನಹುದುಕಂದ । ಉರಿಭಡಾಳಪೆರ್ಚಿತಿದಕೊ ।
ಪರಿಪಂಥಿಗಳ ಬಲುಹಿಗಾನೆ । ತೆರಳುವೆ ಕಾಣೈ । ॥298॥

ತೆರಳುವುದಂತಿರಲಿ ಶಿಖಿಮುಂ । ದರಿವುದು ಹಾಗಿರಲಿ ಸುರ ।
ಗಿರಿಯುನುಸಿಗಳ್ಗಂಜಲುಂಟೆ । ತೆರಳುವೆನಾನೈ । ॥299॥

**ಭಾಮಿನಿ**

ಮತ್ತೆಕೇಳೆನ್ನಧಟರಿಪುಗಳ ।
ನೊತ್ತಿಹತ್ತಿದ ಶಿಖಿಯನಂದಿಸ ।
ದಿತ್ತ ಬಂದಿತೆನೋಡುಪಿತ ನೀನಿತ್ಯಲರ್ಚಿಸುವ ।
ಕತ್ತಿವಾಸನ ಲಿಂಗವನು ಪೂ ।
ಜೋತ್ತಮದ ವೇಳೆಯಲಿಯೆಡಗಾ ।
ಲಿತ್ತು ಕೆದರಿದ ದೋಷಕುಂಭ ಕಗೆಂದು ಬೊಬ್ಬಿರಿದ । ॥300॥

**ವಾರ್ಧಕ**

ಅರ್ಗಳಪರಾಕ್ರಮಂ ನುಡಿದಿಂತುಬಲ್ಪಿಂದ ।
ಭರ್ಗಗಿರಿಧರನನು ಜ್ಞೆಯಗೊಂಡು ನಡೆಗೊಂಡು ।
ಭೋರ್ಗರೆವುತಾಕ ಪೀಟಿಯಮಂತ್ರಮಂ ಜಪಿಸಿಪ್ರಳಯಾಗ್ನಿ ರೂಪಧರಿಸಿ ॥
ಮಾರ್ಗಣೋದ್ಧತವನುಂ ಸುರಗಿ ಶೂಲಂಗಳಂ ।
ನೀರ್ಗೈಯೊಳಾಂತು ಧುರಕೈತಂದನೋಳ್ಪ ದಿವಿ ।
ಜರ್ಗಳೆದೆ ಕಾತರಿಸೆಕಪಿವರ್ಗತಲ್ಲಣಿಸೆ ಕೂರ್ಗಣೆಯಮಳೆಯ ಸುರಿಸಿ । ॥301॥

**ರಾಗ ಭೈರವಿ ತ್ರಿವುಡೆತಾಳ**

ತರುಣಕೇಳೈಯಮರ ಬಾಣಿಸಿ ।
ದುರುಳದಶಶಿರಗಂಜಿತಾನೇ ।
ತೆರಳುವನೊ ಸಂಗರಕೆವಗ್ನಿಯ ।
ವರವಮೇಣಿಂದೈದುವುದೊವಿ ।
ಸ್ತರವ ಬಣ್ಣಿಪನಾವಕುಂಭಾ ।
ಸುರನುತಾನಾಸುರ ವಿಕಾರದೊ ।

ಘುರಿಯ ಮಧ್ಯದಿ ನಿಂದು ಶಸ್ತ್ರೋ ।
ತ್ಕರವ ತೂರುತ ಫಡಫಡೆನ್ನುತ । ಬಂದನಾಗ । ॥302॥

ಬಲ್ಲಿದರಲಾಭಳಿರೆಕೋತಿಗ ।
ಳೆಲ್ಲ ಕೈಗೊಳ್ಳಿಗಳ ಶಿಖಿಮೇ ।
ಣೆಲ್ಲಿ ಸುಡುವವರೆಲ್ಲಿ ಬನ್ನಿರೆ ।
ಕಲ್ಲುಮರದಣ್ಣಗಳೆನುತ್ತ ।
ಲ್ಲಲ್ಲಿ ಹರಿಹರಿದಖಿಳರಿಪುಗಳ ।
ಚಲ್ಲಬಡಿದುರುಳಿಚುತಲಾಘವ ।
ದಲ್ಲಿ ಶಿರಚೆಂಡಾಡೆ ಪೊವುತ ।
ಬಲ್ಲಿದಾ ಸುರಮಲ್ಲಸಮರಕೆ । ಬಂದನಾಗ । ॥303॥

ಭರಿತಬಲಕಪಿಭಟರು ರೋಷಾ ।
ತುರದೊಳಗ್ನಿಯ ಬೀರಬಹಸಂ ।
ಗರಭಯಂಕರಗಿರದ ಕಾಳುರಿ ।
ತುರುಕಿ ಮೋರೆಯ ಹರುಕಿ ನಾನಾ ।
ಪರಿವಿಧಾನದಿಸೆಣಸಿದಡೆ ನಿ ।
ಷ್ಠುರನು ಬಗೆಯದೆ ಮುಂದೆಮುಂದೈ ।
ತರಲು ಹರಿಯದೆಸುತ್ತಲೋಡುವ ।
ವರನು ಬಡಿಬಡಿದರಚಿಯರಚುತ ॥ ಬಂದನಾಗ ॥
ಧುರಕೈ । ತಂದನಾಗ । ॥304॥

**ವಾರ್ಧಕ**

ಅಲ್ಲಿಗಲ್ಲಿಗೆ ತರುಬಿಕಾದುವರತೀದುವರ ।
ಖುಲ್ಲಕುಂಭಕನು ಬೆನ್ನಟ್ಟಿದಂ ಕುಟ್ಟಿದಂ ।
ಮಲ್ಲಕರಿಯೂಥಾದಿನಾಥರಂ ನಾಥರಂತಿನಜಾದಿಧುರ ವೀರರು ॥
ನಿಲ್ಲದವನುಪಟಳಕೆಪಾರಿದರ್ ಪಾರಿದರ್ ।
ಭಲ್ಲೂಕವಿತತಿ ಶಿಖಿಮಯದಿಂದ ಮಯದಿಂದ ।
ಚೆಲ್ವಾಂತು ನಿಮಿಷದೊಳ್ ಪುರವಧುಂ ಪುರವಧುಂ ಸೊಂಪೆತ್ತಳುಲಿಯೆ ಖಳರು । ॥305॥

**ಭಾಮಿನಿ**

ಮಿತ್ರಕುಲಜರುಕೇಳ್ವುದಿಂತಾ ।
ಶತ್ರುಗಳ ಬೆಂಬತ್ತಿಪದುಳದಿ ।
ನಿತ್ರಿಸಿದನುರಿತಣಿಸಿ ಪುರನಿಜಭಾಷೆಗನುವಾಗಿ ॥
ಗೋತ್ರರಿಪುಜಿತು ಮುಖ್ಯ ರಾವಣ ।

ಪುತ್ರರುರೆಕೊಂಡಾಡಿದರು ಸುಪ |
ವಿತ್ರನೀಭಳಿರೆಂದು ದುಂದುಭಿಮೊಳಗೆ ಬಲುವಾಗಿ | ||306||

**ವಾರ್ಧಕ**

ಅನಕಶ್ರೀಚಕ್ರಿ ಹೊಕ್ಕುಳಕುಶೇಷಯದೆಲರ |
ಘನಶೋಣ ಸುಪರಾಗರುಚಿರ ಜ್ವಾಲೆಯದಭ್ರ |
ವನುಬಿಂಬಿಸಿತೊ ಮೇಣುಪೂರ್ವದಿಗ್ಗಾಂಗನಾನನದಕುಂಕುಮರೇಖೆಯೊ ||
ಎನುವಂತೆ ಪೊಂಬಿಸಿಲಝುಳದೊಡನೆ ಥಳಥಳಿಸು |
ತಿನನೋಲಗಂಗೊಟ್ಟಡಾಗನೇಸರಕುವರ |
ನನುಮತಿಯೊಳಾಹವಾಂಗಣದಿ ಭುಲ್ಲೆಸಿದರು ಹನುಮಾದಿಭಟರತ್ತಲು | ||307||

**ಕಂದ**

ಉದಯದೊಳಾದಶವದನಂ |
ಮದನಾರಿಯನರ್ಚಿಸುತಿರೆ ಭರದಿಂದಾಗಳ್ ||
ಮುದದಿಂದೋಲಗವಿತ್ತಿರೆ |
ಕದನಾಗ್ರಣಿ ಕುಂಭಕನ್ನೆದಿಯೆ ಮಣಿದೆಂದಂ | ||308||

**ರಾಗ ಸೌರಾಷ್ಟ್ರ ಅಷ್ಟತಾಳ**

ಚಿತ್ತಾವಧಾನ ಪರಾಕುರಕ್ಕಸರಾಯ | ಮಾತಕೇಳು || ಭಾಷೆ |
ಯಿತ್ತವೋಲ್ಪೈದಿ ಸಂಗ್ರಾಮದಿ ಸೆಣಸಿದೆ | ಮಾತಕೇಳು | ||309||

ಮೊದಲಗ್ನಿ ಸ್ತಂಭನ ಬಲಿದೆನು ಬಲವಂತ | ಮಾತಕೇಳು | ಮತ್ತೆ |
ಸದೆದೆನಲ್ಲಲ್ಲಿ ಹೊಕ್ಕಿರುವ ಮರ್ಕಟರನ್ನು ಮಾತಕೇಳು | ||310||

ಇನಸೂನು ಹನುಮಾದಿ ಗಳದೆತ್ತಪೋದರೊ | ಮಾತಕೇಳು | ಪುರ |
ವನುಸುತ್ತಿದಗ್ನಿಯ ತಣಿಸಿತ್ತ ಬಂದೆನು | ಮಾತಕೇಳು | ||311||

**ರಾಗ ಕೇದಾರಗೌಳ ಝಂಪೆತಾಳ**

ಎಂದ ಮಾತನು ಕೇಳುತ | ದಶಕಂಠ |
ನಂದನನನಪ್ಪಿಕೊಳುತ ||
ಕಂದಬಾ ವೀರಬಾರೈ | ಎನ್ನಕುಲ |
ಚಂದ್ರಗುಣನಿಧಿಯೆ ಕುಳಿರೈ | ||312||

ಚೆನ್ನಿಗನುಮೇಘನಾದ | ಒಬ್ಬಕುಲ |
ರನ್ನಗವಗೆಣೆಯ ಕಂದ |

ನಿನ್ನಂದ ದಾಪ್ತರೆನಗೆ । ಸುತವರ್ಗ ।
ದಿಂ ನೋಡಲುಂಟೆ ಕಡೆಗೆ । ॥313॥

ಮುಂದರಿಗಳಿಲ್ಲವೆನಿಸಿ । ಜಯವಧುವ ।
ನಂದದಿಂದಿರದೆವರಿಸಿ ॥
ಬಂದೆನ್ನವ್ಯಥೆಯ ಕಳೆದು । ಜಾನಕಿಯ ।
ಮುಂದಲೆಯಪಿಡಿವು ತೆಳೆದು । ॥314॥

ರಮಿಸಿ ರಾಜ್ಯವನಾಳ್ದರೆ । ಹೊಣೆಯಿದಕೆ ।
ಮಮ ಸೂನುನೀನು ಭಳಿರೆ ।
ಕ್ಷಮೆಯೊಳೆಣೆಗಾಣೆನೆನುತ । ಬಿಗಿದಪ್ಪಿ ।
ಲಮರಾರಿ ಮದಪೆರ್ಚುತ । ॥315॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬೊಪ್ಪನೀನೆಲೆನೋಡು ಜಗದೊಳ ।
ಗಪ್ಪಪೊಗಳಲುಸುತರು ನಗರೇ ।
ತಪ್ಪದುರೆಕಳುಹಿಂದುರಿಪುಗಳ । ಸೊಪ್ಪರವೆನು । ॥316॥

ಮೇಲೆ ವಾನರವರನ ಹನುಮನ ।
ಸೋಲಿಸಿದುಮಿಗೆ ಮನುಜದಶರಥ ।
ಬಾಲರನು ಹ್ಯೊದಾಡುವೆನು ಸ । ಲ್ಲೀಲೆಯಿಂದ । ॥317॥

ಧುರದಿಜಯವಪಜಯವ ದೆಂಬುದ ।
ಹರನದಯ ತವಭಾಗ್ಯ ನಮ್ಮಯ ।
ಪರಮಪುಣ್ಯೋದಯವದರ ನಿ । ರ್ಧರಿಪರಾರೈ । ॥318॥

ತಾತಕೇಳಾದಡೆರಣಾಗ್ರದಿ ।
ಸೋತು ನಗರವ ಪೊಗೆನಿದಕೆಸುರ ।
ಘಾತನೀನೇಸಾಕ್ಷಿಕಳುಹೆಂ । ಬಾತರಳಗೆ । ॥319॥

**ಭಾಮಿನಿ**

ತರಿಸಿಪೊಂಬರಿವಾಣದಲಿಕ ।
ರ್ಪುರದ ವೀಳೆಯವಿತ್ತುರಿಪುಗಳ ।
ಮುರಿದುಬಿಸುಡೆಂದ್ಧರಸಿ ತಿರುಗಿದನಾದಶಗ್ರೀವ ॥
ಭರಿತದುಂದುಭಿರವವ ಜಾಂಡವ ।

ಳಿರಿಯಲಾಗಲೆಕುಂಭಯೋಚಿಸಿ |
ಬರುತತಾಯ್ದುವಿಜ್ವಾಲೆಯಳ ಮನೆಗೈದಿ ಮಣಿದೆಂದ | ||320||

**ರಾಗ ಸೌರಾಷ್ಟ್ರ ಏಕತಾಳ**

ಲಾಸಿಸೆನ್ನ ಭಿನ್ನಪವ | ನೆಲೆತಾಯೆ | ರಘುನ |
ಪಾಲಗೆಮ್ಮೊಳಿಹ ವಿವಾದ | ವೆಲೆತಾಯೆ ||
ಶೀಲವಂತೆ ನೀನೆಬಲ್ಲೆ | ಯೆಲೆತಾಯೆ | ನಿನ್ನೆ |
ಸೋಲಿಸಿದೆನಹಿತ ಬಲವ | ನೆಲೆತಾಯೆ | ||321||

ಪಂಥದಿಸಂಗರಕಿಂದು | ಎಲೆತಾಯೆ | ವೀಳ್ಯ |
ವಾಂತೆ ಹಿರಿಯಯ್ಯನಿಂದ | ಎಲೆತಾಯೆ ||
ಇಂತು ನಿನ್ನೊಳರುಹಬಂದೆ | ನೆಲೆತಾಯೆ | ಮನದಿ |
ಚಿಂತಿಸದೆಪರಸಿಕಳುಹಿ | ಸೆಲೆತಾಯೆ ||322||

**ರಾಗ ತೋಡಿ ಅಷ್ಟತಾಳ**

ತರವೇನೋ | ಬಾಲ | ತರವೇನೋ | || ಪಲ್ಲವಿ ||

ತರವೇನೋ ನೀ ಧುರಕೈದುವ ಮಾತು |
ಅರುಹರುಹಿನ್ನೊಮ್ಮೆ ಕೇಳುವೆನಿಂತು | || ಅನುಪಲ್ಲವಿ ||

ಇರುಳುನಿಟ್ಟಿಸಿದ ಬಾವಿಯಕಂಡುದಿವದಿ |
ನೆರೆಧುಮುಕುವರುಂಟೆ ವೈಕುಂಠ ನಿಜದಿ ||
ತರುಣಿಕುಲೇಂದ್ರಕೇಳ್ ದಿವಿಜರಾಯತದಿ |
ಹರಿವಂಶರೈಸೆ ನೀಭ್ರಮಿಪೆಯ ಮನದಿ | ||323||

ನೊರಜುಗಳುರುಬೆ ಮಂದರ ಜರಿದಪುದೆ |
ಇರುವೆ ವಾರಿಧಿಯನ್ನು ಕುಡಿದುತೇಗುವುದೆ ||
ಧುರಧೀರರ ನಿಬರು ನಿನ್ನಿಂದಹಿಂದೆ |
ತೆರಳಿದನೋರ್ಡಿಸಂಗರಕೈದು ಮುಂದೆ | ||324||

ಹೀನವಿಕ್ರಮನೆ ನಿನ್ನಪ್ಪಕೇಳ್ ಮಗನೆ |
ತಾನತಿಕಾಯನೋಡಿದಡಲ್ಲ ಬಲನೆ ||
ನೀನೀಗ ಪೋಗೆ ರಾಘವ ಬೆದರುವನೆ |
ಏನೆಂಬೆನಿಂಥದುರ್ಮತಿಗೆ ಸುಗುಣನೆ | ||325||

**ರಾಗ ಕೇದಾರಗೌಳ ಅಷ್ಟತಾಳ**

ಮಾತೆ ಚಿತ್ತೈಸು ನೀ | ನೀತರ ಪೇಳ್ವುದು |
ನೀತಿಯೆ ತಿಳಿಯೊಮ್ಮೆಗೆ |
ತಾತನಕೊಂದ ದು | ರ್ನೀತಿಗಾರನಗೆಲ್ಲ |
ದಾತರಳನೆ ಪಿತಗೆ | ||326||

ಖರೆಯಹುದಹುದು ಕೇಳು | ತರಳನೀನೆಂದುದಾ |
ದರು ಪೇಳ್ವೆ ಬಲವಂತರ ||
ನೆರೆತೊಡೆವುದು ದುರ್ಬ |
ಲರಿಗೊಳ್ಳಿತೇ ಪೇಳು |
ಮರುಳಾಟ ಬಿಡುಕುವರ | ||327||

ಭಳಿರೆ ಕೇಳಮ್ಮದು | ರ್ಬಲರೆನಾವಸುರರು |
ತಳುವದೆ ಮಾನವರ ||
ಸುಳಿವಕಂಡಲ್ಲಿ ಗಂ |
ಟಲಕೊಯ್ದು ನುಂಗುವ |
ರ್ತಿಳಿಯೆಂತು ಪೇಳುತ್ತರ | ||328||

ತಿಳಿದ ಕಾರಣದಿಂದ |
ತಿಳುಹಿದೆ ಕಂದಕೇ |
ಳಿಳೆಯ ಮಾನವನೆ ರಾಮ ||
ನಳಿನಾಕ್ಷನೊಳು ನಿನ್ನ |
ಛಲಬೇಡ ಸಾರಿದೆ |
ಖಳಕುಲ ಸಾರ್ವಭೌಮ | ||329||

ಸಾರಿಹುದಹುದಮ್ಮ | ಕೇಳಿಂದುಧುರದಿನಾ |
ಮೀರಿದರಿಗಳ ಮೊತ್ತ ||
ಸೂರೆಗೊಳ್ಳದಿರೆಕು |
ಮಾರನೆನಿನಗೆನ್ನ |
ಭೋರನೆ ಕಳುಹೆಯತ್ತ | ||330||

**ವಾರ್ಧಕ**

ಮತ್ತೆ ಕೇಳಂಬೆ ಶ್ರೋತ್ರಿಯನಿಲ್ಲದಾಮುಖಂ |
ಚಿತ್ತೋದ್ಭವನ ಕರುಣವೆತ್ತಿರದ ಸಂಮೋಹ |
ಮತ್ತ ಕರಚರಣಗತ ಸಪ್ತಿಗಳು ಮಿನಿತಿಳೆ ಯೊಳಿದ್ದೇನ್ ಫಲಂವೀರನು ||
ತತ್ತಬಲವಿರಲಹಿತರಂ ನಿರಿಯ ಲಿರಿಸಿಕೊಳ |
ದೊತ್ತೆ ಪೌರುಷವಿರ್ದರೇನಿಲ್ಲದಿರ್ದರೇನ್ |
ಚಿತ್ತಿಚಂಚಲವ ಬಿಡುಬಹೆನೆಂದು ಬಲ್ಪಿನಿಂದೆದ್ದುನೇಮವ ಗೊಂಡನು | ||331||

**ಕಂದ**

ಅರ್ಬುದಸಂಖ್ಯೆಯಸರಿಭಟ ।
ಕರ್ಬುರದಳದೊಳುರಿಪುಸ್ತಂಭಂ ಕಲಿಕುಂಭಂ ॥
ಸರ್ಬಾಯತಧುರ ಕಣಕಂ ।
ಶರ್ಬನ ಪೋಲುವರೂಥವ ನಡರುತಮಿಗೆ ಪೊರಟಂ । ॥332॥

**ರಾಗ ಮಾರವಿ ಏಕತಾಳ**

ಆಗಲೆ ಕಲಿಯೂಪಾಂಬಕರಣಕನು ।
ವಾಗುತಭರದಿಂದ ॥
ಬೇಗದಿರಥವನು ಹಾರಿಸುತವನೆಡ ।
ಭಾಗದಿನೆರೆನಿಂದ ॥333॥

ಕುಂಭಾನುಜರು ನಿಕುಂಭಕಮಿಗೆ ಶೋಣಿ ।
ತಾಂಬಕರೆಂಬವರು ॥
ಸಂಭ್ರಮದಲಿ ಬಿಲುಗೊಂಬಾತೇರ್ಗಳೊ ।
ಳುಂಬರುತಾಖಳರು । ॥334॥

ಅಗ್ರಭವನೆಕೇಳರಿಗಳೊಳಿಂದಿನ ।
ವಿಗ್ರಹಕೆನ್ನುವನು ॥
ಶೀಘ್ರದಿ ಕಳುಹಿಪರೀಕ್ಷಿಪುದಿನ್ನುಸ ।
ಮಗ್ರದಸತ್ವವನು । ॥335॥

ಎಂಬ ನಿಕುಂಭನಮಾತಿಗೆ ಖಳಶೋಣಿ ।
ತಾಂಬಕ ನೆಲೆಯಣ್ಣ ॥
ಕೊಂಬೆನುಕಪಿಸೇನಾನಿಯಧುರ ಸಂ ।
ರಂಭಕೆ ಕಳುಹೆನ್ನ । ॥336॥

ತಕ್ಕುದನಾಡಿದಿರೆನ್ನಯ ನಡವಳಿ ।
ತಕ್ಕೆ ಸರಿಯಮಾತ ।
ತಕ್ಕವರೈ ಭಳಿರೆನುತವರೊಡವೆರ ।
ದುಕ್ಕುತ ಉನ್ಮತ್ತ । ॥337॥

**ವಾರ್ಧಕ**

ಪೊಂದೇರಡರ್ದುನಾಲ್ವರುದೈತ್ಯರಬ್ಬರದಿ ।
ಮುಂದುಲಿವರಣಕಹಳೆಗಳನಿನಾದದಲಿ ಭೋ ।

ರೆಂದುರಿವಕಾಳರಕ್ಕಸ ಗಣದೊಳು ತೊಳಪ ಕಾರ್ಮುಗಿಲ ಮಿಂಚಿನಂತೆ ॥
ಗೊಂದೆವಳವಿಗೆಯನೋಲುದ್ದಂಡ ಕಾರ್ಮುಕವ ।
ನುಂಧರಿಸಿ ಕಲಿಕುಂಭನ ಹಿತಗಿರಿವಜ್ರವೆಂ ।
ಬಂದದೊಳು ದುರ್ಗವಿಳಿದೈದಿದಂ ಖಳವರ್ಗಭೋರ್ಮೊರೆದು ಪಿಂದೆ ಬರಲು ॥338॥

**ಭಾಮಿನಿ**

ಅಸುರಬಲಬಲುಭಾರ ದಲಿಧರೆ ।
ಕುಸಿದುದೋಕುಲಶೈಲಜರಿದುದೊ ।
ಉಸಿರಲೆನ್ನಳವಲ್ಲಗಜರಥ ತುರಗಪಾದಾತಿ ॥
ವಿಸರವಬ್ಧಿಯೊಳುರೆ ತರಂಗ ।
ಪ್ರಸರಬಹವೊಲ್‌ಬಹುದಕಂಡಾ ।
ಬಿಸುಗದಿರಕುಲಭವನು ಕೇಳಿದನಾವಿಭಿಷಣನ । ॥339॥

**ರಾಗ ಕಾಂಭೋದಿ ಏಕತಾಳ**

ಎಲೆ ವಿಭೀಷಣಾಂಕಬರುವ ।
ಬಲುಭಟರನುನೋಡ ॥
ಜಲಧಿಯಿಂದ ತೆರೆಬಪ್ಪಂತೆ ।
ನಲಿದುಬರುವಪಾಡ । ॥340॥

ರಥದೊಳದಕೊ ಭರದಿ ತ್ರಿಪುರ ।
ಮಥನನಂತೆ ನಿಂದ ॥
ರಥಿಕನಾವನವನ ಹಿಂದೆ ।
ಪಥುಲ ಕಾರ್ಯದಿಂದ । ॥341॥

ವ್ಯಥೆಗೊಳಿಸುವರಾರುಪೇ ।
ಕಥೆಯನೆಂಬ ಧನುಜ ॥
ಮಥನಗೆರಗಿಪೇಳ್ದಲಂಕಾ ।
ಪಥವಿಪಾಲನನುಜ ॥342॥

**ರಾಗ ಕೇದಾರಗೌಳ ಅಷ್ಟತಾಳ**

ಚಿತ್ತಾವಧಾನಪರಾಕುರಕ್ಕಸವೈರಿ ।
ತತ್ತರಗೊಳದಿರಯ್ಯ ॥
ಚಿತ್ತಜಾರಿಗೆ ಸೋಲರಿವರು ಸಂಗರಮದ ।
ಹತ್ತಿದಸುಭಟರಯ್ಯ । ॥343॥

ಅಂಬುಜದಳನಿಭನೇತ್ರಕೇಳಾಖಿಳ ।
ಕುಂಭಕರ್ನಾತ್ಮಜರು ॥
ಕುಂಭನಿಕುಂಭ ಯೂಪಾಂಬಕಮಿಗೆ ಶೋಣಿ ।
ತಾಂಬಕರೆಂಬವರು । ॥344॥

ಇರುಳಿನಾಜಿಯೊಳಿಂದು ಗೆಲಿದನಮ್ಮವರನೀ ।
ದುರುಳಕುಂಭಾಖ್ಯಕಾಣೈ ॥
ಧುರದೀರ ದಶಕಂಠಗತಿಹಿತಪ್ರಬಲ ನಿ ।
ಷ್ಠುರ ಜಾಣಮತ್ತೆ ಕೇಳೈ । ॥345॥

ವೀತಿ ಹೋತ್ರನಜಪದಾತನು ಪ್ರತಿಯಗ್ನಿ ।
ಯಾತೆರಥುರರಂಗದಿ ॥
ಈತನಗೆಲು ವಂಥ ರೀತಿಯೆಂತೆನಲಿನ ।
ಜಾತನೆರಗಿಪಾದದಿ । ॥346॥

**ರಾಗ ಮಾರವಿ ಏಕತಾಳ**

ಯಾಕಿನಿತೆಂಬುದುಖಳ ಕುಲತಿಮಿರ ಪ್ರ ।
ಭಾಕರನಾನಿರಲು ॥
ಸಾಕೆನಿಸುವೆ ರಿಪುಗಳನುವಿಭಾಡಿಸಿ ।
ಶಾಕಿನಿಯರಿಗುಣಲು । ॥347॥

ಕುಂಭಾ ಸುರನ ಬಲಾಂಬುಧಿಕುಂಭಜ ।
ನೆಂಬ ಬಿರುದನಿಂದೆ ॥
ಕುಂಭಿನಿಯೊಳು ನಾ ತುಂಬುವೆ ನೋಡಬು ।
ಜಾಂಬಕನೆನಲಿರದೆ । ॥348॥

ಆಡದೆ ನೀನೀ ಬಾರಿ ಮದಾಂಧರ ।
ಛೇದಿಸಿ ಬಿಸುಡೆನುತ ॥
ಮಾಧವ ಪರಸುತಕಳುಹಲು ಕಪಿ
ಪಡೆ ಗೋದಿದನಿನಜಾತ ॥349॥

**ರಾಗ ಮಾಧ್ಯಮಾವತಿ ಏಕತಾಳ**

ಕೇಳಿವನೌಕಸವರರೆನ್ನ ಮಾತ ।
ಗಾಳಿನಂದನ ನೀಲಾದಿಗಳೆಲ್ಲನಿರತ  ॥ ಪಲ್ಲವಿ ॥

ಇಂದಿನಾಹವ ಭಾರ | ಬಂದುದೆಮ್ಮಯ ಭಾಗ |
ಕಂದದಿಂದಿರ ದೇಳಿ | ನಿಂದಿರಬೇಡಿ ||
ಬಂದನಿಷ್ಠೂರಮ | ದಾಂಧಸಮಗ್ರರೊ |
ಳ್ಮುಂದೆ ನಿಮ್ಮಯಶೌರ್ಯ | ಮಂದೋರಿ ಪೊಯ್ದಡಿ | ||350||

ಕೆಡಹಿರಣಾಂಗಣ | ದೆಡೆಯೊಳವರ ಕರು |
ಳುಡಿಸಿ ತೋರಣದಿಂದ | ಲೆಡೆಬಿಡದುರಿದು ||
ಪಿಡಿದೌಕಿಜಯಲಕ್ಷ್ಮಿ | ಗೊಡೆಯರೆನಿಸಿ ಸುಖ |
ಕಡಲೊಳಾಳುವ ಬಲು | ಮಿಡುಕುಳ್ಳಭಟರಿಂದು | ||351||

**ರಾಗ ಶಂಕರಾಭರಣ ಮಟ್ಟೆತಾಳ**

ಜಡಜಸಖಕುಮಾರನೆಂದ |
ನುಡಿಯಕೇಳುತುರುಸಮರ್ಥ |
ಪಡೆಗಳರಸ ಹನುಮಮುಖ್ಯ | ರೊಡನೆಗಜರುತ |
ಮಡನಿವಾಸ ಶಿಖರಸರಿಯ |
ಪೊಡವಿಧರ ಮಹೀಜ ಕಲ್ಲು |
ಗಡಣಧರಿಸಿ ಯುದ್ಧಕಣದಿ | ಸಿಡಿದು ಪರ್ಬುತ | ||352||

ಮೊರೆಯಲದನು ಕಂಡು ದೈತ್ಯ |
ತರಳಕುಂಭನಾಜ್ಞೆಯಿಂದ |
ಉರುವಿರೋಧವೆತ್ತು ದನುಜ | ರುರುಬುತಾಗಳು ||
ಬಿರುಸ ತೋರಿರೆಲವೊ ಕಲ್ಲು |
ಮರಗಳಣ್ಣರೆನುತ ಬಲುಕಾ |
ಹುರತೆಯಿಂದ ಸರಳಮಳೆಯ | ಸುರಿದು ತಾಗಲು | ||353||

ಚೂಣಿಯಲ್ಲಿ ಮುಂದುವರಿವ |
ಕೌಣಪರನು ಹನುಮನೀಲ |
ಜಾಣನಂಗದಾದಿಭಟರ | ಶ್ರೇಣಿ ಮುಸುಕುತ ||
ಕೇಣದೊಳಗೆ ಸವರುತಿರಲು |
ಕಾಣುತಲಿಯೂಪಾಕ್ಷನಾಗ |
ಬಾಣಗೊಂಡು ತರಿವುತಿರದೆ | ಮೇಣುಕನಲುತ | ||354||

**ವಾರ್ಧಕ**

ಸೊಕ್ಕಿ ಕಪಿವಾಹಿನಿಯನಟ್ಟಿದಂ ಮೆಟ್ಟಿದಂ |
ಮಿಕ್ಕ ಬಲಶಾಲಿಗಳ ಧಟ್ಟಿದಂ ಕುಟ್ಟಿದಂ |
ಸಿಕ್ಕಿದರ ಹಿಡಿಹಿಡಿದು ತಿಕ್ಕಿದಂ ಮುಕ್ಕಿದಂ ದೆಕ್ಕ ತುಳ ಶೌರ್ಯದಿಂದ ||

ಸೊಕ್ಕಾನೆ ಕೊಳಕದಡುವಂದದಿಂಬಂಧದಿಂ ।
ದುಕ್ಕಿ ಖಳನೈತಹುದ ಕಾಣುತ್ತ ಮೇಣತ್ತ ।
ತಕ್ಕಭಟಕಪಿ ದ್ವಿವಿಧ ತಡೆ ದೆಂದ ಕಡುಹಿಂದ ಮುಕ್ಕಣ್ಣ ನಂದದಿಂದ । ॥355॥

**ರಾಗ ಘಂಟಾರವ ಅಷ್ಟತಾಳ**

ನಿಲ್ಲುನಿಲ್ಲೆಲೋ ಘಡನಕ್ತಂಚರವೀರ ।
ಎಲ್ಲಿಗೈದುವೆಮಲ್ಲ ಪ್ರತಿ ಭಟ। ರಲ್ಲವೇನಾವೆಂದನು । ॥356॥

ಮರುಳುಕೋಡಗ ನೀನೊಮ್ಮೆ ತಡೆವೆಯ ॥
ಸುರಪ ದುಹಿಣಾದ್ಯರುಗಳೆಮ್ಮಂ ।
ತರಕೆ ನಡುಗುವರರಿಯೆಲಾ । ॥357॥

ಬಲ್ಲೆಬಲ್ಲೆದಿವೌ ಕಸರನು ಗೆಲ್ದ ॥
ಬಲ್ಲವಿಕೆ ತೋರೀವನೌಕಸ ।
ನಲ್ಲಿಸೆಣಸಿದು ಬದುಕೆಲಾ । ॥358॥

ಈ ಸುವಿಕ್ರಮನಹೆಯ ನೋಡಾದಡೆ ।
ಈ ಸುಸತ್ವವನೆನುತಖಳಶಶಿ ।
ಹಾಸವನು ಕೊಂಡೆರಗಿದ । ॥359॥

ತಡೆದು ಗಾಯವ ಪುಟನೆಗೆದುರುಶೈಲ ।
ಝುಡಿಯೆರಿಪುಶಿರ । ಪೊಡೆದು ನೆತ್ತರು ।
ಬುಡುಬಡಿಸೆ ಸರ್ವಾಂಗದಿ । ॥360॥

**ಭಾಮಿನಿ**

ಸುರರು ಕಂಡುಬ್ಬಿರಿದು ಹೂವಿನ ।
ಸರಿಯ ಸುರಿದರು ದ್ವಿವಿಧನಂಗದೊ ।
ಳಿರದೆ ಬಳಿಕದ ಕಂಡುನೆರೆಕ್ರೋದಾಗ್ನಿ ಧಗಧಗಿಸೆ ॥
ಧರಣಿಮಂಡಲ ಬಿರಿಯಪೋಲ ।
ಬ್ಬರಿಸುತಗ್ಗದ ಶೋಣಿತಾಕ್ಷನು ।
ಧುರಕೆಮಿಂಚಲು ತಡೆದನಗ್ನಿಕುಮಾರನಿಂತೈಸೆ । ॥361॥

**ರಾಗ ಭೈರವಿ ಏಕತಾಳ**

ಎಲೆರಾತ್ರಿಂಚರವರನೆ । ನಿ ।
ಲ್ಲಲಸದೆ ಧುರಕೆನ್ನೊಡನೆ ॥

ಚಲಿಸುವೆ ಮುಂದಾವಲ್ಲಿ । ಭುಜ ।
ಬಲವ ಪರೀಕ್ಷಿಪೆ ನಿಲ್ಲಿ । ॥362॥

ಮೆಚ್ಚಿದೆ ನಿನ್ನಯ ನುಡಿಗೆ । ಮದ ।
ಹೆಚ್ಚಿದಕರಿಯಹೆನೆನಗೆ ॥
ಬೆಚ್ಚಿಸುವೆಯ ಮಾತಿನೊಳು । ಶರ ।
ದಚ್ಚಸವಿಯನೋಡೆನಲು । ॥363॥

ಕೇಡಿಗರಾವಣನೋರ್ವ । ನಿ ।
ಷ್ಕೇಡಿಗರೈನೀಸರ್ವ ॥
ರೂಢಿಪತಿಯ ಮರೆಹೊಕ್ಕು । ಖಯ ।
ಖೋಡಿಲ್ಲದೆ ನೀ ಬದುಕು । ॥364॥

ಅಳುಕೆನು ತನು ನಿಶ್ಚಯವೆ । ಇಂ ।
ದುಳಿದರು ನಾಳೆಯೊಳಾವೆ ॥
ಅಳಿವುದೆ ಕೀರ್ತಿಯಶೇಷ । ಬಿಡೆ ।
ಕೊಳುಗುಳದಲಿ ನೋಡೀಸ । ॥365॥

ನೋಡಾದಡೆ ಖಳಕಪಿಯ । ಧುರ ।
ಪಾಡನು ಮಡಿದವರೆಡೆಯ ॥
ಬೇಡಿಕೊ ಬೇಗದೊಳೆನುತ । ಶಿರ ।
ಗಾಢದಿತಿವಿದನು ಮತ್ತ । ॥366॥

**ಭಾಮಿನಿ**

ತಪ್ಪದೀನುಡಿಯೆಂದುಖಳದಿವ ।
ಕೊಪ್ಪಿದನು ಕೇಳಣುಗಲವನಿ ।
ನ್ನಪ್ಪಸಲೆ ಬಾಯ್ದಣಿಯೆ ಕೊಂಡಾಡುತಲಿದಳಪತಿಯ ॥
ಅಪ್ಪಲರಳನು ಸುರಿದರಮರರು ।
ಕಪ್ಪಡವ ಸುತಗಿತ್ತ ಶಿಖಿಕಂ ।
ಡುಪ್ಪರಿಸಿ ಬರಲಾನಿಕುಂಭನ ತಡೆದ ಹನುಮಂತ । ॥367॥

**ರಾಗ ಮಾರವಿ ಏಕತಾಳ**

ಬಾರೆಲೊ ರಕ್ಕಸ ಪೋರನೆ ಹನುಮನನ ।
ಭಾರಿಕರಾಯತದ ॥
ಸಾರಪರೀಕ್ಷೆಗೆ ತಾರದೆ ಫಡಫಡ ।
ಸಾರದಿರೈಮುಂದಾ । ॥368॥

ಬಡ ಮರ್ಕಟ ವಾಲಧಿಯನು ಸುಡಿಸಿಕೊಂ ।
ಡೊಡನೋಡಿದಪ್ರೌಢ ॥
ಕಡು ಹನುಮರೆಯದಿರೆನ್ನೊಳು ಕರೆನಿ ।
ನ್ನೊಡೆಯನ ನಡೆಮೂಢ । ॥369॥

ಧಿರುರೆ ಶಭಾಸೆಲೆ ಪಾಮರ ಹೊಳೆಯು ।
ತ್ತರಿಸದೆ ಜಲನಿಧಿಯ ॥
ಪರಿಲಂಘನಕಂಗೈಪೆಯಗೆಲಿದೆನ್ನ ।
ನೆರೆಕೇಳ್ ರಘುಪತಿಯ । ॥370॥

ಎನುತ ವನೆರಗಿದ ಹತಿಯನು ಸೈರಿಸಿ ।
ಹನುಮನ ವಕ್ಷವನು ॥
ಬಿನುಗನೆತೊಲಗದಿರೆಂದಾಗದೆಯಿಂ ।
ಕನಲಿಬಡಿದಖಳನು । ॥371॥

ಧಡಧಡಿಸುತಬಿದ್ದೊಡನಾವಿಲಯದ ।
ಸಿಡಿಲಂದದೊಳೆದ್ದು ॥
ಕಡೆನಿನಗೆಂದಾ ದಡಿಗನಶಿರ ತಿವಿ ।
ದಡೆಯಸುಮೇಲ್ವಾಯ್ದು । ॥372॥

**ಭಾಮಿನಿ**

ನಡೆಯೆಸುರಪುರಿಗಾಗಹರುಷೋ ।
ದ್ಗಡದಿಹನುಮನ ಹೊಗಳಿ ಸುಮಮಳೆ ।
ಬಿಡುನಯನರುರುಳಿಸಿದರಿನಿತನು ಕಂಡು ಕಲಿಕುಂಭ ॥
ಕಡೆಯ ಭೈರವನಂತೆ ಕಣ್ ಕೆಂ ।
ಪಡರೆರಥವೇರ್ದೊಡನೆ ಶರಗಳ ।
ಝುಡಿದು ವಾತೋದ್ಭವನ ತಡೆದಿಂತೆಂದ ಖತಿಯಿಂದ । ॥373॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಫಡಫಡ ಪಟುಭಟನಾದೆಲಾ । ಮರ ।
ಗಿಡಗಳಚರಿಸುವುದುಳಿದೆಲಾ ॥
ಕೆಡಹಿನಿಕುಂಭನರಣದೊಳು । ಎತ್ತ ।
ನಡೆವೆಯ ಬಿಡುನಿಲ್ಲು ಎನ್ನೊಳು । ॥374॥

ಅಹಹ ಮೆಚ್ಚಿದೆ ನಿನ್ನ ಮಾತಿಗೆ । ಮತ್ತೆ ।
ವಿಹಿತ ಸಂಗ್ರಾಮದ ರೀತಿಗೆ ॥

ಅಹಿಖಗರಾಜನ ಗೆಲುವುದೆ । ನಿನ್ನ ।
ಬಹುಶರ ವೆಮ್ಮನು ತಡೆವುದೆ । ॥375॥

ಇನಿತಪ್ಪಭಟನೆ ನಿಲ್ಲೆಲೊ ಕೋತಿ । ಎನ್ನ ।
ಅನುವರ ನೋಡೆನುತಲಿ ಖಾತಿ ॥
ಘನದಿಂದ ಶರತತಿಮುಸುಕಿದ । ಕಾದಿ ।
ಹನುಮನರಣದೊಳು ಮುಸುಕಿದ । ॥376॥

**ಕಂದ**

ಪರಿಭವಿಸಿದು ಮಾರುತಿಯಂ ।
ಧುರದೊಳು ನಳನೀಲರ ಪಲ್ಗಿರಿಸುತ ಮುಂದೈ ॥
ತರುವ ಭಟೋತ್ತಮನಂತಡೆ ।
ದುರೆಜರೆದನುರಿಪು ಕಾಲಗ್ರೀವ ಸುಗ್ರೀವಂ । ॥377॥

**ರಾಗ ಭೈರವಿ ಅಷ್ಟತಾಳ**

ಕಲಿಕುಂಭನಹುದೋನೀನು । ಸಂಗ್ರಾಮದಿ ।
ಕಲಿತಸುಪ್ರೌಢಿಯನು ॥
ಸಲೆತೋರಿರಿಪು ಮೇಘ ಮರುತನಾಬಂದೆಕೋ ।
ಮಲಪದ್ಮ ಸಖಸುತನು । ॥378॥

ತರುಣಿಜನ್ಯೆಸೆ ನೀನು । ಭಾಸ್ಕರಕುಲ ।
ದರಸಿನ ಪ್ರಿಯಸಖನು ॥
ಮರುತಪಾವಕರಂತೆ ನೀವ್ ಮಿತ್ರರಾದುದ ।
ಚ್ಚರಿ ತೊಲಗದಿರೆಂದನು । ॥379॥

ಮೂಕೊಕರೈಖಳರು । ನಿನ್ನಪ್ಪನ ।
ಕೊಕತನವ ಕಂಡಿರು ॥
ಯಾಕೆಲೋರಣಭಂಡನಿಲುನಿಲು ಶಿರಕೀಗ ।
ತಾಕೊಕನಹೆನಿಂದಿರು । ॥390॥

ಅಕಟ ಮತ್ತಾತನನು । ಭಂಗಿಸಿದವೈ ।
ಸಿಕದ ಹೆಗ್ಗಳಿಕೆಯನು ॥
ಸಕಲ ತೋರಣ್ಣನ ಕೊಲಿಸಿದ ದ್ರೋಹಿ ನಾ ।
ಸಿಕಕೆ ಮಸ್ತಕಗೊಂಬೆನು । ॥391॥

ಬಗುಳದಿರೆಲವೊ ಮೂಢ । ನೋಡಾದರೊ ।
ಮೈಗೆನಮ್ಮ ಸಮರ ಪಾಡ ॥
ಹಗರಣದಿರುಳ ಗರ್ವವ ತೋರೆನುತ ಮುಷ್ಟಿ ।
ಬಿಗಿದೆರಗಿದ ಕುಂಭನ । ॥392॥

ಎಷ್ಟು ಸಾಹಸಗೊಂಡರು । ನಿನ್ನನು ಫಡ ।
ಹುಟ್ಟು ಮರ್ಕಟನೆಂಬರು ॥
ದಿಟ್ಟತನವ ನೋಡೆನುತ ಗದೆಯಿಂದಿಡೆ ।
ಸೃಷ್ಟಿಗಿನಜಬಿದ್ದನು । ॥393॥

**ವಾರ್ಧಕ**

ಮೀರಿದಂಕಪಿಪತಿಯ ವಾನರ ಮಹಾಬ್ಧಿಯಂ ।
ಬೀರಿದಂ ತನ್ನಶರ ವಡಬಾಗ್ನಿಯಿಂ ಖಳಂ ।
ಏರಿದಂ ಖತಿಶಿಲೋಚ್ಚಯವಮಿಗೆ ರಘುಜನಂ ಸಾರಿದಂ ಬಲುಭರದೊಳು ॥
ತೂರಿದಂ ಬಾಣೌಘಮಾಗಸೀತಾಧವಂ ।
ಕಾರಿದಂ ಕಣ್‌ಕಿಡಿಯ ಕೋದಂಡ ಧ್ವಾನವಂ ।
ತೋರಿದಂ ಭುವನ ತ್ರಯಂ ನಡುಗೆ ಕುಂಭಜಂ ಜಾರಿದಂ ಕೊಳ್ಳೆಂದನು । ॥394॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಏನೆಲವೊರಿಪುವೆಂದು ಗಾಳವ ।
ಮೀನು ನುಂಗಿದು ಬಾಳ್ವುದೇಖಳ ।
ನೀನು ನಮ್ಮಾಹವದೊಳುಳಿವ ವಿ । ದೊಳುಳಿವಧಾನಪೇಳ್ಕೈ । ॥395॥

ಎನಲು ರಘುವರ ಗೆಂದಕೇಳ್ ನರ ।
ಮನುಜಕುರಿಮದವೇರಲಾನೆಯ ।
ಹನನ ಗೈವುದೆ ಸೆಣಸಿನೋಡೆ । ನ್ನನುವರವನು । ॥396॥

ಆದಡಿದ ಕೊಳ್ಳೆಂದು ಬಾಣ ಮ ।
ಹೋದಧಿಯ ಕದರಿದನು ರಾಘವ ।
ಬೇಧಿಸಿದ ಖಳನರಿಯಶರ ನಡು । ಹಾದಿಯಿಂದ । ॥397॥

ಚಂಡಬಲಸೌಮಿತ್ರಿಮಿಗೆ ಮುಂ ।
ಕೊಂಡೊದಗಿ ರಘುವರನಬೆಸಕ್ಕೈ ।
ಕೊಂಡು ಧನುರ್ಘೋಂಕರಿಸಿ ವೈರಿಯ । ಕಂಡು ನುಡಿದ । ॥398॥

ಜಗದದೈವವ ಕೂಡೆ ಕದನವ |
ನೆಗಳುವರೆ ಫಡಖೋಡಿ ರಕ್ಕಸ |
ಬಗೆಯನೋಡಾಲಕ್ಷ್ಮಣಾಂಕನ ಖಗವಿದೆನಲು | ||399||

**ರಾಗ ಶಂಕರಾಭರಣ ಅಷ್ಟತಾಳ**

ಪೋರಲೇಸಾಯ್ತೆನ್ನಕೈಗೆ | ಭೋರನೆ ಸಿಕ್ಕಿದೆ ಮತ್ತೆ |
ನಾರಿ ಮೂಗಕೊಯ್ದಹಮ್ಮ | ತೋರುನೋಳ್ಪೆನು | ||400||

ತೋರಲೇನುಂಟೆಲೋಖುಲ್ಲ | ನಾರಿಮೂಗಕೊಯ್ದೆನಂದು |
ಮೀರಲಿಂದು ನಿನ್ನತಲೆಜ | ಜ್ಜಾರಮಾಳ್ಪೆನು | ||401||

ಭಳಿರೆ ಶೂರನಹುದೊ ಕೊಳು | ಗುಳದೊಳತಿಕಾಯನಸುವ |
ಸೆಳೆದಗರ್ವತೋರೆ ನಿನ್ನ | ನುಳಿಯಗೊಡೆನೆಂದ | ||402||

ಉಳಿಯ ಗೊಡೆನೆಂಬಹಮ್ಮಿ | ನೊಳವಬಲ್ಲೆ ರಾತ್ರಿ ಕೋತಿ |
ಗಳನು ಗೆದ್ದ ಪ್ರೌಢಕಯ್ಯ | ಚಳಕತೋರೆಂದ | ||403||

ನೋಡುನೋಡಾದಡೆನುತ್ತ | ಮೂಡಿಗೆಯಿಂ ಪೊಸಮಸೆ |
ಗೂಡಿದನಾರಾಚಜಾಲ | ಕೂಡೆ ತೆಗೆದೆಚ್ಚ | ||404||

ಗಾಢದಿಂ ಸೌಮಿತ್ರಿ ತುಂಡು | ಮಾಡಿಯದಸರಳೆಚ್ಚು |
ಝೂಡಿಸಿದ ವೈರಿತೇರ | ನಾಡಲೇನ್ ಹೆಚ್ಚು | ||405||

**ಭಾಮಿನಿ**

ರಥ ಮುರಿಯೆಬೇರೊಂದು ಪೊಸಮಣಿ |
ರಥದಿಮಿಂಚಲು ಕಡಿದ ನಿಂತರಿ |
ರಥಸಹಸ್ರವತರಿದುವಿರಥನ ಗೈದಡಾಖಳನು ||
ಪಥಿವಿಕಂಪಿಸುವಂತೆ ಗರ್ಜಿಸಿ |
ಪಥುಲಬಲನಿಂದೊಡನೆ ತ್ರಿಪುರರ |
ಮಥನನೋಲ್ ಕಿಡಿಗೆದರುತೆಚ್ಚನಿಕುಂಭಿಳಾಸ್ತ್ರವನು | ||406||

**ರಾಗ ಮಾರವಿ ಏಕತಾಳ**

ಅಚ್ಚರಿಯದನೇನೆಂಬೆನುಕುಶಕೇಳ್ |
ಕಿಚ್ಚಿನಮಯದಿಂದ ||
ಬೆಚ್ಚಿ ತುತ್ರಿಭುವನಖಳಹುಂಕರಿಸಿ ಕಾ |
ಳ್ಕಿಚ್ಚಿನ ವೋಲ್ ನಿಂದ | ||407||

ಅದಕಾ ಬೆಚ್ಚುವ ಚದುರನೆ ಲಕ್ಷ್ಮಣ ।
ನುದಧಿಯ ಮಂತ್ರಾಸ್ತ್ರ ॥
ಕೆದರಿದುಗೆಲಿ ದಾಶಿಖಿಯನು ನಿಲ್ಲೀಲೊ ।
ಮದಮುಖ ಏನೆಂದ । ॥408॥

ಏನೆಲೊನರ ಗುರಿಹೀನಿಪೆಶರಸಂ ।
ದಾನವಿದೇಯೆನುತ ॥
ಅ ನಿಯತಿಯ ಶರವೆಚ್ಚಡೆ ಶಶಿಧರ ।
ಧ್ಯಾನದಿಗೆಲೆಧೂರ್ತ । ॥409॥

ಮತ್ತಾತಿಮಿರಭುಜಂಗಾಸ್ತ್ರಗಳನು ।
ಮುತ್ತಲುಹರಿಗರುಡ ॥
ಸತ್ವದಿಗೆಲಿದಾಖಳ ಕಾರ್ಮುಕವನು ।
ಕತ್ತರಿಸಲು ಜರೆದ । ॥410॥

ಪೂತುರೆ ಲಕ್ಷ್ಮಣ ಧನುಮುರಿದಡೆನಾ ।
ಸೋತೆನೆ ತೊಲಗದಿರು ॥
ಆ ತುಕೊಗದೆಯಿದರಾತಿಶಯವನೆಂ
ದಾತ ನುಲಿಯಲಿದಿರು । ॥411॥

**ಭಾಮಿನಿ**

ಎದ್ದು ರವಿಸುತನನಿತರೊಳು ನಿಂ ।
ತಿದ್ದ ರಘುಜಾನುಜನ ಕಂಡಿದು ।
ಪೊದ್ದಿನೇಮವಮನ ಹಾವಿಗೆರಗುವ ಹದ್ದಿನೋಲತ್ತ ॥
ಗದ್ದರಿಸುತೈತಂದು ಖೂಳನ ।
ಗುದ್ದಿದನು ಕೋಪದಲಿಧರೆದನಿ ।
ಹೊದ್ದಲವಬಿದ್ದೇಳ್ದು ನಿಂದಿರೆಪೇಳ್ದನರ್ಕಸುತ । ॥412॥

**ರಾಗ ಶಂಕರಾಭರಣ ಅಷ್ಟತಾಳ**

ಎಲೆ ಮಂದಾಂಧನಿನ್ನ ಶೌರ್ಯ ।
ಜಲಧಿ ವಡಬನೆನ್ನನುಳಿದು ।
ಬಲು ಹತೋರ್ಪೆಯಕಟ ಸೂರ್ಯ । ಕುಲಲಲಾಮರ ॥
ಗೆಲುವೆನೆಂದುನೆನೆಸಿದಿಷ್ಟ ।
ಫಲವನಿದೊ ಕಯ್ಯರೆ ಕೊಡುವೆ ।
ಗೆಲಿವೆಯೊಂದುಬಾರಿಗೆಂಬ । ಬಲುಮೆತೋರ್ತೋರ । ॥413॥

ತೋರಲೇನು ಸೋತುಮರಳಿ |
ಸಾರಿದೆಯಲ ಕೋತಿಮೊದಲೆ |
ಮಿರಿಸುಧೆಯಕುಡಿಯೆ ಚೇಳು | ಗೀರೆಕಾಲಿಗೆ ||
ಹಾರಿಕುಣಿಯುವಂತೆ ಕುಣಿದು |
ಪಾರದಿರು ಕತಾಂತನೆಡೆಗೆ |
ಸಾರಿನಿಲ್ಲೆನುತ್ತತಿವಿದ | ಜಾರದಿನಜಗೆ | ||414||

ಅಮ್ಮೆನುತ್ತಲುರುಳಿಯೊಡನೆ |
ಘಮ್ಮೆನುತ್ತಲೆದ್ದು ಕೇಳೊ |
ನಿಮ್ಮಹಣೆಯಲಿಖಿತವಿದೆಲ | ನಮ್ಮ ಕೈಯೊಳು ||
ಬೊಮ್ಮತಾನೆ ಬರಲಿಗೆಲುವ |
ಹಮ್ಮನೋಳ್ಪೆನೆಂದು ಭರದಿ |
ಸೊಮ್ಮಕರದಿ ಖಳನಶಿರವ | ನೆಮ್ಮಧರೆಯೊಳು | ||415||

ಬಿದ್ದು ಕುಂಭನಾಗಲತಿಯು |
ಬ್ಬೆದ್ದು ಕಾಲಹಿಡಿದುತಿರುಹಿ |
ಯದ್ಧಲಿನಜನಬ್ಧಿಯಿಂದ | ಲೆದ್ದುಭರದಲಿ ||
ಯುದ್ಧಸಾಕೆನಿಸುವೆ ಭಳಿರೆ |
ಗೆದ್ದಗೆಲವ ಮಾಣುಮಾಣೆಂ |
ದೊದ್ದುರವಿಜಗೆಲಿದ ಮರಳಿ | ಗುದ್ದಿಧುರದಲಿ | ||416||

ಇಂತುನೂರು ಬಾರಿಸೆಣಸಿ |
ನಿಂತರವಿಜಗಾಗಶರಣ |
ಗೊಂತುಗೊಳಿಸಿದನು ಕೈಸನ್ನೆ | ಯಾಂತುಮರ್ಮವ ||
ಹೊಂತಗಾರಿಕಂಡು ಕೆರಳಿ |
ಭ್ರಾಂತನಿಲ್ಲೆನುತ್ತಸೀಳಿ |
ಯಂತಕನಮೇಣ್ಸುರರ ಭವನ | ಕಂತುಭಾಗವ | ||417||

**ಭಾಮಿನಿ**

ಇಟ್ಟನೊಂದೊಂದಹಿತ ಕಾಯದ |
ಥಟ್ಟುಗೆಯ ಹೋಳೆರಡನಮರರು |
ದಿಟ್ಟೆಸುತಭಾಪೆಂದು ಸುಮಮಳೆಸುರಿಸೆತನಯಂಗೆ ||
ಕೊಟ್ಟು ಕಳುಹಿದ ಹನುಮನಯ್ಯನೊ |
ಳಿಟ್ಟ ಮಣಿಹಾರವ ಪ್ರಭಾಕರ |
ನಟ್ಟ ಹಾಸದಿ ಮರುತಜನುತಬ್ಬಿದ ಕಪೀಶ್ವರನ | ||418||

**ಕಂದ**

ಒಬ್ಬರು ಮುಳಿಯದ ತೆರದಿಂ ।
ಕೊಬ್ಬಿದ ರಕ್ಕಸದಳವವಿ ಭಾಡಿಸಿ ಬಳಿಕಂ ।
ಉಬ್ಬಿದಹರುಷೋತ್ಕಟದಿಂ ।
ಸಬ್ಬಾಣಿಪ್ರಿಯಮಿತ್ರನ ಸಾರಿದು ಮಣಿಯಲ್ಕಂ । ॥419॥

**ರಾಗ ಭೈರವಿ ಝಂಪೆತಾಳ**

ಕಂಡುಪುಳಕದಲಿ ಮಾ । ರ್ತಾಂಡಕುಲಭವನು ಸೆಲೆ ।
ಕೊಂಡಾಡಿದನು ಸುಪ್ರ । ಚಂಡ ಬಲರೆನುತ ॥420॥

ವಾನರೇಶ್ವರ ಕೇಳು । ದಾನ ವಾಮರೊಳಗೆ ।
ತಾನಾರುಸರಿನಮ್ಮ । ಸೈನಿಕರಿಗಹಹ । ॥421॥

ಸಮರ ಸಾಕೆಮಗಿಂದು । ಕುಮತಿಗಳ ದಿಗ್ವಿಜಯ ।
ನಮಗಾಯಿತಪರಾಬ್ಧಿ । ಗಮರ್ವನ್ನೈಭಾನು । ॥422॥

ಅಬುಜಕೋರಕವಾತು । ಸುಬಲರೀಕ್ಷಿಪುದೆನುತ ।
ಶಿಬಿರಕಭಿಮುಖನಾದ । ವಿಬುಧನುತರಾಮ । ॥423॥

**ವಾರ್ಧಕ**

ತರುಣಕೇಳನ್ನೆಗಂ ಲೋಕದಿಲತಾಂಗಿಯರ್ ।
ಪುರುಷನಪರಾಂಗ ದೊಳಗನ್ಯರಂ ನೆರೆವರತಿ ।
ಯಿರಬಹುದು ಕಣ್ಮಂದೆಸತಿಕಮಲೆ ಚಾಂಚಲ್ಯೆ ಹಂಸಪುನ್ನಾಗದುಂಬಿ ॥
ದೊರೆಗಳೊಡವೆರವಳಿವಳುರೆ ಮಿತ್ರಳಾದುದಂ ।
ಗುರುಮಂಗಳೋನ್ನತಿಯಪಳಿದು ದ್ವಿಜರಂದಗೆಡಿ ।
ಸಿರುವ ಕಾರಣವಿನ್ನು ಮಿವಳಗಲದಿರೆನೆಂಬತೆರದೊಳಿನ ಮರೆಯಾದನು । ॥424॥

**ಭಾಮಿನಿ**

ಅಂದಿರುಳು ಲವಕೇಳುವಿಭವದಿ ।
ಮುಂದುಲಿವಸುರನರಭುಜಂಗಮು ।
ವಂದ ದೊಗ್ಗಿನೊಳಿತ್ತನೊಡ್ಡೋಲಗವ ದಶಕಂಠ ।
ಬಂದುತತ್ಸಮಯದೊಳು ಖಳರಾ ।
ಜೇಂದ್ರನಡಿಗಳಿಗೆರಗಿ ಕಣ್ಣೀ
ರಿಂದ ಕುಂಭನಸೂತ ಗದ್ಗದರವದೊಳಿಂತೆಂದ ॥425॥

**ರಾಗ ನವರೋಜು ಏಕತಾಳ**

ಯಾತುಧಾನಾಗ್ರಣಿಯೆ | ಕೇಳ್ | ಮಾತಸುದ್ಗುಣಮಣಿಯೆ ||
ಸೀತಾವಲ್ಲಭ | ನಾತಗಳುಪಹತಿ |
ರೀತಿಯನೆಲ್ಲವ | ನೀತವೆಚಿತ್ತದಿ || ಯಾತು | ||426||

ವರಯೂಪಾಕ್ಷಾದಿಗಳು | ಹೊ | ಕ್ಕರುಮುನ್ನಾಸಮರದೊಳು |
ಪರಿಪರಿಕೋಡಗ | ವರರೊಳು ಸೆಣಸಿದು |
ತೆರಳಿದ ರೈಭವ | ದುರುಳಿಯ ಹರಿದೂ || ಯಾತು | ||427||

ಏನೆಂಬೆಕಲಿಕುಂಭ | ಮ | ದ್ದಾನೆಯಾಹವರಂಭಾ ||
ವಾನರಪತಿಮುಖ | ರಾನುತತೊಲಗಲು |
ತಾನುರೆ ಕೆಣಕಿದ | ಭಾನುಕುಲಜನ | ||428||

ಅಗಲಕ್ಷ್ಮಣಪೋರ | ನನು | ವಾಗಲೀ ರಣಧೀರ |
ಬೇಗುದಿಗೊಳದಿರ | ಲಾಗಹರೀಶ್ವರ |
ತಾಗಿಗೆಲಿದ ಧುರ | ದಾಗಮವಿದುವೆ | ||429||

**ಭಾಮಿನಿ**

ನುಡಿಯನದಕೇಳುತ್ತ ಕಂಗಳೊ |
ಳಿಡಿದ ವಶ್ರುಕಣಾಳಿವೈರಿಗ |
ಳೊಡೆದರೇ ರಾಕ್ಷಸಚಮೂಪರ ವೀರರಸಕುಂಭ ||
ಮಡಿದರೇಕುಂಭಾದಿಗಳು ಜಯ |
ಗುಡಿಯಹತ್ತಿದರೇ ವಿರೋಧಿಗಳ್ |
ಪಿಡಿದರೇ ಛಲ ಸಂದುದೇಯೆಂದಸುರನಳವಳಿದ | ||430||

**ರಾಗ ನೀಲಾಂಬರಿ ರೂಪಕತಾಳ**

ಪೇಳುವೆನಾರಿಗೆಯನ್ನ ವಿ | ಟಾಳಿಸಿದತಿಯ ವಿಪತ್ತಿನ |
ಬೇಳಂಬವ ಪರಿಹರಿಪುದು | ಭಾಳಾಂಬಕಗರಿದು | || ಪಲ್ಲವಿ ||

ತಂಗಿಯ ನುಡಿಯೆನಗಂದಿಗೆ | ಇಂಗೋಲಂತಾಯ್ತಿಂದಿಗೆ |
ಸಿಂಗಿಯೋಲಾದುದು ಮತ್ಕುಲ | ಭಂಗವಿದಾದುದಲಾ ||
ಅಂಗದಿಪೋದ ವಿಭೀಷಣ | ಹಿಂಗದೆ ಕುಂಭಶ್ರವಣನು |
ಹಿಂಗಿದರಿಂತಿಬ್ಬರುಸಹ | ಕಂಗೊಳಿಸರುಬರರು | ||431||

ಅತಿಕಾಯಾಖ್ಯನು ಮೊದಲೇ | ಗತಿಸಿದ ತಾನಿಂದಿನೊಳೇ |
ಮತಿಯುತಕುಂಭಕ ಮಡಿದನು | ಜತೆಯಾರೆನಗಿನ್ನು ||

ಸುತಶಕ್ರಾರಿಯುರಿಪುಗಳ । ಹತಿಸಿದನಹಿಯಜರಾಸ್ತ್ರದೊ ।
ಳತಿಶಯಜಯವದು ಸ್ವಪ್ನದ । ಗತಿಯಾಯ್ತುಂದರಿಂದ । ॥432॥

**ಭಾಮಿನಿ**

ಅಳಲುತವನಿಂತಿರಲು ಬಳಿಕದ ।
ತಿಳಿದು ವಜ್ರಜ್ವಾಲೆ ಖಳದಶ ।
ಗಳನಸಭೆಗೈತಂದು ನೋಡಿದಡಾಗಲಾಸ್ಥಾನ ॥
ಮೊಳಗಿದಬ್ಬರವಿಳಿದ ಗಗನ ।
ಸ್ಥಳವೊ ಮೇಣ್ ಮುಂಗಾರ ಮೇಘದ ।
ಸುಳಿವು ನಿಂದಂಬುಧಿಯೊಯೆನಲಿರೆ ಬಿದ್ದು ಹಲುಬಿದಳು । ॥433॥

**ರಾಗ ನೀಲಾಂಬರಿ ಆದಿತಾಳ**

ಅಕಟಕಟೆನ್ನಯ ಮಗನೆ । ಸಕಲಕಲಾಶೋಭಿತನೆ ॥
ಪಕೃತಿ ರಿಪು ಕುಲಸ್ತಂಭ । ಸುಕತನಿಧಿಬಾರಕುಂಭ । ॥434॥

ಪರಿಪರಿಪೇಳಿದಮಾತ । ತೊರೆತೊರೆದ್ಯೆದಿದೆಖ್ಯಾತ ॥
ಹರಣವ ಸೋದರರ್ಸಹಿತ । ಅರಿಗಳಿಗಿತ್ತಿರೆ ಜಾತ । ॥435॥

ಪತಿಯಳಿದಾಶೋಕವನು । ಸುತರನು ಕಂಡ್ಮರೆತಿಹೆನು ॥
ಗತಿಮತಿಯೇನೆ ನಗಿನ್ನು । ಕ್ಷಿತಿಯೊಳನಾಥೆಯು ನಾನು । ॥436॥

**ಕಂದ**

ಎನುತಲಿಧೊಪ್ಪೆನೆಕೆಡೆದಾ ।
ವನಿತಾಮಣಿ ಚೇತರಿಸುತ ಖೇದದೋಳಾಗಳ್ ॥
ಮನದಿಂಸೈರಿಸಲಾರದೆ ।
ದನುಜೋತ್ತುಂಗನ ನೋಡುತ ಕಟಕಿಯುನುಡಿದಳ್ ॥437॥

**ರಾಗ ನೀಲಾಂಬರಿ ಏಕತಾಳ**

ಕಂಡಿರೇಸುತರ ಹಬ್ಬವ । ಭಾವಯ್ಯ ಹರುಷ ।
ಗೊಂಡಿರೇ ಮುಂದೆ ರಾಜ್ಯವ ॥
ಕೊಂಡೇಕ ಭಾಗವಾಗಿ । ಪೊರೆಯಲಿ ನಿಮ್ಮ ।
ತಂಡ ಸಂಪೂರ್ತಿಯಾಗಿ । ॥438॥

ಪತಿಯನಂದಟ್ಟಿದಿರಿ । ಅಯ್ಯಯಿಂದೆನ್ನ ।
ಸುತರನಾಹುತಿಗೊಟ್ಟಿರಿ ॥

ಗತಿಹೀನೆಯಾದೆನಾನು । ನಿಮಗೇನು ಕುಂದು ।
ಸ್ಥಿತಿಯುಂಟುತಕ್ಕುದಿನ್ನು । ॥439॥

ದುಗುಡಭಾರವಿದೇತಕೆ । ಹತ್ತು ಮುಸುಡೊಳು ।
ನಗೆಯೊಂದು ಬಾರದೇಕೆ ॥
ಮಿಗಿಯಿನಿತಾಗೆ ಬಾಳೆಂದು । ಇರೆ ನಯ್ಯನಿಮಿಷ ।
ಮುಗಿಸೆನ್ನ ಕಡುಮುಳಿದು । ॥440॥

**ರಾಗ ತೋಡಿ ಅಷ್ಟತಾಳ**

ಎಂದು ಕಂಬಿನಿಯಿಂದ ಗೋಳಿ ।
ಟ್ಟಂದು ಮೂರ್ಛೆಗೆ ಸಂದು ಸಹಜನ ।
ಮಂದಗಮನೆಯ ನಿಂದು ತೆಗೆದೆತ್ತಿ ॥
ಚಂದಿರಾನನೆಯಳಲದಿರುಯೇ ।
ಳಿಂದವರು ನಾವ್ ನಾಳೆಯೆಂಬೀ ।
ದೊಂದನರಿಯದೆ ಭ್ರಾಂತು ತಲೆಗ್ಡತ್ತಿ । ॥ 441 ॥

ಗಜಭುಜಂಗವಿಹಂಗಗಳು ಸೆರೆ ।
ರುಜೆಗೆಮ್ಮೈಗೊಡುವುದು ದಿವಾಕರ ।
ದ್ವಿಜಪರಾಸ್ವರ್ಭಾನುಪಗೆಯೊಳಗೆ ॥
ನಿಜಕಲಾಸುಪ್ರೌಢಿಗೆಡುವುದಿ ।
ವಜನಲಿಖಿತಕಣಾನಿಧಾನಿಸೆ ।
ಭುಜಗವೇಣಿಯೆಚಿಂತೆ ಸಾಕೆಲೆಗೆ । ॥442॥

**ಭಾಮಿನಿ**

ಅಂದರೆಲೆತಾರೇಶಮುಖಿಕೇಳ್ ।
ಬೆಂದಹುಣ್ಣಿಗೆದೊಂದಿ ಮದ್ದೇ ।
ಮುಂದುಗೆಡಿಸದಿರೆನ್ನ ನೀನಡೆನಾಳಿನಾಜಿಯಲಿ ॥
ಕೊಂದವರನೆರೆಕೊಲ್ಲುವೆನುಹೋ ।
ಗೆಂದವಳ ಕಳುಹಿತಿರಲಲ್ಲಿಗೆ ।
ಬಂದನಾಮಕರಾಕ್ಷರಿಪುಕುಲದಕ್ಷತ್ರೈಯಕ್ಷ । ॥443॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಖೇದವೇಕೆಲೆ ಜೀಯ ಚಿತ್ತದೊ ।
ಳಾದುರಾಗ್ರಹರಾಹವಕೆ ಹಿಮ ।
ಕಾದಿವಾಕರ ನಂಜುವನೆ ನಿನ । ಗಾದುದೇನ್ನೈ । ॥444॥

ದೇವರಿಪು ಚಿತ್ತೈಸು ನಮಗಿ ।
ನ್ನಾವುದತಿಶಯ ನಾಳೇಧುರದಲಿ ।
ರಾವಣಾಸುರ ವೀರನೇಕೋ । ದೇವನೆಂದು । ॥445॥

ದೇವತತಿಬಾಯಿಂದ ನುಡಿಸುವೆ ।
ಸೇವಿಸಲಿ ಸುಧೆ ರಿಪುಗಳಾಮರು ।
ಜೀವಣಿಯೊಳೆಬ್ಬಿಸಲಿ ಬಿಡೆನುರ । ಣಾವನಿಯೊಳು । ॥446॥

ತಿಂಬೆನಗ್ಗದಕದನಕೀಶಕ ।
ದಂಬವನು ಕಪಿಪತಿಯ ಜೀವವ ।
ಕೊಂಬೆ ಕೊಡುವೀಳೆಯವ ಘನ ಸಂ । ರಂಭದಿಂದ । ॥447॥

ಅಂದುವನದಲಿತನ್ನ ತಂದೆಯ ।
ಕೊಂದರಾಮನ ಕೊಲುವೆ ಮೊದಲಲಿ ।
ಬಂದಸೋಲಾಂಬುಧಿಗೆಸೇತುವೆ । ಯಂದವಹೆನು ॥448॥

**ಭಾಮಿನಿ**

ಧುರಧುರಂಧರ ಕೇಳು ಎನ್ನೀ ।
ವರೆಗೆನೀಸಾಕಿದಕೆ ನಾಳೆಯೊ ।
ಳರಿಗಳತಿ ಬಿಸಿರಕುತದಿಂಕುಲದೇವಿ ಕುಂಭಿಣಿಗೆ ॥
ಭರಿತತರ್ಪಣವೀವೆ ಕಳುಹೆಂ ।
ಬುರುಪರಾಕ್ರಮಿಗಪ್ಪಿಮುದ್ದಿಸಿ ।
ಧುರುವಜ್ಯೆಸೆಂದಿತ್ತಕರ್ಪುರ ಕವಳನಗೆಮಿನುಗೆ । ॥449॥

**ಕಂದ**

ಹರಿದುದುವೋಲಗವಾಂಗಂ ।
ಬರತುದುನಿಶಿಯೆನ್ನೆಗಾರಾಮಾರ್ಚನೆಗಂ ॥
ನೆರೆಕೆಂದಾವರೆಯಲರಂ ।
ತರುವಳೊಪೂರ್ವದಿಶಾಂಗನೆಯೆ ನಲಿನನೆಸೆದಂ ॥450॥

**ವಾರ್ಧಕ**

ಆಹಂಸನುದಯದೊಳ್ ಮಕರಾಕ್ಷ ತನ್ನ ಸರಿ ।
ಯಾಹವಸಮರ್ಥರುಂ ನೆರಹಿದಂತಾನೂರ ।
ಕ್ಷೋಹಿಣಿಯ ಝುಗಝುಗಿಪರತುನಮಯ ರಥಗಳಂ ಗಜತುರಗಪದಚರರನು ॥
ಆ ಹರಂಗರಿದುಲೆಕ್ಕಿಪಡೆ ಮಿಗೆ ಭೋರೆಂಬ ।

ವಾಹಿನೀರವಕಮಲಜಾಂಡ ಜರಿವಂತಾಗೆ ।
ಮೋಹರಕೆ ಬಲಸಹಿತಲಂಕಾಮಹಾದುರ್ಗವಿಳಿದೈದಿದರ್ ಭರದೊಳು । ॥451॥

**ರಾಗ ಆಹೇರಿ ಝುಂಪೆತಾಳ**

ಬವರಕೈತಂದನಾಗ । ಮಕರಾಕ್ಷ ।
ಜವನಭಟದಂಥಬಲದವರೊಳುಲಿದಾಗ । ॥ ಪಲ್ಲವಿ ॥

ಹೇಳಲೇನ್ ವಿಲಯಶಿವ । ನಾಳುಗಳೊ ರಕ್ಕಸರೊ ।
ವ್ಯಾಳದಂತಿಗಳೊ ಖಳ । ನಾಳದಂತಿಗಳೊ ಇದ ।
ಪೇಳಲಾರಳವೊ ಕೆಂ । ಧೂಳೆದ್ದು ಪದಹತಿಗೆ
ತೂಳಿತೇಳ್ ಭುವನದರೆ । ಯಾಳಿತಬ್ಧಿಯೊಳೆನಲು ।  ॥452॥

ಕರಿಯದಾರೈ ಬರಲಿ । ಕರಿಗೊರಳನೆಮ್ಮ ಧುರ ।
ಕರಿದೆನುತಭೋರೆಂದು । ಕರಿಮೈಯ್ಯ ವರಕಹಳೆ ।
ಕರಿಯಕೇತುಕದಂಬ । ಕರಿಲೆಂದು ಕೇತುವಂ ।
ಕರಿದುಡುಕೆ ಕೂರ್ಮಫಣಿ । ಕರಿಗೆಯುಬ್ಬಸ ವೆನಲು ॥ ಬವರ । ॥453॥

**ವಾರ್ಧಕ**

ಭೋರೆಂಬಭೂರಿಭೆರಿಗಳ ಘನ ನಾದದಿಂ ।
ಸಾರೆಂಬಭಟರ ಬಾಹಾರವ ವಿಶೇಷದಿಂ ।
ಧೀರಂಬಲೋತ್ಕರದ ದತಧನುರ್ನಾದದಿಂ ನಿತ್ರಾಣ ಜವಗಾಗಲು ॥
ಆರಂಭಮಿಂದಾಗುವಂತಾಗದಿರದಜಗೆ ।
ಭೂರಂಭೆ ಮೇಲೆ ಯಾಪತ್ತಿನಿಂದಮರಗಣ ।
ಬೇರೆಂಬವೋಲ್ ಸುರಗಿ ಶೂಲಗಳ ಪಿಡಿದೈದಿಮುತ್ತಿದರ್ ಧುರಕಣನೊಳು । ॥454॥

**ಭಾಮಿನಿ**

ನಿಂದನಾನಿಜಸಕಲ ಸೇನೆಯ ।
ಮುಂದುಗಡೆಯಲಿ ತಾರಕಾಗ್ರಹ ।
ವಂದಮಧ್ಯದರವಿಯ ವೋಲ್ರಥವೊಳಗೆ ಮಕರಾಕ್ಷ ॥
ಹಿಂದಣತಿರಕ್ಕಸರಿಗಿವಹ ।
ನ್ನೊಂದುಮಡಿ ಕಾಣಿಸಲು ದಶರಥ ।
ನಂದನನು ನಿಜ ಚರಣಕಮಲಾರಾಧಕನೊಳೆಂದ । ॥455॥

**ರಾಗ ಕಾಪಿ ಅಷ್ಟತಾಳ**

ಬಂದವನಿವನ್ಯಾವವೀರ । ಗುಣ ।
ಸಾಂದ್ರನೀನೆನಗಿದ ಪೇಳುಗಂಭೀರ । ॥ ಪಲ್ಲವಿ ॥

ಇವನಂದಿನಂಧಕನೇನ್ಯೆ । ಮೇಣಿ ।
ನ್ನಿವಕೈಟಭಾಸುರನಹುದೇನೀ ಕಾಣ್ಯೆ ॥
ಭುವನದೊಳೆಣೆಗಾಣೆನಲ್ಲೆ । ಇಂಥ ।
ಹವಣಿಗರಿನ್ನುಂಟೆಖಳರೊಳ್ ನೀಪೇಳ್ಯೆ । ॥456॥

**ರಾಗ ಬೇಗಡೆ ಏಕತಾಳ**

ಲಾಲಿಸ್ಯೆ ರಾಜೇಂದ್ರಕುಲದೀಪ । ಎನ್ನರಿಕೆಯನು ಕರು ।
ಣಾಲವಾಲಸುಶೀಲ ಕುಲದೀಪ ॥
ನೀಲಮೇಘ ನಿಭಾಂಗಸಜ್ಜನ ।
ಪಾಲದಶರಥ ಬಾಲಸೀತಾ ।
ಲೋಲನಿತ್ಯನಿರಾಳನಿರ್ಗುಣ ।
ಕಾಲಕಾಲಾತೀತ ನಿರ್ಮಲ । ॥ ಪಲ್ಲವಿ ॥

ಜೀಯ ಕೇಳಿವ । ನಾಯತವ ಪೂ । ರಾಯಚಿತ್ತದಲಿ ॥ ಜಯಯುವ ।
ತೀಯಶಶ್ರುತಿ । ಸ್ಥಾಯಿಮೇಣತಿ । ಕಾಯನಿಂದಲ್ಲಿ ॥ ಸುಮನಸ ।
ರಾಯಜಿತುವಿಂ । ಜೇಯನಿವಖಳ । ರಾಯತಂಡದಲಿ ॥ ಬಹಳ ಸಂ ।
ಪ್ರೀಯ ನಮ್ಮಣ್ಣನಿಗೆ ಧುರದಿವ ।
ಜ್ರಾಯುಧಗೆ ಗಿರಿ । ರಾಯನಳಿಯಗೆ ।
ತಾಯಿವನೆಯೆನಿಸುವನು ನಾನೋ ।
ಪಾಯದಲಿ ನೋಡ್ಯೆಜಗದ್ವಿಭು । ॥457॥

ಅಂದುವನದಿ ಮ । ದಾಂಧತನದಲಿ । ಹೊಂದಿ ಯುದ್ಧದಲಿ ॥ ನಿಮ್ಮನು ।
ಮುಂದುಗೆಡಿಸಿ ಸು । ರೇಂದ್ರ ಭವನಕೆ । ಸಂದ ಖರನಲ್ಲಿ ॥ ಆತನ ।
ಕಂದನಿವಗುಣ । ವಂದಝಶದಶ । ನೆಂದುಪೆಸರಿನಲಿ ॥ ಕರೆವರು ।
ತಂದೆಯಿಂ ಬಾಲ್ಯದಲಿ ಕಳುಹಿಸಿ ।
ಬಂದು ದಂಶಕಂಧರನ ಸೇರಿಹ ।
ನಿಂದಿನಾಜಿಯೊಳಿವನಗೆಲಿದಡೆ ।
ಮುಂದೆ ವಿಜಯಿಗಳಾವು ಧಾರ್ಮಿಕ । ॥458॥

**ರಾಗ ಕೇದಾರಗೌಳ ಅಷ್ಟತಾಳ**

ಅದರೇನೆಂಬೆ ತಪ್ಪಿಲ್ಲಿವನೆಮ್ಮೊಳ ।
ಗೈದಲುಳ್ಳವಧುರದಿ ॥

ಆದಿ ವೀರರೊಳೀತನಯ್ಯಗೆ ಸರಿಯಾರು ।
ಕಾದಿದಡಾಹವದಿ । ॥459॥

ಮುರಿಯೆಚ್ಚುಬಿಲ್ಲ ಮೂವತ್ತೈದು ಹೆಜ್ಜೆಹಿಂ ।
ದಿರುಗಿಸಿದನು ನಮ್ಮನು ॥
ಅರಿಗಳಾವಿದರಿಂದಲಿವಗೆ ನಿಶ್ಚಯವು ಇಂ ।
ತರಿದಮೇಲ್ ಕಪಿಗಳನು ॥460॥

ಹಗೆಯವನಿದಿರಿಕ್ಕಿಗಗನ ಪಥಿಕರಾಗಿ ।
ನೆಗಳಿಚುವುದು ಗುಣವೆ ॥
ಸಗರ ವಂಶಜನಿಂತು ಬಗೆಗೈದನೆಂದೆಮ್ಮ ।
ನಗುವರು ಜಗದೊಳಗೆ । ॥461॥

ತಮ್ಮ ನೀನಡೆ ಖಳ ಬಲವನಿರ್ಣೈಸುನಾ ।
ನೊಮ್ಮೆಗೀರಕ್ಕಸನ ॥
ಹಮ್ಮನೋಡುವೆನೆಂದು ಧನುಶರಗಳ ಪರ ।
ಬೊಮ್ಮತಾ ಕೈಗೊಂಡನು । ॥462॥

ಅನಿತರೊಳಿತ್ತ ಸುಗ್ರೀವನಾಜ್ಞಾವರ್ತ ।
ವನಚರರಬ್ಬರದಿ ॥
ದನುಜಸೈನಿಕ ಪೊಕ್ಕುಸದೆದರು ಗಿರಿತರು ।
ಗೊನೆಯಿಂದ ಸಂಗರದಿ । ॥463॥

**ವಾರ್ಧಕ**

ಒತ್ತಿಬಹರಥಿಕರಂ ವ್ಯಥಿಕರಂ ಮಾಡಿದರು ।
ಮುತ್ತುವ ತುರಂಗ ಮದತುಂಗ ಮದದಂತಿಗಳ ।
ಮೊತ್ತಮಂ ಪೋಳಾಗಿ ಸೀಳಾಗಿ ಕೆಡಹಿದರ್ ಕೊಡಹಿದರ್ ವಾಹಕರನು ॥
ಮತ್ತೆ ಭಟರಂಗಮಂ ಭಂಗಮಂಬರಿಸಿದು ಮ ।
ರುತ್ತನಯ ಮುಖ್ಯರುಂ ಮುಖ್ಯರಂ ಕಾಳ್ಗೆಡಿಸಿ ।
ನೆತ್ತರಂ ಪರಪಿದರ್ ನೆರಪಿದರ್ ಮರುಳ್ಪಡೆಗೆ ಧುರಭಯಂಕರಮಾಗಲು । ॥464॥

**ಕಂದ**

ಈ ಪರಿಕಂಡಾಖರಜಂ
ಕೋಪದಿ ಶರಮಳೆ ಸುರಿಸುತನೇಕರ ತರಿದುಂ ।
ತ್ರೈಪುರಹರನೊಲು ಮುಂದಾ ।
ಟೋಪದಿಬರುತಾ ಹನುಮನ ತಡೆಗೊಂಡೆಂದಂ । ॥465॥

**ರಾಗ ಭೈರವಿ ಅಷ್ಟತಾಳ**

ಹನುಮನೆಂಬವನೆ ನೀನು । ಬಾಲ್ಯದಿ ಸೂರ್ಯ ।
ನನು ನುಂಗಲೆ ನುತಮೇಣು ॥
ಮನಕೊಟ್ಟು ಲಂಘಿಸಿ ಶಕ್ರನಿಂದಳಿದು ಬಂ ।
ದನಘಶಾಭಾಸೆಂದನು । ॥466॥

ಒರಲದಿರೆಲವೊಧೂರ್ತ । ತಂದೆಯ ಽಕ್ಕ ।
ಳಿರವಿನೊಳುಲಿದುಮತ್ತಾ ॥

ಪರರತಾಂಬೂಲಕೆ ಕೈಯೊಡ್ಡಿ ಬಾಳುವ ।
ದುರುಳ ನೀತೆರಳೆಂದನು ॥467॥

ಏನೆಂದೆ ಘಡಯೆನ್ನನು । ಸಂಗ್ರಾಮದಿ ।
ಹೀನ ವಿಕ್ರಮನೆ ತಾನು ॥
ತಾನಿಕೊಳ್ಳಾದಡೆನ್ನುತಲಸ್ತ್ರಸಾರದಿ ।
ವಾನರನನು ಝುಡಿದ । ॥468॥

ಗಣಿಸದೆ ಹನುಮಂತನು । ನಿಂತುಗ್ರದಿ ।
ಸೆಣಸಲುಮಕರಾಕ್ಷನು ॥
ಬಣಗುಮರ್ಕಟ ತೊಲಗೆಂದಜಶರದಿಕುಂ ।
ಭಿನಿಗುರುಳಿಸಿದ ನಾಗ । ॥469॥

ಆತನ ಹರಿಬಕೆಂದು । ಅಂಗದನೀಲ ।
ರಾತು ಸಂಗರದಿ ನೊಂದು ॥
ಭೂತಳಕೊರಗೆ ಕಂಡಿನಜಲಂಘಿಸಿಸುರಾ ।
ರಾತಿಯ ತಡೆದೆಂದನು । ॥470॥

**ರಾಗ ಘಂಟಾರವ ಅಷ್ಟತಾಳ**

ನಿಲ್ಲು ನಿಲ್ಲೆಲೊ ಮಕ್ಷರಾಕ್ಷಘಡನಿನ್ನ ॥
ಝುಲ್ಲಿಗಳ ತೋರೆಲ್ಲ ಬೇಗೆಂ ॥
ದ್ಘಲ್ಲ ಕಿರಿವೋಲೆರಗಿದ ॥471॥

ಹೇವನೌಕಸವರನೆ ಹೆಬ್ಬುಲಿ ಬಾಯ ॥
ಗೋವುತಾ ಬಾಳುವುದೆ ಸಿಕ್ಕಿದೆ ।
ಜೀವಿಸಲು ಬಿಡೆನಿನ್ನನು । ॥472॥

ಬಾಯ ಪೌರುಷದಾಯವೆ ಸುಡುಸುಡು ।
ನಾಯಿ ಹೋಗೆಂದದ್ರಿಯಿಂದವ ।
ನಾಯುಮುಗಿವೊಲೆರಗಿದ । ॥473॥

ಕೆರಳಿಕೆಂಗಿಡಿ ಕಾರುತ್ತ ಬಹಗಿರಿ ।
ತರಿದುಬಹುಶರ ಸುರಿದುಮಿಗೆ ಜ ।
ಜ್ಝರಿತಮಾಡಿದ ನಿನಜನ । ॥474॥

ಒಡನೆರಕ್ಕಸ ಹಾಯ್ದು ಮುಂದಲೆಯೊತ್ತಿ ।
ಪಿಡಿದುಖಡುಗವಝುಮ್ಮೆ ಕೊರಳಿಗೆ ।
ನುಡಿದ ಜಾಂಬವಜಾಣನು । ॥475॥

**ರಾಗ ಮಧುಮಾಧವಿ ಅಷ್ಟತಾಳ**

ಖರಸೂನು ಕೇಳೆನ್ನ ಮಾತನೀನಿಂದು ।
ತರಣಿಜನೇತರಸಹಸಿಗನೆಂದು ॥
ತರಿವೆಹೆಬ್ಬುಲಿಯ ಮೇಲುರೆಕೋಪ ತಳೆದು ।
ಕುರಿಯಕೊಂದನ ಗಾದೆ ಮಾಡದಿರರಿದು । ॥476॥

ಕಡುಪರಾಕ್ರಮಶಾಲಿಯಾಗಿನೀನಬಲ ।
ಬಡವನಚರಮೂರ್ಛೆಗೈದನ ಕೊರಳ ॥
ಕಡಿವುದುನೀತಿಯೆ ದುರುಳತನಗಳ ।
ಬಿಡು ಕೇಳುಪೇಳುವ ವಿಹಿತ ಕಾರ್ಯಗಳ । ॥477॥

ಸಂಗರ ಶೂರನು ರಾಮನೆಂಬರಸು ।
ಹಿಂಗದೆ ನಿಮ್ಮವಂಶಾಂತಕನೆಣಿಸು ॥
ತುಂಗವಿಕ್ರಮವ ತೋರವನೊಳು ಸೆಣಸು ।
ಮಂಗನಕೊಲುವುದಿದಾವ ಶಾಭಾಸು । ॥478॥

**ಭಾಮಿನಿ**

ಏನೆಲವೊ ಮುದಿಕೋತಿನೀತಿ ವಿ ।
ಧಾನ ತಾನರಿಯದನೆ ಪೋಗೆಂ ।
ದಾನಿ ಶಾಚರಖಡುಗಮಂ ಝಳಪಿಸಿದಡನಿತರೊಳು ॥
ಏನುಭಕ್ತಾಧೀನರೋ ರಘು ।
ಸೂನುಲಕ್ಷಣರುಗಳು ಜ್ಯೇಷ್ಠನ ।
ತಾನುಳಿದುಬರುತಿತ್ತ ನೋಡಿದನದರಸೌಮಿತ್ರ । ॥479॥

**ಕಂದ**

ಏಸುಗೆಯನೋಡಿದುದಿಲ್ಲಾ ।
ಗಸಿಯಿಕ್ಕಡಿಯಿಂದಭ್ರದಿಹೊಳಕಿದುದಾಗಳ್ ।
ಪೊಸಸುಮಮಳೆಯಂಮಿಗೆಸುಮ ।
ನಸರುಂ ಲಕ್ಷ್ಮಣನಂಗದಿಸುರಿಯಲ್ಕಾಗಳ್ ॥480॥

**ರಾಗ ದೇಸಿ ಅಷ್ಟತಾಳ**

ಏನಯ್ಯ । ಖೂಳ । ಏನಯ್ಯ ॥ ಪಲ್ಲವಿ ॥
ಏನಯ್ಯ ಖೂಳ ಸಂಗರದಿಕೈಸೋತ ।
ವಾನರವರನ ಕೊಲ್ಲುವುದುದುರ್ನೀತ ॥ ಅ.ಪ ॥

ಇನಿಬರಪ್ರಾಣಕ್ಕೆ ಹೊಣೆನಾನಾಗಿರುತ ।
ಮುನಿದುಕತಾಂತ ಬಂದರು ಕೊಲ್ವೆನೆನುತ ॥
ಕೊನೆಸೇರದ್ಕೈಯಿಷ್ಟನಿಲುಧುರಕೆಂದು ।
ಘನಶರವ್ರಾತದಿಮುಸುಕಿದ ನಂದು । ॥481॥

ಬರುವಶರಂಗಳ ತರಿದುದಾನವನು ।
ಉರಿ ಮಸಗುತಲಕ್ಷುಮಣಗುಸಿರಿದನು ॥
ಧಿರುರೆಸಮರ್ಥನೆ ನರಗುರಿನೀನು ।
ಬರಿದೇಕೆ ಕೆಡುವೆ ಸಾರೆನುತೆಚ್ಚಡದನು । ॥482॥

ಬಗೆವನೆಶೂರಪರಾಕ್ರಮಶಾಲಿ ।
ಬಗೆಯಾದಡಿದಕೊನಿಲ್ಲೆನುತಲಿ ಪೇಳಿ ।
ತೆಗೆದೆಚ್ಚಡಿರದೆ ಲಕ್ಷ್ಮಣನ ಶರಾಳಿ ।
ಮುಗಿಸಿತು ಖಳನೇರ್ದರಥತುರಗಾಳಿ ॥483॥

ಕದನಪ್ರಚಂಡನು ನರನಾದಡೆಂದು ।
ಬದಲೊಂದುರಥವೇರಿಬರೆ ಖಳಮುಂದು ॥
ಅದಕೊ ರಾಘವನಿನ್ನ ಮತ್ಯುಹೋಗೆಂದು ।
ಮುದದಿಂದಲೆಚ್ಚಡಾತನು ಸಹಿ ತಂದು । ॥484॥

**ಭಾಮಿನಿ**

ತೇರುಶತಬಿಲ್ಲಂತರಕೆಹಿಂ ।
ಜಾರಲಾರಿಪು ಸೈನ್ಯದಲಿರಣ ।
ಮಾರಿಯಂತೈತಂದು ಹೊಕ್ಕನು ವೀರಸೌಮಿತ್ರ ॥

ಕ್ರೂರಖಳನಾರ್ಭಟಿಸಿಧನುರ್ಘೋಂ ।
ಕಾರವಂ ಗೈದಬ್ಬರದಿನಿಜ ।
ಸಾರಥಿಯೊಳಿಂತೆಂದ ಘುಡುಘುಡಿಸುತ್ತಗಜರುತ್ತ । ॥485॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಭಳಿರೆ ಸಾರಥಿಕೇಳು ರಾಮನ ।
ಬಳಿಗೆ ಬಿಡುರಥವನುವಲೀ ಮುಖ ।
ರೊಳಗೆ ನಾಬಿಲುದುಡುಕೆ ನಲ್ಲೆ । ತಳುವದಿಂದು । ॥486॥

ಕಲಹರಾಮನ ಕೂಡೆಗೆಲವಿನ ।
ಬಲುಹುರಾಮನಕೂಡೆ ತಂದೆಯ ।
ಕೊಲೆಗೆ ಕೊಲೆಯನುಗೊಂಬೆನೆನಲಿಳೆ । ಯಲುಗುವಂತೆ । ॥487॥

ತುರಗವನುಚಪ್ಪರಿಸಿ ಸಾರಥಿ ।
ಹರಿಸಿದನುಹೊಂದೇರನಿತ್ತಲು ।
ತರಣಿಕುಲರಾಜೇಂದ್ರನಹಿತನ । ಬರವಕಂಡು । ॥488॥

**ವಾರ್ಧಕ**

ಕಂಡಾಕ್ಷಣಂ ರಘೂದ್ವಹನ ಮುಖಕೆಂಪೇರೆ ।
ಕೆಂಡದಂತರಳ್ದ ವಕ್ಷಿಗಳು ರೋಮಾಳಿಹುರಿ ।
ಗೊಂಡುದುಸಿರೊಳು ವಿಸ್ಫುಲಿಂಗಮೋಸರಿ ಸೆರಿಪು ಗಂಡಭೇರುಂಡ ಖಂಡ ॥
ಖಂಡಪರಶುವಿನ ಕೋದಂಡಖಂಡಂ ಕೋಪ ।
ಗೊಂಡುಬಲು ಝೇಂಕರಿಸೆಸಿಂಜಿನಿಯರವ ಕಮಲ ।
ಜಾಂಡ ಬಿರಿವಂತಾಗಲನ್ನೆಗಂ ಮಕರಾಕ್ಷಕಂಡೆಂದ ಖಾತಿಯಿಂದ । ॥489॥

**ಭಾಮಿನಿ**

ಈತನೇಮತ್ಪಿತನ ಕೊಂದವ ।
ಸೂತಕೇಳ್ ಹಗೆಯೆಂದು ಶರಸಂ ।
ಘಾತದಿಂ ಮುಸುಕಿದರೆ ಕತ್ತರಿಸುತ್ತಕಿಡಿಯಿಡುತ ।
ಭೂತನಾಥನ ವೋಲು ರಣನಿ ।
ರ್ಭೀತರಾಘವದೇವನಿಂದಿರ ।
ಲಾತಭೋರ್ಗುಡಿಸುತ್ತ ಮೂದಲಿಸುತ್ತಲಿಂತೆಂದ । ॥490॥

**ರಾಗ ಶಂಕರಾಭರಣ ಮಟ್ಟೆತಾಳ**

ನೀನೆ ರಾಮನೆಂಬಮನುಜ ।
ಹೀನರಾಜ್ಯ ಬಿಟ್ಟು ಘೋರ ।
ಕಾನನಕ್ಕೆ ಬಂದುಕಾಂತೆ । ತಾನೆಕಳೆದವ । ॥491॥

ಏನೆಲೊ ರಕ್ಕಸಕುನ್ನಿ ।
ಮಾನಿನಿಯ ನೀ ಗಾಡಿದಲ್ಲ ।
ದಾನವರ ಕುಲಕೆ ಮತ್ಯು । ತಾನಟ್ಟಿದವ । ॥492॥

ಬಿಡುಬಿಡದನು ಕೇಳೊತನ್ನ ।
ಪಡೆದಪಿತನಕೊಂದ ಗರ್ವ ।
ಮಡಿದಡಾತನೆಡೆಗೆ ನಿನ್ನ । ನಡೆಸದಿರೆನೆಂದ ॥493॥

ದಡಿಗಕೇಳ್ ಲೋಕದಿತಾತ ।
ನೆಡೆಗೆ ಮಕ್ಕಳ್ ಪೋಪನೀತಿ ।
ದಢವಿದಲ್ಲಬಗುಳಿ ಪ್ರಾಣ । ಗೊಡದಿರೀಗೆಂದ । ॥494॥

ಧಿರುರೆನೀತಿಮರುಳನೀನು ।
ನಿರಪರಾಧಿ ವಾಲಿಯನ್ನು ।
ತರಿದುದ್ಯಾಕೆಯಲ್ಪರಿಂಗೆ । ಗುರುಕಣಾಯೆಂದ । ॥495॥

ದುರುಳಕೇಳು ವಾಲಿ ತಮ್ಮ ।
ನರಸಿಯ ಕೂಡಿದ ಕ್ರೋಧ ।
ವರಿತುಕೊಂದೆವಯ್ಯ ಭಂಡ । ರರಿಯರದನೆಂದ । ॥496॥

ಷಂಡನೀನನ್ಯರುತಾನೆ ।
ಕೊಂಡುಪೋದ ನಾರಿಗಾಗಿ ।
ದಂಡುಕೂಡಿ ಬಂದುದಿಂದು । ಭಂಡಾಟವಲ್ಲೆ । ॥497॥

ಪುಂಡರೀಕನೇತ್ರೆಗಾಗಿ ।
ಯಂಡಲೆದುಬಂದುದಲ್ಲ ।
ದಂಡಿತಾನರಣ್ಯಗಾಗಿ । ದಂಡುತಂದೆವೈ । ॥498॥

ಭಳಿರೆಲೇಸಾಯ್ತುಯ್ಯ ಮಾತಿ ।
ನೊಳಗೆ ಜಾಣನಾದಡೆನ್ನ ।
ಹಿಳುಕನೋಡೆನುತ್ತಲಸ್ತ್ರ । ತುಳುಕಿದಡವನು । ॥499॥

ನಳಿನ ನೇತ್ರನದರ ಖಂಡ ।
ಗೊಳಿಸಿ ಪೇಳ್ದನಿನ್ನೇನುಂಟು ।
ಕಳುಹುನಿನ್ನಸ್ತ್ರಗಳೆಂದು । ಘಳಿಲನೆಚ್ಚನು । ॥500॥

**ಭಾಮಿನಿ**

ಎಸುಗೆಯನು ಖಂಡಿಸುತಖರಸುತ ।
ನೆಸೆದ ಧಾರಿಣಿಯೆಲ್ಲಿ ಮೇಣಾ ।
ಗಸವದೆಲ್ಲಿಯೆನಲ್ಕೆಶರಮಯವಾಗೆ ಸರ್ವತ್ರ ॥
ಮುಸುಕುವರಿಖಗಸಮಿತಿಯನು ತುಂ ।
ಡಿಸುವ ನೀರಘನಾಥ ನಿಂತಾ ।
ಲಸಿಕೆ ದೋರದೆಸೆಣಸಿದರು ಮಿಗೆ ಜಾವಪರಿಯಂತ । ॥501॥

**ರಾಗ ಭೈರವಿ ಅಷ್ಟತಾಳ**

ಪೂತು ಮಝರೆ ರಾಘವ । ಸಂಗರದಿ ವಿ ।
ಖ್ಯಾತ ಕೇಳ್ ಕಮಲಭವ ॥
ಭೂತೇಶಾದಿಗಳೆನ್ನ । ಘಾತಿಗಂಜುವರಿದ ।
ನೀತಿಳಿಯದೆ ಕೆಟ್ಟೆಲಾ । ॥502॥

ಅಸುರಾಗ್ರಣಿಯೆ ಕೇಳು । ನೀನೆಂದ ಪ ।
ದ್ಮಾಸನಾದ್ಯಮರರೊಳು ॥

ನಾಸೇರಿದವನೆಂದು ಬಗೆವೆ ನಿನ್ನಯತಲೆ ।
ಮೀಸಲೆನ್ನಯ ಶರಕೆ । ॥503॥

ಹಾರದಿರೆಲವೊರಾಮ । ಬಲ್ಲೆನುಬಡ ।
ಹಾರುವನನುನಿಸ್ಸೀಮ ॥
ದಾರಿಯೊಳ್ ಗೆದ್ದು ಮಾರೀಚಾದಿಗಳ ಗೆದ್ದ ।
ಶೂರವಿಕ್ರಮಸಾಕೆಲಾ । ॥504॥

ಮುಂಗಯ್ಯ ಸರಪಣಿಗೆ । ನೋಡಲುಪರ್ದ ।
ಣಂಗಳೇ ಕೈಯೊಮ್ಮೆಗೆ ॥
ಅಂಗದ ಹನುಮಪತಂಗ ಜಾದ್ಯರಗೆದ್ದ ।
ತುಂಗವಿಕ್ರಮನೀನಲ್ಲೆ । ॥505॥

ಮೆಚ್ಚಿದೆಭಾಷಿತಕೆ । ಸಂಗರಮದ ।
ಹೆಚ್ಚಿನೀಕುಣಿಯಲೇಕೆ ॥

ಹೆಚ್ಚಿನ ಭಟನಪ್ಪೆನೆಚ್ಚಿಕೊಳ್ಳೆನುತಲಿ ।
ಕಿಚ್ಚಿನಶರವೆಚ್ಚನು । ॥506॥

**ರಾಗ ಅಖಂಡಮಾರವಿ ಏಕತಾಳ**

ಖಗಕುಲಜನೆಕೇ । ಳಘಟಿತಶಿಖಿಶರ ।
ಭುಗುಭುಗಿಸುತಲಾ । ರಘುಜನಮುಸುಕಲು ।
ವಿಗಡಪರಾಕ್ರಮ । ಬಗೆವನೆವಾರುಣ ।
ಖಗವಾರ್ದೆಸುತದ । ಮುಗಿಸಿದುಮೆರೆದ ॥ ಏನೆನೆಂಬೆ । ॥507॥

ಗರಳಮಯದೊಳಿಳೆ । ತುರುಗಿಪುದೆನಲ ।
ಬ್ಬರಿಸುತಲಹಿಶರ । ಭರದಿಂದೆಚ್ಚಡೆ
ಗರುಡಕಳಂಬದಿ । ತರಿದನು ರಘುಭೂ ।
ವರಹುಂಕರಿಸುತ । ಜರೆದಡೆ ಖಳನ । ಏನನೆಂಬೆ । ॥508॥

**ರಾಗ ಶಂಕರಾಭರಣ ಮಟ್ಟೆತಾಳ**

ಕೆರಳಿಬಳಿಕ ಯಾತುಧಾನ ।
ಒರೆದನೆಲವೊ ರಘುಜ ಎರಡು ।
ಶರವಗೆಲಿದೆಯೆಂದು ಹಿಗ್ಗ । ದಿರು ಕೇಳಿದರನು ॥
ತರಿವಡುಳ್ಳಡಿದಕೊಯೆಂದು ।
ದುರುಳನಧಿಕ ಕೋಪದಿಂದ ।
ನಿಖುತಿಮೇಘ ತಿಮಿರವೆಂಬ । ಶರಗಳೆಸೆದನು । ॥509॥

ದುರುಳಕೇಳುಧುರದಿ ಹಿಗ್ಗಿ ।
ಮೆರೆವರಲ್ಲ ನಾವು ನೀವೇ ।
ಕುರಿಗಳಂತೆ ಕೂಗಿಯೊಮ್ಮೆ । ಹರಿಗಳಂದದಿ ॥
ಮೊರೆದು ಕಡೆಗೆ ಸಾವಿರೆಂದು ।
ಭರದಿಬರುವ ಶರವಗೆಲಿದ ।
ವರಕಪರ್ದಿ ವಾಯುಸೂರ್ಯ । ಸರಳೊಳುಗ್ರದಿ । ॥510॥

ಪೂತುರೇನಪಾಲಭಳಿರೆ ।
ಖ್ಯಾತನಹೆಯಯಿದ ಕೊಯಮುನಾ ।
ಭ್ರಾತಶರವ ತೊಡುವೆ ಹರಣ । ವಾತುನಿಲ್ಲೆನ್ನ ॥
ತಾತನನ್ನುಗೆಲಿದ ಹಗೆಯ ।
ರೀತಿಲೇಸೆನುತ್ತಲೆಚ್ಚ ।
ಭೀತಿಗೊಳಲಖಿಳಬಲಗ । ಳಾತತುಕ್ಷಣ । ॥511॥

ಚಂಡರಘುಕುಲೇಂದ್ರನದರ ।
ರುಂಡಮಾಲಮಂತ್ರಶರದಿ ।
ತುಂಡುಗೈದು ಪೇಳ್ದ ಮಗುಳು । ದ್ದಂಡ ಬಲನೊಳು ॥
ಷಂಡಕೇಳು ನಾವು ಮನುಜ ।

ತಂಡವಲ್ಲರೆಮ್ಮಸತ್ವ ।
ಕಂಡುಕೊಳ್ಳೆನ್ನುತ್ತ ರೋಷ । ಗೊಂಡು ಧುರದೊಳು । ॥512॥

**ಭಾಮಿನಿ**

ಕಿಡಿಗೆದರಿಕಲ್ಪಾಂತರುದ್ರನ ।
ಪಡಿಯೊಳಿನ ಕುಲತಿಲಕ ಶರವೆ ।
ಚ್ಚೊಡನೆ ಯಿಕ್ಕಡಿಗೈದನಾಖರಸುತನ ಖಂಡೆಯವ ॥
ಪಿಡಿಯೆ ಖಳ ಬೇರೊಂದು ಧನುವದ ।
ಕಡಿದನಿಂತೇಳ್ನೂರು ಬಿಲುಕಡಿ ।
ವಡೆಯಲವ ಕ್ರೋಧಾಗ್ನಿ ಭುಲ್ಲೆಸಲ್ಕೆಮತ್ತೆಂದ । ॥513॥

**ರಾಗ ಭೈರವಿ ಏಕತಾಳ**

ಭಾಪುರೆನೀಬಲುಜಾಣ ॥ ಪೊಸ ।
ಚಾಪವಧರಿಸಿದೆ ಕಠಿಣ ॥
ಆ ಪರಿಘನತೆಯಝಲ್ಲಿ । ಬಿಡು ।
ಕೋಪವತೋರಿದರಿಲ್ಲಿ ॥514॥

ಸಾಕೆಲೊ ಬಾಯ್ಬಬ್ಬಾಟ । ಇದು ।
ಯಾಕೆಲೋ ನೀ ಕೇಳಧಟ ॥
ಆ ಕುರಿಪೆರ್ಚಿದರಾನೆ । ಯಹು ।
ದೇ ಕೆಡುಕನೆ ನುಡಿತಾನೆ ॥515॥

ಈಶನು ಪೂರ್ವದಿ ವೊಲಿದು । ಕೊ ।
ಟ್ಟಾಶರವೆಸುವೆನು ತೆಗೆದು ॥

ಹೂಸಕವಾಡುವರಲ್ಲೆ । ಜೀವ ।
ದಾಸೆಯಿರಲು ನಡೆಗೊಳ್ಳೈ । ॥516॥

ಮಡನಕಳಂಬವೆಬರಲಿ । ಮೇಣ್ ।
ಮಡನೇ ಧುರಕ್ಕೈತರಲಿ ॥

ನಡೆಯುವ ಮಾತಂತಿರಲಿ । ಬಿಡು ।
ಕಡುಹನುನೋಡೆನೆ ಕೇಳಿ । ||517||

ತರಿಸಿಕೊ ಸಂಜೀವನವ । ಮೇಣ್ ||
ಬರಿಸಿಕೊಳ್ಳುಳಿವಡೆಕಾವ ।
ಗುರುಕುಲದೇವಿಯರುಗಳು । ನಿಂ ।
ದಿರುನೀ ಬಳಿಕಿನೊಳೇಳ । ||518||

ದುರುಳ ನಿಮ್ಮೆಲ್ಲರತರಿದು । ಮ ।
ತ್ತಿರದೆ ಸಂಜೀವನ ತಂದು ||
ಧುರದಿಮಡಿದರೆಬ್ಬಿಸುವೆ । ಮ ।
ದ್ಗುರುವನು ನಿತ್ಯಲು ನೆನೆವೆ । ||519||

ಇನಿತುಪರಾಕ್ರಮನಹೆಯ । ನೋ ।
ಡೆನುತಲಿ ಶಿವನಶಕುತಿಯ ||
ಘನತರಕೋಪದೊಳೆಸೆದ । ರಘು ।
ಜನಪನಸಡಿಪಡಯೆಂದ ।

**ರಾಗ ಭೈರವಿ ತ್ರಿವುಡೆತಾಳ**

ನುಡಿಯಲೇನಾ । ಭಾಪುರೆ । ನುಡಿಯಲೇನಾ । || ಪಲ್ಲವಿ ||
ಫಣಫಣಾಕೃತಿಯಿಂದಲಗ್ನಿಯ ।
ಕಣಗಳನೆಸಲೆಕಾರುತ ।
ಕಣುಮವಕೋರೈಸೆಶತದಿನ ।
ಮಣಿಯಲಹರಿಯಧರಿಸುತ ।
ಅಣದ ಜಾಂಡಗಳನ್ನು ಬೆಚ್ಚಿಸಿ ।
ಮಣಿಯ ದ್ಯೆತರೆ ಕಾಣುತ ।
ತ್ರಿಣಯನಸ್ತ್ರಕೆ ವಿಶ್ವಕರ್ಮನ ।
ಪ್ರಣಿತಶಕ್ತಿಯನೆಚ್ಚೆರಘುಪತಿ । ||520||

ಪಟುಪರಾಕ್ರಮನಹನುರಾಕ್ಷಸ ।
ಕಟಕದೊಳಗಿವನೆನ್ನುತ ।
ನಿಟಿಲಲೋಚನನಂತೆ ಖತಿಸಂ ।
ಘಟಿಸೆರಾಘವ ಮುಳಿವತ ।
ಭಟನೆತಾಳಿದನೆಂದು ತಾನು ।
ತ್ಕಟದಶರಗಳಸುರಿಸುತ ।
ತಟನಿ ಪಿತಹುಂಕರಿಸಿದನು ಶಚಿ ।
ವಿಟಮುಖಾಮರವಂದನಲಿವುತ । ||521||

**ವಾರ್ಧಕ**

ಕೊರೆದವಂಗೋಪಾಂಗಮಂ ರಾಮನಂಬುಗಳು ।
ತೆರೆದ ಜಾಳಂಧ್ರ ಧಂತಾಯ್ತುಗಿದ ಬಟ್ಟೆಗಳು ।
ಕರೆದಪೇರ್ಮಳೆಯಿಂದ ನೆನೆದ ಜಾಜಿನ ಗಿರಿಯೊಳಿಳಿವಕೆಂಬೋನಲ್ಗಳ ॥
ತೆರದಲೆಸೆ◌ೆದೌರಕ್ತಧಾರೆಗಳ್ ಕಾಯದೊಳ್ ।
ಮರೆದನೊಡಲಂ ಖರಜರಥದಪಳವಿಗೆಯನೆ ।
ಮ್ಮಿರೆ ಕಂಡು ಕಾರ್ಪಣ್ಯಮಂ ತಾಳಿ ಶ್ರೀರಾಮನೆಂದ ಖಳಸಾರಥಿಯೊಳು । ॥522॥

**ರಾಗ ಕಾಂಭೋಜಿ ಅಷ್ಟತಾಳ**

ಭಳಿರೆಸಾರಥಿ ಕೇಳುಮಾತ । ರಣ ।
ದೊಳುನೊಂದನೋಡು ನಿನ್ನಾತ ॥
ಕೊಳುಗುಳದೊಳು ಬಲು । ಬಳಲಿದಾವನ ಕೊಲ್ವು ।
ದಿಳೆಯ ವೀರರ ಧರ್ಮವಲ್ಲೆ ।
ತಿಳುಪುವೆನುಮದರಿಂದಲೊಂದನು ॥ ಭಳಿರೆ । ॥523॥

ಭುಜಬಲದೊಳು ಕುಂದುಕಾಣೆ । ಶಸ್ತ್ರ ।
ವ್ಯಯಕೆ ಜೋಡಿಲ್ಲ ನಿನ್ನಾಣೆ ॥
ನಿಜಪರಾಕ್ರಮ ಧೈರ್ಯ  ಭುಜಗಭೂಷಣಗಿಲ್ಲ ।
ತ್ರಿಜಗದಲಿ ಹೆಸರಾಂತ ಭಟನಿವ ।
ಕುಜನಮಾರ್ಗದಿನಡೆವನಾದರು । ॥524॥

ನಡುಗುವುದದಕೊ ಸರ್ವಾಂಗ । ನೋಡೆ ।
ಬಡವಾದುದಕಟಯೆನ್ನಂಗ ॥
ನುಡಿವಮಾತುಂಟು ನಿ । ನ್ನೊಡೆಯನೊಳೆನಗೆ ಕೇಳ್ ॥
ತಡೆಯದೌಷಧಿಯಿಂದ ಬದುಕುವ ।
ಗೊಡವೆನೋಡೈನಿನ್ನರಥಿಕನ । ॥525॥

**ಭಾಮಿನಿ**

ಕೇಳಿಸಾರಥಿಬಳಿಕ ಬಾಳದ ।
ಬಾಳನುಗಿದಾಗಾಯಕೌಷಧಿ ।
ಹೂಳಿಕರದಲಿ ಮತ್ತೆ ಕಲಶೋದಕದ ಧಾರೆಗಳ ॥
ಏಳೆನುತಕಂಗಳಿಗೆ ತಿದ್ದುತ ।
ಬೋಳವಿಸುವನಿತರೊಳು ಕಾರ್ಮುಃ ।
ತಾಳಿದುದುಕೊಂಡೆದ್ದುನಿಲಲಿನ ಕುಲಜಖಳಗೆಂದ । ॥526॥

**ರಾಗ ತುಜಾವಂತು ಝಂಪೆತಾಳ**

ಕೇಳಸುರಕುಲಸುಧಾಂಬುಧಿ ಪೂರ್ಣಚಂದ್ರ |
ಪೇಳುವೆನು ಮಾತೊಂದ ಚಾರುಗುಣಸಾಂದ್ರ || ಪಲ್ಲವಿ ||

ಅನುಜೆಗೋಸುಗ ಹಿಂದೆ | ದನುಜಪತಿಕೇಳ್ ನಿನ್ನ |
ಜನಕನೆನ್ನೊಳುಕಾದಿ ಛಲದಿಜೀವವನು ||
ಜಿನುಗಿಸಿದ ದಿವಸದಲಿ ತೀರಿತ್ಯೆಪಗೆತನವು |
ತನಯಗಡನೀನವಗೆ ಭಳಿರೆ ಮೆಚ್ಚಿದೆನು || ||527||

ನುಡಿವೆನದರಿಂದ ಕೇಳ್ | ನಿನ್ನ ಕೊಲೆಗೆನ್ನ ಮನ |
ವೊಡಬಡುವುದಿಲ್ಲ ಕಪೆಕಡಲುಕ್ಕಿತೀಗ ||
ಅಡಿಗೆರಗೆಕಾವೆ ವಿಧಿಯುಸಿರಿಹನ್ನೆಬರ ತವ |
ದಢವಪೇಳೆನಲೆಂದಕೇಳ್ದು ಖಳನಾಗ | ||528||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮಂದಮತಿಯೆಲೆರಾಮ ಮುನ್ನೈ |
ತಂದಕಿವಿಯಿಂದಧಿಕವಾಮಿಗೆ |
ಬಂದಕೋಡತಿ ಕಠಿಣವೆಂಬೀ | ದೊಂದನರಿಯಾ | ||529||

ತಂದವೈರದ ಕಿಚ್ಚುನಿನ್ನಲಿ |
ನಂದಿದಡೆ ನಂದುವುದೆ ತನಗೆಲೆ
ಕೊಂದುದಲ್ಲದೆ ಮಾಣೆ ನಿಲುಧುರ | ಕಿಂದು ಮುಳಿದು | ||530||

ಭಳಿರೆ ರಾಘವ ದಿವ್ಯ ಬಾಣಾ |
ವಳಿಯ ಜೈಸಿದೆನೆಂದು ಧಿಟಹೆ |
ಕ್ಕಳಿಸದಿರು ಸುರರಹಿತರದರಿಂ | ತಳುವದೀಗ | ||531||

ತಲೆಯಬರಹವತೊಡೆವೆನೈಕುಂ |
ಭಿಳೆಸುದತ್ತಮಹಾಸ್ತ್ರವಿದರೊಳು |
ಬಲುಮೆಯನುನೀ ತೋರು ಘಡಹಿಂ | ಚಲಿಸದಿಂದು ||532||

ರಾಮಕೋರಣದಾಸುರಾಹ್ವಯ |
ಭೀಮಬಾಣವ ಮರೆಯದೇತಕೆ |
ಕಾಮಹರಕಮಲಾಸನರು ನಿ | ರ್ನಾಮಿಸುವರೈ | ||533||

**ವಾರ್ಧಕ**

ಪ್ರಾಣವಿರಲಿಕೆನೋಡಿಕೋರಾಮನಿದುವೆಗೀ ।
ರ್ವಾಣನಿಕದಕೊರಳ ಕತ್ತರಿಯು ಮಾನುಷ್ಯ ।
ಪ್ರಾಣಿಗಳೆನಿಪ್ಪಮೀನ್ಗಳ ಕಠಿಣಗಾಳವಿದು ಕಾಣೆನೆನೆ ಬೇಡಿದರೊಳು ॥
ತ್ರಾಣವಿರೆಸೆಣಸುನಿನ್ನುದರಮಂ ಬಗಿದುಬಿಸಿ ।
ಶೋಣಿತವಸವಿವಸ್ತ್ರವಿದುವೆನೋಡೆನುತುಬ್ಬಿ ।
ಕ್ಷೋಣಿ ಮಂಡಲಬಿರಿಯುವೊಲೆಚ್ಚನಿನಕುಲನಸಚರಾಚರಂಬೆಚ್ಚಲು । ॥534॥

**ರಾಗ ಭೈರವಿ ತ್ರಿವುಡೆತಾಳ**

ಏನನೆಂಬೆ । ಸಾಹಸ । ವೇನನೆಂಬೆ । ॥ ಪಲ್ಲವಿ ॥
ಕೋಟಿಮಿತ್ರರ ಬರವೊವಿಲಯಕ ।
ರೋಟಿಮಾಲೆಯ ಕೋಪಶಿಖಿಯಸು ।
ಕೂಟವೋವರ್ಣಿಸುವಕವಿಯಾ ।
ರಾಟವೀಚರನಿಕರವದಕ ।
ಣ್ಣೋಟದಲೆ ಕೈವಲ್ಯರಾಗಲು ।
ದಾಟಿದುದು ಬಲುಬಾಣನಡೆದುನಿ ।
ಶಾಟಹರನಿದಿರಾಗಿಯೆಸು ಗೆಯ ।
ಸಾಟಿಗೊಳದುರುಭರದಿಭರದಲಿ । ॥535॥

ಎತ್ತನೋಡಲು ಭದ್ರಕಾಳಿಯು ।
ಮೊತ್ತವೆತ್ತಲು ಮಕರಲೋಚನ ।
ತೆತ್ತಲುಂ ಪೆರ್ಮಳೆಯ ಸಿಡುಲುಗ ।
ಳೆತ್ತಲುಂ ಸುಳಿಗಾಳಿವರಕ ।
ಗ್ಗತ್ತಲುಂ ಮತ್ತೆತ್ತ ಪೆರ್ಬುಲಿ ।
ಮೊತ್ತಮುಂ ಮರಿಸಿಂಗ ಶರಭಗ ।
ಳೆತ್ತಲುಂ ಕವಿವಸುರಸಂಚಯ ।
ಮುತ್ತಿಮೂದಲಿಸಿತ್ತು ರಘುಜನ । ॥536॥

**ಭಾಮಿನಿ**

ಅರಿಶರಕೆಬೆಚ್ಚುವನೆಸಾಕ್ಷಾ ।
ತ್ಕರನಲಾಮೇಣ್ ಕಪಟನಾಟಕ ।
ಧರನೆನಲು ರಘುಸೂನುಖತಿ ಮಸಗಿತು ಸುದರ್ಶನವ ॥
ತಿರುಗಿ ನೋಡಿದಡಾಗ ಶಿಖಿಹರಿ ।
ಹರಿಗಳಯುತಾಯುತ ಸಹಸ್ರದ ।
ಕಿರಣದಲಿ ನಿಜ ದುಗ್ರರೂಪದೊಳೈದಿತಾರ್ಭಟಿಸಿ । ॥537॥

**ರಾಗ ಅಖಂಡಮಾರವಿ ಏಕತಾಳ**

ಜರಿದುದೊಸುರಗಿರಿ । ಧರಣಿಯು ಕುಗ್ಗಿತೊ ।
ಶರಧಿಗಳ್  ಬತ್ತಿತೊ । ಭರದಿಂದುರಿಯಿಂ ।
ದರುಹುವಡರಿಯದು । ಉರಗಕಮಠದಿ ।
ಕ್ಕರಿಗಳಿಗುಬ್ಬಸ । ಬರಿಸುತ ಘರ್ಜಿಸು । ತೇನನೆಂಬೆ । ॥538॥

ಹುಟ್ಟಿದ ಕಾಳಿಯ । ಥಟ್ಟುಗಳನು ಎ ।
ಬ್ಬಟ್ಟುತ ಖಳರನು । ಮೆಟ್ಟುತ ವಿಧವಿಧ ।
ಕುಟ್ಟುತಮಾಯಾ । ಬಟ್ಟೆಗರನು ಬಹ ।
ಳಟ್ಟಹಾಸದಿಮಿಗೆ । ಸುಟ್ಟುರುಹಿದುದ । ಏನನೆಂಬೆ । ॥539॥

ಅರೆರೆಯಿದಚ್ಚರಿ । ಕರವೆನೆ ಬಳಿಕಾ ।
ಖರ ಸುತನೋರ್ವನ । ನಿರಿಸುತ ರಾಮನ ।
ಚರಣಕೆರಗೆಯೇ । ನ್ವರಿಮುಂದೆನಲದ ।
ಭರದಿಂ ಮನ್ನಿಸಿ । ಜರೆದನುಖಳನ । ಏನೆನೆಂಬೆ । ॥540॥

**ಭಾಮಿನಿ**

ಅರರೆಕೇಳ್ ಖಳನಾಯಿಬಗುಳಿದೆ ।
ಹರದ್ರುಹಿಣಶಕ್ರಾದ್ಯರಿದರೊಳು ।
ಹರಣವಿಡಿಯರೆನುತ್ತ ಕಂಡ್ಯಾನಮ್ಮಕೈಗುಣವ ॥
ಅರಿಗಳನು ಸಂಹರಿಪೆನಲ್ಲದೆ ।
ತಿರುಗೆವಾವ್‌ಸಂಗರದಿತಿಳಿನೀ ।
ಖರಜನೋ ಮೇಣ್ ಖರನೊ ಪೇಳ್ಕೆಯೆನೆರಘುಪ್ರಭವ । ॥541॥

**ರಾಗ ಶಂಕರಭರಣ ಮಟ್ಟೆತಾಳ**

ನೆಲನಬಿಟ್ಟ ಹೇಡಿ ಮನುಜ ।
ಕುಲದಿ ಹೇಡಿವನದಿ ತನ್ನ ।
ಲನನೆಯನ್ನು ಕಳೆದ ಹೇಡಿ । ನಿಲದೆ ಕಪಿಗಳ ॥
ಬಲವನೆರದ ಹೇಡಿ ಮೋಸ ।
ದಲಿಸುರೇಂದ್ರ ಸುತನಕೊಂದ ।
ಬಲವಿಹೀನ ನಿನ್ನ ಶೌರ್ಯ । ನೆಲೆಯ ಕಾಂಬೆಲಾ । ॥542॥

ಮರುಳು ಕಾಗೆ ಬಡಿದ ಹೆಮ್ಮೆ ।
ಧುರದಿ ಪಿತನಕೊಂದ ಹೆಮ್ಮೆ ।
ಶರಧಿ ಬಲಿದ ಹೆಮ್ಮೆಯಿಂದ । ಮೆರೆಯಬೇಡೆಲಾ ॥

ವರವಿಭೀಷಣಾಂಕ ಖೂಳ ।
ನಿರದೆ ಶರಣನಾದ ಹೆಮ್ಮೆ ।
ಮುರಿಯದಿರೆನಜಾಸ್ತ್ರವಿದ ಕೊ । ಸುರಿದೆಕೊಳ್ಳೆಲಾ । ||543||

ಸುರರಹವಿಯಕಳುವದ್ರೋಹಿ ।
ಸುರಪ ಸತಿಯನೆಳೆವ ದ್ರೋಹಿ
ಸುರೆಯಕುಡಿವ ದ್ರೋಹಿ ಪಿತನ || ತೊರೆದ ದ್ರೋಹಿಯೆ ||

ಜರೆವನಮಗೆ ದ್ರೋಹಿನಾಯಿ ।
ವೊರಲೆಸ್ವರ್ಗಕೆಡುಗೆ ದ್ರೋಹಿ ।
ಬರುವಶರವತರಿದೆ ದ್ರೋಹಿ । ಪರಮ ದ್ರೋಹಿಯೆ । ||544||

**ಭಾಮಿನಿ**

ಮುಂಚಿತೇನಿನ್ನೆಸುಗೆಸರಳಿನ ।
ಸಂಚಯವನೋಡಾದಡೆನುತವಿ ।
ರಿಂಚಿಪಿತನೊಂದಂಬಿನಲಿರಿಪುಭಟನ ಸಾರಥಿಯ ||
ವಂಚಿಸಿದನಾತುರಗ ನಾಲ್ಕರ ।
ಮಿಂಚಕೆಡಹಿವರೂಥವನು ಹರಿ ।
ಹಂಚುಮಾಡಿ ಮದಾಂಧನೆಸುಗೆಯಧನುವ ಖಂಡಿಸಿದ । ||545||

**ರಾಗ ಶಂಕರಾಭರಣ ಮಟ್ಟೆತಾಳ**

ಒಡನೆ ಕಿಡಿಯನುಗುಳಿ ಖರಜ ।
ನುಡಿದನೆಲೆಲೆ ಮನುಜಧನುವ ।
ಕಡೆದಡೆಮ್ಮ ಕಲಿತನಕ್ಕೆ । ತೊಡಕದೇನೆಲಾ ||
ಕಡಿದಡೆಮ್ಮ ಕಲಿತನಕ್ಕೆ ।
ತೊಡಕದೇನು ನೋಡುಗದೆಯ ।
ಕಡುಹನೆಂದು ಗಜರುತಿಟ್ಟ । ಪೊಡವಿ ಪಾಲಗೆ । ||546||

ವೈರಿಗದೆಯ ಕಡಿದುಸಾರು ।
ಸಾರುಕುನ್ನಿ ಕೂಗಬೇಡ ।
ತೋರುಬಲುಹನೆನ್ನೊಳೆನುತ । ಲಾರು ಭಟಿಸುತ ||
ತೋರುಬಲುಹನೆನ್ನೊಳೆನುತ ।
ಲಾರುಭಟಿಸಿದನುಜನಸಿಯ ।
ಧಾರೆಯಿಂದತಿವಿಯೆ ಕಡಿದ । ನಾರಘೋತ್ತ ಮ । ||547||

ನಿಂದು ಖಳನು ಬಳಿಕನೊಂದ ।
ಹಂದಿಯಂತೆ ಪಲ್ಗಡಿಯುತ ।
ಲೆಂದ ಭಲರೆನರಸಮರ್ಥ । ನೆಂದು ಕೋಪದಿ ॥
ಎಂದ ಭಲರೆನರಸಮರ್ಥ ।
ನೆಂದು ಕೋಪದಿಂದ ಚಕ್ರ ।
ದಿಂದಲೆಚ್ಚಡರಿಯೆ ಮುಳಿಸಿ । ನಿಂದಲಾಕ್ಷಣ । ॥548॥

**ಭಾಮಿನಿ**

ಏರಿತಧಿಕಕ್ರೋಧಶಿಖಿಕಿಡಿ ।
ಹಾರಿದವುಕಂಗಳಲಿ ತನುಕಾ ।
ಹೇರಿದುದು ಕಾರ್ಬೊಗೆವಿಟಾಳಿಸಿತುರಿಯ ಚೂಣಿಯಲಿ ॥
ಮಾರುಗೊಂಡನು ವಿಲಯರುದ್ರನ ।
ತೋರಿಕೆಯ ತಮದುಬ್ಬರವನೆನೆ ।
ತೂರಿಗಿಡಗಳದಿವ್ಯ ಶೂಲವನೆತ್ತಿ ಬೊಬ್ಬಿರಿದ । ॥549॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇದು ಕಣಾರಘುನಾಥ ನಿನ್ನಯ ।
ಮದ ಶಿಲೋಚ್ಚಯವಜ್ರಸೀತಾ ॥
ಸುದತಿಕಾಂಕ್ಷೆಯನಿಪ್ಪರೋಗವ । ನೊದೆವ ಮದ್ದು । ॥550॥

ಇದು ಕಣಾಮತ್ತ್ವಿತನ ಜಯಫಲ ।
ವಿದುವೆರಿಪುವೇತಂಡ ಮೃಗಪತಿ ।
ಕದನದಲಿ ನಿಕೈಕೊತಪ್ಪದಿ । ರಿದಕೆಭಳಿರೆ । ॥551॥

ಸುಡುವುದಿದು ತ್ರೈಭುವನನಿನ್ನು ।
ಗ್ಗಡವ ಕೊಂಬುದೆ ಶಿವಕರಾಗ್ರದಿ ।
ಪಿಡಿವುದಿದು ನೋಡೆಂದು ಖಳಭೋ । ರ್ಗುಡಿಸಿ ಕೆರಳಿ । ॥552॥

ಸುಡುಸುಡೆಲೆನಿಶಿಚರ ಪಿಶಾಚಿಯೆ ।
ಬಿಡು ತ್ರಿಶೂಲವ ಬಗೆವೆನೇನಾ ।
ಸುಡುವೆ ಮುನಿದಡೆಯಜಕಟಾಹವಿ । ದೊಡನೆ ತಿಳಿಯೈ । ॥553॥

ಆದಡಿದಕೋ ಯೆನುತಲಾಖರ ।
ಸೂದನನು ಖರಸೂನು ಶೂಲದ ।
ಹಾದಿಗಜಶರವೆಚ್ಚತ್ರಿಜಗ । ನ್ಮೋದಿಸಲ್ಕೆ । ॥554॥

**ವಾರ್ಧಕ**

ಉಭಯಭಟರೆಚ್ಚಸ್ತ್ರ ಶಿಖಿಧೂಮಜ್ವಾಲೆಗಂ ।
ದಭವಾದಿಸುರರಳ್ಕಿ ಹಾ ರಘೂತ್ತಮನೆನನೆ ।
ಲ್ಕಭಯಹಸ್ತವ ತೋರಿಸಚರಾಚರಾತ್ಮಕಕಂ ಖದ್ಯೋತತನುಭವನನು ॥

ವಿಭವದೀ ನಿಜಶರದಬೆಂಬಳಿಯನೇಮಿಸಲ್ ।
ರಭಸದಿಂದರಿಶೂಲಮಂ ಝುಡಿದುರಿಪುಶಿರವ ।
ನಭಕೇರಿಸಿತು ಕೂಡೆಸುರರಸುಮ್ಮಾನಮಂಪೊಗಳ್ವಕವಿಯಂ ಕಾಣೆನು । ॥555॥

**ಭಾಮಿನಿ**

ಶರಕೆಕಾಣಿಕೆಯಿತ್ತು ನಭದಲಿ ।
ಕರವ ಮುಗಿದರು ಸುರರು ಸುಮನೋ ।
ವರುಷವನು ಸೂಸಿದರು ಸೀತಾಪ್ರಿಯನ ಸಿರಿಮುಡಿಗೆ ॥
ಮೊರೆವದುಂದುಭಿಕಹಳೆಗಳ ಸು ।
ಸ್ವರದೊಳಾಗಮರಿಯರು ಪಾಡುತ ।
ನೆರೆಸುಳಿಸುತಾರತಿಯ ಜಯವೆಂದರು ರಘೂತ್ತಮಗೆ । ॥556॥

**ರಾಗ ಸಾಂಗತ್ಯ ರೂಪಕತಾಳ**

ತರಳರುಕೇಳಿರಾ ಶರಬಂದು ಪುಗೆರಘು ।
ವರನ ಹೊಮ್ಮೂಡಿಗೆ ಗಾಗ ॥
ಇರದಿತ್ತ ಸೌಮಿತ್ರಾದ್ಯರು ಖಳಬಲವನು ।
ತರಿದು ಬಂದೆರಗಲು ಬೇಗ । ॥557॥

ಬರಸೆಳೆವುತ ರಾಮ ನೊರೆದ ಸರ್ವರು ನೀವು ।
ದುರುಳರೊಳಿಂದಿನಾಹವದಿ ॥
ಪಿರಿದಾಗಿ ಬಳಲಿಬಂದಿರಿ ಬಳಿರೆನುತುಪ ।
ಚರಿಸಿದಡಾಗಸನ್ಮುದದಿ ॥558॥

ಹರಿನಿನ್ನ ಮಹಿಮೆಯ ನೊರೆಯಲಾರಿಗೆ ಸಾಧ್ಯ ।
ಪರಬ್ರಹ್ಮನಹುದು ನೀನೆಂದು ।
ತರಣಿಜಾದ್ಯರು ಕೂಡಿ । ತರಣ್ಯಸ್ತಮಯ ನೋಡಿ ।
ಸರಿದರ್ಬೀಡಿಕೆಗೆ ರಾಜೇಂದ್ರ । ॥559॥

**ವಾರ್ಧಕ**

ಮತ್ತೆಶಕ್ರಾರಿದುರ್ಮದಸು ಪಾರ್ಶ್ವಕರ ಮೇ |
ಲೊತ್ತಿ ರಾವಣನ ಲಂಕೆಯ ವಿಭೀಷಣಗಿತ್ತು |
ಮತ್ತ ಕಾಶಿನಿಯವೊಲಿಸುತ್ತನುಜ ಸಹಿತವರ ಪುಷ್ಪಕಾರೂಢನಾಗಿ ||

ಉತ್ತುಂಗಬಲದೊಡನೆ ಪೊಕ್ಕಯೋಧ್ಯೆಯ ಸಹಜ |
ಮೊತ್ತಮಂ ಮನ್ನಿಸುತ ಕೌಸಲ್ಯೆ ಮೊದಲಾದ |
ಮಾತೃಗಳಿಗೊಂದಿಸುತ ಶುಭಮಜ್ಜನದ ಮೇಲೆ ಮಾಂಗಲ್ಯಸುಮೂರ್ತದಿ | ||560||

ಸರುವರಭಿ ಮತದಿಂದ ಪಟ್ಟಾಭಿಸೇಚನವ |
ಧರಿಸಿದಂಪತಿಸಹಿತರಾಘವಂ ಮಗುಳೆ ಸುರ |
ನರ ಭುಜಂಗಾದಿ ಲೋಕಾಧಿಪರು ಮುನಿವರರು ಕೈಸೇರ್ದರಾ ಸಭೆಯೊಳು ||

ಪರತರಾನಂದ ಸ್ವರೂಪಸುಕಲಾಪಂಗೆ |
ಗುರುವಸಿಷ್ಠಾದಿಗಳು ಮಂತ್ರಾಕ್ಷತೆಯ ತಳಿಯೆ |
ಹರನರಸಿಮುಖ್ಯನಿಬಿಡಸ್ತನೆಯರಾರತಿಯನೆತ್ತಿದರು ಸುಸ್ವರದೊಳು | ||561||

**ರಾಗ ಧವಳಾರ ಏಕತಾಳ**

ಶ್ರೀ ರಮಾಧವಗೆ ರಾಘವಗೆ |
ನೀರಜಾಕ್ಷಗೆ ಜಗನ್ಮಯಗೆ ||
ಧಾರಿಣಿಸುತೆ ಮುಖಕೈರವಹರಿಗೆ |
ವಾರಿಧಿ ನಿಭಗಂಭೀರವಿಕ್ರಮಗೆ ||
ವಾರಿಧಿಬಲಿದಸುರಾರಿಗೆ ರಾವಣ |
ವೈರಿಗೆ ತೋಷದಿ ಜಾನಕಿರಮಣಗೆ |
ಮೇರು ವೆಯಾರತಿಯ ಬೆಳಗಿರೆ | ಶೋಭಾನೆ ||562||

ಶರಧಿಯೊಳಾಡಿ ಮಂದರವ |
ಧರಿಸಿಸೂಕರನಾಗಿ ಮೆರೆವ ||
ನರಹರಿವಾಮನ ಕೊಡಲಿಯ ಪಿಡಿವ |
ಧರಣಿಪದಶರಥಗುದಿಸಿ ಶೋಭಿಸುವ ||
ಪರಿಪರಿರೂಪದಿ | ಮೆರೆವಮಹಾತ್ಮಗೆ |
ಶರಣರ ಪೊರೆವಸು | ಸ್ಥಿರಕರ ರಾಮಗೆ
ಕುರುಚಿನಾರತಿಯ ಬೆಳಗಿರೆ | ಶೋಭಾನೆ | ||563||

ಭಂಗಾಳಕಿಯರು ತೋಷದಲಿ |
ರಂಗಧಾಮನಪದ ಪೊಗಳುತಲಿ ||
ತುಂಗಕುಚದ ಬಲುಭಾರಂಗಳಲಿ |
ಸಿಂಗನವೋಲ್ಕಟಿ ಸಿಕ್ಕಿ ತೆನುತಲಿ |

ತಿಂಗಳವದನೆಯ ರಂಗಜನಯ್ಯ ಭು ।
ಜಂಗಶಯನ ಪಾಂಡು । ರಂಗಶ್ರೀ ರಾಮಗೆ ।
ಮಂಗಲಾರತಿಯ ಬೆಳಗಿರೆ । ಶೋಭಾನೆ । ॥564॥

**ಭಾಮಿನಿ**

ಬಳಿಕಲಾಸುಗ್ರೀವ ಜಾಂಬವ ।
ನಳಹನುಮ ನೀಲಾಂಗದಾದ್ಯರ ।
ಕಳುಹಿದನು ಪಲವಿಧದಿ ಮನ್ನಿಸಿಮಿಗೆ ವಿಭೀಷಣನ ॥
ತಳುವದುಪಚರಿಸಿಸುತ್ತ ಮರಳಿ ಚು ।
ತಿಳೆಯಸುತೆ ಸಹಜಾವಳಿಗಳೊಡ ।
ನಿಳೆಯ ಹರುಷದೊಳಾಳುತಿರ್ದನಪಾಲಕುಲರನ್ನ । ॥565॥

**ವಾರ್ಧಕ**

ಈ ತೆರದಿ ವಾಲ್ಮೀಕಿ ಕುಶಲವರಿಗೆಂದಕಥೆ ।
ಭೂತಳದೊಳಧಿಕ ಬಾಯಾರಗ್ರಾಮದೊಳುವಿ ।
ಖ್ಯಾತಹವ್ಯಕದ್ವಿಜೋತ್ತಮ ಜತ್ತಿಕೃಷ್ಣಯ್ಯ ನುದರಾಬ್ಧಿಪೂರ್ಣಚಂದ್ರ ॥
ಜಾತನೀಶ್ವರನೆಂಬ ಬಾಲನಾಂ ವಿರಚಿಸಿದೆ ।
ನೀತೆರದಿ ಗುರುವಿಶ್ವನಾಥ ಪೇಳಿಸಿದಂತೆ ।
ಚಾತುರ್ಯಸೊಂಪಿರದಡೇನು ಹರಿನಾಮಮಿರೆ ಪೆರತೆಲ್ಲಮೆರೆಸಿಸಾಂದ್ರ । ॥566॥

**ರಾಗ ಸೌರಾಷ್ಟ್ರ ಏಕತಾಳ**

ಮಂಗಲವೆನ್ನಿರೊ ಮಹನೀಯಗೆ ।
ಕಂಗಳು ಮೂರುಳ್ಳಕಮನೀಯಗೆ । ॥ ಪಲ್ಲವಿ ॥

ಗಂಗೆಯಪೊತ್ತ ಭುಜಂಗಭೂಷಣನಿಗೆ ।
ರಂಗನ ಪ್ರಿಯ ಸಾಧು ಸಂಗನಿಗೆ ॥ ಮಂಗಲಂ ॥ ॥ ಅ. ಪ ॥

ಫಾಲನೇತ್ರಗೆ ಪರಮೇಶ್ವರಗೆ
ವ್ಯಾಳಭೂಷಣಗೆ ವಿಶೇಷನಿಗೆ
ಬಾಲೇಂದುಧರಸರ್ವೇಶ್ವರಗೆ ।
ಬಾಲಾರ್ಕತೇಜ ವಿಶ್ವೇಶ್ವರಗೆ ॥ ಮಂಗಲಂ ॥567॥

ನಿತ್ಯನಿರಾಮಯ ನಿರ್ಗುಣಗೆ ।
ನಿತ್ಯಾತ್ಮರೂಪಚಿದಂಬರಗೆ ॥

ಸ್ತುತ್ಯಸುರಾಸುರ ಭತ್ಯಜನೊದ್ಧರ ।
ಕಾತ್ಯಾಯನಿ ಪ್ರಿಯನಿತ್ಯನಿಗೆ । ಮಂಗಲಂ ॥568॥

ಈಶಪರೇಶ ಸುರೇಶನಿಗೆ ।
ಶೇಶಕುಂಡಲಗೆ ವಿಶ್ವೇಶ್ವರಗೆ ॥
ನಾಶರಹಿತಗೆ ಸಂತೋಷಿಗೆ ಮಮಗುರು ।
ಕಾಶಿ ವಿಶ್ವೇಶ್ವರ ಶ್ರೀ ಶಿವಗೆ ॥ ಮಂಗಲಂ ॥569॥

**ಸಂಪೂರ್ಣ**

# ಯಕ್ಷಗಾನ ಇಂದ್ರಜಿತು ಕಾಳಗ

## ಪಾತ್ರಗಳು

ಶ್ರೀರಾಮ
ಲಕ್ಷ್ಮಣ
ಹನುಮಂತ
ಜಾಂಬವ
ಕಪಿಗಳು
ವಿಭೀಷಣ
ರಾವಣ
ಇಂದ್ರಜಿತು
ಮಂಡೋದರಿ
ಮಂತ್ರಿಗಳು
ಪುರೋಹಿತ
ಸೇವಕ

**ಶಾರ್ದೂಲವಿಕ್ರೀಡಿತಂ**

ಶ್ರೀರಾಮಂ ನವರತ್ನಕುಂಡಲಧರಂ ಶ್ರೀರಾಮರಕ್ಷಾಮಣಿಂ
ಶ್ರೀರಾಮಂ ಚ ಸಹಸ್ರಭಾನುಸದಶಂ ಶ್ರೀರಾಮಚಂದ್ರೋದಯಂ ।
ಶ್ರೀರಾಮಂ ಶ್ರುತಿಕೀರ್ತಿಮಾಕರಮಹಂ ಶ್ರೀರಾಮಮುಕ್ತಿಪ್ರದಮ್
ಶ್ರೀರಾಮಂ ರಘುನಂದನಂ ಭಯಹರಂ ಶ್ರೀರಾಮಚಂದ್ರಂ ಭಜೇ ॥1॥

**ಭಾಮಿನಿ**

ಕುಶನೆ ಕೇಳ್ಕೆ ರಾವಣೇಶ್ವರ ।
ನೆಸೆವ ಪುತ್ರಾಪೌತ್ರಬಾಂಧವ ।
ವಿಸರವಳಿಸಿದೆ ತಾನೆನುತ ಚಿಂತಿಸುವ ಸಮಯದಲಿ ॥
ಬಸವಳಿದು ಚಾರಕರು ಬಂದಾ ।
ದಶಮುಖಂಗರುಹಿದರು ರಾಮನ ।
ವಿಶಿಖದಲಿ ಮಕರಾಕ್ಷ ಹಾಯ್ದನು ಯಮನ ಪುರಕೆಂದು ॥2॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಮಕರಾಕ್ಷ ಮಡಿದ ವಾರ್ತೆಯ ಕೇಳೀ । ದಶ ।
ಮುಖ ಧೈರ್ಯಗುಂದಿ ಕ್ಲೇಶವ ತಾಳಿ ॥
ಕಳವಳಿಸುತ ಮಂಚಕೊರಗಿದಾ । ದಿಟ್ಟ ।
ಕಲಹಗಾರಿಗನಂತೆ ಮರುಗಿದ ॥3॥

ಜಲಜಭವಾಸ್ತ್ರ ಜಳ್ಳಾಯಿತೇ । ಜಯ ।
ಲಲನೆ ರಾಘವನಲ್ಲಿ ಹೋಯಿತೇ ॥
ಗೆಲಲೆಂದಟ್ಟಿದ ಧೈರ್ಯ ಪೂರ್ಣಗೇ । ನಮ್ಮ ।
ನೆಲನತೀರಿತು ಕುಂಭಕರ್ಣಗೇ ॥4॥

ತಂಗಿಯು ಕುಲಕೆ ಕೇಡಾದಳು । ಗೆಲು ।
ವಂಗವಿಲ್ಲೆಮಗೆ ರಾಘವನೊಳು ॥
ಸಾವು ನಿಶ್ಚಯವೆಂದು ಬಗೆದನು । ಬಂದು ।
ದೇವೇಂದ್ರಜಿತು ಕಯ್ಯ ಮುಗಿದನು ॥5॥

**ಭಾಮಿನಿ**

ಚಿಂತೆಯೇಕೆಲೆ ಜೀಯ ರಿಪುಕುಲ
ದಂತಕನು ತಾನಿರಲು ನಿಮ್ಮ ಮು ।
ಖಾಂತರದಲಹುದೆನಿಸಿಕೊಂಬೆನು ಕಡೆಯ ಮಾತೇನು ॥
ಕಂತುಹರ ಕಮಲಜರೆನಿಗೆ ಮಾ ।
ರಾಂತವಿದಕೋ ಬಾಣವರಿನೃಪ ।
ರಂತರವಿದೇನೆನುತ ಗರ್ಜಿಸಿ ನುಡಿದನಿಂದ್ರಾರಿ ॥6॥

**ರಾಗ ಶಂಕರಾಭರಣ ಏಕತಾಳ**

ತಂದೆ ಕೇಳ್ ಮರ್ಕಟರುಗಳ ।
ನಿಂದು ರಣದಿ ಗೆಲದೆ ಪಿಂತೆ ।
ಬಂದೆ ನಾದರೆಯು ನಿನ್ನ । ಕಂದನಲ್ಲೆಂದ ॥7॥

ಶತ್ರುಗಳೆಲ್ಲವರನ್ನು ।
ಮರ್ದಿಸದಿರ್ದರೆ ನಾನು ।
ಸತ್ಯವೇ ಮಂಡೋದರಿಯ । ಪುತ್ರನಲ್ಲೆಂದೂ ॥8॥

ತಾತನೊಳಪ್ಪಣೆ ಗೊಂಡು ।
ತಾನುರಥವನೇರುತಾ ಸಂ ।
ಖ್ಯಾತ ಸೇನೆ ಕೂಡಿಕೊಂಡು । ನಡೆದನಿಂದ್ರಾರಿ ॥9॥

ಸಂದಣಿಸುವ ಕೀಶಬಲವ ।
ನಂದುಮಹಾಯುಧದಿ ಖಳನು ।
ಕೊಂದುವಟ್ಟಿದನು ಮಾಯ । ದಿಂದ ನಿಮಿಷದಿ ॥10॥

ಬಿದ್ದಸೇನೆ ಕಂಡು ರಾಮ ।
ನೆದ್ದು ಬಿಲ್ಲ ಹಿಡಿದು ಖೂಳ ।
ನಿದ್ದಬಳಿಗೆ ಬಂದು ಶರದೊ । ಳದ್ದಿದನವನ । ॥11॥

ಧಾರಿಣಿಗಿಳಿದು ಬಂದು ।
ಹೋರುತಿರಲು ರಾಮ ರಥವ ।
ನೂರವೊಂದು ಮುರಿಯೆ ಖಳನು । ಸಾರಿದನಂದು ॥12॥

**ಭಾಮಿನಿ**

ಇವನೊಡನೆ ಕಾದುವ ಸಮರ್ಥರು ।
ಭುವನ ಮೂರರೊಳಿಲ್ಲೆನುತ ಖಳ ।
ಪವನಜನ ಸಮ್ಮುಖಕೆ ಹಾಯ್ದನು ಕಪಟವನು ನೆನೆದು ॥
ಶಿವನಿಗರಿಯದ ಧೂರ್ತ ಮಾಯದೊ ।
ಳವನಿಜೆಯ ನಿರ್ಮಿಸುತ ಕಪಿಗಳ ।
ನಿವಹದಲಿ ತೋರಿದನು ಖಡ್ಗವ ಕೊರಳಿಗಾನಿಸುತ ॥13॥

**ರಾಗ ನೀಲಾಂಬರಿ ಏಕತಾಳ**

ನೋಡಿದೇನಯ್ಯ ಹನುಮ । ರಕ್ಕಸನೆನಗೆ ।
ಮಾಡುವದಾಜ್ಞೆಯನು ॥14॥

ಗಾಢದಿಂದೆನ್ನ ರಕ್ಷಿಸೊ । ರಾಘವನೊಳು ।
ಕೂಡಿರ್ಪೆ ಬದುಕಿದರೆ ॥15॥

ಒತ್ತಿ ಗಂಟಲು ಹಿಡಿದು । ಕಬರಿ ಕಯ್ಯ ।
ಸುತ್ತಿ ನೆಗಹಿದ ಖಳನು ॥16॥

ಕೆಟ್ಟೆನಯ್ಯಯ್ಯೆ ಹನುಮ । ರಾಘವನಿಗೆ ।
ಪಟ್ಟದರಸಿಯಲ್ಲವೇ ॥17॥

ಯಾರಿಗಾಗಿ ಕಾದುವಿರಿ । ಎನ್ನನು ಕೊಂದು ।
ವಾರಿಧಿಗೇಕೆ ಸೇತು ॥18॥

ಉಬ್ಬಸ ಘನವಾಯಿತೆ । ಕಾವವರೆನ ।
ಗೊಬ್ಬರಿಲ್ಲದೆ ಹೋಯಿತೆ ॥19॥

ಘನಬೇಗ ಹನುಮ ಪೋಗು । ರಾಘವನೆಡೆ ।
ಗನುಮಾನ ಮಾಡದಿರೂ ॥20॥

ವನಿತೆಯಾಸೆಯಿಲ್ಲದೆಡೆ । ಲಕ್ಷ್ಮಣಾಂಗದ ।
ಗಿನಜಗಾದರು ನೀ ಪೇಳು ॥21॥

ಗಂಡಬೇಡೆಂದು ಲಂಕೆಗೇ । ಬಂದವಳಲ್ಲ ।
ಖಂಡಪರಶು ತಾ ಬಲ್ಲ ॥22॥

ಮರುಗಿ ಮನದಿ ಹನುಮಾ । ರಕ್ಕಸನಿಗಿಂ ।
ತರುಹಿದ ದೈನ್ಯದಲಿ ॥23॥

**ರಾಗ ಸಾರಂಗ ಅಷ್ಟತಾಳ**

ಮತಿವಂತ ಖಳನೆ ಕೇಳೂ । ಹೆಂಗೊಲೆಯಿದು । ಹಿತವೇನೊ ತಿಳಿದು ಪೇಳು ॥
ಯತಿ ಪೌಲಸ್ತ್ಯನ ವೀರ್ಯ । ಗತಿಗೆ ಸಾಧನಇಂದ್ರ ।
ಜಿತುವೆಂಬ ನಾಮದೊ । ಅತಿಶಯ ಬಿರುದುಳ್ಳ ॥ ಮತಿವಂತ ॥24॥

ಓದಿನೋಡಿದೆ ಶಾಸ್ತ್ರವ । ಬೊಮ್ಮನ ಚತು । ರ್ವೇದ ಪುರಾಣಸ್ತೋತ್ರವ ॥
ಮೇದಿನಿಯೊಳು ವಿಕ್ರ । ಮಾಗ್ರಣಿಯೆನಿಸಿದೆ ।
ಸಾಧಿಸಿ ಬೊಮ್ಮನ । ಶಿವನನೊಲಿಸಿಕೊಂಡೆ ॥ ಮತಿವಂತ ॥25॥

ಅರಸುತನದಲಿ ನೀನು । ಆಳುವ ಲಂಕಾ । ಪುರದರಸನ ಮಗನು ॥
ಹರಕಮಲಜರಿರಿತ್ತ । ವರವುಂಟೆನುತಲೀಕೆ ।
ಹರಣ ಗೊಂಡರೆ ಮುಂದೆ । ಪರಿಹಾರ ನಿನಗುಂಟೆ ॥ ಮತಿವಂತ ॥26॥

**ಭಾಮಿನಿ**

ಬರಲಿದರ ದೆಸೆಯಿಂದ ಪಪ್ರಥೆ ।
ದೊರಕಲಿದರಿಂದಪಜಯವು ಮುಂ ।

ಬರಿದಿರಲಿ ದುಷ್ಕೀರ್ತಿಯಂಜುವ ಭಟನು ತಾನಲ್ಲ ||
ಮರುತಸುತ ಕೇಳಸುರ ರಾವಾ |
ಸುರವಿಕರ್ಮ ವಿಧರ್ಮ ಪಥವೆಮ |
ಗರಿದೆನುತ ಜಾನಕಿಯ ಕಡಿದಿಳುಹಿದನು ಧರಣಿಯಲಿ ||27||

**ರಾಗ ಸಾಂಗತ್ಯ ರೂಪಕತಾಳ**

ಧರಣಿನಂದನೆಶಿರ ಧರೆಗೆ ಬೀಳದ ಮುನ್ನ |
ಯೆರಗಿದ ಖಳನ ಮುಷ್ಟಿಯಲಿ ||
ಭರಕೆ ತಪ್ಪಿಸಿಕೊಂಡು ಜುಣುಗಲು ರಥವು ಜ |
ಝರಿತವಾಗಲು ಮರಳಿದನೂ ||28||

ಅಯ್ಯಯ್ಯ ಅವನಿಜೆಅಬಲೆಯರೊಳು ಸಹಜೆ |
ಮಯ್ಯ ಚಾಚುವುದಾತೆ ನೆಲಕೆ ||
ಕಯ್ಯರೆ ಕರ್ಮವನುಣಿಸಿತೆನಗೆ ಜಗ |
ದಯ್ಯನೊಳೇನೆಂಬೆನಕಟಾ ||29||

ಪಾತಕಿ ನಾ ನಿಮ್ಮ ಸೇರಿರ್ಪೆನೆಂದರೆ |
ಸೀತೆಯ ಪೆಸರಡಗಿಸಿತೇ ||
ಯಾತಕೋಸುಗ ಬಂದೆ ಖಳನುಪದ್ರಕೆ ನಾನು |
ಮಾತೆ ನಿಮ್ಮಳಿವ ನೋಡುವರೆ ||30||

ಕಡಿವೆರಡರಲಿ ಶೋಣಿತಧಾರೆ ಸುರಿವುದ |
ಬಿಡುವ ಮುಚ್ಚುವ ಕಣ್ಣಾಕೃತಿಯ ||
ಕಡುಪ್ರಕಾಶದ ಚಂದ್ರಾನನ ಕಂಡು ಹನುಮಂತ |
ಪೊಡವಿಗೊರಗಿದ ಮೂರ್ಛೆಯಲಿ ||31||

**ವಾರ್ಧಕ**

ಅನಿಲಜನ ಘನಸಿಂಹನಾದಮಂ ಕಾಣದಿರೆ |
ಧನುವ ಝೆಂಕರಿಸುತ್ತಲಿಂದ್ರಾರಿ ಮೆರೆವುತಿರೆ |
ವನಜಾಕ್ಷ ಕಂಡು ಜಾಂಬವರುಹಿ ಸಂಗತಿಯ ತಿಳಿದು ಬಾ ಪೋಗೆಂದನು ||
ಅನುವರದ ಭೂಮಿಯೊಳ್ ಬಿದ್ದ ಸೇನೆಯ ದಾಂಟಿ |
ಘನತರಶ್ವಂಗಳಂ ಹತ್ತಿಳಿದು ಒಳಲುತ್ತ |
ಜನಕಜೆಯು ಬಿದ್ದ ಚೋದ್ಯವಕಂಡು ವಿಧಿಸುತಂ ಹನುಮನೊಳ್ ಬೆಸಗೊಂಡನು ||32||

**ರಾಗ ಸೌರಾಷ್ಟ್ರ ತ್ರಿವುಡೇತಾಳ**

ಕೇಳು ಮರುತಾತ್ಮಜನೆ ಇಂದಿನ ।
ಕಾಳಗದಿಖಳ ಮೆರೆದ ಪರಿಯನು ।
ಕೇಳಿಬಾರೆಂದೆನ್ನ ಕಳುಹಿದ । ವ್ಯಾಳಶಯನ ॥33॥

ಏನು ನಿನ್ನಯ ಮನದ ದುಗುಡವಿ ।
ದೇನೆನುತ ಬೆಸಗೊಂಡ ಬೊಮ್ಮನ ।
ಸೂನುವಿಂಗನಿಲಜನು ಪೇಳ್ದನಿ । ಧಾನದಿಂದ ॥34॥

**ರಾಗ ಕಾಂಬೋಜಿ ಅಷ್ಟತಾಳ**

ಜಾಂಬವದೇವ ಕೇಳಯ್ಯ । ಕಾದಿ ।
ಜಂಭಾರಿಜಿತುವೆನ್ನ ಕಯ್ಯ ॥
ಅಂಬುಜಾಕ್ಷನ ಸಮರದಿ ಸೋತ ಖತಿಯಿಂದ ।
ಕುಂಭಿನಿಜಾತೆಯ ಕೆಡಹಿ ತಪ್ಪಿಸಿಕೊಂಡ ॥ ಜಾಂಬವ ॥35॥

ಇವನ ಕೊಲ್ಲದಡೀಗ ನಾನು । ಬಾಳೆ ।
ಭುವನದೊಳಗೆ ಫಲವೇನು ॥
ದಿವಕರಕುಲಜರ್ಗೆ ಮೊಗವೆಂತು ತೋರುವೆ ।
ಶಿವನಾಣೆ ಸಾವುದಲ್ಲದೆ ಪರಿಹರವುಂಟೆ । ಜಾಂಬವ ॥36॥

**ರಾಗ ಶಂಕರಾಭರಣ ತ್ರಿವುಡೇತಾಳ**

ಜಗದ ಜೀವನ ಬೇಡ ನಿನಗೀ ।
ಬಗೆಯ ಪಂಥವೆನುತಲಿ ॥
ಮೊಗುವ ಕಂಬನಿ ತೊಡೆದು ನಯನದಿ । ಾಂಬವಂತ ॥37॥

ಮರುಸುತ ಸುಜ್ಞಾನಿ ನಿನಗೀ ।
ಮರುಳು ಯಾಕೈ ಸುಮ್ಮನೆ ॥
ನಿರತವೋ ಪುಸಿಯೆಂದು ತಿಳಿಯದೆ । ಧೈರ್ಯ ಸಾಕೆ ॥38॥

ಮಾಯೆಯಿದು ದಿವಿಜಾರಿ ರಚಿಸಿದ ।
ದೇವಿಯಲ್ಲಾ ತೆಗೆದುಕೋ ॥
ಆಯತಾಕ್ಷಿಯ ಮುಂದೆ ತೋರಿದ । ಡಾತ ಬಲ್ಲಾ ॥39॥

ತರಳೆಯನು ಕೊಂಡೊಯ್ದು ಪವನಜ ।
ಕಪಟ ಸತಿಯಾ ರಾಮನ ॥
ಚರಣಕೊಪ್ಪಿಸಿ ಬಿನ್ನವಿಸಿದನು । ಖಳನ ಕಥೆಯ ॥40॥

**ಭಾಮಿನಿ**

ಧರಣಿಜೆಯ ಖಂಡಿಸಿದ ಘಾಯದಿ ।
ಸುರಿವ ರಕುತವ ಕಂಡು ರಘುಪತಿ ।
ಯೊರಗಿರಲು ಮೂರ್ಛೆಯಲಿ ಸೌಮಿತ್ರ್ಯಾದಿ ಕಪಿಕಟಕಾ ॥
ಮರುಗುತಿರಲರೆಗಳಿಗೆ ಮಾತ್ರದೊ ।
ಳರಿಭಯಂಕರನೆದ್ದು ಸತಿಯಳ ।
ಕರದೊಳಗೆ ತಕ್ಕವಿಸಿ ಹಲವಂಗದಲಿ ಹಲುಬಿದನು ॥41॥

**ರಾಗ ಸಾವೇರಿ ಆದಿತಾಳ**

ಜನಕಾತ್ಮಜೆ ಜಾಣೆಯರರಸಿಯೆ ।
ಮುನಿಸೆನ್ನೊಳು ಯಾತಕೆಂದೆನುತ ॥
ಘನಸ್ನೇಹದಿ ಚುಂಬಿಸುತಧರವ ।
ಮನದಣಿಯೆ ಮುದ್ದಾಡುತೆಂದಾ ॥42॥

ಚಂದ್ರಾನನೆ ಚೆಲುವೆ ನೋಡೆಮ್ಮನು ।
ಮಂದಹಾಸದಿ ಮಾತನಾಡಬಲೇ ॥
ಇಂದ್ರಾಂತಕ ದಶಮುಖಾದಿಗಳನು ।
ಕೊಂದೀವೆ ಹಿಡಿ ನಂಬುಗೆಯನೂ ॥43॥

ಬೇಡೆಂದೆರೆ ಸುಖಭಾಗ್ಯಹೀನನ ।
ಕೂಡೇತಕೆ ಬಂದೆ ಸಾವುದಕೆ ॥
ಮೂಢಾತ್ಮನ ಖಡುಗದ ಭಯದಿ ಕೂ ।
ಗಾಡಿದೆಯೆಷ್ಟೆಮ್ಮ ಕರೆಕರೆದೂ ॥44॥

ದೇಶಾಂತರ ಇವಳಾಟಪಾಟದಿ ।
ದೇಶಾಯೋಧ್ಯಪುರವೆಂದೆನಿಸಿತು ॥
ಲೇಸಾಗಬೇಕೆಂದೆಮ್ಮ ಜಪಿಸುವ ।
ಈ ಸೀತೆಯ ಮರವರೆ ತಮ್ಮ ॥45॥

**ವಾರ್ಧಕ**

ದೇವ ಕೇಳೆಂದಾ ವಿಭೀಷಣಂ ಕಯ್ ಮುಗಿದು ।
ದೇವಿ ಜಾನಕಿಯಲ್ಲ ನಮ್ಮವರ ಕಪಟವಿದು ।
ನೀವು ಚಿಂತಿಸಲೇಕೆ ನರರಂತೆ ಯೋಚಿಸಲು ನರಸತಿಯೆ ಜನಕಾತ್ಮಜೆ ॥
ಪಾವನಾತ್ಮಿಕೆ ವನದೊಳಿಲ್ಲದಡೆ ನಾ ನಿಮ್ಮ ।
ಸೇವೆಗಾಗುವನಲ್ಲವೆಂದಸುರಪತಿ ನುಡಿಯೆ ।
ಪಾವಮಾನಿಯನಪ್ಪಣೆಯನ್ನಿತ್ತು ಕಳುಹಿದಂ ತಿಳಿವುದಕೆ ರಘುನಾಥನೂ ॥46॥

**ರಾಗ ಸುರುಟಿ ಆದಿತಾಳ**

ಧಾರಿಣಿಪಗೆ ನಮಿಸಿ । ಪವನಜ । ಹಾರಿದಶೋಕವನಕೇ ॥
ನಾರಿಮಣಿಯ ಕಂಡೆರಗುತ ಹರುಷದಿ ।
ಚಾರುಚರಣದೆಡೆಯೊಳು ಸ್ತುತಿಗೆಯ್ದನು ॥47॥

ಜಯ ಜನಕನ ಜಾತೆ । ತ್ರಿಜಗ । ನ್ಮಯೆ ಸುಜನರ ಮಾತೇ ॥
ಭಯವರ್ಜಿತೆ ಜಂಭಾಂತಕಪೂಜಿತೆ ।
ದಯಾಸಾಗರೆ ಲಾಲಿಸು ಭಿನ್ನಪವನು ॥48॥

ಮಾತೆ ನಿನ್ನಂತಬಲೆ । ರಚಿಸಿಂದ್ರಾ । ಜಿತು ಕಡಿದನು ರಣದಿ ॥
ಪ್ರೀತಿಯಿಂದ ಹೇರಳ ದುಃಖಿ ರಘು ।
ನಾಥನು ಕಳುಹಿದ ನಿನ್ನೆಡೆಗೆನ್ನನು ॥49॥

**ರಾಗ ಧನ್ಯಾಸಿ ಅಷ್ಟತಾಳ**

ಚೆಂದವಾಯ್ತು ಹನುಮ ನೀ ।
ಬಂದಕಾರಣದೊಳೆನ್ನ ॥
ಕಂದ ಬಾ ಬಾರೆನುತಲರ ।
ವಿಂದಮುಖಿ ತಾನಪ್ಪಿದಳು ॥50॥

ದೂಷಣಾರಿಯಂತೆ ಶಿರವ ।
ನಾಸುರೇಂದ್ರ ಕಾಣಿಸಲ್ಕೆ ।
ಕ್ಲೇಶದಿಂದ ಸಾಯಬಗೆಯ ।
ಲೀ ಸರಮೆ ತಡೆದಳೆನ್ನ ॥51॥

ಅಂತರಂಗವಿದೇ ಮಾತ ।
ಕಾಂತನಿಗರುಹು ಹಿಂದೆ ।
ಕಾಂತಾರದಿ ರಾಮನು ಜ ।
ಯಂತನಿಂಗುದ್ಧರಿಸಿದುದ ॥52॥

ತಾಯೆ ಖಳರಾಯುಷ್ಯ ತೀರಿ ।
ಹೋಯಿತೆನುತ ಬಂದು ಹನುಮ ।
ಪ್ರೀಯದಿಂದಲಾಗ ರಘು ।
ರಾಯಗೆ ವಿಸ್ತರಿಸಿದನು ॥53॥

**ರಾಗ ತುಜಾವಂತು ಅಷ್ಟತಾಳ**

ವಸಗೆಂಬ ವಾರ್ತೆ ಕೇಳಿದರೆಲ್ಲ । ಸೀತೆ ।
ಯಶೋಕಾವನದಿ ರಾಮ ನಾಮವ ಸ್ಮರಿಸಿರ್ಪ ॥ ಪ ॥

ಅಮ್ಮಮ್ಮ ವಿಭಿಷಣಗೆಣೆಯಿಲ್ಲ । ಜಗ ।
ದಮ್ಮ ತಾ ಪುಸಿಯೆಂದು ಪೇಳಿದ ಸೊಲ್ಲ ॥
ಬ್ರಹ್ಮಪುತ್ರನು ಮೂಲಾದಿಯ ಬಲ್ಲ । ಪರ ।
ಬ್ರಹ್ಮ ತಾನಲ್ಲದೆ ಹನುಮಂತ ಕಪಿಯಲ್ಲ ॥54॥

ಹೀಗೆಂದು ಕಪಿಗಳು ನಲಿದಾಡಿ । ನಳ ।
ಭೋಗಿ ಸುಗ್ರಿವಾದಿಗಳನೊಡಗೂಡಿ ॥
ರಾಘವನೊಳಗಪ್ಪಣೆಯ ಬೇಡಿ । ಕಟ್ಟಿ ।
ಬೇಗದಿಂದೆಳೆದು ತರುವೆವಿಂದ್ರಾರಿಯ ನೋಡಿ ॥55॥

**ವಾರ್ಧಕ**

ಇತ್ತ ಕಪಿಗಳು ಪಾರುಪತ್ಯಮಂ ಮಾಡುತಿರೆ ।
ಚಿತ್ತದಲಿ ಪುರುಹೂತಜಿತು ಚಿಂತಿಸುತಲಯ್ಯ ।
ಗಿತ್ತ ಭಾಷೆಗೆ ಮಾರಣಾಧ್ವರವ ನಿಶ್ಚಯಿಸಿ ಕುಂಭನಿಯೊಳೈತಂದನು ॥
ಸುತ್ತೇಳುಕೋಟಿ ರಕ್ಕಸರ ನಿಲಿಸುತ್ತಲದ ।
ರೊತ್ತಿನಲಿ ಭೂತಭೇತಾಳರಂ ಪರುಠವಿಸಿ ।
ಬಿತ್ತರದ ಯಜ್ಞಶಾಲೆಯ ರಚಿಸಿ ಕುಲದೇವಿಗರ್ಚಿಸುತ ಪೊಡಮಟ್ಟನು ॥56॥

**ರಾಗ ಧವಳಾರ (ಧ್ರುವ) ತ್ರಿವುಡೆತಾಳ**

ಶಂಕರಿ ಸರ್ವೇಶ್ವರಿ ದುರಿತಭ ।
ಯಂಕರಿ ನಮ್ಮಾನ್ವಯಪೋಷಿಣಿ ।
ಕಿಂಕರಜನ ಮಾತೇ ಗಿರಿಜಾತೆ ।
ಗಿರಿಜಾತೆಯೇ ನಮ್ಮರಸಗೆ ಕರುಣಿಸು ।
ಲಂಕಾಧಿಪತ್ಯ ಸ್ಥಿರವಾಗಿ ॥ ಶೋಭಾನೆ ॥57॥

ಶತ್ರುಗಳನು ಜಯಿಸುವ ಶಕ್ತಿಯು ।
ಮಿತ್ರರನೂ ಸಲಹುವ ಯುಕ್ತಿಯು ।
ಧಾತ್ರಿಯಿರುವನಕಾ ನಡೆಸೆಂದು ॥
ನಡೆಸೆಂದತಿ ಭಕ್ತಿಯೊಪರ್ಚಿಸಿದರೆ ।
ಕಾತ್ಯಾಯಿನಿ ಮೊಗವ ತಿರುಹಿದಳು ॥ ಶೋಭಾನೆ ॥58॥

**ರಾಗ ಸಾಂಗತ್ಯ ರೂಪತಾಳ**

ಸೋಲವಾಯಿತುಯೆಂದು ಸುರಪಾಲಜಿತು ಬಂದು ।
ಮೂಲಕುಂಭಿನಿ ಭೂಮಿಗಿಳಿದೂ ॥
ಕಾಲನಂದದಿ ಪೌರೋಹಿತ ಪೇಳ್ದ ಮತದಿಂದ ।
ಶಾಲೆ ಹಿಡಿದು ದೀಕ್ಷೆಗೊಂಡಾ ॥59॥

ಕಾಮಾರಿಕಮಲಜರಿಂದ ನೇಮವಗೊಂಡು ।
ಹೋಮ ಕಯ್ಗಂಡ ಶಕ್ರಾರೀ ॥
ಅ ಮಹಾಕುರಿಕೋಣ ಮಾಂಸ ದುರ್ಗಂಧವು ।
ರಾಮನ ಬಲಕೆ ಕಾಣಿಸಿತು ॥60॥

ಧಗಧಗಿಸುವ ದಳ್ಳುರಿಯ ಕಂಡು ಶರಣಂಗೆ ।
ರಘುನಾಥನೊಲಿದು ಕೇಳಿದನು ॥
ಸುಗುಣಸಾಗರನೆ ಪೇಳಿಂತಾಹ ಪರಿಯಾರಿಂ ।
ದೊಗೆದುದೆಂದೆನಲರುಹಿದನು ॥61॥

**ರಾಗ ಕಾಂಭೋಜಿ ಅಷ್ಟತಾಳ**

ರಾಘವದೇವ ಕೇಳಯ್ಯ । ನಿಗ ।
ಮಾಗಮವೇದ್ಯಾಹಿಶಯ್ಯ ॥
ನಾಗಿ ತನ್ನೊಡನಿಂತ । ಮೇಗರತನವೇತ ।
ಕಾಗಲಿ ತೋರ್ಪ ಭ । ಯಾಗಮವರುಹುವೆ ॥62॥

ಮಾರಣಧ್ವರ ಮಾಳ್ಪ ನಿನಗೇ । ಸುರ ।
ಪಾರಿ ಕುಂಭಿನಿಯೊಳಗವಗೇ ॥
ಮೂರು ಲೋಕದೊಳಿದಿ । ರಾರುಂಟು ಬೊಮ್ಮನ ।
ಕಾರುಣ್ಯದಲಿ ಬಂದ । ಸಾರ ಸಾಮರ್ಥ್ಯದಿ ॥63॥

ನಿನ್ನ ಸೇನೆಯೊಳಗುತ್ತುಂಗಾ । ರುಂಟೆ ।
ಅನ್ನಾಹಾರದಿ ಸತಿಸಂಗಾ ॥
ಹನ್ನೆರಡಬ್ದ ವಿ । ಭಿನ್ನ ಸದ್ವ್ರತರಿರ ।
ಲಿನ್ನವರೊಳು ಖಳ । ನಿರ್ನಾಮನಾಗುವ ॥64॥

**ಕಂದ**

ಮಿಕ್ಕವರಿಂಗಸದಳ ಬಲು ।
ರಕ್ಕಸನಂ ಮುರಿದುರುತರ ಕೀರ್ತಿಯ ಪಡೆಯಲ್ ॥
ತಕ್ಕವರಿಲ್ಲೆನೆ ಲಕ್ಷ್ಮಣ ।
ನಕ್ಕು ನಪಾಲನೊಳೆಂದನು ಶೌಂರ್ಿವು ಜಡಿಯಲ್ ॥65॥

**ರಾಗ ಮಾರವಿ ಏಕತಾಳ**

ಯಾಕೀಪರಿ ಕಡು । ವ್ಯಾಕುಲ ತಾಳ್ವಿರಿ ।
ಈ ಖೂಳನ ವಧೆಗೆ ॥
ಕಾಕುತ್ಸ್ಥಾಧಿಪ ತಾ ಕರ್ಪುರ ವೀ ।
ಳ್ಯಾಕುಲವನು ತನಗೆ ॥66॥

ಕೊಂದುಕೊಡುವೆ ದಶ । ಕಂಧರನನುಗನ ।
ಸಂದೇಹಗಳೇನು ।
ಮಂದರಾದ್ರಿಧರ । ನೊಂದು ಕರುಣವಿರ ।
ಲಿಂದಂಜೆನು ನಾನು ॥67॥

ಎಲ್ಲವರಿಂದಲಿ । ಸಲ್ಲದ ಕಾರ್ಯವ ।
ನೊಳ್ಳಿತೆನಲು ಮಾಡಿ ॥
ಉಲ್ಲಾಸದೊಳು ಪ್ರ । ಫುಲ್ಲ ಯಶಸ್ಸಿದ ।
ರಲ್ಲಿ ಘಡೆವೆ ನೋಡೀ ॥68॥

**ರಾಗ ಸೌರಾಷ್ಟ್ರ ತ್ರಿವುಡೇತಾಳ**

ಊರ್ಮಿಳಾಪತಿಯೆಂದ ನುಡಿ ಕೇ ।
ಳ್ದುಮ್ಮಳಿಸುವಾನಂದರಸದೊಳ ।
ಗೊಮ್ಮೆ ತಳ್ಕಿಸುತೆಂದ ರಾಘವ । ತಮ್ಮನೊಡನೇ ॥69॥

ಒಂದುಳಿಯದೀ ಸಾಧನಗಳಿ ।
ದ್ದಿಂದು ಶಕ್ರಾರಿಯನು ಕೊಂದಡೆ ।
ತಂದವನು ನೀನಾದೆ ಜನಕನ । ನಂದನೆಯನು ॥70॥

ಹನುಮ ನೀಲಾಂಗದ ವಿಭೀಷಣ ।
ವನಜಭವ ಸುತ ಸಹಿತಲೈವರ ।
ರಣಕೆ ಬೆಂಬಲವಾಗಿ ಕರಕೊಂ । ಡನುಜ ಪೋಗೈ ॥71॥

**ಭಾಮಿನಿ**

ಕೆಡಿಸಿ ಖಳರಧ್ವರವ ಮಂತ್ರವ ।
ಸುಡಿಸಿ ಸೋಪಸ್ಕಾರ ಸಾರವ ।
ಬಿಡಿಸಿರೈ ದಾನವರ ವರಸಂಸಾರವಿಭ್ರಮವ ॥
ನಡಿರೆನಲು ರಾಘವನ ಬೀಳ್ಕೊಂ ।

ಡೊಡನೆ ಕುಂಭಿನಿಗಿಳಿದು ಕಲ್ಪದ ।
ಕಡೆಯ ಭೈರವರಂತೆ ಮುತ್ತಿದರಾ ಮಹಾಧ್ವರವಾ ॥72॥

**ವಾರ್ಧಕ**

ಸುಳಿಸಿದರ್ ಭೂತಭೇತಾಳರಂ ದೆಸೆದೆಸೆಯೊ ।
ಳಳಿಸಿದರ್ ಪ್ರಾಕಾರದಸುರರಂ ಜಡಿವುತ ।
ಪ್ಪಳಿಸಿದರ್ ಡೊಳ್ಳಾದ ಋತ್ವಿಕ್ಕುಗಳ ಹೊಗೆವ ಹೋಮದೊಳ್ ಹೋಮಿಸಿದರು ॥
ಬಳಸಿದರ್ ಯಜ್ಞಸಾಹಿತ್ಯಮಂ ತಮ್ಮೊಳೊ ।
ಕ್ಕಳಿಸಿದರ್ ಮಾರಣಧ್ವರವ ಹನುಮ ಪ್ರಮುಖ ।
ರುಳಿಸಿದರ್ ಶಕ್ರಾರಿಗೊಬ್ಬನಂ ಒಳಿಕ ಲಕ್ಷ್ಮಣನಾತಗಿಂತೆಂದನು ॥73॥

**ರಾಗ ಭೈರವಿ ಏಕತಾಳ**

ಫಡ ರಾವಣಿ ಸಾಕೇಳೂ । ಬಿಲ್ ।
ಹಿಡಿದೇರ್ನಿಲು ತೇರಿನೊಳೂ ॥
ಕಡೆಗಾಲಕೆ ಮಖವೇಕೆ । ಇ ।
ನ್ನಡಗೀರ್ದರೆ ಬಲು ಠೀಕೆ ॥74॥

ಪೊಡವಿಯ ಪೊಕ್ಕಡಗಿದರಾ । ಬೆಂ ।
ಬಿಂಡುವುದೆ ಪರನಾರಿಯರ ॥
ಕೆಡಿಸಿದ ಕಡು ಪಾತಕವೂ । ಕುಲ ।
ಕಡರದಿಹುದೆ ಘಾತಕವೂ ॥75॥

ಇನ್ನಾದರು ಛಲ ಬಿಟ್ಟು । ಶ್ರೀ ।
ಕನ್ಯಾಮಣಿಯನು ಕೊಟ್ಟು ॥
ಚೆನ್ನಾಗಿಯೆ ಮರೆವಿಡಿಯೊ । ಶ್ರೀ ।
ಮನ್ನಾರಾಯಣನಡಿಯಾ ॥76॥

**ಕಂದ**

ಇಕ್ಷ್ವಾಕು ಕುಲೋದ್ಭವನೆಂ ।
ಬಾಕ್ಷೇಪದ ಮೂದಲೆಯಂ ಕೇಳ್ದಮರಾರೀ ॥
ದೀಕ್ಷೆಯ ಬಿಸುಟೆದ್ದು ವಿಲೋ ।
ಕಾಕ್ಷಿಯೊಳೆಂದನು ಕಿರಿಯಯ್ಯಗೆ ಖತಿಯೇರೀ ॥77॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಲವೊ ಸುಡು ಸುಡು ನಿನ್ನ ಮೋರೆಯ ।
ಕುಲ ಸುಗಂಧದ್ರುಮಕುಠಾರಕ ।
ನಿಲದಿರೆನ್ನಿದಿರಿನೊಳು ಭಂಡರ । ತಿಲಕ ತೊಲಗೂ ॥78॥

ಎಂದವನ ಧಿಕ್ಕರಿಸಿ ಲಕ್ಷ್ಮಣ ।
ಗೆಂದನೆಲೆ ಕೋದಂಡವನುಹಿಡಿ ।
ಬಂದೆನಿದೆ ರಿಪುವಂಶಪರಶು ಪು । ರಂದರಾರೀ ॥79॥

ಹರಣದಾಸೆಗಳುಳ್ಳಡಣ್ಣನ ।
ಕರೆಸು ವೀಳೆಯ ವಿತ್ತುದೇಶಾಂ ।
ತರಕೆ ತಿರುದುಂಬುದುಕೆ ಶರಣನ । ಭರದಿಕಳುಹೂ ॥80॥

ಅಣ್ಣನನು ಕರೆಸುವೆ ದಶಾಸ್ಯನ ।
ಮಣ್ಣಿಗುಣಿಸಿ ಶಶಾರ್ಕರಿರುತಿರು ।
ವನ್ನಬರ ಶರಣಂಗೆ ಲಂಕೆಯ । ಪಣ್ಣಿಕೊಡಲೂ ॥81॥

**ಭಾಮಿನಿ**

ಮಗಧರಾಯನ ಮೊಮ್ಮನಾಡಿ ।
ರ್ದಗಡುವಾಕ್ಯವ ಕೇಳ್ದು ಸುರಪನ ।
ಬಿಗಿದ ಖಳನುಬ್ಬೇರಿ ಗರ್ಜಿಸುತೆಂದ ಖಾತಿಯಲೀ ।
ರಘುಕುಲದೊಳತಿ ಧೀರನೆಂಬೀ ।
ಹಗರಣವು ನಿನಗಿರಲು ಕೊಳ್ಳೆಂ ।
ದುಗಿಸಿದನು ಮುಂಗಾರ ಮೇಘದ ಸೋನೆಯೆನೆ ಸರಳಾ ॥82॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ರಾವಣಾತ್ಮಜ ಭಾರಿ ಬಲನಯ್ಯ । ನೀ ಬಿ ।
ಟ್ಟೀ ವಿಶಿಖದೊಳೇನು ಫಲವಯ್ಯ ॥
ಜೀವಗಳ್ಳರ ಗಂಡ ನೋಡೆಂದೂ । ಬಲು ।
ಠೀವಿಯೊಳದ ಖಂಡಿಸಿದನಂದೂ ॥83॥

ಅಲ್ಪ ಪೌರುಷನೆಂದು ಬಗೆದೆಯಾ । ಮತಿ ।
ತಪ್ಪಿ ದೂಷಣೆಯನ್ನು ತೆಗೆದೆಯಾ ॥
ಮುಪ್ಪುರಾಂತಕನಿತ್ತ ಶಕ್ತಿಯಾ । ತೆಗೆ ।
ದಪ್ಪಳಿಸುವೆ ತೋರು ಯುಕ್ತಿಯಾ ॥84॥

ಹರಶರವಾದಡೇನನ್ಯರಾ । ಸತಿ ।
ಯರ ತಂದವ ರೊಳಿರಲಾ ಶರಾ ॥
ಬರಿ ಹುಲುಕಡ್ಡಿಸಮಾನವಾ । ಗಿಹು ।
ದರಿತು ಕೊಳ್ಳೆನುತೆಚ್ಚ ಬಾಣವಾ ॥85॥

**ಭಾಮಿನಿ**

ಮಾಯವಾದುದು ನೋಡೆಲಾ ನಾ ।
ರಾಯಣಾಸ್ತ್ರದೊಳೊಕ್ಕುವರ ದೈ ।
ತ್ಯೇಯನೆಚ್ಚ ಭವಾಸ್ತ್ರವದರುಗ್ಗಡ ಪ್ರತಾಪದೊಳು ॥
ಭೀಯ ಪೌರುಷನಾಗಿ ಖಳ ಮೂ ।
ರ್ಛಾಯಗತನಾಗುತ್ತ ಶುಕ್ರನ ।
ಪ್ರೀಯ ಮಂತ್ರದೊಳೆದ್ದು ಪುನರಪಿ ಸಮರಕನುವಾದಾ ॥86॥

**ರಾಗ ಶಂಕರಾಭರಣ ಮಟ್ಟೆತಾಳ**

ಮಲ್ಲ ದೈತ್ಯರೆಮ್ಮ ರಣದಿ । ಗೆಲ್ವುಪಾಯವೂ ।
ಹುಲ್ಲು ಮನುಜರರಿತ ರೆಂಬು । ದೊಳ್ಳೆ ಚೋದ್ಯವೂ ।
ಮೆಲ್ಲನೆಮ್ಮ ಕಿರಿಯ ತಾತ । ನೆಲ್ಲ ಕಲಿಸಿದಾ ।
ಅಲ್ಲದಿರೆ ಮನುಷ್ಯನೀತ । ನೆಲ್ಲಿ ಪಠಿಸಿದಾ ॥87॥

ಇನ್ನಿದಕ್ಕೆ ತಕ್ಕುಪಾಯ । ವನ್ನು ನೋಡದೇ ।
ಖಿನ್ನನಾದಡುಳಿವ ಕಾಣೆ । ಭಿನ್ನ ಮಾಡದೇ ।
ಸಣ್ಣ ಪಿತನ ಕ್ಷೇಮ ವದಗ । ದೆನ್ನುತಾ ಕ್ಷಣಾ ।
ಮುನ್ನ ಬೊಮ್ಮನಿತ್ತ ಶಕ್ತಿ । ಯನ್ನುಗಿದ ಘನಾ ॥88॥

ಕುಲಕುಠಾರ ಕರೆಸಿಕೊಳ್ಳು । ತಲೆಯ ಕಾವನಾ ।
ನೆಲನ ಋಣವು ತೀರಿತಿದಕ್ಕೋ । ಜಲಜಕುವರನಾ ।
ಜ್ವಲಿತ ಶಕ್ತಿಯನ್ನು ಬಿಟ್ಟು । ಕೊಲುವೆ ನಿನ್ನನೂ ।
ಉಳಿಯಗೊಡೆನು ಬೊಪ್ಪನೆಂಬ । ತಿಳಿವ ಮರೆತೆನೂ ॥89॥

**ವಾರ್ಧಕ**

ಎಂದು ದಿವ್ಯಾಸ್ತ್ರದಿಂದಿಡಲಾ ವಿಭಿಷಣಂ ।
ಸಿಂಧೂರವರದನಂ ಧ್ಯಾನಿಸುತ್ತಿರಲು ಕಪಿ ।
ಸಂದೋಹ ಕಳವಳಿಸಲಾ ಶಕ್ತಿ ಶರಣನ ಸಮೀಪಕಾರ್ಭಟಿಸಿ ಬರಲು ।
ಅಂದಾಂಜನೇಯ ನಡೆಹಾಯ್ದು ಮಹಾಸ್ತ್ರಮಂ ।

ಸಂದಾಗೆ ಮುರಿದು ಸಾಗರಕೆ ಬಿಸುಡಲ್ ಕಂಡು |
ನೊಂದಾ ಖಳಂ ಬಳಿಕ ಭೂದೇವಿ ದತ್ತಶಕ್ತಿಯ ತೆಗೆವುತಿಂತೆಂದನು ||90||

**ರಾಗ ಕೇದಾರಗೌಳ ಅಷ್ಟತಾಳ**

ನಳಿನಾಕ್ಷ ಕರುಣದಿ | ಸಲಹಿದಡವಗಾರು |
ಮುಳಿದೇನ ಮಾಡುವರೂ ||
ಉಳಿದನಿಂದಿಗೆ ನಮ್ಮ | ಕುಲಗೇಡಿಯನು ಹಿಂದೆ |
ತೊಲಗಿಸಿ ದೂಡಿದರೂ ||91||

ಆದಿನಾರಾಯಣ | ನಾದಕಾರಣ ರಾಮ |
ನೀ ದುಷ್ಟ ವಾನರರೂ ||
ಕಾದಿ ಗೆಲ್ಲುವರಲ್ಲ | ದಾದರೆ ಬಲುಹೇನು |
ಚೋದಿಗ ಕಪಿವರರೂ ||92||

ಸುಡಲೆಂದು ಕೋಪದೊ | ಳಡಿಗಡಿಗುರಿದೇಳು |
ತೊಡನೆ ಸೌಮಿತ್ರಿಯೊಳೂ ||
ಎಡಗಯ್ಯ ಶಕ್ತಿಯ | ಮಿಡುಕಿಸುತೆಂದನು |
ಗ್ಗಡದ ಗಾಂಭೀರ್ಯದೊಳು ||93||

**ರಾಗ ಭೈರವಿ ಅಷ್ಟತಾಳ**

ತರಳ ಕೇಳಾಹಾರವೂ | ನಿದ್ರೆಯು ಸತಿ |
ಯರೊಳು ಸಂಭೋಗವಿವೂ ||
ಸರಿಯಾಗಿ ಬಿಡದೆ ಹನ್ನೆರಡಬ್ದ ತ್ಯಜಿಸಿದ |
ನಿರುಗೆಯಿದ್ದರೆ ನಿಲ್ಲೆಲಾ ||94||

ಮಾತಿನೊಳೇನಹುದೂ | ನಿನ್ನಯ ಬಾಣ |
ಜಾತವ ಕಳುಹುವುದೂ ||
ಧಾತುಗೆಟ್ಟರೆ ನಿನ್ನ | ತಾತನ ಕರೆಸಿಕೊ |
ಳ್ಳೇತಕಿದೆನುತೆಚ್ಚನೂ ||95||

ಚಿಕ್ಕವಗಾವುತವೂ | ಸಾಧಿಸುವರೆ |
ತಕ್ಕುದಲ್ಲವು ಮಾರ್ಗವೂ ||
ಮಿಕ್ಕುಳಿದರಿಗದು | ದಕ್ಕದೆನುತ ನಿನ್ನೊ |
ಳಕ್ಕರ ತಾಳಿದೆನೂ ||96||

ಎಲವೊ ಶಕ್ರಾರಿ ಕೇಳೂ । ದಿವ್ಯಾಸ್ತ್ರವ ।
ಕಳುಹಿಸು ಬೇಗದೊಳೂ ॥
ಬಲು ವ್ರತವಿರಲಿಲ್ಲ । ದುಳಿಯಲಿ ಮಮತೆಯ ।
ಛಲಬೇಡ ನಿನಗೆಂದನೂ ॥97॥

ಆದರೆ ಕೊಳ್ಳೆನುತಾ । ತೊಟ್ಟನು ಮಹಾ ।
ಭೂದೇವಿಶರವನಾತಾ ॥
ಹಾದು ಬರಲುಕಂಡು । ಭೇದಿಸಿ ಕೆಡಹಿದ ।
ಮೇದಿನಿಯೊಳಗದನೂ ॥98॥

ಬಳಿಕ ರಾಘವನಂಘ್ರಿಯಾ । ಧ್ಯಾನಿಸುತೆಚ್ಚ ।
ಘಳಿಲನೆ ರಾವಣಿಯ ॥
ನಳಿನಭವಾಸ್ತ್ರದಿ । ತಲೆಯನು ಕಡಿದು ಬಾಂ ।
ದಳದೊಳು ಕಾಣಿಸಿತೂ ॥99॥

**ಕಂದ**

ಅಮರರು ಮಂದಾರದ ಬಿರಿ ।
ಸುಮವರ್ಷವನತಿ ಹರುಷಧಿ ಸೂಸಲ್ ಬೇಗಂ ॥
ಗಮಸಿದು ರಾಘವನಂಘ್ರಿಗೆ ।
ನಮಿಸುತ ರಣವತ್ತಾಂತವನರುಹಿದರಾಗಂ ॥100॥

**ಭಾಮಿನಿ**

ಮೂರಲೋಕದ ಮತ್ಯುಯಮನಲಿ ।
ಸೇರಿದನು ಖಳನೆಂದು ರಘುಪತಿ ।
ಭೂರಿ ಹರುಷದಿ ಲಕ್ಷ್ಮಣನ ತೆಕ್ಕೈಸಿ ಮುದ್ದಾಡೀ ॥
ಚಾರುತರ ವಿನಯೋಕ್ತಿಯಿಂದುಪ ।
ಚಾರ ಮನ್ನಣೆಗಳಲಿ ನಿಜಪರಿ ।
ವಾರವನು ಸಂತಯಿಸಿ ಬಳಲಿದ ಸಹಜನನು ಕರೆದೂ ॥101॥

**ರಾಗ ಭೈರವಿ ಝಂಪೆತಾಳ**

ಕಿತ್ತು ಘಾಯದಕಣೆಯ ಮೈಯರಕ್ತವ ತೊಳೆದು ।
ಯಿತ್ತಕವಳೌಷಧಿಯ । ಮಂತ್ರಿಸುತ ರಾಮಾ ॥102॥

ನಿತ್ತುಕೊಂಡಿರಬೇಡಿ । ಹನುಮ ನೀಲಾಂಗದರೆ ।
ನುತ್ತಲುಪಚರಿಸಿದನು । ಮರ್ಕಟಾಧಿಪರಾ ॥103॥

ಸಾಧ್ಯವಾಯಿತು ನಮಗೆ | ಸೇರಿದಳು ಜಯಲಕ್ಷ್ಮಿ |
ಗೆದ್ದ ಭರತನ ತಮ್ಮ | ನಿದ್ದ ಕಡೆಯಿಂದಾ ||104||

ಬದ್ಧವಾಯಿತು ಲಂಕೆ | ಬಳಲಿರುವ ಶರಣಂಗೆ |
ಬಿದ್ದ ರಾವಣ ರಣದೊ | ಳೆಂದು ನಿಶ್ಚಯಿಸೀ ||105||

ಕಂದಕೇಳೀ ಶರಣ | ನೆಂದ ಸಾಧನವು ಮೂ |
ರೆಂದು ದೊರಕಿತು ನಿನಗೆ | ಹನ್ನೆರಡು ವರುಷಾ ||106||

ಇಂದು ಪರಿಯಂತ ಫಲ | ತಂದೀವೆ ದೇವರಿಗೆ |
ತಿಂದವನು ನಾನಲ್ಲ | ಜಠರಾಗ್ನಿಗಾಗೀ ||107||

ದೇಶಾಂತರವ ತಿರುಗಿ | ಕಾನನಾಂತರದೊಳಗೆ |
ಘಾಸಿ ಯಾದುದು ನಿದ್ರೆ | ಯೆಂತು ನಿನಗೆಂದಾ ||108||

ಹಾಸಿ ಮಲಗುವುದುಂಟೆ | ಶಸ್ತ್ರಾಸ್ತ್ರವನು ಪಿಡಿದು |
ದಾಸತ್ವ ಸಲಹಿದೆನು | ದೂಷಕರ ಭಯದೀ ||109||

ತರುಣಿಯರ ಭೋಗವನು | ತೊರೆದು ನೀನೀತನಕ |
ಯಿರುತಿದ್ದ ಕಾರಣವ | ನರುಹೆನಗೆ ತಮ್ಮಾ ||110||

ಊರ್ಮಿಳಾಂಗನೆ ಮದುವೆ | ಮಾದಾರಭ್ಯದಿ ತಾಯ |
ಮರ್ಮದಲಿ ಚರಿಸಿದೆನು | ವನವಾಸದೆಡೆಯಾ ||111||

ಅರಿಯದಾದೆನು ಹಸಿವೆ | ಗಾಹಾರವನುಗೊಳದೆ |
ತರುವೆ ಹಂಪಲವನೆ | ನ್ನಾಜ್ಞೆ ಹೊರತೆಂದೂ ||112||

ಕರುಣಹೀನನ ಸೇರಿ | ಕಷ್ಟವೊದಗಿತು ನಿನಗೆ |
ತರಳ ನಿನ್ನುಪಕಾರ | ಮರೆಯಲಿನ್ನುಂಟೇ ||113||

ಕರ್ಮವಶದಿಂದಲೀ | ವ್ರತ ಸಾಧ್ಯವಲ್ಲದಿರೆ |
ವ್ಯೋಮಕೇಶನ ಭಕ್ತ | ಸೋಲುವನೆ ರಣದೀ ||114||

ಅನುಜನಾಡಿದ ನುಡಿಗೆ | ಮೆಚ್ಚಿ ರಾಘವ ತಾನು |
ಅನಿಮಿಷರು ಪೊಗಳಲ್ಕೆ ಪೊಕ್ಕ ಬೀಡಿಗೆಯಾ ||115||

**ಭಾಮಿನಿ**

ಇಳುಹಿದನು ದಶಕಂಠನೋಲಗ |
ದೊಳಗೆ ಸಾರಥಿ ಶಕ್ರಜಿತುವಿನ |

ತಲೆಯ ಮೊಸಗೆಯ ಹರೆಯ ಹೊಯ್ ಸೀಳಿಂದಿನಾಹವವಾ ||
ಗೆಲುವಿದೆಂಬೀ ಕೂರಿತಹ ನುಡಿ |
ಯಲಗು ನಾಂಟಿತು ಬೆನ್ನಿನಲಿ ಕಳ |
ವಳಿಸಿ ಹಾ ಯುವರಾಜ ಹಾಯೆನುತೊರಗಿದನು ನೆಲಕೇ ||116||

**ರಾಗ ನೀಲಾಂಬರಿ ಆದಿತಾಳ**

ಕಂದಾ ನೀ ನಮ್ಮಾನ್ವಯಾಬ್ಧಿ | ಚಂದ್ರನೆತ್ತ ಪೋದೆ |
ಇಂದ್ರಾರಿಯೆಂದೆಂಬ ಪೆಸರ | ನಿಂದಿನೊಳಡಗಿಸಿತೇ ||117||

ಮಗನೆ ನಿನ್ನ ಗೆಲುವ ವೀರ | ಜಗದೊಳಿಲ್ಲವೈಸೆ |
ಮಗಧರನಿತ್ತಾಯುಷ್ಯವು | ನಗೆಗೀಡಾದುದಯ್ಯ ||118||

ಈರೇಳು ಲೋಕವೆನ್ನ ಕೈ | ಸೇರಿತು ನಿನ್ನಿಂದಾ |
ಯಾರುಂಟು ನಿನ್ನಂತಾ ಸುಕು | ಮಾರರು ಧಾತ್ರಿಯಲೀ ||119||

**ದ್ವಿಪದಿ**

ಕಾಂತೆ ಬಂದಳು ಕೇಳಿ ದಶಶಿರನ ಪೊರೆಗೇ |
ಸಾಂತ್ವದಲಿ ಕಡುನೊಂದು ಸೊಸೆಯರತಿ ಮರುಗೇ ||120||

ಮಗನ ಶಿರ ಮಂಡೋದರಿಯ ತೊಡೆಯೊಳಿಟ್ಟೂ |
ಮೊಗವ ನೋಡುತ್ತ ಮೋಹದಿ ಮುತ್ತಕೊಟ್ಟೂ ||121||

ಮತ್ತ್ಯುವಾದಳು ಮಗನೆ ಕುಲಕೆ ನಿನ್ನತ್ತೇ |
ಕರ್ತವಿಲ್ಲದೆ ರಾಜ್ಯ ಪರರಾಳುವಂತೇ ||122||

ಬಗೆಬಗೆಯ ಶೋಕದಲಿ ಮುಳುಗಿ ಬಸವಳಿದು |
ಮಗುಳೆ ಕಾಂತನ ಪಚಾರಿಸುತ ಕಡು ಮುಳಿದು ||123||

ಹೆತ್ತೊಡಲು ಹಾಳಾದುದರಸ ನಿನ್ನಿಂದೆ |
ಪುತ್ರಶೋಕಾಗ್ನಿಗೆ ವಿವೇಕ ಪೇಳ್ಕುಂದೇ ||124||

ಎಂದು ನಾನಾ ತೆರದೊಳಳುವದನು ಕಂಡೂ |
ನಂದಿವಾಹನನಂತೆ ದನುಜ ಖತಿಗೊಂಡೂ ||125||

**ಭಾಮಿನಿ**

ಸುರಪಜಿತುವಿನ ಮರಣ ಮಂಡೋ |
ದರಿಯ ದೈನ್ಯುಪಚರಣೆಗಾ ಖಳ |

ಧರಣಿಜೆಯ ಕೊಲಲೆಂದು ಖಡ್ಗವಗೊಂಡು ಹೊರವಂಟಾ ||
ಸುರರು ಬಾಬಿಡಲಾ ಪ್ರಧಾನರು |
ಕರದ ಕತ್ತಿಯನಿಳುಹಿ ನಾನಾ |
ಪರಿವಿವೇಕದೊಳೊಡಬಡಿಸಿ ಮರಳಿಚಿದರರಮನೆಗೇ ||126||

**ವಾರ್ಧಕ**

ತರಳರಿರ ಕೇಳಿರಳಿದುಳಿದ  ಬಲಸಹಿತ ದಶ |
ಶಿರ ಬಂದು ಶ್ರೀರಾಮಗಿದಿರಾಗಲವನ ಸಂ |
ಹರಿಸಿ ಲಂಕಾಧಿಪತ್ಯವ ವಿಭೀಷಣಗಿತ್ತು ಜಾನಕಿಯನಗ್ನಿಮುಖದೀ ||127||

ಪರಿಶೋಧಿಸುತ ವರಿಸಿ ಪುಷ್ಪಕ ವಿಮಾನದೊಳ್ |
ತೆರಳಿ ನಂದಿಗ್ರಾಮದೊಳು ಭರತನಂ ಕಂಡು |
ಧರೆಯಾಧಿಕಾರಮಂ ಕೈಗೊಂಡು ಪ್ರಜೆಗಳಂ ಪರಿಪಾಲಿಸುತ್ತಿರ್ದನು ||128||

**ಮಂಗಲಪದ**

ಮಂಗಳಂ | ಜಯ | ಮಂಗಳಂ || ಪಲ್ಲ ||

ಅಖಿಳ ಬ್ರಹ್ಮಾಂಡ ನಾಥನಿಗೇ |
ಸಕಲ ಚರಾಚರ ಭರಿತನಿಗೇ |
ಸುಖಮಯಮೂರುತಿ ಚಿನ್ಮಯಗೆ |
ಮುಕುತಿದಾಯಕನಿಗೆ ಶಾಶ್ವತಗೇ || ಮಂಗಳಂ ||129||

ಪರತರ ಪಾವನ ರೂಪನಿಗೇ |
ಕರುಣಾಂಬುಧಿ ವರಚಿದ್ಘನಗೇ |
ಸುರನರ ಮನುಮುನಿ ಪೂಜಿತಗೆ ||
ಪರಿಪೂರ್ಣ ಸದಾನಂದನಿಗೇ || ಮಂಗಳಂ ||130||

ಕಡಲೊಳು ಶಯನವಗೈದವಗೇ |
ಮಡದಿಯ ವಕ್ಷದೊಳಿರಿಸಿದಗೇ |
ದಢ ಭಕ್ತರ ಹದ್ವಾಸನಿಗೇ |
ಒಡೆಯ ಕಾಂತೇಶನ ಮಿತ್ರನಿಗೇ ||
ಮಂಗಳಂ | ಜಯ | ಮಂಗಳಂ | ಶುಭ | ಮಂಗಳಂ | ನಿತ್ಯಮಂಗಳಂ ||131||

**ಶ್ರೀಮದ್ರಾಮಾಯಣದೊಳಗಣ ಯಕ್ಷಗಾನ**
**ಇಂದ್ರಜಿತುಕಾಳಗವು ಸಂಪೂರ್ಣವು**

# ಯಕ್ಷಗಾನ ಮಾರಿಮುಖನ ಕಾಳಗ

## ಪಾತ್ರಗಳು

ಶ್ರೀರಾಮ
ರಾವಣ
ಲಕ್ಷ್ಮಣ
ಮಂಡೋದರಿ
ಸೀತೆ
ಶಚಿವಜ್ರ (ಚರ)
ಸರಮೆ
ಮಾರೀಮುಖ
ವಿಭೀಷಣ
ವಜ್ರಮುಖಿ
ಸುಗ್ರೀವ
ಚಿತ್ರಮಾಲಿನಿ
ಹನುಮಂತ
ಪ್ರಲಂಭಮುಖ
ಅಂಗದ
ಉಗ್ರಕೇತು
ರೇಣಾರ್ಚಿತ
ಘಟೋದರಿ

**ವೃತ್ತ**

ಶ್ರೀಲಕ್ಷ್ಮೀವಿಲಾಸಂ । ಸುಲಲಿತಭೂಷಂ । ಸುರೇಂದ್ರವಂದಿತ ಘೋಷಂ ॥
ಬಾಲಾರ್ಕಮಿತಭಾಸಂ । ಗಜಪುರಾಧೀಶಂ । ಶ್ರೀಹರಿರಕ್ಷಿಸು ಎಮ್ಮಂ ॥1॥

**ರಾಗ ನಾಟಿ, ಝಂಪೆತಾಳ**

ಶ್ರೀಗೌರಿವರಪುತ್ರ । ಸುಜನಜನನುತಿಪಾತ್ರ ।
ನಾಗಶಯನನ ಮಿತ್ರ । ನಮರೇಂದ್ರಸ್ತೋತ್ರಾ ॥
ಜಯತು ಜಯ ಜಯತೂ । ॥ ಪಲ್ಲವಿ ॥

ಅಮರವಾಹನವಕ್ತ್ರ । ಆದಿಪೂಜಾಪಾತ್ರ ।
ದ್ಯುಮಣಿಕೋಟಿಪ್ರಕಾಶದುರಿತಯುಗನಾಶಾ ॥
ಜಯತು ಜಯ ಜಯತೂ । ॥ಅ.ಪ.॥

ಗಜಮುಖನೆ ನಿನ್ನ ಚರ । ಣಾಬ್ಜಗಳಿಗೊಂದಿಸುವೆ ।
ಸುಜನರಕ್ಷಕ ದೇವ । ಭಜಕಸಂಜೀವಾ ॥
ಅಜಸುರಾದಿಗಳು ಪೂ । ಜಿಪ ಪಾದವ್ರಜಗನಳನು ।
ಪೂಜಿಸುವೆ ಮನವೊಲಿದು । ದ್ವಿಭುಜ ಗಣನಾಥಾ ।
ಜಯತು ಜಯ ಜಯತೂ । ॥2॥

ಬೇಡಿದಿಷ್ಟಾರ್ಥಗಳ । ನೀವಶ್ರೀಗಣನಾಥ ।
ರೂಢಿಯಲಿ ನಿನ್ನ ಕೊಂ । ಡಾಡುವೆನು ನಲಿದೂ ॥
ಕೂಡೆ ಮಂಗಲಮಪ್ಪ । ತೆರದೊಳೀ ಕೃತಿಗೆ ದಯ ।
ಮಾಡಿ ರಕ್ಷಿಸೊ ಯೆನ್ನ । ಗಣಪ ಮೋಹನ್ನಾ ॥
ಜಯತು ಜಯ ಜಯತೂ ॥3॥

ದುಷ್ಟರಾವಣನು ತಾ । ಕೊಟ್ಟ ಲಿಂಗವ ಧರೆಯೊ ।
ಳಿಟ್ಟು ಸುರರಿಗೆ ಅಭಯ । ಕೊಟ್ಟೆ ವಿಘ್ನೇಶಾ ॥
ಸೃಷ್ಟಿಯಲಿ ಬಾರ್ಕೂರ । ಪಟ್ಟಣದಿ ನೆಲಸಿರ್ದ ।
ಅಷ್ಟಭೈರವರೊಳತಿ । ಶ್ರೇಷ್ಠ ವಿಘ್ನೇಶಾ ॥
ಜಯತು ಜಯ ಜಯತೂ ॥4॥

**ಭಾಮಿನಿ**

ಗಿರಿಜೆ ಶಾರದೆ ಲಕ್ಷ್ಮಿಯರ ಸಿರಿ ।
ಚರಣವ ಧ್ಯಾನಿಸುತ ಸುರರಿಗೆ ।
ಪರಮ ಭಕ್ತಿಯೊಳೆರಗೆ ದಿಕ್ಪಾಲಕರಿಗುರೆ ಮಣಿದೂ ।
ಧರೆಯ ಕವಿಗಳಿಗೆರಗಿ ಸಂತತ ।
ವರಮಹಾ ಮುನಿಗಳಿಗೆ ನಮಿಸುತ ।
ಪರಮಹರುಷದಿ ಗುರುವ ವಂದಿಸಿ ವ್ಯಾಸಮುನಿಗೆರಗೀ ॥5॥

**ವಾರ್ಧಕ**

ಹರನಜನ ಚರಣಕಾನತನಾಗಿ ಹರುಷದಿಂ ।
ಸಿರಿಯರಸನಂ ಸ್ತುತಿಸಿ ಶೌನಕರ ನಾರದಾ ।
ದ್ಯರಿಗಭಿನಮಿಸುತೊರೆವೆವಾಲ್ಮೀಕಿಮುನಿಯರಾಮಾಯಣ ಮಹಾಕಥೆಯೊಳು
ದುರಳ ಮಾರೀಮುಖನ ಸಂಹರಿಸಿ ರಾಘವಂ ।
ಪರಮ ಹರುಷದೊಳಿರ್ದ ಕಥೆಯನುಂ ಸಾಂಗದಿಂ
ಒರೆಯುವೆನು ಸತತಮಾಗಿರ್ದ ಗಜಪುರದ ನರಸಿಂಹನ ಕಟಾಕ್ಷದಿಂದಾ ॥6॥

**ರಾಗ ಶಂಕರಾಭರಣ, ತ್ರಿವುಡೆತಾಳ**

ಧರೆಯೊಳಗೆ ಸತ್ಯಾತ್ಮರಾಗಿಹ | ಪರಮ ಕವಿಗಳ ಚರಣ ಯುಗ್ಮ |
ಕ್ಕೆರಗಿ ಪೇಳುವೆ ಹರಿಯ ಲೀಲಾ | ಚರಿತೆಗಳನೂ | ||7||

ತರಳತನದಿಂದೊರೆದೆನಲ್ಲದೆ | ಅರಿಯೆ ನಾ ಪೌರಾಣಶಾಸ್ತ್ರದೊ |
ಳಿರುವ ಲಕ್ಷಣವೆಂತು ತಾಳ ಸುರಾಗಗಳನೂ | ||8||

ಒಂದನಿದ ನಾನರಿಯೆ ಹರಿಕಪೆ | ಯಿಂದಲಾದುದು ಕೃತಿಯನದರಿಂ |
ಕುಂದನರುಹಿಪ ಜನರ ಮನದೊಳ | ಗೊಂದಿಸುವೆನೂ | ||9||

ಅಮರರೆಲ್ಲರ ಪೊರೆಯಲೋಸುಗ | ರಮೆಯ ವಲ್ಲಭ ಜನಿಸಿ ಧರೆಯೊಳು |
ದಮನಿಸುತ ದುರುಳರನು ಮೆರೆದಿಹ | ವಿಮಲ ಕಥೆಯಾ | ||10||

ಲಾಲಿಪುದುಸತ್ಪುರುಷರೆಲ್ಲರು | ಬಾಲನಿವನೆಂದೆನ್ನ ಜರೆಯದೆ |
ಲೀಲೆಯಲಿ ತಪ್ಪಿರಲುತಿದ್ದಿವಿ | ಶಾಲತನದೀ | ||11||

**ವಚನ**

ಈ ಪ್ರಕಾರದಿಂದ ದೇವ ಗುರುಕವಿ ಪ್ರಾರ್ಥನೆಯಂ ಮಾಡಿ
ತತ್ಕಥಾ ಪ್ರಸಂಗಮಂ ಪೇಳ್ವೆನದೆಂತನೆ ||12||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ವಿತಳದಧಿಪತಿ ಮಾರಿಮುಖ ತಾ | ನಧಿಕ ಲಂಕಾಧಿಪತಿ ದಶಶಿರ |
ನತುಳ ವಿಕ್ರಮನಿಂಗೆ ಬೆಂಬಲ | ವಾದನ್ಯಾಕೈ ||13||

ಸತಿಶಿರೋಮಣಿಸೀತೆಯರಸನು | ಹತವ ಮಾಡಿದನೆಂತು ಅಸುರರ |
ಕಥೆಯನಿದ ಸಾಂಗ ದಲಿ ನೀ ವಿ | ಸ್ತರಿಸಬೇಕೈ ||14||

ಸಾಂಗದಿಂ ಪೇಳೆನಲು ಮುನಿಕಲ | ಪುಂಗವನು ತೊಡಗಿದ ಮಹಾಕಥೆ |
ಯಂಗವನು ಕುಶಲವರಿಗರುಹಲಾ | ರಂಭಿಸಿದನೂ ||15||

**ದ್ವಿಪದಿ**

ವಾಲ್ಮೀಕಿಮುನಿಪದಕೆ ನಮಿಸಿ ಕುಶಲವರೂ ||
ಕೇಳಿದರು ರಾಮಾಯಣಾಮತವನವರೂ | ||16||

ದಶರಥನ ಸುತನೆನಿಸಿ ಧರಣಿಜೆಯ ನೊಲಿಸೀ |
ಕುಶಲದಿಂದಾಯೋಧ್ಯೆ ಪುರಕರಸನೆನಿಸೀ | ||17||

ತಂದೆ ಯಾಡಿದ ನುಡಿಗೆ ಬೇಗ ಶ್ರೀರಾಮಾ ॥
ಚಂದ್ರ ಲಕ್ಷ್ಮಣ ಸೀತೆ ಸಹಿತ ನಿಸ್ಸೀಮಾ । ॥18॥

ಪಂಚವಟಿಯಲಿ ಶೂರ್ಪನಖಿಯ ನಾಸಿಕವಾ ॥
ಚಂಚಲದಿ ತ್ರಿಶಿರ ಖರ ದೂಷಣರ ಶಿರವಾ । ॥19॥

ದನುಜ ಸೀತೆಯನೊಯ್ಯಲಾಗ ರಾಘವನೂ ॥
ಹನುಮನಿಂದಾಗ ಸುಗ್ರೀವಸಖ್ಯವನೂ । ॥20॥

ವಾಲಿಯನು ಮುರಿದು ಕಪಿವಾಹಿನಿಯ ನೆರೆದೂ ॥
ಶೈಲ ತರು ಗಿರಿಯಿಂದ ಸೇತುವಂ ಬಲಿದೂ ॥21॥

ಶರದಿಯನು ದಾಟಿದಶಶಿರನ ಕೋಟೆಯನೂ ॥
ಮುರಿದು ರಾಕ್ಷಸರುಗಳ ಬಿಡದೆ ಸವರಿದನೂ ॥22॥

ಧೂಮ್ರಾಕ್ಷ ಕುಂಭಾ ನಿಕುಂಭ ಮೊದಲಾದ ॥
ಸಂಭ್ರಮದೊಳಮಿತ ಮಿತ್ರಘ್ನನಿದಿರಾದಾ ॥23॥

ಕುಂಭಕರ್ಣಾಸುರನ ಕೆಡಹಿರಣದೊಳಗೇ ॥
ಜಂಭಾರಿಜಿತು ಮುಖ್ಯರೆಲ್ಲರನು ಮೇಗೇ ॥24॥

ಮುಂದಾದ ಕಾರಣವ ಪೇಳಬೇಕೇನುತಾ ॥
ಚಂದದಿಂ ಬಾಲರ್ಗೆ ಪೇಳ್ದೆಮುನಿ ನಗುತಾ । ॥25॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಇತ್ತ ರಾಘವ ದನುಜರೆಲ್ಲರ ।
ಮೊತ್ತವನು ಸಂಹರಿಸಿ ಕಪಿಗಳ ।
ಚಿತ್ತದಲಿ ಪರಿತೋಷದಿಂದಾ । ಋುತ್ತಲಿರಲೂ ॥26॥

ದಶಶಿರನ ಸುತನಿಂದ್ರಜಿತುವನು ।
ಅಸುವೆರದು ಜವಗೆಡಿಸಿ ರಾಘವ ।
ರಸೆಯೊಳಿರುತಿರುತಿರ್ದ ವಾನರ । ವಿಸರ ಸಹಿತಾ । ॥27॥

ಆ ಸಮಯದೊಳಗಿತ್ತದನುಜನು ।
ಮೋಸವಾದುದೆ ಯೆಂದು ಮನದಲಿ ।
ಬೇಸರದಿ ರಾತ್ರಿಯನು ಕಳೆದನು । ಆಸುರೇಂದ್ರಾ । ॥28॥

ಮಿತ್ರಮೈರಾವಣನ ಕಳುಹಿನಿ ।
ರರ್ಥವಾಯಿತು ಅಕಟ ತಾನೀ ।
ಶತ್ರುವನು ಜಯಿಸುವರೆ ಕಾಣೆನು । ಯತ್ನವನ್ನೂ । ॥29॥

**ರಾಗ ಕಾಂಭೋಜಿ ಝಂಪೆತಾಳ**

ಇಂತೆಂದು ದಶಶಿರನು । ಚಿಂತಿಸುತ ಮರುಗಿದನು ।
ಅಂತರಂಗದಿ ನೆನೆದು । ಪಂಥಗಳ ಬಳಲೀ ॥
ಪಿಂತೆ ರಾಘವ ಧುರದಿ । ಗೆಲಿದನ್ನೈ ದನುಜರನು ।
ಯೆಂತು ನಾ ಮರೆವವನ । ನೊರೆಯಲಿನ್ನೇನೂ ॥30॥

ತಂಗಿಶೂರ್ಪನಖಿಯ । ನುಡಿಯೆಮಗೆ ಕಡೆಗಾಲ ।
ಭಂಗವಾದುದೆ ಸೇನೆ । ಮಂಗಗಳಿಂದಾಗಿ ॥
ಹಿಂಗಿದುದೆ ಭುಜ ಶೌರ್ಯ । ಸಂಘಟಿಸಿತಪ ಜಯವು ।
ಭಂಗಿತನು ನಾನಾದೆ ಪೋಪೆ ರಣಕೀಗಾ ॥31॥

**ವಾರ್ಧಕ**

ಸಾಲ್ದಲೆಯ ದನುಜನೀ ಪರಿಯಿಂದ ಶೋಕಮಂ ।
ತಾಳ್ದಿರುವ ವೇಳೆಯೊಳ್ ಶಚಿವಜ್ರನೆಂಬ ಚರ ।
ಪೇಳ್ದನಾಗೈತಂದು ರಾಘವನ ನಿಖಿಲ ವತ್ತಾಂತಮಂ ದನುಜೇಶಗೇ ।
ಕೇಳ್ದಲೈ ದನುಜೇಂದ್ರ ಅಸುರ ಕುಲತಿಲಕ ಶ್ರೀ ॥
ಯಾಳ್ದಪಂ ಜನಿಸಿದಂ ಧರೆಯೊಳಗೆ ನರರೂಪಿ ।
ನೋಳ್ದುರವು ಸಲ್ಲದೆಲೆ ದನುಜೇಶ ಕೇಳೆಂದನಾಕ್ಷಣದಿ ಶಚಿವಜ್ರನೂ । ॥32॥

**ರಾಗ ಭೈರವಿ ಝಂಪೆತಾಳ**

ಖಳರಾಯ ಮನದೊಳಗೆ । ಬಳಲ್ವೆಯಾಕೈ ನೆಲೆಯ ।
ಗಳಿಲದಿಂಪೇಳುವೆನು । ರಾಘವನ ಪರಿಯಾ । ॥33॥

ಸಾಕ್ಷಾತು ವಿಷ್ಣುವವ । ತಾರನಾಗಿಹ ರಾಮ ।
ನಿಶ್ಚಯವು ಸೌಮಿತ್ರ । ಉರಗಪತಿ ತಾನೂ । ॥34॥

ಲಕ್ಷ್ಮೀದೇವಿಯು ಜನಕ । ಕುಕ್ಷಿಯಲಿ ಜನಿಸಿಹಳು ।
ಸಾಕ್ಷಾತು ಸುರರುಕಪಿ । ಕುಲದೊಳುದಿಸಿದರೂ । ॥35॥

ಸೃಷ್ಟಿಯೊಳಗವತರಿಸಿ । ದುಷ್ಟರನು ನಿಗ್ರಹಿಸಿ ।
ಅಷ್ಟದಿಕ್ಪಾಲಕರ । ಸುರವರರ ಪೋರೆಯೇ । ॥36॥

ಶ್ರೇಷ್ಠ ನಿನ್ನೊಳು ಪೇಳ । ಲೇನುಂಟು ಬಲ್ಲವಗೆ ।
ಕಷ್ಟವಾಗುವುದಯ್ಯ । ದಿಟ್ಟ ಅಸುರೇಂದ್ರ । ॥37॥

ವಾರಿರುಹನೇತ್ರೆಯನು । ವಾರಿಜಕ್ಷನಿಗಿತ್ತು ।
ವೀರಾ ವಿಭೀಷಣನ । ಕರೆಸಿದರೆ ಲೇಸೂ ॥38॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸಾಕು ಸಾಕೆಲೆ ಚರನೆ ನಿನ್ನಯ ।
ಕಾಕುತನಗಳ ನುಡಿಯನೆಮ್ಮೊಳು ।
ಸೋಕದಿರು ಸಲೆ ಜೋಕೆಯಲಿ ಮಾ । ತಾಡು ಮಗುಳೆ ॥39॥

ರಕ್ಕಸರ ಸದೆಬಡಿದ ರಾಮನ ।
ಸೊಕ್ಕ ಮುರಿವೆನು ಲಕ್ಷ್ಮಣನ । ನೆರೆ
ಜೊಕ್ಕಣಿಕೆ ನಿಲಿಸುವೆನು ಕಪಿಗಳ । ಮುಕ್ಕಿ ಭರದೀ ॥40॥

ಪೌರುಷದ ಮಾತುಗಳದ್ಯಾಕೈ ।
ಸೂರ್ಯಕುಲಜರು ಶೌರ್ಯವಂತರು ।
ಪಾರುಗಾಣೆನು ಬೇಡ ರಾಮನ । ಕೂಡೆ ಕಲಹಾ । ॥41॥

ಬಲ್ಲೆ ಬಲ್ಲೆನು ಅವರ ಸಾಹಸ ।
ವಿಲ್ಲಿ ಕೊಂಡಾಡದಿರು ಮೂಢನೆ ।
ಸೊಲ್ಲಿಸಲು ತಾಕೊಲುವೆನೆಂದನು । ಖುಲ್ಲತನದೀ । ॥42॥

**ಕಂದ**

ಚರನೆನೆ ಕೇಳ್ದಾ ರಾವಣ ।
ಮನದೊಳ್ಕಿಡಿಗೆದರುಂತೆ ಖಡ್ಗವ ಝುಳಪಿಸುತಂ ॥
ಶಿರಮಂ ಚಂಡಾಡುವೆನಿವ ।
ನನಂತರದೊಳಾ ಕಪಿಬಲ ಸಹ ರಘುವರನಂ ॥43॥

**ವಾರ್ಧಕ**

ತರಳ ಲವ ಕೇಳೆಲೀಪರಿಯಿಂದ ಶಚಿವಜ್ರ ।
ನೊರೆದ ನುಡಿಯಂ ಕೇಳಿ ಕೆರಳಿದಂ ದಶಶಿರಂ ।
ಜರೆದು ನುಡಿಯಲ್ಕಾಗ ಬೆದರಿ ಮರಳಿದ ನಿತ್ತಲೇನೆಂಬೆ ಮಂದಿರದೊಳೂ ॥
ಭರದೊಳೈ ತಂದು ಮತ್ತನಿತರೊಳು ಪತಿಗೆರಗಿ ॥
ತರುಣಿ ಶಶಿವದನೆ ಮಂಡೋದರಿಯು ತನಗಾದ ।
ಉರುತರ ಸ್ವಪ್ನದುಕ್ತಿಯ ತನ್ನ ಪತಿಯೊಡನುಸುರ್ದಳಾ ಶೋಕದಿಂದಾ । ॥44॥

**ರಾಗ ನೀಲಾಂಬರಿ, ಆದಿತಾಳ**

ಕಾಂತಾ ನೀ ಲಾಲಿಸಯ್ಯ । ನಿನ್ನೊಳು ಪೇಳ್ವೆ ।
ಅಂತರಂಗದ ಕನಸಾ ॥
ಕಂತುಜನಕ ರಾಮನೂ । ನಿಮ್ಮನು ಕೊಂದು ।
ಸಂತೋಷದಿ ಲಂಕೆಯನೂ ॥45॥

ವೀರ ವಿಭೀಷಣಗೇ । ಒಲಿದಿತ್ತು ।
ಪೊರೆವನ್ನೆ ಅನಿಮಿಷರಾ
ವಾರಿಜಾಕ್ಷನ ಕಪೆಯೂ । ಸೇರಿದ ಮೇಲೆ ।
ಬೇರುಂಟೆ ಚ್ಯುತಿಯುವರ್ಗೇ ॥46॥

ನೀ ತಂದ ವನಿತೆಯನೂ । ತಿರುಗಿ ಒಯ್ವ ।
ರೀತಿಯ ಕಂಡೆ ನಾನೂ ॥
ಮಾತಿದು ಪುಸಿಗಳಲ್ಲಾ । ಇನ್ನಾದರು ।
ನೀ ತಿಳಿದು ನೋಡಯ್ಯ ನಲ್ಲಾ ॥47॥

ಮನ್ನಿಸು ಶ್ರೀ ರಾಮನಾ । ಸೀತೆಯನಿತ್ತು ।
ಇನ್ನಾದರವನಿಪನಾ ॥
ಚಂದದಿ ಕಳುಹುವುದು । ನಾವೆಲ್ಲರಾ ।
ನಂದದೊಳಿರಬಹುದೂ ॥48॥

**ರಾಗ ಮಾರವಿ, ಏಕತಾಳ**

ಕಾಮಿನಿರನ್ನೆಳೆ ಸ್ವಪ್ನದ ಸ್ಥಿತಿಯನು ।
ಎನ್ನೊಡನುಸುರದಿರೇ ॥
ಸಾಮರ್ಥ್ಯಗಳಿಂದೆನ್ನನು ಜಯಸುವ ।
ಮಾನವರ್ಯಾರ್ಮರುಳೇ ॥49॥

**ರಾಗ ಕೇತಾರಗೌಳ, ಅಷ್ಟತಾಳ**

ದಶವದನೇಶ ಕೇಳ್ ವಳವ ನಾ ನಿನ್ನೊಳು ।
ಉಸಿರಿದೆ ಪ್ರಥಮದೊಳೂ ॥
ಈ ಸುದತಿಯ ನೆವನದಿ ಕೊಲುವನು ಕೇ ।
ಳಾ ಸುರರ್ಗೊಡೆಯ ಕಾಣೂ ॥50॥

**ರಾಗ ಮಾರವಿ, ಏಕತಾಳ**

ಸುರರಿಗೊಡೆಯ ತಾನಾದರೆರಾಮನು ।
ತರುಣಿಯಳನೆ ತೊರೆದೂ ॥
ಧರಣಿಯೊಳಗೆ ತಾ ತಿರುಗುವುದ್ಯಾತಕೆ ।
ಮರುಳಾದೆ ಯೇನೇ ॥51॥

**ರಾಗ ಕೇತಾರಗೌಳ, ಅಷ್ಟತಾಳ**

ಬಣ್ಣಗೇಡಾದರು ನಮ್ಮವರೆಲ್ಲರ ।
ಹೆಣ್ಣಿನ ನೆವನದಿಂದಾ ॥
ಮಣ್ಣಗೂಡಿಸುವ ನಮ್ಮೆಲ್ಲರ ರಾಮ ಮು ।
ಕ್ಕಣ್ಣನಾಸಖನಾಥನೇ ॥52॥

**ರಾಗ ಮಾರವಿ, ಏಕತಾಳ**

ಕೊಲುವವ ನಮ್ಮ ತಾನಾದರೆ ಕಪಿಗಳ ।
ಬಳಗವಾಶ್ರಯಿಸುವನೇ ।
ಗೆಲುವೆನವನ ನೀನರಿಯೆಯ ಎನ್ನಯ ।
ಛಲ ಬಲ ವಿಕ್ರಮವಾ । ॥53॥

**ರಾಗ ಕೇತಾಳಗೌಳ, ಅಷ್ಟತಾಳ**

ವಿಕ್ರಮವಂತ ನೀನಾದರೆ ಕೇಳುಶ ।
ಕ್ರಾರಿಯ ತೋರೆನಗೇ ॥
ವಿಕ್ರಮವಂತರ ಕುಂಬಶ್ರವಣ ನ ।
ರಾಂತಕರನು ಮೇಗೇ ॥54॥

**ರಾಗ ಮಾರವಿ ಏಕತಾಳ**

ಜನಕನ ತನುಭವೆ ಜಾನಕಿಯನು ತಾ ।
ವಿನಯದೊಳೊಲಿಸೀಗಾ ॥
ಮಾನಿನಿಯನು ತಾನಾಳಲು ಸೆರೆಯಲಿ ।
ನಾನಿರಿಸಿಹೆನೀಗಾ ॥55॥

**ರಾಗ ಕೇದಾರಗೌಳ ಅಷ್ಟತಾಳ**

ನಲ್ಲ ನೀನಾಲಿಸು ನಲ್ಲೆಯ ನೆವದಿ ನ ।
ಮ್ಮೆಲ್ಲರ ಕೊಲಲಿಕೆಂದು ॥
ಬಲ್ಲತನದಿ ತಾನಿರಿಸಿದ ಸತಿಯನು ।
ಸೊಲ್ಲಿಸಲೆನ್ನಳವೇ ॥56॥

**ವಾರ್ಧಕ**

ದಶರಥನ ಪೌತ್ರ ನೀನಾಲಿಸೀ ಪರಿಯಿಂದ ।
ಶಶಿವದನೆ ಮಯ ತನುಜೆ ನುಡಿದ ನುಡಿಗಸುರೇಂದ್ರ ।
ಭುಸುಗುಟ್ಟುತುರೆ ಕೆರಳಿ ಗರ್ಜಿಸುತಲಿರೆ  ಬೆದರಿ ಪಿಂತಿರುಗಿ ನಡೆತಂದಳೂ ॥
ಅಸುರ ರೌದ್ರಾನ್ವಿತದಿಓಲಗಕೆ ನಡೆತಂದು ।
ಶಶಿಹಾಸಮಂ ತನ್ನ ಸಿಂಹಾಸನದೊಳಿರಿಸಿ ।
ಮಸುಕಿದಾನನದಿಂದ ಬಸವಳಿದು ಯೋಚಿಸುತ ಉಸುರದಿರುತಿರುತಿರ್ದನೂ ॥57॥

ಆಸಮಯದೊಳಗಿತ್ತ ವಿತಳದೇಶವನಾಳ್ವ ।
ನಾಸಮರ್ಥನು ಮಾರಿಮುಖ ವಜ್ರಮುಖರೆಂಬ ।
ಆಸೋದರ ಪ್ರಲಂಭಮುಖರೆಂಬಸುರ ವೀರ ವಿಕ್ರಮರಾಕ್ಷಣಾ ॥
ತೋಷದಿಂದಾ ರಾವಣೇಶನಂ ಕಾಂಬ ಘನ ।
ತೋಷದಿಂ ಬಂದು ಲಂಕಾಧೀಶನಿಂಗೆರಗಿ
ಸೂಸೆ ಹರುಷಾಂಬುವಿನೊಳೋಲಾಡಿ ಉಪಚರಿಸಿ ಕುಶಲದಿಂದಿರುತಿರ್ದನೂ ॥58॥

**ಭಾಮಿನಿ**

ಏನು ಕಾರಣ ದನುಜರಿವರೀ ।
ದಾನವನ ಬೆಂಬಲಕೆ ಬಂದರ ।
ದೇನು ಪೇಳೆಮ್ಮೆರಾವಣನ ಮಡದಿ ಘಟೋದರಿಯೂ ॥
ತಾನು ಘೋಳಿಡುತ್ತೈದೆ ಪತಿಯಳಿ ।
ದಾನುಭವಗಳ ಫೇಳೆ ರೋಷದೊ । ಳಾ
ನರಾಧಿಪನಸುವನರ್ಚುವೆನೆನುತ ನಡೆತಂದಾ । ॥59॥

ವಸುಮತೀಪತಿ ಸೂನುಕೇಳಾ ।
ಅಸುರ  ಪೂರ್ವದೊಳಂಧಕಾಸುರ ।
ನೆಸೆವ ಪುತ್ರನ ವತ್ರನೆಂಬಭಿಧಾನ ರಾಕ್ಷಸನಾ ॥
ಬಸುರೊಳುದಿಸಿದರಿವರು ಮೂವರು ॥
ದಶಶಿರನ ಬೆಂಬಲಕೆ ಬರಲಾ ।
ವಸೆದು ಪೀಠವನಿತ್ತು ಕೇಳಿದ ಕುಶಲವಾರ್ತೆಗಳಾ ।  ॥60॥

**ರಾಗ ತುಜಾವಂತು, ಝಂಪೆತಾಳ**

ಕ್ಷೇಮವೇನಸುರಪತಿ । ಮಾರಿಮುಖ ನಿನಗೆ ।
ಭಾಮಾಮಣಿಯು ಚಿತ್ರಮಾಲಿನಿಯು ಸುತರ್ಗೆ ।    ॥ ಪಲ್ಲವಿ ॥

ಇಂದು ಪರಿಯಂತ ಪ್ರ । ಲಂಭಾಸುರ ನೀನೂ ।
ಒಂದಾಗಿ ನಿಮ್ಮೊಳಗೆ । ಚಂದವೇ ಹ್ಯಾಗೆ । ॥61॥

ಇಂದುಶೇಖರನ ದಯ । ದಿಂದ ಸುಕ್ಷೇಮಿಗಳು ।
ಒಂದಾಗಿ ಮೂವರೀ ಧರಣಿಯೊಳಗೇ ॥
ಚಂದದಲಿ ನಾವಿಹೆವು । ಕಂದರೆಲ್ಲರು ಸಹಿತ ।
ಇಂದು ಪರಿಯಂತರವು । ಕುಶಲ ನಮ್ಮೊಳಗೆ । ॥62॥

ಅಸುರರೊಳು ನಿನ್ನಂತೆ । ಹೆಸರು ಪಡೆದವರಿಲ್ಲ ।
ಯೆಸೆವ ವಿಕ್ರಮದಲ್ಲಿ । ವಸುಧೆಯೊಳಗೇ ॥
ಶಶಿವದನದಾ ಕಾಂತಿ । ಮಸುಳಿಸಲು ಬಂತೇನು ।
ಕೊಸರು ಕುಂದುಗಳೀಗ । ಉಸುರು ತನಗೆಂದಾ । ॥63॥

**ಭಾಮಿನಿ**

ಏನಹೇಳುವೆನೀಗ ದಶರಥ ।
ಸೂನುವಿನ ಭಾಮಿನಿಯ ಕಳವಿಲಿ ।
ತಾನು ಪಿಡಿದರೆ ಭಾನುಸುತ ಸಹಗೂಡಿ ಲಂಕೆಯನೂ ।
ದಾನವರ ಸಂಹರಿಸಿ ರಣದಲಿ ।
ಭಾನುಸುತ ಸಹ ಪ್ರೇಮದಿಂದಿಹ ।
ನೆನಲು ಕೇಳುತ ಯೇನು ಬೆಸಸಿದೆ ಬೆಸಸು ಮಗುಳಿನ್ನೂ । ॥64॥

**ರಾಗ ಕೇತಾರಗೌಳ, ಝಂಪೆತಾಳ**

ಮಾರಿಮುಖ ಧುರವಿಜಯನೇ । ಸಂಗರದ ।
ವಾರತೆಯ ಕೇಳು ನೀನೇ ॥
ಧುರದೊಳಾ ರಘುರಾಮನೂ । ಕೀಶಬಲ ।
ವೆರಸಿ ಸಂಗರದೊಳವನೂ । ॥65॥

ಧುರದಿ ರಕ್ಕಸ ಪಡೆಯನೂ । ಸಂಹರಿಸಿ ।
ಹರುಷ ದಿಂದಿರುವನವನೂ ॥
ಕುಲಕೆ ಘಾತಕಿಯಾದಳೂ । ಎನ್ನನುಜೆ ।
ಗೆಲುವಿಲ್ಲದಾಯ್ತುವರೊಳೂ । ॥66॥

ಖಳ ವಿಭೀಷಣನವರಲೀ । ನಮ್ಮ ನಿಜ ।
ವಳವ ಪೇಳುತ ಮನದಲೀ ॥
ಖಳನ ಸದೆಬಡಿದು ಭರದೀ । ಸೆರೆವಿಡಿದು ।
ಚಳಕದಿಂ ತಹದು ಮುದದೀ । ॥67॥

**ಕಂದ**

ರಕ್ಕಸನೆಂದುದ ಕೇಳ್ದಾ ।
ಫಕ್ಕನೆ ಮಾರೀಮುಖ ಮನದೊಳ್ತೋಷಿಸುತಂ ॥
ತಿಕ್ಕುವೆ ಕಪಿಬಲಗಳನೆನು ।
ತಕ್ಕರದೊಳಗುಸುರಿದದನುಜನೊಳತಿ ಜವದಿಂ ॥68॥

**ರಾಗ ಮಾರವಿ, ಏಕತಾಳ**

ಸಾಲ್ದಲೆಯಾಧಿಪ ಕೇಳ್ಕಪಿಬಳಗವ ।
ಗೋಳ್ಗುಡಿಪೆನು ಕ್ಷಣದೀ ॥
ನಾಲ್ಮೊನೀಕ್ಷಣ ಮುಳಿದೈತಂದರು ।
ಸೀಳ್ವೆನು ಸಮರದಲೀ ॥69॥

ಕುಲ್ಗೇಡಿಕಾ ವಿಭೀಷಣನೋರ್ವನ ।
ತೋಳ್ಗಳನುರೆ ಕಟ್ಟಿ ॥
ತೋಳ್ಪಿಡಿವೆನು ರವಿಕುಲಜರನೀರ್ವರ ।
ಕೇಳ್ದನುಜಾಧಿಪನೇ ॥70॥

ಈ ತೆರದೊಳು ಮಾರೀಮುಖನೆಂದುದ ।
ದಿತಿಜಾಧಿಪ ಕೇಳ್ದೂ ॥
ಭೂತಳಪತಿಯನು ಜಯಸೆಂದಿತ್ತನು ।
ಪ್ರೀತಿಯೊಳ್ವೀಳಯವಾ ॥71॥

ವೀಳಯವನು ಕೈಕೊಂಡಾ ಖಳನತಿ ।
ಪಾಳಯಗಳ ನೆರಹೇ ॥
ಗೂಳೆಯವನುತೆಗೆ ತೆಗೆಯೆಂಬಾರ್ಭಟೆ ।
ಮೊಳಗಿತು ಭೂತಳದೀ । ॥72॥

**ವಾರ್ಧಕ**

ತರಳ ಕುಶ ಲಾಲಿಸೈ ಅಸುರ ರಾವಣನೊಡನೆ ।
ಮಾರಿಮುಖ ವೀಳ್ಯಮಂ ಕೈಕೊಂಡು ರೋಷದಿಂ ।
ಧುರಕೆ ಚತುರಂಗ ಬಲವೆರಸಿಪೊರಡಲ್ಕಾಗ ಸುರವರರು ಭೀತಿಯಿಂದಾ ॥
ಭೇರಿ ತಂಬಟೆ ರವವು ನಾರುಭಟಿಸುತ್ತಿರಲು ।
ಭೂರಿ ಜಾಗ್ರತೆಯಾಗಿ ಚಿತ್ರಮಾಲಿನಿಯುನಡೆ ।
ತರುತ ನಿಜಪತಿಯ ಶರಗಂ ಪಿಡಿದು ತರುಣಿಮಣಿಯಾಗ ನುಡಿದಳ್ ಮುದದೊಳೂ ॥73॥

**ರಾಗ ಆದಿತಾಳ**

ವಲ್ಲಭ ನೀ ಎನ್ನ ಬಿಟ್ಟು ಪೋಗುವುದಿದು ।
ಬಲ್ಲತನವೆ ಪೇಳು ನಲ್ಲ । ನೀ ಪೇಳೂ । ॥74॥

ಪುಷ್ಪವತಿಯು ನಾನಾಗಿ ಐದನೆ ದಿನ ।
ತಪ್ಪಿನಡೆಯುವಿರಲ್ಲಾ । ಏ ನಲ್ಲಾ । ॥75॥

ಕರ್ಪೂರವೀಳ್ಯವ ಮಡಿದುಬಾಯೊಳಗಿಟ್ಟು ನಿನ್ನಾ ।
ಅಪ್ಪಿ ಮುದ್ದಿಸುವೆನು । ಸರಸಾದಿ ನಾನೂ । ॥76॥

ಮಾರನಟ್ಟುಳಿ ಬಹಳವಾಗಿ ನಾ ದಣಿವುದು ।
ನೀರ ನಿನಗಯೋಗ್ಯ । ಮರೆವುದಯೋಗ್ಯ । ॥77॥

ಸರಸ ಚುಂಬನಗೊಟ್ಟು । ಸವಿತಾಂಬೂಲವ ನಿಟ್ಟು ।
ಗುರು ಕುಚಗಳ ಮುಟ್ಟು । ನೆರೆದು ಸುಖವಿಟ್ಟೂ । ॥78॥

**ಮಾಲಿನಿ ವೃತ್ತ**

ಮದನಶರಗಳಿಂದ ಮೈನೋವಾದರಿಂದ ।
ಕದನಕೊದಗೊ ಜಾಣಾ ।
ಕಪಟವ್ಯಾಕೊ ಪ್ರವೀಣಾ ॥
ಕರವ ಮುಗಿವೆನೀಗ ಕಾಂತ ಮೋಹನ್ನ ।
ಬೇಗ ಸುರತದೊಲವ ತೋರೊ ।
ಶೀಘ್ರದಿ ಮನೆಗೆ ಬಾರೊ । ॥79॥

**ರಾಗ ತೋಡಿ, ಆದಿತಾಳ**

ಭಾವಕಿ ನೀ ಯೆಂದ ಮಾತಾ । ದೇವರ್ಕಳು ಮೆಚ್ಚೂವಾರೇ ।
ರಾವಣನು ತಾ ವೀಳ್ಯವಿತ್ತ । ಹವಕೆ ಪೊರಡಲೂ । ॥80॥

ನಲ್ಲ ನೀನೇನುತಿಳಿಯದವನೆ । ವಲ್ಲಭೆಯೊಳಿರುವ ಬಯಕೆ ।
ಯೆಲ್ಲ ಸಲಿಸದಿರಲೂಮುಂದೆ । ಗೆಲವಿಲ್ಲವಯ್ಯ । ॥81॥

ಆಳ್ದವನ ನುಡಿಯ ಮೀರಿ । ಬಾಳ್ದವಳ ಮಾತ ಕೇಳ್ದರೆ ।
ಬಾಳ್ಗೇಡಿಕಾನೆಂದು ಸುರರು । ಗುಳ್ದು ಜರೆವರೂ । ॥82॥

ಹೆಂಗಸಿನ ಮಾತ ಮೀರಿ । ಭಂಗಿಸಿ ಹೋದರೆ ಮಾನ ।
ಭಂಗವಾಗುವುದು ರಣ । ರಂಗದಿ ನಿಮ್ಮಾ । ॥83॥

ಒಡೆಯನೆಂದ ಮಾತ ಮಿರಿ। ನಡೆವರುಂಟೆ ಪೊಡವಿಯೊಳಗೆ।
ಬಿಡು ಬಿಡು ದಾರಿಯ ಮುಂದೆ। ನಡೆಯೊ ಕಾಮಿನೀ। ॥84॥

**ಭಾಮಿನಿ**

ಅಮಿತ ಶೋಕದಿ ಪೇಳ್ವ ವನಿತೆಗೆ।
ಕ್ಷಮಿತ ವಚನವ ಪೇಳ್ದು ರಾಕ್ಷಸ।
ಭ್ರಮಿತದಿಂದಿರುತಿರ್ದ ಸುತರ್ಸಹಿತಾಗ ಸಂಭ್ರಮದೀ॥
ಮಮತೆಯಿಂದಲಿ ಪೇಳ್ದು ವನಿತೆಗೆ।
ಕುಮತಿ ಮಾರೀಮುಖನು ಸುಪರಾ
ಕ್ರಮದಿ ಸತಿಯನು ನುಡಿಸಿ ಮನ್ನಿಸಿ ಪೇಳ್ದನುಚಿತದಲೀ ॥85॥

**ದ್ವಿಪದಿ**

ಇಂತು ಮಾರೀಮುಖನು ಕಾಂತೆಯೊಳು ಪೇಳ್ದೂ॥
ತಾಂ ತವಕದೊಳು ಖಳನು ತೋಷಮಂ ತಾಳ್ದೂ। ॥86॥

ಆನೆ ಕುದುರೆವರೂಥ ಸೇನೆಗಳು ಸಹಿತಾ॥
ದಾನವರ ಭಾರಕ್ಕೆ ಕೂರ್ಮನೆದೆಗೆಡುತಾ। ॥87॥

ಪೊರಡುತಿರೆ ಕಂಡಾಗ ಚಿತ್ರಮಾಲಿನಿಯೂ॥
ಹರಣವಳಿವೆನು ಯೆನುತಲಿರ್ದಳಾ ಸತಿಯೂ। ॥88॥

ಸಂತಾನವಳಿವ ದಿನ ಬಂತು ಯಿಂದೆಮಗೇ॥
ಕಾಂತೆ ಕಾಂತನ ಬಯ್ದು ಬಂದಳರಮನೆಗೇ। ॥89॥

ಇಂತಿದರ ವರ್ಣಿಪಡೆ ಶೇಷನಿಂಗರಿದೂ॥
ನಿಂತು ನೋಡಿದ ಸುರರು ಆಶ್ಚರ್ಯವೆರದೂ। ॥90॥

ಆ ಸಮಯದೊಳಗುಗ್ರಕೇತು ಎಂಬವನೂ॥
ತೋಷದಿಂದ್ಯೆದಿ ಕರಗಳ ಮುಗಿದು ತಾನೂ। ॥91॥

ತಂದೆ ನಿಮಗಾರೊಡನೆ ಕಲಹಯಿಂದಿನಲೀ।
ಬಂದ ಭಟನಾರವನು ಪೇಳು ತನಗಿಲ್ಲೀ। ॥92॥

ಕೊಂದು ಕೊಡುವೆನು ಎನ್ನ ಸಾಹಸವ ನೋಡೀ।
ರೆಂದು ಕರಗಳ ಮುಗಿಯುತಪ್ಪಣೆಯ ಬೇಡೀ। ॥93॥

**ರಾಗ ಭೈರವಿ, ಝಂಪೆತಾಳ**

ಕೇಳಯ್ಯ ತಾತ ನಾ | ಪೇಳುವೆನು ನಿನಗೀಗ |
ಕೀಳುಬಲರುಗಳ ನೆರೆ | ಕಾಳಗದಿ ಗೆಲಿದೂ | ||94||

ಭಾಳಲೊಚನನಿಂದು | ಮುಳಿದು ಬಂದರು ಬಿಡೆನು |
ಬೀಳುಗಡಿವೆನು ನರನ | ಪಾಳಯವ ಕ್ಷಣದೀ | ||95||

ಗಾಳಿ ಸಿಡಿಲಿನ ತೆರದಿ | ಕೋಲಮಳೆಯನು ಸುರಿದು |
ಕಾಳಗದೊಳೀರ್ವರನು | ಪಿಡಿದು ತಂದೊಪ್ಪಿಸುವೆ | ||96||

ನೋಡೆನ್ನ ಸಾಹಸವ | ಗಾಡದಿಂದಲೆ ಕಳಹು |
ರೂಢಿಯಲಿ ಪಿಡಿತಹೆನು ಕುಲವಿಘಾತಕನಾ ||97||

**ಕಂದ**

ಪಿತನೊಡನೆಂದಾ ವಚನಕೆ |
ಹಿತದಿಂ ನಸುನಗುತಲೆ ಚಳಕದಿ ಧರಣಿಪನಂ ||
ಅತಿ ಜವದಿಂ ಪಿಡತಹುದೆ |
ನ್ನುತ ಸುತನೊಡನುಸುರಿದ ತಾ ಮುದದೊಳ್ ದುರುಳಂ | ||98||

**ರಾಗ ಪಂತುವರಾಳಿ, ಮಟ್ಟೆತಾಳ**

ತಂದೆ ನೀವು ಯಾಕೆ ಮನದಿ | ನೊಂದುಕೊಳುವಿರೀ ||
ಬಂದ ಕೋತಿಬಳಗ ಗೆಲುವೆ ನೇನ ಪೇಳ್ವಿರೀ | ||99||

ತರಿಸು ರಥವ ಕರಸುಬಲವ | ಧುರಸಮರ್ಥರಾ ||
ಬರಿಸು ಕರಿ ರಥಾಶ್ವ ಪ | ದಾತಿರಥಿಕರಾ | ||100||

ಭರದಿ ಬರುವ ಭಟರನೆಲ್ಲ | ತರಿದು ಕ್ಷಣದಲೀ ||
ಹರುಷದಿಂದ ನಿಮ್ಮ ಕೀರ್ತಿ | ಮೆರೆವೆ ರಣದಲೀ | ||101||

ತಂದೆಗೆರಗಿ ಪೊರಟು ಸೈನ್ಯ | ಸಹಿತ ಭರದೊಳೂ ||
ಬಂದು ನಿಲಲು ರಾಮನೊಡನೆ | ಪೇಳ್ದ ಶರಣನೂ | ||102||

**ಭಾಮಿನಿ**

ಶರಣಜನಸುರಧೇನು ಕರುಣಾ |
ಶರಧಿಯವಧರಿಸೀಗ ದುರುಳನು |
ಪರಮ ವಿಕ್ರಮಿಯವನ ತರಿಯಲಿಕೊಂದೆ ಯೆಡೆಯಿಹುದೂ ||
ಪರಮ ಸಂಭ್ರಮದಿಂದ ಬೇಟೆಗೆ |

ತೆರಳಿರಲು ಕೈಲಾಸಕೊಂದಿನ ।
ಹರನ ಸೇವಕ ನಂದಿ ತಡೆಯುತಲೆಂದನವನೊಡನೇ । ||103||

ಚಂದ್ರಶೇಖರನಿರುವ ಶೈಲಕೆ ।
ಮಂದಿಗಳ ಕೂಡುತಲೆ ರಕ್ಕಸ ।
ಬಂದೆ ಯಾಕಲೊ ತೆರಳು ಬೇಗನೆ ಕೇಳಿ ನಗೆಸೂಸೀ ।
ನಂದಿಯೇ ನಡೇಯಾಚೆ ಸೇರದಿ ।
ರಿಂದು ಮುದಿಯಾ ಕೋತಿ ಮೊಗವನು ।
ಎಂದು ಹೀಯಾಳಿಸಲು ಕೋಪಿಸಿ ಶಪಿಸಿದಾ ನಂದೀ । ||104||

ದುಷ್ಟ ಖಳ ಕೇಳ್ನಿನ್ನ ಕೊಲುವುದು ।
ಎಷ್ಟರಾ ಕೆಲಸವದು ವಚನರ ।
ಶಿಷ್ಟಪಾಲಕ ರಾಮ ಭಕ್ತನು ಕೊಲಲಿಯಂಗದನೂ ||
ಕಷ್ಟಗೊಳಿಸದೆ ಬಲವನಂಗದ ।
ದುಷ್ಟನನು ಸಂಹರಿಸಲೆನಲಾ ।
ಗಟ್ಟಹಾಸದಿ ಶರಣಗೆಂದನು ದನುಜರೋಷದೊಳೂ । ||105||

**ರಾಗ ಪಂತುವರಾಳಿ, ಮಟ್ಟೆತಾಳ**

ಎಲವೊ ಶರಮೆಯರಸ ನಿನ್ನ । ಬಲುಹುತನವನೂ ||
ಗೆಲಿದುಹರನ ಗಣಕೆ ಕೊಡುವೆ । ಬಲಿಯ ನಿನ್ನನೂ । ||106||

ಎನುತ ಸರಳ ಸುರಿಯೆ ದುರುಳ । ತನಯ ಭರದೊಳೂ ।
ಕನಲುತೊಂದು ಶರದಿತರಿದ । ಧನುವ ಶರಣನೂ । ||107||

ಅಂದು ಕೋಪದಿಂದ ಖಳನು । ಬಂದು ತಿವಿದನೂ ||
ನೊಂದು ಮಗುಳೆ ಶರಣ ಖಳನ । ನಿಂದು ಬಡಿದನೂ । ||108||

ಬಿಡಲು ಗಿರಿಯ ಸಾಯಕವನು । ಕಡಿಯಲೆಂದನೂ ||
ಮಡನ ಸಖನ ಶರಣ ಬೇಗ । ನಡುವೆ ತರಿದನೂ । ||109||

ಖಳನ ಶರವ ತರಿದು ಬೇಗ । ಬಳಿಕ ಶರಣನೂ ।
ಮುಳಿದು ಮುಷ್ಟಿಯಿಂದ ತಿವಿದ । ಖಳನ ಒಡಲನೂ । ||110||

ಭರದಿ ಕೋಲಮಳೆಯಗರೆದು । ದುರುಳ ದೈತ್ಯನೂ ||
ಬರುವ ಸರಳ್ಗಳೆಲ್ಲ ತರಿದು । ಜರೆದು ಪೇಳ್ದನೂ । ||111||

ಕುಲವಿಘಾತ ಕೇಳು ನಿನ್ನ । ಬಲುಹ ಬಲ್ಲೆನೂ ||
ಅಲಸಬೆಡವೆನುತಬಿಗಿದ । ಮೌನ ಶರವನೂ । ||112||

**ಭಾಮಿನಿ**

ದುರುಳ ಮೌನಾಸ್ತ್ರದಲಿ ಬಿಗಿಯಲು ।
ಶರಣನನು ಕಾಣುತ್ತ ರವಿಜನು ।
ಗಿರಿತರುವ ಕಿತ್ತಾರ್ಭಟಿಸಿ ಬರೆ ಕಂಡು ರಕ್ಕಸನೂ ॥
ಬರಲಿ ನಿನ್ನ ಸಮಸ್ತ ಕಪಿಬಲ ।
ವರಿದು ಪುಡಿಪುಡಿಗೈವೆ ನೋಡೆನು ।
ತುರೆ ಭಯಂಕರ ರವದೊಳೊರೆದನು ದನುಜ ತರಣಿಜಗೇ । ॥113॥

**ರಾಗ ಭೈರವಿ ಮಟ್ಟೆತಾಳ**

ಎಲವೊ ಕೀಶಬಲದ ಪತಿಯೆ ।
ಬಲುಹು ತೋರೆನುತ್ತ ಖಳನು ।
ತಳುವದೆಚ್ಚನಾಗ ಸರಳ । ಗೆಲವಿನಿಂದಲೀ ॥114॥

ಜಡಿದು ಪರ್ವತಗಳ ರವಿಜ ।
ತಡವ ಮಾಡದಾಗ ಪೊಡೆಯೆ ।
ಕಡಿದ ದನುಜ ವಜ್ರಶರವ । ಬಿಡುತ ಅದರನೂ ॥115॥

ನಡುವೆಯದರ ಕಡಿದು ರವಿಜ ।
ನುಡಿದ ನಾಗ ತೆರಳು ನಿನ್ನ ।
ಪಡೆಯು ಸಹಿತವಿತಳಕಾಗಿ । ನಡೆಯೊ ಗಮ್ಮನೇ ॥116॥

ಎನಲು ರೋಷದಿಂದ ದನುಜ ।
ಕನಲ್ದು ಮೌನಶರವ ಬಿಡಲು ।
ಇನಜ ಮೂರ್ಛೆಗೈಯಲಾಗ । ಹನುಮನೆಂದನೂ ॥117॥

ಎಲವೊದನುಜ ಕೀಶಪತಿಯ ।
ಗೆಲಿದೆನೆಂದು ಹಿಗ್ಗ ಬೇಡ ।
ಕಲಹದಲ್ಲಿ ನಿನ್ನ ಬಲವ । ಕಲಕಿಬಿಡುವೆನೂ ॥118॥

**ರಾಗ ಭೈರವಿ ಅಷ್ಟತಾಳ**

ಹನುಮನೆಂಬವನೆ ನೀನೂ । ನಿನ್ನಯ ಭುಜ । ತ್ರಾಣವ ಬಲ್ಲೆ ನಾನೂ ॥
ಘನ ವೇಗದಿದಿರಾಗು ಇದಿರಾಗೆಂದೆಚ್ಚನು । ಕನಲುತಲಾಖಳನೂ ॥119॥

ಕೇತು ಯೆಂಬವನೆ ನೀನೂ । ನೀನ್ನನು ಇನ । ಜಾತ ಗೊಪ್ಪಿಸುವೆ ನಾನೂ ॥
ಘಾತಕಿ ಪಥ ಎನುತೆರಗಿದ ಮುಷ್ಟಿಯೊಳ್ । ಕಾತರಿಸುತ ಬಿದ್ದ ಕೇಳವನೂ ॥120॥

ಖಳನು ಮೂರ್ಛೆಯ ತಿಳಿದೂ | ಬ್ರಹಾಸ್ತ್ರವ | ಕಿವಿಯ ತುದಿಗೆ ಯೆಳೆದೂ ||
ಘಳಿಲನೆ ಬಿಡೆ ಶರದುರಿಯೊಳು ಬಿದ್ದನು | ಇಳೆಯೊಳು ಮರುತಜನೂ | ಕೇಳವನೂ ||121||

**ಭಾಮಿನಿ**

ಲವನೆ ಕೇಳೈ ಖಳನ ಸಾಹಸ |
ವವನಿಯಲಿ ರವಿತನಯ ಪವನಜ |
ಗವಯ ವೀರ ರುಮಣ್ವ ನಾಯಕ ಕಲಿವಿಭೀಷಣರಾ ||
ಬವರದಲಿ ತಾ ಗೆಲಿದ ರಕ್ಕಸ |
ನಿವನ ಗೆಲುವ ಸಮರ್ಥ ಧರೆಯಲಿ |
ದಿವಿಜಪತಿ ಸುತತನಯನಂಗದಗೆಂದನಾ ರಾಮಾ ||122||

**ರಾಗ ಕೇತಾರಗೌಳ, ಅಷ್ಟತಾಳ**

ತರಳ ಅಂಗದ ಕೇಳು ಘನವಾದ ಉಪಟಳ |
ದುರುಳನದೇನಪೇಳ್ವೇ ||
ಮರುತಜ ರವಿಜರನೆಲ್ಲರ ಸೋಲಿಸಿ |
ಧರಿಣಿಯೊಳ್ ಕೆಡಹಿದನೂ ||123||

ದೂಷಿತ ರಕ್ಕಸ ಸಾಹಸದಲಿ ಬಂದು |
ಘೋಷಿಸಿನಿಂದಿರಲೂ ||
ಮೋಸವಾಯಿತು ನೀ ಹೋರತು ಬೇರಿಲ್ಲ ಮ |
ತ್ತಾಸಾಂಬ ಶಿವನೇ ಬಲ್ಲಾ ||124||

ಎಂದ ಮಾತನು ಕೇಳು | ತಂದು ಅಂಗದ ತೋಷ |
ದಿಂದ ರಾಮನ ಪಾದಕೇ ||
ವಂದಿಸಿ ಪೊಡಮಟ್ಟು ಬಂದು ನೋಡಿದ ತಾನು |
ಚಂದದಿ ಖಳನಾಟವಾ ||125||

ಕರದಲಿತರುಗಿರಿಗಳ ಧರಿಸುತ್ತ ಬೋ |
ಬ್ಬಿರಿಸುತ್ತ ರೋಷದಲೀ ||
ಪರಿಪರಿಯಿಂದ ರಾಘವನ ಧ್ಯಾನಿಸಿ ತರು |
ಚರ ಧುರಕನುವಾದನೂ ||126||

**ರಾಗ ಪಂತುವರಾಳಿ, ಮಟ್ಟೆತಾಳ**

ಎಲವೊ ಖಳನೆ ನಿನ್ನ ಬಲದ | ಬಲ್ಲವಿಕೆಯನೂ ||
ತಿಳಿದೆನೊಂದು ಗಳಿಗೆಯೊಳಗೆ | ಗೆಲುವೆ ನಿನ್ನನೂ ||127||

ಎನುತ ಗಿರಿ ತರುವಗೊಂಡು । ಕನಲಿ ಹೊಯ್ದನೂ ॥
ದನುಜನಾಗ ದಿವ್ಯ ಕುಲಿಶ । ಶರದಿ ತರಿದನೂ ॥128॥

ಎಲವೊ ಕಪಿಯೆ ಜೀವದಾಸೆ । ಯೊಲವು ಉಂಟೆನೋ ॥
ಕಲಹಬಿಟ್ಟು ಕಾಲಿಗೆರಗು । ಸಲಹಿಕೊಂಬೆನೊ ॥129॥

ಕಾಲ ಹಿಡಿವುದಕ್ಕೆಬಹಳ ವೇಳೆ ಕಾಣೆನೂ ॥
ಖೂಳ ದನುಜ ಭಳಿರೆಯೆನುತ । ಬೀಳ ಹೊಯ್ದನೂ ॥130॥

ಹೊಡೆದ ಭರಕೆ ಶಿರದಿ ರುಧಿರ । ವೊಡೆದು ಸೂಸಲೂ ॥
ಝುಡಿಯುತೆಮನ ದೂತರೊಯ್ದು । ನಡೆದರತ್ತಲೂ ॥131॥

ದುರುಳ ಧರೆಗೆ ಬೀಳಲಾಗ । ಸುರರು ಹರುಷದಿ ।
ಸುರಿದರಾಗ ಕುಸುಮ ಮಳೆಯ । ತರಳನಂಗದೀ ॥132॥

**ಭಾಮಿನಿ**

ದುರುಳ ದಾನವ ಬೀಳೆ ಧರಣಿಗೆ ।
ಮರುಗುತಾಕ್ಷಣ ಚರರು ನಡೆತಂ ।
ದರುಹುವೆವು ಧನಿಗೆನುತ ಮರೆಸುತ ರೂಪ ವೇಗದಲೀ ॥
ಭರದಿ ಪೊರಟೈತರುತ ದನುಜನ ॥
ಪೊರಗೆ ಬಂದೀಕ್ಷಿಸುತಲೊಂದಿಸಿ ।
ಚರರು ಮಾರೀಮುಖಗೆ ಪೇಳಿದರಾಗ ಈಹದನಾ ॥133॥

**ರಾಗ ಮುಖಾರಿ, ಆದಿತಾಳ**

ಮಾರೀಮುಖನೆ ಲಾಲಿಸಯ್ಯ । ನಿನ್ನಯ ಸುತ ।
ಕ್ರೂರ ಕೇತುವು ಜೀಯಾ ॥
ಹಾರಿಸಿ ರವಿಜನ । ಘೋರಿಸಿ ಶುಗಜನ ।
ಸೇರಿಸಿನಳನ ನಿ । ವಾರಿಸಿ ಗವಯನ
ತೋರಿಸಿ ಯಮಪುರ । ಹಾರಿಸಿ ಕಪಿಕುಲ ।
ವಾರವ ಕೆಡಿಸಿದುದೇನ ಪೇಳುವೆನು ॥134॥

ಅಂಗವಿಕಾರದ ಕಪಿಯೊಂದು । ಮೇಲ್ವಾಯ್ದು ।
ಅಂಗದನೆಂಬಾತ ಬಂದೂ ॥
ಸಂಗರದಲಿಭಟ । ರಂಗವ ಕೆಡಿಸಿ ರ ।
ಣಾಂಗದಿ ಕುವರನ । ಭಂಗಿಸುತಾ ಗಗ ।

ನಾಂಗಣ ಮಾರ್ಗವ । ನಿಂಗಿಸಿ ತೋರಿದ ।
ರಂಗವ ನಾನಿನ್ನೇನ ಪೇಳುವೆನೂ ॥135॥

**ಕಂದ**

ಚರರೆನೆ ಕೇಳ್ದಾ ದನುಜಂ ।
ಪರಿಪರಿ ವಿಧದಿಂ ಶೋಕಿಸುತಾ ಕಪಿವರನಂ ॥
ಭರದಿಂ ಪಿಡಿಯುತಲೆನ್ನಯ ।
ಚರಣದೆಡೆಗೆಡಹುವರಾರೆನಲ್ ಮಗನೆಂದಂ ॥136॥

**ಭಾಮಿನಿ**

ಚಿಂತಿಯಾಕೆಲೆ ಜೀಯ ರಿಪುಕುಲ ।
ದಂತಕನು ತಾನಿರಲು ಕಪಿಕುಲ ।
ಸಂತತಿಯ ಕಲಕುವೆನು ಕಡಲಲಿ ಚಿಂತೆ ಬೇಡೆಂದಾ ॥
ಕಂತುಹರ ಕಮಲಾಕ್ಷ ಮುಳಿದೀ ।
ಗಂತಕನೆ ತಾ ಬರಲಿ ಕಪಿಕುಲ ।
ದಂತರೇಣಾರ್ಚಿತನು ತಾನಿರೆ ಪಂಥವೇಕೆಂದಾ ॥137॥

**ರಾಗ ಆದಿತಾಳ**

ಕೇಳಿದೆಯಾ । ತಂದೆ । ಕೇಳಿದೆಯಾ ॥
ನಾ ಪೇಳುವೆ ನಿನಗೊಂದುಕಾರ್ಯಗಳ್ಯೋಚನೆಯಾ ॥ ॥ ಪಲ್ಲವಿ ॥

ಗಜಗವಯ ಶತಬಲಿನಜ ಮರುತಜರ ನಳನ ಸಹಿತ ।
ಅಜನ ಸುತನ ರಣದಿ ಕೆಡಹಿ । ತ್ರೈಜಗದಿ ಕೀರ್ತಿಪಡೆವೆನೂ ॥138॥

ಬರುವ ವಿಪುಳ ಬಲವನೆಲ್ಲ । ತರಿದು ಕೆಡಹಿ ರಣದಿ ಗೆಲಿದು ।
ಗರುವ ಮುರಿದು ಭೂತಕುಣಿಪೆ । ಭರದಲಡವಿಚರರನೆಲ್ಲ ॥139॥

ಎಂದು ಪೌರುಷಗಳನಾಡಿ । ಬಂದ ಕುವರನನ್ನು ನೋಡಿ ।
ಚಂದದಿಂದ ಪರಿಸಿ ನುಡಿದ । ಕಂದನೊಡನಾನಂದದೀ ॥140॥

**ರಾಗ ತುಜಾವಂತು, ಝುಂಪೆತಾಳ**

ಸ್ಥಿರಜೀವಿಯಾಗಯ್ಯಿ ಸಿರಿವಂತ ನೀನಾಗು ।
ಸರಸಿರುಹಭವ ನಿರುವ ತನಕ ಸುಖಿಯಾಗು । ॥ ಪಲ್ಲವಿ ॥

ಸೂರ್ಯ ಚಂದ್ರರು ಸುಮನಸಾದಿಗಳು ಇರುವನಕ |
ಉರ್ವಿಯಲಿ ದೊರೆಯೆನಿಸಿ ಸುಖದಿಂದ ಬಾಳು | ||141||

ಭಯವೆಲ್ಲ ಪೋಗಿ ನಿ | ರ್ಭಯದಿ ಸುರರನು ಗೆಲಿದು |
ತೋಯಜೋದ್ಭ್ವವನಿರುವ ತನಕ ನೀ ಬಾಳೂ | ||142||

ಹಗೆಯವರ ಕೂಡೆ ನಿ | ನ್ನಾಗಮವನುಸುರದಿರು |
ನಗೆಯ ಮಾಣಿಸು ಧುರದಿ | ನೆರದ ಪಟುಭಟರಾ | ||143||

ಧುರದಿ ಶರಗಳ ಪಿಡಿದು | ತಿರುಗಿ ನಿಲ್ಲದಿರೆನುತ |
ಕರದಿ ಪಿಡಿದೆತ್ತಿದನು ಮಗನ ಮಸ್ತಕವಾ ||144||

ತರಳನನುಕೊಂದವನ | ಭರದಿ ಯಮನಡೆಗಟ್ಟು |
ಧುರವಿಜಯನೆಂದೆನಿಸಿ ಮೆರೆಯಯ್ಯ ಮಗನೇ | ||145||

**ಭಾಮಿನಿ**

ಮಗನ ಪರಸಿದು ಕಳುಪೆ ದಾನವ |
ತೆಗೆದು ಶಸ್ತ್ರಾಸ್ತ್ರಗಳ ಧರಿಸುತ |
ಲೊಗುಮಿಗೆಯ ಹರುಷದಲಿ ರೇಣಾರ್ಚಿತನು ನಡೆತಂದಾ |
ವೊಗುವ ನಯನಾಂಬುರುಹ ಧಾರೆಯ |
ಬಗೆಯ ಜನನಿಯ ಕಂಡು ಬಾಗುತ |
ದಗುಜಲವನೊರಸಿಮಿಗೆ ನುಡಿದನು ದೈನ್ಯಭಾವದಲೀ | ||146||

**ರಾಗ ತೋಡಿ, ಅಷ್ಟತಾಳ**

ಏನವ್ವಾ | ತಾಯೆ | ಏನವ್ವಾ || ಪಲ್ಲವಿ ||

ಏನವ್ವ ತಾಯೆ ನೀಮೌನದೊಳಿಂದೂ |
ಮಲಗಿಹೆ ಮಂಚದೊಳೋರ್ವಳೆ ಬಂದೂ ||
ನೆಲೆಯಿಲ್ಲದೆ ತಿಳಿಸದೆ ಯೆನಗಿಂದೂ |
ಛಲವೇನೆ ತರಳನ ಮೇಲ್ನಿನಗಿಂದೂ | ||147||

ಬಂದ ದುಗುಡವಿದೇನವ್ವ ಪೇಳೂ |
ಚಂದದಿಂದುಸುರುದಯಾಳೂ ||
ತಂದೀವೆ ಮನಸಿನಿಷ್ಟವ ಬೇಗದೊಳೂ |
ಎಂದು ಕೈಮುಗಿದು ನಿಂದಿರ್ದ ತೋಷದೊಳೊ | ||148||

ಚಿತ್ರಮಾಲಿನಿ ತನ್ನ ಕುವರನಪ್ಪುತಾ ।
ಅತ್ಯಂತ ಹರುಷದಿಂದೆತ್ತಿ ಮುದ್ದಿಸುತಾ ॥
ಚಿತ್ತದಲಿ ಮರುಗುತಿರಲಾತ ಕಾಣುತ್ತಾ ।
ಮತ್ತುಸುರಿದ ಮಾತೆಗೆ ವಂದಿಸುತ್ತಾ । ॥149॥

**ರಾಗ ಸಾರಂಗ, ಆದಿತಾಳ**

ಯಾಕೆ ನೀ ಮರುಗುವೆ ಅಮ್ಮಯ್ಯ । ಬಂದ ।
ವ್ಯಾಕುಲವನು ಪೇಳು ॥ ಅಮ್ಮಯ್ಯ ॥ ಪಲ್ಲವಿ ॥

ಹರಿಹರರೊಂದಾಗಿ ಬರೆ ಅಮ್ಮಯ್ಯ । ಅವರ ।
ಪರಿಹರಿಸಿ ಪಾಲಿಸುವೆ । ಅಮ್ಮಯ್ಯ । ॥150॥

ಮರುಗಿ ಮೌನದೊಳಿರುವೆ ಯಾಕೆ । ಅಮ್ಮಯ್ಯ । ಈಗ ।
ಸೆರಗನಿಕ್ಕಿ ಮಲಗುವರೆ । ಅಮ್ಮಯ್ಯ । ॥151॥

ಮೊಗವೆಲ್ಲ ಕಂದಿಹುದೇಕೆ ಅಮ್ಮಯ್ಯ । ನಿಮ್ಮ ।
ದುಗುಡವೆಲ್ಲ ಪೇಳೆನ್ನೊಡ । ನಮ್ಮಯ್ಯ ॥152॥

**ರಾಗ ಸಾವೇರಿ, ಏಕತಾಳ**

ಏನ ಹೇಳಲಯ್ಯ ನಿನಗೆ । ಕಂದ ಕಂದಾ ॥ ಯೆನ್ನ ।
ಪ್ರಾಣವುಳಿವುಪಾಯ ಕಾಣೆ । ಕಂದ ಕಂದಾ ॥153॥

ಇಂದಿನಾನುವರದ ಪಯಣ । ಕಂದ ಕಂದಾ ॥ ನಿನಗೆ ।
ಚಂದವಲ್ಲವೆಂದು ಪೇಳ್ವೆ । ಕಂದಕಂದಾ । ॥154॥

ತರಳ ಮಡಿದ ನಿನ್ನೆ ರಣದಿ । ಕಂದ ಕಂದಾ ॥ ನಿಮ್ಮ ।
ಮರಣ ಕಾಂಬೆನೆಂತು ನಾನು । ಕಂದ ಕಂದಾ । ॥155॥

ಪುಣ್ಯಹೀನೆನಾನೀಗೈಸೆ । ಕಂದ ಕಂದಾ । ಚಿಣ್ಣ ।
ರಣಕೆ ನೀನು ಪೋಗದಿರೋ । ಕಂದ ಕಂದಾ । ॥156॥

ದುಷ್ಟ ರಾವಣೇಂದ್ರನೆಂದ । ಕಂದ ಕಂದಾ । ನುಡಿಗೆ
ಶ್ರೇಷ್ಠನಿಂದು ಮರುಳನಾದ । ಕಂದ ಕಂದಾ । ॥157॥

ಭ್ರಷ್ಟನೆಂದ ನುಡಿಯ ಕೇಳಿ । ಕಂದ ಕಂದಾ । ನಿಮಗೆ
ಕೊಟ್ಟನಲ್ಲ ವಿಷವರಮಣ । ಕಂದ ಕಂದಾ । ॥158॥

ಎನ್ನ ಪುತ್ರನಾದಡೀಗ | ಕಂದಾ ಕಂದಾ || ನೀನು |
ಎನ್ನ ಮಾತ ಕೇಳೊ ಬೇಗ | ಕಂದ ಕಂದಾ | ||159||

ಸೃಷ್ಟಿಕರ್ತ ರಾಮಚಂದ್ರ | ಕಂದ ಕಂದಾ || ವಿಷ್ಣು
ದುಷ್ಟಹನನಕಾಗಿಬಂದ | ಕಂದ ಕಂದಾ | ||160||

**ರಾಗ ಸೌರಾಷ್ಟ್ರ, ಅಷ್ಟತಾಳ**

ಚಿಂತಿಸಿದಿರು ದಯ | ವಂತೆ ನೀ ಮನಸಿನೊ | ಳಮ್ಮ ಕೇಳೂ || ತಾಯೆ |
ಸಂತೋಷದೊಳಗಾ | ನಂತ ಗುಣಾಯುತೆ | ಅಮ್ಮ ಕೇಳೂ | ||161||

ಧತಿಯಿಂದ ಕಪಿಬಲವೆಲ್ಲ ಸಂಹರಿಸುವೆ | ಅಮ್ಮ ಕೇಳೂ || ಪಥ್ವಿ |
ಪತಿ ರಾಮಲಕ್ಷ್ಮಣರೀರ್ವರ ತರಿವೇನು | ಅಮ್ಮ ಕೇಳೂ | ||162||

ಅಣ್ಣನ ಕೊಂದಿಹ ಸಣ್ಣ ಕಪಿಯನೀಗ | ಅಮ್ಮಕೇಳೂ || ಕುಟ್ಟಿ |
ಬೊಮ್ಮನ ಪುರಕಟ್ಟಿ ಬರುವೆನು ನಿಮಿಷದಿ | ಅಮ್ಮಕೇಳೂ | ||163||

ಶತಬಲಿ ಸುಷೇಣ ಗವಯ ಗವಾಕ್ಷರ ಅಮ್ಮ ಕೇಳೂ || ಕೊಂದು |
ಖತಿಯೊಳು ಕೆಡಹುವೆ ರವಿಜನ ಮೊದಲಾಗಿ | ಅಮ್ಮಕೇಳೂ | ||164||

ಸತಿಸರಮೇಶನ ಮತಿಗೆಡಿಸುವೆನೀಗ | ಅಮ್ಮ ಕೇಳೂ || ಮುಂದೆ |
ಅತಿಬಲ ಹನುಮನ ಜಾಂಬವರೀರ್ವರ | ಅಮ್ಮ ಕೇಳೂ | ||165||

ವಾಲಿಯ ಕುವರನನಂತಕಗೀವೆನು | ಅಮ್ಮ ಕೇಳೂ || ನಳ |
ನೀಲರ ಪಾಳಯ ಗೋಳುಗುಡಿಸುವೆನು | ಅಮ್ಮ ಕೇಳೂ | ||166||

**ರಾಗ ತಾಳ**

ಕಂದ ನೀ ಮತಿಗೆಟ್ಟುದೇನಯ್ಯ | ಬಿಡು |
ಚಂದವಲ್ಲಿದುಮಾತ ಕೇಳಯ್ಯ ||
ಸಿಂಧುಶಯನಾ ರಾಮಚಂದ್ರನೂ | ನಲ |
ವಿಂದಲಕ್ಷ್ಮಣದೇವ ಶೇಷಾನೂ | ||167||

ಚಂದಿರಾನನೆ ಸೀತೆ ಲಕ್ಷ್ಮಿಯೂ | ಅವಳ್ |
ಬಂದು ತಾ ಜನಿಸಿದಳ್ ಧರೆಯೊಳೂ ||
ಕೋತಿಗಳೆಲ್ಲರುಸುರರಯ್ಯ | ಇಂಥ |
ಘಾತಕವೆಸಗುವರೇನಯ್ಯ | ||168||

ಸಾರಿ ಹೇಳಿದೆ ಬೇಡ ಧುರಗಳೂ । ಮತ್ತೆ ।
ಸೇರಿ ಬಾಳುವುದೊಳ್ಳಿತವರೊಳೂ ॥
ತರವೆ ಕಾಳಗ ಚೆಣ್ಣಯೆಂದಳೂ । ಶೋಕ ।
ಭರಿತೆ ತಾನಪ್ಪಿ ಮುದ್ದಿಸಿದಳೂ । ॥169॥

**ಭಾಮಿನಿ**

ತಾಯೆ ನಿನಗಿನಿತೇಕೆ ರಾಮನ ।
ಬಾಯ ಹೊಗಳಿಕೆ ಬಿಡು ವಥಾ ನರ ।
ನಾಯಕನ ತಾನೀಗ ಗೆಲದಿರಲಸುರನಲ್ಲೆಂದಾ ॥
ಬಾಯ ಬಡಿಕ ವಿಭೀಷಣಾಸುರ ।
ಸಾಯದಂದದಿ ಪಿಡಿದು ಕಪಿಕುಲ ।
ನಾಯಕರ ಸಂಹರಿಸಿ ಬರುವೆನೆನುತ್ತ ಖತಿಗೊಂಡಾ ॥170॥

**ವಾರ್ಧಕ**

ತರಳ ಲವ ಕೇಳು ಜನನಿಯ ನುಡಿಗೆ  ಖತಿಗೊಂಡು ।
ದುರುಳ ದಾನವ ತನ್ನ ಚತುರಂಗ ಬಲವೆರಸಿ ।
ಪೊರಟು ನಡೆತರೆ ಮುಂದೆ ಪರಿ ಪರಿಯೊಳವಶಕುನಮಾಗಲುರೆ ನಡೆತಂದನೂ ॥
ವರಭದ್ರಕರಣಮಂಗೈದು ಭೂಸುರನೋರ್ವ ।
ಬರುತಿರಲ್ ಮುಂದೆ ಮಾರ್ಜಾಲಗೋಮಾಯ ಫಣಿ ।
ಬರುವನಿವನೆಲ್ಲಿ ಮುದಿ ಬ್ರಾಹ್ಮಣನ ಬಡಿರೆಂಬರವದಿಂದ ನಡೆತಂದನೂ । ॥171॥

**ಕಂದ**

ಇಂತವಶಕುನವನುಂ ಖಳ ।
ಮುಂತರಿಯದೆ ಬರುತಿರಲಾಗಳ್ ಕಾಣುತ್ತಂ  ॥
ಸಂತಸವ ತಳೆದು ಸರಮಾ ।
ಕಾಂತಂ ರಘುಜನ ಪದ ಕೆರಗುತಲಿಂತೆಂದಂ ॥172॥

**ರಾಗ ಮಧುಮಾಧವಿ, ಆದಿತಾಳ**

ರಾಘವ ಸ್ವಾಮಿ ।  ಪರಮ ಸುಪ್ರೇಮಿ ॥
ಬೇಗದೊಳರುಹುವೆಖೂಳನಾಗಮವಾ ।  ॥ ಪಲ್ಲವಿ ॥

ಖೂಳ ರಕ್ಕಸನೀತ ಮಾರೀಮುಖನ ಜಾತಾ ।
ಬಾಲ ರೇಣಾರ್ಚಿತ ವೀರರೊಳ್ ಖ್ಯಾತಾ । ॥173॥

ಆನೆ ಕುದುರೆ ಮಂದಿ । ಸೇನೆ ಮಾರ್ಬಲಸಹಿತ ।
ಕಾನನವನು ಸಂಚರಿಸುತಿರಲತ್ತಾ । ॥174॥

ವಾಲಖಿಲ್ಯರು ತಪಗೈದು ಸೂಕ್ಷ್ಮದೊಳಿರೆ ।
ಕಾಲ ಕಾಲಕೆ ತಪಸಲಿಸುತ ಹೀಗೇ ॥175॥

ಕಾಲ ಮೇಲಕೆ ಎತ್ತಿ ಕರದೊಳು ಧರೆಯೊತ್ತಿ ।
ಮೇಲೆ ಶೀರ್ಷಾಸನ ನೋಡಿ ಯಾರೆನ್ನುತ । ॥176॥

ಬಡ ಮುನಿಗಳಕಾಲ ಹಿಡಿದು ಎಳೆಯಿರೆನು
ತೊಡನೆ ಪೇಳಿದ ತನ್ನ । ಪಡೆಯ ನೋಡುತ್ತಲೆ ॥177॥

ಒಡೆಯನಪ್ಪಣೆಯಿಂದ ಬಡಿದು ಬ್ರಹ್ಮರ ಮಂಡೆ ।
ವಡೆದು ಕೆಡಹಿ ಮತ್ತೆ ಎಳದರಸುರರೂ । ॥178॥

ಗುಡುಗುಡಿಸುತ ಮುನಿ ಮಡನು ಪೇಳಿದ ಜಗ ।
ದೊಡಯ ಶ್ರೀರಾಮನ ಕಡೆಯನಿಲಜನಿಂ । ॥179॥

ಮಡಿದು ಹೋಗೆನುತಲೆ ನುಡಿದು ತಾ ಶಪಿಸಿದ ।
ಕಡೆಗೆ ದಾನವ ತನ್ನ ಪಡೆಸಹ ನಡೆದಾ । ॥180॥

**ಕಂದ**

ಈ ಪರಿಯಿಂಜದಾ ರಘುಜಗೆ ।
ಶಾಪದ ವಿವರವ  ಪೇಳ್ತಿರೆ ಶರಣಂ ॥
ಕೋಪದೊಳೆದ್ದುಂ ಖಳಸುತ ।
ಭೂಪತಿಯೆಡೆಯಂ ಸಾರುತ ಶರಣಗೆ ನುಡಿದಂ ॥181॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಎಲವೂ ಸರಮಾಧವನೆ ನಿನ್ನಯ ।
ವಲವ ಬಲ್ಲೆನು ಕುಲವಿಘಾತಕ ।
ಕಲಹದಲಿ ನೀ ಕೆಟ್ಟೆಯೋಚಿಸಿ । ತಿಳಿಯದೀಗಾ ॥182॥

ಎನುತ ಕೊನೆ ಮೀಸೆಗಳ ತಿರುಹುತ ।
ಕನಲಿ ದಾನವ ಶರಣಗೆಂದನು ।
ಘನ ಬಲಾಯುತ ರಾಘವೇಂದ್ರನ । ನೆನಗೆ ತೋರೋ ॥183॥

ಒಡೆಯ ರಾಮನ ತೊಡಕ ಬಯಸುತ ।
ಕೆಡನುಡಿಯ ನೀ ನುಡಿದೆಯಾದಡೆ ।
ಕಡೆಯ ನಾಲಿಗೆ ಹಿಡಿದು ಕೊಯ್ವೆನು । ಬುಡವು ಸಹಿತಾ ॥184॥

ಕಡೆಯ ದಿನ ನಿನಗೆಂದು ರಾಮನ ।
ಅಡಿಯ ಧ್ಯಾನಿಸಿ ದಡದಿ ಮರುತಜ ।
ಮಡನ ರೂಪವ ಧರಿಸಿ ನಿಂದನು । ಪೊಡವಿಯೊಳಗೇ ॥185॥

ಎಂದು ಪರ್ವತಗಳನು ಕೈಕೊಂ ।
ಡೆಂದನೆಲೆ ದನುಜೇಶ ತಾಳಿಕೊ ।
ಯೆಂದು ಹೊಡೆಯಲು ತರಿದನಾ ಖಳ । ವಜ್ರದಿಂದಾ ॥186॥

ಆಗ ವರುಣ ಕುಬೇರ ಯಮ ಮುಂ ।
ತಾಗಿಯಾಯುಧ ದಿವ್ಯ ಶರಗಳ ।
ಬೇಗ ಪೊಡೆಯಲು ಮುರಿದ ಮರುತಜ । ವೇಗವಾಗೀ ॥187॥

**ರಾಗ ಪಂತುವರಾಳಿ, ುಟ್ಟೆತಾಳ**

ಎಲವೂ ದೈತ್ಯಕುಲಕೆ ಕಡೆಯ । ಕಾಲವೆನುತಲೀ ॥
ಮುಳಿದು ಮುಷ್ಟಿಯಿಂದ ತಿವಿದ । ಖಳನ ಉರದಲೀ ॥188॥

ಕೋತಿ ಕೇಳೊ ನಿನ್ನಬಲದ । ರೀತಿ ಬಲ್ಲೆನೂ ॥
ಆತ ರಾವಣೇಂದ್ರ ನಿನ್ನ । ಖ್ಯಾತಿಯಳಿದನೂ ॥189॥

ಬಾಲಸುಡಕನೆಂಬ ಪೆಸರ । ಕೇಳಿ ಬಲ್ಲೆವೂ ॥
ಮೇಲೆಶಿರಗಳುಳಿವುಪಾಯ । ಉಳಿದುದಿಲ್ಲವೂ ॥190॥

ಬಾಲವಳಿದ ಮೇಲೆ ಅದರ । ಮೂಲವಳಿದುದೂ ॥
ಖೂಳ ದನುಜರಿಂಗೆ ಅದರೊ । ಳ್ಕಾಲವಾದದೂ ॥191॥

ಬಾಲ ಸತ್ವ ತೋರ್ಪೆ ಎನುತ । ಬಾಲದಿಂದಲೀ ॥
ಕಾಲ ಹಿಡಿದು ತಿರುಗಿ ಬಡಿದ । ಲೀಲೆಯಿಂದಲೀ ॥192॥

ಧರೆಗೆ ಬಡಿಯೆರುಧಿರ ಸೂಸೆ । ಶಿರಗಳೊಡೆಯಲೂ ॥
ಭರದೊಳಸುವ ತೊರೆದು, ಕಾಲ । ನೆಡೆಗೆ ಸರಿಯಲೂ ॥193॥

**ಭಾಮಿನಿ**
ತರಳರಿರ ನೀವ್ಕೇಳಿ ರಾಮನ ।
ಪರಮ ಭಕ್ತನು ಮರುತಸಂಭವ ।

ಧುರದಿ ಅಸುರನ ಕೆಡಹಲಾಕ್ಷಣ ಸುರರು ಹರುಷದಲೀ ||
ಸುರಿದರಾ ಸುಮಗಳನು ರಾಕ್ಷಸ |
ಚರರು ನಡೆತಂದಾಗ ವಾರ್ತೆಯ |
ನರುಹಿದರು ಬೇಗದಲಿ ಮಾರೀಮುಖನೊಳಾಕ್ಷಣಕೇ ||194||

**ಕಂದ**

ಅರುಹಲು ಕೇಳ್ದಾ ದನುಜಂ |
ಮರುಗುತೆ ತನ್ನನುಜರೊಡನರುಹಲ್ ಭರದಿಂ ||
ಶಿರಮಂ ತೂಗುತ ಧುರವಿಜ |
ಯರಾವಿಹೆವೆನುತ ತತ್ಕ್ಷಣ ಪೊರಟರ್ಖಳನನುಜರ್ ||195||

**ರಾಗ ಕೇತಾರಗೌಳ, ಝಂಪೆತಾಳ**

ಬಿಡು ಮನದ ಚಿಂತೆಗಳನೂ | ಸಂಗರಕೆ |
ಮಡ ತಾನೆ ಬರಲವನನೂ ||
ಹಿಡಿದು ಶಿರಗಳನ್ನೆದನೂ | ಕೊಯ್ದು ಯಮ |
ನೆಡೆಗೆ ಕಳುಹುವೆ ರಾಮನೂ ||196||

ಮಡದಿಗೋಸುಗ ಬಂದನೇ | ನೋಡವನ |
ಒಡಲ ಬಗೆಯದಿರಸುರನೇ |
ಹಿಡಿಯದಕೆ ನಂಬುಗೆಯನೂ | ಕೊಡುವೆನಾ |
ನಡೆ ಮನೆಯೊಳಿರು ಎಂದನೂ | ||197||

ಸಾರಥಿಯ ಕರೆದು ಬೇಗಾ | ರಥಗಳಾ |
ನೂರುಸಾವಿರ ಸಹಿತಲೀಗಾ ||
ಬರಲಿ ಪಟುಭಟರೀಕ್ಷಣಾ | ಐವತ್ತ |
ಆರು ಪದ್ಮವು ತತ್ಕ್ಷಣಾ ||198||

**ವಾರ್ಧಕ**

ಕುಶನೆ ಕೇಳಾ ಮತ್ತೆ  ಕೂಡಿಸಿದ ಸೈನ್ಯಮಂ |
ರಸನೆಯೊಳ್ ಲೆಕ್ಕಿಸಲ್ಕಸದಳವು ಶೇಷಂಗೆ |
ಅಸಮಬಲದಾನವಂ ವಜ್ರನೆಂಬನುಜನಂ ಕೂಡಿ ತಾ ನಡೆತಂದನೂ ||
ವಸುಧೆಯದುರಿತು ಮೇರುಶೈಲಮಲ್ಲಾಡಿದುದು |
ಬಸವಳಿದ ಕೂರ್ಮನೆದೆಗೆಟ್ಟಷ್ಟ ದಿಗ್ದಂತಿ |
ವಶವಳಿದು ಘೀಳಿಡಲು ಕಡಲುಕ್ಕಿತೆಂಬಂತೆ ಧರೆಗರುಣ ಮಳೆ ಸುರಿದುದೂ ||199||

**ಭಾಮಿನಿ**

ಆದುದೀ ಉತ್ಪಾತ ಶಕುನವ ।
ಶೋಧಿಸದೆ ನಡೆತಂದು ಕಪಿಗಳ ।
ಬಾಧಿಸಲಿಕಜಸುತನು ಕಂಗಳ ಜೂಬುಗುದುಲುಗಳಾ ॥
ಸೇದಿಸುತ ಕರತಳದಿ ಮೇಲಕೆ ।
ಕಾದುವರೆ ನಾವಿಹೆವು ಎಂದನು ।
ತಾದರಿಸಿನಿಂದಿರ್ದ ಸಂಧಿಸಿ ಖಳನ ಸಮ್ಮುಖದೀ ॥200॥

**ಕಂದ**

ಜಾಂಬವ ನಡೆತರಲಾಗಳ್ ।
ಸಂಭ್ರಮದೊಳ್ ತಾ ವಜ್ರಮುಖನೆಂಬ ದನುಜಂ ।
ಕುಂಭಿನಿ ನಡುಗೆ ಗರ್ಜಿಸುತಂ ।
ಮುಂಬಲಕನುವಾಗುತೆ ರೋಷದೊಳಿಂತೆಂದಂ ॥201॥

**ರಾಗ ಸೌರಾಷ್ಟ್ರ, ಅಷ್ಟತಾಳ**

ವದ್ಧರಯ್ಯ ನಿಮಗೀಗಾ ।
ಬುದ್ಧಿಸಾಲದೆಮ್ಮೊಡನೆ ।
ಗಡ್ಡವಾಡಿಸುತ್ತ ಬಂದೆ । ವದ್ಧವಾನರಾ ॥202॥

ಹದ್ದಿನಂತ ರಟ್ಟೆಯೊಳೂ ।
ಎದ್ದುತೋರುತಿದೆ ಎಲವು ।
ಕದ್ದ ಕಳ್ಳರಂತೆ ಎಮ್ಮ । ಗದ್ದಿಪೆ ಯಾಕೈ । ॥203॥

ಕಳ್ಳನಾದ ರಾವಣಂಗೆ ।
ಒಳ್ಳಿದನ್ನು ಮಾಡ ಬಂದೆ ।
ಮಳ್ಳು ಭೂತಗಳಿಗೆ ಬಲಿಯ । ಕೊಡುವೆನೀಕ್ಷಣಾ ॥204॥

ಕೇಳು ಮುದಿಗೂಗೆನಿನ್ನಾ ।
ಪೇಳುವಂತ ನಾಮವೇನು ।
ಕೇಳಬೇಕೆಂಬಾಸೆಯೆನಗೆ । ಬಹಳವಾಗಿದೇ ॥205॥

ಕೇಳಬೇಕೆ ಎನ್ನ ಪೆಸರ ।
ಕೇಳಲೇನು ಸಿಗುವುದಯ್ಯ ।
ಪೇಳುವೆನು ನಾನು ನಿನಗೆ । ಕೇಳು ರೇಣಾರ್ಚಿತನಾ । ॥206॥

ಸೀಳಿದಾ ಹನುಮ ಮುಂದೆ ।
ಆಳುವಂತ ಪದವಿಯನ್ನು ।
ಪಾಲಿಪಂತ ಬ್ರಹ್ಮಪುತ್ರ । ಜಾಂಬವಂತನೂ । ॥207॥

**ಭಾಮಿನಿ**

ಸೃಷ್ಟಿಯನು ನಿರ್ಮಿಸಿದ ಅಜನೊಳು ।
ಪುಟ್ಟದನೆ ನೀನೆನುತಲಾ ಖಳ ।
ನಟ್ಟಹಾಸದಿ ನಗುತ ಶೂಲವ ಹೊಡೆಯಲಾಕ್ಷಣದೀ ॥
ಮುಟ್ಟಿಮುರಿಯುತ ಜಾಂಬವನು ತಾ ।
ನಟ್ಟಿ ಖಳನನು ಪಿಡಿದು ಕಾಲಲಿ ।
ಕಟ್ಟದೆಯ ತುಳಿಯಲ್ಕೆ ಬಿದ್ದನು ಬೆಟ್ಟದಂದದಲೀ ॥208॥

**ವಾರ್ಧಕ**

ವಜ್ರಮುಖನೆಂಬಸುರ ಬೀಳಲ್ಕೆ ದಾನವರ ।
ಗರ್ಜನೆಯೊಳೈ ತಂದನಾ ಪ್ರಲಂಭಾಸುರಂ ।
ಪ್ರಜ್ವಲಿಪ ಶಿಖಿಯಂತೆ ತೋರ್ದನಾ  ಕಪಿ ಬಲದೊಳರ್ಧಚಂದ್ರಾಕೃತಿಯೊಳೂ ॥
ನೊರ್ಜುಗಳಿಂಗಜುವುದೆ ಮಹಮೇರುಪರ್ವತವು ।
ವಜ್ರದಿಂ ಸಲೆ ಜಯಿಸಲೊಲ್ಲದೊಡೆ ಮಿಕ್ಕದರೊ ।
ಳು ಜಯವಾಗದೆಂದೆನುತನಿಲಜಂ ನಿಮಿಷದೊಳ್ ಕೊಂದನೇಳರ್ಬುದವನೂ ॥209॥

**ಭಾಮಿನಿ**

ಮಾರುತಿಯ ಕರಹತಿಗೆ ದುರುಳನ ।
ಭೂರಿ ಸೇನೆಯು ಕಾಲನೂರನು ।
ಸೇರೆ ರೋಷಾವೇಶದಿಂದ ಪ್ರಲಂಭಾಸುರನೂ ॥
ಭಾರಿ ಶಸ್ತ್ರಾಸ್ತ್ರಗಳ ಧರಿಸುತ ।
ಘೋರ ದೈತ್ಯನು ಸೆರಿ ಬರುತಿರೆ ।
ಮಾರುತಿಯ ಕಂಡಾಗ ತ್ವರಿತದಲಸುರಗಿದಿರಾದಾ ॥210॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಯಾತಕೆ ವಜ್ರನೆಂಬಸುರನಾ । ಕೊಂದ ।
ಪಾತಕಿ ಸಿಕ್ಕಿದೆಅಡಗಿಹನಾ ॥
ಭೀತಿಯಿಲ್ಲದೆ ಸೀಳ್ವೆನೂ । ಎಂದು ।
ಖಾತಿಯೊಳ್ನುಡಿದಪ್ರಲಂಭನೂ ॥211॥

ಹತ್ತು ಸಾವಿರ ಶರಗಳನೂ । ಮದೋ ।
ನ್ಮತ್ತಹನುಮನಿಗೆಸದನೂ ॥
ಮತ್ತುವ ನಿನಗೀವನೆಂದನೂ । ವಾಯು ।
ಪುತ್ರ ಬಿಡದೆ ತಾ ಮುರಿದನೂ ॥212॥

ಉಂಡು ಸೊಕ್ಕಿದ ಖೂಳ ನಿನ್ನ । ಬಾರೆಲೊ ।
ರುಂಡವೀಗಿಳಿಸುವೆ ಕೇಳೆಲೊ ॥
ಭಂಡ ರಕ್ಕಸ ನಿನ್ನಸುವನೂ । ಯಮ ।
ಕುಂಡಕೆ ನೂಕಿಸಿ ಬಿಡುವೆನೂ ॥213॥

**ರಾಗ ಪಂತುವರಾಳಿ, ರೂಪತಾಳ**

ಎಲವೂ ಖೂಳ ಸುರರೊಳ್ಕಾದಿ ।
ಗೆಲುವ ಕಾಣದಂಜುತೋಡಿ ।
ತಲೆಯ ಮರೆಸಿಕೊಂಡು ವಿತಳ । ದಲ್ಲಿ ಹರುಷದೀ ॥
ನಿಳಯವನ್ನುರಚಿಸಿಕೊಂಡು ।
ಬಳಗ ಸಹಿತಲಿರ್ದು ಮತ್ತೆ ।
ಖಳನಿಗಾಗಿ ವ್ಯರ್ಥನಮಗೆ ತಲೆಯ ತೆರುವೆಯಾ ॥214॥

ಬರಿದೆ ಸಾಯಬೇಡವಿನ್ನು ।
ಕರವ ಮುಗಿದು ರಾಮನೊಡನೆ ।
ಚರಣಕೆರಗಿ ಬೇಡಿಕೊಳಲು । ಪೊರವ ಕರುಣದೀ ॥
ಧುರಸಮರ್ಥನಾದಡೀಗ ।
ಪರಮ ಶಸ್ತ್ರಗಳನುಪಿಡಿದು ।
ಭರದಿ ರಥವನೇರಿ ಕೈಯ । ಗುರಿಯ ತೋರೆಲೋ ॥215॥

ಅಷ್ಟರೊಳಗೆ ಧನುಜ ರಥವ ।
ಥಟ್ಟನೇರಿ ಪೊಯ್ಬುತಿರಲು ।
ಸಿಟ್ಟಿನಿಂದಹನುಮ ರಥವ ।  ಮೆಟ್ಟಿ ಮುರಿದನೂ ॥216॥
ಆಗ ಪ್ರತಿ ರಥವನೇರ್ದು ।
ತಾಗಲದರ ಮೆಟ್ಟಿ ಮುರಿಯೆ ।
ಬೇಗದಿಂದ ತೇರನಡರೆ । ರೇಗಿ ಮುರಿದನೂ ॥217॥

**ಭಾಮಿನಿ**

ಕನಕರಥ ಹದಿನೆಂಟು ಸಾವಿರ ।
ವನಿತುವಜಿಗಿಜಿಯಾಗುತಿರಲಾ ।
ಅಕನ ಯೋಚಿಸುತಿರ್ದ ತನ್ನಯ ತನುವನುರೆ ಮರೆದೂ ॥

ಧನುಜ ರಾವಣನನ್ನು ಮನದಲಿ ।
ನೆನೆದು ಯೋಚಿಸುತಿರಲಿಕಾಕ್ಷಣ ।
ಚಿನಿಮಯಾತ್ಮಕಭಕ್ತ ಪೊಯ್ದನು ಮರನ ಕೊಂಬೆಯಲೀ ॥218॥

**ರಾಗ ಪಂಚಾಗತಿ, ಮಟ್ಟೆತಾಳ**

ರಥವ ಮುರಿಯಲಾಗ ಧನುಜ ।
ಪ್ರತಿರಥವನೇರಿಕೊಂಡು ।
ಖತಿಯೊಳೆಚ್ಚನಾಗ ದಿವ್ಯ । ವಜ್ರದೇಹನಾ ॥219॥

ವಿತಳದೇಶದರಸ ನನುಜ ।
ಪ್ರತಿಭಟಾಖ್ಯ ಬಂದೆನಿದಕೊ ।
ಗತಿಯ ತೋರ್ಪೆನೆನುತಹನುಮ । ಖತಿಯೊಳ್ಪೊಯ್ದನೂ ॥220॥

ಭಳಿರೆ ಹನುಮ ಸಹಸವನ್ನು ।
ತಿಳಿಯದಾದೆನುತ್ತ ಚಾಪ ।
ವೆಳೆದು ಸುರಿದನಾಗ ಕೋಲ । ಮಳೆಯ ಗಜರುತಾ ॥221॥

ತಿಳಿಯದಾದೆನಹುದೊ ನಿನ್ನ ।
ತಿಳಿವಪರಿಯ ನೋಡೆನ್ನುತ್ತ ।
ಮುಳಿದು ಮುಷ್ಟಿಯಿಂದ ತಿವಿದ । ಖಳನಉದರವಾ ॥222॥

ಭೂರಿರೋಷದಿಂದ ಹನುಮ ।
ಭಾರಿ ಮರದಿಪೊಡೆಯೆ ರಕುತ ।
ಕಾರಿ ಬಿದ್ದನಾಗ ದನುಜ । ಧಾರುಣೀಯಲೀ ॥223॥

**ಭಾಮಿನಿ**

ಕುಶನೆ ಕೇಳಿನ್ನೇನ ಹೇಳುವೆ ।
ನಸುರ ಮಾರೀಮುಖನ ಅನುಜರು ।
ಅಸುವ ತೊಲಗಿದ ಬಳಿಕ ಚರರಿಗೆ ಬರೆದು ಸುಣ್ಣವನೂ ॥
ಉಸುರಿ ನಿಮ್ಮಯ ದೊರೆಗೆ ಸಂಗರ ।
ವೆಸಗದಿರೆ ಪಟ್ಟಣವನಗ್ನಿಯ ।
ವಶಗೊಳಿಪೆನೆಂದಟ್ಟೆ ಮಾರೀಮುಖಗೆ ಪೇಳಿದರೂ ॥224॥

**ರಾಗ ಸಾರಂಗ, ಆದಿತಾಳ**

ಲಾಲೀಸು ಬಿನ್ನಪವಾ । ಸಂಗರದೊಳೀಗಾ
ಲಾಲೀಸು ಬಿನ್ನಪವಾ ॥ ಪಲ್ಲವಿ ॥

ದೊರೆಯೆ ಪೇಳುವುದಿನ್ನೇನೂ । ಸಂಗರದಿಂದ ।
ಹರಣವುಳಿದು ಬಂದೇವೂ ॥
ಅರಹುವುದೇನಿನ್ನು ವಜ್ರಮುಖನ ಕುಟ್ಟಿ ।
ಭರದಿಪ್ರಲಂಭನ ಶಿರವನರಿದು ಮತ್ತೆ ॥225॥

ಪರಿಕಿಸಿ ನೀ ನೋಡಯ್ಯ । ನಮಗಾದ ಭಂಗ ।
ವಿವರಿಸಲಳವವೆ ಜೀಯಾ ॥
ಬರೆದು ಮೂಗಿಗೆಸುಣ್ಣ ತರುಚರನಟ್ಟಿದ ।
ಧೊರೆಯೊಳಗರುಹಿ ನೀವೆನುತ ಪೇಳಿದ ಮತ್ತೆ ॥226॥

ಅರುಹಿ ನಿಮ್ಮೊಡೆಯನಿಗೆ । ಸಂಗರಕವ
ಬರಲಿಯೆಂದೆನುತ ಹೀಗೆ ।
ಕರೆದು ಪೇಳಿದನೀಗ । ತೆರಳಾದೆ ಕುಳಿತರೆ ।
ಪುರವನುರಿಪೆನೆಂದು ಭರದಿಂದಲಟ್ಟಿದಾ ॥227॥

**ಭಾಮಿನಿ**

ಚರರ ವಾಕ್ಯವ ಕೇಳ್ದು ಮನದೊಳು ।
ಮರುಗಿ ತನ್ನಯ ತರಳರನುಜರ ।
ಮರಣವನು ನೆನೆನೆನೆದು ಕರೆಸಿದ ವರ ಘಟೋದರಿಯಾ ॥
ತರಳೆ ಕೇಳಿಂದಿನಲಿ ರಾಮನು ।
ವರಕುಮಾರರ ಸಹಿತಲನುಜರ ।
ಶಿರವರಿದು ಮೆರೆದಿಹನು ಹನನವ ಗೈದು ಬಾರೀಗಾ ॥228॥

**ರಾಗ ಭೈರವಿ, ಝಂಪೆತಾಳ**

ತಂದೆ ನೀವಿನಿತ್ಯಾಕೆ । ನೊಂದುಕೊಳುವಿರಿ ಮನದಿ ।
ಬಂದ ಕಪಿಗಳನೆಲ್ಲ । ತಿಂದು ತೇಗುವೆನೂ ॥229॥

ಪತಿ ನಿನ್ನೆ ರಾಘವನ । ಖತಿಯೊಳಗೆ ಪಿಡಿತಂದು ।
ಕ್ಷಿತಿಯೊಳಗೆ ಮತ್ತೋರ್ವ । ರರಿಯದಂದದಲೀ ॥230॥

ಮಡಗಿರಲು ದುರುದುಂಡಿ । ನುಡಿದು ಮರುತಜನೊಡನೆ ।
ಕಡೆಗೆ ಕೊಲಿಸಿದಳೆನ್ನ । ಒಡಯನಿರುಳಿನಲೀ ॥231॥

ಒಡಗೊಂಡುರಾಘವನ । ನಡೆದ ಮರುತಜನಿಂಗೆ ।
ಬಿಡುವೆನೇ ನಾನಾವನ । ಕೊಡು ತನಗೆ ನೇಮಾ ॥232॥

ರಾಘವನ ಸೇನೆಯನು । ಸಾಗಿಸುತ ಯಮಪುರಿಗೆ ।
ಈಗ ಪಿಡಿತಹೆನೆನುತ । ಸಾಗಿದಳು ಬೇಗಾ ॥233॥

**ವಾರ್ಧಕ**

ಲವನೆ ಕೇಳ್ಬಳಿಕಲ್ಯೆರಾವಣಾಖ್ಯನ ಸತಿಯು ।
ತವಕದಲಿವರ ಘಟೋದರಿಯೆಂಬ ದಾನವಿಯು ।
ಭುವನದಂತ್ಯದ ಸಿಡಿಲ ರವದಂತೆ ಘರ್ಜಿಸುತ ರಣಕಾಗಿ ನಡೆತಂದಳೂ ॥
ದಿವಿಜರೆಲ್ಲರು ಭೀತಿಯಿಂದಲೋಡುತಲಿರಲು ।
ಅವನಿಪತಿ ಶ್ರೀರಾಮನೆಂತು ಜಯಿಸುವೆನೆನುತ ।
ಕವ ಕವಿಸುತಿರಲಿತ್ತ ದಾನವಿಯು ಹರಿತರಲ್ಪ್ರಳಯಭೈರವಿಯಂದದೀ ॥234॥

**ಕಂದ**

ರಕ್ಕಸಿ ಕಾಣುತ ಮನದೊಳ್ ।
ಶಿಕ್ಕಿದರಿವರೆಂದೆನುತಲಿ ಬಲುತೋಷಿಸುತಂ ॥
ಅಕ್ಕರದಲಿ ತಾ ರಾಮನ ।
ತೆಕ್ಕರುಳನು ತಿನ್ನುವೆನೆನುತ್ಯೆತರಲಾಗಂ ॥235॥

**ರಾಗ ಭೈರವಿ ಏಕತಾಳ**

ದೂರದಿ ಬಹ ರಕ್ಕಸಿಯಾ । ಕಪಿ ।
ವೀರರು ಕಾಣುತಚ್ಚ ರಿಯಾ ॥
ವಾರಿಜಭವನೆಂತಿವಳಾ । ಧರೆ ।
ಭಾರಕೆ ರಚಿಸಿದನಿವಳಾ ॥236॥

ತೋರುವದೇನಿದು ಗಿರಿಯೊ । ಖಳ ।
ನಾರಿಯ ಹದಯದ ಮೊಲೆಯೊ ॥
ಸಾರುತ ಬೃಹಳು ದಾನವಳೂ । ಒಂದೇ ।
ಬಾರಿಗೆ ಪಿಡಿದು ತಿನುವಳೂ ॥237॥

ಹಲುಗಳು ನೋಡಿದರಿವಳಾ । ಕಪಿ ।
ಕುಲಗಳು ಒಂದೆ ಕಬಳಾ ॥
ಬಲು ಕೋಪದಿಯಡ್ಡಗಟ್ಟಿ । ಬರೆ ।
ಕಲಿ ಹನುಮನು ಭುಜ ತಟ್ಟಿ ॥238॥

ನಳ ನೀಲಾಂಗದರುಮರೂ । ಶತ ।
ಬಲಿ ಗವಯನು ಜಾಂಬವರೂ ॥

ಬಲುತರ ಕೋಪದಿ ಹನುಮಾ । ರಿರೆ ।
ನಿಲಿಸಿದನಾ ರಾಮಾ ||239||

ಬಲುಹುಳ್ಳ ಭಟರೆ ಕೇಳಿ । ನಿಮ್ಮ ।
ಬಲುಮೆಗೆ ಸರಿಯೆ ನಿವಾಳಿ ||
ಕೊಲುವುದುಚಿತವಿದಲ್ಲಾ । ಮಾನ ।
ವಳಿದರೆ ಮತವಹುದಲ್ಲಾ ||240||

ಗಂಡನ ಕಳಕೊಂಡಿಹಳೂ । ಸ್ವಾಮಿ ।
ದಿಂಡೆತನದಿ ಬಾಳುವಳೂ ||
ಕೊಂದಲ್ಲದೆ ಬಿಡೆ ನಾವೂ । ಇವ ।
ಳಂದವ ನೋಡಿರಿ ನೀವೂ । ||241||

ಇಂದಿರೆಯರಸನೆ ರಾಮಾ । ಈಗ ।
ಸಂದರೆ ಇವಳತಿ ಕ್ಷೇಮಾ ||
ಬಂದ ದಾರಿಯ ನಾ ತೋರಿ । ಇವಳ ।
ಕೊಂದು ಹರಹುವೆವೀಸಾರಿ ||242||

ಅಟ್ಟುತನಿವಳನು ಭರದಿ । ಬೇಗ
ತಟ್ಟನೆ ಕೊಲುವೆನು ರಣದಿ ||
ಕುಟ್ಟುವೆ ತಲೆಯನು ಬೇಗಾ । ಎನೆ ।
ಸೃಷ್ಟಿಪ ನಿಲಿಸಿದನಾಗ । ||243||

**ವಚನ**

ರಘುವರನಿಂತೆನೆ ಕೇಳ್ದು ಕಪಿವರರೆಲ್ಲರು ಸುಮ್ಮನೆ ಇರುತಿರಲಾಗಳ್ ।
ಮುಗದೆ ದಾನವಿ ತಾನು ಜಗದುದರನೊಳ್ ವಾಚಿಸುತೀರ್ದಳದಂತನೆ ||243||

**ರಾಗ ಘಂಟಾರವ, ಆದಿತಾಳ**

ಯಾರೆಲೊ ಮನುಜ ನೀನೀಗಾ । ಬಂದ ।
ವಾರೆತೆಯನು ಕೇಳಿಬಂದೆ ನಾನೀಗಾ || ಪಲ್ಲವಿ ||

ಜಾರಿ ಹೋಗಲು ಬಿಡೆನೀಗಾ । ನಿನ್ನ ।
ಪಾರಣೆಯನು ಮಾಡಿಬಿಡುವೆ ನಾನೀಗಾ || ಅನುಪಲ್ಲವಿ ||

ನರಮಾಂಸ ವನು ನಾನು ಮೆಲ್ಲದೆ || ಆರು ।
ವರುಷಗಳಾಯಿತು ತುಡುವೆದ್ದುನಲಿವೆ ||

ಕರದೊಯ್ವೆನಿವರನು ಕೊಲ್ಲದೆ । ನಾನು ।
ಭರದಿ ಪಿಡಿದೆನೆಂದುತಂದೆಯೊಳೊರೆವೆ । ॥244॥

ಮನೆದೇವತೆಯ ಪೂಜೆಮಾಡ್ದು । ನಾನು ।
ಘನವಾಗಿ ಮಾಂಸಗಳನು ಪಾಕ ಮಾಡ್ದು ॥
ನೆನೆದ ಕಾರ್ಯವ ಕೈ ಗೊಡ್ದು । ಎನ್ನ ।
ಮನದಿಷ್ಟವೀಯೆಂದು ಶಿರವ ಚಂದಾಡ್ದು । ॥245॥

ಹೊಟ್ಟೆ ಕರುಳನೆ ತೆಗೆವೆ । ತಾನು ।
ತಟ್ಟನೆ ರಕ್ತದೋಕುಳಿಯ ಲೋಲಾಡ್ವೆ ॥
ನೆಟ್ಟನೆ ಚರ್ಮವ ಸುಲಿವೆ । ಅದರ ।
ಮೊಟ್ಟೆಯಂದದಿ ಯೆಣ್ಣೆಲಿಕ್ಕಿ ಹುರಿವೆ ॥246॥

ಎದೆಯ ಗುಂಡಿಗೆಯನ್ನೆ ಮುರಿದೂ । ಬಲು
ವಿಧದಿ ಪಾಕವ ಮಾಡಿ ನಲಿದೂ ॥
ಮದುವೆಯಾದನ ಬೇಗ ನೆನದೂ । ಮತ್ತೇ ।
ಚದುರತನದಿ ತಿಂಬೆ ನಲಿದೂ ॥247॥

ಎಂಟು ಭಾಗವ ಮಾಡಿ ಕೊರೆವೆ । ಮುಂದೆ ।
ಶುಂಠಿ ಸಂಭಾರ ಸಾಸಿವೆಯನು ಬೆರೆವೆ ॥
ನೆಂಟರಿಷ್ಟರನೆಲ್ಲ ಕರೆವೆ । ಇಂದು ।
ಪಂಟಿಯ ಮಾಡಿ ಸಂತೋಷದಿಂದರುವೆ ॥248॥

ಎನುತ ರಕ್ಕಸಿ ಪೇಳಲಾಗಾ । ರಾಮಾ ।
ಮನದಿ ಹಿಗ್ಗುತಶೂರ್ಪನಖಿ ಯೆಂದೀಗಾ ॥
ಅನುಜ ಲಕ್ಷ್ಮಣ ನೋಡು ಬೇಗಾ । ನೀನು ।
ಧನುವ ಪಿಡಿದು ಇತ್ತ ಬಾರೆಂದನಾಗಾ ॥249॥

**ಭಾಮಿನಿ**

ಇತ್ತ ನೋಡೈಯನುಜ ಮೊದಲಲಿ ।
ಸತ್ತ ತಾಟಕಿಯಲ್ಲಲೇಯೆನು ।
ತೆತ್ತಿ ಕರಗಳ ನೆಗಹಿ ನುಡಿದ ಸುಮಿತ್ರೆಯಾತ್ಮಜಗೇ ॥
ಮತ್ತೆ ಬಂದಿದೆ ನಿನ್ನ ಭಾಗದ ।
ಮತ್ತ್ಯು ನೋಡೈ ಅನುಜ ಇವಳನು ।
ಸತ್ತು ಹೋಗದ ತೆರದಿ ನಾಸಿಕ ಕೆತ್ತಿಬಿಸುಡೆಂದಾ ॥250॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಅಣ್ಣನಾಜ್ಞೆಯ ಕೇಳಿ ಲಕ್ಷ್ಮಣ ।
ಕಣ್ಣಿನೊಳು ಕಿಡಿಸೂಸೆರೋಷದಿ ।
ಮಣ್ಣುಗೂಡಿಸಿ ಬಿಡುವೆನಸುರರ । ಹೆಣ್ಣನೀಗಾ ॥251॥

ಕಣ್ಣಿಗಚ್ಚರಿಯಾದ ಕೌತುಕ ।
ಯೆಣ್ಣಿಸುತ ಶಾಕಿನಿಗೆ ಔತಣ ।
ಉಣ್ಣ ಬಡಿಸುವೆನಸುರ ಮಾಂಸದೊ । ಳಣ್ಣ ಕೇಳೂ ॥252॥

ಹುಣ್ಣಿಮೆಯ ಶಶಿಯಡಗಿ ಪೊದರು ।
ಪುಣ್ಯವಾರುಧಿ ವಿತಳಕಿಳಿದರು ।
ಗಣ್ಯವೇ ಎನಗೀಗ ನಿಮ್ಮಯ । ಪುಣ್ಯಬಲದೀ ॥253॥

**ರಾಗ ನೀಲಾಂಬರಿ, ಮಟ್ಟೆತಾಳ**

ಅನುಜ ಲಕ್ಷ್ಮಣಾ । ಮಮ ಮನೋಹರಾ ।
ದನುಜ ಜನ್ಮದಾ । ತರುಣಿಯಲ್ಲವೆ  ॥254॥

ಕೊಲಲು ಬಾರದು । ಕೊಂದರೀಗದು ।
ಕುಲಕೆ ಕುಂದಯ್ಯ । ಮಾತ ಕೇಳಯ್ಯ ॥255॥

**ರಾಗ ನೀಲಾಂಬರಿ, ರೂಪಕತಾಳ**

ಅಣ್ಣ ರಾಘವಾ ಅಸುರೆ ತಾಟಕಿ ।
ಗಣ್ಯವಿಲ್ಲದೆ ಅರಣ್ಯ ಮಧ್ಯದಿ ॥
ಕಣ್ಣ ಹಬ್ಬವ ಮಾಡಿ ಮುನಿಗಳಾ ।
ಮನ್ನಿಸುತ್ತಲೆ ಕೊಂದುದಿಲ್ಲವೆ ॥256॥

ಮುನಿಪ  ಕೌಶಿಕ ಪೇಳ್ದ ಮಾತಿಗೆ ।
ಘನಮದಾಂಧೆಯ ಕೊಂದೆನಾಕೆಯಾ ।
ಇನಿತುಮಲ್ಲದೆ ಮಮ ಸ್ವತಂತ್ರದಿ ।
ದನುಜೆಯಾಕೆಯಾ ಕೊಂದುದಿಲ್ಲಯ್ಯ ॥257॥

ಪುಣ್ಯವಾರುಧಿ ನಿಮ್ಮನುಜ್ಞೆಯೊಳ್ ।
ಹೆಣ್ಣೊಮೂಳಿಯ ಕೊಲ್ವೆನೀಕ್ಷಣಾ ॥
ಅಣ್ಣ ದೇವನೆ ಅಲಸವೇತಕೊ ।
ಮಣ್ಣಿಗಿಕ್ಕುವೆ ಭ್ರಷ್ಟೆ ದನುಜೆಯಾ ॥258॥

ಘನಪರಾಕ್ರಮಿ ಕೇಳು ಅಸುರೆಯಾ ।
ಘನಕುಚದ್ವಯಗಳನು ನಾಸೆಯಾ ॥

ಕನಲಿ ಕೊಯ್ವುದು ಉಳಿದ ಕಿವಿಗಳಾ ।
ಎನಗೆ ಸನುಮತವೆನುತಪೇಳ್ದನೂ ॥259॥

**ಭಾಮಿನಿ**

ಅಗ್ರಜನ ನೇಮದಲಿ ಲಕ್ಷ್ಮಣ ।
ಶೀಘ್ರದಲಿ ದಾನವಿಯ ಕುಚವಕ ।
ರಾಗ್ರದಿಂ ಪಿಡಿದೆತ್ತಿ ಕೆತ್ತಿದನಾಗ ಕಿವಿಮೂಗಾ ॥
ನಿಗ್ರಹಿಸಿ ಬಿಡಲಾಗ ದಾನವ ।
ವರ್ಗದಲಿ ತಾ ಜನಿಸಿದಾದಡಿ ।
ವರ್ಗೆ ಬಿಡುವೆನೆನುತ್ತ ಹಾಯ್ದಳು ತನ್ನ ಪಿತನೆಡಗೇ ॥260॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಅತ್ತಲಾ ದಾನವಿಯು ಭಾಷೆಯ ।
ಹೊತ್ತು ತೆರಳಲಿಕಾಗ ಲಕ್ಷ್ಮಣ ।
ನಿತ್ತ ರಾಮನ ಚರಣದೆಡೆಗೈ । ವುತ್ತಲಾಗಾ ॥261॥

ಅತ್ಯಧಿಕ ಹರುಷದಲಿ ವರ ಕಪಿ ।
ಮೊತ್ತ ಸಹಿತಾ ರಾಮನಿರುತಿರ ।
ಲತ್ತ ದಾನವನಿರ್ದನಸುರರ । ಮೊತ್ತವೆರಸೀ ॥262॥

**ಭಾಮಿನಿ**

ಅತ್ತಲಾ ದನುಜೇಶ ಮುತ್ತಿನ ।
ಸತ್ತಿಗೆಯ ನೆರಳಿನಲಿ ಖಳನೆಂ ।
ಭತ್ತು ಸಾವಿರ ರಥಿಕರೊಡನುನ್ಮತ ಹರುಷದಲೀ ॥
ಚಿತ್ತದಲಿ ರಾಘವನ ಜಯಿಸುವ ।
ಯತ್ನವೇನೆಂದೆನುತಲಿರಲಾ ।
ಸತ್ಯದಿಂದೈತಂದು ನುಡಿದಳು ಮತ್ಯುರೂಪಿನಲೀ ॥263॥

**ಕಂದ**

ಘೋರಾರ್ಭಟೆಯಿಂದೊದರು ।
ತ್ತ ರಕ್ಕಸಿಯೈದೆ ವೇಗದಲಾತನ ಬಳಿಗಂ ॥
ನೀರೆಯರೊಳ್ ತಾನಿವಳಾ ।
ರರರೆನುತಚ್ಚರಿಯೋಳ್ಕರೆದು ತಾನುಸುರ್ದಂ ॥264॥

**ರಾಗ ಭೈರವಿ, ಝಂಪೆತಾಳ**

ಯಾರೆ ದಾನವಿ ನೀನು | ಘೋರಾಕಾರವಿದೇನು |
ಸೋರುವಾರುಣವೇನು | ಕಾರಣವಿದೇನೂ ||265||

ಅನುಮಾನವನು ಮಾಡ | ದೆನಗೆಸಾಂಗದಿ ಪೇಳು |
ಮಾನ ಸೂರೆಯಗೊಂಡು | ಶಿರವರಿವೆನವನಾ || ||266||

ಏನಹೇಳುವೆನಪ್ಪ | ಮಾನವರ ಹಿಡಿತಪ್ಪ |
ಜ್ಞಾನದಿಂದಿರುತ್ತಿಪ್ಪ | ದನುವರಿತರಪ್ಪಾ ||267||

ಹುಡುಗನೋರುವನಿಪ್ಪ | ನೋಡಿದರೆ ಕಂದರ್ಪ |
ಕಡೆಯಮಾತೇನಪ್ಪ | ಕುಚಕೊಯ್ದನಪ್ಪಾ ||268||

ಕಿವಿ ಮೂಗುಗಳಕೊಯ್ದು | ಬವಣೆಬಡಿಸುತ ಬೈದು |
ನಡೆ ನಡೆಯೆನುತೊಯ್ದು | ನುಡಿದು ಬಿಸುಸುಯ್ದೂ ||269||

ಉರಿ ಬಹಳ ಎನಗೀಗ | ಕರೆಸು ವೈದ್ಯನ ಬೇಗಾ |
ಬರಿಸು ಬೆಂಬಲಕೀಗ | ರಥಿಕರನು ಬೇಗಾ ||270||

ಹೆಂಗುಸಿವಳಿಗೆ ಮಾನ | ಭಂಗವೆಸಗಿದ ಮೇಲೆ |
ಏಂಗಡದಿ ನಾವಿದ್ದು | ಇನ್ನೇನು ಸಫಲಾ ||271||

ನೋಡು ನಿನ್ನಯ ಕುವರ | ರೀರ್ವರಾ ಶಿರಗಳನು |
ಕೆಡದಿಹನ ನೋಡೆನುತ | ನೀಡಿದಳು ಬೇಗಾ ||272||

**ಭಾಮಿನಿ**

ಶಿರವ ಕಾಣುತ ಖಳನು ತನ್ನ ಕು |
ವರರ ಶಿರವಹುದೆನುತಲೀಕ್ಷಿಸಿ |
ಕರದಿ ನೇವರಿಸುತ್ತ ಮುದ್ದಿಸಿ ಮರುಗಿ ಬಿಸುಸುಯ್ದೂ ||
ತರಳರೀರ್ವರು ಮಡಿದರೇ ವರ |
ತರಳೆಯಭಿಮಾನವನು ಕಳೆದರೆ |
ಹರ ಹರಾಯೆನುತೊಡನೆ ಮೂರ್ಛಿಸುತಾಗಲೆಚ್ಚರ್ತೂ ||273||

**ರಾಗ ನೀಲಾಂಬರಿ, ಏಕತಾಳ**

ಯಾರಿಗೆ ಪೇಳುವೆ ನಾನೂ |
ತರಳರ ಸಂಹರಿಸಿದನೂ ||
ಮರೆವುದುನಾನೆಂತಿದನೂ |
ಹರನೇ ಬಲ್ಲನು ತಾನೂ || ||274||

ರಾಘವನೆಂಬಾಮನುಜಾ ।
ನೀಗಿದರಸು ಮಮ ತನುಜಾ ।
ರ್ನಗೆ ಗೇಡಾಯ್ತೆ ಸಹಜಾ ।
ಹಗರಣಕೈದುವೆನೀಗಾ ॥275॥

ದನುಜರನೆಲ್ಲರ ಸದೆದೂ ।
ವನಚರರೆಲ್ಲರುನೆರೆದೂ ॥
ಮನ ಮರುಗಲೇನಹುದೂ ।
ಜನಪತಿ ಗರ್ವವ ಮುರಿದೂ ॥276॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಅಂಗವೇ ಸುಭಟರಿಗೆ ಹೆಂಗಸಿ ।
ನಂಗವಳಿವುದು ವಿಹಿತವೇ ಎನು ।
ತಂಗವಣೆ ಲೇಸಾಯ್ತು ಕುಭಟರ । ಭಂಗಿಸುವೆನೂ ॥277॥

ಕಾಲನಾಗಲಿ ನೀಲನಾಗಲಿ ।
ಕಾಲಕಾಲ ಕಪಾಲಿಯಾಗಲಿ ।
ಮೂಲ ನಾಲ್ಕರಶರಧಿ ಮಧ್ಯದೊ । ಳಿರಲಿ ಬಳಿಕಾ ॥278॥

ಹಿಡಿದು ತಂದಾ ಹುಡುಗರೀರ್ವರ ।
ಹಡೆಮುಡಿಯ ಕಟ್ಟುಗಿದು ಬಿಡುವೆನು ।
ಕಡೆಯ ಮಾತೇನವರ ದೇವಿಗೆ । ಕೊಡುವೆ ಬಲಿಯಾ ॥279॥

ಭರದಿ ಮಾರೀಮುಖನು ರಣಸ ।
ನ್ನದ್ಧನಾಗುತ ರಥವನೇರ್ದನು ।
ಪರಿಪರಿಯ ಬಹು ವಾದ್ಯಘೋಷದಿ । ಪೂರಟನಾಗಾ ॥280॥

**ರಾಗ ಭೈರವಿ, ತ್ರಿವುಡೆತಾಳ**

ನಡೆದನಾಗ । ಸಮರಕೆ । ನಡೆದನಾಗ ॥ ॥ ಪಲ್ಲವಿ ॥

ನಡೆದನಾಸಮಯದಲಿ ದಾನವ ।
ಪಡೆಯ ಸಹಿತೊಡಗೊಂಡು ಭೂಮಿಪ ।
ರೊಡನೆಕಾದುವೆನೆಂಬ ತವಕದಿ ।
ಘುಡಿಘುಡಿಸುತಡಿಯಿಡಲು ಮುಂದಕೆ ।
ಪೊಡವಿ ಕುಸಿದಿದು ಒಡನೆ ಫಣಿಪನ ।
ಹೆಡೆಗಳತಿ ಕುಕ್ಕರಿಸುವಂತಿರೆ ।

ಹೊಡೆವ ಭೇರಿಯ ರವ ನಿಧಾನಕೆ ।
ಮಡಸುರೇಂದ್ರಾದಿಗಳು ಬೆರಗಿಡೆ ॥  ನಡೆದನಾಗಾ ॥281॥

ಹತ್ತು ಸಾವಿರ ಭಾರಿಗದೆಗಳಿ ।
ಪ್ಪತ್ತು ಸಾವಿರ ಶರದ ಭಂಡಿ ಮೂ ।
ವತ್ತು ಸಾವಿರ ರಥಗಳನುನಾ ।
ಲ್ವತ್ತು ಸಾವಿರ ಕುದುರೆಗಳು ಐ ।
ವತ್ತು ಸಾವಿರ ರಥಿಕರೊಡನರು ।
ವತ್ತು ಸಾವಿರ ಸೇನೆಗಳು ಸಹ ।
ಮತ್ತೆಗಣನೆಗೆ ಎರಡು ಲಕ್ಷದ ।
ಹತ್ತು ಸಾವಿರವನ್ನು ಕೂಡಿಸಿ ॥ ನಡೆದನಾಗಾ ॥282॥

ಮುತ್ತಿರೋ ಮುಂಬರಿವ ಸುಭಟರ ।
ಹಸ್ತಗಳ ಬಿಗಿ ಬಿಗಿದು ಕಟ್ಟಿರೋ ।
ಕತ್ತಿಯವರೊಗ್ಗಾಗಿ ಕಪಿಗಳ ।
ಮೊತ್ತವನು ಸಂಹರಿಸಿ ಕೆಡಹಿರೊ ।
ನೆತ್ತಿ ಒಡೆವಂದದಲಿ ಸುಭಟರ ।
ಹಸ್ತಿಯಿಂದಲಿ ತುಳಿಸಿರೋಯೆನು ।
ತೆತ್ತಲಿತ್ತಲು ಹೋಗಗೊಡದಿರೆ ।
ನುತ್ತ ಖಳಪತಿ ಬೆಸಸೆ ದನುಜರು ॥ ನಡದನಾಗಾ ॥283॥

**ಭಾಮಿನಿ**

ಅವನಿಪತಿ ಕಾಣುತ್ತ ಶರಣನೊ ।
ಳಿವನುದಾರ್ರೈ ಯಿಂಥ ರಕ್ಕಸ
ರವನಿಯೊಳಗಿನ್ನೇಸು ಜನರಿದೆ ಶಿವ ಮಹಾದೇವಾ ॥
ಇವನು ಮೊದಲಲಿ ಬಂದ ಕುಂಭ ।
ಶ್ರವಣನೋ ದೇವಾಂತಕನೊ ವರ ।
ದಿವಿಜರಿಪುವೋ ಅವನಿಚೋರನೊ ಯಾರು ಪೇಳೆನಲೂ ॥284॥

**ರಾಗ ತೋಡಿ, ಅಷ್ಟತಾಳ**

ಜಲಜನಾಭನೆ ಕೇಳೂ । ಮೊದಲವನಲ್ಲಾ ।
ಕಲಹದೊಳರಿಭಟನೂ ॥ ಬಲುಧೀರ ರಕ್ಕಸ ।
ರಲಿ ಈತಗೆಣೆಯಿಲ್ಲ । ಛಲದೊಳಗತಿಶ್ರೇಷ್ಠನೂ ॥285॥

ಖೂಳರಾವಣನೀತನಾ । ಕಳುಹಿದರಿಂದ ।
ಕಾಳಗಕೈತಂದನೂ ॥ ಹೇಳುವುದೇನಿನ್ನು ।
ಖೂಳನ ಗೆಲಲಿಕ್ಕೆ । ಭಾಳಾಕ್ಷ ನೋಳ್ತೀರದೂ ॥286॥

ದೊರೆಯೆ ನೀ ದಯಮಾಡೀ । ಪೊರಟಾರೆ ರಣದೊಳು ।
ದುರುಳನ ಗೆಲಬಹುದೂ ॥ ಬರಿದೆ ಇನ್ಯಾರಿಂದ ।
ತೀರದು ಸಮರದಿ ॥ ಅಸುರನ ಕೊಲುವುದಕೆ ॥287॥

**ರಾಗ ಮಾರವಿ, ಏಕತಾಳ**

ಎನುತ ವಿಭೀಷಣ ಪೇಳುತಲಿರಲಾ ।
ಘನ ಕೋಪದಿ ರವಿಜಾ ॥
ಕನಕಾದ್ರಿಯಂದದ ಗಿರಿಯನು ಧರಿಸುತ ।
ಚಿನುಮಯಾತ್ಮಕಗೆಂದನೂ ॥288॥

ಖಳ ಮಾರೀಮುಖನೆಂಬಸುರನ ಶಿರ ।
ಹೋಳುಗಳವೆನೀಗಾ ॥
ಕೇಳಸುರರ ಬಲ ಸಹಿತೀಗ ಸಮರದಿ ।
ಸೀಳಿ ಬಿಸಾಡುವೆನೂ ॥ ॥289॥

ಅಪ್ಪಣೆಯನು ಕೊಡು ಕೊಡು ಬೇಗದೊಳಗೆನು ।
ತಿಪ್ಪವರನು ರಾಮಾ ॥
ಮುಪ್ಪಿನ ಜಾಂಬವನೋರ್ವನ ನಮ್ಮಲ್ಲಿ ।
ಒಪ್ಪಿಸಿ ನಡಿರೆಂದಾ ॥290॥

**ಭಾಮಿನಿ**

ರಾಘವನ ನೇಮದಲಿ ಕಪಿಪತಿ ।
ಸ್ತೋಮ ಸಹ ನಡೆತಂದು ನಗವನು ।
ತೂಗಿ ಬಿಟ್ಟನು ಖಳನ ಸಮ್ಮುಖಕಾಗಿ ರವಿಜಾತಾ ॥
ಬೇಗದಲಿ ರಕ್ಕಸನು ತನ್ನಯ ।
ಬಾಗೆಕಾರರು ಬಂದರೆನುತಲಿ ।
ತೂಗಿದನು ಮಕುಟವನು ಒಲೆದೊಲೆದಾಗ ಸೈಗರೆದೂ ॥291॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಎಲವೊ ಮಾರೀಮುಖನೆ ನಿನ್ನಯ ।
ಬಲುಹ ಬಲ್ಲೆನು ನಿಲ್ಲು ಸಮರದಿ ॥
ತಲೆಯ ಗೊಂಬೆನೆನುತ್ತ ರವಿಜನು । ನಲಿದು ನುಡಿದಾ ॥292॥

ಬಲ್ಲೆ ಸೂರ್ಯಕುಮಾರ ವಾಲಿಯ |
ಖುಲ್ಲ ತನದಲಿಕೊಲಿಸಿದಮನೆ ||
ಪಲ್ಲಗಳೆವೆನು, ನಿಮಿಷ ಮಾತ್ರದೊ | ಳಿಲ್ಲಿ ರಣದೀ ||293||

ಎಂದ ಮಾತನು ಕೇಳಿ ಖಳ ಖತಿ |
ಯಿಂದ ಪರಶು ಮುಸುಂಡಿ ಮುದ್ಗರ ||
ಖಂಡೆಯಾದಿ ಕಪಾಣ ತೋಮರ | ದಿಂದ ಮುದದೀ ||294||

ಬಿಡ ಬಿಡಲುಶಸ್ತ್ರಾಸ್ತ್ರವೆಲ್ಲವ |
ಕಡಿದು ರವಿಜನು ಬಡಿದು ಮರದಲಿ |
ಕಡೆಯ ಕಾಲವಿದೆನುತ ನುಡಿದನು | ಧಡಿಗಗಾಗಾ ||295||

**ರಾಗ ಪಂಚಾಗತಿ, ಮಟ್ಟೆತಾಳ**

ಎಂದು ಸೂರ್ಯಕುವರ ಖಳನ | ಬಂದು ತಿವಿದನೂ ||
ನಿಂದು ಚಪಳ ಫಡ ಫಡೆನುತ | ಲಂದು ಪೊಯ್ದನೂ ||296||

ಭಳಿರೆ ದನುಜ ಸುಭಟ ನೀನು | ಬಲು ಸಮರ್ಥನೂ ||
ಕಲಹದಲ್ಲಿ ನಿನ್ನ ಪೋಲ್ವ ಭಟರ ಕಾಣೆನೂ ||297||

ಕೇಳು ಕಪಿಯೆ ಖಳರ ಸಹಸ | ಬಲ್ಲೆಯಾ ನೀನೂ ||
ತಾಳು ತಾಳೆನುತ್ತ ಪೊಯ್ದನಾಗ ರವಿಜನೂ ||298||

ಖಳನು ಶಕ್ತಿಯಾ ಯುಧಗಳ | ಶೆಳೆದು ಪೊಯ್ದನೂ ||
ಇಳೆಗೆ ಮೂರ್ಛೆಯಾಗಿ ಬಿದ್ದ | ನಳಿನಸಖಜನೂ ||299||

**ಭಾಮಿನಿ**

ಖಳನ ಶರದುರುಬೆಯಲಿ ಭಾಸ್ಕರ |
ತನಯನಿಳೆಗೊರಗಿದನೆ ಹಾ ಹಾ |
ನಳಿನಸಖವಂಶಜನು ಕೇಳಿದರೀಗ ತನ್ನವನೂ ||
ಹಳಿಯದಿರಿ ತಾನಿನ್ನು ಸುಮ್ಮನೆ |
ಕುಳಿತೆನಾದರೆ ರಾಜಕಾರ್ಯವ |
ನಳಿದವನು ತಾನಾಪೆನೆನುತಾ ವರ ವಿಭೀಷಣನೂ ||300||

**ರಾಗ ಮಾರವಿ ಏಕತಾಳ**

ಬಾರೆಲೊ ಮಾರೀಮುಖ ನೀ ಎನ್ನೊಳು |
ತೋರಿಸು ಕೈಗುಣವಾ ||

ಬೀರುವೆ ಕರುಳನು ಶಾಕಿನಿಯರ ಪರಿ ।
ವಾರಕೆ ನಿಮಿಷದಲೀ ॥ ॥301॥

ಒಡೆಯನ ವೈರಿಯ ಕಡೆಯೆಂಜಲ ತಿಂ ।
ದೊಡಲನುಪೊರೆದಿರುವಾ ।
ಕಡುಹನು ನಿಲಿಸುವೆನೆನುತಾಕ್ಷಣ ಶರ ।
ಬಿಡೆಯೊರಗಿದ ಶರಣಾ ॥ ॥302॥

**ಕಂದ**

ಈ ಪರಿಯಿಂದಾ ಶರಣಂ ।
ತಾಪಕಿರಣಜರ್ ಹವದೊಳ್ ಬೀಳಲ್ ಹನುಮಂ ॥
ಕೋಪದೆ ಕಿಡಿಕಿಡಿಯಾಗುತು ।
ಮಾಪತಿಯಂತೆ ರೋಷಿತನಾಗುತಿಂತೆಂದಂ ॥303॥

**ರಾಗ ಸೌರಾಷ್ಟ್ರ, ಮಟ್ಟೆತಾಳ**

ಕೇಳೊ ಮಾರೀಮುಖನೆ ದುಷ್ಟ ದನುಜ ಪಾತಕಿ ।
ಖೂಳನಾವ ಬಗೆಗೆ ಬಂದೆ ನೀನಿ ಘಾತಕಿ ॥304॥

ಬಲ್ಲೆ ನಿಲ್ಲು ಯೆನುತ ಬಾಣತತಿಯ ಗರೆದನೂ ॥
ಕಳ್ಳತನದೊಳಾಗ ಮಾಯಾ ಶರವನೆಸೆದನೂ ॥305॥

ಖಳನ ಮಾಯವರಿಯದಾಗ ಮರುತಸಂಭವಾ ॥
ಮುಳಿದು ಗಿರಿಯ ಶಿಲೆಯನಿತ್ತನಂಜನೆಯ ಭವಾ ॥306॥

ಬರುವ ಗಿರಿಯದಾಯುಧಗಳ ತರಿದು ಘಾತಿಸೀ ॥
ಭರದಿ ಗುರಿಯೊಳ್ ಶಕ್ತಿಶರವ ತಿರುವಿಗೇರಿಸೀ ॥307॥

ಬಿಡಲು ಶಕ್ತಿಶರದಿ ಹನುಮ ಮೂರ್ಛೆ ಗೈದನೂ ॥
ಪೊಡವಿಯೊಳಗೆ ಸರಿಯದಾರೆನುತಲೀರ್ದನೂ ॥308॥

**ಭಾಮಿನಿ**

ಧರಣಿಯಲಿ ಮೈಮರೆಯೆ ಮರುತಜ ।
ಭರದಿ ಗವಯ ಗವಾಕ್ಷ ಶತಬಲಿ ।
ವರ ಸುಷೇಣಕ ನೀಲ ನಳ ಗಜ ಗಂಧಮಾದನರೂ ॥
ಒರಗಿರಲು ಕಾಣುತ್ತ ಲಕ್ಷ್ಮಣ ।

ಧರಣಿಪತಿಗಭಿನಮಿಸಿ ತನ್ನಯ ।
ಶರಧನುವ ಝುಂಕರಿಸಿ ನಡೆದನು ವೀರನಾಹವಕೇ ॥309॥

**ರಾಗ ಭೈರವಿ, ಏಕತಾಳ**

ಎಲ ಮಾರೀಮುಖನೆ ಕೇಳೂ । ಬಲು ।
ಬಲವನು ಜಯಿಸಿದೆತಾಳೂ ॥
ನಿಲು ನಿಲು ನಿಲು ಯೆಂದೆನುತಾ । ಬಲು ।
ಶರಗಳನೆಚ್ಚನುಬೊಬ್ಬಿಡುತಾ ॥310॥

ಹುಡುಗ ಲಕ್ಷ್ಮಣ ಕೇಳೀಗಾ । ನಿ ।
ನ್ನೊಡಲನು ಬಗೆದತಿ ಬೇಗಾ ॥
ತಡೆಯದೆ ತರಳರ ತೆಗೆವೆ । ಕೇಳ್ ।
ಬಿಡುಗಣ್ಣರ ಪುರ ತೋರಿಸುವೇ ॥311॥

ಮೂಢ ರಕ್ಕಸ ಕೇಳೀಗಾ । ಎ ।
ನ್ನೊಡಲೊಳಗಿಲ್ಲವರೀಗಾ ॥
ಮಾಡಿಹರೆಮನಲಿ ಮನೆಯಾ । ನೀ ।
ನೋಡಲು ಬಹುದೀಗಲೆ ಗೆಣೆಯಾ ॥312॥

**ರಾಗ ಪಂತುವರಾಳಿ, ಮಟ್ಟೆತಾಳ**

ಎನಲು ಕೇಳುತಾಗ ಖಳನು ಉರಗಶರವನೂ ॥
ಕನಲಿ ಪೊಡೆಯಲಾಗ ಗರುಡಶರದಿ ತರಿದನೂ ॥313॥

ಗೋತ್ರವೈರಿ ಶರವ ತೆಗೆದಸುಮಿತ್ರೆಯಾತ್ಮಜಾ ॥
ರಾತ್ರಿಚರನಿಗೆಸೆಯೆ ಬಿದ್ದ ಧರೆಯೊಳ್ದನುಜಾ ॥314॥

ಹರುಷದಿಂದಲಿರಲಿಕತ್ತಲಮರರಾಕ್ಷಣ ॥
ಹರಣವುಳಿಯಿತೆನುತಿರೆದ್ದ ದನುಜನಾಕ್ಷಣಾ ॥315॥

ಏಳುತಾಗ ಶಕ್ತಿಶರವ ತೆಗೆಯುತಾಕ್ಷಣ ॥
ತಾಳು ತಾಳೆನುತ್ತ ಪೊಡೆಯಲ್ಬಿದ್ದ ಲಕ್ಷ್ಮಣಾ ॥316॥

**ಭಾಮಿನಿ**

ತರುಣಿವಂಶಜ ಕೇಳು ಲಕ್ಷ್ಮಣ ।
ಧರಣಿಯಲಿ ಮೈಮರೆಯೆ ಕಾಣುತ ।
ಶಿರವರಿದು ಕೊಂಡೊಯ್ದು ಕೊಡುವೆನು ರಾವಣೇಶ್ವರಗೇ ॥

ಕರದಿ ಖಡ್ಗವ ಧರಿಸಿ ದಾನವ ।
ಶಿರದೆಡೆಗೆ ಬರಲಾಗ ಶ್ವಾಸದ ।
ಉರಿಗೆಮುಂದಕೆ ಸೇರಲರಿಯದೆ ತಿರುಗೆ ರಾಘವನಾ ॥317॥

**ಕಂದ**

ಶಿರವರಿದೀಕ್ಷಣ ತಡೆಯದೆ ।
ಭರದಿಂದೊಡೆಯಗೆ ಕೊಡುವೆನೆನುತ ಯೋಚಿಸುತಂ ॥
ಹರುಷಿಸೆ ರಾಘವನಿತ್ತಂ ।
ಉರಿತಾಪವಿದೇನೆನುತಾ ಜಾಂಭವಗುಸುರ್ದಂ ॥318॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಕೇಳು ಜಾಂಬವದೇವ ಜಠರದೊ ।
ಳೇಳುತಿದೆ ಉರಿತಾಪ ಶಿಖಿ ಥ ।
ಡಾಳಿಸುವದೇನಿನ್ನು ರಣದಲಿ । ಹಾಳು ಕೆಲಸಾ ॥319॥

ಹೇಳಿಫಲವೇನಿನ್ನು ಲಕ್ಷ್ಮಣ ।
ಖೂಳನುಪಹತಿಯಿಂದ ಮೈಮರೆ ।
ದೇಳದೊರಗಿದರೆಲ್ಲ ಮರುತಜ । ಜಾಂಬವಂತಾ ॥320॥

ಸುಮ್ಮನಿಹುದನುಚಿತಗಳಲ್ಲವೆ ।
ಒಮ್ಮೆ ನೋಡಲುಬೇಕು ಸಮರವ ।
ನಿಮ್ಮ ಚಿತ್ತದೊಳೇನನೆಸಗಿದಿ । ರೆಮ್ಮೊಳುಸುರೀ ॥321॥

**ಭಾಮಿನಿ**

ಹೇಳಲಿಕೆ ಹೊತ್ತಿಲ್ಲ ರಾಘವ ।
ಕೋಳುಹೋದುದು ನಮ್ಮ ಸೇನೆಯು ।
ಏಳಿ ಮರುತಜನಿರವ ನೋಡುವ ಯೆನುತ ಜಾಂಬವನೂ ॥
ಹೇಳಿದೀ ಮಾತಹುದು ಎನುತಲೆ ।
ಖೂಳರುಪಹತಿಯಿಂದ ಬಿದ್ದಿಹ ।
ರಾಳುಗಳನೀಕ್ಷಿಸುತ ಬಂದರು ಮರುತಜನ ಹೊರಗೆ ॥322॥

**ಕಂದ**

ಮರುತಜ ರವಿಜರ ಕಾಣುತ ।
ಪರಿಪರಿ ಗುಣಗಳ ನೆನೆಯುತೆ ಶೋಕಿಸಿ ರಘುಜಂ ॥

ಕರಕರದೆಬ್ಬಿಸುತಿರೆ ಸುರ ।
ತರುಗಳಿವೆಂಬಂತೆದ್ದರು ಕಪಿವರರಾಗಂ ॥323॥

**ದ್ವಿಪದಿ**

ಮರುತಜನ ಕರವಿಡುದು ಬರಲು ರಘುನಾಥ ॥
ಪರಿಪರಿಯೊಳ್ ಶವವ ಶೋಧಿಸುರ್ತಿದನಾತ ॥324॥

ವರವಿಭೀಷಣದೇವನಿರವ ನೋಡುತ್ತಾ ॥
ಮರುಗಿದನು ಮನದೊಳಗೆ ಹಲವನೆಣಿಸುತ್ತಾ ॥325॥

ಮಿತ್ರಭಾವದಿ ಬಂದು ಸೇರೆ ನಮ್ಮವನೂ ॥
ಧಾತ್ರಿಯಧಿಪತಿತನಕೆ ಧಾರೆಯೆರೆದಿಹೆನೂ ॥326॥

ಉಳಿವ ಯತ್ನವದೇನ ಕಾಣಬೇಕೆನುತಾ ॥
ತಿಳಿದು ಜಾಂಬವದೇವನಿಂದ ರಘುನಾಥಾ ॥327॥

ಕರದಿ ತಡವರಿಸಲಾ ಸುರ ವಿಭಿಷಣನೂ ॥
ಶಿರವ ನೆಗಹುತಲೇಳಲನುಜನೆಲ್ಲಿಹನೂ ॥328॥

ಅನುಜ ಲಕ್ಷ್ಮಣನಿರವ ಕಾಣೆನೀ ಯೆಡೆಯಾ ॥
ದನುಜ ನಿಲ್ಲುದು ಮನಸು ತೋರಾವ ಕಡೆಯಾ ॥329॥

**ಭಾಮಿನಿ**

ಅನುಜನನು ನೆನೆಯುತ್ತ ರಾಘವ ।
ಹನುಮ ಜಾಂಬವ ವರ ವಿಭೀಷಣ ।
ರನುವರವ ಶೋಧಿಸುತ ಬಂದರು ಪೂರ್ವಮುಖವಾಗೀ ॥
ಧನುವ ಕರದಲಿ ಪಿಡಿದು ಲಕ್ಷ್ಮಣ ।
ತನುವ ಮರೆದೊರಗಿರಲು ಕಾಣುತ ।
ಮನದೊಳತಿ ಚಿಂತಿಸುತ ಬಿದ್ದನು ಮರುಗಿ ಬಿಸುಸುಯ್ದು ॥330॥

**ರಾಗ ನೀಲಾಂಬರಿ, ರೂಪಕಕತಾಳ**

ಯಾತಕೆ ಮಲಿಗಿದೆ ರಣದಲಿ । ನ್ಯಾತಕೆ ಮಾತುಗಳಾಡದೆ ಮ ।
ಮತ್ಯಾತಕೆ ತನ್ನೊಳು ಈಪರಿ ಮನಮನಿಸೂ ॥331॥

ನೋಡಿರೆಜಾಂಬವ ರವಿಜರೀ । ರೀ । ಡಾಡಿದರನುಜನನನು ಮಾ ।
ತಾಡಿಸಿದರೆ ತಾ ಮಾ । ತಾಡನು ಯಾಕೈ ॥332॥

ಇಂದಿನ ದಿನ ಪರಿಯಂತರ | ಕಂದನ ಸಲಹಿದೆ ನಾ |
ನಿಂದಿನ ದಿನಧಾರಭ್ಯವು ಋಣವದು | ಸಂದುದೆ ಯೆನಗೆನುತಾ ||333||

ಕಂದನ ಕರದಿತ್ತಿಹ ಜನನಿತ | ನ್ನಂದದ ಮಗನನುತೋರಿಸು |
ಯೆಂದೆನುತಲೆ ಕೇಳಿದರಿ | ನ್ನೆಂಬುದು ತಾನೇನೂ ||334||

ಭರತ ಶತ್ರುಘ್ನರು ತಾವರಿಯರು ವಿವರವದನುಜನ
ಕರೆಕರೆ ತೋರಿಸು ಎಂದರೆ | ತೆರನಾವುದುತನಗೆ ||335||

ಮಡದಿಯ ◌ೋಹಕೆ ಅನುಜನ | ಕಡಿ |  ದಾಡಿಸಿ ರಣದಲಿ ಬಂ
ದೊಡನೆಯೆಕೇಳಿದರೇನ್ನೈ ಹರ ಹರ ಶಿವ ವಿಧಿಯೇ ||336||

**ರಾಗ ಮಾರವಿ, ಏಕತಾಳ**

ಬಂದೆವು ಮೂವರಾರಣ್ಯದೊಳೊಂದಿನ ಸುಖ |
ದಿಂದಿರಲಿಲ್ಲವಲ್ಲೊ ತಮ್ಮಾ ||
ಬಂದುದ್ದೈ ಮಾರೀಚ ಬಹು ಮೃಗ |
ಕೊಂದಾಹುತಿಯಿತ್ತೆವಲ್ಲೊ ತಮ್ಮಾ ||337||

ಸತಿಯ ಹೋಗಾಡಿಕೊಂಡಾದರು ನಾನಿನ್ನ |
ಜತೆಯೊಳೀರ್ದೆನಲ್ಲೊ ತಮ್ಮಾ ||
ಗತಿಯಿನ್ನಾವುದು ಸಹ ಜಾತರತುನ |
ನೀನಿಲ್ಲವೇನೋ ತಮ್ಮಾ ||  ||338||

ವರುಷ ಹನ್ನೆರಡಾಗುವ ಪರಿಯಂತ |
ನಿರಶನವಾಯಿತಲ್ಲೊ ತಮ್ಮಾ ||
ಎನ್ನಂಥ ಪಾಪಿಯ ಸಂಗಡ ಜನಿಸಿದು |
ನಿನಗಿಂಗಾಯಿತಲ್ಲೊ ತಮ್ಮಾ ||339||

ಮೆರೆಸಿದೆ ಭುಜಬಲನೆಂಬ ಶಕ್ರಾರಿಯ |
ಶಿರವರಿದೆಯಲ್ಲೊ ತಮ್ಮಾ  ||
ನಿನ್ನಂಥ ಗುಣಿಗಳಿನ್ನಿರುವರೆ ಲೋಕದಿ ||
ಪುಣ್ಯ ಹೀನನಾನಯ್ಯ ತಮ್ಮಾ ||340||

**ಭಾಮಿನಿ**

ಎನಹೇಳಿದರೇನು ಅನುಜನ |
ಹಾನಿ ರಮಣಿಯ ನೀಗಿ ಬಳಿಕಿ |
ನ್ನೇನು ತನ್ನಯ ತನುವ ರಣದಲಿ ಮರಳಿ ಕೆಡಹುವೆನೂ ||

ಏನನುಸುರಿದೆ ಜೀಯ ಲಕ್ಷ್ಮಣ ।
ಗೇನು ಬಂದುದು ಕೊರತೆ ನಿನ್ನಯ ।
ದಾನಕರ ತಡವರಿಸಲೇಳುವನೆನುತ ಜಾಂಬವನೂ ॥341॥

**ಕಂದ**

ಸಿರಿಯರಸನು ತನ್ನಯ ವರ ।
ಕರದಿಂದನುಜನ ಶಿರಮಂ ನೆಗಹುತ್ತಲಾಗಳ್ ।
ಭರದಿಂ ತಡವರಿಸುತ್ತಿರೆ ।
ತೆರೆದಕ್ಷಿಯನೆದ್ದಾಕ್ಷಣ ವೀರ ಸೌಮಿತ್ರಂ ॥342॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ನಿದ್ರೆಯಲಿ ಮಲಗಿರ್ದ ಲಕ್ಷ್ಮಣ ।
ನೆದ್ದನಾ ಸಮಯದಲಿ ಕಪಿ ಬಲ ।
ವೆದ್ದುದಾಕ್ಷಣ ಶರದಿಘೋಷದೊ । ಳಬ್ಬರಿಸಲೂ ॥343॥

ಬೊಬ್ಬೆ ಗಳನಾಲಿಸುತ ರಾಕ್ಷಸ ।
ನುಬ್ಬಿನಲಿ ನಡೆತಂದು ಕಪಿಗಳ ।
ಹಬ್ಬವನು ಮಾಡುವೆನೆನುತ್ತಲೆ । ಯುಬ್ಬಿ ಮನದೀ ॥344॥

ಕಬ್ಬಿನಾ ತೋಟದಲಿ ಮದಕರಿ ।
ಯೆದ್ದು ತುಳಿವಂದದಲಿ ಕಪಿಗಳ ।
ನೊದ್ದು ಕೆಡಹುತ್ತಿರಲಿಕಾಕ್ಷಣ । ವೆದ್ದ ರಾಮಾ ॥345॥

ಕೇಳು ಮಾರೀಮುಖನೆ ರಾಕ್ಷಸ
ತೋಳಬಲುಹುಗಳುಳ್ಳಡೆಮ್ಮೊಳ ।
ಗಾಳುತನವನು ತೋರು ನಿಮಿಷದೊ । ಳೇಳು ಬೇಗಾ ॥346॥

ರಾಮನೆಂಬವನಹುದೆಯನ್ನಯ ।
ಪ್ರೇಮ ತನುಜೆಯ ಕುಚವ ಕೊಯ್ದವ ।
ಮಾನವನು ಮಾಣಿಸುವೆ ನೋಡೆಲೆ । ಭೂಮಿಪಾಲಾ ॥347॥

ಎನುತಲಯುತಾಸ್ತ್ರದಲಿ ಕಪಿಗಳ ।
ನೆನಹ ಮಾಣಿಸುತತ್ತ ರಘುವರ ।
ದನುಜ ಕೇಳ್ಕಪಿವರರ ಬಿಟ್ಟೆನ್ನೊ । ಡನೆಸೆಣಸೂ ॥348॥

**ರಾಗ ಶಂಕರಭರಣ, ರೂಪಕತಾಳ**

ನಾನು ರಾಮ ಮಾರೀಮುಖನೆ | ನೀನು ರಾಕ್ಷಸಾ ||
ವಾನರಾದಿಗಳನು ಗೆಲುವು | ದೇನು ಸಾಹಸಾ || || ಪಲ್ಲವಿ ||

ಕೊಲಿಸಬೇಡ ದನುಜ ಪಡೆಯ ನಿಲಿಸು ಸುಮ್ಮನೇ
ಅಲಸದೀಗಲೆಮ್ಮೊಳ್ ಕೈಯ್ಯ | ಕಲಸು ಗಮ್ಮನೇ ||349||

ಬಿಡು ಶರಾಸ್ತ್ರ ಶಸ್ತ್ರಗಳನು | ತೊಡು ಮಹಾಸ್ತ್ರವಾ ||

ನಡೆಸು ಬೇಗ ರಥವನೇರು | ಬಿಡು ಶರೌಘವಾ ||350||

ಫಡ ಫಡೆನುತ | ಪರಶು ಶೂಲ | ಲೌಡಿಯಿಂದಲೀ ||
ಧಡಧಡೀಸಿ ಬಿಡಲು ರಾಮ | ಕಡಿದ ಶರದಲೀ ||351||

**ಭಾಮಿನಿ**

ಧರಣಿಜಾಸುತ ಕೇಳು ರಾಮನ |
ಶರದ ಬಳುಹಿನ್ನೆಂತೊ ಅಸುರಸ |
ಕರದ ಧನುಶರ ಸಹಿತ ಸಾರಥಿ ವರ ಪತಾಕಿನಿಯಾ ||
ಹರಿ ಚತುಷ್ಟಯವರಿದು ಪುನರಪಿ |
ಚರಣಕಭಿನಮಿಸಲ್ಕೆ ಶರವದು |
ಭರದಲಸುರನ ಕರೆದು ಪೇಳಿದ ನೀತಿಮಾರ್ಗಗಳಾ ||352||

**ರಾಗ ಪುನ್ನಾಗ ಝಂಪೆತಾಳ**

ಕೇಳು ಮಾರೀಮುಖನೆ | ತಾಳು ಸ್ಯೆರಣೆಗಳನು |
ಖೂಳ ಮರುಳ್ತನ ಬಿಟ್ಟು | ಬಾಳೊ ಸುಖವಿಟ್ಟೊ ||353||

ಯಮನೆಂಬ ಧರ್ಮನಿಗೆ | ಮಾಮಕಾರವಿಲ್ಲವಗೆ |
ಭಾಮೆ ಮಣಿಮಾಲಿನಿಗೆ | ಪ್ರೇಮದೋರಿಸು ಮೇಗೇ ||354||

ಕೊಂದರೆ ವಿಭೀಷಣನು | ನೊಂದುಕೊಂಬನು ಈಗ |
ಮುಂದೆ ದೋಷಗಳಿಲ್ಲ | ಇಂದುಕೇಳ್ ಸೊಲ್ಲಾ ||355||

**ಭಾಮಿನಿ**

ಇನ್ನು ದೋಷಗಳಿಲ್ಲವೆಮ್ಮಲಿ |
ಸನುಮತವೆ ಪೇಳ್ಕೆ ವಿಭೀಷಣ |
ನಿನ್ನ ಚಿತ್ತದೊಳಿವನಸದೆದರೆ ದೋಷವಿಲ್ಲವಲೇ ||
ಮುನ್ನ ಮಾಡಿದದೋಷ ಕರ್ಮ |

ಕ್ಕಿನ್ನು ಪ್ರಾಯಶ್ಚಿತ್ತವಿದೆ ಕೇ ।
ಳಿನ್ನು  ಸಂದೆಹವೇಕೆ ಸದೆ ನೀ ದೋಷಕಾರಿಯನೂ ॥356॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ವರ ವಿಭೀಷಣದೇವ ಪೇಳಿದ ।
ಪರಿಯನೆಲ್ಲವ ತಿಳಿದು ರಾಕ್ಷಸ ।
ಮರುಳು ರಾಘವ ಕೇಳು ನಮ್ಮನು । ತಿಳಿಯದಾದೇ ॥357॥

ಮಗಳ ಕಿವಿಮೂಗುಗಳ ಕೊಯ್ದು ।
ಬಗೆಯ ತೋರುವೆನೆನುತ ದನುಜನು । ತೆಗೆದ
ನಾಕ್ಷಣವನಲಶರವನು । ಜಗತಿಬೆದರೇ ॥358॥

ರಾಮನದರಿಂ ಮುನ್ನ ವಾರುಣ ।
ನಾಮಹಾಮಂತ್ರದಲಿ ಶರವನು ।
ನೇಮಿಸುತ ಬಿಡಲಾಗಲುರಿ ಬಯ । ಾಯ್ತು ಬೇಗಾ ॥359॥

**ವಾರ್ಧಕ**

ಹವ್ಯವಾಹಾಸ್ತ್ರಮಂ ವಾರುಣಸ್ತ್ರದಿ ಗೆಲಿದು ।
ಭವ್ಯಮೇಘಾಸ್ತ್ರಮಂ ಪೂಡಲ್ಕೆ ರಾಮ ವಾ ।
ಯುವ್ಯಾಸ್ತ್ರದಿಂದರಿಯಲಾಗ ತಿಮಿರಾಸ್ತ್ರಮಂ ಕ್ರೋಧದಿಂ ಜೊಡಿಸಲ್ಕೆ ॥
ರವ್ಯಸ್ತ್ರದಿಂ ಜಯಿಸಿ ಪರ್ವತಾಸ್ತ್ರವನೆಸೆಯೆ ।
ದಿವ್ಯಕುಲಿಶಾಸ್ತ್ರದಿಂ ಕಡಿದು ಮುಕ್ಕಡಿ ಮಾಡ ।
ಲಾ ವಿಭೀಷಣ ದೇವ ಕಂಡು ತಾನೆರಗುತ್ತ ರಘುವರನೊಳಿಂತೆಂದನೂ ॥360॥

ಸೀತೆಯರಸನೆ ಕೇಳು ಪೂರ್ವದಲಿ ನಿಯಮದೊಳ ।
ಗೀತನಜನಂ ಭಜಿಸಿ ವರವ ಪಡೆದಿಹನು ಬಲು ।
ನೂತನದೊಳತಿಶಯದ ಪ್ರಾಣಸಂಜೀವನವ ಪ್ರೀತಿಯಿಂದುದರದೊಳಗೇ ।
ಜ್ಯೋತಿರೂಪದೊಳಿರುವುದದನು ಮಾಣಿಸ ದನಕ ।
ಈತನಂ ಗೆಲ್ಲುವುದಸಾಧ್ಯವಾಗಿಹುದು ರಘು ।
ನಾಥಕೇಳಜ ಮಹಾಸ್ತ್ರವನೆಸೆದದ ನರಿದೊಡೀತನಂ ಗೆಲ್ಲಬಹುದೂ ॥361॥

**ರಾಗ ಮಾರವಿ, ಏಕತಾಳ**

ಒಳಲ ವಿಭೀಷಣ ಪೇಳುತಲಿರಲಾಗ ।
ಘಳಿಲಾನೆ ಶ್ರೀರಾಮಾ ॥

ಎಳೆಯುತ ಸಿಂಜಿನಿಗಾಗಲೆ ತೊಡಿಸಿದ ।
ನಳಿನಜ ಮಹಶರವಾ ॥  ॥362॥

ಆ ಮಹಶರವನು ಕಿವಿವರೆಗುಗಿಯೆ ಸು ।
ತ್ರಾಮರು ಹರುಷಿಸುತಾ ॥
ಕ್ಷೇಮದೊಳಿರಬಹುದೆನುತಿರಲಾ ಶರ ।
ವರವನು ಕಾಣುತಲೀ ॥  ॥363॥

ನಗೆಯನು ಮಾಣಿಪೆನೆನ್ನುತ ಖಳ ಬಲು ।
ಮಗಧರ ಮಹಶರವಾ ॥
ನೆಗಹುತಲಾಕ್ಷಣ ಝುಗಝುಗಿಸಿತು ಮೂ ।
ಜಗವನು ಮೋಹಿಸುತಾ ॥  ॥364॥

ಹರಹರ ಈಮಹಶರದುರಿಯಲಿ ನಾ ।
ವಿರುವದಿನ್ನ್ಯಾಗೆನುತಾ ।
ತರಹರಗೊಳುತಿಹ ಸುರರಿಗೆ ಅಭಯವ ।
ಶರದಲಿ ತೋರಿಸುತಾ ॥  ॥365॥

ಆ ಮಹ ವೈಷ್ಣವಶರದಲಿ ಶಿರವನು ।
ಭೂಮಿಯೊಳಿಳುಹೆನುತಾ ॥
ನೇಮಿಸಿ ಬಿಡುತಿರಲಸುರನ ಶಿರವದು ।
ಗಮಿಸಿತು ಅಸುತೊರೆದು ॥366॥

ಬುಗುರಿಯ ತೆರದಲಿ ತಿರುಗುತಲಿರ್ದುದು ।
ಶಿರ ತಾನಭಕಡರೀ ॥
ಮಗಧರಸಖ ಜಯ ಜಯವೆನುತಲೆ ಕೈ ।
ಮುಗಿದರ್ಸುರವರರೂ ॥  ॥367॥

**ಭಾಮಿನಿ**

ದುರುಳನನು ಸಂಹರಿಸಿ ರಾಘವ ।
ಪರಮ ಹರುಷದೊಳಿರಲಿಕಿತ್ತಲು ।
ಸುರರು ಸುಮ್ಮಾನದಲಿ ಸುರಿದರು ಕುಸುಮವಷ್ಟಿಗಳಾ ॥
ಚರರು ಹಾಯ್ದರು ಬಳಿಕ ದಾನವ ।
ನರಸಿಗೀ ವತ್ತಾಂತವರುಹಿಯೆ ।
ತೆರನ ನೋಡುವೆನೆನುತ ಬೇಗದೊಳಾಗ ನಡೆತರಲೂ ॥368॥

**ವಾರ್ಧಕ**

ಕುಶನೆ ಕೇಳಿತ್ತ ರಾಕ್ಷಸನರಸಿವ್ಯಸನದಿಂ ।
ಶಶಿಮುಖಿಯರಂಕೂಡಿ ದುತ್ಸಾಹಹೀನದಿಂ ।
ಪಶುಪತಿಯ ಪಾದಮಂ ಭಕ್ತಿಯೊಳ್ ನೆನವುತ್ತ ಪತಿಗೆ ಜಯವಾಗದೆನುತಾ ।
ಕ್ಲೇಶದಿಂದಿರುವ ಸಮಯದೊಳ್ಳೈದಿ ಚರರು ಬಲು ।
ಕ್ಲೇಶದಿಂದಾ ಸತಿಯ ಚರಣಕಾನತರಾಗಿ ।
ವಾಸವನ ಗದ್ದುಗೆಯ ಸೇರ್ದ ನಿಮ್ಮಯ ಪತಿಯು ಕೇಳ್ತಾಯೆ ಯೆಂದುಸುರ್ದರೂ ॥369॥

**ಕಂದ**

ಚರರೆಂದುದ ಕೇಳ್ದುಂ ಮನ ।
ಮರುಗುತ ಚಿತ್ರಮಾಲಿನಿ ಶೋಕಿಸಿ ಬಳಿಕಂ ॥
ಧುರಮಂ ನೋಡುವೆನೆನುತಂ ।
ಭರದಿಂ ನಡೆತಂದೀಕ್ಷಿಸಿದಳಾಗ ಪತಿಯಂ ॥370॥

**ವಾರ್ಧಕ**

ಕರದಿ ಧನು ಪಿಡಿದಿರ್ದ ಸರಳ್ಗಳಿಂ ಕೊರಳ್ಗಳಿಂ ।
ಸುರಿವ ನೆತ್ತರಿನ ತನುಕಾಯದಿಂಘಾಯದಿಂ ।
ಧರಣಿಯಲಿ ಪೂರಳಿತಿಹ ಮುಂಡದಿಂರುಂಡದಿಂದರುಣಜಲಲಿಪ್ತದಿಂದಾ ॥
ಹರಿದೊಗುವ ನೆತ್ತರಿನ ಹೊಳೆಗಳಿಂ ಸುಳಿಗಳಿಂ ।
ಥರ ಥರದಿ ಮುರಿದ ರಥ ಹಯಗಳಿಂ ಚಯಗಳಿಂ ।
ಶಿರವಳಿದು ಬಿದ್ದ ಪತಿಯಂಗಮಂ ಭಂಗಮಂ ತಾ ನಿರೀಕ್ಷಿಸುತಿರ್ದಳೂ ॥371॥

**ಭಾಮಿನಿ**

ಶರದ ಘಾಯದಿ ಸುರಿವ ನೆತ್ತರ ।
ದಿರವ ನೋಡುತಲಕಟಕಟೆನುತ ।
ಧರೆಯೊಳಗೆ ಹಮ್ಮೈಸಿ ಮೂರ್ಛಿತೆಯಾದಳಾಕ್ಷಣದೀ ॥
ಅರೆಗಳಿಗೆಯೊಳಗೆದ್ದು ಕಂಗಳ ।
ತೆರೆದು ವಿಧಿಯನು ಬೈದು ವರನನು ।
ಕರೆದು ಗುಣಗಳ ನೆನೆದು ಮರುಗುತರ್ಲಿದಳಾ ವನೀತೆ ॥372॥

**ರಾಗ ನೀಲಾಂಬರಿ, ಏಕತಾಳ**

ಪ್ರಾಣಕಾಂತ ಎನ್ನ ಮಾತ । ಮೀರಿ ಬಂದು
ಪ್ರಾಣವನ್ನು ತೊರೆದೆಯಯ್ಯೋ ॥ ॥ ಪಲ್ಲವಿ ॥

ಕಾಣುವೆನಿನ್ನೆಂದಿಗೆ । ಜಾಣ ಮಾತೊಂದಾಡಿಂದಿಗೆ ॥
ಹಾಣಹಾಣಿಯಲ್ಲಿ ಕಾದಿ । ಗೋಣ ತೊರದೆಯಯ್ಯೋ ॥373॥

ಕಣ್ಣಿನ ಕಪ್ಪಿನ ಭಾಗ್ಯ । ವನ್ನು ಬಿಟ್ಟು ಶಿರದೊಳಗೆ ॥
ಮಣ್ಣ ನಿಕ್ಕಿ ತಿರಿದುಂಬಂ । ತಾಯಿತಯ್ಯೋ ಶಿವನೇ ॥374॥

ಹುಣ್ಣಿಮೆಯ ಶಶಿಯ ಪೋಲ್ವ । ಬಣ್ಣದಂತ ಮೊಗವೇನಾಯ್ತು
ಪುಣ್ಯಹೀನೆ ನಾನಿನ್ನೈಸೆ । ಯೆಣ್ಣಿಸುವ ದೆಂತಯ್ಯಯ್ಯ ॥375॥

**ರಾಗ ನೀಲಾಂಬರಿ ಅಷ್ಟತಾಳ**

ಪ್ರಾಣಕಾಂತ ಎನ್ನ ಮಾತನಯ್ಯವಯ್ಯ । ಮೀರಿ ।
ಪ್ರಾಣವನ್ನು ತೊರೆದೆ ಈಗಲಯ್ಯದಯ್ಯ ॥376॥

ಕಾಣುವೆನಿನ್ನೆಂತು ಮೊಗವ ನಯ್ಯವಯ್ಯ । ಗೀ ।
ರ್ವಾಣರೆಲ್ಲ ನಗುವಂತಾಯಿತಯ್ಯವಯ್ಯ ॥377॥

ದುಷ್ಟ ರಾವಣೇಂದ್ರನಿಂದಲಯ್ಯವಯ್ಯ । ನಾನು ।
ಕೆಟ್ಟು ಕೆಲಸಾರ್ದೆನೀಗಲಯ್ಯವಯ್ಯ ॥378॥

ಪುತ್ರರಳಿದ ದುಃಖವನ್ನು ಅಯ್ಯವಯ್ಯ । ಈಗ ।
ಎಷ್ಟೆಂದು ಮರೆಯಲಿನ್ನು ಅಯ್ಯವಯ್ಯ ॥379॥

ಪತಿಯೆ ನಿನ್ನ ಮೊಗವೇನಾಯ್ತು ಅಯ್ಯವಯ್ಯ । ನೀನು ।
ಖತಿಯೊಳದರನ್ಯಾರಿಗಿತ್ತೆ ಅಯ್ಯವಯ್ಯ ॥380॥

ದುಷ್ಟರಾವಣೇಂದ್ರನೀಗ ರಾಮ ರಾಮಾ । ನಿನ್ನ ।
ಪಟ್ಟದರಸಿಯನ್ನು ಕದ್ದರಾಮರಾಮಾ ॥381॥
ಎನ್ನರಮಣನೇನಗೈದ ರಾಮ ರಾಮಾ । ನೀನು ।
ಅನ್ಯಾಯದಿ ಪತಿಯ ಕೊಂದೆ ರಾಮ ರಮಾ ॥382॥

ತಪ್ಪು ಇರದೆಕೊಂದೆಯಲ್ಲೊ ರಾಮ ರಾಮಾ । ಇನ್ನು ।
ಸರ್ಪಶಯನ ಕಾಯ್ವರಾರೊ ರಾಮರಾಮಾ ॥383॥

**ರಾಗ ನಾದನಾಮಕ್ರಿಯೆ, ಅಷ್ಟತಾಳ**

ಎಂದು ಸರ್ವಾಭರಣಗಳನೂ । ತೆಗೆ ।
ದಂದು ಬಿಸಾಡಿದಳ್ಸುಮವನೂ ॥

ಇಂದಿರೆಯರಸನೆ ಗತಿಯೇನೂ । ಎನ ।
ಗೆಂದು ಮೂರ್ಛಿತಳಾದಳೇಂಪೇಳ್ವೆನೂ ॥384॥

ಮರೆಯೊ ಮರೆಯೊ ಎಂದು ಕೂಗುತ್ತಾ । ತನ್ನ ।
ಕರದಿ ಬಾಯೊಳು ಮಣ್ಣತೀಡಿತ್ತಾ ।
ಸಿರಿಯರಸನು ಇದ ನೋಡುತಾ । ಮನ ।
ಕರಗಿರೆ ಬಹುವಾಗಿಯಳಲುತ್ತಾ । ॥385॥

ಬಂದಳೆ ನಿನ್ನ ವಲ್ಲಭೆಯಳೂ । ನಮ್ಮ ।
ಕೊಂದರೆ ಬಹಳೆ ನಲ್ಲೆಯೊಳೂ ॥
ಎಂದು ರಾಮನ ಪಾದದೆಡೆಯೊಳೂ । ಬಂದು ।
ವಂದಿಸಿ ಕರದ್ವಯ ಮುಗಿದಳೂ ॥386॥

**ರಾಗ ಆನಂದಭೈರವಿ, ಆದಿತಾಳ**

ಎಂದು ರಾಮಚಂದ್ರಗೆರಗಿ ।
ವಂದಿಸಿ ಕರದ್ವಯವ ಮುಗಿದು ।
ನಿಂದಳೂ । ಸಲ । ಹೆಂದಳೂ ॥ ॥ ಪಲ್ಲವಿ ॥

ಮಂದಬುದ್ಧಿಯಾದ ರಾವ ।
ಣೇಂದ್ರನ ಸಂಹಾರಕಾಗಿ ।
ಬಂದಿರೀ । ನಮ್ಮ । ಕೊಂದಿರೀ ॥387॥

ತಂದು ಕಣ್ಣೊಳಿಳಿವ ಜಲ ।
ಬಿಂದುವಿನಿಂದಲೆ ಪಾದ ।
ತೊಳೆದಳೂ । ಪೂಜಿಸಿ । ನಲಿದಳೂ ॥388॥

ಇಂತು ಶೋಕಿಸುವ ಅಸುರ ।
ಕಾಂತೆಯನ್ನು ನೋಡಿನಗುತ ।
ಲೆಂದನೂ । ಶೋಕಸಾ । ಕೆಂದನೂ ॥389॥

**ರಾಗ ಮಧುಮಾಧವಿ ಏಕತಾಳ**

ತಾಯೆ ಕೇಳ್ ಚಿತ್ರಮಾಲಿನಿ ದೇವಿ ನೀನೀ ।
ಆಯಾಸವನುಬಿಡು ಕಾಯ್ವೆ ಸಂತಸದಿ ॥
ತೋಯಜಾಸನ ಲಿಪಿ ತೀರಿದವರ್ಗೆ ।
ಬಾಯ ಬಿಟ್ಟರೆ ಬದುಕುವರೆ ನೀ ಪೇಳೂ ॥390॥

ಹೊಳೆಯಲ್ಲಿ ನೊರೆಹುಟ್ಟುವಂತೆ ಈ ೇಹವ ।
ತಿಳಿಯದೆ ಜನರು ದುಃಖಿಸುತಿಹರೂ ॥
ನಳಿನಲೋಚನೆ ಕೇಳು ಎನ್ನುದುಭವೆಯಂತೆ ।
ಇಳೆಯೊಳು ಸಲಹುವೆ ಕೇಳು ಸಂತಸದೀ ॥ ॥391॥

ಕೊಲುವವ್‌ಯಾರರು ಕೇಳ್ ಕೊಲಿಸಿಕೊಂಬವ್‌ಯಾರರು ।
ನಳಿನನಾಭನೆ ಬಲ್ಲನಿದನೆಲ್ಲ ಈಗ ॥
ತಿಳಿಯದವಳೆ ನಾ ನಿನಗೆಹೇಳಲಿಕೇನೆ ।
ಘಳಿಲನೆ ಮರೆದು ಶೋಕವ ಬಿಡು ನೀನೂ ॥392॥

**ಭಾಮಿನಿ**

ಚಿತ್ರಮಾಲಿನಿ ಬಳಿಕ ರಾಮನ ।
ಚಿತ್ತದೊಳವನು ತಿಳಿದು ಶಿರದಲಿ ।
ಹೊತ್ತ ಚಿಂತೆಯ ಬಿಟ್ಟು ಸುಖದೊಳಗಿರ್ದಳಾಕ್ಷಣದೀ ॥
ಅತ್ತಲಾ ಜಾನಕಿಯು ಮನಸಿನ ।
ಕಕ್ಕುಲತೆಯಿಂದಾಗ ರಾಮನ ।
ಚಿತ್ತದಲಿ ನೆನೆನೆನೆದು ಶೋಕಿಸುತತ್ತ ಮರುಗುತಲೇ ॥393॥

**ರಾಗ ನೀಲಾಂಬರಿ, ಆದಿತಾಳ**

ರಾಮದೇವನೇ ರಾಜೀವಾಕ್ಷನೆ ।
ಭೀಮವಿಕ್ರಮಾ ಪುಣ್ಯ ಮೂರುತೀ ॥
ಸೋಮಸುಂದರಾ ಅಸುರಮರ್ದನಾ ।
ಕಾಮಜನಕನೇ ಕಾಯೊ ಎನ್ನನೂ ॥394॥

ಸರಮೆ ಕೇಳಲೇ ನಿನ್ನ ನಿಶೀಯೊಳೂ ।
ಧರಣಿಪಾಲನಾ ಶರಣಸಹಿತಲೀ ।
ಧಿರದಿ ಗೆಲಿದನೂ ಮಾರಿಮುಖನೂ ಎಂ ।
ಬಿರುವ ವಾರ್ತೆಯಾ ಕೇಳ್ದೆ ನಾನಮ್ಮಾ ॥395॥

ನಿರುತವಾಗಿಹಾ ಸ್ಥಿತಿಯನರಿಯುತಾ ।
ಭರದಿ ಪೇಳುವಾರಿಲ್ಲದಾಯ್ತಿಗಾ ॥
ಧರೆಯೊಳಿರುವದಕ್ಕಿಂತ ಸಾಯ್ವುದೂ ।
ಪರಮಲೇಸದೂ ಗರಳಕುಡಿಯುತಾ ॥396॥

ಎಂದು ಶೋಕಿಪಾ । ಜಗದ ಮಾತೆಗೇ ।
ನಿಂದು ಕರಗಳಾ । ಮುಗಿದು ಸರಮೆಯೂ ।

ಮಂದಹಾಸದಿ ಪೇಳ್ದಳಾಕ್ಷಣಾ ।
ಚಂದದಿಂದಲೀ ಧುರದ ಪರಿಯನೂ ॥397॥

**ರಾಗ ಸಾಂಗತ್ಯ, ರೂಪಕತಾಳ**

ಏನ ಹೇಳುವೆ ತಾಯೆ ದಾನವಾರಿಗೆ ಬಂದ ।
ಹಾನಿ ವದ್ಧಿಗಳಪೇಳುವೆನೂ ॥
ಧಾನವಾಧಿಪ ಮಾರಿಮುಖನೆಂಬ ಅಸುರನ್ನ ।
ತಾನಾಗಿ ಕರೆದು ಅಟ್ಟಿದನೂ ॥398॥

ಸುತರಿಬ್ಬರವನುದರದಲಿ ಸಂಜೀವನ ।
ಪ್ರತಿಭಟರನು ಜರಿವವರೂ ॥
ಗತವಾಗ್ವ ವೇಳ್ಯಕ್ಕೇನಿದ್ದರೇನಹುದಮ್ಮ ।
ಪತಿಗವದಿರೆ ರಕ್ಕಸರೂ ॥ ॥399॥

ಸುತರನುಜರ ಕೊಂದು ಕೆಡಹಲಾಕ್ಷಣತನ್ನ ।
ಸುತೆಯೋರ್ವಳನು ಕಳುಹಿಸಿದಾ ।
ಖತಿಯೊಳವಳ ಮೂಗುಮೊಲೆಯ ಕೊಯ್ದು ಮ ।
ತ್ತತುಳ ವಿಕ್ರಮಿಯು ಸೌಮಿತ್ರಾ ॥400॥

ರಣಪರಾಕ್ರಮಿ ಮಾರಿಮುಖನಾಕ್ಷಣದೊಳು ।
ತ್ರಿಣಯನ ಧನುವನೇರಿಸಿದಾ ॥
ಗುಣನಿಧಿ ಶ್ರೀರಾಮಚಂದ್ರನಾಕ್ಷಣದೊಳು ।
ಗಣಿಸದೆ ಅಜಮಹಶರದೀ ॥ ॥401॥

ಶಿರವನರಿದು ರಾಮ ಹರುಷದೊಳಿರುವನೆಂ ।
ಬರುತರೋತ್ಸವದೊಸೆಗೆಗಳಾ ॥
ಅರುಹಲಾ ಸರಮೆನನ್ನಿಂದಾ ಸಂಪ್ರಾಣಿಸು ।
ತಿರುವೆ ನಿಮ್ಮಯ ಕಟಾಕ್ಷದಲೀ ॥402॥

**ಭಾಮಿನಿ**

ಧರಣಿಜಾಸುತ ಕೇಳು ರಾಘವ ।
ವರ ಮಹಾರಕ್ಕಸರ ಶಿರಗಳ ।
ನರಿದ ವಾರ್ತೆಯ ಕೇಳಿ ಹರುಷದೊಳಿರಲಿಕಾ ॥
ವರಮಹಾ ಪೀಠದಲಿ ರಾವಣ ।
ನುರುತರೋತ್ಸವದಿಂದಲೊಪ್ಪಿರೆ ।
ಧರಣಿಗಿನನಿಳಿದಂತೆ ಬಿದ್ದುದು ಶಿರವು ರಕ್ಕಸನಾ ॥403॥

**ಕಂದ**

ಶಿರವನು ಕಾಣುತೆ ರಾವಣ ।
ಮರುಗುತೆ ಮನದೊಳ್ ನೆನೆ ನೆನೆದಳಲುತೆ  ಸಖನಂ ॥
ಮರೆಯುವೆನೆಂತೆನುತಾ ಕಿಡಿ ।
ಗರೆಯುತೆ ಕಣ್ಣೊಳ್ ಬಲ ನೆರಹುತ ನಡೆತಂದಂ ॥404॥

**ವಾರ್ಧಕ**

ಕುಶನೆ ಕೇಳ್ಮುಂದೆ ಶ್ರೀರಾಮಚಾರಿತ್ರಮಂ ।
ಅಸುರ ರಾವಣ ತನ್ನ ಸಖನ ಶಿರಮಂ ಕಂಡು ।
ಮಸದಲಗು ಪೊಸಮಸೆಯನೆಸೆವುತೈ ತಂದಾಗಲಸುರಾರಿಯೋಳ್ಕಾದಿದಾ ॥
ವಸುಧೀಶನಾಕ್ಷಣದಿ ಶಾರ್ಙ್ಗಧನುವರ್ಗದೊಳ್ ।
ಶಶಿಮೌಳಿಯಂ ನಿಲಿಸಿ ಎಸೆಯಲಾಕ್ಷಣದೊಳಾ ।
ಬಸುರ ಬಗಿದೆಳೆಗರುಳ ಸೂಸಲಾಕ್ಷಣ ದನುಜ ಶಶಿಮೌಳಿಪುರಸೇರ್ದನೂ ॥405॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಇತ್ತ ರಾಘವ ತನ್ನ ಭಕ್ತನಿ ।
ಗಿತ್ತ ಭಾಷೆಗೆ ಲಂಕೆಯೊಡೆತನ
ವಿತ್ತು ಪ್ರಜೆಗಳ ಸುಖದಿನೆಲಸಿರು । ವಂತೆ ಮಾಡೀ ॥  ॥406॥

ಮತ್ತೆ ಸುಮನಸರ್ಮೆಚ್ಚುವಂದದಿ ।
ಇತ್ತನನಲಗೆ ಸೀತೆಯನು ಮಗು ।
ಳೆತ್ತಿ ತಂದಾಗನಲ ರಾಮನಿ । ಗಿತ್ತು ನಡೆದಾ ॥407॥

ಉತ್ಸವದೊಳಿರುತಿರಲು ಧನದನ ।
ಪುಷ್ಪಕದೊಳೈತಂದು ಲಿಂಗವ ।
ಮತ್ತೆ ನಡಿಸಿದನಾಗ ಶರದಿಯ । ದೊತ್ತಿನಲ್ಲೀ ॥408॥

ಸೇನೆಗಳನೊಳಗೊಂಡು ರಾಘವ ।
ಭಾನುತನುಜನನರಸಿ ತಾರಾ ।
ಮಾನಿನಿಯನೊಡಗೂಡಿ ನಡೆದಾ । ಯೋಧ್ಯಪುರಿಗೇ । ॥409॥

ಬಂದ ವಾರ್ತೆಯ ಕೇಳಿ ಭರತನು ।
ವಂದಿಸುತ ನಡೆತಂದು ಚರಣ ।
ದ್ವಂದ್ವಕಾನತನಾಗೆ ಪರಮಾ । ನಂದದಿಂದಾ । ॥410॥

ಜನನಿಯರು ಮೂವರಿಗೆ ರಾಘವ |
ನನುಜಸಹ ಒಡಗೂಡಿ ಯೆರಗಲು |
ಚಿನುಮಯಾತ್ಮಕ ಬಂದೆಯ್ಯೆಯಲೆ | ತನುಜ ನೀನೂ | ||411||

**ಭಾಮಿನಿ**

ಸಿರಿವರಾಸುತ ಕೇಳು ರಾಮಗೆ |
ಪರಮ ವೈಭವದಿಂದ ಮಂಗಲ |
ವಿರಚಿಸುತ ಪಟ್ಟಾಭಿಷೇಕವ ರಚಿಸಿ ಸೇಸೆಯನೂ ||
ಶಿರದ ಮೇಲಕೆ ತಳಿಯೆ ಲಕ್ಷ್ಮಣ |
ಭರತ ಶತ್ರುಘ್ನಾದಿಯನುಜರ |
ವರೆದು ಸುಖದೊಳು ಧರೆಯನಾಳಿದ ಪರಮ ವೈಭವದೀ ||412||

**ರಾಗ ಕಾಂಭೋಜಿ, ಝುಂಪೆತಾಳ**

ನಿರುತ ಮಾರ್ಕಂಡೇಯ |
ಪುರದ ಶ್ರೀಸೋಮೇಶ |
ಕರುಣಿಸಿದ ಮತಿಯೊಳಗೆ | ನೊರೆದೆನೀ ಕೃತಿಯಾ | ||413||
ಯಕ್ಷಗಾನಗಳಿಂದ |
ಈ ಕ್ಷಿತಿಯೊಳೊರ್ಣಿಸಿದು |
ಪೇಕ್ಷೆಯನು ಮಾಡದೆ | ರಕ್ಷಿಸಿರಿದಯದೀ ||414||

**ಮಂಗಲಪದ**

ದಶರಥನುದರದಿ ಜನಿಸಿದಗೆ |
ಅಸುರೇ ತಾಟಕಿ ಮಡುಹಿದಗೆ ||
ರಸೆಯೊಳು ಶಿಲೆಯಹಲ್ಯೆಯ ಕಾಯ್ದ |
ಪಶುಪತಿಸಖ ಶ್ರೀರಾಮನಿಗೆ | ಮಂಗಲಂ ಜಯಮಂಗಲಂ ||415||

ಮಿಥಿಲೆಯೊಳ್ ಹರಧನುಮುರಿದವಗೆ |
ಪಥಿವಿಜೆ ಸೀತೆಯನೊಲಿಸಿದಗೆ ||
ಖತಿಯೊಳುಭಾರ್ಗವ ಗರ್ವವ ಮುರಿದಾ |
ಕ್ಷಿತಿಪತಿಸುತ ರಘುರಾಮನಿಗೇ || ಮಂಗಲಂ ಜಯಮಂಗಲಂ ||416||

ತಂದೆಯ ವಚನಕೆ ಕಾನನಕೆ |
ಬಂದಿರೆ ದಂಡಕ ವನದೊಳಗೆ ||
ದಂಡಿಸಿ ಶೂರ್ಪನಖಿಯ ಕುಚಂಗಳ |
ಖಂಡಿಸಿದಗ್ರಜ ರಾಘವಗೆ || ಮಂಗಲಂ ಜಯಮಂಗಲಂ ||417||

ಖರದೂಷಣ ಶಿರವರಿದವಗೆ ।
ದುರುಳ ಮಾರೀಚನ ಕೊಂದವಗೆ ॥
ಧರಣಿಜೆಯೊಯ್ದನ ಶಿರವನ್ನರಿಯಲು ।
ಸುರಪಜ ವಾಲಿಯ ಕೊಂದವಗೆ ॥ ಮಂಗಲಂ ಜಯಮಂಗಲಂ ॥418॥

ಸಿಂಧುವ ಶಿಲೆಯಲಿ ಬಿಗಿದವಗೆ ।
ಬಂಧುಗಳ ಸಹಿತಲಿ ರಾವಣನ ॥
ಕಂಧರವನ್ನರಿದಾಗ ವಿಭೀಷಣ ।
ನೊಂದಿಸಿದಾ ಶ್ರೀರಾಮನಿಗೆ ॥ ಮಂಗಲಂ ಜಯಮಂಗಲಂ ॥419॥

ಭಾವಜಪಿತನಿಗೆ ಭವಹರಗೆ ।
ಶ್ರೀವಧುರಮಣ ಸರ್ವೋತ್ತಮಗೆ ॥
ದೇವ ವಿನಾಯಕ ನರಹರಿಗೆ ।
ನಾ ವಂದಿಪೆ ಸೋಮೇಶನಿಗೆ ॥
ಮಂಗಲಂ ಜಯಮಂಗಲಂ । ನಿತ್ಯ ಶುಭಮಂಗಲಂ ॥420॥

**ಮಾರೀಮುಖನ ಕಾಳಗವು ಸಂಪೂರ್ಣವು**

# ಯಕ್ಷಗಾನ ಮೈರಾವಣ ಕಾಳಗ

## ಪಾತ್ರಗಳು

ಶ್ರೀರಾಮ
ರಾವಣ
ವಿಭೀಷಣ
ಸೂಚೀಮುಖ
ಹನುಮಂತ
ಸರಮೆ
ಜಾಂಬವ
ದಧಿಮುಖ
ಮತ್ಸ್ಯವಾನರ
ವಜ್ರದಂಷ್ಟ್ರ
ಮೈರಾವಣ
ದುರುದುಂಡಿ
ಕಪಿಗಳು

**ಶಾರ್ದೂಲವಿಕ್ರೀಡಿತಂ**

ರಾಮಂ ರಾಜಶಿಖಾಮಣಿಂ ರಘುವರಂ ದೇವಾರಿದರ್ಪಾಪಹಂ ।
ಲೋಕಾನಾಂ ಹಿತಕಾರಿಣಂ ಗುಣನಿಧಿಂ ಕಾರುಣ್ಯಪುಣ್ಯೋದಯಮ್ ।
ಮುಕ್ತಾವಿದ್ರುಮರತ್ನಶೋಭಿತತನುಂ ಸೌಂದರ್ಯಹಸ್ತಾಂಬುಜಂ
ಕೌಸಲ್ಯಾತನಯಂ ಭಜಾಮಿ ಸತತಂ ಶ್ರೀಜಾನಕೀನಾಯಕಮ್ ॥1॥

**ರಾಗ ನಾಟಿ ಝುಂಪೆತಾಳ**

ಗಜವದನ ಗೌರಿಯಾತ್ಮಜನಮಲ ಶಾರೀರ ।
ಭುಜಗಭೂಷಣ ಭವೇಂದ್ರಾದ್ಯಮರವಿನುತ ॥
ಸುಜನಜನಪೋಷ ಸುರುಚಿರ ರತ್ನಭೂಷಮುನಿ ।
ವ್ರಜಸುಸೇವಿತಪಾದ ಪರಮಾಹ್ಲಾದ । ॥2॥

ಕಮಲಧರ ಕಾಮಪಿತ ವರನೀಲಗಾತ್ರ ಸ ।
ತ್ಕಮಲಪಾಣಿ ಮುಕುಂದವಿನುತ ಶುಭಚರಿತ ॥
ಕಮಲಾಪ್ತ ಕಮಲನಲದ್ಯುತಿವಿರಾಜಿತ ಸು ।
ಕಮಲನಿಭಚರಣ ಚಿನ್ಮಯ ಶುಭೋಧರಣ ॥3॥

ಗೋಪಾಲಕುಲಜಾತ ಗೋಪಾಲಸುರಸೂತ ।
ಗೋಪತಿಧ್ವಜಮಿತ್ರ ಗೋಪನುತಿಪಾತ್ರ ॥
ಗೋಪತೀಪಿತಕ್ಷೀರಗೋಪಮಂದಿರ ವೇಣು ।
ಗೋಪಾಲ ಪಾಲಿಸೀ ಕೃತಿಗೆ ಮಂಗಲವ ॥4॥

**ಭಾಮಿನಿ**

ಸರಸಿಜೋದ್ಭವನಡಿಗೆ ವಂದಿಸಿ ।
ಗಿರಿಜೆ ಸಿರಿ ಸರಸ್ವತಿಯರಂಘ್ರಿಗೆ
ಕರವ ಮುಗಿದು ಮಹಾಮುನಿವ್ರಜತತಿಗೆ ತಲೆವಾಗಿ ॥
ಧರಣಿಯೊಳಗುಳ್ಳಮಿತ ಸತ್ಕವಿ ।
ವರರ ನುತಿಸಿದು ಋಕ್ಷಕಪಿಗಳ ।
ನೆರವಿಯನು ಕೊಂಡಾಡಿ ರಚಿಸುವೆನೀ ಚರಿತ್ರೆಯನು ॥5॥

**ಕಂದ**

ಚಿದ್ಘನತರ ತೋಷದಿ ಮತ್ ।
ಹದ್ಗೃಹನಿವಾಸ ವಿದ್ಯಾಪ್ರದಾನಗಂ ॥

ಸದ್ಗುಣ ಪದ ಶಾಂತಿಯುಗಂ ।
ಸದ್ಗುರುವಮರೇಂದ್ರವರ್ಯಗಂ ತುಳಿಲ್‌ಗೈವೆಂ ॥6॥

**ವಾರ್ಧಕ**

ಭೂಕವಿಗಳೊಳ್ ಶೋಭಿಸುತ ಮೆರೆವ ಬಾಲವಾ ।
ಲ್ಮೀಕಿಯೆಂದೆನಿಸಿ ಸಂಸ್ಕೃತಮಾದ ರಾಮ ಚರಿ ।
ತಾಕಥಾಸಾರಮಂ ಕರ್ಣಾಟಕಾವ್ಯದಿಂದತಿ ಮನೋಹರಮಾಗಿಯೆ ॥
ಪ್ರಾಕವದ್ಧಬಲೆಯರು ಎಲ್ಲರುಂ ತಿಳಿವಂತೆ ।
ಪ್ರಾಕಟಿಸಿದುರು ಮಹಿಮೆ ಹಂಪೆಯಾತ್ಮಜ ಸದ್ವಿ ।
ವೇಕ ವೆಂಕಾರ್ಯ ಪ್ರಧಾನನಂ ತುಳಿಲ್ಗೈವುತುಸಿ್ವೆರನೀ ಚಾರಿತ್ರಮಂ ॥7॥

**ರಾಗ ಕಲ್ಯಾಣಿ ತ್ರಿವುಡೆತಾಳ**

ಅಜಪುರದ ದ್ವಿಜಕುಲದೊಳುದಿಸಿದ ।
ಸುಜನಜನಸುರಧೇನು ವೆಂಕಾ ।
ರ್ಯಜನೆನಿಪ ಸುಬ್ಬಾಭಿದಾನನು । ನಿಜಪದಗಳ ॥8॥

ವಸಗೆಯಿಂ ಸಂಸ್ತುತಿಸಿಬಲುರಂ ।
ಜಿಸುತೆ ಪಡೆದವರ್ಗಭಿನಮಿಸಿ ಸ ।
ತ್ಕುಶಲದಿಂ ಮರುತಾತ್ಮಭವನೀ । ರಸೆಯೊಳೊಲಿದು ॥9॥

ವರಮಹಾರಾಮಾಯಣದಿ ಚ ।
ಚ್ಚರದಿ ಸರಸಿಜನಾಳದೊಳಗಿಳಿ ।
ದಿರದೆ ಮತ್ತಾ ಪೊಡವಿಯಸುರರ । ತರಿದು ಭರದಿ ॥10॥

ದುರುಳ ಮೈರಾವಣನನುರೆ ಸಂ ।
ಹರಿಸಿ ಸೀತಾಧವನ ಕೀರ್ತಿಯ ।
ಮೆರೆಸಿದತ್ಯುತ್ಸವದ ಕಥೆಯನು । ವಿರಚಿಸುವೆನು ॥11॥

ಆಲಿಪುದು ಸತ್ಪುರುಷರೆಲ್ಲರು ।
ಬಾಲನಿವನೆಂದೆನದೆ ಪೇಳ್ದುದ ।
ಲೀಲೆಯಿಂ ತಪ್ಪಿರಲು ತಿದ್ದಿ ವಿ । ಶಾಲದಿಂದ ॥12॥

**ವಚನ**

ಈ ರೀತಿಯಿಂದ ಸಕಲ ಗುರು ದೇವ ಕವಿಪ್ರಾರ್ಥನೆಯಂ ಮಾಡಿ ಮುಂದೆ ತತ್ಕಥಾಪ್ರಸಂಗಮಂ ಪೇಳ್ವೆನದೆಂತೆನೆ -

**ದ್ವಿಪದಿ**

ಧರೆಯೊಳತ್ಯಧಿಕವೆಂದೆನಿಪ ಸಂಭ್ರಮದಿ ।
ಮೆರೆವುತಿಹ ನೈಮಿಷಾರಣ್ಯದೊಳು ಮುದದಿ ॥13॥

ವರಮಹಾಶೌನಕಾದಿಗಳು ತಪದಿಂದ ।
ಹರಿಹರರ ನುರೆ ಭಜಿಸುತಿರೆ ಮೋದದಿಂದ ॥14॥

ಇರುತಿರಲು ಸೂತಮುನಿ ಬರಲಲ್ಲಿಗೊಲಿದು ।
ಭರದಿಂದ ಮುನಿಗಳುಪಚರಿಸಿದರು ನಲಿದು ॥15॥

ಕರವನುರೆ ಮುಗಿದು ಕೇಳಿದರು ಪರಿಪರಿಯ ।
ಮರುತಜನು ಮೈರಾವಣನ ಕೊಂದ ಕಥೆಯ ॥16॥

ಆಗಲತಿ ದಯದಿಂದ ಸೂತ ವಿನಯದಲಿ ।
ನಾಗಶಯನನ ನೆನೆದು ಕರುಣೋದಯದಲಿ ॥17॥

ಹೇಳಿದನು ವಿಸ್ತಾರವಾಗಿ ಮುನಿಗಳಿಗೆ ।
ಆಲಸ್ಯವಿಲ್ಲದತಿ ಮೋದದಿಂ ಮೇಗೆ ॥18॥

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಋಷಿಗಳಿರ ನೀವ್ ಕೇಳಿ ಧರೆಯೊಳ ।
ಗೆಸೆವಯೋಧ್ಯಾನಗರದೊಳಗಾ ।
ವಸುಮತೀಶನು ದಶರಥೇಂದ್ರನ ।
ಬಸಿರಿನಿಂ ಹರಿ ಮುದದೊಳು । ಪುಟ್ಟಿಬೇಗ ॥19॥

ರಾಮನಾಮದೊಳಿರಲು ಮತ್ತಿ ।
ನ್ನಾ ಮಹಿಮಗನುಜಾತರ್ ಮೂವರು ।
ಭೀಮಬಲರೆಂದೆನಿಸಿ ಜನಿಸಿದ ।
ರೀ ಮಹಿಯೊಳಾನಂದದಿ । ಬೆಳೆವುತಿರಲು ॥20॥

ಉರಗಪತಿಯವತಾರಿಯನುಜನ ।
ಭರದೊಳೊಡಗೊಂಡಯ್ದಿ ಮುನಿಯ ।
ಧ್ವರವ ಪಾಲಿಸಿ ನಡೆದಹಲ್ಯಾ ।
ತರುಣಿಯಘವನುಪರಿದನು । ರಾಮಚಂದ್ರ ॥21॥

ಮಿಥಿಳೆಯೊಳು ಹರಧನುವ ಮುರಿದಾ ।
ಪಥಿವಿಜೆಯನೊಡಗೊಂಡು ಭಾರ್ಗವ ।
ನತಿಶಯದ ಗರ್ವವನು ಮರ್ದಿಸಿ ।
ಕ್ಷಿತಿಪ ನಡೆದನಯೋಧ್ಯೆಗೆ । ತೋಷದಿಂದ ॥22॥

ಪೆತ್ತವನ ನುಡಿ ಕೇಳಿ ಸತಿ ಸೌ ।
ಮಿತ್ರಿಸಹ ವನಕಾಗಿ ಬರುತಿರೆ ।
ಧೂರ್ತ ದಶಶಿರನಯ್ದಿ ಸೀತೆಯ ।
ಮತ್ತೆ ಕಳವಿನೊಳೊಯ್ದನು । ವ್ಯಥಿಸಿ ರಾಮ ॥23॥

**ಭಾಮಿನಿ**

ಸತಿಯನರಸುತ ಪೋಗಿ ವಾನರ ।
ಪತಿಯ ಸಖ್ಯವ ಬೆಳಸಿ ಜನಕ ।
ಕ್ಷಿತಿಪನಾತ್ಮಜೆಯಿರ್ಪ ವಾರ್ತೆಯನರಿತು ಮರುತಜನ ॥
ಜತೆಗೊಳಿಸಿ ಕಪಿ ಬಲವನಾಕ್ಷಣ ।
ಪಥವಿಡಿದು ನಡೆತಂದು ಶರಧಿಯ ।
ನತಿಶಯದಿ ಬಂಧಿಸುತ ಲಂಕೆಯ ಮುತ್ತಿದನು ರಾಮ ॥24॥

**ರಾಗ ಭೈರವಿ ಝಂಪೆತಾಳ**

ಸುರಪಜಿತು ಮುಂತಾದ । ದುರುಳ ರಕ್ಕಸರನೆ ।
ಲ್ಲರ ಕೊಂದು ರಾವಣನ । ಧುರದಿ ಜವಗೆಡಿಸಿ ॥25॥

ಚಂದದಿಂದೆಸೆವ ರಣ । ಮಂದಿರದಿ ಶ್ರೀ ರಾಮ ।
ಚಂದ್ರನಿರಲಿತ್ತಸುರ । ವಂದಾಧಿಪತಿಯು ॥26॥

ಚಿಂತಿಸುತ ಮನೆಗಯ್ದಿ । ಕಂತುವೈರಿಯ ನೆನೆದು ।
ತಾಂ ತವಕದಿಂ ನಿಶಿಯೊಳ್ । ಭ್ರಾಂತನಂದದಲಿ ॥27॥

ತೊಳತೊಳಲಿ ಬಳಬಳಲಿ । ಕುಳಿರುತೇಳುತ ತನ್ನ ।
ತಿಳಿತಿಳಿದು ಮನದೊಳಗೆ । ತಳುವದಾಕ್ಷಣದಿ ॥28॥

ನೆನೆಯೆ ಮೈರಾವಣನ । ಘನಬೇಗ ನಾ ದೈತ್ಯ ।
ಸನುಮತದೊಳಯ್ತಂದ । ದನುಜೇಂದ್ರನೆಡೆಗೆ ॥29॥

**ಕಂದ**

ಬಂದಾ ದನುಜನನೀಕ್ಷಿಸು ।
ತಂದಾಸನವಿತ್ತುಮುಪಚರಿಸುತ್ತಾಗಳ್ ।
ಎಂದಂ ವಾನರರಾ ಜಯ ।
ದಂದವನತಿ ಚಿಂತೆಯಿಂದಮಾ ದಶಕಂಠಂ ॥30॥

**ರಾಗ ತುಜಾವಂತು ಝಂಪೆತಾಳ**

ಕ್ಷೇಮವೇ ಮೈರಾವಣಾಖ್ಯ ನಿನಗೆ ।
ಕಾಮಿನಿಯು ಸಂಧ್ಯೆ ಪರಿ । ಣಾಮದಿಂದಿಹಳೇನೈ ॥ ಕ್ಷೇಮವೇ ॥ ॥ಪ॥

ಪುರಜನರು ಪದುಳಿಗರೆ ಪರಿಜನರು ಕುಶಲಿಗರೆ ।
ಧರೆಯೆಲ್ಲ ನಿನ್ನ ಕೈ ಸೇರಿರ್ಪುದೆ ॥
ಉರಗಪತಿಯವನಿಯನು ಸಾಧಿಸಿದೆಯಾ ಬಳಿಕ ।
ಸುರರ ಪಿರಿಯನ ಮಾತಿಗೆರವಿಲ್ಲದಿಹರೇನೈ  ॥ ಕ್ಷೇಮವೇ ॥31॥

ನಿನ್ನಯ ಕಟಾಕ್ಷದಿಂದೆಲ್ಲ ಸುಕ್ಷೇಮಿಗಳು ।
ಎನ್ನಧೀನದೊಳಿಹುದು ತದ್ಭೂಮಿಯು ॥
ಪನ್ನಗಾದ್ಯರು ವದಗಿಕೊಂಡಿಹರು ತನ್ನಂತೆ ।
ಖಿನ್ನನಾಗಿರುವೆ ನೀನೇಕೆ ದಶಕಂಠ ॥ ಕ್ಷೇಮವೇ ॥32॥

ಪಾತಾಳವಾಸಿ ಕೇಳ್ ಭೂತಳದೊಳೆಸೆವ ಸಾ ।
ಕೇತಪತಿ ದಶರಥೇಂದ್ರಾತ್ಮಜರ್ಗೆ ॥
ಆತ ತುರಗಾಧಿಪತಿಯಾತ್ಮಜೆಯ ದೆಸೆಯಿಂದ ।
ವೋತು ವನವಾಸ ಪ್ರವೇಶವಾಯ್ತು ಕೇಳು ॥ ಕ್ಷೇಮವೇ ॥33॥

ಆದರೇನಾಯಿತಾ ಪಂತಿರಥನೆಂಬವಗೆ ।
ಮೇದಿನಿಯೊಳುದಿಸಿದರು ನಾಲ್ವರಂತೆ ॥
ಭೇದದಿಂದಲಿ ವಿಪಿನಕಟ್ಟಿದವರ್ಯಾರಿದರೊ ।
ಖೇದಯಾಂಬುಧಿಯರಿತಡುಸಿರೆನ್ನೊಳತಿ ಜವದಿ ॥ ಕ್ಷೇಮದಿ ॥34॥

ಧೀರ ಕೇಳೈ ತಿಳಿದೆ ನೀನೆಂದ ನಾಲ್ವರೊಳ ।
ಗಾ ರಾಮನೆಂಬಾತ ಪಿರಿಯಾತನೈಸೆ ॥
ಆರಣ್ಯವಾಸಕೆಂದೆನುತಟ್ಟಲವರೊಡನೆ ।
ಘೋರನಯ್ತಂದ ಲಕ್ಷ್ಮಣನೆಂಬ ತರಳನೆಲೆ ॥ ಕ್ಷೇಮವೇ ॥

**ಕಂದ**

ಇಂತೆನಲಾ ದಶಕಂಠಂ ।
ಸಂತಸದಿಂದಾಲಿಸುತಂ ಮೈರಾವಣನುಂ ॥
ನಿಂತಾಲೋಚಿಸಿ ಬಳಿಕಂ ।
ತಾಂ ತಿಳಿದುದನೊಂದ ಪೇಳ್ದನವನತಿ ಜವದಿಂ ॥35॥

**ರಾಗ ಕೇದಾರಗೌಳ ಝಂಪೆತಾಳ**

ದನುಜೇಶ ಲಾಲಿಸಯ್ಯ । ನೀನೆಂದ ।
ಜನಪಗಾರಣ್ಯಸಿರಿಯ ॥
ವನಿತೆ ಕೈಸೇರ್ದರಿನ್ನು । ನಿನಗವರ ।
ಸೆಣಸಾಟದಿರವಿದೇನು ॥36॥

ತಾಮಸೀಚರನೆ ಕೇಳು । ರಾಮನೆಂ ।
ಬಾ ಮಹಿಮನಿಂಗೋರ್ವಳು ॥
ಕಾಮಿನಿಯು ಸಂಗಡಿರಲು । ಎನ್ನನುಜೆ ।
ವ್ಯಾಮೋಹದಿಂ ಕಂಡಳು ॥37॥

ಕಂಡು ಮತ್ತೇನ್‌ಗೆಯ್ದಳು । ಈರೈದು ।
ಮಂಡೆಯುಳ್ಳವನೆ ಪೇಳು ॥
ಪುಂಡರೀಕಾಕ್ಷಿಯವಳ । ವಿನಯದಲಿ ।
ಕೊಂಡು ಬಂದಳೆ ನೀ ಪೇಳಾ ॥38॥

ಪೇಳಲೇನಾ ನೀರೆಯ । ತರಲಯ್ದೆ ।
ತಾಳಿ ನಪವರರು ಖತಿಯ ॥
ಮೇಲುವರಿದೆಮ್ಮನುಜೆಯ । ಕಿವಿ ಮೂಗ ।
ಜಾಳಿಸುತ ಕೊಯ್ದುದರಿಯ ॥39॥

**ಭಾಮಿನಿ**

ಖಳಪತಿಯು ತಾನಿಂತೆನಲು ಕೇ ।
ಳ್ದಳಲುತಲೆ ಮೈರಾವಣಾಖ್ಯನು ।
ಪೊಳೆವ ಖಡ್ಗವ ಪಿಡಿದು ಮಗುಳುಸುರಿದನುಮವನೊಡನೆ ॥
ಇಳೆಯೊಳವರಿಂತೆ ಸಗಲಸುರೆಯು ।
ಚಳಕದಿಂದೇನ್ ಗೆಯ್ದಳೆಂಬುದ ।
ತಿಳಿಸು ಸಾಂಗದೊಳೆನಲು ಸಾಲ್ದಲೆಯವನು ಇಂತೆಂದ ॥40॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಏನನುಸಿರುವೆನೆನ್ನನುಜೆಯಭಿ ।
ಮಾನವನು ನಪವರರು ಕಳೆಯಲು ।
ದಾನವಿಯು ತಾನಯ್ದಿ ಖರನಾ । ಸ್ಥಾನಕಾಗ ॥41॥

ಉಸಿರಿಲೀ ವಾರ್ತೆಯನು ಕೇಳು ।
ತ್ತಸಮಬಲರುಗಳಯ್ದಿ ಯುದ್ಧದಿ ।
ಬಿಸಜಸಖವಂಶಜನ ಬಾಣದಿ । ವಸುಧೆಯೊಳಗೆ ॥42॥

ವರ ಮಹಾ ಖರ ದೂಷಣ ತ್ರಿಶಿ ।
ರರು ಚತುರ್ದಶಸಾವಿರಾಸುರ ।
ಧುರಪರಾಕ್ರಮಿಗಳು ಮಡಿದರದ । ನೊರೆವುದೇನ್ನೈ ॥43॥

ಆಗ ಪುನರಪಿ ಶೂರ್ಪನಖೆಯದ ।
ರಾಗಮಂಗಳನ್ನೈದುತೆನ್ನೊಳು ।
ಬೇಗದಿಂದುಸಿರಲ್ಕೆ ಕೇಳ್ದು ಸ । ರಾಗದಿಂದ ॥44॥

ಮಾವಮಾರೀಚನ ಮುಖದಿ ಕಪ ।
ಟಾವಲಂಬನದಿಂದ ಸೀತೆಯ ।
ನಾ ವಸುಧೆಯೊಡಗೊಂಡು ಬರೆ ಮ । ತ್ತಾವನಿಪರು ॥45॥

**ವಾರ್ಧಕ**

ಘೋರ ಮಾರೀಚನಂ ಕೊಂದುಮವನರಸಿಯಂ ।
ಬೇರೆ ಬೇರರಸುತಯ್ತುಂದು ಪಂಪಾಕ್ಷೇತ್ರ ।
ದಾರಾಮಕಯ್ದಿ ಮರುತಾತ್ಮಜನ ದೆಸೆಯಿಂದ ರವಿಸುತನ ಕಂಡುಮಾಗ ॥
ಭೂರಿನೇತ್ರಜನವನ ಪಿತನೆಡೆಗೆ ಕಳುಹುತ್ತ ।
ಭೋರನುರೆ ಕೀಶಬಲಮಂ ಕೂಡಿ ಕೇಸರಿ ಕು ।
ಮಾರಕನನಟ್ಟಿ ನಮ್ಮೆಡೆಗೆ ವಾರ್ತೆಯನರಿತು ತರುಚರರವೆರಸಿ ರಘುಜ ॥46॥

**ಕಂದ**

ಬಂದಾ ವಾರ್ಧಿಯನುಂ ಸಲೆ ।
ಬಂಧಿಸಿ ಮತ್ಪುತ್ರಮಿತ್ರಬಾಂಧವರುಗಳಂ ॥
ನಿಂದಾ ರಣದೊಳು ಮರ್ದಿಸಿ ।
ಚಂದದೊಳಿಹ ರಾಮನೆಂದನಾ ದಶಕಂಠಂ ॥47॥

**ರಾಗ ಮಾರವಿ ಏಕತಾಳ**

ಇನಿತ್ಯಾತಕೆ ಚಿಂತಿಪೆ ದನುಜಾಪತಿ ।
ಮನುಜರದೇನ್ ಗಣನೆ ॥
ಘನವೇ ವಾನರರಾಹವವೆನಗಿಂ ।
ದಣುಮಾತ್ರವು ಕೇಳು ॥48॥

ತಿಕ್ಕುವೆ ಕೀಶರ ಲೆಕ್ಕಿಸದೀಗಳೆ ।
ಮುಕ್ಕಣ್ಣನು ಮುನಿಯೆ ॥

ಸೊಕ್ಕ ಮುರಿವೆನವರೀರ್ವರ ರಣದೊಳು |
ಜಕ್ಕುಲಿಕೆಯೊಳೊಲಿದು ||49||

ಎನಲೀಕ್ಷಿಸಿ ರಾವಣನತಿ ಜವದಲಿ |
ವಿನಯದೊಳಾ ಖಳಗೆ ||
ಸನುಮತದಿಂದಪ್ಪಣೆ ಕೊಡಲಯ್ತಂ |
ದನು ತನ್ನಯ ಪುರಕೆ ||50||

ಆ ರಾತ್ರೆಯೊಳ್ ಮೈರಾವಣನಯ್ದಿಹ |
ತಾರತಮ್ಯವರಿತು ||
ನಾರೀಮಣಿ ಸರಮೆಯು ಬಳಿಕೋರುವ |
ಚಾರಕನನು ಕರೆದು ||51||

ಪತಿಯೆಡೆಗಟ್ಟಲ್ಕತಿ ಜವದಿಂದಲಿ |
ಪಥಿವೀಶರ ಬಳಿಗೆ ||
ಮತಿಚತುರತೆಯಿಂದಯ್ದುತ ರಾಕ್ಷಸ |
ಪತಿಯನು ಕಂಡೆಂದ ||52||

**ರಾಗ ಭೈರವಿ ಝಂಪೆತಾಳ**

ಕೇಳು ರಾಕ್ಷಸಪತಿಯೆ | ಕರುಣದಿಂ ಮನವೊಲಿದು |
ಊಳಿಗವನಿದನೊಂದ | ಪೇಳಿ ಬಾರೆಂದು ||53||

ಏಕಾಂತದಿಂ ಸರಮೆ | ತಾ ಕಳುಹಲೈತಂದೆ |
ಪೋಕರಾವಣನುಮವಿ | ವೇಕದಿಂದೀಗ ||54||

ನೆನೆದು ಮೈರಾವಣನ | ಘನ ಬೇಗದಿಂ ಕರೆದು |
ರಣಕೆ ಕಳುಹಿರ್ಪನೆಂ | ಬನುವ ನಿನ್ನೊಡನೆ ||55||

ಉಸಿರಿ ಬಾರೆಂದು ನಿ | ನ್ನರಸಿ ಕಳುಹಿದಳೆಂದು |
ಜಸದಿಂದಲೆರಗಿ ರಾ | ಕ್ಷಸ ನಡೆದ ಪುರಕೆ ||56||

**ಕಂದ**

ಚಾರಕನೈದಲ್ ಕಾಣುತ |
ಲಾ ರಾಕ್ಷಸನಾಥನೈದೆ ತನ್ನೊಳು ತಿಳಿದುಂ ||
ಕಾರಣಗಳ ಮೇಲವನುಂ |
ಘೋರನೆ ಹನುಮಾದಿಗಳ್ಗೆ ಪೇಳುತ್ತಿರ್ದನಾಗಳ್ ||57||

**ರಾಗ ಮುಖಾರಿ ಆದಿತಾಳ**

ಲಾಲಿಸಿ ಕೇಳಿರೈ ನೀವಿನ್ನು । ಪೇಳುವೆನೊಂದ ।
ನಾಲಸ್ಯವಿಲ್ಲದೆಲ್ಲವನ್ನು ॥ ಲಾಲಿಸಿ ॥ಪ॥

ರಾವಣಾಸುರನು ತಾನೀಗ । ಮರುತಜನ ಸಂ ।
ಜೀವನದಿಂದ ಬಲು ಬೇಗ ॥
ಈ ವನಚರರೆ । ದ್ದಾವಾರ್ತೆಯ ಕೇ ।
ಳ್ದೀ ವಸುಧೆಗೆ ಮೈ । ರಾವಣ ದೈತ್ಯನ ।
ಭಾವಿಸಿ ನೆನೆಯ । ಲ್ಕೀವೇಳೆಯೊಳವ ।
ಠೀವಿಯೊಳಯ್ದೆ ಮ । ಹಾ ವಿನಯದಲಿ ॥ ಲಾಲಿಸಿ ॥58॥

ಈ ಸೇನೆಗಯ್ದೆನುತಲಿನ್ನು । ಅಪ್ಪಣೆಯಿತ್ತು ।
ವಾಸಿಯೊಳ್ ಕಳುಹಿದನೆನ್ನು ॥
ತಾಸರಮೆಯು ತಿಳಿ । ದಾ ಚರನೋರ್ವನ ।
ಬೇಸರದಟ್ಟಿದ । ಳೀಸೆನಲವಕ
ಟ್ಠಾಸುರ ನಿನ್ನೀ । ಕೀಶಸಮೂಹವ ।
ಮೋಸವಗೆಯ್ಯುವ । ಜೈಸುವಡರಿದು ॥ ಲಾಲಿಸು ॥59॥

ಈ ರೀತಿಯಿಂದ ವಿಭೀಷಣನು । ಜಾಂಬವ ರವಿಜ ।
ಮಾರುತಾತ್ಮಜರ್ಗೆಲ್ಲ ತಾನು ॥
ಭೋರನರುಹಿ ಮ । ತ್ತಾ ರಾತ್ರಿಯೊಳ್ಕಪಿ ।
ವಾರಿಧಿಸೇನೆಯ । ಬೇರೊಂದೆಡೆಯೊಳು ।
ಭೂರಿ ಜಾಗ್ರತೆಯಿಂ । ಶ್ರೀರಾಮನ ನೆನೆ ।
ದೋರಣದಿಂ ಗಂ । ಭೀರದೊಳಿರ್ದ ॥ ಲಾಲಿಸಿ ॥60॥

**ವಾರ್ಧಕ**

ಮುನಿಗಳಿರ ಕೇಳಿ ಮರುತಾತ್ಮಭವನಿತ್ತಮಾ ।
ಜನಪತಿಗಳಿಪ್ಪ ಪಾಳೆಯಕೆಲ್ಲಮುಂ ತನ್ನ ।
ಘನವಾಲದಿಂ ಕೋಟೆಯಂ ಚೆಸಿ ಕಾದಿರ್ದನನಿಮಿಷ ರ್ಮೆಚ್ಚುವಂತೆ ॥
ವನಜಭವ ಭವಮುಖ್ಯರೋರ್ವರುಂ ಪೊಗುವಡಿ ।
ನ್ನನುಮಾನವಾಗಿರ್ಪುದುಳಿದರಿಂಗಸದಳಂ ।
ದಿನನಾಥನುರುಮಂಡಲಕ್ಕಡರಿ ಪಾತಾಳಮಂ ಭೇದಿಸಿರ್ದುದಾಗ ॥61॥

**ರಾಗ ಕೇದಾರಗೌಳ ಅಷ್ಟತಾಳ**
ಇಂತೀ ಪರಿಯೊಳಿರ್ಪ ಕೋಟೆಯ ಬಾಗಿಲೊ ।
ಳಾಂತು ಘೋರಾ ಕೃತಿಯು ॥

ತಾಂತವಕದಿ ಕರವೆರಡರೊಳ್ಗಿರಿಗಳ ।
ನಾಂತಿರೆ ಭರ್ಗನಂತೆ ॥62॥

ಇತ್ತ ಮೈರಾವಣನೆಂಬಸುರನು ಮದೋ ।
ನ್ಮತ್ತನಾಗಿಯೆ ಕುಳಿತು ॥
ಮತ್ತುವಂದದಿ ದಧಿಮುಖನೆಂಬ ದೈತ್ಯನ ।
ಮತ್ತೆ ಕರೆದು ಪೇಳ್ದನು ॥63॥

ನೋಡಿ ಬಾರೆಲೊ ಕೀಶರ್ಗೂಡಿಹ ಪಾಳ್ಯವ ।
ಗಾಢದಿಂದೆನುತಟ್ಟಲು ॥
ಓಡಿಬಂದವನೀಕ್ಷಿಸಿದನು ಬಾಲದಿ ಕಪಿ ।
ಮಾಡಿದ ಕೋಟೆಯನು ॥64॥

ಎತ್ತ ನೋಡಿದಡತ್ತ ದಾರಿಯ ಕಾಣದೆ ।
ಸುತ್ತಿ ಪಾತಾಳಕಾಗಿ ॥
ಮತ್ತಿಳಿದಲ್ಲಿಂದ ಧ್ರುವನಿಳೆಯುವ ಸಾರಿ ।
ಪಥ್ವಿಗಯ್ತಂದು ಬೇಗ ॥65॥

ಬಂದುಸಿರಿದನು ಮೈರಾವಣದೈತ್ಯಗೆ ।
ನಿಂದು ಕರವ ಮುಗಿದು ॥
ಚಂದದಿ ಮರುತಜನೆಸಗಿದ ಕೋಟೆಯ ।
ಅಂದವನೆಲ್ಲವನು ॥66॥

**ಕಂದ**

ಕೇಳುತ ಮೈರಾವಣನಂ ।
ದಾಲೋಚಿಸುತಾಗಲೊಡನೆ ಸೂಚೀಮುಖಂ ॥
ಬೋಳವಿಸಿ ಕಳುಹಲಿನಕುಲ ।
ಪಾಲಕನಿಹ ಪಾಳಯಕ್ಕೆ ಪುನರಪಿ ಜವದಿಂ ॥67॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸೂಚಿಮುಖನೆಂಬಧಮ ಖಳ ನಾ ।
ರಾಚದಂದದಿ ಬೆಳಸಿ ನಾಸಿಕ ।
ಖೇಚರದ ಮೇಲ್ಬಂದ ಮನದಲಿ । ಯೋಚಿಸುತ್ತ ॥68॥

ಮಾರುತಿಯು ತಾ ರಚಿಸಿರು ಬಲು ।
ಘೋರತರ ವಾಲಧಿಯ ಕೋಟೆಯ ।
ಸಾರಿ ಪಥವನು ಕಾಣದಿರೆ ಮದ । ವೇರಿ ಬಳಿಕ ॥69॥

ಮೊಗವ ಮುಂದಕ್ಕೂರಿ ನಾಸದಿ ।
ಬಗೆಬಗೆದು ನೋಡಲ್ಕೆ ಮುರಿದುದು ।
ಬಿಗುಹಿನಿಂದಿಹ ಗೋಣ ಬಹು ರ । ಕ್ತಗಳು ಸುರಿಯೆ ॥70॥

ತರಹರಿಸಿ ನಿಲಲಾರದಾ ಕ್ಷಣ ।
ಭರದೊಳೈತಂದಧಿಪಗರುಹಲು ।
ಬೆರಳ ಮೂಗಿನೊಳಿಟ್ಟು ತೂಗಿದ । ಶಿರವನಾಗ ॥71॥

ಮತ್ತೆ ಕಳುಹಿದ ವಜ್ರದಂಷ್ಟ್ರನ ।
ಚಿತ್ತದಲಿ ಖತಿಗೊಂಡು ದನುಜನು ।
ಮತ್ತ್ಯವಂದದೊಳಪ್ಪಣೆಯ ತಾ । ನಿತ್ತು ಬೇಗ ॥72॥

**ಕಂದ**

ಬಂದಾ ದೈತ್ಯಂ ಕೋಟೆಯ ।
ನಂದೀಕ್ಷಿಸಿ ಭೇದಿಸಲ್ಕೆ ಬಗೆಯಲ್ದಂಷ್ಟ್ರಂ ॥
ನೊಂದುರೆ ಮುರಿಯಲ್ಕವನೇ ।
ಳ್ತಂದುಂ ಸೂಚಿಸಿದನಾಗ ಮೈರಾವಣನೊಳ್ ॥73॥

**ರಾಗ ತುಜಾವಂತು ಅಷ್ಟತಾಳ**

ಧೀರ ಲಾಲಿಪುದೆನ್ನ ಮಾತ । ದಯ ।
ದೋರಿ ಮಮತೆಯೊಳ್ ಪ್ರಖ್ಯಾತ ॥ ಧೀರ ॥ ॥ ಪಲ್ಲವಿ ॥

ಕೀಶ ಬಲವನೀಕ್ಷಿಸಿದೆ । ನಾ ನಿ ।
ನ್ನೇಸು ಪೇಳುವೆ ನೀಗ ಬರಿದೆ ।
ಭಾಷಿಸುವವನಲ್ಲದಿರದೆ । ಕಪಾ ।
ರಾಶಿ ಚಿತ್ತೈಸು ಕೋಪಿಸದೆ ॥
ಆ ಸೇನೆಯನು ಪೊಗ । ಲೀಸಮಯದೊಳು ಮ ।
ಹೇಶಗರಿದು ಕೇಳಿ । ನ್ನಾ ಸುರಾಗ್ರಗಣ್ಯ ॥ ಧೀರ ॥74॥

ಕುಲಿಶೋಪಮಯವಾಗಿ ಸುತ್ತ । ತದ್ ।
ಬಲಕೆಲ್ಲ ಕೋಟೆಯ ತೆತ್ತಾ । ಗೆಲವಿನಿಂ ಪ್ರಜ್ವಲಿಸುತ್ತ । ತೋರ್ಪು ।
ದೊಲವಿನಿಂ ಭಯವ ಬೀರುತ್ತ ॥

ಬಲುಬಗೆಯಿಂದದ | ರೊಳ ಪೊಗುವರೆ ದಾರಿ |
ಗಳನಿಂದು ನಾ ಕಾಣೆ | ಬಳಲಿ ಬಾಯಾರಿದೆ || ಧೀರ ||75||

ಉರಗಾಲಯದಿಂದ ಮೇಲೆ | ಪು |
ಷ್ಕರಕಡರಿಹುದಿನ್ನು ಲೀಲೆ |
ಗೆಲವಿಲ್ಲವಿನ್ನತಿಜ್ವಾಲೆ | ಚುಚ್ಚು |
ತಿರುವುದು ಜಯಸಿರಿ ಬಾಲೆ ||
ಮರೆಯದಿನ್ನವಳಾರ್ಗೆ ಪರಿಣಯವಾಹಳೊ |
ಪರಮೇಶನಿಂಗೋರ್ವ | ಗರಿವುಂಟು ದೊರೆರಾಯ || ಧೀರ ||76||

**ರಾಗ ಭೈರವಿ ಝಂಪೆತಾಳ**

ಕೇಳುತಾಕ್ಷಣ ಮನದೊ | ಳಾಲೋಚಿಸುತ ತಿಳಿದ |
ಮೇಲೊಂದುಪಾಯವನು | ಕಾಲೋಚಿತಕ್ಕೆ ||77||

ಎಲರಣುಗನೆಸಗಿರುವ | ಬಲುಪರಾಕ್ರಮಗಳಿಂ |
ಗಲಸಿದಡದೇನಹುದು | ಕೆಲಸ ಬಳಿಕೆಮಗೆ ||78||

ಆ ಸೇನೆಗತಿಹಿತ ವಿ | ಭೀಷಣನುಮವನಂತೆ |
ವೇಷವನು ತಳೆದು ನಾ | ಕೀಶಬಲದೊಳಗೆ ||79||

ಪೊಕ್ಕು ಕಾರ್ಯವ ಮಾಡಿ | ಥಕ್ಕನಯ್ದುವೆನೆನುತ |
ಅಕ್ಕರದಿ ಮೈರಾವ | ಣಾಖ್ಯ ಜವದಿಂದ ||80||

ಸರಮಾಧವನ ರೂಪ | ನುರೆ ಧರಿಸಿ ಮರುಗುತ್ತ |
ಭರದಿಂದ ಬಂದನಾ | ಮರುತಜನ ಬಳಿಗೆ ||81||

**ಭಾಮಿನಿ**

ಕಪಟದಸುರನ ಕಂಡು ಮಾರುತಿ |
ಕಪೆಯೊಳಿಂತೆಂದನುಮೀದೇನ್ನೈ |
ಕಪಣನಂದದಿ ಮರುಗುತಿಹೆ ಮಾತಾಡು ಮಮತೆಯಲಿ ||
ಅಪರಿಮಿತ ಬಲದೊಳಗೆ ಮತ್ತೇ |
ನಪರಬುದ್ಧಿಕೆಯಾದುದೋಯನೆ |
ಗುಪಿತದಿಂ ಖಳನೆಂದ ಮಾರುತಿಯೊಡನೆ ವಿನಯದಲಿ ||82||

**ರಾಗ ಕೇದಾರಗೌಳ ಅಷ್ಟತಾಳ**
ಪಾತಾಳಲಂಕೆಯಿಂದೋತು ಮೈರಾವಣ |
ತಾ ತಳುವದೆ ಬಂದೀಗ ||

ಪ್ರೀತಿಯಿಂದೆಮ್ಮಗ್ರಜಾತನೊಡನೆ ಕಿವಿ ।
ಮಾತುಗಳಾಡಿಕೊಂಡು ॥83॥

ಬರುವನೆಮ್ಮಲ್ಲಿಗೆ ಬಹ ವಸಗೆಯ ತಿಳಿ ।
ದೊರೆವ ನಿನ್ನೊಳು ಲಾಲಿಸು ॥
ದುರುಳನವನು ಮಾಯೋದ್ಧತ ಅಜ ಹರಿ ಹರ ।
ಗರಿದು ಜೈಸಲು ಸುಮ್ಮನೆ ॥84॥

ಈ ಕಪಿಗಳನೆಲ್ಲ ತಾ ಕಪಟದಿ ಕೊಂದು ।
ಲೋಕನಾಯಕರೀರ್ವರ ॥
ಪೋಕತನದೊಳೇನಮಾಡುವನೆಂಬುದ ।
ನಾ ಕಾಣೆನೀ ವೇಳ್ಯದಿ ॥85॥

ಹನುಮ ಕೇಳೀಗ ನೀ ಮತ್ತೊಂದು ಕಡೆಯೊಳ ।
ಗಣುಮಾತ್ರನಾಗಿರಲು ॥
ದನುಜನ ಕೊಲಬಹುದಾದರೆ ನಾನವ ।
ನನುವಿನಿಂ ಬಹ ದಾರಿಯ ॥86॥

ಈಕ್ಷಿಸುತಲೆ ಬಂದಾಕ್ಷಣ ಉಸಿರುವೆ ।
ಸುಕ್ಷೇಮವಹುದೆಲ್ಲರ್ಗೆ ॥
ದಕ್ಷಮಖಾಂತಕತ್ರ್ಯಕ್ಷನಂಶೀಭೂತ ।
ಈಕ್ಷಿಸು ಮುಖ್ಯಪ್ರಾಣ ॥87॥

**ರಾಗ ಮಾರವಿ ಏಕತಾಳ**

ಇಂತೆನಲಾಶುಗನಾತ್ಮಜನಣುರೂ । ಪಾಂತುರೆ ಮರನಡಿಯೆ ॥
ನಿಂತಿರಲಾ ನಿಶಿಚರ ಪೊಕ್ಕನು ಬಳಿ । ಕಂತರಂಗದಿ ಬಲವ ॥88॥

ತಳಿವುಬೇಳ್ವೆಯ ಬೂದಿಯನಾ ಕಪಿ । ಬಳಗದ ಬಲಕೆಲ್ಲ ॥
ಘಳಿಲನೆ ಮುಂದ್ಕೈ ತಂದು ಕಂಡನು ರಘು । ಕುಲತಿಲಕರನಾಗ ॥89॥

ನಿದ್ರೆಯೊಳ್ ಮಲಗಿಹ ರಘುಜರೆಚ್ಚರದಂತೆ। ಕದ್ದು ಪಾತಾಳಕ್ಕೆ ॥
ಭದ್ರಮಂಚವ ತಾನೊಯ್ದು ಮನೆಯೊಳಿವ । ರಿದ್ದಿರವರಿಯದಂತೆ ॥90॥

ಮಲಗಿಸಿ ತಾ ಘನನಿದ್ರೆಯೊಳೊರಗಿರೆ । ತಿಳಿದಾತನ ಸತಿಯು ॥
ಚೆಲುವರಿವರು ನರರಲ್ಲೆನುತೀಕ್ಷಿಸಿ । ವಳಸೌಧಾಗ್ರದಲಿ ॥91॥

ಎಚ್ಚರದಂದದಿ ಪಾವನಪುರುಷರ । ನಚ್ಚರಿಯೊಳಗಿಡಲು ॥
ಅಚ್ಯುತನತಿ ಸೌಖ್ಯದೊಳಿರ್ದನು ತ । ನ್ನಿಚ್ಛೆಯೊಳ್ ಜಗವರಿಯೆ ॥92॥

**ಕಂದ**

ಆ ಸಮಯದೊಳಿತ್ತಲು ಮಹ ।
ಕೀಶರ್ತಮತಮಗೆ ಭೀತಿಯಿಂದೆಚ್ಚರ್ತುಂ ॥
ಬಾಸನ್ನಿಧಿಯಣುಗಂ ವಾ ।
ಣೀಶನ ಸುತ ಮುಖ್ಯರೈದಿ ಕಾಣದೆನಪರಂ ॥93॥

**ಭಾಮಿನಿ**

ಭೂಪರಿನ್ನೇನಾದರೈ ಹಾ ।
ಹಾ ಪವನಸುತನೆಲ್ಲಿಗಯ್ದಿದ ।
ನೀಪರಿಯ ಕಪಟಗಳಿದೇನೆಂದೆನುತ ಚಿಂತಿಸುತ ॥
ತಾಪದಿಂದೈ ತಂದು ಕಂಡರು ।
ಶ್ರೀಪತಿಯ ಸ್ಮರಣೆಯೊಳು ಕುಳಿತಿರು ।
ವಾ ಪರಾಪರವಸ್ತು ಹನುಮನನೊಲಿದು ಮುಂಗಡೆಯ ॥94॥

**ರಾಗ ಕಾಂಭೋಜಿ ಝಂಪೆತಾಳ**

ಮರನಡಿಯ ಮಿಣ್ಣನಾಗಿರುವ ಮರುತಜನ ಕಂ ।
ಡುರುತರದ ಪ್ರೇಮದಿಂದಾಗ ॥
ಸರಸಿಜೋದ್ಭವಸುತಾಯಮರ್ನಣುಗ  ಸಹ ಕೇಳ್ದ ।
ರರಿಕುಲಾಚಲವಜ್ರನೊಡನೆ ॥95॥

ಏನಯ್ಯ ಪವನಸುತ ನೀ ಮೌನದೊಳಗಿರ್ಪೆ ।
ಭಾನುವಂಶಜ ನಪರ ಕಾಣೆ ॥
ನೀನರಿತಡರುಹೆನಲು ವಾನರಕುಲಾಗ್ರಣಿಯಿ ।
ದೇನೆಂದು ಬೆರಗುವಟ್ಟೆಂದ ॥96॥

ಲಾಲಿಪುದು ನೀವೆಲ್ಲ ಖೂಳ ಸರಮಾಧವನ ।
ಬಾಲಿಶತ್ವದ ಮಾಯೆಗಳನು ॥
ಕೋಳುವಿಡಿದನು ಎನ್ನನವನು ವಂಚಿಸಿ ಭೂಮಿ ।
ಪಾಲಾಗ್ರಣಿಗಳೀರ್ವರನು ॥97॥

ಕೊಂದವನ ವಂಶವೆಲ್ಲವನು ರಾವಣ ಸಹಿತ ।
ಲಿಂದಬ್ಧಿಯಲಿ ಕೆಡಹಿ ಬಳಿಕ ॥
ಇಂದಿರಾಪತಿಯನೆಲ್ಲಿದ್ದರೀಗಳೆ ತರುವೆ ।
ನೆಂದು ಗರ್ಜಿಸುತಿದ್ದನಾಗ ॥98॥

ಅನಿತರೊಳು ದನುಜಾಧಿಪತಿ ವಿಭೀಷಣ ಬಂದು |
ಹನುಮನಾರ್ಭಟೆಯ ನೀಕ್ಷಿಸುತ ||
ವಿನಯದಿಂ ಕೇಳ್ದನೀ ಕೋಪವೇಂ ಕಾರಣದಿ |
ಜನಿತಮಾಯ್ತೆಂದವರೊಳಾಗ ||99||

**ಕಂದ**

ಆ ಸಮಯದೊಳೀಕ್ಷಿಸುತಂ |
ದಾಶುಗನಾತ್ಮಭವನಯ್ದೆ ಸರಮಾಧವನಂ ||
ನಾಶವ ಗೈವೆನೆನುತ್ತಲೆ |
ಭಾಷಿಸಿದಂ ಬಳಿಕ ಸರಸಿಜೋದ್ಭವಸುತನೊಳ್ ||100||

**ರಾಗ ದೇಶಿ ಅಷ್ಟತಾಳ**

ಈತನೇ ಕಡು ಪಾತಕಿಯಕಟ |
ಘಾತಿಸುವೆನೀಕ್ಷಣದೊಳಿವನ ಮ |
ಹಾತಿಶಯಗಳಿದೇನಿರೈ ||101||

ಎನ್ನ ವಂಚಿಸಿ ಪೋಗಿ ಭೂಮಿಪಕುಲ |
ರನ್ನರೀರ್ವರನೊಯ್ದು ನಮ್ಮೊಳು |
ಬನ್ನಣೆಯ ಮಾತಾಡುವ ||102||

ಮರೆವರೇ ರಾಕ್ಷಸರ್ ತಮ್ಮ ವಿದ್ಯವ |
ತರಿದಿವನ ಸಹಭವನ ಸಹಿತೆಮ |
ಪುರದೊಳಿರಿಸುವೆನೀಕ್ಷಣ ||103||

**ಕಂದ**

ಈ ತೆರದಿಂದಲಿ ಮಾರುತ |
ಜಾತಂ ಕೋಪಿಸಲು ಕಂಡು ಜಾಂಬವ ದೇವಂ ||
ತಾ ತಳುವದೆ ಶರಣನೊಳಂ |
ಪ್ರೀತಿಯೊಳಿಂತೆಂದ ಮಧುರವಚನಗಳಿಂದಂ ||104||

**ರಾಗ ಸಾಂಗತ್ಯ ರೂಪಕತಾಳ**

ಏನಯ್ಯ ರಾಕ್ಷಸಕುಲಶಿರೋಮಣಿಯೆ ಕೇಳ್ |
ನೀನಾಂಜನೇಯನೆಂದುದನು ||
ಮೌನವಿಡಿಯದೀಗಲುಸಿರು ವತ್ತಾಂತವ |
ಭಾನುವಂಶಜರೆಲ್ಲಿ ತೋರು ||105||

ಎನಲಾಗಳಂಜುತೊಯ್ಯನೆ ನಡುಗುತ ಪೇಳ್ದ ।
ದನುಜೇಶನೊಲಿದು ಜಾಂಬವಗೆ ॥
ಇನಿತೆಂಬ ವತ್ತಾಂತವೇನೊಂದನರಿಯೆನು ।
ವನಜನಾಭನ ಪಾದದಾಣೆ ॥106॥

ಆ ಮಹಾಪುರುಷ ರಾಮನನರಿತವರುಂಟೆ ।
ಸ್ವಾಮಿದ್ರೋಹಕನಲ್ಲ ನಾನು ॥
ಕಾಮಿಗಳರಸ ರಾವಣಮೈರಾವಣನೆಂದೆಂ ।
ಬಾ ಮಾಯಾವಿಯ ಲಂಕೆಗಿಂದು ॥107॥

ಪಾತಾಳದಿಂ ಬರಿಸಿರ್ಪನೆಂದೆನುತಲೆ ।
ನಾ ತಿಳಿದರುಹಿರ್ಪೆ ಮೊದಲೆ ।
ಮಾತಿದು ಪುಸಿಯಲ್ಲವನು ಬಲು ಕಪಟಿ ನ ।
ಮ್ಮಾತನೊಳವಗತಿ ಪ್ರೀತಿ ॥108॥

ಗುರುವಿನೆಡೆಯೊಳುನಮ್ಮಣ್ಣಂದ್ಯರೊಡನೆ ನಾ ।
ನೆರಕವಾಗಿಯೆ ವಿದ್ಯೆಗಳನು ॥
ಪರಿ ಪರಿ ವಿಧದಿ ಸಂಗ್ರಹಿಸುವ ಕಾಲದಿ ।
ದೊರಕಿತವನೊಳತಿ ಸ್ನೇಹ ॥109॥

**ಭಾಮಿನಿ**

ಬಲ್ಲಿದರು ನಾವಾದೆವಟಮಟ ।
ದಲ್ಲಿ ನಾಲ್ವರು ನೋಡಲೀ ಧರೆ ।
ಯಲ್ಲಿ ಚರಿಸುವ ಸಕಲ ಜೀವಿಗಳಂತೆ ರೂಪಾಂತು ॥
ಬಲ್ಲವಿಕೆಯಿಂ ತೋರಲಾಪೆವ ।
ದೆಲ್ಲಮಿನ್ನಂತಿರಲಿ ತಿಳಿಯಲು ।
ಖುಲ್ಲ ಮೈರಾವಣನು ಮದ್ರೂಪಿನಲಿ ವಂಚಿಸಿದ ॥110॥

**ಕಂದ**

ಆತನ ಬಗೆಯಂ ತೋರುವೆ ।
ನೀತತುಕ್ಷಣಕೆಂದು ಸರಮೆಯರಸಂ ಖಳನಾ ॥
ರೀತಿಯೊಳಾಕೃತಿಧರಿಸಲ್ ।
ವಾತಸುತಂಗೈದೆ ತೋರ್ದನಜಸುತನಾಗಳ್ ॥111॥

**ರಾಗ ಮಧುಮಾಧವಿ ಅಷ್ಟತಾಳ**

ನೋಡಿ ಮಾರುತಿಯಾಡಿದನಾಗ ।
ಪ್ರೌಢಿಯೆಂದರಿತು ಕೊಂಡಾಡುತ ಖಳನನ್ನು ॥ ನೋಡಿ ॥ ॥ಪಲ್ಲವಿ॥

ಸಾಕಿನ್ನು ಕಂಡೆ ನೀ | ನಾಕರಿಸಿದ ರೂಪ |
ವ್ಯಾಕಿನ್ನು ನಿನ್ನೊಳು | ಸೋಕುವುದೇ ಮಾಯೆ |
ನಾ ಕಿನಿಸಿನೊಳೆಂದುದ | ಮನಕೆ ತಾರ |
ದಾ ಋಳನಿಹ ತಾಣದಾ | ಪಥವದೆಲ್ಲಿ |
ಲೋಕೇಶರೇನಾದ | ರೋ ಕಾಣೆನಕಟ || ನೋಡಿ ||112||

ಪಾತಕಿಯವ ನೀನೆಂ | ದಾ ತೆರನೆಸಗಿದ |
ರೀತಿಯೆಲ್ಲವು ನಿಜ | ವದುದಾಗಲಿ ದುಷ್ಟ |
ನಾತನಿರುವಠಾವೆಲ್ಲಿ | ತೋರಿದರೆ ಶ್ರೀ |
ನಾಥನ ನಿಮಿಷದಲ್ಲಿ | ತರುವೆ ತರಿ |
ದಾತನ ರಕ್ತವ | ಭೂತಗಳುಣಲೀವೆ || ನೋಡಿ ||113||

ಇಂತೆನೆ ಮಾರುತಿಯಂತ ರಂಗದಿ ಮಹ |
ಸಂತೋಷವನು ತಾಳ್ದು | ನಿಂತು ವಿಭೀಷಣ
ನಾಂತು ಮುನ್ನಿನ ರೂಪವ | ಧ್ಯಾನಿಸುತ ಸ |
ರ್ವಾಂತರ್ಯಾಮಿಯ ಪಾದವ | ಬಳಿಕ ಹನು |
ಮಂತನೊಳಿಂತೆಂದ | ಶಾಂತ ವಾಕ್ಯದಲಿ || ನೋಡಿ ||114||

**ಕಂದ**

ಕೇಳೈ ಮರುತಜ ನೀ ಪಾ |
ತಾಳಕ್ಕಯ್ದುವರೆ ತೋರ್ಪೆ ನಿನಗಾ ಪಥಮಂ ||
ಈ ಲಂಕೆಗೆ ದಕ್ಷಿಣದೊಳು |
ಮೇಲಾಗಿಹುದೊಂದು ಕೊಳನುಮಾಕೊಳದೊಳಗಂ ||115||

**ರಾಗ ಭೈರವಿ ಝಂಪೆತಾಳ**

ಎಸೆದಿಹವು ಪಂಕಜವು | ಸಸಿನೆಯಾ ಪಂಕಜದ |
ಕುಶಲಕರನಾಳದಿಂ | ಜಸದಿಂದಲಿಳಿಯೆ ||116||

ತೋರುವುದು ಮತ್ತಲ್ಲಿ | ಮೈರಾವಣನ ಪುರವು |
ಧೀರನೀ ಗಮಿಸೆಂದು | ಭೋರನರುಹಿದನು ||117||

ಹರಿಶರಣನೆಂದುದನು | ಮರುತಜನು ಕೇಳಿ ಚ |
ಚ್ಚರದೊಳಣುರೂಪದಿಂ | ಭರದಿ ಸರಸಿಯನು ||118||

ತಡೆಯದಾಕ್ಷಣಮೈದಿ | ಜಡಜನಾಳದೊಳಿಳಿದು |
ಕಡು ಸೊಬಗಿನಿಂದಿರುವ | ಪೊಡವಿಯನು ಕಂಡ ||119||

ತತ್ಸಮಯದೊಳಗೊರ್ವ । ಮತ್ಸ್ಯವಾನರನಯ್ದಿ ।
ಕುತ್ಸಿತ ಮತಿಗಳಿಂದ । ಮತ್ಸರಿಸುತಾಗ ॥120॥

ತಡೆದಾಗ ಮರುತಜನ । ಕಡು ಬಲೋದ್ಧತಗಳಿಂ ।
ಘುಡುಘುಡಿಸಿ ಮುಂದಡಿಯ । ನಿಡಬೇಡವೆಂದ ॥121॥

**ಕಂದ**

ಮೀನಾಕಾರದೊಳೆಸೆದಿಹ ।
ವಾನರನಾರ್ಭಟೆಯ ಕಂಡುಮನಿಲ ಕುಮಾರಂ ॥
ಏನಾಶ್ಚರ್ಯವಿದೆನುತವ ।
ನಾನನ ರೂಪುಗಳನೀಕ್ಷಿಸುತಲಿಂತೆಂದಂ । ॥122॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ತಡೆಯುವುದೇತಕೋ ನೀನೆನ್ನ । ನಿನ್ನ ।
ಪಡೆದವರ್ಯಾರು ಪೇಳೆಲೊ ಮುನ್ನ ॥
ಬಿಡು ಬಿಡು ದಾರಿಯ ಸುಮ್ಮನೆ । ಅತ್ತ ।
ನಡೆ ನಡೆ ನಿಲ್ಲದೆ ಘಮ್ಮನೆ ॥123॥

ಏತಕೆ ನೀನೆನ್ನ ಜನನವ । ಕೇಳ್ವ ।
ರೀತಿಯದೇನು ನೀನಾರವ ॥
ಮಾತಾಡೆ ಕೊಲ್ಲುವೆನೆಂದನು । ಮತ್ಸ್ಯ ।
ಜಾತ ವಾನರನುರೋಷದಿ ತಾನು ॥124॥

ಕೊಂದೇನೆಂದರೆ ನಿನ್ನನೆನಗಿಂದು । ಕಪೆ ।
ಹೊಂದಿದೆ ಮನ್ಮನದಲಿ ಬಂದು ॥
ಇಂದು ಪಥವನೀಯಲ್ ಬಿಡುವೆನು । ಇಂ ।
ತೆಂದು ಹನುಮನೆನಲೆಂದನು ॥125॥

ಪಥವನೀವೆನು ನಿನಗರ್ಯಮಾ । ಸುತ ।
ನತಿಶಯದೂರಿಗೆ ವಿಕ್ರಮಾ ॥
ಗತಿಗೊಂಡು ಪೋಗುವುದೇಳೆಲಾ । ನಿಲ್ಲು ।
ಮತಿಗೆಡಬೇಡ ನೀ ತಾಳೆಲಾ ॥126॥

ಕಲಹಕೆ ಬಂದವನಲ್ಲಯ್ಯ । ನಿನ್ನ ।
ನೆಲೆಯ ಪೇಳಿದರೆ ಕೇಳ್ವೆನೆಲ್ಲಯ್ಯ ॥

ಛಲವೇತಕೆನೆ ಹನುಮಗೆಂದನು । ಋಷ ।
ಕುಲಜ ತನ್ನಯ ವತ್ತಾಂತಗಳನು ॥127॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಲಾಲಿಪುದು ಬಳಿಕಾದಡೆಯು ನೀ ।
ಕೇಳಿ ಬಲ್ಲೆಯ ವಾಯುಪುತ್ರನ ।
ಬಾಲತನದೊಳಗಿನನ ತುಡುಕಿದ । ಲೀಲೆಯವನ ॥128॥

ಆ ಮಹಿಮನುರು ಪುತ್ರ ತಾನಿಂ ।
ತೀಮಹಿಯೊಳಿನಿತ್ಯಾತಕಿಹೆಯೆನೆ ।
ಪ್ರೇಮದಿಂದರುಹುವೆನು ನಿನ್ನೊಳು । ನೇಮದಿಂದ ॥129॥

ತರಣಿಜನ ತಾ ಋಷ್ಯಮೂಕದ ।
ಗಿರಿಯೊಳಿರಲಾ ತಾಣಕೊಲಿದುರೆ ।
ವರ ಮಹಾ ಶ್ರೀರಾಮಚಂದ್ರನು । ಭರದೊಳಂದು ॥130॥

ಅನುಜ ಸಹ ನಡೆತಂದಿಹನು ಗಡ ।
ಘನಮಹಿಮ ತಾ ವಿಷ್ಣುಗಡ ಭೂ ।
ವನಿತೆ ರಮೆ ಗಡ ದುಷ್ಟರನು ತಾ । ಹನನಗೊಳಿಸೆ ॥131॥

ದಶರಥಾಖ್ಯನ ಸತಿಯ  ಬಸಿರಿಂ ।
ರಸೆಯೊಳಗೆ ಜನಿಸಿರ್ಪ ಗಡ ಕೇಳ್ ।
ವಸಗೆಯನು ಮತ್ತೊಂದೆ ಮನವೊಲಿ । ದುಸಿರುತಿಹೆನು ॥132॥

**ದ್ವಿಪದಿ**

ನಿನ್ನಣುಗಗೀವೆನೆನೆ ಮಾನಿನಿಯು ಬಳಿಕ ।
ಮನ್ನಣೆಯೊಳುಸಿರಿದಳು ಮಾರುತಿಯೊಳನಕ ॥133॥

ದ್ವಾರದಲಿ ಶೋಧಿಪರು ದುಷ್ಟ ರಕ್ಕಸರು ।
ಮಾರುತಜನೀನೆಂತು ಬಹೆ ಸುಮ್ಮನಿರರು ॥134॥

ಎನಲಾಗ ಕೇಳ್ದಾಂಜನೇಯನು ನಗುತ್ತಾ ।
ವನಿತೆಯೊಳು ಪೇಳಿದನು ಮುದವ ತಾಳುತ್ತ ॥135॥

**ಕಂದ**

ಪಂಚಾಣುರೂಪದಿಂದಂ ।
ಕಾಂಚನಗಿರಿದಶನಾಗಬಲ್ಲೆನು ಬಳಿಕಂ ॥

ನೀಂ ಚಲಿಸದೆ  ಬೇಗೆನ್ನಯ ।
ವಾಂಛಿತಮಂ ಸಲಿಸುವುದೆನಲವಳಿಂತೆಂದಳ್ ॥136॥

**ರಾಗ ನವರೋಜು ಆದಿತಾಳ**

ವಾಯುಜಾತನೆ ಕೇಳು । ಸು । ಪ್ರೀಯದಿಂ ಕರುಣಾಳು ॥
ಆಯತದಿಂ ಶುಭ । ಕಾಯವನಿಂದೀ ।
ತೋಯಕಮಂಡಲ । ಬಾಯೊಳು ಪೊಗಿಸಲು ॥137॥

ಕರೆದೊಯ್ವೆ ನಾ ನಿನ್ನ । ದು । ಷ್ಟರು ಕಾಣದೋಲೆನ್ನ ॥
ಪುರಕೆನೆ ಮಾರುತಿ । ಯಣುರೂಪಿಂದಾ ।
ತರುಣಿಯ ಪೊಗಳುತ । ಚ್ಚರಿಯೊಳೀಕ್ಷಿಸುತ ॥  ॥138॥

ಅಂಬುಜಾಕ್ಷಿಯ ಕಯ್ಯ । ಸ್ವರ್ಣ ।
ಕುಂಭವ ಪೊಗಲು ಕಪಿಯ ॥
ಅಂಬರವಾಸಿಗಳ್ । ಪೊಗಳಿದರಾ ಮಹ ।
ಶಂಭು ಸಂತೋಷದಿ । ಬೆರಗುವಟ್ಟಿರ್ದನು ॥139॥

**ಭಾಮಿನಿ**

ದಢಮನದಿ ನೀವ್ ಕೇಳಿರೈ ಜತಿ ।
ಗಡಣಮಾನಂದದಲಿ ಮರುತಜ ।
ನಡಗಿರಲು ರಕ್ಕಸಿಯು ಪೊತ್ತಿಹ ಕೊಡದೊಳಾಗಸುರೆ ॥
ನಡೆತರಲು ದ್ವಾರದಲಿ ದನುಜರು ।
ಕೊಡನ ತೂಗಲ್ಕೊಲೆದುದಾ ತ ।
ಕ್ಕಡಿಯು ತುಸುಮಾತ್ರದಲಿ ಕಾಣುತ ಘರ್ಜಿಸುತ ಖಳರು ॥140॥

**ಕಂದ**

ಶೋಧಿಸಿ ಬೀಳ್ಕೊಡಲಾ ಸತಿ ।
ಯಾದರದಿಂದಾಂಜನೇಯನನ್ನೊಲಿದಂದುಂ ॥
ಮೋದದಿ ಪುರಮಂ ಪೊಗಿಸ ।
ಲ್ಕಾದುದು ಶುಭಶಕುನಮಾಗಲಚ್ಚರಿಯಿಂದಂ ॥141॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸತಿಯು ಸಂತಸದಿಂದಲಾ ಮಾ ।
ರುತಿಯ ಪುರವರಕೊಯ್ಯಲಾಕ್ಷಣ ।
ಮತಿಯುತನು ಘಟದಿಂದ ಪೊರಟಂ । ದತಿಶಯದೊಳು ॥142॥

ಕಂಡು ದುರುಳನ ಪುರವನಾ ದುರು ।
ದುಂಡಿ ಸಹ ನಡೆತಂದು ಮಾರುತಿ ।
ತಂಡ ತಂಡದ ಭಟರನೀಕ್ಷಿಸು । ತಂಡಲೆಯೊಳು । ॥143॥

ಆ ಸಮಯದೊಳಗೆಂದಳಾದನು ।
ಜೇಶನನುಜೆಯು ಹನುಮ ಕೇಳೆನು ।
ತಾಸೆಯಲಿ ಮನವೊಲಿದು ಪೂರ್ಣೋ । ಲ್ಲಾಸೆಯಾಗಿ ॥144॥

ತರಣಿಕುಲಜರನೀರ್ವರನು ಕೇಳ್ ।
ಮರೆವುತಿಹ ಸೌರಮ್ಯ ಸೌಧದೊ ।
ಳರಿಯದಂದದೊಳಿಟ್ಟಹಳು ನ । ಮ್ಮರಸನರಸಿ ॥145॥

ಮೊದಲವರ ಕೈವಶವ ಗೆಯ್ದಿ ।
ನ್ನದರಮೇಲಾದುದನುಕಾಂಬುದು ।
ಚದುರ ಲೇಸಾಗಿಹುದು ನೀನರಿ । ಯದುವದೇನು ॥146॥

**ಕಂದ**

ಎಂದಸುರೆಯ ವಚನವಮಾ ।
ನಂದಗಳಿಂದಾಲಿಸುತ್ತೆ ಪವನಕುಮಾರಂ ॥
ತಂದಾ ಭೂಮಿಪರೆಚ್ಚರ ।
ದಂದದೊಳಂ ಮೋಸವಿಲ್ಲದೆಡೆಯೊಳಗಿಟ್ಟಂ ॥147॥

**ರಾಗ ಪಂಚಾಗತಿ ಮಟ್ಟೆತಾಳ**

ಬಳಿಕ ಮಹಾಬಲಕುಮಾರ । ನೊಲಿದು ತನುವ ಪೆರ್ಚಿಸುತ್ತ ।
ಹಲವು ವಿಧಗಳಿಂದ ದನುಜ । ಕುಲವ ಸವರುತ ॥
ನಲವಿನಿಂದ ಭೂತಗಣಕೆ । ಬಲಿಯ ಕೊಟ್ಟು ಭುಜಬಲಂಗ ।
ಳೊಳಗೆ ಸಿಂಹನಾದದಿಂದ । ಉಲಿಯಲಾ ಕ್ಷಣ ॥148॥

ದಧಿಮುಖಾಖ್ಯನೆಂಬ ದೈತ್ಯ । ನೊದರಿ ಬಂದು ವಾಯುಜಾತ ।
ನಿದಿರೊಳಾರ್ಭಟಿಸುತ ನಿಂದ । ಮದಗಳಿಂದಲಿ ॥
ಬಿದಿರುಕಾಯನೊಡನೆ ಪೇಳ್ದ । ನದುಭುತಂಗಳಿಂದ ಸುರರು ।
ಬೆದರುವಂತೆ ಭಯವ ತೋರಿ । ವಿಧವಿಧಂಗಳ । ॥149॥

ಎತ್ತಣಿಂದ ಬಂದೆ ಕೀಶ । ನಿತ್ತ ನಮ್ಮ ಪಟ್ಟಣಕ್ಕೆ ।
ತುತ್ತುಗೊಂಬೆ ನಿನ್ನನು ಈ । ಹೊತ್ತು ನೋಡೆಲಾ ॥

ಮತ್ತೆ ಚಲಿಸಲ್ಯಾಕೆ ನಿಲ್ಲೆ । ನುತ್ತ ಮುಷ್ಟಿಯಿಂದಲವನು ।
ನೆತ್ತಿಗೆರಗಲಾಗ ರೋಷ । ವೆತ್ತು ಪವನಜ ॥ ॥150॥

ಪೇಳ್ದನೆಲವೊ ದಾನವ ನಿ । ನ್ನಾಳ್ದಗರುಹಿ ಬಂದೆಯಾದ ।
ರೊಳ್ದು ಧೈರ್ಯದಿಂದ ನಿಲ್ಲು । ಕಾಲ್ದೆಗೆಯದೆ ॥
ಬಾಳ್ದು ಪೋಪೆನೆಂದು ಮನದಿ । ತಾಳ್ದು ಮದವ ಬಗುಳಬೇಡ ।
ಸಾಲ್ದಲೆಯನ ಭಂಗವನ್ನು । ಕೇಳ್ದುದಿಲ್ಲವೊ ॥151॥

ಈ ತೆರದೊಳುಸಿರ್ದ ರಾಮ । ದೂತನೊಡನೆ ದಧಿಮುಖ ಮ ।
ಹಾತಿ ರೌದ್ರದಿಂದ ನುಡಿದ । ನಾತತೂಕ್ಷಣ ॥
ಕೋತಿ ಕೇಳು ನಿನ್ನ ಬಲದ । ರೀತಿಯೆಲ್ಲ ಬಲ್ಲೆ ವಾಲ ।
ಕೋತು ಉರಿಯನಿಟ್ಟನಸುರ । ನಾಥ ರಾವಣ ॥152॥

ಎನುತ ಮೂದಲಿಸಲು ಖಳನು । ಹನುಮನಯ್ದೆ ರೋಷ ಪೆರ್ಚೆ ।
ತೊನದು ಶಿರವ ತವಕದಿಂದ । ಕಿನಿಸತಾಳುತ ॥
ನೆನೆದು ರಾಘವನ ಸುಪದವ । ನನಿಮಿಷಾರಿಯುರಕೆ ತಿವಿಯೆ ।
ದಿನಪಜಾತನವನಿಗಿತ್ತ । ಸನುಮತಿಗಳನು ॥153॥

**ಕಂದ**

ಈ ಚತುರತೆಯಂ ಕಂಡಾ ।
ಸೂಚೀಮುಖನಯ್ದೆ ಬಂದು ಮಹಾತಿರೋಷದೊಳಂ ॥
ತಾ ಚಲಿಸದೆ ನಿಂದೆಂದಂ ।
ನೀಚತ್ವಂಗಳಿಮ್ಮನಿಲಜನೊಳಾಗಳ್ ॥154॥

**ರಾಗ ಮಾರವಿ ಏಕತಾಳ**

ಏನು ಕಪಿಯೆ ನ । ಮ್ಮೀ ನಗರಕೆ ಬರೆ ।
ನೀನಾರವ ಬಲು । ದಾನವರನು ಸು ।
ಮ್ಮಾನದಿ ಕೊಂದವ । ಮಾನವಗೊಳಿಸಿದೆ ।
ತಾನಾರೆಂದು ನೀ । ಧಾನಿಸಿ ನೋಡ್ಕೈ । ಧೈರ್ಯವಾಂತು ॥155॥

ಎಂಸುರನ ಮನ । ದಂದವನೀಕ್ಷಿಸು ।
ತಂದಾ ಕೇಸರಿ । ನಂದನನಾಡಿದ ।
ನೊಂದನು ಸುಮನಸ । ವಂದ ಮೆಚ್ಚುವ ತೆರ ।
ದಿಂದ ನಗುತಲಾ । ನಂದದೊಳಾಗ । ಖಾತಿಗೊಂಡು ॥156॥

ಹುಚ್ಚುಖಳನೆ ನೀ । ನೆಚ್ಚರಿಲ್ಲದೆ ಬಲು ।
ರಚ್ಚೆಸಿ ಕಾದುತ । ಮಚ್ಚರಿಸುವದೇ ।
ನುಚ್ಚುವೆ ಕರುಳ್ಗಳ । ನಚ್ಚರಿ ನೋಡಿ ।
ನ್ನುಚ್ಚರಿಸದಿರೆನು । ತಚ್ಯುತದೂತ । ಗಾಢದಿಂದ ॥157॥

ತೋರಮರನ ಪಿಡಿ । ದಾರುಭಟೆಯೊಳಾ ।
ಘೋರದನುಜನುರ । ಕೋರಂತಿಡಲದ ।
ಗಾರುಗೆಡಿಸುತಲಿ । ಭೋರನೆ ತಡೆದಾ ।
ಮಾರುತಜನ ಮೇ । ಲೇರಿ ಸೆಣಸಿದ । ನೇನನೆಂಬೆ ॥158॥

ಕಂಡಾಕ್ಷಣ ಮುಂ । ಕೊಂಡು ಹನುಮ ತಾ ।
ನಂಡಲೆಯುತಲು । ದ್ದಂಡ ಕುಜಂಗಳ ।
ಕೊಂಡವನೆದೆಗೆ ಪ್ರ । ಚಂಡತನದೊಳಿಡೆ ।
ದಿಂಡುರುಳುತ ಭೂ । ಮಂಡಲಕೊರಗೆ । ಭೀತಿತಾಳಿ ॥159॥

ಆ ಸಮಯದಿ ಖಳ । ನಾ ಶಿರದಗ್ರಕೆ ।
ತೋಷದಿ ಮರುತಜ । ಬೇಸರದೆರಗಲು ।
ಮೋಸದೊಳವನೆಮ । ವಾಸಕೆ ತೆರಳಿದ ।
ನೇಸು ಬಣ್ಣಿಸುವೆ । ಕೀಶನ ಬಲುಹ । ಸಂಗರದೊಳು ॥160॥

**ಭಾಮಿನಿ**

ಜತಿಗಳಿರ ನೀವ್ ಕೇಳಿ ಮರುತಜ ।
ನತಿಶಯದಿ ಸೂಚೀಮುಖನ ರವಿ ।
ಸುತನ ನಗರಕೆ ಕಳುಹಿ ಮೆರದಿರಲನಿತರೊಳಗಿತ್ತ ॥
ಖತಿಯ ತಳೆದಾಕುಲಿಶದಂಷ್ಟ್ರನು ।
ಪಥಿವಿಯೊಡೆವಂದದಲಿ ಘರ್ಜಿಸಿ ।
ಮತಿಯರಿಯದೊಡನೆಂದನಾ ಕೇಸರಿಜನಿದಿರಿನಲಿ ॥161॥

**ರಾಗ ನಾದನಾಮಕ್ರಿಯೆ ಮಟ್ಟೆತಾಳ**

ದಿಟ್ಟತನಗಳೆಷ್ಟು ಸುಮ್ಮನೆ । ಕೇಳೊ ಕಪಿಯೆ ।
ದಿಟ್ಟತನಗಳೆಷ್ಟು ಸುಮ್ಮನೆ ॥ ॥ಪಲ್ಲವಿ॥

ಅಕ್ಕರಿಂದಲೆಮ್ಮ ನೆಲನ । ಪೊಕ್ಕು ಜೀವಿಸಿದರ ಕಾಣೆ ।
ಫಕ್ಕನೈದು ನಿನ್ನ ತಾಣ । ಕಕ್ಕಟಕಟ ಸಿಕ್ಕಿ ಸಾಯ ।
ಲಿಕ್ಕೆ ಬಂದೆ ವ್ಯರ್ಥವಿಲ್ಲಿಗೆ ॥ ಸಾಕು ಸಾಕು ।

ಮಕ್ಕಳಾಟಿಕೆಯೊಳು ಕಲ್ಲಿಗೆ । ತಲೆಯ ಬೇಗ ।
ಸೊಕ್ಕಿನಿಂದ ಬಡಿದು ಬರಿದೆ । ಕಕ್ಕಸಬಡುವದ್ಯಾಕೆ ॥ ದಿಟ್ಟ ॥162॥

ಎಂದು ನುಡಿದ ವಜ್ರದಂಷ್ಟ್ರ । ನಂದವನ್ನು ನೋಡುತಾಗ ।
ಲಂದು ಕೋಪದಿಂದ ವಾಯು । ನಂದನನಬ್ಬರಿಸಿ ಭರದೊ ।
ಳೊಂದು ಮಾತನೆಂದ ನಗುತಲಿ । ಖೂಳ ದೈತ್ಯ ।
ಮುಂದುವರಿದು ಧೈರ್ಯದಿಂದಲಿ । ಪಿಂದೆ ಸರಿಯ ।
ದಿಂದು ಸಮರಕಾಗಿ ಬಾ ಬಾ । ರೆಂದು ಪೊಯ್ದುನಧಟಿನಿಂದ ॥ ದಿಟ್ಟ ॥163॥

ಪೊಡೆದಪೊಯ್ತುವನ್ನು ತಾಳು । ತೊಡನೆ ದೈತ್ಯನಕ್ಷಿಯಲ್ಲಿ ।
ಕಿಡಿಗಳುದುರಿಸುತ್ತ ತಿವಿಯ । ಲಡಗಿ ರೋಷದಿಂದ ಹನುಮ ।
ಕಡುಹಿನಿಂದ ವಜ್ರಮುಷ್ಟಿಯ ॥  ಬಲಿದು ಖಳಗೆ ।
ಪೊಡೆಯಲಾಮಹಾಂತದಾಡೆಯ । ಮುರಿದು ನೆಲಕೆ ।
ಕೆಡೆವುತೇಳದಂತೆ ತುಳಿಯೆ । ನಡೆದನಿನಜನಲ್ಲಿಗಸುರ ॥ ದಿಟ್ಟ ॥164॥

**ವಾರ್ಧಕ**

ಈ ಪರಿಯೊಳಾ ವಜ್ರದಂಷ್ಟ್ರನಳಿಯಲ್ಕಾಗ ।
ಲಾಪಾಕಶಾಸನಾದ್ಯಮರ ತತಿ ಸಂಭ್ರಮದೊ ।
ಳಾ ಪಾವಮಾನಿಯಂ ಸಂಸ್ತುತಿಸುತಲಿ ಪುಷ್ಪವಷ್ಟಿಯಂ ಕರೆಯಲತ್ತಾ ॥
ತಾಪದಿಂದಯ್ದಿ ಮೈರಾವಣಾಖ್ಯನ ಸತಿಯು ।
ಮಾಪೇಕ್ಷೆಯಿಂದೆದ್ದುಮವಗೆರಗಿ ವಿನಯದಿಂ ।
ತಾ ಪೇಳ್ದಳಾದ ದುಃಸ್ವಪ್ನ ಸೂಚನೆಗಳಂ ಮರೆಯದತಿ ವಿಸ್ತಾರದಿ ॥165॥

**ರಾಗ ನೀಲಾಂಬರಿ ಏಕತಾಳ**

ಪತಿಯೆ ನೀ ಲಾಲಿಸಯ್ಯ । ಪೇಳುವೆ ನಿನ್ನೊ ।
ಳತಿಶಯದೊಂದು ಕನಸು ॥
ಮತಿಯುತ ನೀನಾಳುವ । ಧರಣಿಗೀಗ ।
ಕ್ಷಿತಿಯಿಂ ಹನುಮನೆನುವ ॥166॥

ಕಪಿಯೋರ್ವನೈದಿ ನಿಮ್ಮ । ನೆಲ್ಲರ ಕೊಂದು ।
ಕಪೆಯಿಂದ ದುರುದುಂಡಿಯ ॥
ಶಪಥದಿ ಕಾಯ್ದವಳಾ । ಮಗನಿಗೀಭೂ ।
ಮಿಪತಿತ್ವವಿತ್ತ ಮೇಲಾ ॥167॥

ನೀ ತಂದ ಧರಣಿಪರಾ ।
ನೀರ್ವರನೊಯ್ವ ।

ರೀತಿಯೊಳ್ ಕಂಡೆ ಧೀರಾ ॥
ಮಾತಿದು ಪುಸಿಗಳಲ್ಲ । ಇನ್ನಾದರು ।
ನೀ ತಿಳಿಯಯ್ಯ ನಲ್ಲ ॥168॥

ನರನಾಥನವನು ನೋಡೆ । ಶ್ರೀಹರಿಯಂತೆ ।
ಸುರರೆಲ್ಲ ಕಪಿಗಳಂತೆ ॥
ಶಿರಹತ್ತರವನ ಕೊಂದು । ಕೀರ್ತಿಯ ಪಡೆದು ।
ಧರೆಯಾಳ್ವರಂತೆ ಮುಂದು ॥ ॥169॥

ಮಾನುಷಾಕೃತಿ ವೆರಸಿ । ಮಾರ್ತಾಂಡವಂಶ ।
ದಾ ನರೇಂದ್ರನೊಳುದಿಸಿ ॥
ಈ ನರರೂಪಿನೊಳು । ತೋರುವರೆನ್ನ ।
ಪ್ರಾಣೇಶ ಬೇಗದೊಳು ॥170॥

ಮನ್ನಿಸಿ ಮರುತಜನಾ । ಬೀಳ್ಗೊಡು ನೀ ।
ನಿನ್ನಾದರವನಿಪನ ॥
ಚೆನ್ನೆಸೆವುದು ಕಾರ್ಯವು । ನಿನಗೆ ನಾನು ।
ಬಿನ್ನೈಸುವಡ ಯೋಗ್ಯವು । ॥171॥

**ವಚನ**

ಇಂತೆಂದು ಮೈರಾವಣಗೆ ಸಂಧ್ಯೆ ಸೂಚಿಸಲಾ ಮಾತಿಗಂ ತಾಂ ತವಕದೊಳಿಂತೆಂದನು -

**ರಾಗ ಕೇದಾರಗೌಳ ಅಷ್ಟತಾಳ**

ಕನಸಿದು ಭ್ರಾಂತಿ ಕೇಳ್ ಮನಸಿನೊಳಿಡದಿರು ।
ಗುಣಶಿರೋಮಣಿಸುಮ್ಮನೆ ॥
ಅನುವರದೊಳಗೆನ್ನೊಳ್ ಸೆಣಸುವರುಂಟೇನೆ ।
ವಿನಯದಿ ತಿಳಿಯೆಜಾಣೆ ॥172॥

ತಿಳಿದಿದ್ದ ಕಾರಣ ಖಳರಾಯ ನಿನ್ನೊಳು ।
ವಳವ ನಾ ಸೂಚಿಸಿದೆ ॥
ಇಳೆಯೊಳು ಹನುಮಂತನಳವಿಗಾನುವರ್ಯಾರಿ ।
ನ್ನುಳಿವಿಲ್ಲ ನಮಗೆ ಮುಂದೆ ॥173॥

ಮರದಿಂದ ಮರಕೆ ಹಾರುವ ಕಪಿಯಿಂದಾಹ ।
ಪರಿಯೇನೆ ಪಂಕಜಾಕ್ಷಿ ॥

ತರಿವೆನವನ ನೀನಿಂದರಿಯೆಂದು ನಾ ತಂದ ।
ನರರೆ ಕೇಳದಕೆ ಸಾಕ್ಷಿ ॥174॥

ಸಾಕ್ಷಿಯ ಮಾಡಿಹುದಹುದಯ್ಯ ಪತಿ ನಿನ್ನಾ ।
ಪೇಕ್ಷೆಯು ಬರಿಬಯಲು ॥
ಸಾಕ್ಷಾತವಿಷ್ಣುವಿನವತಾರರಿಂದಿವ ।
ರಿಕ್ಷ್ವಾಕುವಂಶಜರು ॥ ॥175॥

ಆ ಮಾತಹುದು ಮತ್ತಿನ್ನಾದರೇನಾಯ್ತು ।
ಕಾಮಿನಿಯನು ಕಳೆದು ॥
ಭೂಮಿಯೊಳಲೆಯುವದ್ಯಾಕೆ ದೇವಾಂಶಿಗಳ್ ।
ಪ್ರೇಮದಿಂದ್ಹಾಗೆ ಹೀಗೆ ॥ ॥176॥

ನಲ್ಲ ವಿಚಾರಿಸು ಬಲ್ಲೆನು ನೀನೆಂದ ।
ಸೊಲ್ಲನು ಸಂತಸದಿ ॥
ನಲ್ಲೆಯ ಕಳಕೊಂಡುದಲ್ಲ ಮತ್ತ್ಯವ ದುಷ್ಟ ।
ನಲ್ಲಿಗೆ ಕಳುಹಿರ್ಪನು ॥177॥

ಏನ ನೀ ನಾಡಿದೆ ಜಾನಕಿಯನು ಲಂಕಾ ।
ದಾನವನೊಯ್ದು ತನ್ನ ॥
ಮಾನಿನಿಯನು ಮಾಳ್ಪೆನೆಂದು ಸೆರೆಯೊಳಿಟ್ಟು ।
ದಾನರ್ತುದಿಲ್ಲವೇನೆ ॥178॥

ಅರ್ತಕಾರಣದಿಂದಲರುಹಿದೆನಲ್ಲದೆ ।
ವ್ಯರ್ಥದ ಮಾತಲ್ಲ ವೈ ॥
ಅರ್ತಿಯೊಳನಲನೊಳಿಟ್ಟಹನರಸಿಯ ।
ಧೂರ್ತರ ಕೊಲುವ ದೇವ ॥179॥

ಕೊಲುವವನಾಗೆ ತಾನಳುಕುತ ಕಪಿಯ ಬೆಂ ।
ಬಳಿಯನಾಶ್ರೈಸುವನೆ ॥
ಬಲಿಯನು ಕೊಡುವೆ ನಾ ಬೆಳಗಾದ ಮೇಲೆನ್ನ ।
ಕುಲದೇವಿಗವರೀರ್ವರ ॥180॥

ಬೆಳಗಾಗುವನಕ ಮತ್ತಿನ್ನೇನಾಗುವುದೆಂಬ ।
ವಳವರಿತವರ್ಯಾರಿನ್ನು ॥
ಕಳವಳದಿಂದ ನಾ ಕಂಡುದನಾಡಿದೆ ।
ಮುಳಿಯದೆ ಮನ್ನಿಸೀಗ ॥181॥

**ಕಂದ**

ಅನಿತರೊಳಿತ್ತಂ ಕೇಳ್ದುದು ।
ಮನಿಲಜನಾರ್ಭಟೆಯುಮೈದೆ ಮೈರಾವಣಗಂ ॥
ಕಿನಿಸಿನೊಳೆದ್ದೆಡಬಲನುಂ ।
ಮುನಿಸನ ಜ್ವಾಲೆಯೊಳಗೀಕ್ಷಿಸುತಲಿಂತೆಂದಂ ॥182॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಏನಿದೇನಾಶ್ಚರ್ಯ ನಮ್ಮಾ ।
ಸ್ಥಾನದೊಳಗಾರ್ಭಟೆಯು ಕೇಳ್ವುದಿ ।
ದೇನೆನುತ ಪೊರವಳೆಯಕಯ್ದಿ ನಿ । ಧಾನದಿಂದ ॥183॥

ತಿಳಿದುಬಹುದೆಂದೆನುತ ಖಳರಿಗೆ ।
ಬಲುಹಿನಿಂ । ಮೈರಾವಣಾಖ್ಯನು ।
ಚಳಕದಿಂ ಪೇಳುತ್ತಿರಲು ವೃತ್ತಳುತಲೋರ್ವ ॥184॥

ದನುಜನಯ್ತಂದಾಗ ತನ್ನೊಡೆ ।
ಯನಪದಕೆ ವಂದಿಸುತ ಭಯದೊಳು ।
ತನುನಡುಕದಿಂ ಸೂಚಿಸಿದನಾ । ಹನುಮನಧಟ ॥185॥

**ರಾಗ ಮುಖಾರಿ ಏಕತಾಳ**

ಖಳರಾಯ ಕೇಳೆನ್ನ ಬಿನ್ನಪವ । ಬಲುಹಿನಿಂ ಕಪಿಯೊಂ ।
ದೊಳಪೊಕ್ಕು ಕೊಲುವುದೆಮ್ಮ ಬಲವ ॥ ಖಳ ॥ ॥ಪಲ್ಲವಿ॥

ಕಾಳಭೈರವನಂತೆ ತೋರ್ಪುದು । ದಧಟ ನೋಡೆ ।
ಶೂಲಪಾಣಿಯ ತೆರದೊಳಿರ್ಪುದು ॥
ಲೀಲೆಯೊಳಗೆ ಮಿಗೆ । ಪೇಳಲಳವೆ ನೀ ।
ನ್ನಾಲಯದೆಡೆಯೊಳ । ಗೋಲಾಡುತ್ತತಿ ।
ಚಾಲುವರಿದು ನಿ । ರ್ಮೂಲವ ಮಾಡಿದ ।
ಕಾಲನ ತೆರದೀ । ಬಾಳಿಸದಸುರರ ॥ ಖಳ ॥186॥

ಮದದಾಹಂಕಾರಂಗಳಿಂದ । ಮುಂದ್ವರಿದು ಬಂದು ।
ದಧಿಮುಖನನ್ನು ಶೌರ್ಯದಿಂದ ॥
ಒದೆವುತ ಚರಣದೊ । ಳದುಭುತ ಗೈವು ।
ತ್ತೊದರಿಸಿ ಬಿಗುಹಲಿ । ಸದೆಬಡೆದಿನಜನ ।

ಸದನಕ್ಕಟ್ಟಿದ । ನದನೇವೇಳ್ವೆನು ।
ಬಿದಿರುದಂಷ್ಟ್ರನ ಸುಲ । ಭದೊಳೊಲವಿಂದ ॥ ಖಳ ॥187॥

ತೋರ ಮರನ ಪಿಡಿದು ತಾನು । ಸೂಚೀಮುಖನ ।
ಬಾರಿಬಾರಿಗೆ ಪೊಯ್ಯಲವನು ॥
ಧಾರಿಣಿಗೊರಗುತ । ಕಾರುತ ರುಧಿರವ ।
ಮಾರಿಯ ಭವನಕೆ । ಸಾರಿದರಸುರರಿ ।
ನ್ನಾರುಳಿಯದೆ ರಣ । ಧಾರಿಣಿಯಲಿ ಕೈ ।
ದೋರದಳಿದರವಿ । ಚಾರಗಳಿಂದ ॥188॥

**ಭಾಮಿನಿ**

ಚಾರಕನು ತಾನಿಂತೆನಲು ಮದ ।
ವೇರಿ ಹೂಂಕರಿಸುತ್ತ ಹುರಿಗೊಂ ।
ಡಾರುಭಟೆಯಿಂದೆದ್ದು ಮೈರಾವಣನು ಖಾತಿಯಲಿ ॥
ಕಾರಿರುಳು ನಡೆತರಲುಗಿರಿತರು ।
ಧಾರಿಣೀತಳಕುರುಳೆ ನಭದಿಂ ।
ತಾರೆಯುದುರಿದವೇನ್ ಸಮರ್ಥನೊ ಖಳನು ಸಾಹಸದಿ ॥189॥

**ಕಂದ**

ಈ ರೀತಿಯೊಳಂ ಬಂದಾ ।
ಮೈರಾವಣನಾರ್ಭಟಸುತಮತಿರೌದ್ರದೊಳಂ ॥
ಆರೈದಂಕದ ಕಣನಂ ।
ಸಾರುತ್ತಂ ನಿಲಲುಮನಿಲಜಂ ಕಂಗೆಸೆದಂ ॥190॥

**ರಾಗ ಭೈರವಿ ತ್ರಿವುಡೆತಾಳ**

ಕಂಡನಾಗ । ಹನುಮನ । ಕಂಡನಾಗ ॥ ಪಲ್ಲವಿ ॥

ಪಾಟಲಾನನದಿಂದ ಮಹಶತ ।
ಕೋಟಿ ಕಾಯದಿ ರಂಜಿಸುತ ಶಶಿ ।
ಜೂಟನಂಶೀಭೂತನತಿ ಬೊ ।
ಬ್ಬಾಟದಿಂದೆಸೆದಿರಲು ಕಾಣುತ ।
ಕೀಟಕಾಸುರ ಮುಂದುವರಿದು ವಿ ।
ರಾಟರೂಪನ ನುಡಿಸಿದನು ಮ ।
ತ್ತಾಟವಿಕತನದಿಂದ ಬರಿ ಬರಿ ।
ಬೂಟಕದ ಮಾಯಾವಿಚಿತ್ರದಿ ॥ ಕಂಡನಾಗ ॥191॥

ಎತ್ತಣಿಂದಯ್ತಂದೆ ಕಪಿ ನೀ ।
ಇತ್ತ ಕಳುಹಿದರ್ಯಾರು ನಿನ್ನನು ।
ಹೆತ್ತ ಜನಕನ ಹೆಸರದೇನೆಲೊ ।
ಕರ್ತರುಂಟಾಗಿರಲು ಪೇಳೆಲೊ ।
ಧೂರ್ತತನದಿಂದೆಮ್ಮವರ ಯಮ ।
ಪತ್ತಣಕ್ಕಟ್ಟಿಸಿದುದೇನಾ ।
ವರ್ತಮಾನವ ಪೇಳೆನುತ ಖತಿ ।
ವೆತ್ತು ದಾನವ ಮೊರೆದುನಿಂದಿರೆ ॥ ಕಂಡನಾಗ ॥192॥

ಆ ಸಮಯದೊಳಗಸುರನಧಟನು ।
ಕೇಸರಿಜನೀಕ್ಷಿಸುತಲಂದು ವಿ ।
ಲಾಸದಿಂ ನಸುನಗುತಲೆಂದನು ।
ದಾಸಿನಂ ಗೆಯ್ಯದಲೆಯವನೊಳು ।
ವೇಷಧಾರಿಯಲೇಸು ಪ್ರೌಢ ನೀ ।
ಮೀಸಲಿರು ಕೀನಾಶನಗರಿಗೆ ।
ನಾಶಗೈವೆ ನಿನ್ನೀಸಮಯದಿ ಸು ।
ರೇಶ ಮೆಚ್ಚುವ ತೋಷದಿಂದಲಿ ॥ ಕಂಡನಾಗ ॥193॥

**ರಾಗ ಭೈರವಿ ಏಕತಾಳ**

ಮೀಸಲಾಗಿಹರೆಲೊ ನಿನ್ನಾ । ಸಲೆ ।
ಪೋಷಿಸುವಧಿಪರಿಗೆನ್ನ ॥
ವಾಸದಿ ಸೆರೆಮನೆಯಾಯ್ತು । ಜಯ ।
ದಾಸೆಯ ಬಿಡು ಕಪಿ ಮರೆತು ॥194॥

ಇಂತೆನೆ ದೈತ್ಯನ ನೋಡಿ । ಹನು ।
ಮಂತನು ನಲಿನಲಿದಾಡಿ ॥
ನಿಂತೆಂದನು ನಿನ್ನ ಬಿಡಲು । ಬಂ ।
ದಂತವನಲ್ಲ ತಾನೆನಲು ॥195॥

ದನುಜನದನು ಕೇಳ್ದಾಗ । ಖತಿ ।
ಯನು ತಳೆದುಸಿರಿದಬೇಗ ॥
ವನಚರ ಪಂಥವನಾಡಿ । ಪೇ ।
ಟ್ವನು ತಿನ್ನದೆ ನಡೆ ಖೋಡಿ ॥196॥

ನಾಡಮಾತುಗಳೇಕಿನಿತು । ನೀ ।
ನೋಡಿಬಂದುದ ನಾನರಿತು ।

ಕೂಡೇಳ್ತಂದೆನು ಸುಭಟಾ । ಪರಿ ।
ದಾಡದೆ  ಖಳ ತೋರಧಟ ॥197॥

ಅಧಟ ನೀನೀಕ್ಷಿಸಲಿನ್ನು । ನಿ ।
ನ್ನೆದೆಯಲಿ ಧೈರ್ಯವದೇನು ॥
ಬದಿಯೆಲುಗಳ ನುಗ್ಗರಿವೆ । ಕೀಶ ।
ನಿದಿರು ನಿಲ್ಲೆಲೊ ಪಲ್ ಮುರಿವೆ ॥198॥

**ರಾಗ ಪಂಚಾಗತಿ ಮಟ್ಟೆತಾಳ**

ಎಂದ ಮಾತು ಕೇಳುತಾಗ । ಲಂದು ಕೋಪದಿಂದ ವಾಯು ।
ನಂದನನಬ್ಬರಿಸಿ ಜವದಿ । ಬಂದು ತಿವಿಯಲು ॥
ನೊಂದು ಖಳನು ಬಹಳ ಕೋಪ । ದಿಂದ ಸರಳಮಳೆಯ ಕರೆಯ ।
ಲಂದವಳಿದುದಾಗ ದೇವ । ವಂದ ಗಗನದಿ  ॥199॥

ಬರುವ ಸರಳನೆಲ್ಲ ತನ್ನ । ಕರದಿ ಮುರಿದು ಮುಂದುವರಿದು ।
ಧರಣಿಗೊರಗುವಂತೆ ಹನುಮ । ದುರುಳ ದೈತ್ಯನ ॥
ಶಿರಕೆ ಮುಷ್ಟಿಯಿಂದ ಲೆರಗ । ಲೊರಗುತೆದ್ದು ತರಹರಿಸುತ ।
ಗರುವದಿಂದ ಘರ್ಜಿಸುತ್ತ । ಪರಿಪರಿಗಳಲಿ ॥200॥

ಎತ್ತ ನೋಡಲತ್ತ ಸುತ್ತ । ಮುತ್ತ ಮಾಯದಿಂದ ಮಗದ।
ಮೊತ್ತವನ್ನು ಕವಿಸಲಾಗ । ಧೂರ್ತತನದಲಿ ॥
ಪೊತ್ತು ತರುಗಿರಿಗಳ ಕಾಣಿ । ಸುತ್ತ  ಕಪಟವೆಸಗೆ ಹನುಮ ।
ಕತ್ತರಿಸಿದ ಮನದಿ ಬೇ । ಸತ್ತುಕೊಳ್ಳದೆ ॥  ॥201॥

ಮಗುಳೆ ತಿರುಗಿ ನಿಗರಮಾದ । ನಗವನೊಂದನೆತ್ತಿ ಪೊಡೆಯೆ ।
ಜಗದಿ ಕೆಡದ ದನುಜ ರ । ಕ್ತಗಳ ಕಾರುತ ॥
ನಗುತ ವಾನರಾಗ್ರಗಣ್ಯ । ಬಿಗುಹಿನಿಂದ ಪಿಡಿದು ಪುನಹ ।
ನೆಗಹುತಪ್ಪಳಿಸಿದನವನಿ । ಗೊಗುಮಿಗಿಂದಲಿ ॥202॥

**ಕಂದ**

ದುರುಳಂ ಕಂಡಾಕ್ಷಣದೊಳ್ ।
ಸರಮಾಧವನಂತೆ ರೂಪವಂ ಧರಿಸುತ್ತಂ ॥
ಮರುತಜಗೆಂದಂ ವಿನಯದಿ ।
ಪರಿತೋಷದಿಂದೆ ಕಪಟವಿದ್ಯೆದೊಳಾಗಳ್ ॥203॥

**ರಾಗ ತೋಡಿ ಏಕತಾಳ**

ಮಾರುತಿ ನೀನಿತ್ತ ಬರೆ ತಿಳಿದೀಗಲಿ ।
ನ್ನಾ ರಾವಣನು ಬಂದು ಪಿಡಿದು ನಮ್ಮ ॥
ಭೋರನೆ ಕೊಂಡೊಯ್ದು ಕಾರಾಗಹದೊಳಿಟ್ಟು ।
ಬೇರೆ ಘಾತಿಸುವ ನೀ ಮರಳ್ದಪುದು ॥
ಮಾತಿದು ಪುಸಿಗಳಲ್ಲ । ಮನ್ನಿಸು ವಾಯು ।
ಜಾತ ಕೇಳೆನ್ನ ಸೊಲ್ಲ ॥204॥

ಅವನಿವನೊಂದಾಗಿ ಬವರದೊಳೀಗ ನ ।
ಮ್ಮವನುಳಿಸರು ದಿಟ ಕಪಟವಲ್ಲ ॥
ಅವನಿಪಾಲಕರ ಕೊಂಡವಿಳಂಬದಿಂದ ಪೋ ।
ಗುವುದತಿ ಲೇಸೆಂದು ತೋರ್ಪುದಯ್ಯ ॥205॥

ಇಂತೆನೆ ವಿಸ್ಮಿತನಾಗುತ ಮರುತಜ ।
ನಿಂತಿರೆ ದುರುದುಂಡಿಯರಿತು ಬೇಗ ॥
ಸಂತಸದಿಂದ ಸಂಜ್ಞೆಯಗೆಯ್ಯೆ ಕಂಡು ಮ ।
ಹಾಂತ ಕೋಪದಿ ಕೊಂದ ಖಳಮಾಯವ ॥206॥

**ಕಂದ**

ಕೊಲಲಾಕ್ಷಣದೊಳು ದನುಜಂ ।
ಕಲಿಸೂರ್ಯಾತ್ಮಜನ ತೆರದಿ ಹನುಮಂತನೊಳಂ ॥
ಚಲಿಸದೆ ಪೇಳ್ದಂ ಪುನರಪಿ ।
ಹಲವು ವಿಧಂಗಳಲಿ ಪ್ರೀತನಾಗುವ ತೆರದಿಂ ॥207॥

**ರಾಗ ಸೌರಾಷ್ಟ್ರ ಅಷ್ಟತಾಳ**

ಬಲು ಚಂದವಾಯ್ತು ನೀ ಬಲವಂತನಹುದಯ್ಯ । ಮುಖ್ಯಪ್ರಾಣ । ನಿನ್ನ
ಬಲಪೌರುಷಗಳನ್ನು ಪೊಗಳಲೆನ್ನಳವಲ್ಲ । ಮುಖ್ಯ ಪ್ರಾಣ ॥208॥

ಭಯದಿಂದ ಬಂದು ದಾನವ ಮರೆಹೊಕ್ಕನು । ಮುಖ್ಯ ಪ್ರಾಣ ॥ ರಾಮ ।
ದಯದಿ ಪಾಲಿಸಿ ಪೊರೆದವನನು ಕೊಂದೆಯ । ಮುಖ್ಯ ಪ್ರಾಣ ॥209॥

ಮಿತ್ರದ್ರೋಹಿಗಳೆಂಬ ಮಾತನು ಗಳಿಸಿದೆ । ಮುಖ್ಯಪ್ರಾಣ ॥ ಆ । ಮಿತ್ರವಂಶಜರಿಗೊಂದಪಕೀರ್ತಿಯನು ತಂದೆ । ಮುಖ್ಯಪ್ರಾಣ ॥210॥

ಶತ್ರುಪಕ್ಷದೊಳೆಲ್ಲ ನಗುವಂತೆ ಮಾಡಿದೆ । ಮುಖ್ಯಪ್ರಾಣ ॥ ನಮ್ಮ ।
ಗೋತ್ರ ಕೆಲ್ಲವು ಸಲೆ ಕುಂದ ತಂದೊಡ್ಡಿದೆ । ಮುಖ್ಯಪ್ರಾಣ ॥211॥

**ಭಾಮಿನಿ**

ಖಳನು ತಾನಿಂತೆನಲು ಕೇಳ್ದಾ|
ಕಲಿಹನುಮ ಕಡು ಚಿಂತೆಯಿಂದಿರೆ |
ನೆಲೆಯನರಿದಿಂತೆಂದಳಾ ದುರದುಂಡಿ ವಿನಯದಲಿ |
ಬಳಲಲೇತಕೆ ಜೀಯ ತಾನಿವ |
ಕುಲಗೆಡುಕ ಮೈರಾವಣನು ಕಪಿ |
ಕುಲಜನಲ್ಲೆನಲವನ ಮಾರುತಿ ಪಿಡಿದು ಸದೆಬಡಿದ ||212||

**ಕಂದ**

ಬಡಿಯಲ್ ದನುಜಂ ಮತ್ತಂ |
ದೊಡನಯ್ತಂದಾಗ ಜಾಂಬವಂತನ ತೆರದಿಂ ||
ಕಡು ನಿರ್ಭಯದಿಂದನಿಲಜ |
ನೆಡೆಯೊಳ್ ನಿಂದೆಂದ ಜವದೊಳತಿ ಧೈರ್ಯದೊಳಂ ||213||

**ರಾಗ ನೀಲಾಂಬರಿ ಝಂಪೆತಾಳ**

ಅಕಟಕಟ ಲೇಸಾಯಿತಯ್ಯ | ಪೊಡವಿಯೊಳು |
ಪ್ರಕಟವಾಯಿತು ನಿನ್ನ ದುರ್ಬುದ್ಧಿಯಯ್ಯ || ಅಕಟ ||  ||ಪ||

ಮಾತುಳನ ಮಡುಹಿದೆಯ ಬರಿದೆ | ಕೇಳ್ ನಿನ್ನ |
ಮಾತೆಯಗ್ರಜನೀತನೆಂಬುದನು ಮರೆದೆ ||
ನೀತಿಯುತ ನೀನೆನುತಮಿರದೆ | ನಂಬಿ ರವಿ |
ಜಾತನಿರಲವನಿಗೆಮನೂರಾಯಿತಿರದೆ || ಅಕಟ ||214||

ಮಂತ್ರಿತ್ವದಧಿಕಾರಗಳನು | ಕೊಟ್ಟು ಸ್ವಾ |
ತಂತ್ರ್ಯ ಸಾಹಸವೆಲ್ಲವಿನ್ನೇನೆಂಬೆ ನಾನು ||
ತಂತ್ರವರಿಯದೆ ಪೋದನವನು | ಈ ಬಗೆಗೆ |
ಯಂತ್ರವಾಹಕ ರಾಮನೆನಿತು ಮೆಚ್ಚುವನು || ಅಕಟ ||215||

ಈ ತೆರದ ಮೂದಲೆಯ ಕೇಳಿ | ಎಲರಣುಗ |
ತಾ ತಿಳಿದ ಖಳ ಮಾಯವೆನುತ ಖತಿ ತಾಳಿ ||
ಕಾತುರದೊಳಪ್ಪಳಿಸಿ ಹೂಳಿ | ಉರಿಗೊಳಿಸ |
ಲಾತನೆದ್ದನದೆಂತು ಸಾಹಸಿಯೊ ಕೇಳಿ || ಅಕಟ ||216||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ದನುಜನಾ ಸಮಯದಲಿ ಮಾಯುವ ।
ನನುಕರಿಸಿ ಕವಿಸಿದನು ಪನ್ನಗ ।
ರನಿಮಿಷೋರಗ ಸಿದ್ಧ ಸಾಧ್ಯರ । ಮನುಜರಂತೆ ॥217॥

ಬಂದ ಬಂದವರೆಲ್ಲರನು ತಾ ।
ಕೊಂದು ಕೊಂದುರೆ । ದಣಿದು ಮಾರುತಿ ।
ನಿಂದು ವಿಸ್ಮಿತನಾಗಿ ಚಿಂತಿಸ । ಲಂದು ಜವದಿ ॥218॥

ಕಂಡು ಬೇಗದೊಳೆಂದಳಾ ದುರು ।
ದುಂಡಿದಾನವಗಿರಿಕುಲಿಶನೊಳ್ ।
ಮಂಡೆಯನು ಮಣಿದಾಗ ಮನದೊಳಗಂಡಲೆವುತ ॥219॥

**ರಾಗ ಕಾಂಭೋಜಿ ಝಂಪೆತಾಳ**

ಲಾಲಿಸೈ ನಾನೊಂದ ಪೇಳುವೆನು ನಿನಗೆ ಗುಣ ।
ಶೀಲಯೇಕಾಂತದಿಂದೀಗ ॥
ಖೂಳಖಳನಿವನು ಬಹುಕಾಲತಪವಿರ್ದಜನೊಳ್ ।
ಕೇಳಿ ಪಡೆದಿಹನೊಂದು ವರವ । ॥220॥

ಉದದೊಳಗಿರುವ ಪಂಚಪ್ರಾಣಗಳ ಬೇರೆ ।
ಸದನಕೊಯ್ದಿಡುವಂತೆ ಪಿಂತೆ ॥
ಮಧುಕರದ ರೂಪದಿಂದೀಕ್ಷಿಸಲು ತೋರ್ಪುದಾ ।
ಕುಧರದೊಳಗಿಹ ಶಿಲೆಯೊಳಿಂದು । ॥221॥

ಮತ್ತಾ ಶಿಲೆಯನಯ್ದೆ ಕಿತ್ತುಪುಡಿಗೆಯ್ಯೆ ಖತಿ ।
ವೆತ್ತು ದಾನವನ ರೂಪಾಂತು ॥
ಪ್ರತ್ಯಕ್ಷಮಾದ ಬವರಿಗಳ್ಳೆದಿ ಪಾರುವುದ ।
ನೊತ್ತಿ ಮರ್ದಿಸೆ ಮಡಿವನಿವನು । ॥222॥

**ಕಂದ**

ಇಂತಾ ದುರುದುಂಡಿಯು ಖಳ ।
ನಂತಸ್ಥಾನವನು ತಿಳುಹೆ ಕೋಪದಿ ಹನುಮಂ ॥
ನಿಂತುರೆ ಬಲಿದಂ ವಿಕ್ರಮ ।
ದಿಂ ತಳುವದೆ ದೇವನಿಕರ ಮೆಚ್ಚುವ ತೆರದಿಂ ॥223॥

**ರಾಗ ಪಂಚಾಗತಿ ಮಟ್ಟೆತಾಳ**

ಘೋರ ರೂಪಿನಿಂದ ಹನುಮ ।
ಭೋರನಂದು ಖಳನ ಪಿಡಿವು ।
ತಾರುಭಟೆಯೊಳೊಂದು ಕಾಲೊ । ಳೂರಿ ಬೇಗದಿ ॥
ಧಾರಿಣಿಯಲಿ ಮೆಟ್ಟಿ ತೋರ್ಪ ।
ತೋರಗಿರಿಯೊಳೊಂದು ಕಾಲ ।
ನೂರಿ ಶಿಲೆಯನೊದೆದು ಕೆಡಹೆ । ಕಾರಣೀಕದ ॥224॥

ಮಧುಕರಂಗಳಯ್ದು ಪೊರಡೆ ।
ಪದುಳದಿಂದ ಪವನಜಾತ ।
ನದರ ಕೊಂದು ಕಾಲಿನಡಿಯೊ । ಳೊದರುವಸುರನ ॥
ಸದೆದು ಮರ್ದಿಸುತ್ತ ಬಳಿಕ ।
ಮದದಿ ಹೂಂಕರಿಸಲು ಯಮನ ।
ಸದನವನ್ನು ಸೂರೆಗೊಂಡ । ನೊದಗಿನಿಂದಲಿ ॥225॥

**ಭಾಮಿನಿ**

ಏನನೆಂಬೆನು ಋಷಿಗಳಿರ ಪವ ।
ಮಾನಜನ ಬಲು ಪೌರುಷಂಗಳ ।
ದಾನವನ ಮರಣದಲಿ ಸುರತತಿ ತೋಷದಿಂದೊಲಿದು ॥
ಭಾನುಮಾರ್ಗದಿಸುರಿಸಿದರು ಸು ।
ಮ್ಮಾನದಲಿ ಪೂಮಳೆಯ ಧರಣಿಗೆ ।
ವಾನರರೊಳೇಂಧನ್ಯನೋ ಬಣ್ಣಿಸುವಡರಿದೆಂದ ॥226॥

**ಕಂದ**

ಅನಿತರೊಳಾ ಸಂಧ್ಯೆಯು ತ ।
ನ್ನಿನೆಯಂ ಕೆಡದಿರ್ಪ ಧಾರಿಣಿಗೆ ಬಂದಂದಾ ॥
ತನ ಗುಣಗಳನಂ ವರ್ಣಿಸಿ ।
ನೆನೆನೆನೆವುತಯ್ದೆ ದುಃಖಿಸಿದಳುರುತರದಿಂ ॥227॥

**ರಾಗ ಗೌಳ ಆದಿತಾಳ**

ಪ್ರಾಣನಾಥ ಎನ್ನ ಮಾತ । ಮೀರಿ ಪೋಗಿ ಬರಿದೆ ॥
ಪ್ರಾಣವನ್ನು ತೊರೆದೆಯಲ್ಲ । ಪಾವಮಾನಿಯಿಂದ ॥
ಕಾಣುವೆ ನಾನಿನ್ನೆಂದಿಗೆ । ನಿನ್ನ ನಕಟಕಟ ॥
ಕೌಣಪಾಗ್ರಗಣ್ಯ ಗತಿ । ಯಾವುದೆನಗೆ ಹೇಳು ॥228॥

ದುಷ್ಟ ರಾವಣೇಂದ್ರನಾ ಮಿ । ತ್ರತ್ವದಿಂದ ಕಡೆಗೆ ॥
ಕಷ್ಟವೇ ಕಾರಣವಾದು । ದಿಷ್ಟವಿಲ್ಲವೆಮಗೆ ॥
ದುಷ್ಟ ಮಂತ್ರಿಗಳು ಕೂಡಿ । ಸೃಷ್ಟಿಯ ಪ್ರಾಣಜಗೆ ॥
ಶ್ರೇಷ್ಠ ನಿನ್ನ ಬಲಿಯ ಕೊಟ್ಟ । ರೆಷ್ಟೆಂಬೆ ನಾನಿದಕೆ ॥229॥

ಭುಜಬಲಪರಾಕ್ರಮಗಳೆಲ್ಲ । ತ್ಯಜಿಸಿ ದೂರ ಹೋಯ್ತೆ ॥
ರಜತಾಚಲನಿವಾಸನೊಲವು । ಗಜಬಜವಿಂದಾಯ್ತೆ ॥
ಅಜನಿತ್ತಿರುವ ವರದ ಬಲದಿ । ವಿಜಯಗೆಯ್ಯದಿಲ್ಲಿ ॥
ನಿಜವಾಗಿ ನೀ ಮಡಿದೆಯಲ್ಲ । ರಜನೀವೇಳ್ಯದಲ್ಲಿ ॥230॥

**ಕಂದ**

ಈ ಪರಿಯಿಂದಲಿ ಸಂಧ್ಯೆ ಪ್ರ ।
ಲಾಪಿಸುತಿರ್ಪುದನು ಕಂಡು ಮಾರುತಪುತ್ರಂ ॥
ಕೋಪವನಡಗಿಸಿ ಧೈರ್ಯವ ।
ತಾ ಪೇಳಿದನಾಗ ರಾಕ್ಷಸೇಂದ್ರನ ಸತಿಗಂ ॥231॥

**ಭಾಮಿನಿ**

ಮರುಗಲೇನ್ ಕಾರಣವು ಮಾನಿನಿ ।
ದುರುಳತನದಿಂ ಖಳನಿವನು ಭೂ ।
ವರರ ವಂಚಿಸಿ ತಂದ ದೋಷವು ತಟ್ಟಿತಿಂದಿನಲಿ ॥
ಮರೆಯದೀ ದುರುದುಂಡಿಯಾತ್ಮಜ ।
ಗಿರದೆ ದೊರೆತನವಿತ್ತು ಪಾಲಿಸಿ ।
ಪೊರೆವುದತಿ ಲೇಸೆನುತ ಸಂತವಿಸಿದನು ಮಾನಿನಿಯ ॥232॥

**ದ್ವಿಪದಿ**

ಆ ಸಮಯದೊಳಗೆ ದುರುದುಂಡಿಯಾತ್ಮಜನ ।
ತೋಷದಿಂ ಮರುತ ಭವ ಕರೆಸಿಕೊಂಡವನ ॥233॥

ಪುರದಾಧಿಪತ್ಯಗಳನಿತ್ತು ರಘುವರರ ।
ಕರೆತಂದ ನಿಜ ವಾಹಿನಿಗೆ ಸಮರಧೀರ ॥234॥

ಎನಿತು ಸಾಹಸಿಯೊ ಪೊಗಳುವಡರಿದು ಅವರ ।
ಹನುಮನೆಚ್ಚರದಂತೆ ತರಲು ತರುಚರರ ॥235॥

ಮೊತ್ತದೊಳಗೆಲ್ಲ ತವತವಗೆ ನಲಿದಾಡೆ ।
ಅತ್ತಲಜಭವ ಸುರಾದಿಗಳು ಕೊಂಡಾಡೆ ॥ ॥236॥

ಈ ರಾತ್ರಿಯೊಳು ಮೋಸವಾದ ಕಜ್ಜವನು ।
ಯಾರರಿಯದಂತೋರ್ವನೆಸಗಿದುದಕಿನ್ನು ॥237॥

ಪೊಗಳಲೆಮ್ಮಳವಲ್ಲವೆನುತ ರವಿಜಾತ ।
ಸುಗುಣಜಾಂಬವ ಮುಖ್ಯರಾದ ಕಪಿವ್ರಾತ ॥238॥

ತರತರದಿ ನುತಿಸುತಿರಲನಿತರೊಳಗಿತ್ತಾ ।
ಧರಣಿಜಾತೆಯಶೋಕವನದಿ ಮರುಗುತ್ತ ॥239॥

ಪತಿಯ ನೆನೆನೆನೆದು ಸರಮೆಯ ಕರೆತಾಗ ।
ಅತಿಶಯದೊಳವಳೊಡನೆ ಪೇಳ್ದಳತಿಬೇಗ ॥240॥

**ರಾಗ ಸಾಂಗತ್ಯ ರೂಪಕತಾಳ**

ಕೇಳಿದೆಯೇನೇ ಕಾಮಿನಿರನ್ನೆ ನೀನೊಂದ
ಕೇಳದ ವತ್ತಾಂತಗಳನು ॥
ಕೇಳಿನಕುಲದರಸಗೆ ಬಂದ ಬವಣೆಯ ।
ಪೇಳುವೆ ನಿನಗೆ ನಾನವ್ವ ॥ ॥241॥

ಕಣ್ಣಿಗೆ ನಿದ್ರೆ ಬಾರದೆ ಕಾಂತನನು ನೆನೆ ।
ದೆಣ್ಣಿಸುತೀ ರಾತ್ರೆಯಲ್ಲಿ ॥
ಕನ್ನೆನಾನೊರಗಿರಲೆನ್ನ ಕಾವಲಿಗಿರ್ದ ।
ಭಿನ್ನ ತಂತ್ರದ ರಕ್ಕಸಿಯರು ॥242॥

ತಮ್ಮ ತಮ್ಮೊಳು ಮಾತನಾಡುತಿರ್ದರುಮೆನ ।
ಗೊಮ್ಮೊಮ್ಮೆ ನಾ ಕೇಳದಂತೆ ॥
ಅಮ್ಮ ನಾನದ ಕಿವಿಗೊಟ್ಟಾಲಿಸಿದೆ ಕಾಣೆ ।
ಒಮ್ಮನದಲಿ ಸುಪ್ರವೀಣೆ ॥ ॥243॥

ಶ್ರೀರಾಮಚಂದ್ರ ಲಕ್ಷ್ಮಣದೇವನನು ಸಹ ।
ಈ ರಾತ್ರಿಯೊಳು ಖಳನೋರ್ವ ॥
ಆ ರಾವಣನ ನೇಮದಿಂದಯ್ದಿ ಕಪಟದಿಂ ।
ದಾರರಿಯದ ತೆರದಲ್ಲಿ ॥ ॥244॥

ಪಾತಾಳಕೊಯ್ದು ನಿರ್ಬಂಧಿಸಿ ಸೆರೆಯೊಳು ।
ತಾ ತಳುವದೆ ಇಟ್ಟನಂತೆ ॥
ಮಾತಿದು ಪುಸಿಯಲ್ಲವಂತೆ ಮಾನಿನಿರನ್ನೆ ।
ಈ ತೆರನಾದ ಮೇಲಿನ್ನು ॥ ॥245॥

ಎನಗಾದ ಪರಿಯೆನ್ನ ಮನದನ್ನಗಾಯಿತಿ ।
ನ್ನನುಮಾನವೇತಕೆ ದೇಹ ॥
ವನು ಇಟ್ಟು ಬಾಳಿದರೇನು ಭೂತಳದಲ್ಲಿ ।
ವನಜಾಕ್ಷಿ ಗತಿಯೇನೆ ಮುಂದೆ ॥246॥

**ಕಂದ**

ಇಂತೆನೆ ಸೀತಾಮಾನಿನಿ ।
ಸಂತವಿಸುತಾಕ್ಷಣದಿ ಪೇಳ್ದಳಾಶರಮೆಯು ॥
ಚಿಂತಿಪುದ್ಯಾತಕೆ ಈ ವ ।
ತ್ತಾಂತವ ನಾನುಸಿರುವೆ ಲಾಲಿಸು ವಿನಯದೊಳಂ ॥247॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅಮ್ಮ ಕೇಳ್ ಪಾತಾಳದೊಳಗಿಂ ।
ದೆಮ್ಮ ರಾವಣಗಾಪ್ತನೆನಿಸುವ ।
ಕರ್ಮಿ ಮೈರಾವಣನು ಬಂದು ಸು । ಧಾರ್ಮಿಕರನು ॥248॥

ದಶಶಿರನನೇಮದೊಳಗೊಯ್ದನು ।
ಪುಸಿಯ ಮಾತಲ್ಲದನು ನಿಮಗಾ ।
ನುಸಿರಲಾರದೆ ಸುಮ್ಮನಿರ್ದೆನು । ಬಿಸರುಹಾಕ್ಷಿ ॥249॥

ಬಂದುದೆಲ್ಲವನನುಭವಿಸಬೇ ।
ಕಿಂದಳಲಲೇನಹುದು ದೇವರಿ ।
ಗೆಂದಿಗಾದರು ಮೋಸವುಂಟೇ । ಕುಂದರದನೆ ॥250॥

ಸರಮೆ ಈ ಪರಿಯಿಂದುಸಿರೆ ಮನ ।
ಕರಗಿ ಜಾನಕಿ ಮೂರ್ಛೆಯಲಿ ಮೈ ।
ಮರೆದು ಮತ್ತೆಚ್ಚತ್ತು ಪೇಳ್ದಳು । ತರುಣಿಯೊಡನೆ ॥251॥

**ರಾಗ ಆನಂದಭೈರವಿ ರೂಪಕತಾಳ**

ಏನ ಮಾಡಲಿ ಕಾಂತೆ । ಇಂದೆನ್ನ ಸುಪ್ರೀತೆ ।
ಮಾನಿನಿ ಮಣಿ ಗತಿ ಎನಗಿ । ನ್ನೇನುಸಿರದೆ ನೀನು ॥ ಏನ ॥ ॥ಪಲ್ಲವಿ॥

ನಾನೊಂದೆಣಿಸಲು ದೈವವು । ತಾನೆರಡೆಣಿಸುವುದೆಲ್ಲವು ।
ಭಾನುಕುಲಾಂಬುಧಿಚಂದ್ರರಿ । ಗೂಣಯವಡಸುವರೆ ॥
ನಾನಾದಿನ ಮತ್ತ್ಯುವ ಮುಂ । ಗಾಣದೆ ಒಡ್ಡಿದಕಿನ್ನೀ ।
ಪ್ರಾಣವ ತೊರೆವುದೆ ಸಫಲವು । ಏಣಾಕ್ಷಿಯೆ ಕೇಳೆ ॥ ಏನ ॥252॥

ನೀ ತಿಳಿದೆನ್ನೊಡನೀ ಸಲ | ಮಾತಾಡದೆ ವಂಚಿಸುವರೆ |
ಮಾತೆಯ ಸರಿ ನೀನೆನುತತಿ | ಪ್ರೀತಿಯೊಳ್ ನಂಬಿರಲು ||
ಏತಕೆ ನಿರ್ದಯಗೆಯ್ದೆ ನಿ | ಮ್ಮಾತಗಳೇನ್ ಕೋಪಿಸಿದರೊ |
ಪಾತಾಳದೊಳೇನಾಗಿಹ | ರೋ ತನ್ನ ವರ್ಗೀವಿಧಿಯೆ || ಏನ ||253||

ತರಣಿಜನಾಂಗದ ಜಾಂಬವ | ರುರು ಶತಬಲಿ  ಕಪಿನಾಯಕ |
ರಿರಲಿಲ್ಲವೆ ರಣದೊಳಗಿಂ | ದಿರುಳಿನೊಳವರೆಲ್ಲ ||
ಮರುತಾತ್ಮಜ ನಾ ವೇಳ್ಯದಿ | ತೆರಳಿದನಿನ್ನಾವಲ್ಲಿಗೆ |
ಹರ ಹರ ಗ್ರಹಗತಿ ಬಂದಡ | ಸಿರಲಾರಿಂದೇನು  || ಏನ ||254||

**ವಚನ**

ಈ ಪ್ರಕಾರದಿಂ ಧರಣಿಜಾತೆ ಪ್ರಳಾಪಿಸುತ್ತಿರಲಾ ವೇಳ್ಯದೊಳ್ ಸರಮೆ ಸಂತವಿಟ್ಟಳದೆಂತೆನೆ -

**ರಾಗ ಶಂಕರಾಭರಣ ಅಷ್ಟತಾಳ**

ಬೇಡವೆ | ಭಾವಕಿರನ್ನೆ ಚಿಂತಿಸ | ಬೇಡವೆ ||ಪ||

ಬೇಡವೆ ಬಾಲೆ ಸುಶೀಲೆ ನೀ ಲಾಲಿಸು |
ಆಡುವ ಮಾತನು ಗಾಢದಿ ಗುಣಶೀಲೆ || ಬೇಡವೆ ||  ||ಅ.ಪ.||

ಸುಮ್ಮನೆ ಬಳಲಲ್ಯಾಕಮ್ಮ | ದೇವಿ |
ನಿಮ್ಮರಸನನಿಂದು ಹನುಮ | ತಂದ |
ನೊಮ್ಮೆಗೀ ರಾತ್ರಿಯೊಳಮ್ಮ | ಈಗ |
ಹಮ್ಮಿನುತ್ತರವ ಪೇಳುಮ್ಮಳಿಸುವದ್ಯಾಕೆ |
ಸನ್ಮತವಲ್ಲ ಸದ್ಧರ್ಮವಂತೆಯೆ ಚಿಂತೆ || ಬೇಡವೆ ||255||

ಪಾತಾಳದೊಳಗಿರ್ದ ಖಳನಾ | ವಾಯು |
ಜಾತ ತಾ ಕೊಂದು ಮತ್ತವನಾ | ಯಮ |
ದೂತರ ಕೈಗಿತ್ತು ನಪನಾ | ಸಹ |
ಜಾತ ಸಮೇತ | ಮೈದಿದನನುಮಾನ |
ಮೇತರದುಸಿರಿನ್ನೀ ಮಾತೀಗ ಸಹಜವು || ಬೇಡವೆ ||256||

ತರುಚರರೊಳು ಮುಖ್ಯಪ್ರಾಣ | ಬಲು |
ತರಪರಾಕ್ರಮಿಯಲ್ಲೌ ಜಾಣ | ಇದಿ |
ರ್ಬರುವ ರಿಪುಗಳುಂಟೆ ಕಾಣೌ | ಧುರಂ |
ಧರ ವಿಜಯರು ಸಂ | ಗರಕಾಲಭೈರವ |
ನಿರಲಪ ಜಯವು ತಾ | ದೊರೆವುದೆ ದುಗುಡವು || ಬೇಡವೆ ||257||

**ಭಾಮಿನಿ**

ಸರಮೆ ತಾನೀ ತೆರದಿ ಸೀತಾ।
ತರುಣಿಯನು ಸಂತಯಿಸುತಿರೆ ಭಾ।
ಸ್ಕರನು ಪೂರ್ವಾದ್ರಿಯೊಳಗನಿತರೊಳುದಿಸಲಾ ಕ್ಷಣದಿ॥
ಹರಿಬಲದೊಳಾರ್ಭಟೆಯು ಮೊಳಗ।
ಲ್ಕಿರದೆ ಕೇಳುತ ಧರಣಿಸುತೆ ಬಳಿ।
ಕುರುತರೋತ್ಸಹ ದಿಂದಲಿರ್ದಳು ನೆನೆದು ರಾಘವನ॥258॥

**ರಾಗ ಭೈರವಿ ಝಂಪೆತಾಳ**

ಅನಿತರೊಳಗಿತ್ತಾಲಾ। ತರುಚರರ ವಾಹಿನಿಯೊ।
ಳಿನ ಕುಲಾಂಬುಧಿ ಚಂದ್ರ। ನನುವಿನಿಂದಾಗ॥259॥

ಬಳಿಕ ಎಚ್ಚರ್ತೆದ್ದು। ತಳುವದಲೆ ಸಂಭ್ರಮದಿ।
ಗೆಲವಿಂದ ನಿತ್ಯವಿಧಿ। ಗಳನು ಪೂರೈಸಿ॥260॥

ತರಣಿಜಾದ್ಯರ ಕರೆದು। ಕರುಣದಿಂ ಕೇಳ್ದ ದಶ।
ಶಿರನ ವಧೆಗೇನ ಕಂ। ಡಿರಿ ಮಾರ್ಗವಿಂದು॥261॥

ದಿನಗಳೆವುದಾಯ್ತು ಭೂ। ವನಿತೆಯೇನಾಗಿಹಳೊ
ದನುಜನುರುಬೆಗಳಿನ್ನು। ಘನವಾಯಿತಲ್ಲ॥262॥

ಇಂತೆನಲು ರಾಘವಗೆ। ನಿಂತು ಕರಗಳ ಮುಗಿದು।
ಸಂತಸದಿ ಭಾನುಸುತ। ನಿಂತೆಂದನಾಗ॥263॥

**ರಾಗ ಧನಶ್ರೀ ಏಕತಾಳ**

ಸ್ವಾಮಿ ಲಾಲಿಸಿ ಕೇಳೆನ್ನ ಮಾತ।
ಭೀಮವಿಕ್ರಮ ಭುಜಬಲದಿ ಪ್ರಖ್ಯಾತ॥ ಸ್ವಾಮಿ॥ ॥ಪಲ್ಲವಿ॥

ದರುಳ ರಾವಣ ನಿಮ್ಮ। ಶರಕಾನಲಾಪನೆ।
ಮರೆಯ ಮಾತಲ್ಲ ವಿ। ನ್ನೊರೆವೆವು ವಿನಯದಿ॥ ಸ್ವಾಮಿ॥264॥

ಮಾರುತಾತ್ಮಜನಿರ। ಲೀ ರಾಕ್ಷಸರ ಭಯ।
ದೋರದೆಮಗೆ ಭೂಮಿ। ಜಾರಮಣ ಪ್ರವೀಣ॥ ಸ್ವಾಮಿ॥265॥

ಈ ದಶಕಂಠನು। ಪೋದಿರುಳಲಿ ದುಷ್ಟ।
ನಾದ ಮೈರಾವಣ। ಗಾದರಿಸುತಲೀಗ॥ ಸ್ವಾಮಿ॥266॥

ಕಳುಹಲಾಕ್ಷಣಕವ । ಖಳ ವಿಭೀಷಣನಂತೆ ।
ಒಳಹೊಕ್ಕು ನಿಮ್ಮನು । ಕಳವಿನೊಳೊಯ್ದನು ॥ ಸ್ವಾಮಿ ॥267॥

ಪಾತಾಳಲಂಕೆಗೆ । ತಾ ತಳುವದೆ ಒಯ್ದ ।
ಕೋತಿಗಳೆಲ್ಲ ನಿ । ಶ್ಚೈತನ್ಯರಾದರು ॥ ಸ್ವಾಮಿ ॥268॥

ಆ ಸಮಯದೊಳಲ್ಲಿ । ಗಾಶುಗನಾತ್ಮಜ ।
ಬೇಸರದಯ್ದಿ ಮ । ತ್ತಾಸುರನನು ಕೊಂದ ॥ ಸ್ವಾಮಿ ॥269॥

**ಕಂದ**

ಬಳಿಕವನನುಜೆಯ ಕುವರಂ ।
ಗೊಲವಿಂದಾ ರಾಜ್ಯವಿತ್ತು ನಿಮ್ಮಂನಮ್ಮೀ ॥
ಬಲಕಂ ತಂದಿಹನೀ ದಿನ ।
ಬಲ ಪೌರುಷಮೆಂತು ಮಾರುತಾತ್ಮಜಗೆಂದರ್ ॥270॥

**ರಾಗ ಭೈರವಿ ಝಂಪೆತಾಳ**

ಎಂದ ಮಾತನು ರಾಮ । ಚಂದ್ರನಾಲಿಸುತಾಗ ।
ಲಂದು ಮರುತ  ಜನನಾ । ನಂದದಿಂದಪ್ಪಿ ॥271॥

ಇವನ ಸಹವಾಸಮಿಂ । ತೆವಗಿಲ್ಲದಿರೆ ಕಾರ್ಯ ।
ಭುವನದೊಳಗೆಂತಪ್ಪು । ದವಿಳಂಬದಿಂದ ॥272॥

ಎಂದೆನುತ ಪೊಗಳಿ ಭೂ । ನಂದನೆಯ ರಮಣನಲ ।
ವಿಂದ ತೋಷದೊಳು ರಣ । ಮಂದಿರದೊಳಿರ್ದ ॥273॥

**ಭಾಮಿನಿ**

ಪರಿಪರಿಯೊಳಾ ಸೂತನಾ ಮುನಿ ।
ವರರಿಗೀ ಚಾರಿತ್ರವನು ವಿ ।
ಸ್ತರದೊಳೊರೆಯಲು ಕೇಳಿ ಬಳಿಕವರೆಂದರೊಲವಿನಲಿ ॥
ಕರುಣನಿಧಿ ನೀನಾಲಿಸೈ ರಘು ।
ವರನು ಮುಂದೇನ್ ಗೆಯ್ದನೆಂಬುದ ।
ನೊರೆಯಬೇಕೆನೆ ಸೂತ ಭಕ್ತಿಯೊಳೆಂದನೆಲ್ಲರಿಗೆ ॥274॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ದಶಶಿರನು ಮೈರಾವಣಾಖ್ಯನ ।
ಒಸಗೆಯನು ತಾ ಕೇಳಿ ಬಂದಾ ।
ಬಿಸರುಹಾಂಬಕನಿದಿರಿನೊಳು ನಿಂ । ದಸಮಬಲವ ॥275॥

ನೆರಹಿ ಯುದ್ಧವ ಮಾಡಿ ರಾಘವ ।
ನುರತರಾಸ್ತ್ರಗಳಿಂದವನ ಶಿರ ।
ವರಿದು ತದ್ಬಲವೆಲ್ಲವನು ಸಂ । ಹರಿಸಿ ಮುದದಿ ॥276॥

ತೋಷದಿಂದೊಲಿದಂದು ಶರಣ ವಿ ।
ಭೀಷಣಗೆ ಲಂಕಾಧಿಪತ್ಯವ ।
ಕೀಶರೀಕ್ಷಿಸುವಂತೆ ಕರುಣಿಸಿ । ಭೂಸುತೆಯನು ॥277॥

ಕರೆಸಿ ಬಳಿಕೊಡಗೊಂಡು ಧನಪನ ।
ವರಮಹಾಪುಷ್ಪಕವನೇರ್ದಾ ।
ತರುಚರರ ಬಲ ಸಹಿತ ಭೂಮಿ । ಶ್ವರಲಲಾಮ ॥278॥

ರಾಜಿಸುತ ನಡೆತಂದು ಭಾರ ।
ದ್ವಾಜಮುನಿಪನ ಕಂಡು ಕರುಣದಿ ।
ರಾಜತೇಜದೊಳ್ಮೆದಿ ರವಿಕುಲ । ರಾಜನಂದು ॥279॥

**ವಾರ್ಧಕ**

ಭರತ ಶತ್ರುಘ್ನರಂ ಕಾಯ್ದುಮಾನಂದದಿಂ ।
ವರಮಾತೆಯಮೂವರಂಘ್ರಿಗಂ ಮಣಿದು ಮಾ ।
ಪುರಜನರು ಪರಿಜನರನೆಲ್ಲರಂ ಮನ್ನಿಸುತ ಯೋಧ್ಯಪುರಕಯ್ದಿ ಬಳಿಕಾ ॥
ಸರಸಿಜೋದ್ಭವ ಮುಖ್ಯ ದಿವಿಜತತಿ ಸಂಸ್ತುತಿಸು ।
ತಿರೆ ರಾಮಚಂದ್ರಗಂ ಪಟ್ಟಾಭಿಷೇಚನವ ।
ಭರದಿಂದ ರಚಿಸಿದರ್ ಗುರುವಸಿಷ್ಠಾದಿಗಳ್ ಶುಭದಿಂದ ಸುಮೂರ್ಹದಿ ॥280॥

**ಕಂದ**

ಆ ಸಮಯದೊಳಾ ರಾಮಂ ।
ತೋಷಾನ್ವಿತನಾಗಿ ಸಕಲರಂ ಮನ್ನಿಸುತಂ ॥
ಕೀಶವ್ರಾತವ ಕಳುಹಿಸಿ ।
ಪೋಷಿಸಿದಂ ಧರೆಯ ಜನರನತಿ ಧರ್ಮದೊಳಂ ॥281॥

**ರಾಗ ಮಾರವಿ ಝುಂಪೆತಾಳ**

ಹೀಗೆಂದು ಸೂತಾಖ್ಯ । ನಾಗ ಮುನಿಗಳಿಗರುಹಿ ।
ರಾಘವನ ನೆನೆ ನೆನೆದು । ಯೋಗಮಾರ್ಗದಲಿ ॥282॥

ನೈಮಿಷಾರಣ್ಯದೊಳು । ಕ್ಷೇಮದಿಂದಿರ್ದನೆಂ ।
ಬೀ ಮಹಾಕಥೆಯನಿಂ । ದಾಮೋಹದಿಂದ ॥283॥

ಈ ವಸುಧೆಯಮರರೊಳು । ದ್ರಾವಿಡಕುಲಜನೆನಿಸು ।
ವಾ ವೆಂಕಟನು ಪೆತ್ತ । ಪಾವನಾತ್ಮಕನು ॥284॥

ವರಸುಬ್ಬನರಸಿಯಾ । ಗಿರುವ ಲಕ್ಷ್ಮಿಯು ಪೆತ್ತ ।
ತರಳ ವೆಂಕಟನು ಸ । ದ್ಗುರು ಭಜನೆಯಿಂದ ॥285॥

ಸರಸಿಜೋದ್ಭವನಾಮ । ಪುರದ ಸುಬ್ರಹ್ಮಣ್ಯ ।
ಗುರುಪದಕಟಾಕ್ಷದಿಂ । ಪರಮ ವೈಭವದಿ ॥286॥

ಲೋಕನಾಯಕಿಯಾದ । ಮೂಕಾಂಬಿಕೆಯ ಕಪೆಯೊ ।
ಳೀ ಕಾವ್ಯವನ್ನು  ನಿ । ರ್ವ್ಯಾಕುಲತೆಯಿಂದ ॥287॥

ಯಕ್ಷಗಾನದೊಳಿದರ । ನೀಕ್ಷಿತಿಗೆ ತಿಳುಹಿದೆನು ।
ಪೇಕ್ಷಿಸದೆ ಬರದೋದೆ । ರಕ್ಷಿಸುವ ರಾಮ ॥288॥

**ಕಂದ**

ಇಂತೀ ಕಥೆಯಂ ಭಕ್ತಿಯೊ ।
ಳುಂ ತಳುವದೆ ಹೇಳಿ ಕೇಳಿದವರಂ ಸೀತಾ ॥
ಕಾಂತಂಪಾಲಿಪನನುದಿನ ।
ಸಂತೋಷಗಳಿಂದ ದೊರೆವುದಿಹಪರ ಸುಖಮುಂ ॥

**ಮಂಗಲ**

**ರಾಗ ಆಹೇರಿ ಏಕತಾಳ**

ಮಂಗಲಂ । ಶುಭ । ಮಂಗಲಂ ॥ಪ॥

ಜಯ ಜಯ ಸೀತಾರಾಮನಿಗೆ ।
ಜಯ ಜಯ ಸಾಕೇತಾಧಿಪಗೆ ॥
ಜಯ ಜಯ ಪರಿಪೂರ್ಣಾತ್ಮಕನೆನಿಪಗೆ ।
ಜಯ ಜಯ ನಾಥರ ನಾಥನಿಗೆ ॥ ಮಂಗಲಂ ॥289॥

ಸಂಗರಶೂರಗೆ ಶುಭಕರಗೆ ।
ತುಂಗಪರಾಕ್ರಮಿ ಧೀರನಿಗೆ ॥
ಹಿಂಗದೆ ಮರುತಜಗೊಲಿದಗೆ ಭಕ್ತಾಂತ ।
ರಂಗಗೆ ಶ್ರೀರಘುರಾಮನಿಗೆ ॥ ಮಂಗಲಂ ॥290॥

ಅಂಜನೆಯಣುಗಗೆ ಅನುಪಮಗೆ ।
ಭಂಜಿಸಿ ದನುಜರ ಮಡುಹಿದಗೆ ॥
ಸಂಜೀವಗೆ ಸರ್ವಾಂತರ್ಯಾಮಿಗೆ ।
ಕಂಜನಾಭನ ಪದಸೇವಕಗೆ ॥ ಮಂಗಲಂ ॥291॥

**ರಾಗ ಢವಾರಳ ತ್ರಿವುಡೆತಾಳ**

ದೇವಿಗೆ ದಾಕ್ಷಾಯಣಿಗೆ ಕ ।
ಪಾವಲಂಬೆಗೆ ಪರಶಿವೆಗೆ ।
ಭಾವಜಾಂತಕನರ್ಧಾಂಗಿಗೆ ಭಾವೆಗೆ
ಪಾವನಕಾರಿಗೆ ಪೂರ್ಣೋಲ್ಲಾಸೆಗೆ ।
ಕೋವಿದೆಯರು ಕಡು ಸೊಬಗಿನಿಂ ಶೋಭಿಪ ।
ತಾವರೆಯಾರತಿಯ ಬೆಳಗಿರೆ ॥ ಶೋಭಾನೆ ॥292॥

ಬಾಲಕುರಂಗಲೋಚನೆಗೆ ಸುಗು ।
ಣಾಲವಾಲೆ ಸುಂದರಿಗೆ ।
ನೀಲಾಳಕಿಗೆ ನಿರ್ಮಲಚಿತ್ತಳಿಗೆ ।
ಪಾಲಾಂಬಕಿಗೆ ಪಾಲಿತ ಸುರನುತೆಗೆ ।
ಮೂಲೋಕಾರ್ಚಿತೆಗೊಲಿದಪ್ಸರೆಯರು ।
ನೀಲದಾರತಿಯ ಬೆಳಗಿರೆ ॥ ಶೋಭಾನೆ ॥293॥

ವರ ಕೊಲ್ಲಾಪುರಧೀಶ್ವರಿಗೆ ಸ ।
ದ್ಗುರುವಮರೇಂದ್ರಾತ್ಮಕಿಗೆ ।
ತರಳವೆಂಕಟಹತ್ಸರಸಿಜವಾಸೆಗೆ ।
ವರದೆಗೆ ವಾಗೀಶ್ವರಿಗೆ ಮೂಕಾಂಬೆಗೆ ।
ವರಕರಿಗಮನೆಯರು ಪಾಡುತ ।
ಕುರುಜಿನಾರತಿಯ ಬೆಳಗಿರೆ ॥ ಶೋಭಾನೆ ॥294॥

**ರಾಗ ಮಧ್ಯಮಾವತಿ ಆದಿತಾಳ**

ಅಂಜನೆಯಣುಗಗೆ ಮಂಗಲ । ರಿಪು ।
ಕುಂಜರಪಂಚಾಸ್ಯಗೆ ಮಂಗಲ ॥ ॥ ಪಲ್ಲವಿ ॥

ರಘುವರಪದಕಮಲೇಂದಿರನಿಗೆ ।
ಜಗದಾರಾಧ್ಯಗೆ ಜಿತಕಾಮನಿಗೆ ॥
ಖಗರಾಜೋಪಮಗಮನಗೆ ಹರಿಕುಲಜಗೆ ॥295॥

ದನುಜಕುಲಾಂಬುಧಿವಡಬಾನಲನಿಗೆ ।
ದಿನಕರಶತಕೋಟಿಭಾಸುರನಿಗೆ ।
ಪ್ರಣವಸ್ವರೂಪನಿಗೆ ಚಿನುಮಯಾತ್ಮಕನಿಗೆ ॥296॥

ವರಮಹಾಲಿಂಗದಪುರನಿಲಯಗೆ ಶ್ರೀ ।
ಗುರುವಮರೇಂದ್ರಸ್ವರೂಪನಿಗೆ ॥
ಧುರವಿಜಯನಿಗೆ ಮೂಕಾಸುರಮರ್ದಿನಿಯಾದ ।
ಪರಶಿವೆಯರಸನಂಶೀಭೂತನಿ ೆ ॥297॥

**ಯಕ್ಷಗನ ಮೈರಾವಣಕಾಳಗವು ಮುಗಿದುದು**

# ಯಕ್ಷಗಾನ ರಾವಣ ವಧೆ

## ಪಾತ್ರಗಳು

ಶ್ರೀರಾಮ
ಲಕ್ಷ್ಮಣ
ವಿಭೀಷಣ
ಹನುಮಂತ
ಸುಗ್ರೀವ
ಸೇವಕರು
ಭರತ
ಜಾಂಬವಂತ
ಶತ್ರುಘ್ನ
ನಾರದ
ಬ್ರಹ್ಮ
ಬ್ರಾಹ್ಮಣರು
ಸುಷೇಣ
ರಾವಣ
ಮಂಡೋದರಿ
ವಿರೂಪಾಕ್ಷ
ದೀರ್ಘೋದರ
ಮಾತಲಿ
ಮಾಲ್ಯವಂತ
ಸೀತೆ
ಸರ್ಪರೋಮ

ವಶ್ಚಿಕರೋಮ
ಖಡುಗರೋಮ

**ಶಾರ್ದೂಲ ವಿಕ್ರೀಡಿತಂ**

ಶ್ರೀಮತ್ಸುಂದರವಿಗ್ರಹಂ ಬುಧಜನಧ್ಯೇಯಂ ಸುವರ್ಣಪ್ರಭಂ |
ಸೋಮಾದಿಗ್ರಹಮಧ್ಯಚಾನಿನಿಲಯಂ ಛಾಯಾಸತೀವಲ್ಲಭಮ್ |
ಹೇಮಾಲಂಕತಮಬ್ಜಮಿತ್ರಮಮಲಂ ಸತ್ಯಂಜಗತ್ಕಾರಣಂ |
ಭೌಮಪ್ರೀತಮಹಂ ನಮಾಮಿ ಸತತಂ ಶ್ರೀ ಸೂರ್ಯನಾರಾಯಣಮ್ ||1||

**ರಾಗ ನಾಟಿ ಝಂಪೆತಾಳ**

ಜಯತು ಜಯ ಮಾರ್ತಾಂಡ | ಜಯತು ಜಗದೋದ್ದಂಡ |
ಜಯತು ಜಯ ಸುರಸೇವ್ಯ | ಜಯತು ಮಹಭವ್ಯ ||ಪ||

ತ್ರಿಜಗಜನಸಂರಕ್ಷ | ತ್ರಿಜಗಾಧಿಪನ ಪಕ್ಷ |
ಅಜಮುಖ್ಯ ಸುರವಿನುತ | ಭಜಿತ ಸುಪ್ರೀತ ||2||

ಕಮಲಬಾಂಧವ ದೇವ | ಕಮನೀಯ ಕರಭಾವ |
ಕುಮುದಸಖಸುಪ್ರೀಯ | ವಿಮಲತರ ಕಾಯ ||3||

ಮೂರು ಮೂರ್ತಿಸ್ವರೂಪ | ಕಾರುಣ್ಯಗುಣದೀಪ |
ಭೂರಿನಿಗಮ ವಿನೋದ | ಸೂರಿನುತಪಾದ ||4||

**ಮಾಲಿನೀ ವೃತ್ತಂ**

ಸರಸಿಜದಳನೇತ್ರಂ ಚಾರುವಕ್ತ್ರಂ ಪವಿತ್ರಂ |
ಸುರಜನಪರಿಪಾಲಂ ಕಾಲಕಾಲಂ ವಿಶಾಲಂ |
ಸುರಮುನಿಜನವಂದ್ಯಂ ಸತ್ಯಸಂಧಂ ಮುಕುಂದಂ |
ಸುರಚಿರತನುಭಾಸಂ ರಾಘವೇಶಂ ಮಹೇಶಂ ||5||

**ರಾಗ ಘಂಟಾರವ ಆದಿತಾಳ**

ಗರುಡಗಮನ ನಿನ್ನ ಚರಣಕೊಂದಿ಼ ಮುನ್ನ | ಶ್ರೀಮುಕುಂದ | ತವ |
ಶರಣರ ಸಲಹುವ ಬಿರುದ ತೋರಿಸೊ ದೇವ | ಶ್ರೀಮುಕುಂದ ||6||

ಪಂಕಚೋದ್ಭವ ತಾತ ಕಿಂಕರಜನಪ್ರೀತ | ರಕ್ಷಿಸೆನ್ನ | ಅಕ |
ಳಂಕ ಮಹಿಮ ಖಳಬಿಂಕಮರ್ದನಶೀಲ | ರಕ್ಷಿಸೆನ್ನ ||7||

ಅಜರುದ್ರ ವಂದಿತ ತ್ರಿಜಗರಕ್ಷಕ ತಾತ | ತ್ರಾಹಿ ತ್ರಾಹಿ | ದೇವ |
ಕುಜನ ಕುಠಾರನೆ ಭಜಕರಿಗೊಲಿವನೆ | ತ್ರಾಹಿ ತ್ರಾಹಿ ||8||

ಕ್ಷೀರ ಸಾಗರವಾಸ ಚಾರುಮಂಗಲಭಾಸ | ಪಾಲಿಸೆನ್ನ | ಲಕ್ಷ್ಮೀ |
ನಾರಾಯಣನೆ ದಯದೋರಿ ಶುಭೋದಯ | ಪಾಲಿಸೆನ್ನ ||9||

**ರಾಗ ಸುರಟಿ ಆದಿತಾಳ**

ಪಾಲಿಸು ಗಜವದನ | ಸುಗುಣವಿ | ಶಾಲ ದಯಾಸದನ ||
ಬಾಲೆ ಗಿರಿಜೆಯಳ | ಬಾಲನೆನಿಸಿ ರಿಪು |
ಜಾಲವರಿದ ಜಯ | ಶೀಲನೆ ಎನ್ನ ||ಪ||

ಪಾಶಾಂಕುಶಧರನೆ | ತ್ರೈಜಗ | ದೀಶ ಗಣಾಧಿಪನೆ ||
ದೋಷರಹಿತ ಸುವಿ | ಲಾಸಿಯೆ ನಿನ್ನಡಿ |
ದಾಸನೆಂದು ನೆರೆ | ಪೋಷಿಸೊ ಕರುಣದಿ ||10||

ಅಂಬಾಸುತ ದೇವ | ವಿಶ್ವಕು | ಟುಂಬ ಲಸದ್ಭಾವ ||
ನಂಬಿದ ಭಕ್ತರ | ದಂಬವ ಪೊರೆವ ತ್ರಿ |
ಯಂಬಕಸುತರ | ಕ್ತಾಂಬರಭೂಷಿತ ||11||

ಧರೆಯೊಳು ರಂಜಿಸುವ | ಮದಪುರ | ವರದೊಳು ನೆಲೆಸಿರುವ ||
ಕರುಣದಿ ನಿಜಕಿಂ | ಕರರಿಗೊಲಿದು ಮನ |
ದಿರವನು ಪಾಲಿಸು | ತಿರುವ ವಿನಾಯಕ ||12||

**ರಾಗ ಅಠಾಣ ಆದಿತಾಳ**

ಶಾರದೆ ಪಾಲಿಸು | ನೀರಜ ನಯನೆ |
ಚಾರು ಮಂಗಳೆ ಕಲ | ಕೀರ ಸುಗಾನೆ ||13||

ಮಧುರ ಸುಭಾಷಿಣಿ | ಮದಗಜ ಗಾಮಿನಿ |
ಮಧುಕರಾಳಕ ವೇಣಿ | ಮದಿರಾಕ್ಷಿ ವಾಣಿ ||14||

ಸುರಕುಲನುತಿಪಾತ್ರೆ | ಸರಸಿಜನೇತ್ರೆ |
ಸುರುಚಿರ ಸದ್ವಕ್ತ್ರೆ | ಶರಣ ಸಂಸ್ತೋತ್ರೆ ||15||

ಸುಮನಸವಂದಿತೆ | ಸುಮನಸಭೂಷಿತೆ |
ಸುಮನಸರಾಜಿತೆ | ಸುಮುಖ ವಿಚಿತ್ರೆ ||16||

**ಭಾಮಿನಿ**

ಶಾರದೆಯ ಬಲಗೊಂಡು ಸುಮನಸ ।
ವಾರಕಭಿವಂದಿಸುತ ಶ್ರೀಚರ ।
ಣಾರವಿಂದಕೆ ನಮಿಸಿ ವಾಲ್ಮೀಕ್ಯಾದಿ ಮುನಿವರರ ॥
ಚಾರು ಪದಕೊಂದಿಸುತ ವಾಯುಕು ।
ಮಾರನನು ಕೊಂಡಾಡಿ ನಾಮ ।
ತ್ತಾರು ಮುಖವುಳ್ಳವನ ನರ್ಚಿಸಿ ಕೃತಿಯನೆಸಗುವೆನು ॥17॥

**ರಾಗ ಸೌರಾಷ್ಟ್ರ ತ್ರಿವುಡೆ ತಾಳ**

ಧಾತ್ರಿಜೆಯ ಕುವರರಿಗೆ ವಲ್ಮೀಕ ।
ಪುತ್ರ ವಿವರಿಸುತಿರಲು ರಾಮಚ ।
ರಿತ್ರವನು ಬೆಸಗೊಂಡರಾ ಸುಪ । ವಿತ್ರಗೆರಗಿ ॥18॥

ಆದರಿಸಿ ಪೇಳಿಂದ್ರಜಿತುಮತ ।
ನಾದ ಮೇಲ್ಮಂಡೋದರಿಯು ಸೀ ।
ತಾಧವನ ನೀ ಸೇರಿ ಬದುಕೆನ । ಲಾದಶಾಸ್ಯ ॥19॥

ಯುಕ್ತವೆಂದೂಹಿಸದೆ ಸಮರಾ ।
ಸಕ್ತಿಯಲಿ ವೀರೂಪನಯನನ ।
ಮುಕ್ತಿಯನು ಕಂಡೈದಿ ಖಳಮಂ । ತ್ರೋಕ್ತವಿಧದಿ ॥20॥

ಕೋಟಿಯಜ್ಞವನೆಸಗಲಾರದೆ ।
ಸೂಟಿಲೊದಗುತ ರಾಘವನ ಸರಿ ।
ಸಾಟಿಯಲಿ ಆ ಹವದಿ ಮಿಗೆಬಡಿ । ದಾಟವೆಸಗಿ ॥21॥

ವಿಗ್ರಹದಿ ಮಡಿದಿರುವ ಕಥೆಯನ ।
ನುಗ್ರಹಿಪುದೆನೆ ಮುನಿಪ ಖಳಕುಲ ।
ನಿಗ್ರಹನ ನೆನೆದೆಂದ ಧರ್ಮಪ । ರಿಗ್ರಹರಿಗೆ ॥22॥

**ಭಾಮಿನಿ**

ತರಳ ಕುಶ ಕೇಳಾ ಖಳಾಧಮ ।
ನಿರದೆ ವಿದ್ಯುತ್ಕೇಶಿ ಧನುಜನ ।
ಕರೆದು ಪೇಳಿದ ರಾಘವನ ಕೊಲಲೆಂದು ತಂತ್ರದಲಿ ॥

ದುರುಳನಾಕ್ಷಣ ಮಿಂಚು ಬುಳುವಿನ ।
ತೆರದಿ ಬರುತಿರೆ ಕಂಡು ಮಾರುತಿ ।
ವರಸಿದನು ಖಳನಸುವ ರಾಘವರಾಯನಿದಿರಿನಲಿ ॥23॥

**ಕಂದ**

ಕಾಣುತ ರಾಘವ ಮುಖ್ಯ ।
ಪ್ರಾಣನ ಕೈಯನು ಪಿಡಿಯುತಲತಿ ಮುದದಿಂದಂ ॥
ಭಾನುಜನೊಳು ಪೇಳಿದ ಸು ।
ತ್ರಾಣನು ಬಹುಪರಿ ಬಳಲಿದ ಕಪಿಭಟನೆನುತಂ ॥24॥

**ರಾಗ ಮಧುಮಾಧವಿ ಏಕತಾಳ**

ವೀರವಾನರರೆಲ್ಲ ಕೇಳಿ ।
ತೋರಿತೆಲ್ಲರಿಗೆ ಸಂತೋಷವಿಂದಿನಲಿ ॥ ವೀರ ॥ಪ॥

ಈಶಪಿತಾಮಹ । ವಾಸವಾದಿಗಳ ಸಂ ।
ತೋಷದಿ ಭಜಿಸಿ ತಮ್ಮಿಷ್ಟಾರ್ಥವ ॥
ಲೇಸಾಗಿ ಪಡೆದು ಮ । ತ್ತವರ ಕಂಡೆಡೆಯೊಳು ।
ಘಾಸಿ ಮಾಡುವ ರಿಂಥಾ ಹೇಸಿನ ಖಳರಲ್ಲ ॥25॥

ಎಲ್ಲಿ ನೋಡಿದರೂ ದಾ । ನವರಟ್ಟ ಹಾಸವು ।
ಸೊಲ್ಲು ಸೊಲ್ಲಿಗೆ ಮಾಯಾತಂತ್ರಗಳು ॥
ಮಲ್ಲ ಮಾರಣ ಮಂತ್ರಾ । ದಿಗಳಿಂದಲೀಜಗ ।
ಭುಲ್ಲವಿಸಿದರು ಈ ಖುಲ್ಲ ದಾನವರೆಲ್ಲ ॥26॥

ಮಾಯಾವಿಗಳು ಆ । ನ್ಯಾಯವೆಸಗಿ ಜನ ।
ಕಾಯಾಸಕೊಡುವುದು ನ್ಯಾಯವೇನೋ ॥
ಹೇಯವಿಲ್ಲದ ದೈತ್ಯ । ನ್ಯಾಯಿಗಳಿವದಿರ ।
ಕಾಯ ಖಂಡನ ಸುಖೋಪಾಯ ಸಜ್ಜನರಿಗೆ ॥27॥

ಕುಣಪ ಭಕ್ಷಕರೊಳು । ಸೆಣೆಸಾಟದಿಂ ನೀವು ।
ದಣಿದಿರಕಟ ಸದ್ಗುಣಯುತರು ॥
ಬಣಗು ರಕ್ಕಸಕುಲ ಹೆಣಗಿ ಸಾವುದು ಕೆಲ ।
ದಿನಕೆಂದು ಪೇಳ್ದ ಶ್ರೀಮನುಮಥ ಜನಕ ॥28॥

ಇಂದು ನಿವೆಲ್ಲರಾ । ನಂದದಿ ವಿಶ್ರಾಂತಿ ।
ಹೊಂದಿ ಸುಖದೊಳಿರಿ ಎಂದು ಪೇಳಿ ॥
ಚಂದದಿ ವಾನರ । ವಂದ ಸಂತಯಿಸುತ್ತ ।
ಬಂದು ಹೊಕ್ಕನು ತಮ್ಮನೊಂದಿಗೆ ಶಿಬಿರ ॥29॥

**ಭಾಮಿನಿ**

ಎಂದು ಸಂತಸದಿಂದ ದಶರಥ ।
ಕಂದನೆಂದುದ ಕೇಳಿ ಕಪಿಗಳು ।
ಚಂದದಿಂ ನಡೆತಂದು ಶಿಬಿರವ ಸೇರುತಿರಲಿತ್ತ ॥
ಮುಂದೆ ರವಿ ತಾ ಪಶ್ಚಿಮಾಂಬುಧಿ ।
ಮಂದಿರಕೆ ತೆರಳಲೆ ರಾತ್ರಿಯೊಳ್ ।
ಮಂದಮತಿ ದಶಕಂಠ ನೈತಂದಿತ್ತ ನೋಲಗವ ॥30॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಓಲಗದೊಳಿರುತಿರಲು ರಾವಣ ।
ನಾಳುಗಳು ಪದಕೆರಗಿ ನಡುಗುತ ।
ಕಾಳಗದ ಪರಿಗಳನು ಪೇಳ್ದರು । ಖೂಳನೊಡನೆ ॥31॥

**ರಾಗ ಕಾಂಭೋಜಿ ಝಂಪೆತಾಳ**

ಚಿತ್ತವಿಸು ಖಳಕುಲೋತ್ತಮ ಸಾರ್ವಭೌಮ ರಣ ।
ವತ್ತಾಂತಗಳನು ಶೀಘ್ರದಲಿ ॥
ಪಥ್ವಿ ಬಾಯ್ ಬಿಡುವ ತೆರದೊಳು ನಮ್ಮ ಮೂಲಬಲ ।
ಬಿತ್ತರಿಸಿತೆಲ್ಲ ದೆಸೆಗಳಲಿ ॥32॥

ಆರು ಸರಿ ಕಲಿಸುಪಾರ್ಶ್ವಕನ ಕರ್ಕಶತನಕೆ ।
ವೀರವಾನರರೆಲ್ಲ ಜುಣುಗಿ ॥
ಸಾರುತಿರಲತ್ಯಧಿಕ ರೋಷದಿಂ ರಘುರಾಮ ।
ಭೋರನಯ್ತಂದು ಧುರಕೊದಗಿ ॥33॥

ಗುಣಕೆ ಮತ್ಸರವುಂಟೆ ದನುಜ ಕೇಳಾರಾಮ ।
ಘನಶರಾಸನದ ವಿದ್ಯೆಯಲಿ ॥
ಮನುಮಥಾರಿಯ ಬಗೆವನಲ್ಲ ಮಿಕ್ಕಿನ ದನುಜ ।
ಬಣಗುಗಳು ಪಾಡೆ ಸಮರದಲಿ ॥34॥

ಅಮಿತ ರಾಕ್ಷಸ ಬಲವನೆಲ್ಲ ತರಿದೊಟ್ಟಿದನು ।
ನಿಮಿಷಾರ್ಧದೊಳಗೆ ಧುರವೆಸಗಿ ॥
ಸುಮನಸರು ಬೆಗಾಗಲಾ ಸುಪಾರ್ಶ್ವಕ ಭರದಿ ।
ಗಮಿಸಿದನು ಮುಕುತಿಪದಕಾಗಿ ॥35॥

ಗೂಢ ಬ್ರಹ್ಮನೊಳು ಹಗೆಮಾಡಿ ಕೆಡದಿರು ಬರಿದೆ ।
ಬೇಡು ಸುಖ ಭೋಗವಾತನಲಿ ॥

ನಾಡಮಾತಲ್ಲ ದಯಮಾಡು ರಾಮನ ಪದಕೆ ।
ನೀಡು ದಶಶಿರವ ಭಕ್ತಿಯಲಿ ॥36॥

ಇಂತೆಂದ ಚರರ ಬೀಳ್ಕೊಟ್ಟು ದುಮ್ಮಾನದಲಿ ।
ಚಿಂತಿಸುತಲಾದಶಾನನನು ॥
ಅಂತರಂಗದಿ ಬಳಲಿ ಮಯಜಾತೆಗಹಕೈದಿ ।
ಇಂತು ಶೋಕಿಸುತಿರ್ದನವನು ॥37॥

**ರಾಗ ಆನಂದ ಭೈರವಿ ರೂಪಕತಾಳ**

ಹರನೇ ಶಂಕರ ಪಾರ್ವತಿ । ವರನೇ ಮುಂದೇಂ ಗೈಯ್ಯಲಿ ।
ಧುರದೊಳುರಕ್ಕಸ ಸೇನೆಯು । ಬರಿದಾಯಿತೆ ಶಿವನೆ ॥ಪ॥

ತುಂಗಬಲಾನ್ವಿತ ಸಚಿವರೆ । ನ್ನಂಘವಣೆಯ ಭಟರೆಲ್ಲರು ।
ಸಂಗರದೊಳು ಮಡಿದರು ಬರಿ । ಮಂಗಗಳೊಳು ಕಾದಿ ॥
ತಂಗಿಯ ಸವಿಮಾತಿಗೆ ನಾ । ಹಂಗಿಗ ನಾದುದರಿಂದಲೆ ।
ಹಿಂಗಿತು ದಾನವರಾರ್ಭಟೆ । ಭಂಗ ಪಡುವದಾಯ್ತೆ ॥38॥

ಮತಿಯುತರಾಡಿದ ನುಡಿಗಳ । ಪತಿಕರಿಸದೆ ಬೆದರಿಸಿದೆನು ।
ಗತಿಯಿನ್ನೇಂ ಮುಂದಕೆ ಪಶು । ಪತಿನೀ ತೋರೆನಗೇ ॥
ಶತಯಾಗಾಂತಕ ಮುಖ್ಯರ । ಮಥಿಸಿದ ಲಕ್ಷ್ಮಣನೇವೆನು ।
ಪ್ರತಿಭಟ ಕುಂಭಶ್ರವಣನ । ಗತಿಗೆಡಿಸಿದ ರಾಮ ॥39॥

ರಣಕರ್ಕಶನಾ ಮೈರಾ । ವಣನನು ಕಪಿಗಳು ಗೆಲ್ಲಲು ।
ಎಣಿಕೆಯೆ ನಾನವರಿಗೆ ಮುಂ । ದಣ ಬಗೆಯೇನಕಟಾ ॥
ಜುಣುಗಿದೆನಾದರೆ ಮುಂದಕೆ । ಘನವಾದಪವಾದವು ಎನ ।
ಗಣನೆಯೆ ಸುರಭಟರೆಲ್ಲರು । ಮಣಿವರೆ ಹಾ ವಿಧಿಯೆ ॥40॥

**ವಾರ್ಧಕ**

ಮರುಗಿದಂ ಅಳಲುತತಿಶಯದಿ ಶೋಕಾತುರದೊ ।
ಳೊರಗಿದಂ ಹಲವಂಗಮಂ ಗ್ರಹಿಸಿ ಮನದೊಳಗೆ ।
ಕರಗಿದಂ ಮಂತ್ರಿಮಾರ್ಬಲದೇಳ್ಗೆಯಂ ನೆನೆಯ ನಿಟ್ಟುಸಿರು ಬಿಡುತ ಖಳನು ॥
ಕೊರಗಿದಂ ಪುತ್ರ ಮಿತ್ರ ಸ್ನೇಹಭಾವದೊಳ್ ।
ತಿರುಗಿದಂ ಮಂದಿರದೊಳಳಲು ತೊಯ್ಯನೆ ಮಂಚ ।
ಕೊರಗಿದಂ ಹಾ ಯೆನುತ ಹಮ್ಮೈಯಿಸಿ ದಶಕಂಠನಧಿಕ ಸಂತಾಪದೊಡನೆ ॥41॥

**ರಾಗ ಕೇದಾರಗೌಳ ಅಷ್ಟತಾಳ**

ದುರುಳ ನೀ ತೆರದೊಳು ತರಹರಗೊಳುತಿರ್ಪ ।
ಪರಿಯ ತಾನರಿತು ಬೇಗ ॥
ತರುಣಿ ಮಂಡೋದರಿ ಕರ ಕರಿಸುತ ತನ್ನ ।
ವರನೆಡೆಗೈದಳಾಗ ॥42॥

ಮೌನದಿ ಶೋಕವನನುಕರಿಸುತಲಿರ್ಪ ।
ದಾನವೇಶ್ವರನಿಗಂದು ॥
ಸಾನುರಾಗದಲಿ ಪೇಳಿದಳು ಕೈಮುಗಿದಂಬು ।
ಜಾನನೆ ಮನದಿ ನೊಂದು ॥43॥

**ರಾಗ ನೀಲಾಂಬರಿ ಏಕತಾಳ**

ಚಿಂತಿಸುವದ್ಯಾತಕಿಂತು । ಪ್ರಾಣಕಾಂತ । ಬಲ ।
ವಂತ ನಿನಗಾದುದೇನು । ಪ್ರಾಣಕಾಂತ ॥
ಪಂಥವಳಿದು ಪೋದುದೇನೊ । ಪ್ರಾಣಕಾಂತ । ಸೀತಾ ।
ಕಾಂತನು ತಾನೇನ ಗೆಯ್ದು । ಪ್ರಾಣಕಾಂತ ॥44॥

ಹಿರಿಯರೆಂದ ಮಾತ ಮೀರಿ । ಪ್ರಾಣಕಾಂತ । ಬಲು ।
ಗರುವದಿಂದ ಮೆರೆದೆಯಲ್ಲೊ । ಪ್ರಾಣಕಾಂತ ॥
ಮರುಗಲ್ಯಾಕೊ ಬರಿದೆ ನೀನು । ಪ್ರಾಣಕಾಂತ । ಲಕ್ಷ್ಮೀ ।
ವರನ ಪಾದಕೆರಗು ಬೇಗ । ಪ್ರಾಣಕಾಂತ ॥45॥

**ರಾಗ ಕೇದಾರಗೌಳ ಝಂಪೆತಾಳ**

ತರುಣಿಯಳ್ ಮಾತ ಕೇಳಿ । ರಾವಣನು ।
ಭರದಿ ಧೈರ್ಯವನು ತಾಳಿ ॥
ಬರಿಯ ಚಿಂತೆಗಳ ಬಿಟ್ಟು । ಪೇಳಿದನು ।
ಸರಸದಿಂ ತನ್ನ ಗುಟ್ಟು ॥46॥

ಚತುರಂಗ ಸೇನೆಗಾಗಿ । ಮರುಗುವಭಿ ।
ಮತವಲ್ಲ ಕೇಳದಾಗಿ ।
ಸುತನಿಂದ್ರಜಿತುವಕೊಂದು । ಕಳೆದುದಕೆ ।
ವ್ಯಥೆಪಡುವೆ ಮನದೊಳಿಂದು ॥47॥

ಘೋರತರದಸ್ತ್ರಚಯವು । ಮೂಲಬಲ ।
ವೀ ರಕ್ಕಸರ ಸೇನೆಯು ॥
ಈ ರೀತಿಯಿರುತಿರಲಿಕೆ । ಬೆದರುವೆನೆ ।
ಭೂರಿ ವಾನರ ಸೈನ್ಯಕೆ ॥48॥

ರಾಮಲಕ್ಷ್ಮಣರ ಸಹಿತ । ಕಪಿಭಟ ।
ಸ್ತೋಮವನು ಗೆಲಿದುಮತ್ತಾ ॥
ಹೋಮ ಮುಖದಿಂ ಧನುಜರ । ನೆಬ್ಬಿಸುವೆ ।
ಕಾಮಿನಿಯೆ ಕೇಳು ವಿವರ ॥49॥

**ರಾಗ ಸಾವೇರಿ ಆದಿತಾಳ**

ಪತಿಯೆ ನೀನೆಂದ ಮಾತು । ಕೇಳಲು ಮನ ।
ಕೃತಿಶಯ ಮರುಕವಾಯ್ತು ॥
ಖತಿಯುತನಾಗಬೇಡ । ನಾನೆಂಬುದ ।
ಜತನದಿ ತಿಳಿದು ನೋಡಾ ॥50॥

ದೋಷಿ ನಿನ್ನಯ ಭಗಿನಿ । ರಕ್ಕಸ ಕುಲ ।
ಘಾಸಿ ಗೈಯ್ದಳೆ ತರುಣಿ ॥
ಏಸು ಕೀರ್ತಿಗಳು ಬಂತು । ಲೋಕದಿ ನಿನ ।
ಗಾ ಸೀತೆಗಾಗಿ ನಿಂತು ॥51॥

ಆದಿ ಕಾರಣ ಮೂರ್ತಿಯು । ಸರ್ವಾತ್ಮಕ ।
ನಾದಿಮಾಯಾ ವಿನೋದಿಯು ॥
ಮೇದಿನಿಯೊಳು ದುರುಳ । ನಿಗ್ರಹಕೆಂದು ।
ಮೋದದಿ ಜನಿಸಿರುವ ॥52॥

**ಭಾಮಿನಿ**

ಪೇಳಲೆಮ್ಮನು ನಿನಗೆ ನೀತಿಯ ।
ಪೇಳಿದರೆ ನೀ ಕೇಳುವೆಯ ಮು ।
ಟ್ಠಾಳತನದಲಿ ನಡೆವ ನಿನಗಿದು ತಿಳಿದಿಹರೆ ಮುಂದೆ ॥
ಹಾಳು ಮಾಡದೆ ಕರ್ಬುರಾನ್ವಯ ।
ದೇಳಿಗೆಗೆ ನೀನೊಂದು ಮಾತನು ।
ಕೇಳು ಬಿಡು ಸೀತೆಯನು ಕೊಡಿಸಾ ದಾಶರಥಿಗಿನ್ನು ॥53॥

**ರಾಗ ನೀಲಾಂಬರಿ ಝಂಪೆತಾಳ**

ಇನ್ನು ಬಿಡು ಬಿಡು ಛಲವನೆನ್ನ । ನುಡಿಯೊಂದ ।
ಮನ್ನಿಸಾ ರಾಘವನ ಪದಕೆರಗು ಮುನ್ನ ॥ಪ॥

ರಕ್ಷಿಸುವನಾ ರಾಮಚಂದ್ರ । ನಿಮಗಿನ್ನು ।
ಪೇಕ್ಷಿಸನು ಸಹಜ ವಿಭೀಷಣ ಸುಗುಣ ಸಾಂದ್ರ ॥

ಈ ಕ್ಷಣದೊಳವನಿಜೆಯ ಕೊಟ್ಟು । ಮನ್ನಿಸೆನೆ ।
ಈಕ್ಷಿಸುವನಾ ಕರುಣಿ ನಿಜ ದಯವನಿಟ್ಟು ॥54॥

ಸಾಕೋರ್ವ ಮಗ ವಿರೂಪಾಕ್ಷ । ಇವನಿಂದ ।
ಬೇಕಾದ ಸುಖದೊಳಿರಬಹುದು ಸುರಶಿಕ್ಷ ॥
ಆ ಕುಲ ಕುಠಾರಳಿಂದೇನು । ಸುಖಬಂತು ।
ಲೋಕದೊಳು ಹಿಂದಿನಂತಿರಲು ಕುಂದೇನು ॥55॥

ನಾರಾಯಣನು ಕಾಣೋ ರಾಮಾ । ನಾರಿಯಳು ।
ಧಾರಿಣೀಸುತೆ ಲಕ್ಷ್ಮಿ ಕೇಳು ನಿಸ್ಸೀಮ ॥
ಚಾರು ಮಹಶೇಷ ಲಕ್ಷ್ಮಣನು । ಮೀಕ್ಕಿರುವ ।
ವೀರ ಕಪಿಗಳು ದೇವತಾಂಶ ಕೇಳಿನ್ನು ॥56॥

**ಭಾಮಿನಿ**

ತ್ಯಜಿಸು ಕಡು ಮೂರ್ಖತೆಯ ನೀನಾ ।
ಭಜಕಕುಲ ದೈವದೊಳು ಹಗೆಯನು ।
ಭಜಿಸದಿರು ಸುಖವಂತನಾಗಿಯೆ ಪಾಲಿಸೆಮ್ಮವರ ॥
ಅಜಪಿತನ ಕರುಣದೊಳು ಬಾಳ್ವುದು ।
ತ್ರಿಜಗದೊಳಗತಿ ಮಾನ್ಯವದುವೇ ।
ಸುಜನ ಮಾರ್ಗವು ಕೇಳೆನಲು ಖತಿಗೊಳುತಲಿಂತೆಂದ ॥57॥

**ರಾಗ ಭೈರವಿ ಏಕತಾಳ**

ತರುಣಿ ಮಣಿಯೆ ಕೇಳೆ ಎನ್ನ ।
ಧುರಕೆ ನಿಲುವರಾರೆ ಮುನ್ನ ।
ಸುರ ನರೋರಗಾದಿ ಮುಖ್ಯ । ಧರಣಿಪಾಲರು ॥58॥

ಸುರರ ಸತಿಯರುಗಳು ನಮ್ಮ ।
ಪರಿಜಾರಿಕೆಗಿರಲು ಬೊಮ್ಮ ।
ಶರುವ ಮುಖ್ಯರೊಲುಮೆಯಿರಲು । ಅರಿಗಳೇವರು ॥59॥

ಅರಿಗಳಿಲ್ಲವೆಂದು ತಿಳಿದು ।
ಪರರ ಲಲನೆಯನ್ನು ತಂದು ।
ಕುರಿಗಳಂತೆ ಕೊಲಿಸಲೇಕೆ । ತರಳರೆಲ್ಲರ ॥60॥

ಮೂಲಬಲವಿನ್ನುಂಟು ಕೇಳು ।
ಶೂಲಿ ಬ್ರಹ್ಮೇಂದ್ರ ಶಕ್ತಿ ।
ಜಾಲದಿ ವಾನರರ ನರರ । ಕೋಳುಗೊಂಬೆನು ॥61॥

ಲಾಲಿಸಿ ಕೇಳಿನ್ನು ದೈತ್ಯ ।
ಮೂಲಬಲ ಮುಂತಾಗಿ ಸೀತಾ ।
ಲೋಲನಸ್ತ್ರ ತಾಳದೇ ನಿ । ರ್ಮೂಲವಪ್ಪುದು ॥62॥

ಮೂರು ಲೋಕದೊಳಗೆ ಎನ್ನ ।
ವೀರತನಕೆ ಸರಿಯಾರಿನ್ನಾ ।
ಮಾರ ವೈರಿ ಭಜಕನಲ್ಲೆ । ಧಾರಿಣೀಯೊಳೆ ॥63॥

ಪರಸತಿಯರ್ಗಳುಪಿದವನು ।
ಗುರು ಹಿರಿಯರ ಜರೆಯುವವನು ।
ಪರಶಿವನ ಶರಣನೆಂದು । ಧರಣಿ ಹೊರುವಳೇ ॥64॥

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಹರನ ಬಿಲ್ಲನು ಮುರಿದು ಸೀತೆಯ ।
ವರಿಸಿದವನಾರರಿಯಬಾರದೆ ।
ಧುರದಿ ಮಾರೀಚಾದಿ ಮುಖ್ಯರ । ತರಿದ ಪರಿಯ ॥65॥

ಖರ ತ್ರಿಶಿರ ದೂಷಣ ಸುಬಾಹುಗ ।
ಳಿರದೆ ಮಡಿದರು ಖಳವಿರಾಧನ ।
ಪರಿಯನರಿತೀ ತೆರದಿ ಹಗೆತನ । ಧರಿಸಬಹುದೇ ॥66॥

ಸುರರದಲ್ಲಣ ನಿನ್ನ ತೊಟ್ಟಿಲ ।
ಹುರಿಗೆ ಕಟ್ಟಿದ ವಾಲಿಯನು ಸಂ ।
ಹರಿಸಿದವನಲಿ ನಿನ್ನ ವೈರವ । ಮೆರಸಬಹುದೆ ॥67॥

ಸೇತು ಕಟ್ಟಿದರುಂಟೆ ಮೊದಲಲಿ ।
ಈ ತೆರದಿ ಮಂಗಗಳು ಕಾರ್ಯವ ।
ನೋತು ಮಾಡುವದುಂಟೆ ನೀನದ । ನ್ಯಾತಕರಿಯೆ ॥68॥

ಕುಂಬಕರ್ಣನ ಕೊಲುವ ವೀರರು ।
ಕುಂಭಿನಿಯೊಳಿಹರೇ ನಿಧಾನಿಸು ।
ಜಂಭವೈರಿ ವಿರೋಧಿಯಸುವನು । ಕೊಂಬರಿಹರೇ ॥69॥

ಅಂಬುಜಾಸನಪಿತನು ದುಷ್ಟಕ ।
ದಂಬವನು ಕೊಲಲೆಂದು ಮಾನುಷ ।
ಡಿಂಬದೊಳಗಿಳೆ ಗಿಳಿದ ತಿಳಿಯೆನ । ಲಂಬುಜಾಕ್ಷಿ ॥70॥

**ಭಾಮಿನಿ**

ಹರ ಪಿತಾಮಹ ಸುರಪ ಮುಖ್ಯರ ।
ಧುರಕೆ ಮಣಿದವನಲ್ಲ ದಶಶಿರ ।
ಧರೆಯ ಹುಲು ನರಮನುಜನಿಗೆ ಶರಣೆನಲು ಬಳಿಕಿನ್ನು ॥
ಧುರ ಪರಾಕ್ರಮಿ ಯೆಂತಹೆನು ಕೇಳ್ ।
ತರುಣಿ ಲಾಲಿಸೆನಲ್ಕೆ ದುಃಖದಿ ।
ಮರುಗಿ ಬಿಗಿಯಪ್ಪುತಲಿ ದಶಮುಖಗೆಂದಳಾಕಾಂತೆ ॥71॥

**ರಾಗ ಸಾಂಗತ್ಯ ರೂಪಕತಾಳ**

ಜಲದೊಳಗಡಗಿರ್ದ ಪಿಂತೆ ಅದಿಯೋಳಿತ ।
ಖಳ ಶಿರೋಮಣಿ ತಮಾಸುರನ ॥
ಗೆಲಿದುದಲ್ಲದೆ ಕೂರ್ಮನಾಗಿ ಮಂದರವೆತ್ತಿ ।
ಒಲಿದಮರರಿಗಿತ್ತ ಸುಧೆಯ ॥72॥

ಕಲಿಹಿರಣ್ಯಾಕ್ಷ ಮತ್ತವನಗ್ರಜನ ಕೊಂದು ।
ಬಲಿಯ ಬಂದಿಸಿ ಪಾರ್ಥಿವರನು ॥
ತಲೆಗಡಿದಿವ ತನ್ನ ನಂಬಿರುವರನೆಲ್ಲ ।
ನೊಲಿದು ಪಾಲಿಪ ಲಕ್ಷ್ಮೀರಮಣ ॥73॥

ಶರಣಾದ ಧ್ರುವನಿಗೆ ಸ್ಥಿರಪದವಿಯನಿತ್ತ
ಭರದಿ ಗಜೇಂದ್ರನ ಪೊರೆದ ॥
ಕರುಣಿಸಿದನು ನಮ್ಮ ಲಂಕಾಧಿಪತ್ಯವ ।
ಶರಣು ಹೊಕ್ಕರೆ ವಿಭೀಷಣಗೆ ॥74॥

ಅಖಿಳಾಂಡ ಕೋಟಿ ಬ್ರಹ್ಮಾಂಡನಾಯಕನೀತ ।
ಮುಕುತಿದಾಯಕ ಸದ್ವಿಲಾಸ ।
ಅಕಳಂಕ ಸಚ್ಚಿದಾನಂದೈಕರೂಪನು ।
ಸಕಲ ಲೋಕೇಶ ಮಹೇಶ ॥75॥

ಸೃಷ್ಟಿಗೊಡೆಯನಾತ ದುಷ್ಟದಾನವರನ್ನು ।
ಕುಟ್ಟಿ ಕೊಲ್ಲಲು ಜನಿಸಿಹನು ॥

ಮುಟ್ಟಿ ವಂದಿಪರಿಗಿಷ್ಟಾರ್ಥವೀವನು ದಿಟ |
ಪಟ್ಟಾಭಿರಾಮಚಂದಿರನು ||76||

**ಭಾಮಿನಿ**

ಅಳಲಿದಳು ಬೇಡಕಟ ರಾಮನೊ |
ಳಳವಿಗಿದಿರಾಗದಿರೆನುತ ಬಲು |
ಬಳಲಿ ಬೆಂಡಾಗುತ್ತ ಬೇಡಲು ಚರಣದಲಿಬಿದ್ದು ||
ಬಳಿಕ ಖಳ ತಿಳಿದನು ಪತಿವ್ರತೆ |
ಲಲನೆಯಿವಳೆಂದೆನುತ ಮನದಲಿ |
ಒಲಿದು ಮಾತಾಡಿಸಿದ ರಾವಣನಧಿಕ ವಿನಯದಲಿ ||77||

**ರಾಗ ಶಂಕರಾಭರಣ ಅಷ್ಟತಾಳ**

ಲಾಲಿಸು | ಮಯತನುಜೆ ಮಚ್ಚರಿತವ | ಲಾಲಿಸು ||ಪ||

ಕ್ಷೀರಾಬ್ಧಿ ಶಯನನೊಲಗದಿ | ನಾವು |
ದ್ವಾರಪಾಲಕರಾಗಿ ಮುದದೀ | ಇರೆ |
ಮಾರಮಣನ ಕಾಂಬುತ್ಸಹದಿ | ಮುನಿ ||
ಚಾರು ಸನಕ ಸನಂದನ ರೈತರೆ ಮದ |
ವೇರಿ ಧಿಕ್ಕಾರದೊಳಡ್ಡಗಟ್ಟಿದೆವೆಂದು || ಲಾಲಿಸು ||78||

ಘೋರ ರಾಕ್ಷಸರಾಗಿರೆನುತ | ರೋಷ |
ವೇರಿ ಶಪಿಸಲಾಗಿ ಇನಿತ | ನಾವು |
ದೂರಲಸುರ ವೈರಿನಗುತ | ನೀವು ||
ಮೂರು ಜನ್ಮದಿ ವೈರದೋರಿ ಮತ್ತೆನ್ನೊಳು |
ಹೋರಾಡಿ ಬನ್ನಿರೆಂದೆನುತಾಜ್ಞೆಗೈದಿಹ || ಲಾಲಿಸು ||79||

ಜಯನೆಂದು ಎನ್ನಭಿದಾನ | ಕೇಳ್ ವಿ |
ಜಯ ಕುಂಭಕರ್ಣ ಸೋದರನ | ದೇಹ |
ದ್ವಯ ಎಂದು ಕೇಳ್ ಮಧ್ಯಜನನ | ಹಿಂದೆ |
ಮಯಜೆ ಕೇಳಾ ಹಿರಣ್ಯಕ ಹಿರಣ್ಯಾಕ್ಷರಾ |
ಗಿಯೆ ಜನಿಸಿದೆನು ಮೊದಲ ಜನ್ಮವದು ಬಾಲೆ || ಲಾಲಿಸು ||80||

ಇನ್ನೊಂದು ಸಲ ದೇಹ ಧರಿಸಿ | ವೈರ |
ಪನ್ನಗಶಯನನೊಳಿರಿಸಿ | ಯುದ್ಧ |
ವನ್ನೆಸಗಲು ರೌದ್ರವೆರಸಿ | ಅಗ |

ಉನ್ನತ ಪದವಿಯ ನೈದಿ ಸಂತಸದೊಳು|
ಮುನ್ನಿನಂತಿಹೆವು ಕೇಳ್ ಪನ್ನಗನಿಭವೇಣಿ || ಲಾಲಿಸು ||81||

**ಭಾಮಿನಿ**

ಆಡಿ ತಪ್ಪಲು ಬಹುದೆ ಮಾತನು |
ಓಡಿ ಸಿಕ್ಕಲುಬಹುದೆ ಶಪಥದಿ |
ಕೂಡಿ ಕಾಡಲು ಬಹುದೆ ಲೋಕದೊಳಿನ್ನು ಕೇಳ್ ತರಳೆ ||
ಮಾಡಿ ಕೀಳಲು ಬಹುದೆ ಕಾರ್ಯವ |
ನಾಡ ಮಾತಲ್ಲಬಲೆ ಚಿಂತಿಸ |
ಬೇಡೆನುತ ಸಂತಯಿಸಿದನು ಮಂಡೋದರಿಯ ವ್ಯಥೆಯ ||82||

**ರಾಗ ಸಾರಂಗ ಅಷ್ಟತಾಳ**

ಸತಿಯ ಸಂತಯಿಸಿ ದಾನವನು | ಬಲು |
ಹಿತದಿಂದ ನಿದ್ರಗೆಯ್ದವನು |
ಅತುಳ ಬಲಾನ್ವಿತನೆದ್ದುದಯದಿ ಮಿಂದು |
ಅತಿಮುದದಿ ಪೂಜೆಯನು ವರ ಪಶು |
ಪತಿಗೆ ವಿರಚಿಸುತೆಂದನು || ಸತಿಯ ||83||

ಹರನೆ ಶಂಕರ ವಿಶ್ವಂಭರನೆ | ಗೌರೀ |
ವರನೆ ಶ್ರೀಕರ ಮಹೇಶ್ವರನೆ ||
ದುರಿತ ವಿದೂರನೆ ತ್ರಿಜಗ ಸಂರಕ್ಷಕನೆ |
ಶರಣರಕ್ಷಕನೆಂಬ ಬಿರುದನು |
ಭರದಿ ತೋರಿಸೆನುತ್ತಲಿ || ಸತಿಯ ||84||

ಕರಗಳಿಪ್ಪತ್ತ ಜೋಡಿಸಿದ | ಜಯ |
ಧುರದಿ ಕೊಡಿಸು ಎಂದೆರಗಿದ ||
ಹರುಷದೊಳಾಕ್ಷಣ ದಶಶಿರವಂಘ್ರಿಯೊ |
ಳಿರಿಸಿ ತನ್ನಿಷ್ಟವನು ಬೇಡಿದ |
ಧುರ ಪರಾಕ್ರಮಿ ದೈನ್ಯದಿ || ಸತಿಯ ||85||

ಧರೆಯೊಳೊಂದಿಸುತ ಶಂಕರನ | ತಾನು |
ಧರಿಸಿದ ಮಾಲ್ಯಾದಿ ವಸನ |
ಶಿರದೊಳ್ ಕಿರೀಟಗಳಿರಿಸುತ್ತ ಮೋದದಿ |
ಸರಸದಿಂ ಸಭೆಗೈದಿಯೋಲಗ |
ವಿರಚಿಸಿದನುತ್ಸಹದಲಿ ||86||

**ವಾರ್ಧಕ**

ತರಸಿದಂ ದಿಕ್ಪಾಲರಿತ್ತ ಕಪ್ಪಗಳೆಲ್ಲ ।
ಹೊರಿಸಿದಂ ಭಂಡಾರದಿಂದಖಿಳ ನಾಣ್ಯಗಳ ।
ಬರಿಸಿದಂ ದ್ವಿಜರ ಸಂಕುಲಗಳಂ ದಾನಗಳನಿತ್ತನೇನದ್ಭುತವದು ॥
ಭರದಿ ಕಾರಾಗಹದೊಳಿರುವರಂ ತೆಗೆಸಿದಂ ।
ತರತರದ ಸುಂಕಗಳ ಹರಿಸಿದಂ ಸಂತಸದಿ ।
ವಿರಚಿಸಿದ ಭೂರಿ ವೈಭವವ ಪುರದಿಹಜನಕೆ ಭಾರಿ ಧನವಿತ್ತನಾಗ ॥87॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ದಾನವನು ಸಂತೋಷದಿಂದಲಿ ।
ದಾನಧರ್್ಾದಿಗಳ ನಡೆಸಿ ನಿ ।
ಧಾನದಿಂ ಪ್ರಜೆಗಳಿಗುಸಿರ್ದವಿ । ಧಾನಗಳನು ॥88॥

ವರ ವಿಭೀಷಣ ನಿಮಗೆ ತಾನಿ ।
ನ್ನರಸನಾಗುವ ಸರ್ವಹಿತದೊಳು ।
ನೆರೆದು ಕಪ್ಪವ ಕೊಡುವದೆಂದನು । ಹರುಷದಿಂದ ॥89॥

ಸರಸದಿಂ ಸಂತಯಿಸುತವರನು ।
ತರಿಸಿದನು ಮಣಿಮಯದ ರಥವನು ।
ಭರದೊಳೇರಿದನಾ ದುಶಾಸ್ಯನು । ಧುರವನೆಸಗೆ ॥90॥

ಅನಿತರೊಳಗಷ್ಟಾದಶಾಕ್ಷೌ ।
ಹಿಣಿಯ ಬಲವೈತಂದು ಕೂಡಲು ।
ವನಿತೆಯರ ಸೇಸೆಯನು ಕೊಂಡಾ । ದನುಜನಾಗ ॥91॥

ಭರದೊಳಾ ದಿಗುತಟವ ಭೇದಿಪ ।
ತೆರದೊಳೈತರುತಿರಲು ದಾನವ ।
ರಿರದೆ ಭೋರ್ಗುಡಿಸುತಿರೆ ಕಹಳೆಗ । ಳೊರೆದವಂದು ॥92॥

**ವಾರ್ಧಕ**

ಕೆಲಸಾರು ಪುಣ್ಯಜನಕುಲಮೌಳಿ ಬರುತಲಿದೆ ।
ಕೆಲಸಾರು ಶಂಕರಾರ್ಚಿತ ಬಿಂಬ ಬರುತಲಿದೆ ।
ಕೆಲಸಾರು ಪ್ರಮುಖ ನಿರ್ಜರ ವೈರಿ ಬರುತಲಿದೆ ಯೆನುತಟ್ಟಹಾಸದಿಂದ ॥
ಕೆಲಸಾರು ವೈರಿಮದಗಜಸಿಂಹ ಬರುತಲಿದೆ ।

ಕೆಲಸಾರು ಸಾಮ್ರಾಜ್ಯಪದಮೂರ್ತಿ ಬರುತಲಿದೆ ।
ಕೆಲಸಾರು ಮೂಲೋಕ ದಲ್ಲಣನು ಬರುತನಿದೆಯೆನುತ ಕಹಳೆಗಳುಲಿದವು ॥93॥

**ರಾಗ ಶಂಕರಾಭರಣ ರೂಪಕತಾಳ**

ಕೇಳು ಕುಶನೇ ಧನುಜ ಸೇನೆಯು । ಬರುವ ಪರಿಯ ।
ಕೇಳುಕುಶನೇ ಧನುಜ ಸೇನೆಯು ॥ಪ॥

ವೀರ ದುರುಳೆಲ್ಲರಧಿಕ ।
ಶೂರತನದೊಳಹಿತರುಗಳ ।
ಸೂರೆಗೊಂಬೆವೆನುತ ಮದವ ।
ನೇರಿ ಬರುವ ಸಂಭ್ರಮಗಳ ॥ ಕೇಳು ॥94॥

ಪಾತಕರುಗಳಖಿಳದನುಜ
ಕೋಟಿಗಡಣ ಬರುತಲಂದು ।
ನೋಟಕರಿಗೆ ಭೀತಿಯವರ್ಗ ।
ಳಾಟದಿಂದ ನಟಿಸಿತಾಗ ॥ ಕೇಳು ॥95॥

ಛತ್ರ ಚಾಮರಂಗಳಿಂದ ।
ಚಿತ್ರರಥದ ಗಡಣದಿಂದ ।
ಧಾತ್ರಿ ನಡುಗವಂತೆ ಬರೆ ವಿ ।
ಧಾತ್ರ ಮುಖ್ಯರೆಲ್ಲ ಬೆದರೆ ॥ ಕೇಳು ॥96॥

ಬತ್ತೀಸಾಯುಧಗಳ ತಮ್ಮ ।
ಹಸ್ತದಿಂದ ಪಿಡಿದು ರೋಷ ।
ವೆತ್ತು ಮುತ್ತುತತ್ತ ಕೀಶ ।
ಮೊತ್ತವ ಬೆನ್ನೊತ್ತುತಾಗ ॥ ಕೇಳು ॥97॥

**ಕಂದ**

ಒಕ್ಕಣಿಸಲಿಕಳವಲ್ಲದ ।
ಸೊಕ್ಕಿದದನುಜರ ಸೇನೆಯು ಬರೆ ಕಂಡಾಗಳ್ ।
ರಕ್ಕಸವೈರಿಯು ಕೇಳಿದ ।
ಅಕ್ಕರದಿಂದಲಿ ಶರಣನೊಳೀ ಹದನಗಳು ॥98॥

**ರಾಗ ಬೇಗಡೆ ಅಷ್ಟತಾಳ**

ಶರಣ ವಿಭೀಷಣ ಕೇಳೆನ್ನ ಮಾತ ।
ದುರುಳರೈತಹರವರ್ಯಾರೆಂಬ ವಾರ್ತೆ ॥

ಅರುಹಲು ಬೇಕು ನೀನರಿತುದನೆಲ್ಲ |
ತರಹರಿಪುದು ಕಪಿಸೇನೆ ಸುಳ್ಳಲ್ಲ ||99||

ಸುರರಭ್ರದೊಳಂಜಿದರು ಈ ಅರ್ಭಟೆಗೆ |
ಭರದೊಳೋಡಿದ ರೆಲ್ಲವರು ಕಂಡಕಡೆಗೆ ||
ಪರಮೇಷ್ಠಿ ಇವರ ಪುಟ್ಟಿಸಿದನಿನ್ನ್ಯಾಕೆ |
ಅರುಹಲಸಾಧ್ಯವಾದುದು ತಿಳಿದವರ್ಗೆ ||100||

ಏಸುಭಟರ ಕೂಡಿ ಬರುತಿಹರವರು |
ಪೋಷಿಸಿದವನಿಗೇನಾಗಬೇಕವರು ||
ದಾಸ ನೀನಿದ ಬಲ್ಲೆಯಾದರೆ ಪೇಳು |
ಈಸು ವತ್ತಾಂತವೆಲ್ಲವನು ಇಂದಿನೊಳು ||101||

**ರಾಗ ನವರೋಜು ಏಕತಾಳ**

ಚಿತ್ತವಿಸ್ಯೆ ರಘುರಾಮ | ಪುರು | ಪೋತ್ತಮ ಸದ್ಗುಣ ಧಾಮ ||
ಹತ್ತುಗಳನಸುರ | ಮೊತ್ತದೊಡನೆಮುಂ |
ದೊತ್ತಿ ಬರುವ ಮದ | ವೆತ್ತುತ ರೋಷದಿ ||102||

ಮುಕ್ಕಣ್ಣ ನಂದದಲಿ | ಬಲು | ಸೊಕ್ಕಿರುವ ಹಮ್ಮಿನಲಿ ||
ಒಕ್ಕಣಿಸಲಿಕೆ ವಿ | ರೂಪನಯನನೆಂಬ |
ರಕ್ಕಸನನುಗರೊಳ್ | ಚಿಕ್ಕವನೀತನು ||103||

ಸೃಷ್ಟಿ ಪಾಲಕ ಕೇಳು | ಕಡು | ದುಷ್ಟ ರಕ್ಕಸರುಗಳು ||
ಅಷ್ಟಾದಶವಕ್ಷೌಹಿಣಿ ಸೇನೆ ಸ |
ಮಷ್ಟೀಕರಿಸಿ ಬೇ | ನ್ನಟ್ಟುತ್ತೈತರುವವರು ||104||

ಅರ್ಭಟೆಯಿಂದದೈತಹರು | ಬಲು | ಕರ್ಬುರ ವಂಶಗಳವರು ||
ಪರ್ಬದೆ ರೋಷವು | ತರ್ಬಿದೆ ನಮ್ಮನು |
ಮಾರ್ಬಲ ಬರೆ ಭೂ | ಗರ್ಭ ನಡುಗುತಿದೆ ||105||

**ಭಾಮಿನಿ**

ರಣದೊಳೀ ರಕ್ಕಸರ ಪಡೆಯೊಳು |
ಸೆಣೆಸುವರ ನಾ ಕಾಣೆ ಲೋಕದಿ |
ಇನಕುಲೇಶನೆ ಕೇಳು ಪರಸತಿಗಳುಪಿ ರಾವಣನ ||
ಮಿನುಗುವೀ ಸೈನ್ಯವಿದು ಪರರಿಗೆ |

ತೃಣಸಮಾನವಿದೆನಿಸಿತಲಯೆಂ ।
ದೆನುತ ಪೇಳ್ತಿರಲಂದು ಮುತ್ತಿತು ವಾನರರ ಪಡೆಯ ॥106॥

**ರಾಗ ಭೈರವಿ ತ್ರಿವುಡೆ ತಾಳ**

ಏನನೆಂಬೆ । ಸಾಹಸ । ಕೇನನೆಂಬೆ ॥ಪ॥

ಏನನೆಂಬೆನು ಮಾನವಾರಿಯ ।
ಸೂನು ಚಾಪವ ಹಿಡಿಯುತ ।
ಕ್ಷೋಣಿ ಬಿರಿಯುವ ತೆರದಿ ವಾನರ ।
ಸೇನೆಯನು ಬಿಡದಡಚಿ ಬರುವುದ ॥ ನೇನ ॥107॥

ತುಂಬಿತಾ ಖಳ ಸೇನೆ ಕೀಶಕ ।
ದಂಬವನು ಪುಡಿಗೆಯ್ಯುತ ॥
ಕುಂಭಿನಿಯು ಬಾಯ್ಬಿಡುವ ತೆರೆದೊಳ ।
ಗಂಬುಗಳ ವಾನರರಿಗೆಸೆದುದು ॥ ನೇನ ॥108॥

ಬಿದ್ದು ನಳ ಹೊರಳಿದನು ಗಾಯಕೆ ।
ಮದ್ದರಸಿದ ಸುಷೇಣಕ ॥
ಬಿದ್ದಿತಾ ಖಳ ಸೇನೆ ದಾನವ ।
ರುದ್ಧಟಕೆ ಬಲ ಕುಗ್ಗಿದುದರೆ ॥ ನ್ನೇನ ॥109॥

ಪ್ರಳಯಕಾಲದ ಸಿಡಿಲಿನಂದದಿ ।
ಖಳರು ಬತ್ತೀಸಾಯುಧ ॥
ಝುಳಪಿಸುತ ಘುಡುಘುಡಿಸಿ ವಡಬಾ ।
ನಳನ ತೆರದೊಳು ಗಜರಿ ಬರುವುದ ನೇನ ॥110॥

ಬಿಡದೆ ವಾನರ ಗಡಣವೆಲ್ಲವು ।
ಗಡಬಡಿಸುತಾ ಖೂಳರ ।
ಒಡಲ ಕೆಡಹುತಲಧಿಕ ರೋಷದಿ ।
ಝುಡಿದು ಬಡಿದರು ಖಳರ ಸೇನೆಯ ॥ ಏನ ॥111॥

**ವಾರ್ಧಕ**

ಸಿಡಿದು ಕೆಡೆದಿಹ ಹೆಣನ ರುಂಡದಿಂ ಮುಂಡದಿಂ ।
ಕಡಿದ್ಹೊರಳು ತೈತರುವ ಕಾಲ್ಗಳಿಂ ತೋಲ್ಗಳಿಂ ।
ನಡುನಡುಗಿ ಬರುವ ಮದದಾನೆಯಿಂ ಸೇನೆಯಿ ಕುಣಿವ ಭೂತಂಗಳಿಂದ ॥
ಹೊಡಕರಿಸಿ ಬಹ ಶಿರಸ್ತ್ರಾಣದಿಂ ಬಾಣದಿಂ ।

ಉಡಿದು ಬಿದ್ದಿರುತಿರುವ ಶಕಟದಿಂ ಮುಕುಟದಿಂ ।
ಕಡುಗಲಿಗಳೆಸಗುತಿಹ ಗುದ್ದಾಟವದ್ದಾಟದಿಂ ಸಮರಮೆಸೆದಿರ್ದುದು ॥112॥

**ರಾಗ ಘಂಟಾರವ ಏಕತಾಳ**

ಅರ್ಗಳರಿಪು ಸೇನೆಯನು । ಕಂಡು ।
ಭೋರ್ಗರೆದಾ ರವಿಸೂನು ॥
ಗರ್ಗರ ಕಡಿಯುತ ಹಲ್ಲ । ಬಲ ।
ವರ್ಗವ ಪೊಗೆ ರಣಮಲ್ಲ ॥113।

ಅರ್ಕತನುಜ ಕೇಳಿತ್ತ । ಕಡು ।
ಮೂರ್ಖತೆಯನು ಬೀರುತ್ತ ।
ಮರ್ಕಟತನ ತೋರದಿರು । ಎನ್ನ ।
ಕರ್ಕಶತನಕಿದಿರಾರು ॥114॥

ಅಲ್ಪ ಖಳಾಧಮ ನೀನು । ಬಲ ।
ಸ್ವಲ್ಪವ ಗೆಲಿದರಿನ್ನೇನು ॥
ಬಲ್ಪಿನಿಂ ರಣಕನುವಾಗೆ । ನಿನ್ನ ।
ತಲ್ಪಿಸುವೆನು ಯಮನೆಡೆಗೆ ॥115॥

ಸ್ವರ್ಗಾಧಿಪಸಹಿತಾಗಿ । ನಮ್ಮ ।
ವರ್ಗಳಧಣಿಗೆ ಬೆಂಡಾಗಿ ।
ಮಾರ್ಗವು ಸಿಗಲೋಡುವರು । ನಮ್ಮ ।
ಮಾರ್ಗಣ ಕಿನ್ನಿದಿರ್ಯಾರು ॥116॥

ಎಂದು ವಿರೂಪಾಕ್ಷಕನು । ಶರ ।
ವಂದವನೆಸೆಯಲ್ಕದನು ॥
ಚಂದದಿ ಕಡಿಯುತ ರವಿಜ । ಬ ।
ಲ್ಪಿಂದ ತಿವಿಯಲಾ ದನುಜ ॥117॥

**ರಾಗ ಶಂಕರಾಭರಣ ಮಟ್ಟೆತಾಳ**

ನೊಂದು ಚೇತರಿಸಿ ಖಳನು ।
ನಿಂದು ಧೈರ್ಯದಿಂದ ರವಿಯ ।
ನಂದನನಿಗೆ ದಿವ್ಯ ಸರಳ । ವಂದವೆಸೆದನು ॥118॥

ಚಂದದಿಂದ ಲಲಗು ಮುರಿದು ।
ಮುಂದೆ ಬರುವ ಖಳನ ತಿವಿಯ ।
ಲಂದು ಕೋಪದಿಂದ ತ್ರಿಶೂಲ । ದಿಂದ ಪೊಡೆಯಲು ॥119॥

ಬರುವ ಶೂಲಕಂಡು ರವಿಜ ।
ಕರದಿ ಪಿಡಿದು ಪುಡಿಯ ಗೈಯೆ ।
ಭರಿತ ಕೋಪದಿಂದ ಖಡುಗ । ಸೆಳೆದು ಧನುಜನು ॥120॥

ಬರಲು ಕಂಡು ರವಿಜ ರೋಷ ।
ವೆರೆಸಿ ಖಡುಗವೆಳೆಯಲಾಗ ।
ತ್ವರಿತದಿಂದ ಗದೆಯಕೊಂಡು । ತಿರುವುತೆಸೆಯಲು ॥121॥

ಸುರರು ಮೆಚ್ಚುವಂತೆ ಗದೆಯ ।
ಮುರಿದು ಮುಷ್ಟಿಯಿಂದ ತಿವಿಯೆ ।
ಭರದಿ ಮೂರ್ಛೆಗೊಂಡು  ಬಿದ್ಧ । ಧುರುಳ ಧರೆಯೊಳು ॥122॥

**ಭಾಮಿನಿ**

ಭಾನುಜನ ಕರಹತಿಗೆ ರಾವಣ ।
ಸೂನು ಧರೆಯೊಳು ಬೀಳೆ ನಿರ್ಜರ ।
ಸೇನೆ ಬೆದರುವ ತೆರದೊಳೈದಲು ರವಿಜನೆಡೆಗಾಗಿ ॥
ವಾನರಾಧಿಪನಿಂಗೆ ತ್ರಿದಶರು ।
ಮಾನದಿಂ ಪೂಮಳೆಯ ಕರೆಯಲು ।
ದಾನವಾಧಮ ಖೂಳ ದೀರ್ಘೋಧರನು ಮಾರ್ಮಲೆತ ॥123॥

**ರಾಗ ನಾಟಿ ರೂಪಕ ತಾಳ**

ದೀರ್ಘೋದರನೆಂಬಸುರನು । ಘೋರ್ಗುಡಿಸುತಲಂದು ।
ಕೂರ್ಗಣೆಯಿಂ ಕಪಿಗಳನೆಮ । ನೂರ್ಗಟ್ಟಿದ ನಂದು ॥     ॥ಪ॥

ಅರ್ಬುದದನುಜರ ಸೇನೆಯ । ಪರ್ಟಿದ ರೋಷದಲಿ
ತರ್ಬುತಲಿನಸುತಬರುತಿರೆ । ಕರ್ಬುರನಾಚೆಯಲಿ ॥
ಬರ್ಬುತಲೆ ಕಪಿಗಡಣವ । ನುರ್ಬುತ ಕೋಪದಲಿ ॥
ಆರ್ಭಟಿಸುತಲೈತಂದನು । ಸ್ವರ್ಭಾನು ತೆರದಲಿ ॥124॥

ಹೆಕ್ಕಳಿಕೆಯ ನೇನೆಂಬೆನು । ಮುಕ್ಕಣ್ಣನ ತೆರದಿ ॥
ಸಿಕ್ಕಿದ ದನುಜರನೆಲ್ಲರ । ತಿಕ್ಕಿದ ಸಾಹಸದಿ ॥

ಸೊಕ್ಕಿದ ಕರಿಘಟೆಯಂದದಿ । ಲೆಕ್ಕಿಸದನಿಬರನು ॥
ಧಿಕ್ಕರಿಸುತ ತಪನಾತ್ಮಜ । ಫಕ್ಕನೆ ಬರಲವನು ॥125॥

ಆರಲೊ ನೀ ಹುಲು ಮರ್ಕಟ । ತೋರೆಲೊ ಸಾಹಸವ ॥
ಘೋರನೆ ಗಮಿಸದಿರೆನುತಲೆ । ತೂರಿದ ಬಲು ಶರವ ॥
ವಾರಿಜ ಮಿತ್ರನ ಪುತ್ರನು । ಕೂರಲಗನು ಮುರಿದು ॥
ಹೋರುವ ದುರುಳನ ಪಿಡಿದೆಳೆ । ದಾರುಭಟಿಸೆ ಮುಳಿದು ॥126॥

**ರಾಗ ಭೈರವಿ ಝಂಪೆತಾಳ**

ಭಣಗು ಮರ್ಕಟರ ಕುಂ । ಭಿನಿಯದೀಶ್ವರರುಗಳ ।
ಘನ ಶೌರ್ಯ ದುಬ್ಬಟೆಗೆ । ಧನುಜರಂಜುವರೆ ॥
ಮನುಮಥಾರಿಯ ಬಗೆವ । ರಲ್ಲ ಸೆಣೆಸಾಟದಲಿ ।
ಬಿನುಗೆ ನೀ ನಮ್ಮವರ ।  ಕೆಣಕಿ ಕೆಟ್ಟೆಯಲಾ ॥127॥

ನಿಮ್ಮ ಕುಲ ಧರ್ಮವದು । ಹೆಮ್ಮೆ ನುಡಿ ನುಡಿದಸುವ ।
ಹಮ್ಮಯಿಸುವನಕ ಬಾ । ಯ್ಬಮ್ಮತನ ಬಿಡದು ॥
ಘಮ್ಮನೀ ಪೌರುಷವ । ನಮ್ಮೊಳೆಂದೇನು ಫಲ ।
ಸುಮ್ಮನಾಕಡೆ ಸಾರೊ । ಕೊಮ್ಮೆ ಬೆಳೆದಸುರ ॥128॥

ಮರ ಮರವ ಹಾರಿ ಪಲ್ । ಗಿರಿದು ಹಣ್ಣನು ಮೆಲುವ ।
ತೆರನಲ್ಲ ರಣದೆಣಿಕೆ । ಬಿರುಸು ಕಾಣೆಲವೊ ॥
ಅರುಹಿ ಫಲವೇನಿನ್ನು । ಬರಿಯ ಮರ್ಕಟಗಿದನು ।
ಧುರದ ಪರಿನೋಡೆನುತ । ಭರದಿ ಕಣೆಯೆಚ್ಚ ॥129॥

ಬಣಗು ಧನುಜನೆ ಕೇಳು । ಕುಣಪ ಭೋಜನಗೈದು ।
ಘನಚೌರ್ಯ ಬಾಯ್ಬಡುಕ । ತನದಿ ಸೊಕ್ಕಡರಿ ॥
ಮನಬಂದ ರೀತಿಯೊಳು । ಕೆಣಕಿ ಬೊಗಳಲು ನಿನ್ನ ।
ಕ್ಷಣದಿ ಭಂಗಿಸುವೆ ನೆಂ । ದಿನಸುತನು ಹೊಯ್ದ ॥130॥

ಹೊಡೆದ ಪೆಟ್ಟಿಗೆ ದೈತ್ಯ । ಗಡಬಡಿಸಿ ಮೂರ್ಛೆಗೈ ।
ದೊಡನೆ ರಥದೊಳು ಬೀಳೆ । ಪಿಡಿದು ಮುಷ್ಠಿಯನು ॥
ಕಡುಗಿ ದಾನವರುಗಳ । ಬಡಿದು ಬರಲತ್ತಲೆಡೆ ।
ಬಿಡದೆ ಮುತ್ತಿತು ದೈತ್ಯ  । ಪಡೆಯುರವಿಜನಿಗೆ ॥131॥

**ಭಾಮಿನಿ**

ಖಳರು ಮೂರ್ಛೆಯೊಳಿರಲು ದೈತ್ಯರು ।
ಕಳವಳಿಸಿ ಮುತ್ತಿದರು ರವಿಜನ ।
ಬೆಳೆಯೊಳ್ಳೈತಂದಖಿಳ ಶಸ್ತ್ರಾಸ್ತ್ರದೊಳು ಹೆಣಗಾಡೆ ।
ತಿಳಿದು ಮೂರ್ಛೆಯನನಿತರೊಳು ಖಳ ।
ಕಲಿತ ರೋಷದಿ ರಾಘವೇಂದ್ರನ ।
ಬಳಿಯೊಳ್ಳೈತರೆ ರವಿಜ ದೀರ್ಘೋದರನ ತಡೆದೆಂದ ||132||

**ರಾಗ ದೇಶಿ ಅಷ್ಟತಾಳ**

ಎಲ್ಲಿಗೈದುವೆ ಫಡ ದೀರ್ಘೋದರ ದೈತ್ಯ ।
ನಿಲ್ಲು ನಿಲ್ಲಲೊ ಖುಲ್ಲ ತನಗಳ ।
ನೆಲ್ಲ ನಿಲಿಪೆನು ಮೆಲ್ಲನೆ ||133||

ಬಣಗು ಮರ್ಕಟ ಸೆಣೆಸುವೆಯಾ ನಿನ್ನ ।
ಕಣನ ಮಧ್ಯದಿ ಶಾಕಿನೀಗಣ ।
ಕುಣಬಡಿಸುವೆನು ಕ್ಷಣದಲಿ ||134||

ಯಾತುಧಾನನೆ ಹೇಡಿತನದ ನಿನ್ನ ।
ಮಾತಿಗಂಜುವರಲ್ಲ ಕಪಿಭಟ ।
ವ್ರಾತ ವೆಂದೆನುತೆಚ್ಚನು ||135||

ಸಾಕು ಸಾಕೆಲೊ ಪೋಕ ವಾನರ ನಿನ್ನ ।
ನಾ ಕಣನ ಮಧ್ಯದಲಿ ಸೀಳ್ದೆ ಪಿ ।
ನಾಕಿ ಮೆಚ್ಚುವ ತೆರದೊಳು ||136||

ಮೂಢ ದಾನವ ಹೇಡಿ ನಿನ್ನೊಳು ಮಾತ ।
ನಾಡಿ ಫಲವೇನೆಂದು ಕೋಪದಿ ।
ಗಾಢ ಮುಷ್ಟಿಯೊಳೆರಗಲು ||137||

ಪುಂಡ ದಾನವ ಡೆಂಡೆಣಿಸುತಲೆ ಭೂ ।
ಮಂಡಲದಿ ಬೀಳಲ್ಕೆ ರಕ್ಕಸ ।
ತಂಡ ಬೆದರಿತು ನಿಮಿಷದಿ ||138||

**ಭಾಮಿನಿ**

ಖಳ ಶಿರೋಮಣಿ ಕೂಗಿದಾರ್ಭಟೆ
ಗಿಳೆ ಮುಗುಚುವಂತಾಯ್ತು ತತ್ಕ್ಷಣ ।
ತಳುವದಾ ದೀರ್ಘೋದರನ ಯಮಭಟರು ಕೊಂಡೊಯ್ಯೆ ||
ಕಳುಹಿದನು ಸುರಪನು ಸುಪುಷ್ಪದ ।

ಹೊಳೆವ ಮಾಲೆಯನಂದು ರವಿಜಗೆ ।
ತಳಿದರಾ ವಂದಾರಕರು ಸುಮವಷ್ಟಿಯನು ಧರೆಗೆ ॥139॥

**ದ್ವಿಪದಿ**

ಕುಶಲವರು ಕೇಳಿರಾ ಕಣನ ಮಧ್ಯದೊಳು ।
ದಶಕಂಠನೋರ್ವ ತಾನುಳಿದ ನಂದಿನೊಳು ॥140॥

ರಣದಿ ಮಡಿದವರ ಕಂಡದಿಕ ಚಿಂತಿಸಿದ ।
ಮನ ಮೋಹದಿಂದವರ ಗುಣವ ಯೋಚಿಸಿದ ॥141॥

ಸುಮನಸರ ಸಂಕುಲವ ಬಗೆವನಲ್ಲೀತ ।
ಕಮನೀಯರೂಪ ಗುಣಭರಿತ ವಿಖ್ಯಾತ ॥142॥

ಎಂದು ಚಿಂತೆಯೊಳು ಮನನೊಂದು ಬಸವಳಿದು ।
ಮಂದಮತಿ ದಶಕಂಧರನು ಕ್ಷಣದಿ ಮುಳಿದು ॥143॥

ಹೀರುವೆನು ಕಪಿಕಟಕದಸುವೆಂದು ಬರಲು ।
ಭೂರಿ ಖತಿಯೊಳು ರಾಮನನುಜ ಮುಂಬರಲು ॥144॥

ಉರಿಯನುಗುಳುತ ರೋಷದಿಂದ ದಶವದನ ।
ಭರದಿ ನುಡಿಸಿದ ದುರುಳನಾಗ ಲಕ್ಷ್ಮಣನ ॥145॥

**ರಾಗ ಕಾಂಭೋಜಿ ಅಷ್ಟತಾಳ**

ಹರ ಸುರಪತಿ ಬ್ರಹ್ಮ ಮುಖ್ಯರು । ಎನ್ನ ।
ಧುರದೊಳು ಗೆಲುವಡಶಕ್ಯರು ॥
ನರನೆ ನೀ ರಣದಿ ಬಂದಿದಿರಾದೆ । ಎನ್ನ ।
ಸರಳ ಸಾರವನು ನೀನರಿಯದೆ ॥146॥

ಈಸು ಪರಾಕ್ರಮವಿರಲಿಕೆ । ದೈತ್ಯ ।
ರಾಶಿಯ ಕೊಲಿಸಿದೆ ಯೇತಕೆ ॥
ಭಾಷಿಸುವರೆ ಸತ್ತ್ವಶೀಲರು । ತಮ್ಮ ।
ವಾಸಿಪಂಥವನೆಂದೂ ಹೇಳರು ॥147॥

ಮನುಜ ನಿನ್ನನ್ನು ಗೆಲದಿರೆ ಮುನ್ನ । ತನ್ನ ।
ದನುಜರೆನ್ನುವರೆ ಲೋಕದೊಳಿನ್ನಾ ॥
ಘನಪರಾಕ್ರಮಿಯಾದಡೀಕ್ಷಣ । ನೀನು ।
ಕೆಣಕಿ ನೋಡಿದರೆ ಕಾಂಬುದು ಘನ ॥148॥

ಎನುತಮರಾರಿಯು ಬಿಲ್ಲಿಗೆ । ಕೋಲ ।
ನನುಕರುಸುತ್ತಿರೆ ಹನುಮಗೆ ॥
ದಿನಪ ಕುಲಜ ಕಳುಹಿದನಂದು । ತನ್ನ ।
ಅನುಜನೊತ್ತಾಸೆಗೆನುತಲಂದು ॥149॥

**ರಾಗ ಭೈರವಿ ಅಷ್ಟತಾಳ**

ಮಾನವ ಹುಡುಗ ನೀನು । ಎನ್ನೊಳು ಹಾಣಾ ।
ಹಾಣಿಯೊಳ್ ಮೆರೆವರೇನು ॥

ತ್ರಾಣವುಳ್ಳಡೆಯೆನ್ನ ಕೂಡೆ ತೋರೆನುತಲಿ ।
ಬಾಣ ವರ್ಷವ ನೆಚ್ಚನು ॥150॥

ಕಣೆಯ ಅಭ್ಯಾಸದೊಳು । ಪಂಡಿತನೇ ನಿ ।
ನ್ನೆಣಿಸೆನು ರೋಷದೊಳು ॥
ರಣದಿ ನಿನ್ನಯ ಪ್ರಾಣವೆನಗೆ ಒಪ್ಪಿಸುವೆನೆಂ ।
ದಣಕಿಸಿ ಶರವಿಡಲು ॥151॥

ಘೋರನೈತಹ ಕೋಲ್ಗಳ । ಖಂಡಿಸಿ ಮತ್ತಾ ।
ಕ್ರೂರಾಸ್ತ್ರ ಸಮೂಹಗಳ ॥
ಸಾರಥಿ ಶಿರವ ರಾವಣನ ಕಿರೀಟವ ।
ಚಾರು ಪತಾಕೆಗಳ ॥152॥

ಕಡಿದು ಲಕ್ಷ್ಮಣದೇವನು । ದಾನವನುರ
ಕಿಡಲು ದಿವ್ಯಾಸ್ತ್ರವನು ॥
ಗಡ ಬಡಿಸುತ ಭಯದೊಡನೆ ಮತ್ತಾ ಖಳ ।
ರೊಡೆಯನಾಚೆಗೆ ಸಾರ್ದನು ॥153॥

**ಭಾಮಿನಿ**

ಎಲವೊ ದಶಶಿರ ಕೇಳು ಪರಸತಿ ।
ಗಳುಪಿ ಕೆಡಬೇಡಕಟ ಧೂರ್ತರ ।
ಕುಲಕೆ ಗುರುವಾಗದಿರು ಬೇಡ ಭವಾಬ್ಧಿ ಪೋತನನು ॥
ಉಳುಹುವನು ನಿನ್ನಸುವನಾತನ ।
ನೊಲಿಸಿ ಶರಣವಿಭೀಷಣನ ಕೂ ।
ಡಿಳೆಯ ಪಾಲಿಪುದುಚಿತವಿದು ಹಿತವಾಗದಿರೆ ಮನಕೆ ॥154॥

**ರಾಗ ಭೈರವಿ ಏಕತಾಳ**

ಭರಿಸೈ ಮಣಿಮಯ ರಥವ । ನೀ ।
ತರಿಸೈ ಮುಕುಟ ಕುಂಡಲವ ॥
ಧರಿಸುತ ಸೂತನ  ಕೂಡಿ । ಈ ।
ಧುರಕನುವಾಗೆಲೊ ಖೋಡಿ ॥155॥

ಇದರೊಳಗಾವುದು ನೋಡು । ಬುಡ ।
ತುದಿಯ ವಿಚಾರವ ಮಾಡು ॥
ಒದಗದಿರಲು ಬಿಟ್ಹೋಡು । ನಿನ್ನ ।
ಮದಮುಖತನ ನೀಗಾಡು ॥156॥

ಎನೆ ಕೇಳ್ದಾ ದಶಕಂಠ । ನುಡಿ ।
ದನು ಕಡು ಮೂರ್ಖರ ನೆಂಟ ॥
ಅನಿಮಿಷರೆದೆದಲ್ಲಣನು । ನಾ ।
ನಿನಗಂಜಿದ ಮೇಲಿನ್ನು ॥157॥

ಧನುಜರೊಡೆಯ ತಾನೆಂತು । ಎನು ।
ತನಿಮಿಷರಿಪು ಖತಿಯಾಂತು ॥
ಕ್ಷಣದಿಂ ಬ್ರಹ್ಮಾಸ್ತ್ರವನು । ತೆಗೆ ।
ದಿನಿತು ಬಿಲ್ಲಿಗೆ ತೊಡಲವನು ॥158॥

ಸ್ಮರಿಸೈ ರಾಮನ ಪದವ । ನೀ ।
ಬರಿಸೈ ವಾನರ ಬಲವ ॥
ಶಿರ ಕಾವವರ್ಯತರಲಿ । ನಿ ।
ನ್ನ ರಣವನುಳಿಸಲಿಂದಿನಲಿ ॥159॥

ಎಂದಾ ಖಳ ಲಕ್ಷ್ಮಣನ । ಸುರ ।
ವಂದ ಬೆದರೆ ದಶವದನ ।
ಚಂದದಿ ಬ್ರಹ್ಮಾಸ್ತ್ರದೊಳು । ಬಿಡೆ ।
ನೆಂದೆಸೆದನು ಖಾತಿಯೊಳು ॥160॥

**ವಾರ್ಧಕ**

ಕಿಡಿಯ ಪೇರ್ಗಣೆಗಳಿಂ ಘುಡುಘುಡಿಪ ರವಗಳಿಂ ।
ಝುಡಿವ ಕಾರ್ಬೊಗೆಗಳಿಂ ನಡಸಿರುವ ಪರಿಗಳಿಂ ।
ಸಿಡಿಲಗರ್ಜನೆಗಳಿಂ ಫಣ ಫಣಾಕೃತಿಗಳಿಂ ವಡಬಾನಲನ ತೆರದೊಳು ॥
ಮಡನ ನಿಟಿಲಾಗ್ನಿಯಂತೆಸೆವ ಬಲು ಚೋದ್ಯಮಂ ।
ಕಡಲಿನಾರ್ಭಟೆಗಳಿಂದೊಡನೆ ಸುಪ್ರಭೆಗಳಿಂ ।
ಹೊಡಕರಿಸುತೇಳ್ವುದಂ ಪೊಡವಿ ನಡುಗುವ ತೆರಂ ಐದುದಾ ಬ್ರಹ್ಮಾಸ್ತ್ರವು ॥161॥

**ಭಾಮಿನಿ**

ಸುರರು ಬಿಡದೋಡಿದರು ನಾಕದಿ ।
ಭರದಿ ನಂದಿಯನೇರ್ದ ಶಂಕರ ।
ನಿರದೆ ದುಮ್ಮಿಕ್ಕಿದನು ತನ್ನಯ ಪುರಕೆ ಚತುರಾಸ್ಯ ॥
ತರಣಿ ವಂಶಜನನುಜ ಶರಹತಿ ।
ಗೊರಗಿ ಮೂರ್ಛೆಯೊಳಿರಲು ರಾವಣ ।
ಭರಿತ ರೋಷದೊಳೈತರುತ ಕಂಡೆಂದ ರಾಘವಗೆ ॥162॥

**ರಾಗ ಪಂತುವರಾಳಿ ಮಟ್ಟೆತಾಳ**

ಕಲಿತ ರೋಷದಿ । ಖಳನು ಶೀಘ್ರದಿ ॥
ಮಲೆತು ನಿಂದ ರಾಘವೇಂದ್ರ । ನೊಡನೆತವಕದಿ ॥163॥

ಕಿಡಿಯನುಗುಳುತ । ಘಡ ಘಡೆನ್ನುತ ॥
ಧಡಿಗನೊಡನೆನಿಂದ ಭಕ್ತ । ರೊಡೆಯ ಗಜರುತ ॥164॥

ಕಾಣುತಸುರನು । ಬಾಣತತಿಯನು ॥
ತ್ರಾಣದಿಂದಲೆಸೆಯೆ ಚಿತ್ರ । ಭಾನುಕುಲಜನು ॥165॥

ಕಡಿದು ಬಾಣವ । ಬಿಡದೆ ತ್ರಾಣವ ॥
ನಿಡುಸರಳ್ಗಳೆಸೆಯಲೆಂದ । ಕಡುಗಿ ದಾನವ ॥166॥

**ಭಾಮಿನಿ**

ಅರರೆ ಮಾನವ ಪತಿಯೆ ನೀ ಜಯ ।
ಸಿರಿಯ ಸಾಧಿಪೆನೆನುತ ಮನದಲಿ ।
ಬರಿದೆ ಯೋಚನೆಗೆಯ್ದ ಪರಿಯೇನಾಯ್ತು ಇಂದಿನಲಿ ॥
ದುರುಳ ಕೇಳೆಲೊಗೆಲವಿನಬಲೆಯು ।
ನಿರತ ನಿಮ್ಮೊಳು ದಢದಿ ನೆಲೆಸಿಹ ।
ಪರಿಯ ತೋರ್ಪೆನೆನುತ್ತಲಿಂತೆಂದನು ಖಳಧ್ವಂಸಿ ॥167॥

**ರಾಗ ಮಾರವಿ ಅಷ್ಟತಾಳ**

ಜಾಣನಹುದೆಲವೊ । ಲೋಕದೊಳು ಸು । ತ್ರಾಣನಹುದೆಲವೊ ॥ ಪ ॥

ಕಳವಿನೊಳ್ ಹೆಣ್ಣ ಕದ್ದೊಯ್ದ । ವಿದ್ಯ ।
ತಿಳುಹಿದನಿನ್ನಾವ ಚೋದ್ಯ ॥
ಖಳಕುಲಾಧಮ ನಿನ್ನ ಚರಿತೆ ಲೋಕದೊಳೆಲ್ಲ ।

ನೆಲೆಸಿಕೊಂಡಿರ್ಪುದಲ್ಲ । ಕಂಡವರೆಲ್ಲ ।
ಹೊಲಸೆಂದು ಪೇಳ್ವರಲ್ಲ ದುರ್ಗುಣವ ನೀ ।
ತಿಳಿದು ಮಾಡಿದೆಯ ಖುಲ್ಲ ॥168॥

ಮಾರ್ವಲೆತಿಹ ರಣಹೇಡಿ । ನೀ ಸ ।
ದ್ಧರ್ಮ ಬುದ್ಧಿಯ ಬಿಟ್ಟ ಖೋಡಿ ॥
ವರ್ಮವೆಂದೆನುತ ಸುಳ್ಳಾಡಿ ಜಟಾಯುವ ।
ಶರ್ಮದಿ ಕೊಂದೆಯಲ್ಲ ॥ ಪೂರ್ವಾಮರ ।
ಧರ್ಮಕ್ಕೆ ಸರಿಯೆ ಖುಲ್ಲ ॥ ನಿನ್ನನು ಘೋರ ।
ಕರ್ಮಿಯೆಂದೆನುವರಲ್ಲ ॥169॥

**ಭಾಮಿನಿ**

ಖುಲ್ಲ ಕೇಳೆಲೋ ನೀನು ಗರ್ವದ ।
ಮಲ್ಲನಲ್ಲವೆ ಲೋಕದಲಿ ಹೆಂ ।
ಗಳ್ಳರಲಿ ಸುಳ್ಳರಲಿ ಜೀವದ ಕಳ್ಳರೆರವಿನಲಿ ॥
ಖುಲ್ಲರಲಿ ಕುಹಕಿಗಳ ಮುಖ್ಯರೊ ।
ಳೆಲ್ಲರಲಿ ನಾಕುಮಡಿಯೆಂಬುದ ।
ಬಲ್ಲೆವೈ ಸಾಕಾ ಪರಾಕ್ರಮದೇಳ್ಗೆನಮ್ಮೊಡನೆ ॥170॥

**ರಾಗ ಶಂಕರಾಭರಣ ಮಟ್ಟೆತಾಳ**

ಇನಕುಲೇಶನೆಂದ ಮಾತ ಕೇಳಿ ದಶಶಿರ ।
ಮುನಿಸಿನಿಂದ ಪೇಳ್ದನೆಲವೊ ಮಾನವೇಶ್ವರ ॥
ಬಿನುಗೆ ನಿನ್ನ ಸಹಜನೆನ್ನ ಬಿಡದೆ ಗರ್ವದಿ ।
ರಣದಿ ಮೂದಲಿಸಲಿಕವನ ತರಿದೆ ವಹಿಲದಿ ॥171॥

ಸುಡು ಸುಡೆಲವೊ ಪಾಪಿ ನಿನ್ನನೀಗ ರಣದಲಿ ।
ಕೆಡಹಲಿಕಸಾಧ್ಯವಲ್ಲವೆನ್ನ ಶರದಲಿ ॥
ಹೊಡೆಯೆ ಶರಣ ಕೋಪಿಸುವನೆನುತ್ತ ತಡೆದನು ।
ಬಿಡು ಬಿಡಿನ್ನು ತಡೆಯೆ ಕೇಳು ಕಡೆಯ ಮಾತನು ॥172॥

ಎನ್ನ ಧುರದಿ ಕಾದಿಗೆಲುವ ಪನ್ನತಿಕೆಯನು ।
ನಿನ್ನೊಳಿಲ್ಲವಾಡಲ್ಯಾತಕುನ್ನತಿಕೆಯನು ॥
ಇನ್ನು ಶರಣನೆಂಬ ವಚನವನ್ನು ತೆಗೆದೆ ।
ನಿನ್ನ ಮತ್ತವನ ಕೊಲುವೆನಿನ್ನು ಮುನಿದರೆ ॥173॥

ಮೋರೆಯಿಂದ ಧೀರತನವು ಹಾರಿಬರುವುದು ।
ಆರು ಭಟೆಯು ನೋಡೆ ಬಲು ಗಭೀರವಿರ್ಪುದು ॥
ವೀರತನದಿ ಕಾದುತಿರಲು ವಾರೆಪೋಪುದು ।
ಶೂರತನದಿ ಗೈವ ರಣವಿಚಾರವಲ್ಲಿದು ॥174॥

ಸಾರು ಸಾರೆನುತ್ತಲೆಚ್ಚನೊಂದು ಬಾಣವ ।
ಸಾರಥಿಯರಥಾಶ್ವ ಚಾಪ ದಿವ್ಯ ಕವಚವ ॥
ಚಾರು ಕುಂಡಲಗಳು ಮುಕುಟ ಶ್ವೇತಛತ್ರವು ।
ಸೂರೆಗೈಯ್ದುದಾಗ ದುರುಳನಟ್ಟಹಾಸವು ॥175।

ವೀರದಶರಥೇಂದ್ರ ಸುತನ ಕೂರಲಗುವಿಗೆ ।
ದಾರಿಗಾಣದಾಯ್ತು ಖೂಳ ರಾವಣೇಶಗೆ ॥
ಹಾರಿಬಿದ್ದು ಧಾತ್ರಿಗೊರಗಿ ಚೇತರಿಸುತಲೆ ।
ಮೋರೆ ಮೋರೆನೋಳ್ಪನಸುರನಂದು ಭ್ರಮೆಯಲೆ ॥176॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಏನೆಲವೊ ದಶಕಂಠ ಕಡುದು ।
ಮ್ಮಾನದಿಂದಲಿ ನೋಳ್ಪಪರಿಯ ನಿ ।
ಧಾನವಾವುದು ಪೇಳು ನಿನ್ನಯ । ಹೀನತೆಯನು ॥177॥

ಜಾಣತನವೇನಾಯ್ತು ಸುಮ್ಮನೆ ।
ಗೋಣತಗ್ಗಿಸಿ ನೆಲನ ನೋಳ್ಪುದು ।
ದಾನವರ ರಣಕರ್ಕಶತೆಯ ವಿ । ಧಾನವೇನು ॥178॥

ರಥವಿಹೀನರ ಚಾಪಶರ ಸಾ ।
ರಥಿವಿಹೀನರ ವಸ್ತ್ರಹೀನರ ।
ಮಥಿಸುವವರಾವಲ್ಲ ರಣದಲಿ । ವ್ಯಥಿಸಲೇಕೆ ॥179॥

**ರಾಗ ಬೇಗಡೆ ಅಷ್ಟತಾಳ**

ಸದರವಲ್ಲಿದು ಕೇಳು ದಶವದನ । ಕಾಳಗಚಮತ್ಕೃತಿ ।
ಚದುರತೆಯು ಬೇರಿಪ್ಪುದಾ ಹದನ ॥
ಮದಮುಖತ್ವದಿ ಪುದಿದು ತಾ ನಿ ।
ನ್ನಧಿಕ ಸಾಹಸಿಯೆಂದು ಸತಿಯರ ।
ಬೆದರಿಸುತ ಕಳವಿನೊಳು ತರುವೀ ।
ಯದಮತನವಿದರೊಳಗೆ ಸಲುವುದೆ ॥180॥

ಹತ್ತು ತಲೆ ಇಪ್ಪತ್ತು ತೋಳುಗಳು । ಕಾಣಲ್ಕೆ ಬಹು ಸ ।
ತ್ತ್ವಾತಿಶಯದಿಂದಿರುವ ಕಟ್ವಾಳು ॥
ಸುತ್ತಿರುವ ಸಾಗರವು ಭೂಮಿಯ ।
ನುತ್ತಮದ ಕುಲವನಿಮಿಷರ ನು ।
ಗ್ಗೊತ್ತಿದತಿಶಯ ಬಲವುಬಲುಸುಖ ।
ವೆತ್ತಿರುವ ಸಂಪತ್ತು ಶೀಲನೆ ॥181॥

ಪರ ವನಿತೆಯರಿಗಳುಕಬಹುದೇನೈ । ಸಮಸ್ತ ಶಾಸ್ತ್ರವ ।
ನರಿತ ಪಂಡಿತನಲ್ಲವೇ ನೀನೈ ।
ವರಮಹಾ ಪೌರಾಣ ಮತಗಳ ।
ಪರಮ ವೇದಾಂತಾದಿ ಶ್ರುತಿಗಳ ।
ಪರಿಯನರಿತಾಚಾರ್ಯ ಪದವಿಗೆ ।
ಸರಿಬಹುದೆ ತಸ್ಕರದ ವಿದ್ಯವು ॥182॥

ಸಾರಿ ಕೊಲ್ಲಲು ಪಾಪವಿಲ್ಲೆಂದು । ಹೇಳುತಿಹ ಗಾದೆಯು ।
ಚಾರುತರ ಶತಿವಾಕ್ಯಕದು ಮುಂದು ।
ಸಾರಿ ಹೇಳಿದೆ ಮೂರುಬಾರಿಗೆ ।
ದೂರಲಾಗದು ಸುರರೆನುತ ನಾ ।
ಸಾರಿದೆನು ನೀ ಪೋಗು ಸುಮ್ಮನೆ ।
ದಾರಿಹಿಡಿ ಈ ಸಾರಿ ಬಿಟ್ಟೆನು ॥183॥

ಸೋಕುವುದೆ ಪರನಿಂದೆ ನಮಗಿನ್ನು । ಲೋಕತ್ರಯದೊಳಿಹ ।
ನೇಕದುಷ್ಟರ ಸದೆವ ಬಗೆಗಿನ್ನು ।
ಏಕವಚನವು ಏಕಮಾರ್ಗಣ ।
ಏಕಪತ್ನೀವ್ರತವು ಬಳಿಕಿ ।
ನ್ನೇಕ ನಿಶ್ಚಯಬುದ್ಧಿ ಕೇಳಿ ।
ಕ್ಷ್ವಾಕುವಂಶದ ಮಾತುಗಳ ಬಗೆ ॥184॥

**ಭಾಮಿನಿ**

ಎಂದು ಪೇಳ್ದಾ ರಾಘವೇಶ್ವರ ।
ನೊಂದು ಬಾಣವನೆಸೆಯಲಾ ಶರ ।
ಮಂದಮತಿಯನು ಕೊಂಡು ಪೋದುದು ಮಯಸುತೆಯ ಗಹಕೆ ॥
ಹೊಂದಿಸುತ ಶರಬಂದು ಮೂಡಿಗೆ ।
ಗಂದು ಸೇರಲು ಸುರರು ಜಯ ಜಯ ।
ವೆಂದು ಪೊಗಳಿದರಸ್ತ್ರದೀಕ್ಷಾಚಾರ್ಯ ರಘುವರನ ॥185॥

**ಕಂದ**

ಅನುಜನ ಶೋಕದಿ ರಾಘವ ।
ವನಜಾಸನಸುತನೊಡಗೊಂಡಾ ಮಾರುತಿಯಂ ॥
ಕ್ಷಣದೊಳ್ ಕರೆದಾತನ ಕೂ ।
ಡಿನಿತವರ್ ಬರುತಿರೆ ಕಂಡನು ಸಹಭವನಿರವಂ ॥186॥

**ಭಾಮಿನಿ**

ಕಮಲಭವನಸ್ತ್ರದಲಿ ಕುಂದಿದ ।
ವಿಮಲಕಾಯನನೀಕ್ಷಿಸುತಲಾ ।
ಸುಮನಸರು ಬೆರಗಾಗೆ ತಮ್ಮನ ನೆಗಹಿ ಮುದ್ದಿಸುತ ।
ಅಮಮ ಸಹಜನೆ ಅಗಲಿದೆಯ ಹಾ ।
ಕುಮತಿ ರಕ್ಕಸನಸ್ತ್ರಹತಿಯಲಿ ।
ಅಮಿತ ವಿಕ್ರಮ ಬಸವಳಿದೆಯಾ ಎನುತ ಚಿಂತಿಸಿದ ॥187॥

**ರಾಗ ಆನಂದ ಭೈರವಿ ರೂಪಕತಾಳ**

ಅಗ್ರಜನಾದೆನ್ನೊಳಗ । ತ್ಯುಗ್ರತೆ ಪುಟ್ಟಿದುದ್ಯಾತಕೆ ।
ಶೀಘ್ರದೊಳತಿಹಿತ ವಾಕ್ಯವ । ನುಗ್ರಹಿಸೆಲೊ ಅನುಜ ॥
ಆಗ್ರಹದಿಂದಾ ಖೂಳನ । ನಿಗ್ರಹಕೆನುತಲೆ ಪೋಗಿಯೆ ॥
ವಿಗ್ರಹದಲಿ ಮಡಿದೆಯ ಕದ । ನಾಗ್ರಣಿ ನೀನಿಂದು ॥188॥

ಯಾತಕೆ ಕಳುಹಿದೆ ಕಲಹಕೆ । ನೀತಿಯೆ ನಾಮಾಡಿದ ಪರಿ ।
ಮಾತಿಗೆ ಸಿಲುಕಿದೆನಲ್ಲದೆ । ಭೂತಳವಿರುವನಕ ॥
ಪ್ರೀತಿಯ ಚಿಕ್ಕವ್ವೆಗೆ ನಾ । ನೇತರ ಮಾತುಸಿರಲಿ ಹಾ ।
ಹೇತುಗನಾದೆನು ಲೋಕದಿ । ಸೀತೆಯ ಬಗೆಗಾಗಿ ॥189॥

ಘನವಾದಡವಿಯೊಳ್ಳೈದಿದೆ । ದಣಿಯುತ ಹಸಿತಷೆಯಿಂದಲಿ ।
ಇನಿತಾದರು ಮಮ ಸೇವೆಯ । ನನುಕರಿಸಿದೆಯಲ್ಲೆ ॥
ವನದೊಳಗಾದಿನ ಸುಮ್ಮನೆ । ುುನಿಸಿಲಿ ಪೇಳಿದ ರೀತಿಯ ।
ನೆಣಿಸುತ ಕೋಪದೊಳಿರುವೆಯೊ । ಅನುಜಾತನೆಪೇಳು ॥190॥

ಜನಕನ ತೆರದೊಳು ಪಾಲನೆ । ಮನದೊಳು ಸದ್ಗುರು ಭಾವನೆ ।
ವಿನಯದೊಳತಿಹಿತ ಸೇವನೆ । ಯನು ಗೈಯ್ಯುವ ರಚನೆ ।
ಧನುಜಕುಲಾಂತಕ ವೀರನೆ । ಘನಮಹಿಮನೆ ಸುಚರಿತ್ರನೆ ।
ಮನುಮಥ ರೂಪನೆ ಎನ್ನಯ । ತನುವಿಂಗತಿಹಿತನೆ ॥191॥

**ಭಾಮಿನಿ**

ಏನುಫಲ ರಾವಣನ ಕೊಂದಿ |
ನ್ನೇನುಫಲ ಸೀತೆಯನು ತಂದಿ |
ನ್ನೇನು ಫಲ ಸುಗ್ರೀವ ಮುಖ್ಯರ ಸಖ್ಯತನದಿಂದ ||
ಭಾನುವಂಶಾಂಭುಧಿಯ ತ್ರೈಶಿರ |
ಭಾನು ನೀನಳಿಯಲ್ಕೆ ಎನಗಿ |
ನ್ನೇನು ಗತಿ ಪರಬ್ರಹ್ಮಹಾ ಎಂದಳಲಿದನು ರಾಮ ||192||

**ಕಂದ**

ಅನುಜನ ನೆನೆನೆನೆದಳಲುವ |
ಮನುಮಥನಯ್ಯನ ಕಂಡಾ ಜಾಂಬವ ದೇವಂ |
ಘನವೇಗದೊಳೈತಂದಾ |
ವನಜಾಂಬಕನಡಿಗೆರಗುತ ಪೇಳಿದ ನಾಗಳ್ ||193||

**ರಾಗ ಮಧ್ಯಮಾವತಿ ಏಕತಾಳ**

ಕ್ಷೀರ ಸಾಗರವಾಸ ತ್ರೈಜಗಧೀಶ |
ಮಾರಮಣನೆ ಸದ್ವಿಲಾಸ ಮಹೇಶ ||
ನೀರಜನಯನ ನಿರ್ಗುಣಸತ್ಯಸದನ |
ಘೋರ ಭವಾಬ್ಧಿತಾರಣ ವಿಶ್ವಭರಣ ||194||

ಜೀಯ ಬಿನ್ನಪವಿದ ಲಾಲಿಸಿ ಕೇಳು |
ಮಾಯಾಮಾನುಷನಲ್ಲೊನೀನು ಕಪಾಳು ||
ಆಯಾಸಬಡಲೋಕೊ ಮನುಜರ ತೆರದಿ |
ವಾಯುಜಾತನ ಕೂಡೆ ಬೆಸಸು ನಿಮಿಷದಿ ||195||

ಸಂಜೀವನವ ತರಲಿಂದು ಲಕ್ಷ್ಮಣನು |
ಸಂಜೀವಿಸಲು ಬಹುದಲ್ಲೊ ಕೇಳ್ ನೀನು ||
ಕಂಜಾಸನನ ಸುತನೆಂದುದ ಕೇಳಿ |
ಮಂಜುಳರೂಪನಾ ಕ್ಷಣ ಧೈರ್ಯತಾಳಿ ||196||

**ರಾಗ ಭೈರವಿ ಝಂಪೆತಾಳ**

ಬಾರೊ ಮುಖ್ಯಪ್ರಾಣ | ಭೂರಿ ವಿಕ್ರಮ ಸುಗುಣ |
ಪಾರ ಮಹಿಮನೆ ಜಗ | ತ್ರಾಣ ಕಪಿವರನೆ ||

ಘೋರ ವಿಧಿಶಕ್ತಿಯಲಿ । ವೀರ ಲಕ್ಷ್ಮಣ ಬಳಲಿ ।
ಧಾರಿಣಿಯೊಳೊರಗಿಹನು । ದಾರ ಸಾಹಸನು ॥197॥

ಜೀವಿಸುವ ಬಗೆಗೆ ಸಂ । ಜೀವನವ ತಾ ಬೇಗ ।
ಭಾವಿಕನೆ ನಮ್ಮುಭಯ । ಜೀವ ಹಿತಕರನೆ ॥
ಈ ವಚನ ಬರಲಂದು । ಪಾವನಾತ್ಮಜ ಮುಂದು ।
ಭಾವಿಸುತ್ತಿರೆರಾಮ । ದೇವನೆಂದುದನು ॥198॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕೇಳುತಾ ಕ್ಷಣದೊಳಗೆ ಹರುಷವ ।
ತಾಳಿ ಪವಮಾನಿಯು ತತುಕ್ಷಣ ।
ನೀಲಮೇಘಶ್ಯಾಮನಂಘ್ರಿಗೆ । ಬೀಳುತೊಡನೆ ॥199॥

ಪೇಳಿದರೆ ಜಾಂಬವನು ಪರ್ವತ ।
ಕೀಳಲಾಗದು ನಾಲುಕೌಷಧ ।
ಮೂಲಸಹ ತಾರೆನೆ ಪ್ರಭಂಜನ । ಬಾಲನೆಗೆದ ॥200॥

ಹಾರಿದನು ಗಗನದೊಳು ಪರ್ವತ ।
ಕೇರಲಾಕ್ಷಣ ವನಚರರು ಬಳಿ ।
ಕಾರಿಸುತ ತಂದಿತ್ತ ರೌಷಧ । ಬೇರುಸಹಿತ ॥201॥

ಏರಿಸುತ ಬಾಲದೊಳು ಹೊರೆಯನು ।
ಧೀರನೈತರುತಿರಲಿಕಂಬರ ।
ದಾರಿಯಲಿ ರಾಮನನು ಸ್ಮರಿಸುತ । ವೀರಬರಲು ॥202॥

ಬರಬರುತ ಸಾಕೇತ ಪುರದಲಿ ।
ಭರತ ಶತ್ರುಘ್ನರನು ಕಾಣುತ ।
ಲಿರದೆ ಗ್ರಹಿಸಿದ ರಾಮಲಕ್ಷ್ಮಣ । ರಿರವನಂದು ॥203॥

ಅರರೆ ಚೋದಿಗವೆನುತಲಾಕ್ಷಣ ।
ಮರುತ ಸುತನರೆಘಳಿಗೆ ಯೋಚಿಸು ।
ತಿರಲು ಕೇಳ್ಳೈ ಕುಶನೆ ಮುಂದಣ । ಚರಿತೆಗಳನು ॥204॥

**ವಾರ್ಧಕ**

ಇತ್ತ ಸಾಕೇತಪುರದೊಳು ಭರತನಾ ದಿನದಿ ।
ಚಿತ್ತದಲಿ ಬೇಸರಿಸಿ ನಿದ್ರೆ ಗೈದಿರಲಾಗ ।
ಅತ್ಯುಗ್ರ ಕನಸ ಕಂಡಾ ಕ್ಷಣದೊಳೇಳುತ್ತೈತಂದಿತ್ತನೋಲಗವನು ॥

ಮತ್ತೆ ವಿಬುಧರ ಕರೆಸಿ ಪೇಳ್ದನಾ ಕೌತುಕುವ ।
ಸತ್ತ್ವನಿಧಿ ಲಕ್ಷ್ಮಣಂ ರಣರಂಗದೊಳ್ ಮಡಿದ ।
ವತ್ತಾಂತಗಳ ಕಂಡೆನಿದಕೆ ಪ್ರಾಯಶ್ಚಿತ್ತಮೇನೆಂದು ಬೆಸಗೊಳಲಿಕೆ ॥205॥

**ರಾಗ ನೀಲಾಂಬರಿ ಏಕತಾಳ**

ವಿಸ್ತರಿಸಿ ಪೇಳ್ವೆವಿಂದು । ಭರತರಾಯ । ಪ್ರಾಯ ।
ಶ್ಚಿತ್ತದ ವಿಧವನೆಲ್ಲ । ಭರತರಾಯ ॥
ಹೊತ್ತ ಕಳೆವುದೇತಕಿಂದು । ಭರತರಾಯ । ಶೋಕಿ ।
ಸುತ್ತಲಿರುವುದುಚಿತವಲ್ಲ । ಭರತರಾಯ ॥206॥

ಜಾತಕವ ನೋಡಲಿಂದು । ಭರತರಾಯ । ಧನು ।
ಜಾತರಿಂದುಪದ್ರವಿಹುದು । ಭರತರಾಯ ॥
ಖ್ಯಾತಿವಂತ ಬರಿಸೊ ಧನವ । ಭರತರಾಯ । ದಾನ ।
ವೀ ತತುಕ್ಷಣದೊಳು ನಡೆಸೊ । ಭರತರಾಯ ॥207॥

**ರಾಗ ಸಾಂಗತ್ಯ ರೂಪಕತಾಳ**

ಎಂದಾತನೊಳು ಪೇಳುತಂದು ಭೂಸುರರೆಲ್ಲ ।
ರೊಂದಾಗಿ ಮಿಂದು ಸಂತಸದಿ ॥
ಬಂದು ದಾನಗಳನೊಂದೊಂದಾಗಿ ಕೊಡುತಿರ ।
ಲೆಂದರು ದ್ವಿಜರು ತತ್ಕ್ಷಣದಿ ॥208॥

ಭೂದಾನವೆಮಗೆ ದುರ್ದಾನವಾ ವಿಪ್ರಗೆ ।
ಗೋಧಿಯಾ ರಾಮದೀಕ್ಷಿತಗೆ ॥
ಗೋದಾನವಿದು ನಮ್ಮ ಸೋದರನಿಗೆ ತಾಪ್ಯ ।
ಮಾಧವ ಪೌರಾಣಿಕರಿಗೆ ॥209॥

ಭಂಗಾರ ನಮ್ಮಯ ಸುತನಿಗೀವುದು ಯೋಗ್ಯ ।
ರಂಗ ಜೋಯಿಸಗೆ ಧಾನ್ಯಗಳು ॥
ಸಿಂಗಾವಧಾನಿಗೆ ನಾಳಿಕೇರಗಳು ಕಾ ।
ಳಿಂಗಪಂಡಿತಗೆ ತೇಜಿಗಳು ॥210॥

ಸಿದ್ಧಾಂತಿ ಸುಬ್ಬಾ ಪಂಡಿತರಿಗೀವುದು ಬಹು ।
ಶುದ್ಧವಾಗಿಹ ರತ್ನಾದಿಗಳ ॥
ಉದ್ಧವಾಚಾರ್ಯಗೆ ವಾಹನಂಗಳುನಮ್ಮ ।
ಗದ್ದೆ ಶಾಸ್ತ್ರಿಗಳಿಗಾನೆಗಳು ॥211॥

ಪುಟ್ಟೆಬೆಲ್ಲವ ಪುಟ್ಟ ಭಟ್ಟಗೀಯಲಿ ಒಳ್ಳೆ ।
ಪಟ್ಟೆದಾನವು ನಮಗಿರಲಿ ॥
ಬಟ್ಟೆದಾನವು ಕುಟ್ಟೀಭಟ್ಟಗೀಯುವದೆಂದು ।
ಶಿಷ್ಟರೀ ಪರಿಯಿಂದ ನುಡಿಯೆ ॥212॥

ತಿಲ ತೈಲ ಲವಣ ತ್ರಿಶೂಲ ಮುಂತಾಗಿಹ ।
ಬಲವಾದ ದುರ್ದಾನಾದಿಗಳ ॥
ಇಳೆಯಪಾಲಕನಿತ್ತು ಮನ್ನಿಸುತಿರಲಭ್ರ ।
ದೊಳಗೆ ಕಂಡನು ಪ್ರಕಾಶವನು ॥213॥

**ರಾಗ ಮಾರವಿ ಆದಿತಾಳ**

ನೋಡಿದ ಹೊಳಪನು ನಭದಿ । ಇದು । ಮೂಡಿದುತ್ಪಾತವ ಜವದಿ ।
ಗಾಢದಿ ಕೆಡಹುವೆನೆನುತ । ಶರ । ಬೇಡಿದನನುಜನೊಳಾತ ॥214॥

ಸದರದಿ ಬಾಣವ ಕೊಂಡು । ಶರ । ತುದಿಯ ಪಿಡಿಯುತಿರಲಂದು ॥
ಮುದದಿಂದಂಬರ ಮಾತಾ । ಆ । ದುದ ಕೇಳಿದನಾ ಭರತ ॥215॥

**ಭಾಮಿನಿ**

ಭರತ ತೊಡಬೇಡಕಟ ಬಾಣವ ।
ಪರಮ ಭಗವದ್ಭಕ್ತನಾ ರಘು ।
ವರನ ಸೇವಧುರಂಧರನು ಕಮನೀಯಗುಣಭರಿತ ॥
ಮರುತ ಸುತನಿವನೆನಲು ಮರಳಿದ ।
ಭರದಿ ಮಂದಿರದೆಡೆಯೊಳೈತರ ।
ಲಿರದೆ ಬಂದನು ರಾಮದೂತನು ವಾಯುವೇಗದಲಿ ॥216॥

**ವಾರ್ಧಕ**

ದುರುಳ ರಾವಣನಂದು ಮನಮರುಗುತಿರೆ ಗುಪ್ತ ।
ಚರರ ವಾಕ್ಯವ ಕೇಳುತರಿದು ಶೋಕವ ಕೊಡಹಿ ।
ಧುರದಿ ಮಡಿದವರನೆಬ್ಬಿಸಲು ಸಂಜೀವನವತರಲು ಪೋಗಿಹ ಹನುಮನ ॥
ಬರವನೀಕ್ಷಿಸುತಾತನಂ ಕೊಂದು ಬಾರೆನುತ ।
ಸುರವಿರೋಧಿಯು ಮಾಲ್ಯವಂತನಂ ಕಳುಹಲ್ಕೆ ।
ಶರಧಿಮಧ್ಯದಿ ಪವನಜಾತನಂ ತಾಗಿದಂ ಭರಿತ ರೌದ್ರಾವೇಶದಿ ॥217॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ನಿಲ್ಲು ನಿಲ್ಲೆಲೊ ವಾಯುತನುಜನೆ । ನೀ ।
ನೆಲ್ಲಿಗೆ ಪೋಗುವೆ ಖೂಳನೆ ॥
ಬಲ್ಲೆಯಾದರೆ ರಣಕುಶಲವ । ಎ ।
ನ್ನಲ್ಲಿ ತೋರಿಸು ಕೈಯ ಚಳಕವ ॥218॥

ಬಲ್ಲೆ ಬಲ್ಲೆನು ದಶಗಳನೆಂಬ । ದೈತ್ಯ ।
ನಲ್ಲಿದ್ದು ಹೊಟ್ಟೆ ಹೊರುವ ಶುಂಭ ॥
ಗೆಲ್ಲಲು ಬಂದೆಯ ತನ್ನನು । ನಿನ್ನ
ಹಲ್ಲ ಮುರಿದು ಚೆಲ್ಲ ಬಡಿವೆನು ॥219॥

ಸಾಕು ಸಾಕೆಲೊ ಕೋಡಗವು ನೀನೆ । ಬಲು ।
ಜೋಕೆಯಿಂ ಮಾತಾಡು ಸುಮ್ಮನೆ ॥
ನೀ ಕಪಿಚೇಷ್ಟೆಯ ತೋರಲು । ನಿನ್ನ ।
ಶಾಕಿನಿಬಳಗಕೀವೆನು ಕೇಳು ॥220॥

ಫಡ ಫಡ ಕೇಳ್ ನಿನ್ನ ಗರ್ವವ । ಲಂಕೆ ।
ಯೊಡೆಯನೊಳೊರೆಯಲು ಮತ್ತವ ॥
ಕೊಡುವ ಬೇಗದಿ ವೀರ ಕಂಕಣ । ಎನ್ನ ।
ತಡೆಯೆ ತೋರುವೆ ಯಮಪಟ್ಟಣ ॥221॥

ಘುಡು ಘುಡಿಸುತ ದೈತ್ಯನುರವನ್ನು । ಬಿಡ ।
ದೊಡನೆ ತಿವಿಯೆ ಮಾಲ್ಯವಂತನು ॥
ಸಿಡಿದು ಪಾತಾಳದೊಳುರುಳುತ್ತ । ಬೀಳ ।
ಲೊಡನೆ ಮುಷ್ಟಿಯೊಳಿಟ್ಟ ಹರಿಸುತ ॥222॥

**ಭಾಮಿನಿ**

ಖಳನ ಗೆಲಿದಾ ವಾಯುಪುತ್ರನು ।
ಹೊಳೆವ ಸಂಜೀವನವು ಸಹಿತಲೆ ।
ಘಳಿಲನೈತರೆ ಕಂಡು ದಭ್ರದಿ ಸೂರ್ಯನಿರುವಂತೆ ॥
ಜಲಜನಾಭನು ಕಂಡು ನಿಶಿಯೊಳು ।
ನಳಿನಸಖನುದಯಿಸಿದನೀತನ ।
ನಿಳಿಸುವೆನು ಧರೆಗೆನುತ ಕಾರ್ಮುಕ ನೆಗಹಲನುವಾದ ॥223॥

**ಕಂದ**

ಕಾಣುತಲದನಾ ವೈದ್ಯ ಸು ।
ಷೇಣನು ರಾಘವನಿದ್ದೆಡೆಗೈತಂದಾಗಳ್ ॥

ಏನಿದು ದೇವನೆ ನಿನ್ನನು ।
ಮಾನವು ಸರಿಯಲ್ಲೆನುತಲೆ ಪೇಳಿದ ಹದನಂ ॥224॥

**ರಾಗ ಅಠಾಣ ತ್ರಿವುಡೆತಾಳ**

ಲಾಲಿಸೈ ರಘುನಾಥನೆ । ಭೂಲೋಲಶ್ರೀ ।
ನೀಲಮೇಘಶ್ಯಾಮನೆ ॥
ಬಾಲೆ ಸೀತಾಧವನೆದಶರಥ ।
ಬಾಲ ನಿರ್ಜರಪಾಲ ಸುಗುಣ ವಿ ।
ಶಾಲ ಮನುಮುನಿಜಾಲವಂದಿತ ।
ಕಾಲಭಯಹರ ಮೂಲರೂಪಿಯೆ ॥225॥

ನಳಿನ ಬಾಂಧವ ದೇವನೆ । ಮೂಡಿದನೆಂದು ।
ತಿಳಿದೀ ಮನದ ಭಾವನೆ ।
ಘಳಿಲ ನೆಸೆಯುವೆನೆನುತ ನೀಕರ ।
ತಳದಿ ಚಾಪವ ನೆಗಹಲ್ಯಾತಕೆ ।
ತಿಳಿದು ನೋಡದೊಪವನಸುತ ನಿ ।
ರ್ಮಲಚರಿತ ಖಳಕುಲವಿಲಯನನು ॥226॥

ಮಾರ ಸನ್ನಿಭತೇಜನೆ । ಧಾರಣಿಪತಿ ।
ಘೋರದನುಜ ಹಾರನೆ ॥
ವೀರ ಮಾರುತಿ ಭೂರಿವೇಗದಿ ।
ಸಾರು ತೈತಹನಭ್ರಮಾರ್ಗದಿ ।
ಚಾರುತರ ಸಂಜೀವನದಹೊರೆ ।
ಮೀರುತಿದೆ ಸೂರಿಯನ ಸುಪ್ರಭೆ ॥227॥

ಇಂತು ಸುಷೇಣನೆಂದ । ಮಾತನುಕೇಳಿ ।
ಕಂತುಜನಕ ತಾನೊಂದ ॥
ಚಿಂತಿಸದೆ ತಪ್ಪಾಯ್ತೆನುತಮತಿ ।
ವಂತ ಪೇಳ್ತಿರೆ ಸಂತಸದಿಬಲ ।
ವಂತನಾ ಹನುಮಂತ ಸೀತಾ ।
ಕಾಂತನಂಘ್ರಿಗೆ ನಿಂತು ಮಣಿದನು ॥228॥

**ರಾಗ ಕೇದಾರಗೌಳ ಝಂಪೆತಾಳ**

ಒಡೆಯ ನೀ ಲಾಲಿಸೆನುತ । ಕೈಮುಗಿದು ।
ನಡೆದಿರುವುದೆಲ್ಲ ಚರಿತ ॥

ಕಡೆಗೆ ಪೇಳ್ವೆನು ರಘುಜನು । ವಾಯುಜನ ।
ತಡವರಿಸುತಿಂತೆಂದನು ॥229॥

ಸ್ವಾಮಿಕಾರ್ಯಧುರಂಧರ । ಛಲದಿ ನಿ ।
ಸ್ಸೀಮ ಬಲವಂತ ಚತುರ ॥
ಗೋಮಿನಿಯೊಳಿಹರೆ ನಿನ್ನ । ಪೋಲುವರು ।
ನೀ ಮಹಾತ್ಮಕನು ಮುನ್ನ ॥230॥

ಇತ್ತ ದಶರಥ ನಂದನ । ನುಡಿಯುತಿರ ।
ಲತ್ತ ಕಪಿವರ ಸುಷೇಣ ॥
ಚಿತ್ತದಲಿ ರಘುರಾಮನ । ಸ್ಮರಣೆಗೈ ।
ದಿತ್ತ ಬಂದನು ತತ್ ಕ್ಷಣ ॥231॥

ಪರಮ ಸಂಜೀವನವನು । ಲಕ್ಷ್ಮಣ ನಿ ।
ಗ◌ಿರೆಯೆ ಚೇತರಿಸುತವನು ॥
ಕರದಿ ಧನುಶರಗಳಾಂತೇ । ಎದ್ದನೈ ।
ಸುರಕಲ್ಪತರುವಿನಂತೆ ॥232॥

ರಣದೊಳಗೆ ಮಲಗಿರುವರ । ವರ ವಿಭೀ ।
ಷಣ ಕಮಲಮಿತ್ರಕುವರ ॥
ಇನಿಬರೇಳಲ್ಕೆ ಸುರರು । ಪೂಮಳೆಯ ।
ತ್ವರಿತದಿಂ ಸುರಿಸಲವರು  ॥233॥

ಇನನು ತಾನಪರಾಬ್ಧಿಗೆ । ತೆರಳಲ್ಕೆ ।
ಚಿನುಮಯಾತ್ಮಕ ಸಹಜಗೆ ॥
ಮನದಣಿಯೆ ಬಿಗಿದಪ್ಪುತ । ಶಿಬಿರದೊಳ ।
ಗನುನಯದಿ ತೆರಳಲಿತ್ತ ॥234॥

ವೀರ ವಾನರ ಪತಿಗಳು । ತೋಷದಿಂ ।
ದಾ ರಾಘವನಿಗೆರಗಲು ॥
ಮಾರಮಣನಾಜ್ಞೆಯಿಂದ । ಬೀಡಿಕೆಯ ।
ಸೇರಿಸುಖಪಡೆದರೆಂದ ॥235॥

**ಭಾಮಿನಿ**

ಇತ್ತ ಕೇಳ್ಳೈ ಕುಶನೆ ದಶಶಿರ ।
ಚಿತ್ತದಲಿ ಕಡುನೊಂದು ದುಗುಡದಿ ।
ಮತ್ತಕಾಶಿನಿ ಮಯಸುತೆಯ ಭವನದೊಳು ಮಲಗಿರಲು ॥

ಅತ್ತ ವಾನರರಾರ್ಭಟೆಯು ಕೇ ।
ಳುತ್ತ ಮನದಲಿ ಗಹಿಸಿದನು ಸೌ ।
ಮಿತ್ರಿ ರಣದಲಿ ಜೀವಿಸಿದ ಸಂಜೀವನದೊಳೆನುತ ॥236॥

**ಕಂದ**

ಧುರದೊಳು ಮಡಿದಿಹ ಲಕ್ಷ್ಮಣ ।
ನಿರವಂ ಚಾರಕ ನಿಂ ತಿಳಿದಾ ದಶವದನಂ ॥
ಕರಕರಿಸುತಲೆದ್ದಾ ಕ್ಷಣ ।
ಮರುಗಿದ ತನ್ನಪಜಯದಿರಗಳ ನೆನೆದಾಗಳ್ ॥237॥

**ರಾಗ ದೇಶಿ ಅಷ್ಟತಾಳ**

ಹರ ಹರ ಎನಗಿಂಥ ಭವಣೆಯು । ಬಂತೆ ।
ಒರೆಯಲಿನ್ಯಾರಿಗೀ ವಿಧಿಯು ॥
ಧುರಪರಾಕ್ರಮಿ ರಾವಣನೆಂದು । ಹೆಸ ।
ರಿರದೆ ಕೆಟ್ಟಿತು ಸೀತೆಗಾಗಿಂದು ॥238॥

ಮಾವನ ಮಾತಿಗೆ ಜರೆದೆನು । ಎನ್ನ ।
ಭಾವೆಯಳೆಂದುದ ಮರೆತೆನು ॥
ಆ ವಿಭೀಷಣನೆಂದ ನೀತಿಯ । ಕೇಳ ।
ದೀ ವಿರೋಧದಿ ಕೆಟ್ಟೆ ಖ್ಯಾತಿಯ ॥239॥

ಮೂರು ಬಾರಿಯೊಳಾ ಮನುಜಪತಿ । ಸಾರಿ ।
ಸಾರಿ ಹೇಳಿದನು ಎನಗೆ ನೀತಿ ॥
ಮೀರಿ ಕಳದೆನಹಂಕಾರದಿ । ಇನ್ನು ।
ಯಾರಿಗೆ ಹೇಳ್ವೆ ಮುಂದಣ ವಿಧಿ ॥240॥

ಅನ್ಯರಿಂದಪಜಯವಾಗಲು । ನಾವು ।
ಸಂನ್ಯಾಸಿಯಾಗುವುದದು ಮೇಲು ॥
ಇನ್ನ್ಯಾವ ಪರಿಯ ನಾ ಕಾಣೆನು । ಎನ್ನ ।
ಅನ್ಯಾಯ ನಡತೆಯ ಮಾಣೆನು ॥241॥

ಇಂತು ಚಿಂತಿಸುತ ದಾನವನಂದು । ಖತಿ ।
ಯಾಂತು ಬೇರೊಂದುಪಾಯವನಂದು ॥
ಸಂತಸದಿಂದ ಯೋಚಿಸುತಾಗ । ಮತಿ ।
ವಂತ ರಕ್ಕಸನೆದ್ದನತಿ ಬೇಗ ॥242॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅರರೆ ತಪ್ಪಾಯ್ತೇನುತ ಚಿಂತೆಯ |
ಮರೆತು ಖಳನತ್ಯಧಿಕ ರೋಷದಿ |
ಭರದಿ ಸಭೆಗೈತಂದು ಮಾರಣ | ದಿರವ ನೆನೆದ ||243||

ಕೋಟಿಯಜ್ಞವನೆಸಗಿ ಮಗಮು |
ಜ್ಜೂಟನನು ಮೆಚ್ಚಿಸುತ ನಿಮಿಷದಿ |
ಕೋಟಿಸಂಖ್ಯೆಯೊಳಸುರ ಸೈನ್ಯದ | ಕೂಟಸಹಿತ ||244||

ಮಡಿದ ಧೂಮ್ರಾಕ್ಷಾದಿ ದೈತ್ಯರ |
ಗಡಣ ನೂರ್ಮಡಿಯಧಿಕ ಕುಂಡದೊ |
ಳೊಡನೆ ಎಬ್ಬಿಸುವೆನು ಮಹಾಧ್ವರ | ದಢದೊಳೆಸಗಿ ||245||

ಅಳವಿಯೊಳು ಜಯಲಲನೆಯೊಳ ಪಿಡಿ |
ದೆಳೆವೆ ನಿಶ್ಚಯವಿನ್ನು ಸುಮ್ಮನೆ |
ಅಳಲಿ ಮಾಡುವುದೇನೆನುತ ಖಳ | ತಿಲಕನಂದು ||246||

**ರಾಗ ಭೈರವಿ ಏಕತಾಳ**

ಧನಪನ ವೈಮಾನದೊಳು | ತಾ |
ವಿನಯದಿ ಕುಳಿತುಕೊಂಡಿರಲು ||
ದನುಜಗಡಣವೈತರಲು | ನಿಕುಂ |
ಭಿಲಪುರಕಾಗಿ ಮುಂಬರಲು ||247||

ಅಟ್ಟಹಾಸದಿ ನಿಕುಂಭಿಲೆಗೆ | ಬರೆ |
ದುಷ್ಟರಕ್ಕಸರಾರ್ಭಟಗೆ ||
ತಟ್ಟನೆ ಸುರರಬ್ಬರದೊಳು | ಕಂ |
ಗೆಟ್ಟೋಡಿತು ಭೀತಿಯೊಳು ||248||

ಕುಲದೇವತೆಯಳ ಬಳಿಗೆ | ಬಂ |
ದೊಲವಿಂ ಪೂಜಿಸುತೆನಗೆ ||
ಗೆಲುವಂಗವ ಮಾಡೆನುತ | ಖಳ |
ಬೆಳಗಿದ ನಾರತಿ ನಗುತ ||249||

**ರಾಗ ನಾಮ ನಾರಾಯಣಿ ತ್ರಿವುಡೆತಾಳ**

ಮಂಗಳ ಮಹಿಷಾಸುರಮರ್ದಿನಿ
ಮಂಗಳ ತ್ರೈಜಗಸನ್ಮೋಹಿನಿ |

ಮಂಗಳ ಶ್ರೀಕಾಂತೆ । ಗುಣವಂತೆ ॥
ಮಂಗಳ ಗುಣವಂತೆಗೆಂದೆನುತಲೆ ।
ಮಂಗಳಾರತಿಯ ಬೆಳಗಿದನು ॥250॥

ಜಯ ಜಯ ಭುವನೇಶ್ವರಿ ದೇವಿಗೆ ।
ಭಯ ಹರಿ ಸರ್ವೇಶನ ರಾಣಿಗೆ ।
ಜಯತು ಶರ್ವಾಣಿ । ಫಣಿವೇಣಿ ॥
ಜಯ ಜಯ ಫಣಿವೇಣಿಗೆಂದೆನುತಲಿ ।
ಮಣಿಮಯ ದಾರತಿಯ ಬೆಳಗಿದನು ॥251॥

ಸುರವರ ಮನುಮುನಿಜನ ಪೂಜಿತೆ ।
ಸುರಚಿರ ಸನ್ಮಣಿಗಣಭೂಷಿತೆ ।
ದುರಿತ ವಿನಾಶೆ । ಹರ ಪ್ರೀತೆ ॥
ಹರುಷದಿ ಹರಪ್ರೀತೆಗೆಂದೆನುತಲಿ ।
ಮರಕತದಾರತಿಯ ಬೆಳಗಿದನು ॥252॥

**ರಾಗ ಅಹೇರಿ ಏಕತಾಳ**

ಮಂಗಳಂ ಮಹಿಷಾಸುರ ಮರ್ದಿನಿಗೆ ।
ಮಂಗಳಂ ತ್ರೈಜಗನ್ಮೋಹಿನಿಗೆ ॥
ಮಂಗಳಂ ಸ್ವೇರಶ್ವರನರ್ಧಾಂಗಿಗೆ । ಜಯ ।
ಮಂಗಳಾರತಿಯ ಬೆಳಗಿರೆ ॥ ಶೋಭಾನೆ ॥253॥

**ರಾಗ ಸಾಂಗತ್ಯ ರೂಪಕತಾಳ**

ಕುಲದೇವಿಯೊಲುಮೆಯ ಪಡೆದು ತಾ ವಿತಳಕ್ಕೆ ।
ಬಿಲಮುಖದಿಂ ಖಳರೊಡನೆ ॥
ಬಲವಿರೋಧಿಯ ವೈರಿ ರಚಿಸಿರ್ಪ ಯಜ್ಞದ ।
ಸ್ಥಳಕ್ಕೆ ತಾ ದುರುಳ ನೈತಂದ ॥254॥

ಅರಿಗಳ್ಳೆತರದಂತೆ ದ್ವಾರದೊಳರ್ಬುದ ।
ನಿರುತಿ ಭೇತಾಳ ಜಟ್ಟಿಗಳ ॥
ಇರಿಸುತ್ತ ಕುಲಪುರೋಹಿತರಿಂದ ಯಜ್ಞವ ।
ವಿರಚಿಸಲನುಗೆಯ್ದು ಖಳನು ॥255॥

ಕರಿಚರ್ಮದುಡಿಗೆ ಮಾನುಷ ರಕ್ತ ಲೇಪನ ।
ಕರುಳಿನ ಯಜ್ಞಸೂತ್ರಗಳ ॥

ಕರದೊಳು ನರದ ಪವಿತ್ರವು ಕೊರಳೊಳು ।
ಧರಿಸಿದ ನೆಣದ ದಂಡೆಗಳ ॥256॥

ಬೇಡುತ್ತ ಹವ್ಯವಾಹನನ ಸಂತೋಷದಿ ।
ಜೋಡಿಸಿ ಕರಗಳೆಲ್ಲವನು ॥
ನೀಡಿ ಬ್ರಹ್ಮನ ಮಹೇಶ್ವರನ ಸಂಸ್ತುತಿಸುತ್ತಾ ।
ಮಾಡಿ ಭಾರ್ಗವಗೆರಗಿದನು ॥257॥

ಇತ್ತ ಕರ್ಬುರ ಮಹೀಸುರರೊಡಗೂಡುತ ।
ಮತ್ತಥರ್ವಣ ಮಂತ್ರಗಳಲಿ ॥
ಚಿತ್ತ ಶುದ್ಧದಿ ಮಹದಭಿಚಾರ ಕತ್ಯವ ।
ವಿಸ್ತರಿಸಿದನು ಸಾಮದಲಿ ॥258॥

ದುರುಳ ರಾವಣ ತನ್ನ ಶಿರವ ನೊಂದೊಂದಾಗಿ ।
ತರಿದು ಭಾರ್ಗವಮಂತ್ರೋಕ್ತದಲಿ ॥
ಚರು ತಿಲಾಜ್ಯವು ಮಾಂಸದೊಡನೆಯಾಹುತಿಗೊಡ ।
ಲರಳಿದನಗ್ನಿ ತೇಜದಲಿ ॥259॥

ತುಳುಕಿತಂಬುಧಿಯು ದುರ್ಗಂಧ ಕಂಡೆಡೆಯೊಳು ।
ಚಲಿಸದೋಡೀತು ಸುರವಂದ ॥
ಇಳೆಯು ಬಾಯ್ಬಿಡುತಿರೆ ಸುಳಿಗಾಳಿ ಮುಸುಕಲಾ ।
ನಳಿನಾಕ್ಷ ಶರಣನೊಳೆಂದ ॥260॥

ಏನಿದದ್ಭುತ ಧಾರಿಣಿಯ ಕಡೆಗಾಲವೊ ।
ದಾನವೇಂದ್ರನ ಕಡು ಮುನಿಸೊ ॥
ನೀನು ಬಲ್ಲಿದನಿದನುಸಿರೆನೆ ಶರಣನು ।
ಮಾನವಾಧಿಪಗೆಂದನಾಗ ॥261॥

**ರಾಗ ಘಂಟಾರವ ಅಷ್ಟತಾಳ**

ಭೀಮ ಬಲಾನ್ವಿತ ಶ್ಯಾಮಲ ನಿಭಗಾತ್ರ । ರಾಮಚಂದ್ರ । ಗುಣ ।
ಧಾಯ ನಿಸ್ಸೀಮ ಚಿತ್ತಯಿಸು ಬಿನ್ನಪವನ್ನು । ರಾಮಚಂದ್ರ ॥262॥

ದಿತಿಜ ನಿಂದಿನಲಿ ಭಾರ್ಗವನುಪದೇಶದಿ । ರಾಮಚಂದ್ರ ॥ ಭೂತ ।
ತತಿಗಳಿಂದೊಡಗೂಡಿ ಮಾರಣಾಧ್ವರ ಮಾಳ್ಪ । ರಾಮಚಂದ್ರ ॥263॥

ವಿತಳದೊಳೆಸಗುವ ನಭಿಚಾರ ಕತ್ಯವ । ರಾಮಚಂದ್ರ ॥ ಮನು ।
ಮಥವೈರಿಗಸದಳವಾದ ಮಾರಣ ಮಾಳ್ಪ । ರಾಮಚಂದ್ರ ॥264॥

ಪುಟ್ಟುತಿಹುದು ದೈತ್ಯಕೋಟಿ ಕುಂಡದೊಳಿಂದು । ರಾಮಚಂದ್ರ ॥ ಜಗ ।
ಜಟ್ಟಿ ರಾವಣನ ನೂರ್ಮಡಿಯ ವಿಕ್ರಮಿಗಳು । ರಾಮಚಂದ್ರ ॥265॥

ಹಿಂದೆ ಶಕ್ರಾರಿ ಗೆಯ್ದಿಹ ಯಜ್ಞ ಕುಂಡದಿ । ರಾಮಚಂದ್ರ ॥ ಮುದ ॥
ದಿಂದಥರ್ವಣ ವಿಧಿಯಿಂದ ಕತ್ಯವ ಮಾಳ್ಪ । ರಾಮಚಂದ್ರ ॥266॥

ಕಳುಹಿಸು ವೀರ ವಾನರ ಪ್ರಮುಖಾದ್ಯರ । ರಾಮಚಂದ್ರ ॥ ನೀಲ ।
ನಳ ವಾಯುಪುತ್ರನಂಗದ ಮುಖ್ಯ ಸುಭಟರ । ರಾಮಚಂದ್ರ ॥267॥

**ಭಾಮಿನಿ**

ಖಳರು ಮಾಯವಿಗಳು ತಂತ್ರದಿ ।
ಗೆಲುವುಪಾಯಗಳಿಂದ ನಮ್ಮೊಳು ।
ಹಳಚಿದರು ಬಳಲಿಸಿದರೀ ಕಪಿಕಟಕವೆಲ್ಲವನು ॥
ಕೊಳಗುಳದಿ ನೊಂದಿರುವರಿವರೊಳು ।
ತಳುವದೀ ದುರ್ಘಟದ ಕಾರ್ಯವು ।
ಘಳಿಲನುಸಿರಲಿಕೇನ ನೆಂಬರೊ ಲೋಕದೊಳು ತನಗೆ ॥268॥

**ರಾಗ ಭೈರವಿ ಏಕತಾಳ**

ರಾಘವ ನಿಂತೆಂದುದನು । ಕೇ । ಳ್ದಾಗಲೆ ಮರುತಾತ್ಮಜನು ॥
ಬೇಗದಿ ರಾಮನ ಪದಕೆ । ಶಿರ । ಬಾಗಿಸಿ ಪೊರಟನು ಕ್ಷಣಕೆ ॥269॥

ಮುಕ್ಕುವನ್ನೈ ತ್ರೈಭುವನ । ತರಿ । ದಿಕ್ಕುವೆ ಕಾಲ ಭೈರವನ ॥
ಪೊಕ್ಕು ಮುರಿವೆ ತರಣಿಜನ । ಎಂ । ದೊಕ್ಕಣಿಸಿತು ಕಪಿಗಡಣ ॥270॥

ಭರದಿಂ ಕುಂಭಿಣಿಗಿಳಿದು । ದನು । ಜರಕೇಳಿದರತಿ ಮುಳಿದು ॥
ತ್ವರಿತದಿ ನೀಲಾಂಗದರು । ಸಹ । ಅರುಸುತ ಬರೆ ಕಪಿವರರು ॥271॥

ಕಾಣದೆ ದಶಕಂಠನನು । ಪಾವ । ಮಾನಿಯು ಬಿಲದ್ವಾರವನು ॥
ತಾ ನೋಡುತಲದ ತಿವಿದ । ಬಡ । ದಾನವರನು ಕೆಡಹಾಯ್ದ ॥272॥

ಹಾರಿದರವರು ವಿತಳಕೆ । ಬಿಡ । ದಾರುಭಟಿಸುತಿಹ ಭರಕೆ ॥
ಧಾರಿಣಿಯದುರಲಿಕಾಗ । ಧುರ । ದೀರರ ಸದೆದರು ಬೇಗ ॥273॥

ಖಳ ಪ್ರಮುಖಾದ್ಯರ ತರಿದು । ಖತಿ । ಯಲಿ ಕಾದುವರನು ಮುರಿದು ॥
ಛಲದಂಕರ ಶಿರವರಿದು । ಬಲಿ । ಗಳನರ್ಪಿಸಿದರು ಮುಳಿದು ॥274॥

ಕುಂಡದೊಳುದ್ಭವಿಸುವರ | ಮುಂ | ಕೊಂಡು ತಿವಿದು ಮಿಕ್ಕವರ ||
ದಿಂಡು ದರಿದರಾಕ್ಷಣದಿ | ಖಳ | ತಂಡವನಿರಿದರುತ್ಸಹದಿ ||275||

ಹಿತದಿಂ ಭಗುಜನತಾಗಿ | ಪಶು | ಪತಿಯನು ಕಾಣುತಲೆರಗಿ ||
ಖತಿಯಿಂ ಪೂರ್ಣಾಹುತಿಯ | ಕೆಡಿ | ಸುತಲೊದೆದರು ಖಳಪತಿಯ ||276||

ಮೌನದೊಳಿರೆ ಖಳರಾಯ | ದು | ಮ್ಮಾನದಿ ಮುಂದಿನುಪಾಯ ||
ಕಾಣದೆ ಕಪಿವರರಿರಲು | ಕಡು | ಜಾಣನಂಗದ ಕಿನಿಸಿನೊಳು ||277||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಚಂಡ ಬಲನಂಗದನು ತಾ ಖತಿ |
ಗೊಂಡು ಮಂಡೋದರಿಯ ಸೀರೆಯ |
ದಿಂಡರಂದದೊಳೆಳೆದನವನು | ದ್ದಂಡತನದಿ ||278||

ಕಂಡು ರಾಕ್ಷಸಬಲ ಬೆದರೆ ಮುಂ |
ಕೊಂಡು ಧಾತ್ರಿಯೊಳೆಳೆದು ಕೆಡಹುತ |
ಮಂಡೆಯನು ಪಿಡಿದೊಯ್ದನಾಕೆಯ | ಗಂಡನಿದಿರು ||279||

ನೋಡಿ ಖಳ ಮಾತಾಡದಿರೆ ಸತಿ |
ರೂಢಿಯೊಳು ಬಿದ್ಧಧಿಕ ಶೋಕವ |
ಮಾಡಿದಳು ಹಾಹಾರವದಿಮಿಡು | ಕಾಡುತೊಡನೆ ||280||

**ರಾಗ ಆನಂದಭೈರವಿ ಏಕತಾಳ**

ಹರನೆ ಎನ್ನ ರಮಣನಿದಿರು |
ದುರುಳ ಕಪಿಗಳೆಳೆಯುತಿಹರು |
ಹರುಷದಿ | ಬಲು | ಸರಸದಿ ||281||

ಪರರ ಸತಿಯ ನೆಳೆದು ತಂದ |
ಪರಿಯೊಳೆನ್ನ ತವಕದಿಂದ |
ಎಳೆವರು | ಕಂಡು | ಮುಳಿವರು ||282||

ಮೂರು ಲೋಕಕಗ್ರಗಣ್ಯ |
ಚಾರು ದನುಜಕುಲವರೇಣ್ಯ |
ರಕ್ಷಿಸು | ಎನ್ನ | ನೀಕ್ಷಿಸು ||283||

ಮುಯ್ಯಿಗೆ ಮುಯ್ಯಿ ತೀರಿತೇ |
ನಯ್ಯ ನಿನ್ನ ಮುಂದೀವೊತ್ತೇ |
ನಾಯಿತು | ನೋಡು | ನೀನಿಂತು ||284||

ಕರ್ಮಫಲವು ಸಿಕ್ಕಿತೇನ್ನೈ ।
ಶರ್ಮಿಯಾದಡೀಗ ಎನ್ನ ।
ಮಾನವ । ಕಾಯೋ । ದಾನವ ॥285॥

**ಭಾಮಿನಿ**

ಪ್ರಳಯ ಭೈರವನಂತೆ ಕ್ರೋಧವ ।
ತಳೆಯ ರಾವಣ ಕ್ಷಣದಿ ಕರದೊಳು ।
ಹೊಳೆವ ಹಿಮಕರಹಾಸವನು ಸೆಳೆದಧಿಕ ರೋಷದಲಿ ॥
ಝಳಪಿಸುತ ವಾಲಿಜನನಿಕ್ಕಡಿ ।
ಗಳ ರಚಿಸಿ ಹನುಮಂತ ದೇವನ ।
ಬಳಿವಿಡಿದು ತಿವಿಯಲ್ಕೆ ಕೋಪದೊಳೆಂದ ವಾಯುಜನು ॥286॥

**ರಾಗ ಕಲ್ಯಾಣಿ ಏಕತಾಳ**

ಬಿಡೋ ಬಿಡೋ ನಿನ್ನಯ ರಣಗೌರವ ।
ಸುಡು ಕೇಳಲೊ ದುರ್ಬುದ್ಧಿಯೆ ॥
ಬಡ ದಾನವರಂದದಿ ಮಾರಣವನು ।
ನಡೆಸಲು ನೀನಯ್ತಂದಿಯೆ ॥287॥

ಅಲ್ಲದ ಕತ್ಯವನೆಸಗುವರೇನ್ನೈ ।
ಕಳ್ಳರಂದದಿ ನೀನಿಂದಿಗೆ ॥
ಖುಲ್ಲನೆ ನಿನ್ನ ವಿಚಾರವನೆಲ್ಲವ ।
ಬಲ್ಲೆನು ಕೇಳ್ ರಕ್ಕಸಗೂಗೆ ॥288॥

ಏನ್ನೈ ಫಡ ದಾನವನೇ ನಿನ್ನಯ ।
ಜಾಣತನಗಳಿಂದೇನಾಯ್ತು ॥
ಕೇಣವಿಲ್ಲದೀ ಹೀನ ಕತ್ಯಂಗಳ ।
ನೀನೆಸಗೆಲು ಗುಣ ವೇನ್ಬಂತು ॥289॥

ಮಾನವಂತರೆಸಗುವರೇನೀ ತೆರ ।
ಹೀನತರದ ಬಲು ಕತ್ಯಗಳ ॥
ನೀನೆಸಗಿದ ಮೇಲ್ ಲೋಕದಿ ಮುಂದಿ ।
ನ್ನೇನೆಂಬರು ಪೇಳೆಲೊ ಖೂಳ ॥290॥

**ಭಾಮಿನಿ**

ವೀರ ವಾಯುಜನೆಂದ ಮಾತನು ।
ದಾರ ದಶಶಿರ ಕೇಳಿ ಮನದಿವಿ ।

ಚಾರಿಸುತಲಹುದೆಂದು ಶಿರವಲ್ಲಾಡಿಸುತ ಜವದಿ ||
ಚಾರು ಪುಷ್ಪಕವೇರಿ ತವಕದೊ |
ಳಾರುಭಟಿಸುತಲೈದಿ ಸತಿಸಹ |
ಭೂರಿಬಲವೈತಂದು ಹೊಕ್ಕನು ತನ್ನ ಮಂದಿರವ ||291||

**ರಾಗ ನೀಲಾಂಬರಿ ರೂಪಕತಾಳ**

ಖೂಳದಾನವ ಪೋಗಲತಿ ದುಃಖದೊಳು ಕಪಿ |
ಬಾಲನ ತೆಗೆದು ಮುದ್ದಿಸುತ ವಾಯುಜನು ||
ಬಾಲದೊಳವನ ಇಕ್ಕಡಿಗಳ ಬಂಧಿಸಿ |
ನೀಲಾದ್ಯರೊಡಗೂಡಿ ಬರುತಿರ್ದನಂದು ||292||

ಜಡಜನಾಭನೊಳೇನನೆಂಬೆನೊ ಹಾಯೆಂದು |
ಕಡುಗಲಿ ವಾಯು ಸಂಭವನು ಚಿಂತಿಸುತ ||
ಕಡಿದ ಇಕ್ಕಡಿಗಳ ದುಃಖಿಸುತಲೆ ರಾಮು |
ನಡಿಯೊಳಿಟ್ಟಾಗ ಬಿನ್ನಯ್ಸಿದನೊಡನೆ ||293||

ವೀರ ಲಾಲಿಸು ಘೋರ ಮಾರಣಯಜ್ಞವು |
ಸೂರೆಹೋದುದು ಇವನಾರುಭಟೆಯಲಿ ||
ಚಾರು ಕೋಮಲ ಸುಕುಮಾರ ನಂಗದನನ್ನು |
ವೀರ ರಾವಣ ನಿಂದುಹಾಸದಿಂ ತರಿದ ||294||

ಎಂದು ಮಾರುತಿ ಪೇಳಲಂದು ದುಃಖಿಸಿ ರಘು |
ನಂದನನುಸಿರಿದ ವಾಯುಜನೊಡನೆ ||
ಕಂದನೀತನ ಚಂದದಿಂದ ರಕ್ಷಿಪುದೆಂದು |
ಇಂದ್ರಜನಂದೆನ್ನೊಳಿತ್ತುದನರಿಯಾ ||295||

ನಗೆಗೇಡ ಮಾಡಿದೆ ಜಗದೊಳೀತನನಿಂದು |
ಹಗೆಯ ಕೈಯೊಳಗಿತ್ತ ಸುಗುಣ ನೀನಲ್ಲೆ ||
ಮಿಗುವರಿಯಿತು ಕಾರ್ಯವೆನೆ ಬ್ರಹ್ಮಸುತನುಕೈ |
ಮುಗಿದು ಬಿನ್ನಯಿಸಿದನಾಗ ರಾಘವಗೆ ||296||

**ಭಾಮಿನಿ**

ಶರಣನಾ ಪವಮಾನಿ ನಿಮ್ಮಯ |
ಚರಣ ಸೇವಕನಾಗಿರಲು ಭಯ |
ಹರನೆ ನೀನಾತನೊಳು ದೋಷವನೆಣಿಸಲಳವಲ್ಲ ||
ಪರಮ ಸಂಜೀವನವಿಹುದು ರಘು |

ವರನೆ ನಮ್ಮೀ ವೈದ್ಯನಾಥನೊ ।
ಳರುಹುವುದು ಭವರೋಗ ವೈದ್ಯಯೆನುತ್ತ ಕೈಮುಗಿದ ॥297॥

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಚಿತ್ತಜನ ಪಿತನಾಗ ತಾ ಮುದ ।
ವೆತ್ತು ಕರೆದಾ ಕಲಿಸುಷೇಣನೊ ।
ಳಿತ್ತ ನಂಗದನಿಕ್ಕಡಿಯ ಪಿಡಿ ।
ದೆತ್ತುತಾ ಕಪಿವರನೊಳು । ರಾಘವೇಂದ್ರ ॥298॥

ಭರದಿ ಸಂಜೀವನದೊಳಾ ಕಪಿ ।
ವರನು ತಂದೆರೆಯಲ್ಕೆ ಜೀವಿಸಿ ।
ತರಳ ಚೇತರಿಸುತ್ತಲೆದ್ದನು ।
ಭರಿತ ರೌದ್ರವೇಶದಿ । ಧುರವನೆಸಗೆ ॥299॥

ಕಂಡು ರಾಘವನಂಘ್ರಿಗಳಿಗು ।
ದ್ದಂಡಬಲನೆರಗಲ್ಕೆ ತೋಷದಿ ।
ಪುಂಡರೀಕಾಂಬಕನು ನೆಗಹಿದ ।
ಗಂಡುಗಲಿಯಂಗದನನು । ಪ್ರೇಮದಿಂದ ॥300॥

ಚಂದದಿಂ ಮುದ್ದಿಸುತ ವಾಯುಜ ।
ಗೆಂದನೇನ್ನೈ ದುಗುಡದೊಳಗಿಹ ।
ಅಂದವೇನೆನೆ ಕೈ ಮುಗಿದು ಬರ ।
ದಿಂದ ವಾತಜನುಸಿರಿದ । ರಾಮನೊಡನೆ ॥301॥

**ರಾಗ ಕಾಂಭೋಜಿ ಝಂಪೆತಾಳ**

ದೇವ ದುಮ್ಮಾನವಿನ್ನೆಲ್ಲಿ ತವ ಕರುಣದಿಂ ।
ಜೀವಿಸಲಸಾಧ್ಯ ಶರಣರಿಗೆ ॥
ಭೂವರೇಣ್ಯನೆ ನಿನಗಿದೆಂಬ ಮಾತಲ್ಲ ಪರ ।
ಸೇವೆ ಕಡುಕಷ್ಟಧರೆಯೊಳಗೆ ॥302॥

ಗರಳವನು ಕುಡಿದು ಜೀವಿಸಬಹುದು ಪುರಹರನ ।
ನುರಿಯ ನಪ್ಪುತ ತರಣಿಸುತನ ।
ಧುರಕೆ ಸನ್ನಿಹಿತನಾಗಲು ಬಹುದು ಭೈರವನ ।
ಭರವ ನಿಲಿಸುತ ಧನಂಜಯನ ॥303॥

ಸರಸದಿಂ ಕೆಣಕಿ ಫಣಿಯನು ಚುಂಬಿಸುತ ಹರಿವ ।
ಗರಗಸಕೆ ಮುಂದಲೆಯ ಜವದಿ ॥
ಹರಿಯ ತುಡುಕಿದರಿಂತು ಪರಸೇವೆಯಿಂದಧಿಕ ।
ತೆರನಲ್ಲ ಲೋಕದೊಳು ಜೀಯ ॥304॥

ಸೇವೆ ದುಷ್ಕರ್ಮರತ ಸೇವೆಯವ ಮಾನಪಥ ।
ಸೇವೆ ಸಾವಿನ ತವರು ಮನೆಯು ॥
ಸೇವೆ ದುಷ್ಟಾಚಾರ ಸೇವೆನರಕವಿಚಾರ ।
ಸೇವೆ ದುರ್ಮ್ಮಾನಸಾಗರವು ॥305॥

ಮಾನಭಂಗವಗೊಳಿಸಿ ಹೀನವತ್ತಿಯ ಬಳಸಿ ।
ಜ್ಞಾನ ಕೆಡಿಸುವದು ಲೋಕದಲಿ ॥
ಗೋಣ ತಗ್ಗಿಸುವ ಬಗೆ ತ್ರಾಣ ಕುಗ್ಗಿಸುವ ನಗೆ ।
ಮಾಣಿಪುದು ಸೇವೆ ನಿಮಿಷದಲಿ ॥306॥

ಎಂದು ಮಾರುತಿಯು ಮನನೊಂದು ಪೇಳಿದ ಮಾತಿ ।
ಗಂದು ರಘುನಾಥನಾ ಕ್ಷಣದಿ ॥
ಬಂದು ವಾಯುಜನ ಪಿಡಿದಪ್ಪಿ ಮುದ್ದಿಸುತಕಪಿ ।
ವಂದ ತೋಷಿಸಲೆಂದ ಮುದದಿ ॥307॥

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಮಗನೆ ನೀನೀ ಪರಿಯೊಳರುಹುವ ।
ಬಗೆಯದೇನೈ ಮನದಲಿ ॥
ಬಗೆಯದಿರು ಸೇವಕನೆನುತ್ತಲಿ । ಸುಗುಣ ನೀನು ॥308॥

ಕರಕರಿಸಬೇಡಕಟ ನಿನ್ನನು ।
ಜರೆವರಿಲ್ಲಾ ಸುಮ್ಮನೆ ॥
ಶಿರವ ತಗ್ಗಿಸಿ ಚಿಂತಿಸುವ ಬಗೆ । ಯರಿತುದಿಲ್ಲ ॥309॥

ನೀನು ಸೇವಕನಹುದೆ ಜಗತಿಯ ।
ಪ್ರಾಣರೂಪನು ನಿನ್ನನು ॥
ಹೀನನೆಂದುಸಿರುವರ ಕಾಣೆನು । ಜ್ಞಾನದೀಪ ॥310॥

ನಿನ್ನ ಸೇವಿಸುವವನು ಲೋಕದಿ ।
ಮಾನ್ಯನಹನು ಮನದೊಳು ॥
ಅನ್ಯ ಭಾವವನೆಣಿಸಲೇತಕೆ । ಚೆಣ್ಣ ನೀನು ॥311॥

ಎಂದು ಮಧುರೋಕ್ತಿಯಲಿ ಮರುತನ ।
ಕಂದಗಂದು ಸಂತಸ ॥
ದಿಂದ ಪಿಡಿದಪ್ಪಿದನು ಕರುಣದಿ । ಮುಂದೆ ಬಂದು ॥312॥

**ಭಾಮಿನಿ**

ಇಂತು ಹನುಮನ ಮಧುರ ವಚನದಿ ।
ಸಂತವಿಸೆ ಸುಮನಸರು ತವಕದಿ ।
ಕಂತುಪಿತನಿಗೆ ಸಂಪಿಗೆಯ ಮಳೆಗರೆಯೆ ಕಪಿಕಟಕ ॥
ಸಂತಸವ ಪಡುತಿರಲು ರಾವಣ ।
ನಂತು ಚಿಂತಾಭಾರದಲಿ ಮತಿ ।
ವಂತೆ ಸತಿಯೊಡಬಡಿಸಿ ಸಮರೋದ್ಯೋಗಮನನಾದ ॥313॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅಳಿದುಳಿದ ಬಲಸಹಿತ ರಾವಣ ।
ಕೊಳಗುಳಕೆ ನಡೆತರಲಿಕಿತ್ತಲು ।
ನಳ ಹನುಮ ನೀಲಾಂಗದರು ಕಳ । ವಳಿಸುತಿರಲು ॥314॥

ಮುಳಿದು ಹೊಕ್ಕರು ಖಳನ ಪಡೆಯನು ।
ತಿಳಿದು ರಾವಣ ರೋಷದಿಂದಲೆ ।
ಹಳಚಿದನು ಹನುಮಂತ ದೇವನ । ಬಳಿಗೆಬಂದು ॥315॥

ಮಾರುತಿಯು ಕಂಡಾಗರೋಷದಿ ।
ವೀರ ಖಳ ನೀನೆನ್ನ ಮುಷ್ಟಿಯ ।
ಸಾರವನು ನೋಡೆನುತ ಭರದೊಳ । ಗಾರುಭಟಿಸೆ ॥316॥

ಹಾರಿ ರಥದೊಳಗೇರಿ ಮುಷ್ಟಿಯ ।
ನೇರಿಸಿದ ನವನುರಕೆ ಸತ್ತ್ವದಿ ।
ವೀರ ರಾವಣ ಬಿದ್ದನಾಕ್ಷಣ । ಧಾರಿಣಿಯಲಿ ॥317॥

ಚೇತರಿಸುತರೆಗಳಿಗೆಯೊಳು ಖಳ ।
ಪೂತುರೇ ಶಾಭಾಸು ಭಲೆಸ ।
ತ್ತ್ವಾತಿ ಶಯಕೆಣೆಯಿಲ್ಲ ಜಗವಿ । ಖ್ಯಾತಿನಹುದು ॥318॥

ಎನ್ನ ಮುಷ್ಟಿಯ ಹತಿಗೆ ನೀನುಳಿ ।
ದಿನ್ನು ಎನ್ನನು ಪೊಗಳಲ್ಯಾತಕೆ ।
ನಿನ್ನ ಸತ್ತ್ವವ ತೋರೆನುತ ಸಂ । ಪನ್ನ ನುಡಿದ ॥319॥

ಮುಷ್ಟಿಯನು ಬಂಧಿಸುತಲಾ ಜಗ ।
ಜಟ್ಟಿಗೆರಗಲು ಸಹಿಸಿ ಮರುತಜ ।
ದುಷ್ಟ ದಶಕಂದರನೆಡೆಗೆ ಪೊಗು । ವಷ್ಟರೊಳಗೆ ॥320॥

**ರಾಗ ಶಂಕರಾಭರಣ ಮಟ್ಟೆತಾಳ**

ಮಡನ ತೆರದೊಳಗ್ನಿ ರೋಮ ।
ದಡಿಗ ದಾನವೇಂದ್ರಕೀಶ ।
ಗಡಣವೆಲ್ಲ ಎಸುತಬರಲು । ಕಡುಗಿ ಮರುತಜ ॥
ಗಡಿಬಡಿಸುತಲಸುರನಸುವ ।
ಪಿಡಿದು ಮುಷ್ಟಿಯಿಂದ ತಿವಿದು ।
ಕಡಲಿಗೆಸೆಯೆ ಕಂಡು ದೈತ್ಯ । ಗಡಣ ಬೆದರಿತು ॥321॥

ಅನಿತರೊಳಗೆ ಸರ್ಪರೋಮ ।
ನೆನಿಪ ದನುಜಭುಜಗತತಿಯ ।
ನನುಕರಿಸುತಲೈದೆ ಪ್ಲವಗ । ರನಿಬರೋಡಲು ॥
ಕ್ಷಣದಿ ವಾಲಿತನುಜನವನ ।
ಕೆಣಕುತೊಡನೆ ಗಿರಿಗಳಿಂದ ।
ಧನುಜನುರವ ಹೂಳಿನಿತ್ತ । ಕಿನಿಸಿನಿಂದಲೆ ॥322॥

**ರಾಗ ಮಾರವಿ ಏಕತಾಳ**

ರಾಕ್ಷಸನಾ ವಶ್ಚಿಕರೋಮನು ಕಂ ।
ಡಕ್ಷಿಯೊಳ್ ಕಿಡಿಗೆದರಿ ॥
ತೀಕ್ಷಣ ಕ್ರಿಮಿಕೀಟಗಳನು ಕೊಡಹಿದ ।
ನಾಕ್ಷಣದೊಳು ಗಜರಿ ॥323॥

ಚೇಳಿನುರುಬೆಯನು ತಾಳಲಾರದೆ ಕಪಿ ।
ಪಾಳಯ ನಡನಡುಗಿ ॥
ಗೋಳುಗುಟ್ಟುವ ಪರಿ ನೋಡುತ ಬೇಗದಿ ।
ನೀಲ ತಾನುರಿಮಸಗಿ ॥324॥

ಗಿರಿ ತರುಗಡಣದೊಳೆರಗಲು ಧರೆಯೊಳು ।
ಸರಿದವು ಕೀಟಗಳು ॥
ಭರದೊಳು ವಶ್ಚಿಕ ರೋಮನ ಶಿರವನು ।
ತರಿಯಲು ನಿಮಿಷದೊಳು ॥325॥

**ರಾಗ ಪಂತುವರಾಳಿ ಮಟ್ಟೆತಾಳ**

ಖಡುಗ ರೋಮನೆಂಬ ದೈತ್ಯ । ಕಿಡಿಯ ನುಗುಳುತ ॥
ಮಡನ ತೆರದಿ ರೋಷದಿಂದ । ಲಸಿಯ ಸೆಳೆಯುತ ॥
ಗುಡುಗುಡಿಸುತ ಪ್ಲಗವ ಭಟರ । ಕಡಿದು ಬಿಸುಡುತ ॥
ಸಡಗರದಲಿ ಬರಲು ನಳನು । ಕಂಡು ಗಜರುತ ॥326॥

ಕಲ್ಲು ಮರಗಳಿಂದಲವನ । ಚೆಲ್ಲ ಬಡಿದನು ॥
ಘುಲ್ಲವಿಸುವ ಧನುಜಭಟರ । ನೆಲ್ಲ ತರಿದನು ॥
ನಿಲ್ಲು ನಿಲ್ಲೆನುತ್ತ ಬರುವ । ದಾನವರುಗಳ ॥
ಹಲ್ಲು ಮುರಿಯ ಬಡಿದನಾಗ । ಖುಲ್ಲರನಿಬರ ॥327॥

**ಭಾಮಿನಿ**

ದುರುಳ ದೈತ್ಯರು ಮಡಿಯಲಿತ್ತಲು ।
ತರಹರಿಸಿ ದಶಕಂಠ ರಥವನು ।
ತಿರುಹಿದನು ಶ್ರೀರಾಮಚಂದ್ರನೊಳಳವಿಗೆಂದೆನುತ ॥
ಬರುವ ಬರವನು ಕಾಣುತಲೆ ರಘು ।
ವರನು ತಿಳಿದಾಕ್ಷಣವೆ ತನ್ನಯ ।
ವರ ಮಹಾ ಕೋದಂಡ ವನು ಕೈಗೊಂಡನಾ ಕ್ಷಣಕೆ ॥328॥

**ದ್ವಿಪದಿ**

ತರಳರಿರ ಕೇಳಿರಾಕ್ಷಣದಿ ಸುರರುಗಳು ।
ಧುರವ ನೀಕ್ಷಿಸಲಿಕಂಬರದೊಳಿರುತಿರಲು ॥329॥

ವೀರರಾವಣನು ರಥವೇರಿ ನಿಂತಿರುವ ।
ಮಾರಮಣ ಪಾದಚಾರಿಯೊಲಯ್ದಿಬರುವ ॥330॥

ನೀತಿಯಲ್ಲಿದು ಕೇಳು ದೇವ ನೀನೆನುತ ॥
ಆ ತತುಕ್ಷಣಕಮರರೆನಲು ಸುರನಾಥ ॥331॥

ಹರ ವಿರಂಚಿಗಳನುಜ್ಞೆಯನು ಪಡೆದಾಗ ।
ಕರೆದು ಮಾತಲಿಗೆ ಪೇಳಿದ ಸುರಪಬೇಗ ॥332॥

ಸಾರಥಿತ್ವವ ಮಾಡು ಪೋಗಿ ಧರೆಯೊಳಗೆ ।
ವೀರ ದಶರಥಕಂದನಾದ ಮಾಧವಗೆ ॥333॥

**ಭಾಮಿನಿ**

ಎಂದು ಸುರಪತಿ ನುಡಿಯೆಮಾತಲಿ ।
ಸ್ಯಂದನದಿ ಪೀಯೂಷವಿಟ್ಟಾ ।
ನಂದದಲಿ ಧರೆಗಯ್ದಿ ರಾಮನ ಚರಣಕಭಿನಮಿಸಿ ॥
ಸಿಂಧುಶಯನನೆ ನೀನಖಿಳ ಸುರ ।
ವಂದ ರಕ್ಷಕನಮಿತ ವಿಕ್ರಮ ।
ನೆಂದು ಪೊಗಳುತ ಬಿನ್ನವಿಸಿದನು ಸುರಪನೆಂದುದನು ॥334॥

**ರಾಗ ಬೇಗಡೆ ಅಷ್ಟತಾಳ**

ದೇವ ನೀ ಲಾಲಿಸಿ ಕೇಳು ಬಿನ್ನಪವ ।
ನಾ ವಿವರಿಪೆ ನಾಕ ಪತಿಯ  ಸನ್ಮತವ ॥ ದೇವ ॥ ॥ ಪಲ್ಲವಿ ॥

ದುರುಳನಾಥನು ರಥವೇರಿ ನಿಂದಿರುವ ।
ಪರಮಾತ್ಮ ನೀ ಪಾದಚಾರಿಯಾಗಿರುವ ॥
ಪರಿಗಳ ಯೋಚಿಸುತೀಗವರೆಲ್ಲ ।
ಹರುಷದಿ ರಥವನು ಕಳುಹಿದರಲ್ಲ ॥335॥

ಧನು ಶರ ಬಾಣ ಬತ್ತಳಿಕೆಗಳಿಂತು ।
ಅನುಕೂಲವಾಗಿರ್ಪ ರಥದೊಳು ನಿಂತು ॥
ದನುಜರಿಗಿದಿರಾಗಿ ಕಾದುವ ಪರಿಯ ।
ಸನುಮತದಿಂ ನೋಳ್ಪೆವೆಂದರು ಜೀಯ ॥336॥

ಸುರಪನ ಸಾರಥಿಯಾಗಿಹೆ ನಾನು ।
ಕರೆವರು ಮಾತಲಿಯೆನುವ ನಾಮವನು ॥
ಹರಿಯೆ ನೀ ರಥವೇರು ತಡಮಾಡಬೇಡ ।
ದುರುಳ ನಾರ್ಭಟಿಸುತ್ತ ಬರುವನು ನೋಡಾ ॥337॥

**ಭಾಮಿನಿ**

ಮಾತಲಿಯೆ ನಾನೊಲ್ಲೆನೀ ಪುರು ।
ಹೂತ ಕಳುಹಿದ ಧನುಶರಗಳ ವ ।
ರೂಥಸಹವರ ಹಂಗಿಗೊಳಗಾಗುವನು ತಾನಲ್ಲ ॥
ನೀತೆರಳು ನಭಕಲ್ಲದೊಡೆ ನ ।
ಮ್ಮೀ ತೆರದ ಸಮರಾಂಗಣದ ಸ ।
ತ್ವಾತಿಶಯ ಪರಿಕಿಸುವ ಮನವಿರೆ ಪಿಂತೆ ಸಾರೆನುತ ॥338॥

**ಕಂದ**

ನೀರಜ ಲೋಚನನಿತ್ತಲು ।
ವೀರಾವೇಷದಿ ಕೋದಂಡವ ಝೇಗೆಯ್ದುಂ ।
ಸಾರಲಿಕಿತ್ತಾ ನಾರದ ।
ಮಾರಮಣನ ಸಂಸ್ತುತಿಸುತ ಬರುತಿರ್ದಾಗಳ್ ॥339॥

**ರಾಗ ಮೋಹನ ಅಷ್ಟತಾಳ**

ನಾರಾಯಣ ಹರಿ ನಾರಾಯಣ ಹರಿ ।
ನಾರಾಯಣ ಲಕ್ಷ್ಮೀನಾರಾಯಣ ॥
ಮಾರನಯ್ಯನೆ ಸುಕುಮಾರ ಶರೀರನೆ ।
ಮಾರಮಣನೆಯೆಂದು ನಾರದನೈತಂದ ॥340॥

ಆನಂದ ಮಯನೆ ಲೋಕಾನಂದಕರ ಸಚ್ಚಿ ।
ದಾನಂದರೂಪ ಮಹಾನಂದ ನೆ ॥
ಭಾನುವಂಶಜ ಬಹುಮಾನವಂತನೆ ಘೋರ ।
ದಾನವಾಂತಕನೆ ಮಹಾನು ಭಾವನೆ ॥341॥

ತಂದೆ ತಂದೆಯ ಸ್ತುತಿಸುತ್ತ ಭಕ್ತಿಯೊಳೈ ।
ತಂದೆರಗಿದ ರಾಮಚಂದ್ರಗಂದು ॥
ಇಂದಿರೇಶನೆ ದಯದಿಂದ ಬಿನ್ನಪವನ್ನು ।
ಚಂದದಿ ಲಾಲಿಸೊ ಸಿಂಧುಶಯನ ಹರಿ ॥342॥

ದೊರೆಯೆ ನೀ ರಥವೇರಿ ಧುರದಿ ಖೂಳನ ಶಿರ ।
ವರಿಯಲು ನೋಳ್ಪೆವೀ ಧುರವಲ್ಲದೆ ॥
ಬರಿದೆ ನೀ ಧರೆಯೊಳು ಚರಿಸಿ ರಣಾಗ್ರವ ।
ವಿರಚಿಸಲದ ನೋಡಲೊಲ್ಲೆವೆಂದರು ಸುರರು ॥343॥

ಇಂತೆಂದು ಹರ ಪಿತಾಮಹ ಸುರಪತಿ ಮುಖ್ಯರ್ ।
ಸಂತಸದಿಂದೆನ್ನ ಕಳುಹಿದರು ॥
ಅಂತಕಾಂತಕ ರಥವೇರೆನಲಾಗ ಶ್ರೀ ।
ಕಾತನಿಂತೆಂದನು ನಾರದ ಮುನಿಯೊಳು ॥344॥

**ರಾಗ ಉದಯಚಂದ್ರಿಕೆ ಅಷ್ಟತಾಳ**

ಮಾತಲಾಲಿಸಯ್ಯ ಮೌನಿ । ನಾಥ ನಾನೆಂಬುದ ನೀ ॥
ಪ್ರೀತಿಯೊಳ್ ವಿಚಾರಿಸೆಲ್ಲ । ನೂತನವಾದುದನೆಲ್ಲ ॥345॥

ತಂದೆಯಾಜ್ಞೆಯಿಂದ ನಾನ್ಯೆ । ತಂದೆವನದೊಳು ಕಾಣೆ ॥
ಸ್ಯಂದನವನೇರಿ ದೈತ್ಯ । ವಂದವ ನಾ ಗೆದ್ದುದಿಲ್ಲ ॥346॥

ನೋಡಲಿ ಯುದ್ಧವ ನೋಡ । ದೋಡಿದರು ನಮಗಿನ್ಯಾವ ।
ಕೇಡುಬಾರದೆಂಬ ಮಾತ । ನಾಡಲಿತ್ತ ರಘುನಾಥ ॥347॥

**ಭಾಮಿನಿ**

ದಾನವಾಂತಕನಂಘ್ರಿಯೊಳಗಾ ।
ಭಾನುಸುತ ನಳ ನೀಲ ಹನುಮ ಸು ।
ಷೇಣಜಾಂಬವ ಮುಖ್ಯರೆರಗಲು ಕಂಡು ರಘುಪತಿಯು ॥

ವಾನರರ ಮತವಿಡಿದು ನಾ ಗೀ ।
ರ್ವಾಣ ಪತಿ ಹಂಗಿನೊಳು ಗೆಲುವ ವಿ ।
ಧಾನ ತಪ್ಪದುಯೆನುತ ರಥವೇರಿದನು ಖರವೈರಿ ॥348॥

**ಕಂದ**

ರಾಘನಂಘ್ರಿಗೆ ನಮಿಸುತ ।
ಬೇಗದೊಳೇರಿದ ನಾರದ ನಂಬರಕಾಗಂ ॥
ವಾಘೆಯ ಪಿಡಿದಾ ಕ್ಷಣದೊಳ್ ।
ತಾಗಿದ ಮಾತಲಿಧನುಜನ ರಥದೆಡೆಗಾಗಂ ॥349॥

**ರಾಗ ಮಾರವಿ ಏಕತಾಳ**

ಕಳುಹಿದ ನಿನಗೀರಥವ । ಎನ್ನ । ಕೊಳಗುಳಕೆನುತಲೆ ಮಘವ ॥
ತಳುವದೆ ನಿನ್ನನು ಗೆಲುವೆ । ಬಳಿ । ಕಳವಿಯೊಳಾತನ ಕೊಲುವೆ ॥350॥
ಎಮ್ಮೀರ್ವರ ಗೆಲುವುದನು । ನೀ । ನೆಮ್ಮಿದ ಬಗೆಯಿನ್ನೇನು ॥
ಸಮ್ಮತವಾಗಿಹ ರಣವೊ । ಕಡು । ಹಮ್ಮಿನ ಮಾರಣದಿರವೊ ॥351॥

ದನುಜರು ಮಾಯಾವಿಗಳು । ಬಲು । ಘನತರ ಅಷ್ಟಸಿದ್ದಿಗಳು ॥
ಅನುಕರಿಸಿರುವರು ನೋಡು । ಇದ । ನರಿತು ವಿಚಾರವ ಮಾಡು ॥352॥
ಈ ರೀತಿಯ ವಿದ್ಯದೊಳು । ಕಲಿ । ಯೇರಿತೆ ನಮ್ಮ ಧುರದೊಳು ॥
ಸಾರಿದೆಯಪಮಾನದೊಳು । ಮೂ । ರ್ಬಾರಿಯ ಮರೆತೆಯೊ ಪೇಳು ॥353॥

**ಭಾಮಿನಿ**

ಸಾಕೆಲವೊ ನಾ ಬಲ್ಲೆ ನಿಮ್ಮಿ ।
ಕ್ಷ್ವಾಕುಕುಲದವನಿಪರ ನೂತನ ।

ದಾಕೆವಾಳತನಂಗಳನು ಸತ್ತ್ವಾತಿಶಯದಿಂದ ॥
ನೀ ಕುಹಕವಿದ್ಯೆಗಳ ಮಾತುಗ ।
ಳೀ ಕಣನೊಳಾಡದಿರು ಸುಮ್ಮನೆ ।
ಜೋಕೆನೋಡೆಂದೆನುತ ಮೀಸೆಯ ತಿರುಹಲವನೆಂದ ॥354॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸುಟ್ಟ ಮೀಸೆಯು ಪುಟ್ಟಿತೇ ಜಗ ।
ಜಟ್ಟಿ ಕೇಳ್ ನಿನ್ನಟ್ಟ ಹಾಸವ ।
ಕುಟ್ಟಿ ಕಳೆವೆನು ದೃಷ್ಟಿಸೆನ್ನಯ । ದಿಟ್ಟತನವ ॥355॥

ಪೂತುರೇ ಮಝಭಾಪುಕಲಿ ವಿ ।
ಖ್ಯಾತನಹೆಮಾತಿನೊಳು ನಿನ್ನಯ ।
ರೀತಿಯನು ತತ್‌ಕ್ಷಣ ಗೆಲುವೆ ಸ । ತ್ತ್ವಾತಿಶಯದಿ ॥356॥

ಕಳ್ಳತನವೇ ರಣವಿಚಾರಗ ।
ಳಲ್ಲಿ ನಿನ್ನಗ್ಗಳಿಕೆ ಗರ್ವದ ।
ಮಲ್ಲತಿಕೆಯನು ನೋಳ್ಪೆನಿಲ್ಲಲೊ । ಖುಲ್ಲ ದನುಜ ॥357॥

ಆಲಿಸುತ ಕಿಡಿಗೆದರಿ ದನುಜ ತ್ರಿ ।
ಶೂಲವನು ಕೈಗೊಂಡು ಭುಜದ ।
ಸ್ಫಾಲನವ ಗೈದೊಡನೆ ಪೇಳ್ದ ಕ । ರಾಳನಾಗಿ ॥358॥

ನಿನ್ನುಳಿವ ನಾ ಕಾಣೆನಿದರೊಳ ।
ಗಿನ್ನು ಸೀತೆಯೊಳೆಂಬಮಾತುಗ ।
ಳನ್ನು ಪೇಳೆನ್ನೊಡನೆ ರಾಘವ । ಚೆನ್ನವಾಗಿ ॥359॥

ಸೀತೆಯಿಂ ಮಯಜಾತೆ ನಿನ್ನನು ।
ಜಾತಮುಖ್ಯರ ಸಂತವಿಸುವರೆ ।
ನಾ ತಿಳಿದುದನು ಪೇಳ್ವೆಕೇಳ್ದನು । ಜಾತನೀನು ॥360॥

**ಭಾಮಿನಿ**

ಕಾವರೇ ಚತುರಾಸ್ಯ ಸುರಪತಿ ।
ದೇವನಾ ಶಂಕರನು ಸುಮ್ಮನೆ ।
ಜೀವದಾಸೆಗಳಿರಲು ಎನ್ನನು ಸೇರಿ ಬದುಕೆಲವೊ ॥
ನೀ ವಿರೋಧವ ಮಾಡಿಕೆಡದಿರು ।

ಭಾವಿತತ್ತ್ವವ ನೋಡು ದೈತ್ಯರ ।
ಸಾವಧಾನವದೇಕೆನಲು ನಗುತೆಂದನಾರಾಮ ॥361॥

**ರಾಗ ಭೈರವಿ ಅಷ್ಟತಾಳ**

ಖಳರೊಳ್ ಬಾಯ್ಬಡಿಕ ನೀನು । ನಿನ್ನಯಶೂಲ ।
ದೊಲವನೀಕ್ಷಿಪೆನು ನಾನು ॥
ಗೆಲುವಿನ ಗೆಯ ನೀ ನೋಡಿಕೋ ಎನುತಸ್ತ್ರ ।
ಗಳ ಬಿಡಲಾ ರಾಮನು ॥362॥

ಕಿಡಿಯುಗುಳುತ ಖಳನು । ಕೋಪದಿ ಶೂಲ ।
ವಿಡುತಿರೆ ರಘುವರನು ॥
ಒಡನೆ ಕಂಗೆಡುತಿಹ ಕಪಿಗಳೆಲ್ಲರಿಗಂದು ।
ಒಡಬಡಿಸುತಲಿ ತಾನು ॥363॥

ಮೂರು ಮೂರ್ತಿಗಳ ಮಂತ್ರ । ಆವಾಹಿಸಿ ।
ಏರಿಸಿಬಿಡಲನಂತ್ರ ॥
ಹಾರ ತ್ರಿಶೂಲವ ಚೂರು ಮಾಡಿಯೆ ಶರ ।
ಸಾರಿತು ಮೂಡಿಗೆಗೆ ॥364॥

**ಭಾಮಿನಿ**

ಕೇಳುಕುಶ ನಿಮ್ಮಯ್ಯ ಶರಗಳ ।
ಮೇಳಕರ್ತುಗಳೊಡೆಯನಾಗಿರೆ ।
ಶೂಲದಿನ್ನೇನ್ ಘನವು ಕೇಳಾಮೂಲರೂಪನಿಗೆ ॥
ಆಲಿಗಳು ಕೆಂಪಡರಿ ರಾವಣ ।
ಕಾಲಭೈರವನಂತೆ ಖತಿಯನು ।
ತಾಳುತೈತಂದಾಗ ಹಳಚಿದನಂದು ರೋಷದಲಿ ॥365॥

**ರಾಗ ಶಂಕರಾಭರಣ ಮಟ್ಟತಾಳ**

ಕಂಡು ದನುಜನು । ಕೊಂಡು ಶರವನು ।
ಗಂಡುಗಲಿಯನೆಚ್ಚ ಸುಪ್ರ । ಚಂಡವೀರನು ॥366॥

ಕ್ರೂರದಾನವ । ತೋರುಗರ್ವವ ।
ಭೂರಿಭುಜ ಬಲಾತಿಶಯದ । ಸಾರಸತ್ತ್ವವ ॥367॥

ಎನಲು ಕೇಳುತ । ಕನಲಿ ಗಜರುತ ।
ಕಿನಿಸಿನಿಂದ ಪರ್ವತಾಸ್ತ್ರ । ವೆಸೆಯೆ ಕಾಣುತ ॥378॥

ಕುಲಿಶಶರದೊಳು | ಗೆಲಲುಕ್ಷಣದೊಳು |
ಕಲಿತ ರೋಷದಿಂದಲಗ್ನಿ | ಶರವನೆಸೆಯಲು ||369||

ವರುಣ ಬಾಣದಿ | ತರಿಯೆ ಸತ್ತ್ವದಿ |
ಭರಿತ ರೌದ್ರದೊಡನೆ ತಿಮಿರ | ಶರವ ಬೇಗದಿ ||370||

ಬಿಡಲು ಕಾಣುತ | ಪೊಡವಿಪಾಲಕ |
ಕಡಿಯೆ ಸೂರ್ಯಶರದಿ ಕಂ | ಡೊಡನೆ ದಿತಿಸುತ ||371||

ಮೇಘಬಾಣವ | ಬೇಗ ಬಿಡಲವ |
ನಾಗ ಶಯನ ವಾಯುಶರದಿ | ನೀಗೆಕಂಡವ ||372||

ಸರ್ಪಬಾಣವ | ದರ್ಪದಿಂದವ |
ದರ್ಪಕಪಿತಗೆಸೆಯೆ ಕಂಡು | ವಿಹಗಬಾಣವ ||373||

ಬಿಡಲು ತವಕದಿ | ಕಡಿಯೆ ಹರುಷದಿ |
ಮಡನ ತೆರದೊಳಿದ್ದ ದೈತ್ಯ | ರೊಡೆಯ ತವಕದಿ ||374||

**ಭಾಮಿನಿ**

ನಿಖಿಳ ಮಂತ್ರಾಸ್ತ್ರಗಳು ಪೋಗಲು |
ವಿಕಳಮತಿ ಮುಳಿದಾ ಕ್ಷಣವೆರಣ |
ಯುಕುತಿಯನು ಗ್ರಹಿಸಿದನು ಖಳಮಾರೀಚನಿತ್ತಿರುವ ||
ಪ್ರಕಟ ಮಾಯಾಚಕ್ರದೊಳಗೀ |
ಸಕಲ ಕಪಿಬಲದೊಡನೆ ರಾಘವ |
ವಿಕಟಭುಜ ಸಿರಿಯೊಲಿಸುವೆನು ತಾನೆನುತ ಗರ್ಜಿಸುತ ||375||

**ರಾಗ ಮಾರವಿ ಏಕತಾಳ**

ವಿಕ್ರಮಿ ರಾವಣ | ಚಕ್ರವನಾಗ ತ್ರಿ |
ವಿಕ್ರಮನಂದದಿ | ವಕ್ರಿಸುತಲೆ ಖಳ |
ಚಕ್ರಿಯ ಬಿಡಲಿಕು | ಪಕ್ರಮಿಸಲು ಬೇ |
ಗಕ್ರಮಿಸಿತು ಶ | ಕ್ರಾದ್ಯರ ತೋಷ ||376||

ಸುತ್ತಿದುದಾ ಖಳ | ಮೊತ್ತಗಳೆಲ್ಲವು |
ಉತ್ತಮ ಧನುಶರ | ವೆತ್ತುವ ರೋಷದಿ |
ಹತ್ತುತ ರಥ ಬೆ | ನ್ನೊತ್ತುತಲಾ ಪುರು |
ಷೋತ್ತಮ ನೆಡೆಯೊಳು | ಬಿತ್ತರಿಸಿದರು ||377||

ಕಂಡುದು ಖಳಕುಲ । ತಂಡವುಕೇಳು ।
ದ್ದಂಡತನದಿ ಖತಿ । ಗೊಂಡು ರಣಾಗ್ರದಿ ।
ಭಂಡ ಕಪಿಗಳನು । ಹಿಂಡುವೆ ನೆನುತಲೆ ।
ಗಂಡುಗಲಿಗಳುರೆ । ಕೊಂಡರು ಶರವ ॥378॥

**ವಾರ್ಧಕ**

ಸುರಪಜಿತು ಮಕರಾಕ್ಷನತಿಕಾಯ ಮಿತ್ರಘ್ನ ।
ದುರುಳ ಧೂಮ್ರಾಕ್ಷ ವಿದ್ಯುನ್ಮಾಲಿ ಘಟಕರ್ಣ ।
ನರವೈರಿ ಕುಂಭ ದುರ್ಮದ ವಿರೂಪಾಕ್ಷನೆಂಬಸುರಪಡೆ ಸಹಿತ ಪೊರಟು ॥

ಪರಿಘ ಮುಸಲ ಮುಸುಂಡಿ ಭಿಂಡಿಪಾಲಾದಿ ಶರ ।
ಕರದೊಳೆತ್ತುತಲೆ ಕಾಡ್ಗೋಣ ಶಾರ್ದೂಲ ವಕ ।
ಕರಡಿ ಹರಿ ಶರಭ ರಥ ತುರಗ ವಾಹನಗಳಿಂದೈದಿತಾ ಕ್ಷಣದೊಳಾಗ ॥379॥

**ರಾಗ ಮಧ್ಯಮಾವತಿ ಏಕತಾಳ**

ಏನಿದೇನಿದು ಶರಣ । ಚೋದಿಗವಿ । ದೇನಿದೇನಿದು ಶರಣ ॥ ಪಲ್ಲವಿ ॥

ಏನಿದೇನಿದು ಜಾಣ । ದಾನವರೆನಗೇನ ।
ಹೀನ ಕತ್ಯಗಳ ನಿ । ಧಾನವೇನಿದು ಪೇಳು ॥379॥

ಅಂದು ಮಾಡಿದ ಯಜ್ಞ । ದಿಂದಲೀ ಖಳರೆಲ್ಲ ।
ರೊಂದಾಗಿ ಜನಿಸಿದ । ರಿಂದೀಗೆಂಬುದು ಸರಿ ॥380॥

ಸಿಂಧುವಿನಂದದಿ । ಮುಂದೆ ಬರುವ ಸೇನೆ ।
ಯಂದ ನೋಡಲು ಕಪಿ । ವಂದ ಕಂಗೆಡುವುದು ॥381॥

**ಭಾಮಿನಿ**

ನರರ ತೆರದಲಿ ಕೇಳುವೆಯೊರಘು ।
ವರನೆ ನಿನ್ನಗ್ಗಳದ ಮಾಯಕೆ ।
ಸರಿಯಹುದೆ ರಕ್ಕಸರ ಮಾಯವಿದೆಂದನಸುರೇಂದ್ರ ॥

ಶರಣನೆಂದುದ ಕೇಳಿ ವೈಷ್ಣವ ।
ಪರಮ ಮಂತ್ರಾಸ್ತ್ರವನು ಬಿಡುತಿರೆ ।
ತರಿದು ಬಿಸುಟಿತು ಮಾಯಕದ ಚಕ್ರವನು ನಿಮಿಷದಲಿ ॥382॥

**ಕಂದ**

ಅಚ್ಚರಿಯದೊಳಾ ರಾವಣ ।
ಕೊಚ್ಚಿದನೇ ರಾಘವನೀ ಚಕ್ರವನೆನುತಂ ॥
ಕಿಚ್ಚನುಗುಳುತಾ ಕ್ಷಣದೊಳ್ ।
ಹೆಚ್ಚಿತೆ ಪೌರುಷ ಮನುಜಗೆನುತ ಯೋಚಿಸಿದಂ ॥383॥

**ರಾಗ ಸಾರಂಗ ಆದಿತಾಳ**

ತೋರಿತುತನಗೊಂದುಪಾಯ । ಕಲಿ ।
ಯೇರುವ ಬಗೆಗಿದು ತೋರ್ಪುದು ನ್ಯಾಯ ॥ ಪಲ್ಲವಿ ॥

ಪೂರ್ವದೊಳಾ ಪಿತಾಮಹನು । ತನ್ನ ।
ಸರ್ವ ಶಕ್ತಿಯ ಬಾಣವೊಂದನಿತ್ತಿಹನು ॥
ಊರ್ವಿಪನೀ ರಘುವರನ । ಗೆದ್ದು ।
ಗರ್ವವ ಮಥಿಸುವೆ ಕೊಳುಗುಳದೊಳು ನಾ ॥384॥

ಬಾಣವ ತೆಗೆದು ಬೊಬ್ಬಿರಿದ । ಎನ್ನ ।
ತ್ರಾಣವ ನೋಡಿಕೊ ಎನುತ ಮುಂಬರಿದ ॥
ಹೀನಮಾನವನೆಂದು ಜರೆದ । ನಿನ್ನ ।
ಜಾಣತನವ ನೋಳ್ಪೆನೆಂದು ಗರ್ಜಿಸಿದ ॥385॥

ಎನುತ ದಿವ್ಯಾಸ್ತ್ರವ ಭರದಿ । ಬಿಡ ।
ಲನಿತರೊಳ್ ವಿಪ್ರವೇಷದಿ ಬ್ರಹ್ಮನೈದಿ ॥
ಚಿನುಮಯಾತ್ಮಕನ ಕಂಡೆರಗಿ । ಪೇಳ್ದ ।
ನಿನಕುಲೇಶನಿಗಂಬು ಜೋದ್ಭವ ನಡುಗಿ ॥386॥

**ಭಾಮಿನಿ**
ಪಿತನೆ ಕೇಳೆನ್ನೊಲುಮೆಯಿಂದಲಿ ।
ದಿತಿಜ ಪಡೆದಹನಸ್ತ್ರವಿದರನು ।
ಪ್ರತಿಗೆ ತನ್ನಯ ಶರವ ಬಿಡು ನೀನೆನುತಲಜನುಡಿಯೆ ॥
ಪಥವಿಯಮರನ ಕಳುಹಿರಘುಪತಿ ।
ಯತಿಶಯದ ಪೈತಾಮಹಾಶರ ।
ನತುಳ ಮಿಕ್ರಮಿಯೆಸೆದು ಕಡಿದಿಕ್ಕಿದನು ಖಳಶರವ ॥387॥

**ಕಂದ**
ದಿವ್ಯಾಶರಾಸನವಡಗಲು ।
ಕ್ರವ್ಯನು ಕಂಡಾಕ್ಷಣ ಕೋಪದಿ ಕಿಡಿಯಿಡುತಂ ॥

ಅವ್ವಯ ನಡೆದೈತಂದಾ ।
ಭವ್ಯರತೆರದೊಳು ಮಾತುಗಳಾಡಿದನಾಗಳ್ ॥388॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸೀತೆಯೊಳಗತಿ ಹಿತದ ಮನವಿ ।
ನ್ಯಾತಕೆಲೆ ರಘುನಾಥ ಕೇಳ್ ಪುರು ।
ಹೂತ ಕಳುಹಿದ ರಥದ ಹಮ್ಮಿನ । ಖ್ಯಾತತನವೋ ॥389॥

ಹತ್ತು ಶಿರ ವಿಪ್ಪತ್ತು ಭುಜಗಳ ।
ಹೊತ್ತು ತಿರುಗುವ ದುರುಳ ನಿನ್ನೆದೆ ।
ಕತ್ತರಿಸಿ ನಾನೊಲಿಪೆನೀ ರಣ । ಪಥ್ವಿಸುತೆಯ ॥390॥

ಕಾಮಹರ ಕಮಲಜ ದಿವೌಕಸ ।
ಸ್ತೋಮಗಳಿಗಂಜುವನೆ ರಾವಣ ।
ನೀ ಮನುಜ ಕೆಣಕಿದೆಯ ಕೇಳು । ದ್ದಾಮತನದಿ ॥391॥

ನಾ ಮನುಜನೋ ಹರವಿರಿಂಚೆಗ ।
ಳಾ ಮಹಾತ್ಮರ ಸೃಷ್ಟಿಸಿದ ನಿ ।
ಸ್ಸೀಮ ನೀ ನೋಡೆನುತಲಾ ರಣ । ಭೀಮನುಡಿದ ॥392॥

ಬಲ್ಲಿದವನಾಗಿರಲಯೋಧ್ಯೆಯ ।
ನಲ್ಲಗಳೆದಿಲ್ಲಿಗೆ ಪ್ರವಾಸಿತ ।
ಖುಲ್ಲನಂತಯ್ತುಂದು ದ್ಯಾತಕೆ । ಮಲ್ಲ ನೀನು ॥393॥

ಅಹುದು ಕೇಳ್ ನಿನ್ನಂತ ದುರುಳರ ।
ಬಹಳ ಕಾಮುಕರುಗಳ ಚೋರರ ।
ಗಹನವನು ಭೇದಿಸಲು ಬಂದೆನು । ಕುಹಕಿ ಕೇಳು ॥394॥

**ರಾಗ ಕಾಂಭೋಜಿ ಝಂಪೆತಾಳ**

ಬಲ್ಲೆ ನಾ ತಾಟಕಿಯ । ಚೆಲ್ಲ ಬಡಿದಿಹ ಪರಿಯ ।
ಹುಲ್ಲು ಚಾಪವ ಮುರಿದು ಮತ್ತಾ ॥
ಉಲ್ಲಾಸದೊಳು ದ್ವಿಜನ । ಬಿಲ್ಲನೆಳೆಯುತ ಹುಲ್ಲಿ ।
ನಲ್ಲಿ ಕಾಗೆಯ ಗೆದ್ದ ಚರಿತ ॥395॥

ನಿಚ್ಚಳದಂಗೈ ನೋಡ । ಲಚ್ಚ ಕನ್ನಡಿ ಯಾಕೆ ।
ಮುಚ್ಚು ಬಾಯ್ಬಡಿಕತನಗಳನು ।

ಹುಚ್ಚ ನೀ ಕಾರ್ತವೀರ್ಯನ ಕೆಣಕಿದುದ ಬಲ್ಲೆ ।
ಕೊಚ್ಚದಿರು ಪೌರುಷಂಗಳನು ॥396॥

ಯಾರು ಸರಿಗಾಣೆ ಹರಿ । ಣನ ಕೊಲುವ ವಿದ್ಯದ ವಿ ।
ಚಾರ ಬಲ್ಲವನು ನೀನೆನುತ ॥
ನಾರಿಯನು ಹೋಗಾಡಿ । ಹಾರದಿಹ ಪಕ್ಷಿಯ ವಿ ।
ಚಾರಿಸುತ ಬಂದ ವಿಖ್ಯಾತ ॥397॥

ಹುರಿಯ ಹಗ್ಗದೊಳು ಪ । ಲ್ಗಿರಿದು ತೊಟ್ಟಿಲ ನಡುವೆ ।
ಸರಿದಾಡಿದುದ ಮರೆತೆಯೇನ್ನೈ ॥
ಹರನ ರಜತಾದ್ರಿಯಡಿ । ಯೊಳಗೆ ಕೈಗಳು ಸಿಕ್ಕಿ ।
ದಿರವ ಯೋಚಿಸ ಬಾರದೇನ್ನೈ ॥398॥

ಕಾಡುಗಳ ಸಂಚರಿಪ । ಕೋಡಗಗಳೊಡಗೊಂಡು ।
ನಾಡ ಸಂಚರಿಸಿ ಬಗೆಯೇನು ॥

ಮೂಢರಂದದಲಿ ಪೇ । ಚಾಡಿ ಸೇತುವ ಗೆಯ್ದು ।
ಗಾಢ ಗರ್ವಿತನಲ್ಲೊ ನೀನು ॥399॥

ಬಲಿಯ ಮನೆಯೊಳು ಸೇರಿ । ಗೆಲಿದ ಪರಿ ಪೇಳಿದರೆ ।
ನಲಿವರಲ್ಲವೆ ಲೋಕದೊಳಗೆ ।

ಬಲವಂತ ಜನಕನಲಿ । ಬಿಲುವೆತ್ತಿದುದ ಕೇಳಿ ।
ಕಳಕಳಿಪರಲ್ಲೆ ಭೂಮಿಪರು ॥400॥

ಮೂಢ ರಕ್ಕಸರ ಕಡಿ । ದಾಡಿದೀ ಪೌರುಷಗ ।
ಳಾಡಲಂಜುವನಲ್ಲ ತಾನು ॥
ಗಾಢ ನಿದ್ರೆಯ ಮಾಳ್ಪ । ಖೋಡಿ ದನುಜನ ನಿರಿದ ।
ಪಾಡುಗಳ ತೋರದಿರು ನೀನು ॥401॥

ಅನ್ಯಾಯದಿಂದ ಶತ । ಮನ್ಯು ಮುಂತಾದವರ ।
ಸೈನ್ಯವನು ಬಡಿದು ತ್ರೈಜಗದಿ ॥
ಮಾನ್ಯ ತಾನೆಂಬ ಘನ । ನಿನ್ನ್ಯಾಕೆ ಬಿಡುಜ್ಞಾನ ।
ಶೂನ್ಯ ದಶಕಂಠ ಕಾಳಗದಿ ॥402॥

**ರಾಗ ಭೈರವಿ ಏಕತಾಳ**
ಅನರಣ್ಯಕ ನೆಂಬವನು । ನೀ ।
ಮ್ಮನುವಯದೊಳಗೆ ಪುಟ್ಟಿಹನು ॥

ರಣದೊಳು ತರಿದಂಥವ ನಾ । ನೀ ।
ಕೆಣಕಲು ನೋಡಿಕೊ ಹವಣ ॥403॥

ಗುರುದ್ರೋಹವು ನಿನ್ನೊಳಗೆ । ಇರು ।
ತಿರೆ ಕಾದುವೆಯಾಂ ಹೀಗೆ ॥
ತರುಣಿಯ ದೆಸೆಯಿಂದಲ್ಲ । ಕೇಳ್ ।
ದುರುಳನೆ ಸಾರಿದೆನೆಲ್ಲ ॥404॥

ಪೂರ್ವದ ಹಗೆತನ ಬೆಳೆಸಿ । ನಿನ್ನ ।
ಗರ್ವವ ತೋರ್ಪೆಯ ಸಹಸಿ ॥
ನಿರ್ವಹಿಸದೆ ಬಿಡೆ ನಿನ್ನ । ಛಲ ।
ಸರ್ವಥ ತೋರದಿರಿನ್ನಾ ॥405॥

ಉರಿಮಸಗುತ ರಘುವರನು । ದಶ ।
ಶಿರನಿಗೆಸೆಯಲಸ್ತ್ರವನು ॥
ತರಿದೊಟ್ಟಿತು ಶಿರಗಳನು । ತಲೆ ।
ಭರದಿ ಚಿಗುರೆ ಬಳಿಕವನು ॥406॥

ಕುತ್ತಿದ ಚಿಗುರಿದ ತಲೆಯ । ಭುಜ ।
ಕತ್ತರಿಸಿದ ರಘುರಾಯ ॥
ಮತ್ತೆಪುಟ್ಟಿತು ಮೊದಲಂತೆ । ಬಿಡ ।
ದೊತ್ತರಿಸಿದ ನೋರಂತೆ ॥407॥

ಪಲ್ಲವಿಸಿತು ಬಾಹುಗಳು । ಅದ ।
ನೆಲ್ಲ ತರಿದನನಿತರೊಳು ॥
ತಲ್ಲಣಿಸುತ ಕೋಪದೊಳು । ಅದ ।
ನಿಲ್ಲದ ತೆರ ಖಂಡಿಸಲು ॥408॥

ಶಿರಗಳು ಭುಜಗಳು ಸಹಿತ । ಬಲು ।
ತ್ವರಿತದಿ ಪುಟ್ಟಲು । ಮತ್ತಾ ॥
ಪುರುಷೋತ್ತಮ ನೀಕ್ಷಿಸಿದ । ಅ ।
ಚ್ಚರಿಯೊಳು ಯೋಚನೆಗೆಯ್ದು ॥409॥

**ಕಂದ**

ವನಜಾಂಬಕನೀ ಪರಿಯೊಳು ।
ಮನದೊಳು ಚಿಂತಿಸೆ ಕಂಡಾ ಮಾತಲಿಯಾಗಳ್ ।

ಚಿನುಮಯನಂಘ್ರಿಗೆ ನಮಿಸುತ |
ಲನುನಯದಿಂ ಪೇಳಿದ ರಣ ಕೌತುಕದಿರವಂ ||410||

**ರಾಗ ಕಾಂಭೋಜಿ ಅಷ್ಟತಾಳ**

ಬೇಸರಿಸಲು ಕಾಲವಲ್ಲಿದು ನೋಡಿಕೊ | ರಾಮಚಂದ್ರ || ಈಗ |
ಘಾಸಿಮಾಡೀತನ ದೋಷವನೆಣಿಸದೆ | ರಾಮಚಂದ್ರ ||411||

ಚಿಗುರುವ ತೆರಗಳ ನೋಡಿಯಂಬರದೊಳು | ರಾಮಚಂದ್ರ || ಸುರ |
ನಗರೇಶ ಸಹಿತೆಲ್ಲ ಮಿಡುಕುತ್ತಲಿರುವರು | ರಾಮಚಂದ್ರ ||412||

ತಡ ಮಾಡಲ್ಯಾತಕೊ ತೊಡುಜೀವ ಶರವನು | ರಾಮಚಂದ್ರ || ಕ್ರೂರ |
ದಡಿಗನ ಶಿರವ ಕತ್ತರಿಸೊ ಈಕ್ಷಣದೊಳು | ರಾಮಚಂದ್ರ ||413||

**ಭಾಮಿನಿ**

ಮಾತಲಿಯ ಮಾತುಗಳ ಲಾಲಿಸಿ |
ಭೂತಳೇಶನು ಮಾರ್ಗಣದೊಳಾ |
ಯಾತುಧಾನನ ಶಿರಗಳನು ಕಡಿದುರುಳಿಸಲು ಬಳಿಕ ||
ಆ ತತುಕ್ಷಣ ಶೋಭಿಸುವದತಿ |
ನೂತನದ ಶಿರಪಂಕ್ತಿ ಚಾಪಸ |
ಮೇತ ಬಾಹುಗಳುದುಭವಿಸೆ ಕಂಡಾಗ ರಘುನಾಥ ||414||

**ವಾರ್ಧಕ**

ಸಿಟ್ಟಿನಿಂ ಕುಟ್ಟಿದಂ ಪುಟ್ಟುತೈತಹ ತಲೆಗೆ |
ಚೊಟ್ಟಿದುದು ಬೆಟ್ಟದೊಲ್ ರಟ್ಟೆಗಳ ಕೊಟ್ಟೆ ಮಿಗೆ |
ಯಟ್ಟಹಾಸದೊಳಿರಲು ತಟ್ಟನಾ ಭುಜಕೆ ಭುಜ ಶಿರಕೆ ಶಿರವಾಗಲೊಡನೆ ||
ಎಷ್ಟ ತರಿದೊಟ್ಟೆ ಮತ್ತಷ್ಟೆ ಪುಟ್ಟುವ ಪರಿಯ |
ದಿಟ್ಟಿಸುತ ನಿಟ್ಟುಸಿರ ಬಿಟ್ಟೊಡನೆ ರಥದಿ ಕಂ |
ಗೆಟ್ಟು ಧನುಶರ ಬಿಟ್ಟು ಕುಳಿತ ದನುಜಘರಟ್ಟನೊಡನೆ ಮಾತಲಿ ನುಡಿದನು ||415||

**ರಾಗ ಮುಖಾರಿ ಏಕತಾಳ**

ಲಾಲಿಸು ದೇವರ ದೇವ | ನೀಲಮೇಘಶ್ಯಾಮ ||
ಖೂಳ ದಶಕಂಧರನು ಬರುವ | ನೇಳು ರಣನಿಸ್ಸೀಮ ||416||

ಗಾಢದಿಂದ ಓಡಿಬರುವ | ಮೂಢ ದುರುಳನಾತ ||
ನೋಡು ರಣವ ಮಾಡು ಶರವ | ಹೂಡೆಲೊರಘುನಾಥ ||417||

ಹಾರುತಿಹವು ವಾರುವಗಳು । ಸಾರಿ ಮುಂದಕಾಗಿ ॥
ಭೂರಿ ವಿಕ್ರಮಾತಿಶಯವ । ತೋರು ಕಳವಿಗಾಗಿ ॥418॥

**ರಾಗ ದ್ವಿಜಾವಂತಿ ಝಂಪೆತಾಳ**

ಮಾತಲಿಯೆ ನಾನೆಂಬ । ಮಾತ ನೀ ಕೇಳು ॥
ಯಾತುಧಾನನೊಳು ಕೈ । ಸೋತುದಿಂದಿನೊಳು ॥ ಪಲ್ಲವಿ ॥

ನೂಕಿದೆವು ಶರಗಳ ಸ । ಮೀಕ ಬಾಹಿರನೆಡೆಗೆ ।
ಛೀಕರಿಸಿದಳು ಮತ್ಯು । ಈ ಕಡುಗಲಿಯೊಳು ।
ಯಾಕೆ ಜಯದಭಿಲಾಷೆ । ಸಾಕು ಬಳಲಿದೆಬರಿದೆ ।
ನಾಕೇಶನೆಡೆಗೆ ಸುವಿ । ವೇಕದಿಂ ತೆರಳು ॥419॥

ಶರಣ ಬಾರೈ ಎನ್ನ । ಮರೆಯ ಹೊಕ್ಕೆಯ ಬರಿದೇ
ಎರಡು ವಚನದಾಯ್ತು । ಧರೆಯೊಳೆಮಗಿಂದು ॥
ತೆರಳು ನಿನ್ನಗ್ರಜನ । ಚರಣ ಕಾನತನಾಗಿ ।
ಹರುಷದಿಂ ಜೀವಿಸುವ । ತೆರನ ನೋಡಿನ್ನು ॥420॥

ಇನಕುವರ ಬಾರಿತ್ತ । ದಣಿದಿರಲ್ಲವೆ ಬಣಗು ॥
ದನುಜರೊಳು ಕಾದಿದಿರೆ । ಎನಿತುನಮಗಾಗಿ ॥
ಬನದೊಳಾಡಿದ ನುಡಿಯಿಂ । ದಿನಲಿನಿಲುಗಡೆಯಾಯ್ತು ।
ಘನ ಬೇಗ ಪೋಗು ಕಪಿ । ಗಣಸಹಿತ ಪುರಕೆ ॥421॥

**ರಾಗ ಭೈರವಿ ಝಂಪೆತಾಳ**

ಪಾವಮಾನಿಯೆ ಬಾರೊ । ಸೇವೆಯೊಳು ನಿನ್ನ ಸರಿ ।
ಯಾವಾತನನು ಕಾಣೆ । ಭೂವಲಯದೊಳಗೆ ॥
ಭಾವಿತನು ನಮಗೆ ಸಂ । ಭಾವ್ಯರೀ ಜಾಂಬವರು ।
ಈ ವಿರೋಧಗಳೆಲ್ಲ । ನೀವು ನೋಡಿದಿರೆ ॥422॥

ತಮ್ಮ ನೀನ್ಯಾಕಿಂದು । ದುಮ್ಮಾನದಿಂದಿರುವೆ ।
ನಮ್ಮ ರಣಗಲಿತನವ । ನೊಮ್ಮೆ ನೋಡಿದೆಯ ॥
ಸುಮ್ಮನೀಯಾಣಕವು । ನೆಮ್ಮಿತಲ್ಲವೆ ಜಗದಿ ।
ದುಮ್ಮಾನದಿಂದಿನ್ನು । ಹಮ್ಮಯಿಸಲೇನು ॥423॥

ಧರಣಿಜೆಯ ನೀಗಾಡಿ । ಧುರದೊಳಪಜಯಗೂಡಿ ।
ಧರೆಯ ಸಂಚರಿಸಿ ರಘು । ವರ ಪೋದನೆಂದು ॥

ಅರುಹು ನೀನದ ಪೋಗಿ । ತೆರಳು ಪುರದೆಡೆಗಾಗಿ ।
ಬರಿದೆ ತಡಮಾಡದಿರು । ತರಹರಿಸಿ ನೀನು ॥424॥

**ಭಾಮಿನಿ**

ಮಾತೆಯರಿಗನುಜಾತಮುಖ್ಯ ಸ ।
ಮೇತ ಪುರಪರಿವಾರ ಜನರೊಳು ।
ಈ ತೆರನ ಪೇಳೆನಲು ಕೈ ಮುಗಿದೆಂದ ಸುರಸೂತ ॥
ಮಾತಕೇಳೆಲೊ ದೇವನೀದನು ।
ಜಾತವಂಶಾಂತಕನು ದ್ರುಹಿಣನ ।
ತಾತ ನೀನೀ ಪರಿಯ ಮಾತುಗಳಾಡಲೇಕಿನ್ನು ॥425॥

**ರಾಗ ಬಿಲಹರಿ ಅಷ್ಟತಾಳ**

ಬಲ್ಲೆ ದೇವ ನಿನ್ನ ಚರಿತ । ಇದ ।
ನೆಲ್ಲ ತೋರಿಸಲ್ಯಾಕೊ ಶ್ರೀ ರಘುನಾಥ ॥
ಮಲ್ಲ ಮಾಯಾವಿ ನೀನೆನುತ । ನರ ।
ನಲ್ಲ ನೀ ಪುಲ್ಲಲೋಚನ ನೆಂಬಮಾತ । ಬಲ್ಲೆ ॥426॥

ಸುಜನಪಾಲಕ ವಿಶ್ವಂಭರನೆ । ನೀನು ।
ಭಜಕ ರಕ್ಷಕನಲ್ಲೊ ದಶರಥಾತ್ಮಜನೆ ॥
ಭುಜಗಶಯನ ಲಕ್ಷ್ಮೀವರನೆ । ನೀನು ।
ಅಜಪಿತನಾಗಿಹೆ ಖಳಕುಲಾಂತಕನೆ । ಬಲ್ಲೆ ॥427॥

ಎನಗೆ ಹೊಸಬ ನೇನಲ್ಲಾ । ನಿನ್ನ ।
ಘನ ಮಾಯೆಯನು ಇವರರಿತವರಲ್ಲ ॥
ಚಿನುಮಯಾತ್ಮಕ ನಿನ್ನ ನಿಜವ । ನಾನು ।
ಮನದಿ ನಿಶ್ಚಯಿಸಿಹೆ ತೆಗೆಧನುಶರವ ॥ ಬಲ್ಲೆ ॥428॥

**ಭಾಮಿನಿ**

ಬಿಡುವಥಾ ದುರ್ಮ್ಮಾನವ್ಯಾಕೀ ।
ದಡಿಗ ದಾನವ ನಿನ್ನ ಶರದಲಿ ।
ಮಡಿಯದಿರೆ ಸುರಸೂತನೇ ತಾನೆನುತ ಗರ್ಜಿಸಿದ ॥
ಕಡುಗಲಿಯತನಗಳನು ಮೆರೆಸೆಂ ।
ದೊಡನೆ ಪೇಳ್ತಿರಲಂದು ರಾಘವ ।
ಬಿಡದೆ ಯೋಚಿಸುತೆಂದ ಮಾತಲಿಗಧಿಕ ದುಗುಡದಲಿ ॥429॥

**ರಾಗ ಕೇದಾರಗೌಳ ಅಷ್ಟತಾಳ**

ದೇವನಾನಾದರೆ । ಈ ವಿರೋಧಿಯ ಕೊಲ್ವು ।  ದಾವುದು ಘನವೆಮಗೆ ॥
ನೀವು ದೇವರದೇವ । ದೇವನೆಂದೆನುತಲಿ ।  ಭಾವಿಸುವಿರಿ ಸುಮ್ಮನೆ ॥430॥

ಮರುಳೆ ಸಾರಥಿಯೆಮ್ಮ । ಧುರದೊಳ್ ಸಾಯುವನೆ ಈ ।  ಧುರಪರಾಕ್ರಮಿ ಖೂಳನು ॥
ಬರಿದೆ ಮಾನವರಿಗೀ । ತೆರನ ಪೇಳದಿರಿನ್ನು ।  ಅರಿತಿಕೋ ಮನದಿ ನೀನು ॥431॥

ಎಂದು ಪೇಳುತ ರಘು । ನಂದನನು ದಿವ್ಯಾ ।  ಸ್ಯಂದನದಿಂದಿಳಿಗೆ ॥
ಚಂದದಿಂದಿಳಿಯಲಿ । ಕಂದು ರಾವಣನೋಡು ।  ತೆಂದನು ರಘುವರಗೆ ॥432॥

ಮನದೊಳಂಜುವೆ ಯಾಕೆ । ಜನಪ ಕೇಳ್ ನಿನಗೀಗ ।  ರಣದೊಳಲ್ಲದೆ ನಾನಿಂದು ॥
ಧನುವಿಗೆ ಶರ ತೊಡು । ವೆನೆ ನೀನು ಬೆದರದಿ ।  ರೆನುತೆಂದ ರಾಮಗಂದು ॥433॥

**ಕಂದ**

ರಥದಿಂದಿಳೆಗಯ್ದಿದ ರಘು ।
ಪತಿಯಂ ಕಾಣುತಲಾ ಕಮಲಜ ಬೇಗದೊಳಂ ॥
ಮತಿಯುತನಾ ಕಲಶಜನಂ ।
ಕ್ಷಿತಿಪನೆಡೆಗೆ ಪೋಗೆನೆ ನಲವಿನೊಳೈತಂದಂ ॥434॥

**ರಾಗ ಬಿಲಹರಿ ರೂಪಕತಾಳ**

ಮತ್ಯುಂಜಯ ಮತ್ಯುಂಜಯ । ಮತ್ಯುಂಜಯ ಶಿವನೆ ॥
ಉತ್ತಮ ಶ್ಲೋಕನೆ ತ್ರೈಜಗ । ಕುತ್ತಮ ಶುಭಿಕರನೆ ॥435॥

ಚಿತ್ತಜವೈರಿಯ ಸ್ಮರಿಸುತ । ಗಸ್ತ್ಯನು ನಡೆತಂದ ॥
ಚಿತ್ತದಿ ಹರುಷದೊಳಾ ಪುರು । ಷೋತ್ತಮ ನೆಡೆಗೆಂದ ॥436॥

ಜಯ ರಾಘವ ಜಯರಾಘವ । ಜಯಜಯ ರಘುವರನೆ ॥
ಭಯಹರ ತ್ರೈಜಗಪಾವನ । ಜಯ ಶಂಕರ ಪ್ರಿಯನೆ ॥437॥

ದಯಸಾಗರ ನಿಗಮಾಗಮ । ಚಯನುತ ಶ್ರೀಕರನೆ ॥
ನಯದಿಂದೀಮೂರ್ಲೋಕಕೆ । ನಿಯಮಕ ಸುಚರಿತನೆ ॥438॥

**ರಾಗ ಅರಭಿ ಆದಿತಾಳ**

ಪಾಲಿಸು ಪರಮ ಪವಿತ್ರ । ಜಯಜಯ । ಪಾಲಿಸು   ॥ ಪಲ್ಲವಿ ॥

ಜೀಯ ನಿನ್ನಯ ಬಹು । ಮಾಯಕತನದ ಉ ।
ಪಾಯ ಸಾಕೆಲೊ ದೇವ । ಕಾಯಜಾಂತಕಪ್ರೀಯ ॥439॥

ದುರುಳ ರಾವಣನಿಂದು । ತರಿಯದಿರಲು ಮುಂದು ।
ಸುರರು ಬಾಯ್ ಬಿಡುತಲೆ । ತರಹರಬಡುತಲೆ ॥440॥

ಅವಧರಿಪುದು ಸೂರ್ಯ । ಕವಚವಿಂದಿಗೆ ಕಾರ್ಯ ।
ಸವನಿಸುವದು ತ್ವೈ । ಭುವನ ರಕ್ಷಕ ನೀನ್ವೈ ॥441॥

**ಭಾಮಿನಿ**

ಮನದಿ ಹರಿ ಬ್ರಹ್ಮೇಶ್ವರರ ನೆನೆ ।
ದಿನಿತು ಪ್ರಾಣಾತ್ಮಕನ ಭಾವಿಸು ।
ಗುಣಮಹಿಮ ತ್ರಿಗುಣಾತ್ಮಕನ ತ್ರೈಲೋಕ್ಯಪಾಲಕನ ॥
ಘನಮಹಿಮ ಕಾಲಾಗ್ನಿ ರೂಪನ ।
ಚಿನುಮಯನ ಶ್ರೀ ಸೂರ್ಯನಾರಾ ।
ಯಣನ ಸತ್ಕವಚವಿದು ಶುದ್ಧದೊಳನುಕರಿಸು ದಢದಿ ॥442॥

**ರಾಗ ಮಾರವಿ ಏಕತಾಳ**

ಸುರಮುನಿ ಪೇಳಿದ ಕವಚವ ಬೇಗದಿ ।  ಸರಸಿಜದಳನಯನ ॥
ಪರಮಶುದ್ಧದಿಂ ಧರಿಸಲೈತಂದನು ।  ತರಣಿ ಬೇಗದೊಳಿನ್ನಾ ॥443॥

ಕೊಟ್ಟನು ಹರಿಹರಬ್ರಹ್ಮಾದಿಗಳತಿ ।  ಗುಟ್ಟಿನ ಮಂತ್ರಗಳ ॥
ಸೃಷ್ಟಿಪಾಲಗಿತ್ತುಪಚರಿಸುತ ಬೀ ।  ಳ್ಕೊಟ್ಟರೆ ತವಕದೊಳು ॥444॥

ಇತ್ತಲು ಮಾತಲಿ ಶಾರ್ಙ್ಗಮಹಾಶರ ।  ಚಿತ್ತಜಪಿತಗೀಯೆ ॥
ಹತ್ತಿ ರಥವ ಧನುವೆತ್ತಲು ಕೀಶರ ।  ಮೊತ್ತವು ಬೊಬ್ಬಿರಿಯೆ ॥445॥

**ಭಾಮಿನಿ**

ಮೆರೆವ ಶಾರ್ಙ್ಗಮಹಾಶರವ ಕರ ।
ಸರಸಿರುಹದಲಿ ಪಿಡಿದ ಧನುವಿಗೆ ।
ಗುರಿವಿಡಿಯಲನಿತರೊಳು ವಿಶ್ವಾಕಾರ ತಾನಾದ ॥
ಹರಪಿತಾಮಹ ಸುರಪ ಮನುಮುನಿ ।
ವರರನುರೆ ಬ್ರಹ್ಮಾಂಡಕೋಟಿಯ ।
ಧರಿಸಿರುವ ಶ್ರೀ ವಿಮಲ ಮೂರ್ತಿಯ ಕಂಡನಸುರೇಂದ್ರ ॥446॥

**ರಾಗ ಯರಕಲಕಾಂಭೋಜಿ ತ್ರಿವುಡೆತಾಳ**

ಕಂಡನು ದಶವದನ । ಕೋದಂಡರಾಮನ ॥ ಪಲ್ಲವಿ ॥

ಪುಂಡರೀಕಾಂಬಕನ ಜಗದೋ ।
ದ್ದಂಡರೂಪನ ಖಂಡಬಲ ಬ್ರ ।
ಹ್ಮಾಂಡಕೋಟಿಯ ತಂಡಗಳ ಕಪೆ ।
ಗೊಂಡು ಸಲಹುವ ಜಾಂಡಧೀಶನ ॥ ಅ ॥

ಮೂರು ಮೂರ್ತಿಯ ರೂಪನ । ವಿಶ್ವಾಕಾರ । ಸಾರಸಗುಣದೀಪನ ॥ ವೀರನ । ತೋರುತಿಹ ಮಾಯಾವಿ । ಚಾರನ
। ಕ್ಷೀರಾಬ್ಧಿಶಯನ ಗಂ । ಭೀರನ । ಕಾರಣಿಕ ಸೂತ್ರಾ । ಧಾರನ ॥
ಚಾರುನಿಗಮವಿದೂರ ನಿರುಪಮ ।
ಶೂರ ಸುರುಚಿರ ಹಾರ ದುರಿತಸಂ ।
ಹಾರ ಹರಸುರವಾರನುತ ಖಗ ।
ದೇರ ದೀನೋದ್ಧಾರನೆನಿಪನ ॥ ಕಂಡನು ॥447॥

ಸುಂದರ ನೀಲಗಾತ್ರನ । ಸರ್ವಾಭರಣ । ವಂದ ಸನ್ನುತಿಪಾತ್ರನ ॥ ಸಿಂಧುವ ।
ಹರಕೋಟಿಗಡಣಗ । ಳಂದವ ।
ಅರ್ಬುದ ಪಿತಾಮಹ । ವಂದವ ।
ಸುರನಾಥರಮರರಚಂದವ ॥

ಇಂದಿರೇಶ ಮುಕುಂದ ವದನದ ।
ಮಂದಹಾಸವ ವಂದಿಸುತ ಪುರ ।
ಮಂದಿಗಡಣದೊಳಂದು ತಾಪೂ ।
ರ್ಣೆಂದು ತೇಜದಿ ನಿಂದಿರುವವನನು ॥ ಕಂಡನು ॥448॥

ನಿರುಪಮ ನಿಶ್ಚಿಂತನ । ನಿರ್ಧರಿಸಲಿ । ಕರಿಯದ ಮತಿವಂತನ ॥ ಕರುಣನ । ಸರ್ವರೊಳು ವ್ಯಾಪಿಸು । ತಿರುವನ । ಶರಣರನು ರಕ್ಷಿಸಿ
। ಮೆರೆವನ । ಪರಮಾತ್ಮ ಸದ್ಗುಣ । ಭರಿತನ ।
ಮರಣ ರಹಿತನ ಪರಮ ಶಾಂತನ ।
ನಿರತಿಶಯ ಸಚ್ಚರಿತ ಪರಮೇ ।
ಶ್ವರ ಪರಾತ್ಪರ ಪರಮ ವಿಶ್ವಂ ।
ಭರನ ಸೀತಾವರನ ಮೂರ್ತಿಯ ॥ ಕಂಡನು ॥449॥

**ಭಾಮಿನಿ**

ನುಡಿಗೆ ನಿಲುಕದ ನಿಗಮ ರೂಪನ ।
ಷಡುವಿಕಾರವಿಹೀನನನು ಕಂ ।
ಡೊಡನೆ ಜಯ ಜಯವೆನುತ ನುತಿಸಿದನಂದು ಮನದೊಳಗೆ ॥

ಜಡಜನಾಭ ಮುಕುಂದ ಕೈಟಭ ।
ಧಡಿಗಮಧುಖಳನಾಶ ತ್ರೈಜಗ ।
ದೊಡೆಯ ಶ್ರೀವರ ನಾರಸಿಂಹನೆ ಎನುತ ಕೈ ಮುಗಿದ ॥450॥

**ರಾಗ ಕಲ್ಯಾಣಿ ಝಂಪೆತಾಳ**

ಜಯತು ಜಯ ಸಚ್ಚಿದಾನಂದ ರೂಪ ।
ಜಯ ಜಯತು ಘನಮಹಿಮ ಕೀರ್ತಿಕಲಾಪ ॥ ಪಲ್ಲವಿ ॥

ಎಲ್ಲಿ ಸುತಪಿತರುಗಳು ಎಲ್ಲಿ ಸತಿಸೌಭಾಗ್ಯ ।
ಎಲ್ಲಿ ಮಿತ್ರವಿಚಾರ ಎಲ್ಲಿ ಅತಿಹಿತರು ॥
ಎಲ್ಲಿ ಮಾಯಕತತ್ತ್ವದಲ್ಲಿ ತೋರುವ ಪರಿಗೆ ।
ಳೆಲ್ಲಿವಿದು ಸ್ಥಿರವಲ್ಲ ಬಲ್ಲ ಸುಜ್ಞಂಗೆ ॥451॥

ನಾರಿ ಜಾನಕಿಯೆತ್ತ ಘೋರರಕ್ಕಸರೆತ್ತ ।
ವಾರಿಧಿಯ ಬಂಧಿಸುವದ್ಯಾರಿಗುಚಿತ ।
ವಾರಿಜೋದ್ಭವನ ಸುಕುಮಾರಕರ ಶಾಪದವಿ ।
ಚಾರವಲ್ಲದೆ ನಮಗಿನ್ನೀ ರೀತಿಯಹುದೆ ॥452॥

**ಭಾಮಿನಿ**

ಎಂದೆನುತ ಸಚರಾಚರಾತ್ಮಕ ।
ಗಂದು ಮನ್ಮನದೊಳಗೆವಂದಿಸಿ ।
ಸಿಂಧುಶಯನನ ನೋಡಿ ಬಿಲುಧ್ವನಿದೋರಿ ಬೊಬ್ಬಿರಿದ ॥
ಇಂದಿರಾ ಪತಿ ಕಾಣುತಲೆದಶ ।
ಕಂದರನ ನಯನುಡಿಯ ಮಾತುಗ ।
ಳಿಂದ ಮಾತಾಡಿಸಲುಪಕ್ರಮ ಗೆಯ್ದನಾಕ್ಷಣಕೆ ॥453॥

**ರಾಗ ಖಮಾಚ್ ತ್ರಿವುಡೆತಾಳ**

ಸಾಕು ಸಾಕು ಬೇಡ ಛಲ ಫಡ । ಬಲುಜೋಕೆ ನೋಡು ॥ ಪ ॥

ಮೂರುಲೋಕ ವೀರ ನಿ । ನ್ನಾರು ಭಟೆಯ ನೋಡೆ ಸುಮನ ।
ವಾರವೆಲ್ಲ ಬೆದರುತಿರವ । ಧೀರ ಪಟುಭಟಾಗ್ರಗಣ್ಯ ॥ ಸಾಕು ॥ ಅ ॥

ಒಂದು ಸಾರಿ ಕೊಡೆಯ ತರಿದೆನು । ಎರಡನೆಯ ಬಾರಿ । ಯಂದು ನಿನ್ನ ಕೆಡೆಯ ಲೆಚ್ಚೆನು ॥
ಮಂದಮತಿಯೆ ಮೂರನೆಯೊಳು । ಸ್ಯಂದನವನು ಸಹಿತನಿನ್ನ ।
ನೊಂದು ಪೈಶಾಚಕನ ತೆರದಿ । ಮಂದಿರದೊಳು ಹೊಂದಿಸಿದೆನು ॥ ಸಾಕು ॥454॥

ಮೂರುಬಾರಿ ಎನ್ನ ಬಲುಹನು । ನೀ ನೋಡುತಲೆ ವಿ ।
ಚಾರಶೂನ್ಯನಂತೆ ರಣವನು ॥
ಧೀರತನದಿ ಗೆಯ್ದರೇನು । ಸೇರುವಳೆಜಯಾಂಗನೆಯು ।
ಸಾರಿದೆ ನಾನಿನ್ನನಿಂದು । ಧಾರಿಣಿಯು ಮೆಚ್ಚುವಂತೆ ॥ ಸಾಕು ॥455॥

ಶರಣುಬಂದರೆನ್ನ ನೀಕ್ಷಣ । ನಿನಗೀವೆ ಲಂಕೆ । ಯರಸುತನವ ನೋಡು ವಿಚಕ್ಷಣ ॥
ಧರಣಿಯಿರುವ ತನಕ ನಿನ್ನ । ಶರಣರಂತೆ ಸಲಹೆ ಮುನ್ನ ।
ಭರಿತ ಸುಖಗಳಿತ್ತು ದ್ರುಹಿಣ । ನಿರುವವರೆಗೆ ಪೊರೆವೆ ನಿನ್ನ । ಸಾಕು ॥456॥

ಅಂದು ಹರಿಯ ಮೊಮ್ಮನೊಂದಿಗೆ । ನಾಪೇಳ್ದ ಪರಿಗ । ಳೊಂದು ಚಲಿಸದಂತೆ ಇಂದಿಗೆ ॥ ಚಂದದಿಂದ ನಡೆಸಿಕೊಡುವೆ ।
ಕುಂದದಧಿಕ ಭಾಗ್ಯವೀವೆ । ನೆಂದ ಮಾತಿಗೆರಡದಿಲ್ಲ । ಪೊಂದು ನಮ್ಮನಿಂದು ಮಲ್ಲ ॥ ಸಾಕು ॥457॥

**ಭಾಮಿನಿ**

ಧರಣಿ ತಲೆಕೆಳಗಾದಡೆಯು ನಾ ।
ಶರಣು ಬರುವವನಲ್ಲ ಮಿಕ್ಕಿನ ।
ಸಿರಿಯು ತನಗಿನ್ನುಂಟು ಕೇಳಿನ್ನಿಳೆಯನಂದನೆಯ ॥
ಸರುವಥಾ ಕೊಡೆ ನಿನ್ನೊಳಾಹವ ।
ವಿರಚಿಸಲಿಕಂಜಿದರೆ ಗಿರಿಜಾ ।
ವರನ ಬಂಟನೆ ತಾನೆನುತ ಬೊಬ್ಬಿರಿದ ದಶಕಂಠ ॥458॥

**ರಾಗ ಕೇದಾರಗೌಳ ಅಷ್ಟತಾಳ**

ಏನಯ್ಯ ಶರಣ ನಿನ್ನಣ್ಣನ ಮಾತು ನಿ ।
ಧಾನಿಸಿದೆಯೊ ಮನದಿ ॥
ನಾನೆಷ್ಟು ಪೇಳ್ದರು ಕೇಳನಿತನು ಬುದ್ಧಿ । ಶೂನ್ಯನಲ್ಲವೆ ಜಗದಿ ॥459॥

ಕೊಲಲೊ ಈತನ ಕೊಲ್ಲದುಳಿಹಲೊ ಪೇಳು ನಿ । ನ್ನೊಳವ ಬೇಗದೊಳೆನ್ನೊಳು ॥
ತಿಳಿಯಲಿಬ್ಬರ ಮಾತೆಯೊಬ್ಬಳಲ್ಲವೆ ಚಿತ್ತ ।
ದೊಳು ಬೇಸರಿಹುದೆ ಪೇಳು ॥460॥

ದುಷ್ಟ ದುರಾಚರದೊಳಗಿರುತಿಹ ಮತಿ । ಭ್ರಷ್ಟ ನಮ್ಮಣ್ಣನನು ॥
ಕುಟ್ಟಿಕೆಡಹಿ ತ್ರಿಭವನವ ರಕ್ಷಿಸೊ ಭಕ್ತಾ । ಭೀಷ್ಟದಾಯಕನೆನೀನು ॥461॥

ತಂದೆತಾಯಿಗಳಣ್ಣ ತಮ್ಮಂದಿರೆನ್ನಯ ।
ಬಂಧುಬಾಂಧವರೆಲ್ಲರು ॥
ಇಂದಿರಾಪತಿಯೆ ನೀನೆಂದು ಬಂದಿರುವೆ ಆ ।
ನಂದದಿ ಕಪೆಯ ತೋರೋ ॥462॥

ಈ ಖೂಳನಿಂಗೆ ನಾ ಸಾರಿ ಪೇಳಿದೆಮೂರು । ಲೋಕ ಮೆಚ್ಚುವ ತೆರದಿ ॥
ನಾಕದವರು ಸಾಕ್ಷಿಯಿರಲಿಮ್ಮೊಳು ಅವಿ । ವೇಕವಿಲ್ಲವು ನಿಜದಿ ॥463॥

**ಭಾಮಿನಿ**

ಮೂರು ಮೂರ್ತಿಗಳಿಂದ ಪಡೆದಿಹ ।
ಘೋರತರದಸ್ತ್ರಗಳಿರಲು ನೀ ।
ತೋರು ಈ ಕ್ಷಣದೊಳಗೆ ತಡವ್ಯಾಕೆನುತಲಿದಿರಾಗೆ ॥
ಸೂರ್ಯಕುಲ ಸಂಜಾತನೊಡನಾ ।
ಭೋರನೇಳ್ತಂದಾಗ ಶರಣನು ।
ದಾರಬಲ ಖಳನುರಕೆ ಬಿಡು ನಿನ್ನಸ್ತ್ರವೆನಲದಕೆ ॥464॥

**ವಾರ್ಧಕ**

ಕುಂಭಕರ್ಣಾನುಜನೆ ಕೇಳು  ನಿನ್ನಣ್ಣನೆದೆ ।
ಗಂಬನೆಸೆವುದಕೆ ಕಾರಣ ವೇನು ಪೇಳು ಪೇ ।
ಳೆಂಬ ಮಾತಿಗೆ ಪೂರ್ವದೊಳಗೀತ ಹರನ ಸಭೆಯೊಳು ನಂದಿಕೇಶನುರಕೆ ॥
ಜಂಬೀರಪಣ್ಣನಣಕಿಸುತಿಡಲು ವಷಭ ತ ।
ನ್ನಂಬಕದಿ ಕಿಡಿಸೂಸಿ ಹದಯದಲಿ ನಿನಗೆ ಮರ ।
ಣಂಬರಲಿ ಎಂದೆನುತ ಶಾಪವಿತ್ತುದರಿಂದ ತೊಡು ಎದೆಗೆ ಮಾರ್ಗಣವನು  ॥465॥

**ರಾಗ ಭೈರವಿ ಏಕತಾಳ**

ಎಂದಾ ಶರಣನ ಮಾತ । ರಘು ।  ನಂದನ ಲಾಲಿಸಿನಗುತಾ ॥
ಮಂದಮತಿಗೆ ಕೂರ್ಗಣೆಯ । ಬಿಡ   ಲಂದೆಣಿಸಲು ಖಳಮಣಿಯು ॥466॥

ತಿಳಿದನನುಜನೆಂದುದನು । ತಾ ।  ನಳಲಿದರಿಂದಹುದೇನು ॥
ಅಳಿವುದೆ ಋಷಿ ವಾಕ್ಯಗಳು । ಸರಿ ।  ಗೊಳಿಸುದುದೀ ರೀತಿಯೊಳು ॥467॥

ಆತ್ಮಜ್ಞಾನವ ಬೆಳೆಸಿ । ಅಂತ ।  ರಾತ್ಮನ ತನ್ನೊಳು ಸ್ಮರಿಸಿ ।
ಆತ್ಮಾನಂದವ ನರಿದ । ವಿ ।  ಶ್ವಾತ್ಮನ ನೋಡಿ ಬೊಬ್ಬಿರಿದ ॥468॥

ನೋಡಿದ ರಘುಕುಲಜಾತ । ದಯ ।  ಗೂಡಿ ಪೇಳ್ದನೊಂದು ಮಾತ ॥
ಕೂಡಿಕೊ ಎನ್ನೊಳು ಬೇಗ । ಛಲ ।  ಬೇಡ ಸಾರಿದೆ  ನಾನೀಗ ॥469॥

ಸನ್ನುತ ವಿಶ್ವಾತ್ಮಕನು । ನೀ ।  ನೆನ್ನುವುದರಿತೆನು ನಾನು ॥
ಮನ್ನಣೆ ಮಾತುಗಳಲ್ಲ । ನೀ ।  ನೆನ್ನೊಳರುಹಿ ಫಲವಿಲ್ಲ ॥470॥

ತಪ್ಪುಗಳೆನ್ನೊಳಗಿಲ್ಲ । ಇದ । ಕೊಪ್ಪುವುದೀ ಜಗವೆಲ್ಲ ॥
ಅಪ್ಪಳಿಸುವೆ ನಿನ್ನೆನುತ । ಭುಜ । ಚಪ್ಪರಿಸಲು ಶ್ರೀನಾಥ ॥471॥

ರಂಜನೆ ಮಾತುಗಳೇನು । ಖಳ ।
ಭಂಜನ ನೀನೆಂಬುದನು ।
ಸಂಜನಿಸಲು ಮನಸಿನೊಳು । ನಾ । ನಂಜೆನು ರಣಭೂಮಿಯೊಳು ॥472॥

ನುಡಿಯನು ಕೇಳುತ ರಾಮ । ಶರ । ಬಿಡಲಾಕ್ಷಣ ನಿಸ್ಸೀಮ ॥
ಪೊಡವಿಯು ಕಂಪಿಸಲಾಗ । ಖಳ । ನೆಡೆಗಯ್ತಂದುದು ಬೇಗ ॥473॥

**ಭಾಮಿನಿ**

ಶರಹತಿಗೆ ತನು ಬಿಡುತ ರಾವಣ ।
ತರಹರಿಸಿ ಮೂರನೆಯ ಜನ್ಮಕೆ ।
ತೆರಳಲಿತ್ತಲು ಸುರರು ಪೂಮಳೆಗರೆದರಾ ಕ್ಷಣಕೆ ॥
ಹರುಷದಿಂದಾ ಸುಮನಸರ ಸತಿ ।
ಯರು ವಿನೋದಗಳಿಂದ ಸುಸ್ವರ ।
ವೆರೆಸಿ ಜಯ ಜಯವೆನುತ ಪಾಡಿದರತಿ ವಿಚಿತ್ರದಲಿ ॥474॥

**ರಾಗ ಬಿಲಹರಿ ರೂಪಕತಾಳ**

ಮಂಗಳ ಜಯ ಮಂಗಳ
ಜಯ ಮಂಗಳ ರಘುವರನೆ ॥
ಮಂಗಳ ಜಯ ಮಂಗಳ ನರ ।
ಸಿಂಗನೆ ಭಯಹರನೆ ॥ ಮಂಗಳ ॥475॥

ಜಯ ಜಯ ಖಳ । ಕುಲನಾಶಕ । ಜಯ ಜಯ ಸುಚರಿತನೆ ॥
ಜಯ ಮಾಧವ । ಜಯ ಕೇಶವ । ಜಯ ನಾರಾಯಣನೆ ॥ ಮಂಗಳ ॥476॥

ರಘುವಂಶೋ । ದ್ಧಾರಕ ತ್ರೈ । ಜಗವಂದಿತ ರೂಪ ॥
ಅಗಣಿತ ವಿ । ಕ್ರಮ ಸದ್ಗುಣ । ನಿಗಮಾಗಮ ಭರಿತ ॥ ಮಂಗಳ ॥477॥

ಶರಣಾಗತ । ಜನರಕ್ಷಕ । ನಿರುಪಮ ಗುಣವ್ರಾತ ॥
ಸರಸಿಜಲೋ । ಚನ ಅಘಹರ । ಸುರಮನು ಮುನಿಪ್ರೀತ ॥ ಮಂಗಳ ॥478॥

**ವಾರ್ಧಕ**

ಬಳಿಕಾ ವಿಭೀಷಣನ ಮಂಡೋದರಿಯ ಸೊಸೆಯ ।
ರಳಲ ಪರಿಹರಿಸಿ ದಶಕಂಠ ಮೊದಲಾದಸುರ ।
ರಳಿದವರಿಗೌರ್ಧ್ವದೈಹಿಕವ ಮಾಡಿಸಿ ಶರಣನಿಂಗೆ ಲಂಕಾದುರ್ಗದ ॥

ಚೆಲುವ ದೊರೆತನವಿತ್ತಾ ಧರಣಿ ನಂದನೆಯ ।
ನೊಲಿಸಿ ಸಹಜನ ಕೂಡಿಕೊಂಡು ಕಪಿವರರ ಸಹಿ ।
ತಲಕಾಧಿಪನ ಪುಷ್ಪಕವನೇರಿ ಶ್ರೀರಾಮ ನಿಜನಗರಿಗಯ್ತಂದನು ॥479॥

**ಭಾಮಿನಿ**

ಮಾತೆಯರ ಸಂತಯಿಸಿ ತನ್ನನು ।
ಜಾತ ಮುಖ್ಯರಕೂಡಿಯಾಸಾ ।
ಕೇತಪುರಪಟ್ಟಾಭಿಷೇಕವ ಶುಭಮಹೂರ್ತದಲಿ ॥
ಜ್ಯೋತಿಷಜ್ಞರ ಮತದಿ ರಚಿಸಲಿ ।
ಕಾ ತತುಕ್ಷಣದೊಳಗೆ ಸತಿಯರು ।
ನೂತನದ ಹಾಡಿಕೆಯೊಳೆತ್ತಿದರಾರತಿಯನಂದು ॥480॥

**ಮಂಗಳ**

**ರಾಗ ಮೋಹನ ಆದಿತಾಳ**

ಮಂಗಲಂ ಜಯ ಮಂಗಲಂ ॥ ಪ ॥
ಮಂಗಲ ಜಯ ಜಯ ರಾಘವಗೆ । ಜಯ ।
ಮಂಗಲ ತ್ರೈಜಗಪೋಷನಿಗೆ ॥
ಮಂಗಲ ಶ್ರೀಕರ ಮಾಧವಗೇ । ಜಯ ।
ಮಂಗಲ ಸೀತಾ ವಲ್ಲಭಗೆ ॥ ಮಂಗಲಂ ॥481॥

ಇನಕೋಟಿ ತೇಜ ವಿಶ್ವಾತ್ಮಕಗೇ । ಚೆಲ್ವ ।
ಇನಕುಲಾಂಬುಧಿಪೂರ್ಣಚಂದ್ರನಿಗೆ ॥
ದನುಜ ಕುಲಾಚಲಹೀರನಿಗೆ । ವರ ।
ಮನುಮುನಿಜನಮನ ಮಧುತರಗೆ ॥ ಮಂಗಲಂ ॥482॥

ಸುಂದರರೂಪಗೆ ಶುಭಕರಗೆ । ಚೆಲ್ವ ।
ಇಂದಿರಾಪತಿ ಇನತುಕುಲಸ್ಮರಗೆ ॥
ಕಂದುಗೊರಳಸಖ ಕೇಶವಗೆ । ಸುರ ।
ವಂದರಕ್ಷಕ ದ್ರುಹಿಣನ ಪಿತಗೆ ॥ ಮಂಗಲಂ ॥483॥

**ಭಾಮಿನಿ**

ತರಳರಿರ ನಿಮ್ಮಯ್ಯನೀ ಪರಿ ।
ಹರುಷದಿಂ ಸಾಕೇತಪುರದೊಳು ।
ಭರಿತ ಸುಖದಿಂ ರಾಜ್ಯವನು ಪಾಲಿಸುತಲಿರುತಿರ್ದ ॥
ಪರಮಮಂಗಳ ಸಚ್ಚರಿತ್ರವ ।

ನರುಹಿದೆನು ನಿಮಗಿದನು ಸಾಂಗದಿ ।
ಪರಮ ಸುಖಸಾಮ್ರಾಜ್ಯಪದಗಳ ಸಿದ್ಧಿಸುವ  ಕಥೆಯ ॥484॥

ಮೆರೆವ ಕಾಸರಗೋಡಪುರನೊಳ ।
ಗಿರುತಿರುವ ಭೂಸುರಕುಲೋತ್ತಮ ।
ಪರಮ ಭಗವದ್ಭಕ್ತ ಬೀ. ಕೃಷ್ಣಯ್ಯ ನೆಂಬುವನ ॥
ತರಳನಾಸಿದ್ಧಾಂತ ಪಂಡಿತ ।
ವರನು ಸುಬ್ಬಾಯಾಖ್ಯನೆಸಗಿಹ ।
ಚರಿತೆಯಿದು ಶ್ರೀರಾಮಚಂದ್ರನ ಕರುಣದಿಂದೋದು ॥485॥

ಧನ್ಯ ಜಯಶಕದುತ್ತರಾಯಣ ।
ತನ್ನಖುತು ಮೊದಲನೆಯ ಮಾಸದೊ ।
ಳಿನ್ನೆಸೆವ ಮತ್ಯುವಿನ ತಿಥಿ ಶನಿವಾರದೊಳಗಿದನು ॥
ಪನ್ನಗಾಶನವಾಹನನ ಕಥೆ ।
ಯನ್ನು ರಚಿಸಿದೆ ತ್ರೈಜಗತ್ಪತಿ ।
ಯಿನ್ನು ನಮ್ಮನು ಪೊರೆವನತಿ ಕಾರುಣ್ಯದಿಂದೊಲಿದು ॥486॥

ಮಂಗಲಂ ಜಯನಾರಸಿಂಹಗೆ ।
ಮಂಗಲ ಲೋಕೈಕ ವೀರಗೆ ।
ಮಂಗಲಂ ತ್ರೈಭುವನಸಂಜೀವನಿಗೆ ಜಯ ಜಯತು ॥
ಮಂಗಲಂ ಧಾತ್ರಿಜೆಯ ವರನಿಗೆ ।
ಮಂಗಲಂ ಸಿತಕಂಠಮಿತ್ರಗೆ ।
ಮಂಗಲಂ ಶ್ರೀಶೇಷ ಶೈಲನಿವಾಸ ಶ್ರೀಪತಿಗೆ ॥487॥

**ಯಕ್ಷಗಾನ ರಾವಣವಧೆ ಮುಗಿದುದು**

# ಯಕ್ಷಗಾನ ಶ್ರೀರಾಮನಿಜಪಟ್ಟಾಭಿಷೇಕ

## ಪಾತ್ರಗಳು

ಶ್ರೀರಾಮಚಂದ್ರ
ವಿಭೀಷಣ
ಲಕ್ಷ್ಮಣ
ಮಂಡೋದರಿ
ಸೀತೆ
ಸಖಿಯರು
ಹನುಮಂತ

ಮಂತ್ರಿ
ಸುಗ್ರೀವ
ಷಣ್ಮುಖ
ವಸಿಷ್ಠ
ಬ್ರಹ್ಮ
ಶಿವಪಾರ್ವತಿ
ದ್ವಾರಪಾಲಕರು
ಭರತ
ನಾರದ
ಶತ್ರುಘ್ನ
ಅಂಗದ
ರಾಜಮಾತೆಯರು
ಭಾರದ್ವಾಜಾದಿ ಋಷಿಗಳು

**ಶಾರ್ದೂಲವಿಕ್ರೀಡಿತಂ**

ಶ್ರೀರಾಮಂ ದಿವಿಜೌಘಸನ್ನುತಪದಂ ಪೂರ್ಣೇಂದುಕಾಂತಾನನಂ
ಬಾಲಾರ್ಕಾಯುತಭಾಸುರಾಂಗಮಮಲಂ ಗಾಂಭೀರ್ಯರತ್ನಾಕರಮ್ ।
ಕೋದಂಡೇಷುದಿಶೋಭಿತಾತತಭುಜಂ ವಾತಾತ್ಮಜಾದಿರ್ವತಂ
ವಂದೇಭೀಷ್ಟಫಲಪ್ರದಂ ರಘುವರಂ ಶ್ರೀಜಾನಕೀಲಾಲಸಮ್ ॥1॥

**ದ್ವಿಪದಿ**

ಮುನಿಪ ವಾಲ್ಮೀಕಿಯಡಿಗೆರಗಿ ಸಂತಸದಿ ।
ಚಿನುಯಾತ್ಮಕ ರಾಮ ಚಂದಿರನ ಮುದದಿ ॥2॥

ಬಲಬಂದು ಸೀತೆಪದಕೆರಗಿ ಹನುಮನಿಗೆ ।
ತಲೆವಾಗಿ ಸುರವರರ ಬೇಡುತೀಶನಿಗೆ ॥3॥

ನಮಿಸಿ ರವಿ ಮುಖ್ಯ ನವಗ್ರಹರಕೊಂಡಾಡಿ ।
ಅಮರಮುನಿ ಸನಕಾದಿಗಳಿಗೆ ಕಯ್ ನೀಡಿ ॥4॥

ಬೇಡಿಕೊಳುತಲಿ ಸೂತಶೌನಕಾದಿಗಳ ।
ಪಾಡುತಲಿ ಗುಹಗಣಪರುಗಳ ಪಾದಗಳ ॥5॥

ಕೊಂಡಾಡಿ ವಾಗ್ದೇವಿಮೂಕಾಂಬಿಕೆಯರ ।
ದಂಡದಂತೆರಗಿ ಪದಗಳಿಗೆ ಕವಿವರರ ॥6॥

ಒರೆವೆನೀ ಪೌರಾಣಕಥೆಯ ಮೆರೆಸುವುದು ।
ಕರುಣದಿಂದಂಚೆಪಾಲಿನ ಗತಿಯೊಳೊಲಿದು ॥7॥

ವ್ಯಾಕರಣದೋಷ ರಸ ಗುಣ ಗಣಾದಿಗಳ ।
ನಾ ಕಾಣೆ ಛಂದ ಯತಿ ವೃತ್ತ ರೀತಿಗಳ ॥8॥

ಬಲ್ಲಂತೆ ಬಣ್ಣಿಸುವೆ ಯಕ್ಷಗಾನದಲಿ ।
ಸೊಲ್ಲು ತಪ್ಪಲು ರಾಮ ಸಲಹೊ ಹರಸುತಲಿ ॥9॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ರವಿಕುಲೋತ್ತಮರಾಗಿರುವ ಕುಶ ।
ಲವರು ಪುನರಪಿ ಮುನಿಯ ಚರಣಕೆ ।
ತವಕದಿಂ ಮಣಿಯುತ್ತಲೆಂದರು । ವಿನಯದಿಂದ ॥10॥

ದುರುಳ ದಶಕಂಠಾದಿ ದೈತ್ಯರ ।
ಮುರಿದ ಮೇಲೆಮ್ಮವ್ವೆಯನು ಪತಿ ।
ಕರಿಸೆ ದೋಷಗಳೇನು ಬಂತೆಂ । ದೊರೆಯಬೇಕು ॥11॥

ಕಿಚ್ಚಿಗೇತಕೆ ಹೊಕ್ಕಳಾ ಮೇ ।
ಲಚ್ಚುತನು ಒಲಿದೆಂತು ಕೂಡಿದ ।
ನುಚ್ಚರಿಸು ಲಂಕಾಧಿಪತ್ಯವ । ಸಚ್ಚರಣಗೆ ॥12॥

ಕಟ್ಟಿ ಸಾಕೇತದೊಳು ಜನಕನು ।
ಪಟ್ಟವೇರುತ ಧರೆಯ ಸಲಹಿವಿ ।
ಶಿಷ್ಟನೆನಿಸಿದ ಕಥೆಯ ಪೇಳೆನೆ । ಶಿಷ್ಟ ನಗುತ ॥13॥

ಪೊಡವಿಯೊಳಗೆರಗಿರುವ ಕುವರರ ।
ಮುಡಿಯ ಬೋಳಯ್ಸುತಲಿ ಮುನಿಪತಿ ।
ಜಡಜನಾಭನ ನೆನೆಯುತೆಂದನು । ಸಡಗರದಲಿ ॥14॥

**ರಾಗ ತುಜಾವಂತು ಝಂಪೆತಾಳ**

ಬಾಲಕರು ಕೇಳಿರೈ ಕಾಳಗದಿ ಖಳನ ।
ಕಾಲಗೊಪ್ಪಿಸಿ ಮಾತಲಿಯನು ಕರೆದವನ ॥
ಓಲೈಸುತಿಂತೆಂದ ರಾಮನಿಂಗಿತವ ।
ಖೂಳರಳಿದಾಯ್ತುರುಹು ಸುರಪಾಲಗಿರವ ॥15॥

ಇನ್ನು ಕಳವಳ ಬೇಡ ಸ್ವರ್ಗಕೆ ನಿರ್ಭಯವು ।
ಚೆನ್ನಾಗಿ ಸುರರ ಪಾಲಿಸಲೆನ್ನುತರುಹು ॥
ಎನ್ನತವನನು ಕಳುಹಿರವಿಜಗಿಂತೆಂದ ।
ನಿನ್ನ ಸೇವೆಗಳಿಂದ ಹರಿವುದಾನಂದ ॥16॥

**ರಾಗ ಭೈರವಿ ಝಂಪೆತಾಳ**

ಬಾಲನಂಗದನೇಸು । ಕಾಳಗದಿ ನೊಂದಿಹನೊ ।
ಶೀಲ ಸದ್ಗುಣನಿಕರ । ವಾಲಿಸುಕುಮಾರ ॥17॥

ಜಾಂಬವರದುಪಕಾರ । ಸ್ಮರಣೀಯವಿಂದವರ ।
ನಾಂ ಬಣ್ಣಿಸುವುದೇನು । ಸರ್ವರಕ್ಷಕನು ॥18॥

ನಳನೇಸು ಸಹಸಿಗನು । ಜಲನಿಧಿಗೆ ಸೇತುವನು ।
ಬಲವಾಗಿ ಬಂಧಿಸಿಹ । ಥಲಗಳೇನಹಹ ॥19॥

ನೀಲನಾಯಕನಾಗಿ । ಬಳಲಿದನು ಬೆಂಡಾಗಿ ।
ಕಾಳಗದ ಕಡುಹುತನ । ಪೇಳಲೇನವನ ॥20॥
ಮರುತಜನು ಗುಣಸಿಂಧು । ಪರಸೇವೆಯಲಿ ಮುಂದು ।
ಮರೆಯಲಳವೇ ಸುಧೆಯ । ತಂದಿತ್ತ ಪರಿಯೆ ॥21॥

ಭೇಷಜರ ಪರಿ ಬೇರೆ । ಬದುಕಿಸಿದರಿಂದವರೆ ।
ಗಾಸಿಯಾದರನುಳುಹಿ । ವಾಸಿಯಿಂ ಸಲಹಿ ॥22॥

ಉಳಿದ ತರುಚರರಿನ್ನು । ಸಾಮಾನ್ಯರಿಂದೇನು ।
ಮುಳಿದು ಕಾದಾಡಿದರು । ತನುವರ್ಪಿಸಿದರು ॥23॥

ಏಸು ಪೊಗಳಲು ತೀರ । ದೀ ಸೇನೆಯೊಳಿಗವ ।
ಕೈಸೇರಲುಂಟೆ ರಣ । ದಾಸೆಯಿಂ ಮರಣ ॥24॥

ಗುರುಸೇವೆ ಮಿಗಿಲೆಂದು । ಧರೆಗೆ ತೋರಿದನಿಂದು ॥
ತರಳ ಸೌಮಿತ್ರಿಯನು । ಕಷ್ಟಪಡಿಸಿದೆನು ॥25।

ಸ್ವಾರ್ಥಸಾಧನೆಗಾಗಿ । ಹಂಗಿಗನು ನಾನಿಂದು ।
ಸ್ತುತ್ಯರೈ ನೀವ್ ಜಗದಿ । ಸಾಹಸರು ನಿಜದಿ ॥26॥

**ಭಾಮಿನಿ**

ಎನಲು ರವಿಸುತನೆದ್ದು ಕಯ್ಮುಗಿ ।
ದಿನಿತು ಬರಿದೇ ಪೊಗಳಲೇತಕೆ ।

ಚಿನುಮಯನೆ ನಿನ್ನೊಡಲೊಳಡಗಿಹುದೀ ಜಗತ್ರಯವು ||
ಮನುಜತನದುರು ಲೀಲೆ ಸಾಕೆಂ |
ದನಘನಂಘ್ರಿಯೊಳೆರಗೆ ರಾಘವ |
ಮಿನುಗುವತಿಹರುಷದಲಿ ಹನುಮನ ಕರೆಯುತಿಂತೆಂದ ||27||

**ರಾಗ ಮಾಧುಮಾಧವಿ ಏಕತಾಳ**

ಮರುತಸಂಭವ ಬಾರೊ ಬಾರಿತ್ತ ನೀನು | ಬೇಗ |
ತೆರಳು ಲಂಕೆಗೆ ಶರಣನ ಕಾಣಲಿನ್ನು ||
ನೆರೆದವರೊಳು ಹೆಚ್ಚು ಕುಂದಿದ್ದರಲ್ಲಿ | ಪೇಳಿ |
ಕರಕರೆಗಳ ಮಾಣಲೊರೆ ಎಲ್ಲರಲ್ಲಿ || ||28||

ಆರಾಜಪದವೆಂದು ಹೊಡೆದಾಟಬೇಡ | ಲಂಕಾ |
ಧಾರಿಣಿಗೊಡೆಯ ವಿಭೀಷಣ ಪ್ರೌಢ ||
ನೀರೆ ಮಂಡೋದರಿಗರುಹೆಮ್ಮ ಮನವ | ಮತ್ತೆ |
ಚಾರುಹಾಸಿನಿ ಚಿಂತಿಸದಿರೆಂಬ ಮತವ || ||29||

ಇಂತೆಂಬುದುಸಿರಿಸಿ ಸೀತೆಯ ಬಳಿಗೆ | ಪೋಗು |
ತಂತಾರಭಾವಗಳೊರೆಯುವುದೆಮಗೆ ||
ಅಂತರ್ಯದಿಂದರುಹುವ ಜಾಣ ನೀನು | ಶೌರ್ಯ |
ವಂತನೆ ಸಾಗಯ್ಯ ಕಾತರಿಸುವೆನು || ||30||

ರಾಘವನೆಂದುದ ಕೇಳಿ ವಾತಜನು | ಬಹಳ |
ವೇಗದಿಂದಯ್ದಿದ ಲಂಕಾದುರ್ಗವನು ||
ಆಗ ವಿಭೀಷಣ ಕಾಣುತ್ತಲವನು | ಬಂದ |
ಯೋಗವೇನೆಂದು ಮನ್ನಿಸುತ ಕೇಳಿದನು || ||31||

ರಾಮ ಹೇಳಿದ ಮಾತನೆಡೆಬಿಡದಂದು || ಎಲ್ಲ |
ತಾಮಸಿಚರರಿಗೆ ತಿಳುಹಿದನಂದು ||
ಕಾಮಿನಿಮಣಿಗಳೆಲ್ಲರ ಸಂತವಿಡುತ | ಪೋಗಿ |
ಕಾಮನಯ್ಯನ ನೋಡಿರೆಲ್ಲ ನೀವೆನುತ || ||32||

ರಘುವರ ಕೋಪಿಸುವನು ಪೋಗಿರೆಂದು | ಪೇಳಿ |
ಜಗತ್ಪ್ರಾಣಸುತನು ಮತ್ತಲ್ಲಿಂದ ಬಂದು ||
ನೆಗೆದೊಡತಿಯ ಕಾಂಬ ತವಕದೊಳಂದು | ಕಂಡು |
ಮುಗುದೆಯ ಪದಕೆರಗಿದ ಬಳಿಕಂದು ||33||

**ರಾಗ ಘಂಟಾರವ ಏಕತಾಳ**

ರಾಮನರಸಿ ಪಟ್ಟದಂಗನೆ ಮೋಹದ ।
ಕಾಮಿನಿ ಪ್ರೇಮದ ಕಣಿ ಜಯವೆಂದ ॥
ಭೂಮಿಭಾರವೆ ಹಿಂಗಿ ದಶಶಿರ ಮಡಿದನು ।
ಸ್ವಾಮಿಯೊಡನೆ ಮಲೆದೆಸಕದೊಳವನು ॥34॥

ದೇವಸಂತತಿಯೆಲ್ಲ ಕೊಂಡಾಡುತಿಹುದು ॥
ದೇವರಥವೆ ಬಂತು ಕಾದಲಿನ್ನಿಂದು ॥
ದೇವ ರಾಘವ ನಿನಗೋಸುಗ ಕಷ್ಟವ ।
ದೇವಿ ಪಟ್ಟನು ಸೇತು ಬಲಿಯಲು ಶ್ರಮವ ॥  ॥35॥

ಅನ್ನ ನೀರಿಲ್ಲದೆ ಬಳಲಿ ಬೆಂಡಾದನು ।
ಇನ್ನು ದುಃಖಿಸಬೇಡ ಝಾವರ್ಧಕವನು ॥
ನಿನ್ನ ಕೊಂಡೊಯ್ವನು ಜಗತಿವಲ್ಲಭನಿಂದು ।
ಎನ್ನುತೆರಗೆ ಪೇಳ್ದಳಂಗನೆಯಂದು ॥36॥

**ರಾಗ ಕೇದಾರಗೌಳ, ಅಷ್ಟತಾಳ**

ಹನುಮ ನಿನ್ನಯ ಮಾತ ಕೇಳಲಾನಂದವು ।
ಘನ ವಿಕ್ರಮಾದಿಗಳು ॥
ಇನಕುಲಜಗೆ ಬೆಂಬಲವು ನೀವು ದೊರೆತದ ।
ರನುವರ ಜಯವಾದುದು ॥37॥

ಯಾರು ಮಾಡುವುದು ಆಶ್ಚರ್ಯವು ಸೇತುವು ।
ವಾರಿಧಿಯುತ್ತರಣೆ ॥
ಶೂರನೆ ನೀನು ಸಂಜೀವನ ತಂದುಪ ।
ಕಾರವ ಮರೆಯಲೆಂತು  ॥38॥

ಆದರೆನ್ನಯ ವಿಧಿವಶವೆಂತೊ ರಾಮನ ।
ಹಾದಿಯನರಿವರಾರು ।
ಕ್ರೋಧವಿರಲು ಸಾಕು ಮಾಗಧಿಯನು ನಾನು ।
ಬಯ್ದಟ್ಟಿದೆನು ಕಾಡಿಗೆ ॥39॥

ಮಗಕೆ ಮೋಹಿಸಿ ಸ್ವಾಮಿಯನು ನಾನು ಕಳುಹಿದ ।
ಬಗೆಯಪರಾಧವುಂಟು ॥
ಖಗವಂಶರೆದೆಯನಾರರಿವರು ಶಿವ ಶಿವ ।
ಬಿಗಿಯಾಗಿರಲು ಬಹುದು ॥40॥

ನಿನ್ನ ನಂಬಿಗೆ ಇಂದುಪರಿಯಂತ ಕುಳಿತಿಹೆ ।
ಎನ್ನ ನಿಶ್ಚಯವ ಕೇಳು ॥
ಪನ್ನಗಶಯನನೆನ್ನೊಳು ಮುನಿದರೆ ಪ್ರಾಣ ।
ವನ್ನೇ ನಾ ಕಳಕೊಂಬೆನು ॥41॥

**ಭಾಮಿನಿ**

ಎಂಬ ಸೀತಾಂಬಕದಿ ಕಂಬನಿ ।
ದುಂಬಿ ಹರಿಯುತ್ತಿರಲು ಹನುಮನು ।
ಅಂಬುಗರೆಯುತ್ತೆಂದ ಬೆದರದಿರಮ್ಮ ನಿಮ್ಮೊಳಗೆ ॥
ಅಂಬುರುಹನಯನಂಗೆ ನೆನಹಿನ ।
ಹಂಬಲಿಲ್ಲದಡೆನ್ನ ಕಳುಹುವ ।
ಹುಂಬತನವೇಕಕಟ ಬೆದರದಿರೆಂದು ಬೀಳ್ಗೊಂಡು ॥42॥

**ರಾಗ ಕಮಾಚ್ ಅಷ್ಟತಾಳ**

ಎಂದು ಸಂತಯಿಸುತ್ತ ಹನುಮಂತ । ರಾಮ ।
ಗಂದು ಬಂದೊರೆದನು ಗುಣವಂತ ॥
ಕಂದಿಹರಬುಜಾಕ್ಷಿ ಮನದಲ್ಲಿ । ಧ್ಯಾನ ।
ವೊಂದೆಯೂಟಗಳಿಲ್ಲವವರಲ್ಲಿ ॥ ॥43॥

ರಾತ್ರೆ ಹಗಲು ನಿದ್ದೆಯೇನಿಲ್ಲ । ಸ್ವಪ್ನ ।
ದಾಸ್ಥಿತಿ ತಿಳಿದೆನು ನಾನೆಲ್ಲ ॥
ವತ್ತಾಂತವೆನೆ ಕಣ್ಣ ತೆರೆದರು । ನಿಮ್ಮ ।
ವರ್ತಮಾನವನೆಲ್ಲ ಕೇಳ್ದರು ॥ ॥44॥

ರಾವಣನಳಿವಿಂಗೆ ನಕ್ಕರು । ತನ್ನ ।
ಭಾವವೆಲ್ಲವನು ಹೀಗೊರೆದರು ॥
ದೇವಿ ಕಣ್ಣಲಿ ನೀರ ಸುರಿದರು । ರಾಮ ।
ದೇವನೆಂದೇ ಹಾಡುತಿರ್ಪರು ॥ ॥45॥

**ಭಾಮಿನಿ**

ಮರುತಜನ ನುಡಿಗಂದು ಲಕ್ಷ್ಮಣ ।
ಮರುಗೆ ನಿಖಿಲ ವನೇಚರ ವ್ರಜ ।
ಕೊರಗೆ ರಘುನಂದನನ ನಯನದಿ ಬಪ್ಪ ಹೊನಲಾಗಿ ।
ಹರಿಯಲಂತರ ಪ್ರಣಯಸುಧೆಯಂ ।

ತಿರಲು ಕಟಕವೆ ಮರುಕಗೊಂಡಿರೆ ।
ಶರಣಬಂದೆರಗುತಲಿ ಬಿನ್ನಹ ಮಾಡಿದನು ಹರಿಗೆ ॥46॥

**ರಾಗ ಸಾಂಗತ್ಯ ರೂಪಕತಾಳ**

ಆಗ ವಿಭೀಷಣನನು ಪಿಡಿದೆತ್ತುತ ।
ರಾಘವನೆಂದ ತೋಷದಲಿ ।
ಹೋಗು ಲಂಕೆಯ ಪಟ್ಟ ನಿನಗಿನ್ನು ಚಿಂತಿಸ ।
ಲಾಗದು ತಾಗುಬಾಗಿನಲಿ ॥47॥

ಕಂದುಕುಂದನು ತಿದ್ದುತಿಳೆಯನು ಧರ್ಮದಿ ।
ಮುಂದೆ ಪಾಲಿಸುದೇವಿಯರನು ॥
ಸಂದೇಹ ದ್ವೇಷಂಗಳೆಲ್ಲ ಮರೆತು ನಿಮ್ಮೊ ।
ಳೊಂದಾಗಿಖಳರ ಕೀರ್ತಿಯನು ॥48॥

ರಾಯನಾಗುತ ಮೆರೆಸೆನುತ ಮಂಡೋದರಿ ।
ಗಾಯತಾಂಬಕನೆಂದ ದಯದಿ ।
ತಾಯೆ ಸೈರಿಸು ನಿತ್ಯವಲ್ಲ ಸಂಸಾರವು ।
ಮಾಯೆ ಸತ್ಯವೆ ನಿಶ್ಚಯೆಮಗೆ ॥49॥

ಪರಸತಿ ಪರಧನ ಪರಪೀಡೆಯಾಯುಷ್ಯ ।
ವುರಿದು ಪೋಗುವುದು ಭಾಗ್ಯಗಳು ।
ಗರುವದೊಳಳಿದ ತಪ್ಪೇನೆನ್ನ ಸಾರಿದೆ ।
ಚರಿತೆ ಬಲ್ಲುದು ಜನಜನಿತ ॥50॥

ಪೂರ್ವಸಂಚಿತ ಮೀರಲಾರಿಗಪ್ಪುದು ಮುಂದೆ ।
ಊರ್ವೀಶ ಶರಣನೆಂದೆನಿಸಿ ॥
ಇರ್ವುದು ಲೇಸು ದುಃಖಿಸಬೇಡವೆನಲಾಗ ।
ಶರ್ವ ಮಿತ್ರಗೆ ಪೇಳ್ದ ನಮಿಸಿ ॥51॥

**ಭಾಮಿನಿ**

ದೇವರರಿಕೆಯನವಧರಿಸಬೇ ।
ಕಾವು ಸ್ವಾತಂತ್ರ್ಯವನು ನೀಗಿಹೆ ।
ಕಾವ ಕೊಲ್ಲುವ ಕರ್ತ ಚರಣದಿ ಮನವನರ್ಪಿಸಿಹೆ ।
ಈ ವಿಭವ ಮತ್ತೇಕೆ ಪದರಾ ।
ಜೀವದೈಕ್ಯವ ಬೇಡುವೆನು ಕೈ ।
ಗಾವುದೆಂದೆರಗಿದರೆ ಕರುಣದೊಳೆತ್ತುತಿಂತೆಂದ ॥52॥

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಶರಣ ಲಾಲಿಸು ಸೂರ್ಯವಂಶದಿ ।
ಪೊರೆದ ರಾಜರು ಪೇಳ್ದ ನುಡಿಗನು ।
ಸರಿಸಿ ನಡೆವುದು ಮೀರಲಸದಳ ।
ಎರೆದೆ ನಿನಗಾಧಾತ್ರಿಯ । ಏನೊರೆವೆಯ ॥53॥

ಲಕ್ಷವಳಿದರು ಕೈಗೊಳೆವು ನಿರ ।
ಪೇಕ್ಷೆಯೇ ಸರಿ ಪಾಪಕರ್ಮಕೆ ।
ಶಿಕ್ಷೆಯಾಯಿತು ಧರ್ಮಬಾಹಿರ ।
ರಾಕ್ಷಸರು ಬಲಿಯಾದರು । ತಾವ್ ಮಡಿದರು ॥54॥

ಸತ್ತು ಹುಟ್ಟುವ ರೋಗಕೆಮ್ಮಯ ।
ಕತ್ಯವೇ ಕಾರಣಗಳಲ್ಲದೆ ।
ಮತ್ತೆ ಕೊಲುವವರಾರು ಕಾಯ್ವರು ।
ತತ್ತ್ವ ಲೀಲೆಯ ತಿಳಿಯಲು । ನೆವ ಹೇಳಲು ॥55॥

ವಿಧಿವಿಲಾಸವ ಮೀರಲಳವ ।
ಲ್ಲದುವೆ ಪ್ರಾರಬ್ಧಗಳು ಎಂಬರು ।
ಇದಕೆ ಯೋಚಿಸಲೇಕೆ ನಮ್ಮದೆ ।
ಹದನ ತಿಳಿಯುತಲೆನ್ನುವೆ । ಹೀಗೊರೆಯುವೆ ॥56॥

ಪಟ್ಟವೇರಲು ನೆನೆದ ಬಯಕೆಯು ।
ಮುಟ್ಟಿತಾರಣ್ಯದೊಳು ಸತಿಯನು ।
ಬಿಟ್ಟೆ ಬಳಿಕಲೆಯುತ್ತ ಪಡೆದಿಹ ।
ಕಷ್ಟ ನೀನೇ ಬಲ್ಲೆಯ । ಏನೊರೆವೆಯ ॥57॥

ಮನದಿ ತರಹರಿಸದಿರು ನೀ ನಡೆ ।
ನೆನೆದ ಕಾರ್ಯಕೆಯೆನುತ ತಮ್ಮನ ।
ಮನಕೆ ಬರುವಂದದಲಿ ಪೇಳಿದ ।
ನಿನಕುಲದ ಶ್ರೀರಾಮನು । ನಿಷ್ಕಾಮನು ॥58॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ತಮ್ಮ ನೀ ಪೋಗೀಗ ಶರಣಗೆ ।
ಧರ್ಮದಿಂ ಲಂಕಾಧಿಪತ್ಯವ ।
ನೆಮ್ಮಮತದಿಂ ಕಟ್ಟಿ ಬಾರೈ । ಘಮ್ಮನಿಂದು ॥59॥

ಹನುಮಸುಗ್ರೀವಾದಿಗಳು ನೀ ।
ವನುಜನಿಗೆ ಬೆಂಗಾವಲೈದಿರಿ ।
ಎನುತ ಕಳುಹಲು ಬಂದರೆಲ್ಲರು । ಮನ ವೊಲಿಯುತ ॥60॥

ಗುಡಿಯ ಕಟ್ಟಿದು ತೋರಣಂಗಳ ।
ಸಡಗರದಿ ಸಿಂಗರಿಸಿ ಲಂಕೆಯ ।
ಒಡೆತನದ ಪಟ್ಟವನು ಕಟ್ಟಿದ । ರೊಡನೆ ಮುದದಿ । ॥61॥

ಕಂಡು ಕಾಣಿಕೆಯಿತ್ತು ನಮಿಸಲು ।
ಗಂಡ ಲಂಕೆಗೆ ಶರಣನೆನ್ನುತ ।
ಚಂಡ ಭೇರಿಯ ಮೊಳಗಿಸಿದರಾ । ಮಂಡಲದಲಿ । ॥62॥

ದಾನಧರ್ಮಾದಿಗಳ ವಿರಚಿಸಿ ।
ಭಾನುವಂಶನ ಕೀಶಸೇನೆಯ ।
ದಾನವನು ಮನ್ನಿಸಿದ ವಿಹಿತ ವಿ । ಧಾನದಿಂದ । ॥63॥

ಸುರರು ಸುಮ್ಮಾನಿಸಲು ಕಾರಾ ।
ಗರದೊಳುಳಿದಿಹ ಜನರನೆಲ್ಲರ ।
ನಿರದೆ ಬಿಟ್ಟವರನ್ನು ಕಳುಹಿದ । ಹಿರಿದು ಗುಣದಿ । ॥64॥

ಬಳಿಕ ರಾಮಗೆ ಕಾಣಿಕೆಯನನು ।
ಗೊಳಿಸಿ ಹೊರಿಸುತ ಭಂಡಿಯಿಂ ತಂ ।
ದಿಳಿಸಿದನು ರತ್ನಗಳಪರಿಮಿತ । ನಲವಿನಿಂದ । ॥65॥

**ಭಾಮಿನಿ**

ಮಣಿಖಚಿತ ಕೇಯೂರ ಹಾರಾ ।
ದ್ಯನುಪಮಿತ ಸಂಪದಗಳೆಲ್ಲವ ।
ಧನಪನಿತ್ತಿಹ ಪುಷ್ಪಕವನಂದಾ ವಿಭೀಷಣನು ॥
ಮನವೊಲಿದು ಭಕ್ತಿಯೊಳು ರಾಮನ ।
ಸುನತಪದಕೊಪ್ಪಿಸುತಲೆರಗಿರೆ
ವನಜಲೋಚನೆ ತಲೆಯ ತೂಗುತಲೆಂದ ನಸುನಗುತ ॥66॥

**ರಾಗ ನವರೋಜು ಆದಿತಾಳ**

ಮೆಚ್ಚಿದೆ ನಾನೆಲೆ ಶರಣ । ತವ । ಹೆಚ್ಚಿನ ಹೊನ್ನಾಭರಣ ॥
ಮುಚ್ಚುಮರೆಯೇ । ನೊಲ್ಲೆನು ಸರ್ವಥ ।
ನಿಶ್ಚಯ ಮತವಿದು । ನಚ್ಚಿನೊಳೊರೆವುದು ॥ ಮೆಚ್ಚಿದೆ ॥67॥

ಪ್ರೇರಿಸಬೇಡೆಮ್ಮುವನು । ನಿಜ । ಧಾರಿಣಿಯನಿತ್ತಿಹೆನು ॥
ಕೋರದು ಮನವದ । ಕಿಚ್ಚಿಸೆ ನಾ ಸಿರಿ ।
ಸೇರಿಸು ಪುರಕದ । ಪಡದಿರುಖೇದ ॥ ಮೆಚ್ಚಿದೆ । ॥68॥

ಪೋಗುವೆವು ನಾವ್ ಪುರಿಗೆ । ತಡ । ವಾಗದೆ ಬೀಳ್ಕೊಡು ನಮಗೆ ॥
ಬೇಗನೆ ಭರತನ । ಕಾಣಲು ಬೇಹುದು ।
ಆಗದು ತಡೆದರೆ । ನೀಗುವ ತನುವುದೆ ॥ ಮೆಚ್ಚಿದೆ । ॥69॥

ಹದಿನಾಲ್ಕು ವತ್ಸರದ । ಮಾ।ತದು ನಮ್ಮ ನಿಶ್ಚಯದ॥
ತುದಿ ದಿವಸದೊಳ।ಯ್ದದೆ ಹಿಂದುಳಿದರೆ ।
ಒದಗದಿರದು ಬಲು ಕಷ್ಟಕರಂಗಳು ॥ ಮೆಚ್ಚಿದೆ । ॥70॥

**ವಾರ್ಧಕ**

ನಳಿನಾಕ್ಷನೆಂದ ನುಡಿಗೊಡಬಟ್ಟು ತಲೆವಾಗಿ ।
ಸಲುಗೆಯಿದ್ದರೆ ನಿನ್ನಕೂಡಿಂದು ನಾ ಬೇಡಿ ।
ಕೊಳುವೆನತಿ ವಿಕ್ರಮದ ಶರಧಿಯಾಗುತ ಮೆರೆದು ಸೇತುವಂ ಬಂಧಿಸುತಲಿ ॥
ಕೊಳುಗುಳದೊಳೊದಗಿ ಖಳಕುಲವ ಮಥಿಸುತಲೆನಗೆ ।
ಇಳೆಯ ಪಟ್ಟವನಿತ್ತುದೇಕೆಂಬುದನು ನೀನು
ತಿಳಿದೀಗ ವಂಚಿಸದೆಸಲಿಸಿದರೆ ಧನ್ಯ ನಾನಿಳೆಯೊಳೆನಲಿಂತೆಂದನು ॥71॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ತಿಳಿದೆ ನಿನ್ನಿಂಗಿತವನಂತರ ।
ದೊಳಗೆ ಸೊಗಸಾಗಿರಲು ನೋಡುವೆ ।
ಲಲನೆಯನು ಕರೆಸೆನಲು ಶರಣನು । ತಲೆಯ ಬಾಗಿ ॥72॥

ಹರುಷದಲಿ ಹಿಂತಿರುಗಿ ತನ್ನಯ।
ತರುಣಿಯರ ಕೂಡಯ್ದಿ ಸೀತೆಯ ।
ಚರಣಸರಸಿಜದೊಳಗೆ ಮಣಿಯುತ । ಶರಣನೆಂದ ॥73॥

**ಭಾಮಿನಿ**

ಸೀತೆ ತ್ರಿಜಗನ್ಮಾತೆ ಧಾತ್ರಿಯ ।
ಜಾತೆ  ರಘುಪತಿ ಪ್ರೀತೆ ನಿನ್ನಾ ।
ರಾತಿಯಾಗಿಹ ಯಾತುಧಾನರು ಪ್ರೇತಪುರಕೇರೆ ॥
ಸಾತಿಶಯ ಸುಪ್ರೀತಿಯೊಳು ರಘು ।

ಜಾತ ಕಳುಹಿದನೀತಳಕೆ ವಿ ।
ಖ್ಯಾತೆ ದಯಮಾಡೀ ತತುಕ್ಷಣನಾಥನೆಡೆಗೆನಲು ॥74॥

**ರಾಗ ಬಿಲಹರಿ ಅಷ್ಟತಾಳ**

ನಿಜವೇನೊ ಶರಣ ನಿನ್ನ । ಮಾತನು ನಂಬ ।
ಲಜತಾತ ನೆನೆದುದೆನ್ನ ॥
ಸುಜನವಂದಿತ ಸುಪ್ರ । ತಾಪ ಪ್ರತಾಪನು ।
ಕುಜನಮರ್ದನ ಗುಣ । ವಂತನು । ಕಾಂತನು ॥ ॥75॥

ಮನದಿರವೆಂತು ಪೇಳು । ನಿನ್ನೊಳು ಪೇಳ್ದ ।
ಇನಯನ । ಮಾತುಗಳು ॥
ಎನಗನುಮಾನ ಗ್ರ । ಹಣದಪವಾದವು ।
ಜನಿತವಾಗಿರೆ ರಘು । ತನಯನ ಮತವು ॥ ॥76॥

ಚಿಂತೆಯೇಕವ್ವ ರಾಮ । ಮೊದಲೆ ಗುಣ ।
ವಂತನೆಂದರಿಯೆಯಮ್ಮ ॥
ಕಂತುಜನನಿ ಕಾಕ । ಮಧ್ಯದಿ ಪಿಕನಿದ್ದ ।
ರೆಂತಾಪವಾದವು । ಮನವು ನಿಶ್ಚಯವು ॥ ॥77॥

ಲೇಸು ಹೊಲ್ಲೆಹನು ನಾನು । ತಿಳಿಯೆನಿಂದು ।
ವಾಸುದೇವನೆ ಬಲ್ಲನು ॥
ಆಶೆನಿರಾಶೆಯಾ । ದಪುದೇಕೆಯೊಡಬಟ್ಟೆ ।
ಕ್ಲೇಶ ಬೇಡೌ ಮುಂದೆ । ನಡೆ ಬಪ್ಪೆ ನಾ ಹಿಂದೆ ॥ ॥78॥

ಕರುಣಿಸು ವರವನೊಂದು । ಬೇಡುವೆನು ನಾ ।
ಚರಣಾಬ್ಜದಡಿಯೊಳಿಂದು ॥
ಸರ್ವಮಂಗಲೆಯೆಂದು । ನೋಡುವೆನದರಿಂದು ।
ಧರಿಸು ಭೂಷಣವಿದು । ದೋಷವಿಲ್ಲೆಂದು ॥ ॥79॥

**ಭಾಮಿನಿ**

ಶರಣ ಬೇಡುವೆನೊಲ್ಲೆನೀ ಸಿರಿ ।
ಯರಸನನುವನು ತಿಳಿಯದೇ ನಾ ।
ಮರುಳುಗೊಳೆ ಕೇಳ್ ಮುಳ್ಳ ಮೊನೆ ಮೇಲಿರುವ ಮನೆಯಿಂದು ॥
ಉರುಳಿದರೆ ಗತಿಯಾವುದೆನಗೆಂ ।
ದರಿದು ತಿಳಿದೇ ನೀನು ಬೇಡುವೆ ।
ಶರಣ ಛಲ ಬಿಡುಯೆನಲು ಚರಣದೊಳೆರಗುತಿಂತೆಂದ ॥80॥

**ರಾಗ ಭೈರವಿ ಝುಂಪೆತಾಳ**

ಅಂಜಬೇಡಲೆ ತಾಯೆ | ನಿಜದ ಡಿಂಗರಿಗನಹೆ |
ಕಂಜನಾಭಗೆ ಕಯ್ಯ | ಮುಗಿವೆ ದಮ್ಮಯ್ಯ || ಅಂಜ ||81||

ಕಬ್ಬಿಣದ ಕಾಠಿನ್ಯ | ಬಲ್ಲುದದು ಬೆಂಕಿಯೇ |
ಉರ್ಬಿಪತಿ ರಾಮನನು | ತಿಳಿದಿಹೆನು ನಾನು || ||82||

ಬಂದೆಡರ ರಕ್ಷಿಸುವ | ಹೊಣೆ ರಾಮ ನಮಗೇನು |
ಮುಂದೆ ಭಕ್ತರ ಪಾಲಿ | ಸಲಿ ನಮ್ಮ ಬಿಡಲಿ || ||83||

ಸುಧೆಯಬ್ಧಿನಡುವಿನಲಿ | ತಿಲಗರಳ ಸಾಕಲ್ಲಿ |
ಹದನನರಿತಿಹೆ ತಿಳಿಯ | ಬಹುದದರ ಪರಿಯ || ||84||

ಆದಡಾಗಲಿ ಇನ್ನು | ಕೈಗೊಂಡೆನರಿಕೆಯನು |
ವೇದಗರ್ಭನು ನೆನೆದು | ದಂತಾಗಲೆಂದು || ||85||

ತೊಡಿಸಿದಳು ರಾಮನ | ರ್ಧಾಂಗಿ ಮೋಹನದಂಗಿ |
ಹದಯದಲಿ ಬಿಡಿಸಿದಳು | ಸಾಕ್ಷಾತವವಳು || ||86||

ಹೊನ್ನ ಕಡಗವನಿಟ್ಟು | ಮೆರೆವ ಕುಪ್ಪಸ ತೊಟ್ಟು |
ರನ್ನ ಪೀತಾಂಬರವ | ನುಟ್ಟಳತಿ ಚೆಲುವ || ||87||

ಕುಂಕುಮವನಿಟ್ಟು ತಿಲ | ಕವತಿದ್ದಿ ಮೇಖಲೆಯ |
ನಂಕದೊಳು ಕೇವಣಿಸಿ ಲಕುಮಿಯೆಂದೆನಿಸಿ ||88||

ನವರತ್ನಮಯದ ದಂ | ಡಿಗೆಯೇರ್ದಳಂಗನೆಯು |
ಭುವನ ಜಯ ಜಯವೆನಲು | ಸತಿಪತಿಯೆ ಹೊರಲು || ||89||

ಕಲಶಕನ್ನಡಿ ವಾದ್ಯ | ರವದ ಪರುಟಣೆ ಹದ್ಯ |
ನಿಲುವ ಚಾಮರ ನಲಿವ | ನಾರಿಯರ ಚೆಲುವ || ||90||

ರಘುವರನ ನಾಟಕವ | ನೋಡಲಯ್ದಿದ ನಭವ |
ನಗಜೆ ಸಹಿತಲಿ ತ್ರಿದಶ | ರೊಡೆಯ ವಾಣೀಶ ||91||

ರಘುಕುಲದ ಪೀಳಿಗೆಯ | ದಶರಥಾದಿಗಳೆಲ್ಲ |
ಬಗೆ ನಿರೀಕ್ಷಿಸುತಿದ್ದ | ರೇನೆಂಬೆ ಸದ್ದ || ||92||

ಕ್ಷೀರಾಬ್ಧಿಮಥನದಿಂ | ದೊಗೆದಯ್ದುವಂದದಿಂ |
ದೂರದಿಂ ರಾಘವನು | ಬರವ ನೋಡಿದನು || ||93||

ಬೆರಳ ಮೂಗಿನೊಳಿಡುತ । ಶಿರವ ತೂಗಾಡಿಸುತ ।
ತರಳ ಲಕ್ಷ್ಮಣ ನೋಡು । ನೋಡೆಮ್ಮ ಪಾಡು ॥ ॥94॥

**ವಾರ್ಧಕ**

ಗತಿಯ ಪ್ರತ್ಯಕ್ಷಾನುಭವವೆ ಮಾನವ ಕೊರೆವ ।
ವ್ಯಥೆಯ ನಮ್ಮನು ಕಾಡುತಿಹುದಲ್ಲೆ ಮೇಣದಕೆ ।
ಮಥನ ಲವಣಾಗ್ನಿಯಿಂದೊಗ್ಗರಣೆ ಲೇಸಹುದೆ ಶಿವ ಶಿವಾ ನಾವರಿಯೆವು ॥
ಸತಿಯು ಸಾಮಾನ್ಯಳಲ್ಲಿವಳಿಂದಲೇ ನೀನು ।
ವ್ಯಥೆಗೊಂಡೆ ಹರಿಣ ಪುಡುಕುತ ಪೋಗಲೆಗಾಯ್ತು ।
ಕಥನವೌದುಂಬರದ ಪುಷ್ಪ ನಾರಿಯ ಮನವನಾರ್ಗರಿವುದೆಲೆಗೆ ತಮ್ಮ ॥ ॥95॥

**ರಾಗ ಕಾಂಭೋಜಿ ಝಂಪೆತಾಳ**

ತಾತನಾಜ್ಞೆಯ ಸಲಿಸುವುದಕೆ ಕಾನನ ಹೊಕ್ಕ ।
ರೇತರದ ಪರಿಹಾಸ್ಯವಾಯ್ತು ॥
ಮಾತು ಮರೆಯದ ಮುನ್ನ ಈ ತರುಣಿ ಸೊಬಗಮ್ಮ ।
ಐತರುವುದನು ನೋಡು ತಮ್ಮ । ॥96॥

ರವಿವಂಶದೊಳು ಪುಟ್ಟಿ ಕುಂದ ತವರೂರಾಯ್ತು ।
ಇವಳಿಂದ ಲೇಸಿಲ್ಲವೆಂದು ।
ಜವದಿ ಪೋಗಿಳುಹವಳನೆನುತಲಂಗದನನ್ನು ।
ರವಿಕುಲನು ಕಳುಹಲಯ್ದಿದನು ॥ ॥97॥

ಶರಣಗಿದನರುಹಿ ಕೈಸನ್ನೆಯೊಳಗಂಗದನು ।
ತಿರುಹೆ ಸರಮಾಧವನು ತಾನು ॥
ಕರಕರಿಸಿ ಮೈ ನಡುಗಿನಿಂದು ಜಾನಕಿಗಿದಿರು ।
ಕರವ ಮುಗಿದಿದಿರಿರ್ದನಸುರ ॥ ॥98॥

ಜಲಜಾಕ್ಷಿ ತಿಳಿದು ಹಾರಿದಳಂದು ಪಾಲಕಿಯ ।
ಇಳೆಯಾತ್ಮಭವೆ ನಡುಗಿ ಮೈಯ್ಯ॥
ಇಳೆಯು ಬಾಯ್ ಬಿಟ್ಟಿರಲ್ಕವಳಿಳಿಯುವಂತಿರಲು ।
ಅಳಲುಮೊಗದಬಲೆಕೇಳ್ ಚೋದ್ಯ ॥ ॥99॥

ಬಿಸಿಲೆರೆದ ಕುಮುದದಂದದಿ ಬಾಯ ತುಟಿಯದುರೆ ।
ವಸುಧೆಪತಿ ರಾಮನಿದಿರಿನೊಳು ॥
ಕುಸುಮಾಕ್ಷಿಯೊಳವರಿತು ಶರಣನಂದೆರಗುತಲಿ ।
ವಸುಧೆಪತಿಗೆಂದ ಭೀತಿಯೊಳು ॥ ॥100॥

**ರಾಗ ಸಾಂಗತ್ಯ, ರೂಪಕತಾಳ**

ದೇವನೆ ಕ್ಷಮಿಸಬೇಕೆನ್ನಯ ತಪ್ಪನು ।
ದೇವಿಯ ಪದಕೆರಗುತಲಿ॥
ಸೇವೆ ಕೈಗೊಳಲುಬೇಕೆನ್ನುತೊತ್ತಾಯದಿ ।
ಭಾವಕಿಗಿತ್ತೆ ವಸ್ತುಗಳ ॥ ॥101॥

ತಿಳಿಯದೆ ಗೆಯ್ದ ಪರಾಧವನೆಣಸದೆ ।
ನಳಿನಾಕ್ಷಿಯಳ ಕಾಯಬೇಕು ॥
ಇಳೆಯ ನಂದನೆಯ ಮೇಲಾದೋಷ ಹೊರಿಸಲು ।
ಉಳುಹಿಲ್ಲ ಎನಗೆ ನಿಶ್ಚಯವು ॥ ॥102॥

ಲಂಕೆಗಿನ್ನಯ್ದೆನು ರಾಜ್ಯದೊಳಿರೆ ನಾನು ।
ಕಿಂಕರಗಿದುವೆ ಸಾವಹುದು ॥
ಪಂಕಜಾಕ್ಷನೆ ಪಾಲಿಸೆನೆ ಸುಗ್ರೀವಾದ್ಯರು ।
ಶಂಕರಸಖಗೆಂದರಂದು ॥ ॥103॥

**ಭಾಮಿನಿ**

ಕಾಡುಬೆಟ್ಟವ ಹೊತ್ತು ಶರಧಿಗೆ ।
ಮಾಡಿ ಸೇತುವ ಲಂಕೆಯೊಳು ಹೊಡೆ ।
ದಾಡಿರುವ ಶ್ರಮ ವ್ಯರ್ಥವಾಯ್ತುಂದೊರೆದ ನುಡಿಗಾಗಿ ॥
ಕೂಡಿದೆವು ಬರಿದೇಕೆ ಜನ ಕೊಂ ।
ಡಾಡದಿಹುದೇ ಮಾತು ತಪ್ಪಲು ।
ಮೂಢತನವೆಮಗಾಯ್ತು ಮನ್ನಿಸು ಸೀತೆಯನು ದಯದಿ ॥104॥

**ರಾಗ ಕೇತಾರಗೌಳ, ಅಷ್ಟತಾಳ**

ಆಗ ಸುರೇಶನಯ್ತುಂದೆರಗುತ ಪೇಳ್ದ ।
ರೋಗಿಯಂತಿಹಳು ದೇವಿ ॥
ರಾಘವನನ್ಯತ್ರ ತಿಳಿಯದ ಸಾಧ್ವಿಯು ।
ನೀ ಗುರು ಜಗದ್ದೈವವು ॥105॥

ಸುರರ ರಕ್ಷಿಸಲೆಂದು ಬಂದಿಹೆ ಸತಿಸಹ ।
ಪೊರೆದು ನಮ್ಮೆಲ್ಲರನು ॥
ಮರುಕಪಡಿಸಲೇಕೆ ದಯದಿಂದ ಪಾಲಿಸು ।
ಸಿರಿಯ ನೀನೆನ್ನಲಾಗ ॥106॥

ವಾಣಿವಲ್ಲಭ ಕಯ್ಯ ಮುಗಿದು ಬೇಡಿದ ತಾಯಿ |
ಗೇನಪರಾಧವೆಂದು ||
ನೀನೆ ಸರ್ವಜ್ಞ ನಾಗುತಲಿಂತು ಗೆಯ್ದರೆ |
ಏನೆನ್ನುವರು ಲೋಕದಿ ||107||

ದಶರಥನೊಳು ಪುಟ್ಟಿ ಲಕುಮಿಯನೊಡಗೊಂಡು |
ವಸುಧೆಯ ಭಾರವನು ||
ಕುಸುರಿದರಿದ ನಿನ್ನದೀ ಚೋದ್ಯವೇನೆಂದು |
ಅಸಮಸಾಹಸಗೆನಲು ||108||

ಗೌರಿಯು ಸೀತೆಯಾನನವನು ತೆರೆಯುತ |
ವಾರಿಜನೇತ್ರಗಾಗ ||
ತೋರುತೆಂದಳು ಜಗದಾದಿಮಾತೆಯು ನಮ್ಮ |
ನಾರಿಸಂದೋಹಕಿಂದು ||109||

ಹರುಷವಿತ್ತಳು ತನು ಬಡವಾಯ್ತು ಭಕ್ತಿಯೊ |
ಳಿರುವಳಾರಿವಳಿಗೆಣೆ ||
ದೊರಕಲಾರರು ನಿನಗೇತಕೀ ದುಮ್ಮಾನ |
ಪೊರೆಯಬೇಕೆನಲು ತಾನು ||110||

ಗಂಗೆಯ ಪೊತ್ತೈದಿ ಬಂದೆಂದ ಮಗಧರ |
ನಂಗನಯ್ಯನಿಗೆ ಬೇಗ ||
ತಂಗಿಯ ಮೇಲೇಕೆ ಮನಮುನಿಸಿದು ಬೇಡ |
ರಂಗನೆ ಕೂಡವಳ ||111||

ಸುರಮುನಿಮನು ಮುಖ್ಯ ಪರಮಯೋಗಿಗಳೆಲ್ಲ |
ಬೆರಗುಗೊಂಡಿಹರು ನೋಡು ||
ಚರಿತೆ ಸಾಕೈ ರಾವಣನ ಕೊಂದು ಬಳಿಕಿನ್ನು |
ಹರುಷವಲ್ಲವು ಜಗಕೆ ||112||

ಸತಿಯರುಂಧತಿ ತಾರೆ ಸೀತೆಯಹಲ್ಯೆಯು |
ರತಿಚರಿತೆಯರು ಲಕ್ಷ್ಮೀ ||
ಪಥಿವಿನಂದನೆ ನಾವು ಮೂರು ಮೂರ್ತಿಗಳಯ್ಯ |
ಲತಿಹಾಸ್ಯವೆನಲೆಂದಳು || ||113||

**ಭಾಮಿನಿ**

ಮರುಗಿ ಬೆಂಡಾಗಿರ್ಪ ಸೀತಾ |
ತರುಣಿಯೈತಂದೊಡೆಯನಂಘ್ರಿಗೆ |

ಶಿರವ ಚಾಚುತಲೆಂದಳಂಗನೆ ನಿಜಮನೋಗತವ ||
ಕರುಣನಿಧಿ ನೀ ನಲ್ಲದನ್ಯರ |
ಸ್ಮರಿಸಿದೆನು ತಾನಾದಡಗ್ನಿಯ |
ವಿರಚಿಸೈ ಹೊಕ್ಕೊಗೆದು ಬಹೆ ನಿನ್ನಡಿಯ ಕರುಣದಲಿ ||114||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಎನಲು ಕೇಳುತ ಲಕ್ಷ್ಮಣನು ಮನ | ಮುನಿಸಿಸಿನಿಂದಣ್ಣನಿಗೆ ಪೇಳಿದ |
ನೆನಗೆ ನೇಮವ ಕೊಡು ಕೋಡೀಕ್ಷಣ | ಅನಲನುರಿಗೆ ||115||

ಪೊಗದರಿಂದೆನಗಿಂದು ವಿಶ್ವಾ | ಸಿಗರಿಗೊಂಚಿಸಿ ನಿನಗೆ ದ್ರೋಹವ |
ಬಗೆದ ಬಹು ದೋಷಂಗಳಯ್ದಲಿ | ಸುಗುಣ ಕೇಳು ||116||

ಸತ್ಯವರಿಯದೆ ಶಿಕ್ಷಿಸಲು ನಮ | ಗೆತ್ತಣಿಂ ಸೌಭಾಗ್ಯ ಬರುವುದು |
ಪಥ್ವಿ ಹೊರುವಳೆ ದೋಷ ಶಿವ ಶಿವೆ | ನುತ್ತ ಮಣಿಯೆ ||117||

ಹನುಮನಂಗದ ತರಣಿಸುತರಂ | ದೆನಗೆ ತನಗೆಂದಳಲುತಾಜ್ಞೆಗೆ ||
ವನಜನಾಭನ ಬೇಡೆ ಗೌರಿಯು | ಕನಲುತಾಗ ||118||

ಬಂದು ಪೇಳ್ದಳು ರಘುಜನೊಳು ಬೇ | ಡೆಂದು ಚಿತೆಗೀ ಸತಿಯ ನೂಕುವ |
ಡಿಂದು ತಾನೇ ಹೊಗುವೆನೆನಲ್ಕೆ | ತಂದನೀಶ ||119||

ಏನಿದಚ್ಚರಿ ಪೊಸತು ಪರಿಯಿದು | ದಾನವಾಂತಕನೇನ ಮಾಡುವೆ |
ನೀನೆ ಸುಜ್ಞನು ಬೇಡ ಬೇಡೆನೆ | ದಾನವೇಂದ್ರ ||120||

**ಭಾಮಿನಿ**

ಶರಣ ಮಮ್ಮಲ ಮರುಗೆ ಸುರಪತಿ |
ಸುರಿಸೆ ಕಂಬನಿ ಕಮಲಜಾಸನ |
ಕೊರಗೆ ಮನುಮುನಿನಿಕರ ಹಾಯೆನ್ನುತಲಿ ತರಹರಿಸೆ ||
ಪುರಹರನು ಮೊದಲಾದರೆಲ್ಲರಿ |
ಗರಿಯುವಂದದಿ ಪೇಳ್ದ ತನ್ನಯ |
ತರಣಿಕುಲಸದ್ಧರ್ಮ ನಿಷ್ಠೆಯ ಕ್ಷಾತ್ರಮರ್ಮವನು ||121||

**ರಾಗ ಕೇದಾರಗೌಳ ಅಷ್ಟತಾಳ**

ಹಿರಿತನ ಸಾಕೇತ ಪರಿಯರಿಯುತಲೆಲ್ಲ |
ಅರುಹಿದರೆನಗೆ ನೀವು ||

ಸುರಸ್ವರ್ಗವಾದರು । ಸರಕುಮಾಡುವರಲ್ಲ ।
ತರುಣಿಯ ಪಾಡೇನಿಂದು ॥122॥

ಹೆಚ್ಚು ಮಾತಾಡಬೇಡಿರಿ ಬಲ್ಲೆ ತಾನೆಂದು ।
ಅಚ್ಯುತ ಕರೆದೆಂದನು ॥
ನಿಶ್ಚಯವಿದು ತಮ್ಮ ಸಂಶಯ ಬೇಡಿನ್ನು ।
ಕಿಚ್ಚಿಯನುರಿಸೆಂದನು ॥123॥

ಕಿರಿಯ ನೀನಾದರೆ ತನ್ನಾಜ್ಞೆ ನಡೆಸೆನ ।
ಉರಿಗೊಳ್ಳಿಗಳನೆಲ್ಲರು ॥
ಉರುಹ ಲಗ್ನಿಯ ಕುಂಡವನು ಕಾಣುತೆಂದಳು ।
ಧರಣಿಜೆ ರಾಮನಿಗೆ ॥124॥

ಕಾಂತಲಾಲಿಸು ಎನ್ನ ನಿಜವ ನಾನೊರೆವೆನೇ ।
ಕಾಂತದಿ ನಿನ್ನ ನಾನು ॥
ಚಿಂತಿಸದನ್ಯರ ನೆನೆದರೆ ಎನಗೆ ಕ ।
ತಾಂತನ ಸೆರೆಯಾಗಲಿ ॥125॥

ಮುಡಿದಬ್ಬ ಕುಸುಮ ಬಾಡಿದರೆ ನೀ ನೋಡೆಂದು ।
ಅಡಿಗೆ ಪ್ರದಕ್ಷಿಣಿಯ ॥
ಬಿಡದೆ ಬಂದುಮೆಯ ವಂದಿಸಿ ಸುರನಿಕರಕೆ ।
ಜಡಜಾಕ್ಷಿ ನಮಿಸುತಲಿ ॥126॥

ಅನ್ಯಾಯಗೆಯ್ದರೆನ್ನಗ್ನಿ ಕೊಳ್ಳಲಿಯೆಂದು ।
ಪನ್ನಗವೇಣಿಯಾಗ ॥
ಚೆನ್ನಾಗಿ ಉರಿವಗ್ನಿಕುಂಡದಿ ಧುಮುಕಲು ।
ಕಣ್ಣ ಮುಚ್ಚಿದರೆಲ್ಲರು ॥127॥

ಆಯ ತಪ್ಪಾಯ್ತೆಂದು ಗೌರಿ ಮಿಡಿಯೆ ಕಣ್ಣ ।
ತೋಯುವ ಸುರವರರು ॥
ಹಾಯೆನೆ ಕಪಿಗಳು ಸೌಮಿತ್ರಿಯಳಲು ಉ ।
ಮೇಯ ವಲ್ಲಭ ಮರುಗೆ ॥128॥

**ರಾಗ ಸಾವೇರಿ ರೂಪಕತಾಳ**

ಸೀತೆಯುರಿದಳೆಂಬುದದ್ಭುತ ರವಂದು ।
ಭೂತಳ ತುಂಬಲಗ್ನಿಯು ಮುಸುಕಿದುದು ॥

ತಾತನ ಮುಖ ಕುಂದಿತಬ್ಬ ಬಾಡಿತು ಮುಂದೆ ।
ಮಾತೆ ಜಾನಕಿಯಗ್ನಿ ಕುಂಡಮಧ್ಯದಲಿ ||129||

ಮಿಸುನಿ ಪುತ್ಥಳಿಯಂತೆ ಹೊಳೆಯೆ ಗೌರಿಯು ಹಾರಿ ।
ಕುಸುಮಾಕ್ಷಿಯನು ತಾನೆ ತೆಗೆದಳಂದವಳು ||
ಅಸುರಾರಿ ನೀ ಬಲು ದೋಷಹೊತ್ತಪೆಯಿಂದು ।
ವಸುಮತಿಸುತೆಯ ನಿರೀಕ್ಷಿಸೆಂದೆನಲು || ||230||

ಭರ್ಗನು ಮುನಿದೆಂದ ತಪ್ಪು ಮಾಡಿದೆಯ ನೀ ।
ಯಾರ್ಗೆ ಸಂಶಯವಿನ್ನು ಪ್ರತ್ಯಕ್ಷವಾಯ್ತು ||
ಮಾರ್ಗ ತಪ್ಪಿದೆ ಮಾತ ಮರೆಯಬೇಡಸುರಾರಿ ।
ದುರ್ಗತಿಗೀಡಕ್ಕು ಪಾಲಿಸಿನ್ನಿವಳ ||231||

ವಾಣಿವಲ್ಲಭ ಕಯ್ಯ ಮುಗಿದಿರೆ ಸುರಪತಿ ।
ತಾನು ವಂದಿಸೆ ಕಪಿಕಟಕವಂದಳಲಿ ||
ದಾನವಾಂತಕಗೊಂದಿಸಿದ ಶರಣನು ಬಾಗು ।
ತಾ ನರಪತಿಗೆರಗಲು ರಾಮನೆಂದನು ||232||

**ರಾಗ ಮಧುಮಾಧವಿ, ಅಷ್ಟತಾಳ**

ಕೇಳಿರಭವಮುಖ್ಯ ದೇವರು ಮಾತ । ಎಮ್ಮ ।
ಪೀಳಿಗೆ ಮನೆತನ ಮರಿಯಾದೆಯೆತ್ತ ||
ಏಳಿಗೆಗಿಂದಾಯ್ತು ಎನ್ನಯ ಮುಖದಿ । ಕೆಟ್ಟ ।
ಹಾಳಪವಾದವು ಈ ಸತಿನೆವದಿ || ಕೇಳಿ || ||233||

ಸತಿಯನೊಯ್ದುದಕಾಗಿ ಕೊಂದುದಲ್ಲಿವನ । ಎನ್ನ ।
ಪಿತಪಿತಾಮಹನರಿದುದಕಾಗಿ ಮುನ್ನ ||
ಮಥಿಸಿದೆ ಎನಗಿಂದು ಯಾರ ಹಂಗಿಲ್ಲ । ಹೀಗೆ ।
ಸತಿಯ ಕೂಡಲು ನೀವು ಹೇಳಿದಿರಲ್ಲ || ಕೇಳಿ ||234||

ಕಪಿರಾಜ ಕೇಳು ನಿನ್ನಯ ಭಾಷೆಯಾಯ್ತು । ಯಾವ ।
ಶಪಥವಿನ್ನಿಲ್ಲ ಬಾ ಶರಣ ಬೇಸತ್ತು ||
ಅಪರಾಧವೇನುಂಟು ಲಂಕೆಯ ನಿನಗೆ । ಕೊಟ್ಟು ।
ಉಪಚಾರವಾಯ್ತೆಂದ ಮೇಲೇನು ಮರುಗೆ || ಕೇಳಿ ||235||

ಪ್ರಾಣಮಿತ್ರನೆ ಹನುಮಂತ ಬಾರಯ್ಯ । ನಮ್ಮ ।
ಪ್ರಾಣ ರಕ್ಷಿಸಿದುದಕಿತ್ತೆ ನಾನಯ್ಯ ||

ಕ್ಷೋಣಿಯೊಳತ್ಯಂತ ವಿರಳ ಮುಕ್ತಿಯನು । ಮತ್ತೆ ।
ನೀನು ದೂರುವುದೇನು ಪೋಗಿರಿಂದಿನ್ನು ॥ ಕೇಳಿ ॥236॥

ಅನುಜ ಸೌಮಿತ್ರಿ ಚಿಂತಿಸದಿರು ಸತಿಗೆ । ಈಕೆ ।
ಅನಸೂಯ ರತ್ನವಾದರು ನಮ್ಮ ಕುಲಕೆ
ಜನಕನು ಮೊದಲಾಗಿ ರಾಜ್ಯವಾಳಿದರು । ಇಂಥ ।
ಜನಜನಿತದ ಹಾಸ್ಯ ಉಂಟೆನೀನುಸಿರು ॥ ಕೇಳಿ ॥237॥

ಕಾಮವಾಸನೆಗಾಗಿ ಕೂಡಲಿನ್ನಿವಳ । ನಾವು ।
ಸೋಮಾರ್ಕ ಪರಿಯಂತ ಹೊರಲವಹೇಳ ॥
ಕಾಮಿಸುವುದೆ ನಮ್ಮ ಪ್ರಾರಬ್ಧವಿದಕೆ । ಸುಮ್ಮ ।
ನೀ ಮರುಗುವುದೇಕೆ ಫಲವುಣ್ಣುವುದಕೆ ॥ ಕೇಳಿ ॥238॥

ಮುನಿಯದಿರಜಭವ ಸುರರಿಗೆ ನಮಿಪೆ । ವಿಪ್ರ ।
ಮುನಿಗಳಿಗೆರಗುವೆ ಪುರಕಿಂದು ಪೋಪೆ ॥
ವನಿತೆಯ ಮನದಿಚ್ಛೆ ಗೆಯ್ಯಲಿನ್ನಿವಳು । ಎನೆ ।
ಮುನಿ ವಸಿಷ್ಠನು ಬಂದು ಕೈಪಿಡಿದೆನಲು ॥ ಕೇಳಿ ॥239॥

**ರಾಗ ಶಂಕರಾಭರಣ, ತ್ರಿವುಡೆತಾಳ**

ಲಾಲಿಸೈ ರಘುರಾಮ ನಿನ್ನಯ । ಶೀಲಚರಿತೆಗೆ ಸೋತೆನು ॥
ಕೋಳುಗೊಂಡಳಲುವರು ನಿಮ್ಮಯ । ಪೀಳಿಗೆಯರು ॥240॥

ಇಕ್ಷು ನಿಮ್ಮನ್ವಯ ದಿಲೀಪನು । ಕುಕ್ಷಿ ನಪನು ಭಗೀರಥ ॥
ಆ ಕ್ಷಿತಿಪರಿಂಗಿಲ್ಲ ನಿನಗೆಣೆ । ನಿಶ್ಚಯವಿದು ॥241॥

ನೋಡು ನಿಮ್ಮಜಮುಖ್ಯ ರವಿಕುಲ । ರೂಢಿಪಾಲರ ಮುಖವನು ॥
ಬಾಡಿಹುದು ಜಾನಕಿಯ ಸತ್ಯಕೆ । ನಾಡ ಜನರು ॥242॥

ಮೆಚ್ಚುವಂತಾಚರಿಸಿದಳು ಜಗ । ಕಚ್ಚರಿಯೆ ಕೇಳಯ್ಯನ ॥
ಮುಚ್ಚುಮರೆಯೇಕವನ ಮತವನು । ಸಚ್ಚರಿತ್ರ ॥243॥

ತಂದೆ ದಶರಥನೊಪ್ಪದಿರೆ ಬೇ । ಡೆಂದೆನಲು ಪೊಡವಂಟನು ॥
ಮಂದರಾಧರನೆರಗಲೆತ್ತುತ । ಲೆಂದನವನು ॥244॥

ಬಾಲ ನಿನ್ನಯ ಮನದ ದಢತೆಯ । ಶೀಲಕುರೆ ನಾ ಮೆಚ್ಚಿದೆ ॥
ಪಾಲಿಸವನಿಯ ಮಾತು ಸಂದುದು । ಈ ಲಲನೆಯು ॥245॥

ನಿನ್ನನೇಕೋಭಾವದಿಂದಲಿ | ಕನ್ನಿಕೆಯು ನಂಬಿರ್ಪಳು ||
ಕನ್ಯೆ ಗುಣವತಿ ಕೀರ್ತಿಯುತೆ ಸಂ | ಪನ್ನೆಯವಳು ||246||

ಬಾ ಮಗಳೆ ಕಾನನದಿ ನೊಂದೆಯ | ತಾಮಸರಿಗೀಡಾಗುತ ||
ಭಾಮಿನಿಯರೊರೆಗಲ್ಲಿ ಪುತ್ಥಳಿ | ಕ್ಷೇಮವಾಯ್ತು ||247||

ತರಳ ಲಕ್ಷ್ಮಣ ನಿನ್ನ ಭಕ್ತಿಯ | ಸರಳತೆಯು ಜಗ ತುಂಬಿತು ||
ತೆರಳಿ ನೀವೆಲ್ಲರು ಭರತನಿಹ | ಪೊರೆಗೆ ಬೇಗ ||248||

ಹರಿಯ ರೂಪದಿ ಬಂದು ಲೋಕವ | ಪೊರೆದೆ ಪಾಲಿಸು ರಾಜ್ಯವ ||
ಸಿರಿಯವಳ ಸಲಹೆನುತಲಪ್ಪಿದ | ಮರುಗುವವರ ||249||

**ಭಾಮಿನಿ**

ಆಸಮಯದಿ ಬಂದನಾ ಕೈ |
ಲಾಸವಾಸನು ಬೇಡು ನಿನ್ನಭಿ |
ಲಾಷೆ ಏನೆನೆ ರಾಮ ಕೈಮುಗಿದೆಂದನೀಶನಿಗೆ ||
ಈ ಸಮರಮುಖದಿಂದ ಸತ್ತಿಹ |
ಕೀಶಸಂತತಿ ಏಳಲೆಂದೆನ |
ಗಾಸೆ ಬೇರಿಲ್ಲೆನಲು ಕಮಲಜಗುಸಿರೆ ಸಂತಸದಿ ||250||

**ರಾಗ ಶಂಕರಾಭರಣ ರೂಪಕತಾಳ**

ಕಮಲಭವನು ಅಳಿದ ಕಪಿಗ | ಳೇಳುವಂತೆ ಮಂತ್ರಜಲವ |
ಸುಮನ ಸಾದ್ಯರುಲಿಯಲೆರೆಯು | ತಿದ್ದರೆಲ್ಲರು ||251||

ರಾಮನೊಪ್ಪಿಕೊಂಡನೆಂದು | ಭೂಮಿಜೆಯು ನಲಿಯೆ ಜನರು |
ಆ ಮಹಾವಸಿಷ್ಠ ಮುಖ್ಯ | ರೆಲ್ಲ ಹರಸಲು ||252||

ಇದು ಸಮಗ್ರ ಜಗಕೆ ಶುಭವು | ವಧುವರರ ವಿವಾಹವೆನುತ |
ತ್ರಿದಶರೆರೆಯಲರಳಮಳೆಯ | ನಭವನಡರಲು ||253||

ಗಿರಿಜೆ ಸಹಿತ ತೆರಳಲೆಲ್ಲ | ಸುರಪ ಬ್ರಹ್ಮಶಾರದೆಯ |
ರರಿಕೆಗೊಂಡು ಪೋದರತ್ತ | ಮುನಿಕುಲೌಘವು ||254||

ಹರಸಿ ಪರ್ಣಮಂದಿರಕ್ಕೆ | ಪೊರಡಲಾಗ ದಶರಥೇಂದ್ರ |
ಧರಣಿಪಾಲರೆಲ್ಲ ಹರುಷ | ಗೊಂಡು ನಡೆದರು ||255||

ಗುರುವಸಿಷ್ಠನೆಂದ ರಾಮ । ಗಿರದೆ ಭರತನಲ್ಲಿ ಪೋಗು ।
ಧರಣಿಯನ್ನು ಪಾಲಿಸೆಂದು । ಹರಸಲೆಲ್ಲರು ॥256॥

ರಾಘವನ್ನ ಪೊಗಳುತೆಲ್ಲ । ಪೋಗಲವರು ಮಗುಳೆ ಶರಣ ।
ನಾಗಶಯನನಿಂಗೆ ನಮಿಸು । ತೆಂದನೊಲವಿಲಿ ॥257॥

**ವಾರ್ಧಕ**

ಇನಕಲೇಶನೆ ನಿನ್ನ ಮಹಿಮೆ ತಿಳಿದಾಯ್ತೆನಗೆ ।
ಮನವಿದ್ದರಿಂದು ಭೋಜನವ ನೀ ಮಾಡುತಲಿ ।
ಮನೆಗೆ ತೆರಳೆನ್ನನುದ್ಧರಿಸು ನೀನೆಂದೆನುತ ಶಿರವಾಗಲಿಂತೆಂದನು ॥
ವನಚರವ್ರಜವನುಪಚರಿಸು ನಾನಿನ್ನು ಭರ ।
ತನಬಿಡುತಲುಣಲೊಲ್ಲೆನಿಂದೆ ತೆರಳಲು ಬೇಕು ।
ದಿನಕಳೆದರಾತನಳಿವನು ಬೇಗಲುಣಬಡಿಸು ನಿಜಮನೋಗತಮೆನ್ನಲು ॥258॥

**ರಾಗ ಮೆಚ್ಚು ಅಷ್ಟತಾಳ**

ಸಿದ್ಧವಾಯ್ತುಡನೆ ಊಟಗಳು । ಪಙ್ಕ್ತಿ ।
ಉದ್ದಕಿಟ್ಟರು ಬಾಳೆಲೆಗಳು ॥
ಉದ್ದಾದ ಬಾಳೆಹಣ್ಣುಗಳು ಪಲ್ಯಗಳಿಂದ ।
ಗದ್ದಳ ಬಿರಿಸಾಯ್ತು ಸಾಸಿವೆ ಚಟ್ನಿಯು ॥ ॥259॥

ಉಪ್ಪಿನಕಾಯಿ ತೋವೆಗಳು । ಮೇಲಾ ।
ಗಿಪ್ಪ ಕೋಸಂಬ್ರಿ ಸಾರುಗಳು ॥
ಅಪ್ಪ ಕಜ್ಜಾಯ ಹುಳ್ಯನ್ನ ಮೇಲೋಗರ ।
ಹಪ್ಪಳ-ಸಂಡಿಗೆ ತುಪ್ಪನ್ನ ಪಾಯಸ ॥ ॥260॥

ಮಂಗನವನಿಗೆಬೇಡೆಂದು । ಬೇರೆ ।
ಸಿಂಗಾರ ಪಙ್ಕ್ತಿ ಇದೆಂದು ॥
ಲಾಂಗೂಲ ಸುಡುಕ ಜಾತಿಯೆ ಕೀಳು ಭಲ್ಲೂಕ ।
ಸಂಗಡ ಸಲ್ಲದು ಎನುತೊಬ್ಬರೊಬ್ಬರು ॥ ॥261॥

ಪಙ್ಕ್ತಿಗೆ ಬಾರದನ್ನಗಳು । ಪಾಯ ।
ಸೆಂತು ಸಿಹಿಯಲ್ಲ ಖಾರಗಳು ॥
ಸಂತೆಯ ಬಾಳೆಹಣ್ಣೊಂದೊಂದ ಸಿಕ್ಕಿದ ।
ರೆಂತು ತುಂಬುದು ಹೊಟ್ಟೆ ಸಾಕು ನಿನ್ನೌತಣ ॥ ॥262॥

ಇನಿತೊಬ್ಬರೊಬ್ಬರಂದವರು । ಸಣ್ಣ ।
ವನಚರನನು ತಿಕ್ಕಲವರು ॥
ಹೆಣಗಿ ಗುದ್ದಿದನೊಬ್ಬಗಾತಗಿನ್ನೊಬ್ಬರೆಂ ।
ದೆಣಿಸಿಕೊಂಡರು ಪೆಟ್ಟು ಪೆಟ್ಟಿಗಂದವರು ॥ ॥263॥

**ಭಾಮಿನಿ**

ಇನಿತು ಭೋಜನ ನಡೆಯಲಂದಾ ।
ಜನಪರಾ ಫಲ ಕದಳಿ ಕ್ಷೀರದಿ ।
ದಣಿಯಲತಿಹರುಷದೊಳು ಶರಣನೊಳೆಂದ ರಘುಪತಿಯು ॥
ಮನವಯೋಧ್ಯೆಯೊಳಿಹುದು ಭರತನ ।
ನೆನಹು ಬಿಗಿಯಾಯ್ತಿಂದು ಕಳುಹೆಂ ।
ದೆನಲು ಭಕ್ತಿಯೊಳಿತ್ತು ನಮಿಸಿದನಂದು ಪುಷ್ಪಕವ ॥264॥

**ವಾರ್ಧಕ**

ದೇವರೇರಲು ಬೇಕು ಎಂದೆನಲು ನಸುನಗುತ ।
ದೇವಿಯನು ಕುಳ್ಳಿರಿಸಿ ಸೌಮಿತ್ರಿ ಸುಗ್ರೀವ ।
ಪಾವಮಾನಿಯು ರಾಮನಿಂತೈವರೇರ್ದು ಬಳಿಕುಳಿದವರು ಬೆನ್ನಹಿಂದೆ ॥
ಸಾವಧಾನದಿ ಬರಲು ನೇಮಿಸುತ ಮಯಸುತೆಯ ॥
ಭಾವವರಿದಂ ರಾಮನಾಜ್ಞಾಪಿಸಲ್ಕಿಂತು ।
ದೇವಿ ನಿನ್ನಯ ಸ್ಮರಣೆ ಮಾಡಿದ ಸತೀಜನರು ಪಾವನರು ಜಗದೊಳಹರು ॥265॥

**ರಾಗ ಆರ್ಯಸವಾಯ್ ಏಕತಾಳ**

ಇನಿತಾ ರಾಮನು ಪೇಳುತ ಮುಂದಕೆ ।
ವನಿತೆಯು ಸಹಿತಲಿ ಮುದದಿ ॥
ಘನ ಪುಷ್ಪಕದಿಂ ಹಾಯಲು ಸೀತೆಯು ।
ಜನಪನೊಳೆನೆ ಸಂತಸದಿ ॥ ॥266॥

ಲಾಲಿಪುದೆನ್ನಯ ಬಿನ್ನಪ ಲಂಕೆಯ ।
ಲೀಲೆಯ ಪುರನೋಡಲಿಕೆ ॥
ಸೋಲುವುದೆನ್ನಯ ಮನದರಿಕೆಯ ನೀ ।
ಪಾಲಿಸಿ ತೋರಿಂದೆನಗೆ ॥ ॥267॥

ಸತಿ ಕೇಳ್ ಮೊದಲೀ ನಗರಿ ಕುಬೇರನ ।
ಸ್ಥಿತಿಯಾಗಿರಲಯ್ತುಂದು ।

ದಿತಿಜನಪೇಕ್ಷಿಸಿ ಮುನಿಯಿಂದಪ್ಪಣೆ ।
ಹಿತದಿಂ ಕೇಳ್ದಿರಲಂದು ॥  ॥268॥

ಬೆದರುತ ರಾವಣಗಿತ್ತವನಯ್ದಿದ ।
ಬದಲಳಕಾನಗರವನು ॥
ತ್ರಿದಶರಮನ ಸೋಲುವುದಾ ರಾಕ್ಷಸ ।
ಸದನದ ಚೆಲುವಿಗೆ ನೀನು ॥269॥

ಲಂಕೆಯ ವೈಭವ ಕಂಡರೆ ಹದಯದಿ ।
ಶಂಕೆಯು ಕಾಣಿಸದಿರದು ॥
ಕಿಂಕರಗಿತ್ತಿಹೆ ನಡೆಯೆಂದೆನ್ನುತ ।
ಪಂಕಜನಯನ ಮುಂದರಿದು ॥270॥

ವಾರಿಧಿಗೇರಿಸಿ ಕಟ್ಟಿಹ ಸೇತುವ ।
ತೋರಿದನಾ ಗಣಪತಿಯ ॥
ಕಾರಣಿಕವನರುಹುತತರಿದಸ್ತ್ರದಿ ।
ಮೂರಾಗಲು ಸೇತುವೆಯ ॥271॥

ಕತ್ತರಿಸುತ ಜನಹತ್ತದ ತೆರದಲಿ ।
ಮತ್ತೈದಿದರವರಂದು ॥
ಉತ್ತರದಿಸೆ ವೈಶ್ರವಣವ ನೋಡುತ ।
ವೆತ್ತರವೇರಲ್ಕಂದು ॥272॥

ಬಾಲೆಯಿದೇ ಕಪಿಜಾಲವ ಕೂಡುತ ।
ಲಾಲೋಚಿಸಿದ ಸ್ಥಳವು ॥
ಮೇಲಕೆ ನೋಡದು ಕಿಷ್ಕಿಂಧಾದ್ರಿಯ ।
ಮೂಲವು ವಾನರಠಾವು ॥273॥

ಕಾಣುತ ದೂರದಿ ರುಮೆತಾರೆಯರಾ ।
ಕಾಣಿಕೆ ಕೊಡಲಯ್ದಿದರು ॥
ಶ್ರೀನಿವಾಸನ ಸತಿಗಿಟ್ಟೆರಗಲು ।
ಭಾನುಜಸಹಿತೆಲ್ಲವರು ॥274॥

**ಭಾಮಿನಿ**

ಹರಿಯೆ ಮತ್ಪುರದೊಳಗೆ ಸೇವೆಯ ।
ನರಿದು ನಾಳೆಗೆ ಪಯಣಗೆಯ್ದುದು ।
ಚರಣದೊಂದಿಗೆ ಬಹೆವು ಪಾವನರಾದೆವಾವಿಂದು ।

ಹಿರಿದು ಬಿನ್ನಹವಿಲ್ಲ ದೇವರಿ ।
ಗರಿಕೆಯೆಂದೆನಲೆಂದ ರಾಘವ ।
ತರಣಿನಂದನ ನೀನು ತಿಳಿಯದ ಕಾರ್ಯವೇನುಂಟು ॥275॥

**ರಾಗ ಘಂಟಾರವ, ರೂಪಕತಾಳ**

ತರಣಿನಂದನ । ನಿರತ ಸಜ್ಜನ ।
ಪರಿಕಿಸೆಮ್ಮಯ । ಭರತನಾಜ್ಞೆಯ ॥
ಒರೆದ ಮಾತನು । ಮೀರಲಾಗದು ।
ಮರೆದೆನಾದರೆ । ಜೀವವಳಿವುದು ॥276॥

ದೇವರಾಲಿಸಿ । ಯೆಂದು ಪದದೊಳು ।
ದೇವಿಯಾಭರ । ಣಂಗಳೀಯಲು ॥
ರಾವಣಾಂತಕ । ಸೀತೆಗದರನು ।
ದೇವಿ ನೋಡೆನೆ । ತೆಗೆಯುತದರನು ॥277॥

ಅತ್ತು ದುಃಖಿದಿ । ನೋಡುತೆಲ್ಲವ ।
ಪಥ್ವಿಜಾತೆಯು । ಧರಿಸೆ ಸರ್ವವ ॥
ಪಥ್ವಿಪಾಲನು । ಪೊಗಳುತೆಲ್ಲರ ।
ಮತ್ತೆ ನಡೆದನು । ಮಂದರಾಧರ ॥278॥

ಕಮಲದೆಲೆಯೊಳು । ಭ್ರಮಿಸಿದೆಲ್ಲವ ।
ನಿಮಿಕುಲಾಂಗನೆ । ಗೆಂದ ರಾಘವ ।
ಭ್ರಮರಕೇಶಿನಿ । ಶಬರಿಕಥೆಯನು ।
ಅಮರವಂದ್ಯನು । ಪೇಳ್ದನದರನು ॥279॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಮುಂದೆ ಪುಷ್ಪಕದಿಂದ ಬರಲು ಕ ।
ಬಂಧನುದ್ವಾಸನೆಯ ಮುಕ್ತಿಯ ।
ನಂದು ವರ್ಣಿಸುತಯ್ದಲಾ ಪ । ಕ್ಷೀಂದ್ರನಿರವ ॥280॥

ಕೇಳಿ ದುಃಖಿಸುತೆನಲು ಸೀತೆಯು ।
ಹೇಳು ಖಗವಂದೇನ ಮಾಡಿತು ।
ಖೂಳವಂಚಿಸಿ ಹೊಡೆಯೆ ಬಿದ್ದುದ । ಮೇಲಣೆನಲು ॥281॥

ಖಗವು ನಿನ್ನಯ ಕಥೆಯನರುಹುತ ।
ನೆಗೆದುದಂದಂಬರಕೆ ಮೇಣದ ।
ಮಿಗೆ ರಚಿಸಿಯೂರ್ಧ್ವಾದಿಕ್ರಿಯೆಯನು । ಮುಗುದೆ ಕೇಳು ॥282॥

ಹೋದೆವೆಂದೆನುತರುಹುತಯ್ದುತ ।
ಐದೊಟವ ಕಾಣಿಸಲು ಕಳವಳ ।
ಗೆಯ್ದು ಕಾಮಿನಿಗಂದು ತೋರಿದ । ವೇದವಂದ್ಯ ॥283॥

ಸುರಭಿಯಾಶ್ರಯದುಪವನವನುರೆ ।
ತರಗೆಲೆಯ ಮಂದಿರವನೋಡೆನೆ ।
ಮರುಗೆ ಮುಂದಕೆ ಸರಿಯೆ ಪುಷ್ಪಕ । ಭರದೊಳಾಗ ॥284॥

ಮತ್ತೆ ತೋರಿದ ದನುಜನಾಸಿಕ ।
ಕೆತ್ತಿದೂರನು ದಂಡಕವ ಮಿಗೆ ।
ಚಿತ್ರಕೂಟ ವಿಚಿತ್ರವೆಲ್ಲವ । ಪಥ್ವಿಸುತೆಗೆ ॥285॥

ಕಾಗೆ ಸದೆಬಡೆದಿರುವ ಶಂಭುಕ ।
ಗಾಗಿರುವ ಮರಣಗಳ ಸ್ಥಳವನು ।
ಸಾಗಿ ಭಾರದ್ವಾಜನಾಶ್ರಮ । ಕಾಗಿಬರಲು ॥286॥

**ವಾರ್ಧಕ**

ದೂರದಿಂ ಕಂಡಿವರ ಕರೆಯೆ ರಘುರಾಜೇಂದ್ರ ।
ಧಾರಿಣಿಯೊಳಿಳಿದೆರಗೆ ಪಿಡಿದೆತ್ತುತಾಗ ಋಷಿ ।
ಪಾರಗನು ಹರಸುತಲಿ ಪೇಳಿದನು ರಾವಣಾದ್ಯಖಿಳ ಖಳರನು ಮರ್ದಿಸಿ ॥
ಭಾರವಿಳಿದಾಯ್ತಿನ್ನು ಮಂದಿರದೊಳಿಂದಿರ್ದು ।
ಸಾರನ್ನ ಭೋಜನವ ಗೆಯ್ದು ತೆರಳಲು ಬೇಕು ।
ಕಾರಣಿಕರೆಂದೆನಲು ಕಯ್ ಮುಗಿದು ರಘುರಾಮ ಬೇಡಿದಂ ಯತಿಪದದೊಳು ॥287॥

**ಭಾಮಿನಿ**

ಗುರುಗಳವಧರಿಸುವುದು ಇಂದಿಗೆ ।
ಭರತನೆನ್ನನು ಕಾಣದಿರೆ ತನು ।
ತೊರೆವ ಮಾತಿದು ಸತ್ಯವೀ ನುಡಿ ಸಮಯವಿಲ್ಲವಲಾ ॥
ಪರಮಸದ್ಗುಣಿ ಕರುಣಿಸಲು ಬೇ ।
ಕಿರದೆ ಪೋಪೆವು ನಂದಿಗ್ರಾಮಕೆ ।
ಭರವಸದ ಮಾತಿಂದ ಮೇಲಿಹುದುಂಟೆಯೆಂದೆನಲು ॥288॥

**ರಾಗ ಕಾಂಭೋಜಿ ಝಂಪೆತಾಳ**

ಧರೆಯಾಣ್ಮ ನೀನರಿಯದೇನು ಜಗ ನಿರ್ಮಿಸುವೆ |
ತರಿವೆಯೊಂದೆಸೆ ಹುಟ್ಟು ಸಾವು ||
ಬರುವುದಚ್ಚರಿಯೇನು ಯಾರು ಶಾಶ್ವತರಿಹರು |
ಅರುಹಲೇತಕೆ ಬೊಮ್ಮನೆನಗೆ ||289||

ಮುನಿಯ ಮಾತನು ಕೇಳಿ ಹನುಮನನು ಕರೆದೆಂದ |
ಚಿನುಮಯನು ಪೋಗು ಭರತನಿಗೆ ||
ಬಂದೆನೆಂದರುಹು ಶರಣರ ಸುಸಂಜೀವನನೆ |
ಮುನಿಮಾತಿಗೊಡಬಟ್ಟೆನೆನಲು ||290||

ದೂತತ್ವ ಬಲ್ಲಿದನು ಹನುಮಂತನೆಂಬಂತೆ |
ವಾತಜನು ಬಂದನಂಬರದಿ ||
ಕೋತಿಯುಬ್ಬರನೋಳ್ಪೆನೆನುತನಾರದ ಜವದೊ |
ಳಾತನನು ತಡೆದೆಂದ ನಭದಿ ||291||

ಎಲ್ಲಿಗಯ್ದುವ ಭರವು ರಾವಣಾದ್ಯರ ಕೊಂದು |
ಫುಲ್ಲನಾಭನ ಬಿಟ್ಟು ನೀನು ||
ನಿಲ್ಲೊಂದು ಕ್ಷಣ ಕೇಳ್ವೆ ರಾವಣನ ಮೂಲಬಲ |
ಮಲ್ಲ ಸಂಖ್ಯೆಯನೊಮ್ಮೆ ಹೇಳು ||292||

ವತ್ತಾಂತವರುಹಿ ನೀನೆಲ್ಲಿಗಾದರು ಪೋಗು |
ಭತ್ಯನಲ್ಲವೆ ರಾಮಬಲದ ||
ಸತ್ತ್ವ ಶಾಲಿಯೆ ಎನಲು ಹನುಮ ಮದ್ದರೆವೆನೆಂ |
ದುತ್ತರವಪೇಳ್ದ ನಗುತವಗೆ || ||293||

**ವಾರ್ಧಕ**

ಕರಿಗಳಯುತಕೆ ನಿಯುತ ತುರಗವದರರ್ಧ ರಥ |
ವರ ಮಹಾಕಾಲಾಳು ಕೋಟಿಕೊಲೆಗೊಂದು ನೃಪ |
ಶಿರವಿರದ ಮುಂಡವಾಡುವುದು ಕೇಳದರಂತೆ ನರಕಬಂದದ ಕೋಟಿಯು ||
ಹರಿದಾಡೆ ರಾಘವನ ಕರದ ಚಾಪಾಂಕಿತದ |
ವರಮಣಿಯೊಳೊಂದು ರವ ಕೇಳ್ವುದೆಣಿಕೆಯ ನೋಡ |
ಲಿರುತಿರ್ಪ ಚೌಷಷ್ಟಿಮಣಿಗಳುರೆ ಜಾವಾರ್ಧವೊರಲಿತದನೆಣಿಸೆಂದನು ||294||

**ರಾಗ ಕಾಂಭೋಜ ಝಂಪೆತಾಳ**

ಹನುಮನೀಪರಿಯಿಂದ ಮುನಿಪಗರುಹಿದು ತೆರಳೆ ।
ವನಚರನ ಚಾತುರ್ಯಕಂದು ॥
ಮನದಿ ನಾಚುತಲೆಣಿಸೆ ಗಣಿತವಾ ರಾಮಚಂ ।
ದ್ರನ ಸ್ಮರಣೆಯೇ ಬಂತು ಕಡೆಗೆ ॥ ॥295॥

ಲೆಕ್ಕವರಿಯದೆ ತಾನು ಮರೆತನು ಸಮಾಧಿಯನು ।
ಸಿಕ್ಕಿ ಕಪಿಜಾಲದಿಂ ನೊಂದು ॥
ಹಕ್ಕಿವಾಹನಗೆಂಬೆ ಬಿಡೆನೆನುತಲಾ ಮುನಿಪ ।
ಹೊಕ್ಕ ತನ್ನಯ್ಯನಿದ್ದೆಡೆಗೆ ॥296॥

ವಾತಜನು ಮುನಿಯ ಚೇಷ್ಟೆಗೆ ನಕ್ಕು ರಾಮನನು ।
ಜಾತನಿದ್ದಲ್ಲಿಗೆಯ್ದಿದನು ॥
ಭೀತಿ ಬೇಡೈ ರಾಮ ಬಂದನೆಂದಬ್ಬರವು ।
ಭೂತಳವು ತುಂಬಲಿಂತೆಂದ ॥ ॥297॥

**ರಾಗ ನವರೋಜು ಏಕತಾಳ**

ಹೋ ಹೋ ಸೈರಿಸು ಭರತ । ಸ । ನ್ನಾಹವದೇ ವಿಪರೀತ ॥
ಆ ಹರಿ ಬಂದನು ನೋಡಾತನನು ।
ಬೇಹಿನ ಚರ ಹನುಮಂತನು ತಾನು ॥ ಹೋ ಹೋ ॥298॥

ರಾವಣನಾ ಪುಷ್ಪಕದಿ । ಭೂ । ದೇವಿಜೆಯು ಸಹ ಮುದದಿ ॥
ಭಾವಜನಯ್ಯನು ತವಕದಿ ಬಂದಿಹ ।
ಪಾವಕನುರಿಯ ನಿಧಾನಿಪುದಯ್ಯ ॥ ಹೋ ಹೋ ॥299॥

ನಿನ್ನಯಗೋ ಸುಗವಿಲ್ಲಿ । ಹರಿ । ಎನ್ನಕಳೂ ಹಿದನಿಲ್ಲಿ ।
ಪನ್ನಗಶಯನ ಪರಾತ್ಪರವಸ್ತುವ ।
ಕಣ್ಣಲಿ ನೋಡಸುರಾರಿಯ ಪರಿಕಿಸು ॥ ಹೋ ಹೋ ॥300॥

**ಭಾಮಿನಿ**

ಇತ್ತ ಭರತನ ಸಂತವಿಸುತಿರ ।
ಲತ್ತಮುನಿ ರಾಘವನ ಭೋಜನ ।
ಕುತ್ತಮದ ಸುರಧೇಯ ತರಿಸುತ ಮಾಡಿ ಬಹುವಿಧವ ॥
ಇತ್ತು ಷಡುರಸ ಬೋಜನವ ಮಿಗೆ ।

ಸತ್ಯಪುರುಷರ ಕಳುಹೆ ಮುನಿ ಭೂ ।
ಪೋತ್ತಮರು ಬಂದಿಳಿಯೆ ಹನುಮನು ತೋರ್ದ ಭರತನಿಗೆ ॥301॥

**ರಾಗ ಮೋಹನ ಏಕತಾಳ**

ದೂರದಿ ತೋರ್ದನು ಹನುಮಂತ । ಆ ।
ಧಾರಿಣಿಪಾಲರ ಗುಣವಂತ ॥
ನಾರಿಯ ಸೀತಾಂಗನೆಯರು ಬರುವರ
ಶ್ರೀರಾಮನು ಬಂದನು ಎಂಬಬ್ಬರ ॥ ದೂರದಿ ॥302॥

ನಿರ್ಗುಣ ನಿಸ್ಸಹನೋಂಕಾರ । ನೈ ।
ಸರ್ಗ ನಿರಾಮಯಭವದೂರ ॥
ಭರ್ಗಸಖನಂತರ್ಗದ ರೂಪನ ।
ದುರ್ಘಟನಾಶನ ದುರಿತವಿನಾಶನ ॥ ದೂರದಿ ॥303॥

ರಾಮನು ಬಂದುದ ನೋಡಿದರು । ನಿ ।
ಷ್ಕಾಮಗೆ ನಮಿಸಿದರೆಲ್ಲವರು ॥
ಭೂಮಿಯೊಳೆರಗುತ ಭರತನು ಪಾಡಿದ
ಕಾಮಿತಫಲದಾಯಕನನು ಬೇಡಿದ ॥ ದೂರದಿ ॥304॥

ಹರಸುತ ಭರತನ ಜಗದೊಡೆಯ । ಮ ।
ತ್ತೆರಗಿದ ಮಾತೆಯ ಪದದಡಿಯ ॥
ಚರಣದೊಳೆರಗಲು ಕೈಕಾಸತಿಯಂ ।
ದೊರಲುತ ನುಡಿದಳು ಕಣ್ಣೀರೆರದಳು ॥ ದೂರದಿ ॥305॥

ತಪ್ಪನು ಮಾಡಿದೆ ನಾ ನಿನಗೆ । ನಿ ।
ನ್ನಪ್ಪನ ಕೆಡಿಸಿದೆ ಭವದೊಳಗೆ ॥
ದರ್ಪಜ್ವರವನು ತಡೆದಪಕೀರ್ತಿಯ
ತಪ್ಪಿಸಿ ಪಾಲಿಸು ಕುಲದ ಸುಕೀರ್ತಿಯ ॥ ದೂರದಿ ॥306॥

ನಿನ್ನನು ಅಗಲಿದ ದೆಸೆಯಿಂದ । ನೋ ।
ಡೆನ್ನಯ ಕಂದನ ಮುಖದಿಂದ ॥
ಕಣ್ಣೆತ್ತನು ನೋಡಲು ವಿಷಯಂಗಳ ।
ಇನ್ನೀ ಧರೆಯನು ಪಾಲಿಸು ನೀನು ॥ ದೂರದಿ ॥307॥

ಮಗಳೇ ಮನ್ನಿಸು ನಿಮಿಜಾತೆ । ನಿ ।
ನ್ನಗಲಿದ ತಾಪದಿ ನಾ ಸೋತೆ ॥

ಹಗಲಿರುಳೆನ್ನದೆ ಕಾನನದೊಳು ನೀ |
ಬಗೆಬಗೆ ಕೋಟಲೆ ಪಡೆದ ಸುಶೀಲೆ || ದೂರದಿ ||308||

**ರಾಗ ಸಾಂಗತ್ಯ ರೂಪಕತಾಳ**

ಆ ಸಮಯದಿ ವಸಿಷ್ಠರು ಬಂದುದನು ಕಂಡು |
ದಾಶರಥಿಯು ಮಣಿದಿರಲು ||
ಆಶೀರ್ವದಿಸುತೆತ್ತಿ ಪೇಳ್ದ ಕಥೆಯನಂದು |
ಕ್ಲೇಶನಾಶನದ ಸಂಗತಿಯ ||309||

ತರುಣಿಯ ಕದ್ದೊಯ್ದ ದುರುಳ ರಾವಣನನು |
ತರುಚರರ್ವೆರಸಿ ರಾಘವನು ||
ಶರಧಿಗೆ ಸೇತುವ ಬಲಿದು ದುಷ್ಟರನು ಸಂ |
ಹರಿಸಿಪಟ್ಟವ ವಿಭೀಷಣಗೆ ||310||

ಕೊಡುತಾ ಸೀತೆಯನಗ್ನಿಯೊಳು ಪರೀಕ್ಷೆಯ ಗೆಯ್ದು |
ಪೊಡವಿಪಾಲಕ ದಶರಥನ ||
ನುಡಿಗೊಡಬಟ್ಟೀಕೆಯನು ಕೂಡುತಯ್ತಂದ |
ಮಡನಜಸುರರ ಸಂಸ್ತುತಿಯ ||311||

ಕೊಳುತಿಲ್ಲಿ ಭರತನಮಾತ ಪಾಲಿಸೆ ಬಂದ |
ನಳಿನಾಕ್ಷ ಜಗದೈವವೆನಲು ||
ಬಲು ಕ್ಲೇಶಗೊಳುತವನಿಯ ಪಾಲಿಸೆನೆ ಕೇಳು |
ತಳುವವರಿಗೆಂದ ರಾಘವನು ||312||

**ಭಾಮಿನಿ**

ಏತಕಳಲುವಿರಕಟ ವಿಧಿವಶ
ತಾತ ದರ್ಶನವಾಯ್ತು ನಿಮ್ಮಯ
ಮಾತಿನಿಂದಲಿ ಪಡೆದ ಕೀರ್ತಿಯು ಬ್ರಹ್ಮಚರ್ಯೆಗಳ ||
ನೀತಿ ನಿಯಮದ ತನು ದಢತೆಯಿಂ |
ದಾಯ್ತು ರಕ್ಕಸರಳಿದರಯ್ಯನ
ಭೂತಳವ ಕೈಕೊಂಡೆ ನಿಮ್ಮಾಜ್ಞೆಯಲಿ ನಾನೆಂದ ||313||

**ರಾಗ ಶಂಕರಾಭರಣ ರೂಪಕತಾಳ**

ಅಳಲಬೇಡ ತರಳ ಭರತ | ನಿಲಿಸು ವ್ರತವನು |
ತೊಲಗಿ ಪೋದ ಜನಕ ನಿಂಗೆ | ದುಃಖವಹುದಿನ್ನು ||

ಇಳೆಯನಾಳಲೊಪ್ಪಿಕೊಂಡೆ | ಬಲಗಳೆಮ್ಮದು |
ಹೊಳಲು ಪೊಗಲಿ ಗುರು ವಸಿಷ್ಠ | ರಾಜ್ಞೆಯಿನ್ನದು || ||314||

ಎಂದು ರಾಮ ಮುನಿಪ ಭರತ | ರೊಂದುಗೂಡುತ |
ಬಂದರೆಲ್ಲ ಯೋಧ್ಯಪುರಕೆ | ಚಂದ ನೋಡುತ ||
ಕಂದ ಶತ್ರುಮಥನ ಬಂದು | ವಂದಿಸಿದನು |
ಸಂದಣಿಯು ಸಾಮಂತರೆರಗ | ಲಂದು ರಘುಜನು || ||315||

ಭಜಿಪ ತನ್ನ ರಾಜ್ಯದರಸು | ಪ್ರಜೆಗಳೆಲ್ಲರ |
ಅಜನನಯ್ಯ ಮನ್ನಿಸಿದ | ಸಚಿವ ಮುಖ್ಯರ ||
ರಜನಿಚರ ವಿಭೀಷಣಾದಿ | ರವಿಜರಾಕ್ಷಣ |
ಭಜಕರೈದೆ ಮನ್ನಿಸಿದನು | ಕಮಲಲೋಚನ || ||316||

**ಭಾಮಿನಿ**

ಬಂದವರ ಸತ್ಕರಿಸಿ ಗುರುಮುಖ |
ದಿಂದ ನಿಶ್ಚಯಿಸಿದರು ದಿನವನು |
ಇಂದಿರಾಸತಿವರನ ಸಾಮ್ರಾಜ್ಯಾಭಿಷೇಚನಕೆ |
ಚಂದದಿಂ ರಚಿಸುವರೆ ವ್ರತವ |
ನ್ನಂದು ಕರಣಿಕನೀಯೆ ಚರರು ವ |
ಸುಂಧರೆಯ ಸುತ್ತುತಲಿ ಓಲೆಯ ನಿತ್ತು ಬಂದವರು ||317||

**ರಾಗ ಭೈರವಿ ಝುಂಪೆತಾಳ**

ಬಂದೆರಗಲಾ ಸುಮಂತ್ರನು ರಾಮಗಂದೆನಲು |
ಮಂದಿರವ ಶಂಗರಿಸು ಚೆಲುವ ನಾಡುಗಳು ||318||

ಚಂದ ಗೋಪುರಗಳನು ಕಟ್ಟಿಸೆನೆ ಕೇಳ್ದು ನಲ |
ವಿಂದ ಶಿಲ್ಪಿಗರ ಮುಖದಿಂದ ರಚಿಸಿದನು ||319||

ಕೋಟೆಯುಪ್ಪರಿಗೆ ಸೌಧಗಳು ಚಾವಡಿ ಬೇರೆ |
ಊಟದುಪಮನೆ ಗೋಪುರಗಳ ಸಾಲುಗಳು ||320||

ಘೋಟಕದ ಭವನ ಚತುರಂಗಸೈನ್ಯದ ಠಾವು |
ಆಟಗಳ ನಿಲಯ ಶಸ್ತ್ರಾಸ್ತ್ರ ಠಾಣೆಗಳು ||321||

ಸಾಲುಗೇರಿಯ ಬೀದಿಗಳಲಿ ಮೇಲ್ಗಟ್ಟುಗಳ |
ಮೇಲುದಿಪ ಚಂದ್ರಾರ್ಕವೀಥಿಯಂತೆಸೆವ ||322||

ಮೇದಿನಿಯ ವಿಸ್ತಾರ ಹನ್ನೆರಡು ಯೋಜನದ ।
ಹಾದಿಯಳತೆಯ ಬಿಸಿಲುಚಪ್ಪರವು ಹೊಳೆವ ॥323॥

ಮುತ್ತು ರತ್ನದ ಜಲ್ಲಿ ಹವಳಗಳ ವೇದಿಕೆಯು ।
ಕೆತ್ತನೆಯು ವಜ್ರ ವೈಡೂರ್ಯ ಚಿತ್ರಗಳು ॥324॥

ಛತ್ರ ಚಾಮರ ಕುರುಜು ಸೀಗುರಿಯು ತೋರಣವು ।
ವಿಸ್ತಾರದಿಂದಯೋಧ್ಯೆಯು ರಂಜಿಸಿರಲು ॥325॥

ಭದ್ರಪೀಠವ ಮಾಡಿ ಮಾಣಿಕ್ಯಮಯದಿಂದ ।
ಮುದ್ದು ಮುದ್ದಾದ ಹರಿವಿಷ್ಟರವ ರಚಿಸಿ । ॥326॥

ಚಿತ್ರಮಯವಾಗಿ ರಂಜಿಸಲು ಲೋಕಕೆ ಪೊಸತು
ಪ್ರತ್ಯಕ್ಷ ವೈಕುಂಠವೆನಲು ಸುರವರರು ॥327॥

ಇಂದ್ರ ತಾ ಕರೆದೆಂದ ದಿಕ್ಪಾಲಕರನವನು ।
ಎಂದ ನಾವೆಲ್ಲವರು ರಾಮನೆಡೆಗಿನ್ನು ॥328॥

ದುಷ್ಟರನು ಮುರಿದು ಪಾಲಿಸಿದ ಮೇಲನವರತ ।
ಶಿಷ್ಟರಾಗಲು ಬೇಕು ನಡೆಯಿರೆಂದೆನು ॥329॥

**ದ್ವಿಪದಿ**

ಸುರಪಾಲ ತಾನೆ ಸರ್ವಾಧ್ಯಕ್ಷನಾಗೆ ।
ನಿರುಪಮಿತ ಬಾಣಸಿಗನಗ್ನಿಯಿಂದಡಿಗೆ ॥330॥

ಕಸಬರಿಕೆತನವಂದು ವಾತನಿಂದಲ್ಲಿ ।
ಶರವ ಪೂರೈಸುವುದು ವರುಣನೇತ್ರದಲಿ ॥331॥

ರಕ್ಷೆಯನು ಕೈಗೊಂಡ ಕೋಣಪನು ಬಂದು ।
ಅಕ್ಷಯಾರ್ಥವನಿತ್ತ ಧನಪ ತಾನಂದು ॥332॥

ಯಮರಾಜ ದಂಡವಳಿಸಿದನು ಈಶಾನ ।
ಉಮೆಯ ಗುಹ ಗಣಪಾದಿಯೊಡನಯ್ದಲವನ ॥333॥

ಕಂಡು ಕಮಲಜಯ್ಯ ಕೋಪಿಸುವನೆಂದು ।
ಹೆಂಡತಿಯ ಕೂಡುತಯ್ತಂದ ತಾನಂದು ॥334॥

ಜಗಳವೇನಿಹುದೆಂದು ನಾರದನು ಬರಲು ।
ಜಗಕೆ ಪೊಸತಾಯ್ತು ಋಷಿ ವಿಪ್ರರಯ್ತರಲು ॥335॥

ಅತ್ರಿ ಭಗು ದೂರ್ವಾಸ ಕಣ್ವಕಾಶ್ಯಪರು ।
ಮಿತ್ರನಾಂಗೀರಸ ಜಾಬಾಲಿ ಮುನಿವರರು ॥336॥

ಸುರರುಚಾರಣ ಸಿದ್ಧ ಸಾಧ್ಯ ಕಿನ್ನರರು ॥
ಪರಮ ತುಂಬುರ ಗೀತ ಗಾನಕೋವಿದರು ॥337॥

ಆಟ ನರ್ತಕ ಹಾಸ್ಯಹರಿಸೇವೆಯವರು ।
ಬೋಟಬರ್ಬರ ಚೋಳ ಪಾಂಡ್ಯ ಕೇರಳರು ॥338॥

ಅಂಗವಂಗಾದಿ ಛಪ್ಪನ್ನದವರೆಲ್ಲ ।
ಸಂಗದಿಂದಯ್ತರಲು ಸಚಿವನಂದೆಲ್ಲ ॥339॥

ತರವರಿತು ಮನ್ನಿಸಿದ ವಾನರರನೆಲ್ಲ ।
ಶರಣಮುಖ್ಯಾದಿ ನಿಶಿಚರರನಂದೆಲ್ಲ ॥340॥

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಆ ಸಮಯಕಯ್ತರಲು ಜನಕಗೆ ।
ವಾಸುದೇವನು ನಮಿಸೆ ಹರುಷದಿ
ಕ್ಲೇಶನಾಶನವಾಹ ಕಥನವ ।
ದೂಷಣಾರಿಯು ತಿಳುಹಲು । ಮತ್ತವನೊಳು ॥341॥

ರಾಘವನಕೊಂಡಾಡೆಸೀತೆಯು ।
ಕೂಗುತವನಂಘ್ರಿಯೊಳಗೆರಗಲು ।
ನಾಗವೇಣಿಯ ಮನದ ಚಿಂತೆಯ ।
ನಾಗಲೇ ಪರಿಹರಿಸಿದ । ಮೇಷ್ಲೋಕದ ॥342॥

ಕಷ್ಟ ಸುಖಮೆಂಬೆರಡ ತುತಿಯೊಳ ।
ಗಿಟ್ಟಡೊಂದೆಂದೆಣಿಸಲತಿ ವ್ಯಥೆ ।
ಗಿಷ್ಟ ಒದಗದು ದೈವತಂತ್ರದ ।
ಚೇಷ್ಟೆಯೆಂದೊಡಬಡಿಸಿದ । ಸುತೆಗೊರೆಯುತ ॥343॥

ಧರೆಯ ಪಾಲಿಸು ರಾಮ ನಿನ್ನಯ ।
ಚರಿತೆ ಬಲ್ಲುದುಲೋಕವೆಲ್ಲವು ।
ಬರಿದೆ ತಡಮಾಡದಿರು ಸತಿಸಹ ।
ಹರಿಯ ವಿಷ್ಟರವೇರಲು । ಎಂದೆನ್ನಲು ॥344॥

**ರಾಗ ಅಹೇರಿ ಝಂಪೆತಾಳ**

ಛತ್ರ ಚಾಮರ ಕಲಶಗನ್ನಡಿಯ ಪಿಡಿದು |
ಮುತ್ತಯ್ದೆಯರು ನಿಲಲು ವಾದ್ಯದವರಂದು ||
ವಿಸ್ತಾರ ಬಹುಭೇರಿ ತಂಬಟಾದಿಗಳ |
ನತ್ಯ ತುಂಬಿತು ಕರ್ಣಪರಿಯಂತ ಜಗಳ ||345||

ವೇದ ಘನ ಜಟೆ ಶಾಸ್ತ್ರ ತರ್ಕ ಸಂವಾದ |
ಭೇದಿಸಿತು ರವವು ಪೌರಾಣ ಮುಂತಾದ ||
ಆದುದು ಸುಮೂಹುರ್ತ ಶುಭಕಾಲ ಬಂತೆಂದು |
ವಾದಿಸಿದರಾ ಘಟಿಯವಟ್ಟಲವರಂದು ||346||

ರಾಮಗೋಪನ ಮಜ್ಜನಾದಿಗಳ ಗೆಯ್ದು |
ಕಾಮಿನಿಯ ಸಿಂಗರಿಸಿ ಸತಿಯರಂದೊಲಿದು |
ಹೇಮದೊಡವೆಯನಿಟ್ಟು ಝರಿಯ ವಸನದಲಿ |
ಭೂಮಿಜೆಯಲಂಕರಿಸೆ ಮಿನುಗುವಂದದಲಿ ||347||

ಆದಿನಾರಾಯಣನು ಲಕ್ಷ್ಮಿಯೆಂದೆನುತ |
ವೇದಗರ್ಭನೆ ಪೊಗಳಲೆಲ್ಲ ಹರುಷಿಸುತ ||
ಭೂದಿವಿಜರಂದು ಮಂತ್ರಾಕ್ಷತೆಯ ಪಿಡಿದು |
ವೇದದಾಶೀರ್ವಾದ ಘೋಷಿಸಿದರಂದು ||348||

ಕಲಶಕುಂಭವ ಪಿಡಿದು ಗುರುಗಳಾಕ್ಷಣದಿ |
ಜಲಜನಾಭಗೆ ಪೀಠವೇರೆನಲು ಜವದಿ |
ಮೆಲುನಗೆಯ ಸುಂದರಾನನ ರಾಮಚಂದ್ರ |
ಒಲವ ತೋರುತ ಸೀತೆ ಸಹಿತಲಯ್ತಂದ ||349||

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ಘನಮತಿಯು ಶ್ರೀರಾಮಚಂದ್ರನು |
ಜನನಿಗೆರಗುತ ಕೈಕೆಗೊಂದಿಸಿ |
ವಿನಯದಿಂ ಭರತಾದ್ಯರೊಲವನು | ಮನವರಿಯುತ ||350||

ಬ್ರಹ್ಮನಭ ವಾದ್ಯನಿಮಿಷಾದ್ಯರ |
ಸಮ್ಮತಿಯ ಪಡೆದಂದು ವಿಪ್ರರ |
ಪೆರ್ಮೆಯಿಂದೇರಿದನು ಹರಿಪರ | ಬ್ರಹ್ಮನಂದು ||351||

ಹರಿಯ ವಿಷ್ಟರದಲ್ಲಿ ರಂಜಿಪ |
ಸಿರಿಯರಸಗಂದಜನ ಪುತ್ರನು |
ಸುರರು ಜಯ ಜಯವೆನಲು ತೀರ್ಥವ | ಎರೆಯಲಂದು ||352||

ಅನಿಮಿಷರು ಪೂಮಳೆಯ ಕರೆದರು ।
ಜನರ ಜಯ ರವವಾದ್ಯ ನಾದಗ ।
ಳನಕ ಮೂರ್ಲೋಕದೊಳು ಧಣಿ ಧಣಿ । ಯೆನುತ ನಲಿಯೆ ॥353॥

ಕಾಣಿಕೆಯನಿತ್ತಖಿಲ ಜನರುರೆ ।
ಯಾನರೇಂದ್ರನ ಬೇಡಿಕೊಂಡರು ।
ದಾನಧರ್ಮಾದಿಗಳು ನಡೆದುದ । ನೇನನೆಂಬೆ ॥354॥

ನಿಗಮ ಸ್ತುತಿ ಪೌರಾಣವಿರಹಿತ ।
ಜಗಕಗೋಚರನಿಂದು ತಾನೆನೆ ।
ಮಿಗೆ ವಿರಾಜಿಸೆ ತಂದರಾರತಿ । ನಗುಮುಖಿಯರು ॥355॥

**ರಾಗ ಧವಳಾರ ಏತಾಳ**

ಸಕಲಲೋಕೈಕನಾಯಕ ರಘುರಾಮ ।
ನಿಖಿಲ ಬ್ರಹ್ಮಾಂಡಮೂರುತಿಯೆ ನಿಸ್ಸೀಮ ॥
ಮಖಪಾಲ ಶ್ರುತಿಲೋಲ ಧೂರ್ತವಿಧ್ವಂಸ ।
ಶುಕನುತ ಸುರನುತ ರವಿದಂಶೋತ್ತ್ವಂಸ ।
ಅಕ್ಷತೆಯ ತಳಿದರು ॥ ಶೋಭಾನೆ  ॥356॥

ಸಂಭ್ರಮದೊಳು ವಾನರರ ಕೂಡಿ ನಿಧಿಗೆ ।
ಗಾಂಭೀರ್ಯದೊಳು ಸೇತುವೆಯ ಕಟ್ಟಿದವಗೆ
ಜಂಭಾದಸುರ ರಾವಣಾರಿಗೆ ಶರಣಗೆ ।
ಕುಂಭಿನಿಪಟ್ಟವ ರಚಿಸಿದಾತನಿಗೆ ।
ತಾಂಬೂಲವ ಕೊಡಿಸ್ಯಾರು ॥ ಶೋಭಾನೆ ॥357॥

ಪಥ್ವಿನಂದನೆಯೊಡನಾಯೋಧ್ಯಪುರಕೆ ।
ಮತ್ತಯ್ದಿ ಭರತನ ಭಾಷೆ ಪಾಲಿಸಿದಗೆ ॥
ಚಿತ್ತಜನಯ್ಯಗೆ ಸಿರಿ ಸೀತಾಮಣಿಗೆ ।
ಮುತ್ತಯ್ದೆಯರು ಕೂಡಿ ಸೀತಾರಾಮರಿಗೆ ।
ಮುತ್ತಿನಾರತಿಯ ಬೆಳಗಿರಿ ॥ ಶೋಭಾನೆ ॥358॥

**ರಾಗ ಕಲ್ಯಾಣಿ ಏಕತಾಳ**

ಇನಿತು ನಾರಿಯರೆಲ್ಲ ಮಂಗಳಾತ್ಮನನು ।
ಸನಕಾದಿಗಳು ಜಯವೆನಲಾರತಿಯನು ॥
ಮಿನುಗೆ ವಸಿಷ್ಠರ ಮತದಿಂದ ಭರತ ।
ನನೆ ಯುವರಾಜನೆಂದೊರೆದರು ಸತತ ॥359॥

ಸೇನೆಗಳೊಡೆತನ ಶತ್ರುಘ್ನಗಂದು ।
ಜಾಣ ಲಕ್ಷ್ಮಣಕೋಶದಧಿಕಾರಿಯೆಂದು ॥
ಏನೆಂಬೆ ಸಂತೋಷ ರಾಮಚಂದ್ರಮನು ।
ತಾನೆ ಭೋಜನಕಾಗಿ ಕರೆದನೆಲ್ಲರನು ॥360॥

ಎಂದು ನೇಮಿಸಿ ಹೊನ್ನದೆಲೆಗಳ ತಂದು ।
ತಂದು ಇಕ್ಕುತ ಬಡಿಸಿದರೆಲ್ಲ ಬಂದು ॥
ಮುಂದೆ ಈಶಾನದೇವತೆಗಳೆ ಬೇರೆ ।
ಬಂದದು ವಿಪ್ರರ ಪಙ್ಕ್ತಿಯಂದೋರೆ ॥361॥

ರಾಜಪಙ್ಕ್ತಿಯ ನಿಕ್ಕಿ ಮಣೆಗಳನಿಡಲು ।
ಬೇಜನ ಸುಗ್ರೀವ ಜಾಂಬವಾದಿಗಳು ॥
ಭೋಜನ ಲಂಕೇಯ ದಾನವರೆಂದು ।
ಗೌಜುಮಾಡದಿರೆಂದು ಪಙ್ಕ್ತಿ ಬೇರೆಂದು ।362॥

ಹೆಮ್ಮಕ್ಕಳಿಗೆ ಬೇರೆ ಕಪಿಗಳಲ್ಲಿಹವು ।
ಗುಮ್ಮನಂತಿಹ ದೊಡ್ಡ ಹಲ್ಲು ಚೇಷ್ಟೆಯವು ॥
ಎಮ್ಮ ಕೊಂಡೊಯ್ವುವೆಂದತ್ತತ್ತ ಮುಂದು ।
ಹೆಮ್ಮೆಯಾಡುತಿರಿರ್ದ ರಬಲೆಯರಂದು ॥363॥

ದೊಡ್ಡ ಧೋತ್ರವನುಟ್ಟು ಪಟ್ಟೆಯ ಸೆರಗ ।
ದುಡ್ಡನು ಕೊಡಿರೆಂದು ಕೂಗಲಂದಾಗ ॥
ಗಡ್ಡುಪಾಧ್ಯರು ಕರೆದೆಂದರು ಮುಂದು ।
ಹೆಡ್ಡರಾಗದಿರೆಂದು ಪೇಳ್ದರಿಂತೆಂದು ॥364॥

ಪಟ್ಟೆದಾನವು ನಮ್ಮ ಲೊಟ್ಟೆಜೋಯಿಸಗೆ ।
ಕೊಟ್ಟು ಬಿಡಲಿ ನಾರುಬಟ್ಟೆಯಿಂದವಗೆ ॥
ಚಟ್ಟೋಪಾಧ್ಯಾಯಗೆ ತಾಮ್ರ ಕಬ್ಬಿಣವು ।
ಗುಟ್ಟಿನೊಳುಂಬಳಿಯನು ಕೊಂಬೆವಾವು ॥365॥

ಬೆಳ್ಳಿ ಕುಂಭಗಳು ನಮ್ಮುಳ್ಳ ಗೋಪನಿಗೆ ।
ಒಳ್ಳೆ ಪುತ್ಥಳಿ ಪಚ್ಚೆ ನೀಲಕಂಠನಿಗೆ ॥
ಗುಲ್ಲು ಮಾಡದಿರೆನೆ ಪದುಮಲೋಚನನು ।
ಎಲ್ಲ ಸಂತೈಸುತಿತ್ತನು ಬೇಕಾದುದನು ॥366॥

**ದ್ವಿಪದಿ**

ಭೂರಿ ಭೋಜನಶಾಲೆಯೊಳಗೆ ಪಙ್ಕ್ತಿಗಳ ।
ಸಾರಿಯೊಳು ಬಡಿಸಿದರು ಹಲವು ಪಾಕಗಳ ॥367॥

ಪಾಯಸವು ಕೋಸಂಬ್ರಿ ಪಚ್ಚಡಿಯ ಸಾಲು ।
ಕಾಯನ್ನವೇ ಮೊದಲಿಗಿಕ್ಕಲೆಲೆಗಳಲಿ ॥368॥

ಉಪ್ಪು ಉಪ್ಪಿನಕಾಯಿ ಚಟ್ಣಿ ಪಲ್ಯಗಳು ।
ಹಪ್ಪಳವು ಸೇಮಿಗೆಯು ತುಪ್ಪದಡಿಗೆಗಳು ॥369॥

ಜೀರಸಾಲೆಯದನ್ನವದಕೆ ಘತವೆರೆದು ।
ಸಾರುಗಳ ಸುರಿಸಿದರು ಪಲ್ಯ ಬಹುವಿಧದು ॥370॥

ಹುಳಿಯು ಕೋಸೆಂಬ್ರಿ ತಂಬುಳಿಯು ಸಾಸ್ವೆಗಳು ।
ಕಲಸು ಮೇಲೋಗರವು ಹುಳಿರಸವನಿಡಲು ॥371॥

ಮೇಲೆ ಮೇಲ್ಬೈದಿದವು ಭಕ್ಷಗಳ ಹೆಡಿಗೆ ।
ಹೋಳಿಗೆ ಜಿಲೇಬಿ ಲಾಡುಗಳಿಕ್ಕಲೆಲೆಗೆ ॥372॥

ಫೇಣಿ ಕೇಸರಿಬೋನ ಚಿತ್ರಾನ್ನಗಳನು ।
ಮೇಣೆನಲು ಸುಕಿನುಂಡೆ ಚೀರೋಟಿಗಳನು ॥373॥

ಬಾಳೆಕಾಯನು ಹುರಿದ ಸಕ್ಕರೆಯ ಪಾಕ ।
ಸೋಲಿಸುವ ಬಾಳೆಹಣ್ಣಿನ ರಾಸಿಯನಕ ॥374॥

ಎನಗೆಂಟು ಮೂರವಗೆ ಎನುವ ಹಾರುವರು ।
ತನತನಗೆ ಗೌಜಿಯಲಿ ಎಳಕೊಂಡರವರು ॥375॥

ಪಙ್ಕ್ತಿಯೊಂದಾಯ್ತೂಟವವನಿವನ ಜಗಳ ।
ಪಂಥಗಳನಾಡು ತುಂಡರು ಮತ್ತೆ ಬಹಳ ॥376॥

ಇನಿತು ನಡೆಯಲ್ಕೊಂದು ಕಥನ ಪೊಸತಾಯ್ತು ।
ಇನಕುಲೇಶಗೆ ಲಕ್ಷ್ಮಣನು ಕಯ್ಯ ಮುಗಿದು ॥377॥

ಹನುಮಂತನಿಲ್ಲೆಂದು ತಿಳಿಸಲಂದಾಗ ।
ಜನಪಾಲ ಕರೆಸಿ ಬೆಸಗೊಂಡನತಿಬೇಗ ॥378॥

**ಭಾಮಿನಿ**

ಏನು ನಿನ್ನಂತರ್ಯವೆನೆ ಪವ ।
ಮಾನಿಯುಸಿರಿದ ಭಕ್ತ ತಾನೆಂ ।
ಬೀನಿಧಾನದ ಸಲುಗೆಯಿದ್ದರೆ ಕೊಡಲುಬೇಕೆನಗೆ ॥
ನೀನು ಭೋಜನ ಗೆಯ್ದಶೇಷವ ।

ಮಾಣದೀಯುವ ವರವನೆಂದೆನೆ ।
ಶ್ರೀನಿವಾಸನು ಕೊಟ್ಟೆನೆಂದನು ನಗುತ ಹನುಮನಿಗೆ ॥379॥

**ಕಂದ**

ಎನಲುಂ ತೋಷದಿ ಹನುಮಂ ।
ಜನಪಾಲಕನ ಪರಿಶೇಷ ಭೋಜನ ಪಾತ್ರೆಯ ॥
ವನಜಾಸನಪುರಿಗೆಯ್ದುತ ।
ಲನುವಿಂ ಭುಂಜಿಸುತಿರಲತಿ ಹರುಷದೊಳವನುಂ ॥380॥

**ವಾರ್ಧಕ**

ನಿಗಮಯೋಗಿವ್ರಜಕೆ ಮನಗೊಡದ ಪರಮಾತ್ಮ ।
ನಗಣಿತದ ಬ್ರಹ್ಮ ಸಾಯುಜ್ಯಮಂ ಹನುಮನಿಗೆ ।
ತೆಗೆದಿತ್ತು ಧಾರೆಯೆರೆಯಲ್ಕೆ ನಾರದ ಮನದಿಯಗಣಿತಪಹಾಸ್ಯ ನೆನೆದು ॥
ಜಗದೊಳುತ್ತಮನಾದನೀ ಕಪಿಯು ಬ್ರಹ್ಮಪದ ॥
ವಿಗಯೋಗ್ಯನೆಂದೆಂಬ ಬಗೆಯ ಕಾಣಿಪೆನೊಂದು ।
ಜಗಳ ಹೂಡುವೆ ಭಕ್ತತನವರಿಯಲಿಂತೆಂದು ಗುಹರಾಯಗೆಂದ ಬಂದು ॥381॥

**ರಾಗ ಸುರುಟಿ ಅಷ್ಟತಾಳ**

ಗುಹರಾಯ ಲಾಲಿಸಯ್ಯ । ಹನುಮಂತನ ।
ಕುಹಕವ ಪೇಳ್ವೆಜೀಯ ॥
ಅಹಿಶಯನನು ಧಾರೆಯೆರೆದ ನಿನ್ನಯ ಪಟ್ಟ ।
ದ್ರುಹಿಣನ ಪುರವನು ವಂಚಿಸಿ ಪಡೆದನು ॥ ॥382॥

ನಿನಗೆ ಮೊದಲು ಪಟ್ಟವ । ಕೊಡುತಲಿಂದು ।
ಅನಿಲಜಗಾ ರಾಘವ ॥
ಎನಗೇನು ಕರೆದಿತ್ತ ಕಂಡೇನು ಇದು ಸತ್ಯ ।
ನಿನಗೆ ಬಿಲವೆ ಮುಂದು ಎನಲೆಂದ ಗುಹನೊಂದು ॥ ॥383॥

ಸರ್ವಲೋಕೇಶನಾತ । ಇತ್ತಿರಲದ । ತಿರುಗಿ ತಾನೇ ಮರೆತ ।
ತರುಚರಗಿತ್ತನೆಂಬುರುಹಾಸ್ಯಕಿನ್ನೇನು ।
ಪರಿಹಾರ ದಯಮಾಡಿ ಪೇಳೆನೆ ನಗೆಮೂಡಿ ॥ ॥384॥

**ಭಾಮಿನಿ**

ಕ್ಷೋಣಿಯೊಳು ಜಗಳವನು ಬಿತ್ತಲು ।
ತಾನೆ ಕಾರಣನೆಂಬರೆಲ್ಲರು ।

ನೀನಿದನು ಗುಪಿತದಲಿ ನಿನ್ನಯ ಪಿತನಿಗಿಂದುಸಿರು ||
ಏನಗೆಯ್ಯುವದೆಂಬುದರಿವುದು |
ನೀನೆ ಪೇಳೆಂದೆನುತ ಕಳುಹಲು |
ಸ್ಥಾಣುವಿಂಗೆರಗುತ್ತಲೆಂದನು ಗುಹನು ದುಗುಡದಲಿ ||385||

**ರಾಗ ಭವಿ ಏಕತಾಳ**

ಲಾಲಿಸು ಜನಕನೆ ಎನ್ನರಿಕೆಗಳನ್ನು |
ಶ್ರೀಲಲಾಮನು ಇಂದು ಗೆಯ್ದಕಾರ್ಯವನು |
ಹಾಳುಮಾಡಿದ ಬ್ರಹ್ಮಪಟ್ಟವನೆನಗಿತ್ತು |
ಕೀಳು ಕಪಿಗೆ ಧಾರೆಯೆರೆದನೀ ಹೊತ್ತು || ಲಾಲಿಸು ||386||

ಏಸರ ನ್ಯಾಯವಾಯ್ತೆಂದು ಪೇಳಿದುದನ್ನು |
ಈಶನು ಮನದಲಿ ನೊಂದೆಂದನವನು ||
ಹೇಸಿಗೆಯನು ಗೆಯ್ದನೆಂದು ವಾಣೀಶನ |
ಬೇಸರದಲಿ ಕರದೆಂದನೀ ಹದನ || ಲಾಲಿಸು ||387||

ಭೂಮಿಯೊಳತಿ ಚೋದ್ಯ ಅಜ ಲಾಲಿಸೇನಯ್ಯ |
ನೀ ಮನದೊಳು ನೋಡು ಮತವಲ್ಲವಯ್ಯ ||
ರಾಮಚಂದ್ರನು ಇಂದು ನಮ್ಮನು ಕರೆಸುತ |
ಆ ಮರುತಜಗೆ ನಿನ್ನಯ ಪಟ್ಟವಿತ್ತ || ಲಾಲಿಸು ||388||

ನೋಡು ನಿನ್ನಯ್ಯನ ಅಪಹಾಸ್ಯತನಗಳು |
ಮೂಢರಾದೆವು ನಾವು ಮೂರು ಮೂರ್ತಿಗಳು ||
ಆಡಿ ತಪ್ಪಿದನವನನು ದೂರದೇ ಹೇಳು |
ಮಾಡಿಕೊಳರಿಕೆಯ ಬೇಗದೊಳೆನಲು || ಲಾಲಿಸು ||389||

**ಭಾಮಿನಿ**

ಬೇಡ ನಮ್ಮಯ ಮುನಿಸು ಹಿರಿದದು |
ಮಾಡಲಾಗದು ಕಡೆಗೆನೆಮ್ಮೊಳು |
ಮೂಡುವುದು ವೈರಾಗ್ಯ ಕೊನೆಗೇನಾಗುವುದೊ ತಿಳಿಯೆ ||
ಮಾಡು ಬಿನ್ನಪವೆನಲು ವಿಧಿ ಮಾ |
ತಾಡಿದನು ನೀ ತಿಳಿಯದಜ್ಞನೆ |
ಖೋಡಿ ಏತಕೆ ಬಿಡು ಮನದ ಸಂಶಯವ ನೀನಿನ್ನು ||390||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಮಾತನಾಲಿಸು ಭವನೆ ಶ್ರೀಹರಿ |
ತಾತ ಜಗಕವ ಭಕ್ತರೆಂದರೆ |
ಸೋತ | ಸತಿಸುತರಾರನೊಲ್ಲನು | ಮಾತು ಹೆಚ್ಚೇನಾತನು | ||391||

ಮನಕೆಣಿಸ ಪರಮಾತ್ಮನಿಂದಿನ |
ದಿನವೆ ನಮ್ಮಿಂದಾಗಿ ಕೆಡುವುದು |
ಕೊನೆಗೆಯವ ನೆನೆದುದನೆ ಮಾಡುವ |
ಮುನಿಸು ಕಾರಣವಪ್ಪುದು | ನಾವೆನುವುದು ||392||

ನಿರತನವನಿಂಗಚ್ಚುಮೆಚ್ಚಿನ |
ಶರಣ ಮರುತಜ ಲೋಕವನು ಶ್ರೀ |
ವರನು ಸಜಿಸುವನೀಕ್ಷಿಸುವ ನಮು |
ಗಿರದ ಭಾರಗಳೇತಕೆ | ಎನೆ ಮಾತಿಗೆ ||393||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸಾಕು ನಿನ್ನಯ ಬೊಮ್ಮತನವಿಂ |
ದೀ ಕುಟಿಲಕೌಷಧಿಯ ಬಲ್ಲೆನು |
ಜೋಕೆ ನಡೆ ನಿನ್ನಯ್ಯಗರುಹಿಸ ವಿ | ವೇಕತನವ ||394||

ಮುರಿವುದೀ ಶುಭಕಾರ್ಯವೆಂಬುದ |
ಕೊರೆದೆನೆಂದೆನಲಂದು ಬ್ರಹ್ಮನು |
ಮರುಗಿಪಾಯವ ನೆನೆದು ಮಗನನು | ಕರೆಯುತೆಂದ ||395||

ಮಗನೆ ಲಾಲಿಸು ರುದ್ರನಿರವನು |
ವಿಗಡತನ ವಿಪರೀತ ವಾಕ್ಯವ |
ರಘುಜನರಿಯನು ಮಾಡಲೇನ್ಹೈ | ಸುಗುಣ ನೀನು ||396||

ಇದಕುಪಾಯವ ಮಾಡು ತನ್ನನು |
ಬದುಕಿಸೆನೆ ಕೈಮುಗಿದು ಪೇಳಿದ |
ಮಧುವಿರೋಧಿಯ ಮುನಿಸು ತನಗಿಂ | ದೊದಗದಿಹುದೆ ||397||

ಮೊದಲೆ ನಾರದರೆಂಬರೆನ್ನನು |
ಹದನ ನೀನೇ ಬಲ್ಲೆನೆಂದನ |
ಲೊದಗಿದಾಪತ್ತುಗಳು ಕಳೆಯಲಿ | ಕದನವಿನ್ನು ||398||

ಮಾಡು ನೀನೆನಲೊಪ್ಪಿನಾರದ ।
ಮೂಡಿದೆಳೆನಗೆಯಿಂದ ನಡೆದನು ।
ಗಾಢದಿಂ ವೈಕುಂಠಪುರಕಿ । ನ್ನಾಡಲೇನು ॥399॥

ಮಂರಾಧರಭಕ್ತ ಕುಮುದಾ ।
ನಂದರೆಂದೆಂಬುವರ ನರಸುತ ।
ಬಂದು ಪೇಳಿದ ಯುಕ್ತಿಯನು ಬಹು । ಚಂದದಿಂದ ॥400॥

**ರಾಗ ಸುರುಟಿ ಏಕತಾಳ**

ದ್ವಾರಪಾಲರಯ್ಯ । ಏನು ವಿ । ಚಾರ ಕಾವಲಯ್ಯ ।
ದ್ವಾರದ ರಕ್ಷಾಭಾರಕರಾ ಹರಿ ।
ದೂರದೊಳಿಹನಿನ್ನಾರನು ಕಾದಿರಿ ॥ ದ್ವಾರ ॥401॥

ಯೋಗಿವಂದ್ಯನವನು । ಬಿಟ್ಟಿದ । ಪೋಗಿ ಸುಖದೊಳಿಹನು ॥
ಭೋಗವ ಬಯಸುತ ಭೂಮಿಲಿ ಜನಿಸಿದ ।
ನಾಗಶಯನ ಸಂಸಾರವ ಹೂಡಿದ ॥ ದ್ವಾರ ॥402॥

ಪಟ್ಟವ ಸೇರಿದನು । ಕೋಸಲ । ಸೃಷ್ಟಿಗೊಡೆಯನಿನ್ನು ॥
ಬಿಟ್ಟನು ನಿಮ್ಮನು ಜಪವೇಕವನನು ।
ಲೊಟ್ಟೆಯ ನುಡಿಯನು ನಂಬಿದಿರೇನು ॥ ದ್ವಾರ ॥403॥

**ಕಂದ**

ಸುರಮುನಿನುಡಿಯಂ ಕೇಳ್ದಾ ।
ಹರಿಭಕ್ತರು ಮನಮರುಗುತ ಮುನಿಯಡಿಗಳಿಗಂ ॥
ಎರಗುತಲೆಮ್ಮನು ಪೊರೆಯ್ಯೆ ।
ಹರಿಯೆಮ್ಮೆಡೆಗೈದುವ ಯುಕುತಿಯ ಮಾಡೆನಲುಂ ॥404॥

**ರಾಗ ಶಂಕರಾಭರಣ ರೂಪಕತಾಳ**

ದ್ವಾರಪಾಲರಿಂದು ನೀವು ಬಳಲಬೇಡಿರಿ ।
ಮಾರಜನಕನಿಲ್ಲಿ ಬರಲುಪಾಯ ನೀವು ಕೇಳಿರಿ ॥
ಮಾರುತಾತ್ಮಜಾತನಿಂಗೆ ಧಾರೆಯೆರೆದನು ।
ವಾರಿಜಾಸನನ ಪುರಿಯನೊಲಿದು ಕೊಟ್ಟನು ॥405॥

ಸತ್ಯಪುರದೊಳೀಗ ಹನುಮ ರಾಮನುಂಡಿಹ ।
ಭುಕ್ತಶೇಷ ತಂದು ಸುಖದಿ ಉಣುತಲಿರುತಿಹ ॥

ಸತ್ಯನುಡಿಯು ಬರುವುದಿನ್ನು ಸಂಶಯಂಗಳು |
ಯತ್ನ ಪೇಳ್ವೆ ಕ್ಷಣದಿ ನೀವು ಪೋಗುತವನೊಳು ||406||

ವಿಧಿಯು ಬರಲು ಪೇಳ್ದಯೋಧ್ಯೆಗೆಂದು ಪೇಳ್ದುದು |
ಮುದದಿ ಪುಸಿಯ ನುಡಿಯಲವನು ಬರುತ ನಿಜವಿದು ||
ಹದನನರಿತು ಹನುಮಪೋದಮೇಲೆ ಪಾತ್ರೆಯ |
ಕದಿಯುತೆತ್ತಿ ತಂದರಾಯ್ತುಪಾಯ ನಿಶ್ಚಯ ||407||

ಹರಿಯ ಭಕ್ತನಧಟನವನು ಮುನಿದರೆಮ್ಮನು |
ಪೊರೆವರಾರು ಹರಿಯ ಮುನಿಸನೆನಲು ನಕ್ಕನು ||
ತರುಚರಂಗೆ ಹೆದರಬೇಡಿ ಬಲ್ಲೆನೌಷಧಿ |
ಭರದಿಪೋಗಿ ರೆನಲು ಬಂದರವರು ನಿಮಿಷದಿ ||408||

**ವಾರ್ಧಕ**

ಬಂದಿರುವ ವೈಷ್ಣವರ ನೋಡಿ ಮರುತಜ ಕೇಳ |
ನಿಂದು ನೀವೆಲ್ಲಿಂದ ಬರವು ನೀವಾರೆನಲು |
ಮಂದರಾಧರಭಕ್ತರೆಂದರೆಲೆ ಮರುತಸುತ ಕಮಲಸಂಭವನೆಮ್ಮನು ||
ಇಂದಿರೇಶನ ದಾಸ ಹನುಮಂತನೆಡೆಗಯ್ದಿ |
ಸಂದೇಹಪೇಳಿರೆಂದನೆ ಬಂದೆ ಶೇಷಾನ್ನ |
ವಿಂದುಣದೆ ಬಂದೆನ್ನ ಮಾತಾಡಿ ಪೋಗಲೆಂದೆನಲಿಲ್ಲಿ ಬಂದೆವಾವು ||409||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸುಳ್ಳು ಮಾತುಗಳಲ್ಲ ನಾವ್ ಶ್ರೀ |
ವಲ್ಲಭನ ಸೇವಕರು ನಿಜವಿದು |
ಮಲ್ಲ ಸಾಹಸಿಯಲ್ಲವೇ ಜಗ | ದಲ್ಲಿ ನೀನು ||410||

ಶೇಷದನ್ನವನುಂಡು ಮುಗಿಸಲು |
ದೋಷವಿಹುದೆಂಬುದನು ತಿಳಿದೆವು |
ವಾಸುದೇವನ ತನುಜಮುಖದಿಂ | ದೀಸು ಪರಿಯ ||411||

**ಭಾಮಿನಿ**

ಮರುತಜನು ಇವನೆಂದ ಕುಹಕವ |
ನರಿಯದುಬ್ಬುತ ತನ್ನ ಸ್ಥಿತಿಯನು |
ಮರೆತು ಬಂದನು ಕಮಲಸಂಭವನೆಡೆಗೆ ವೇಗದಲಿ ||
ತೆರಳೆ ಹನುಮನು ಕುಮುದರಾಕ್ಷಣ |

ಹರಿಯ ಶೇಷದ ಪಾತ್ರ ಕದ್ದೋ ।
ಡಿರಲು ಬಂದೆರಗುತ್ತ ಕೇಳಿದ ವಿಧಿಯನಾ ಹನುಮ ॥412॥

**ರಾಗ ಕೇದಾರಗೌಳ ಅಷ್ಟತಾಳ**

ಸೃಷ್ಟಿಗೊಡೆಯ ತನ್ನ ಕರೆದುದೇತಕೆ  ದಯ ।
ವಿಟ್ಟು ನೀ ಪೇಳೆನಲು ॥
ತಟ್ಟನೆಂದನು ಹನುಮಂತಗೆ ವಿಧಿಯಾಗ ।
ಲೊಟ್ಟೆಯನರಿಯೆನೆಂದು ॥413॥

ಯಾರೆಂದುದೆನಲು ಆಶ್ಚರ್ಯದಿ ವಾತಜ ।
ಹಾರಿದನಜಪುರಿಗೆ ॥
ಆರೋಗಣೆಯ ಪಾತ್ರವಲ್ಲಿ ಕಾಣದೆ ಖತಿ ।
ಯೇರುತ ಕನಲುತೆಂದ ॥414॥

**ರಾಗ ಭೈರವಿ ಏಕತಾಳ**

ಹನುಮನು ಬೆರಗಾಗುತ್ತ । ತಾ ।
ಕಿನಿಸಿಲಿ ಪಲ್ಮೊರೆಯುತ್ತ ।
ಇನಿತೆಸಗಿದರಾರಿಂದು । ಬೇ ।
ಹಿನ ಚರರಾರೆಂದಂದು ॥415॥

ಕತ್ರಿಮವಾರಿಂದಾಯ್ತು । ತಿಳಿ ।
ಯುತ್ತಿರುತಿರೆ ಈ ಹೊತ್ತು ।
ಧೂರ್ತರ ಕಳುಹಿಸಲೆನಗೆ । ಕೈ ।
ವರ್ತಿಸುತಿತ್ತೆ ನಿಜಕೆ ॥416॥

ದ್ರುಹಿಣನೆ ತಿಳಿದೆನು ಇದಕೆ । ಈ ।
ಕುಹಕವು ತನ್ನಯ ಪದಕೆ ॥
ಅಹಿತವು ಎಂದೀ ಪರಿಯ । ಬಹು ।
ಗಹನದಿ ಮಾಡಿದ ಕೃತಿಯ ॥417॥

ಸುಡುವೆನು ಬ್ರಹ್ಮಾಂಡವನು । ಎಳೆ ।
ದಿಡುವೆನು ವಿಧಿಪುರವನ್ನು ।
ಕೆಡುಕುತನವ ನಿಲಿಸುವೆನು । ಎನು ।
ತೊಡಸುತ್ತಿದ ಬಾಲವನು ॥418॥

ಸಡಲಿತು  ವಿಶ್ವದ ಜಠರ । ಮೇ ।
ಣೊಡೆಯಿತು ಕುಲಗಿರಿ ಶಿಖರ ।
ಒಡನಜ ಬೆದರಿದ ಮನದಿ । ಸುರ ।
ರಡಿಗಡಿಗಳಲಲು ರವದಿ ॥419॥

ಚಾಡಿಯು ಹೊರಗಾಯ್ತೆಂದು । ನಲಿ ।
ದಾಡಿದ ನಾರದನಂದು ।
ನೋಡಿದನಜನೀ ಕೃತಿಯ । ಕೈ ।
ಜೋಡಿಸುತೆಂದನು ಹರಿಯ ॥420॥

**ರಾಗ ಸಾಂಗತ್ಯ ರೂಪಕತಾಳ**

ಲಾಲಿಸೆನ್ನಯ್ಯ ಕೋಪಿಸದಿರು ಮಾತನು ।
ಪಾಲಿಸಬೇಕು ತಪ್ಪುಗಳ ।
ಬಾಲನಾರದನಿಂದಲಪರಾಧವಾಯ್ತುಂದು ।
ಕೇಳು ನೀ ಮರುತಜಾತನಿಗೆ ॥421॥

ಇತ್ತ ಶೇಷಾನ್ನದಿ ಗುಹನ ಕೆರಳಿಸಿಯೊಂದು ।
ಯತ್ನ ಮಾಡಿದನು ನಾರದನು ।
ಸತ್ಯಲೋಕವ ನಿನಗಿತ್ತುದ ಹನುಮಗೆ ।
ಮತ್ತೆ ಕೊಟ್ಟನು ರಾಮನೆನಲು ॥422॥

ಸತ್ಯವೆಂದರಿತು ತಂದೆಗೆ ಪೇಳೆ ಶಿವ ಖತಿ ।
ವೆತ್ತೆನ್ನ ಕರೆದು ಪೇಳಿದನು ॥
ವರ್ತಮಾನವ ಪೇಳಲಂಜುತ ನಿನಗಾಗ ।
ಪುತ್ರನ ಕರೆದು ಸಂತೈಸೆ ॥423॥

ಪಾಯವೇನೆಂದರುಹಲು ನಾರದನು ಕೇಳ್ದು ।
ಹಾಯಿದ ಕ್ಷೀರಸಾಗರಕೆ ॥
ರಾಯ ನಿನ್ನಯ ಭಕ್ತ ಕುಮುದರ ಬೋಧಿಸಿ ।
ವಾಯುಜಾತನನಲ್ಲಿ ಕಳುಹಿ ॥424॥

ಸರಸಿಜಾಸನನಲ್ಲಿಗಯ್ದಿ ಮಾತಾಡುತ ।
ತಿರುಗಿ ನಿನ್ನಯ ಭೋಜನವನು ॥
ಚರಿಸೆಂಬುದುಸಿರಲಟ್ಟಿದ ಮೇಲೆ ಕುಮುದರು ।
ಅರಿಯದೆ ಕದ್ದೊಯ್ದರವರು ॥425॥

ಹೊರಲತ್ತ ಶೇಷಾನ್ನ ಹನುಮ ಬಂಿನ್ನನು ।
ಬರಲಟ್ಟಲೇಕೆಂದು ಕೇಳೆ ॥
ನಿರತಾವನರಿಯೆನೆಂದೊರೆಯಲಯ್ದುತ ಪಾತ್ರ ।
ವಿರದಿರೆ ಖತಿಯ ಕೊಂಡವನು ॥426॥

ವಿಧಿಯಪರಾಧಿಯೆಂದೆನುತ ಲಾಂಗೂಲವ ।
ಮದಮುಖತನದಿ ಸುತ್ತಿದನು ।
ಕದನ ನಾರದನಿಂದಲಾಯ್ತು ಕದ್ದವರು ನಿ ।
ನ್ನಧಿಭಕ್ತ ಕುಮುದರೆಂಬವರು ॥427॥

ನೀನಿತ್ತ ಜಗ ಉರುಳುವುದು ಕರೆದು ಪಾವ ।
ಮಾನಿಯ ನಿಲಿಸು ಶಾಂತದಲಿ ॥
ಕ್ಷೋಣಿಯು ತಲೆಕೆಳಗಾದರೇನುಂಟಲ್ಲಿ ।
ನೀನೆ ಯೋಚಿಪುದೆನೆ ಹರಿಯು  ॥428॥

ಕಾರ್ಯವು ಕೈಮೀರಿತೇನು ಸೋಜಿಗವೆಂದು ।
ವಾರಿಜನಾಭನಂಗದನ ॥
ಕಾರಣ ಗಡುತರ ಸತ್ಯಲೋಕಕೆ ನೀನು ।
ಹಾರಬೇಕೀಗಲೆಂದೆನುತ ॥429॥

**ರಾಗ ಘಂಟಾರವ ರೂಪಕತಾಳ**

ಪೋಗು ಬಾಲಕ । ಮರುತಜಾತನ ।
ಬೇಗದಿಂದಲಿ । ಕರೆಯೊ ಕಡುಗಲಿ ॥
ಆಗದಾಗದು । ಖತಿಯು ಬರಿದದು ।
ಸಾಗದಾತನ ।  ಪರಿಯು ನೂತನ ॥ ಪೋಗು ॥430॥

ತಡಮಾಡದೆ । ಪೋಗೊ ಬೇಗನೆ ।
ಬಿಡದೆಯವನನು । ಕರೆದು ತಾರೆನೆ ॥
ಒಡನೆ ಹಾರಿದ । ಸತ್ಯಲೋಕಕೆ ।
ಒಡೆಯನಾಜ್ಞೆಯ ।  ನೆಂದನವನಿಗೆ । ಪೋಗು ॥431॥

ಮಾರುತಾತ್ಮಜ । ಚೋದ್ಯವೇನಯ್ಯ ।
ಧಾರೆಯೆರೆದಿಹ । ಪುರವನೇನಯ್ಯ ॥
ಸೂರೆಗೊಂಬೆಯ । ಪೇಳು ನಿಶ್ಚಂು ।
ಧಾರಿಣಿಯೊಳು । ನಗುವರಲ್ಲಯ್ಯ । ಪೋಗು ॥432॥

ಕಾರಣೀಕನು । ಕೋಪ ಗೆಯ್ವನು ।
ಬಾರೊ ಎನ್ನಯ । ಕೂಡೆ ನೀನಯ್ಯ ॥
ಧೀರತನವೆನೆ । ಬಂದನೊಯ್ಯನೆ ।
ಮಾರುತಾತ್ಮಜ । ಸುರಪಜಾತ್ಮಜ ॥ ಪೋಗು ॥433॥

**ರಾಗ ಕೇದಾರಗೌಳ ಝಂಪೆತಾಳ**

ಹನುಮ ತಾನಯ್ತಂದಿರೆ । ಕಾಣುತ ।
ಜನರೆಲ್ಲ ಜವಗುಂದಿರೆ ॥
ಘನಸೊಬಗಿನಾಶ್ಚರ್ಯದಿ । ಶರಣೆಂದ ।
ನಿನಕುಲಗೆ ತಾನು ಜವದಿ ॥434॥

ವಂದಿಸಲು ಕಡು ಭಕ್ತನ । ಮೆಯ್ದಡವಿ ।
ಮಂದರಾಧರನಾತನ ॥
ಸಂದೇಹಗಳನೆಲ್ಲವ । ಮರೆಮಾಜ ।
ದಂದು ಕೇಳಿದ ಮಾಧವ ॥435॥

ಮನದ ಖತಿಯೇನು ಪೇಳು । ತೊಡರುಗಳ ।
ನಿನಗೆ ಗೆಯ್ದವರೆನ್ನೊಳು ॥
ಮನವೊಲಿದು ಪೇಳೆನ್ನಲು । ಜಯ ಜಯೆಂ ।
ದನು ಹನುಮ ರಾಘವನೊಳು ॥436॥

**ರಾಗ ಮಾರವಿ ಏಕತಾಳ**

ದೇವನೆ ನಿನ್ನ ಪ್ರಸಾದವ ಪಡೆದಾನು ।
ಭಾವದಿ ಕೊಂಡೊಯ್ದು ॥
ನಾವುಣ್ಣುವ ಸಮಯದಿ ಕಪಟಂಗಳ ।
ನೀ ವಿಧ ತೋರಿದುದು ॥437॥

ಸಮ್ಮತವೇ ಸುರಸಂತತಿ ರಕ್ಕಿನ ।
ಹೆಮ್ಮೆ ಪುರಾತನದಿ ॥
ತಮ್ಮಯ ಪದಚ್ಯುತ ಕಾರ್ಯಕೆ ಬೇಕಾ ।
ಧರ್ಮರು ತಾವ್ ನಿಜದಿ ॥438॥

ಸಗರ ಯಯಾತಿ ಪರಂಪರೆ ರಾಜರ ।
ಹೊಗಬಿಟ್ಟರೆ ಸ್ವರಕೆ ॥
ಮಿಗೆ ತನ್ನೊಳು ತೋರಿದರೀ ವಿಕ್ರಮ ।
ರಘುವರ ತವ ಮನಕೆ ॥439॥

ಒಪ್ಪಿದುದೇ ತವ ಪುತ್ರನ ಕುಹಕವ ।
ತಪ್ಪದೆ ನಿಲಿಸುವೆನು ॥
ಕಪ್ಪಿನ ಕಂಠನ ಮರೆಯೊಗಲವನನು ।
ಅಪ್ಪಳಿಸುವೆ ನಾನು ॥440॥

ಶುದ್ಧ ಪರಾತ್ಪರವಸ್ತುವ ಬೇಡುತ ।
ಸಿದ್ಧಿಸಿದೂಟವನು ॥
ಕದ್ದವರಸುವೆಳೆಯದೆ ಬಿಡೆ ನಾನೆಂ ।
ದೊದ್ದನು ಭೂಮಿಯನು ॥441॥

**ವಾರ್ಧಕ**

ಸುರರಂಜೆ ಸಭೆಯು ದಿಗಿಯಾಯ್ತುಜನು ಬೆದರಿದನು ।
ಮರುತಜನ ಸಿಂಹರವಕುರೆ ನಾರದಂ ನಡುಗೆ ।
ಮುರಹರಂ ಬೋಳಯ್ಸುತೆಂದನಾ ಹನುಮನೊಳು ನಾರದಂ ನಿನಗಿಕ್ಕಿದೆ ॥
ಪರುಟವಣೆ ಸುರರಜನ ತಪ್ಪಿಲ್ಲ ಷಣ್ಮುಖನ ।
ಕೆರಳಿಸಿದ ಕಥನ ನಿನಗಿದರಿಂದ ದೋಷಮೇ ।
ಜೊರೆದುದಿದು ನಿಶ್ಚಯವೆ ಇರುಸುಮ್ಮನೇಳುದಿನ ಪರಿಯಂತ ಗುಹಗೆಂದನು ॥442॥

**ಭಾಮಿನಿ**

ಆ ಸಮಯದಲಿ ಕ್ಷೀರಸಾಗರ ।
ವಾಸ ಗಯ್ದುತಲೆರಗುತಲಿ ಬಿ ।
ನ್ನಯಿಸಿಕೊಂಡರು ನಾರದನ ಬಲೆಗಿಂದು ಸಿಲುಕಿದೆವು ॥
ಕೇಶವನೆ ನಾವ್ ತಾಯನಗಲಿದ ।
ಕೂಸುಗಳ ತೆರವಾದೆ ನಿಮ್ಮಭಿ ।
ಲಾಷೆಯಿಂದಪರಾಧಕಾವುದು ಬಂದು ನಿಜಪುರಕೆ ॥443॥

**ರಾಗ ಮಧುಮಾಧವಿ ಏಕತಾಳ**

ಕಣ್ಣನೀರನು ಸುರಿಸುತ ಸೀತೆಯಡಿಗೆ ।
ಬಣ್ಣಗೆಟ್ಟೆರಗಿದರ್ ತಾಯೆ ಬಂದೆಮಗೆ ॥
ಮುನ್ನಿನಂದದಿ ಕಾಯಬೇಕೆನಲಂದು ।
ಚೆನ್ನಕೇಶವ ನಿರೂಪಿಸಿದನಿಂತೆಂದು ॥444॥

ನಿಜದ ಸೇವಕರಾಗಿ ಬೆದರಲೇಕಯ್ಯ ।
ಭಜಕರೆಲ್ಲಿರುವರಲ್ಲಿರುವೆ ನಾನಯ್ಯ ॥

ನಿಜವಿದು ಬರುವೆನಳಲಬೇಡಿರೆಂದು ।
ಅಜನಯ್ಯ ಮನ್ನಿಸಿ ಕಳುಹಿದನಂದು ॥445॥

ನಾರದ ನೀನೇತಕಿಂತು ಗೆಯ್ದಿಹುದು ।
ಯಾರು ದೋಷವ ಮಾಡಿದರು ನಿನಗಿಂದು ।
ಮಾರಾರಿ ಗುಹನಜಮುಖ್ಯ ದೇವರಿಗೆ ।
ಭೂರಿ ಸಂತಾಪವು ಕೂಡಿದ ಜನಕೆ ॥446॥

ತ್ರೈಮೂರ್ತಿಗಳು ನಾವು ಒಂದೇಯೆಂಬುವುದು ।
ನೀ ಮಾಡಿದುದರಿಂದ ಭೇದವಾಯ್ತಿಂದು
ಭೂಮಿಪಾಲರು ನೆರೆದವರೆಲ್ಲ ಬಳಲಿ ।
ಈ ಮರುಳೇನೆಂದು ನೋಳ್ಪರಿಂದಿಲ್ಲಿ ॥447॥

ಮನದಿಚ್ಛೆ ನಿನಗೇನು ಬೇಕು ಕೇಳೆನಲು ।
ಮುನಿಯಂದು ನಸುನಕ್ಕು ಪೇಳ್ದ ರಾಮನೊಳು ॥
ಎನಗೇನು ಬೇಕು ಸಂಸಾರವ ಮಾಡು ।
ಜನದಿಚ್ಛೆ ಸಲಿಸು ಕಲ್ಯಾಣ ಮುಂಕೊಂಡು ॥448॥

ದ್ರಾಕ್ಷೆಬೀಜವ ಬಿತ್ತಿ ಬೆಳೆದುದು ಹಣ್ಣು ।
ಪ್ರೇಕ್ಷಕರುತ್ತಮರಿಗೆ ಬಾಳೆಹಣ್ಣು ॥
ಸೀಕ್ಷ ಪಾತ್ರರಿಗಾಯ್ತು ಬಾಯ್ಗದು ಮಣ್ಣು ।
ಈಕ್ಷಿಪ ಜನರಿಗೆನ್ನಯ ಮೇಲೆ ಕಣ್ಣು ॥449॥

ಹರಿಭಕ್ತರನು ನೀನು ನೋಡಿದೆ ಗುಟ್ಟು ।
ಮರುತಜಗಾಯ್ತೆನ್ನ ಮೇಲತಿ ಸಿಟ್ಟು ।
ಪರಮಸಾಹಸಿ ತನ್ನ ವೀಣೆಯೊಂದಿವಸ ।
ತುರುಕಿಸಿದನು ಕಲ್ಲ ಗರ್ಭಕೆನ್ನ ರಸ ॥450॥

ಅದರ ಮೇಲಣಿಕೆಯನಿತ್ತನು ತನಗೆ ।
ವಿಧಿಯ ಪುರಕೆ ಬಾಲ ಸುತ್ತಿದನದಕೆ ।
ಪದುಮಜನಪರಾಧವಿಹುದೇನೆಂಬುದನು ।
ಮಧುವೈರಿ ನೀನೆ ನಿರ್ಣಯಿಸಬೇಕಿದನು ॥451॥

**ಭಾಮಿನಿ**

ಹರಿಯೆ ಸರ್ವೋತ್ತಮನೆ ಲಕ್ಷ್ಮೀ ।
ವರನೆ ಕರುಣಾಕರನೆ ಜಗದೋ ।
ದ್ಧರನೆ ಖಳಸಂಹರನೆ ಜಾನಕಿವರನೆ ಮುರಹರನೆ ॥

ನಿರತ ವೈಕುಂಠದೊಳುರಂಜಿಪ ।
ಸಿರಿಯರಸ ಶರಣಾಗು ಸಂತತ ।
ಕರುಣವಿರಲೆಂದಡರೆ ಹಂಸೆಯ ಮೇಲೆ ನಭದೊಡಲ ॥452॥

**ರಾಗ ಸೌರಾಷ್ಟ್ರ, ತ್ರಿವುಡೆತಾಳ**

ನಾರದನ ಲೀಲೆಗಳ ಕಂಡಸು ।
ರಾರಿ ಮೊದಲಾದವರು ನಕ್ಕರು ।
ಮಾರಮಣನಭವಂಗೆ ಪೇಳಿದ । ಕಾರಣವನು ॥453॥

ಜಗಳ ನಮಗಿಕ್ಕಿದನು ನಾರದ ।
ದುಗುಡವೇತಕೆ ಬಾ ಗುಹನೆ ನಿ ।
ಮ್ಮಗಣಿತದ ಗುಣಕಿಂದು ಮೆಚ್ಚಿದೆ । ಸುಗುಣರಿರದೆ ॥454॥

ಬಂದುದಿದು ನೀವೆಲ್ಲ ಹರುಷವು ।
ಸಂದ ಭಾಗ್ಯೋದಯವು ನಮ್ಮದು ।
ಎಂದು ಪ್ರೀತಿಯೊಳಭವ ಮುಖ್ಯರ । ನಂದು ಕಳುಹೆ ॥455॥

ಮಾರಣೆಯ ದಿನವೆಲ್ಲ ಭೂಮಿಪ ।
ಧಾರಿಣೀಸುರ ಮುಖ್ಯಮುನಿಗಳ ।
ಭೂರಿ ಮನ್ನಣೆಯಿಂದ ಕಳುಹಿದ । ಮಾರಪಿತನು ॥456॥

ಬಂಧುಬಾಂಧವರನ್ನು ಪ್ರೀತಿಯೊ ।
ಳಂದು ಕಳುಹಲು ನೆರೆದ ಜನರುರೆ ।
ಮಂದರಾಧರನನ್ನು ಪೊಗಳುತ । ಲಂದು ತೆರಳೆ ॥457॥

ದಾನವೋತ್ತಮನನ್ನು ಕರೆಯುತ ।
ತಾನೆ ಮರ್ಯಾದೆಯೊಳು ಮನ್ನಿಸಿ ।
ಸೇನೆ ಸಹ ಕಳುಹಿದನು ತರಣಿಯ । ಸೂನುಮುಖ್ಯ ॥458॥

ಸ್ವಾಮಿಕಾರ್ಯಧುರಂಧರರ ಬಹು ।
ಪ್ರೇಮದಿಂ ಹರಸುತಲಿ ಕಳುಹುತ ।
ಲಾ ಮರುತಸುತಗೆಂದ ದಯದಲಿ । ರಾಮಚಂದ್ರ ॥459॥

**ಭಾಮಿನಿ**

ಜಗದೊಳುತ್ತಮ ನಿನ್ನ ಸೇವಿಪ ।
ರುಗಳಘನಾಶನವು ಹೊದ್ದಲಿ ।
ಯಗಣಿತದ ಸಾಮ್ರಾಜ್ಯಪದವಿಯ ಪಡೆದೆನಿನ್ನೇನು ॥

ಮಿಗೆಯರಣ್ಯದಿ ಹಣ್ಣು ಹಂಪಲ ।
ಮಗನೆ ಭುಂಜಿಸಿ ಬಾಳು ನಿನಗೇನ್ ।
ದುಗುಡ ಬೇಡೆಂದೆನುತ ಬೋಳಯಿಸಿದನು ಶ್ರೀಹರಿಯು ॥460॥

**ರಾಗ ಕಲ್ಯಾಣಿ ಝುಂಪೆತಾಳ**

ಆ ಸಮಯದಲಿ ಸೀತೆ ಕಣ್ಣೀರ ತಾ ಸುರಿಯೆ ।
ಆ ಸಮೀರನ ಸುತನ ಪೊಗಳಿ ಮನದಣಿಯೆ ॥
ಏಸು ಜನ್ಮಾಂತರಕು ಮರೆಯತಕ್ಕುದೆ ನಿನ್ನ ।
ಈಸು ಗುಣವೆಂದು ಹರಸುತ ಕಳುಹಲವನ ॥461॥

ಮಾಗಧಿಯು ಮರುಗಿ ಬಾಯ್ದಣಿಯೆ ಕೊಂಡಾಡಿದನು ।
ಆಗಲಕ್ಷಯ ವಯೋವಂತನಾಗಿನ್ನು ॥
ರಾಘವನ ಕಡು ಭಕ್ತನಾಗು ಹೋಗೆನಲಂದು ।
ಯೋಗಿವಂದ್ಯನು ಬೇಡಿ ಬಳಿಕ ತಾನಂದು ॥462॥

ಸೌಮಿತ್ರನಿಗೆ ನಮಿಸಿ ಬಲಬಂದು ಪುರಕೆರಗಿ ।
ಕಾಮಿತವ ಧಿಕ್ಕರಿಸಿ ಕಣ್ಣೀರ ಸುರಿಸಿ ।
ಭೂಮಿಯೊಳು ಪೊರಳುತಯ್ದರಣ್ಯ ಗುಹೆಯೆಡೆಯು ।
ರಾಮ ರಾಮೆಂದು ಭಜಿಸುತ್ತಿರ್ದ ಹರಿಯ ॥463॥

ಪಾಲಿಸಲು ಶ್ರೀರಾಮನಿಳೆಯ ದಶಸಾವಿರದ ।
ಕಾಲ ಬಲು ಸೊಗಸಿನಿಂ ತಮ್ಮಂದಿರಿಂದ ॥
ಕೀಳುಮೇಲೆನಿಸದತಿ ಧರ್ಮದಿಂ ರಾಜ್ಯವನು ।
ಆಳಿದನು ತವ ಜನನಿಯೊಡಗೂಡುತವನು ॥464॥

ಮೂಢ ರಜಕನ ಮಾತಿಗವನಿಜೆಯ ಬಿಟ್ಟಿರಲು ।
ಕಾಡುಪಾಲಾಗಿರ್ದ ನಿಮ್ಮ ಜನನಿಯಳು ॥
ಕೂಡೆ ಕರೆತಂದಿಲ್ಲಿ ಪರ್ಯಂತ ಕಥನವಿದು ।
ಗೂಢವದ ಪೇಳ್ದೆನಾ ಮೇಲೆ ತಿಳಿದಿಹುದು ॥465॥

ರಾಮರಾಜ್ಯದ ಸೊಬಗನೇನೆಂಬೆನೆಳೆಮರಣ ।
ಕಾಮುಕ ದುರಾಚಾರ ದೂರು ದುರ್ಗ್ರಹಣ ॥
ಭೂಮಿಯೊಳು ಕತಕತ್ಯ ಪ್ರತ್ಯಕ್ಷ ವೈಕುಂಠ ।
ಸೀಮೆಯೆನೆ ರಾಮ ಬಲು ರಂಜಿಸಿದನೆನಲು ॥466॥

ಕ್ಷಿತಿಸುರೋತ್ತಮ ರಾಮನಾಲೆಟ್ಟ ಎನುತಿಹರು ।
ಕೃತಿ ಇದನು ಪೇಳ್ದೆ ಮನ್ನಿಪುದು ಬಲ್ಲವರು ॥

ಕ್ಷಿತಿಯೊಳುತ್ತಮರಿದನು ಪಾಡಿ ಪೊಗಳಿದರವರು ।
ಸುತಸಂಪದಾದ್ಯಷ್ಟಭಾಗ್ಯ ಹೊಂದುವರು ॥467॥

ಧರೆಯೊಳಾದಿಯ ಕಾವ್ಯ ಕವಿಯು ವಾಲ್ಮೀಕಿಯಡಿ ।
ಗೆರಗಿದನು ಪಟ್ಟಾಭಿರಾಮನನು ಪಾಡಿ ।
ವರದ ಸೀತಾರಾಮ ರಾಮೆಂದೆದೋಷಗಳು ।
ಪರಿಹರಿಸಿ ಪಾಲಿಸೈ ಹರಿಯೆ ಕರುಣಾಳು ॥468॥

**ಮಂಗಳ**

**ರಾಗ ಕಾಂಭೋಜಿ ಝಂಪೆತಾಳ**

ದಶರಥನ ಸುತ ರಾಮಚಂದ್ರನಿಗೆ ಇಂದ್ರನಿಗೆ ।
ಕುಶಿಕಸುತಮಖ ಪೊರೆದ ಹರಿಗೆ ದೇವರಿಗೆ ॥
ವಸುಧಜೆಯ ವರಿಸಿ ಧನು ಮುರಿದವಗೆ ಮೆರೆದವಗೆ ।
ಅಸಮ ಭಾರ್ಗವಪರಶು ಎಳೆದವಗೆ ಬಲಗೆ ॥ ಮಂಗಳಂ ॥469॥

ಕಾನನವ ಪೊಕ್ಕಯುತ ರಾಮನಿಗೆ ಭೀಮನಿಗೆ ।
ಮಾನಿನಿಯ ನೆವದಿ ಖಳರರಿದಗೆ ಮೆರೆದಗೆ ॥
ವಾನರನ ಕೊಂದುದಧಿ ಬಲಿದವಗೆ ನಲಿದವಗೆ ।
ಕ್ಷೋಣಿ ಲಂಕೆಯ ಶರಣಗಿತ್ತವಗೆ ಹರಿಗೆ ॥ ಮಂಗಳಂ ॥470॥

ಮಂಗಳಂ ಸೀತೆಯನು ನೋಡಿದಗೆ ಕೂಡಿದಗೆ ।
ಮಂಗಳ ಸಾಕೇತವಾಸಗೆ ಈಶಗೆ ॥
ಮಂಗಳಂ ಪಟ್ಟಾಭಿರಾಮನಿಗೆ ರಾಮನಿಗೆ ।
ಮಂಗಳಂ ಜಯಜಯತು ಸಿರಿಗೆ ಶ್ರೀವರಗೆ ॥ ಮಂಗಳಂ ॥471॥

**ಶ್ರೀಕೃಷ್ಣಾರ್ಪಣಮಸ್ತು**

# ಯಕ್ಷಗಾನ ಅಶ್ವಮೇಧಯಾಗ

## ಪಾತ್ರಗಳು

ಶ್ರೀರಾಮ
ದಮನ
ಅಗಸ್ತ್ಯ
ಸುಬಾಹುಕ

ಲಕ್ಷ್ಮಣ

ಸೇವಕರು

ಶತ್ರುಘ್ನ

ಚಿತ್ರಾಂಗ

ಪುಷ್ಕಳ

ಸುಕೇತು

ಪುಷ್ಕಳ ಪತ್ನಿ

ಲಕ್ಷ್ಮೀನಿಧಿ

ಹನುಮಂತ

ವಿದ್ಯುನ್ಮಾಲಿ

ಸುಮಂತ

ವೀರಮಣಿ

ರುಕ್ಮಾಂಗದ

ಈಶ್ವರ

ವೀರಭದ್ರ

ದೇವೇಂದ್ರ

ಗಣಗಳು

ಬೃಹಸ್ಪತಿ

**ಶಾರ್ದೂಲವಿಕ್ರೀಡಿತ**

ರಾಮಂದೈತ್ಯಕುಲಾಂತಕಂ ರಘುವರಂ । ರಾಜೀವನೇತ್ರಂ ಹರಿಂ।
ಶ್ಯಾಮಾಂಗಂ ಶಶಿಶೇಖರಪ್ರಿಯ ಸಖಂ । ದಾಮೋದರಂಧಾರ್ಮಿಕಂ ।
ಸೋಮಾರ್ಕಂ ಶತಕೋಟಿ ತೇಜಮನಘಂ । ಪೀತಾಂಬರಾಲಂಕತಂ ।
ಕ್ಷೇಮಾರೋಗ್ಯಪ್ರದಾಯಕಂ ಗುಣನಿಧಿಂ । ಶ್ರೀ ರಾಮಚಂದ್ರಂಭಜೆ । ॥1॥

**ರಾಗ ನಾದನಾಮಕ್ರಿಯೆ ಝಂಪೆತಾಳ**

ರಕ್ಷಮಾಂ ಗಣನಾಥಾ । ಸುಕ್ಷೇಮಸುಖದಾತ ।
ಪಕ್ಷಿವಾಹನಪ್ರೀತಾ । ಯೀಕ್ಷಿಸನವರತಾ । ಜಯತು ಜಯತೂ। ॥2॥

ಜಯತುಜಯಗಜವದನ । ಜಯಸುಹತ್ಸದನ ।
ಜಯತು ಪಾರ್ವತಿಕರುಣ । ಜಯತುಸತುಕರುಣಾ । ಜಯತುಜಯತೂ ॥3॥

ಲೋಕೇಶ್ವರ ನಿವಾಸ । ನಾಕಪಾಲರಪೋಷ ।
ಏಕದಂತಗಣೇಶ । ಶೋಕಭಯನಾಶ । ಜಯತುಜಯತೂ । ॥4॥

**ಭಾಮಿನಿ**

ಭಾರತಿಗೆತಲೆವಾಗಿ ನಿರ್ಜರ ।
ವಾರಕಭಿವಂದಿಸುತಗುರು ಚರ ।
ಣಾರವಿಂದಕೆ ಮಣಿದು ಸತ್ಕವಿ ಗಳನು ಪ್ರಾರ್ಥಿಸುತ ।
ನಾರದಾದಿಮುನೀಂದ್ರರುಗಳನು ।
ಸಾರವಾಗಿಯೆನುತಿಸಿಪೇಳುವೆ ।
ಮಾರಹರತ್ರೈಲೋಕ್ಯ ನಾಥನ ಕಪೆಯೊಳೀಕಥೆಯ। ॥5॥

**ದ್ವಿಪದಿ**

ಶ್ರೀ ಮಹಾಪದ್ಮ ಪೌರಾಣವನು ಪಠಿಸಿ
ರಾಮಾಶ್ವ ಮೇಧವನು ಪೇಳ್ವೆನನುಸರಿಸಿ ॥6॥

ವಾತ್ಸಾಯ ಮುಖ್ಯಮುನಿಗೊಲಿದು ಮಹಶೇಷಾ।
ಉತ್ಸಾಹದಿಂದ ಪೇಳಿದನಿದು ವಿಶೇಷಾ ॥7॥

ಶ್ರೀ ರಾಘವೇಂದ್ರ ಭಾರತಿಗಳವರಡಿಯಾ।
ಓರಂತೆಭಜಿಸಿ ವಿರಚಿಸುವೆ ನೀಕೃತಿಯಾ ॥8॥

ಕೇಳಿ ತಪ್ಪಿರೆ ತಿದ್ದಿ ಮೆರಸಿಬಲ್ಲವರೂ।
ಶೀಲಗುಣ ಸಂಪನ್ನ ಸುಜನರಾದವರೂ ॥9॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಒಂದುದಿನಶೇಷನಪದಕೆಮಣಿದೆಂದತಾ ವಾತ್ಸ್ಯಾಯಮುನಿ ರಘು ।
ನಂದನನ ಚರಿತವನು ವಿಸ್ತರ । ದಿಂದಪೇಳ್ನೈ। ॥10॥

ಪರಮಪಾವನ ಮೂರ್ತಿಗೆತ್ತಣ । ಹರಿಗೆಪಾತಕವೆಂತು ಘಟಿಸಿತು ।
ತುರಗಮೇಧವನ್ಯಾಕೆ ಮಾಡಿದ । ನರರತೆರದೀ। ॥11॥

ಸುಮುದನೊಳುಕಾಣಿಕೆಯಗೊಳುತಲಿ । ವಿಮಲನಪ ಸಹಿತಾಗ ಶತ್ರುಹ ।
ಧಮನ ವಿದ್ಯುನ್ಮಾಲಿಮುಖ್ಯರ । ಕ್ರಮದಿಗೆಲಿದಾ। ॥12॥

ಅಂಗಜನಪಿತನಶ್ವವವನು ರು । ಕ್ಮಾಂಗದನು ಬಂಧಿಸಿದನ್ಯಾತಕೆ ।
ಸಂಗರದೊಳವನೆಂತು ಪುಷ್ಕಳ । ನಿಂಗೆಸೋತಾ। ॥13॥

ವೀರಮಣಿಯನು ಗೆಲಿದು ಪುಷ್ಕಳ । ವೀರಭದ್ರನೊಳ್ಯಾಕೆ ಸೋತನು ।
ಮಾರಹರ ತಾನ್ಯಾತಕಾಪುರ । ಸಾರಿನಿಂದ ॥14॥

ಕಾಮಿನಿಯುಸಹಿತವನರಥ ಶ್ರೀ। ರಾಮಚಂದ್ರನ ಸ್ಮರಣೆಯಿಂದಲಿ ।
ಸೋಮಶೇಖರನಿರುತಿರಲು ಸಂ । ಗ್ರಾಮಕೈದಾ। ॥15॥

ಘನಪರಾಕ್ರಮಿಶತ್ರುಹನೊಳಾ । ಮನುಮಥಾರಿಯುಧುರವನೆಸಗುತ ।
ಅನಿಲಸುತನೊಳು ಸೋತನ್ಯಾತಕೆ । ನಮಗೆಪೇಳ್ಯೈ ॥16॥

ತಂದು ಸಂಜೀವನವ ಸೇನಾ । ವಂದವನು ಮಾರುತಿಯು ಜೀವಿಸಿ ।
ದಂದವನುಪೇಳೆಮಗೆಕಥೆಯನು । ಸಾಂಗದಿಂದಾ। ॥17॥

**ವಾರ್ಧಕ**

ಲಾಲಿಸು ಮುನೀಂದ್ರ ಪೂರ್ವದಲಿತ್ರೇತಾಯುಗದಿ ।
ತಾಳಲಾರದೆ ದೈತ್ಯರುಪಟಳವ ಭೂದೇವಿ ।
ಶ್ರೀಲತಾಂಗಿಯರಮಣಗರುಹಲ್ಕೆರಾಮಾವತಾರದಿಂಜನಿಸಿಬಳಿಕ ॥
ಬಾಲ್ಯದೊಳು ತಾಟಕಿಯ ಮುರಿದು ದೈತ್ಯರ ಸವರಿ ।
ಪಾಲಿಸಿದ ಕೌಶಿಕನ ಯಾಗಮಂಮಿಗೆ ಜನಕ ।
ನಾಲಯಕ್ಕೈದಿಸೀತೆಯನೊಲಿಸಿ ಮಾರ್ಗದೊಳು ಭಾರ್ಗವನ ಜಯಿಸಿ ಮುಂದೆ । ॥18॥

ಪಿತನಾಜ್ಞೆಯಂ ತಾಳ್ದು ಸೀತೆಲಕ್ಷ್ಮಣ ಸಹಿತ
ಪಥವಿಡಿದು ವನಕೈದಿ ಸತಿಯನಗಲುತ ಮತ್ತೆ
ಮಥಿಸಿ ವಾಲಿಯಗೆಲಿದು ಸುಗ್ರೀವನೊಡಗೊಂಡು ವಾರಿಧಿಗೆ ಸೇತುಬಲಿದು ।
ಜತನದಿಂದಾ ಲಂಕೆಯಂ ಸೇರ್ದು ವರಬಲಾ
ನ್ವಿತನಾದ ದುಷ್ಟಖಳ ರಾವಣನ ಸಂಹರಿಸಿ
ಸತಿಯೊಡನೆ ಸಾಕೇತಕೈತಂದು ರಾಜ್ಯವನ್ನಾಳಿದಂ ಶ್ರೀರಾಮನು ॥19॥

**ಭಾಮಿನಿ**

ಹತ್ತು ಸಾವಿರವರುಷತನಕ  ಮ ।
ಹೋತ್ಸವದಿರಾಜ್ಯವನುಪಾಲಿಸೆ ।
ಪಥ್ವಿಜಾತೆಯುಗರ್ಭವಾಂತಿರೆ ತಿಂಗಳೈದಾಗೇ ।
ಧೂರ್ತರಜಕನದುರ್ನುಡಿಯ ಕೇ
ಳುತ್ತಡವಿಯೊಳು । ಸೀತೆಪಡೆದಳು
ಸತ್ಕುಮಾರಕರೀರುವರವಾಲ್ಮೀಕಿಯಾಶ್ರಮದೀ ॥20॥

**ರಾಗ ಕಾಂಭೋಜಿ ಝಂಪೆತಾಳ**

ಇತ್ತಲನುಜರುಸಹಿತ । ಸಾಕೇತಪುರವನಾ । ಳುತ್ತಿರಲು ಶ್ರೀರಾಮನಂದೂ ।
ಪುತ್ರಪೌತ್ರಕಳತ್ರ ಮಿತ್ರ ಬಂಧುಗಳಿಂ ಸ । ಮಸ್ತ ಪ್ರಜೆಪರಿವಾರವಿರಲೂ। ॥21॥

ಎಲ್ಲಿ ನೋಡಿದರು ತೋರಣಕುರುಜಮೇರುವೆಗಳ | ಳಲ್ಲಲ್ಲಿಧ್ವಜಪತಾಕಗಳೂ|
ಚಲ್ವನವರತ್ನದಿಂ ವಿರಚಿಸಿದಸೋಪಾನ | ಗಲ್ಲಿಗಲ್ಲಿಯೊಳುರಂಜಿಸಿತೂ ||22||

ಹಿರಿಯವರ ಮುಂದೆ ಮರ | ಣಗಳಿಲ್ಲ ಕಿರಿಯಂಗೆ | ತರುಣಿಯರೊಳಿಲ್ಲ ವಿಧವೆಯರೂ |
ದುರಿತದುಃಖಾದಿಸಂಕಷ್ಟಗಳು ದಾರಿದ್ರ್ಯ | ಬರಲಿಲ್ಲರಾಮರಾಜ್ಯದೊಳೂ| ||23||

ಆನೆಕುದುರೆರಥಾದಿ | ಸೇನಾಸಮೂಹದಿಂ | ದೇನೆಂ ಬೆನಾಸಭಾಲಯವೂ ||
ಗಾನ ಗೀತಮದಂಗ | ನಾನಾ ಸುವಾದ್ಯದಿಂ | ದಾನಂದವಾಗಿ ಶೋಭಿಸಿತೂ| ||24||

ಪರಿಪರಿಯ ರತ್ನಖಚಿ | ತದ ಸಿಂಹವಿಷ್ಟರದಿ | ಹರಿಯು ಒಡ್ಡೋಲಗದೊಳಿರಲೂ |
ಪರಮಖುಷಿಕುಂಭಸಂ | ಭವನುಬರುತಿರೆ ಕಂಡು | ಭರದಿಂದಲೆದ್ದು ರಾಘವನೂ| ||25||

**ರಾಗ ಸಾಂಗತ್ಯ ರೂಪಕತಾಳ**

ಬಂದಾಮುನಿಯನಿದಿ | ರ್ಗೊಂಡುಮಂನಿಸಿ ಕರ | ತಂದೂಪೀಠವನೇರಿಸುತಲಿ|
ಚಂದದಿಕುಳ್ಳಿರಿಸುತಲರ್ಘ್ಯ ಪಾದ್ಯಾಗ | ಳಿಂದಪೂಜಿಸುತಲಿಂತೆಂದಾ| ||26||

ತಾಪಸೋತ್ತಮ ತವದರ್ಶನದಿಂ ಜನ್ಮ | ಸಾಫಲ್ಯವಾಯಿತಿಂದಿನಲೀ |
ಪಾಪಗಳೆಲ್ಲಾ ನಿರ್ಲೇಪವಾಯ್ತೆನುತಲಿ | ಶ್ರೀಪತಿ ಪೊಗಳಲಿಂತೆಂದಾ ||27||

ಯಾತಕಿಷ್ಟುಪಚರಿಸುವೆ ತವನಾಮ ವಿ | ಖ್ಯಾತವಾಗಿಹುದೂ ಮೂಜಗದೀ |
ಪಾತಕವನುಪರಿಹರಿಸುವದಿದುರಾಜ | ನೀತಿಗೋಸುಗ ಪೇಳ್ವುದ್ಯೆಸೇ| ||28||

ಧರೆಯೊಳು ದಶಕಂಠ ಕುಂಭಕರ್ಣಾದ್ಯರು | ವುರು ಪರಾಕ್ರಮಿಗಳು ಜನಿಸೀ |
ಸುರಪಾಲಾದ್ಯಮರರ ವರತಪಸಿಗಳನು | ದಿನಬಾದಿಸುವ ದೈತ್ಯರನ್ನೂ| ||29||

ಕೊಂದೆನೀಸಮರದಿ ಸಂದೇಹವಿಲ್ಲವಾ | ನಂದಾವಾಯ್ತೀಗ ಸರ್ವರಿಗೇ ||
ಬಂದಾರಕಾದಿ ಮುನೀಂದ್ರರೆಲ್ಲರು ಸೌಖ್ಯ | ದಿಂದಿಹರೈನಿನ್ನದಯದೀ| ||30||

**ಭಾಮಿನಿ**

ಎಂದನುಡಿಯನು ಕೇಳುತಾ ರಘು |
ನಂದನನುಬೆಸಗೊಂಡನಾದಶ |
ಕಂಧರಾದಿಗಳಾವವಂಶಜರೆಂತು ಜನಿಸಿದರೂ |
ಒಂದುಳಿಯದೆನಗರುಹಬೇಕೆನ |
ಲಿಂದುಮನದಲಿ ಸ್ಮರಿಸಿ ಶ್ರೀರಘು |
ನಂದನಗೆ ದಾನವರ ಮೂಲಸ್ಥಿತಿಯನುಸುರಿದನೂ| ||31||

**ವಾರ್ಧಕ**

ಲಾಲಿಸೈ ರಘುವರನೆ ದೈತ್ಯರುದುಭವಿಸಿದುದ ।
ನಾಳಿಕೋದ್ಭವನಿಂದ ಪೌಲಸ್ತ್ಯಮುನಿಜನಿಸಿ ।
ಶೀಲಗುಣಯುತನಾತ ಗುದಿಸಿದಂವಿಶ್ರವಸು । ವಿಂಗೀರ್ವರಮಣಿಯರೊಳು ॥
ಲೋಲಲೋಚನೆ ಹಿರಿಯನಾರಿಮಂದಾಕಿನಿಯು ।
ಮೇಲೆರಡನೆಯ ಯುವತಿ ಕೈಕಸೆಯು ಸಹಿತಸ ।
ಲ್ಲೀಲೆಯಿಂದೀರ್ದ ಅನುಭವಿಸುತಿರಲುದಿಸಿದಂ ಮಂದಾಕಿನಿಗೆಧನಪನೂ। ॥32॥

ಎರಡನೆಯ ಯುವತಿ ಕೈಕಸೆಯಳಿಗೆ ಮತ್ತುದಿಸಿ
ಖಳರು ದಶಕಂಠ ಕುಂಭ ಶ್ರವಣ ।
ವರ ವಿಭೀಷಣ ಶೂರ್ಪನಖಿಯೆಂಬ ರಕ್ಕಸಿಯು ಜನಿಸಿದರದೇಂಪೇಳ್ವೆನೂ ।
ಹಿರಿಯಮಗ ದಶಕಂಠ ಕುಂಭಕರ್ಣನುಸಹಿತ ।
ಪರಮೇಷ್ಟಿಯಂ ಭಜಿಸಿ ವರವ ಪಡೆದುದರಿಂದ ।
ಧುರವಿಜಯರೆನಿಸಿ ತ್ರೈಲೋಕ್ಯಮಂಬಾಧಿಸುತ ಬಳಿಕನಿನ್ನಿಂದಳಿದರು ॥33॥

**ಭಾಮಿನಿ**

ಮುನಿವರನವಾಕ್ಯವನುಕೇಳುತ ।
ಘನತರದಸಿಡಿಲೆರಗಿದಂದದಿ ।
ಜನಪಮೂರ್ಛಿತ ನಾಗಿಮಲಗಿದ । ಮೋಡದಿನನಂತೇ ॥
ಅನಿತವೀ ಸಭೆಕಳವಳಿಸುತಿರು । ವನಿತರಲಿ ಮಷಿಮೈದಡವಿ ।
ತ್ತಿನಕುಲೇಶನು ದುಃಖಿಸುತಪೇಳಿದನುಮುನಿಯೊಡನೇ ॥34॥

**ರಾಗ ಕಾಂಭೋಜಿ ಏಕತಾಳ**

ಏನಮಾಡಲಿಮುನಿಯೇ । ಪಾತಕವಿದು । ಮಾಣಿಸು ಗುಣಮಣಿಯೇ। ॥ ಪಲ್ಲವಿ ॥

ಕ್ಷತ್ರವಂಶಜರು ನಾವೂ । ದ್ವಿಜರಪೂಜಿ । ಸುತ್ತ ನಿರಂತರವೂ ।
ಭಕ್ತಿಭಾವದೊಳಿಹೆವು । ಬಂದುದುಬ್ರಹ್ಮ । ಹತ್ಯದಪಾತಕವೂ। ॥35॥

ಇಂದುಮುಖಿಯನೆವದೀ । ಕೋಪದಿದಶ । ಕಂಧರಾದ್ಯರರಣದೀ ।
ಮಂದಮತಿಯಲಿನಾನೂ । ಬ್ರಹ್ಮವಂಶಜ । ರೆಂದರಿಯದೆಕೊಂದೆನೂ। ॥36॥

ಬಂದಪಾತಕವಿದನೂ । ಪರಿಹರಿಸಲು । ಮುಂದೇಯತ್ನವಕಾಣೆನೂ ।
ಇಂದುಧರನೆ ಬಲ್ಲನೂ । ಯನಲುನಗು । ತೆಂದನುಮುನಿವರನೂ। ॥37॥

**ರಾಗ ಮಧ್ಯಮಾವತಿ ಏಕತಾಳ**

ಲಾಲಿಸು ನಾನೆಂಬಮಾತರಾಜೇಂದ್ರಾ । ಜಾಲಮಾತಲ್ಲಿದುಸದ್ಗುಣಸಾಂದ್ರಾ ।
ನೀಲನಿಭಾಂಗ ನಿತ್ಯಾತ್ಮನಿರ್ಮುಕ್ತ । ಕಾಲಕರ್ಮವಿದೂರಕಲ್ಮಷರಹಿತಾ। ॥38॥

ದನುಜರಾವಣಕುಂಭಕರ್ಣರೆಂಬವರೂ । ಅನುಗಾಲನುವೈಕುಂಠದ್ವಾರಪಾಲಕರೂ ।
ಸನಕಸನಂದರುಶಪಿಸಲಿಕಂದೂ । ಜನಿಸೀರ್ದರಾಜಯವಿಜಯರೈತಂದೂ। ॥39॥

ಪರಮಪುರುಷ ಪರಮಾತ್ಮನೀನಾಗಿ । ನರನಾಟಕವ ತೋರಲೆಂಬುದಕಾಗೀ ।
ಪರಿಪರಿಮಾಯವ ಚರಿಸಲ್ಯಾಕಿನ್ನು । ಅರುಹುವೆಕೇಳು ಮುಂದಾಹಕಾರ್ಯವನು। ॥40॥

**ರಾಗ ಸೌರಾಷ್ಟ್ರ ತ್ರಿವುಡೆ**

ಪರಮಪುರುಷಪರೇಶ ನೀನೀ । ಪರಿಯ ಚಿಂತಿಸಲ್ಯಾಕೆ ನಿನ್ನಯ।
ಸ್ಮರಣೆ ಮಾತ್ರವೆ ಸಾಕು ಪಾಪವ। ಪರಿಹರಿಪಡೆ ॥41॥

ಆದಡಿದಕೊಂದುಂಟುಪಾಯವು । ಸಾಧಿಸಿಹರೈನಿಮ್ಮಪೂರ್ವಜ ।
ರಾದಮರುತನಪಾಲಮುಖ್ಯರು । ಮೇದಿನಿಯೊಳೂ ॥42॥

ರಾಮಕೇಳೈತುರಗಮೇಧವ । ನೇಮದಿಂದಲಿ ಮಾಡು ಅಘನಿ ।
ರ್ನಾಮಮಹುದೆಂದೆನುತ ಪೇಳಿದ । ನಾ ಮುನೀಂದ್ರಾ। ॥43॥

ರಾಘವನುಮಗುಳೆಂದ ಮತ್ತೀ । ಯಾಗದಶ್ವವಿದ್ಯಾವ ತೆರನಿಹು ।
ದಾಗಮೋಕ್ತ ವಿಧಾನವಾವುದು । ಯೋಗಿವರ್ಯಾ। ॥44॥

**ರಾಗ ಕೇತಾರಗೌಳ ಅಷ್ಟತಾಳ**

ರಾಘವನುಸುರಿದನುಡಿಯನ್ನೆ ಕೇಳುತ । ಲಾಗ ಮುನೀಶ್ವರನೂ ।
ಯಾಗದ ಹಯದ ಲಕ್ಷಣವನ್ನು ನಗುತಲಿ । ಬೇಗದಿಂದುಸುರಿದನೂ। ॥45॥

ಕುಲದೊಳುಚ್ಚೈಶ್ರವನಾಗಿರಬೇಕದು । ಚಲುವ ಮನೋವೇಗವೂ ।
ಚಲುವರಕ್ತಾಸ್ಯಮೈಬಣ್ಣವೀಕ್ಷಿಸೆ ಗಂಗಾ । ಜಲದಂತೆ ತೋರುವುದು। ॥46॥

ಬಾಲವುಪೀತವಾಗಿರುವದೊಂದೇಕಿವಿ । ನೀಲವರ್ಣದತುರಗವೂ ।
ಮೇಲೆದ್ವಾತ್ರಿಂಶತಿಲಕ್ಷಣದಿಂದವಿ । ಶಾಲವಾಗಿರುತಿಹುದು ॥ ॥47॥

ಮಾಸವೈಶಾಖಪೂರ್ಣಮಿಯದಿವಸ ವಿ । ಶೇಷವಾಚರಿಸಾಲೇಕೆ ।
ತೋಷದಿಯಜ್ಞದೀಕ್ಷೆಯನಾಂತುಕ್ರಮದಿಂದ । ಲೇಸಾಗಿರಚಿಸೆಂದನೂ। ॥48॥

ತುರಗವಪೂಜಿಸಿಬರೆದು ಲೇಖನವನ್ನೂ | ವರಬಾಹುರ್ಬಲಸಹಿತ |
ಧರಣಿಪಾಲಕರನ್ನು ಗೆಲಿದೊಂದುವರುಷಕೆ | ಬರಬೇಕುಹಯವೆಂದನೂ| ||49||

ದಕ್ಷಿಣೆದಾನಧರ್ಮಗಳಿಂದ ಸರ್ವರ | ಪೇಕ್ಷೆಯಾಸಲಿಸುವದೂ |
ಭಕ್ಷಭೋಜನದಿಂದಸಂತರ್ಪಣೆಗಳಿಂದ | ಲಕ್ಷಣದಿಂಗೈವುದು ||50||

**ದ್ವಿಪದಿ**

ಮುನಿಪನೆಂದುದಕೇಳಿ ಸರಯುತೀರದಲೀ |
ಕನಕಮಯಯಜ್ಞ ಶಾಲೆಯ ವಿರಚಿಸುತಲೀ| ||51||

ಗುರುವಸಿಷ್ಠನಗಸ್ತ್ಯವ್ಯಾಸಶೌನಕರಾ |
ವರಕಾಶ್ಯಪತ್ರಿ | ಕೌಶಿಕರನಾರದರಾ| ||52||

ಸನಕಭಾರದ್ವಾಜಗಾರ್ಗ್ಯಮುಖ್ಯರನೂ |
ವಿನಯದಿಂಕರೆಸಿದನು ಬಂಧುವರ್ಗವನೂ| ||53||

ಯಜ್ಞಸಮಯದಿ ಪತ್ನಿ ಹೊರತಾಯಿತೆನಲು |
ಅಜ್ಞಾನವಶದಿಂದ ಸೀತೆಯಅಗಲಿರಲು| ||54||

ಸ್ವರ್ಣಮಯದಿಂದ ವಿಗ್ರಹವರಚಿಸುತಲಿ |
ಸುಜ್ಞಾನದಲಿದೀಕ್ಷೆತಾಳ್ದನೊಲವಿನಲೀ| ||55||

ಪದುಮಾಕ್ಷಯಾಗದಶ್ವವನು ತಾತರಿಸೀ |
ವಿಧವಿಧದೊಳಾಭರಣದಿಂದಲಂಕರಿಸೀ ||56||

**ರಾಗ ಸಾಂಗತ್ಯ ರೂಪಕತಾಳ**

ಆಸಮಯದೊಳು ತಮ್ಮೊಳಗೆಮಾತಾಡುತ್ತ | ವಾಸುದೇವರಸ್ಮರಿಸುತ್ತಾ |
ಭೂಸುರರೇನು ಸಂತೋಷದೊಳ್ಶೈತಂದ | ರಾಸಭಾಂತರಕೇತೋಷದಲೀ||57||

**ರಾಗ ನಾದನಾಮಕ್ರಿಯೆ ಏಕತಾಳ**

ನಿಂಗೋವೆಯಂಮನೆಗೆಬಂದು | ರಂಗನೆಂಬಾಮಾಣಿನಿಂದು |
ಯಂಗೋವರಿಯನಂತೇ ತಂದೂ | ಸಂಗಡಿಲ್ಲಾವಾಯಿತಿಂದೂ| ||58||

ಯಕ್ಕಡಾಸುಂಜೀವವೆಂನಾರೂ | ಯವರುಮಿಕುಚಪ್ಪಿನಾರು |
ಯಿಕ್ಕಡಯಿಂದೂಕುನೊಂದಾರೂ | ದಕ್ಷಿಣೆತೀಸ್ಕೋದಾಳುಮೀರು| ||59||

ರಾಘವಾಜೆಯಜ್ಞ ಸಾಟಿ | ಪಾಗೊಟಿಘಾತ್ಲೊಮೀಮೊಟೀ |
ಆಗತನಾಹಿತೊಣಿಹಿಕಡೆ ಮಾಗತಗೆಲೆಪಷ್ಮ್ಳತಿಗಡೆ| ||60||

ಕಂಕಂಗಲಕೀವಾಂಗಡಜ್ಯಾಗಿ | ಕಂಕಂಪಾವಲಿನುಭಾರಜ್ಯಾಗಿ
ಪ್ವಂಹು ಜಸುದುಕ್ತಾಮುಕ್ಕಾ | ಚೋತಾಸಬಲಾ ಕುಂಕಿತಾಕಾ| ||61||

ರಾಮಚಂದ್ರಅಪನೆಪರಾಕು | ಹೊಮ್ಮುಬುಆಟಿಹೊಮ್ಮು |
ನಾಮಸುನಕರಾಆಯಹ್ಯೂಕೂ | ಶ್ಯಾಮಹೊಂಗಾಜಾನಹೊಕೂಂ| ||62||

ದಾವಕಿಲ್ಲಾದಂತೇನಮಗೇ | ವಾತನೊದನಾಕಿಗೆಗೆ |
ದೇವರಪೆಟ್ಟಿಗೆ ಬಗಲಾಗಂಟು | ದಾವೆಲ್ಲಿಗೊತೊ ಕೊಡಬಳೆಗಂಟೂ| ||63||

**ರಾಗ ಭೈರವಿ ಝಂಪೆತಾಳ**

ರಾಘವನುಬಳಿಕಂತು | ಯೋಗಿವರರನುಮತದಿ |
ಆಗಮೋಕ್ತವಿಧಾನ | ವಾಗಿಯಜ್ಞವನು ||64||

ಅನುಕರಿಸುತಶ್ವವನು | ಘನವೇಗದಿಂತರಿಸಿ |
ಮನವಲಿದುಪೂಜಿಸಿದ | ಜನಪಾಲನಂದು ||65||

ಪರಿಪರಿಯಬಿರಿದುಗಳ | ಬರದಶ್ವಮಸ್ತಕಕೆ |
ತ್ವರಿತದಿಂಕಟ್ಟಿಸಿದ | ಧರಣಿಪಾಲಕನೂ ||66||

ರತ್ನಭೂಗೋದಾನ | ಮತ್ತೆ ಭೋಜನದಿಂದ |
ತಪ್ತಿಪಡಿಸಿದನಾ ದ್ವಿ | ಜೋತ್ತಮಾದಿಗಳಾ ||67||

ಆನೆಕುದುರೆರಥಾದಿ | ಸೇನಾಸಮೂಹದೊಳು |
ನಾನಾರಥದಶಸ್ತ್ರ | ಪಾಣಿಯಿಂದಿರಲೂ ||68||

**ಭಾಮಿನಿ**

ಇಂತೆಸವ ಸಭೆಯೊಳಗೆಶತ್ರುಹ |
ನಂತರಂಗದಿ ಕರೆದು ರಣದಲಿ |
ನಿಂತುಕಾದುವಪರಿಯ ಮರ್ಮವ ನೀತಿಶಾಸ್ತ್ರವನೂ |
ಕಂತುಪಿತನುಪದೇಶವಿತ್ತವ |
ನಂತೆಗದುಬಿಗಿದಪ್ಪಿ ಸೇನಾ |
ಸಂತತಿಯ ಬೆಂಬಲಕೆ ಪೋಗೆಂದೆನುತನೇಮಿಸಿದಾ | ||69||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಥಳಥಳಿಪನವರತ್ನ ಖಚಿತದ। ಹೊಳೆವ ಹೊಂಬಟ್ಟಲಲಿವೀಳ್ಯವ॥
ನಳಿನನಾಭನು ಪಿಡಿದಿರಲು ಪು । ಷ್ಕಳನು ನುಡಿದಾ। ॥70॥

ಬೊಪ್ಪಲಾಲಿಸು ಜಯಿಸಿರಿಪುಗಳ । ಕಪ್ಪವನು ಕೈಕೊಳುತ। ಆಕಿರಿ
ಯಪ್ಪನೊಡನಾಂ ಪೋಪೆಕೊಡಿಸೆನಗಪ್ಪಣೆಯನೂ। ॥71॥

ಎಂದುದನು ಕೇಳುತ್ತಲಾ ನಿಜ। ನಂದನಗೆ ಸೇನಾಧಿಪತ್ಯವ।
ನಂದುನೇಮಿಸುತಿತ್ತವೀಳ್ಯವ। ನಿಂದಿರೇಶಾ । ॥72॥

ಸೀತೆಯಗ್ರಜ ಲಕ್ಷ್ಮಿಮಿನಿಧಿಯನು । ಪ್ರೀತಿಯಲಿಸತುಕರಿಸಿರಘುವರ ।
ತಾತತೂಕ್ಷಣಕರದುಸುರ್ದನು । ವಾತಸುತಗೆ। ॥73॥

**ರಾಗ ಸೌರಾಷ್ಟ್ರ ಆದಿತಾಳ**

ಕೇಳೈಯಹನುಮಂತಾ। ರಘುಕುಲ । ಪಾಲಕಗುಣವಂತಾ।
ಶೀಲಗುಣೈಕ ವಿಶಾಲ ಪರಾಕ್ರಮಿ। ಪೇಳುವೆನಿಂ । ನ್ನೊಳು ಮೇಲಹಕಾರ್ಯವ। ॥74॥

ಶರಧಿಯನುತ್ತರಿಸಿ ಲಂಕಾಪುರವನುವುರಿಗೊಳಿಸಿ।
ದುರುಳ ನಿರಾಚರ ಪರಿವಾರವ ಸಂ । ಹರಿಸುತ ಕೀರ್ತಿಯ ಮೆರೆಸಿದೆಪೂರ್ವದಿ। ॥75॥

ಯಾಗದ ತುರಗವನೂ। ರಕ್ಷಣೆ । ಗಾಗಿಯೇ ಶತ್ರುಹನೂ।
ಪೋಗುವ ಪುಷ್ಕಳ ಸಹಿತಲಿ ಬೆಂಬಲವಾಗಿಯೆ ನೀನೊಲಿದೀಗಲೆ ಪೋಪುದೂ। ॥76॥

**ಭಾಮಿನಿ**

ಜನಪನೆಂದುದಕೇಳುತಾಕ್ಷಣ ।
ಹನುಮತೋಷದೊಳಿರಲಿಕಿತ್ತಲು ।
ಘನಪರಾಕ್ರಮಿ ಜಾಂಬವಂಗದ ನೀಲನಳಮೈಂದಾ ॥
ಇನಸುತನುಗವಯನಗವಾಕ್ಷನ ।
ವಿನಯದಿಂದಸುಷೇಣ ದಧಿಮುಖ ।
ಪನಸ ಕೇಸರಿಮುಖ್ಯರನುಕಳುಹಿದನು ಬೆಂಬಲಕೇ। ॥77॥

**ರಾಗ ಕೇತಾರಗೌಳ ಅಷ್ಟತಾಳ**

ಇಂತುನಾನಾಪರಿಯಿಂದುಪಚರಿಸುತ್ತ । ಕಂತುಜನಕ ಬಳಿಕಾ ।
ಸಂತಸದಿಂದ ಸುಮಂತನನೀಕ್ಷಿಸು । ತಿಂತೆಂದನವನೊಡನೇ। ॥78॥

ಯಾಗದತುರಗದರಕ್ಷಣೆಗೋಸುಗ । ಪೋಗುವ ಶತ್ರುಹನೂ ।
ಬೇಗನೀನವನೊಡನೈದೆ ಜಯವ।ಲೇಸಾಗಿಸಾಧಿಪುದೆಂದನೂ। ॥79॥

ಬಳಿಕಪುಷ್ಕಳತನ್ನನಿಳಯಕೆಂದೆನುತಲಿ । ನಲವಿಂದಲೈತರಲೂ।
ಜಲಜಾಕ್ಷಿಯಾತನಕಾಂತೆತಾನತಿಬಲು । ಸೊಬಗೀನೊಳಿರುತಿರಲೂ। ॥80॥

**ವಾರ್ಧಕ**

ಅರವಿಂದಮುಖಿ ದಂತಪಂಗ್ತಿಯಿಂಕಾಂತಿಯಿಂ ।
ಪರಿಪರಿಯ ನವರತ್ನಹಾರದಿಂ ಭಾರದಿಂ ।
ಮೆರೆವಬಿಂಬೋಷ್ಟದಾನಂದದಿಂಛಂದದಿಂ ಸುರಚಿರಾಭರಣದಿಂದಾ ॥
ವರಸಖಿಯರೊಳು ಮಾತನಾಡುತಂ ಕೂಡುತಂ।
ಕಿರುನಗೆಯವಾಣಿಯಿಂ ಮೆರವಫಣಿವೇಣಿಯಿಂ ।
ಪುರುಷನನಿರೀಕ್ಷಿಸುವ ಹರುಷದಿಂಸರಸದಿಂ ಕುಳಿತೀರ್ಪಳೇಂಪೇಳ್ವೆನೂ। ॥81॥

**ಭಾಮಿನಿ**

ಮುನಿಪಕೇಳಾವರಪತಿವ್ರತೆ ।
ಇನಿಯನನು ದೂರದಲಿ ಕಾಣುತ ।
ಘನತರದ ಭಕುತಿಯಲಿ ಇದಿರ್ಗೊಂಡಾಗ ಕರತಂದೂ ॥
ಕನಕಮಯ ಪೀಠದಲಿವರನನು ।
ವಿನಯದಿಂಕುಳ್ಳಿರಿಸಿಚರಣಕೆ ।
ಮಣಿದುಪೇಳ್ದಳು ಪ್ರೀತಿಭಾವದಿ ಕಾಂತಗೆರಗುತಲಿ। ॥82॥

**ರಾಗ ಕಾಂಭೋಜಿ ಏಕತಾಳ**
ಆವಲ್ಲಿಗೆ ಪಯಣವಿಂದು ಪ್ರಾಣಕಾಂತಾ । ರಾಜ
ಯಿಂದಾ ಪೊರಟ್ಯಾರಕೆಪ್ರಾಣಕಾಂತ ॥
ಭಾವಭಕ್ತಿಯಿಂದಲಾನುಪ್ರಾಣಕಾಂತಾ । ಕೇಳ್ವೆ
ನೀವಲೀದು ವೇಳ್ಬುದೆನಗೆ ಪ್ರಾಣಕಾಂತಾ ॥83॥

ಸ್ಯಂದನಾವಾನಡರಿನೀವು ಪ್ರಾಣಕಾಂತಾ । ಹಿಂದೇ
ಬಂದುದಾ ಕಾಣೆಯಿಲ್ಲೀಗೆ ಪ್ರಾಣಕಾಂತಾ ।
ಎಂದಿನಂದ ವಿಲ್ಲದೀಗ ಪ್ರಾಣಕಾಂತಾ । ಮನಕೆ
ಸಂದೇಹತೋರುತ್ತಲಿದೆ ಪ್ರಾಣಕಾಂತಾ। ॥84॥

**ರಾಗ ಕೇತಾರಗೌಳ ಅಷ್ಟತಾಳ**
ಸುದತಿಯನುಡಿಗೇಳಿಚದುರಪುಷ್ಕಳನೆಂದಾ । ಮದನಜನಕರಾಮನೂ ॥
ಮುದದಿಂದತಾಳಿದಭ್ಯುದಯದಕಾರ್ಯರಕ್ಕೆ । ವದಗಿನಾಪೋಗುವೆನು। ॥85॥

ಆವಕಾ್ಯರವು ಅದರಂದವೇನೆಂಬುದ | ನೀವಲಿದೀಗೆನ್ನೊಳು |
ಸಾವಧಾನದೊಳುಸುರೆನೆಕೇಳುತೆಂದನೂ | ಭಾವಕಿಕೇಳೆಂದನು| ||86||

ಹಿಂದೆರಣದಿದಶಕಂಧರಾದಿಗಳನ್ನು | ಕೊಂದಕಾರಣದಿಂದಲಿ |
ಬಂದಪಾತಕ ಪರಿಹರಕಾಗಿ ಹಯಮೇಧ | ವಿಂದುತಾಗೈವರಿಲ್ಲಿ| ||87||

ತುರಗಮೇಧವರಚಿಸಿದರೀಗ ನೀಧನು | ಶರವಿಡಿದ್ಯಾಕಿಲ್ಲಿಗೇ |
ಬರುವರೆ ಕಾರಣವೇನೆನೆತೋಷದೊಳ | ರುಹಿದಕಾಮಿನಿಗೇ| ||88||

ಅರಿಗಳ ಜಯಿಸಲುತುರಗದಬೆಂಬಲ | ಕಿರಿದೀಗಶತ್ರುಹನೂ |
ಭರದಿಂದಪೋಗುವಪರಿಪರಿಸುಭಟರ | ಪರಸಿನಾನ್ಯೆದುವೆನೂ| ||89||

**ರಾಗ ಮಧುಮಾಧವಿ ಏಕತಾಳ**

ಎನಲುಕೇಳುತಹಿಂದೆ | ಜನಕನಿತ್ತಹದಿವ್ಯ |
ಕನಕಮಯದಖಡ್ಗ | ಧನುಶರಾಯುಧವಾ |
ದಿನಕರಪ್ರಭೆಯಂತೆ | ಮಿನುಗುವಕವಚವ |
ವಿನಯನಿಗಿತ್ತುಪ | ಚರಿಸಿಪೇಳಿದಳೂ| ||90||

ಇತ್ತಪೆನೀವಿದ | ಧರಿಸಲು ಅರಿಗಳ |
ಸತ್ವಗುಂದುತಲ್ಲಲ್ಲಿ | ಅಸ್ತವಾಗುವರು |
ಶತ್ರುಹನಾಜ್ಞೆಯ | ವರ್ತಿಪುದೆನುತಲಿ |
ಮುತ್ತಿನಾರಾತಿಯಾತಂ | ದೆತ್ತಲುಬಳಿಕ | ||91||

ವನಿತೆಯಬೀಳ್ಕೊಂಡು | ಜನನಿಜನಕರಿಂಗೆ |
ಮಣಿದುನೇಮವಗೊಂಡು | ಪುನರಪಿತಾನೂ|
ಮಣಿರಥವಡರುತ | ಘನಪರಿತೋಷದಿ |
ಗುಣನಿಧಿಪೊರಟಾನು | ವಿನಯದೊಳಾಗಾ| ||92||

**ಭಾಮಿನಿ**

ವರಮುನಿಶ್ವರಲಾಲಿಸಿತ್ತಲು |
ಪರಮ ವಿಭವದಿರಘುಕುಲೇಶನು |
ತುರಗವನುಪೊರಡಿಸಿದ | ಬಲಸಹಿತಾಗಸಂಭ್ರಮದೀ ||
ಬರುತಿರಲುಮಾರ್ಗದಲಿಪುಷ್ಕಳ |
ನುರುಪರಾಕ್ರಮದಿಂದ ಅವರೊಡ |
ವೆರಸುತೈತಂದನುಸಗಾಧದೊಳೆನಪೇಳುವೆನೂ| ||93||

**ರಾಗ ಮಾರವಿ ಏಕತಾಳ**

ಈ ಪರಿಯಿಂದಮಹಾಬಲವಾ ಸೇ । ನಾಪತಿಯಾಜ್ಞೆಯಲೀ ।
ಭೂಪತಿಯಶ್ವವುಮುಂದ್ಯೆದಿತುನಾ। ನಾಪರಿವಿಭವದಲಿ ॥94॥

ಭೇರಿಮದಂಗನಗಾರಿಪಣಹ ಕಾ । ಲಾರವದಿಂದಾಗ ।
ಭೂರಿಮಹರ್ಬಲನಡದುದು ಪಥವಿಡಿ । ದಾರುಭಟಿಸಿಬೇಗಾ। ॥95॥

ಉತ್ತರದೇಶಕ್ಕೈಯಾಲುಮಖದಶ್ವವು । ಸುತ್ತಣನಪರೆಲ್ಲಾ ।
ಮತ್ತೀವಾರ್ತೆಯ ಕೇಳುತಕಾಣಿಕೆ । ಯಿತ್ತುಪಚರಿಸಿದರೂ। ॥96॥

ಬಂದವನಿಪರನುಮನ್ನಿಸಿಸಿಶತ್ರುಹ । ನಂದವರೊಡಗೂಡಿ ।
ಮುಂದ್ಯೆತರುತಿಹ ಅಹಿದಾತ್ರಕನೆಡೆ । ತಂದುದುಹಯಬೇಗಾ। ॥97॥

**ವಾರ್ಧಕ**

ಇತ್ತಲಾಪುರದರಸು ಮುದದೀಹಯಬಂದ ।
ವಾರ್ತೆಯನು ದೂತನೋರುವನೈದೆ ಪೇಳಲಿಕೆ ।
ಶತ್ರುಘ್ನನಿದಿರ್ಗೊಂಡು ಕಾಣಿಕೆಯನಿತ್ತು । ತದ್ರಾ್ಯಭಿಷೇಚನವನೂ ॥
ಪುತ್ರನಿಗೆವಿರಿಚಿಸುತ । ಹಯದ ಬೆಂಬಳಿವಿಡಿದು ।
ಅತ್ಯಧಿಕ ಸಂಭ್ರಮದಿ । ಪೋಗುತಿರಲಾಗ ಭ್ರುಗು ।
ಪುತ್ರಚವನಾಖ್ಯಮುನಿ । ಯಾಶ್ರಮಕೆನಡೆತಂದು ನಮಿಸಿನೇಮವಗೊಂಡರೂ। ॥98॥

ಕಮಲನಾಭನಯಾಗದಶ್ವಮುಂದ್ಯೆತರಲು ।
ವಿಮಲನಪಕೇಳುತ್ತರಾಜ್ಯಮಂಸುತಗೆ । ಸಂ
ಭ್ರಮದಿ ಪಟ್ಟವಗಟ್ಟಿಶತ್ರುಘ್ನನಿದಿರ್ಗೊಂಡುಬೆಂಬಲಕೆನಡೆತಂದನೂ ॥
ದ್ಯುಮಣಿಸಂಕಾಶಮಾಗಿರ್ಪನೀಲಾದ್ರಿಯಂ।
ತಮತಮಗೆನೋಡಿವಿಸ್ಮಿತರಾಗಿವಿಷ್ಣುಪದ ।
ಕಮಲಕಭಿನಮಿಸಲ್ಕೆ । ಚಕ್ರಾಂಕಪುರಕಾಗಿನಡೆದುದಾಯಾಗದಶ್ವ ॥99॥

**ರಾಗ ಏಕತಾಳ ಸವಾ**

ಆಪುರದಧಿಪತಿಯಾಗಿಹನೋರ್ವನು । ಶ್ರೀಪತಿಭಕ್ತಸುಬಾಹುಕನು ॥
ಭೂಪತಿಯಾತ್ಮಜದಮನನುಬೇಟೆಗೆ । ತಾಪೊರಡುತಲೈತರುತಿಹನು। ॥100॥

ಬಲವನು ಕೂಡಿಸಿ ಸಂತೋಷಾಂಗದಿ । ಮಣಿರಥವನುಯೇರಿ ।
ವಿನಯದಿ ಬೇಟೆಯನಾಡುತ ಶಸ್ತ್ರವ । ತುಡುಕುತಲೈತಂದ। ॥101॥

**ರಾಗ ಭೈರವಿ ಏಕತಾಳ**

ಬಂದಾನಾದಮನಾ । ಬೇಟೆಯಾಡುತ್ತಾ ಬಂದಾನಾದಮನಾ। ॥ ಪಲ್ಲವಿ ॥

ಬಂದದಮನನತಿ । ಚಂದದಿಸೇನಾ ।
ವಂದದೊಡನೆ । ಸಾನಂದದೊಳಂದು । ಬಂದಾನಾದಮನಾ। ॥102॥

ವಿಧವಿಧಬಲೆಗಳ । ನೊದಗಿಸಿಮೃಗಗಳ ।
ಸದವುತಮಾರ್ಗದಿ । ಬದಿಯನುಸಾರುತ ।
ಚದುರತೆಯಿಂದಲಿ । ಬೆದರಿಸುತಂದೂ । ಬಂದಾನಾದಮನಾ। ॥103॥

ವೋಡುವಮೃಗಗಳ ನೋಡುತಸನ್ನೆಯ ।
ಮಾಡುತಬಾಣವ । ಹೂಡುತಸಿಕ್ಕಲು ।
ಪಾಡಿನೊಳಿರಿವುತ । ಕಾಡಿನೊಳಂದೂ । ಬಂದಾ ॥104॥

ಕಾಣುತಲಾಕಾಡ್ಗೋಣಾದಿಗಳನು ।
ಬಾಣದೊಳೆಸವುತ ತ್ರಾಣದಿಕೆಡಹಲು ।
ಗೋಣುಗಳರಿವುತ ಪ್ರಾಣಗೊಳುತಲೀ । ಬಂದಾ। ॥105॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಇಂತುದಮನುಬೇಟೆಯಾಡುತ್ತಾ । ಅತಿ । ಸಂತಸದಿಂಸುತ್ತ ನೋಡುತ್ತಾ ।
ನಿಂತಿರಲಶ್ವವಕಂಡನು । ಚರ । ರಂತಳುವದೆಕರದೆಂದಾನೂ ॥106॥

ಆರಶ್ವವಿದುಮುಂದೆತೋರ್ಪುದೂ । ಮತ್ತೆ । ಭೂರಿಶೃಂಗಾರವಾಗೀ್ಪೂರದೂ ॥
ಚಾರುಲಿಖಿತವಿದೆಭಾಳಾದೀ । ಮನ । ಸೂರೆಗೊಂಡುದುರತ್ನಜಾಲಾದೀ। ॥107॥

ತರಬೇಕೀಹಯವನೆಕೇಳುತಾ । ಆಗ । ಚರರತಿಹರುಷವತಾಳುತ್ತಾ ।
ತುರುಗಾವಪಿಡಿವುತ್ತೈತಂದಾರೂ । ನುಪ । ಸುತನಡಿಗೆರಗುತ್ತಾ ನಿಂದಾರೂ। ॥108॥

ಸುಂದರಕ್ಷರದಿಂದಬರದಿಹಾ । ದಿವ್ಯ । ಚಂದನಲೇಪಿತವಾಗಿಹ ।
ಛಂದದೊಳಿರುವಲೇಖವನ್ನೂ । ತೆಗೆ । ದಂದು ವಾಚಿಸಿದನುದಮನನೂ। ॥109॥

**ರಾಗ ಕಾಂಭೋಜಿ ಝುಂಪೆತಾಳ**

ಶ್ರೀಮಹಾಸಾಕೇತಪುರವರಾಧೀಶ್ವರನು । ಭೂಮಿಪಾಲಕರಕುಲತಿಲಕಾ ।
ಭೀಮವಿಕ್ರಮ ದಶರಥಾತ್ಮಜನು ಧುರವಿಜಯ । ರಾಮಚಂದ್ರನು ಮಖವನೆಸಗೀ। ॥110॥

ಬಿಟ್ಟಿರುವನಶ್ವವಿದಲಂಕರಿಸಿಫಣೆಯೊಳಗೆ । ಕಟ್ಟಿಲಿಖಿತವನುತೋಷದಲಿ ।
ಧಿಟ್ಟಶತ್ರುಘ್ನಬಂದಿಹನಿವರಬೆಂಬಲಕೆ । ಸೃಷ್ಟಿಪಾಲರ ಜಯಸಲೆನುತಾ। ॥111॥

ಚಂಡವಿಕ್ರಮಭುಜಪರಾಕ್ರಮಿಗಳಾದವರು । ಕಂಡುಕಟ್ಟುವದುಹಯವಿದನೂ ।
ತಂಡತಂಡದನಪರಗೆಲಿದುವಾಜಿಯಬಿಡಿಸಿ । ಕೊಂಡುಪೋಗುವನುಶತ್ರುಹನು। ॥112॥

ಈತುರಗವನುಬಂಧಿಸಲು ಸತ್ವವಿಲ್ಲದಿಹ । ಭೂತಳಾಧಿಪರಿದಿರ್ಗೊಂಡೂ ।
ಪ್ರೀತಿಯಲಿಕಾಣಿಕೆಯನಿತ್ತು ಮನ್ನಿಸಲವರ । ಗಾತತೂಕ್ಷಣಪಾಲಿಸುವನೂ। ॥113॥

ಇಂತೆಂದು ಬರದಪತ್ರಿಕೆಯವಾಚಿಸುತ । ಅತ್ಯಂತಕೋಪಾಗ್ನಿಯಲಿಧಮನಾ ।
ಮುಂತೀರ್ಪಸುಭಟರನು ನೋಡಿಪಲುಗಡಿವುತ್ತ । ಲಿಂತೆಂದನಗುತಸಂಭ್ರಮದೀ। ॥114॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಏನನುಸುರವೆನೀಪರಿಯ ಬಹು । ಮಾನವೀಹುಲುನಪರಿಗುಂಟೆ । ನಿ
ಧಾನಿಸದೆಬರದಿಹನು ಬುದ್ಧಿವಿ । ಹೀನರಂತೇ। ॥115॥

ಉರ್ವಿಪತಿಗಳಕುಲಶಿರೋಮಣಿ । ಸಾರ್ವಭೌಮಕನೆನ್ನಪಿತನಿರೆ ।
ಸ್ವರರೊಳಗಿವಶ್ರೇಷ್ಠರೆಂಬೀ । ಗರ್ವವೇನ್ಕೈ। ॥116॥

ಇಂದುರಣದೊಳಗೆನ್ನಕರಹತಿ । ಯಿಂದಜಹಯಮುಖ್ಯಸೇನಾ ।
ವಂದಧರಣಿಯೊಳೊರಗಿಸುವೆ ತಾ । ನೆಂದುನುಡಿದಾ। ॥117॥

ತಂದು ಹಯವನು ಕಳುಹಿಪುರಕಾ । ನಂದಮಿಗೆಸೇನಾಪತಿಯ। ಕರೆ
ದೆಂದ ಬಲಸಹಿತೀಗಯುದ್ಧಕೆ । ನಿಂದಿರುವದು ॥118॥

**ಭಾಮಿನಿ**

ಇತ್ತಹಯಪಾಲಕರು ನಡೆತಂ ।
ದುತ್ತಮಾಶ್ವವದಮನ ಕಟ್ಟಿದ ।
ವಾರ್ತೆಯನುಕೇಳುತ್ತಭಯದಿಂದಾಗನಡೆತಂದು ।
ಶತ್ರುಹಗೆಪೇಳಲ್ಕೆರಣದಲಿ ।
ನಿಂತು ಕಾದುವದೆನುತನೇಮಿಸೆ ।
ಚಿತ್ತದಲಿ ಸಂತಸವತಾಳುತ ಲಾಗಪಟುಭಟರೂ। ॥119॥

**ರಾಗ ಶಂಕರಾಭರಣ ಮಟ್ಟೆತಾಳ**

ಮತ್ತೆ ಲಾಲಿಸೈಮುನೀಂದ್ರ । ಪಥ್ವೀಪಾಲನುಸುರಲಿಂತು ।
ಹಸ್ತಿಹಯರಥಾದಿಸೇನೆ । ಮುತ್ತಿತಾಗಳು ।
ಕತ್ತಿಪರಶುಕುಂತಪಾಶ । ಶಕ್ತಿತೋಮರಂಗಳಿಂದ।
ವಿಸ್ತರಿಸುವೆನೇನಮುಂದೆ । ನಿಂತುದಾಕ್ಷಣ। ॥120॥

ಖಡಿಯಿರವರಕೊಚ್ಚಿಮುಂದೆ | ಬಿಡದಿರೆನುತ ವುಭಯಸೈನ್ಯ |
ತಡೆಯದಾಗ ರೋಷವೆತ್ತು | ಘಡಘಡೆನುತಲೀ |
ಘುಡುಘುಡಿಸುತಲಾರ್ಭಟಿಸುತ | ಕಿಡಿಯನುಗುಳುತಂದುಸ್ಯಂದ |
ವಿಡಿವುತಾಗ ಹಿಂದೆಹೆಜ್ಜೆ | ಯಿಡದಿರೆನುತಲೀ | ||121||

ಬಾಣಮಯದಿಬಲವದಮನ | ಹಾನಿಗೈದನೊಂದೆಕ್ಷಣದಿ |
ಯೇನನೆಂಬೆನದುಭುತವನು | ಅವನಿಪಾಲನೆ | ||122||

ಆನಲಾರದಿವನಧುರವ | ಪ್ರಾಣಭೀತಿಯಿಂದ ಮರಳಿ |
ಕ್ಷೋಣಿಪತಿಯಸಹಜನೆಂದ | ತಾನೆದಮನಗೆ ||123||

**ರಾಗ ಭೈರವಿ ಅಷ್ಟತಾಳ**

ತರಳಾನೀರಣಕೆಬಂದೂ | ಕಾದುವದಿದು | ಥರವಲ್ಲಕೇಳೊ ಇಂದೂ |
ಸರಿಹುಡುಗರಕೂಡಿಪರಿಪರಿಯಾಟವ | ಚರಿಸುನೀಪೋಗೆದಂನೂ| ||124||

ರಿಪುಗಳ ಶಿರಗಳನು | ಚಂಡಾಡುವ | ಅಪರೂಪದಾಟವನು |
ನಪತಿಕೇಳಿಲ್ಲಿ ಕ್ರಿಡಿಸಲೀದು ಯೋಗ್ಯವು | ಕುಪಿತನಾಗದಿರೆಂದನು ||125||

ಶಿಶುಹತ್ಯಾಪಾತಕಕೇ | ಅಂಜಿಯೆನಿಂನೊ | ಘುಸುರುವೆನೀಕ್ಷಣಕೇ |
ಹಸುಮಗನಾಗಿಸಾಹಸವತೋರಿಸಲೆಂದು | ಅಸುವನೀಗದಿರೆಲವೋ| ||126||

ಪಾತಕಕಂಜಿನೀನೂ | ಸದ್ಧರ್ಮದ | ರೀತಿಯೊಳಿರುವಾತನು |
ಯಾತಕೀತುರಗಬಳಿವಿಡಿದೈತಂದೆ | ನೀತೆರಳೆಲೊ ಮನೆಗೇ| ||127||

**ರಾಗ ಪಂತುವರಾಳಿ ಮಟ್ಟೆತಾಳ**

ಎನುತಬಾಣಶತಕವನ್ನುಧಮನನಾಕ್ಷಣ |
ಯಿನಕುಲೇಂದ್ರನನುಜಗೆಸೆಯಲತಿವಿಚಕ್ಷಣಾ ||
ಕಣೆಯಹತಿಗೆಸೇನೆಮತ್ತೆದಣಿದುತಿರುಗಲೂ | ಅನಕಶತ್ರುಹಾಖ್ಯನೂರುಕಣೆಯೊಳೆಸೆಯಲೂ ||128||

ಬಂದುನಾಂಟಲಸ್ತ್ರಕೋಪದಿಂದಧಮನನೂ |
ಒಂದುಭಾರಿತ್ರಿಶಿಖಶರಗಳಿಂದಲೆಚ್ಚನೂ |
ಮುಂದುವರಿದುಬಸುರನುಚ್ಚಳಿಸಲು ಕಾಣುತಾ | ಅಂದುಸಾವಿರಾಸ್ತ್ರ ವೆಸೆಯೆಬಳಿಕನಪನುತಾ ||129||

ತುರಗಸೂತಸಹಿತಲಾಗಧರೆಗೆಬೀಳಲೂ |
ಭರದಿಪೊಸವರೂಥವಡರಿಧಮನನಾಗಲು |
ಶರವನೆಸೆಯೆ ಶತ್ರುಹಾಖ್ಯಮೂರ್ಛೆಯಿಂದಲಿ | ಧರಣಿಗೊರಗಿ ಬಳಿಕ ಚೇತರಿಸುತ ಖತಿಯಲಿ ||130||

**ಭಾಮಿನಿ**

ಮುನಿಪಕೇಳೈಬಳಿಕಶತ್ರುಹ ।
ಘನತರದರೋಷದಲುಸುರ್ದನು ।
ರಣದಿದಮನನ ಗೆಲುವ ಸಾಹಸವಾರಿಗುಂಟಿನ್ನು
ಎನುತಮನದೊಳುಚಿಂತಿಸಲು । ಕಂ
ಡನಿತರೊಳುಪುಷ್ಕಳನುಚರಣಕೆ ।
ಮಣಿದುಕಿರಿಯೈಯ್ಯನೊಳುಪೇಳ್ದನು ವುರುಪರಾಕ್ರಮದಿ।। ।।131।।

**ರಾಗ ಕೇತಾರಗೌಳ ಅಷ್ಟತಾಳ**

ತಾತಕೇಳೀಗಯೀಧೂರ್ತನ । ಗೆಲುವರೆ । ಯಾತಕೆಚಿಂತಿಸುವೇ ।।
ಪ್ರೀತಿಯಿಂದೆನಗಪ್ಪಣೆಯನಿತ್ತು।  ಕಳುಹಿಸು ಧೂರ್ತನ ಗೆಲುವೆನೆಂದಾ। ।।132।।

ರಣದೊಳುನಿಂಮನುದಣಿಸೀದವೈರಿಯ । ಕ್ಷಣದೊಳುಜಯಿಸುವೆನು ।
ಅನುಮಾನಬೇಡೆಂದುಪದಕೆರಗುತಲಿ ಸಂ । ಗರಕಪ್ಪಣೆಯಕೊಂಡನು ।।133।।

ಮಣಿರಥವೇರ್ದುಹೂಂಕರಿಸುತ್ತಪುಷ್ಕಳ । ಧನುಶರಾಯುಧವಿಡಿದೂ ।
ಘನಪರಾಕ್ರಮದಿಂದನಡೆತಂದುಸಂಗರ । ಕಿದಿರಾಗಿರೋಷದೊಳೂ। ।।134।।

ತಂಡತಂಡದನುಭಟರಕೂಡಿರಣದಿಮುಂಕೊಂಡು ನಿಂದಿರೆಧಮನಾ ।
ಚಂಡವಿಕ್ರಮಪುಷ್ಕಳಾಖ್ಯನುಪೇಳ್ದ ಕೋ । ದಂಡವಜೇಂಗೈವುತಾ। ।।135।।

**ರಾಗ ನಾದನಾಮ ಅಷ್ಟತಾಳಕ್ರಿಯೆ**

ಎಲವೊದಮನಕೇಳುರಣದೊಳು । ನಿನ್ನ । ಗೆಲುವಾರೆ ಬಂದೆನೀಕ್ಷಣದೊಳು ।
ಛಲದಂಕಭರತನಾತ್ಮಜನಾನೂ । ಪುಷ್ಕ । ಳನಸಾಹಸವಂನೆನೋಡಿನ್ನು। ।।136।।

ಕೇಳುಸುಬಾಹುವಾತ್ಮಜನಾನೂ । ಗುಣ । ಶೀಲಧಮನನೆಂಬರೆನ್ನನೂ ।
ಲೀಲೆಯಿಂಕಟ್ಟಿದಶ್ವವಾ । ನೆಂದು । ಕಾಳಗದಲಿಬಿಡಲಸ್ತ್ರವ । ।।137।।

ಕಿಡಿಗೆರವುತಬಿಡೆಶರಗಳ । ಗಜ । ತುರಗಪದಾತಿಗೆತಾಗಲೂ ।
ಕಿಡಿಗೆದರುತಪುಷ್ಕ। ಳಾಖ್ಯನೂ । ಅಗ್ನಿ । ಶರವೆಸದನುಪೇಳಲದರನು। ।।138।।

ಕಿಡಿಯಿಡುತೈತಹಬಾಣದಿ । ಸೇನೆ ಸುಡುತಿರೆಧಮನದುಮ್ಮಾನದಿ ।
ಕಡುರೋಷದಿಂದಜಲಾಸ್ತ್ರವಾ । ಬಿಟ್ಟು । ಮಡಿಯಲೀಸದೆನಿಜಪಾಳ್ಯವಾ।  ।।139।।

ಜಲಮಯವಾಗುತ್ತಲಲ್ಲಲ್ಲೀ । ಸೇನೆ । ಮುಳುಗುತೇಳುತಲಿರೆವ್ಯಥೆಯಲೀ ।
ಕಲಿಪುಷ್ಕಳನುವಾಯವ್ಯಾಸ್ತ್ರವ । ನೆಚ್ಚು । ನಿಲಿಸಿದನ ದರಪ್ರತಾಪವಾ ।।140।।

**ಭಾಮಿನಿ**

ಮುನಿಪಕೇಳೈಬಳಿಕದಮನನು ।
ಕನಲಿಪರ್ವತಬಾಣವೆಸೆಯಲು ।
ಜನರಿಗುಪಹತಿಯಾಗಲದರನುಕಂಡುಪುಷ್ಕಳನೂ ॥
ಘನತರದಮಂತ್ರಾಸ್ತ್ರ ವೆಸೆಯಲು ।
ಅನಿತಿದೆಲ್ಲವನುಂಗೆದಮನನ ।
ತನುವನುಚ್ಚಳಿಸಲ್ಕೆ ಮೂರ್ಛಿತದ । ನಾಗಿಮಲಗಿರಲು। ॥141॥

**ವೃತ್ತ**

ದಮನಂಮೂರ್ಛಿತನಾಗಿಮಲಗಿರಲಾಗಳ್ ।
ಅನಿತರೊಳಂಚರರೈತಂದಾಗಳು ।
ಧರಣಿಪವೀರಸುಬಾಹುಕನಡಿಗೆರಗುತ್ತಂ ।
ಕ್ರಮದಿಂದೀವಾರ್ತೆಯನರುಹಿದರತಿಭೀತಿಯೊಳಂ। ॥142॥

**ರಾಗ ಸಾರಂಗ ಅಷ್ಟತಾಳ**

ಲಾಲಿಸಬೇಕುರಾಯಾ । ನಾವೆಂಬುದು । ಜಾಲಾಮಾತಲ್ಲಜೀಯಾ ।
ಪೇಳುವೆನೇನ ಸುಶೀಲನಿನ್ನಾತ್ಮಜ । ಲೀಲೆಯಿಂಮೃ ಿಗಬೇಟೆಗೇ । ಪೋಗಿರಲಾಗಿ। ॥143॥

ಸಾಕೇತಾಧಿಪರಾಮನು । ಹಯಮೇಧವ । ಸ್ವೀಕರಿಸುತಲವನು ।
ಲೋಕೈಕವೀರರಗೆಲಲೆಂದು ಕಳುಹೀದ । ಲೇಖನ ಸಹಿತತಾನು । ವಾಜಿಯನು। ॥144॥

ಕಂಡಶ್ವವನುಕಟ್ಟಿದ । ಶತ್ರುಹನಮುಂ । ಕೊಂಡುರಣದಿಗೆಲಿದಾ ।
ತಂಡತಂಡಸುಭಟರಜಯಸಿದನು । ಪ್ರಚಂಡ ನಿನ್ನಾತ್ಮಜನು । ಧುರಧೀರನೂ । ॥145॥

ಬಂದುಪುಷ್ಕಳಬಳಿಕಾ । ರಣಾಗ್ರಕೆ । ನಿಂದನುನಪತಿಲಕಾ ।
ಅಂದವನೊಳುಕಾದಲಾರದೆಮೂರ್ಛೆಗೆ । ಸಂದುಮಲಗಿದತಾನು । ನಿಮ್ಮಮಗನು ॥146॥

**ಭಾಮಿನಿ**

ಚರರನುಡಿಯನುಕೇಳುತಾಕ್ಷಣ ।
ಧರಣಿಪಾಲಸುಬಾಹುಕೋಪದಿ ।
ಕರೆದುಸೇನಾಪತಿಯೊಳುಸುರಿದ ।  ನವುಡಗಡಿಯುತಲೀ ।
ತರಳನನುಸಂಗರದಿಕೆಡಹಿದ ।
ಪರಮಪಾತಕಿಜೀವದಾಸೆಗೆ ।
ಪುರಹರನಮರೆಹೊಗಲು ।  ಬಿಡೆನೆಂದಾರ್ಭಟಿಸಿನುಡಿದಾ। ॥147॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕೇಳುಸೇನಾಪತಿಯೆರಿಪುಗಳ । ಬೀಳುಗೆಡೆವೆನುನಿಮಿಷಮಾತ್ರಕೆ ।
ಕಾಳಗಕೆಸಂನಾಹಗೈವುದು । ತಾಳದೀಗಾ । ॥148॥

ಎಂದುನೇಮಿಸಲಾಗಸೇನಾ । ವಂದಸಹಿತಲಿತೆರಳೆಭೂಪತಿ ।
ಬಂದನಪನಗ್ರಜಸುಕೇತನು । ಕುಂದದಾಗ। ॥149॥

ನಪನಸುತಚಿತ್ರಾಂಗನೆಂಬವ । ನಪರಿಮಿತಬಲಯುತವಿಚಿತ್ರನು ।
ಶಪಥವಿಡಿದೈತಂದರಾಗಲು । ಕುಪಿತರಾಗೀ। ॥150॥

ಭೇರಿಕಹಳೆಮದಂಗಪಣವೆ ನ । ಗಾರಿನಾನಾವಾದ್ಯಘೋಷದಿ ।
ಧಾರುಣೀಪತಿಸಮರಕೈದಿದ । ನಾರುಭಟಿಸೀ। ॥151॥

**ರಾಗ ಸಾಂಗತ್ಯ ರೂಪಕತಾಳ**

ಬಂದಾಭೂಪತಿರಣರಂಗದೊಳಗೆನಿಜ । ಸ್ಯಂದನದೊಳುಮಲಗಿರುವಾ ।
ಕಂದನಕಂಡು ಮೈದಡವುತ್ತ ದುಃಖಿಸು । ತಂದುದೇಹದೊಳುನಾಂಟಿರುವ। ॥152।

ಶಸ್ತ್ರವತೆಗೆದು ನೀರಿನಲೀಗಾಯವತೊಳ । ಸುತ್ತಿರಲಾಗಚೇತರಿಸೀ ।
ಹಸ್ತದಿಧನುಶರ ವಿಡಿದುಕಣ್ದೆರವುತಾ । ಲಿಂತೆಂದಘರ್ಜಿಸುತ। ॥153॥

ಎಲ್ಲೀಗೈದಿದಪುಷ್ಕಳಾಖ್ಯಕಾಣೆನುಜೀವಾ । ಗಳ್ಕರತೆರದಿಂದಲೀಗ ।
ಕೊಲ್ಲುವೆನೆನುತಿರ । ಲಿದಿರಲ್ಲಿಪಿತನಾ । ಕಂಡಲ್ಲೀಯೇಮಣಿದನುಪದಕೇ। ॥154॥

ಸುತನಂನುತೆಗದಪ್ಪಿ । ಅತಿಹರುಷದಿಸೇನಾ । ಪತಿಯೊಡನಿಂತೆಂದನಾಗಾ ।
ಚತುರತೆಯಿಂದೆಮ್ಮ । ಸೈನಿಕವನುಕ್ರೌಂಚಾ । ಕೃತಿಯಿಂದಾರಚಿಸೆನಲೆಂದಾ। ॥155॥

ಮುಂದೇಸುಕೇತು । ಪಾರ್ಶವಿಚಿತ್ರಾಂಗವಿಚಿತ್ರಾ । ಹಿಂದೇನಿಂದನುತಾಬೆಂಬಲಕೇ ।
ಅಂದವರುಗಳನೀಕ್ಷಿಸುತಕೇಳಲಿಕೆ । ಮತ್ತೆಂದಾಸು ಮಂತಭೂಪರೊಳು। ॥156॥

**ರಾಗ ಸೌರಾಷ್ಟ್ರ ಆಟತಾಳ**

ಚಕ್ರಾಂಕಪುರವರಾಧೀಶಸುಬಾಹುಕ । ವೀರನೀತ ।
ಶಂಖಚಕ್ರಧರನಭಕ್ತಪರಮಪುಣ್ಯಾತ್ಮಕ । ವೀರನೀತ। ॥157॥

ದುರ್ಮಾರ್ಗರಹಿತದುಷ್ಕರ್ಮರಶೀಕ್ಷಕ । ವೀರನೀತ ।
ಸತ್ಯಧರ್ಮದಿಪ್ರಜೆಪರಿವಾರವಸಲಹು । ಧೀರನೀತ ॥158॥

ಸಂಗರಶೂರಪರಾಕ್ರಮನಾಗಿಹ | ವೀರನೀತಾ
ರಣರಂಗದೊಳರಿಗಳ | ಜಯಿಸುವ ಸುಭಟನು | ವೀರನೀತಾ| ||159||

ಭೂತಳಧಿಪರೊಳುಖ್ಯಾತನೆಂದೆನಿರೊಸುವ | ವೀರನೀತ |
ಸುಮಹಾತಿಶಯದಿರಾಜನೀತಿಯಿಂದಿರುವನು | ವೀರನೀತ| ||160||

**ಭಾಮಿನಿ**

ಧಾರುಣೀಪತಿಕೇಳುಕೋಟೆಯ |
ವೀರನನುಜಯಿಸುವರೆನಮ್ಮಯ |
ಭೂರಿಬಲದೊಳುಲಕ್ಷ್ಮಿನಿಧಿ | ಹೊರ ತಾಗದನ್ಯರಲೀ |
ತಾರತಮ್ಯದಿಅರಿತುಕಾದುವ ವೀರರಿಗೆಪೇಳೆನಲುಕೇಳುತ |
ಮಾರಮಣಶ್ಯಾಲಕನು ಬಂದಿಂ | ತೆಂದಶತ್ರುಹಗೇ| ||161||

**ರಾಗ ಕೇತಾಳಗೌಳ ಝಂಪೆತಾಳ**

ಮಿತ್ರಕುಲಜಾತಕೇಳು | ನಿನೊಡನೆ | ವಿಸ್ತರಿಪೆನಾನೀಗಳು |
ಶತ್ರುಗಳಜಯಸಲೆಂದು | ಮನದೊಳಗೆ | ವ್ಯರ್ಥಚಿಂತಿಸದಿರಿಂದು| ||162||

ಕ್ರೌಂಚಾಕೃತಿಯಸೈನ್ಯವ | ಗೆಲಲುನಿರ್ವಂಚನೆಯೊಳ ಭಾರ್ಗವಾ |
ಮುಂಚೆಕಲಿಸಿಹ | ನುಎನಗೇ | ಬರಿದೇನೀಚಂಚಲಿಸಲ್ಯಾಕೆಹೀಗೇ| ||163||

ಅನುಮಾನವ್ಯಾತಕಿದಕೇ | ನೇಮವನು | ಯನಗಿತ್ತುಕಳುಹುಧುರಕೇ |
ಘನಪರಾಕ್ರಮಿಗಳನ್ನೂ | ಜಯಿಸುವೆನು | ರಣದೊಳಗೆ ಕೇಳುನೀನು| ||164||

ಎಂದನುಡಿಯನುಕೇಳುತ | ಚಿತ್ತದೊಳ | ಗಂದುಹರುಷವತಾಳುತಾ |
ಚಂದದಲಿಶತ್ರುಘ್ನನಾ | ಪೋಗಿಬಾ | ರೆಂದುನೇಮವನಿತ್ತನು| ||165||

**ವಾರ್ಧಕ**

ವರಮುನಿಪಲಾಲಿಸೈಲಕ್ಷ್ಮಿನಿಧಿಯಂಬಳಿಕ |
ಧುರಕೆಪೊರಡುತ್ತಿರಲುಪುಷ್ಕಳನುಸಹಿತಾಗ |
ಪರಿಪರಿಯಸೇನಾ | ಸಮೂಹಬೆಂಬಲಕೈದೆ | ನಾನಾಸುವಾದ್ಯದಿಂದಾ ||
ಪರಮವಿಭವದೊಳಾಗ ಶತ್ರುಘ್ನರಥವೇರಿ |
ಬರತಿರಲುಯಿತ್ತ| ಲಕ್ಷ್ಮಿನಿಧಿಯುಸುಕೇತುವನು |
ಕರದುಚಾಪವನುಜೇಂಗೈದುಕೋಪದೊಳೆಂದ | ನುರುಪರಾಕ್ರಮದಿಂದಲೀ| ||166||

**ರಾಗ ಪಂತುವರಾಳಿ ಮಟ್ಟೆತಾಳ**

ಯೆಲೆಸುಕೇತುರಣದೊಳಿದಿರುನಿಲಲುಬಂದೆಲಾ |
ಜಲಜನಾಭನಶ್ವವೆಂದುತಿಳಿಯದಾದೆಲಾ ||

ತಳುವದೀಗಕೊಟ್ಟುಮರೆಯಹೋಗಲುನಿನ್ನನೂ ।
ಒಲಿದುರಕ್ಷಿಸುವೆನೆನಲ್ಕೆಪೇಳ್ದನಾತನು। ||167||

ಕ್ಷತ್ರಿಕುಲಜರೆಂಬಪರಿಯನರಿಯದೀಗಳು ।
ವ್ಯರ್ಥವಾಗಿನುಡಿಯಲ್ಯಾಕೆಕೇಳುರಣದೊಳು ।
ಸತ್ಯವೀರ್ದರೆಂಮಗೆಲಿದುಬಿಡಿಸುಹಯವನು ।
ಚಿತ್ತದೊಳಗೆಗೈಹಿಸಿನೋಡೆನುತ್ತಲೆಚ್ಚನೂ। ||168||

ಎಸೆವಶರವಲಕ್ಷುಮಿನಿಧಿಯುನಡುವೆತುಂಡಿಸೇ ।
ವಿಶಿಖವಾಸುಕೇತುವುರಕೆನಾಂಟಿಕೀಲಿಸೇ।
ವ್ಯಸನಹಿಡಿದುಪ್ರತಿಶರೌಘದಿಂದಲೆಸೆಯಲು ।
ಉರಗಬಾಣಬಂದುಲಕ್ಷುಮಿನಿಧಿಗೆತಾಗಲು ||169||

ಬಂದುತಾಗಿತಾಗಲಕ್ಷುಮಿನಿಧಿಯದೇಹಕೇ ।
ಕುಂದದಾತಬದಲುಶರಗಳಿಂದನಿಮಿಷಕೇ ।
ಸ್ಯಂಧನವನುಹಾರಿಸಲಿಕೆನಪನಸಹಭವಾ ।
ಸಂಧಿಸುತ್ತಲೆಸದರೋಷದಿಂದಲಸ್ತ್ರವಾ । ||170||

**ವಾರ್ಧಕ**

ಮುನಿಪಕೇಳ್ಳೆಬಳಿಕ ಶರಹತಿಯೊಳಾಸು । ಕೇ
ತನರಥವುಸಾರಥಿಯು । ಸಹಿತಿಳಿಗೆಬೀಳಲಿಕೆ ।
ಘನಪರಾಕ್ರಮದಿ ಪಥವಿಡಿದುನಿಲ್ಲಲಿಕಂಡು ಲಕ್ಷುಮೀನಿಧಿ ಕಾಣುತಾ ||
ಮನದೊಳಗೆರೋಷವನು ತಾಳ್ದುಗದೆಗೊಳುತಲಾ ।
ಕಣನೊಳಗೆಮಲ್ಲ । ಯುದ್ಧವನೆಸಗುತಿರಲುನೃಪ ।
ನಣುಗಚಿತ್ರಾಂಗಶರಜಾಲದಿಂ । ಕೆಡಹುತಿರೆತಡದನಾಪುಷ್ಕಳಾಖ್ಯ। ||171||

**ರಾಗ ನಾದನಾಮಕ್ರಿಯೆ ಮಟ್ಟೆತಾಳ**

ಧೀರಪುಷ್ಕಳಾ । ಕ್ರೂರಶರಗಳಾ ।
ಧಾರುಣೀಶನಣುಗಗೆಸೆದುತೇರುಹಯಗಳಾ ||172||

ಹಾರಿಸುತ್ತಲೀ । ಸಾರಿಭರದಲೀ ।
ಮೂರುಭಾರಿಸುಳಿದುಬೀಳೆಧಾರುಣೀಯಲಿ ||173||

ಬಳಿಕನಪಸುತಾ । ಮುಳಿದುಕನಲುತಾ ।
ಸೆಳದಬಾಣವೆಸೆಯೆಪುಷ್ಕಳನವರರಥಾ। ||174||

ಹಾರಿತಾಗಳೂ । ತೇರುಹಯಗಳೂ।
ಭೋರವಿಳೆಗೆಬೀಳಲಾಗಳಾರುಭಟೆಯೊಳೂ। ॥175॥

**ಭಾಮಿನಿ**

ಬಳಿಕಪುಷ್ಕಳನೆಂದನಿನ್ನಯ ।
ತಲೆಯಕೊಳದಿರೆಪಿಡಿದಬಾಣದಿ ।
ಸಲೆಪತೀ ವ್ರತೆಯರಿಗೆ ಅಳುಪಿದಪಾತಕವುತನಗೇ ।
ತಳುವದಾಚಿತ್ರಾಂಗನುಸುರಿದ ।
ಯಲವೊನಿನ್ನಸ್ತ್ರವನುತುಂಡಿಸ ।
ದುಳಿದರೇಕಾದಶಿಯ ಮೀರಿದ ಪಾಪ ॥176॥

**ವಾರ್ಧಕ**

ಎನಲುಕೇಳುತಲುಗ್ರ ಕೋಪದಿಂತಾಪದಿಂ ।
ಕನಲಿಪುಷ್ಕಳಶರವ । ಹೂಡುತಂಮೋಡುತಂ ।
ಕಿನಿಸಿನಿಂದೆಸೆಯಲ್ಕೆ । ಕಂಡುಚಿತ್ರಾಂಗ ಪ್ರತಿ । ಯಸ್ತ್ರದಿಂತುಂಡಿಸಿದನು ।
ಕಣೆಯಿಂದತುಂಡಿಸಲು ಅರ್ಧಭೂಮಿಗೆಬೀಳೆ ।
ಬಳಿಕಮೂಲರ್ಧ । ಚಿತ್ರಾಂಗನಶಿರಂಗಳಂ ।
ಮರುಳಿಭೇದಿಸಿಕಡದು । ದೇನೆಂಬೆನದುಭತವ ಮುನಿಪಕೇಳಚ್ಚರಿಯನೂ। ॥177॥

**ವೃತ್ತ**

ಕಾಣುತ್ತಾಗಸುಬಾಹುನಪಾಲಕ ।
ಕ್ಷೋಣಿಯೊಳೊರಗಿದನೇನೆಂಬೆಂ ।
ವೀರಕುಮಾರನಶಿರವನುಮುದ್ದಿಸಿ ।
ಭೂರಿಶೋಕಾಗ್ನಿಯೊಳಿಂತೆಂದಂ। ॥178॥

**ರಾಗ ನೀಲಾಂಬರಿ ಆದಿತಾಳ**

ಹರಹರಾ ಈಸಮರದೊಳಗೆ । ತರಳನೀನ್ನೈತಂದೂ ।
ಧುರದಿಪುಷ್ಕಳನ್ನಾಶರಕೇ । ಗುರಿಯಾಗಿನೀನಿಂದು ॥179॥

ಹರಣವಳಿದುಪೋದುದ್ಯಾಕೇ । ಪರಿಯೊಳೆಮ್ಮನಗಲೀ ।
ಕೊರತೆಯಿಂದಲೆಂತುನಿನ್ನ । ಮರೆತುನಾಜೀವಿಸಲೀ। ॥180॥

ಚಂದ್ರಬಿಂಬವನ್ನುಪೋಲ್ವ । ಕಂದನಿನ್ನಾಮೊಗವು ।
ಕಂದಿಕಾಂತಿಯಡಗಿತ್ಯಾತ । ಕಿಂದೆನ್ನಾಸತ್ಪಾತ್ರಾ। ॥181॥

ಸುಂದಾರಾಂಗ ನಿನ್ನಸತ್ವಾ | ದಿಂದಲಾನೀವರೆಗೆ |
ಚಂದದೀರಾಜ್ಯವಾನಾಳ್ದೆ | ಮುಂದಿನ್ಯಾರುನಮಗೇ ||182||

ಅಣ್ಣದಮನ | ಮೃಗಬೇಟೆಗೇ | ಮಿಣ್ಣನೆತಾಪೋಗೀ |
ತನ್ನಾಶೌರ್ಯಗೀತುರಗಾ | ವನ್ನು ಕಟ್ಟಲಾಗೀ| ||183||

ಚೆಣ್ಣನಿಂನಾ ಮರಣವನ್ನೂ | ಕಣ್ಣಾರೇನಾನೋಡಿ |
ಇನ್ನೆಂತುಬಾಳಲಿನಾನೂ | ಪುಣ್ಯಾಹೀನನಾಗೀ| ||184||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇಂತುನಾನಾಪರಿಯೊಳಾಭೂ | ಕಾಂತಶೋಕಿಸುತಿರಲು ಕಂಡ |
ತ್ಯಂತಕೋಪದಿನಪಸುತರುಸಲೆ | ಪಂಥವಿಡಿದೂ| ||185||

ಸುತದಮನನುವಿಚಿತ್ರಸಹಿತಲೆ | ಪಿತನಚರಣಕೆಮಣಿದುಪೇಳಿದ |
ರತಿಪರಾಕ್ರಮರಾಗಿನಾವಿ | ರೆವ್ಯಥೆಯಿದೇನೈ| ||186||

ಮಡಿದಚಿತ್ರಾಂಗನುತವಾತ್ಮಜ | ಪಡೆದವೀರಸ್ವರ್ಗವನು | ನೀ
ಬಿಡುಮನೋಚಿಂತೆಯನುಯುದ್ದವ | ತೊಡಗಿಸಿನ್ನು| ||187||

ಎಂದೊಡಂಬಡಿಸಲ್ಕೆಕೇಳುತ | ಲಂದುಶೋಕವನುಳಿದುಹರುಷದಿ |
ಸ್ಯಂದನವನಡರುತಲಿ ರಣಕೈ | ತಂದರಾಗಾ| ||189||

**ಭಾಮಿನಿ**

ಅತ್ತ ದಮನಾದಿಗಳುಸಮರದಿ |
ಶತ್ರುಹನಸೈನ್ಯದೊಳುಕಾದಲಿ |
ಕಿತ್ತಸೇನೆಗಳೊರಗೆಬಳಿಕ ಸ | ಮೀರಸುತಬರಲೂ |
ಪಥ್ವಿಪಾಲಸುಬಾಹುವಾತನ |
ಹತ್ತಿರಕೆನಡೆತಂದುತನ್ನಯ |
ಚಿತ್ತದಲಿನಸುನಗುತ ಕೋಪಿಸು | ತೆಂದನವನೊಡನೇ| ||190||

**ರಾಗ ಸಾರಂಗ ಅಷ್ಟತಾಳ**

ಕಪಿಯೇನೀನಾರೆಂತೆಬುದೆನ್ನೊಳು | ಪೇಳು | ಕುಪಿತದ ಮಾತಲ್ಲವೀಗಳು |
ಕಪಟದೊಳೆಮ್ಮಚಿತ್ರಾಂಗನ ಕೊಂದ | ಚ | ಪಳನಾರೆಂದೆನಲಾಕ್ಷಣ| ||191||

ಭೂತಾಳಧಿಪಗೆಂದನಾತನು | ಕೇಳು | ವಾತಕುಮಾರನಾಹನುಮನು |
ಘಾತಿಸಿದವನಿನ್ನ ಮಗನನು | ವಿ | ಖ್ಯಾತಪುಷ್ಕಳನೆಂಬವೀರನು ||192||

ಎಲ್ಲಿಹನವನೆಂಬುದೀಗಳು | ನೀನು | ಸೊಲ್ಲಿಸಲೀಕ್ಷಣರಣದೊಳು |
ಕೊಲ್ಲುವೆನೆನಲುಪ್ರತಾಪದಿ | ಪೇಳ್ದ | ಫುಲ್ಲನಾಭನದೂತಕೋಪದೀ ||193||

ತುರಗಪಾಲಕರಕ್ಷಣೆಗೆಂದೂ | ಬಂದು | ದರಿಯದಾದೆಯಲಾ ಶತ್ರುಹನಿಂದು |
ಅರಿಗಳೆಲ್ಲಿರನುತಾಜಯಿಸುವ | ನಿಮ್ಮ | ಧುಪರಾಕ್ರಮವನ್ನುನಿಲಿ | ಸುವಾ ||194||

ಎಲವೊಕ್ಷತ್ರಿಯ ಕುಲಜಾತರು | ನಾವು | ಸರಿವೆವೆರಣದಿಸಮರ್ಥರು |
ಮರುಳು ಕಪಿಯೆನೀನಗ್ಯಾಕೆಂದೂ | ಯೀಗ | ತೆರಳುಪುಷ್ಕಳನನ್ನು ತೋರೆಂದೂ| ||195||

ಹುಲುನಪರಾಮ ಸೈನ್ಯವನಿಂದು | ನೀನೂ | ಕೆಡದ ಕಾರಣಬಂದೆ ಕೇಳೆಂದು
ಕಲಹದಿನಿನ್ನದೇಹವನಿಂದು | ನಾನು | ಕೆಡಹದಿದ್ದರೆಹನುಮನಲ್ಲೆಂದು| ||196||

**ರಾಗ ಪಂತುವರಾಳಿ ಮಟ್ಟೆತಾಳ**

ಎಂದಮಾತನೂ | ಕೇಳು | ತಂದುಜನಪನು |
ಕುಂದದಾಗಪರ್ವತಾಸ್ತ್ರದಿಂದಲೆಸದನು| ||197||

ಬರುವಶರವನು | ಪಿಡಿದು | ಮರುತಜಾತನು |
ಕಂದಿಮುರಿದುಚೂರ್ಣಗೈದುತುರಗರಥವನು| ||198||

ಬಾಲತುದಿಯೊಳು | ಸುತ್ತಿ | ಮೇಲಕೆಳೆಯಲು |
ಜೋಲುತಿರಲು ಕಾಣುತಾ ನಪಾಲನಾಗಳೂ ||199||

ಯೆಸೆಯೆಬಾಣವಾ | ಬಿಂದುಮುಸುಕೆಬಾಣವಾ |
ಬಿಸುಡೆರಥವನಪತಿಯಚ್ಚಪೊಸಶರವುಘವಾ| ||200||

**ವಾರ್ಧಕ**

ಕಣೆಯಹತಿಯಿಂದಾಗಮಾರುತಿಯು ಕೋಪದಿಂ |
ಜನಪಾಲನುರಕೆಪಾದದೊಳೊದೆಯೆಮೂರ್ಛಿಸಲು |
ಇನಕುಲೇಶನುಸರಯುತೀರದೊಳುಯಾಗ ಶಾ | ಲೆಯಲಿದೀಕ್ಷೆಯನುತಾಳ್ದು ||
ಮುನಿವರರನೊಡಗೊಂಡು ಹೋಮಿಸುತಲಿರುತಿಹುದ |
ಕನಸಿನಲಿಕಾಣುತೆಚ್ಚರ್ತುಸಂತೋಷದಲಿ |
ತನುಪುಳಕನಾಗುತುಬ್ಬೇರಿಭಕ್ತಿಯೊಳಾಗ ಚಿನುಮಯನಧ್ಯಾನಿಸಿದನೂ| ||201||

ಜಯರಘುಕುಲಾಧೀಶ ಸಕಲಸಜ್ಜನಪೋಷ |
ಜಯಸೂರ್ಯಸಂಕಾಶದೈತ್ಯವಂಶವಿನಾಶ |
ಜಯತುಸೀತಾಕಾಂತನಿಶ್ಚಿಂತಗುಣವಂತ ಜಯಜಯತು ರಾಮಚಂದ್ರಾ |
ಜಯತುಸುಂದರಗಾತ್ರ ಅಮರಕುಲನುತಿಪಾತ್ರ |

ಜಯಜಯತುಕಮಲಾಕ್ಷಭಕ್ತಜನಸಂರಕ್ಷ ।
ಜಯಜಯಚಿದಾಭಾಸಚಿನುಮಯಚಿದಾಕಾಶ ಜಯವೆಂದನಾಭೂಪನೂ। ॥202॥

**ರಾಗ ಕೇತಾರಗೌಳ ಆದಿತಾಳ**

ಎಂದುಭಕ್ತಿಯೊಳುಸಂಸ್ತುತಿಸುತ್ತಲಾನಿಜ । ನಂದನದಮನನೂ ।
ಚಂದದಿಂಕರೆದತಿಹರುಷದಿಂದಾಗ ಸಾ । ನಂದದೊಳುಸುರಿದನು ॥203॥

ಕೇಳಾನುಮೂರ್ಛಿತನಾಗಿಮಲಗಿರೆ । ವಿಮಲಸ್ವಪ್ನವಕಂಡೆನು ।
ಕಮಲನಾಭನುಯಾಗದೀಕ್ಷೆಯನಾಂತು ಸಂ । ಭ್ರಮದಿಂದಕುಳಿತುದನು। ॥204॥

ವಂದಾರಕಾದಿಮುನೀಂದ್ರರುಸಹಿತಲ್ಲಿ । ಬಂದುನಮಿಸುತಿಹುದ ।
ಕಂದರ್ಪಶತಕೋಟಿತೇಜದಿ ಶ್ರೀರಾಮ । ಚಂದ್ರತಾನಿರುತೀರ್ದನು। ॥205॥

**ರಾಗ ಸೌರಾಷ್ಟ್ರ ರೂಪಕತಾಳ**
ಹಿಂದೊಮ್ಮೆ ತೀರ್ಥಯಾ । ತ್ರೆಗೆನಾನುಪೋಗಿರ । ಲ್ಕಕಂದುಕಾಂತಾರ ಮಧ್ಯದಲೀ ।
ಸಿಂಧುಶಯನನನ್ನು । ಕಂದೆರೆದು ನೋಡದೆ ವಂದಿಸದೆ ನಾನಿರ್ದೆಬಳಿಕ ॥206॥

ಮುನಿಗಳೊಡನೆತಾನು । ವಿನಯದಿಂಪೇಳಿರೆ । ಮನದಗರ್ವದಿನಾವಾದಿಸಲು ।
ಚಿನುಮಯಾತ್ಮಕನಾಮೇಲೆನಗೆವಿಸ್ಮೃತಿಯಾಗ । ಲೆನುತಾಶಾಪಿಸುತಕೋಪಿಸಲು। ॥207॥

ಬಳಿಕಾಪ್ರಾರ್ಥಿಸೆಲೆನ । ಗೊಲಿದುಪೇಳ್ದನುಮುನಿ । ಜಲಜನೇತ್ರನುಮಖವೆಸಗೀ ।
ಚಲುವಯಾಗದಹಯಾ । ಬರಲುವಾಯುಜನಿಂದ । ಕಲಹಾದೊಳಾನುಮೂರ್ಛಿಸಲು ॥208॥

ರಾಮನಕನಸಿಲಿ । ಪ್ರೇಮದೊಳೀಕ್ಷಿಸ । ಲಾಮೇಲೆಸ್ಮೃತಿಯಾಗಲೆನುತ ।
ಆಮುನಿಯನಗಿಂತು । ನೇಮವಿತ್ತುದರಿಂದ । ನಾಮರೆತೆನುರಘುಕುಲವರನ। ॥209॥

**ವಾರ್ಧಕ**
ಕಂದಕೇಳಾರಾಮಚಂದ್ರನಶ್ವವನೀಗ ।
ಛಂದದಿಂಶಂಗರಿಸಿನಾನಾಸುವಾದ್ಯಂಗ ।
ಳಿಂದಕಾಣಿಕೆಗೆನವರತ್ನದಾಭರಣ ಸಹಿತಾತರುವದೀಗೆಂದನೂ। ॥210॥

ತಂದೆಯಭಿಮತವರಿತು । ಮನೆಗೈದಿತುರಗಸಹ ।
ತಂದಲ್ಲಿಬರಲು ಕಾಣುತತೋಷದಿಂತನ್ನ ।
ಬಂಧುಗಳನೊಡಗೊಂಡು ಶತಘ್ನನೆಡೆಗೈದಿ ನಮಿಸಿಮತ್ತಿಂತೆಂದನೂ। ॥211॥

**ರಾಗ ನವರೋಜು ಆದಿತಾಳ**
ಕೇಳುಶತಹರಾಯ । ಕಪಾಳುರಾಘವಪ್ರಿಯ ।
ಬಾಲದಮನದು : ಶೀಲದೊಳೆಸಗಿದ । ಖೂಳತನವನೀಪಾಲಿಪುದೀಗಳೂ। ॥212॥

ಮೃಗಬೇಟೆಗೆಂದೆನುತ | ವಿಗಡಮಾರ್ಬಲಸಹಿತ |
ಸುಗುಣದಮನುತಾಸೊಗಸಿಲಿಪೋದವ | ಜಗಳವಗಂಟಿಕ್ಕಿದನೀತೇರದಲೀ| ||213||

ಧುರದೊಳಗಾನುಮೂರ್ಛಿಸಲು | ಶ್ರೀ | ಹರಿಯುಸಾಕೇತದೊಳು |
ತುರಗದಯಾಗವವಿರಚಿಸುತಿರಲೀ | ಪರಿಯನಿರೀಕ್ಷಿಸುತರಿತೆನುಸ್ವಪ್ನದಿ| ||214||

ಋತ್ವಿಜರುಋಷಿವರರು ಸುತ್ರಾಮಾದ್ಯನಿಮಿಷರೂ |
ಪಥ್ವೀಕರಬಲಸಹಿತಲೆ | ಶ್ರೀಪುರು ಷೋತ್ತುಮನಿರುವ ವಿ | ಚಿತ್ರವಕಂಡೆನೂ| ||215||

**ರಾಗ ಸೌರಾಷ್ಟ್ರ ಅಷ್ಟತಾಳ**

ಕೇಳುಸುಬಾಹುಕನೀನು | ಈಗ | ಪೇಳುವೆನಿನ್ನೊಡನಾನು |
ಬಾಲದಮನಪುರವಾಳಲಿದನು | ತವ | ಪಾಳಯಸಹಬರಲೇಳುನಮ್ಮೊಡನೀಗಾ| ||216||

ತುರಗದಬೆಂಬಳಿವಿಡಿದೂ | ನೀನು | ಬರಲುನಪರನೆಲ್ಲಗೆಲಿದು |
ಹರುಷದಿಸಾಕೇತ ಪುರಕೈದಿರಾಮನ | ದರುಶನಗೈಯ್ಯಲು ಪರಿತೋಷವಪ್ಪುದೂ| ||217||

ಎಂದುದಕೇಳುತ್ತಲಾಗ | ನಿಜ | ಮಂದಿರಕೈದತಿಬೇಗ |
ಬಂದುರಣದಿಬಿದ್ದ | ಕಂದನದೇಹವ | ನಿಂದುನೋಡುತಶೋಕದಿಂದಲಾಕ್ಷಣದೊಳು| ||218||

**ವಾರ್ಧಕ**

ಚಿತ್ತದೊಳಗಾ ರಾಮಚಂದ್ರನಂ ಧ್ಯಾನಿಸುತ |
ಪುತ್ರಶೋಕವನುನೀಡಾಡಿಸು ಜ್ಞಾನದಿಂ |
ಚಿತ್ರಾಂಗದೇಹವನು ಸಂಸ್ಕಾರಮಂಗೈದು | ವೂರ್ಧ್ವಕ್ರಿಯಾದಿಗಳನು |
ವಿಸ್ತರಿಸುತಾಬಳಿಕ ಹಿರಿಯಸುತದಮನಂಗೆ |
ಸ್ವಸ್ಥದಿಂಪಟ್ಟಾಭಿಷೇಚನವಗೈವುತ್ತ |
ಉತ್ಸಹದಿಸೇನಾಸಮೂಹಸಹಿತೈತಂದ ಪಥ್ವೀಶನಾ ಸುಬಾಹು ||219||

**ರಾಗ ರೂಪಕತಾಳ ಸಾಂಗತ್ಯ**

ಬಂದನುಬಳಿಕಸುಬಾಹುವಕಾಣುತ್ತ | ಯಿಂದೀರೇಶನ ಸಹಭವನ |
ಚಂದದಿಯಾಗದಶ್ವವು ಸಹಿತಲೆಸೇನಾ | ವಂದವನೊಡಗೊಂಡುನಡೆಯೇ| ||220||

ಇತ್ತಲಾಯಾಗದಶ್ವವು ನಡೆತರೆಬ್ರಹ್ಮ | ವರ್ತದಬಳಿಗೆಕಂಡಾಗ |
ಪಥ್ವೀಪಾಲಕರೆಲ್ಲರೈತಂದು ಕಾಣಿಕೆ | ಯಿತ್ತಿದಿರ್ಗೊಳುತಿರಲಾಗ ||221||

ಬಂದವನಿಪರಮನ್ನಿಸೆಸೇನೆಸಹಿತಲಾ | ಂದದಿಶತ್ರುಹನಂದು |
ಚಂದದಿಂದಿರೆಶೇಷನುಸುರೀದ ಋಷಿಗಳಿ | ಗಂದುವಿಸ್ತಾರದಿಕಥೆಯಾ| ||222||

**ಎರಡನೆಸಂಧಿ ಪ್ರಾರಂಭವು**

**ವಾರ್ಧಕ**

ಮುನಿಪಕೇಳ್ಳೈನೀನು ಮುಂದಣಕಥಾಮತವ |
ಬಲಸಹಿತಶತ್ರುಘ್ನ ನಡೆಯೆತೇಜಃಪುರಕೆ |
ಜನಪಾಲಮಣಿಸತ್ಯವೇನನೆಂಬವನಿಂಗೆ ಚರರೈದಿಪೇಳೆಬೇಗ ||
ತನಯರುಕ್ಮನಿಗೆಪಟ್ಟವಗಟ್ಟಿತೋಷದಿಂ |
ಯಿನಕುಲೇಶನಪಾದ | ಕೆರಗಿಕಾಣಿಕೆಯಿತ್ತು
ವಿನೆಯದಿಂಬಹೆನು ಬೆಂಬಲಕೆಂದುಪೇಳಲಿಕೆ |
ಮನ್ನಿಸುತಪೊರಮಟ್ಟು ಮುಂದೆಬರಲೂ| ||1||

**ರಾಗ ಕಾಂಭೋಜಿ ಝಂಪೆತಾಳ**

ಶತ್ರುಹನಸೇನೆಯೊಡನೈದೆವಿದ್ಯುನ್ಮಾಲಿ | ಧೂರ್ತರಕ್ಕಸನುಮಾಯಕದೀ |
ರಕ್ತದುರ್ಮಾಂಸಕೀವಿನಮಳೆಯಸುರಿಯೆ ಕಾ | ರ್ಗತ್ತಲೆಯುಕವಿಯೆ ಮಾರ್ಗದಲೀ| ||2||

ಸಿಡಿಲುಮಿಂಚಿನ ಶಬ್ದವಡಿಗಡಿಗೆಕೇಳಿಕಂ | ಗೆಡುತಸೇನೆಯುಭಯದೊಳಾಗಾ |
ಸಡಗರದೊಳಾಗಮಖತುರಗವನುಪಿಡಿದು ನಭ | ಕಡರಿದನು ದುರುಳನತಿಬೇಗಾ| ||3||

ಪಾತಾಳ ವಾಸಿಯಾಗಿರುವರಾವಣನಸಖ | ಧೂರ್ತರಕ್ಕಸನುವೈರದಲೀ |
ಸೃಷ್ಟಿಪಾಲಕರಾಮನಶ್ವವನುಪಿಡಿದೊದ | ಧೂರ್ತರಕ್ಕಸನುಮಾಯಕದೀ| ||4||

ಬಳಿಕಮಾಯಗಳಡಗುತಂಬರದೊಳಲ್ಲಿನಿ | ರ್ಮಲವಾಗಿಬೆಳಗುತಿರಲಾಗ |
ಚಲುವಯಾಗದಹಯವುಕಾಣದಿರೆಚಿತ್ತದಲಿ | ಕಳವಳಿಸುತಿಂತೆಂದರವರು | ||5||

**ರಾಗ ಆನಂದಭೈರವಿ ಏಕತಾಳ**

ವಿಶ್ವವಂದ್ಯರಾಮಚಂದ್ರ | ನಶ್ವಮೇಧಹಯವಿನ್ನೆಲ್ಲಿ |
ಪೋದುದೋ | ಮತ್ತೇ | ನಾದುದೋ| ||6||

ಪರಿಕಿಸಿನೋಡಲುಮುಂದೆ | ತುರಗದಹೆಜ್ಜೆಯಕಾಣೆ |
ವೆಂದರೂ | ಬಲು | ನೊಂದರು | ||7||

ರತ್ನದಾಸೆಯಿಂದಹಯವಾ | ಯತ್ನದಿಂದವಂಚಿಸಿಯೆ |
ಪೋದರೋ | ಮೋಸ | ಗೈದರೋ| ||8||

ಇಂತೆಂದುತಮ್ಮೊಳುತಾವೆ | ಚಿಂತಿಸುತ್ತೋರ್ವರನೋರ್ವ |
ಮಾತನೋಡುತ್ತ | ||9||

**ಭಾಮಿನಿ**

ಮೌನಿವರಕೇಳಾಗತುರಗವೆ ।
ಕಾಣದಳಲುತಲಿರಲಿಕಭ್ರದಿ ।
ದಾನವೇಂದ್ರನು ತನ್ನ ಸೈನಿಕವೆರಸಿ ರಥದೊಳಗೇ ।
ತಾನುಕುಳಿತಿರಲೀಕ್ಷಿಸುತಲಾ ।
ಸೇನೆಶತ್ರುಹಗುಸುರುತಿರಲಾ ।
ಭಾನುವಂಶಜವರಸುಮಂತ್ರನೊಳೆಂದನೀಹದನಾ। ॥10॥

**ರಾಗ ಮಾರವಿ ಏಕತಾಳ**

ಕೇಳುಸಚಿವಸುಮಂತ್ರನೀನಿದನು । ಪೇಳುವೆನಿನಗೆ ನಾ ಮನದಿತೋರ್ಪುದನು ।
ಬಂದಿಹದೈತ್ಯನಾರೆಂದರಿಯೆವುಸೇನಾ । ವಂದಸಹಿತಅಭ್ರದಿಂದಘರ್ಜಿಸುತವನೂ। ॥11॥

ಮಂದಮತಿಯುನಮ್ಮ । ತುರಗವತನ್ನಯ ।
ಸ್ಯಂದನದೊಳಗಿಟ್ಟು । ಮುಂದೆನಿಂದಿರುವನು। ।12॥

ದುರುಳನೀತನಗೆಲುವ । ಪರಿಯಕಾಣೆನುನಮ್ಮಾ ।
ವರಮಹಾಬಲದೊಳಾ । ರಿರುವರೆಂಬುದನು। ॥13॥

ಪರಿಕಿಸಿನೋಡೆನ । ಗರುಹೆನೆಕೇಳುತ್ತ ।
ಪರಿತೋಷದಿಂದಲಾ । ಮಂತ್ರೀತಾನುಡಿದನೂ। ॥14॥

**ರಾಗ ಮೆಚ್ಚುಗೌಳ ಅಷ್ಟತಾಳ**

ಲಾಲಿಸ್ಯೆರಘುಕುಲಜಾತನೇ । ಈಗ । ಪೇಳುವೆಸಮರವಿಖ್ಯಾತನೇ ।
ಖೂಳದೈತ್ಯರಗೆಲ್ವವೀರನು । ನಿಮ್ಮ । ಬಾಲಪುಷ್ಕಳನತಿಶೂರನು। ॥15॥

ವರಲಕ್ಷ್ಮಿನಿಧಿಯುಸುಬಾಹುಕ । ಮತ್ತೆ । ಮರುತಜನಸುಮುದನಪಾಲಕಾ ।
ಧುರದೊಳುಯಿವರುಯಿಚೇಕ್ಷಣಾ । ರೆಂಬು । ದರಿತುಪೇಳಿದೆನಿನ್ನೊಳೀಕ್ಷಣಾ। ॥16॥

ಮಂತ್ರಿವರನಮಾತಕೇಳುತ್ತಾ । ನೃಪ । ನಂತರಂಗದಿತೋಷತಾಳುತ್ತ ।
ಮುಂತೀರ್ಪಸುಭಟರನೋಡಲು । ಬಂದು । ನಿಂತೆಂದಪುಷ್ಕಳನಾಗಳು । ॥17॥

**ರಾಗ ಕೇತಾರಗೌಳ ಆಟತಾಳ**

ತಂದೆಕೇಳೀಧೂರ್ತಗಿಂದು ಸೋತರೆಶಿತಿ । ಕಂಧರನಿಗೆ ಹರಿಗೆ ।
ನಿಂದಿಸಿಭೇದವನೆಣಿಸಿದ ಪಾತಕ । ಬಂದಪುದೆನಗೆಂದನೂ। ॥18॥

ಮೇದಿನಿಸುತೆಯಗ್ರಜನುಪೇಳ್ದ ವಿಮುಖಿತ | ನಾದರೆಯಾದೈತ್ಯಗೇ |
ವೇದನಿಂದನೆಗೈದು ಕರ್ಮಬಹಿಷ್ಕೃತ | ನಾದವಿಪ್ರನಪಾಪವು| ||19||

ಅನಿಲಜನೆಂದನೀದನುಜನಗೆಲದಿರೆ | ಘನಕಪಿಲೆಯಕ್ಷೀರವ |
ವಿನಯದಿಂದುಂಡಶೂದ್ರನಪಾಪತನಗಹು | ದೆನಲೆಂದವಾಯುಜನು| ||20||

**ರಾಗ ಮಾರವಿ ಏಕತಾಳ**

ಈ ಪರಿಯಲಿಲಕ್ಷ್ಮೀನಿಧಿಪೇಳಲಿ | ಕಾಪವನಜಬಳಿಕ |
ಶ್ರೀಪತಿಯನುಜನ ಬಳಿಗೈದುಸುರಿದ | ತೋಷದೊಳೀತೆರದೀ| ||21||

ಬಿಡು ಬಿಡು ಚಿಂತೆಯಪೊಡವಿಪನೀಕೇಳ್ | ದಡಿಗಖಳಾಧಮನಾ |
ಬಡಿದುರುಳಿಸುವೆನುರಣದೊಳಗೀಕ್ಷಣ | ಕೊಡಿಸೆನಗಪ್ಪಣೆಯಾ| ||22||

ಲಂಕಾದ್ವೀಪದಿಕಂಡಿಹೆಪೂರ್ವದಿ | ಬಿಂಕದದಾನವರ |
ಶಂಕಿಸದಿರುನೀನೆನೆಕೇಳುತಖಳ | ಹೂಂಕರಿಸುತನುಡಿದ| ||23||

**ರಾಗ ಭೈರವಿ ಏಕತಾಳ**

ಕೇಳಿರೊಸುಭಟರುನೀವು | ಬಲು | ಗಾಳಗವೆಸಗಲುನಾವು |
ಸೋಲುವರಲ್ಲೆಯಿಹಕೇ | ಬೇ | ಗೇಳಿರೆನಿಜಮಂದಿರಕೇ| ||24||

ಪಾತಾಳದಲಿನಿವಾಸೀ | ಈ | ಭೂತಳವೆಲ್ಲವಜಯಿಸೀ |
ಘಾತಕವಿದ್ಯುನ್ಮಾಲಿ | ವೆಂ | ಬಾತಿಶಯದವೆಸರಿನಲೀ | ||25||

ಬಿಡೆನೀತುರಗವನಿಂದೂ | ಮುಂ | ದಡಿಯಿಡೆಕೊಲ್ಲುವೆಬಂದು |
ಕೊಡದಿರಿಪ್ರಾಣವನೀಗ | ನಾ | ನುಡಿದಪೆಕೇಳಿರಿಬೇಗ| ||26||

ಹಿಂದೆನ್ನಯಸಖನಾದ | ದಶ | ಕಂಧರದೈತ್ಯನಗೆಲಿದ |
ಮಂದಮತಿಯು ಭರದಲ್ಲೀ ನಾ | ಕೊಂದು ಕಳವೆಕ್ಷಣದಲ್ಲೀ| ||27||

**ರಾಗ ಸವಾ ಏಕತಾಳ**

ಎಂದುದಕೇಳುತಲಾಗತಿಧೈರ್ಯದಿ | ಬಂದನುಪುಷ್ಕಳ ಕೋಪದಲೀ |
ನಿಂದವನಿದಿರೊಳುಮೂದಲಿಸುತಲಿಂ | ತೆಂದುಸುರಿದನುಸಘಾಡದಲೀ| ||28||

**ರಾಗ ನಾದನಾಮಕ್ರಿಯ ಆಟತಾಳ**

ಖೂಳದೈತ್ಯನೆಕೇಳುನಿನ್ನೊಳು | ಸತ್ಯ | ದೇಳಿಗೆಯಿರಲೀಗಲೆಂನೊಳು |
ಕಾಳಗದೊಳಗೆ ತೋರಿಸುನೀನೂ | ಯಿಂತಾ | ಜಾಲಮಾತುಗಳಾಡಿಫಲವೇನೂ| ||29||

ಹಿಂದೆದಶಾಸ್ಯರಾಘವನೊಳು | ಕಾದಿ | ಹೊಂದಿದ ಬಲಸಹಿತಾಗಳು |
ಇಂದವನಶ್ವದನೆವದಲಿ | ನಿನ್ನ | ಕೊಂದೀಗಶತ್ರುಹಕ್ಷಣದಲ್ಲೀ| ||30||

ಎಂದುಶಕ್ತಿಯಬಿಡೆಪುಷ್ಕಳ | ಶರ | ದಿಂದತರಿವುತಾಗಲಾಖಳ |
ನಿಂದಿರುತೊಲಗದಿರೆನುತಲೀ | ಕೋಪ | ದಿಂದಪೊಡದನಾತನಾಗ| ||31||

ತರಿದುತ್ರಿಶೂಲವನಾಗಳು | ಪ್ರತಿ | ಶರವೆಸೆಯಲುಬಂದುತಾಗಲು |
ದುರುಳಮುದ್ಗರದಿಂದಪೊಡೆಯಲು | ಇಳ | ಗೊರಗಿದ ಪುಷ್ಕಳನಾಗಳು| ||32||

ಎದ್ದುಪುಷ್ಕಳಶರವೆಸೆಯಲು | ಖಳ | ನಿದ್ದಲ್ಲಿಗ್ಯೆವುತ್ತಲಾಗಲು |
ಬಿದ್ದುಮೂರ್ಛಿತನಾಗೆದನುಜನು ಬಂದ | ಸದ್ದಿಲ್ಲದಂತವನನುಜನೂ| ||33||

**ಭಾಮಿನಿ**

ಉಗ್ರದಂಷ್ಟ್ರನುಕಾಣುತಲೆ |
ನ್ನಗ್ರಜನರಥದೊಳಗೆತಾಕುಳಿ |
ತುಗ್ರತಾಪದಿಪುಷ್ಕಳನೊಳಿಂ | ತೆಂದಘರ್ಜಿಸುತಾ ||
ಶೀಘ್ರದಿಂಮುಂದೆಲ್ಲಿಗ್ಯೆದುವೆ |
ನಿಗ್ರಹವಮಾಡುವೆನೆನಲು | ಬಳಿ |
ಕುಗ್ರಭಾವದಿನಿಂತುಪುಷ್ಕಳಗೆಸೆದನಸ್ತ್ರವನೂ| ||34||

**ರಾಗ ಶಂಕರಾಭರಣ ಮಟ್ಟೆತಾಳ**

ಎಸದಶರಗಳೂ | ತಾಗ | ಲಸುರಖತಿಯೊಳು |
ಪೊಸತ್ರಿಶೂಲದೀ | ಪೊಡೆದ | ನಸಮಕೋಪದೀ| ||35||

ಶೂಲಹತಿಯಲೀ | ಮೂರ್ಛೆ | ತಾಳುತಿಳೆಯಲಿ |
ಬೀಳೆಭರತಜ | ರೋಷ | ತಾಳಿಪವನಜ| ||36||

ಎಂದನಾಗಳೂ | ಕೋಪ | ದಿಂದಖಳನೊಳು |
ಇಂದು ನಿನ್ನನು | ರಣದಿ | ಕೊಂದು ಕಳವೆನು| ||37||

ಎನುತಬಾಲದೀ | ಕನಲಿ | ಕರದಿಚರಣದಿ |
ದನುಜಬಲವನೂ | ತತು | ಕ್ಷಣದಿಗೆಲಿದನು| ||38||

**ಭಾಮಿನಿ**

ಮೌನಿವರ್ಯನೆ ಕೇಳುಹನುಮನು |
ಖೂಳದೈತ್ಯರಕುಲವಸವರಿದ |

ಬಾಲದಲಿಕ್ಕೈಕಾಲಿನಲಿಸದೆಬಡಿದನೇನೆಂಬೆ
ಭಾನುಕುಲಜರಮೆಚ್ಚಿಸಿದ ಸಂ ।
ಗ್ರಾಮದಲಿಕೊಳುಗುಳದೊಳೀತಗೆ ।
ಜಾಣರಿಲ್ಲೆಂದಮರತತಿ ಬೆರ । ಗಾಗಿನೋಡುತಿರೇ। ॥39॥

**ರಾಗ ದೇಶಿ ಅಷ್ಟತಾಳ**

ಇಂತುಸೇನೆಯಕೊಲುತಿರೆಮಾರತೀ ।
ದಂತಗಡಿವುತಉಗ್ರದಂಷ್ಟ್ರನು । ನಿಂತುಶೂಲವನೆಸದನೂ । ॥40॥

ಬರುವಶೂಲವ ಕಾಣುತ್ತ ಮಾರುತಿ ।
ಕರದಿಮುರಿಯಲುಬೆದರಿಮಾಯದಿ । ಸುರಿದಮಾಂಸದವಷ್ಟಿಯ। ॥41॥

ಪರ್ವತಂಗಳುಶಿರದರುಂಡಗಳಾಗ ।
ಪೂರ್ವಿಯಲಿಬೀಳಲ್ಕೆ ಕಾಣುತ । ಸರ್ವಸೈನಿಕಬೆದರಲೂ। ॥42॥

ರಾಮಚಂದ್ರನನೆನೆವುತ್ತರೆಲ್ಲರು ।
ಭಾನುವಂಶಜನನಂದುಮಿಗೆ । ನಾರಾಯಣಾಸ್ತ್ರವಬಿಟ್ಟನು। ॥43॥

ಮಾಯವೆಲ್ಲವು ಅಡಗಲಾರಘು ।
ರಾಯನನುಜನುಬಿಟ್ಟಶರದಲಿ । ಖೂಳಮೂರ್ಛೆಗೆಬೀಳಲು। ॥44॥

**ವಾರ್ಧಕ**

ಮತ್ತೆ ಕೇಳ್ಮೈಮುನಿಪಬಾಣಹತಿಯಿಂದಲಾ ।
ದೈತ್ಯಕಳವಳಿಸಲ್ಕೆಸೇನೆಮುರಿದುದಕಂಡು ।
ಧೂರ್ತವಿದ್ಯುನ್ಮಾಲಿಕೋಪದಿಂ ಶರವೆಸೆಯೆರಾಘವಾನುಜನುಬಳಿಕಾ ॥
ಪ್ರತ್ಯಸ್ತ್ರವೆಸೆಯೆನಾರಾಯಣಾಸ್ತ್ರವಬಿಡಲು ।
ಧೂರ್ತರಕ್ಕಸನಕರಗಳ ಕಡಿದುಕೆಡಹುತಿರೆ ।
ಧೂರ್ತದೈತ್ಯಾನುಜಂರೋಷದಿಂ ಶತ್ರುಘ್ನಗಿದಿರಾಗುತಿಂತೆಂದನೂ ॥45॥

**ರಾಗ ಕಾಂಭೋಜಿ ಮಟ್ಟೆತಾಳ**

ಅಗ್ರಜನಕೊಂದೆನೆಂದು । ಹಿಗ್ಗಬೇಡನಿನ್ನರಣದಿ ।
ನಿಗ್ರಹವನುಮಾಡದಿರಲು । ಉಗ್ರದಂಷ್ಟ್ರನೇ। ॥46॥

ಎಂದುಮುಷ್ಟಿಯಿಂದ ದೈತ್ಯ । ಬಂದುತಿವಿಯೆ ಶತ್ರುಹಾಖ್ಯ ।
ನಂದುರೋಷದಿಂದ ಶಕ್ತಿ । ಯಿಂದಲೆಚ್ಚನೂ। ॥47॥

ಬಾಣಹತಿಗೆಖಳನಶಿರವು | ಕ್ಷೋಣಿಯೊಳಗೆಬೀಳಲಂದು
ಯೇನನೆಂಬೆದೈತ್ಯಕುಲವ | ಹಾನಿಗೈದುದ| ||48||

**ವಾರ್ಧಕ**

ಮುನಿವರನೆಲಾಲಿಸೈ ದೈತ್ಯರಂಸಂಹರಿಸಿ |
ಘನಪರಾಕ್ರಮದಿಂದ ಯಾಗದಶ್ವವುಸಹಿತ |
ಜನಪಾಲಶತ್ರುಹನು ಮುಂದಕೈತಂದ ರಣ್ಯಕಮುನಿಗೆನಮಿಸಲಂದೂ ||
ಇನಕುಲೇಶನ ದರ್ಶನವಗೈಯ್ಯಬೇಕು |
ತಾನೆನೆಕೇಳಿನೆರವಾಹನದೊಳವನಕಳುಹಲ್ಕೆ |
ಚಿನುಮಯನನೋಡಿ ಸಾಯುಜ್ಯಪದವಿಯ ಪಡೆದನೇನೆಂಬೆನಚ್ಚರಿಯನೂ| ||49||

**ಭಾಮಿನಿ**

ಇತ್ತ ವಾಜಿಯು ಮುಂದಕೈತರ |
ಲುತ್ತುಮದ ಯಮುನಾನದಿಯ | ಮುಳು
ಗುತ್ತಹಯಪಾತಾಳಕೈದಲು ಕಂಡುನಾರಿಯರೂ |
ಚಿತ್ತದಲಿ ಸಂತೋಷದಾಳುತ |
ಪಥ್ವಿಪತಿಯಶ್ವವನುಕಟ್ಟಿರ |
ಲಿತ್ತ ಸೈನಿಕವ್ಯೆದಿ ತುರಗವೆ ಕಾಣದಳಲಿದರು| ||50||

**ರಾಗ ಮಧ್ಯಮಾವತಿ ಅಷ್ಟತಾಳ**

ಯಾಗದಶ್ವವುಮುಂದೆಬರುತಿರಲಾಗ | ರಾಘವಾನುಜಸಹಿತೈತಂದೆವೀಗ |
ಸಾಗಿಪೋಗಲುವಾಜಿಯೀನದಿಯೊಳಗೆ | ಅಗಲರಿಯದೆಂದುತೋರುವದೆಮಗೇ| ||51||

ನೆಲೆಯನರಿಯದೀಗಳೀನದಿಯಲ್ಲಿ | ಇಳಿದುಪೋಗಲುಮತ್ತೆನಡುಮಧ್ಯದಲ್ಲಿ ||
ಸುಳಿಯಲಿಸಿಕ್ಕಿತೋಮತಿಮೋಸದಲ್ಲೀ | ಮುಳುಗಿಪೋದುದೋಕಾಣೆಹಯವಿದರಲ್ಲೀ| ||52||

ಇಂತುತಮ್ಮೊಳುಮಾತನಾಡುತ್ತಲಾಗ | ಚಿಂತಿಸಿಶತ್ರುಹಗರು ಹಲುಬೇಗ |
ಮಂತ್ರಿಯಕರದುಸುರಿದನವನಂದು | ಕಂತುಜನಕನಶ್ವದಿರವಪೇಳೆಂದೂ| ||53||

**ರಾಗ ಘಂಟಾರವ ಅಷ್ಟತಾಳ**

ಎಂದುನುಡಿಯೆಶತ್ರುಹಾಖ್ಯನು | ಕೇಳುತ್ತಲಾಗ | ಚಂದದಿಂದಾಪೇಳ್ದಸಚಿವನು |
ಇಂದುನೀನೀವಾಜಿಗೋಸುಗ | ನೊಂದುಮನದಲಿಚಿಂತಿಸದಿರೈ |
ಮುಂದೆಯತ್ನವಗೈವಡುಸುರುವೆ | ನೊಂದುಪಾಯವಲಾಲಿಸೀಗಳು| ||54||

ತುರಗವೀ ನದಿಯೊಳಗೆ ಮುಳುಗುತ್ತ | ಪಾತಾಳಲೋಕಕೆ | ಸರಿಯೆನಾರಿಯರಲ್ಲಿಕಾಣುತ್ತ |
ಬರದಲಿಖಿತವನೋಡಿಚಿತ್ತದಿ | ಹರುಷಗೊಳುತಲೆಬಂಧಿಸಿಹರಾ |
ಪುರವರಕೆನೀನ್ನೈದಲೀಕ್ಷಣ | ತ್ವರಿತದಿಂದೀಕಾರ್ಯವಪ್ಪುದು | ||55||

**ಭಾಮಿನಿ**

ಎಂದನುಡಿಯನುಕೇಳುತಾ ರಘು |
ನಂದನನುಪುಷ್ಕಳಸಮೀರಜ |
ರಂದುಧೈರ್ಯದೊಳಾಗ | ಮುಳುಗಿದರಾಮಹಾನದಿಯಾ ||
ಮುಂದಕೈದಲುಕಂಡುನಾರೀ |
ವಂದಮನ್ನಿಸಿತುರಗವೀಯಲು |
ಬಂದುಸೈನಿಕರಿದ್ದೆಡೆಗೆ ಪೊರವಂಟರಲ್ಲಿಂದಾ| ||56||

**ದ್ವಿಪದಿ**

ವರಮಹರ್ಬಲಸಹಿತನದಿಯನುತ್ತರಿಸೀ |
ತುರಗದೊಡನೈತಂದರಾಗಲನುಸರಿಸಿ| ||57||

ದೇವಪುರಕಾಗಿಬರುತಿರಲುಮಾರ್ಗದಲಿ |
ಠೀವಿಯನದೇನೆಂಬೆಪರಮ ವಿಭವದಲೀ| ||58||

ಆಪುರಕೆವೀರಮಣಿಯೆಂಬನಪನಂದು |
ಗೋಪತಿಯಸತುಕರುಣದಿಂದಾಳುತಿಹನು| ||59||

ಶಿವನುಪ್ರಮಥಾದಿಗಳುಸಹಿತ ಆಪುರದೀ |
ಅವನಿಪತಿಗೊಲಿದುತಾನಿರ್ದಸಂತಸದೀ| ||60||

ವನಕೇಳಿಗೆಂದೆನುತ ನಪನ ಸುಕುಮಾರಾ |
ವಿನಯದಿಂ ಪೊರಟರುಕ್ಮಾಂದನುವೀರಾ| ||61||

ನಾನಾಸುವಾದ್ಯಘೋಷದಲಿವನಕಾಗೀ |
ಮಾನಿನೀಜನಸಹಿತ ಬಂದಲೇಸಾಗೀ| ||62||

**ವಾರ್ಧಕ**

ಪರಿಪರಿಯರತ್ನದಾಭರಣದಿಂ | ಚರಣದಿಂ |
ಕೊರಳಮುತ್ತಿನಹಾರ ಕಾಂತಿಯಿಂ ಶಾಂತಿಯಿಂ |
ಮೆರವಸುಂದರರದಆನಂದದಿಂಚಂದದಿಂ ಮತ್ತ ಗಜಗಾಮಿನಿಯರೂ ||
ಸ್ಮರಕೇಳಿಗೊದಗುವಪ್ರವೀಣೆಯರುಜಾಣೆಯರು |

ಪುರುಷರೊಲಿಸುವ ಕಲಾವಂತೆಯರುಕಾಂತೆಯರು |
ಕಿರುನಗೆಯಮಿಸುಗುತಿಹರುಷದಿಂಸರಸದಿಂ ಶಂಗರಿಸಿನಡೆತಂದರೂ| ||63||

**ರಾಗ ಕಾಂಭೋಜಿ ಝಂಪೆತಾಳ**

ಪರಿಪರಿಯಪಣ್ಣು ಫಲ | ಭರಿತವಾಗಿಹಚೂತ | ಮೆರವಪನಸಾದಿ ವಕ್ಷಗಳ |
ಪರಿಯಕಂಡಾಗಳಚ್ಚರಿವಡುತಸೇವಿಸುತ | ಲಿರದೆನಡೆತಂದರತಿಬೇಗ| ||64||

ಮರುಗಮಲ್ಲಿಗೆಜಾಜಿ | ಸುರಗಿಸೇವಂತಿಗೆಯು | ಪರಿಮಳದನಾಗ ಸಂಪಿಗೆಯೂ |
ಕರವೀರಜಾಜಿ | ಪುನ್ನಾಗಕೇತಕಿಗಳಿಂ | ದಿರದೆಶೋಭಿಸುತಿರಲಿಕಾಗ| ||65||

ಮುಡಿದುಪುಷ್ಪಗಳ | ಮುಂದಡಿಯಿಡುತಲಾಗಲತಿ | ಬೆಡಗಿನಿಮ್ಮಾತನಾಡುತಲೀ ||
ಸಡಗರದಿಕುಳಿತಿರಲೂ | ಕಡುಚಲುವಮಖತುರಗ | ನಡುಬಟ್ಟೆಯೊಳಗೆಬರುತಿರಲೂ| ||66||

ಭೂರಿಸಂಭ್ರಮದಿಂದ | ಲೈತರುವವಾಜಿಯನು | ನಾರಿಯರುಕಂಡುಭ್ರಮಿಸುತಲೀ |
ಆರಿದರತಂದಿರುವರೆನುತಮಾತಾಡಿದರು | ಚಾರುನೇತ್ರೆಯರುತಮ್ಮೊಳಗೆ ||67||

**ರಾಗ ಸೌರಾಷ್ಟ್ರ ರೂಪಕತಾಳ**

ತಂಗೀನೋಡೀವಾಜಿ | ಯಂಗಲಾವಣ್ಯವ | ಶೃಂಗಾರವಾಗಿತೋರುತಿದೇ |
ಮಂಗಲಕರವಿದ | ರಿಂಗಿತವರಿತೀರ್ದ | ರಂಗನಾಮಣಿಯುಸುರೆನಗೇ| ||68||

ಮಂದಗಮನೆಅಕ್ಕ | ಲಾಲಿಸುಪುರಕಿಂತ | ಸುಂದರವಾಜಿಯೀವರೆಗೇ |
ಬಂದುದಕಾಣೆನು | ಪೊಸತಿದುಭಾಳದೊ | ಳೊಂದೂಲೇಖನವಿರುತಿಹುದು| ||69||

ಪಂಚವರ್ಣದಹಯ | ಕಾಂಚನಾಭರಣಾದಿ | ಮಿಂಚಿನಂದದಿಹೊಳೆಯುತಿದೇ |
ಮುಂಚೆಲ್ಲುಕಾಣೆವು | ವಂಚನೆಯಲ್ಲೀದು | ಚಂಚಲಿಸುವದೆನ್ನಾಮನವು| ||70||

ಅಕ್ಕಕೇಳೀವಾಜಿ | ಸಿಕ್ಕುವದೆಂತುಟೊ | ರಕ್ಕಸಾಂತಕಬಲ್ಲನಿದನು |
ಮಿಕ್ಕವರಿಂದಾಗ | ದೆನುತೆಲ್ಲರೊಡಗೂಡಿ | ರುಕ್ಮಾಂಗದನೊಳುಸುರಿದರು| ||71||

**ರಾಗ ಕಲ್ಯಾಣಿ ಝಂಪೆತಾಳ**

ಚಿತ್ತವಿಸುನಪತಿಲಕನಾನೆಂಬಮಾತ |
ಉತ್ತುಮದಕಾರ್ಯವಿಹುದೆನಲೆಂದನಾಥ| ||72||

ಮತ್ತಗಜಗಮನೆಯರ್ಯಾರತಕನುಮಾನ |
ಬಿತ್ತರಿಪುದೆನೆಕೇಳುದೆಂದನೀಹದನ| ||73||

ರತುನಾಭರಣದಿಂದಶೋಭಿಸುವತುರಗ ।
ಪಥದಿಪೋಪುದನುತರಿಸೆನಲೆಂದನಾಗ। ॥74॥

ಪಥುವಿಪಾಲರಯಾಗದಶ್ವಬಲಸಹಿತ ।
ಜತನದಿಂಬಹುದೆನಲುಪೇಳಿದರುನಗುತಾ। ॥75॥

ಚದುರನಮ್ಮಿಷ್ಟವನುಸಲಿಸದೀತೆರದೀ ।
ಬೆದರುವರೆನಪರೆನಲಿಕೆಂದನತಿಮುದದೀ। ॥76॥

ಇದರಿಂದಅತಿಶಯದವಾಜಿಯನುನಿಮಗೆ ।
ಬದಲೊಂದಕೊಡಿಸುವೆನುಕಾಡದಿರಿಯನಗೆ। ॥77॥

**ರಾಗ ಸವಾ ಏಕತಾಳ**

ಎಂದುದಕೇಳುತಲಾಗತಿದುಗುಡದಿ । ಮಂದಗಮನೆಯರುಮನದೊಳಗೇ ।
ನೊಂದೀತನೊಳ್ಯಾಕುಸುರಿದೆವನುತ । ಲಿಂ । ತೆಂದರುಕೋಪಿಸಿತಮ್ಮೊಳಗೇ। ॥78॥

**ರಾಗ ನೀತಾಂಬರಿ ಏಕತಾಳ**

ತಂಗೀನೋಡಿದೆಯಾನೀನು । ರಾಯನಚಿತ್ತ । ದಿಂಗಿತವೆಲ್ಲವನು ।
ತುಂಗಾವಿಕ್ರಮತಾನಾಗೀ । ನಮ್ಮಾಯಮಾನ । ಭಂಗವನೆಸಗಿದನು। ॥79॥

ಹರಿಹರೀಪಥವಿಡಿದೂ । ಬಂದುದ್ಯಾತಕೆ । ತುರಗವುತಾನೊಲಿದು ।
ಅರುಹಲೀತನೊಳ್ಯಾತಕೇ । ಮನದಿರವನ್ನು । ಬರಿದಾದುದೆಮ್ಮಬಾಳು। ॥80॥

ಎಷ್ಟುಹೇಳಿದರಿವನು । ವಾಜಿಯನೀಗ । ಕಟ್ಟಿಪಲೊಲ್ಲತಾನು ।
ಇಷ್ಟಾದಮೇಲೆನಾವು । ಈರಾಯನ । ಬಿಟ್ಟುಪೋಪುದೆಘನವು। ॥81॥

**ರಾಗ ಕೇತಾರಗೌಳ ಅಷ್ಟತಾಳ**

ಎಂದುತಮ್ಮೊಳುಮಾತನಾಡಲುಕೇಳುತ್ತ । ಲಂದತಿಶೌರ್ಯದಲಿ । ॥82॥
ಮಂದಗಮನೆಯರನೀಕ್ಷಿಸಿಅವರೊಡ ।  ನೆಂದನುಪ್ರೀತಿಯಲೀ।

ಪರಿಕಿಸಲೆಂದುನಾಬರಿದೆ ಚಾಳಿಸಿದರೆ । ಪರಿಹಾಸ್ಯಗೈದಿರಲ್ಲ ।
ತರಿಸುವೆನೀಕ್ಷಣತುರಗವನೆನುತಲಿ । ಚರರೊಡನುಸುರಲಾಗ। ॥83॥

ಕೇಳಿತುರಗವತಂದೀಯಲುನೋಡುತ । ಭಾಳದಲಿಖಿತವನು ।
ಲೀಲೆಯಿಂವಾಚಿಸಿಬಾಲೆಯರಿದಿರೊಳು । ಪೇಳಿದಬಹುಸಾಹಸಿ। ॥84॥

**ರಾಗ ಮೆಚ್ಚುಗೌಳ ಅಷ್ಟತಾಳ**

ಬರದಿಹನಿದಿರೊಳುರಾಮಾ | ತಾನೆ | ಧುರಧೀರನೆಂದು ನಿಸ್ಸೀಮಾ |
ಹರನೊಲಿದಿಹನಮಗೆಂದು | ತಾನು | ಅರಿಯದಾದನೊಯಿದನೊಂದು| ||85||

ಭೂತಳದೊಳಗೆನ್ನಪಿತನೂ | ಬಹು | ಖ್ಯಾತಿಯಪಡದಿಹತಾನು |
ಸೋತಪೆನೆಂಬುದರಿಯದೇ | ಬಿಟ್ಟ | ನೀತುರಗವತಾನುಬರಿದೆ| ||86||

ಈಗಲಿರಣದೊಳುತಾನೇ | ನಿಲ | ಲಾಗಿಗೆಲುವರನ್ನುಕಾಣೇ |
ಯಾಗದಶ್ವವುಸಹಿತಾನು | ಪೋಪೆ | ನೀಗಲೆಪುರಕೆಯಿಂನೇನು| ||87||

ಎಂದುರುಕ್ಮಾಂಗದನಾಗ | ಕರ | ದೆಂದನುಚರರೊಳುಬೇಗ |
ಇಂದುನೀವೀತುರಗವನೂ | ಬೇಗ | ದಿಂದೆಂಮಪುರಕ್ಕೈವುದಿನ್ನು| ||88||

**ಭಾಮಿನಿ**

ಇಂತುಚರರೊಳುಪೇಳಿದುದನಾ |
ಕಾಂತೆಯರುಕೇಳುತ್ತ ಆತನ |
ಚಿಂತಿತವಸಲಿಸಲ್ಕೆ ಬಳಿಕಾಹಯವುಸಹಿತಾಗ |
ಸಂತಸದಿಪುರಕ್ಕೈದಿಮತ್ತಾ |
ದಂತಿಗಮನೆಯರುಗಳಮನ್ನಿಸಿ |
ಅಂತರಂಗದಿತನ್ನ ಪಿತನಡಿಗೆರಗುತಿಂತೆಂದ| ||89||

**ರಾಗ ಸೌರಾಷ್ಟ್ರ ಆದಿತಾಳ**

ವನಕೇಳಿಗೆಂದು ನಾಪೋಗಿರಲಡವಿಗೆ | ತಂದೆಕೇಳು | ವಾಜಿ |
ಯನು ಕಂಡುಪಿಡಿದುವಾಚಿಸಿದೆನುಲಿಖಿತವ | ತಂದೆಕೇಳು| ||90||

ಸಾಕೇತ ಪುರವರಧೀಶ ರಾಘವನಂತೆ | ತಂದೆಕೇಳು ||
ಮೂರು ಲೋಕದಿಬಹುಖ್ಯಾತನಾಗಿರುತಿಹನಂತೆ ತಂದೆಕೇಳು| ||91||

ಬ್ರಹ್ಮಹತ್ಯಾಪಾಪಪರಿಹಾರಕೊ◌ೀಸುಗ | ತಂದಕೇಳೂ | ಬಲು
ಹೆ◌ಿಮ್ಮೆಯಿಂದಲಿ ತನ್ನತಮ್ಮಂದಿರೊಡಗೂಡಿದ | ತಂದೆಕೇಳು| ||92||

ಯಾಗವರಚಿಸಿತುರಗವಬಿಟ್ಟಿಹನಂತೆ | ತಂದೆಕೇಳೂ | ಮತ್ತೆ
ರಾಘವನನುಜಶತ್ರುಹನುಬಂದಿಹನಂತೆ | ತಂದೆಕೇಳು| ||93||

ಶೂರರೀವಾಜಿಯಕಟ್ಟುವದೆನುತಲೆ | ತಂದೆಕೇಳೂ | ರಾಮ
ನೀರೀತಿಬರದುದನೋಡಿಲ್ಲಿತಂದಿಹೇ | ತಂದೆಕೇಳು| ||94||

**ವೃತ್ತ**

ಕಂದನವಾಕ್ಯವನಾಲಿಸಿ ।
ಚಂದದಿಭೂಪಾಲಕ ।
ನಂದನನಂಮಂನಿಸೆಚಿತ್ತದೊಳಾಗಳ್ ।
ಇಂದುಧರನಬಳಿಗೈದುಸುರುವೆ ।
ನೆಂದೆನುತತಿಮುದದಿಂ । ಬಂದಾ ।
ತಗೆನಮಿಸುತ ಲಿಂತೆಂದವನಾಗಳ್ ‖95‖

**ರಾಗ ಸೌರಾಷ್ಟ್ರ ಏಕತಾಳ**

ಚಿತ್ತವಿಸಾನೆಂಬಮಾತ । ಯೆಲೆಸಾಂಬಾ । ಎನ್ನ
ಪುತ್ರನೆಸಗಿದಪರಾಧವ । ಯೆಲೆಸಾಂಬ। ‖96‖

ಪಥ್ವೀಪಾಲರಾಮಚಂದ್ರಎಲೆಸಾಂಬ । ಬ್ರಹ್ಮ
ಹತ್ಯ ನಿವತ್ತಿಗೋಸುಗಾಯೆಲೆಸಾಂಬ । ‖97‖

ಬಿಟ್ಟಮಖದವಾಜಿಯನ್ನು । ಎಲೆಸಾಂಬ । ರುಕ್ಮ
ಕಟ್ಟಿತಂದನೀಗಳಲ್ಲಿ । ಯೆ । ಲೆಸಾಂಬ। ‖98‖

ಸೃಷ್ಟಿಗೊಡೆಯನಾದರಾಮ ಯೆಲೆಸಾಂಬಾ । ನಮ್ಮ
ಧಿಟ್ಟತನಕಂಜುವನೆ । ಯೆಲೆಸಾಂಬಾ। ‖99‖

ಶತ್ರುಗಳಗೆಲುವುದಕ್ಕೆ । ಎಲೆಸಾಂಬ । ಬಹುವಿ
ಚಿತ್ರವಾಗಿಬಂದುದಲ್ಲಯೆಲೆಸಾಂಬ। ‖100‖

ಕ್ಷತ್ರಿಪಂಥಕ್ಕಾಗಿನಾವುಯೆಲೆಸಾಂಬಾ ।
ನಿನ್ನಮಿತ್ರಗಹಿತರಾದೆವಲ್ಲೋ । ಯೆಲೆಸಾಂಬಾ। ‖101‖

ಬುದ್ಧಿಯೇನಿದಕ್ಕೆಪೇಳು । ಎಲೆಸಾಂಬಾ । ರಣ
ಸಿದ್ಧಿಯಾಗುವಂತೆಮಾಡು । ಎಲಸಾಂಬ। ‖102‖

**ರಾಗ ಕೇತಾರಗೌಳ ಝಂಪೆತಾಳ**

ಎಂದುದನುಕೇಳುತಾಗ । ಪರಮನದಿಹನೊಂದುಗ್ರಹಿಸುತಲಿಬೇಗ ।
ಮುಂದಾಹಕಾರ್ಯಕೆಮಗೆ । ಹಸನಾದುದೆಂದೆನುತ ನುಡಿದನವಗೇ। ‖103‖

ಪೊಡವಿಪತಿಕೇಳುನೀನು । ತವಕುವರಪಿಡಿದ ಯಾಗದಹಯವನು ।
ಬಿಡಲುನಪರೆಲ್ಲನಗರೆ । ಜರೆವುತಡಿರೆಗಡಿನಿಂದಿಸದಿರುವರೇ ‖104‖

ಹರಿಯುಶ್ರೀರಾಮನೆಂದು | ತಿಳಿಯದೀ | ತುರಗವನುಪಿಡಿದುತಂದು |
ಧುರಕೆಸಂನಹಗೈದನು | ನಿನ್ನಮಗ | ಬರಿದೆಚಿಂತಿಸದಿರಿನ್ನು ||105||

ಸಂಗರದೊಳಾರಾಮನು | ಬರುವನಾವಂಗದಿಂದಾದರಾನು |
ಅಂಗಜನಪಿತನಿಮ್ಮನು | ರಕ್ಷಿಸುವಹಾಂಗೆಯತ್ನವಗೈವೆನು ||106||

**ಭಾಮಿನಿ**

ಧಾರುಣೀಪತಿಕೇಳುನಿರ್ಜರ |
ವಾರಸಹಿತಾನಿರಲುರಕ್ಷೆಗೆ |
ಮೀರಿತುರಗವನೊಯ್ಯಲಸದಳ ವಂದ್ಯರಿಂಗಿನ್ನು ||
ಮಾರಮಣನೈತರಲಿಕಾತನ |
ಚಾರುಚರಣಕೆನಮಿಸುತಾ | ರಘು
ವೀರನನುವಲಿಸುವೆನು | ಯುದ್ಧವಗೈವುದೀಗೆಂದ| ||107||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಎಂದುದನುಕೇಳುತ್ತಲಾನೃಪ | ಮಂದಹಾಸದಿಧುರವನೆಸಗಲಿ |
ಕೆಂದುಸನ್ನಹಗೈವುತಿರೆ ರಘು | ನಂದನನುಬಳಿಕತ್ತಲು | ಸೇನೆಯೊಡನೇ| ||108||

ಬರುತಿರಲಿಕಶ್ವವನುಕಾಣದೆ | ತರಹರಿಸುತಾಕ್ಷಣದಿತಮ್ಮೊಳಗು
ಗುಸುರುತೋರ್ವರನೋರ್ವನೀಕ್ಷಿಸು | ತಿರಲುಶತ್ರುಹಕೇಳ್ದನು | ಸೇನೆಯೊಡನೇ| ||109||

ಭೂರಿಬಲವಿರೆತುರಗವನು ನೀ | ವಾರುಕಾಣದ ತೆರದೊಳೊಯ್ಯಲು |
ಕಾರಣವದೇನೆನಲು ಕೇಳುತ | ಧಾರುಣೀಶನನೊಳೆಂದರು | ಬೆದರುತಾಗಾ| ||110||

ಮನದವೇಗದಿಮುಂದಕೈದುವ | ದನುಪಮಿತಬಲಬೆಂಬಳಿಯಲಿರೆ |
ಕ್ಷಣದಿದೃಷ್ಟಿಯಮರಸಿತಪ್ಪುವುದೆನುಯತ್ನವಗೈದರು | ಕಾಣದಂತೆ| ||111||

ಚರರವಾಕ್ಯವಕೇಳಿಶತ್ರುಹ | ಕರೆದುಮಂತ್ರಿಯೊಳೆಂದಯಾಗದ |
ತುರಗವೇನಾಯ್ತೆಂಬುದನು | ನೀ | ನರಿತುದುಸುರೆನಲೆಂದನು | ಮಂತ್ರಿತಾನೂ || ||112||

**ರಾಗ ಭೈರವಿ ಝಂಪೆತಾಳ**

ಶತ್ರುಹನೆಲಾಲಿಸೈ | ಉತ್ತುಮದದೇವಪುರ |
ಪಥ್ವಿಪತಿವೀರಮಣಿ | ಕತೀವಾಸನನು| ||1|13|

ವಲಿಸಲವನೀಪುರದಿ | ನೆಲಸಿಹನುಗಣಸಹಿತ |
ಗೆಲವಿಂದಲೀರ್ಪನಾ | ಇಳೆಯಪಾಲಕನು| ||114||

ಧರಣಿಪಾಲನಸುತನು । ತುರಗವನುಕಟ್ಟಿಹನು ।
ಹರನಬಲದಿಂದೆಮ್ಮ । ಧುರಕಂಜನವನು। ॥115॥

ಎಂದುಪೇಳಲುಕೇಳು । ತಂದುಶತ್ರುಹಸುಭಟ ।
ವಂದಯುದ್ಧವಗೈವುದೆಂದುನೇಮಿಸಿದ। ॥116॥

**ರಾಗ ಪಂಚಾಗತಿ ಮಟ್ಟೆತಾಳ**

ಬಳಿಕಸುಭಟರೆಲ್ಲರೋಷದಿಂದಲರಿಗಳ ।
ಬಲವಮುಸುಕುತೆಸದರಾಗತೀವ್ರಕಣೆಗಳ ।
ಅಳುಕದಾಗವೀರ ಮಣಿಯಸೈನ್ಯಕೋಪದೀ ।
ಶರದುಬಿಟ್ಟರಸ್ತ್ರಚಯವಸಲೆಪ್ರತಾಪದೀ। ॥117॥

ಉಭಯಬಲವುತಂಮೊಳಿಂತುಕದನವೆಸಗಲು ।
ರಭಸದಿಂದರಾಮ ಸೈನ್ಯಬೆದರರದಾಗಳು ।
ಸಬಳಶಕ್ತಿತೋಮರಂಗಳಿಂದಲವರನು ।
ಪ್ರಬಲವದಗಿಸಲ್ಕೆಕಂಡುನಪಕುಮಾರನು। ॥118॥

ತುಂಗಭುಜಬಲಾಢ್ಯರುಕ್ಮಾಂಗದಾಖ್ಯನು ।
ಮುಂಗಡೆಯಲಿನಿಂತುಮಾರ್ಗಣಗಳೆಸೆದನು ।
ಸಂಗರದಲಿಬಲವನೆಲ್ಲಸವರುತೀರ್ದನು ।
ಕಂಗೆಡಿಸುತಧೈರ್ಯದಿಂದಕರದುಸೂರ್ದನು । ॥119॥

ಎಲವೊನಿಂಮಬಲದೊಳೆಂಮಗೆಲುವವೀರರು ।
ಗೆಲುವರೀಗಬರಲಿಯಿದಿರುಸಮರಶೂರರು
ಕೊಲುವೆನವರನೆನುತಲಾರ್ಭಟಿಸಲಾತನು ।
ಕಳುವದದನುಕೇಳುತಾಗಪುಷ್ಕಳಾಖ್ಯನು। ॥120॥

ಹುಲುನಪಾಲನಣುಗನಂಮಬಲವಗೆಲಿದುದ ।
ಬಲುಹನೋಳ್ಪೆನಿಲ್ಲುರಣಕೆಸಲೆಸಮರ್ತ್ಯದ ।
ಫಲವತೋರ್ಪೆಫಳಿಗೆಯೊಳಗೆನೋಡುಸಹಸವ ।
ತಳುವದೀಗಲೆನುತ ಸರಳಸುರಿಯಲಭ್ರವ। ॥121॥

**ಭಾಮಿನಿ**

ತುರಗಕಸ್ತ್ರವನಾಲ್ಕುಸಾರಥಿ
ಗೆರಡುಧ್ವಜಕೊಂದೆಸವರೋಷದೊ
ಳಿರದೆಸ್ಯಂದನರಕ್ಷಕರಿ । ಗೆರಡೊಂದನಪಸುತಗೆ ॥

ಕರದಧನುಹಯಸೂತರಥಸಹ ।
ಧರೆಗುರುಳಿಸಿದನೆಲ್ಲಬಲವನು ।
ಕರೆಸಿಪುಷ್ಕಳನೊಡನೆಕರೆದಿಂತೆಂದರೋಷದಲೀ ॥122॥

**ರಾಗ ಕೇತಾರಗೌಳ ಅಷ್ಟತಾಳ**

ಸಮರದೊಳಿದಿರಾಗಿನಿಲದೀಗ ಪುಷ್ಕಳ । ಗಮಿಸುವದಾವಲ್ಲಿಗೇ ।
ಕ್ರಮದಿಂದ ತವಸ್ಯಂದನವ ಹಾರಿಸುವೆನೊಂದು । ಕ್ಷಣದೊಳಗಂಬರಕೇ ॥123॥

ಎನುಸತ್ರವೆಸೆಯೆಪುಷ್ಕಳನರಥವನೊಂದು । ಕ್ಷಣನೂರ್‍ಯೋಜನತನಕಾ ।
ತೊಲಗುತ್ತಲಲ್ಲಲ್ಲಿತಿರುಗಲುಕಾಣುತ್ತ । ಕಣೆಯಿಂದ ಪುಷ್ಕಳನೂ ॥124॥

ಎಸದುಸಮಾಧಾನಗೊಳಿಸುತ್ತವನೊಡ । ನುಸುರೀದಪುಷ್ಕಳನು ।
ವಿಶಿಖವನೀಗಳಾನೆಸೆವುತ್ತನಿಂದಾನು । ವಸುಧೆಯೊಳೊರಸುವೆನು। ॥125॥

ಎನುತೆಚ್ಚಬಾಣವತನರಥವನುಕೊಂಡುವಾಯಿನಮಂಡಲಕೆಪೋಗಲು ।
ಘನತರಕಿರಣಜ್ವಾಲೆಗೆಸೂತಹಯಮತ್ತೆ । ಸ್ಯಂದನದಹಿಸಲಾಗ ॥4॥

ಹರನಸ್ಮರಿಸುತರುಕ್ಮಾಂಗದಮೂರ್ಛಿಸಿ । ಧರೆಗುರುಳಲುಕಾಣುತ್ತ ।
ಶರಚಾಪವಿಡಿದುಕೋಪದಿವೀರಮಣಿಬಂದು । ಧುರಕನುವಾದನಿತ್ತ। ॥126॥

**ಭಾಮಿನಿ**

ವೀರಮಣಿಯೊಳುಧುರವನೆಸಗಲು ।
ಮಾರುತಿಯುಬರುತಿರಲುಕಾಣುತ ।
ಮಾರಜನಕನದೂತನಿಂ । ಗುಸುರಿದನುಪುಷ್ಕಳನೂ ।
ಧೀರನೀನಹೆಸ್ರೈರಿಸುವದೀ ।
ಬಾರಿಗೀತನೊಳಾನುಕಾದುವೆ ।
ನೋಡುನೀನೆನಲ್ಕೈದೆ ಪುಷ್ಕಳಗೆಂದನವನೀಶ । ॥127॥

**ರಾಗ ಕಾಂಭೋಜಿ ಅಷ್ಟತಾಳ**

ಕೇಳುಪುಷ್ಕಳನೆನೀನಿಂದೂ । ಎನ್ನ । ಮೇಲೆಯುದ್ಧಕೆನಡೆತಂದು ।
ಬಾಳುವದೆಂತುನೀಬಾಲಕನಾಗಿಹೆ । ತಾಳುಕೋಪಿಸದಿರುಪೇಳುವೆನೀಗಳು ॥128॥

ಸುತನಕೆಡಹಿದಕೋಪವನ್ನೂ । ಬಿಟ್ಟು । ಖತಿಯಲ್ಲದೀಗಪೇಳುವೆನೂ ।
ಜತನದಿಂದಲಿದೃಷ್ಟಿ ಪಥಕೆಬೀಳದವೋಲು । ಅತಿಶಯದಿಂಪೋಗುಹಿತದಿಂದುಲುಸುರುವೆ ॥129॥

**ರಾಗ ಸೌರಾಷ್ಟ್ರ ತ್ರಿವುಡೆ**

ಎಂದುದನುಕೇಳುತ್ತಪುಷ್ಕಳ । ನಂದದಾಬಾಲಕನಹುದುಯೆ ।
ನ್ನಿಂದನೀನತಿವದ್ಧನಾತಹು । ದಿಂದುಸಹಜ ॥130॥

ಆದರೀಕ್ಷತ್ರಿಯರುರಣದಲಿ । ಕಾದಿಜಯಸುವ । ಸುಭಟಮುಖ್ಯರು ।
ಮೇದಿನೀಪಾಲಕರಮತವಿದು । ನಾದರಿಸಲು। ॥131॥

ತವಸುತನಸಮರದಲಿಗೆಲಿದಿಹ । ಕವಲುಬಾಣವುನಿನ್ನ ಬಯಸುವ ।
ದವನಿಪಾಲಕಜೋಕೆಯಿಂದಿನ । ಬವರದೊಳಗೇ। ॥132॥

ಎಂದುವಿಂಶತಿಶರವಬಿಡಲದ । ಕಂಡುನಪಮೂರಸ್ತ್ರವೆಸೆಯಲು ।
ನಿಂದಿಸುತಪುಷ್ಕಳನಫಣಿಗದು । ಬಂದುನಾಂಟೇ। ॥133॥

ಬಿದ್ದುಚೇತರಿಸುತ್ತಭರತಜ। ಕ್ಷುದ್ರಭೂಪನೆಹರನಬಲದಲಿ ।
ಭದ್ರನಾಗಿಹೆನಿಂನಸಮರದಿ । ನಿದ್ರೆಗೈಪೇ। ॥134॥

**ರಾಗ ಶಂಕರಾಭರಣ ಮಟ್ಟೆತಾಳ**

ಬಳಿಕನೂರುಶರವನೆಸೆಯಲಾಗಪುಷ್ಕಳ ।
ಫಳಿಲನೈದಿವೀರಮಣಿಯಕುದುರೆತೇರ್ಗಳ ।
ಹೊಳೆವಕವಚಧನು ಕಿರೀಟವಿಳೆಗೆಕೆಡಹಲೂ ।
ಚಲುವದೇಹದಿಂದ ಅರುಣಜಲವುಸುರಿಯಲು। ॥135॥

ಧರಣಿಪಾಲಪೊಸವರೂಥವಡರುತಾಗಳು ।
ಭರತಸುತನೊಳೆಂದಹರಿಯಚರಣ । ಕಪೆಯೊಳು ।
ವಿರಥಗೈದರಿಂದಲೆಂಮನೀರಣಾಗ್ರದೀ ।
ಹರಣವಳಿಯದಂತೆ ಕಾವುದುರುಪ್ರಯತ್ನದೀ। ॥136॥

ಧಾರುಣೀಶನಿಂತುನುಡಿಯಲಾಗಖತಿಯೊಳು ।
ಕ್ರೂರಶರವಸಂಖ್ಯವೆಸದನಾರುಭಟೆಯೊಳು ।
ಭೂರಿಮಾರ್ಗಣಂಗಳ್ಕೈವುತಾ ರಣಾಗ್ರದೀ ।
ಮಾರಪಿತನಬಲವವಸವರಲುಗ್ರ ಕೋಪದೀ। ॥137॥

**ರಾಗ ದೇಶಿ ಆಟತಾಳ**

ನೋಡುತ್ತಾ ಸೇನೆಯಳಿಯಲುಪುಷ್ಕಳ ।
ಹೂಡಿ ಬಾಣವರಿಪುಬಲವನೀ । ಡಾಡಿದನು ಕ್ಷಣಮಾತ್ರದೀ। ॥138॥
ಶೋಣಿತಾಂಗದಿಬಲವಿರೆನಪತಾನು ।

ಕಾಣುತಲೆಪುಷ್ಕಳಗೆಸೆಯ ಸು । ತ್ರಾಣದಿಂಸಾಯಕವನು। ॥139॥
ಬಂದುಪುಷ್ಕಳಧರಿಸಿದಕವಚವು ।
ಚೆಮ್ಮಿಸುತಶರಪಂಜರದವೋ । ಲ್ನಿಂದರುಣಜಲಸೂಸಲು। ॥140॥

ನಿಂದುರಾಮನಸ್ಮರಿಸುತ್ತಪುಷ್ಕಳ ।
ನಂದುಪ್ರತಿಶರವೆಸದುನಪನೊಡ । ನೆಂದ ಕೋಪಗಳಿಂದಲೀ ॥141॥

**ರಾಗ ಕಾಪಿ ಅಷ್ಟತಾಳ**

ವದ್ಧನಿನ್ನನು ಕೊಲಲ್ಯಾಕೆಂದು । ಬಿಡ
ಲುದ್ಯೋಗಿಸಿರುತಿರಲೈತಂದು ॥
ಯುದ್ಧಾವಗೈದಪೆನಿನ್ನಾನೂ । ಗೆಲ್ದ
ಶಬ್ದವನುಸುರುವೆಕೇಳು ನೀನು। ॥142॥

ಕಾಶಿಯ ನೈದಿದಮಾನವ । ತಾನು
ಲೇಸಿನೊಳಗೆಗಂಗಾಸ್ನಾನವ ॥
ತೋಷದೊಳೆಸಗದೆಬಂದರೆ । ಆ
ದೋಷವುನಿನ್ನನುಗೆಲದಿರೆ। ॥143॥

ಎಂದುಶಪಥವಿಡೆಕೇಳುತ್ತ । ಶರ
ದಿಂದೆಚ್ಚನಪರೋಷತಾಳುತ್ತ ॥
ಬಂದುಪುಷ್ಕಳನ ಹದಯವನು । ಹೊಕ್ಕು
ಮುಂದಕೈಯಲು ಕಾಣುತಾತನು। ॥144॥

ರಾಮನಹದಯದಿಸ್ಮರಿಸುತ್ತ । ಮತ್ತಾ
ಭೂಮಿಪಾಲಕನನು ನೋಡುತ್ತ ॥
ಕಾಮಾರಿಯಂತುರೆಕೋಪದೀ । ಬಿಟ್ಟ
ನಾಮಹಾಸ್ತ್ರವನುಪ್ರತಾಪದೀ। ॥145॥

**ಭಾಮಿನಿ**

ಶರಹತಿಗೆನಪಮೂರ್ಛಿಸುತಲಾ ।
ಧರಣಿಗೊರಗಲು ಕಾಣುತಾಗಳು ।
ತರಹರಿಸಿನಪಸೈನ್ಯಬೆದರಲು ವೀರಸಿಂಹಾಖ್ಯ ॥
ಬರುವುದನುರಣದೊಳಗೆ ಕಂಡಾ ।
ಮರುತಸಂಭವಖತಿಯೊಳಾತನ ।
ಕರೆದುಮೂದಲಿಸುತ್ತಲುಸುರಿದನುರುಸಗಾಢದಲಿ। ॥146॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಋಲ್ಲವೀರಸಿಂಹಮುಂದಾ
ವಲ್ಲಿಗೈದುತಿರುವೆ ನಿಲ್ಲು
ಬಲ್ಲೆ ನಿನ್ನ ಬಗೆಯ ರಣ । ದಲ್ಲಿ ಕೊಲುವೆನು ॥147॥

ಎಂದುನುಡಿಯಲಾಗಕೋಪ ॥
ದಿಂದವೀರಸಿಂಹಶರವ ।
ಸಂಧಿಸುತ್ತ ಬಿಟ್ಟವಾಯು ॥ ನಂದನಗಂದು। ॥148॥

ತಟ್ಟ ನಂಬುತಾಗಲಾಗ ।
ಸಿಟ್ಟಿನಿಂದಲನಿಲಸೂನು ।
ಮುಷ್ಟಿಯಿಂದತಿವಿಯಲವನು । ಸೃಷ್ಟಿಗೊರಗಿದ। ॥149॥

ಹಿರಿಯ ತಾತಮೂರ್ಛಿಸಿರುವ ।
ಪರಿಯನಾಭಾಂಗಾದ್ಯಾರು ॥
ಅರಿತುಶರವನೆಚ್ಚರಾಗ । ಮರುತಜಾತಗೇ। ॥150॥

ತಾಳಿಕೋಪದಿಂದಹನುಮ ।
ಬಾಲದಿಂದಸುತ್ತಿ ಬಡಿಯೆ ॥
ಬೀಳೆಮೂರ್ಛೆಯಿಂದಲದರ । ಪೇಳಲೇನದ। ॥151॥

**ಭಾಮಿನಿ**

ರಾಮದೂತನಸಮರದಲಿ ॥ ಸಂ ।
ಗ್ರಾಮಕೊದಗಿದವೀರರಸುಗಳ ॥
ಬೀಳಲೆಚ್ಚನುಬಲಸಹಿತ । ಮಲಗಿಸಿದಧರಣಿಯಲೀ ॥
ಭೂಮಿಪತಿಸಹಿ ತೊರಗೆ ಕಾಣುತ ।
ಕಾಮವೈರಿಯುನೊಂದುಮನದಲಿ ।
ರಾಮಸೈನ್ಯವಮುರಿದು ಕೆಡಹುವೆ । ನೆನುತಲೈತಂದ। ॥152॥

**ರಾಗ ಸವಾ ಏಕತಾಳ**

ಈ ಪರಿಯಲಿಬಲವಳಿದುದ ಕಾಣುತ ।
ಲಾಪಶುಪತಿಮನದಲಿನೊಂದು ॥
ಕೋಪಿಸುತಲಿಬಲಸಹಿತೈತಂದ ರ।
ಮಾಪತಿ ಸೈನಿಕದೆಡೆಗಂದು। ॥153॥

**ರಾಗ ಭೈರವಿ ತ್ರಿವುಡೆ**

ಬಂದನಾಗಾ । ಸಾಂಬನು । ಬಂದನಾಗ ।
ಬಂದನಾಕ್ಷಣರಾಮ ಸೈನ್ಯವ ।
ಹೊಂದಿಸುವೆನೆಂದೆನುತವಹಿಲದಿ ।
ಬಂದನಾಗ ॥ ಸಾಂಬನುಬಂದನಾಗ। ॥ಪಲ್ಲವಿ॥

ಚಂದ್ರ ಕಿರಣದಕಾಂತಿರತ್ನಗ ।
ಳಿಂದಮಕುಟವುಹೊಳೆಯಲು ।
ಸ್ಯಂದನದಸತ್ತಿಗೆಯಮೌಕ್ತಿಕ ।
ದಿಂದಜಲ್ಲಿಗಳುಲಿಯಲೂ ।
ಮುಂದಲೆಯಜಡೆಯಿಂದಜಾಹ್ನವಿ ।
ಬಿಂದುಗಳುಕೆಳಗಿಳಿಯಲು ॥
ನಂದಿವಾಹನ ತನ್ನ ಭಕ್ತರು ।
ನೊಂದರೆಂಬುದನರಿವುತಾರಘು ।
ನಂದನನಸೈನ್ಯದೊಳುಕಾದುವೆ ।
ನೆಂದುರೋಷದಿಮುಂದಕೈತರೆ ।
ಬಂದನಾಗ । ಸಾಂಬನು । ಬಂದಾನಾಗ। ॥154॥

ಶಿರಗಳೈದರೊಳೆಸೆವಕಾರ್ತ ।
ಸ್ವರಮಯದಕುಂಡಲಗಳು ।
ಕರದಪುಟದಲಿಶೋಭಿಸುತ್ತಿಹ ॥
ಪರಿಪರಿಯಮುದ್ರಿಕೆಗಳು ।
ಸುರಚಿರದನವರತ್ನ ಖಚಿತದಿ ।
ಮೆರುವುತಿಹಭೂಷಣಗಳೂ ॥
ಪುರಹರನುಪ್ರಮಥಾದಿಗಣಗಳ ।
ವೆರಸಿ ನಾನಾವಾದ್ಯಘೋಷದೊಳರೆಮಿಷದಲಿಪೊರಟುಬಂದನು ॥
ಧುರವನೀಕ್ಷಿಪೆನೆನುತಭರದಲಿ ।
ಬಂದನಾಗಾ । ಸಾಂಬನು । ಬಂದನಾಗಾ। ॥155॥

**ಭಾಮಿನಿ**

ಬಂದುರಣದಲಿಕಾದಿಮೂರ್ಛೆಗೆ ।
ಸಂದು ಮಲಗಿದನಿಜಶರಣರನು ॥
ನಿಂದುನೋಡುತಪ್ರಳಯಕಾಲದರುದ್ರನಾಗಿರಲೂ ॥
ಇಂದು ಶೇಖರನಿರವಕಾಣುತ ।

ಲಂದುಶತ್ರುಹನವನೆಡೆಗೆನಡೆ ।
ತಂದು ಕೋಪಿಸುತಾಗಳಾ ಹರನುಡಿದನಿಂತೆಂದೂ। ॥156॥

**ರಾಗ ಕೇತಾರಗೌಳ ಅಷ್ಟತಾಳ**

ಶತ್ರುಹಕೇಳ್ಸಮರದಲಿಪುಷ್ಕಳನು ಸದ್ಭಕ್ತರ । ಗೆಲಿದಿಹನೂ ॥
ಎತ್ತ ಪೋದನು ಈಗತೋರಿದರವನ । ಕೊಂದಿಕ್ಕುವೆಸಮರದಲೀ। ॥157॥

ಎಂದಾಗವೀರಭದ್ರನಕರದವನೊಡ । ನೆಂದನುಕೋಪಾದಲಿ ॥
ಇಂದುರಣಾ ಗೈದಿಪುಷ್ಕಳನನುಜಯಿ । ಸೆಂದೆನೆಕೇಳುತ್ತಲೀ। ॥158॥

ವೀರಭದ್ರನುಬರಲಿತ್ತಲುನಂದಿಯ । ಮಾರುತಿಯಿದ್ದೆಡೆಗೇ।
ಧೀರಕುಶಧ್ವಜನೆಡೆಗೆಪ್ರಚಂಡನ । ಮಾರಾರಿಕಳುಹಿದನು। ॥159॥

ಭಂಗಿಯನಾಗಸುಬಾಹುವಿನೊಳುಸುಮು ದಂಗೆಚಂಡನನೇಮಿಸಿ ॥
ಗಂಗಾಧರನುಂತಿರಲ್ಕೆಪುಷ್ಕಳನಿಂನುಬಾಣಂಗಳ ನೆಚ್ಚನಾಗಾ ॥ ॥160॥

ಮಡನುತ್ರಿಶೂಲವಬಿಡಲು ಖಂಡಿಸಿದನು । ನಡುವೆಪುಷ್ಕಳನದರಾ ।
ತಡೆಯದೀಕ್ಷಿಸಿ ವೀರಭದ್ರಖಟ್ವಾಂಗವ । ಪಿಡಿದಡಹಾದನಾಗ ॥161॥

**ರಾಗ ಶಂಕರಾಭರಣ ಮಟ್ಟೆತಾಳ**

ವೀರಭದ್ರಭರತಸುತನೊಳಾರು । ಭಟಿಸುತೆಂದನಾಗ ।
ಮಾರಹರನಸೇವಕರವಿಚಾರವರಿಯದೇ ॥
ಶೂರತನದಿಗೆಲಿದುಬಂದ । ವೀರವಿಕ್ರಮವನುನಿಲಿಸಿ ।
ಚಾರಿವರಿವೆನೋಳ್ಪುದೀಗಳೀರಣಾಗ್ರದಿ। ॥162॥

ಎಂದುಖಟ್ವಾಂಗದಿಂದ । ಲಂದುಪೊಡೆಯೆಪುಷ್ಕಳನಿಗೆ ॥
ಬಂದುಶಿರಕೆತಾಗೆಮೂರ್ಛೆ । ಯಿಂದಲೊರಗಿದ। ॥163॥

ಒಂದುಕ್ಷಣದಿ ಚೇತರಿಸುತ । ನಿಂದುಖಟ್ವಾಂಗವನ್ನು ।
ಛಿಂದಿಸಿದನು ಸಂಪ್ರತಾಪ । ದಿಂದಪುಷ್ಕಳ। ॥164॥

ಕೆರಳಿ ಕೋಪದಿಂದ ಭರತ । ಸುತನುವೀರಭದ್ರನಂನು ॥
ಧರೆಗೆಅಪ್ಪಳಿಸಲುಎದ್ದು । ಮರಳಿಯುದ್ಧದೀ। ॥165॥

ಬಳಿಕ ಮಲ್ಲಯುದ್ಧದಿಂದ । ಛಲದೊಳೈದುದಿವಸತನಕ ॥
ಕಲಹಗೈವುತೀ್ದರರಾಗ । ಳಲಸದೀರ್ವರೂ। ॥166॥

ತಳದುಕೋಪದಿಂದ ಪು । ಷ್ಕಳನುವೀರಭದ್ರನನ್ನು ।
ಕಳೆದುಬಡಿದನಂದುಪಥ್ವಿ । ಗೊರಗುತಾಕ್ಷಣಾ। ॥167॥

ನೊಂದು ವೀರಭದ್ರ ಭರತ । ನಂದನನಚರಣಪಿಡಿದು ॥
ನಿಂದು ಪಥ್ವಿಗಿಡಲು ॥ ಮೂರ್ಛೆ । ಯಿಂದಲೊರಗಿದ। ॥168॥

ಬಂದುಶಿರವನಾತ್ರಿಶೂಲ । ದಿಂದಬಡಿದುವೀರಭದ್ರ ॥
ಇಂದುಧರನಬಳಿಗೆಪೋದ । ನಂದುತೋಷದೀ। ॥169॥

**ಭಾಮಿನಿ**

ರಣದಿಪುಷ್ಕಳ ಬೀಳೆ ಕಾಣುತ ।
ಮನದೊಳಗೆಕಳವಳಿಸೆಸೈನ್ಯವು ।
ಘನತರದಕ್ಲೇಶದಲಿ । ಶತ್ರುಹನೆಡೆಗೆನಡೆತಂದು। ॥170॥

ಮಣಿದುಪುಷ್ಕಕೇಳನಳಿದುದನು ।
ಳ್ದನಿತರೊಳು ನಡೆತಂದು ಕುವರನ ।
ಗುಣವನೆನೆವುತ ದುಃಖಿಸುತಲಿಂತೆಂದಶತ್ರುಹನು। ॥171॥

**ರಾಗ ಆನಂದಭೈರವಿ ಏಕತಾಳ**

ಸುಂದರಕೋಮಲಗಾತ್ರದ । ಕಂದನೆನಿನ್ನನುಅಗಲಿರು ॥
ವಂದವಕಾಣೆನುಶಿವಶಿವ । ಮುಂದೇನುಗತಿಯೋ। ॥172॥

ಚಂದ್ರನಬಿಂಬವೋಲುವ । ಛಂದದೊಳಿಹನಿಂನಯಮೊಗ ॥
ವಿಂದೆಲ್ಲಿಗೆಪೋದುದೊನಿ । ರ್ಬಂಧದೊಳೀತೆರದೀ। ॥173॥

ಯೋಗೀವರನಗಸ್ತ್ಯನುತಾ । ನಾಗಿಯೆ ಬಂದೀತುರಗದ ।
ಯಾಗವರಚಿಸುವುದೆನಲಾ । ರಾಘವತಾನಂಬೀ। ॥174॥

ಆಗಲೆಯಜ್ಞವರಚಿಸುತ । ಬೇಗದೊಳೀತುರಗವಬಿಡೆ ॥
ಭೋಗಿವಿಭೂಷಣಸುತ । ಮುನಿದೀಗೀತೆರನಾಯ್ತೇ। ॥175॥

ಮತ್ತೀಯಜ್ಞದನೆವದಲಿ । ಪಥ್ವಿಪರೆಲ್ಲರಗೆಲಿದಿಹ ॥
ಸತ್ವವದೇನಾದುದೋ ಮ । ತ್ಸುತನೆಹಾವಿಧಿಯೇ। ॥176॥

ವ್ಯರ್ಥದಿಕೊಲಿಸಿದೆವೆಂಬಪ । ಕೀರ್ತಿಯುಬಂದೀಗತ್ಯಾ ॥
ಪತ್ತಿನೊಳೇಂಗೈದೆನು ಈ । ಶತ್ರುಗಳೊಡನಿಲ್ಲೀ। ॥177॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಇಂತುಶತ್ರುಹನುದುಃಖಿಸಲಾಗ । ಕಂಡು
ಕಂತು ಹರನು ಪೇಳ್ದನತಿಬೇಗ ॥
ಚಿಂತಿಸಲ್ಯಾಕಿನ್ನು ರಣದೊಳು । ಕ್ಷತ್ರ
ಪಂಥವಿರಲು ಕಾದುಕ್ಷಣದೊಳು। ॥178॥

ಪಾರ್ಥಿವ ಪಂಥಾದಿಪುಷ್ಕಳ । ತನ್ನ
ಸ್ವಾರ್ಥವಪಡದುದೇವರ್ಕಳ ॥
ಮಿತ್ರತ್ವಕನುವಾಗಿಪೋದನು । ಅವ
ನತ್ತಲೈದುವರೆಕಾದುವದಿನ್ನು। ॥179॥

ರುದ್ರ ಕಲಶವನ್ನು ಯಿಡದಿಹ । ದಕ್ಷ
ನದ್ವರಸಮಯದಿಗೆಲಿದಿಹ ॥
ಯುದ್ಧಾದಿಬಲವಂತನೆನಿಸೀದ । ವೀರ
ಭದ್ರನಿಂಮಣುಗನಜಯಸೀದ। ॥180॥

ಎಂದುಮೂದಲಿಸಲು ಕೇಳುತ್ತ । ರಘು
ನಂದನನತಿ ರೋಷದಾಳುತ್ತ ॥
ಇಂದುಶೇಖರಗಸ್ತ್ರವೆಸೆಯಲು । ತಾಗ
ಲಂದವನತಿಕೋಪಖತಿಯೊಳು। ॥181॥

ಪ್ರತ್ಯಸ್ತ್ರದಿಂದವನೆಸಯಲು । ಬಂದು
ಶತ್ರುಹನಿಗೆತಾಗಲಾಗಳು ॥
ಅತ್ಯಂತಕೋಪಾದಿಸೈವುತ । ಪೇಳ್ದ
ಕತ್ತಿವಾಸನಿಗೆ ತಾನೋಡುತ್ತ। ॥182॥

ಅಗ್ರಜರಾಮನನೆನೆವುತ್ತ । ಬಲು
ವಿಗ್ರಹದಲಿಕಾ । ದಾಡುತ್ತ ॥
ನಿಗ್ರಹಗೈವೆನುನೋಡೆಂದು । ಶತ್ರು
ಘ್ನಬ್ರಹ್ಮಾಸ್ತ್ರ ಬಿಡಲಿಕಂದು। ॥183॥

**ಭಾಮಿನಿ**

ಬರುವಬ್ರಹ್ಮಾಸ್ತ್ರವನು ನೋಡುತ ।
ಉರಗಭೂಷಣನಂದುಖತಿಯೊಳು ।
ಭರದಿಪ್ರತಿಶರವೆಸೆಯಲದಪರಿಹರಿಸಿ ಮುಂದೈದೆ ।
ತರಣಿಕುಲಜಗೆಬಂದುತಾಗಲು ।

ಧರಗೆಮೂರ್ಛಿತನಾಗಿಮಲಗಿರೆ ।
ಧರಣಿಪಾಲಸುಬಾಹುಮುಖ್ಯರ ಗೆಲಿದರಾಗಣರು। ॥184॥

**ಭಾಮಿನಿ**

ಮುನಿಪಕೇಳ್ಳೈಹರನಬಲವನು ।
ಮುರಿದುಹನುಮನುಮತ್ತೆ ತನ್ನೊಳು ।
ರಣಕೆನಿಂತೆಲ್ಲರನು ಬಾಲದಿ ಸುತ್ತಿಬಡಿಬಡಿದೂ ।
ತೆರಳಿಸಿದನುಳಿದವರರಣವನು
ಭರದಿಷಣ್ಮುಖಮುಖ್ಯರನು ಸಂ ।
ಗರದಿಸೋಲಿಸಿನಡೆದ । ಹರನಿದ್ದೆಡೆಗೆವಹಿಲದಲೀ। ॥185॥

**ರಾಗ ಸೌರಾಷ್ಟ್ರ ತ್ರಿವುಡೆ**

ಧರಣಿಪಾಲಕರಿಂತು ಮೂರ್ಛೆಯೊ । ಳೊರಗಲಾಸಮಯದಲಿಕಾಣುತ ।
ಮರುತಜನುಕೋಪಿಸುತಲೆಂದನು । ಪುರಹರನೊಳು। ॥186॥

ಇರುಳುಹಗಲಾರಾಹುಚಂದ್ರನ । ಸ್ಮರಿಸುತಿಹಸದ್ಭಕ್ತರಂದದೊ ।
ಳರಿತವನಸಹಜಾದಿಗಳ ಸಂ । ಹರಿಸಬಹುದೇ। ॥187॥

ಈಶನೊಳುರಣದೊಳಗೆ ನೀವಿ । ಶ್ವಾಸಘಾತಕತನವಗೈದುದ ।
ನೀಸಮಯದಲಿನಿನ್ನಶಿಕ್ಷಿಸೆದೋಷವುಂಟೆ। ॥188॥

ಎಂದುದನುಕೇಳುತ್ತಲಾ ಶಿತಿ । ಕಂಧರನುಮಾರುತಿಯನೀಕ್ಷಿಸು ।
ತೆಂದತನ್ನಯಪರಿಭವವತಾ । ನಂದುಸುರ್ದ ॥ ॥189॥

**ರಾಗ ಭೈರವಿ ಝಂಪೆತಾಳ**

ಮರುತಜನೆದೈನ್ಯನಹೆ । ಧುರವಿಜಯನೀನೆಂದ ।
ಪರಿಗೆನಗೆಖತಿಯಿಲ್ಲ । ವರದಪೆನುನಿನಗೇ। ॥190॥

ಧರಣಿಪನುತಪವೆಸಗಿ । ವರವಪಡದುದರಿಂದ ।
ಪರಿವಾರಸಹಿತಲಾ । ನಿರುವೆನೀಪುರದೀ। ॥191॥

ಯಾಗಾಶ್ವವನುಕಟ್ಟ । ಲಾಗಿರುಕ್ಮಾಂಗದನು ।
ಈಗಳೀರಣದೊಳಿದಿ। ರಾಗಿಮೂರ್ಛಿಸಲೂ। ॥192॥

ಶರಣರಾಪತ್ತು ಪರಿ । ಹರಿಸದಿರಲಪಕೀರ್ತಿ ।
ಬರುವದೆಂದೀಗಳಾ । ಧುರವನೆಸಗಿದೆನು। ॥193॥

ರಾಮಸೈನ್ಯವುಬೀಳೆ | ನಾನುರಣಕೈತಂದೆ |
ಸೋಮಶೇಖರನೇ | ಸಂಮವನುತೋರು| ||194||

ರಘುವರನ ಮನದೊಳಗೆ | ನೆನದುಶರ್ವನೊಳಾಗ |
ಅನುವರಕೆನಿಂದನತಿ | ಕಿನಿಸಿನಿಂದಾಗಾ| ||195||

ಎಂದುಮೂದಲಿಸುತ್ತ | ಲಂದು ಹನುಮನುಗಿರಿಯ |
ಲಿಂದುಶೇಖರನಹೊ | ದಂದಗೆಡಿಸುತಲೀ| ||196||

**ರಾಗ ಪಂತುವರಾಳಿ ಮಟ್ಟೆತಾಳ**
ವಾತಸುತನುಶಿಲೆಯೊಳಿಡಲು ಭೂತನಾಥನೂ |
ಸೂತಧ್ವಜವುತುರಗರಥಗ | ಳಾತತೂಕ್ಷಣಾ
ಘಾತಿಸಲ್ಕೆ ನಂದಿಯಡರಿ | ಪ್ರೇತಪತಿಯಿರೇ |
ಕಾತರಿಸುತಸುರಕದಂಬ | ವೀಕ್ಷಿಸುತಲಿರೇ ||197||

ಕನಲುತಾಗಶಿಲೆಗಳಿಂದ ಅನಿಲಜಾತನೂ |
ಘನಪರಾಕ್ರಮದಲಿಹೊಯ್ದ | ನೇನನೆಂಬೆನೂ|
ಅನಿತರೊಳುತ್ರಿಶೂಲದಿಂದ | ಪೊಡೆಯೆಶರ್ವನು |
ಹನುಮನದರಪಿಡಿವುತಾಗ | ಕ್ಷಣದಿಮುರಿದನೂ| ||198||

ಬಳಿಕಶಕ್ತಿಯಿಂದಪೊಡೆಯೆ | ಶಿವನುಕೋಪದೀ |
ಫಳಿಲನೈದೆತಾಗಲಾಗಹನುಮ | ಕ್ಲೇಶದೀ |
ಕನಲಿಭಾರಿವಕ್ಷದಿಂದ | ಪೊಡೆಯಲಾಗಲು |
ತಳುವದಾಗಪಣಿಗಳೆಲ್ಲ | ಬಳಲುತೋಡಲು| ||199||

ಮುಸಲದಿಂದಪೊಡೆಯಲದರ | ದೆಸೆಯತಪ್ಪಿಸೀ |
ಬಿಸಜನೇತ್ರನನ್ನುಸ್ಮರಿಸು | ತಸಮಸಾಹಸೀ |
ಕುಶಲದಿಂದಖಡ್ಗಮುದ್ಗ | ರಾದಿಶರಗಳು |
ವಸುಧೆನಡುಗೆಮುರಿದುಚೂರ್ಣ | ಗೈದುಖತಿಯೊಳು| ||200||

ಕಿತ್ತು ಪರ್ವತಗಳಹನುಮ | ಪೊಡೆಯೆಭರದೊಳು |
ಕತ್ತಿವಾಸಗೆಲಿದನದರ | ಮತ್ತೆಖತಿಯೊಳೂ |
ಮತ್ತೆಪವನಜಾತಪರ್ವ | ತಗಳಪೊಡೆಯಲು |
ಸತ್ವಗುಂದಿಶಾರ್ವನಂದಿ | ಮತ್ತೆಬೆದರಲು| ||201||

**ರಾಗ ಸಾಂಗತ್ಯ ರೂಪಕತಾಳ**
ನಂದಿತ್ರಾಣವುಗುಂದಿಮುಂದುಗಾಣದೆಭಯ | ದಿಂದಿರಲಾಗಶಂಕರನು |
ಮುಂದೆಸೆಯೊಳುಧುರಕೆಂದು ನಿಂದಿಹವಾಯು | ನಂದನನನು ಕರೆದೆಂದ| ||202||

ಇಂದುನಿನ್ನಯರಣದೊಳಗೆಸೋತೆನುಈಗ । ಮುಂದೆಸೈರಿಸುಪರಾಕ್ರಮಿಯೇ।
ಚಂದವಾಯಿತುಭಕ್ತರೊಳಗೇ ಬಲ್ಲಿದನು । ನಿನ್ನಂದದಭಕ್ತರ ಕಾಣೆ। ॥203॥

ರಾಮನಕಪೆಯಿಂದನಮ್ಮಗೆಲಿದೆನೆಂಬ । ಪ್ರೇಮವಿನ್ನೇನಾವೇಳುವೆನೂ ।
ಕಾಮುಕನಲ್ಲಶ್ರೀಹರಿಯಸದ್ಭಕ್ತರು । ನಾಮಧಾರಕರುಬಲ್ಲಿದರೂ। ॥204॥

ದಾನಧರ್ಮವುಯಜ್ಞ ಹೋಮತಪವನ್ನು । ಮಾಡದೇನಂಮ್ಮನುಗೆಲಿದೇ ।
ನಾನುಮೆಚ್ಚಿದೆಬೇಡು ವರವನೆಂದೆನೆಕೇಳಿ । ವಾನರೇಂದ್ರನುಪೇಳ್ದನಾಗ। ॥205॥

ರಾಮಾನುಗ್ರಹದಿಂದ ಕ್ಷೇಮಿಗಳ್ಯೆನಾವು । ನೀಮನವಲಿದುಯುದ್ಧದಲಿ ।
ಪ್ರೇಮಾದಿಂಕೇಳಿದರಿಂದಾನಾನುಸುರವೆ । ಯೀಮಹಾಪುಷ್ಕಳಾದಿಗಳಾ। ॥206॥

ರಣದಿಮೂರ್ಛೆಯನಾಂತುಪೆಣದಂತೆಮಲಗಿಹ । ಯಿನಕುಲೇಶಾದಿಗಳಿರವಾ । ವಿನಯಾದಿಂಜೀವಿಸಲನುವಾಗಿಪೋಪೆನು ।
ಘನವೇಗದಿಂ ದ್ರೋಣಗಿರಿಗೆ। ॥207॥

ಬರುವನಕಿವರಂಗದಿರವೇನು ಕೆಡದಂತೆ । ಯಿರುನೀನುಗಣಸಹಿತಿಲ್ಲೀ ।
ಭರದಿಂದಲಿಂದ್ರಾದಿಸುರರೆಲ್ಲಜಯಿಸಿ ನಾ । ತರುವೇಸಂಜೀವನವೀಗಾ। ॥208॥

**ಭಾಮಿನಿ**

ಎಂದುನುಡಿಯನುಕೇಳುತಾಶಿತಿ
ಕಂಧರನುನಸುನಗುತಪೇಳಿದ ।
ನಿಂದಿವರಕಾದಿರುವೆನೀನೌಷಧವ ತಹುದೆನಲು ॥
ಮಂದಹಾಸದೊಳಾಗಪವನಜ ।
ಸಿಂಧುಶಯನನಸ್ಮರಿಸಿಹಾಯ್ದನು ।
ಒಂದುಕ್ಷಣದಲಿದ್ರೋಣಪರ್ವತ ಕೇನನುಸುರೆವೆನು। ॥209॥

**ರಾಗ ದೇಶಿ ಅಷ್ಟತಾಳ**

ಕಾಣುತಾಗಳುದ್ರೋಣಪರ್ವತವ ಸು ।
ತ್ರಾಣಿಮಾರುತಿಸುತ್ತಿಬಾಲದಿ । ಮಾಣದಾಕ್ಷಣಕೀಳಲು। ॥210॥

ಗಿಡುಮರಂಗಳುಬುಡಸಹಿತಲ್ಲಲ್ಲಿ ।
ಉಡಿದುಬೀಳಲುಕಾದಿರುವ ಸುರಂಗಡಣವೀಕ್ಷಿಸಿಬೆದರುತ। ॥211॥

ಏನಿದಾಶ್ಚರ್ಯವೀಮಹಾಗಿರಿಯನು ।
ಹಾನಿಗೈದವ್ಯಾರರೆನುತಲಿರೆ । ವಾನರೇಂದ್ರನಕಂಡರು। ॥212॥

**ರಾಗ ಶಂಕರಾಭರಣ ಮಟ್ಟೆತಾಳ**

ವಾತಸುತನನೂ | ಕಂಡುಸುಭಟರೂ |
ಖಾತಿಯಿಂದಲಸ್ತ್ರಚಯವನಾತಗೆಸದರೂ| ||213||

ಭರದೊಳೈದುತಾ | ವಜ್ರದೇಹಕೆಸ
ರಳುನಾಂಟದಿಳೆಗೆಬೀಳು | ತಿರಲುನಿಮಿಷಕೇ| ||214||

ಪವನಜಾತನೂ | ಶಿಲೆಗಳಿಂದಲೇ |
ದಿವಿಜಗಣವಪೊಯ್ದನಾಗ | ತವಕದಿಂದಲೇ| ||215||

ಕಾಲಿನಿಂದಲೀ | ಬಾಲದಗ್ರದೀ |
ಕೀಳುತಾಗಹೊಯ್ದನತಿವಿರಾಲವಕ್ಷದೀ ||216||

ಕೆಲರುಘಾಯದಿ | ಬೀಳುತೇಳುತಾ |
ಬಳಲಿಮೂರ್ಛೆಯಿಂದ ಅರುಣ | ಜಲವಕಾರುತಾ| ||217||

**ಭಾಮಿನಿ**

ಮಾರುತಿಯಹೊಲಿನಲಿನಿರ್ಜರ |
ವಾರಕಂಗೆಟ್ಟೋರಲಿಭಯದಲಿ |
ಚಾರಕರುನಡೆತರುವದೀಕ್ಷಿಸು ತಾಗಸುರಪಾಲ ||
ಯಾರುನಿಮಗೀಪರಿಯಭಂಗಿಸಿ |
ಗಾರುಗೆಡಿಸಿದವೀರನೆಲ್ಲಿಹ |
ತೋರಿಸಲಿಕಾತನನುಶಿಕ್ಷಿಪೆನೆನಲಿಕುಸುರಿದರೂ| ||218||

**ರಾಗ ಮುಖಾರಿ ಆದಿತಾಳ**

ಲಾಲಿಪುದೀಗನಿರ್ಜರೇಶ | ಪೇಳುವೆನಿಂಮೊ | ಳಾಲಸ್ಯವಿಲ್ಲದೆಮ್ಮಕ್ಲೇಶ |

ಚಂದ್ರದ್ರೋಣಪರ್ವತದಲ್ಲಿ | ಕಾದಿರಲುವಾನ | ರೇಂದ್ರನೋರ್ವನುಬಂದನಲ್ಲೀ ಮಂದಮತಿಯುತಾ | ನಿಂದತಿಧೈರ್ಯದಿ
ಕುಂದದೆಬಾಲದಿಗಿರಿಯನುಕೀಳುವೆ
ನೆಂದೆನುತಲ್ಲಿಯೆನಿಂದಿರುತಿರಲು ಲಾಲೀಪುದೀಗ| ||219||

ಕಂಡುಪೇಳಲುಪೋಗದಿರಲು | ನಾವೆಲ್ಲರುಮುಂ | ಕೊಂಡು ಶಸ್ತ್ರಾಸ್ತ್ರಗಳನುಬಿಡಲೂ ||
ಪುಂಡುತನದೊಳವನಂಡಲವುತಕಲು | ಗುಂಡುಮರಗಳಿಂದಿಂಡುದರಿದುರಣ |
ಮಂಡಲದೊಳಗೆ ಪ್ರಚಂಡಗೆಲಿದನು | ಲಾಲೀಪುದೀಗ| ||220||

ಹೊಳೆವುತ್ತಲಿಹುದುವಜ್ರಾದೇಹಾ । ಪರ್ವತದಂತೆ । ಬೆಳದೀಹನೀಕ್ಷಿಸಿದೇವನಾಹಾ ।
ಬಲವಂತನು ಕಪಿಕುಲದಲಿ ಶೂರನು । ಕಳವಳಗೊಳುತಿದೆ ಗೆಲುವರಸಾದ್ಯವು ।
ತಳುವದೆನೀವಾಬಲಿಮುಖನೆಡೆಗೈ । ದಲಸದೆಯುದ್ಧಕೆನಿಲಲಸದಳವು। ॥221॥

**ವಾರ್ಧಕ**

ಚರರನುಡಿಯನುಕೇಳಿ ಸುರಪಾಲಕೋಪದಿಂ ।
ಪರಿಪರಿಯಸೇನಾಸಮೂಹಮಂಕಳುಹಲ್ಕೆ ।
ಧುರದಿಕ್ಷಣಮಾತ್ರಕ್ಕೆಮೂರ್ಛೆಗೊಳಿಸಲ್ಕದರ । ಪರಿಯಕೇಳುತಲಿಂದ್ರನೂ ॥
ಭರಿತರೋಷದಿಶಾಕಿನಿಯು ಡಾಕಿನಿಯು ಸಹಿತ ।
ಧುರಪರಾಕ್ರಮಿಗಳಂಕಳುಹಲವರೈತಂದು ।
ಮರುತಜನಪರಿಯ । ನೀಕ್ಷಿಸುತತಮ್ಮೊಳಗೆಮಾತಾಡಿದರದೇಂಪೇಳ್ವೆನೂ। ॥222॥

**ರಾಗ ನಾದನಾಮಕ್ರಿಯ ಆದಿತಾಳ**

ಈಕೀಶನಗೆಲಲಾರದೇ । ಸೋತು । ನಾಕೇಶಗರುಹಲುಮಾಜದೇ ।
ತಾಕಳುಹಿದನಮ್ಮನ್ಯಾತಾಕೇ । ಇಂಥಾ । ಈಕಪಿಯೊಳಗೆರನಾಗ್ರಕೇ ॥223॥

ಮಂಗನಂತಿರುವಯೀವೀರನು । ರಣ । ರಂಗದೊಳಿವನತಿಶೂರನು ।
ತಂಗಿನಿಂನೊಡನಾಗದೀತನಾ । ಗೆಲು । ವಂಗಬೇರಿಹುದುನೋಡೀಕ್ಷಣಾ। ॥224॥

ಎನುತಮಷ್ಟಿಯೊಳಾಗಶಾಕಿನೀ । ತಿವಿ । ವನಕೃತಿನ್ನುವನೆಂದಾಡಾಕಿನೀ ।
ಕನಲಿಬಾಯ್ದೆರವುತ್ತಬರಲಾಗ । ಕಂಡು । ವನಜಾಕ್ಷದೂತನೆಂದನುಬೇಗಾ। ॥225॥

ನೀಲಪಿಶಾಚರಂದದಿಬಂದೂ । ಕಾದಿ । ಸಾವಿರಿವ್ಯರ್ಥನಂಮೊಡನಿಂದು ।
ಆವೀರನೊದೆಯಲುಮೂರ್ಛಿಸೀ । ಬಿದ್ದು । ಜೀವಿಸುತೆಂದರುಕೋಪೀಸೀ। ॥226॥

ವಾನಾರನಾಗೀನೀಬೆದರಾದೇ । ಕಾದಿ । ದಾನವಸ್ತ್ರಿಯರಿವರಿಯದೇ ।
ಪ್ರಾಣವಕೊಡದಿರೆನುತಲಾಗಾ । ಸ । ತ್ರಾಣದಿಪೊಡೆಯೇ ಮಾರುತಿಬೇಗಾ। ॥227॥

ಬಾಲದಿಸುತ್ತಿಬಡಿಯಲಂದು । ಬೀಳು । ತ್ತೇಳುತೋಡುತಲೀರ್ದರವರಂದೂ ।
ತಾಳಿಕೋಪವನು ಮಾರುತಸೂನು । ಸುರ । ಪಾಲಸುಭಟರೊಡನೆಂದನು। ॥228॥

**ರಾಗ ಭೈರವಿ ಆದಿತಾಳ**

ಸುರಭಟರಿರನಿಮ್ಮನೂ । ಕಂಡೀಗಳು । ಪರಿತೋಷವಾಯಿತಿನ್ನೂ ।
ಧುರದೊಳೀಕ್ಷಣಯಮಪುರಕಟ್ಟಿಕೀರ್ತಿಯ । ಮೆರಸುವೆನೋಡೆಂದನು। ॥229॥

ಕೇಳಿರೋಷದಿಸುರರೂ | ಕಪಿಯನಸ್ತ್ರ | ಜಾಲದಿಮುಸುಕೀದರು |
ಶೂಲಮುಸುಲ ಮುದ್ಗರಾದಿಗಳಿಂದ ಮ | ರಾಳಿರೋಷದಿಪೊಯ್ಯಲು| ||230||

ಬಳಿಕನಿಲಜನವರ | ಬಾಲದೊಳಿಂದು | ಕಳದುಪೊಡೆಯೆಸುರರ |
ಬಲವುಮುರಿಯೆಕೇಳಿವೈರಿತಲೆಗತ್ತಿ | ಗುರುವಿನೊಳೆಂದನಾಗ ||231||

**ರಾಗ ಕಲ್ಯಾಣಿ ಅಷ್ಟತಾಳ**

ಲಾಲಿಸುಗುರುವರನೇ | ವೇದಾಂತವಿ | ಶಾಲಕಪಾಕರನೇ | ||ಪ||

ಚಂದ್ರದ್ರೋಣದಗಿರಿಗೇ | ಕಾವಲನಿಟ್ಟು | ಬಂದಿರಲೀವರೆಗೇ |
ಚಂದದೊಳಿರುತಿರಲೂ | ಧುರಧೀರ | ವಾನರನೈದೀಗಳು ||232||

ಬಾಲವಸುತ್ತುತಲೀ | ಪರ್ವತವನ್ನು | ಕೀಳುವಸಮಯದಲೀ |
ತಾಳಿಕೋಪವಭಟರು | ಯುದ್ಧವಗೈದು | ಸೋಲುತ್ತಅನಿಮಿಷರು ||233||

ಬಂದೆನ್ನೊಳರುಹಲಿಕೇ | ನಿರ್ಜರಸೇವಾ | ವಂದವನಾಕ್ಷಣಕೇ |
ಕುಂದದೆಕಳುಹಿಸಲು | ಯರಡುಭಾರಿ | ಗುಕೊಂದನುನಿಮಷದೊಳು| ||234||

ಎಂದುದಕೇಳುತ್ತಲೀ | ಗುರುವರನುತಾ | ನಂದತಿಹರುಷದಲೀ |
ಇಂದ್ರನನೀಕ್ಷಿಸುತಾ | ಕೇಳಿದನವ | ನಂದುತಾನಸುನಗುತಾ ||235||

**ರಾಗ ಸೌರಾಷ್ಟ್ರ ತ್ರಿವುಡೆ**

ಸುರಪಕೇಳ್ತವಶತ್ರುವಾಗಿಹ | ದುರುಳದಶಕಂಠಾದಿಗಳ | ಸಂ
ಹ್ಮರಿಸಿರುವಶ್ರೀರಾಮಚಂದ್ರನ | ಶರಣನೀತ| ||236||

ಆರಮಾಪತಿತುರಗಮೇಧವ | ತಾರಚಿಸುತಶ್ವವನುಬಿಟ್ಟರೆ |
ವೀರಮಣಿಯಾತ್ಮಜನುಕಟ್ಟಲು | ಶೂರತನದೀ| ||237||

ರಾಮನನುಜಾದಿಗಳರಣದಲಿ | ಸೋಮಶೇಖರಗೆಲಿದಿರಲು | ನಿ
ಸ್ಸೀಮಮಾರುತಿಬಂದಿಹನು ಸು | ತ್ರಾಮಕೇಳೈ| ||238||

ನೂರುವತ್ಸರಕಾದಲಾ ಕಪಿ | ವೀರಸೋಲನುಹರನಗೆಲಿದಿಹ |
ಚಾರುಸಂಜೀವನವೆನಿತ್ತುಪ | ಚಾರದಿಂದಾ| ||239||

**ಭಾಮಿನಿ**

ಗುರುವರನವಾಕ್ಯವನುಕೇಳುತ |
ಸುರಪನುಸುರಿದನೀಗಳಾನಾ |

ಮರುತಜನಯೆಡೆಗೆಂತುಪೋಗುಲಿ ಕೋಪದಿಂದಿಹನು ||
ಸುರಕುಲದಜೀವನವುಮತ್ತಾ |
ಪರಮಸಂಜೀವನವನೀವಡೆ |
ಕರುಣದಿಂನೀವೆಮ್ಮೊಡನೆ ಬಹುದೀಗಳೆಂದೆನಲು| ||240||

**ರಾಗ ಸವಾಯಿ ಏಕತಾಳ**

ಸುರಪಾಲಕಸಹಿತೈದಿದನಾಗಳು | ಮರುತಜನೆಡೆಗೆ ಬೃಹಸ್ಪತಿಯೂ |
ಚರಣದೊಳೆರಗೆಸುರೇಶ್ವರಮನ್ನಿಸಿ | ಹರುಷದೊಳಿರುತಿರೆಮಾರುತಿಯು| ||241||

**ರಾಗ ಸಾಂಗತ್ಯ ರೂಪಕತಾಳ**

ಅನಿಲಜನೊಡನೆಬೃಹಸ್ಪತಿಯುಸುರೀದ | ಅನಿಮಿಷಾಧಿಪನಜ್ಞಾನದಲಿ |
ಘನಪರಾಕ್ರಮಿನಿನ್ನ ಸತ್ಯವನರಿಯದೆ | ಕನಲಿಸಿದುದಕ್ಷಮಿಸುವದು| ||242||

ಎಂದುಪಚರಿಸಿದೌಷಧವಿತ್ತು ಕಳುಹಲಾ | ನಂದದಿಮಾರುತಿಯಾಗ |
ಸಿಂಧುವನುತ್ತರಿಸುತಲಭ್ರಮಾರ್ಗದಿ | ಬಂದನು ಸೇನೆಯಿದ್ದೆಡಗೇ| ||243||

**ದ್ವಿಪದಿ**

ಮಡಿದಿರುವಪುಷ್ಕಳನ ಶಿರವಪವನಜನು |
ಸಡಗರದಿಕಂಧರಕೆಸಂಧಿಸುತಾತನನು | ||244||

ರಾಮಚಂದ್ರನೊಳು ಸದ್ಭಕ್ತಿಯಿರಲೆನಗೇ |
ಈಮಹಾಪುಷ್ಕಳನು ಜೀವಿಸುವದ್ದೀಗೆ| ||245||

ಎನುತೌಷಧವನೀಯಲೆದ್ದು ಪುಷ್ಕಳನು |
ಕ್ಷಣದಿಜಯಸುವೆನೆಂದವೀರಭದ್ರನನು| ||246||

ಶತ್ರುಘ್ನನೆಡೆಗೈದಿ ಬ್ರಹ್ಮಚರ್ಯದಲಿ |
ಸತ್ಯವಿರೆ ತನ್ನಲಿವನೀಗಜೀವಿಸಲಿ| ||247||

ಎಂದುಸಂಜೀವನಿಯನೀಯೆಶತ್ರುಹನು |
ನಿಂದುಶಿವನೆತ್ತಲೈದಿದನೆನುತಲವನು| ||248||

ಕಂಡುಸಂತೋಷದಲಿತೆಗೆದುಬಿಗಿಯಪ್ಪಿ |
ಇಂದುನಮ್ಮದ್ಧರವಕಾಯ್ದೆನೆನುತಪ್ಪಿ| ||249||

ಬಿದ್ದವರನೆಲ್ಲಎಬ್ಬಿಸಿಯೆಹನುಮಂತ |
ಧೂರ್ಜಟಿಯಕರದಿತ್ತಬಲಸಹಿತಲತ್ತ| ||250||

ಉಭಯಬಲವೆಲ್ಲರೇಳಲ್ಕೆಸಂತಸದೀ |
ಒದರಿದವುನಿಸ್ಸಾಳೆಕಹಳಗಳುಮುದದೀ| ||251||

**ವಾರ್ಧಕ**

ರಣದಿಮೂರ್ಛಿಸಿದವರನೆಲ್ಲರಂಜೀವಿಸಲು |
ಅನಿತರೊಳುತಂತಮ್ಮಶಸ್ತ್ರಾಸ್ತ್ರಗಳಪಿಡಿದು |
ಮಣಿರಥವನೇರಿಪುಷ್ಕಳವೀರಭದ್ರನೊಳು ಮಾರುತಿಯುನಂದಿಯೊಡನೇ|
ಘನಪರಾಕ್ರಮದಿಂದವೀರಮಣಿಯೊಡನೆತಾಂ |
ಧನು ಪಿಡಿದು ಶತ್ರುಹನು ಕಣೆಗಳಂ ಸುರಿಸಲ್ಕೆ |
ಧನುಜೇಂದ್ರ ವಾರುಣಾಸ್ತ್ರವನು ಮಂತ್ರಿಸುತಾಗ ಭರದಿಂದ ತಾನೆಚನೂ ||252||

**ರಾಗ ಶಂಕರಾಭರಣ ಮಟ್ಟೆತಾಳ**

ವಾರುಣಾಸ್ತ್ರಹತಿಗೆಬಲತು | ಷಾರದಿಂದಬೆದರಲಾಗ |
ಮಾರುತಾಸ್ತ್ರವೆಸದನಾಗ | ವೀರಶತ್ರುಹಾ | ||253||

ಗಾರುಗೆಡಿಸುತಿರಲಿಕಾಗ | ವೀರಮಣಿಯುಪರ್ವತಾಸ್ತ್ರ
ವಾರುಣಾಸ್ತ್ರದೊಳಗೆಬಿಡಲು | ಭೂರಿಕೋಪದೀ| ||254||

ಕಾಣುತಾಗಲೆಸದಕುಲಿಶ | ಬಾಣಗಳನುಶತ್ರುಹಾಖ್ಯ |
ಮಾಣದಾಗಗಿರಿಗಳೆಲ್ಲಚ | ಧರ್ಣವಾಗಲೂ | ||255||

ಆನರೇಂದ್ರಕೋಪದಿಂದ | ಭಾನುಕುಲಜಗಂದುಬ್ರಹ್ಮ |
ಸಾಣೆಯಲಗಿನಿಂದಲೆಚ್ಚ | ನೇನನೆಂಬೆನೂ ||256||

ಬಳಿಕಮೋಹನಾಸ್ತ್ರದಿಂದ | ಜಲಜನೇತ್ರನನುಜನೆಸೆಯೆ |
ಯಿಳೆಯಪಾಲರೆಲ್ಲಮೂರ್ಛೆ | ಯೊಳಗೆಬೀಳಲು || ||257||

ಹನುಮಪುಷ್ಕಳಾದಿಭಟರು | ಧುರದಿವೈರಿಬಲವನೆಲ್ಲ |
ಗಣನೆಯಲ್ಲದಂತೆ ಸವರ್ದ | ರಲಘುವೀರರು| ||258||

ಕಂಡುಗಣರುಮುಸಕಲಾಗ | ಗಂಡುಗಲಿಯುಹನುಮನವರ |
ತಂಡವೆಲ್ಲಬಾಲದಿಂದ | ದಿಂಡುಗೆಡೆಯಲೂ || ||259||

ಕಂಡುಹರನುಭಕ್ತರೆಲ್ಲ | ರಿಂದುಸೋತರೆಂಬುದರಿದು |
ಬಂದುಶರ್ವಮುರಿಯೆಬಲವ | ಕಂಡುಶತ್ರುಹ| ||260||

ಧೀರರೀರ್ವರಾಗರಣದಿ । ಘೋರಯುದ್ಧವೆಸಗುತಿರಲು ।
ಮಾರಹರನಖತಿಯೊಳಂದು । ವೀರಶತ್ರುಹಾ ॥ ॥261॥

ಗಾರುಗೆಡುತಮನದೊಳಂದು ಮಾರಮಣನಸ್ಮರಿಸುತಿರಲು ।
ಭೂರಿಕರುಣದಿಂದಬಂದ ಪಾರಮಹಿಮನೂ। ॥262॥

**ಭಾಮಿನಿ**

ಪರಮಪಾವನಮೂರ್ತಿರಾಮನ ।
ಚರಣಕಮಲಕೆಮಣಿದುಶತ್ರುಹ ।
ನಿರಲುಮಾರುತಿಬಂದುನಮಿಸಿದರಾಘವನಪದಕೇ ।
ಹರನು ರಾಮನ ಬರವಕಾಣುತ । ಸ್ಮರಿಸುತ್ಯೆತಂದಡಿಗೆರಗುತಿರೆ ।
ಕರಕಮಲದಿಂದೆತ್ತಿಮನ್ನಿಸಲೀಶನಿಂತೆಂದ। ॥263॥

**ರಾಗ ಮಾರವಿ ಏಕತಾಳ**

ಲಾಲಿಪುದೆನ್ನಬಿನ್ನಪವಶ್ರೀನಾಥಾ । ಪಾಲಿಸಬೇಕುದುರ್ಗುಣವಪ್ರಖ್ಯಾತಾ ।
ಮೂಲವೇಕತ್ವವಾಗಿರಲಿಕಾದಿಯಲೀ । ಮೇಲೆತ್ರೈಮೂರ್ತಿಗಳಾದೆವಂದಿನಲೀ। ॥264॥

ಸೃಷ್ಟಿಯುತ್ಪನ್ನಕೋಸುಗಬ್ರಹ್ಮನೆನಿಸಿ । ಶಿಷ್ಟರಕ್ಷಣೆಗಾಗಿನೀನವತರಿಸೀ ।
ಸಿಟ್ಟಿನಿಂದುಗ್ರರೂಪದಿನಾಶಗೈವಾ । ನಿಷ್ಟುರಕಾರ್ಯಕಾನಾದೆನುದೇವಾ । ॥265॥

ತವಚರಣದಿಜನಿಸೀರ್ಪಜಾನ್ಹವಿಯಾ । ತವಕದಿಶಿರದೊಳಾಂತುದನುನೀನರಿಯಾ ।
ಅವನಿಪವೀರಮಣಿಯುಉಜ್ಜನಿಯಲೀ । ವಿವಿಧಭಕ್ತಿಯೊಳುತಪಃಶ್ಚರಣೆಯಲೀ। ॥266॥

ಒಲಿಸುತ್ತಕೇಳ್ದಪ್ರಮಥಗಣಸಹಿತಾ । ನಲವಿಂದಲೀಪುರದೊಳಗಿಹುದೆನುತಾ।
ಇಳಯಪಾಲಕಗಿತ್ತಭಾಷೆಗೆಂದಾನೂ । ಉಳಯಲೀತೆರನಾದುದೇನೆಂಬೇನೀನೂ ॥267॥

ರಾಮನದರುಶನವಾಗುವಾತನಕಾ । ಪ್ರೇಮದಿಂತವಮಂ ದಿರದೊಳೀರ್ಪೆಬಳಿಕಾ ।
ನೀಮನಬಂದಂತಿರುವದೆನುತವಗೇ । ನಾಮುನ್ನ ವರವಿತ್ತುದಾಯ್ತುಈವರೆಗೇ। ॥268॥

**ಭಾಮಿನಿ**

ಇತ್ತಭಾಷೆಯಸಲಿಸಲೋಸುಗ ।
ಪಥ್ವಿಪನರಕ್ಷಣೆಗೆಯುದ್ಧದಿ ।
ಶತ್ರುಹಾದಿಗಳೊಡನೆಸೆಣಸಿದೆಕ್ಷಮಿಸಬೇಕೆನಲು ॥
ಚಿತ್ತದಲಿಪರಿತೋಷಗೊಳುತರ ।
ಘೂತ್ತಮನುನಿನಗೆನಗೆಭೇದಗ ।
ಳೆತ್ತಣದು ಸದ್ಭಕ್ತರನುಪಾಲಿಪೆನುತಾನೆಂದೆ। ॥269॥

**ರಾಗ ಮಾರವಿ ತ್ರಿವುಡೆ**

ವೀರಮಣಿಮುಖ್ಯರನುಬಳಿಕಾ । ಮಾರಹರನೆಬ್ಬಿಸುತಕರತಂ
ದಾರಘೂತ್ತುಮನೊಡನೆಪೇಳಿದ । ಭೂರಿಕರುಣದೊಳಾಗಳು। ॥270॥

ತವಕರುಣದಿಂದೀವರಗೆನಾ । ನಿವರಕಾದಿಹೆನೀಗಳೀತನು ।
ಅವನಿಧನಕನಕಾದಿವಸ್ತುವ । ತವಚರಣಕೊಪ್ಪಿಸುವನು। ॥271॥

ಎನಲುಕೇಳುತವೀರಮಣಿಯಾ । ಜನಪರಾಮನ ಪದಕೆಮಣಿಯಲು ।
ಘನತರದಸಂತಸದೊಳಾತನ । ವಿನಯದಿಂ ಮನ್ನಿಸಿದನೂ॥272॥

ಬಳಿಕತುರಗವಲಂಕರಿಸುತಲಿ । ಜಲಜಲೋಚನನಡಿಯೊಳೊಪ್ಪಿಸೆ ।
ನಲವಿನಿಂದಲಿವೀರಮಣಿ ಬೆಂ । ಬಲಕೆನುತಪೊರವಂಟನು। ॥273॥

ರಾಮನಂತರ್ಧಾನವಾಗಲು । ಸೋಮಶೇಖರಪುರಕೆಪೋಗಲು ।
ಭೀಮವಿಕ್ರಮವೀರಮಣಿಸಹ । ಪ್ರೇಮದಿಂದಿರಲಿತ್ತುಲು। ॥274॥

**ವಾರ್ಧಕ**

ವರಮಹಾರ್ಬಲಸಹಿತಶತ್ರುಘ್ನನಾ ಯಾಗ ।
ತುರಗದೊಡನೈದಲ್ಕೆ ಕುಂಡಲಾಪುರದೊಳಗೆ
ಧರಣಿಪಾಲಕಸುತನಶ್ವವಂಕಟ್ಟಿಪುಷ್ಕಳಮುಖ್ಯರನುಬಂಧಿಸೀ ।
ಭರದಿಕೊಂಡ್ಯೊಯ್ದುತಿವರನುನಪತಿರಾಜಮಂ
ದಿರಕಾಗಿ ಸೆರೆಮನೆಯೊಳಿ । ಡೆಮರುತಜಾದಿಗಳು ।
ಸ್ಮರಿಸಲ್ಕೆರಾಘವಂಕಪೆಯೊಳೈತಂದಾಗ ಬಿಡಿಸಿದನುನಿಜಸೈನ್ಯವಾ। ॥275॥

ಧುರದಿಮೂರ್ಛಿಸಿದವರು ಜೀವಿಸುತಬಲಸಹಿತ
ಲಿರದೆ ಮುಂದೈದಲ್ಕೆ ಜಾಹ್ನವಿಯತೀರದೊಳು
ಪರಮಋಷಿವಾಲ್ಮೀಕೀ ಯಾಶ್ರಮಸಮೀಪದೊಳು ಲವನುಯಾಗದಹಯವನು ।
ತ್ವರಿತದಿಂಕಟ್ಟಲಾ ಬಳಿಕಶತ್ರುಘ್ನಾದಿ ।
ಧುರವಿಜಯರೆಲ್ಲರೈತಂದುಕಾದಲಿಕಾಗ ।
ತರಳಲವಕುಶರುಗಳುಗೆಲಿದಿರಲು ವಾಲ್ಮೀಕಿಯೊಡಬಡಿಸಿಕಳುಹಿಸುತಲೀ। ॥276॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ವರಮಹಾರ್ಬಲಸಹಿತಶತ್ರುಹ ಪರಿಪರಿಯನಾನಾಸುವಾದ್ಯದಿ ।
ತುರಗಸಹನಿಜಪುರಕೆಬಂದುದನರಿವುತಂದೂ। ॥277॥

ಬಂಧುವರ್ಗವುಸಹಿತಲಕ್ಷಣ । ನಂದಿದಿರ್ಗೊಂಡೊದುಮನ್ನಿಸೆ ।
ಸಿಂಧುಶಯನನುಕರಿಸಿದನು ನಲ । ವಿಂದಸತಿಯಾ। ॥278॥

ಸೀತೆಬರಲಾಕ್ಷಣದಿಕುಂಭಜ । ನೂತನದವಿಗ್ರಹವತೆಗದತಿ ।
ಪ್ರೀತಿಯಿಂಕುಳ್ಳಿರಿಸಲಾ ರಘು । ನಾಥನಂದು। ॥279॥

ಋತ್ವಿಜರನುದ್ಗಾತಹೋತಗ । ಳತ್ಯಧಿಕಹರುಷದಲಿಮನ್ನಿಸು ।
ತಿತ್ತುದ್ರವ್ಯಾದಿಗಳನೆಲ್ಲರ । ತಪ್ತಿಪಡಿಸೀ । ॥280॥

ಗುರುವಸಿಷ್ಠನಗಸ್ತ್ಯವ್ಯಾಸಾ । ದ್ಯರನು ಪೂಜಿಸುತಾಗ ನಾನಾ ।
ಪರಿಯರತ್ನಾದಿಗಳನಿತ್ತುಪ । ಚರಿಸಿಬಳಿಕ। ॥281॥

**ರಾಗ ಭೈರವಿ ಝಂಪೆತಾಳ**

ಬಳಿಕಚೌಷಷ್ಟಿನದಿ । ಜಲವತರಿಸುತಲಿಮನ ।
ವೊಲಿದುಗುರುವರನಾಗ । ಜಲಜಾಕ್ಷಗಂದು। ॥282॥

ಅಭಿಷೇಕವನುಗೈಸಿ । ಶುಭಕರದಖಡ್ಗವನು ।
ಅಭಿಮಂತ್ರಿಸುತಕೊಡಲು । ತ್ರಿಭುವನೇಶ್ವರಗೆ। ॥283॥

ತುರಗದೊಡನೆಂದ ನೀ । ಪರಿಯಪಶುಜನ್ಮವನು ।
ಪರಿಹರಿಸಿಸದುಗತಿಯು । ದೊರಕಲೆಂದೆನುತಾ। ॥284॥

ಕರುಣಾಳುವದಪಿಡಿದು । ತುರಗ ಪಷ್ಠದಮೇಲ।
ಕಿರಿಸೆಗಂಧರ್ವಾನಾ । ಗಿರಲುಕಂಡೆಂದ। ॥285॥

ಆರುನೀಪೂರ್ವದಲಿ । ಸೇರಿತೀಜನ್ಮನಿನ
ಗಾರಿಂದಲೆನಲೆಂದ । ನಾರಮೇಶನೊಳು। ॥286॥

**ರಾಗ ಸಾಂಗತ್ಯ ರೂಪಕತಾಳ**

ಕ್ಲೇಶರಹಿತರಾಮಲಾಲಿಸೈಪೂರ್ವದಿ । ಭೂಸುರನಾಗಿಮೌನದಲೀ ।
ತೋಷದಿನದಿಯತೀರದಿತಪವೆಸಗೆ ದೂ । ರ್ವಾಸನೈತಂದನಾಕ್ಷಣಕೇ। ॥287॥

ಬಂದಮುನಿಯನುಸತ್ಕರಿಸದಿರಲುಪಶು । ವಂದಜನ್ಮವು ಎಂದುಶಪಿಸಿ ।
ಮುಂದೇನುಗತಿಯೆಂದು ಕೇಳಲಿಕೆ ನಿ । ನ್ನಿಂದಸದ್ಗತಿಯಹುದೆಂದ ॥288॥

ಪರಮಪುರುಷತವಕರುಣದೊಳಾಶಾಪ । ಪರಿಹಾರವಾದುದಿಂದಿನಲೀ ।
ಸುರಲೋಕಕ್ಕಾಗಿಪೋಗುವೆನೆಂದುನಮಿಸುತ್ತ । ತೆರಳಿದಸ್ಯಂದನವೇರಿ । ॥289॥

ಗುರುವಸಿಷ್ಠನುಮಂತ್ರೋಚ್ಚರಣೆಯಿಂದಲ್ಲಿಯೇ | ಕರಸುತ್ತಲಾದೇವರ್ಕಳನು |
ವರಕರ್ಪುರಾಜ್ಯಸಹಿತಲಾಗಹವಿಯ | ಸತ್ಕರಿಸಿದಯಜ್ಞಕಾಲದಲೀ| ||290||

ದಾನದಕ್ಷಿಣೆಧರ್ಮಪಾನಭೋಜನದಿಂದಾ | ತಾನುಪಚರಿಸಿ ರುತ್ವಿಜರಾ |
ಭಾನುಕುಲೇಶ ಪೂರ್ಣಾಹುತಿಯಿತ್ತು ಮ | ತ್ತಾನಂದದಿಂದಿರುತಿಹನು| ||291||

**ವಾರ್ಧಕ**

ಗುರುವಸಿಷ್ಠಾದಿಗಳುಸಹಿತಲಾರಾಘವಂ |
ಧರಣಿಪಾಲಕರೆಲ್ಲರೊಡಗೊಂಡುಸಂತಸದಿ |
ಸರಯುತೀರಕೆಪೋಗಿ ಅವಭತಸ್ನಾನಮಂ ಗೈವುತತಿಸಂಭ್ರಮದೊಳು |
ಪರಿಪರಿಯನಾನಾಸುವಾದ್ಯ ಘೋಷದೊಳುಮಂ |
ದಿರಕೈದಿಯಜ್ಞವಂ ಪೂರೈಸಿಸತಿಸಹಿತಹರಿಯುರತ್ನಾಸನದೊಳೊಪ್ಪಿರಲು
ಸತಿಯರಾರತಿಯೆತ್ತಿಪಾಡುತಿಹರು| ||292||

**ರಾಗ ಡವಳಾರ ತ್ರಿವುಡೆತಾಳ**

ಮಂಗಳಶ್ರೀರಾಮಚಂದ್ರಗೇ | ಚಲ್ವ | ಅಂಗಜಪಿತನಿಗಾರತಿಯೆತ್ತಿರೇ |
ಮಂಗಳಶ್ರೀರಾಮಚಂದ್ರಾಗೇ| || ಪಲ್ಲವಿ ||

ದುರುಳದೈತ್ಯರಬಾಧೆಗಿರಲಾರೆವೆನುತಲೆ | ಧರಣಿದೇವಿಯುಕಮಲಜಗುಸುರೇ |
ಸುರಪಾಲಾದ್ಯರುಬಂದುಮೊರೆಯಿಡೆಸಾಕೇತ | ಪುರದೊಳಗುದಿಸಿದರಘುರಾಮಗೇ | ||293||

ತಾಮಸದೈತ್ಯರುಹೋಮವಕೆಡಿಸೆ ವಿ | ಶ್ವಾಮಿತ್ರನೊಡನೆ ಲಕ್ಷ್ಮಣಸಹಿತ |
ಪ್ರೇಮದೊಳೈದಿಸುಬಾಹುಮುಖ್ಯರನು | ನಿರ್ನಾಮವಗೈದಶ್ರೀರಾಮನಿಗೇ | ||294||

ಧರಣಿಸಂಜಾತೆಯವರಿಸುತ್ತಕೋಸಲ | ಪುರದಿಂದ ಸೀತೆಲಕ್ಷ್ಮಣಸಹಿತ |
ವರಪಂಚವಟಿಗೈದಿಖರದೂಷಣಾದ್ಯರ | ಶಿರವನರಿದಪುರುಷೋತ್ತುಮಗೆ | ||295||

ಶಶಿಮುಖಿಸೀತೆಯದಶಕಂಠನೊಯ್ಯಲಾ | ವ್ಯಸನದಿಸೇತುವನುತ್ತರಿಸೀ |
ಅಸುರರಕೊಂದುಸಂತಸದಿಸೀತೆಯತಂದ | ಬಿಸಜಲೋಚನನಿಗಾರತಿಯತ್ತಿರೇ ||296||

ಕೆಕ್ಕಾರವಾಸಗೆರಕ್ಕಸಾಂತಕನಿಗೆ | ಭಕ್ತವತ್ಸಲತಪೋರಾಮನಿಗೇ |
ಮುಕ್ತಿದಾಯಕನಿಗೆಸೀತೆಗೆಸಹಿತಲಾ | ತಕ್ಕಸಕುಚೆಯರಾರತಿಯೆತ್ತಿರೇ | ||297||

**ಭಾಮಿನಿ**

ಬಳಿಕರಾಘವಬಂಧುಬಾಂಧವ | ರೊಲವನರಿ ತುಡುಗೊರೆಯನಿತ್ತಾ |
ಚಲುವಷಡ್ರಸಭೋಜನದಿಸತ್ಕರಿಸಿವಿನಯದಲೀ |

ನಲವಿನಿಂಸರ್ವರನುಮನ್ನಿಸಿ
ಯಿಳೆಯಪಾಲರುಸಹಿತನೇಮವ ।
ಗೊಳುತಂತಮ್ಮಾಲಯಕ್ಕೈತಂದರೊಲವಿನಲೀ। ॥298॥

ಜನಪರಾಘವನಂದುತನ್ನಯ ।
ವನಿತೆಸುತಸಹಜಾತರುಗಳಿಂ ।
ವಿನಯದಿಂಸಾಕೇತಪುವನ್ನಾಳುತಿರುತೀರ್ದ ।
ಘನಚರಿತ್ರವಶೇಷನುಸುರಿದ ।
ಮುನಿಪವಾತ್ಸ್ಯಾಯಾದಿಋಷಿಗಳಿ ।
ಗಿರದೆಪೇಳಿದಕಥೆಯ ಸಾಂಗೋಪಾಂಗದಿಂದೊಲಿದು॥ ॥299॥

ಆಮಹಾಮುನಿವರರಿಗಿಂತಾ ।
ರಾಮಚಾರಿತ್ರವನುಸುರಿದಾ ।
ರಾಮಣೀಯಕವೆನಲುರಚಿಸಿದೆಯಕ್ಷಗಾನದಲೀ ।
ಭೂಮಿಯೊಳಗಿದಹೇಳಿಕೇಳಿದ ।
ರಾಮಹಾತ್ಮರಿಗೊಲಿದು। ಶ್ರೀರಘು
ರಾಮಸಲಹುವೆನೆಂದು
ಶೇಷನುಮುನಿಗಳಿಂಗುಸುರ್ದ । ॥300॥

**ವಚನ**

ಇಂತೀಕಥೆಯಂಭಕ್ತಿಯಲಿ । ಹೇಳಿಕೇಳುವರ್ಗಂ ।
ಸೀತಾಕಾಂತಂಪಾಲಿಪ । ನಿಹಪರಸೌಖ್ಯಹರೀ॥ ॥301॥

**ಯಕ್ಷಗಾನ ರಾಮಾಶ್ವಮೇಧಯಾಗವು ಸಮಾಪ್ತವಾದುದು.**

# ಯಕ್ಷಗಾನ ಲವಕುಶರ ಕಾಳಗ

## ಪಾತ್ರಗಳು

ರಾಮ
ಲಕ್ಷ್ಮಣ
ಸೀತೆ
ಭರತ
ಶತ್ರುಘ್ನ
ವಸಿಷ್ಠ

ವಾಲ್ಮೀಕಿ

ಕುಶ

ಲವ

ವನಪಾಲಕ

ಬೆಂಗಾವಲಿನ ಭಟರು

ದೂತರು

ಋಷಿಬಾಲಕರು

ಹನುಮಂತ

ಜಾಂಬವಂತ

ಋಷಿಪತ್ನಿಯರು

ವರುಣನ ದೂತ

**ರಾಗ ನಾಟಿ ರೂಪಕತಾಳ**

ಭಜಿಸುವೆ ಮನದಲಿ ನಿತ್ಯವು ಭಜಕರ ಕುಲ ದೈವವ ಸುರ ।
ವ್ರಜಸೇವಿತ ನೆಂದೆನಿಸುವ ಗಜವದನನ ಪದವ ॥1॥

ಗೌರಿಯ ಮೋಹದ ಪುತ್ರನ ಗಣನಾಯಕ ಸುಚರಿತ್ರನ ।
ಪೌರುಷಜನಮದಭಂಗನ ಪರತರ ಪಾವನನ ॥2॥

ಬಹುವಿಧ ನಾಮದ ಮೂರ್ತಿಯ ಬಹುಲೋಕದೊಳಗೆ ಕೀರ್ತಿಯ ।
ಚೌವೇದ ಶ್ರುತಿಸಾರನ ಚರಸರಿಸ್ಕೃಪಧರನ ॥3॥

ಭಾಸುರ ಮಣಿಗಣ ರತ್ನವಿಭೂಷಣ ಲಂಬೋದರ ವಿ ।
ಘ್ನೇಶನೆ ಶರಣಾಗತಪರಿ ಪೋಷಣನೆಂದೆನಿಪ ॥4॥

ಏಸು ಮಹಿಮೆಯುಂಟೆಂಬುದನಾ ಸರಸಿಜಭವನರಿಯ ।
ಬೇಸರದೆಲ್ಲರ ರಕ್ಷಿಪಮೂಷಿಕವಾಹನನೆ ॥5॥

ಮದುವೆಯ ಮುಂಜಿಯ ಶುಭಲಗ್ನದ ಕಾರ್ಯದೊಳಾವಾಗಲು ।
ಮೊದಲಿನ ಪೂಜೆಯ ಕೊಂಬುವದದೆ ನಿನ್ನಯಬಿರುದು ॥6॥

ಅದರಿಂದಲೆ ನಿನ್ನನು ಕಾವ್ಯದ ಮೊದಲಿಗೆ ಪ್ರಾರ್ಥಿಸಿದೆನು ।
ಮಧುಪುರಗಣ ನಾಥನೆ ತವ ಪದಕೆ ನಮೋಯೆಂಬೆ ॥7॥

**ದ್ವಿಪದಿ**

ಗಜಮುಖಗೆ ತಲೆವಾಗಿ ಸಿರಿಗೆ ವಂದಿಸುತ ।
ಅಜನರಸಿ ಶಾರದೆಯನರಿತು ಮನ್ನಿಸುತ ॥8॥

ಪರಶಿವಗೆ ಕೈಮುಗಿದು ಪಾರ್ವತಿಗೆ ನಮಿಸಿ ।
ಸಿರಿದೇವಿಯರಸನಂ ಶೀಘ್ರದಿಂ ಭಜಿಸಿ ॥9॥

ಶಂಕರಾಚಾರ್ಯರರಿಗೆ ಶರಣೆಂಬೆ ಬಳಿಕ ।
ನಾ ಕಂಡ ಗುರುವೆನಗೆ ದಯಮಾಡುವನಕ ॥10॥

ವಾಲ್ಮೀಕಿ ಮುನಿಪತಿಗೆ ವಂದನೆಯ ಮಾಡಿ ।
ಒಲ್ಮೆಯಿಂ ಸಕಲ ಸುರರೊಳು ಮತಿಯ ಬೇಡಿ ॥11॥

ರಾಮಾಯಣದೊಳು ಕುಶಲವರ ಕಾಳಗವ ।
ಭೂಮಿಯೊಳು ಪೇಳ್ವೆ ಬಹುವಿಧ ಪರಾಕ್ರಮವ ॥12॥

ಬಾಲಕರ ನುಡಿಯೆಂದು ನಿಂದಿಸದೆ ಬರಿದೆ ।
ಕೇಳಿ ಸಂತೋಷಿಸುವ ಮನುಜರಿಂಗಿರದೆ ॥13॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಧಾರಿಣಿಪ ಜನಮೇಜಯಂಗಾ ।
ಚಾರು ಮಂಗಳಮಹಿಮ ಜೈಮಿನಿ ।
ಭಾರತವ ಪೇಳ್ದಿರಲು ಬಹುವಿ । ಸ್ತಾರದಿಂದ ॥14॥

ತಂದೆ ಮಕ್ಕಳುತಾವು ತಮ್ಮೊಳ ।
ಗೊಂದೆ ಮತವಾಗಿರದೆ ರಣದೊಳು ।
ನಿಂದು ಕಾದುವರುಂಟೆ ಪೇಳೆನ । ಗೆಂದ ಭೂಪ ॥15॥

ಆಗ ಮುನಿ ಕರುಣಿಸಿದ ಕುಶಲವ ।
ರಾಘವರ ಸಂಗರದ ಕಥೆಯನು ।
ಈಗ ಭೂಮಿಯೊಳೊರೆವ ಯಕ್ಷ । ರಾಗದಿಂದ ॥16॥

ಧರೆಯೊಳುತ್ತಮ್ಮವೆನಿಪಯೋಧ್ಯಾ ।
ಪುರವನಾಳುವ ರಾಮಚಂದ್ರನು ।
ಅರಸಿಕೈಕೆಯ ಮಾತಿಗೋಸುಗ । ವನಕೆ ಬಂದು ॥17॥

ದುರುಳ ಖರದೂಷಣರ ಕೊಂದ ।
ಲ್ಲಿರಲು ಸೀತೆಯನೊಯ್ಯೆ ರಾವಣ ।
ಕರಡಿಕಪಿಗಳನೆರಹಿ ಶರಧಿಗೆ । ಸೇತುಕಟ್ಟಿ ॥18॥

ಹತ್ತುಶಿರದನಪಡೆಯು ಸಹಿತಲೆ ।
ಕತ್ತರಿಸಿದಾಕುಂಭಕರ್ಣನ ।
ಮತ್ತೆ ಸೀತೆಯತಂದು ರಾಜ್ಯವ । ನಾಳುತಿರಲು ॥19॥

**ವಾರ್ಧಕ**

ರಾವಣಾದಿಗಳ ಸಂಹರಿಸಿ ಿರೆಯೊಳಗಿರ್ದ
ದೇವರ್ಕಳಂ ಬಿಡಿಸಿ ಲಂಕಾಧಿಪತ್ಯಮಂ
ತೀವಿದತಿಸಂಭ್ರಮದೊಳಾ ವಿಭೀಷಣಗಿತ್ತು ಸುಗ್ರೀವನಂ ಮನ್ನಿಸಿ ।
ಭಾವಶುದ್ಧಿಯೊಳಯೋಧ್ಯಾಪುರಕೆ ನಡೆತಂದು
ಭೂವರಂ ತಾನಾಗಿ ಪಾಲಿಸಿದ ರಾಜ್ಯಮಂ
ಕೋವಿದರಸನದೊಂದು ದಿನ ಚಿಂತೆಯಿಂದಿರಲ್ ಕಂಡು ಜಾನಕಿ ಪೇಳ್ದಲು ॥20॥

**ರಾಗ : ಘಂಟಾರವ ಜಂಪೆತಾಳ**

ಕಾಂತ, ಶಿರೋಮಣಿಯೆ ರಾಮ ಜಗದೀಶ ।
ಚಿಂತಿಸುವ ಬಗೆಯೇನು ಚಿನ್ಮಯನೆ ನೀನು ॥21॥

ನಾರಿಕುಲಮಣಿ ಕೇಳು ಎನ್ನಿಂದ ಮೇಲಿನ್ನು ।
ಉರ್ವಿಗಿಲ್ಲೊಡೆಯರಂತಕನಾದೆಕುಲಕೆ ॥22॥

ಪೂರ್ವಜನ್ಮದಲಿ ಶಿವಪೂಜೆಯಂ ಮಾಡಿದರೆ ।
ಸರ್ವಥಾಮಕ್ಕಳಿಂದೆನಗಾಗದಿಹರೆ ॥23॥

**ವಾರ್ಧಕ**

ಕಾಂತೆ ಕೇಳಿನ್ನೇತಕಾ ಮಾತನಾಡಿದರೆ
ಭ್ರಾಂತನೆಂಬರು ಕೇಳ್ದ ಜನರೆಲ್ಲ, ಪೂರ್ವಜ
ನ್ಮಾಂತರದ ಪುಣ್ಯವಿಲ್ಲದೆ ಬಯಸಿದರೆ ಮಕ್ಕಳಾಗುವರೆ ಮನುಜರಿಂಗೆ ।
ಇಂತು ಸುತರಿಲ್ಲದಾರ್ತಿಯೊಳಿರ್ವರಿರ್ದು ಬಲು
ಚಿಂತಿಸುವ ಸಮಯಕೆ ವಸಿಷ್ಠ ಮುನಿಪತಿ ಬಂದು
ನಿಂತಿರಲು ರಾಮನುಪಚಾರಂಗಳಂ ಮಾಡಿ ಸಾಷ್ಟಾಂಗ ವಂದಿಸಿದನು ॥24॥

**ರಾಗ ಭೈರವಿ ಜಂಪೆತಾಳ**

ಜಯ ಜಯ ಮಹಾಮೌನಿಕುಲ ಶಿಖಾಮಣಿಯೆ ।
ಭಯ ನಿವಾರಣವಾಯ್ತುಪಾದದರುಷಣದಿ ॥25॥

ಸಕಲಸುರಸೇವಿತನೆ ತ್ರಿಕರಣವಿರಾಜಿತನೆ ।
ಮುಕುತಿದಾಯಕ ದೇವ ಋಷಿ ಚಾರುಶೀಲ ॥26॥

ರಾಮ ಇಕ್ಷ್ವಾಕುಕುಲ ಭೂಮಿಪಾಲಕ ಪಾಹಿ ।
ಭೀಮವಿಕ್ರಮ ಪುಣ್ಯ ನಾಮ ನೀಕೇಳು ॥27॥

ಅರಿತೆ ನಿನ್ನಂತರಂಗವ ಮಕ್ಕಳಿಲ್ಲೆಂಬ ।
ಕೊರತೆಯನುಕಳೆಯಲ್ಕೆ ಬಂದೆ ನಾನಿಂದು ॥28॥

ಮುಂದೇನುಪಾಯ ಮುನಿ ಮಕ್ಕಳಾಗುವುದಕ್ಕೆ ।
ತಂದೆ ಕಾರುಣ್ಯದೊಳಗರುಹಬೇಕಯ್ಯ ॥29॥

ಜಾನಕಿಯ ಕರೆದು ಮುನಿ ಮಂತ್ರೋಪದೇಶವನು ।
ತಾನಿತ್ತನಾಗ ಸಂತಸದಿ ಕೇಳಿದಿರೆ ॥30॥

ನಿರ್ಭಯದೊಳಿರು ನೀನು ನಿನ್ನರಸಿ ಗರ್ಭದೊಳ ।
ಗಿಬ್ಬರಾಹರು ನಿನಗೆ । ಮೃಗಮಕ್ಕಳೆಂದ ॥31॥

**ಭಾಮಿನಿ**

ಮುನಿಪನಾಡಿದ ಮಾತ ಕೇಳಿದು ।
ಮನಸಿನಲಿ ಸಂತೋಷವಾಗಲು ।
ಜನಪವನು ಬೀಳ್ಕೊಟ್ಟು ಋಷಿ ತನ್ನಾಶ್ರಮಕೆ ತೆರಳೆ ।
ದಿನವ ಕಳೆದರು ಹಲವು ರಾಜ್ಯವ
ನನುಕರಿಸಿ ಪಾಲಿಸುತಯೋಧ್ಯದ
ಜನರು ಸುಖಹಿತರಾಗೆ ರಾಘವನಾಳ್ವ ಕಾಲದಲಿ ॥32॥

**ರಾಗ ಘಂಟಾರವ ಜಂಪೆತಾಳ**

ಸಕಲಭಾಗ್ಯಗಳಿರವು ಸರ್ವಜನ ಸುಖಕರವು ।
ಸುಕತ ಮಂಗಳದಿರವು ಸಾಕೇತಪುರವು ॥33॥

ನಾಕಾಧಿಪನ ಭೋಗ ಎನಗೆ ತನಗೆಂಬಾಗ ।
ಬೇಕೆಂಬ ಜನರಿಲ್ಲ ಬೇಡದವರೆಲ್ಲ ॥34॥

ಕೇಡ ಕಂಡವರಿಲ್ಲ ಚಾಡಿ ಹೊಲೆ ಹೇಸಿಲ್ಲ ।
ಬೀಡುಬಿಟ್ಟಳು ಲಕ್ಷ್ಮಿ ಓಡಿತು ದರಿದ್ರ ॥35॥

ವಚನ ॥ ಇಂತು ಸೌಭಾಗ್ಯದಿಂದ ರಂಜಿಸುವಂಥ ಅಯೋಧ್ಯಾ ಪಟ್ಟಣಕ್ಕೆ ವಸಂತನೈತಂದನದೆಂತೆನೆ -

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಚಿಗುರಿದವು ವನದೊಳಗೆ ತರುಗಳು ।
ಮುಗುಳನಾಂತವು ಪುಷ್ಪಲತೆಗಳು ।
ಬಗೆಬಗೆಯ ಫಲನಿಕರ ಪುಷ್ಪಗ । ಳಾಯಿತಾಗ ॥36॥

ತುಂಬಿಗಳ ಝೇಂಕಾರ ಹೆಚ್ಚಿತು ।
ಅಂಬುಜಗಳೆದೆಬಿರಿಯೆ ಬಿಚ್ಚಿತು ।
ಅಂಬರದೊಳಾಡಿದವು ಗಿಣಿಗಳು । ಸಂಭ್ರಮದೊಳು ॥37॥

ಅಗರು ಚಂದನ ಜಾಜಿ ಮಲ್ಲಿಗೆ ।
ಯುಗುಳುವಾತವು ಬೀಸಿ ರಾಜ್ಯದಿ ।
ಮಘಮಘಿಪ ಪರಿಮಳಗಳಾದುವು । ನಾಲ್ಕುದೆಸೆಗೆ ॥38॥

ವಚನ ॥ ಆ ಸಮಯದಲ್ಲಿ ವನಪಾಲಕನೊರ್ವನೈತಂದು ರಾಘವೇಶ್ವರನೊಡನೆ ಏನೆಂದು ಬಿನ್ನೈಸುತ್ತಿದ್ದನು ಎಂದರೆ -

**ರಾಗ ಸೌರಾಷ್ಟ್ರ ಮಟ್ಟೆತಾಳ**

ರಾಮ ರಾಘವ ರಾಜೀವಲೋಚನ ।
ಭೂಮಿಪಾಲಕ ಭಕ್ತವತ್ಸಲ ॥ ಪಲ್ಲವಿ ॥

ಸುಗುಣ ತರುಗಳು ಎಲ್ಲ ಚಿಗುರಿ ವನದೊಳು ।
ಬಗೆಯ ಫಲಗಳು ಬಹಳ । ಕಾನನ ದೊಳು ॥39॥

ಕಾಡ ಮೃಗಗಳು ಎಲ್ಲಕೂಡಿ ವನದೊಳು ।
ಆಡುತೈದವೆ ಅಂಜಿಕಿಲ್ಲದೆ ॥40॥

**ರಾಗ ಯಾಲಪದ ಏಕತಾಳ**
ಕದಲಿ ಖರ್ಜೂರ ದ್ರಾಕ್ಷೆ ।
ತುದಿಮೊದಲಿಲ್ಲದೆ ಜಂಬು ನಿಂಬೆ ।
ಉದುರುತ್ತೈದವೆ ನಾನಾಫಲಗಳು ಚಿತ್ತೈಸೆಂದು ।
ಪದುಮನಾಭನ ಪದಕೆರಗಿದನು ॥41॥

ವಚನ ॥ ಅಗಲಾ ಗಜತುರಗರಥಪದಾತಿಗಳೆಂಬ ಚತುರಂಗಸೇನೆಯಂ ಕೂಡಿಕೊಂಡು
ರಾಘವೇಶ್ವರನು ಬೇಟೆಗೈದಿದನದೆಂತೆನೆ -

**ರಾಗ ಘರಜು ಏಕತಾಳ (ದ್ರುತ)**
ಬೇಟೆಯಾಡುತ್ತ ಬಂದ ।
ರಾಮ ಸಂತೋಷದಿಂದ ॥ ಪಲ್ಲವಿ ॥

ಈಟಿ ಕಠಾರಿಯ ಕೋಟಿಮಂದಿ ನೆಗೆ ।
ದಾಟವನಾಡುತ ನಾಟಕವಾಗಿ । ॥42॥

ಸೊಕ್ಕಿದ ಮೃಗಗಳ ಧಿಕ್ಕರಿಸುತ ಬಲು ।
ಗಕ್ಕಸದಿಂದಲಿ ರಕ್ಕಸವೈರಿ । ॥43॥

ನಾನಾ ಫಲದ ವಿತಾನವ ಕೊಯ್ಯುತ ।
ಕಾನನದೊಳಗಾ ಜಾನಕಿಸಹಿತ । ॥44॥

ಪುಷ್ಪದಿ ರಚಿಸಿದ ಚಪ್ಪರಮಂಚದೊ ।
ಳೊಪ್ಪಿ ಸೀತೆ ಕಂದರ್ಪನ ಜನಕ । ॥45॥

ವಚನ ॥ ಇಂತು ಮೂರುನಾಲ್ಕು ದಿನಪರ್ಯಂತ ಬೇಟೆಯಾಡುತ್ತಿರಲು ಮತ್ತಲ್ಲಿ ಏನಾಯಿತು ಎಂದರೆ -

**ರಾಗ ಘಂಟಾರವ  ಆಟತಾಳ  (ವಿಲಂಬಿತ, ದ್ರುತ)**

ಮತಿವಂತೆ ಪುಷ್ಪವತಿಯಾದಳು ಸೀತೆ ।
ಪತಿಯ ಕೂಟದಿ ಜೊತೆಯಳಿರದುಪರತಿಯ ವೇಳ್ಯದಿ ಮಾನಿನಿ ॥46॥

ಮಲ್ಲಿಕಾಸ್ಮಿತೆ ಮಧುರಕೋಕಿಲವಾಣಿ ।
ಫುಲ್ಲಲೋಚನೆ ಸಲ್ಲಲಿತವನದಲ್ಲಿ ಮಾನಿನಿ ಜಾನಕಿ ॥47॥

ಅಂಬುಜಾನನೆ ಅರಸಂಚೆ ಗಮನೆ ಶ್ರೀ ।
ರಂಭೆ ಪುತ್ಥಳಿ ಬೊಂಬೆ ಇನ್ನೇನೆಂಬೆ ಶೃಂಗಾರಾಂಗನೆ ॥48॥

**ರಾಗ ಕಲ್ಯಾಣಿ  ಏಕತಾಳ**

ಸೀತೆ ದೂರದಿ ನಿಂತ ರೀತಿಯರಿತು ರಾಮ ।
ತಾ ತಿಳಿಯಲು ಮನಕಾತತುಕ್ಷಣದಿ ॥49॥

ಚಾತುರಂಗದ ಸೇನೆ ತಾ ತಿರಿಗಿಸಿಕೊಂಡು ।
ಭೂತಳಾಧಿಪನು ಸಾಕೇತ ಪಟ್ಟಣಕೆ ॥50॥

ಬಂದು ರಾಘವ ತನ್ನ ಮಂದಿಯ ಬೀಳ್ಕೊಟ್ಟು ।
ಚಂದದಿ ಕಳುಹಿದನಂದು ಮಾತಾಡಿ ॥51॥

**ರಾಗ ಆಂದೋಳಿ(ಕ) ಅಷ್ಟತಾಳ**

ಮದಗಜ ಗಮನೆಯ್ಶೆದನೆ ದಿವಸದಿ ಮಿಂದು ।
ಸದಮಳ ವಿಧದಲಂಕರಿಸುತ್ತ ॥

ಸದನಕ್ಕೆ ಬರೆ ಕಂಡು ರಾಮ ಸಂತಸದಿ ಮು ।
ಟ್ಟಿದರೆ ಗರ್ಭವನಾಂ ತಳು ಸೀತೆ ॥52॥

ಚಾರುಚರಿತ್ರೆ ಚಂದ್ರಮುಖಿ ಚಂದನಗಂಧಿ ।
ವಾರಿಜವದನೆ ವಾಸವಸ್ತೋತ್ರೆ ॥
ಮಾರಿದ ಗುರುನಿತಂಬಿನಿ ಸೊಬಗಿನ ಸೋನೆ ।
ಮಾರನ ಮುಂಗೈ ಯರಗಿಣಿಯೆ ॥53॥

ಕನ್ನಡಿ ಕದಪು ಕಂಗಳ ನೋಟವರಳ್ಗಣ್ಣ ।
ಬಿನ್ನಾಣದಬಲೆ ಬಿಂಕದ ನಾರಿ ॥
ಮನ್ಮಥನೆರಕದಚ್ಚಿನ ಬೊಂಬೆ ಮೈತುಂಬೆ ।
ಚೆನ್ನದಂತೆಸೆದು ರಂಜಿಸಿದಳು ॥54॥

ಮೂರು ತಿಂಗಳು ತುಂಬೆ ಮುದ್ದು ಮೋರೆಯಲಿ ಬಿ ।
ಳ್ಪೇರಿತು ತ್ರೈಜಗದೊಡತಿಗೆ ॥
ಶ್ರೀರಾಮನರಸಿಯ ಗುರುಕುಚವೆರಡು ಕ ।
ಪ್ಪೇರಿತು ಛಾಯಾಮಾತ್ರದೊಳಾಗ ॥55॥

**ರಾಗ ಕಾಂಭೋಜಿ ಏಕತಾಳ**

ಮಂಗಳಾಂಗಿಗೆ ನಾಲುಕು ತಿಂಗಳಾಗಲಾಗ ರಘು ।
ಪುಂಗವ ಸಂತೋಷದಿ ಪುರಂಗಳನೆಲ್ಲ ॥
ಸಿಂಗರಿಸಿ ಪಟ್ಟಣದೊಳಂಗನೆಯರೆಲ್ಲ ಶೋಭ ।
ನಂಗಳ ಪಾಡುತ್ತ ಸೀಮಂತಗಳಾಗಲು ॥56॥

ಕೇರಿ ಕೇರಿಯ ಬಾಲೆಯರಾರತಿಗಳನ್ನೆ ತಂದು ।
ಶ್ರೀರಾಮಸೀತೆಯರಿಗೆತ್ತಿ ಸಾರುತಿರ್ದರು ॥
ಆರೇಳು ತಿಂಗಳು ತುಂಬೆ ನಾರಿ ಸೀತಾದೇವಿಗಿಚ್ಛೆ ।
ಬೇರೆ ಬೇರೆ ತಂದು ಕೊಟ್ಟರೂರಹೆಂಗಳು ॥57॥

**ಕಂದ**

ನಯನುಡಿ ಮಾತಾಡುತ ನಿ ।
ನ್ನಯ ಮನಸಿನ ಬಯಕೆಯೇನು ಪೇಳೆಲೆ ರಾಮಂ ।
ಭಯದಿಂದುಸುರಿದಳಾ ತ ।
ನ್ನಯ ಕಾಂತಗೆ ಸೀತೆ ಬಳಿಕ ಕರವಂ ಮುಗಿದು ॥58॥

**ರಾಗ ಸೌರಾಷ್ಟ್ರ ಮಟ್ಟೆತಾಳ**

ವಾರಿಜಾಂಬಕ ಧಾರಿಣೀಪತೇ ।
ಮಾರಸನ್ನಿಭ ಮಂಜುಳಾಕರ ॥ ಪಲ್ಲವಿ ॥

ಕೇಳು ರಾಘವ ವನದ ಹೆಂಗಳ ।
ಮೇಳದಿಂದಲೆ ಇರುವೆನಲ್ಲಿಯೆ ॥59॥

ಎಂದು ಬರುವೆ ನೀ ಮಂದಗಾಮಿ ನಿ ।
ಇಂದು ಎನ್ನೊಳು ಪೇಳೆಂದ ರಾಘವ ॥60॥

ಮೂರು ದಿವಸದ ಮೇಲೆ ಬರುವೆನು ।
ಕಾರಣೀಕನೆ ಕಳುಹು ಎನ್ನನು ॥61॥

**ಭಾಮಿನಿ**

ಧರಣಿಜೆಯು ತನಗಿಚ್ಛೆಯಾದುದ
ನರುಹೆ ಕಳುಹುವೆನೆಂದು ಸಂತೈ
ಸಿರಲು, ನಗರದಿ ತಿರುಗುತಿಹ ಚಾರಕರ ನಡುವಿರುಳು ।
ಕರೆಸಿ ತನ್ನ ವಿಚಾರ ಸುದ್ಧಿಯ
ಪುರದ ಜನರೇನೆಂಬರೆನೆ ವಿ
ಸ್ತರಿಸಿದರು ಕೈಮುಗಿದು ನಗರದೊಳೊರೆದ ವಾರ್ತೆಗಳ ॥62॥

**ರಾಗ ಘಂಟಾರವ ಜಂಪೆತಾಳ**

ರಣಪರಾಕ್ರಮ ಧೀರ ಗುಣನಿದಾನ ಕಠೋರ ।
ಮಣಿಮಕುಟ ಧೃತಹಾರ ಮಂಜುಳಾಕಾರ ॥63॥

ಸತ್ಯಧರ್ಮವಿಚಾರ ಸಾಧುಜನ ಪರಿವಾರ ।
ನಿತ್ಯಮಂಗಳರೂಪ ನಿಜಸುಪ್ರತಾಪ ॥64॥

ಧರ್ಮದಾನಗಳಲ್ಲಿ ಧೈರ್ಯಮಾನಿಗಳಲ್ಲಿ ।
ನಿರ್ಮಲಾತ್ಮಕನೆಂದು ನಿನ್ನ ಪೊಗಳುವರು ॥65॥

**ರಾಗ ಕೇದಾರಗೌಳ ಅಷ್ಟತಾಳ**

ಬಲ್ಲಿದವರ ಕುಲದೈವ ನೀನೆಂದು ಊ ।
ರೆಲ್ಲ ಕೊಂಡಾಡುವರು ॥
ಖುಲ್ಲ ನಿರ್ಭಾಗ್ಯನಿಂದಿರುಳೊರ್ವ ರಜಕನು ।
ಸಲ್ಲದ ನುಡಿಯ ಪೇಳ್ದ ॥66॥

ವಲ್ಲಭೆ ತವರ್ಮನೆ ಗುಸುರದೈದಿದಳೆಂದು ।
ಕೊಲ್ಲುತ್ತವಳ ನೆಳೆವ ॥
ಬಲ್ಲವರೊಡಬಡಿಸಿರೆ ರಾಮನಂತೆ ಹು ।
ಚ್ಚಲ್ಲ ಕೂಡುವೊಡೆಂದನು ॥67॥

**ಭಾಮಿನಿ**

ನುಡಿಯ ಕೇಳುತ ಕೈಯ ಧನುಶರ
ಪೊಡವಿಗುದುರಿತು ರೋಷ ಭರದು
ಗ್ಗಡದ ರೌದ್ರಾವೇಷದಲಿ ಮರಳಿದನು ಮಂದಿರಕೆ ।
ಮಿಡುಕುತಿರ್ದನು ಮನಸಿನಲಿ ಕಂ
ಗೆಡುತ ಕಣ್ಣಿಗೆ ನಿದ್ರೆ ಬಾರದೆ
ಪೊಡವಿಪತಿರಘುನಾಥ ಮಾತಾಡಿದನು ತನ್ನೊಳಗೆ ॥68॥

**ರಾಗ ಗೌಳಮಲಹರಿ ರೂಪಕತಾಳ**

ಮೋಸವಾಯಿತು ಮಾನಿನಿಯ ಮನೆಗೆ ತಂದು ।
ಅಸುರದೊಳು ಸಿಕ್ಕಿದ್ದಾ ಸೀತೆಯ ಪುರಕೆ ತಂದು ॥ ಪಲ್ಲವಿ ॥

ರಕ್ಕಸರ, ಕೈಯೊಳಗೆ, ಸಿಕ್ಕಿ ಭಂಗಬಟ್ಟು, ಅವ ।
ರಿಕ್ಕಿದ್ದುಂಡದಲೆಯೆಂದು ಲೆಕ್ಕಿಸದೇ ಪುರಕೆ ತಂದು ॥69॥

ಮಾನವರ, ಕೊಂದು ಮತ್ತೆ ಮಧುಮಾಂಸಗಳನ್ನೆ ಮೆಲ್ವ ।
ದಾನವರ, ಕೈಮುಟ್ಟಿದ ಮಾನಿನಿಯ ಮನೆಗೆ ತಂದು ॥70॥

ಕದ್ದುಕೊಂಡು ಹೋಗಿ ತನ್ನ ಬಿದ್ದಣಿಗರೊಡನೆ ಕೂಡಿ ।
ಶುದ್ಧವೇ ರಕ್ಕಸನ ವಶದೊಳಿದ್ದ ಹೆಣ್ಣ ಮನೆಗೆ ತಂದು ॥71॥

ವಚನ ॥ ಇಂತು ರಾಮಚಂದ್ರದೇವರು ಕಣ್ಣಿಗೆ ನಿದ್ರೆಯುಂ ಬಾರದೆ ಹಲವ ಹಂಬಲಿಸಿ ರಾತ್ರಿಯಂ ಕಳೆದು ಮರುದಿನದುದಯದೊಳೊಡ್ಡೋಲಗಂಗೊಟ್ಟು ಅನುಜನಾದ ಲಕ್ಷ್ಮಣನಂ ಕರೆದು ಏನೆಂದನು ಎಂದರೆ -

**ರಾಗ ವಂದಾವನಸಾರಂಗ ಏಕತಾಳ**

ಬಾರಯ್ಯ ತಮ್ಮ ಕೇಳೆಂದನು ಬಲು ।
ಘೋರ ಕಾನನದೊಳು ನಾರಿ, ಸೀತೆಯ ಬಿಟ್ಟು ಬಾರಯ್ಯ ॥ ಪಲ್ಲವಿ ॥

ಅಡವಿಗೆ ಕರಕೊಂಡು ಪೋದವ ಇಲ್ಲಿ ।
ಬಿಡಲಿಲ್ಲ ಜನರಪವಾದವ ಅಲ್ಲಿ ।
ಮಡದಿಯೊರ್ವಳ ಬಿಟ್ಟು ಕಡೆಗೆ, ಪೇಳ್ವುದು ಗುಟ್ಟು ॥72॥

**(ಸಾಂಗತ್ಯ) ರಾಗ ತೋಡಿ ರೂಪಕತಾಳ**

ಈರೇಳು ಭುವನದೊಡೆಯ ವಿಶ್ವಪತಿ ರಾಮ ।
ಸಾರಸಾಂಬಕ ದೇವ ನೀನು ॥
ನಾರಿಜಾ ನಕಿಯಲ್ಲಿ ತಪ್ಪು ಕಾಣದೆ ಸುಮ್ಮ ।
ನಾರಣ್ಯದೊಳು ಬಿಡಲೇಕೆ ॥73॥

ಅರಿಯದ ಮೂಢಾತ್ಮರಾರೇನ ಪೇಳ್ದರು ।
ಅರಿಯದೆ ದೇವರ ಮನಸು ॥
ಕರುಣಿಸಬೇಕು ಕಂಜಾಕ್ಷಿ ನಮ್ಮಮ್ಮನೆಂ ।
ದೆರಗಿದ ಪಾದಪದ್ಮದಲಿ ॥74॥

ಏಳಯ್ಯ ತಮ್ಮ ನೀನೆಷ್ಟು ಹೇಳಿದರೇನು ।
ಕೇಳುವನಲ್ಲ ಈ ಮಾತ ॥
ಭಾಳಲೋಚನನಾಣೆ ಬಲುಕಷ್ಟ ಬಂದರೂ ।
ಆಳುವನಲ್ಲ ಜಾನಕಿಯ ॥75॥

ಈಪರಿಯಲಿ ರಾಮ ಕೋಪಿಸೆ ಲಕ್ಷ್ಮಣ ।
ತಾಪವ ತಾಳಿದು ಮನದಿ ॥
ಆ ಪುಣ್ಯವಂತೆಯ ಕರೆದು ಏಕಾಂತದಿ ।
ತಾ ಪೇಳಿದನು ಧರಣಿಜೆಗೆ ॥76॥

ಪುಣ್ಯಲೋಚನೆ ಪುಣ್ಯವಂತೆ ಜಾನಕಿ ನೀವ ।
ರಣ್ಯಕೆ ತೆರಳಬೇಕಂತೆ ॥77॥

ಅಗ್ರಜನಪ್ಪಣೆ ಈಗ ನಾವ್ ಕಾಡಿಗೆ ।
ಶೀಘ್ರದಿ ಪಯಣವಾಗುವಡೆ ॥78॥

ರಥವೇರು ತಡವೇತಕಿನ್ನು ತೆಕ್ಕೊಳ್ಳವ್ವ ।
ಜೊತೆಗೆ ಬೇಕಾದ ವಸ್ತುಗಳ ॥79॥

ಪಥಿವಿಯಾತ್ಮಜೆ ಕೇಳು ಮಾತ ನಿನ್ನಯ ಮನೋ ।
ರಥ ಸಲಿಸುವ ರಘುನಾಥ ॥80॥

**ರಾಗ ಘಂಟಾರವ ಜಂಪೆತಾಳ**

ತನುಜ ಲಕ್ಷ್ಮಣ ಕೇಳು ಮುನಿಗಳಾ ಶ್ರಮದಿ ಭೋ ।
ಜನವ ಮಾಡಿಸಲಿಷ್ಟವೆನಗಾಯಿತಯ್ಯ ॥81॥

ತರಿಸು ಸನ್ನಹವೆಲ್ಲ ತೊಡರಿಲ್ಲವೆಂದಾಗ |
ಪರಮಪಾವನೆ ಮಾತೆ ಪೊರಟಳಾ ಸೀತೆ ||82||

**ವಾರ್ಧಕ**

ಜಗದುಪತಿ ಕೇಳಿಂತು ಲಕ್ಷ್ಮಣನೊಳುಸುರುತಲೆ
ನಗೆಮೊಗದಿ ತನ್ನಿಷ್ಟದೊರಕಿತೀ ದಿನವೆಂದು
ಮಿಗೆ ಸರ್ವಭೂಷಣಂಗಳ ಧರಿಸುತಾ ಸೀತೆ ಪಯಣಸನ್ನಾಹವಾಗಿ |
ಅಗಿಲು ಚಂದನ ಗಂಧ ಕಸ್ತೂರಿ ಕುಂಕುಮವ
ಬಗೆಬಗೆಯ ದಿವ್ಯಾಂಬರಂಗಳಂ ತರಿಸಿಕೊಂ
ಡೊಗುಮಿಗೆಯ ಹರ್ಷದಿಂದಂತಃಪುರಕೆ ಬಂದು ಕೌಸಲ್ಯೆಗಿಂತೆಂದಳು ||83||

**ರಾಗ ಕಾಂಭೋಜಿ ಏಕತಾಳ**

ತಾಯೆ ಕೇಳಿಂದೊಂದು ಮಾತ ರಾಮನಪ್ಪಣೆಯನಿತ್ತ |
ಪ್ರೀಯದಿಂದ ವನದಿ ಮುನಿಸ್ತ್ರೀಯರ ಕೂಡಿ ||
ಆಯತದಿಂದವರಿಗೆಲ್ಲ ಬಾಯನದಾನವನಿತ್ತು |
ನೋಯಿಯನ್ನು ಮಾಡಿ ನಾಳೆಬಾಹೆನೆಂದಳೂ ||84||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಏನೆ ಜಾನಕಿ ಇಂದಿಗಿಲ್ಲಿಗೆ |
ದಾನವಾಂತಕ ಬರಲು ಹೇಳಿದ |
ಮಾನಿನೀಮಣಿ ಜೋಕೆ ಪೋಗುವ | ಕಾನನದೊಳು ||85||

ಪೋಗಿಬಹೆನೆಂ ದೆನ್ನುತಲೆ ತಲೆ |
ವಾಗಿ ಕೈಕೆಸು ಮಿತ್ರೆಯರಿಗೆ ಸ |
ರಾಗದಿಂದಲೆ ಪಯಣವಾದಳು | ನಾಗವೇಣಿ ||86||

**ರಾಗ ನಾದನಾಮಕ್ರಿಯೆ ಅಷ್ಟತಾಳ**

ರಾಮನಚರಣವ ನೆನೆಯುತ್ತ | ತಾಯಿ |
ಭೂಮಿದೇವಿಗೆ ನಮೋ ಎನ್ನುತ್ತ ||
ಗ್ರಾಮದೇವತೆಯ ಕಂಡೆರಗುತ್ತ | ಕುಲ |
ಸ್ವಾಮಿಗೆ ಜಯವೆಂದು ಪೊಗಳುತ್ತ ||87||

ಕೇರಿ ಕೇರಿಯ ಮನೆ ಮನೆಗಳಲಿ ಇದ್ದ |
ನಾರಿಯರಿಗೆ ಮುಗಿದು ಕರಗಳ ||

ನೀರೆ ಜಾನಕಿ ನಡೆತಂದಳು । ರಥ ।
ವೇರಿ ಕಾಡಿಗೆ ಹೊಡೆ ಎಂದಳು ॥೮೮॥

**ವಾರ್ಧಕ**

ಹಾರಿಸಿದ ರಥವನರೆನಿಮಿಷದಲಿ ಗಡಗಡನೆ
ಜಾರಿಸಿದ ಕಲುಮುಳ್ಳು ಗಿರಿ ಪರ್ವತಂಗಳಂ
ತೋರಿಸಿದ ಬಲು ಭಯಂಕರವಾದ ಶಾರ್ದೂಲ ಸಿಂಹ ಹುಲಿ ಕರಡಿಗಳನು ।
ಹೋರಿಸಿದ ರಕ್ಕಸರ ಹೊಳಲುಗಳ ಮುರಿದ ಕಡೆ
ಘೋರಿಸಿದ ರಥದ ಕೀಲ್ಗಳು ಕಳಚುವಂತೆ ಮದ
ವೇರಿಸಿದ ಹಯಗಳಂ ಬೋಳೈಸುತಿರೆ ಕಂಡು ನಾರಿ ಜಾನಕಿ ಪೇಳ್ದಳು ॥೮೯॥

**ರಾಗ ಭೈರವಿ ಏಕತಾಳ**

ಎಲ್ಲಿಗೆ ಪಯಣವಿದೇನು । ನಿಲು ।
ನಿಲ್ಲಲೊ ಲಕ್ಷ್ಮಣ ನೀನು ॥
ಕಲ್ಲೆದೆ ಯಾದೆ ಇದೇಕೆ । ಥರ ।
ವಲ್ಲ ಪೋಗುವದಿನ್ನು ಜೋಕೆ ॥೯೦॥

ಹುಲಿ ಸಿಂಹಗಳು ಶಾರ್ದೂಲ । ಹಾ ।
ವ್ಗಳು ಹರೆಯುತಲಿವೆ ಬಹಳ ॥
ಕಳವಳಿ ಸುತ್ತಿದೆ ಮನಕೆ । ಎನ್ನ ।
ನೆಳೆಯುವ ದೇಕೊ ಗಹನಕೆ ॥೯೧॥

ಮುನಿವಧುಗಳನಾರ ಕಾಣೆ । ಇದು ।
ವನವಲ್ಲವೆ ಪೇಳೆನ್ನಾಣೆ ॥
ದನುಜರ ಹೊಳಲಿದೆ ಮುಂದೆ । ರಥ ।
ವನು ತಿರುಗಿಸು ನೀ ಹಿಂದೆ ॥೯೨॥

ವಚನ ॥ ಇಂತೀ ಜಾನಕಿ ನುಡಿಯಲಾಗಿ ಸೌಮಿತ್ರಿ ಏನೆಂದನು ಎಂದರೆ-

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮೇದಿನೀಸುತೆ ಕೇಳು ಜನರಪ ।
ವಾದ ಬಂದುದ ಕಳೆಯಲೋಸುಗ ।
ಆ ದಯಾನಿಧಿ ಕಳುಹಿದನು ತಾ । ಭೇದದಿಂದ ॥೯೩॥

ಸೃಷ್ಟಿಗೀಶ್ವರ ರಾಮಚಂದ್ರನು ।
ಸಿಟ್ಟಿನಿಂದಲೆ ನಿಮ್ಮನೀಗಳೆ ।
ಬಿಟ್ಟುಬಾರೆಂದೆನುತ ನೇಮವ । ಕೊಟ್ಟನೆನಗೆ ॥94॥

**ವಾರ್ಧಕ**

ಪ್ರಳಯ ಕಾಲದ ಸಿಡಿಲು ಬಂದೆರಗಿ ವಟವಕ್ಷ
ಇಳೆಗೊರಗುವಂತೆ ಲಕ್ಷ್ಮಣನ ನುಡಿಕೇಳ್ದು ಭೂ
ತಳಕೆ ಮೂರ್ಛಿತಳಾಗಿ ಬಿದ್ದಳಂಗನೆ ಕಂಡು ಸೌಮಿತ್ರಿ ಬೆರಗಾಗುತ ।
ತಳಿರ ಕಣ್ಗೊತ್ತಿ ಕಂಬನಿಯೊರಸಿ ಎಲೆನೀರ
ತಳಿದು ಪತ್ರಗಳ ಕೊಡೆವಿಡಿಯಲ್ಕೆ ಮೂರ್ಛೆಯಂ
ತಿಳಿದೆದ್ದು ಲಕ್ಷ್ಮಣನ ಮೊಗನೋಡಿ ಜನಕಸುತೆ ಅಳುತ ಮತ್ತಿಂತೆಂದಳು ॥95॥

**(ಸಾಂಗತ್ಯ) ರಾಗ ನೀಲಾಂಬರಿ ರೂಪಕತಾಳ**

ಕಯ್ಯರೆ ಖಡ್ಗವ ಕೊಟ್ಟು ತನ್ನರಸಿಯ ।
ಹೊಯ್ಯೆಂದು ಪೇಳದೆ ಬರಿದೆ ॥
ಒಯ್ಯನೆ ಕಾಡೊಳು ಬಿಟ್ಟು ಬಾರೆಂದನೆ ।
ಅಯ್ಯಯ್ಯ ರಾಮ ಕರುಣಾಳು ॥96॥

ರಾಮನ ಭುವನಾಭಿರಾಮನ ಶರಣಸು ।
ಪ್ರೇಮನ ಚರಣವನಗಲಿ ॥
ಈ ಮಹಾಕಾಡೊಳು ಇರುವದೆಂತಯ್ಯಯ್ಯೋ ।
ರಾಮಾ ರಾಮಾಯೆಂದಳಬಲೆ ॥97॥

ಕಾಡಿನೊಳಗೆ ಹುಲಿಯಿರುವ ಸುದ್ದಿಯ ಕೇಳಿ ।
ನಾಡಿಂದೊಕ್ಕಲು ತೆಗೆದಂತೆ ॥
ನಾಡಮಾತನು ಕೇಳಿ ಎನ್ನನೀ ರೀತಿಯ ।
ಮಾಡಿದನಲ್ಲ ಎನ್ನರಸ ॥98॥

ಕಾಣಲಾರದ ಪಗೆಯವರಿಗೆ ತಲೆಯಲ್ಲಿ ।
ಮಾಣಿಕ್ಯ ವುಂಟೆಂದರವನ ॥
ಪ್ರಾಣವ ಕಳೆವಂತೆ ಜಾಲಮಾತಿಗೆ ಯೆನ್ನ ।
ಪ್ರಾಣೇಶ ತೊರೆದನೆ ವಿಧಿಯೆ ॥99॥

ಪಟ್ಟೆ ಪ್ರಮಾಣ ತಾರ್ಕಣೆ ಸಾಕ್ಷಿ ಚತುರ್ವಿಧ ।
ದಷ್ಟಧರ್ಮಗಳು ರಾಜ್ಯದಲಿ ॥

ಭ್ರಷ್ಟರ ನುಡಿಗೆನ್ನ ತೊರೆದ ಇನ್ನಿರುವುದು ।
ಕಷ್ಟಸಂಸಾರ ಬಡವರಿಗೆ ||100||

ವಚನ || ಇಂತೆಂದು ಜಾನಕಿ ನುಡಿಂ಼ಲಾಗಿ ಲಕ್ಷ್ಮಣನು ಮನಸ್ಸಿನಲ್ಲಿ ನೊಂದುಕೊಂಡು ಮರುಗುತ್ತ ನಿಲಲು ವನಜಾಂಬಕಿ ಮತ್ತೇನೆಂದಳು ಎಂದರೆ -

**ರಾಗ ಆನಂದಭೈರವಿ ಆದಿತಾಳ (ವಿಲಂಬಿತ)**

ಏಕೆ ನಿಂತಿರುವೆ ಲಕ್ಷ್ಮಣ ಕೋಪಿಸುವನು ।
ಕಾಕ್‌ತುಸ್ಥ ನಿನ್ನ ಮೇಲೆ ||
ಸಾಕು ತಾನಾದರೂ ರಾಮ ಒಳ್ಳಿತಾಗಿರಲಿ ।
ರಾಕೇಂದುನಿಭವದನ ||101||

ವಲ್ಲಭಗಿಂಥ ಮನಸು ಬಂತಲ್ಲ ಹೀಗೆ ।
ಕಲ್ಲೆದೆಯಾಯಿತಲ್ಲ ||
ಕೊಲ್ಲದ ಬಿಟ್ಟು ಪೋಪೆಯಾ ಈ ಕಾಡಿನೊಳ ।
ಗೆಲ್ಲಿಗೆ ಪೋಗಲಿನ್ನಾನು ||102||

ಕೌಸಲ್ಯೆ ಸುಮ್ಮನಿದ್ದಳೆ ಸುಮಿತ್ರಾದೇವಿ ।
ಈ ಕತ್ಯ ಕೊಪ್ಪುಕೊಟ್ಟಳೆ ||
ಬಹು ಕಾಲ ಇದ್ದ ಜಾಂಬವ ಹನುಮಂತ ಭಕ್ತ ।
ತಾವ್ಕೇಳಿ ಸುಮ್ಮನಿದ್ದರೆ ||103||

ಯಾರಿದ್ದು ಏನ ಮಾಳ್ಪರು ಎನ್ನಣೆಯಲ್ಲಿ ।
ಈ ರೀತಿ ಬರೆದ ಮೇಲೆ ||
ಮೂರುಬಾರಿಗು ಪೇಳಿದ ಮೇಲೆ ಇನ್ನುಂಟೆ ।
ಶ್ರೀರಾಮಚಂದ್ರನಾಶೆ ||104||

ವಚನ || ಇಂತೆಂದು ಜಾನಕಿಯು ಪೇಳಲಾಗಿ ಲಕ್ಷ್ಮಣನು ಏನೆಂದನು ಎಂದರೆ -

**ರಾಗ ತೋಡಿ ಏಕತಾಳ (ಯಾಲಪದ)**

ಅಂಬರ ಗೀರ್ವಾಣಿ ವಾಣಿ ।
ಕುಂಭಿನೀದೇವಿ ಕಲ್ಯಾಣಿ ।
ಶಂಭು ಕಮಲಜೇಂದ್ರ ಗಣಪರಾ ಮೂಲೋಕಪಾಲ ।
ರೆಂಬ ಮುಖ್ಯ ದೇವತೆಗಳಿರ ||105||

ವನದೊಳಿಪ್ಪ ಮುನಿಗಳಿರ ।
ವನಿತೆ ಸೀತೆ ಇಹಳು ಜೋಕೆ ।

ಎನುತ ಕೈಯ ಮುಗಿದು ತಿರುಗಿದ ದಿಕ್ಪಾಲಕರಿಗೆ ।
ಮಣಿದು ಕಾವ ಕರುಣೆ ಕೇಳಿದ ॥106॥

**ವಾರ್ಧಕ**

ಇಂತೆಂದು ಸಕಲಸುರರಿಂಗೆರಗಿ ಲಕ್ಷ್ಮಣಂ
ತಾಂ ತಿರುಗಿದಂ ಪುರಕೆ, ಕಂಡು ಜಾನಕಿ ಬಳಿಕ
ಸಂತಾಪದಿಂ ಕೂಗಿದಳು ಹಲುಬುತೊರಳಿದಳು ಕಲ್ಮರಂ ಕರಗುವಂತೆ ॥107॥

**ರಾಗ ನೀಲಾಂಬರಿ ಅಷ್ಟತಾಳ**

ವನದೊಳಗಿರಲು ನಾಹಿಂದೆ ಎನ್ನ ।
ದನುಜನೊಯ್ಯಲು ಕೂಡೆ ಬಂದೆ ॥
ಕ್ಷಣದೊಳಗಸುರರ ಕೊಂದೆ ಬಿಡೆ ।
ನೆನುತ ಸತ್ಯವ ಮಾಡಿ ತಂದೆ ॥108॥

ಅರಿತು ನೀ ಸುಖದೊಳಗಿರದೆ ಎನ್ನ ।
ನೆರೆದ ಕಾಡೊಳು ಬಿಟ್ಟು ಬರಿದೆ ॥
ಕರಗದೆ ಮನಸಯ್ಯ ನಿನಗೆ ಎನ್ನ ।
ಮರೆತೆಯಾ ಗತಿ ಯಾರಿನ್ನೆನಗೆ ॥109॥

ಬಲುಬಲು ಗುಣಗಳುಳ್ಳವನೆ ಜಗ ।
ವುಳುಹಿದ ಲಕ್ಷ್ಮೀಧವನೆ ॥
ಸುಲಲಿತ ರೂಪ ಕೇಶವನೆ ನಾ ।
ಬಳಲುವೆ ನೈ ಪರ ಶಿವನೆ ॥110॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಸೀತೆ ಹೀಗೆಂದು ಕೂಗಾಡುತ್ತ ಭೂತ ।
ನಾಥನ ದೆಸೆಗೆಂದು ನೋಡುತ್ತ ॥
ಭೂತಳ ದೊಳು ಬಿದ್ದಳ್ಮಾಣದೆ ಮೈಯೊಳ್ ।
ಧಾತುಗುಂದುತ ಕಡೆಗಾಣದೆ ॥111॥

ಕಂಡು ಚಮರಿಮಗ ಬೀಸುತ್ತ ಗಿಳಿ ।
ವಿಂಡು ತಳಿರ ತಂದು ಹಾಸುತ್ತ ॥
ಹಿಂಡುಪಕ್ಷಿಗಳು ಸಂವರಿಸುತ್ತ ದೇವಿ ।
ಪುಂಡರೀಕಾಕ್ಷನ ನೆನೆಯುತ್ತ ॥112॥

ಬಿಸಿಲಿನಡೆಗೆ ಮೈಗೆ ಬೀಳುತ್ತ ಬಿದ್ದು ।
ಕೊಸರುಗೊಂಡೆದ್ದು ಮತ್ತೇಳುತ್ತ ॥
ಉಸುರದಂದದಿ ಭಯ ತಾಳುತ ರಾ ।
ಕ್ಷಸರ ಬೊಬ್ಬೆಗಳನ್ನೆ ಕೇಳುತ್ತ ॥113॥

ಕೂಗುತಿರಲು ಸೊಲ್ಲು ಸೊಲ್ಲಿಗೆ ಬಂದ ।
ನಾಗ ವಲ್ಮಿಕಮುನಿಯಲ್ಲಿಗೆ ॥
ಯಾಗಸನ್ನಹಗಳ ನರಸುತ್ತ ಕಂಡು ।
ನಾಗವೇಣಿಯ ಮೆಲ್ಲ ನುಡಿಸುತ್ತ ॥114॥

**ರಾಗ ಘಂಟಾರವ ಜಂಪೆತಾಳ**

ಅಮ್ಮ ಕೇಳಂಜದಿರು ಅಳುವುದೇತಕೆ ನೀನು ।
ನಿಮ್ಮ ರಾಜ್ಯಗಳೆಲ್ಲಿ ನೀನಾರ ಮೃಗಳು ॥115॥

ಮಾತೆ ಕೇಳ್ನೀನಾವ ಭೂತಳಾಧಿಪನರಸಿ ।
ಏತಕೋಸ್ಕರ ಬಂದೆ ಈ ತಪೋವನಕೆ ॥116॥

ಕಾಂತೆ ನಿನ್ನನು ಹಿಂದೆ ಕಂಡ ಹೊಲಬಿದೆ ಮುಂದೆ ।
ಚಿಂತೆಬಿಡು ವಾಲ್ಮೀಕಿ ಎಂದೆನ್ನಪೆಸರು ॥117॥

ಆಪತ್ತು ಬಂದಾಗ ಅತಿಧೈರ್ಯವಿರಬೇಕು ।
ಈಪಾಟಿ ಕೂಗುವರೆ ಈ ಕಾಡಿನೊಳಗೆ ॥118॥

ನಯದಿಂದ ವಾಲ್ಮೀಕಿ ನಂಬಿಕೆಯ ಮಾತಾಡೆ ।
ಭಯದಿಂದ ಪೇಳಿದಳು ಬಲ್ಲಮುನಿಯೊಡನೆ ॥119॥

**ರಾಗ ತೋಡಿ ರೂಪಕತಾಳ**

ದಶರಥ ನಪತಿಗೆ ಸೊಸೆಯಾಗಬೇಕೆನ್ನ ।
ಪೆಸರು ಜಾನಕಿಯೆಂಬರೆಲ್ಲ ॥
ಯಶವಂತ ರಾಮನ ರಾಣಿಯಯೋಧ್ಯಾ ।
ದೆಸೆಯನಾಳುವನೆನ್ನ ರಮಣ ॥120॥

ಇರಲೊಂದು ದಿನ ನಡುವಿರುಳು ಪಟ್ಟಣದೊಳು ।
ತಿರುಗಲು ರಜಕನ ಮನೆಯ ॥
ತರುಣಿಪುರುಷರು ತಮ್ಮೊಳಗೆ ಕೊಂದಾಟದಿಂ ।
ದರುಹಿದರೇನೋ ನಾನರಿಯೆ ॥121॥

ಮರುದಿನದುದಯದಿ ಅನುಜ ಕರೆದು ನಾ ।
ನರಿಯದಂದದಿ ನೇಮವಿತ್ತ ॥
ತರಳೆಯ ಕಾಡೊಳು ಬಿಟ್ಟು ಬಾರೆಂದೆನೆ ।
ಕರೆತಂದ ಸೌಮಿತ್ರಿ ನಿನ್ನೆ ॥122॥

ಈ ದಡದಲಿ ಬಿಟ್ಟು ಹೊದ ಲಕ್ಷ್ಮಣನಿನ್ನು ।
ಹಾದಿಯ ಕಾಣದೆ ಮುಂದೆ ॥
ಹೇ ದಯಾನಿಧಿ ನಿನ್ನ ಪಾದವಕಂಡೆ ಇ ।
ನ್ನಾದರೂ ಕಾಯಬೇಕೆನ್ನ ॥123॥

ವಿಷವ ಕುಡಿದು ಸಾವೆನೆಂದರೆ ಈಗೆನ್ನ ।
ಬಸುರಿಗಾಯಿತು ತಿಂಗಳಾರು ॥
ವಶವಿಲ್ಲದಿಂತು ಜೀವಿಸುವಂಗಕಾಣೆಂದು ।
ಶಶಿಮುಖಿ ಬಿದ್ದಳಂಘ್ರಿಯಲಿ ॥124॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಏಳು ಚಿಂತಿಸಬೇಡ ಜಾನಕಿ ।
ಕೇಳಿದೆನ್ನಿಮಾತ ಲಾಲಿಸು ।
ಲೋಲಲೋಚನೆ ಅಂಜಿಕೆಯ ಬಿಡು ಪಾಲಿಸುವೆನು ॥125॥

ಮುಗುದೆ ಕೇಳಾ ಬೇರೆ ಮನದಲಿ ।
ಬಗೆಯದಿರು ವಾಲ್ಮೀಕಿ ಮುನಿನ ।
ಮೃಗಣಿತಾಶ್ರಮದೊಳಗೆ ಬಂದಿರು ಮೃಗಳು ನಮಗೆ ॥126॥

**ರಾಗ ಗೌಳಮಲಹರಿ ಏಕತಾಳ**

ನಂಬಿಕೊಳ್ಳೆ ನಂಬಿಕೊಳ್ಳೆ ನಾರಿ ಕೇಳವ್ವ ।
ಹಂಬಲಿಸದಿರೆಲೆ ಮರಿದುಂಬಿಗುರುಳವ್ವ ॥127॥

ಠಕ್ಕಿನ ಮಾತಲ್ಲ ಕೇಳೆ ಚಿಕ್ಕ ಪ್ರಾಯದವ್ವ ।
ಅಕ್ಕರಿಂದಿಬ್ಬರು ಸಣ್ಣಮಕ್ಕಳಾಹ ರವ್ವ ॥128॥

ಪುತ್ರರಾದ ಮೇಲೆ ನೀವಿನ್ನಿತ್ತ ಕೇಳಿರವ್ವ ।
ಮತ್ತೆ ರಾಮಚಂದ್ರದೇವನೊತ್ತಿಲಿರ್ಪೆಯವ್ವ ॥129॥

ಇಕ್ಕೊ ದೂರವಿಲ್ಲ ನಮ್ಮಾಶ್ರಮಕೆ ನೀ ಬಾರವ್ವ ।
ಮುಕ್ಕಣ್ಣನಾಣೆಗೂ ಬೇರೆಲೆಕ್ಕಿಸದಿರವ್ವ ॥130॥

**ವಾರ್ಧಕ**

ಹೊಡೆದ ಮಳೆನೀರ ಹೊಳೆಯಲಿ ಮುಳುಗಿ ಸಾವವನ
ಹಿಡಿದೆತ್ತಿ ಜೀವವನು ಕಾಯ್ದಂತೆ ವಾಲ್ಮೀಕಿ
ನಡುಗುತಿಹ ಜಾನಕಿಯ ಕರೆತಂದನೊಡನಿರ್ದ ತಾಪಸೋತ್ತಮರು ಸಹಿತ ।
ಕಡುಪತಿವ್ರತೆ ಜಗಜ್ಜನನಿ ತನ್ನಾಶ್ರಮಕೆ
ನಡೆತಂದಳಿನ್ನು ಪಾವನನಾದೆ ತಾನೆಂದು
ಬಿಡದಿತ್ತ ಪರ್ಣಶಾಲೆಯ ಕಟ್ಟಿ ಸಜ್ಜನರಿಗಡವಿಯೇ ಮನೆಯಾಹುದು ॥131॥

**ರಾಗ ನಾದನಾಮಕ್ರಿಯೆ (ಯಾಲಪದ) ಏಕತಾಳ**

ಬೆಳಗಾಗುತ್ತಲೇ ಏಳುವಳು ।
ನಳಿನಮಿತ್ರಗೊಂದಿಸುವಳು ।
ಜಲಜಪುಷ್ಪಗಳನೆ ಕೊವಳು ಆಹೂವ ಮುನಿ ।
ಗಳ ಪಾದಕರ್ಪಿಸುವಳು ॥132॥

ಮೂರು ಪ್ರದಕ್ಷಿಣೆ ಗೈವಳು ।
ಮಾರಿ ಭಕ್ತಿ ಭಾವದೊಳು ।
ಸೇರಿ ಮತ್ತೆ ಪರ್ಣಾಶ್ರಮದೊಳು ಕುಳಿತುಕೊಂಡು ।
ಶ್ರೀರಾಮನ ಧ್ಯಾನ ಮಾಳ್ಪಳು ॥133॥

ರಾಮು ಶ್ರೀ ರಾಮಾಯೆನ್ನುತ್ತ ।
ರಾಮನಾಮ ಕೊಂಡಾಡುತ್ತ ।
ನೇಮದಿಂದ ದಿನವ ಕಳೆಯಲು ಜಾನಕಿಗಿಂತು ।
ನೌಮಾಸ ತುಂಬಿದ್ದಾಯಿತು ॥134॥

**ರಾಗ ವರಾಳಿ ಏಕತಾಳ**

ಅಂಗನೆ ಸೀತೆಗೊಂಭತ್ತು ತಿಂಗಳಾಯಿತು ಕೋಮ ।
ಲಾಂಗಿಗೆ ಸಂತಾಪ ಹೆಚ್ಚಿ ಮುಂಗಾಣಿಸಿತು   ॥ ಪಲ್ಲವಿ ॥

ಸುತ್ತಮುತ್ತಲಿರುವ ಮುನಿ ಪತ್ನಿಯರೆಲ್ಲ ಕೂಡಿ ।
ಮತ್ತಗಜಗಮನೆಯ ಆಪತ್ತ ನೋಡುತ್ತ ॥
ಮತ್ತದಕ್ಕೆ ಬೇಕಾದಂಥ ವಸ್ತುಗಳೆಲ್ಲ ತರಿಸಿ ।
ಸುತ್ತಲು ಭೂಜಾತೆಯ ಕಾಯುತ್ತಲಿರ್ದರು ॥135॥

ನಾರಿಯರತ್ತಿತ್ತ ಸುಳಿವ ಕಾರಣ ಕಂಡು ಮುನಿ ।
ಬೇರೇನಿನ್ನಾ ಹುದೊ ಯೆಂದು ಬೆದರುತಿರ್ದನು ॥

ನಾರಾಯಣನೆ ಗತಿ ಎನ್ನುತ್ತ ವಾಲ್ಮೀಕಿ ತಾನು ಮತ್ತೆ |
ಮೂರು ದಿನದಿ ಹಗಲೂ ಇರುಳೂ ಕಾಯುತ್ತಿದ್ದನು ||136||

**ವಾರ್ಧಕ**

ಮಂದಗಾಮಿನಿ ಸೀತೆ ಶುಭಲಗ್ನ ಶುಭತಿಥಿಯೊ
ಳೊಂದಿರುಳು ಪಡೆದಳಿಬ್ಬರು ಕುಮಾರಕರ ಸುರ
ದುಂದುಭಿಯು ಮೊಳಗಿತಾಕಾಶದಲಿ ಸುರರು ಜಯವೆಂದು ಪೂಮಳೆಗರೆಯಲು |
ಮುಂದೆ ರವಿಕುಲದ ಬೆಳೆ ಹಸನಾಯ್ತು ರಘುವಂಶ
ಸಿಂಧುಚಂದ್ರಮರೊ ಜಾನಕಿಯ ಪುಣ್ಯಾಂಕುರದ
ಬಂಧುರವೊ ಎಂದು ತೋರಿತು ನೋಳ್ಪವರ ಕಣ್ಮನಕ್ಕೆ ಬೆಳಗಿದರಿರ್ವರು ||137||

**ರಾಗ ಕಾಂಭೋಜಿ ಏಕತಾಳ**

ಹೆತ್ತ ಮಕ್ಕಳ ಬಾಳಂತಿಗೆ ಹತ್ತು ರಾತ್ರಿ ಯಾದಮೇಲೆ |
ಚಿತ್ತೈಸಿ ವಾಲ್ಮೀಕಿ ಮುನಿ ಪೋತ್ತಮನಂದು ||
ಶಾಸ್ತ್ರವಿಧದುತ್ತಮ ಪುಣ್ಯಾರ್ಚನೆಯ ಮಾಡಿ ಮಂತ್ರ |
ಯುಕ್ತದಿಂದ ಕಾರ್ಯಂಗಳ ವಿಸ್ತರಿಸಿದ ||138||

ಸೋಮ ಸೂರ್ಯರಂತಿಪ್ಪ ಸತ್ಕೋಮಲಾಂಗರಿರ್ವರಿಗೆ |
ಪ್ರೇಮದಿ ಕುಶಲವರೆಂದು ನಾಮವಿಟ್ಟನು ||139||

ಆ ಕುಮಾರರಿಬ್ಬರ ಶುಭಕರಣ ಗಳನೆ ನೋಡಿ |
ತಾ ಕರುಣಿಸಿ ಸೀತೆಗೆ ವಾಲ್ಮೀಕಿ ಪೇಳಿದ ||
ಕೋಕಿಲಸುವಾಣಿ ಕೇಳ್ನಿನ್ನೀ ಕುಮಾರರಿಬ್ಬರು ಭೂ |
ಲೋಕದೊಳು ಜಾಣರೆನ್ನಿಸಿಕೊಂಡಿರ್ಪರು ||140||

ಸೃಷ್ಟಿಜಾತೆ ನಿನ್ನ ಮಕ್ಕಳ್ ಪುಟ್ಟಿದ ಲಗ್ನದ ಗುಣದಿ |
ಅಷ್ಟದಿಕ್ಪಾಲಕರಿಂದಲೂ ಶ್ರೇಷ್ಠರೆನ್ನಿಸಿ ||
ಕಷ್ಟದಿಂದ ತಂದೆಮಕ್ಕಳ್ಗಿಷ್ಟವಾಗಿ ಮುಂದಯೋಧ್ಯಾ |
ಪಟ್ಟಣವಾಳ್ವರು ಕೇಳವ್ವ ದಷ್ಟಾಂತವಿದು ||141||

ವಚನ || ಈ ರೀತಿ ವಾಲ್ಮೀಕಿ ಮುನಿಪತಿಯು ಬಾಲರಿಂಗೆ ನಾಮಕರಣವಂ ಮಾಡೆ
ಸುರನಾರಿಯರು ತೊಟ್ಟಿಲೊಳಿಕ್ಕಿ ತೂಗಿ ಪಾಡಿದರದೆಂತೆನೆ -

**ರಾಗ ಜೋಗುಳಪದ ಅಟತಾಳ**

ಜೋ ಜೋ, ಜೋ ಜೋ, ಜೋ ಜೋ, ಎನುತ |
ಜೋಗುಳವನು ಪಾಡಿದರು ಸತಿಸಹಿತ ||142||

ಜೋ ಜೋ, ಬಾಲಕ ರೊಳು ಹೊಸರನ್ನ ।
ಜೋ ಜೋ, ರಘುಕುಲತಿಲಕ ಮೋಹನ್ನ ॥143॥

ಜೋ ಜೋ, ಶ್ರೀರಾಮ ಚಂದ್ರಕುಮಾರ ।
ಜೋ ಜೋ ದಶರಥ ರಘುಕುಲೋದ್ಧಾರ ॥144॥

ಜೋ ಜೋ, ಲವಬಾಲ ಗುಣಗಣಶೀಲ ।
ಜೋ ಜೋ, ಕುಶತನು ಜನೆ ಗುಣಲೀಲ ॥145॥

ಜೋ ಜೋ, ಕುಶಲವ್ಗೆರಂದೋಲಾಡುತ್ತ ।
ಜೋಡೆಯರೆಲ್ಲ ತೂಗಿದರು ಪಾಡುತ್ತ ॥146॥

**ದ್ವಿಪದಿ**

ಮೊಲೆಹಾಲನುಣುತಿರುವ ಮಕ್ಕಳಿರ್ವರಿಗೆ ।
ಹಲವು ಮಿಗಲಾ ದಿವಸ ವರುಷ ನೆಲೆಯಾಗೆ ॥147॥

ತಪಸಿನಾಶ್ರಮದೊಳಗೆ ತನೆಯರಿರೆ ಕಂಡು ।
ಚಪಲಾಕ್ಷಿ ಮನದೊಳಗೆ ಚಿಂತಿಸುವಳಂದು ॥148॥

ಪರದೇಶಿ ಸುತರಿವರ ಪಾಪವೇ ಎಂದು ।
ತರಳೆ ದುಃಖಿಸೆ ಮುನಿಪ ತಾ ತಿಳಿದನಂದು ॥149॥

ಸುರಪುರಕೆ ಕಳುಹಿದನು ಶಿಷ್ಯರನು ಬೇಗ ।
ಸುರತರಳರಾಭರಣಗಳ ತಂದರಾಗ ॥150॥

ಮಕುಟದರಳೆಲೆ ಮುತ್ತು ಮತ್ತದರ ಸುತ್ತೂ ।
ಅಖಿಲ ರತ್ನಾಧಿಗಳು ಹದರೊಳಿರುತಿತ್ತು ॥151॥

ಕಾಲಲಂದುಗೆ ಗೆಜ್ಜೆ ಕಡಗ ಕೈಬೆರಳ ।
ಸಾಲಾದ ಉಂಗುರವು ಸರಪಣಿಯು ಕೊರಳ ॥152॥

ಹುಲಿಯುಗುರು ಒಡ್ಯಾಣ ಹೂವಿನಂಗಿಗಳ ।
ಬಲು ಪ್ರಕಾಶದೊಳಿರುವ ಬಹುಭೂಷಣಗಳ ॥153॥

ತೊಡಿಸಿದನು ಮಕ್ಕಳಿಗೆ ತಕ್ಕ ವಸ್ತುಗಳ ।
ಉಡಿಸಿದನು ಮುನಿರಾಯ ಉಡುವ ಪಟ್ಟೆಗಳ ॥154॥

**ರಾಗ ಶಂಕರಾಭರಣ ಮಟ್ಟೆತಾಳ**

ಕಂಡು ಸೀತೆ ಹರ್ಷವಾಂತಳು ।
ಪುಂಡರೀಕ ವದನೆ ತನ್ನ ಮಕ್ಕಳಾ, ಚೆಲುವಿಕೆಯನು ॥ ಪಲ್ಲವಿ ॥

ಶಶಿಯ ಪೋಲ್ವ ಮುದ್ದುಮುಖದೊಳೆಸೆವ ಕದಪಿನಲ್ಲಿ ಹೊಳೆವ ।
ಮಿಸುಪ ಕರ್ಣಕುಂಡಲಂಗಳೆಸೆದು ಜೋಲುತ ॥
ಕುಸುಮಶರನ ಬಾಣವೆರಡು ಶಿಶುಗಳಾಯ್ತು ಚೆಲುವ ಬ, ।
ಣ್ಣಿಸುವೊಡರಿದು ಕುಶಲವರ ಸಂತಸದಿ ಬರುವ ಮಕ್ಕಳನ್ನು ॥155॥

ಗೆಜ್ಜೆ ಕಾಲಂದುಗೆಗಳುಲಿಯೆ ಪ್ರಜ್ವಲಿಪ ಮಾಗಾಯ್ಗಳೊಲೆಯೆ ।
ವಜ್ರದ ಕೆತ್ತಿಗೆಯ ಮುಕುಟ ಶಿರದೊಳೆಸೆಯಲು ॥
ಸಜ್ಜನರೆದೆಯ ಮಣಿಗಳೊ ಬಲು ದುರ್ಜನರೆದೆಗೆ ಕಣೆಗಳೊ ಎನೆ ।
ಲಜ್ಜೆಯಿಂದ ಒಲೆದು ನಲಿದು ಹೆಜ್ಜೆಯಿಡುವ ಮಕ್ಕಳನ್ನು ॥156॥

**ರಾಗ ಭೈರವಿ ಜಂಪೆತಾಳ**

ಮೂರು ವರುಷದ ಮೇಲೆ ಮುದದಿಂದ ಮಕ್ಕಳಿಗೆ ।
ಹೇರಂಬ ನಕ್ಕರವನಾರಂಭಿಸಿದನು ॥157॥

ಬರಹವೆಲ್ಲವ ಕಲಿತು ಬಂದ ಮಕ್ಕಳ ನೋಡಿ ।
ಗುರು ವೇದ ಶಾಸ್ತ್ರಗಳ ಗುಣದಿ ಕಲಿಸಿದನು ॥158॥

ಸಂಗೀತ ವಿದ್ಯೆಯನು ಸಾಧಿಸುತ ಪಾಡಿದರು ।
ವಿಂಗಡಿಸಿ ನುಡಿಸಿದರು ವೀಣೆಗಳ ಸ್ವರವ ॥159॥

ಆ ಮುದ್ದು ಮಕ್ಕಳಿಗೆ ಅರ್ತಿಯಲಿ ವಾಲ್ಮೀಕಿ ।
ರಾಮಾಯಣದ ಕವಿತೆ ಸಾಮದಲಿ ಕಲಿಸಿ ॥160॥

ವಚನ ॥ ಇಂತು ಸಕಲ ವಿದ್ಯೆಯಂ ಕಲಿತಂಥವರಾಗಿ ಕುಶಲವರು ಒಂದಾನೊಂದು ದಿನ ಮುನಿಯೆಡೆಗೆ ಬಂದು ಏನೆಂದರು ಎಂದರೆ -

**ರಾಗ ವರಾಳಿ ಏಕತಾಳ**

ಜಯ ಜಯಾ ಮಹಾ ಮುನಿವರೇಣ್ಯ ಪಾಹಿ ।
ಭಯವಿನಾಶನ ಅಗ್ರಗಣ್ಯ ॥ ಪಲ್ಲವಿ ॥

ಬುದ್ಧಿವಂತರು ನಾವಾದೆವಯ್ಯ ಬಿಲ್ಲು ।
ವಿದ್ಯೆಯ ಕಲಿಸಬೇಕು ಎಮಗೆ ನೀವು ॥161॥

ಬೇಟೆಗೆ ಪೋಪ ಮಕ್ಕಳೆಲ್ಲ ಕಂಡು ನಗೆ ।
ಪಾಟಿ ಮಾಳ್ಪರಯ್ಯ ನಮ್ಮ ಹೆಡ್ಡರೆಂದು ॥162॥

ಕರುಣಿಸಿದಿರಿ ವಿದ್ಯೆಗಳನೆಲ್ಲ ನಮ್ಮ ।
ಗುರುವೆ ನಿಮ್ಮ ಕರುಣೆಗಿನ್ನು ಎರಕವಿಲ್ಲ ॥163॥

ಸಣ್ಣವರಯ್ಯ ನಿಮಗೆ ಬಿಲ್ಲುವಿದ್ಯ ।
ಬಣ್ಣವಲ್ಲೀಗ ಕೇಳಿರಪ್ಪಗಳಿರ ॥164॥

**ರಾಗ ಕಾಂಭೋಜಿ  ಏಕತಾಳ**

ನೋಡು ಜಾನಕಿ ಮಕ್ಕಳು ಬಿಲ್ಲು ವಿದ್ಯವ ।
ಗಾಢದಿ ಕಲಿಸೆಂದು ಕಾಡುತ್ತ ಲಿಹರಿಂದು ॥165॥

ಚೆಲುವ ಬಾಲಕರಿವರು ಬಲವಂತವಾಗಿಹ ।
ಕಲಿಗೆಳೆದುರು ನಿಂತು ಕಾದಿ ಕೊಲ್ಲುವರೆಂತು ॥166॥

ಸುಲಭವಲ್ಲೆನಲಿಂದು ಛಲಮಾಡುವರು ಬಂದು ।
ಹುಲಿಮರಿಗಳು ಹೊಲಹುಲ್ಲ ಮೇಯುವವೆ ಹೇಳು ॥167॥

**ಭಾಮಿನಿ**

ಆಗಲಾ ಮುನಿಯೆಂದ ವಚನವ
ನಾಗವೇಣಿಯು ಕೇಳ್ದು ಪ್ರೇಮದಿ
ಯೋಗಿಮುನಿಪತಿಗೆರಗಿ ಮಕ್ಕಳ ನೋಡಿ ನಗುತಿರಲು ।
ಆಗದಾಗದು ಗುರುವೆನುತ ತಲೆ
ವಾಗಿ ಸೀತೆಯ ಕರೆದು ಮೆಚ್ಚಿಸ
ಲಾಗ ಮಕ್ಕಳಿಗೆಂದಳಬಲೆ ವಿವೇಕಮಾರ್ಗಗಳ ॥168॥

**ರಾಗ ಪಂತುವರಾಳಿ ಮಟ್ಟೆತಾಳ**

ಸದರವಲ್ಲ ಬೇಟೆ ಮಕ್ಕಳಿರ ಸಣ್ಣವರು ನಿಮಗೆ  ॥ ಪಲ್ಲವಿ ॥

ಸದರವಲ್ಲ ಬೇಟೆ ನಿಮಗೆಯದರ ತಳ್ಳಿಬೇಡ ನಮಗೆ ।
ಚದುರರ್ನೀವು ಚೆಣ್ಣರು ಮುನಿಪದದ ಸೇವೆಮಾಡುತ ॥
ಮುದದಿ ವೇದಶಾಸ್ತ್ರ ಪೌರಾಣದ ಸುಗೀತಿ ರಾಜ್ಯನೀತಿ ।
ಯದನು ತಿಳಿದು ಮೇಲೆ ನಾನಾ ಯುಧದ ವಿದ್ಯೆ ಕಲಿಯಿರಪ್ಪ ॥169॥

ಕಾಡಿನೊಳಗೆ ಬಹಳ ಕರಡಿ ಸಿಂಹ ಶಾರ್ದೂಲ ಹಂದಿ ।
ಕಾಡುತಿಹವು ವಿಷಸರ್ಪಗಳಾಡಿ ಕೂಡಿ ಬೆದರಿಸುವವು ।
ಮೂಢರಕ್ಕಸರು ಮನೆಯ ಮಾಡಿರುವರು ಕಂಡ ಜನರ ।
ಪೀಡಿಸುವರು ಸಟೆಮಾತಲ್ಲ ಕೇಡು ಬಪ್ಪದು, ಮಕ್ಕಳಿರ ॥170॥

ಸೀತೆ ಬೇಡವೆಂದು ಪೇಳ್ದ ಮಾತ ಕೇಳದೆ ಮುನಿ ।
ನಾಥನಡಿಗೆ ನಮಿಸಿ ಧನುವ ಚಾತುರ್ಯದಿ ಪಿಡಿಯುತ ।
ಆತು ಶರವ ತೊಡುವ ಬಿಡುವ ರೀತಿ ಕ್ಷಣದಿ ಕಲಿಯುತಾ ಕಿ ।
ರಾತಮಕ್ಕ ಳೊಡನೆ ಮೃಗ ವ್ರಾತವನ್ನು ಸೆದೆದರಾಗ ॥171॥

**ಭಾಮಿನಿ**

ಹುಲಿ ಕರಡಿ ಶಾರ್ದೂಲ ಸಿಂಹ
ಜ್ವಲಿತಗಜ ಕಾಡ್ಕೋಣ ಹಂದಿಯ
ಬಳಗವನು ಎಸೆದೆಸೆದು ಮೃಗಜಾತಿಗಳ ಸಂಹರಿಸಿ ।
ನಲಿದು ಬೃಹರಾಶ್ರಮಕೆ ಈ ಪರಿ
ಕಳೆಯುತಿರಲೊಂದು ದಿನ ವರುಣನು
ಕಳುಹಿದೋರ್ವನು ಬಂದು ಮುನಿಪದಕೆರಗುತಿಂತೆಂದ ॥172॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಚಿತ್ತಯಿಸು ಮುನಿನಾಥ ವರುಣನು ।
ಮತ್ತೆ ಯಜ್ಞವ ನಡೆಸಲೋಸುಗ ।
ವಿಸ್ತರದಿ ಕಳುಹಿಸಿದ ಓಲೆಯ । ನಿತ್ತು ನಿಮಗೆ ॥173॥

ಕಾದಿಹರು ಕೂಡಿರುವ ಋಷಿಗಳು ।
ಹಾದಿಯನ್ನೀಕ್ಷಿಸುವನಬ್ಧಿಪ ।
ಓದಿ ನೋಡೀಕ್ಷಣವೆ ತೆರಳೆಂದು । ಪಾದಕೆರಗೆ ॥174॥

ಓಲೆಯನು ಕೊಂಡಾಕ್ಷಣವೆ ಮುನಿ ।
ಪಾಲ ಸೀತೆಯ ಕರೆದು ಪೇಳಿದ ।
ಲೋಲಲೋಚನೆ ಕರೆಯಿಹುದು ಪಾ । ತಾಳದಿಂದ ॥175॥

**ರಾಗ ತೋಡಿ ಏಕತಾಳ**

ಪೋಗಿ ಬರುವೆ ಯಾಗಕ್ಕೆ ಈಗ ಮಕ್ಕಳ್ ಜೋಕೆ ।
ನಾಗವೇಣಿ ನಿನ್ನ ಕುವರ ಪೋಗದಿರಲಿ ದೂರ ॥176॥

ಎಂದಿಗೆ ಬರುವಿರಿ ಇತ್ತ ತಂದೆ ಮುನಿರಾಯ ।
ಕಂದರಿರ್ವರೇ ಬೇಸರ್ವರೆಂದಳಾಗ ಸೀತೆ ॥177॥

ನಾಳೆ ಬರುವನೆಂದು ಮತ್ತಾ ಬಾಲರ ನೋಡುತ್ತ ।
ಲೀಲೆಯಿಂದ ಮುದ್ದುಮಾಡಿ ಕಾಲಿಗೆರಗಿಸುತ್ತ ॥178॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ನಾಳೆ ಬೃಹದು ಬದ್ಧ ವೇನಯ್ಯ । ಮುನಿ ।
ಪಾಲ ಬೇಸರ್ವೆವುನಾವಯ್ಯ ॥
ನಾವು ಸಂಗಡ ಬಂದರಾಗದೇ । ಅಲ್ಲಿ ।
ನೀವು ಹೋಗದೆ ಯಜ್ಞ ಸಾಗದೆ ॥179॥

ಥರವಲ್ಲ ವಿಪಿನದೊ ಳೊಬ್ಬಳೆ । ಅಮ್ಮ ।
ಅರೆಗಳಿಗೆಯು ಬಿಟ್ಟು ಇರುವಳೆ ॥
ತರಳರು ನಡೆವುದೆಂತಲ್ಲಿಗೆ । ಸುಮ್ಮ ।
ನಿರಿ ನಾಳೆ ಬಹೆನು ನಾನಿಲ್ಲಿಗೆ ॥180॥

ಒಬ್ಬೊಬ್ಬರ್ತಿರುಗದಿ ರಡವಿಗೆ । ಕುಶ ।
ದರ್ಭೆಗೆ ಹೊರಡ ಬೇಡಾಚೆಗೆ ॥
ಇಬ್ಬರೂ ಜೋಡಾ, ಗಿರಿಯೆಂದು । ಮುನಿ ।
ತಬ್ಬಿ ಬೀಳ್ಕೊಂಡು ನಡೆದನಂದು ॥181॥

**ಭಾಮಿನಿ**

ತೆರಳಿದನು ಮುನಿಯತ್ತ ಕುಶ ತಾ ।
ವರವಿಪಿನದೆಡೆಗಿತ್ತಲಾ ಲವ ।
ತರಳರೊಡನಾಡುತ್ತಲಿರಲಾಶ್ರಮಸಮಾಪದಲಿ ।
ಇರುತಿರಲು ಲೀಲೆಯೊಳಯೋಧ್ಯಾ ।
ಪುರದ ವತ್ತಾಂತವನು ಪೇಳುವೆ ।
ಧರಣಿಪತಿ ರಘುನಾಥ ಜನಹತ್ಯೆಯನು ಕಳೆವುದಕೆ ॥182॥

**ರಾಗ ಕಾಂಭೋಜಿ ಜಂಪೆತಾಳ**

ಅಶ್ವಮೇಧವ ರಚಿಸಬೇಕೆಂದು ಶ್ರೀರಾಮ ।
ಶಶ್ವತದಿ ಸನ್ನಹವ ತರಿಸಿ ॥
ವಿಶ್ವಮಿತ್ರಾದಿಗಳು ಯಾಗಶಾಲೆಯ ರಚಿಸಿ ।
ವಿಶ್ವನಾಯಕ ದೀಕ್ಷೆ ವರಿಸಿ ॥183॥

ಮತ್ತಲ್ಲಿ ಕುದುರೆಯನು ತರಿಸಿ ಶಂಗರಿಸಿ ಶಾ ।
ಸ್ತ್ರೋಕ್ತದಿಂ ಪೂಜೆಗಳ ನಡೆಸಿ ॥
ಉತ್ತಮದ ಬಿರುದುಗಳ ಬರೆದು ಕುದುರೆಯ ಹಣೆಗೆ ।
ಸುತ್ತಿದರು ಮಂತ್ರವಿಧಿ ವೆರಸಿ ॥184॥

ಆನೆ ಕುದುರೆಯು ಮಂದಿ ಸೇನೆ ಮಾರ್ಬಲ ಸಹಿತ ।
ತಾನೆ ತೆರಳಿದನು ಶತ್ರುಘ್ನ ॥
ನಾನಾವಿ ಧದಿ ಮೊರೆವ ವಾದ್ಯಸಂ ದಣಿಯಿಂದ ।
ಲಾನಂದ ದಲಿ ಪೊರಟು ಪುರವ ॥185॥

ಅಂಗ ಕಾಂಭೋಜ ಕರ್ಣಾಟ ಮಾಳವ ಗೌಳ ।
ವಂಗ ಮಲೆಯಾಳ ದ್ರಾವಿಡರ ॥
ಸಂಗರದಿ ಸೋಲಿಸುತ ಸರಕುಕ ಪ್ಪವಗೊಂಡು ।
ಹಿಂಗದೆಲ್ಲರನು ಒಳಗೊಂಡು ॥186॥

ಛಪ್ಪನ್ನ ದೇಶದೊಳಗಿಪ್ಪ ರಾಯರ ಕೈಯ ।
ಕಪ್ಪವನು ಸೆಳೆದು ಧುರವಾಂತು ॥
ತಪ್ಪದೇ ಮಂದಿ ಕುದುರೆಯ ಸಹಿತ ವಾಲ್ಮೀಕಿ ।
ಇಪ್ಪಾಶ್ರಮಕೆ ಬಂದರೆಲ್ಲ ॥187॥

ಎತ್ತಣ ತುರಂಗವಿದು ಪೊಕ್ಕು ಪೊದೋಟಗಳ ।
ಕತ್ತರಿಸಿ ಕೆಡಿಸಿತೆಂದೆನುತ ॥
ಚಿತ್ತದಲಿ ಕೋಪಿಸುತ ಹತ್ತಿರಕೆ ಬಂದು ಲವ ।
ಮಸ್ತಕದ ಲಿಪಿಯನೋದಿದನು ॥188॥

**ರಾಗ ಘಂಟಾರವ ಝುಂಪೆತಾಳ**

ವೀರವಿತರಣ ಶೂರ ವಿಜಯಸದ್ಗುಣಸಾರ ।
ಸಾರಸಾಂಬಕ ಧೀರ ಶರಧಿಗಂಭೀರ ॥189॥

ವೈರಿಮದ ಗಜಸಿಂಹ ವಾಸವಾರ್ಚಿತ ರ್ಮ ।
ಪೌರುಷಾಗ್ರಣಿ ರಾಮ ಭಳಿರೆ ನಿಸ್ಸೀಮ ॥190॥

ಈತನದು ಯಜ್ಞಾಶ್ವವಿದರ ಕಟ್ಟಿದರೀಗ ।
ಭೂತಳದೊಳವ ಜಾಣ ಭುಜಬಲ ತ್ರಾಣ ॥191॥

ಹೀಗೆಂದು ಬರೆದ ಲಿಪಿಯೋದಿನೋಡಿದ ಲವನು ।
ಮೂಗಿನಲಿ ಬೆರಳಿಟ್ಟು ತೂಗಿದನು ಶಿರವ ॥192॥

**ರಾಗ ಶಂಕರಾಭರಣ ಅಷ್ಟತಾಳ**

ಸೀತಾ ನಂದನನು ಓಲೆಯ ನೋಡಿ ।
ನ್ನೇತರ ಬದುಕೆಂದನು ॥
ಭೂತಳದೊಳಗೊರ್ವ ಖ್ಯಾತನಾಗಿಹ ಮೇಲೆ ।
ಪೇತುಗರೆಂದೆಂಬ ಮಾತು ಬಂತೆಮಗೆ ॥193॥

ಬಂದದ್ದೆಲ್ಲವು ಬರಲಿ ಈಪ್ರಾಣವು ।
ಇಂದೇ ಹೋದರು ಹೋಗಲಿ ॥
ಮುಂದುವರಿಯಲು ತಾಯ್ ಮುನಿ ಕೋಪಿಸಲಿ ಬಿಡೆ ।
ನೆಂದು ಹತ್ತಿರೆ ಬಂದು ನಿಂದು ನೋಡಿದನು ॥194॥

ಮರನ ಬಳ್ಳಿಯ ತೆಗೆದ ಆ ಕುದುರೆಯ ।
ಕೊರಳ ಸಂದಿಗೆ ಬಿಗಿದ ॥
ವರಕದಳಿಗೆ ಕಟ್ಟಿ ಲರಸುಗಳದು ಬಿಡು ।
ಪರಿಹಾಸ್ಯ ವಲ್ಲೆಂದರರಿದು ಬಾಲಕರು ॥195॥

ಮನದಿ ಹೂಂಕರಿಸಿದನು ಕೈಯೊಳಗಿದ್ದ ।
ಧನುವ ಝೇಂಕರಿಸಿದನು ॥
ಅನುಮಾನವೇನು ಹತ್ತಿರಬಂದು ಕಟ್ಟಿರ್ದು ।
ದನು ಬಿಡೆ ತುರಗವನೆಂದು ಗರ್ಜಿಸಿದ ॥196॥

**ರಾಗ ಕೇದಾರಗೌಳ, (ಆಹೇರಿ) ಜಂಪೆತಾಳ**

ಕಂಡು ಬೆರಗಾದರಿವರೆಲ್ಲ ಇವನ ।
ದಿಂಡತನಕೀಗ ಬಾಲರೊಳು ಜೋಡಿಲ್ಲ ॥ ಪಲ್ಲವಿ ॥

ಮುದ್ದುಮೊಗ ಮುಗುಳ್ನಗೆಯ ಮುನಿಬಾಲಕರ ಕೆಳೆಯ ।
ತಿದ್ದಿದ ಕಿರೀಟಿಗಳ ಥರಥರದ ಮಾಟಗಳ ।
ಬುದ್ಧಿವಂತರ ನುಡಿಯ ಬಲ್ಲತನಗಳ ನಡೆಯ ।
ವಿದ್ಯೆಯನು ಕಲಿತ ಬಾಯ್ದೆರೆಯ ಕೈಯೊ ।
ಳಿದ್ದ ಧನು ಶರವೆಸೆವನೂತನದ ಪರಿಯ ॥197॥

ಕಡಿದನಾನೆಯ ಕರವ ಬಡಿದ ಕುದುರೆಯ ಶಿರವ ।
ಹೊಡೆದ ರಾವ್ತರ ಬದಿಯ ಒಡೆದ ಮಾವುತರೆದೆಯ ।
ತಡೆದ ನೋಡುವ ಭಟರ ಹಿಡಿದನಗ್ಗದಧಟರ ।
ಮಿಡಿದ ಮೈರಕ್ತದೋಕುಳಿಯ ಖಾತಿ ।
ವಡೆದ ರಣರಂಗಸಾಹಸದ ವೆಗ್ಗಳೆಯ ॥198॥

ವಚನ || ಇಂತು ಮಾರ್ಬಲವಂ ಛಾನಾಹಾನಿಯಂ ಮಾಡೆ ಶತ್ರುಘ್ನಂ ಬಾಲಕನ ಸಮಾಪಕ್ಕೆ
ಬಂದು ಏನೆಂದನು ಎಂದರೆ -

**ರಾಗ ನಾದನಾಮಕ್ರಿಯೆ ಮಟ್ಟೆತಾಳ**

ಯಾರ ಕಂದನಯ್ಯ ನೀನು ಅಂಜಿಕಿಲ್ಲದೆ ಇಂಥ |
ಘೋರ ಕಾಡೊಳೊರ್ವನೆ ನಮ್ಮಶ್ವ ಕಟ್ಟಿದೆ ||199||

ಕಟ್ಟಿದರೆನಾಯಿತಯ್ಯ ದಿಟ್ಟನಾದರೆ ಇದರ |
ಬಿಟ್ಟುಕೊಂಡು ಪೋಗೊ ಧೈರ್ಯವಷ್ಟುಂಟಾದರೆ ||200||

ನಾಡ ರಾಯನೆಂದು ಮಾತನಾಡಬೇಡವೊ ನಿನ್ನ |
ಕೂಡೆ ಯುದ್ಧ ಮಾಡಿ ಗೆಲ್ವದೇನು ಗಣ್ಯವೊ ||201||

ಬೇಡ ಬೇಡ ಸುಮ್ಮನಿಪ್ಪು ಪಂಥವೆಮ್ಮೊಳು ಅತ್ತ |
ನೋಡಬಾರದೇ, ಬಿದ್ದರಾರು ನಿಮ್ಮೊಳು ||202||

ಮಕ್ಕಳು ಸಣ್ಣವನೆಂದು ಬಿಟ್ಟೆನು ನಿನ್ನ ಇಂಥ |
ಸೊಕ್ಕಿನವ, ನೆಂದು ತಿಳಿಯಲಿಲ್ಲವೊ ಮುನ್ನ ||203||

ದಕ್ಕದು ದಕ್ಕದು, ಬಿಡು ಧರ್ಮವಲ್ಲವೊ ನಿನಗೆ |
ತಕ್ಕ ಬುದ್ಧಿಯಾಹದಿನ್ನು ತಡವಿಲ್ಲವೊ ||204||

**ರಾಗ ಕಾಂಭೋಜಿ ಮಟ್ಟೆತಾಳ**

ನಿಲ್ಲು ನಿಲ್ಲೆಲೋ ನೀನು ಸಮರಕೆ |
ಬಲ್ಲೆ ನಿನ್ನ ಬಗೆಯನೆಂದು ಭುಲ್ಲವಿಸಿದನು ||205||

ನೋಡಿ ಧನುವನು ಹೂಡಿ ಶರವನು |
ಕೂಡೆ ಕೂಡೆ ಬಿಡಲು, ಕಡಿದಾಡಿ ಬಿಸುಟನು ||206||

ಕೋಪದಿಂದಲೆ ಭೂಪನನುಜನು |
ಚಾಪವನ್ನು ಸೆಳೆಯೆ ಲವಗೆ ತಾಪ ಹೆಚ್ಚಿತು ||207||

ಮತ್ತೆಯೆಲ್ಲರೂ ಸುತ್ತುಕವಿದರು |
ಎತ್ತಿ ಖಡ್ಗವನು ಲವನ ಮುತ್ತಿಕೊಂಡರು ||208||

ಬೊಬ್ಬಿರಿದರು ಇಬ್ಬರ್ತಿವಿದರು |
ಸರ್ಬ ಬಲವು ಮುಸುಕೆ ಪೆಟ್ಟೆನಹಬ್ಬವಾಯಿತು ||209||

ಸೀತೆಯಣುಗನು ಧಾತುಗೆಟ್ಟನು ।
ಭೂತಳಕ್ಕೆ ಮೂರ್ಛೆವೋಗಿ ಸೋತು ಬಿದ್ದನು ॥210॥

**ಭಾಮಿನಿ**

ಗರುಡದೇವನ ಗರುವದುರುಬೆಗೆ
ಉರಗನಿದಿರೇ ಸುತ್ತುಮುತ್ತಿಂ
ದರಿಭಟರು ಕುತ್ತಿದರೆ ಲವನೊರಗಿದನು ಮೂರ್ಛೆಯಲಿ ।
ತರಳನನು ಕೈಗಟ್ಟಿ ರಥದೊಳ
ಗಿರಿಸಿ ಕುದುರೆಯ ಬಿಟ್ಟು ಮರಳಿದ
ರರಿತು ತಾಪಸವಟುಗಳೈದಿಂತೆಂದರವನಿಜೆಗೆ ॥211॥

**ಸೌರಾಷ್ಟ್ರ ತ್ರಿವುಡೆತಾಳ**

ಬೇಡವೆಂದರೆ ಮಾತ ಕೇಳದೆ ।
ನಾಡಪಾಲರ ಯಜ್ಞದಶ್ವವ ।
ಕಾಡಬಳ್ಳಿಯ ಹರಿದು ಕಟ್ಟಿದ । ನೋಡಿ ಲವನು ॥212॥

ಬೇಡಿಕೊಂಡರು ತರಳರೆಮ್ಮವ ।
ರಾಡಿದಾ ನುಡಿ ಕೇಳದವರೊಳು ।
ಮಾಡಿದನು ಯುದ್ಧವನು ಖಾಡಾ । ಖಾಡಿಯಿಂದ ॥213॥

ಅಷ್ಟದಿಕ್ಕನು ಕವಿದು ಬಾಲಗೆ ।
ಬಿಟ್ಟುಬಾಣವ ಕಡೆಗೆ ಹೆಡೆಮುಡಿ ।
ಕಟ್ಟಿ ಒಯ್ದರು ಪುರಕೆ ರಥದೊಳ । ಗಿಟ್ಟು ಜವದಿ ॥214॥

ಕೇಳುತಾಕ್ಷಣ ದೊಳಗೆ ತನ್ನಯ ।
ಬಾಲಕನ ಭಂಗವನು ಧಾತ್ರಿಯ ।
ಮೇಲೆ ತಾ ತಲೆ ತಿರುಗಿ ಬಿದ್ದಳು । ಲೋಲನಯನೆ ॥215॥

**ರಾಗ ಸೌರಾಷ್ಟ್ರ ಮಟ್ಟೆತಾಳ**

ಕಂಜಲೋಚನ ಕಾರುಣ್ಯಾಂಬುಧಿ ।
ಮಂಜುಳಾಕರ ಮಾಧವ ಪ್ರಿಯ । ॥216॥

ಚಕ್ರಧಾರಣ ವಿಕ್ರಮರಣ ।
ಶಕ್ರಸನ್ನಿಭ ಸುಪ್ರಭಾಕರ ॥217॥

ದೇಶಕೋಶವ ಬಿಟ್ಟು ನಾವನ ।
ವಾಸಿಯಾದರೂ ಲೇಸಕಾಣೆನು ॥218॥

ಈ ಕಾಡಲ್ಲಿ ವಾಲ್ಮೀಕಿಮುನಿಪತಿ ।
ಸಾಕಿ ಮಕ್ಕಳ ಸಲಹಿದ ಯತಿ ॥219॥

ಆತನಿಲ್ಲದ ವೇಳ್ಯದಿ ಲವ ।
ಏತಕ್ಕೈದಿದ ಮಾತ ಕೇಳದೆ ॥220॥

ಇಲ್ಲವೇ ಕುಶ ಮಲ್ಲಸಾಹಸ ।
ಎಲ್ಲಿಗೈದಿದ ಬಲ್ಲರಾಗಿ ಹ ॥221॥

ಖುಲ್ಲರಾಯರು ಕೂಡಿಬಂದವ ।
ರೆಲ್ಲ ಲವನನು ಕೊಲ್ವರಲ್ಲವ್ವ ॥222॥

**ವಾರ್ಧಕ**

ಧರಣೀಶ ಕೇಳಿಂತು ಜನಕನಂದನೆಯು ತರ
ತರದಿ ಹಲುಬುತ್ತಲುರೆ ಬೆಂಡಾಗಿ ಬುಡಕಡಿದ
ಮರದಂತೆ ಧೊಪ್ಪನೆ ಧರಿತ್ರಿಗುರುಳಿದು ಬಳಿಕ ಚೇತರಿಸಿ ಮೆಲ್ಲನೆದ್ದು ।
ಬೆರಳನೆಡೆಮುರಿದು ಬೆಂಡಾಗಿ ವಿರಹದಿ ತನ್ನ
ತರಳನಾಪತ್ತಿಗೋಸ್ಕರ ಮರುಗುತಿರೆ ಕುಶನು
ಪರಿಸಮಾಪಕೆ ಕುಶವ ನೆತ್ತಿಕೊಂಡೈತಂದು ತಾಯ ಕಂಡಿಂತೆಂದನು ॥223॥

**ರಾಗ ವರಾಳಿ ಏಕತಾಳ**

ಚಿಂತಿಸುವದೇತಕೆ ಪೇಳಮ್ಮಯ್ಯ ನಿನ ।
ಗಿಂಥದುಃಖ ಬಂದುದೇತಕಮ್ಮಯ್ಯ ॥
ಅಂತರಂಗದಂತರವೇ ನಮ್ಮಯ್ಯ ಚಂದ್ರ ।
ನಂಥ ಮೊಗದಕಾಂತಿ ತಗ್ಗಿ ತಮ್ಮಯ್ಯ ॥224॥

ಕಣ್ಣನೀರು ತಂಬಿದೇತ ಕಮ್ಮಯ್ಯ ಚೆಲ್ವ ।
ಬಣ್ಣಗುಂದಿ ತಣ್ಣಗಾಯಿತಮ್ಮಯ್ಯ ॥
ಬಣ್ಣಿಸಿ ನೀನೆಣ್ಣಿಸದಿರಮ್ಮಯ್ಯ ಮು ।
ಕ್ಕಣ್ಣನಾಣೆ ಅಂಜಬೇಡ ವಮ್ಮಯ್ಯ ॥225॥

**ರಾಗ ನೀಲಾಂಬರಿ ಏಕತಾಳ**

ಯಾವ ರಾಯ ರೊ ನಾನರಿಯೆ ಕಂದ ಕಂದ, ನಾವಿರುವ ।
ತಾವಿಗಾಗಿ ಬಂದರಂತೆ ಕಂದ ಕಂದ ॥226॥

ಕೋವಿದಶ್ವ ತಂದರಂತೆ ಕಂದ ಕಂದ, ಪಾ ।
ರ್ಥಿವರಶ್ವಕಟ್ಟಿ ಲವನು ಕಂದ ಕಂದ ॥227॥

ಹೆಮ್ಮೆಯಿಂದ ಮಾತನಾಡಿ ಕಂದ ಕಲಹವ ಬಯಸಿ ।
ಗಮ್ಮನೆ ಶರ ವೆಚ್ಚನಂತೆ ಕಂದ ಕಂದ ॥
ಸುಮ್ಮಾನದಿ ಮುತ್ತಿಕೊಂಡು ಕಂದ ಕೈಗಟ್ಟಿ ನಿನ್ನ ।
ತಮ್ಮನ ಪಿಡಿ ದೊಯ್ದರಂತೆ ಕಂದ ಕಂದ ॥228॥

**ವಾರ್ಧಕ**

ಪರಿಪರಿಯ ದುಃಖಮಂ ಬಣ್ಣಿಸುತ ಭೂಜಾತೆ
ತರಳನಾಗಮ ಪೇಳೆ ತಾಯ ಮೊಗಮಂ ನೋಡಿ
ಉರಿಗಣ್ಣನಂತೆ ರೋಷಿತನಾಗಿ ಪೌರುಷದೊಳೊರೆದ ತನ್ನಯ ಮಾತೆಗೆ ।
ವರಜನನಿ ಕೇಳು ಎನ್ನಯ ಅನುಜನನ್ನೊಯ್ದ
ದುರುಳರಾರಾದಡಾಗಲಿ ಕಾದಿ ನಿಮಿಷದೊಳು
ಮರಳಿ ಹಯವಂ ಸಹಿತ ಸೆಳೆದು ತಾರದೆ ಬಿಡೆನು ಪರಿಕಿಸೆನ್ನಯ ಸಾಸವ ॥229॥

**ರಾಗ ಕೇದಾರಗೌಳ ಅಷ್ಟತಾಳ**

ಅಮ್ಮ ಚಿಂತಿಸಬೇಡ ಆದಡೇನಾಯಿತು ।
ಬ್ರಹ್ಮಲಿಖಿತ ತಪ್ಪೂದೆ ॥
ಸುಮ್ಮನೆ ಮರುಗದಿರ್ಲವನ ಕೊಂಡೊಯ್ದವ ।
ಬೊಮ್ಮನ ಪಿತನಾಗ ಲಿ ॥230॥

ಇಂದ್ರಾಗ್ನಿ ಯಮ ವಾಯು ವರುಣ ಕುಬೇರ ಗೌ ।
ರೀಂದ್ರ ದಿಕ್ಪಾಲಕರ ॥
ಮಂದಿರ ಕ್ಕೊಯ್ದಡಗಿಸಿದರೆನ್ನನುಜನ ।
ತಂದು ನಿಮಗೆ ತೋರುವೆ ॥231॥

ಲೋಕವೆ ಮುಳುಗಳಿ ನಾಕವೆ ಬೀಳಲಿ ।
ರಾಕೇಂದು ಧರ ಮುನಿಯಲಿ ॥
ಶ್ರೀಕಂಠನಾಣೆ ತಪ್ಪಿದರೆ ಎನ್ನನುಜನ ।
ನಾ ಕರತರುವೆನಮ್ಮ ॥232॥

ವಚನ ॥ ಇಂತೆಂದು ತಾಯ ಮುಂದೆ ಭಾಷೆಯನ್ನುಚ್ಚರಿಸಿ ರಣಕೆ ಸನ್ನದ್ಧನಾದ ಕುಮಾರ
ಕಂಠೀರವನಂ ಕಂಡು ವಜ್ರಸೀಸಕಮಂ ತೊಡಿಸಿ ಶತ್ರುಗಳ ಜೈಸುವಂಥ
ಮಂತ್ರೋಪದೇಶವಂ ಮಾಡಿ ಮಂಗಲವಚನದಿಂ ಪರಸಿದಳದೆಂತೆನೆ -

**ರಾಗ ಭೈರವಿ ಝಂಪೆತಾಳ**

ಸ್ಥಿರಜೀವರಾಗಿ ನೆರೆ ಸಿರಿವಂತರಾಗಿ ಸಂ ।
ಗರಶೂರರಾಗಿರೆಂದ್ಹರಸಿದಳು ಮಗನ ॥ ಪಲ್ಲವಿ ॥

ಹಗೆಯವರ ಕೂಡೆ ನಿಜವನು ಪೇಳದಿರಿ ಮಗನೆ ।
ಅಗಲದಿರಿವನದ ಮಧ್ಯದೊಳಿರ್ವರು ॥
ಖಗಮಗಂಗಳ ಕೋಟಲೆಗೆ ಎಚ್ಚರಿಕೆಯೊಳಿರಿ ।
ಜಗವುಳ್ಳನಕ ಬಾಳಿರೆಂದು ಪರಸಿದಳು ॥233॥

ಹಿತಶತ್ರುಗಳ ಕೂಡೆ ಅತಿಸ್ನೇಹ ಮಾಡದಿರಿ ।
ಅತಿಮಿತ್ರ ರೊಡನೆ ಸಂಗತರಾಗಿ ರಿ ॥
ಸತತ ಹೋದಲ್ಲಿ ಒಳ್ಳಿತ ಕೊಡಲಿ ಶಿವನೆನುತ ।
ಸತಿ ಯೆತ್ತಿದಳು ಮಗನ ತಡಸಿ ಮಸ್ತಕವ ॥234॥

**ದ್ವಿಪದಿ**

ವಾಲ್ಮೀಕಿಮುನಿಪದವನೊಮ್ಮೆ ಧ್ಯಾನಿಸುತ ।
ನಿರ್ಮಲದಿ ಅಷ್ಟದಿಕ್ಕುಗಳಿಗೊಂದಿಸುತ ॥235॥

ಅಮ್ಮಜಾನಕಿಗೆರಗಿ ಆ ಕ್ಷಣವೆ ಬಂದ ।
ತಮ್ಮ ಲವನನು ಕಾಂಬ ಕಡುತವಕದಿಂದ ॥236॥

**ರಾಗ ನಾದನಾಮಕ್ರಿಯೆ ಮಟ್ಟೆತಾಳ**

ಕುಶನು ರಣಕೆ ತೆರಳಿಬರುವ ಕುಶಲನಡೆಗಳೊ ।
ವಷಭಧ್ವಜನ ಕಣ್ಣಿಂದುಗುಳ್ವ ಬಿಸಿಯ ಕಿಡಿಗಳೊ ॥237॥

ಕುಸುಮಬಾಣ ನೆಸುವ ಶರದ ಪೆಸರು ಪಲ್ಲಟ ವೊ ।
ವಸುಧೇಶರ ಮಕುಟವಜ್ರ ದೆಸೆವ ಜಳಕ ವೊ ॥238॥

ಬಿಸಜಮುಖಿಯ ರೆಸಳುಗಣ್ಣೊಳೆಸೆವ ನೋಟ ವೊ ।
ಪಸುಳೆಗಳ ಕೈಯೆಸಕದಿನುರು ಳಿಸಿದ ಚಳಕ ವೊ ॥239॥

**ರಾಗ ವಂದಾವನಸಾರಂಗ ಏಕತಾಳ**

ಏನನೆಂಬೆನು ಕುಶನ ಧೈರ್ಯವ ಬಂದು ।
ಆನೆಯ ಮೇಲೆ ಬಿದ್ದು ಸೆಣಸುವ ಶೌರ್ಯವ ॥ ಪಲ್ಲವಿ ॥

ತಡೆದನೆ ಓಡಿ ಹೋಹ, ಸೆನೆಯನೆಲ್ಲ ।
ಬಡಿದನೆ ಮುಂದರಿವ ಮದ್ದಾನೆಯ ನೆಚ್ಚು ।
ಕೆಡಹಿ ಶತ್ರುಘ್ನನ ಬಿಡಿಸಿಕೊಂಡವನು ಲವನ ॥240॥

ಬಿಟ್ಟು ತಂದರು ತಿರಿಗಿ ವಾಜಿಯ ಬಿಡದೆ ।
ಕಟ್ಟಿ ಕೊಂಡರು ಮಖದ ತೇಜಿಯ ಕುಶನ ।
ದಿಟ್ಟ ತನಕೆ ಪುಷ್ಪವಷ್ಟಿ ಸುರಿಯಿತು ವನಕೆ ॥241॥

**ವಾರ್ಧಕ**

ಹರಿಹರರು ತಾವಿಬ್ಬರೊಂದಾಗಿ ಕಾದಿದರೆ
ಧುರದೊಳಿದಿರಾಗಿ ನಿಲುವವರುಂಟೆ ಭೂಪಾಲ
ತರಳರಿರ್ವರು ತಮ್ಮೊಳೇಕಮತವಾಗಿರಿವ ಉರುಬೆಗಾನುವರಾವರು ।
ದುರುಳತನದಿಂದಲಿದಿರಾಗಿ ಶತ್ರುಘ್ನನಾ
ಪರಿವಾರಸಹಿತ ತೆರಳಿದನು ಯಮಪಟ್ಟಣಕೆ
ಚರನೊರ್ವನೈತಂದು ರಾಮಚಂದ್ರನ ಕೂಡೆ ಕರವ ಮುಗಿದಿಂತೆಂದನು ॥242॥

**ರಾಗ ಘಂಟಾರವ ಜಂಪೆತಾಳ**

ವಿಶ್ವನಾಯಕ ಕೇಳು ಅಶ್ವಮೇದದ ಕುದುರೆ ।
ತಾ ಸ್ವತಂತ್ರದಿ ತಿರುಗುತಷ್ಟದೇಶಗಳ ॥243॥

ಅರಸರೆಲ್ಲರ ಗೆಲಿದು ಅಲ್ಲಿ ಕಪ್ಪವ ತಳೆದು ।
ಬರುತಿರಲು ವಾಲ್ಮೀಕಿ ಮುನಿಪನಾ ಶ್ರಮದಿ ॥244॥

ತರಳನೊರ್ವನು ಕಂಡು ತಡೆದನಾ ಕುದುರೆಯನು ।
ಸರಳನೆಸೆದೆಲ್ಲರಿಗು ಸಾಕುಮಾಡಿದನು ॥245॥

ಬಾಣವೆಸೆ ಯಲ್ಕವನ ತ್ರಾಣಕ್ಕೆ ಜೋಡಿಲ್ಲ ।
ಪ್ರಾಣವಳಿ ದವರ ಗೀರ್ವಾಣ ತಾಬಲ್ಲ ॥246॥

ಮಕ್ಕಳಾಟಿಕೆ ಕಡೆಗೆ ಮಾರಿಯಾಯಿತು ನಮಗೆ ।
ಒಕ್ಕಣಿಸಲೇನಿನ್ನು ಶತ್ರುಘ್ನನೊಸಗೆ ॥247॥

**ರಾಗ ಆಹೇರಿ ಜಂಪೆತಾಳ**

ಕೇಳಿ ಮೂರ್ಛಿತನಾದ ರಾಮು ತನ್ನವರು ।
ಕಾಳಗದೊಳಗೆ ಮಡಿದ ವತ್ತಾಂತಗಳನು ॥248॥

ಮಖತುರಗ ಮಾರ್ಬಲವು ಸಹಿತ ಶತ್ರುಹನ ।
ಸಕಲ ರಾಯರನು ಬಾಲಕರು ಗೆಲಿದುದನು ॥249॥

ಲಕ್ಷ್ಮಣನೆ ಬಾರೊ ಸಂಗರಕೆ ಸೇನೆ ಸಹಿ ।
ತೀಕ್ಷಣದೊಳತಿಜವದಿ ಪೋಗಯ್ಯ ದುರಕೆ ॥250॥

ಆ ಕ್ಷಣಕೆ ಬಲಗೂಡಿ ಬಂದು ನಿಂದಿರಲು ।
ರಾಕ್ಷಸಾಂತಕ ನಿಂತು ಪೇಳ್ದ ಕಾ ಹುರಕೆ ॥251॥

**ರಾಗ ದೇಶಿ ಅಷ್ಟತಾಳ**

ರಣಕೆ ಸನ್ನಹವಾದರೆಲ್ಲ ಲಕ್ಷು ।
ಮಣ ತಮ್ಮ ನಪಜಯವನು ಕೇಳಿ ಸೊಲ್ಲ ॥ ಪಲ್ಲವಿ ॥

ಆನೆ ಕುದುರೆಗಳ ತರಿಸಿ ಅದರ ।
ನಾನಾ ವಿಧದ ಪದುವಾಯಿಂದ ಶಂಗರಿಸಿ ॥
ಠಾಣರಾವುತರನ್ನೆ ಬರಿಸಿ ತನ್ನ ।
ಸೇನೆಯ ನೆರಹಿ ಡಂಗರುವನ್ನೆ ಹೊಯ್ಸಿ ॥252॥

ಛತ್ರ ಚಾಮರ ಪತಾಕೆಗಳ ಸುಭ ।
ಟೋತ್ತಮ ರ್ಪಿಡಿದ ಬತ್ತೀಸಾಯುಧಗಳ ॥
ಎತ್ತಲು ಕುದುರೆ ಮಂದಿಗಳ ಸುತ್ತ ।
ಮುತ್ತಲು ವಾದ್ಯ ತಂಬಟೆಯ ಭೇರಿಗಳ ॥253॥

ಈಡಾದ ರಥವ ಹತ್ತಿದರು ಮುಂದೆ ।
ಜೋಡಾಗಿ ಕುದುರೆ ಮಂದಿಗಳನೊತ್ತಿದರು ॥
ಓಡುತ್ತ ವನವ ಮುತ್ತಿದರು ಅವರ ।
ನೋಡಲು ಕಾಡುಕಾಡೆಲ್ಲ ಸುತ್ತಿದರು ॥254॥

ವಚನ ॥ ಇಂತು ಮಾರ್ಬಲವು ಕವಿಯುತ್ತಿರಲಾಗಿ ಕಂಡು ಕುಶನು ಲವನೊಡನೆ ಏನೆಂದನು ಎಂದರೆ -

**ರಾಗ ಕಾಂಭೋಜಿ  ತ್ರಿವುಡತಾಳ**

ನೋಡಿದೆಯಾ ತಮ್ಮ ನೋಡಿದೆಯ ನಮ್ಮ ।
ಕೂಡೆ ಖಾಡಾಖಾಡಿ ಯುದ್ಧ ಮಾಡಲು ಬಂದಂಥ ಪಡೆಯ ॥ ಪಲ್ಲವಿ ॥

ಮೊದಲು ನಾವು ಕಟ್ಟಿಕೊಂಡ ಕುದುರೆಗಾಗಿ ಸೆಣಸಿದವರ ।
ಸೆದೆದು ಛಾನಾ ಹಾನಿಯನ್ನು ಮಾಡಿದ ಮೇಲೆ ॥

ಅದರೊಳೊರ್ವ ತಪ್ಪಿಸಿಕೊಂಡೊದಗಿ ಊರಿಗೈದಿ ಮತ್ತೆ ।
ಬದಲು ಪಡೆಯ ಕೂಡಿಕೊಂಡು ಎದುರು ಬಂದು ನಿಂದಿರುವುದ ॥255॥

ಎತ್ತಣಿಂದ ಬಂದುದೊ ಭೂಪೋತ್ತಮರಮಂದಿ ಕುದುರೆ ।
ಕತ್ತಲೆ ತಾಬಂದು ರವಿಯ ಮುತ್ತುವ ಹಾಗೆ ॥
ಬತ್ತೀಸಾಯುಧಂಗಳನ್ನು ಹಸ್ತದಿ ಪಿಡಿದು ಸುತ್ತ ।
ಮುತ್ತಲು ನಮ್ಮೊಡನೆ ಖಡ್ಗವೆತ್ತಿ ರಣಕೆ ನಿಲುವ ಭಟರ ॥256॥

**ರಾಗ ಮಾರವಿ ಮಟ್ಟೆತಾಳ**

ಅಬ್ಬರಿಸಿ, ತಮ್ಮೊಳು ತಾವಿಬ್ಬರು ಮಾತಾಡಿಕೊಂಡು ।
ಸರ್ಬ ಬಲ, ಕಿದಿರು ಬಿಲ್ಲ ತೆಬ್ಬನೇರಿಸಿ ॥
ಬೊಬ್ಬಿಡುತ್ತ ಸರಳ ಬಿಡುವ ಉಬ್ಬಟೆಯ, ಕಂಡು ಲಕ್ಷ್ಮ ।
ಣಾರ್ಭಕರ, ಸಮ್ಮುಖಕ್ಕೆ ಎಬ್ಬಟ್ಟಿದ ತನ್ನ ಪಡೆಯ ॥257॥

ಬಿಟ್ಟು ಬಿಟ್ಟು ಬಾಣವ ಬಂದಷ್ಟೂ ಕುದುರೆ ಮಂದಿಗಳನು ।
ಕುಟ್ಟಿ ಕುಟ್ಟಿ ತಲೆಯ ಕಣದೊಳೊಟ್ಟುತಿರ್ದರು ॥
ಅಟ್ಟಿ ಹಿಡಿದು ಬಡಿದು ಮಲ್ಲ ಮುಷ್ಟಿಯಿಂದ ತಿವಿದು ನಾವಿ ।
ನ್ನೆಷ್ಟು ಕಾದಲೆಂದು ಯಮನ ಪಟ್ಟಣಕಟ್ಟಿದರೆಲ್ಲರ ॥258॥

ಬಂದ ಬಂದ ಪಡೆಯನೆಲ್ಲ ಕೊಂದು ಕೊಂದು ಬಿಸುಟ ಮೇಲೆ ।
ನಿಂದನು ಲಕ್ಷ್ಮಣನು ಕಾದಲೆಂದು ಗುರುವದಿ ॥
ಒಂದೆ ಬಾಣವೆಸೆದು, ರಥದಿಂದ ಕೆಡಹೆ ಮೂರ್ಛೆಯೋದ ।
ಅಂದವ ಕಾಣುತ್ತ, ಸುರರಂದು ಪೊಗಳಲಂಬರದೊಳು ॥259॥

**ಕಂದ**

ಲಕ್ಷ್ಮಣ ರಥದೊಳು ಮೈಮರೆ
ದಾಕ್ಷಣದೊಳ್ ದೂತನೈದಿ ಪೇಳಲ್ ಕೇಳ್ದು ।
ಆ ಕ್ಷಿತಿಧರ ಮನಮರುಗಿದ
ನಿಕ್ಷ್ವಾಕ್ಕುಲದೀಪ ನಂದಿದುದೆ ಹಾಯೆನುತಂ ॥260॥

**ರಾಗ ತೋಡಿ ಏಕತಾಳ**

ಲಕ್ಷ್ಮಣರುದ್ರಪ್ರತಾಪ ಇಕ್ಷ್ವಾಕ್ಕುಲ ದೀಪ ।
ನೀ ಕ್ಷಿತಿಯೊಳ್ ಬಿದ್ದಮೇಲೆ ದೀಕ್ಷೆ ಯೇತಕಿನ್ನು ॥261॥

ಬ್ರಹ್ಮಾದಿ ದೇವರ್ಕಳೊಳು ತಮ್ಮಗೆಣೆಯುಂಟೆ ।
ನಮ್ಮ ಶೌರ್ಯತಗ್ಗಿ ಕ್ಷಾತ್ರ । ಧರ್ಮ ಕೆಟ್ಟಿತಿನ್ನು ॥262॥

ಕರ್ಮವಶವಲ್ಲದಿಷ್ಟು ವರ್ಮ ಬಾರದಲ್ಲ ।
ಸುಮ್ಮನೇ ಕಳುಹಿ ಮೋಸ ನಮ್ಮಿಂದಾಯಿತಲ್ಲ ॥263॥

**ರಾಗ ನೀಲಾಂಬರಿ ರೂಪಕತಾಳ**

ಏನ,ಮಾಡಲಿ ನಾನು ಈ ವಿಷಮ, ಗತಿಗಿನ್ನೀ ।
ಸೂನುಗಳಿಂದೀವಂಶಕೆ ಊನವು ಬಂತಲ್ಲ ॥ ಪಲ್ಲವಿ ॥

ಶರಧಿಗೆ ಸೇತುವ ಕಟ್ಟಿದೆ ಸರ್ವರಿಗೂ ಸಮನೆನಿಸಿದೆ ।
ಧುರದೊಳು ದುಷ್ಟರ ಶಿರಗಳ ತರಿದೆನು ರಕ್ಕಸರ ॥
ಪರಶುವಿನಾಯುಧ ಸೆಳೆದೆನು ಪಂಥವ ಹಿಗ್ಗಿಸಿದೆನು ಈ ।
ತರಳರೊ ವಂಶವ ಕೆಡಿಸುವ ದುರುಳರೊ ನಾನರಿಯೆ ॥264॥

ಏತಕೆ ತೊಡಗಿದೆ ಯಜ್ಞವ ನೇತಕೆ ಕಳುಹಿದೆಯನುಜರ ।
ಏತಕೆ ತಡೆದರೊ ತರಳರು ಏತಕೆ ಕಾದಿದರೊ ॥
ಏತಕೆ ಮಡಿದರೊ ಇವರಿನ್ನೇತಕೆ ರಾಜ್ಯವು ತನಗಿ ।
ನ್ನೇತಕೆ ದೊರೆತನವೆಂಬುದು ಪಾತಕ ಶಿವ ಶಿವನೆ ॥265॥

**ಕಂದ**

ಅನುಜನ ಕೇಡಿಂಗೋಸ್ಕರ
ವನಜಾಂಬಕ ಚಿತ್ತದಲ್ಲಿ ಮರುಗುತ್ತಿರಲು ।
ಘನಶೌರ್ಯಗ್ರಣಿ ಕೈಕಾ
ತನುಜಂ ಬಂದಣ್ಣನಂಘ್ರಿಗೆರಗುತ ಪೇಳ್ದಂ ॥266॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅಣ್ಣ ಚಿಂತಿಸಬೇಡ ಕಾರ್ಯವ ।
ಬಣ್ಣಗಾರರ ಮಾತಿದಲ್ಲದೆ ।
ಪುಣ್ಯನಿಧಿ ಲಕ್ಷ್ಮಣನ ಕೆಡಹುವ । ಚೆಣ್ಣರುಂಟೆ ॥267॥

ನಾಡಮಾತಿಗೆ ನೀವು ಚಿಂತೆಯ ।
ಮಾಡಲೇತಕೆ ಪುಸಿಯೊ ದಿಟವೊ ।
ನೋಡಿ ಬರುವೆನು ಕಳುಹು ತನ್ನನು । ಗಾಢದಿಂದ ॥268॥

ಅಪ್ಪಣೆಯ ಕೊಡಿ ಎನುತಯೋಧ್ಯೆಯೊ ।
ಳಿಪ್ಪ ಬಲವನು ನೆರಹಿ ಕಡೆಗಾ ।
ಸರ್ಪಶಯನಗೆ ಕರಮುಗಿದ ಕಂ । ದರ್ಪರೂಪ ॥269॥

**ಶಾರ್ದೂಲವಿಕ್ರೀಡಿತ ವೃತ್ತ**

ಪಾರಾವಾರಸಮಾನಮಾರ್ಬಲಗಳಿಂ ಸೇನಾನಿಗಳ್ ಸಂಗಡ ।
ಭೇರೀಶಂಖ ಮದಂಗ ವಾದ್ಯರವದಿಂ ನಾನಾಭ್ರಘೋಷಂಗಳಿಂ ॥
ಶೂರತ್ವಾನ್ವಿತರಾಗಿ ಮುತ್ತಿದರಿಯಂ ತೋರಿಪ್ಪ ಭೂಪಾಲರಾ ।
ಮಾರಾರಿ ತ್ರಿಪುರಂಗಳಂ ಮುರಿವವೋಲೋರಂತೆ ಬೆಪ್ಪಾಗಲು ॥270॥

**ರಾಗ ಕಲ್ಯಾಣಿ ಏಕತಾಳ**

ಭರತ ಸಂಗರಕೆಂದು ಬಂದನೆಂಬುದ ಕಂಡು ।
ಅರಿತ ಬಾಲಕರಂದು ತ್ವರಿತಾಗ್ರ ಗೊಂಡು ॥
ಶರತುದಿಗೇರಿಸಿ ಮೈಮರೆತಿರ ಬಾರದೆಂದು ।
ತರತರ ಬಾಣಗಳ ಎಚ್ಚರೊಬ್ಬರೊಂದೊಂದು ॥271॥

ಎಚ್ಚ ಬಾಣಗಳು ಬಂದು ಕಚ್ಚಿತೆಲ್ಲರ್ಗೊಂದೊಂದು ।
ಬೆಚ್ಚಿತವರದಂಡು ಆಶ್ಚರ್ಯಗೊಂಡು ॥
ಬಚ್ಚರು ತಮ್ಮೊಳವು ಹೆಚ್ಚಿತು ವಿಕ್ರಮವು ।
ಮಚ್ಚರದಿಂದ ಕಂಡು ಕೊಚ್ಚಿತವರ ದಂಡು ॥272॥

ಬಾಲಾರ್ಕಳ ಮೊಗದ ಹೋಲುವೆ ಕಂಡಾಗ ।
ಶ್ರೀಲೋಲ ನಾಹದ್ದೇ ಹೋಲುವೆ ಮೊಗದ
ಲೀಲೆಯಿಂದಲಿ ಬಂದು ಪೇಳಲಿಂತೆಂದು ಹನುಮ ।
ಕೇಳಬೇಕದ ನೆಂದು, ಭರತ ನೈತಂದು ॥273॥

**ರಾಗ ಕೇದಾರಗೌಳ ಅಷ್ಟತಾಳ**

ಕಂದ ನಿಮ್ಮನು ಪೆತ್ತ ತಂದೆ ತಾಯಿಗಳಾರು ।
ಬಂದುದೆಲ್ಲಿಂದ ನೀವು ॥
ಇಂದು ನಮ್ಮಯ ವಾಜಿಯನು ಕಟ್ಟಿ ಅನುಜನ ।
ಕೊಂದ ಕಾರಣವದೇನು ॥274॥

ಈ ಧುರದೊಳು ಮೊದಲಾದ ದುರ್ಬುದ್ಧಿಯ ।
ಕಾದೆ ನಿಮ್ಮವಗುಣವ ॥
ಕ್ರೋಧವ ಬಿಟ್ಟು ಹಯವ ಬಿಡಿ ಹಿಂದಕಿ ।
ನ್ನಾದರೂ ನಡೆಯಿರಣ್ಣ ॥275॥

ತುರಗವ ಬಿಡಬೇಕಾದರೆ ಕೆಲಸಗಳುಂಟು ।
ಮರುಳರಂದದಲಿ ನೀವು ॥

ತರಳರಿರೆಲ್ಲಿ ನೀ ವಾರೆಂದು ಬೆಸಗೊಂಬ ।
ದುರುಳತನಗಳೇನು ॥276॥

ಸಂಗರದಲಿ ಬಿಡು ಸರಳ ಸಾಹಸದಿ ಪ್ರ ।
ಸಂಗವೇತಕೆ ಮರುಳೆ ॥
ಅಂಗದೊಳಗೆ ಭಯವುಳ್ಳೊಡೆ ನಿನಗೆ ತು ।
ರಂಗದಾಶೆಯನು ಬಿಡು ॥277॥

**ಉತ್ಸಾಹದಂಡಕ ರಾಗ ಮಾರವಿ ಏಕತಾಳ**

ಏನೆಂಬೆ ಬಂದ ಸೇನೆಗಳೆಲ್ಲವ ।
ಸೂನುಗಳಿರ್ವರು ಒಂದೇ ನಿಮಿಷಕೆ ।
ಆನೆ ಕುದುರೆ ಮಂದಿ ವಾನರಾಧಿಪ ಸಹ ।
ಮಾಣದೆ ಭರತನ ಕಾನನದೊಳಗೆ ॥278॥

ಹತ್ತು ಭರತಗಿಪ್ಪತ್ತು ನಳಗೆ ಮೂ ।
ವತ್ತು ಜಾಂಬವಗೆ ನಾಲ್ವತ್ತು ನೀ ಲಗೈ ।
ವತ್ತಂ ಗದಗರುವತ್ತು ಗವಯನಿಗೆ ।
ಮತ್ತು ಮತ್ತಂಬನಿತ್ತು ಕಾದಿದರು ಏನಾನೆಂಬೆ ॥279॥

ಮರಳಿದ ಹನುಮ ಬಿದ್ದುರುಳಿ ಜಾಂಬವನೆ ।
ಚ್ಚರಳಿದ ಸುಷೇಣ ತೆರಳಿದ ಗವಯನು ।
ನರಳಿದ ನಳ ಬೀಸುರುಳಿದಂಗದ ಕ ।
ಣ್ಣರಳಿದ ಭರತನು ತೆರಳಿದರೆಲ್ಲ ಏನಾನೆಂಬೆ ॥280॥

**ಭಾಮಿನಿ**

ಕೆಲರು ಬಿಸುಟರು ಧನುವ ರಣದಲಿ
ಕೆಲರು ಶಸ್ತ್ರವ ಮರೆದರಲ್ಲಿಯೆ
ಕೆಲರು ಪ್ರಾಣವ ತೊರೆದರಲ್ಲಿಯೆ ಕೆಲರು ಮೂರ್ಛೆಯಲಿ ।
ಕೆಲರು ಮರಳಿದರರದರೊಳಗೆ ಕೆಲ
ಕೆಲರಯೋಧ್ಯೆಗೆ ಪೋಗಿ ಪೇಳ್ದರು
ಕೆಲರು ಬದುಕಿದೆವೆಂದು ಬಿಟ್ಟೋಡಿದರು ಸಂಗರವ ॥281॥

**ರಾಗ ಘಂಟಾರವ ಜಂಪೆತಾಳ**

ಭರತ ಸಂಗರದಿ ಮೈಮರೆದನೆಂಬುದ ಕೇಳಿ ।
ಅರಿತ ರಾಘವನಂದು ನೆರೆ ಕೇಡಿದೆಂದು ॥182॥

ಯಾಗದೀಕ್ಷಯ ನಿಲಿಸಿ ಬೇಗ ಮಂತ್ರಿಯ ಕರೆಸಿ ।
ರಾಘವನು ಹೊರಪಯಣಕಾಗಿ ನಡೆತಂದ ॥183॥

**ರಾಗ ಆಹೇರಿ ಜಂಪೆತಾಳ**

ಪುರವ ಹೊರವಂಟ ಶ್ರೀರಾಮ ತನ್ನ ।
ಪರಿವಾರ ಸಹಿತ ಸಂಗರಕೆ ನಿಸ್ಸೀಮ ॥ ಪಲ್ಲವಿ ॥

ಪೊಡವಿಯಗಲದೊಳೆಯ್ದು ವಾನೆಗಳ ಸೇನೆಗಳ ।
ಎಡಬಲಕೆ ಬಿಡದಿರುವದಂತಿಗಳ ಪಂತಿಗಳ ।
ನಡನಡುವೆ ಸಂದಣಿಪ ವಾಜಿಗಳ ತೇಜಿಗಳ ।
ಜಡಿವ ವಾದ್ಯಗಳ ಚೋದ್ಯಗಳ ನಡೆದು ಸಂ ।
ಗಡ ಬರುವವಂದಿಮಾಗಧರ ಪದ್ಯಗಳ ॥184॥

ಶಿವನ ಹಣೆಗಣ್ಣೊ ಪ್ರಳಯಾಂಧಕಾರದ ಮಳೆಯೊ ।
ವಿವರಿಸಲು ವಡಬಾನಳನೊ ಕಾಲಭೈರವನೊ ।
ಜವನ ಕಡೆ ಚತುರಂಗ ಮಾರ್ಬಲವೊ ಎನುತ ಜನ ।
ನಿವಹವಾಶ್ಚರ್ಯಗೊಳುತಿರಲು ಕುಶಲವರಿ ।
ರುವ ವನವ ಸುತ್ತಲೂ ಕವಿಯುತ್ತ ಬರಲು ॥185॥

**ರಾಗ ಗೌಳಮಲಹರಿ ಅಷ್ಟತಾಳ**

ಕುಶಲವರನು ಕಂಡ ರಾಮ ಸಾ ।
ಹಸದಿ ಬಿಲ್‌ಬಾಣ ರಂಜಿಸಲು ನಿಸ್ಸೀಮ ॥ ಪಲ್ಲವಿ ॥

ರಣದಿ ಬಿದ್ದವರನ್ನು ನೋಡಿ ಸತ್ತ ।
ಹೆಣಗಳನೆಳೆದು ತಿನ್ನುವ ನಾಯ ಗಾಡಿ ।
ನೊಣಗಳು ಕವಿದೊಂದು ಗೂಡಿ ಲಕ್ಷು ।
ಮಣನ ನೋಡುತ ಮನದೊಳು ಚಿಂತೆಮಾಡಿ ॥186॥

ಭರತಶತ್ರುಘ್ನರ ಕಂಡ ಮನ ।
ಕರಗಿ ಕಾತರಿಸುತ್ತ ತಾಮೂರ್ಛೆಗೊಂಡ ।
ಕರಿ ತುರಗವು ರಥ ತಂಡ ಬಿದ್ದು ।
ಹೊರಳಲು ರಣದಲ್ಲಿ ಸುಭಟರ ಮುಂಡ ॥187॥

**ಭಾಮಿನಿ**

ರಣದೊಳಗೆ ಪವಡಿಸಿದ ವೀರರ
ಗಣಿಸಿ ತುದಿಯಾಗುವರೆ ಎಲ್ಲಿಯು

ಹೆಣನ ಮಯವೇ ಮಯವು ಮುನಿವಾಲ್ಮೀಕಿಯಾಶ್ರಮದಿ |
ಗುಣಕೆ ಹುರುಡೇ ಜಾಣರೆನುತಾ
ಕ್ಷಣಕೆ ಬಂದಾ ಮಕ್ಕಳಿರ್ವರ
ಕೆಣಕಿ ಮಾತಾಡಿದನು ತನ್ನಯ ರಾಜನೀತಿಗಳ ||188||

**ರಾಗ ಕಾಪಿ ಅಷ್ಟತಾಳ**

ಇನ್ನಾದರು ಬೇಡ ಬೇಡ ಮಕ್ಕಳಿರ |
ಸನ್ಮತ ನಿಮಗಲ್ಲ ಇದು ಬಾಲಕರಿರ | || ಪಲ್ಲವಿ ||

ಶಿಶುಗಳಾಗಿಹ ನಿಮ್ಮೊಳೆಮಗೆ ಕಾಳಗವೇಕೆ |
ವಶವಾದಡಾದರಾಗಲಿ ನಿಮ್ಮ ರಾಜ್ಯದ |
ಪೆಸರೇನು ತಂದೆ ತಾಯ ಬಿಲ್‌ವಿದ್ಯ ಕ |
ಲಿಸಿದವನಾವ ರಾಯ ನೀವಿಬ್ಬರು |
ಋಷಿಯಾಶ್ರಮದೊಳಿಪ್ಪಹಸನೇನು ಮಾಯ ||189||

ಮಕ್ಕಳು ನಮ್ಮೊಳು ಕಾದಲಾರದೆ ನೀ ಹೆ |
ಮಕ್ಕಳಂದದಿ ನಮ್ಮ ನಾರೆಂದು ಬೆಸಗೊಂಬು |
ದಕ್ಕೆ ನಮ್ಮೊಡನೆ ನಂಟೆ ನಮ್ಮನು ಕಕ್ಕು |
ಬೆಕ್ಕಾಗಿ ಕಾಂಬುದುಂಟೆ ಕ್ಷತ್ರಿಯರ ವಂ |
ಶಕ್ಕಿದು ನೀತಿ ಕಾದಲು ಮನಸುಂಟೆ ||190||

ಚತುರಸಾಗರವನಾಳುವ ದೊರೆ ನೀನು ನಿ |
ನ್ನತಿಶಯ ಬಿರುದು ವಿಕ್ರಮಶಾಲಿಯಾದರೆ |
ಗತಿಯಿಲ್ಲದವರು ನಾವು ಕಾದುವ ವೀರ |
ರ್ಮತಿಯಿಲ್ಲದಿಹಿರಿ ನೀವು ನಿಮಗೆ ಬಾಣ |
ಪ್ರತಿಯಾಗಿ ಹೂಡಿ ಕಾದುವಡರಿಯೆವು ನಾವು ||191||

ವಚನ || ಇಂತೆಂಬ ಬಾಲಕರ ನುಡಿಯಂ ಕೇಳಿ ರಾಮನು ಸುಗ್ರೀವನೊಡನೆ ಏನೆಂದನು ಎಂದರೆ -

**ರಾಗ ಘಂಟಾರವ ಜಂಪೆತಾಳ**

ಕಪಿರಾಜ ಕೇಳಿದೆಯ ಬಾಲಕರ ನುಡಿಗಳನು |
ನಿಪುಣರಿವರಾವ ಪುರುಷಂಗೆ ಜನಿಸಿದರೊ | ||192||

ಈಗಲಿವರೊಳು ಕದನ ಹೇಗಾಗುವುದೊ ಕಾಣೆ |
ನಾಗಭೂಷಣ ಬಲ್ಲ ನಟನೆಯಿದನೆಲ್ಲ | ||193||

ನಮ್ಮ ಕಾರ್ಯದ ಮೇಲೆ ತಮ್ಮಂದ್ಯರಳಿದಿರಲು ।
ಎಮ್ಮ ಜೀವಗಳಿದ್ದು ಇನ್ನೇನು ಫಲವು । ॥194॥

ವಚನ ॥ ಹೀಗೆಂದು ನಿಶ್ಚಯವಂ ಮಾಡಿ ರಣಕೆ ಸನ್ನದ್ಧನಾದ ರಾಮನಂ ಕಂಡು ಕುಶನು ಲವನೊಡನೆ ಏನೆಂದನು ಎಂದರೆ -

**ರಾಗ ಸೌರಾಷ್ಟ್ರ ಅಷ್ಟತಾಳ**

ಮೊದಲು ಬಂದವರಂಥ ಹದಗರ ನಲ್ಲೀತ । ನೋಡೆ ತಮ್ಮ । ಈತ ।
ಗಿದಿರಾಗಿ ನಿಲುವಡೆ ಸದರವಲ್ಲವೊ ಜೋಕೆ । ನೋಡೆ ತಮ್ಮ ॥195॥

ಬಿಲ್ಲುವಿದ್ಯಗಳ ತಾಬಲ್ಲ ಕೋವಿದನೀತ । ನೋಡೆ ತಮ್ಮ । ಮಾತಿ ।
ನಲ್ಲಿ ಚದುರಗೆಣೆಯಿಲ್ಲ ಕೇಳೆನ್ನಾಣೆ । ನೋಡೆ ತಮ್ಮ ॥196॥

ತುಂಗವಿಕ್ರಮ ರಣರಂಗಸಾ ಹಸಿಯಾತ । ನೋಡೆ ತಮ್ಮ । ಈಗ ।
ಸಂಗರ ದೊಳು ನಮ್ಮ ಭಂಗಕಿಕ್ಕದೆ ಬಿಡ । ನೋಡೆ ತಮ್ಮ ॥197॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಅಣ್ಣನಾಡಿದ ಮಾತ ಲವ ಕೇಳಿ ಅಗ್ರ ।
ಗಣ್ಯನು ಮನದಿ ಧೈರ್ಯವ ತಾಳಿ ।
ಕಣ್ಣಾರೆ ನೋಡಿವನ ಪಾಡೇನು ತಾಯ ।
ಪುಣ್ಯವಿ ದ್ದರಸಡ್ಡೆ ಮಾಡೆನು ॥198॥

ಧನು ಶರವನು ಕೈಯೊಳ್ಪಿಡಿದನು ತಾಯಿ ।
ಮುನಿವಾಲ್ಮೀಕಿಗೆ ಕೈಯ ಮುಗಿದನು ।
ಮಣಿಸಿ ಬಿಲ್ಲಿಗೆ ತೆಬ್ಬ ಬಿಗಿದನು ರಾಮ ।
ನನು ತಾಗೆನ್ನುತ ಬಾಣವೆಸೆದನು ॥199॥

**ವಾರ್ಧಕ**

ಹಲವು ಮಾತಾಡಿ ರೋಷಿತರಾಗಿ ತಮ್ಮೊಳಗೆ
ಕಲಹ ಕಾರಣಗಳಾಯಿತು ತಂದೆಮಕ್ಕಳಿಗೆ
ಉಳಿದ ಪಟುಭಟರೆದೆಯು ತಲ್ಲಣಿಸಿತಲ್ಲಲ್ಲಿ ಬೆರಗಾಗಿ ನೋಡುತಿರಲು ।
ಪ್ರಳಯಕಾಲದ ರುದ್ರನುರಿಗಣ್ಣೊ ವಡಬಾನ
ಳನ ಬಾಯ್ದೆರೆಯೊ ಕಾಲಭೈರವನ ದಾಡೆಯೋ
ಎನಲಾರ್ಭಟಿಸುತ ಕಾದಲು ರಾಮಗಿದಿರಾಗಿ ಶರಬಂದು ಕವಿಯುತಿರಲು ॥200॥

**ರಾಗ ಶಂಕರಾಭರಣ ಮಟ್ಟೆತಾಳ**

ವೀರ ರಾಮ ರಣದಿ, ಮದವೇರಿ ಹೂಂಕರಿಸಿ ಸರಳ ।
ವಾರಿಧಿಯವೊಲೆಸೆದು ಕುಶನ ಮೋರೆಗಿಟ್ಟನು ॥

ಮಾರಿ ಮುಂದುವರಿದು ಬಾಣ ಭೋರುಗುಡಿಸಿ ಬೃಹದ ಕಂಡು ।
ಬೇರೆ ಬೇರೆ ಕಡಿದು ಬಿಸುಟ ಧಾರಿಣಿಯಲಿ ॥201॥

ಕಂಡು ಪರ್ವತಾಸ್ತ್ರಗಳನು ಮಂಡೆಗಾಗಿ ಬಿಡಲು ತರಳಾ ।
ಖಂಡಲಾಯು ಧಂಗಳಿಂದ ಖಂಡಿಸಿರ್ದನು ॥

ಪುಂಡರೀಕನಯನನೆಸೆದ ತಂಡ ತಂಡದುರಗಶರವ ।
ದಿಂಡುಗಡಿದ ಗರುಡಬಾಣದಿಂದ, ಲವನು ॥202॥

ಭಾಪು ಭಳಿರೆತರಳನೆಂದು ಚಾಪವನ್ನು ನೆಗಹಿಕೊಂಡು ।
ಭೂಪನೆಸೆದನಗ್ನಿಶರವ ಕೋಪದಿಂದಲೆ ॥
ತಾಪವಡರಿ ಜಗವನೆಲ್ಲ ರೂಪುಬಾಣ ಸುಡುತಲಿರಲು ।
ಶ್ರೀಪತಿಯಾ ತನಯ ಜಲದಿ ಮಾಪುಗೈದನು ॥203॥

ಎಚ್ಚ ಬಾಣಂಗಳೆಲ್ಲ ನುಚ್ಚು ನೂರಾಗೆ ಕಂಡು ।
ಕಿಚ್ಚಿನಂತೆ ಕುಶಗೆ ಶೌರ್ಯ ಹೆಚ್ಚಿತಾಗಲೆ ॥204॥

ಹಿಂದೆ ರಾವಣಾದಿಗಳನು ಕೊಂದು ಬಂದಿರುವ ಕಣೆಗ ।
ಳೊಂದುಳಿಯದಂತೆ ರಣದಿ ಸಂದವಾಗಲೆ ॥
ಕಂದರಾಟ ಮಾರಿಯಾಯಿತೆಂದು ಪೇಳಿ ಕುಶನ ಕಣ್ಣ ।
ಮುಂದೆ ನಿಲುವ ವೀರರಾವ ರೆಂದರಾಗಳೆ ॥205॥

**ರಾಗ ಕೇತಾರಗೌಳ ಅಷ್ಟತಾಳ**

ಮಕ್ಕಳೊಡನೆ ರಾಮಚಂದ್ರದೇವಗೆ ಮನ ।
ದಕ್ಕರುಂಟೆಂಬುದನು ।
ಲೆಕ್ಕಿಪ ಬಗೆಯಂತೆಕುಶನಿಟ್ಟಶರ ಬಂದು ।
ಹೊಕ್ಕಿತಂದೊಡಲೊಳಗೆ ॥206॥

ರಕ್ಕಸರಿಪು ಬಸವಳಿದು ಬೇಸಗೆಯ ಝು ।
ಳಕ್ಕೆ ಬಾಡಿದ ಲತೆಯ ॥
ಮಿಕ್ಕಂತೆ ರಥದಿಂದಬಿದ್ದು ಮೂರ್ಛಿತನಾಗಿ ।
ಗಕ್ಕನೆ ಪವಡಿಸಿದ ॥207॥

ಲೋಕನಾಯಕ ರಣದೊಳು ಮಲಗಿರೆ ಸುರಾ ।
ನೀಕವಂಬರದೊಳಗೆ ॥
ರಾಕೇಂದು ಮಂಡಲವಿರದೆ ಬಾಧಿಸೆ ರಾಹು ।
ಸೋಕಿದಂದದ ಮುಖದ ॥208॥

ಶ್ರೀಕಂಬುಕಂಠದೊಳೆಸೆದು ರಾಜಿಸುತಿಪ್ಪ |
ಏಕಾವಳಿಯ ಹಾರವ ||
ಆ ಕುಮಾರರು ಕಂಡುಭರತಶತ್ರುಘ್ನರಿ |
ದ್ದಾಕಡೆಗೈದಿದರು ||209||

ವಿಪರೀತವಿದು ನೋಡು ತಮ್ಮ ಕಟ್ಟಿದಮುತ್ತಿ |
ನಪರಂಜಿಕೊರಳ ದಂಡೆ ||
ಅಪರೂಪವಿದು ನಮ್ಮ ತಾಯಿಗಾ ಗುವದೆಂದು |
ಅಪಹರಿಸಿದರಿರ್ವರು ||210||

ತಪಸಿಗೆ ಕಾಣಿಕೆ ಕೊಡಬೇಕೆಂದೆನುತಲೆ |
ಕಪಿಗಳಿರ್ವರ ಸಾಯದ ||
ನಿಪುಣರೆಂದ್ವೆಡೆಗೈಯ ಬಿಗಿಯೆ ಮಾರುತಿ ಕಂಡು |
ಲಪಗುಟ್ಟುತಿಂತೆಂದನು ||211||

**ರಾಗ ಆಹೇರಿ ಅಷ್ಟತಾಳ**

ಕಂಡಿರೇ ನೀವು ಕಂಡಿರೇ |
ಕಂಡಿರೆ ನೀವು ಕಂಡಿರೆ ಕುಶಲವರು |
ಹಿಂಡುಸೇನೆಯನೆಲ್ಲ ಭಂಡುಮಾಡಿದರು || ಪಲ್ಲವಿ ||

ರಣದೊಳಗೆಲ್ಲರ ಮಲಗಿಸಿ ಮತ್ತಾ |
ಗುಣನಿಧಿ ರಾಮನ ಕೊರಳಿಂದ ಕಿತ್ತ ||
ಮಣಿಗಣ ರತುನ ಹಾರವನೆಲ್ಲ ಪೊತ್ತಾ |
ಕ್ಷಣದೊಳ ಗೈದಿ ಬರುವರು ನಮ್ಮತ್ತ ||212||

ಕೊಂಡುಹೋಗಲಿ ನಮ್ಮ ನಲ್ಲಿಗೆ ಸೀತೆ |
ಕಂಡರೆ ರಕ್ಷಿಸುವಳು ಜಗನ್ಮಾತೆ ||
ಪುಂಡುಹುಡುಗರೊಳು ಜಗಳಾಟವೇಕೆ ಭೂ |
ಮಂಡಲದೊಳು ನಮ್ಮಕೊಂದಂತೆ ಜೋಕೆ ||213||

ವಚನ || ಇಂತೆಂದು ಹನುಮಜಾಂಬವರು ಪ್ರಸಂಗಿಸುತ್ತಿರಲಾಗಿ ಅತ್ತಲಾ ಜಾನಕಿಯು ಪುತ್ರರು ಬಾರದಿರಲು ಏನೆನುತಿರ್ದಳದೆಂತೆನೆ-

**ರಾಗ ಮಧ್ಯಮಾವತಿಏಕತಾಳ**

ತರಳಲವನ ಕುಶ ತರುವೆನೆಂದೆನುತಲಿ |
ತೆರಳಿಪೊದವನಿನ್ನೂ ಬರಲಿಲ್ಲವೇಕೆ || ಪಲ್ಲವಿ ||

ಏನುಮಾಡಿದರೊ ಇನ್ನೆಂತು ಕಾದಿದರೊ ಈ ।
ಸೂನುಗಳಳಿದರೊ ಕಾನನದೊಳಗೆ ॥
ತಮ್ಮನ ಕರೆದು ತಾರೆಂದೆನುತಲೆ ಮಗನ ।
ಸುಮ್ಮನೆ ಕಳುಹಿದೆನಯ್ಯಯ್ಯ ವಿಧಿಯೆ ॥214॥

ಹದಿಮೂರು ವರುಷವಾಗದ ಬಾಲರಿವರೀಗ ।
ಕದನದೊಳೆಂತು ಕಾದುವರೆಂದು ತಿಳಿಯೆ ॥
ಸದನದೊಳ್ ಮುನಿಪನಿಲ್ಲದ ವೇಳೆಯಲಿ ಲವ ।
ಕುದುರೆ ಬಂದುದರನ್ನು ಕಟ್ಟಿದನೇಕೊ ॥215॥

ಬೇಡ ಇಂತೆಂಬ ಬಾಲಕರ ಮಾತನು ಮಾರಿ ।
ಕೇಡಿಗಲ್ಲವೆ ಕದನ ಅವರೊಳೀಸಾರಿ ॥
ಮಾಡುವದೇನಿನ್ನು ಮತ್ತೊಬ್ಬರೆನಗಿಲ್ಲಿ ।
ನೋಡಿಬರುವರಿಲ್ಲ ಮಕ್ಕಳನಲ್ಲಿ ॥216॥

**ದ್ವಿಪದಿ**

ಮರಳಿ ಜಾನಕಿ ಸುತರು ಬರಲಿಲ್ಲವೆಂದು ।
ಮರುಳುಗೊಂಡಳು ತನ್ನ ಮನಸಿನೊಳಗಂದು ॥217॥

ಪಾತಾಳದಿಂದ ಮುನಿನಾಥ ಬರನೇಕೆ ।
ಸೀತೆ ಹೀಗೆಂದು ಮೂರ್ಛಿತಳಾದಳಾಕೆ ॥218॥

ಎಂಬ ಸಮಯದಿ ಹನುಮ ಜಾಂಬವರ ಬಿಗಿದು ।
ಕುಂಭಿನಿಯೊಳೆಳಕೊಂಡು ಬರುತಿರಲು ನೆರೆದು ॥219॥

ಏನಾದರೋ ತನಯರೆಂದು ಚಿಂತಿಸುವ ।
ಜಾನಕಿಯ ಮುಂದಿರಿಸಿ ಕೈಮುಗಿದನು ಲವ ॥220॥

ತಾವು ತಂದೊಡವೆಗಳ ತಾಯ ಮುಂದಿರಿಸಿ ।
ಪ್ರೀಯದಲಿ ತೋರಿದನು ಬೇರೆ ವಿಂಗಡಿಸಿ ॥221॥

**ರಾಗ ಸೌರಾಷ್ಟ್ರ ಅಷ್ಟತಾಳ**

ಮಂಗಳಮಹಿಮ ರಾಮನ ಕಂಠ ಸರಗಳ ।
ನೋಡೆ ಯಮ್ಮ ಸಮ ।
ರಾಂಗಣದಲಿ ಬಿದ್ದ ಶತ್ರುಘ್ನ ನುಡುದಾರ ।
ನೋಡೆ ಯಮ್ಮ ॥222॥

ಕಂಗೋಳಿಸುವ ಭರತನ ಕೈಯ ಕಡಗವ ।
ನೋಡೆಯಮ್ಮ ಬಹು ।
ತುಂಗವಿಕ್ರಮ ಲಕ್ಷುಮಣನಿಟ್ಟ ಮಕುಟವ ।
ನೋಡೆ ಯಮ್ಮ ॥223॥

ಪೊಡವಿಪಾಲಕ ಕೈಯೊಳ್ಪಿಡಿವ ಬಿಲ್ಬಾಣವ ।
ನೋಡೆ ಯಮ್ಮ ಇಕೊ ।
ಕಡುಜಾಣ ಹನುಮಂತ ಮಿಡುಕಾಡುತ್ತಿರುವಂಥ ।
ನೋಡೆ ಯಮ್ಮ ॥224॥

ಬಿಡದೆ ಸಂಗರದಿ ನಮ್ಮೊಡನೆ ಕಾದಿದನೀತ ।
ನೋಡೆ ಯಮ್ಮ ಈಗ ।
ನಡುಗುವ ಜಾಂಬವ ಹೆಡೆಗೈಯ ಬಿಗಿದವ ।
ನೋಡೆ ಯಮ್ಮ ॥225॥

**ವಾರ್ಧಕ**

ಮೃಗವು ಹುಲಿಗಂಜಿ ಸಿಂಹದ ಬಾಯ ಹೊಗುವಂತೆ
ಬಗೆಬಗೆಯ ಚಿಂತೆಯಿಂದಿಪ್ಪ ಜಾನಕಿಗೆ ಶ್ರೀ
ರಘವರನ ಕೊರಳ ಹಾರಗಳ ತಂದಿರಿಸಿ ಕೈಮುಗಿದ ಮಕ್ಕಳ ನೋಡುತ ।
ತೊಗಲೆದ್ದು ಮೈಯುಡುಗಿ ಬಿದ್ದಿರುವ ಜಾಂಬವಾ
ದಿಗಳ ಕಂಡಂಜಿ ಮೂರ್ಛಿತೆಯಾಗಿ ಜನಕಸುತೆ
ಮಗುಳೆದ್ದು ಪತಿಯಳಿದ ಕ್ಲೇಶದಿಂ ಹಲುಬಿ ಕುಶನಿಗೆ ಪೇಳ್ದಳಂಬುಜಾಕ್ಷಿ ॥226॥

**ರಾಗ ಸಾವೇರಿ ಏಕತಾಳ**

ಮಗುವೇ, ನೀನಿಂತು ಮಾಳ್ಪರೇ ಅಯ್ಯಯ್ಯ ಎನ್ನ ॥ ಪಲ್ಲವಿ ॥

ರಘುವಂಶಾಬ್ಧಿ ಪೂರ್ಣಚಂದ್ರ ಅಗಣಿತಭೋಗದೇವೇಂದ್ರ ।
ಸುಗುಣ ಎನ್ನಯ ಕಾಂತ ರಾಘವರಾಯ ॥227॥

ತಂದೆ ರಾಮಚಂದ್ರನ ತಮ್ಮಂದ್ಯರು ಬೇರೆ ಮೂವರ ।
ಕೊಂದಿರಲ್ಲ ಕಾದಿ ರಣದಿ ಅಯ್ಯಯ್ಯ ವಿಧಿಯೆ ॥228॥

ಮಾನವರ ಕುಲಕ್ಕಭಿ ಮಾನವಂತ ರಿವರಿಗಿಂಥ ।
ಮಾನಭಂಗವೇ ಮಕ್ಕಳಿರ ಅಯ್ಯಯ್ಯ ವಿಧಿಯೆ ॥229॥

ಪಾತಾಳಲೋಕದಿಂದ ಮುನಿನಾಥ ಬರಲಿಲ್ಲವಿನ್ನೂ ।
ಏತರ ಉಪಾಯ ವಿದಕ್ಕೆ ಅಯ್ಯಯ್ಯ ವಿಧಿಯೆ ॥230॥

**ರಾಗ ಮಧ್ಯಮಾವತಿ ಏಕತಾಳ**

ಸೀತೆ ಮಕ್ಕಳಿಗೆಂದ ಮಾತ ಕೇಳುತಲಾಗ ।
ಕೋತಿಗಳರಸನಿಗಾಯ್ತು ಸಂತೋಷ ।
ಭೀತಿಯ ಬಿಟ್ಟು ತಮ್ಮೊಳಗೆ ತಾವ್ಮಾತಾಡೆ ।
ಪಾತಾಳದಿಂ ಮುನಿನಾಥನು ಬಂದ ॥231॥

ಬಂದ ಮುನಿಯ ದೂರದಿಂದ ಕಾಣುತ ಸೀತೆ ।
ನಂದನರ್ ಸಹ ಪಾದ ದ್ವಂದ್ವಕ್ಕೆ ನಮಿಸೆ ।
ತಂದೆ ನೀವಿಲ್ಲಿರದೊಂದೇ ದಿವಸವೆನ್ನ ।
ಕಂದರ್ಮಾಡಿದ ಕತ್ಯ ವೆಂದಳಾ ಮುನಿಗೆ ॥232॥

ಕರವ ಮುಗಿದು ಬೆದರಿರುವ ಮಕ್ಕಳ ನೋಡಿ ।
ವರಮುನಿ ಪ್ರೇಮದಿರ್ವರನು ಕುಳ್ಳಿರಿಸಿ ।
ತರಣಿವಂಶಜರೊಳೆಂತಾಯ್ತು ಸಂಗರ ಯಾವ ।
ಪರಿಯಿಂದ ನೀವ್ ಕಾದಿದಿರಿ ಬಾಲಕರಿರ ॥233॥

**ರಾಗ ರೇಗುಪ್ತಿ ಅಷ್ಟತಾಳ**

ಕೇಳಿ ವಾಲ್ಮೀಕಿಮಹಾಮುನಿರಾಯ ।
ಕಾಳಗದೊಳು ನಮ್ಮೊಳಾದಂತಬಗೆಯ ॥ ಪಲ್ಲವಿ ॥

ರಾಮನೆಂಬವನೊಂದು ಸೀಮೆಯ ದೊರೆಯಂತೆ ।
ಪ್ರೇಮದಿಂದನುಜರು ಮೂವರಂತೆ ॥
ಆ ಮಖತುರಗಕೋಸ್ಕರ ನಮ್ಮೊಡನೆ ಸಂ ।
ಗ್ರಾಮದೊಳಗೆ ಯುದ್ಧ ಮಾಡಿದ ಪರಿಯನು ॥234॥

ಆನೆ ಕುದುರೆ ಮಂದಿ ಸೇನೆ ಮಾರ್ಬಲಸಹ ।
ತಾನೆ ರಾಘವನನು ಜರುಸಹಿತ ॥
ನಾನಾವಿಧದಿ ನಮ್ಮ ಕೂಡೆ ಯುದ್ಧವ ಮಾಡೆ ।
ನಾನೆ ನಿಮ್ಮ ಕಟಾಕ್ಷದಿಂದ ಸಂಹರಿಸಿದೆ ॥235॥

ವಾನರ ಕುಲಕಭಿಮಾನಿಗಳಿವರಂತೆ ।
ಏನುಮಾಡಿದರೂ ಸಾವಿಲ್ಲವಂತೆ ॥
ತಾನೆ ನಿಮ್ಮಯ ಪಾದಕೊಪ್ಪಿಸಬೇಕೆಂದು ।
ಮಾನಭಂಗವ ಮಾಡಿಕೊಂಡುಬಂದೆವು ನಾವು ॥236॥

ವಚನ ॥ ಇಂತೆಂಬ ಬಾಲಕರ ನುಡಿಯಂ ಕೇಳಿ ವಾಲ್ಮೀಕಿಮುನಿವರನು ನೊಂದುಕೊಂಡವನಾಗಿ ಏನೆಂದನು ಎಂದರೆ -

**ರಾಗ ಸಾವೇರಿ ಅಷ್ಟತಾಳ**

ತಪ್ಪ ಮಾಡಿದಿರಿಬ್ಬರೂ ಕೇಳಿದರಿದ ।
ಕೊಪ್ಪಲೋರ್ಕದ ಜನರು ॥
ಸ್ವಲ್ಪಬುದ್ಧಿಗಳಾಯಿತವರ ಕೊಂದು ರಾಮ ।
ನಪ್ಪನಲ್ಲವೆ ನಿಮ್ಮಗೆ ಬಾಲಕರಿರ ॥237॥

ಭೂಮಿಗೋಸ್ಕರ ದುಷ್ಟರ ಕೊಲ್ವದಕೆಂದು ।
ರಾಮಾವತಾರನಾದ ॥
ಪ್ರೇಮದಿ ದಶರಥನುದರದಿ ಜನಿಸಿದ ।
ಶ್ರೀ ಮಹಾವಿಷ್ಣು ರಾಮ ಜಾನಕಿ ಲಕ್ಷ್ಮಿ ॥238॥

ಶಾಲೆಯ ಬಿಟ್ಟು ದೂರ ಪೋಗದಿರೆಂದು ।
ಪೇಳಲಿಲ್ಲವೆ ಕುವರ ॥
ಕೇಳದೆ ಹೀನಕರ್ಮವ ಮಾಡಿದಿರಿ ನಿಮ್ಮ ।
ಚಾಳಿಗಿನ್ನೇನೆನ್ನಲಿ ಭೂಲೋಕದಲ್ಲಿ ॥239॥

ತರಳೆ ನೀಮರುಗದಿರೆ ಆದರೆ ನೋಡಿ ।
ಬರುವೆ ಬಿದ್ದವರ ಮೋರೆ ॥
ಅರಿಯದೆ ಬಂದ ಕತ್ಯಗಳಿವು ದೋಷಕ್ಕೆ ।
ಪರಿಹಾರವುಂಟು ಮುಂದೆ ಕೇಳಿದೆ ಹಿಂದೆ ॥240॥

**ವಚನ ॥** ಇಂತೆಂದು ಮುನಿ ಚಾಲ್ವರಿಯಲು ಮಕ್ಕಳು ಭಯಭ್ರಾಂತರಾಗಿ ಕಣ್ಣುಕಣ್ಣು ಬಿಡಲು
ಜಾನಕಿ ಏನೆನ್ನುತಿರ್ದಳದೆಂತೆನೆ -

**ರಾಗ ದೇಸಿ ಅಷ್ಟತಾಳ**

ಏನುಮಾಡಲಿ ಮುನಿಯೆ ತಿಳಿಯದೆನ್ನ ।
ಸೂನುಗಳೆಸಗಿದ ಹೀನಕರ್ಮಗಳಿಗಿನ್ನೇನುಮಾಡಲಿ ॥ ಪಲ್ಲವಿ ॥

ತಂದೆ ತಾಯಿಗಳಣ್ಣ ಬಂಧುಬಾಂಧವರನ್ನು ।
ಮಂದಿರ ಬದುಕು ಬಾಳುವೆಗಳೆಲ್ಲವ ಬಿಟ್ಟು ।
ಬಂದೆ ನಾ ವನದೆಡೆಗೆ ಕಳುಹಿದ ರಾಮ ।
ಚಂದ್ರ ಜಾಲರ ನುಡಿಗೆ ಮುನಿಯೆ ಕಪೆ ।
ಯಿಂದ ರಕ್ಷಿಸೆ ಮತ್ತೆ ಕಂದರಿವರ ಪೆತ್ತೆ ॥241॥

ಹಿಂದೆ ನಾಬಲು ಬಲುನೊಂದುಕೊಂಡವಳಿನ್ನು ।
ಮುಂದಾದರು ಲೇಸಾಗಿರುವೆನೆಂದರೆ ಯೆನ್ನ ।

ಕಂದರಿಂದಿನಿತಾಯಿತು ಓಲೆಯ ಭಾಗ್ಯ ।
ಕುಂದಿ ಲಕ್ಷಣ ಹೋಯಿತು ಮಕ್ಕಳು ಪುಣ್ಯ ।
ವಂಧ್ಯರಾದಡೆ ಹೀಗೆ ಬಂದಿರುವದು ಹೇಗೆ ॥242॥

ವನದೊಳ ಗಿರಲೆನ್ನ ದನುಜನೊಯ್ಯಲು ಮುನ್ನ ।
ವನಜಾಕ್ಷ ಕಳುಹಿದಾಕ್ಷಣಕೆ ಸಾಹಸದಿಂದ ।
ಹನುಮ ಲಂಕೆಗೆ ಹಾರಿದ ಎನಗಶೋಕ ।
ವನದಿ ಮುದ್ರೆಯ ತೋರಿದ ಭಕ್ತನನಿಂಥ ।
ಗುಣವುಳ್ಳ ಕಪಿಯ ಬಂಧನವ ಮಾಡಿದರಲ್ಲೊ ॥243॥

ಬಲವಂತರಾಗಲು ಬೇಕೆಂದು ನೀವು ಸ ।
ಕಲವಿದ್ಯೆಗಳ ಪೇಳಿದವರಿಗೆ ಧನುರ್ವಿದ್ಯ ।
ಕಲಿಸಿದ್ದೆ ಕೇಡಾಯಿತು ಅದರಿಂದಲೀ ।
ಕುಲವೆ ಸಂಹಾರಾಯಿತು ಇನ್ನಿದ ಹೇಳಿ ।
ಫಲವೇನೆನ್ನಯ ಪುಣ್ಯಫಲವು ಹೀಗಾಯಿತು ॥244॥

**ರಾಗ ಘಂಟಾರವ ಜಂಪೆತಾಳ**

ಅಮ್ಮ ಕೇಳೀಗ ನೀನಳಲಿ ಮಾಡುವದೇನು ।
ಬ್ರಹ್ಮಲಿಪಿ ತಪ್ಪುವುದೆ ಭಯದಿ ಕೆಡಗಿದರೆ ॥245॥

ಸಾವು ಹುಟ್ಟುಗಳೆಂಬ ಸಂಸಾರ ಮಾನವರ ।
ಯಾವನಾದರು ಬಿಡದು ಅವರವರ ಕರ್ಮ ॥246॥

ನಿತ್ಯವಲ್ಲೀ ದೇಹ ನೀರೆ ಜಾನಕಿ ಕೇಳು ।
ಅತ್ತು ಸಾವವರುಂಟೆ ಸತ್ತವರ ಕೂಡೆ ॥247॥

ಇಂದವರು ನಾಳೆ ನಾವೆಂದಿಗಾದರು ಕಾಲ ।
ಹೊಂದುವುದು ಈ ದೇಹ ಒಂದು ದಿವಸದಲಿ ॥248॥

ನೀತಿಯನು ಪೇಳ್ದು ಭೂಜಾತೆಯನೊಡಂಬಡಿಸಿ ।
ಆ ತಪಸಿ ಹನುಮನೊಳುಮಾತಾಡುತಿರ್ದ ॥249॥

**ವಾರ್ಧಕ**

ಪರಿಪರಿಯದುಃಖದಲಿ ಮರುಗುತಿಹ ಜಾನಕಿಯ
ವರಮುನಿಪ ಸಂತೈಸಿ ಒಡನೆದ್ದನಾಕ್ಷಣದಿ
ತರಳರಂ ಕರಕೊಂಡು ತನ್ನ ಶಿಷ್ಯರು ಸಹಿತಸಂಗ್ರಾಮಭೂಮಿಗಾಗಿ ।
ಶರಧಿಬಂಧನಕೆಂದು ತರಿಸಿದಂ ಬೆಟ್ಟಗಳ

ಧರಣಿಗಾಧಾರವಿಲ್ಲೆಂದವನ ಸುತರು ಕರಿ
ತುರಗವಾನರರ ಹೆಣಪರ್ವತವನೆಸಗಿದರೊ ಎಂದು ಕಾಣಿಸಿತು ಮುನಿಗೆ ||250||

**ರಾಗ ಕೇದಾರಗೌಳ ಅಷ್ಟತಾಳ**

ಎತ್ತ ನೋಡಿದರು ರಾಮನ ಮಂದಿ ಕುದುರೆಗಳ್ |
ಸತ್ತ ಹೆಣಗಳ ರಾಸಿ ||
ಛತ್ರ ಚಾಮರ ವಾದ್ಯ ಕೊಂಬು ತಂಬಟೆ ಭೇರಿ |
ಸುತ್ತುಮುತ್ತೊಡವೆರಸಿ ||251||

ಹಸ್ತದೊಳಗೆ ಬಿಲ್, ಬಾಣ ಬಿದ್ದಿರುವರ |
ರಕ್ತದೋಕುಳಿಯ ಮೇಲೆ ||
ಮುತ್ತಿನೊಣಗಳು ಕವಿವರಾಮನ ಮುನಿ |
ಪೋತ್ತಮ ರಣದಿ ಕಂಡ ||252||

ಕಂದಿದಾನನದ ಕಾಂತಿಯ ಬೆಳ್, ಚಾಯದ |
ಅಂದವಾದವಯವದ ||
ಹಿಂದೆ ಮುಂದಡಬಿದ್ದ ತೊಡೆ ಕಾಲು ಕರಗಳ |
ಕುಂದಣಂಗಳ ಚಿನ್ನದ ||253||

ಚಂದ ಚಂದದ ಮಣಿಮಕುಟ ಕಂಕಣ ಹಾರ |
ದಿಂದ ರಾಜಿಸುತಿರುವ ||
ಒಂದಾಗಿ ಮಲಗಿರ್ದ ಭರತಶತ್ರುಘ್ನರ |
ಹಿಂದೆ ಲಕ್ಷ್ಮಣನ ಕಂಡ ||254||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ರಣದೊಳಗೆ ಸಾಲಾಗಿ ಮಲಗಿದ |
ಹೆಣಗಳನು ತಾ ನೋಡಿ ಮುನಿಪತಿ |
ಮನಸಿನಲಿ ನೆನಸಿದನು ನಾರಾ | ಯಣನ ಪದವ ||255||

ಈಕ್ಷಿಸುತ ಭೂಪಾಲಸೇನೆಗೆ |
ಪ್ರೋಕ್ಷಿಸಿದನು ಕಮಂಡಲುದಕವ |
ರಾಕ್ಷಸಾಂತಕನೆದ್ದ ಸುರಪನ  | ವಕ್ಷದಂತೆ ||256||

ನಿದ್ದೆಯಲಿ ಮಲಗಿರ್ದ ಲಕ್ಷ್ಮಣ |
ನೆದ್ದನಾಕ್ಷಣದೊಳಗೆ ಭರತನು |
ಇದ್ದ ಮಾರ್ಬಲವೆಲ್ಲ ಕುಣಿಯು | ತ್ತೆದ್ದುದಲ್ಲಿ ||257||

ತಳಿದರನಿಮಿಷರಮತಧಾರೆಯ ।
ಮಳೆಯ ಮೈಮರೆದೊರಗಿದವರೆ ।
ಚ್ಚರಿಕೆಯಾದುದು ಸೈನ್ಯ ರಾಘವ । ಹರುಷದಿಂದ ॥258॥

**ರಾಗ ಪಂತುವರಾಳಿ ಮಟ್ಟೆತಾಳ**

ಜಯ ಜಯಾ, ಲೋಕಪಾಲಕ ವಾಲ್ಮೀಕಿಮುನಿ ॥ ಪಲ್ಲವಿ ॥

ಸೂರ್ಯಕೋಟಿ ಪ್ರಭಾಮಾನ ಧೈರ್ಯರ ಬುದ್ಧಿ ಧರ್ಮಜ್ಞಾನ
ಕರ್ಮವರ್ಜಿತಾಪರೋಕ್ಷ ಧರ್ಮಸಂಗನಿರ್ಮಲಾಂಗ ॥259॥

**ಕಂದ**

ಚರಣಕೆ ಪೊಡಮಟ್ಟಂದಾ
ಕರುಣಾಂಬುಧಿ ರಾಮ ತನ್ನ ಸೈನ್ಯಸಮೇತಂ
ವರಮುನಿಪನ ಕೊಂಡಾಡುತ
ತರಳರ ಮೊಗನೋಡಿ ರಾಮ ಮತ್ತಿಂತೆಂದಂ ॥260॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಕಂದರಿವರು ಯಾರು ಮುನಿಯೆ ಇವರ ।
ತಂದೆತಾಯಿಗಳಾರು ಮುನಿಯೆ ॥
ಮಂದಿರದೆಡೆಯೆಲ್ಲಿ ಮುನಿಯೆ ಇವರ್
ನಿಂದ ಠಾವಾವುದು ಮುನಿಯೆ ॥261॥

ಬಿಲ್ಲುವಿದ್ಯಗಳನ್ನು ಮುನಿಯೆ ಇವ
ರೆಲ್ಲಿ ಕಲ್ತವರಯ್ಯ ಮುನಿಯೆ ॥
ಇಲ್ಲಿ ಬಂದಿಹುದೇಕೆ ಮುನಿಯೆ ನಮ್ಮ ।
ನೆಲ್ಲ ಕೊಂದುದೇಕೆ ಮುನಿಯೆ ॥262॥

**ರಾಗ ಘಂಟಾರವ ಜಂಪೆತಾಳ**

ದಾನವಾಂತಕ ಕೇಳು ಧರ್ಮಶಾಸ್ತ್ರಂಗಳೊಳ ।
ಗೀ ನಡತೆ ಮೊದಲುಂಟೆ ಈ ರಾಜ್ಯದೊಳಗೆ ॥263॥

ತಂದೆ ಮಕ್ಕಳು ಕೂಡಿ ತಮ್ಮೊಳಗೆ ಕಾದುವುದು ।
ಹಿಂದೆ ಕೇಳಿದುದಿಲ್ಲ ಹೀಗೆಂಬ ವಾರ್ತೆ ॥264॥

ಭಾನುವಂಶಜ ಕೇಳು ಬೃಹಳ ಮಾತುಗಳೇಕೆ |
ಏನಾಗಬೇಕಿವರು ಜಾನಕಿಯ ಸುತರು ||265||

ಅರಿಯದವನೇ ನೀನು ಆಯಿತಾಯಿತು ಸಾಕು |
ಬರಿಯ ಮಾತುಗಳೆಮ್ಮ ಮರಳುಮಾಡುವುದು ||266||

ಮಕ್ಕಳಿವರಿಂತೆಂಬ ಮಾತ ಕೇಳುತ ರಾಮ |
ಆಕ್ಷಣವೆ ಕೇಳಿದನು ಲಕ್ಷ್ಮಣನ ಕರೆದು ||267||

**ರಾಗ ಮಾಧ್ಯಮಾವತಿ ಅಷ್ಟತಾಳ**

ಏನಯ್ಯ ತಮ್ಮ ಏನಯ್ಯ |
ಏನಯ್ಯ ತಮ್ಮ ಈ ಮುನಿಗಳ ಮಾತು |
ಜಾನಕಿ ಪಡೆದಳು ಮಕ್ಕಳನೆಂತು || ಪಲ್ಲವಿ ||

ಜನಪರವಾದ ಬಂದಿದೆ ಸೀತೆಗೆಂದು |
ವನಕೊದಿವಳನಲ್ಲಿ ಬಿಟ್ಟು ಬಾರೆಂದು |
ನಿನಗೆ ಪೇಳಿದಮೇಲೆ ಏನಾಯಿತಲ್ಲಿ |
ವಿನತ ನಿಪೇಳಿದ ಮಾತುಗಳಲ್ಲಿ ||268||

ಕಾಡಿನೊಳಿರುವರೆ ಮನೆಯೆಲ್ಲಿ ಬಂತು |
ರೂಢಿಯೊಳಗೆ ಇಷ್ಟು ದಿನವೆಲ್ಲಿ ಸಂತು |
ನೋಡಿದರತಿಮುದ್ದು ಸೊಬಗಿನೊಳಿಂತು |
ಜೋಡುಮಕ್ಕಳ ಸೀತೆ ಪಡೆದಳಿನ್ನೆಂತು ||269||

ಅಣ್ಣ ನೀನಾಡಿದಪ್ಪಣೆ ಹೊತ್ತು ತಾನು |
ಮಿಣ್ಣನೆ ರಥವೇರಿ ಸೀತೆಯೊಬ್ಬಳನು |
ವನ್ಯದೊಳಗೆ ಬಿಟ್ಟು ಬಂದಲ್ಲದಾನು |
ಬಣ್ಣಿಸಲರಿಯೆನು ಆಮೇಲಾದುದನು ||270||

ವಚನ || ಇಂತೆಂದು ಲಕ್ಷ್ಮಣಂ ನುಡಿಯಲಾಗಿ ಸಂತೋಷದಿಂದ ಮುನಿವರಂ ಏನೆಂದನು ಎಂದರೆ -

**ರಾಗ ಘರಜು ಮಟ್ಟೆತಾಳ**

ಒಂದೇ ಮನಸಲ್ಲ ರಾಘವನಿಗೆ | ಹಿಂದಣ ದಿನಿಸಲ್ಲ || ಪಲ್ಲವಿ ||

ಕಂಡವರ ಮಾತಕೇಳಿ ಹೆಂಡತಿಯ ಬಿಡುವರೇ |
ಕಂಡು ಕಂಡು ತಿಳಿದು ತಿಳಿದು ಕಪಟ, ಮಾತಾಡುವರೇ |

ಮಂಡಲಾಧಿನಾಯಕ ನೀಭಂಡಾಟಗಳ ಮಾಳ್ಪರೇ ।
ಹಿಂಡುದೊರೆಗಳಿದರ ಕೇಳಿ ಕಂಡು ಹರುಷ ಬಡುವರೇ ॥271॥

ಕಾಡಿನಲ್ಲಿ ಅಳುವ ಸತಿಯ ಕಂಡು ನಾ ಒಡಬಡಿಸಿದೆ ।
ಬೇಡ ದುಃಖವೆಂದು ಧೈರ್ಯಪೇಳಿ ಅಭಯ ಕೊಡಿಸಿದೆ ।
ಮಾಡಿ ಪರ್ಣಶಾಲೆಯನ್ನು ಮತ್ತೆ ನಾ ವಿಂಗಡಿಸಿದೆ ।
ಜೋಡುಮಕ್ಕಳ್ಹೆತ್ತಮೇಲೆ ಇಷ್ಟು ದಿವಸ ನಡೆಸಿದೆ ॥272॥

ಕುಶಲವರೆಂದು ಪೆಸರಿಟ್ಟು ಬರಹವೆಲ್ಲ ಬರೆಸಿದೆ ।
ಕುಶಲದಿಂದ ರಣದಿ ಬಾಣವೆಸೆವ ವಿದ್ಯೆಕಲಿಸಿದೆ ।
ಹಸುಮಕ್ಕಳ ಇಷ್ಟುದಿವಸ ಈ ಪರಿಯಲಿ ಮೆರೆಸಿದೆ ।
ಅಸುರವೈರಿ ಇನ್ನು ರಕ್ಷಿಸೆನುತ ಮುಂದೆ ನಿಲಿಸಿದೆ ॥273॥

**ಕಂದ**

[ತರಳರು ನಿನ್ನವರೆಂದೇ
ಅರಿಯುವಡೀ ಕಷ್ಟಮೊದಗಿಬಂತಾ ವಿಧಿಯಿಂ
…………………………………………………………..] ॥274॥

**ರಾಗ ಪುನ್ನಾಗವರಾಳಿ ಏಕತಾಳ**

ಓದಿದರು ಮಕ್ಕಳೋದಿದರು ಮುನಿಯ ।
ಪಾದಕ್ಕೆರಗಿ ಬಂದ ವೇದ ಶಾಸ್ತ್ರ ಪುರಾಣಗಳ ॥ ॥ ಪಲ್ಲವಿ ॥

ತಂಬೂರಿ ವೀಣೆ ಮದ್ದಳೆ ಸಂಗೀತ ಸಾಹಿತ್ಯ ಶ್ರುತಿ ।
ತುಂಬುರಗಂಧರ್ವ ಯಕ್ಷರಿಂದ ಮಿಗಿಲು ॥
ಕುಂಭಿನೀಜಾತೆಯ ಮಕ್ಕಳೆಂಬ ರೀತಿ ಪಾಡುತಿರಲು ।
ಸಂಭ್ರಮವ ನೋಡಿ ಹರ್ಷವಾಗುತ್ತಿದ್ದ ರಾಮಚಂದ್ರ ॥275॥

ಬಣ್ಣಿಸಿ ಬಣ್ಣಿಸಿ ಸ್ವರಕಿನ್ನರಿಯ ನುಡಿಸುತಿರಲು ।
ಸಣ್ಣ ಸಣ್ಣ ಬೆರಳ ಸೊಬಗ ಸರ್ವರು ನೋಡಿ ॥
ಪುಣ್ಯವಂತೆ ಸೀತೆಯೆನಲು ಕಣ್ಣನೀರಿಂದಪ್ಪಿ ರಾಮ ।
ಚಿಣ್ಣರನ್ನು ತೆಗೆದು ಮುದ್ದುಮಾಡುತ್ತಿದ್ದಗಳಿಗೆ ಗಳಿಗೆ ॥276॥

**ರಾಗ ಘಂಟಾರವ ಝಂಪೆತಾಳ**

ವಾಲ್ಮೀಕಿ ಮುನಿ ನಿಮಗೆ ಶರಣು ಶರಣು ॥ ಪಲ್ಲವಿ ॥

ಗುರುರಾಯ ನಿಮ್ಮಂಥ ಗುಣನಿಧಿಗಳಿನ್ನುಂಟೆ ।
ಕರವ ಮುಗಿವೆನು ನಿಮಗೆ ಕರುಣಿಸಯ್ಯ ||277||

ಬಾನುಕುಲ ಸಸಿಯುರಿದು ಕ್ಷೀಣವಾಗಲು ಕಂಡು ।
ತಾನೆ ನೀರೆರೆದು ಕಾಯ್ದಿರಿ ನಿರ್ಣಯ ||278||

ಸರ್ವಜ್ಞ ನೀನಿಂದು ಸಕಲಕರ್ಮಂಗಳಿಗೆ ।
ನಿರ್ವಹಿಸುವಾಧಾರ ನಿನ್ನದಯ್ಯ ||279||

ಪುರಕೆ ಹೋಗುವ ನಾವು ಪುತ್ರರನು ಕರಕೊಂಡು ।
ತರಳೆಜಾನಕಿಸಹಿತ ತೆರಳಿ ನೀವು ||280||

ಬಳಿಕ ಯಾಗವ ಮುಗಿಸಿ ಬರಬಹುದು ನಿಮಗಿತ್ತ ।
ಪುಳಕಾಮತಾಬ್ಧಿಯಲಿ ಪುಣ್ಯನಿಧಿಯೆ ||281||

**ದ್ವಿಪದಿ**

ರಾಘವನ ನುಡಿಕೇಳಿ ಹಾಗಾಗಲೆನುತ ।
ಬೇಗದಲಿ ವಾಲ್ಮೀಕಿಮುನಿಪ ನಸುನಗುತ ||282||

ಶಿಷ್ಯರನು ಕಳುಹಿದನು ಶೀಘ್ರದೊಳಗಂದು ।
ಆಶ್ರಮದ ಸೀತೆಯನು ಕರೆತನ್ನಿರೆಂದು ||283||

ಹೋದರಾ ಕ್ಷಣ ಕಂಡು ಪೇಳೆ ಜಾನಕಿಯ ।
ಪಾದದಪ್ಪಣೆಯಾಯ್ತು ವಾಲ್ಮೀಕಿ ಮುನಿಯ ||184||

ತೆರಳಬೇಕೆಂದವರು ವಾರ್ತೆಯನು ಪೇಳೆ ।
ತರಳೆಜಾನಕಿ ಮನದಿ ಹರ್ಷವನು ತಾಳೆ ||185||

ಬಂದಳೊಯ್ಯನೆ ಕಣಕೆ ಬಲು ಬೇಗದಿಂದ ।
ಮಂದಗಾಮಿನಿಗೆ ಕೈಮುಗಿಯೆ ಜನವಂದ ||186||

ಧರಣಿಜೆಯ ನೋಡಿದಾ ಕ್ಷಣವೆ ಶ್ರೀರಾಮ ।
ಹರುಷದಿಂದಿದಿರಾಗಿ ಬಂದ ನಿಸ್ಸೀಮ ||187||

**ರಾಗ ಮೋಹನ ಅಷ್ಟತಾಳ**

ಪತಿಯ ನೋಡಿದಳು ಸೀತೆಯುಮೂಜಗವ ರಕ್ಷಿಸುವಂತ || ಪಲ್ಲವಿ ||

ಕ್ಷಿತಿಯ ಜನರಿಗೆ ಸದ್ಗತಿಯ ಪಾಲಿಪ ಪಶು |
ಪತಿಪ್ರಿಯ ವರರಘುಪತಿಯ ನೋಡಿದಳು ‖ ಅನುಪಲ್ಲವಿ ‖

ಎಡಬಲದಲಿ ಮೂವರು ತಮ್ಮಂದ್ಯರು |
ತೊಡೆಯೊಳಿರ್ವರು ಮಕ್ಕಳು ‖
ಕಡುಜಾಣ ಹನುಮ ಸುಷೇಣ ಜಾಂಬವಸಹ |
ನಡುವೆ ಕುಳ್ಳಿರಿಸಿ ಸಂಗಡ ವಿರಾಜಿಸುತಿಪ್ಪ ‖188‖

**ವಾರ್ಧಕ**

ರಥವೇರಿದಂ ರಾಮಚಂದ್ರ ಜಾನಕಿಸಹಿತ
ಅತಿಶಯದಿನೊಪ್ಪುತಿಹ ಅಂದಣಾವಳಿಗಳಿಂ
ಪಥಿವಿಜೆಯ ಸನಿಯದಲ್ಲಿ ಮಿಕ್ಕನಾರಿಯರೆಲ್ಲರೆಡೆಬಿಡದೆ ಮಕ್ಕಳೊಡನೆ |
ಜೊತೆಯವರು ವಾಹನಂಗಳನೇರಿ ಬರಲು ಮುನಿ
ಪತಿಯ ಪಲ್ಲಂಕಿಯೊಳು ಕುಳ್ಳಿರಿಸಿ ಬಳಿಕ ರಘು
ಪತಿಯ ಸೇನಾಸಮುದ್ರವು ಬರುತಿರಲು ಸರ್ವಜನರು ಸಂತೋಷದಿಂದ ‖189‖

**ರಾಗ ಮೋಹನ ಏಕತಾಳ**

ಪುರಕೆ, ತೆರಳಿದ ರಾಮ ಸಂತೋಷದಿ ನಿಜ |
ಪುರಕೆ ತೆರಳಿದ ರಘುರಾಮ ‖ ‖ ಪಲ್ಲವಿ ‖

ಪರಿಪರಿಯ ಪಾಠಕರು ವಿಧವಿಧದಲಿ ಪೊಗಳುತ್ತ |
ಭರದಿ ಶಂಖ ಭೇರಿ ವಾದ್ಯ ಕೊಂಬು ತಂಬಟೆ ಮೊರೆಯುತ್ತ |
ನೆರೆದ ಕೇರಿ ಕೇರಿ ಜನರು ಇರದೆ ಮಕ್ಕಳ ನೋಡುತ್ತ |
ಪರಮಪುಣ್ಯ ವಂತರೆಂದು ಕೈಗಳೆತ್ತಿ ನಲಿಯುತ್ತ ‖190‖

**ವಾರ್ಧಕ**

ಭೂಮಿಪತಿ ಕೇಳ್ಬಳಿಕ ಉಳಿದ ಯಜ್ಞವ ಮುಗಿಸಿ
ರಾಮಚಂದ್ರಂ ತನ್ನ ಸತಿಸುತರುಸಹಿತ ಸು
ಪ್ರೇಮದಿಂ ರಾಜ್ಯಮಂ ಪಾಲಿಸುತ ಬಹುಕಾಲ ಸುಖದಿಂದಲಿರ್ದರೆನುತ |
ನೇಮದಿಂ ಜನಮೇಜಯಕ್ಷಿತಿಪ ಕೇಳೆಂದು
ಆ ಮುನಿವರಂ ಪೇಳ್ದ ಕುಶಲವರ ಕಾಳಗವ
ನಾ ಮನಕೆ ಬಂದವೋಲೊರೆದೆ ಶ್ರೀ ಕಣ್ವಪುರಕೃಷ್ಣನ ಕಟಾಕ್ಷದಿಂದ ‖191‖

**ಕುಶಲವರ ಕಾಳಗ ಸಂಪೂರ್ಣ**